ರ. ನಂ. ಬಿ. ೨೭೮೮ ನಿತ್ಯಸಂಚಿಕೆಯು. [illegible]

यद्यत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BAGALKOT

WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಗುರುವಾರ ಮಿತಿ ಪುಷ್ಯ ಶುದ್ಧ ೧೨ ಶಕೆ ೧೮೫೨ ತಾ॥ ೧—೧—೩೧ [ಸಂಚಿಕೆ ೧೫೩

ಲಾಹೋರದಲ್ಲಿ

೨೨ ಮನೆಗಳನ್ನು ಝಡತಿ ಮಾಡಿದರು.

ಪಂಜಾಬ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದ ಕಾಲಕ್ಕೆ ಗವ್ಹರ್ನರರ ಮೇಲೆ ಗುಂಡು ಹಾರಿದ್ದರ ಸಂಬಂಧವಾಗಿ ಏನಾದರೂ ಕಾಗದ ಪತ್ರಗಳು ದೊರೆಯುವವೇನೆಂಬದನ್ನು ಕಂಡುಹಿಡಿಯಲು, ಲಾಹೋರದ ಪೋಲೀಸ ಅಧಿಕಾರಿಗಳು ತಾ॥ ೨೯ ನೆಯ ದಿವಸ, ಅಲ್ಲಿಯ ಶ್ರೀ ವೀರೇಂದ್ರ, ಕಿಶನಸಿಂಗ, ಮಹಮ್ಮದಅಲ್ಲಿ ಯಶಪಾಲ ಮೊದಲಾದ ೨೨ ಜನರ ಮನೆಗಳನ್ನು ಝಡತಿ ಮಾಡಿ ಕೆಲವು ಕಾಗದ ಪತ್ರಗಳನ್ನು ತೆಗೆದುಕೊಂಡರು. ಶ್ರೀ ಭಗತಸಿಂಗರ ತಂದೆಯವರಾದ ಕಿಶನಸಿಂಗರ ಮನೆಗೆ ಕೀಲಿ ಹಾಕಿ ಅದನ್ನು ತಮ್ಮ ವಶಪಡಿಸಿಕೊಂಡರು. ಅದರ ಸುತ್ತಲ ಪೋಲೀಸರ ಕಾವಲಿಟ್ಟಿರುವರು. ಪೇಶಾವರ ಪ್ರಾಂತದ ಮರ್ದಾನ ಎಂಬ ಹಳ್ಳಿಯಲ್ಲಿ ಚಮನಲಾಲ, ಯದುಪಾಲ ಮತ್ತು ಪ್ರೇಮದತ್ತ ಎಂಬ ಮೂವರು ತರುಣರು ಕೈದು ಮಾಡಲ್ಪಟ್ಟಿದ್ದಾರೆ.

ರಜ್ಮಾರದಲ್ಲಿ ಬಾಂಬು ಹಾರಿತು

ಪೇಶಾವರ ಪ್ರಾಂತದ ರಜ್ಮಾರ ಎಂಬ ಹಳ್ಳಿಯಲ್ಲಿ ಒಮ್ಮಿಂದೊಮ್ಮೆ ಬಾಂಬು ಹಾರಿ ಒಬ್ಬನಿಗೆ ಭಯಂಕರ ಗಾಯವಾಗಿದೆ. ಈ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದು ಬಂ[illegible]

ನಾಡಗೀರ ವಕೀಲರಿಗೆ

೫ ತಿಂ. ಕ. ಶಿಕ್ಷೆ

ಶ್ರೀ. ಲಾ. ಅನಂತವೆಂಕಟ [illegible] ೧೭ ನೆಯ ಕಲಮಿನನ್ವಯ ವಿಚಾರಣೆ [illegible] ಮಾಡಲ್ಪಟ್ಟ, ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ದತ್ತೋ[illegible] ನಾಡಗೀರ, ಬಿ. ಎ. ಎಲ್. ಎಲ್. ಬಿ. ವಕೀಲರು ಇವರ ಮೊಕದ್ದಮೆಯ ವಿಚಾರಣೆಯು ತಾ॥ ೩೦ ನೆಯ ದಿವಸ ಗದಗಿನ ಮ್ಯಾಜಿಸ್ಟ್ರೇಟರ ಮುಂದೆ ನಡೆದು, ಅವರಿಗೆ ೪ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರು. ದಂಡ, ದಂಡ ಕೊಡದಿದ್ದರೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ಕೊಡಲ್ಪಟ್ಟಿತು. ಅವರನ್ನು 'ಕ' ವರ್ಗದಲ್ಲಿ ಇರಿಸಬೇಕಾಗಿ ಮ್ಯಾಜಿಸ್ಟ್ರೇಟರು ಉಲ್ಲೇಖಿಸಿದ್ದಾರೆ. ವಕೀಲರಿಗೂ 'ಕ' ವರ್ಗವನ್ನು ಕೊಟ್ಟ ಮ್ಯಾಜಿಸ್ಟ್ರೇಟರು ಸೇಡು ತೀರಿಸಿಕೊಳ್ಳುತ್ತಿರುವರೋ ಏನೋ?

ಡಾ. ಹರ್ಡೀಕರರು

ಹುಬ್ಬಳ್ಳಿಗೆ ಬಂದರು

ಡಾ. ಹರ್ಡೀಕರರು ಹುಟಗಿ ಗದಗ ಮಾರ್ಗದಿಂದ ನಿನ್ನಿನ ದಿವಸ ಹುಬ್ಬಳ್ಳಿಗೆ ಬಂದಿದ್ದು, ಅವರ ಪ್ರಕೃತಿಯು ನೆಟ್ಟಗಿರುವದೆಂದು ಒಬ್ಬರು ತಿಳಿಸಿರುತ್ತಾರೆ.

ಪ್ರತಾಪ ಪತ್ರಿಕೆಯ

ಸಂಪಾದಕರನ್ನು ಹಿಡಿದರು.

ಸತ್ಯಾಗ್ರಹ ಯುದ್ಧ ಮಂಡಳದ ಸರ್ವಾಧಿಕಾರಿಗಳಾದ ಶ್ರೀ ಪುರುಷೋತ್ತಮದಾಸರು ಜನಗಣತಿಯ ಬಹಿಷ್ಕಾರದ ಸಂಬಂಧವಾಗಿ ಕೊಟ್ಟ ಸಂದೇಶವನ್ನು ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಿದ್ದರ ಬಗ್ಗೆ, "ಪ್ರತಾಪ" ಪತ್ರಿಕೆಯ ಸಂಪಾದಕರಾದ ಪ್ರಕಾಶ ನಾರಾಯಣ ಶಿರೋಮಣಿಯವರನ್ನು ತಾ॥ ೨೯ ನೆಯ ದಿವಸ ಸೆರೆ ಹಿಡಿದಿದ್ದಾರೆ.

ಬಂಡೀಗಾಲಿಯ ಪರಿಷತ್ತು.

ಬಂಡೀಗಾಲಿಯ ಪರಿಷತ್ತಿನ ಕಾರ್ಯವು ತಾ॥ ೩೦ ನೆಯ ದಿವಸ ಮತ್ತೆ ಪ್ರಾರಂಭವಾಯಿತು. ವಾಯವ್ಯ ಸರಹದ್ದ ಪ್ರಾಂತದ ಉಪಮಂಡಳದವರು ಮಿ. ಹೆಂಡರಸನ್ನರ ಅಧ್ಯಕ್ಷತೆಯಲ್ಲಿ ಕಲೆತು, ಆ ಪ್ರಾಂತದಲ್ಲಿಯ ಕಾಯದೆ ಹಾಗು ಸುವ್ಯವಸ್ಥೆಗಳ ವಿಷಯವಾಗಿ ವಿಚಾರ ಮಾಡಿದರು. ಬ್ರಿಟಿಶ ಹಿಂದುಸ್ಥಾನದೊಳಗಿನ ಇತರ ಪ್ರಾಂತಗಳಂತೆಯೇ ತಮಗಾದರೂ ಸರಿಸಮಾನವಾದ ಹಕ್ಕುಗಳು ಸಿಗಬೇಕೆಂಬದಾಗಿ ಜನರು ಇಚ್ಛಿಸುತ್ತಿರುವರಾಗಿ ಕೆಲವರು ಪ್ರತಿಪಾದಿಸಿದರು. ತಾ॥ ೩೧ ನೆಯ ದಿವಸ ಸರ್ ಡೆನಿಸ್ ಬ್ರೇಯವರು ಭಾಷಣ ಮಾಡತಕ್ಕವರಿದ್ದರು. ಮತಾಧಿಕಾರ ಉಪಮಂಡಳದ ಸಭೆಯಾದರೂ ಅಂದೇ ಸೇರತಕ್ಕದ್ದಿತ್ತು.

ಸ್ವದೇಶಿ ಹಾಗು ಬಹಿಷ್ಕಾರ

ಉತ್ತರ ಕನ್ನಡ ಜಿಲ್ಲೆಯ ಸ್ವದೇಶಿ ಔದ್ಯೋಗಿಕ ಹಾಗು ಖಾದಿ ಪ್ರದರ್ಶನದ ಉದ್ಘಾಟನ ಸಮಾರಂಭವು ತಾ| ೨೮ ನೆಯ ದಿವಸ ಕುಮಟೆಯಲ್ಲಿ ಕರ್ಮವೀರ ದಿವಾಕರ ರಂಗರಾಯರ ಹಸ್ತದಿಂದ ನೆರವೇರಿಸಲ್ಪಟ್ಟಿತು ಆ ಸಮಯದಲ್ಲಿ "ಸ್ವದೇಶಿ-ಬಹಿಷ್ಕಾರ" ಗಳನ್ನು ಕುರಿತು ಶ್ರೀ ದಿವಾಕರರು ಕೆಳಗಿನಂತೆ ಭಾಷಣ ಮಾಡಿದರು.

ಕೆಲವರು [illegible], ಅವರಿಗೆ ಬಹಿಷ್ಕಾರ ಸೇರುವದಿಲ್ಲ; ಸ್ವದೇಶಿ ಶಬ್ದದ ಮೇಲೇ ಅವರಿಗೆ ಹೆಚ್ಚಿನ ಪ್ರೀತಿ. ಕೆಲವರಿಗೆ ಬಹಿಷ್ಕಾರ ಬೇಕು ಅದರೊಳಗೆ ಪಿಕೆಟಿಂಗಿದೆ. ಸ್ವದೇಶಿ ಅಂತ ನೆಲೆ ಕೊಳ್ಳುವದಿದೆ ಕಾರಣ ಉತ್ಸಾಹಿಗಳು, ಸ್ವದೇಶಿಯಲ್ಲೇನಿದೆ? ಬಹಿಷ್ಕಾರವನ್ನೇ ಪುರಸ್ಕರಿಸಬೇಕು; ಹೀಗೆ ಅವರ ಪ್ರತಿಪಾದನೆ. ಆದರೆ ಇವೆರಡೂ ದೃಷ್ಟಿಗಳು ಸದೋಷವಿವೆ. ಸ್ವದೇಶಿ-ಬಹಿಷ್ಕಾರಗಳು ಬೇರೆ ಬೇರೆಯಲ್ಲ; ಅವುಗಳೊಳಗೆ ವಿರೋಧಭಾವವಿಲ್ಲ; ಅವು ಎಡಗೈ — ಬಲಗೈಯಂತಿವೆ. ಜೋಡೆತ್ತಿನಂತಿವೆ. ಜೋಡೆತ್ತಿನಿಂದ ಬಂಡಿಯು ಓಡುವಂತೆ ಸ್ವದೇಶಿಯು, ಸ್ವದೇಶಿ ಬಹಿಷ್ಕಾರಗಳಿಂದ ಪ್ರಗತಿ ಹೊಂದುತ್ತದೆ. ಬಹಿಷ್ಕಾರ ಬೇಡೆನ್ನುವವರದೊಂದು ಆಕ್ಷೇಪ. ಬಹಿಷ್ಕಾರದಲ್ಲಿ ದ್ವೇಷವಿದೆ. ಹಿಂಸೆಯಿದೆ. ಎಂಬುದಾಗಿ ಅವರ ಭಾವನೆ. ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸುವದರಿಂದ ಬ್ರಿಟಿಶರನ್ನು ನಾವು ದ್ವೇಷಿಸುತ್ತೇವೆಂಬುದಾಗಿ ಸ್ವದೇಶಿ ಶಬ್ದವಾದಿಗಳ ಆಕ್ಷೇಪ. ಆದರೆ ಈ ಆಕ್ಷೇಪವು ನಿರರ್ಥಕವಿದೆ. ಶ್ರೀ ಕಾಲೇಲಕರರು ಮಹಾತ್ಮರೊಡನೆ ಉಳಿದು, ಆ ಮೇಲೆ ಬಿಡುಗಡೆಯಾಗಿದ್ದಾರೆ. ಅವರು ತಮಗೂ ಮಹಾತ್ಮರಿಗೂ ನಡೆದ ವಿಚಾರವನ್ನೊಂದು ಹೇಳಿದ್ದಾರೆ. "ಬ್ರಿಟಿಶ ಸರಕಿಗೆ ಬಹಿಷ್ಕಾರ ಹಾಕಿದರೆ, ನನ್ನ ವಿರೋಧವಿಲ್ಲ. ಆದರೆ ಹಾಗೆ ಮಾಡಲು ನಾನು ಮಾತ್ರ ಹೇಳಲಾರೆ." "ಹಾಗಾದರೆ ನಿಮ್ಮ ಮತದಲ್ಲಿ ಬದಲಾವಣೆಯಾಯಿತೇನು?" ಎಂದು ಶ್ರೀ ಕಾಲೇಲಕರರು ಕೇಳಲು, ಮಹಾತ್ಮರು ನುಡಿದದ್ದೇನಂದರೆ— "ಈ ಮಾತನ್ನು ನಾನು ಸಂಪೂರ್ಣ ವಿಚಾರ ಮಾಡಿ ಹೇಳಿದ್ದೇನೆ. ಮಿ|| ರಜಿನೋಲ್ಡ ರೆನೋಲ್ಡ್ಸ ರವರು ನನ್ನ ಗೆಳೆಯರು. ಬ್ರಿಟಿಶ ದೇಶಕ್ಕೂ, ಹಿಂದುಸ್ಥಾನ ದೇಶಕ್ಕೂ ಒಂದು ಪ್ರಕಾರದ ಯುದ್ಧ ನಡೆದಿದೆ ನಮ್ಮ ಮೇಲೆ [illegible] : ದಬ್ಬಾಳಿಕೆ ಮಾಡುವವರಿಗೆ, ನಾವು ನಿಮ್ಮ ಸರಕು ಕೊಳ್ಳುವದಿಲ್ಲ, ಹೀಗೆ ಹೇಳಿದರೆ ನಮಗೂ ನಿಮಗೂ ಇರುವ ಸ್ನೇಹ ಕೆಡಲಾರದಾಗಿ ಮಹಾತ್ಮರು ಮಿ|| ರಜಿನೋಲ್ಡ ರೆನೋಲ್ಡ್ಸರವರಿಗೆ ಹೇಳಿದರಾಗಿ ಶ್ರೀ ಕಾಲೇಲಕರರು ಹೇಳುತ್ತಾರೆ ಬಹಿಷ್ಕಾರವು ದ್ವೇಷಮೂಲಕವೆಂದು ಹೇಳುವವರು ಇದನ್ನು ಪರಾಂಬರಿಸತಕ್ಕದ್ದು. ದಬ್ಬಾಳಿಕೆಗೆ ಅಂಜಿ ಬಹಿಷ್ಕಾರ ಮಾಡದೆ ಕೂಡುಕೊಳ್ಳಲಿಕ್ಕೆ ನಮಗೆ ಸಾಧ್ಯವಿಲ್ಲ. ದಬ್ಬಾಳಿಕೆಯು ಹವೆಯಂತೆ ಸರ್ವ ವ್ಯಾಪಿಯಾಗಿದೆ. ರೊಟ್ಟಿಯು ದಾಟಿ, ಅಡಿಗೆಮನೆ ಸಹ ಸೇರಿದೆ. ಕಾರಣ ಅದಕ್ಕೆ ಹೆದರಿ ಅದರೊಳಗಿಂದ ಪಾರಾಗಲು ಹವಣಿಸುವದು ದಡ್ಡತನ. ದಬ್ಬಾಳಿಕೆಯ ವಿಚಾರವನ್ನೇ ನಾವು ಬಿಟ್ಟುಬಿಡಬೇಕು, [illegible] ಕರ್ತವ್ಯವನ್ನಷ್ಟು ನಾವು ಮಾಡುತ್ತ ಹೋಗಬೇಕು. ಸರ್ವಾಧಿಕಾರಿಗಳಿಗೆ ಆರ್ಡಿನನ್ಸ ಹೊರಡಿಸಲು ಅಧಿಕಾರವಿಲ್ಲವಾಗಿ ಕೊನ್‌ಸ್ಟಿಟ್ಯೂಶನಲ್ ರಾಜಪದ್ಧತಿಯ ಕಾಯದೆ ಪಂಡಿತರು ಚರ್ಚಿಸುತ್ತಿದ್ದಾರೆ ಆ ಪುಸ್ತಕಗಳನ್ನು ರಾಜ್ಯಾಧಿಕಾರಿಗಳು ಕಟ್ಟಿಟ್ಟ ಸಂಗತಿ ಇವರಿಗೆ ಗೊತ್ತೇ ಇಲ್ಲ. ದಬ್ಬಾಳಿಕೆಯ ಇತಿಹಾಸವೇ ಹೀಗೆ ನಡೆದಿದೆ ಪುರಾತನ ವರ್ತಮಾನಪತ್ರಗಳ ಮೇಲಿನ ಶಾಸನ ಬಂತು. ಕಾರಣ ದ್ವೇಷ-ಹಿಂಸಾಭಾವ ಹಿಡಿಯದೆ, ಒಂದಕ್ಕೊಂದು ಪೋಷಕವಾದ ಸ್ವದೇಶಿ — ಬಹಿಷ್ಕಾರಗಳನ್ನು ಹಿಡಿಬಿಡದೆ ನಾವು ನಡೆಸತಕ್ಕದ್ದು.

ಮುಳಗುಂದದ
ಸತ್ಯಾಗ್ರಹಿಗಳಿಗೆ ಶಿಕ್ಷೆ.

(ಸ್ವಂತ ಸುದ್ದಿಗಾರರಿಂದ)

ಕ್ರಿಮಿನಲ್ ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಮುಳಗುಂದದಲ್ಲಿ ಸೆರೆಹಿಡಿಯಲ್ಪಟ್ಟ ಕೆಳಗಿನ ಐದು ಜನ ಸತ್ಯಾಗ್ರಹಿಗಳ ಖಟ್ಲೆಯ ವಿಚಾರಣೆಯು, ತಾ|| ೨೮ ನೆಯ ದಿವಸ ಗದಗಿನ ೧ ನೆಯ ವರ್ಗದ ಮ್ಯಾಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ಕೆಳಗಿನಂತೆ ಶಿಕ್ಷೆಯು ವಿಧಿಸಲ್ಪಟ್ಟಿತು.

೧ ಗಣೇಶನಾಯಿಕ ತಮ್ಮಣ್ಣವರ, ೩೦೦ ರು. ದಂಡ, ಇಲ್ಲವೆ ೧ ತಿಂಗಳ ಶಿಕ್ಷೆ. ೨ ಹಣಮಂತ ಸೊನಟ್ಟೂರ, ೩ ತಿಂಗಳ ಕಠಿಣ ಶಿಕ್ಷೆ, ಮತ್ತು ೨೦೦ ರು. ದಂಡ, ಇಲ್ಲವೆ ೩ ವಾರ ಶಿಕ್ಷೆ ೩ ದತ್ತೂ ದೀಕ್ಷಿತ ಕಾಪಸ, ೧೦೦ ರು. ದಂಡ, ಇಲ್ಲವೆ ೧ ತಿಂಗಳ ಕಠಿಣ ಶಿಕ್ಷೆ. ೪ ವಾಸುದೇವರಾವ ಕುಲಕರ್ಣಿ, ೩ ತಿಂಗಳ ಕಠಿಣ ಶಿಕ್ಷೆ. ಮತ್ತು ೨೦೦ ರು. ದಂಡ, ಇಲ್ಲವೆ ೩ ವಾರ ಶಿಕ್ಷೆ. ೫ ನಾಗಪ್ಪ ಭೋಯೇರ, ೧೦೦ ರು ದಂಡ, ಇಲ್ಲವೆ ೧ ತಿಂಗಳ ಕಠಿಣ ಶಿಕ್ಷೆ.

೨, ೩ ನೆಯ ಆರೋಪಿಗಳು ಕಾಂಗ್ರೆಸ್ ಕಾರ್ಯವನ್ನು ಬಹಳ ಉತ್ಸಾಹದಿಂದ ಜರುಗಿಸುತ್ತಿದ್ದರೆಂದು ಅವರಿಗೆ ಹೆಚ್ಚಿನ ಶಿಕ್ಷೆಯನ್ನು ವಿಧಿಸಿದ್ದೇನೆಂದು ಮ್ಯಾಜಿಸ್ಟ್ರೇಟರು ಹೇಳಿದರು ಅದಕ್ಕೆ ಆ ವೀರರು ಗಹಗಹಿಸಿ ನಕ್ಕರು. ದಂಡ ಕೊಡುತ್ತೀರೇನೆಂದು ಮ್ಯಾಜಿಸ್ಟ್ರೇಟರು ಕೇಳಿದಾಗ್ಗೆ ದಂಡ ಕೊಡುವದಿಲ್ಲವೆಂದು ಸತ್ಯಾಗ್ರಹಿಗಳು ಸ್ಪಷ್ಟವಾಗಿ ಹೇಳಿದರು.

ಹರಪನಹಳ್ಳಿಯಲ್ಲಿ
ಸತ್ಯಾಗ್ರಹಿಗೆ ಶಿಕ್ಷೆ.

(ಸ್ವಂತ ಸುದ್ದಿಗಾರರಿಂದ)

ಈ ಊರಿನ ಶ್ರೀ ಕಾಳಪ್ಪ ಬೆನ್ನೂರ ಇವರಿಗೆ ಕಾಯದೆಭಂಗಕ್ಕೆ ಉತ್ತೇಜನ ಕೊಟ್ಟ ಆರೋಪದ ಬಗ್ಗೆ ೧೧೭ ನೆಯ ಕಲಮಿನನ್ವಯ ೧ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರು ದಂಡ, ಇಲ್ಲವೆ ೧ ವಾರ ಕಾರಾಗೃಹವಾಸ ಹೀಗೆ ಶಿಕ್ಷೆಯಾಯಿತು. ಇವರಿಂದ ಕ್ಷಮಾಪತ್ರವನ್ನು ತೆಗೆದುಕೊಳ್ಳಲು ನ್ಯಾಯಾಧಿಪತಿಗಳೂ ಮತ್ತು ಕೆಲವು ಸದ್ಗೃಹಸ್ಥರು ಪ್ರಯತ್ನಪಟ್ಟರು ಆದರೆ ಅವರ ಪ್ರಯತ್ನವು ವ್ಯರ್ಥವಾಯಿತು. ವಿಚಾರಣೆಯ ಸಮಯದಲ್ಲಿ ಶ್ರೀ ಕಾಳಪ್ಪನವರು ನಗೆಮೊಗದಿಂದಲೂ ಚಿತ್ತಸ್ಥೈರ್ಯದಿಂದಲೂ ಇದ್ದು, ಬಳ್ಳಾರಿಯ ಜೇಲಿಗೆ ಶಾಂತಚಿತ್ತರಾಗಿ ತೆರಳಿದರು.

ಮುತ್ತಜ್ಜನು
ಮದುವೆ ಮಾಡಿಕೊಂಡನು

ಇಂಗ್ಲಂಡದಲ್ಲಿ ಚೆಟ್ಟಸಿಯೆಂಬುದೊಂದು ಪಟ್ಟಣವುಂಟು, ಅಲ್ಲಿ ವಿಲಿಯಮ್ ಟೇಲರನೆಂಬ ಒಬ್ಬ ವಿಧುರ ಮುದುಕನಿರುವನು. ಅವನಿಗೆ ಈಗ ೮೩ ವರ್ಷ. ಅವನಿಗೆ ಎಷ್ಟೋ ಜನ ಮರಿಮಕ್ಕಳಾದರೂ ಇರುವರು. ತನಗೆ ಒದಗಿದ ತಾಪತ್ರಯಗಳಿಗೆ ಬೇಸತ್ತು ಅವನು ಕೆಲವು ದಿನಗಳ ಹಿಂದೆ ನೇಲಿಡೇವಿಯೆಂಬ ವಿಧವೆಯನ್ನು ಮದುವೆ ಮಾಡಿಕೊಂಡನು. ಆಕೆಗೆ ಈಗ ೪೬ ವರ್ಷ.

ವರಿಷ್ಠ ಕಾರ್ಯಕಾರಿ ಮಂಡಳಿಯ [illegible]ವಾದ ಅಧ್ಯಕ್ಷರು ಆರಿಸಲ್ಪಡುವ ವರೆಗೆ ಶ್ರೀ [illegible] ಚಟ್ಟನ್ನವರು ಅದರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ[illegible]ದ್ದಾರೆ.

ಮಧ್ಯಪ್ರಾಂತದಲ್ಲಿ ಭಯಂಕರ ಲೂಟಿ

ಮಧ್ಯಪ್ರಾಂತದ ಬುಲಡಾಣಾ ಜಿಲ್ಲೆಯ ಎಷ್ಟೋ ಹಳ್ಳಿಗಳಲ್ಲಿ ಕೆಲವು ಜನ ರೈತರು ತಾ|| ೨೧ ರಿಂದ ೨೪ ರ ವರೆಗೆ ಲೂಟಿಯ ರಾಜ್ಯವನ್ನು ಪ್ರಾರಂಭಿಸಿದ್ದರಿಂದ, ಅಲ್ಲಿಯ ಮಾರವಾಡಿ ಹಾಗು ಸಾವಕಾರ ಜನರು ತಮ್ಮ ತಮ್ಮ ಹಳ್ಳಿಗಳನ್ನು ಬಿಟ್ಟು ಹೊರಟು ಹೋಗಿದ್ದಾರೆ ಈಗ ಎನಿಲ್ಲೆಂದರೂ ಸುಮಾರು ೮-೧೦ ಲಕ್ಷ ರೂಪಾಯಿಗಳ ಆಸ್ತಿಯು ಲೂಟಿಯಾಗಿ ಹೋಗಿದೆ.

ಸಾವುಕಾರ ಜನರು ಕೂಲಿಕಾರರಿಗೆ ಹಣ ರೂಪದಿಂದ ಕೂಲಿ ಕೊಡುವದನ್ನು ನಿಲ್ಲಿಸಿ ಧಾನ್ಯದ ರೂಪದಿಂದ ಕೂಲಿ ಕೊಡಹತ್ತಿದರು, ಕಾಳುಕಡಿಗಳ ಧಾರಣಿಯು ಈಗ ಕಡಿಮೆ ಹೋದದ್ದರಿಂದ ಕೂಲಿಕಾರರಿಗೆ ಈ ಪದ್ಧತಿಯು ಸರಿಯಾಗಿ ತೋರಲಿಲ್ಲ. ಮೇಲಾಗಿ ಕೆಲವರಿಗೆ ಕೂಲಿ ದೊರೆಯುವದೂ ಕಟ್ಟಾಗಿ ಹೋಯಿತು. ಅವರು ದಿನದಿನಕ್ಕೆ ಹೆಚ್ಚಾಗಿ ಸಾಲದಲ್ಲಿ ಬೀಳಹತ್ತಿದರು. ಆದ್ದರಿಂದ ಅವರಲ್ಲಿ ಅಸಂತೋಷವು ಬೆಳೆಯಿತು ಅವರು ಲೂಟಿ ಮಾಡಲು ಪ್ರಾರಂಭಿಸಿದರು

ತಾ|| ೨೧ ನೆಯ ದಿವಸ ೨೦೦ ಜನ ಲೂಟಿಗಾರರು ವೆಂಡಗಾವ ಎಂಬ ಹಳ್ಳಿಗೆ ಸಾಗಿ ಹೋಗಿ ಅಲ್ಲಿಯ ಒಬ್ಬ ಸಾವಜಿಯ ಹೊಲದೊಳಗಿನ ಬೆಳೆಯನ್ನು ಲೂಟಿಮಾಡಿ ಅದಕ್ಕೆ ಬೆಂಕಿ ಹಚ್ಚಿ ಹೋದರು.

ತಾ|| ೨೩ ನೆಯ ದಿವಸ ೫೦೦ ಜನ ಲೂಟಿಗಾರರು ಬೇಬಿ ಎಂಬ ಹಳ್ಳಿಗೆ ಸಾಗಿ ಹೋಗಿ, ಅಲ್ಲಿಯ ೧೩ ಜನ ಸಾವುಕಾರರ ಮನೆಗಳನ್ನು ಲೂಟಿಮಾಡಿ ವಸ್ತ್ರ, ರತ್ನ, ಧಾನ್ಯ ಪಾತ್ರೆ, ಮೊದಲಾದವುಗಳನ್ನು ತೆಗೆದುಕೊಂಡು ಹೋದರು ಪ್ರಾಮಿಸರಿ ನೋಟ, ಜವಾಬಿನ ಪುಸ್ತಕ ಮತ್ತು ಇತರ ಕಾಗದಪತ್ರಗಳನ್ನು ಸುಟ್ಟರು ಮನೆಯೊಳಗಿದ್ದವರು ಗಾಬರಿಯಾಗಿ ಎಲ್ಲವನ್ನು ಬಿಟ್ಟುಗೊಟ್ಟು, ಜೀವ ಉಳಿಸಿಕೊಳ್ಳಬೇಕೆಂದು ಪಾರಾಗಿ ಹೋಗಿದ್ದಾರೆ.

ಪೋಲೀಸ ಅಧಿಕಾರಿಗಳು ಈ ಬಗೆ ಶೋಧ ನಡೆಸಿದ್ದು, ಈಗಾಗಲೆ ೬೨ ಜನರನ್ನು ಸೆರೆಹಿಡಿದಿರುತ್ತಾರೆ. ಲೂಟಿಗಾರರ ಇಬ್ಬರು ಮುಖ್ಯಸ್ಥರೂ ಬಂಧಿಸಲ್ಪಟ್ಟಿದ್ದಾರೆ. ಲೂಟಿಮಾಡಲ್ಪಟ್ಟ ಕೆಲವು ಸರಕುಗಳಾದರೂ ಅವ... ವೆ.

ಮಹಾತ್ಮರ ಪತ್ರ

ಮಹಾತ್ಮಾ ಗಾಂಧಿಯವರು ಯರವಡಾ ಜೇಲದಿಂದ ತಾ|| ೧೬ನೆಯ ದಿವಸ ಎರನಾಕುಲಮದ ಶ್ರೀ ಶಂಕರಜಿಯವರಿಗೆ ಒಂದು ಪತ್ರ ಬರೆದು, ಮಲಬಾರ, ಕೊಚೀನ ತ್ರಾವಣಕೋರ ಭಾಗಗಳಲ್ಲಿಯ ಖಾದಿ ಹುಟ್ಟುವಳಿಯ ವಿಷಯವಾಗಿ ಸವಿಸ್ತರ ಸಂಗತಿಗಳನ್ನು ತಮಗೆ ತಿಳಿಸಬೇಕೆಂದು ಅವರಿಗೆ ಕೇಳಿಕೊಂಡಿದ್ದಾರೆ.

ವಿಠ್ಠಲಭಾಯಿಯವರ ತಾಯಿಯವರ ಹಾರೈಕೆ

ತ ರಂಗವಾಸ ಮಾಡದಸ್ತಕ್ಕೆ ತಮಗೆ ಎಳ್ಳಷ್ಟು ವಿಷಾದವಾಗಿಲ್ಲವೆಂದೂ, ಜೇಲಿನಿಂದ ಬಿಟ್ಟು ಬರುವದರೊಳಗಾಗಿಯೆ ಭಾರತಖಂಡವು ಸ್ವರಾಜ್ಯವನ್ನು ಸಂಪಾದಿಸಿಕೊಳ್ಳುವದೆಂದೂ, ಶ್ರೀ ವಿಠ್ಠಲಭಾಯಿಯವರಿಗೆ ಅವರ ತಾಯಿಯವರು ಸಂದೇಶ ಕಳಿಸಿದ್ದಾರೆ.

ಪಂ. ನೇತ್ರೀಲಾಲರಿಗೆ ಮತ್ತೆ ಜ್ವರ

ಪಂಡಿತ ನೇತ್ರೀಲಾಲರಿಗೆ ತಾ|| ೨೮ ನೆಯ ದಿವಸ ಮತ್ತೆ ೧೦೦ ಡಿಗ್ರಿಯ ವರೆಗೆ ಜ್ವರ ಬಂದಿದ್ದವು. ಕಳೆದ ೧೫ ದಿನಗಳ ವರೆಗೆ ಅವರು ಜ್ವರದಿಂದ ಮುಕ್ತರಾಗಿದ್ದರು

ಸೊಲ್ಲಾಪುರದ ಆರೋಪಿಗಳಿಗೆ ಜೀವದಾನ

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾಗಿರುವ ನಾಲ್ಕು ಜನ ಆರೋಪಿಗಳಿಗೆ ದಯೆ ತೋರಿಸಿ ಗಲ್ಲಿನ ಶಿಕ್ಷೆಯನ್ನು ರದ್ದು ಪಡಿಸಬೇಕಾಗಿ ಅಖಿಲ ಭಾರತ ಮುಸ್ಲಿಮ್ ಮಂಡಳದವರ ವ್ಹಾಯಿಸರಾಯರಿಗೆ ತಂತಿ ಕಳಿಸಿದ್ದಾರೆ.

ಹಿಂದು ಸ್ಥಾನಕ್ಕೆ ಬೆಂಕಿಹತ್ತಿದೆ

ಪ್ರಾತಿನಿಧ್ಯದ ವಿಷಯವಾಗಿ ಹಿಂದೂ ಮುಸಲ್ಮಾನರಲ್ಲಿ ಈಗ ಉತ್ಪನ್ನವಾದ ಅಂತಃಕಲಹದ ಮೂಲಕವಾಗಿಯಾಗಲಿ ಇಲ್ಲವೆ ಬ್ರಿಟಿಶರು ತಮಗೆ ಸಾಧಿಸಿದಂತೆ ನಡೆಯುವ ರೆಂಟಕಾರಣ ತೋರಿಸಿಯಾಗಲಿ, ಬಂಡೀ ಗಾಲಿಯ ... ಪರಿಷತ್ತಿನ ಪ್ರತಿನಿಧಿಗಳು ತಮ್ಮ ದೇಶಕ್ಕೆ ಹಿಂತಿರುಗಿದರೆ ಬಹಳೇ ಘಾತವಾಗುವದೆಂದೂ, ಹಿಂದುಸ್ಥಾನಕ್ಕೆ ಬೆಂಕಿ ಹತ್ತಿರುವಂತಹ ಸಮಯದಲ್ಲಿ ಕ್ಷುಲ್ಲಕ ಕಾರಣಗಳ ಬಗ್ಗೆ ಬಡಿದಾಡುತ್ತ ಕೂಡುವದು ಸಮಂಜಸವಾಗಿಲ್ಲವಾದ್ದರಿಂದ ಹೇಗಾದರೂ ಮಾಡಿ ಪರಿಷತ್ತನ್ನು ಯಶಸ್ವಿ ಮಾಡಬೇಕೆಂದೂ ಡೇಲಿ ಹೆರಾಲ್ಡ ಪತ್ರಿಕೆಯು ಬುದ್ಧಿ ಹೇಳಿದೆ.

ಕೈದಿಗಳ ಗೋಳಾಟ

ಕಾಯದೆ ಭಂಗಕ್ಕಾಗಿ ಶಿಕ್ಷೆಗೆ ಗುರಿಯಾದ ಶ್ರೀ ಅಭ್ಯಂಕರ, ರವಿಶಂಕರ ಶುಕ್ಲ, ಆಣೆ ಮತ್ತು ವೀರವಾಮನರಾಯರು ಈಗ ಸಿಯೋನಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವರು. ಮೊದಲಿನ ಮೂವರು "ಅ" ವರ್ಗದಲ್ಲಿ ಇದ್ದು, ವೀರ ವಾಮನರಾಯರು "ಬ" ವರ್ಗದಲ್ಲಿರುವರು. ಅವರ ಅಡಿಗೆಯನ್ನು ಸಿದ್ಧಪಡಿಸಲಿಕ್ಕೆ ಜೇಲಿನ ಅಧಿಕಾರಿಗಳು ಇಬ್ಬರು ಅಡಿಗೆಯವರನ್ನು ಅವರಿಗೆ ಕೊಟ್ಟಿದ್ದರು. ತಾ|| ೨೧ ನೆಯ ದಿವಸ ಒಬ್ಬ ಅಡಿಗೆಯವನು ಜ್ವರದಿಂದ ಪೀಡಿತನಾಗಿ ಹಾಸಿಗೆ ಹಿಡಿದನು, ಶ್ರೀ ಶುಕ್ಲರವರು ಮತ್ತೊಬ್ಬನನ್ನು ಒದಗಿಸಿ ಕೊಡಲು ಅಧಿಕಾರಿಗಳಿಗೆ ಕೇಳಿಕೊಂಡರು. ಅಧಿಕಾರಿಗಳು ಸಿಟ್ಟಿಗೆದ್ದು ಮತ್ತೊಬ್ಬ ಅಡಿಗೆಯವನನ್ನೂ ಹಿಂತೆಗೆದುಕೊಂಡರು, ಈ ಮೂಲಕವಾಗಿ ಮೇಲಿನವರಿಗೆಲ್ಲರಿಗೂ ಅಂದಿನಿಂದ ಸಂಜೆಯ ಊಟವು ಲೋಪವಾಗಿದೆ. ಅವರ ದೇಹಸ್ಥಿತಿಯು ನೆಟ್ಟಗಿರುವದಿಲ್ಲ ಶ್ರೀ ಅಭ್ಯಂಕರರು ಮಧುಮೇಹದಿಂದ ಬಳಲುತ್ತಿರುವರು. ಶ್ರೀ ರವಿಶಂಕರರಿಗೆ ಮೂಲವ್ಯಾಧಿರೋಗವು ಅಂಟಿಕೊಂಡಿದೆ. ವೀರ ವಾಮನರಾಯರು ಮಲಬದ್ಧತೆಯಿಂದ ನರಳುತ್ತಿರುವರು

ಮೂರು ಕಣ್ಣಿನ ಅಡಿಕೆ, ನಾಲ್ಕು ಕಣ್ಣಿನ ತೆಂಗಿನಕಾಯಿ

ತಾ|| ೨೫ನೆಯ ದಿವಸ ಕುಮಟೆಯಲ್ಲಿ ತೆರೆಯಲ್ಪಟ್ಟಿರುವ ಸ್ವದೇಶಿ ಔದ್ಯೋಗಿಕ ಹಾಗು ಖಾದಿಯ ಪ್ರದರ್ಶನದಲ್ಲಿ ಮೂರು ಕಣ್ಣಿನ ಅಡಿಕೆ ಹಾಗು ನಾಲ್ಕು ಕಣ್ಣಿನ ತೆಂಗಿನಕಾಯಿ ಈ ಎರಡು ವಿಚಿತ್ರ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ.

ಅಸ್ಪೃಶ್ಯರು ಸತ್ಯಾಗ್ರಹ ಹೂಡಿದರು

ಜಳಗಾಂವದಲ್ಲಿ ಈಗ ವರ್ಣಾಶ್ರಮ ಧರ್ಮ ಸ್ವರಾಜ್ಯ ಸಂಘದವರ ಅಧಿವೇಶನವು ಪ್ರಾರಂಭವಾಗಿದ್ದು, ಅಲ್ಲಿಯು ಅಸ್ಪೃಶ್ಯರು ಅದರ ವಿರುದ್ಧವಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ.

ಬಿಹಾರದಲ್ಲಿ

ಕರನಿರಾಕರಣೆಯ ಕಾಯಿದೆ

ಕರನಿರಾಕರಣೆಯ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ ಆರ್ಡಿನನ್ಸ ಬಿಹಾರ ಪ್ರಾಂತದಲ್ಲಿ ಬಳಕೆಯಲ್ಲಿ ಬಂದಿದೆಯಾಗಿ ಅಲ್ಲಿಯ ಗೌವ್ಹರ್ನರರು ಪ್ರಸಿದ್ಧ ಪಡಿಸಿದ್ದಾರೆ.

ಗುಜರಾಥದಲ್ಲಿ ಬೆಳೆಗಳ ಲೂಟಿ

ಬೋರಸಾದ ತಾಲೂಕದ ರಾಸ ಎಂಬ ಹಳ್ಳಿಯಲ್ಲಿ ಕಳೆದ ಮೂರು ದಿವಸಗಳಿಂದ ಯಾರೋ ಕೆಲವರು ಹೊಲಗಳೊಳಗಿನ ಬೆಳೆಯನ್ನು ಲೂಟಿ ಮಾಡುವ ಮತ್ತು ಮನೆಗಳಿಗೆ ಕನ್ನ ಹಾಕುವ ಕಾರ್ಯವನ್ನು ಪ್ರಾರಂಭಿಸಿರುವದಾಗಿ ತಿಳಿದುಬರುತ್ತದೆ.

ಕಲಕತ್ತೆಯಲ್ಲಿ

೧೧ ಜನರಿಗೆ ಕೈದು

ಬುರಾಬಜಾರದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಕಲಕತ್ತೆಯಲ್ಲಿ ೧೧ ಜನ ಸ್ವಯಂಸೇವಕರು ಕೈದು ಮಾಡಲ್ಪಟ್ಟಿದ್ದಾರೆ.

ಓಡಿಸಾ ಪ್ರಾಂತ ನಿರ್ಮಾಣ.

[illegible]ಗಾಲಿಯ ಪರಿಷತ್ತಿನ ಪ್ರತಿನಿಧಿಗಳು [illegible]ದ ಪಾರ್ಲಾಕಿಮಿಡಿ ಮಹಾರಾಜರು ಓಡಿಸಾ ಪ್ರಾಂತ ನಿರ್ಮಾಣದ ಬಗ್ಗೆ ಮತ್ತವನ್ನು ಸಿದ್ಧಪಡಿಸಿದ್ದು, ಅದನ್ನು [illegible] ಪರಿಷತ್ತಿನ ಮುಂದೆ ಮಂಡಿಸುತ್ತಿದ್ದಾರೆ.

೧೩ ಜನ ಕಳ್ಳರಿಗೆ

ಭಯಂಕರ ಶಿಕ್ಷೆ

ಪ್ರತಾಪಗಢದ ದೇವಾಲಯದಲ್ಲಿ [illegible] ಕಳ್ಳತನ ಮಾಡಿದ ಬಗ್ಗೆ ಬಂಧಿತರಾದ ೧೩ ಜನ ಕಳ್ಳರಲ್ಲಿ ಇಬ್ಬರಿಗೆ ಪ್ರತ್ಯೇಕವಾಗಿ ೧೦ ವರ್ಷ ಕಠಿಣ ಶಿಕ್ಷೆಯಾಗಿದ್ದು, ಉಳಿದವರಿಗೆ ೪ರಿಂದ ೯ ವರ್ಷದ ವರೆಗೆ ಬೇರೆ ಬೇರೆ ಅವಧಿಯ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

ಕಲಕತ್ತೆಯಲ್ಲಿ

ಸ್ತ್ರೀಯರಿಗೆ ಶಿಕ್ಷೆ

ಪೋಲೀಸ ಕಮಿಶನರರು ತೆಗೆದ ಅಪ್ಪಣೆಯನ್ನು ಧಿಕ್ಕರಿಸಿ, ಬೀದಿಗಳಲ್ಲಿ ರಾಷ್ಟ್ರಗೀತಗಳನ್ನು ಹಾಡು[illegible] ಸಮಿತಿಯಾಗಿ ಕಲಕತ್ತೆಯಲ್ಲಿ [illegible] ಸ್ತ್ರೀಯರಿಗೆ ಪ್ರತ್ಯೇಕವಾಗಿ [illegible] ಸಮಿಮನೆ ಹೀಗೆ ಶಿಕ್ಷೆ [illegible] ನಿರಾಕರಿಸಿ [illegible]

ಜ[illegible] ಹಿಡಿದರು

[illegible] ಪೋಲೀಸ ಅಧಿಕಾರಿಗಳು [illegible] ಅಲ್ಲಿಯ [illegible] ಗುಲಬಾಲ ಕ್ಲಬ್ಬಿಗೆ [illegible] ಜೂಜುಗಾರರನ್ನು [illegible] ಹಿಡಿದು [illegible]

ಪ್ರೊ. ಸ್ವಾಮಿ ನಾರಾಯಣರಿಗೆ

ಬಿಡುಗಡೆ

[illegible] ಸಂಬಂಧವಾಗಿ [illegible] ಶಿಕ್ಷೆಗೆ ಗುರಿಯಾಗಿ ಸಾಬರಮತಿ ಜೇಲಿನಲ್ಲಿ [illegible] ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಗುಜರಾಥದ ಪ್ರಸಿದ್ಧ ಮುಖಂಡರಲ್ಲೊಬ್ಬರಾದ ಪ್ರೊ. ಸ್ವಾಮಿ ನಾರಾಯಣರು [illegible] ದಿವಸ ಜೇಲಿನಿಂದ ಬಿಡುಗಡೆ ಹೊಂದುತ್ತಿರುವ ಸುದ್ದಿ.

ಕಾರಾವಾರ ಜಿಲ್ಹೆಯಲ್ಲಿ

ಸತ್ಯಾಗ್ರಹಿಗಳ ಮೇಲೆ ನೋಟೀಸು

[illegible] ಜಿಲ್ಹೆಯ ಅಂಕೋಲಾ ತಾಲೂಕಿನ [illegible] ಕಾರ್ಯವನ್ನು ಪ್ರಕಟಿಸಿದ್ದ ಶ್ರೀ ಎಲ್. ಬಿ. ಪಡಕೆ, ಕೃಷ್ಣ [illegible], [illegible], ರಾಮಚಂದ್ರ ಭಟ್ಟ, [illegible], ಎಸ್. ಬಿ. ವೆಂಕಟರಮಣಯ್ಯ ಈ [illegible] ಜನರ ಮೇಲೆ ಅಲ್ಲಿಯ ಅಧಿಕಾರಿಗಳು ನೋಟೀಸು ಹೊರಡಿಸಿ, ಜಿಲ್ಹೆಯನ್ನು ಬಿಟ್ಟು ಹೋಗಬೇಕೆಂದು ಅವರಿಗೆ [illegible]ದ್ದಾರೆ. ಪೋಲೀಸರಿಗೆ [illegible] ಉಳಿದವರು [illegible] ನೋಟೀಸುಗಳು ಹಾಕಿಯೇ ಇರುವದು.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ [illegible] ಸ್ವದೇಶಿ [illegible] ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ ಹಣಮಂತರಾವ ದೇಸಾಯಿ
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಾಚ, ಟಾಯಂಪೀಸು

ದುರಸ್ತಿ ಮಾಡಿಸುವವರಿಗೆ ಸುಸಂಧಿ.

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವೀದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಂಪೀಸ ಗ್ರಾಮೋಫೋನುಗಳನ್ನು ಖರೀದಿ ಕೊಡುತ್ತೇವೆ. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿ ಮಾಡಿ ಕೊಳ್ಳಿರಿ.

ವಿಳಾಸ:- ಆರ್. ಡಿ. ಸಿಂಧೆ.
ವಾಚ ರಿಪೇರರ ಮತ್ತು ಗ್ರಾಮೊ ಫೊ ನೊ.
[illegible] ಬಾಗಲಕೋಟೆ.

ಎಲ್ಲ ತರದ ಚಳಿಜ್ವರದ ಮೇಲೆ

ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರ್ತಾಗಿ ಎಲ್ಲ ತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಳಿ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ [illegible]-೦-೦

ಏಜಂಟರಿಗೆ [illegible] ಕಮೀಶನ ಕೊಡಲಾಗುವದು.

ವಿಳಾಸ:- [illegible] ಮಣ್ಣೂರ.
[illegible] ಬಾಗಲಕೋಟೆ

ಪಾಟಿಗಳು ಮಾರಾಟಕ್ಕಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ [illegible] ನಂಬರದಲ್ಲಿಯ ಕಾವೇರಿಯವರ [illegible] ಮಾರಾಟಕ್ಕಿವೆ. ತೆಗೆದುಕೊಳ್ಳಬಯಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

[illegible]ರಾವ ಧಾರವಾಡ
ವಕೀಲರು ಬಾಗಲಕೋಟೆ.

ಹಿಟ್ಟಿನ ಗಿರಣಿ ಮಾರಾಟಕ್ಕಿದ್ದದೆ.

ರಸ್ಟನ ಮೇಕರ್ ಇಂಜಿನ್ ೨॥ ರ. H. P. ಅದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದಿದೆ. ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

[illegible] ದೇಸಾಯಿ c/o ಕನ್ನಡಿಗ
ಬಾಗಲಕೋಟೆ.

ಈ ಪತ್ರಿಕೆಯು [illegible] ಬಾಗಲಕೋಟೆ ವಿದ್ಯಾರ್ಥಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆಯು. ಬೆಲೆ. ೦-೦-೩.

यदत् परवशं दुःखं । यद्यदात्मवशं सुखम्॥-मनु.

ಕನ್ನಡಿಗ

ಸಂಪಾದಕರು:- ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ- ಶುಕ್ರವಾರ ಮಿತಿ ಪುಷ್ಯ ಶುದ್ಧ ೧೪ ಶಕೆ ೧೮೫೧ ತಾ॥ ೨-೧-೩೦ [ಸಂಚಿಕೆ ೧೫೮

ಪೋಲೀಸರಮೇಲೆ ಹಲ್ಲೆ. ಸೈನಿಕರಿಗೆಗಲ್ಲು.

ಅಲಹಾಬಾದ ಜಿಲ್ಹೆಯ ಕರ್ವಾ ಎಂಬ ಹಳ್ಳಿಯಲ್ಲಿ ಕಾಂಗ್ರೆಸ್ ಅಧಿಕಾರಿಗಳು ಒಂದು ಸಾರ್ವಜನಿಕ ಸಭೆ ಸೇರಿಸಿದ್ದರು. ಅದು ಮುಗಿಯುವ ಸುಮಾರಕ್ಕೆ ಕೆಲವು ಜನ ಪೋಲೀಸರು ಅಲ್ಲಿಗೆ ಬಂದು ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಒಬ್ಬನನ್ನು ಸೆರೆಹಿಡಿದರು. ಅಲ್ಲಿ ನೆರೆದವರು ಅವನನ್ನು ಬಿಡುಗಡೆ ಮಾಡಬೇಕೆಂದು ಪೋಲೀಸರ ಮೇಲೆ ಹಲ್ಲೆ ಮಾಡಿದರು. ಮೂರು ಜನ ಪೋಲೀಸರಿಗೆ ಗಾಯವಾಯಿತು. ಸ್ವಲ್ಪ ಹೊತ್ತಿನ ಮೇಲೆ ಹೆಚ್ಚಿಗೆ ಕೆಲವು ಜನ ಪೋಲೀಸರು ಅಲ್ಲಿಗೆ ಬಂದು, ಜನರನ್ನು ಚದುರಿಸಿ, ೨೭ ಜನರನ್ನು ಹಿಡಿದುಕೊಂಡು ಹೋದರು.

ಸ್ಮರ್ನಾದಲ್ಲಿ ಸೈನಿಕರಿಗೆ ಗಲ್ಲು.

ತುರ್ಕಸ್ಥಾನದ ಸ್ಮರ್ನಾ ಪ್ರಾಂತದಲ್ಲಿ ದಂಡಿನಾಳಿಕೆಯು ಪ್ರಾರಂಭವಾಗಿದೆ. ಪ್ರಭುತ್ವದ ವಿರುದ್ಧವಾಗಿ ಬಂಡನ್ನೆಬ್ಬಿಸಿದ ಬಂಡುಗಾರರನ್ನು ಹತ್ತಿಕ್ಕಲು ನಿರಾಕರಿಸಿದ ಸೈನಿಕರ ವಿಚಾರಣೆಯು, ದಂಡಿನ ಅಧಿಕಾರಿಗಳಲ್ಲಿ ನಡೆಯುತ್ತಿದೆ. ಕೆಲವರಿಗೆ ಗಲ್ಲಿನ ಶಿಕ್ಷೆಯು ವಿಧಿಸಲ್ಪಡುವದಾಗಿ ತೋರುತ್ತದೆ.

ಸಿರ್ಸಿಯಲ್ಲಿ ಮೂವರಿಗೆ ಶಿಕ್ಷೆ.

ಕಾಯದೆಗೆ ವಿರುದ್ಧವಾದ ಸಂಘದಲ್ಲಿ ಸೇರಿದ ಆರೋಪದಿಂದ ಸಿರ್ಸಿಯಲ್ಲಿ ಬಂಧನಕ್ಕೊಳಗಾದ ಮೂವರು ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೫ ರು. ದಂಡ, ಇಲ್ಲವೆ ಮತ್ತೆ ೧॥ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ.

ಗುಳೇದಗುಡ್ಡದ ಹುಲಿಯು ಊರೊಳಗೆ ಹೊಕ್ಕಿತು

(ನಮ್ಮ ಸ್ವಂತ ಸದ್ದಿಗಾರರಿಂದ)

ಕಾಯದೆ ಭಂಗಕ್ಕೆ ಉತ್ತೇಜನ ಕೊಟ್ಟ ಬಗ್ಗೆ ೪ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದ ಶ್ರೀ ಜೋಶಿ ಗುಂಡೇರಾಯರು ತಾ| ೨೪ ನೆಯ ದಿವಸ ಇಲ್ಲಿಗೆ ಬಂದರು. ನಾಗರಿಕರು ಯಥಾಯೋಗ್ಯವಾಗಿ ಆದರ ಸತ್ಕಾರಮಾಡಿ ಅವರನ್ನು ಊರಲ್ಲಿ ಕರೆದುಕೊಂಡು ಬಂದರು.

ಇಲ್ಲಿಯ ಸ್ವಯಂಸೇವಕರು ತಮಗಾದ ದಂಡದ ಬಗ್ಗೆ ಶಿಕ್ಷೆಯನ್ನು ಅನುಭವಿಸಿ ಬಂದಿದ್ದರೂ ಸಹ ಅಧಿಕಾರಿಗಳು ಅವರ ದಂಡದ ಹಣವನ್ನು ಬಲಾತ್ಕಾರದಿಂದ ವಸೂಲ ಮಾಡುತ್ತಿರುವರು.

ಮಹಾತ್ಮರನ್ನು ಬಿಡುವವರೆಗೆ ಗೋದಿಯ ಕೂಳನ್ನು ಮುಟ್ಟುವದಿಲ್ಲವಾಗಿ ಶ್ರೀ ಸಾಬಣ್ಣ ಸಿಂಗದಂವರು ಪ್ರತಿಜ್ಞೆ ಮಾಡಿದ್ದಾರೆ.

ಮೀನವು ನಾವನ್ನು ಬುಡಮೇಲು ಮಾಡಿತು

ಕಲಕತ್ತೆಯಲ್ಲಿಯ ಒಬ್ಬ ಮೀನಗಾರನಿಗೆ ಹುಗಳಿ ನದಿಯ ಮುಖದಲ್ಲಿ ಒಂದು ಮೀನವು ಸಿಕ್ಕಿದೆ. ಅದು ೬ ಫೂಟು ೯ ಇಂಚು ಉದ್ದವಿದ್ದು, ಅದರ ತೂಕವು ಸುಮಾರು ೫ ಮಣವಿದೆ. ಅದರ ಹಿಣಿಜು ಹಾಗು ಬಾಯಿ ಕ್ರಮವಾಗಿ ೧೮ ಹಾಗು ೨೦ ಇಂಚು ಅಗಲವಿವೆ. ಮೀನಗಾರನ ಬಲೆಯೊಳಗಿಂದ ಪಾರಾಗಿ ಹೋಗಲು, ಅದು ಪ್ರಯತ್ನಪೂರ್ವಕವಾಗಿ ನಾವನ್ನು ಬುಡಮೇಲು ಮಾಡಿತು. ಎರಡನೆಯ ಮೀನಗಾರರು ಬಂದು ಅವರನ್ನು ಸಂಕಟದಿಂದ ಪಾರು ಮಾಡಿದರು. ಈಗ ಒಬ್ಬ ಖಾನಾವಳಿಯವನು ಅದನ್ನು ಕೊಂಡುಕೊಂಡಿದ್ದಾನೆ.

ಬಂಡೀಗಾಲಿಯ ಪಂಚಪತ್ತಿನ ಬ್ರಿಟಿಶ ಪ್ರತಿನಿಧಿಗಳು ತಾ| ೩ನೆಯ ದಿವಸ ಒತ್ತಟ್ಟಿಗೆ ಕಲೆತು ಹಿಂದುಸ್ಥಾನಕ್ಕೆ ವಸಾಹತಿ ಸ್ವರಾಜ್ಯವನ್ನು ಕೊಡಬೇಕೋ ಹೇಗೆಂಬುದರ ಬಗ್ಗೆ ವಿಚಾರ ಮಾಡಿದರು. ವಿಚಾರಾಂತ್ಯದಲ್ಲಿ ಯಾವದೂ ನಿರ್ಣಯವಾಗಲಿಲ್ಲ.

ಸ್ವದೇಶೀ ಚಳವಳಿಯ ಇತಿಹಾಸ

ಉತ್ತರ ಕನ್ನಡ ಜಿಲ್ಲೆಯ ಸ್ವದೇಶಿ ಔದ್ಯೋಗಿಕ ಹಾಗೂ ಖಾದಿ ಪ್ರದರ್ಶನದ ಉದ್ಘಾಟನ ಸಮಾರಂಭವು ತಾ| [illegible] ನೇ [illegible] ಟಿಯಲ್ಲಿ ಕರ್ನಾಟಕ ದಿವಾಕರ ರಂಗರಾಯರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ "ಸ್ವದೇಶಿ [illegible] ವನ್ನು ಕುರಿತು ಶ್ರೀ ದಿವಾಕರರ [illegible] ತೆ ಭಾಷಣ ಮಾಡಿದರು.

ಸ್ವದೇಶಿಗೂ [illegible] ಆಂದೋಲನಕ್ಕೂ ನಿಕಟ ಸಂಬಂಧವಿದೆ. [illegible] ಆಂದೋಲನ ನಡೆದಾಗ ಸ್ವದೇಶಿಗೆ [illegible] ಜೀವನ ದೊರೆತು ಈ ಚಳವಳಿಯು ಮುಂದ [illegible] ನೇ ಇಸ್ವಿಯಲ್ಲಿ ಪುಣೆಯೊಳಗೆ [illegible] ಲೋಕಮಾನ್ಯ ಟಿಳಕರು ಇದರ ಪ್ರಚಾರ ಮಾಡಿದರು. ೧೯೦೫ ನೇ ಇಸ್ವಿಯಲ್ಲಿ ವಂಗಭಂಗದ ಚಳವಳಿ [illegible] ಸುರೇಂದ್ರನಾಥ ಬಾನರ್ಜಿ ಬಿಪಿನಚಂದ್ರಪಾಲ, ಲೋಕಮಾನ್ಯ ಟಿಳಕರು ಸ್ವದೇಶಿಯ ಪುರಸ್ಕಾರ ಮಾಡಿದರು. ೧೯೨೧ ನೇ ಇಸ್ವಿಯಲ್ಲಿ ಅಸಹಕಾರ ಚಳವಳಿ. ಆಗ ಪುನಃ ಈ ಚಳವಳಿಗೆ ಉತ್ಸು ಬಂತು. ಈಗಿನ ರಾಜಕೀಯ ಚಳವಳಿಯಿಂದಲೂ ಸ್ವದೇಶಿಗೆ ಬಹಳ ಉತ್ತೇಜನ ದೊರೆತಿದೆ. ದೇಶದ ಆರ್ಥಿಕ ಸಂಪತ್ತು ಬೆಳಸುವದೇ ಸ್ವದೇಶಿ [illegible] ಸಾಧ್ಯ. ಸ್ವದೇಶಿ ಪ್ರದರ್ಶನದಿಂದ ಈ ಸಾಧ್ಯಕ್ಕೆ ಬಹಳ ಬಲ ದೊರಕುತ್ತದೆ. ಸ್ವದೇಶಿಯಿಂದ ಬ್ರಿಟಿಶ ದೇಶದೊಳಗಿನ ವರ್ತಕರೂ, ಕಾರಖಾನೆಯವರೂ ಚಳವಳಿ ಮಾಡಹತ್ತಿದ್ದಾರೆ. ಇದರ ಮೇಲಿಂದ ಸ್ವದೇಶಿಯ ಮಹತ್ವವು ನಿಮಗೆ ತಿಳಿಯಬಹುದು. ಸ್ವದೇಶಿಯು ಸ್ವರಾಜ್ಯ ಸಂಪಾದನೆಯಾದಾಗ್ಯೂ ಮುಂದರಿಯಬೇಕು. ಸ್ವರಾಜ್ಯಪ್ರಾಪ್ತಿಗಷ್ಟೇ ಸ್ವದೇಶಿಯು ಸಂಬಂಧಿಸಿದ್ದೆಂದು ತಿಳಿಯಕೂಡದು. [illegible] ಕೊಡಬೇಕು. ದೇಶದೊಳಗೆ ಅವಶ್ಯವಿರುವ [illegible] ದೇಶದಲ್ಲೇ ತಯಾರಿಸಿಕೊಳ್ಳಬೇಕು. ರಾಜಕೀಯ ಆಂದೋಲನದಲ್ಲಿ ಹೆಚ್ಚು—ಕಡಿಮೆಯಾದರೂ ಸ್ವದೇಶಿಯು ಪ್ರಗತಿಯು ಎಡೆಬಿಡದೆ ನಡೆಯುವದೆಂದು ನಾನು ಹೇಳುವ ಅಂಕಿಗಳಿಂದ ನಿಮಗೆ ತಿಳಿಯಬಹುದು. [illegible] ನೇ ಇಸ್ವಿಯಲ್ಲಿ ೨೦೦ ಕೋಟಿ [illegible] ಪರದೇಶಿ [illegible] ಆಮದಾಗಿತ್ತು. ಇವರೊಳಗೆ [illegible] ದೇಶದಿಂದ ಆಮದಾಗಿತ್ತು. ಆ ವರ್ಷ ಹಿಂದುಸ್ಥಾನದೊಳಗಿನ ಗಿರಣಿಗಳಲ್ಲಿ, ಬರೇ [illegible] ಗಜ ಅರಿವೆ; ೭೮ ಲಕ್ಷ ಗಜ ಅರಿವೆ ಕೈಮಗ್ಗದ ಮೇಲೆ ತಯಾರಾಯಿತು. ಹೀಗೆ ಸ್ವದೇಶಿಯು ಒಂದೇ ಸವನೆ ಬೆಳೆಯುತ್ತ ನಡೆದಿದೆ. ಜಪಾನದಲ್ಲಿ ಚೂರು ಅರಿವೆಯು ರಲಿಲ್ಲ; ೧೮೯೭ ನೇ ಇಸ್ವಿಯಲ್ಲಿ ಇಲ್ಲಿಂದ ಅರಳೆ ಗೆಂಟುಗಳನ್ನು ಒಯ್ದು ೩೦—೩೨ ವರ್ಷಗಳಲ್ಲಿ ೮—೯ ಕೋಟಿ ರೂಪಾಯಿ ಬೆಲೆಯ ಅರಿವೆಗಳನ್ನು ಅವರು ಹಿಂದುಸ್ಥಾನಕ್ಕೆ ಕಳುಹುತ್ತಾರೆ. ಇಷ್ಟು ಅವರೊಳಗೆ ಪ್ರಗತಿಯಾಯಿತು. ಮೇಲ್ಕಂಡಷ್ಟು ಪ್ರಗತಿಯಾಗಬೇಕಾದರೆ ನಮಗೆ ಅನೇಕ ಅಡಚಣೆಗಳೊದಗಿದವು. ಅವುಗಳನ್ನು ಸವಿಸ್ತರ ವಿವರಿಸಲು ನನಗೆ ಸವುಡುಯಿಲ್ಲ. ಆದಾಗ್ಯೂ, ಅವುಗಳ ನಾಮನಿರ್ದೇಶವನ್ನು ಮಾಡುತ್ತೇನೆ. ತೆರಿಗೆ ಕೂಡ್ರಿಸುವ ಅಧಿಕಾರವು ನಮ್ಮ ಕೈಯಲ್ಲಿಲ್ಲ. ನಮಗೆ ಆಳುವವರು ಬೇರೆ, ನಮ್ಮ ಆಳರಸರಿಗೆ ಇಬ್ಬರು ಹೆಂಡಂದಿರು; ಇಂಗ್ಲಂಡ ದೇಶವು ಚಿಕ್ಕ ಹೆಂಡತಿ; ಹಿಂದುಸ್ಥಾನ ದೇಶವು ದೊಡ್ಡ ಹೆಂಡತಿ. ಆದರಿಂದ ನಮ್ಮ ಉದ್ದಿಮೆಗಳಿಗೆ ಸಂರಕ್ಷಣ ದೊರೆಯುವದಿಲ್ಲ. ವಾಹನ ಸೌಲಭ್ಯವಿಲ್ಲ. ಇಂಗ್ಲಂಡದ ಸರಕಿಗೆ ಅನುಕೂಲತೆ ಹೆಚ್ಚು; ನಮ್ಮ ಸರಕಿಗೆ ಅನುಕೂಲತೆ ಕಡಿಮೆ. ಮೊದಲು ರೂಪಾಯಿಗೆ ೧೬ ಪೆನ್ಸ ದರವಿತ್ತು; ಈಗ ಸರಕಾರದವರು ಅದನ್ನು ೧೮ ಪೆನ್ಸಿಗೆ ಏರಿಸಿದ್ದಾರೆ. ಇದರಿಂದ ಪರದೇಶಿ ಸರಕಿಗೆ ನೂರಕ್ಕೆ ೧೨॥ ಯಂತೆ ಸರಕಾರವು ಸೂಟ ಕೊಟ್ಟಂತಾಗಿದೆ. ಇಲ್ಲಿ ಕೈಗಾರಿಕೆ [illegible] ಗೆ ಬೇಕಾಗುವ [illegible] ಶಿಕ್ಷಣ ಸಹ ದೊರೆಯುವದಿಲ್ಲ. ಇಂಗ್ಲಂಡ, ಅಮೇರಿಕಾ, ಜರ್ಮನಿ [illegible] ಗಳಲ್ಲಿ ವ್ಯಾಪಾರ ಉದ್ದಿಮೆ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಸಾವಿರಾರು. ಅಮೇರಿಕೆಯೊಳಗೆ ೮೦ [illegible] ವಿದ್ಯಾಪೀಠಗಳಲ್ಲಿ ೨೨ ಸಾವಿರ ವಿದ್ಯಾರ್ಥಿಗಳು [illegible] ಕಲಿಯುತ್ತಾರೆ. ಜರ್ಮನಿಯೊಳಗೆ ೬೦ ಸಾವಿರ ವಿದ್ಯಾರ್ಥಿಗಳಲ್ಲಿ ೧೦ ಸಾವಿರ ವಿದ್ಯಾರ್ಥಿಗಳು [illegible] ಹಿಂದುಸ್ಥಾನದೊಳಗೆ ೯೧ ಸಾವಿರ ವಿದ್ಯಾರ್ಥಿಗಳಲ್ಲಿ, ಅವರಲ್ಲಿ ಬರೇ ೨॥ ಸಾವಿರ ವಿದ್ಯಾರ್ಥಿಗಳು [illegible] ಹೊಂದುತ್ತಾರೆ. ಕಾರಣ ಜನರೊಳಗೆ ಸ್ವದೇಶಿ ಭಾವನೆಯನ್ನು ಹುಟ್ಟಿಸಿ, ಸ್ವದೇಶಿ ಒಸ್ತುಗಳನ್ನು ಅಭಿಮಾನದಿಂದ ನಾವು ಅವರಿಗೆ ಕೊಳ್ಳ ಹೇಳಬೇಕು; [illegible] ಹೇಳಬೇಕು. [illegible] ಸ್ಥಿತಿಯಲ್ಲಿ ಸುಲಭಸಾಧ್ಯವಾಗಿಲ್ಲ. [illegible] ತೆ [illegible] ಹೋಗಬೇಕು. ತ್ಯಾಗ—[illegible] ನಮ್ಮ ಇಸಂಗ್ರಹದಿಂದ ನಾವು ಸ್ವದೇಶಿ [illegible] ಮೂಲ ಮಂತ್ರವು [illegible] ಬಹಿಷ್ಕಾರವು [illegible] ಹೊಡೆದು ಮಣಿ ಹಾಕುತ್ತಾರೆ. ಅದರಂತೆ, ಪರದೇಶಿ ಬಟ್ಟೆಗಳನ್ನು ನಾವು ಮೊದಲು ಬಹಿಷ್ಕರಿಸಿ ಅದರ ಸ್ಥಾನವನ್ನು ಸ್ವದೇಶಿಗೆ ಕೊಡಬೇಕು. ಮಹಾತ್ಮರು ಬಟ್ಟೆಯ ಬಹಿಷ್ಕಾರವನ್ನು ಸಂಪೂರ್ಣವಾಗಿ ಸಾಧಿಸಲು ಅಪ್ಪಣೆ ಮಾಡಿದ್ದಾರೆ. ಬಟ್ಟೆಯಿಂದ ಬಹಳ ದುಡ್ಡು ಪರದೇಶಗಳಿಗೆ ಹೋಗುತ್ತದೆ. ಪರದೇಶಿ ಬಟ್ಟೆಯ ಪುರಸ್ಕಾರದಿಂದ ೨—೩ ಕೋಟಿ ಜನರು ಕೆಲಸವಿಲ್ಲದಂತಾದರು. ಬಹಿಷ್ಕಾರದಿಂದ ಬಹಳ ಪ್ರಗತಿಯಾಗಿದೆ. ೧೯೨೯ ನೇ ಇಸ್ವಿ, ಆಗಸ್ಟ ತಿಂಗಳಿನಲ್ಲಿ ೨೯೧೯೮ ಗಂಟುಗಳು ಹಿಂದುಸ್ಥಾನದಲ್ಲಿ ಬಂದಿದ್ದವು; ಕಳೆದ ಆಗಸ್ಟ ತಿಂಗಳಿನಲ್ಲಿ ೬೦೦೦ ಗಂಟುಗಳು ಬಂದವು. ೧೯೨೯ ನೇ ಸಪ್ಟಂಬರದಲ್ಲಿ ೨೦೫೦೦ ಗಂಟುಗಳು; ೧೯೩೦ ನೇ ಸಪ್ಟಂಬರದಲ್ಲಿ ೫೦೦೦ ಗಂಟುಗಳು. ೧೯೨೯ ನೇ ಅಕ್ಟೋಬರ ತಿಂಗಳಲ್ಲಿ ೩೦೬೨೯ ಗಂಟುಗಳು ಬಂದಿದ್ದವು, ಅದೇ ಕಳೆದ ಅಕ್ಟೋಬರ ತಿಂಗಳಿನಲ್ಲಿ ೬೭೯೨ ಗಂಟುಗಳು ಬಂದಿವು. ದೀಪಾವಳಿಯ ಹಂಗಾಮಿನಲ್ಲಿ ಬಂದ ಜವಳಿಯು [illegible] ಇದರ ಮೇಲಿಂದ ಬಹಿಷ್ಕಾರಕ್ಕೆ ಬಂದ ಯಶಸ್ಸು ತಿಳಿಯುವಂತಿದೆ.

ಗದಗದಲ್ಲಿ ಪರದೇಶಿ ಬಟ್ಟೆಯ ಪಿಕೆಟಿಂಗ

(ಸ್ವಂತ ಸುದ್ದಿಗಾರರಿಂದ)

ಇಲ್ಲಿಯ "ಉಲ್ಲಾಳ ಅ್ಯಂಡ ಸನ್ಸ"ರವರು ಕೇವಲ ಬಹಿಸ್ಕೃತ ಗಿರಣಿಗಳ ಬಟ್ಟೆಗಳನ್ನೇ ಮಾರುತ್ತಿರುವದರಿಂದ ಅವರ ಅಂಗಡಿಯ ಮುಂದೆ ಪಿಕೆಟಿಂಗ ಜೋರಿನಿಂದ ನಡೆದಿದೆ. ಈ ಮೂಲಕವಾಗಿ ಅಂಗಡಿಯಲ್ಲಿಯ ವ್ಯಾಪಾರವು ತೀರ [illegible] ಹೋಗಿದೆ. ಒಂದು ದುಡ್ಡಿನ ವ್ಯಾಪಾರವೂ ಆಗುತ್ತಿರುವದಿಲ್ಲ. ಅಂಗಡಿಯವರು ಜರ್ಜರಿತರಾಗಿಹೋಗಿದ್ದಾರೆ. ಪರದೇಶಿ ಬಟ್ಟೆಯ ವ್ಯಾಪಾರವನ್ನು ಸಂಪೂರ್ಣವಾಗಿ ನಿಲ್ಲಿಸದಿದ್ದಲ್ಲಿ, [illegible] ಆ ಅಂಗಡಿಯಿಂದ ಬಿಡಿಸಬೇಕೆಂಬದಾಗಿ ಯೋಚನೆ ನಡೆಸಿದೆ. ಅವರು ಈಗ ಒಂದಿಗೆಯ ಅಂಗಡಿಯಲ್ಲಿ ಇರುತ್ತಿದ್ದವರು.

ಇಲ್ಲಿಯ ಒಬ್ಬ ಪೋಲೀಸ ಅಧಿಕಾರಿಗಳು ಬೆಳಗಾವಿಯ "ಪ್ರಜಾಧ್ವನಿ"ಯೆಂಬ ವರ್ತಮಾನಪತ್ರಕ್ಕೆ ವರ್ಗಣಿದಾರರನ್ನು ಕೂಡಿಸುವ ಕೆಲಸವನ್ನು ಒಳ್ಳೇ ಹುರುಪಿನಿಂದ ಸಾಗಿಸಿದ್ದಾರೆ. ಈಗಾಗಲೆ ೮೦ ಜನರು ಚಂದಾದಾರರಾಗಿರುವರಂತೆ! ಸರಕಾರ ಅಧಿಕಾರಿಗಳು, ಈ ವೃತ್ತಪತ್ರದ ಸಲುವಾಗಿ ಇಷ್ಟು ಸಾಹಸ ಮಾಡಬೇಕಾದರೆ, ಅದು ಸರಕಾರ ಪಕ್ಷದಿಂದ ಹೊರಡುವ ಪತ್ರಿಕೆಯಾಗಿದೆಯೆಂದು ಈಗ ತರ್ಕ ಮಾಡಬೇಕಾಗುತ್ತದೆ. ಕೆಲವರು [illegible] ಒಪ್ಪಿಗೆಯನ್ನು ಕೊಟ್ಟಿದ್ದು, [illegible] ಬಿಡುವವರಿದ್ದಾರೆಂದು ತಿಳಿಯುತ್ತದೆ

[illegible] ವಿರುದ್ಧವಾಗಿ ವಾಸುದೇವರಾಯರು ಹೊರಡಿಸಿದ ಆರ್ಡಿನನ್ಸ ಮುಂಬಯಿ ಪ್ರಾಂತದಲ್ಲಿ ಬಳಕೆಯಲ್ಲಿ ಬಂದಿರುವದಾಗಿ ಪ್ರಸಿದ್ಧಪಡಿಸಲ್ಪಟ್ಟಿದೆ

ಗಾಂಧಿ ಟೊಪ್ಪಿಗೆಯ ಮೇಲೆ

ಅಧಿಕಾರಿಗಳು ಸಿಟ್ಟಿಗೆದ್ದರು

ಗಾಸೂರ ಡಿಸ್ಟ್ರಿಕ್ಟ ಜೇಲಿನ ಅಧಿಕಾರಿಗಳು ತಾ|| ೧೯ ನೆಯ ದಿವಸ ಅಲ್ಲಿನ ಎಲ್ಲ ರಾಜಕೀಯ ಕೈದಿಗಳಿಗೂ ಗಾಂಧಿ ಟೊಪ್ಪಿಗೆಯನ್ನು ತೆಗೆದೊಗೆಯಲು ಆಜ್ಞೆ ವಿಧಿಸಿದರು. ಕೈದಿಗಳು ತೆಗೆದೊಗೆಯಲು ಒಪ್ಪಲಿಲ್ಲ. ಅಧಿಕಾರಿಗಳು ಅವರವರ ಕೋಣೆಗಳಿಗೆ ಕೀಲಿ ಹಾಕಿ ಹೊರಟು ಹೋದರು. ಸ್ವಲ್ಪ ಹೊತ್ತಿನ ಮೇಲೆ ಅವರು ಮತ್ತೆ ಪೋಲೀಸರಿಂದ ಕೂಡಿ ಅಲ್ಲಿಗೆ ಬಂದು ಕೈದಿಗಳ ತಲೆಯ ಮೇಲಿನ ಗಾಂಧಿ ಟೊಪ್ಪಿಗೆಗಳನ್ನು ಒತ್ತಾಯದಿಂದ ಕಸಿದುಕೊಂಡರು. ಅವರ ಜುಲುಮೆಯ ವರ್ತನದ ನಿಷೇಧಾರ್ಥವಾಗಿ ಎಲ್ಲ ಕೈದಿಗಳೂ ಒಂದು ಕಂಬಳಿ ಹಾಗು ಒಂದು ಲಂಗೋಟಿಯ ಮೇಲೆಯೆ ಕಾಲಕಳೆಯ ಹತ್ತಿರುವರು.

ಕಾನಪುರದಲ್ಲಿ

ಸೇವಾದಲದ ಝಡತಿ.

ಕಾನಪುರದ ಪೋಲೀಸ ಅಧಿಕಾರಿಗಳು ತಾ|| ೨೬ ನೆಯ ದಿವಸ ಅಲ್ಲಿಯ ಹಿಂದುಸ್ಥಾನಿ ಸೇವಾದಲಕ್ಕೆ ಮುತ್ತಿಗೆಯನ್ನು ಹಾಕಿ ಅದನು ಝಡತಿ ಮಾಡಿದರು. ಮತ್ತು ಪಾವತಿ ಪುಸ್ತಕ, ರಾಷ್ಟ್ರಧ್ವಜ, ಮತ್ತು ಕೆಲವು ಕಾಗದಪತ್ರಗಳನ್ನು ತೆಗೆದುಕೊಂಡು ಹೋದರು. ಕೆಲವು ಹೊತ್ತಿನ ಮೇಲೆ ಅವರು ಮತ್ತೆ ಬಂದು ಶ್ರೀ ಚೌಬೆ ಅಗ್ರವಾಲ ಹಾಗು ದುಬೆಯವರನ್ನು ಸೆರೆಹಿಡಿದುಕೊಂಡು ಹೋದರು.

ವಿಠ್ಠಲಭಾಯಿಯವರನ್ನು

ಬಿಡುಗಡೆ ಮಾಡಬೇಕು

ಶ್ರೀ ವಿಠ್ಠಲಭಾಯಿಯವರ ದೇಹಸ್ಥಿತಿಯು ನೆಟ್ಟಗಿರುವದಿಲ್ಲವಾದ್ದರಿಂದ ಅವರನ್ನು ಕೂಡಲೆ ಜೇಲಿನಿಂದ ಬಿಡುಗಡೆ ಮಾಡಬೇಕೆಂಬುದಾಗಿ ಕಾಯದೆಮಂಡಳದ ಓರ್ವ ಸಭಾಸದರಾದ ರತ್ನಸಭಾಪತಿ ಮುದಲಿಯಾರರು ಮದ್ರಾಸ ಕಾಯದೆಮಂಡಳದಲ್ಲಿ ಸೂಚನೆ ತರತಕ್ಕವರಿದ್ದಾರೆ.

ಸೆಂಟ್ರಲ್ ಜೇಲಿನ ನಿರೀಕ್ಷಕರಾದ ಶ್ರೀ ಪದ್ಮನಾಭ ಅಯ್ಯರರವರು ಪೂದನೂರಿನಲ್ಲಿ ಶಾಸನಸಭಾಸದರಾದ ಶ್ರೀ ಕೃಷ್ಣನ್ ನಾಯರರಿಗೆ ಭೆಟ್ಟಿಯಾಗಿ, ವಿಠ್ಠಲಭಾಯಿಯವರನ್ನು ಬಿಡುಗಡೆಯ ವಿಷಯವಾಗಿ ಪ್ರಯತ್ನ ಮಾಡಲು ಅವರಿಗೆ ಕೇಳಿಕೊಂಡರು.

ಪೋಲೀಸ ಚೌಕಿಯ ಮೇಲೆ

ರಾಷ್ಟ್ರಧ್ವಜ

ಅಜಮೀರದಲ್ಲಿಯ ಸರಕಾರಿ ಕಾಲೇಜ, ಪೋಲೀಸ ಚೌಕಿ, ಟ[illegible] ಟಾವರ್ ಹಾಲ್, ಮತ್ತು ಮ್ಯುನಸಿಪಾಲಿಟಿಯ ಕಟ್ಟಡಗಳ ಮೇಲೆ ತಾ|| ೩೦ ನೆಯ ದಿವಸ ರಾತ್ರಿಗೆ ಕೆಲವರು ರಾಷ್ಟ್ರಧ್ವಜಗಳನ್ನು ಹಚ್ಚಿದ್ದರು. ಅಧಿಕಾರಿಗಳು ಅವುಗಳನ್ನು ಸಂಜೆ ಕಿತ್ತಿ ಒಗೆದರು. ಈ ವ[illegible]ನಾಗಿ ಪಟ್ಟಣದಲ್ಲೆಲ್ಲ ಅಸಂತೋಷವು ಹಬ್ಬಿಕೊಂಡಿದೆ.

ಸೆರೆಮನೆಯಿಂದ

ಮಹಾತ್ಮರಿಗೆ ಖಾದಿಯ ಕಾಣಿಕೆ

ಬಂಗಾಲ ಅಲಿಪುರ ಸೆಂಟ್ರಲ್ ಜೇಲಿನಲ್ಲಿ ತಮ್ಮ ಶಿಕ್ಷೆಯನ್ನು ಅನುಭವಿಸುತ್ತಿರುವ ರಾಜಕೀಯ ಕೈದಿಗಳು ತಾ|| ೨ ನೆಯ ಆಕ್ಟೋಬರ ದಿವಸ ಮಹಾತ್ಮರ ದಿನವನ್ನಾಚರಿಸಿ, ಅಂದು ೧[illegible] ಯಾರ್ಡಿನ ವರೆಗೆ ನೂಲನ್ನು ಸಿದ್ಧಪಡಿಸಿದರು. ಆ ನೂಲನ್ನು ಬಂಕುರಾಕ್ಕೆ ಕಳಿಸಿ, ಅಲ್ಲಿಂದ ೬ ಖಾದಿಯ ತಾಗೆಗಳನ್ನು ನೇಯಿಸಿ, ಅವುಗಳನ್ನು ಮಹಾತ್ಮರಿಗೆ ಕಾಣಿಕೆಯಾಗಿ ಯರವಡಾ ಜೇಲಿಗೆ ಕೊಟ್ಟು ಕಳಿಸಿದರು.

ಭಾರತೀಯರೊಡನೆ ಸಹಕರಿಸಿರಿ

ಹಿಂದುಸ್ಥಾನದ ರಕ್ಷಣೆಯು ಸುರಕ್ಷಿತವಾಗಿ ಬಿಡಿಸಲ್ಪಟ್ಟರೇನೆ ಬ್ರಿಟಿಶ ಸಾಮ್ರಾಜ್ಯವು ಉತ್ಕರ್ಷೆಯನ ಹೊಂದುವದ ಹಾಗು ಜಗತ್ತಿನಲ್ಲಿ ಶಾಂತತೆಯು ನೆಲೆಗೊಳ್ಳುವದು. ಭಾರತೀಯರೊಡನೆ ಒಡಂಬಡಿಕೆ ಮಾಡಿಕೊಂಡರೇನೆ ಬ್ರಿಟಿಶರ ಪ್ರತಿಷ್ಠೆಯು ಉಳಿಯುವದು. ಭಾರತೀಯರೊಡನೆ ಸಹಕರಿಸುತ್ತ ಹೋದಲ್ಲಿ, ಸಾವಿರಾರು ಜನರಿಗೆ ಕೂಲಿ ದೊರೆಯುವದಲ್ಲದೆ, ಎಷ್ಟೋ ಗಿರಣಿ ಹಾಗೆ ಕಾ[illegible]ಗಳಿಗೂ ಗಿರಾಕಿಗಳು ಸಿಗುವವು ಎಂಬ [illegible] ಸ್ಕಾಂಡರ ಕೆ. ವರ್ದಿಯವರು "ಡೇಲಿ ಹೆರಾಲ್ಡ" ದಲ್ಲಿ ಒಂದು ಲೇಖ ಬರೆದಿದ್ದಾರೆ.

ಸಾವುಕಾರನನ್ನು ಕೊಂದರು

ಪೇಶಾವರ ಪ್ರಾಂತದ ಶೇರಸಂಗ ಎಂಬ ಹಳ್ಳಿಯಲ್ಲಿಯ ಒಬ್ಬ ಸಾವುಕಾರನ ಮನೆಗೆ ಕೆಲವು ಜನ ದರೋಡೆಗಾರರು [illegible] ದಿವಸ ರಾತ್ರಿ ದಾಳಿ ಮಾಡಿದರು. ಸಾವುಕಾರನು ಅವರನ್ನು ಎದುರಿಸಿ ಅವರೊಡನೆ ಬಹಳ ಹೊತ್ತಿನ ವರೆಗೆ ಕಾದಾಡಿದನು. ಆದರೂ ವ್ಯರ್ಥವಾಯಿತು. ದರೋಡೆಗಾರರು ಅವನನ್ನು ಕೊಂದು ಒಗೆದರು. ಮತ್ತೊಬ್ಬನಿಗಾದರೂ ಭಯಂಕರ ಗಾಯವಾಗಿದೆ.

ಮಹಮ್ಮದ ಅಲಿಯವರ ಸಾಹಸ!

ಹೃದಯ ವಿಕಾರವು ಕೆಲವು ದಿನಗಳ ಹಿಂದೆ ತಮ್ಮನ್ನು ಬಹಳೇ ಬಳಲಿಸಿದರೂ ತಾವು ಇನ್ನೂ ಜೀವಂತವಿರುವೆವೆಂಬುದಾಗಿಯೂ, ಹಿಂದೂ ಮುಸಲ್ಮಾನರಲ್ಲಿ ಐಕ್ಯವನ್ನು ಪ್ರಸ್ಥಾಪಿಸಲು ಪ್ರಯತ್ನ ಮಾಡುವೆವೆಂಬುದಾಗಿಯೂ ಮೌಲಾನಾ ಮಹಮ್ಮದ ಅಲಿಯವರು ಓರ್ವ ಪ್ರತಿನಿಧಿಗೆ ತಿಳಿಸಿದ್ದಾರೆ.

ಸಿದ್ದಾಪೂರ ಭಾಗದಲ್ಲಿ

ಭಯಂಕರ ದರೋಡೆ.

ಸಿದ್ದಾಪೂರ ತಾಲೂಕದಲ್ಲಿಯ ಹರ್ತೆಬೈಲು ಎಂಬ ಹಳ್ಳಿಯಲ್ಲಿರುವ ಸುಬ್ರಾಯ ಹೆಗಡೆ ಎಂಬುವವರ ಮನೆಗೆ ನಾಲ್ಕಾರು ಜನ ದರೋಡೆಗಾರರು ತಾ|| ೨೨ ನೆಯ ದಿವಸ ರಾತ್ರಿ ದಾಳಿ ಮಾಡಿದರು. ಮನೆಯ ಅಂಗಳದಲ್ಲಿ ಅಡಿಕೆಯನ್ನು ಸುಲಿಯುತ್ತ ಕುಳಿತಿದ್ದ ಹೆಂಗಸನ್ನು ಮತ್ತು ೧೬ ವರ್ಷದ ಹುಡುಗನನ್ನು ಹಿಡಿದು ಅವರ ಕೈಕಾಲುಗಳನ್ನು ಕಟ್ಟಿದರು. ಅಷ್ಟರಲ್ಲಿಯೇ ಸುಬ್ರಾಯ ಹೆಗಡೆಯವರು ಹೊರಗಿನಿಂದ ಮನೆಗೆ ಬಂದರು. ದರೋಡೆಗಾರರು ಅವರನ್ನು ಒಳಿತಾಗಿ ಥಳಿಸಿ "ನಿನ್ನ ಹತ್ತಿರ ೫೦೦೦ ರುಪಾಯಿಗಳಿವೆ ಅವನ್ನು ಕೊಡು, ನಿನಗೆ ಸ್ವರಾಜ್ಯ ಬೇಕೋ ಸರಕಾರ ಬೇಕೋ ಎಂದು ಕೇಳಿದರು. ಒಬ್ಬ ಹುಡುಗನಿಗೆ ಹಣೆಯ ಮೇಲೆ ರಕ್ತ ಬರುವ ವರೆಗೂ ಹೊಡೆದರು. ಒಬ್ಬ ಹೆಂಗಸನ್ನು ಮನೆಯ ಹಿಂದಿನ ಬೆಟ್ಟದಲ್ಲಿ ನೂಗಿಸಿದರು. ಬಳಿಕ ಅನೇಕ ಭಂಗಾರದ ವಸ್ತುಗಳನ್ನು ನ[illegible]ಕೊಂಡು ಹೋದರು.

ಸಿದ್ದಾಪೂರ ತಾಲೂಕದಲ್ಲಿ

ಗೌಡರಿಗೆ ಬಹಿಷ್ಕಾರ.

ಕಾರವಾರ ಜಿಲ್ಹೆಯ ಸಿದ್ದಾಪೂರ ತಾಲೂಕದಲ್ಲಿ ಗೌಡರಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಚಳವಳಿಯು ಒಳ್ಳೇ ಭರದಿಂದ ಸಾಗಿದೆ. ಬಹಿಷ್ಕಾರಕ್ಕೆ ಹೆದರಿ ನಾಲ್ಕು ಜನ ಗೌಡರು ರಾಜೀನಾಮೆ ಕೊಟ್ಟಿದ್ದಾರೆ. ಬಹಿಷ್ಕೃತ ಗೌಡರ ಕಾ[illegible] ಅಡಿಕೆ ಮೊದಲಾದ ಸಾಮಾನುಗಳು ಗಿರಾಕಿಗಳಿಲ್ಲದ್ದಕ್ಕಾಗಿ ಪೇಟೆಯಲ್ಲಿ ಹಾಗೆಯೆ ಬಿದ್ದುಕೊಂಡಿವೆ.

ಸೂರತ ಜಿಲ್ಹೆಯಲ್ಲಿ ಪೋಲೀಸರ ಕಾವಲು

ಸರಕಾರಕ್ಕೆ ಕಪ್ಪವನ್ನು ಕೊಡದ ಮೂಲಕವಾಗಿ ಜಪ್ತವಾದ ಹೊಲಗಳೊಳಗಿನ ಬೆಳೆಯನ್ನು ಕಾಯುವದಕ್ಕೋಸುಗ ಸೂರತ ಜಿಲ್ಲೆಯ ಎಷ್ಟೋ ಹಳ್ಳಿಗಳಿಗೆ ಅಧಿಕಾರಿಗಳ ಹೆಚ್ಚಿಗೆ ಪೋಲೀಸರನ್ನು ಕೊಟ್ಟು ಕಳಿಸಿದ್ದಾರೆ. ಪೋಲೀಸರ ಕೊರತೆ ಬಿದ್ದಿದ್ದರಿಂದ ಕೆಲವು ಹಳ್ಳಿಗಳಲ್ಲಿ ಅಸ್ಪೃಶ್ಯ ಜನರೇ ಈ ಕೆಲಸಕ್ಕೆ ನಿಯಮಿಸಲ್ಪಟ್ಟಿದ್ದಾರೆ. ಹಾಗೆ ಗಳಲ್ಲಿ ಪೋಲೀಸರನ್ನು ಕಾವಲಿಡಲು ಅಲ್ಲಲ್ಲಿಯ ಗ್ರಾಮಸ್ಥರಿಗೆ ಅಧಿಕಾರವು ಕೊಡಲ್ಪಟ್ಟಿದೆ

ಉಪ್ಪಿನ ಅಧಿಕಾರಿಗಳಿಗೆ ಹೆಚ್ಚಿನ ಸಂಬಳ

ಉಪ್ಪಿನ ಕಾಯದೆ ಭಂಗದ ಸಮಯದಲ್ಲಿ ಸರಕಾರಕ್ಕೆ ಬಹಳ ಸಹಾಯ ಮಾಡಿದ್ದಕ್ಕಾಗಿ ಮುದ್ರಾಸ ಇಲಾಖೆಯಲ್ಲಿಯ ಉಪ್ಪಿನ ಖಾತೆಯ ಕೆಲವು ಅಧಿಕಾರಿಗಳಿಗೆ ಹೆಚ್ಚಿಗೆ ಸಂಬಳವನ್ನು ಕೊಡಲು, ಹಿಂದುಸ್ಥಾನ ಸರಕಾರದವರು ಕೆಲವೊಂದು ಹಣವನ್ನು ಮಂಜೂರ ಮಾಡಿರುವದಾಗಿ ತಿಳಿಯುತ್ತದೆ.

ಮುಂಬಯಿಯಲ್ಲಿ ೮ ಜನರನ್ನು ಹಿಡಿದರು

ಸ್ವಾತಂತ್ರ್ಯ ದಿನದ ಹಸ್ತ ಪತ್ರಿಕೆಗಳನ್ನು ಹಂಚಿದ ಆರೋಪದ ಸಲುವಾಗಿ ಮುಂಬಯಿಯಲ್ಲಿ ತಾ|| ೩೧ನೆಯ ದಿವಸ ೮ ಜನ ಸ್ವಯಂ ಸೇವಕರು ಕೈದು ಮಾಡಲ್ಪಟ್ಟಿದ್ದಾರೆ ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ಇವರ ಮೇಲೆ ಆರೋಪವು ಹೊರಿಸಲ್ಪಡುವದಾಗಿ ತಿಳಿಯುತ್ತದೆ.

ರಾಮದಾಸ ಗಾಂಧಿಯವರ ವಿಚಾರಣೆ

ಉಪ್ಪಿನ ಕಾಯದೇಭಂಗದ ಬಗ್ಗೆ ಕೆಡಿಯಲ್ಲಿ ಸೆರೆಹಿಡಿಯಲ್ಪಟ್ಟ ರಾಮದಾಸ ಗಾಂಧಿಯವರ ಖಟ್ಲೆಯ ವಿಚಾರಣೆಯು ತಾ|| ೨೯ನೆಯ ದಿವಸ ಮಿ. ಜಿವೆಲ್ಲರವರ ಕೋರ್ಟಿನಲ್ಲಿ ಪ್ರಾರಂಭವಾಯಿತು. ಕೆಲವರ ಸಾಕ್ಷಿಗಳಾದವು ಶ್ರೀ ರಾಮದಾಸರು ವಿಚಾರಣೆಯಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಲಿಲ್ಲ. ಖಟ್ಲೆಯು ೩ನೆಯ ತಾರೀಖಿನವರೆಗೆ ಮುಂದುವರಿಸಲ್ಪಟ್ಟಿತು.

ಡಾ. ಜ್ಯೋತಿರಾಮರಿಗೆ ಬಿಡುಗಡೆ

ಕಾಯದೇಭಂಗದ ಸಲುವಾಗಿ ಶಿಕ್ಷೆಗೆ ಗುರಿಯಾಗಿ ಕರಾಚಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಡಾ. ಜ್ಯೋತಿರಾಮರು ದೇಹದಲ್ಲಿಯ ಅಸ್ವಸ್ಥತೆಯ ಮೂಲಕವಾಗಿ ಈಗ ಅಲ್ಲಿಯ ಸಿವಿಲ ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಿರುವರು. ಅವರ ಪ್ರಕೃತಿಯ ಸ್ಥಿತಿ ಚಿಂತ್ಯವಿದೆ. ಸರಕಾರದವರು ಅವರನ್ನು ಬಿಡುಗಡೆ ಮಾಡುವದಾಗಿ ಗೊತ್ತು ಮಾಡಿದೆ.

ವಾನರ ಸೇನೆಯ ಪರಿಷತ್ತು

ಗುಜರಾಥ ಪ್ರಾಂತದ ವಾನರ ಸೇನೆಯ ಪರಿಷತ್ತು ತಾ|| ೨೭ನೆಯ ದಿವಸ ಸೂರತದಲ್ಲಿ ಶ್ರೀಮತಿ ಹಂಸಮೆಹತಾರವರ ಅಧ್ಯಕ್ಷತೆಯಲ್ಲಿ ಜರುಗಿಂದಿತು. ಶ್ರೀಮತಿ ಹಂಸಮೆಹತಾರವರು ಸ್ವದೇಶಪ್ರೀತಿ, ಶಿಸ್ತು, ನೀತಿ, ಮೊದಲಾದ ಗುಣಗಳನ್ನು ಕಾಯ್ದುಕೊಂಡು, ದೇಶದ ಏಕೀಕರಣಕ್ಕಾಗಿ ಪ್ರಯತ್ನ ಮಾಡಲು ವಿದ್ಯಾರ್ಥಿಗಳಿಗೆ ಉಪದೇಶ ಮಾಡಿದರು.

ಗಂಡನ ಕೂಡ ಹೆಂಡತಿಗೂ ಸೆರೆಮನೆ

ಗುಜರಾಥ ಪ್ರಾಂತದ ಮಾಟವಾಡಿ ಹಳ್ಳಿಯಲ್ಲಿ ಜವಾಹಿರ ದಿನವನ್ನು ಆಚರಿಸಿದ ಬಗ್ಗೆ ಜಲಾಲಪುರದ ಆಶ್ರಮದ ಶ್ರೀ ವಿನಾಯಕರಾವ ಆಪಟೆಯವರಿಗೆ ೬ ತಿಂಗಳ ಕಠಿಣ ಶಿಕ್ಷೆಯಾಯಿತು. ಅವರ ಪತ್ನಿಯವರಾದ ಶಾರದಾಬೇನರು ಅವರ ಖಟ್ಲೆಯನ್ನು ಕೇಳಲು ಕಚೇರಿಗೆ ಹೋಗಿದ್ದರು. ಆಗ ಅಧಿಕಾರಿಗಳು ಅವರನ್ನು ಅಲ್ಲಿಯೇ ೧೪೭ ನೆಯ ಕಲಮಿನನ್ವಯ ಸೆರೆಹಿಡಿದು ಲಾಕಪ್ಪಿಗೆ ಹಾಕಿದರು.

ವಕೀಲರಿಗೆ "ಸಸ್ಪೆಂಡು"

ಉಪ್ಪಿನ ಸತ್ಯಾಗ್ರಹದಲ್ಲಿ ಭಾಗತೆಗೆದುಕೊಂಡ ನಿಮಿತ್ತವಾಗಿ ಬಿಹಾರ ಪ್ರಾಂತದಲ್ಲಿಯ ಬಾಲಾಸೋರದ ಗೋಕುಲನಾಥ ದಾ ವಕೀಲರಿಗೆ ೬ ತಿಂಗಳವರೆಗೆ "ಸಸ್ಪೆಂಡ" ಆಗಿದೆ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಾಚ, ಟಾಯಂಪೀಸು ದುರಸ್ತಿಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ನೋಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವೀ ದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡ ವದಲ್ಲದೆ, ಹೊಸ ವಾಚ, ಟಾಯಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೂನ ಡೀಲರ ಬಾಗಲಕೋಟೆ.

ಎಲ್ಲ ತರದ ಚಳಿಜ್ವರದ ಮೇಲೆ

ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲಾದಿಂ ಓಣಿ, ಬಾಗಲಕೋಟೆ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೩೩ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರಾಟಕ್ಕಿವೆ ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರದರಾವ ಧಾರವಾಡ
ವಕೀಲರು ಬಾಗಲಕೋಟೆ.

ಹಿಟ್ಟಿನ ಗಿರಣಿ ಮಾರತಕ್ಕದ್ದಿದೆ.

ರಸ್ಟನ ಮೇಕಿನ ಇಂಜಿನ ೮|| ಬ್ರೇ. H. P. ಆದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದು ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟ.

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕುಲಕರ್ಣಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆಯು. ಬೆಲೆ. ೦—೦—೩

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT
BI-WEEKLY

ಸಂಪಾದಕರು:— ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶನಿವಾರ ಮಿತಿ ಪುಷ್ಯ ಶುದ್ಧ ೧೪ ಶಕೆ ೧೮೫೨ ತಾ|| ೩—೧—೩೧ [ಸಂಚಿಕೆ ೧೫೫

ಶ್ರೀಮತಿ ನೇಹರೂರವರನ್ನು ಹಿಡಿದರು.

ಪಂಡಿತ ಜವಾಹಿರಲಾಲರ ಪತ್ನಿಯವರಾದ ಶ್ರೀಮತಿ ಕಮಲಾ ನೆಹರೂರವರು, ಕರ ನಿರಾಕರಣೆಯ ಚಳವಳಿಯ ಸಂಬಂಧದಿಂದ ಕ್ರಿಲಾ ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ಅಲಹಾಬಾದದಲ್ಲಿ ತಾ|| ೧ನೇ ದಿವಸ ಸೆರೆಹಿಡಿಯಲ್ಪಟ್ಟಿದ್ದಾರೆ.

ಲಖನೌದಲ್ಲಿ
೩೧ ಜನರಿಗೆ ಕೈದು

ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ನಿಮಿತ್ತವಾಗಿ ಲಖನೌದಲ್ಲಿ ೩೧ ಜನ ಸ್ವಯಂಸೇವಕರನ್ನು ಸೆರೆಹಿಡಿದರು. ಅವರಸ್ಥಳದಲ್ಲಿ ಬೇರೆ ಬೇರೆ ಜನರು ಹಿಂನ್ರು ನಿಂತುಕೊಂಡ, ಪಿಕೆಟಿಂಗ ಕಾರ್ಯವನ್ನು ಪ್ರಾರಂಭಿಸಿದ್ದಾರೆ.

ಮಧ್ಯಪ್ರಾಂತದಲ್ಲಿ
ಭಯಂಕರ ದರೋಡೆ.

೧೦ ಜನ ದರೋಡೆಗಾರರು ಶಸ್ತ್ರಾಸ್ತ್ರ ಸಹಿತವಾಗಿ ಮೋಟಾರದಲ್ಲಿ ಸಾಗಿಹೋಗಿ, ಬಾಲಘಾಟ ಜಿಲ್ಲೆಯಲ್ಲಿಯ ಐರಮಾಘಾಟದ ಪಟೇಲರ ಮನೆಯ ಮೇಲೆ ಹಲ್ಲೆ ಮಾಡಿದರು. ಪಟೇಲ ಹಾಗೂ ನಾಲ್ಕು ಜನರನ್ನು ಗುಂಡು ಹೊಡೆದು ಗಾಯಪಡಿಸಿದರು. ಹಳ್ಳಿಯೊಳಗಿನ ಉಳಿದ ಜನರು ದರೋಡೆಗಾರರಿಗೆ ಬೆದರಿ ಓಡಿ ಹೋದರು. ದರೋಡೆಗಾರರು ಅವರ ಮನೆಯಲ್ಲಿ ಒಂದು ತಾಸಿನ ವರೆಗೆ ಬೊಕ್ಕಸ, ಪೆಟ್ಟಿಗೆಗಳನ್ನು ಮುರಿದು ಆಭರಣ ಮೊದಲಾದವುಗಳನ್ನು ತೆಗೆದುಕೊಂಡು ಹೋದರು.

ಶ್ರೀ ಗೋರಕ ಪ್ರಸಾದರಿಗೆ ಕೈದು

ಚಂಪಾರಣ್ಯ ಸತ್ಯಾಗ್ರಹ ಸಮಯದಲ್ಲಿ ಮಹಾತ್ಮಾ ಗಾಂಧಿಯವರೊಡನೆ ಕೆಲಸ ಮಾಡಿದ ಪಾಟಣಾದ ಪ್ರಸಿದ್ಧ ವಕೀಲರಾದ ಶ್ರೀ. ಗೋರಖ ಪ್ರಸಾದರು ಮೊನ್ನಿನ ದಿವಸ ಕೈದು ಮಾಡಲ್ಪಟ್ಟಿದ್ದಾರೆ.

ರೇಲ್ವೆಯ ಅಪಘಾತ
೮೦ ಜನರು ಮರಣಹೊಂದಿದರು

ಚೀನ ದೇಶದಲ್ಲಿಯ ಕೆಲವು ದಾಳಿಗಾರರು ಪೇಕಿಂಗ ಮುಕಡೆನ್ ರೇಲ್ವೆ ಮಾರ್ಗದಲ್ಲಿಯ ಹಳಿಗಳ ಕಂಬಿಗಳನ್ನು ಕಿತ್ತಿ ಒಗೆದಿದ್ದರಿಂದ, ಆ ಮಾರ್ಗವಾಗಿ ಹೋಗುತ್ತಿರುವ ಹೊಗೆಬಂಡಿಯು ಒಮ್ಮಿಂದೊಮ್ಮೆ ಉರುಳಿಬಿತ್ತು. ೮೦ ಜನರು ಮರಣ ಹೊಂದಿದ್ದು, ೪೦ ಜನರಿಗೆ ಭಯಂಕರ ಗಾಯಗಳಾಗಿವೆ. ಹೊಗೆಬಂಡಿಯು ಉರುಳಿ ಬಿದ್ದ ಕೂಡಲೆ ಆ ದಾಳಿಗಾರರು ಪ್ರವಾಸಿಗಳ ಮೇಲೆ ಹಲ್ಲೆ ಮಾಡಿ ೨೦ ಜನ ಪ್ರವಾಸಿಗಳನ್ನು ಹಿಡಿದುಕೊಂಡು ಹೋದರು.

ಪಂ ಮೋತಿಲಾಲರ ಪ್ರಕೃತಿ

ಪಂಡಿತ ಮೋತಿಲಾಲ ನೆಹರೂರವರ ಪ್ರಕೃತಿಯು ಈಗ ನೆಟ್ಟಗಿರುವದಾಗಿ ತಿಳಿದು ಬರುತ್ತದೆ.

ಬಂಡೀಗಾಲಿಯ ಪರಿಷತ್ತು.

ಮತಾಧಿಕಾರ ಉಪಮಂಡಳದವರು ಸರ್ ವ್ಹಿಲಿಯಮ್ ಜ್ಯುವೆಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿಕೊಂಡು ತಮ್ಮ ಕಾರ್ಯವನ್ನು ಕೊನೆಗಾಣಿಸಿದರು. ಸ್ತ್ರೀಯರಿಗೆ ಮತಾಧಿಕಾರ, ಮಧ್ಯವರ್ತಿ ಕಾಯದೆ ಮಂಡಳದ ಚುನಾವಣೆಯ ಪದ್ಧತಿ, ಶೈಕ್ಷಣಿಕ ಯೋಗ್ಯತೆ ಮೊದಲಾದವುಗಳ ವಿಷಯವಾಗಿ ಅಲ್ಲಿ ಚರ್ಚೆಯಾಯಿತು. ಮಂಡಳದಲ್ಲಿ ನಡೆದ ಸಂಗತಿಗಳ ವಿಷಯವಾಗಿ ವರದಿಯನ್ನು ಒಪ್ಪಿಸುವ ಕಾರ್ಯವು ಅಧ್ಯಕ್ಷರಿಗೆ ಒಪ್ಪಿಸಲ್ಪಟ್ಟಿತು.

ವಾಯವ್ಯ ಸರಹದ್ದ ಉಪಮಂಡಳದವರು ತಾ||. ೩ನೆಯ ದಿವಸ ಮಾತ್ರ ಸೇರಿದ್ದರು. ತಾವು ರಾಜ್ಯಭಾರವನ್ನು ಸಾಗಿಸುತ್ತಿರುವಾಗ ತಮಗೆ ತೋರಿಬಂದ ಸಂಗತಿಗಳನ್ನು ಸರ್ ಡೆನಿಸ್ ಬ್ರೇಯವರು ವಿವರಿಸಿ ಹೇಳಿದರು, ಬಳಿಕ ಅಧ್ಯಕ್ಷರಾದ ಮಿ ಹೆಂಡರಸನ್ನರೇ ನಡೆದ ಸಂಗತಿಗಳ ಬಗ್ಗೆ ಕಚ್ಚಾ ವರದಿಯನ್ನು ಸಿದ್ಧಪಡಿಸಬೇಕಾಗಿ ನಿರ್ಧರಿಸಲ್ಪಟ್ಟಿತು.

ಡಾ. ಹರ್ಡೀಕರರನ್ನು ಹಿಡಿದರು.

ಮುಂಬಯಿಯಿಂದ ಬಂದ ವಾರಂಟಿನಿಂದ ಹುಬ್ಬಳ್ಳಿಯ ಪೋಲೀಸ ಅಧಿಕಾರಿಗಳು ತಾ|| ೩೧ ನೇಯ ದಿವಸ ಸಂಜೆಯಲ್ಲಿ ಡಾ. ಹರ್ಡೀಕರರನ್ನು ಸೆರೆಹಿಡಿದು ಅವರನ್ನು ಮೊನ್ನಿನ ದಿವಸ ಮುಂಬಯಿಗೆ ಒಯ್ದರು ಅವರ ಮೇಲೆ ಕ್ರಿ. ಪ್ರೋ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ್ಯ ಆರೋಪವು ಹೊರಿಸಲ್ಪಟ್ಟಿರುವದು.

ಬೆಳಗಾವಿಯಲ್ಲಿ

೭ ಜನರನ್ನು ಹಿಡಿದರು

ಡಿ. ಮ್ಯಾಜಿಸ್ಟ್ರೇಟರು ಹೊರಡಿಸಿದ ಕಟ್ಟಪ್ಪಣೆಯನ್ನು ಮುರಿದು, ನಗರಸಂಕೀರ್ತನೆ ಹಾಗು ರಾಷ್ಟ್ರಧ್ವಜ ವಂದನೆಯ ಸಮಾರಂಭದಲ್ಲಿ ಭಾಗ ತೆಗೆದುಕೊಂಡ ನಿಮಿತ್ತವಾಗಿ ಬೆಳಗಾವಿಯಲ್ಲಿ ತಾ|| ೩೦ ಹಾಗು ೩೧ ಈ ದಿನಗಳಲ್ಲಿ ಕೂಡಿ ಒಟ್ಟಿಗೆ ೭ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ

ಪೋಲೀಸ ಪಟೇಲರು

ರಾಜೀನಾಮೆ ಕೊಟ್ಟರು

ಬೆಳಗಾವಿ ಜಿಲ್ಲೆಯಲ್ಲಿಯ ಹಿರೇಬಾಗೇವಾಡಿಯ ಪೋಲೀಸ ಪಟೇಲರಾದ ಶ್ರೀ ಶಿವರಾಯನಗೌಡ ವೆಂಕನಗೌಡರವರು ತಮ್ಮ ಸರಕಾರಿ ಉದ್ಯೋಗಕ್ಕೆ ಶರಣು ಹೊಡೆದರು.

ನಂದಗಡದಲ್ಲಿ

೭ ಜನರಿಗೆ ಕೈದು

ಜನಗಣತಿಗೆ ಬಹಿಷ್ಕಾರ ಹಾಕಲು ಜನರಿಗೆ ಬೋಧಿಸಿದ ಸಂಬಂಧವಾಗಿ ನಂದಗಡದಲ್ಲಿ ೭ ಜನ ಸ್ವಯಂಸೇವಕರು ಕೈದು ಮಾಡಲ್ಪಟ್ಟಿದ್ದಾರೆ

ಹುದಲಿಯಲ್ಲಿ ಇಬ್ಬರಿಗೆ ಶಿಕ್ಷೆ.

ಮೂರು ನಾಲ್ಕು ತಿಂಗಳಗಳ ಹಿಂದೆ ಸಿಂದಿ ಗಿಡಗಳನ್ನು ಕಡಿದ ಆರೋಪದ ಸಲುವಾಗಿ ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಇಬ್ಬರಿಗೆ ಕ್ರಮವಾಗಿ ೪ ಹಾಗು ೮ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು.

ಗುಜರಾಥದಲ್ಲಿ

ಕರನಿರಾಕರಣೆಯ ಕಾಯದೆ

ಕರನಿರಾಕರಣೆಯ ಚಳವಳಿಯು ತೀವ್ರವಾಗಿ ವ್ಯಾಪಿಸಲಾರದು ಹೊರಡಿಸಿದ ಆರ್ಡಿನನ್ಸು ಗುಜರಾಥ ಪ್ರಾಂತದ ಅಹಮ್ಮದಾಬಾದ ಕೈರಾ, ಪಂಚಮಹಾಲ, ಭಡೋಚ ಮತ್ತು ಸುರತ ಈ ಜಿಲ್ಲೆಗಳಲ್ಲಿ ಜಾರಿಯಲ್ಲಿ ಬಂದಿರುವದಾಗಿ ಸರಕಾರದವರಿಂದ ಪ್ರಸಿದ್ಧಿಸಲ್ಪಟ್ಟಿದೆ.

ಬೋರಸಾದದಲ್ಲಿ

ಮಾಮಲೇದಾರರಿಗೆ ಪ್ರತ್ಯುತ್ತರ

ಬೋರಸಾದದ ಸೋಮಾಭಾಯಿ ಹಾಗು ನರಸಿಂಹಭಾಯಿಯವರು ತಾ|| ೨೯ನೆಯ ದಿವಸ ತಮ್ಮ ಹೊಲದಲ್ಲಿ ರಾಶಿ ಮಾಡುತ್ತಿದ್ದರು. ಮಾಮಲೇದಾರರು ಇದನ್ನು ತಿಳಿದುಕೊಂಡು ಅಲ್ಲಿಗೆ ಹೋಗಿ ಪಟ್ಟಿಯನ್ನು ಕೊಡಲು ಅವರಿಗೆ ಕೇಳಿಕೊಂಡರು, ಅವರು ಕೊಡುವದಿಲ್ಲವೆಂದು ಉತ್ತರ ಕೊಟ್ಟರು. ೨ ೩ ವರ್ಷಗಳವರೆಗೆ ತುರಂಗಕ್ಕೆ ಅಟ್ಟುವದರಲ್ಲಿ ಬರುವದಾಗಿ ಮಾಮಲೇದಾರರು ಬೆದರಿಸಿದರು. ಕಡಿದು ಚೂರು ಚೂರು ಮಾಡಿದರೂ ಚಿಂತೆಯಿಲ್ಲ. ನಿಮಗೆ ಒಂದು ಕಾಸು ಸಹ ಸಿಗಲಾರದೆಂದು ಶ್ರೀ ನರಸಿಂಗಭಾಯಿಯವರು ಪ್ರತ್ಯುತ್ತರ ಕೊಟ್ಟರು.

ತಂಬಾಕನ್ನು

ಜಪ್ತ ಮಾಡಿದರು

ಬೋರಸಾದದ ಶ್ರೀ ವಲ್ಲಭಭಾಯಿಯವರು ತಾ|| ೨೪ನೆಯ ದಿವಸ ಬಂಡಿಯಲ್ಲಿ ತಂಬಾಕನ್ನು ಹೇರಿಕೊಂಡು ಹೊಲದಿಂದ ತಮ್ಮ ಮನೆಗೆ ತಿರುಗಿ ಬರುತ್ತಿದ್ದರು. ಕೆಲವು ಜನ ಪೋಲೀಸರು ಹಾದಿಯಲ್ಲಿ ಅವರನ್ನು ಅಡ್ಡಗಟ್ಟಿ, ಅವರನ್ನು ಪೋಲೀಸ ಚೌಕಿಗೆ ಕರೆದೊಯ್ದರು, ಆಹಾರ ಮತ್ತು ಹಾಸಿಗೆ ಹೊದಿಕೆಗಳನ್ನು ಕೊಡದೆ ಅವರನ್ನು ರಾತ್ರಿಯಲ್ಲಿ ಅಲ್ಲಿಯೇ ಕೆಡವಿ, ತಂಬಾಕನ್ನು ಜಪ್ತಮಾಡಿ, ಮರುದಿವಸ ಬಿಟ್ಟುಬಿಟ್ಟರು.

ವರ್ಣಾಶ್ರಮ ಪರಿಷತ್ತಿನಲ್ಲಿ

ಅಸ್ಪೃಶ್ಯರ ಸತ್ಯಾಗ್ರಹ

ಬೆಳಗಾವದಲ್ಲಿ ಈಗ ಕೂಡಿದ ವರ್ಣಾಶ್ರಮ ಪರಿಷತ್ತಿನಲ್ಲಿ ತಮಗೆ ಪ್ರತಿಬಂಧ ಮಾಡಿದ ಮೂಲಕವಾಗಿ ಅಲ್ಲಿಯ ಅಸ್ಪೃಶ್ಯ ಜನರು ಪರಿಷತ್ತಿನ ಮುಂದೆ ಸತ್ಯಾಗ್ರಹವನ್ನು ಪ್ರಾರಂಭಿಸಿ ಹೋಗುವವರಿಗೆ ಅಡ್ಡಿ ಮಾಡಹತ್ತಿದರು. ಅಸ್ಪೃಶ್ಯರು ಹೀಗೆ ಗೊಂದಲ ಹಾಕಹತ್ತಿದ್ದನ್ನು ಕಂಡುಕೊಂಡು ಪರಿಷತ್ತಿನ ಅಧಿಕಾರಿಗಳು ಪೋಲೀಸರ ಸಹಾಯವನ್ನು ಕೇಳಿಕೊಂಡಿದ್ದರಿಂದ, ಪೋಲೀಸ ಅಧಿಕಾರಿಗಳು ಆ ಸ್ಥಳಕ್ಕೆ ಬಂದು ೧೦ ಜನರನ್ನು ಸೆರೆಹಿಡಿದುಕೊಂಡು ಹೋದರು.

ಸೈನಿಕರೂ

ತುಡುಗು ಮಾಡಹತ್ತಿದರು

ಸೌಥ ಇಂಡಿಯನ್ ಮೋಟಾರ ಕಂಪನಿಯ ಕಾರಖಾನೆಯೊಳಗಿನ ಮೋಟಾರನ್ನು ಕಳವು ಮಾಡಿಕೊಂಡು ಹೋಗಲು ಪ್ರಯತ್ನಿಸಿದ್ದಕ್ಕಾಗಿ ಮದ್ರಾಸದಲ್ಲಿ ಮೂವರು ಸೈನಿಕರು ಸೆರೆಹಿಡಿಯಲ್ಪಟ್ಟಿದ್ದಾರೆ.

ಲಾಹೋರದಲ್ಲಿ

ಬಾಂಬಿನ ಅತ್ಯಾಚಾರ

ಲಾಹೋರದಲ್ಲಿ ಗವ್ಹರ್ನರರ ಮೇಲೆ ಗುಂಡು ಹಾರಿಸಿದ್ದರ ಸಂಬಂಧವಾಗಿ ಈ ವರೆಗೆ ಕೆಳಗಿನ ೧೭ ಜನರು ಪೇಶಾವರ, ಲಾಹೋರ, ಮರ್ದಾನ ಮೊದಲಾದ ಸ್ಥಳಗಳಲ್ಲಿ ಸೆರೆಹಿಡಿಯಲ್ಪಟ್ಟಿದ್ದಾರೆ

೧ ಹರಿಕಿಶನ ೨ ಗಿರಿಧರಲಾಲ ೩ ರಣವೀರಸಿಂಗ ೪ ಚಮನಲಾಲ ೫ ಅಸನಾಯಿಲಾಹಿ ೬ ದುರ್ಗಾದಾಸ ೭ ಮಹಮ್ಮದಕಫಾಯತುಲ ೮ ಪ್ರೇಮದತ್ತ ೯ ಜಯದಯಾಳ ೧೦ ವೀರೇಂದ್ರ ೧೧ ದಾಸನಧರ್ಮ.

ಅಹಮ್ಮದಾಬಾದದಲ್ಲಿ ಬಾಂಬಿನ ಸ್ಫೋಟ

ಅಹಮ್ಮದಾಬಾದದಲ್ಲಿ ಸ್ವಲ್ಪ ದಿನಗಳಹಿಂದೆ ಬಾಂಬು ಹಾರಿದ್ದರ ಸಂಬಂಧವಾಗಿ ಪೋಲೀಸ ಅಧಿಕಾರಿಗಳು ಶ್ರೀ ಕೇಶವಲಾಲ ಬಾಪಾಲಾಲರ ಮನೆಯನ್ನು ಝಡತಿ ಮಾಡಿ, ಅವರನ್ನು ಸೆರೆ ಹಿಡಿದುಕೊಂಡು ಹೋದರು. ಇವರು ಕೆಲವು ದಿನ ಗುಜರಾಥದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿ ಆಗಿದ್ದರು.

ಪಾರಿಸದಲ್ಲಿ ಕ್ರಾಂತಿಕಾರರಿಗೆ ಶಿಕ್ಷೆ

ಪ್ಯಾರಿಸದಲ್ಲಿಯ ಫ್ಯಾಸಿಸ್ಟ ಅಧಿಕಾರಿಗಳ ರಾಣಿಯ ಮೇಲೆ ಶಸ್ತ್ರಾಸ್ತ್ರ ಸಹಿತವಾಗಿ ಹಲ್ಲೆ ಮಾಡಲು ಪ್ರಯತ್ನಿಸಿದ ಸಂಬಂಧವಾಗಿ ಇಟಲಿಯ ಏಕ್ಯಾರಿಯಾ ಹಾಗು ವಿಟಲ ಇವರಿಗೆ ಕ್ರಮವಾಗಿ ೩ ಹಾಗು ೧|| ವರ್ಷ ಶಿಕ್ಷೆಯು ಪ್ರಾಪ್ತವಾಗಿದೆ.

ಮುಂಬಯಿಯಲ್ಲಿ ಗೋಳೀಬಾರು.

ನೂರಾರು ಜನರಿಗೆ ಭಯಂಕರ ಗಾಯ

ಈ ೯ನೆಯ ದಿವಸ ರಾತ್ರಿಯಲ್ಲಿ ಮುಂಬಯಿಯಲ್ಲಿ ಬೇರೆ ಬೇರೆ ಭಾಗಗಳಲ್ಲಿ "ಕಾಂಗ್ರೆಸ್ ದಿನ"ವು ಯಥೋಚಿತವಾಗಿ ಆಚರಿಸಲ್ಪಟ್ಟಿತು. ಹೋದವರ್ಷ ಲಾಹೋರ ಕಾಂಗ್ರೆಸದಲ್ಲಿ "ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಧ್ಯೇಯವಾಗಿದೆ" ಯೆಂಬುದಾಗಿ ತೀರ್ಮಾನಿಸಲ್ಪಟ್ಟ ಠರಾವಿಗೆ ಬೆಂಬಲವನ್ನು ಕೊಡುವದರಲ್ಲಿ ಬಂದಿತು. ಸರಿರಾತ್ರಿಯಾಗುತ್ತಲೆ ಬೇರೆ ಬೇರೆ ಭಾಗಗಳೊಳಗಿನ ಜನರು ಮೆರವಣಿಗೆಗಳನ್ನು ಹೊರಡಿಸಿಕೊಂಡು, "ಗಾಂಧಿ ರಾಜ್ಯವು ಪ್ರಾರಂಭವಾಯಿತು" ಎಂದು ಕೂಗುತ್ತ ತಮ್ಮ ಬೀದಿಗಳಲ್ಲಿ ಸಂಚರಿಸಿದರು. ಬಳಿಕ ಸಾರ್ವಜನಿಕ ಸಭೆ ಸೇರಿಸಿ ಕಾರ್ಯಕ್ರಮವನ್ನು ಪೂರ್ತಿಗೊಳಿಸಿದರು. ಪೋಲೀಸ ಅಧಿಕಾರಿಗಳು ಕೆಲಕೆಲವು ಸ್ಥಳಗಳಲ್ಲಿ ಈ ಕಾರ್ಯಕ್ರಮಗಳಿಗೆ ಅಡ್ಡಿ ಮಾಡಿದರು. ಚೌಪಾಟಿಯಲ್ಲಿ ಈ ಸಂಬಂಧವಾಗಿ ಜನರು ನೆರೆಯಹತ್ತಿದ ಕೂಡಲೆ ಪೋಲೀಸರು ಹಾಗು ಸೈನಿಕರು ಅವರನ್ನು ದೊಣ್ಣೆಗಳಿಂದ ಚದುರಿಸಿದರು. ಗಿರಗಾವ ಭಾಗದಲ್ಲಿಯೂ ಜನರಿಗೆ ದೊಣ್ಣೆಯ ಏಟುಗಳು ಬಿದ್ದವು.

ಮಾಂಡವಿಭಾಗದ ಜನರು ರಾಷ್ಟ್ರಧ್ವಜ ವಂದನೆಯನ್ನು ಮುಗಿಸಿ, ಮೆರವಣಿಗೆಯನ್ನು ತೆಗೆದುಕೊಂಡು ಹೊರಟರು. ಮೆರವಣಿಗೆಯು ಸ್ಯಾಮ್ಯುಯಲ್ ಸ್ಟ್ರೀಟಕ್ಕೆ ಮುಟ್ಟಿದ ಕೂಡಲೆ ಪೋಲೀಸರು ಅದಕ್ಕೆ ಅಡ್ಡಿ ಮಾಡಿದರು. ಜನರ ಮೇಲೆ ಹಲ್ಲೆ ಮಾಡಿ ರಾಷ್ಟ್ರಧ್ವಜಗಳನ್ನು ಕಿತ್ತಿಕೊಂಡರು. ಲಾಠಿಗಳಿಂದ ಜನರನ್ನು ಚದುರಿಸಿದರು. ಸುಮಾರು ೫೦ ಜನರು ಗಾಯ ಹೊಂದಿದರು.

ಕಾಲಬಾದೇವಿಯಲ್ಲಿಯೂ ಈ ಕಾರ್ಯಕ್ರಮವು ಆಚರಿಸಲ್ಪಟ್ಟಿತು. ಪೋಲೀಸರು ಹಾಗು ಸೈನಿಕರು ಅಲ್ಲಿಗೆ ಬಂದು ಲಾಠಿಗಳಿಂದ ಜನರನ್ನು ಚದುರಿಸಹತ್ತಿದರು. ಅವರು ಸ್ಥಳ ಬಿಟ್ಟು ಕದಲಲಿಲ್ಲ. ಬಳಿಕ ಪೋಲೀಸರು ಅವರ ಮೇಲೆ ಕಲ್ಲು ಒಗೆಯಹತ್ತಿದರು. ಅವರಾದರೂ ತಿರುಗಿ ಪೋಲೀಸರ ಮೇಲೆ ಕಲ್ಲು ಒಗೆದರು. ೨ ಗಂಟೆಯ ವರೆಗೆ ಹೀಗೆಯೆ ನಡೆಯಿತು. ಬಳಿಕ ಸಾರ್ಜಂಟರು ಜನರ ಮೇಲೆ ಸಿಟ್ಟಿಗೆದ್ದು ಗೋಳೀಬಾರ ಮಾಡಿದರು. ಸುಮಾರು ೬೫ ಜನರು ಗಾಯಹೊಂದಿದ್ದು, ಅವರೆಲ್ಲರೂ ಆಸ್ಪತ್ರೆಗೆ ಒಯ್ಯಲ್ಪಟ್ಟಿದ್ದಾರೆ.

ಅಜಮೀರ ಜೇಲಿನಲ್ಲಿ ಸೆರೆಯಾಳುಗಳ ಗೋಳಾಟ!

ಅಜಮೀರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ರಾಜಕೀಯ ಕೈದಿಗಳಿಗೆ ಜೇಲಿನ ಅಧಿಕಾರಿಗಳು ಬಹಳೇ ಪೀಡೆಯನ್ನು ಕೊಡುತ್ತಿರುವರು. ಪ್ರತಿನಿತ್ಯದಲ್ಲಿ ಮುಂಜಾನೆ ಹಾಗು ಸಂಜೆಯಲ್ಲಿ ಸಾಮಾನ್ಯ ಕೈದಿಗಳ ಜೊತೆಯಲ್ಲಿ ಅವರನ್ನೂ ಕವಾಯಿತಿಗೆ ನಿಲ್ಲಿಸುವರು. ಕವಾಯಿತಿಗೆ ನಿಲ್ಲಲು ಒಪ್ಪದವರಿಗೆ ವಾರ್ಡರರು ಒಂದು ದಿನ ಒಟ್ಟಾಗಿ ಪೆಟ್ಟುಗಳನ್ನು ಕೊಟ್ಟರು. ಈ ಜುಲುಮೆಯ ನಿಷೇಧಾರ್ಥವಾಗಿ ಕೆಲವು ಜನರು ಒಂದು ದಿವಸ "ಇನ್‌ಕ್ವಿಲಾಬ ಜಿಂದಾಬಾದ" ಎಂದು ಗಟ್ಟಿಯಾಗಿ ಕೂಗಿದರು. ಅಧಿಕಾರಿಗಳು ಅವರಲ್ಲಿ ಮೂವರನ್ನು ಮೂರು ದಿನಗಳ ವರೆಗೆ ಕತ್ತಲೆಕೋಣೆಯಲ್ಲಿ ಇರಿಸಿದರು. ಈ ಮೂರು ದಿನಗಳಲ್ಲಿ ಅವರಿಗೆ ಖಾದ್ಯ ಮತ್ತು ಪೇಯಗಳನ್ನೂ ಸಹ ಕೊಡಲಿಲ್ಲ. ಮಲಮೂತ್ರ ವಿಸರ್ಜನೆಗಾಗಿ ಅವರನ್ನು ಒಮ್ಮೆಯಾದರೂ ಹೊರಗೆ ಬಿಡಲಿಲ್ಲ. ಅವರ ಕಾಲಿಗೆ ಬೇಡಿ ಹಾಕಿದ್ದರು. ಕೈಗಳನ್ನು ಬೆನ್ನಿನಹಿಂದೆ ಕಟ್ಟಿದ್ದರು. ಅವರ ಬಾಯಿಗೆ ಬೆಂಡುಗಳನ್ನು ತುರುಕಿದ್ದರು.

ಬುಲಡಾಣಾದಲ್ಲಿ ೪ ಲಕ್ಷ ರೂಪಾಯಿಯ ಹಾನಿ

ಸುಮಾರು ೫೦೦ ಜನ ದರೋಡೆಗಾರರು ಸ್ವಲ್ಪ ದಿವಸಗಳ ಹಿಂದೆ ಬುಲಡಾಣಾದಲ್ಲಿ ಶ್ರೀಮಂತ ಕೊಂಡಬಾಯಿ ಮಾರವಾಡಿಯ ಮನೆಯ ಮೇಲೆ ಹಲ್ಲೆ ಮಾಡಿ, ಒಟ್ಟಿಗೆ ೪ ಲಕ್ಷ ರೂಪಾಯಿ ಕಿಮ್ಮತ್ತಿನ ವಸ್ತ ಒಡವೆ ನಗ [illegible] ಗಳನ್ನು ಲೂಟಿ ಮಾಡಿಕೊಂಡು ಹೋದರು

(೪ ನೇ ಪುಟದಿಂದ ಮುಂದೆ ಸಾಗಿದ್ದು)

ಇದರ ಮೇಲಿಂದ ಹೊಗೆಸೊಪ್ಪಿನ ವ್ಯಾಪಾರದ ಕಲ್ಪನೆಯಾಗುವದು. ಇದರಿಂದ ವರ್ಷಕ್ಕೆ ೫ ಕೋಟಿ ರೂಪಾಯಿಗಳು ಕೆನಡಾ ಮುಂತಾದ ದೇಶಗಳಿಗೆ ರವಾನೆಯಾಗುತ್ತವೆ. ಕಾರಣ ಅಂಗಡಿಕಾರರೂ, ಗಿರಾಕಿಗಳೂ ಸಹಕಾರ ಮಾಡಬೇಕು. ಗಿರಾಕಿಗಳು ಮೊಟ್ಟಮೊದಲು ಸ್ವದೇಶಿ ಒಡವೆಗಳನ್ನೇ ಕೇಳಬೇಕು. ಅದು ಸಿಗದಿದ್ದರೆ ಬ್ರಿಟೀಶೇತರ ಪರದೇಶಿ ಒಡವೆಗಳನ್ನು ಕೇಳಬೇಕು. ಸ್ವದೇಶಿ ಮಂಡಳದ ಪ್ರಯತ್ನದಿಂದ ಕರ್ನಾಟಕದಲ್ಲಿ ವರ್ತಕ ಸಂಘಗಳಾಗಿವೆ. ಆ ಸಂಘದವರು ವರ್ತಕರಿಗೆ ಸ್ವದೇಶಿ ಪುರಸ್ಕಾರ ಮಾಡುವಂತೆ ಮನವೊಲಿಸುತ್ತಾರೆ; ಇಲಕಲ್ಲಿನಲ್ಲಿ, ೩೦-೪೦ ಸಾವಿರ ಮಗ್ಗಗಳಿವೆ. ನೇಕಾರರು ಸ್ವದೇಶಿ ನೂಲನ್ನೇ ಉಪಯೋಗಿಸುತ್ತೇವಾಗಿ ಪ್ರತಿಜ್ಞಾಪತ್ರ ಬರೆದುಕೊಟ್ಟಿದ್ದಾರೆ. ಇದೇ ಪ್ರಕಾರ ಸ್ವದೇಶಿ ಮಂಡಳದ ಶಾಖೆಗಳನ್ನು ನೀವು ಸಹ ಸ್ಥಾಪಿಸಿಕೊಂಡು ಆವಶ್ಯವುಳ್ಳ ಚಳವಳಿ ನಡಿಸಬೇಕು. ದೇಶತುಂಬ ಸ್ವದೇಶಿ ಒಡವೆಗಳ ಪ್ರಸಾರ ಮಾಡಿ, ಪರದೇಶಿ ಒಡವೆಗಳನ್ನು ದೇಶದಿಂದ ಹೊರನೂಕಲು ಪರಮಾತ್ಮನು ನಿಮಗೆಲ್ಲರಿಗೆ ಅವಶ್ಯವುಳ್ಳ ಬುದ್ಧಿಯನ್ನೂ, ನಿಷ್ಠೆಯನ್ನೂ ದೃಢನಿಶ್ಚಯವನ್ನೂ ದಯಪಾಲಿಸಲಿ.

ಬಂಡುಗಾರರನ್ನು ಗುಂಡುಹೊಡೆದುಕೊಂದರು

ಪಂಜಾಬಿ ಸೈನಿಕರ ಒಂದು ಗುಂಪು ಬರ್ಮಾ ಪ್ರಾಂತದಲ್ಲಿ ಸಿಕಕ್ಕಿನದ ಬಳಿಯಲ್ಲಿ ಬಂಡುಗಾರರನ್ನು ಎದುರಿಸಿ ಅವರಲ್ಲಿ ಮೂರು ಜನರನ್ನು ಗುಂಡು ಹೊಡೆದು ಕೊಂದರು. ಪೋಲೀಸ ಅಧಿಕಾರಿಗಳು ಎಷ್ಟೋ ಜನರನ್ನು ಸೆರೆಹಿಡಿದು ಅವರಿಂದ ಉಳಿದ ಬಂಡುಗಾರರ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಂಡರು.

ಮುಸಲ್ಮಾನರ ನಿರ್ಧಾರ

ಬಾರ್ಡೋಲಿ ತಾಲೂಕದಲ್ಲಿಯ ವಾಲೋಡ ಹಳ್ಳಿಯಲ್ಲಿಯ ಮುಸಲ್ಮಾನರು ತಮ್ಮದೊಂದು ಸಭೆಯನ್ನು ಕೂಡಿಸಿಕೊಂಡು ಜಪ್ತವಾದ ಭೂಮಿಗಳನ್ನು ಯಾರೂ ಕೊಂಡುಕೊಳ್ಳತಕ್ಕದ್ದಲ್ಲವೆಂದು ಮತ್ತು ಅದರ ವಿರುದ್ಧವಾಗಿ ವರ್ತಿಸುವವರನ್ನು ಜಾತಿಯಿಂದ ಹೊರಗಿಡಬೇಕೆಂದು ಠರಾವುಗಳನ್ನು ಮಾಡಿಕೊಂಡಿರುವರು.

ಖಾದಿಯನ್ನೇ ಕೊಂಡುಕೊಳ್ಳತಕ್ಕದ್ದು

ಇನ್ನೊಂದು ವಿಷಯವನ್ನು ನಾನು ಒತ್ತಿ ಹೇಳಬೇಕಾಗಿದೆ. ಸ್ವದೇಶಿಯೆಂದರೆ, ಗಿರಣಿ ಅರಿವೆಯೆಂದು ಜನರು ತಿಳಕೊಂಡು ಖಾದಿಯ ಕಡೆ ಅಲಕ್ಷ ಮಾಡುತ್ತಾರೆ, ಇದು ತರವಲ್ಲ. ಖಾದಿ ಸಿಗದಾಗ ಗಿರಣಿ ಅರಿವೆ ಉಪಯೋಗಿಸಬಹುದು; ಆದರೆ, ಆ ಪ್ರಸಂಗ ಈಗಿಲ್ಲ. ಕಳೆದ ಎಪ್ರೀಲ್-ಮೇ ತಿಂಗಳಲ್ಲಿ ಖಾದಿಯ ಪ್ರಸಾರವು ಶಿಖರಕ್ಕೆ ತಲ್ಪಿತು. ಅಖಿಲ ಭಾರತೀಯ ಚರಖಾ ಸಂಘದ ಖಾದಿ ಅಂಗಡಿಗಳಲ್ಲಿ ತುಣುಕು ಖಾದಿ ಸಿಕ್ಕಿರಲಿಲ್ಲ. ಕೆಲವಡೆ ೮—೧೦ ದಿನಗಳ ತನಕ ಅಂಗಡಿಗಳನ್ನು ಮುಚ್ಚಬೇಕಾಯಿತು. ಈಗ ಖಾದಿ ಹುಟ್ಟುವಳಿ ಹೆಚ್ಚಾಗಿದೆ, ಗಿರಾಕಿ ಕಡಿಮೆಯಾಗಿದೆ; ಗಿರಣಿಗಳು ನಮ್ಮವು ಎಂಬ ಮಾತು ನನಗೊಪ್ಪಿಗೆ, ಆದಾಗ್ಯೂ ನಾವು ಖಾದಿಯನ್ನೇ ಕೊಂಡುಕೊಳ್ಳತಕ್ಕದ್ದು. ಖಾದಿಯಿಂದ ಹಳ್ಳಿಗಳಲ್ಲಿ ಸಂಘಟನೆ ಅನುಕೂಲವಾಗುತ್ತದೆ. ಕಾರಣ ಖಾದಿಯ ಶ್ರೇಷ್ಠ ಸ್ಥಾನವನ್ನು ನಾವು ಎಳ್ಳಷ್ಟೂ ಕಡಿಮೆ ಮಾಡಕೂಡದು. ಖಾದಿ ತುಟ್ಟಿಯಾದಾಗ್ಯೂ ನಾವದನ್ನು ಕೊಂಡುಕೊಳ್ಳಬೇಕು, ಒರಟಾದಾಗ್ಯೂ, ನಾವದನ್ನು ತೊಟ್ಟುಕೊಳ್ಳಬೇಕು. ಖಾದಿಯನ್ನು ಕೊಂಡು-ಕೊಳ್ಳಲಿಕ್ಕಾಗದಿದ್ದರೆ ಮಾತ್ರ ಗಿರಣಿ ಅರಿವೆ ಉಪಯೋಗಿಸಬಹುದು. ಅಖಿಲ ಭಾರತೀಯ ಚರಖಾ ಸಂಘದ ಕಾರ್ಯದರ್ಶಿಗಳಾದ ಶ್ರೀ| ಶಂಕರಲಾಲ ಬ್ಯಾಂಕರರವರೂ ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಖಾದಿಗೆ ನಾವು ಯಾವಾಗಲೂ ಮೊದಲನೇ ಸ್ಥಾನವನ್ನೇ ಕೊಡಬೇಕು, ಅಗ್ರಪೂಜೆಯ ಮಾನ ಅದಕ್ಕೇ ಸಲ್ಲಬೇಕು.

ಸಕ್ಕರೆಯನ್ನು ಒಂದು ವರ್ಷದ ವರೆಗೆ ಸಂಪೂರ್ಣ ಬಿಡಬೇಕು. ವಿಲಾಯತಿ ಸಕ್ಕರೆ, ಬೇಲಾಪುರ ಸಕ್ಕರೆ ಹೀಗೆ ದೇಶಿ ಸಕ್ಕರೆಗಳು ದೊರೆಯುತ್ತವೆ. ಅವರೆ ಸಂದೇಹಕ್ಕೆ ಕಾರಣವಾಗುವದರಿಂದ ಸಕ್ಕರೆಯನ್ನು ಬಿಟ್ಟುಬಿಡುವದೇ ಲೇಸು. ಇದರಿಂದ ಜೀವನವು ಸುಲಭವಾಗುವದು. ಜಿಲೇಬಿ, ಬಾಸುಂದಿ ಮೊದಲಾದ ಪದಾರ್ಥಗಳನ್ನು ತ್ಯಜಿಸಿ, ನಮ್ಮ ವಿಲಾಸಕ್ಕೆ ಕೆಲ ಮಟ್ಟಿಗೆ ಕಡಿಬಿದ್ದಂತಾಗುವದು. ಈ ಸಮಯ ಗುರು-ಶಿಷ್ಯರ ಕಥೆಯೊಂದು ನೆನಪಾಗುತ್ತದೆ. ನನಗೆ ಪ್ರಾಣಾಯಾಮ ಸಾಧ್ಯವಿಲ್ಲ, ಹಟಯೋಗ ಮಾಡಲಾರೆ; ಆದರೆ ಮೋಕ್ಷ ಬೇಕು! ಎಂಬುದಾಗಿ ಶಿಷ್ಯನೊಬ್ಬನು ಗುರುಗಳ ಕಡೆ ಹೋದನು. 'ನದಿಗೆ ಹೋಗಿ ಸ್ನಾನ ಮಾಡಿ ಬಾ,' ಎಂದು ಗುರುಗಳು ಶಿಷ್ಯನಿಗೆ ಆಜ್ಞೆ ಮಾಡಿದರು. ಜಳಕ ಮಾಡಿ ಬಂದ ಬಳಿಕ, ಕಿವಿಯಲ್ಲಿ "ಉಪ್ಪು ಬಿಡು" ಎಂಬುದಾಗಿ ಮಂತ್ರೋಪದೇಶ ಮಾಡಿದರು. ಉಪ್ಪು ಬಿಟ್ಟದ್ದರಿಂದ, ಉಪ್ಪು ಬೇಕಾಗುವ ರಾಜಸ-ತಾಮಸ ಪದಾರ್ಥಗಳನ್ನೆಲ್ಲ ಆತನು ತ್ಯಜಿಸಿ ಸಾತ್ವಿಕ ಆಹಾರವನ್ನು ಸೇವಿಸಬೇಕಾಯಿತು. ಇದರಿಂದ ಆತನ ಜೀವನ ಸಾತ್ವಿಕವಾಗಿ ಆತನು ಮೋಕ್ಷ ಹೊಂದಿದನು. ಹಾಗೆಯೇ ನಾವು ಬೆಲ್ಲದ ವ್ರತವನ್ನು ಕೈಕೊಂಡು ವಿಲಾಸ ಸಾಮಗ್ರಿಗಳನ್ನು ತ್ಯಜಿಸಬೇಕು. ನಿಮಗೆ ಕೆಲವು ಅಂಕಿಗಳನ್ನು ಹೇಳುತ್ತೇನೆ. ಜಾವಾದಿಂದ ೧ ಕೋಟಿ ೫೮ ಲಕ್ಷ, ಆಟಗಿಯ ಸಾಮಾನಿನಿಂದ ೬೫ ಲಕ್ಷ, ಇಜಿಪ್ಟಿನಿಂದ ೧೩ ಲಕ್ಷ; ಕೈ ಬಳೆಗಳಿಂದ ೮೫ ಲಕ್ಷ, ಹೀಗೆ ಪರದೇಶಕ್ಕೆ ಹೋಗುತ್ತದೆ. ಇವು ಜರ್ಮನಿ, ಇಟಲಿ, ಝೆಕೊಸ್ಲೋವಾಕಿಯಾ ದೇಶಗಳಿಂದ ಬರುತ್ತವೆ. ಬಳೆ ನಮ್ಮ ಹೆಂಗಸರ ಸೌಭಾಗ್ಯ. ಅವು ಪರದೇಶಗಳಿಂದ ಬರಬೇಕಾದದ್ದು ಇಷ್ಟವಿಲ್ಲ. ಸ್ತ್ರೀಯರು ನಿರ್ಧಾರ ಮಾಡಬೇಕು, ಪರದೇಶ ಬಳೆಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಲು ನಮ್ಮ ಕರ್ನಾಟಕಕ್ಕೆ ಅನುಕೂಲತೆಯುಂಟು, ಕರ್ನಾಟಕದಲ್ಲಿಯೇ ಬಳೆಗಳ ಕಾರಖಾನೆಗಳುಂಟು. ಈಗಿನ ಬಳೆಗಳು ಅಷ್ಟು ನುಣುಪಿಲ್ಲದಿರಬಹುದು. ಆಕಾರದಲ್ಲಿ ಸ್ವಲ್ಪ ಹೆಚ್ಚು—ಕಡಿಮೆಯಿರಬಹುದು; ಆದಾಗ್ಯೂ ಸ್ತ್ರೀಯರು ಅವನ್ನು ೪-೬ ವರ್ಷ ಉಪಯೋಗಿಸಿದರೆ, ಅವುಗಳಲ್ಲಿ ಅಗತ್ಯ ಸುಧಾರಣೆಯಾಗುವದು. ಮೊದಮೊದಲು, ಖಾದಿಗೆ ಕೂಡ ಸ್ತ್ರೀಯರು ಹೀಯಾಳಿಸುತ್ತಿದ್ದರು. ಈಗ ಅದರೊಳಗೆ ಬಹಳ ಸುಧಾರಣೆಯಾಗಿಲ್ಲವೇ? ಅಡಿಕೆ ಇಲ್ಲಿ ಬಹಳ ಬೆಳೆಯುತ್ತದೆ, ಆದಾಗ್ಯೂ ಮಲಯಾ ಸ್ಟ್ರೇಟ್ಸ್ ಸೆಟಲ್ಮೆಂಟ್ಸ್ ಕಡೆಯಿಂದ ೨¼ ಕೋಟಿ ರೂಪಾಯಿಗಳ ಅಡಿಕೆ ಆಮದಾಗುತ್ತದೆ. ಪರದೇಶಗಳ ಕಡೆಯಿಂದ ಆಮದಾಗುವ ಅಡಿಕೆ ಹೆಚ್ಚು, ನಮ್ಮ ಕಡೆ ಹುಟ್ಟುವದು ಕಡಿಮೆ. ವರ್ಷಕ್ಕೆ ೧ ಕೋಟಿ ೩೮ ಲಕ್ಷ ರೂಪಾಯಿಗಳ ಸಿಗರೇಟು ಬರುತ್ತದೆ. ಬೆಳಗಾವಿ, ಧಾರವಾಡ, ವಿಜಾಪುರ ಈ ಮೂರು ಜಿಲ್ಲೆಗಳಲ್ಲಿ ೧ ತಿಂಗಳಿಗೆ ೨೪ ಸಾವಿರ ರೂಪಾಯಿಗಳ ಸಿಗರೇಟು ಬೇಕು. ಇದಲ್ಲದೆ ದೇಶೀ ಸಿಗರೇಟುಗಳವೂ ಬೀಡಿಗಳವೆ

(೩ ನೇ ಪುಟ ೨ ನೇ ಕಾಲಂ ನೋಡಿರಿ)

ಹಿಟ್ಟಿನ ಗಿರಣಿ ಮಾರತಕ್ಕದ್ದಿದೆ.

ರಸ್ಟನ ಮೋಟರ್ ಇಂಜಿನ್ ೮॥ B. H P. ಆದರ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದಿದೆ. ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟೆ.

ವಾಚ, ಟಾಯಂಪೀಸು ದುರಸ್ತಿಮಾಡಿಸುವವರಿಗೆ ಸುಸಂಧಿ



ನಮ್ಮಲ್ಲಿ ಎಲ್ಲ ನಮೂನೆ ಹಾರ್ಮೋನಿಗಳ ವಾಚು ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವಿಯದಿಂದ ಬೇಕಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಂಪೀಸ ಗ್ರಾಮೋಫೋನುಗಳನ್ನು ಮಾರಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿಕೊಳ್ಳಿರಿ

ವಿಳಾಸ:- ಆರ್. ಡಿ, ಸಿ. ಘೆ
ವಾಚ ರಿಪೇರರ ಮತ್ತು ಗ್ರಾಮೋಫೋನ
ಡೀಲರ ಬಾಗಲಕೋಟ.

ಎಲ್ಲ ತರದ ಚಳಿಜ್ವರದ ಮೇಲೆ ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲಾ ತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೮-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲೆಯ ಓಣಿ, ಬಾಗಲಕೋಟೆ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರದರಾವ ಧಾರವಾಡ
ವಕೀಲರು ಬಾಗಲಕೋಟ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು [illegible] ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆಯು. ಬೆಲೆ. ೦-೦-೩.

सर्वं परवशं दुःखं । सर्वमात्मवशं सुखम् ॥ -मनु

ಕನ್ನಡಿಗ

KANNADIGA
BAGALKOT.

BI-WEEKLY
ಅರೆವಾರ ಪತ್ರಿಕೆ.

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಸೋಮವಾರ ಮಿತಿ ಪುಷ್ಯ ಬಹುಳ ೧ ಶಕೆ ೧೮೫೨ ತಾ॥ ೫-೧-೩೧ [ಸಂಚಿಕೆ ೧೫೭

ಶ್ರೀಮತಿ ಕಮಲಾ ನೆಹರುರವರಿಗೆ ೬ ತಿ. ಶಿಕ್ಷೆ

ಕರನಿರಾಕರಣೆಯ ಚಳವಳಿಯ ಸಂಬಂಧವಾಗಿ ಭಾಷಣ ಮಾಡಿದ ಬಗ್ಗೆ ಕ್ರಿ. ಲಾ. ಅಮೆಂಡಮೆಂಟ ಕಾಯದ ಹಾಗು ಕರನಿರಾಕರಣೆಯ ಆರ್ಡಿನನ್ಸಗಳನ್ವಯ ಸೆರೆಹಿಡಿಯಲ್ಪಟ್ಟ, ಪಂಡಿತ ಜವಾಹಿರಲಾಲರ ಪತ್ನಿಯವರಾದ ಶ್ರೀಮತಿ ಕಮಲಾ ನೆಹರೂರವರಿಗೆ ತಾ|| ೩ ನೆಯ ದಿವಸ ಪ್ರತಿಯೊಂದು ಅಪರಾಧಕ್ಕು ಪ್ರತ್ಯೇಕವಾಗಿ ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದ್ದು, ಎರಡೂ ಶಿಕ್ಷೆಗಳನ್ನು ಏಕಕಾಲಕ್ಕೆ ಅನುಭೋಗಿಸಬೇಕಾಗಿ ಹೇಳುವದರಲ್ಲಿ ಬಂದಿದೆ.

ಗೌಡರು ರಾಜೀನಾಮೆ ಕೊಟ್ಟರು

ಕುಮಟಾ ತಾಲೂಕ [illegible] ರಕಿನ ಬೈಲದ ಗೌಡರಾದ ಇಬ್ರಾಹಿಮ್ ಮಹಮ್ಮದ ಸಾಹೇಬರು ತಮ್ಮ ಗೌಡಿಕಿಗೆ ಶರಣು ಹೊಡೆದಿದ್ದಾರೆ ಮೊದಲಿನ ಗೌಡನು ರಾಜೀನಾಮೆ ಕೊಟ್ಟ ಮೂಲಕವಾಗಿ ತೆರವು ಬಿದ್ದ ಸ್ಥಳಕ್ಕೆ ಇವರು ಗೌಡರಾಗಿ ನಿಯಮಿಸಲ್ಪಟ್ಟಿದ್ದರು ಜನರು ಇವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿದ್ದರು. ಬಹಿಷ್ಕಾರದ ಪರಿಣಾಮ ಒಳಿತಾಗಿ ಪರಿಣಮಿಸಿ ಇವರಾದರೂ ರಾಜೀನಾಮೆ ಕೊಟ್ಟರು.

ಮಹಾತ್ಮಾ ಗಾಂಧಿಯವರು ಯರವಡೆಯ ಅರಮನೆಯಲ್ಲಿ ಕುಳಿತು

ಇಂದಿಗೆ ಎಂಟು ತಿಂಗಳುಗಳು ಸಂದವು.

ಮಿ. ಬೆನ್ನ ಸಾಹೇಬರು ಹಿಂದುಸ್ಥಾನಕ್ಕೆ ಬರುವರಂತೆ!

ಬಂಡೀ ಗಾಲಿಯ ಪರಿಷತ್ತಿನಲ್ಲಿ ಒಪ್ಪಂದ ಉಂಟಾದಲ್ಲಿ, ಅಲ್ಲಿ ಒಪ್ಪಿತವಾದ ರಾಜ್ಯಪದ್ಧತಿಯ ಕಚ್ಚಾ ವರದಿಗೆ ಕೆಲವು ಜನ ಕಾಂಗ್ರೆಸ್ ಮುಂದಾಳುಗಳ ಬೆಂಬಲ ದೊರಕಿಸಲು ಪ್ರಯತ್ನ ಮಾಡುವದಕ್ಕಾಗಿ, ಭಾರತಮಂತ್ರಿ ಮಿ. ವೆಜವುಡ್ ಬೆನ್ನರು ಒಂದು ಬ್ರಿಟಿಶ ಶಿಷ್ಟ ಮಂಡಳವನ್ನು ತೆಗೆದುಕೊಂಡು ಹಿಂದುಸ್ಥಾನಕ್ಕೆ ಬರುವವರಿದ್ದಾರಾಗಿ ತಿಳಿಯುತ್ತದೆ.

ಕಾಲಗಡೆಯಲ್ಲಿ ಕಾಯದೆಭಂಗ ೬೦೦ ಜನರು ಕಟ್ಟಿಗೆ ಒಯ್ದರು

ಕಾರವಾರ ಜಿಲ್ಹೆಯ ಕಾಲಗಡೆ ಹಳ್ಳಿಯ ಕೆಲವು ಹೆಂಗಸರು ಹೋದ ವಾರದಲ್ಲಿ ಸಮೀಪದ ಗುಡ್ಡಕ್ಕೆ ಕಟ್ಟಿಗೆ ತರಲು ಹೋಗಿದ್ದರು. ಆಗ ಅಡವಿ ಅಧಿಕಾರಿಗಳು ಅವರಿಗೆ ಅಡ್ಡಿಮಾಡಿ ಅವರನ್ನು ಅಲ್ಲಿಯೇ ಕೂಡ್ರಿಸಿಕೊಂಡರು. ಅಲ್ಲಿ ಇದ್ದ ಸ್ವಯಂಸೇವಕರಿಗೆ ಈ ಸುದ್ದಿಯು ತಿಳಿದು ಬಂದಿತು. ಅವರು "ಬ್ಯೂಗಲ" ಊದಿ ಜನರಿಗೆ ಸಂಜ್ಞೆ ಮಾಡಿದರು. ಕೂಡಲೇ ೬೦೦ ಜನರು ಅರಣ್ಯಕ್ಕೆ ಬಂದು ಗಿಡಗಳನ್ನು ಕಡಿಯಲಾರಂಭಿಸಿದರು. ಅಡವಿ ಕಾವಲುಗಾರರು ಮತ್ತು ಪೋಲೀಸರು ಬೆದರಿ ಹೊರಟು ಹೋದರು. ಜನರು ಕಟ್ಟಿಗೆಗಳನ್ನು ತೆಗೆದುಕೊಂಡು ತಿರುಗಿ ಊರೊಳಗೆ ಬಂದರು.

ಎಮ್ಮೆಯ ಹೊಟ್ಟೆಯಲ್ಲಿ ಆನೆಯ ಮರಿ ಹುಟ್ಟಿತು

“ಶಿವಮೊಗ್ಗ ಜಿಲ್ಲೆಯಲ್ಲಿಯ ಹೊಳೆ ಆಲೆ ಗ್ರಾಮದ ಗೌಡರಾದ ಹನುಮಂತಪ್ಪನವರ ಮನೆಯಲ್ಲಿ ಎಮ್ಮೆಯ ಹೊಟ್ಟೆಯಿಂದ ಒಂದು ಆನೆಯ ಮರಿ ಹುಟ್ಟಿತು. ಆ ಮರಿಗೆ ಸೊಂಡಿಲು, ಕಿವಿಗಳು, ಕುಂಭಸ್ಥಲ, ಬಾಲ ಇವುಗಳು ಆನೆಯಂತೆಯೇ ಇದ್ದವು. ಕಾಲುಗಳು ಮಾತ್ರ ಎಮ್ಮೆಯ ಕಾಲುಗಳಂತೆ ಕಾಣಿಸುತ್ತಿದ್ದವು. ಅದು ಒಂದು ದಿನ ಮಾತ್ರ ಇದ್ದು ಸತ್ತು ಹೋಯಿತು. ಈ ವಿಚಿತ್ರ ಸೃಷ್ಟಿಯನ್ನು ಕಂಡು ಜನರೆಲ್ಲರೂ ಆಶ್ಚರ್ಯಪಟ್ಟರು.” ಎಂಬುದಾಗಿ ಎಚ್. ಚನ್ನಬಸಯ್ಯನವರು “ತಾಯಿನಾಡು” ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಸಾರ್ಜಂಟನ ಉದ್ಧಟತನ

ತಾ|| ೨ನೆಯ ದಿವಸ ಹುಬ್ಬಳ್ಳಿ ಸ್ಟೇಶನದ ಮೇಲೆ ಹಗಲು ೩ ಗಂಟೆಗೆ ಮೇಲು ಗಾಡಿ ಬಂದಾಗ್ಗೆ ಗಾಂಧಿ ಟೊಪ್ಪಿಗೆ ಧರಿಸಿಕೊಂಡು ಇಂಗ್ಲೀಷು ಪತ್ರಿಕೆಗಳನ್ನು ಮಾರುತ್ತಿದ್ದ ಏಜಂಟನಾದ ಶಂಕರ ದಿವಟೆ ಎಂಬವನನ್ನು ರೇಲ್ವೆ ಸಾರ್ಜಂಟನೊಬ್ಬನು ಬೂಟುಗಾಲಿನಿಂದ ಜಾಡಿಸಿ ಒದ್ದನು. ಉದ್ಧಟತನ!

ರಾ. ಬ. ಕಂಬಳಿಯವರು ದಿವಾಣ ಬಹದ್ದೂರರಾದರು

ಹುಬ್ಬಳ್ಳಿಯ ಪ್ರಸಿದ್ಧ ವಕೀಲರೂ,ಸನ್ನಕ್ಕೆ ಮುಂಬಯಿ ಸರಕಾರದ ಒಕ್ಕಲತನ ಖಾತೆಯ ಮಂತ್ರಿಗಳೂ ಆಗಿರುವ ರಾ. ಬ. ಕಂಬಳಿಯವರಿಗೆ ಹೊಸ ವರ್ಷದ ಪದವಿ ದಾನದಲ್ಲಿ ದಿವಾಣ ಬಹದ್ದೂರ ಪದವಿಯು ಕೊಡಲ್ಪಟ್ಟಿದೆ.

ಬಂಡಿಗಾಲಿಯ ಪರಿಷತ್ತಿನ ಕಾರ್ಯಕಲಾಪ

ಅಲ್ಪಸಂಖ್ಯಾಕ ಉಪಮಂಡಲದವರು ತಾ ೩ ಹಾಗು ೧೦ ದಿನಗಳಲ್ಲಿ ವಿ. ಮ್ಯಾಕಡೋನಾಲ್ಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿಕೊಂಡು ತಮ್ಮ ಕಾರ್ಯವನ್ನು ಮುಂದೆ ಸಾಗಿಸಿದರು. ಇಂಡಿಯನ್ ಕ್ರಿಶ್ಚಿಯನ್, ಪಾರ್ಸಿ, ಆ್ಯಂಗ್ಲೊ ಇಂಡಿಯನ್ ಮತ್ತು ಯುರೋಪಿಯನ್ ಮೊದಲಾದ ಅಲ್ಪಸಂಖ್ಯಾಕ ವರ್ಗಗಳ ಹಿತಸಂರಕ್ಷಣೆಯ ಸಂಬಂಧವಾಗಿ ಬೇರೆ ಬೇರೆ ಸಭಾಸದರು ತಮ್ಮ ಮತ [illegible] ವ್ಯಕ್ತಪಡಿಸಿದರು. ಸರ್ ಮಹಮ್ಮದ ಶಫಿ [illegible] ರಾಜಾ ನರೇಂದ್ರನಾಥ, ಡಾ. ಅಂಬೇಡಕರ ಮೊದಲಾದವರು ಈ ಸಂಬಂಧವಾಗಿ ಭಾಷಣ ಮಾಡಿದರು.

ಸಂಯುಕ್ತ ರಾಜ್ಯಘಟನೆಯ ಉಪಮಂಡಳದವರೂ ತಾ|| ೩ನೆಯ ದಿವಸ ಲಾರ್ಡ ಸ್ಯಾಂಕಿಯವರ ಅಧ್ಯಕ್ಷತೆಯಲ್ಲಿ ಕೂಡಿ, ಕೆಲವು ವರ್ಗಗಳ ಪ್ರತಿನಿಧಿಗಳಿಗೆ ಶಾಸನ ಸಭೆಯಲ್ಲಿ ಪ್ರತ್ಯೇಕವಾದ ಸ್ಥಾನಗಳನ್ನು ಕಾಯ್ದಿಡುವ ಸಂಬಂಧವಾಗಿಯೂ ಸಂಯುಕ್ತ ಶಾಸನ ಸಭೆಗೆ ಪ್ರತಿನಿಧಿಗಳನ್ನು ಆರಿಸುವ ಪದ್ಧತಿಯ ವಿಷಯವಾಗಿಯೂ ವಿಚಾರ ಮಾಡಿದರು. ವರಿಷ್ಠ ಕಾಯಿದೆ ಮಂಡಳದ ಸಭಾಸದರು ಪ್ರಾಂತಿಕ ಮಂಡಳಗಳ ಸಭಾಸದರಿಂದಲೂ, ಪ್ರಾಂತಿಕ ಮಂಡಳಗಳ ಸಭಾಸದರ ಮತದಾರರಿಂದಲೂ, ಆರಿಸಲ್ಪಡಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಎರಡೂ ಮಂಡಳಗಳಿಗೆ ನೇರವಾಗಿ ಸಭಾಸದರನ್ನು ಆರಿಸಿ ಕಳಿಸಬೇಕೆಂದು ಇನ್ನುಳಿದವರ ಅಭಿಪ್ರಾಯವಾಯಿತು. ಯಾವದೂ ನಿರ್ಣಯವಾಗದೆ ಸಭೆಯು ಮುಂದುವರಿಸಲ್ಪಟ್ಟಿತು.

ಪ್ರಾಂತಿಕ ರಾಜ್ಯಘಟನೆ ಉಪಮಂಡಳದವರು ತಾ|| ೩ನೆಯ ದಿವಸ ಜಫರುಲ್ಲಾಖಾನ, ಚಿಕ್ಕಾರ, ಜೋಶಿ, ಅಂಬೇಡಕರ, ಪ್ಯಾಟ್ರೊ, ರಾಜಾ ನರೇಂದ್ರನಾಥ ಮತ್ತು ಸೆಟಲವಾಡ ಈ ಜನರದೊಂದು ಮಂಡಳವನ್ನು ನಿಯಮಿಸಿ, ವರ್ಗೀಕರಣವಾಗದೆ ಉಳಿದಿರುವ ವಿಷಯಗಳನ್ನು ಸರಿಪಡಿಸಲು ಸಂಯುಕ್ತ ಘಟನೆಯ ಉಪಮಂಡಳದವರೊಡನೆ ಸಹಕರಿಸಲು ಅವರಿಗೆ ಕೇಳಿಕೊಂಡರು.

ಹಿಂದೂ ಮುಸಲ್ಮಾನರ ಪ್ರಶ್ನೆಯು ಹಿಂದುಸ್ಥಾನದಲ್ಲಿಯೇ ಬಿಡಿಸಬೇಕು

ಹಿಂದೂ, ಮುಸಲ್ಮಾನರ ಪ್ರಶ್ನೆಯು ನಮಗೆ ಯಾವ ರೀತಿಯಿಂದಲೂ ಸಂಬಂಧಿಸಿಲ್ಲವಾದ್ದರಿಂದ ಅದನ್ನು ಇಂಗ್ಲಂಡದಲ್ಲಿ ಬಗೆಹರಿಸುವದು ಶಕ್ಯವಿಲ್ಲವೆಂದೂ, ಸಂರಕ್ಷಣೆ, ಕಂದಾಯ ಹಾಗು ಪರಕೀಯ ಧೋರಣ ಈ ಬಗ್ಗೆ ವಿಚಾರ ಮಾಡುವದು ಮಹತ್ವದ್ದಿದೆಯೆಂದೂ, ಕಂದಾಯದ ಬಗ್ಗೆ ನಿಜವಾದ ಅಧಿಕಾರವನ್ನು ಹಿಂದುಸ್ಥಾನಕ್ಕೆ ಕೊಟ್ಟಲ್ಲಿ, ಜವಾಬದಾರ ರಾಜ್ಯಪದ್ಧತಿಯು ಬಂದ ಹೆಜ್ಜೆಯನ್ನು ಮುಂದಿಟ್ಟಂತಾಗುವದೆಂದೂ “ನ್ಯೂಜ ಕ್ರಾನಿಕಲ್” ಪತ್ರಿಕೆಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಹಿಂದುಸ್ಥಾನದ ಗವ್ಹರ್ನರರು ಹಾಗು ಯುರೋಪಿಯನ್ ಪ್ರತಿನಿಧಿಗಳು ಇವರ ಹೊರತಾಗಿ ಇಂಗ್ಲಂಡದಲ್ಲಿ ಉಳಿದವರಾರೂ ಹಿಂದೀ ಜನರಿಗೆ ಜವಾಬದಾರಿಯನ್ನು ಒಪ್ಪಿಸುವ ವಿಷಯಕ್ಕೆ ವಿರೋಧಿಗಳಿರುವದಿಲ್ಲವೆಂದು ಲಂಡನ್ ಟಾಯಿಮ್ಸ ಪತ್ರಿಕೆಯು ತನ್ನದೊಂದು ಲೇಖದಲ್ಲಿ ಧ್ವನಿತ ಮಾಡಿದೆ.

ವಿ. ಚರ್ಚಹಿಲ್ಲರನ್ನು ಅಭಿನಂದಿಸಿದರು

ಡಿಸೆಂಬರ ೧೧ನೆಯ ತಾರೀಖಿನ ದಿವಸ ಹಿಂದುಸ್ಥಾನದ ಸಂಬಂಧವಾಗಿ ಸ್ಫೂರ್ತಿದಾಯಕವಾದ ಭಾಷಣ ಮಾಡಿ, ಇಂಗ್ಲಂಡ ಹಾಗು ಹಿಂದುಸ್ಥಾನಕ್ಕೆ ಉಪಕಾರ ಮಾಡಿದ ಸಂಬಂಧವಾಗಿ, ಲಂಡನದಲ್ಲಿಯ ಇಂಡಿಯನ್ ಎಂಪಾಯರ್ ಸೊಸಾಯಿಟಿಯ ಕಾರ್ಯಕಾರೀ ಮಂಡಳದವರು, ವಿ. ಚರ್ಚಹಿಲ್ಲರಿಗೆ ತಮ್ಮ ಅಭಿನಂದನೆಯನ್ನು ಕಳಿಸಿದ್ದಾರೆ. ಈ ಭಾಷಣದ ಸಂಬಂಧವಾಗಿ ವಿ. ಮ್ಯಾಕಡೋನಾಲ್ಡರು, ಬಿಕಾನೇರ ಮಹಾರಾಜರು, ಮೊದಲಾದವರು ವಿ. ಚರ್ಚಹಿಲ್ಲರನ್ನು ಬೈದು ಬೈದು ಮುಚ್ಚಿದ್ದರಿಂದ ಅವರಿಗೆ ಸಾಕುಬೇಕಾಗಿ ಹೋಗಿತ್ತು! ಅಭಿನಂದಿಸುವವರು ಒಬ್ಬರಾದರೂ ದೊರೆತರ! ಸಾಕು! ಅವರ ಇನ್ನು ಜೀವ ಹಿಡಿಯಬಹುದ!

ಬುಲಢಾಣಾ ಜಿಲ್ಹೆಯ ರೈತರ ನಿರ್ಧಾರ

ಬುಲಢಾಣಾ ಜಿಲ್ಹೆಯ ರೈತರ ಪರಿಷತ್ತು ತಾ|| ೩ ಹಾಗು ೧೦ ದಿನಗಳಲ್ಲಿ ನಂದುರಾ ಎಂಬಲ್ಲಿ ಶ್ರೀ ಜಮನಾದಾಸ ಮೋಹತಾರವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಸುಮಾರು ೩೦೦೦ ಜನ ರೈತರು ಬೇರೆ ಬೇರೆ ಭಾಗಗಳಿಂದ ಬರಹತ್ತಿಗ ಬಂದಿದ್ದರು. ಈ ವರ್ಷ [illegible] ಸರಕಾರದ [illegible] ಬಿಡಬೇಕಾಗಿಯೂ, ಜಾನೇವರಿ ೨೦ನೆಯ ತಾರೀಖಿನೊಳಗಾಗಿ ಸರಕಾರ ಒಪ್ಪಿಕೊಳ್ಳದಿದ್ದರೆ ಭೂಕಂದಾಯ [illegible] ವ್ಯವಸ್ಥೆ ಮಾಡಲು [illegible] ಮಂಡಳವನ್ನು [illegible] ಗಳು ಅಲ್ಲಿ ಸ್ವೀಕೃತವಾದವು. ಈ ಸಭೆಯು ಭೂಕಂದಾಯವನ್ನು ಅರ್ಧಕ್ಕರ್ಧ ಕಡಿಮೆ ಮಾಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುವ ಬಗ್ಗೆಯೂ ಒಂದು ಠರಾವು ಪಾಸಾಯಿತು.

[illegible] ರಾಷ್ಟ್ರಧ್ವಜ [illegible] ಸಮಾರಂಭವು ಜರುಗಿತು. ಪ್ರಭಾತಸಂಕೀರ್ತನೆ ಮೊದಲಾದವುಗಳನ್ನು ಮಾಡಿದವರೂ ಕೂಡಿಕೊಂಡು ರಾಷ್ಟ್ರಧ್ವಜಕ್ಕೆ ಪ್ರಾರ್ಥನೆ ಸಲ್ಲಿಸಿದರು.

ಬಿಹಾರದಲ್ಲಿ ೩೦೦ ಜನರನ್ನು ಹಿಡಿದರು.

ಬಿಹಾರ ಪ್ರಾಂತದ ಮುಜಫರಪುರದಲ್ಲಿ ೧ನೆಯ ತಾರೀಖಿನ ದಿವಸ ಸ್ವಾತಂತ್ರ್ಯ ದಿನದ ನಿಮಿತ್ತವಾಗಿ ಸಾವಿರಾರು ಜನರ ಪ್ರಚಂಡ ಮೆರವಣಿಗೆಯು ಹೊರಟಿತ್ತು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿ ಮಾಡಿ ೩೦೦ ಜನರನ್ನು ಸೆರೆ ಹಿಡಿದುಕೊಂಡು ಹೋದರು.

ಮುಂಬಯಿಯಲ್ಲಿ
ಲಕ್ಷ್ಮೀದಾಸರ ಪ್ರಾಣಾಹುತಿ

ಮುಂಬಯಿಯಲ್ಲಿ ಸ್ವಾತಂತ್ರ್ಯ ದಿನದ ದಿವಸ ಸಂಭವಿಸಿದ ಗೋಳೀಬಾರಿನ ಸಮಯದಲ್ಲಿ ಗುಂಡಿನೇಟಿಗೆ ತುತ್ತಾಗಿ ಗಾಯಗೊಂಡಿದ್ದ ಶ್ರೀ. ಲಕ್ಷ್ಮೀದಾಸ ಎಂಬ ಪಂಜಾಬಿ ತರುಣರೊಬ್ಬರು ತಾ ೧ನೆಯ ದಿವಸ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಈ ಮೂಲಕವಾಗಿ ಮುಂಬಯಿಯಲ್ಲಿ ಅಂದು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು

ತುರಂಗದಲ್ಲಿ
ಸತ್ಯಾಗ್ರಹಿಯು ಮರಣಹೊಂದಿದನು

ದಿಲ್ಲಿಯಲ್ಲಿ ಸಿಂಧೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಶಿಕ್ಷೆಗೆ ಗುರಿಯಾಗಿ ದಿಲ್ಲಿ ಜೇಲಿನಲ್ಲಿ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ೬೦ ವರ್ಷ ವಯಸ್ಸಿನ ಶ್ರೀ ಸಾಜ್ಞಾ ಎಂಬವರು ಪುಪ್ಪುಸ ಬೇನೆಯಿಂದ ಜೇಲಿನಲ್ಲಿಯೇ ಮರಣ ಹೊಂದಿದರೆಂದು ತಿಳಿದು ಬರುತ್ತದೆ.

ಜಳಗಾವದಲ್ಲಿ
ಅಸ್ಪೃಶ್ಯರ ಸತ್ಯಾಗ್ರಹ

ಜಳಗಾವದಲ್ಲಿ ಸೇರಿದ ವರ್ಣಾಶ್ರಮ ಪರಿಷತ್ತಿನ ವಿರುದ್ಧವಾಗಿ ಸತ್ಯಾಗ್ರಹ ಹೂಡಿದ ಸಂಬಂಧವಾಗಿ ತಾ|| ೩ನೆಯ ದಿವಸ ೧೯ ಜನರು ಕೈದು ಮಾಡಲ್ಪಟ್ಟಿದ್ದು, ಅವರಲ್ಲಿ ೩ ಜನರು ಸ್ತ್ರೀಯರಿರುವರು. ಸತ್ಯಾಗ್ರಹವು ಹಾಗೆಯೇ ಸಾಗಿದೆ.

ವರ್ಣಾಶ್ರಮ ಪರಿಷತ್ತಿನ ಗೊತ್ತುಗಳು

ನಥದ್ವಾರದ ಶ್ರೀ ಟಿಕಾಯತ್ ಮಹಾರಾಜರ ಅಧ್ಯಕ್ಷತೆಯಲ್ಲಿ ಜಳಗಾವದಲ್ಲಿ ಸೇರಿದ ವರ್ಣಾಶ್ರಮ ಸ್ವರಾಜ್ಯ ಸಂಘದ ಪರಿಷತ್ತಿನಲ್ಲಿ ಸೊಲ್ಲಾಪುರದ ಆರೋಪಿಗಳಿಗೆ ಜೀವದಾನ ಕೊಡದೇಕಾಗಿ ವ್ಹಾಯಿಸರಾಯರಿಗೆ ವಿನಂತಿ ಮಾಡಿಕೊಳ್ಳುವದು, ವರ್ಣಾಶ್ರಮ ಧರ್ಮದ ಬಗ್ಗೆ ಜನರಲ್ಲೆಲ್ಲ ಜಾಗೃತಿ ಹುಟ್ಟಿಸುವದು, ಧಾರ್ಮಿಕ ಹಾಗು ಸಾಮಾಜಿಕ ವಿಷಯಗಳಲ್ಲಿ ಶಾಸನ ಸಭೆಗಳು ಕೈ ಹಾಕದಂತೆ ಭಾವೀ ರಾಜ್ಯಘಟನೆಯಲ್ಲಿ ಯೋಗ್ಯ ಏರ್ಪಾಡು ಮಾಡುವ ಕುರಿತು ಬಂಡಿಗಾಲಿಯ ಪರಿಷತ್ತಿಗೆ ಕೇಳಿಕೊಳ್ಳುವದು ಮೊದಲಾದ ವಿಷಯಗಳನ್ನು ಕುರಿತು ಗೊತ್ತುಗಳು ತೀರ್ಮಾನಿಸಲ್ಪಟ್ಟವು. ಅಸ್ಪೃಶ್ಯರು ಹಿಂದೂಗಳಿದ್ದದ್ದು ನಿಜವಿದ್ದರೂ, ಅವರು ನಾಲ್ಕು ವರ್ಣಗಳಲ್ಲಿ ಸೇರ್ಪಡೆಯಾಗುವದಿಲ್ಲವಾಗಿ ಪರಿಷತ್ತಿನವರು ಅಭಿಪ್ರಾಯಪಟ್ಟರು.

ಸತ್ಯಾಗ್ರಹಿಗಳ ಮೇಲೆ
ದರೋಡೆಯ ಆರೋಪ

ಮೀರತ ಜಿಲ್ಹೆಗೆ ಸೇರಿದ ಬಾರಾವುತದಲ್ಲಿ ೧೦ ಜನ ಸತ್ಯಾಗ್ರಹಿಗಳು ಇ.ಪಿ.ಕೋಡಿನ ೩೯೫ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟಿದ್ದು ಅವರ ಮೇಲೆ ದರೋಡೆಯ ಆರೋಪವು ಹೊರಿಸಿದ್ದಾರೆ

ಡಾ|| ಹರ್ಡೀಕರರ ವಿಚಾರಣೆ

ಡಾ ಹರ್ಡೀಕರರ ಖಟ್ಲೆಯ ವಿಚಾರಣೆಯು ಮುಂಬಯಿಯಲ್ಲಿ ತಾ|| ೧೮ನೆಯ ದಿವಸ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುವದಾಗಿ ತಿಳಿದು ಬರುತ್ತದೆ.

ನಡಿಯಾದದಲ್ಲಿ
ಡೊಣ್ಣೆಯ ರಾಜ್ಯ

ತಾ|| ೩ನೆಯ ದಿವಸ ವಾನರ ದಿನದ ನಿಮಿತ್ತವಾಗಿ ನಡಿಯಾದದಲ್ಲಿ ವಾನರ ಸೇನೆಯ ಮೆರವಣಿಗೆ ಹೊರಟಿತ್ತು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಮೆರವಣಿಗೆಗೆ ಎರಡು ಸಲ ಅಡ್ಡಿ ಮಾಡಿ, ಅವರನ್ನು ಡೊಣ್ಣೆಗಳಿಂದ ಥಳಿಸಿ ವಾನರ ಸೇನೆಯ ಕಪ್ತಾನರಾದ ಮುಂಜಾಭಾಯಿಯವರನ್ನು ಸೆರೆಹಿಡಿದುಕೊಂಡು ಹೋದರು. ಸಂಜೆಯಲ್ಲಿ ವಾನರ ಸೇನೆಯವರು ಮತ್ತೆ ಮೆರವಣಿಗೆ ಹೊರಡಿಸಿ ಕಾರ್ಯಕ್ರಮವನ್ನು ಪೂರ್ತಿಗೊಳಿಸಿದರು. ಲಾಠಿ ಪ್ರಹಾರದ ಮೂಲಕವಾಗಿ ಸುಮಾರು ೧೦೦ ಜನರಿಗೆ ಗಾಯಗಳಾಗಿವೆ.

ಮುಂಬಯಿಯಲ್ಲಿ
೧೬ ಜನರಿಗೆ ಶಿಕ್ಷೆ

ಮುಂಬಯಿಯ ಉಪನಗರವಾದ ಘಾಟಕೋಪುರದಲ್ಲಿ ಜವಾಹರಲಾಲ ದಿನದ ನಿಮಿತ್ತವಾಗಿ ಬಂಧನಕ್ಕೊಳಗಾದ ಶ್ರೀ ಮಣಿಲಾಲ ಶಹಾರವರಿಗೆ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ಉಳಿದ ೧೫ ಜನರಿಗೆ ಬೇರೆ ಬೇರೆ ದಂಡ ಹೀಗೆ ಶಿಕ್ಷೆಗಳು ವಿಧಿಸಲ್ಪಟ್ಟಿವೆ. ಇವರಲ್ಲಿ ೧೨ ಜನ ಸ್ತ್ರೀಯರಿದ್ದು, ಅವರಿಗೆ ಪ್ರತ್ಯೇಕವಾಗಿ ೩೦ ರು. ದಂಡ ಇಲ್ಲವೆ ೧ ತಿಂಗಳ ಸಾದಾ ಕಾರಾಗೃಹವಾಸ ಹೀಗೆ ಶಿಕ್ಷೆಯು ದೊರೆತಿದೆ.

ಹತ್ತು ಜನ ಮಕ್ಕಳಿದ್ದರೆ
ಅವರನ್ನಾದರೂ ಅರ್ಪಿಸುತ್ತಿದ್ದೆ

ಮುಂಬಯಿಯ ಮಾಂಡವಿ ಭಾಗದ ಸರ್ವಾಧಿಕಾರಿಗಳಾದ ಶ್ರೀ ಪ್ರಾಗಜಿ ವೇಲಜಿಯವರನ್ನು ಅಧಿಕಾರಿಗಳು ಸೆರೆ ಹಿಡಿದುಕೊಂಡು ಹೋದ ಕೂಡಲೆ, ಅವರ ತಾಯಿಯವರು ಕೆಳಗಿನಂತೆ ಸಂದೇಶ ಕೊಟ್ಟರು.

“ದೇಶದ ಸಲುವಾಗಿ ಮಗನು ತುರಂಗಕ್ಕೆ ಹೋಗುತ್ತಿರುವದು ನನಗೆ ಅಭಿಮಾನಾಸ್ಪದವಾಗಿದೆ. ಅವನು ಲಾಠಿಯ ಪೆಟ್ಟುಗಳಿಗೂ ಒಳಗಾಗಿದನೆಂಬುದನ್ನು ಕೇಳಿ ಹಿಡಿಸಲಾರದಷ್ಟು ಆನಂದವಾಯಿತು. ಅಧಿಕಾರಿಗಳು ಅವನ ಮೇಲೆ ಗುಂಡಿನ ಮಳೆಗರೆದಿದ್ದರೆ ಇದಕ್ಕಿಂತ ಹೆಚ್ಚು ಸಂತೋಷವಾಗುತ್ತಿತ್ತು. ನನಗೆ ಅವನೊಬ್ಬನೇ ಮಗ. ಹತ್ತು ಜನ ಮಕ್ಕಳಿದ್ದರೆ ಅವರನ್ನಾದರೂ ದೇಶಸೇವೆಗೆ ಅರ್ಪಿಸಿ ಬಿಡುತ್ತಿದ್ದೆ. ಈ ಯೋಗವು ದೊರೆಯದ್ದಕ್ಕಾಗಿ ನನಗೀಗ ವಿಷಾದ ಪಡಬೇಕಾಗಿದೆ!

ಮೀರತದಲ್ಲಿ ದಬ್ಬಾಳಿಕೆ

ಮೀರತದಲ್ಲಿಯ ಕಾಂಗ್ರೆಸ್ ಕೆಲಸಗಾರರಾದ ಡಾ ಗುಲಾಮಸಿದ್ದೀಕ, ಮೋತೀರಾಮ, ಶ್ರೀಮತಿ ದುರ್ಗೇಶನಂದಿನಿ, ರಾಧಾಮೋಹನ ಮೊದಲಾದ ೬ ಜನರು ಕ್ರಿ. ಲಾ. ಅಮೆಂಡಮೆಂಟ್ ಕಾಯದೆಯ ೧೭ ನೇ ಕಲಮಿನನ್ವಯ ತಾ|| ೫ನೆಯ ದಿವಸ ಕೈದು ಮಾಡಲ್ಪಟ್ಟಿದ್ದಾರೆ. ಶ್ರೀಮತಿ ದುರ್ಗೇಶನಂದಿನಿಯವರ ಪತಿ ಹಾಗು ಚಿರಂಜೀವರು ಈ ಮೊದಲೇ ಸೆರೆಮನೆಗೆ ತೆರಳಿರುವರು.

ಎಮ್ಮೆಯ ಹೊಟ್ಟೆಯಲ್ಲಿ ಆನೆಯ ಮರಿ ಹುಟ್ಟಿತು

" ಶಿವಮೊಗ್ಗ ಜಿಲ್ಲೆಯಲ್ಲಿಯ ಹೊಳೆ ಆಲೂರ ಗ್ರಾಮದ ಗೌಡರಾದ ಹನುಮಂತಪ್ಪನವರ ಮನೆಯಲ್ಲಿ ಎಮ್ಮೆಯ ಹೊಟ್ಟೆಯಿಂದ ಒಂದು ಆನೆಯ ಮರಿ ಹುಟ್ಟಿತು. ಆ ಮರಿಗೆ ಸೊಂಡಿಲು, ಕಿವಿಗಳು, ಕುಂಭಸ್ಥಲ, ಬಾಲ ಇವುಗಳು ಆನೆಯಂತೆಯೇ ಇದ್ದವು. ಕಾಲುಗಳು ಮಾತ್ರ ಎಮ್ಮೆಯ ಕಾಲುಗಳಂತೆ ಕಾಣಿಸುತ್ತಿದ್ದವು. ಅದು ಒಂದು ದಿನ ಮಾತ್ರ ಇದ್ದು ಸತ್ತು ಹೋಯಿತು. ಈ ವಿಚಿತ್ರ ಸೃಷ್ಟಿಯನ್ನು ಕಂಡು ಜನರೆಲ್ಲರೂ ಆಶ್ಚರ್ಯಪಟ್ಟರು. " ಎಂಬುದಾಗಿ ಎಚ್ ಚನ್ನಬಸಯ್ಯನವರು " ತಾಯಿನಾಡು " ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಸಾರ್ಜಂಟಿನ ಉದ್ಧಟತನ

ತಾ|| ೨ನೆಯ ದಿವಸ ಹುಬ್ಬಳ್ಳಿ ಸ್ಟೇಶನದ ಮೇಲೆ ಹಗಲು ೩ ಗಂಟೆಗೆ ವೇಲು ಗಾಡಿ ಒಂದಕ್ಕೆ ಗಾಂಧಿ ಟೊಪ್ಪಿಗೆ ಧರಿಸಿಕೊಂಡು ಇಂಗ್ಲೀಷು ಪತ್ರಿಕೆಗಳನ್ನು ಮಾರುತ್ತಿದ್ದ ಏಜಂಟನಾದ ಶಂಕರ ದಿವಟೆ ಎಂಬವನನ್ನು ರೇಲ್ವೆ ಸಾರ್ಜಂಟನೊಬ್ಬನು ಬೂಟುಗಾಲಿನಿಂದ ಜಾಡಿಸಿ ಒದ್ದನು. ಉದ್ಧಟತನ !

ರಾ. ಬ. ಕಂಬಳಿಯವರು ದಿವಾಣ ಬಹದ್ದೂರರಾದರು

ಹುಬ್ಬಳ್ಳಿಯ ಪ್ರಸಿದ್ಧ ವಕೀಲರೂ,ಸನ್ನಕ್ಕೆ ಮುಂಬಯಿ ಸರಕಾರದ ಒಕ್ಕಲತನ ಖಾತೆಯ ಮಂತ್ರಿಗಳೂ ಆಗಿರುವ ರಾ. ಬ. ಕಂಬಳಿಯವರಿಗೆ ಹೊಸ ವರ್ಷದ ಪದವಿ ದಾನದಲ್ಲಿ ದಿವಾಣ ಬಹದ್ದೂರ ಪದವಿಯು ಕೊಡಲ್ಪಟ್ಟಿದೆ.

ಬಂಡಿಗಾಲಿಯ ಪರಿಷತ್ತಿನ ಕಾರ್ಯಕಲಾಪ

ಅಲ್ಪಸಂಖ್ಯಾಕ ಉಪಮಂಡಲದವರು ತಾ ೩೧ ಹಾಗು ೧ ಈ ದಿನಗಳಲ್ಲಿ ವಿ. ಮ್ಯಾಕಡೋನಾಲ್ಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿಕೊಂಡು ತಮ್ಮ ಠರಾಯವನ್ನು ಮಂಡಿಸಿ ಸಾಧಿಸಿದರು. ಇಂಡಿಯನ್ ಕ್ರಿಶ್ಚಿಯನ್, ಪಾರ್ಸಿ, ಆ್ಯಂಗ್ಲೋ ಇಂಡಿಯನ್ ಹಾಗು ಯುರೋಪಿಯನ್ ಮೊದಲಾದ ಅಲ್ಪಸಂಖ್ಯಾಕ ವರ್ಗಗಳ ಹಿತಸಂರಕ್ಷಣೆಯ ಸಂಬಂಧವಾಗಿ ಬೇರೆ ಬೇರೆ ಸಭಾಸದರು ತಮ್ಮ ಮತ ... ವ್ಯಕ್ತಪಡಿಸಿದರು. ಸರ್ ಮಹಮ್ಮದ ಶಫಿ ... ರ ಜಾನ್ ... ಗ್ರನಾಥ ಡಾ. ಅಂಬೇಡಕರ ಮೊದಲಾದವರು ಈ ಸಂಬಂಧವಾಗಿ ಭಾಷಣ ಮಾಡಿದರು.

ಸಂಯುಕ್ತ ರಾಜ್ಯಘಟನೆಯ ಉಪಮಂಡಳದವರೂ ತಾ|| ೩೧ ನೆಯ ದಿವಸ ಲಾರ್ಡ ಸ್ಯಾಂಕಿಯವರ ಅಧ್ಯಕ್ಷತೆಯಲ್ಲಿ ಕೂಡಿ, ಕೆಲವು ವರ್ಗಗಳ ಪ್ರತಿನಿಧಿಗಳು ಶಾಸನ ಸಭೆಗಳಲ್ಲಿ ಪ್ರತ್ಯೇಕವಾದ ಸ್ಥಳಗಳನ್ನು ಕಾಯ್ದಿಡುವ ಸಂಬಂಧವಾಗಿಯೂ ಸಂಯುಕ್ತ ಶಾಸನ ಸಭೆಗೆ ಪ್ರತಿನಿಧಿಗಳನು ಆರಿಸುವ ಪದ್ಧತಿಯ ವಿಷಯವಾಗಿಯೂ ವಿಚಾರ ಮಾಡಿದರು. ಮರ್ಯಾದೆ ಮಂಡಳದ ಸಭಾಸದರು ಪ್ರಾಂತಿಕ ಮಂಡಳಗಳ ಸಭಾಸದರಿಂದಲೂ, ಪ್ರಾಂತಿಕ ಮಂಡಳಗಳ ಸಭಾಸದರ ಮತದಾರರಿಂದಲೂ, ಆರಿಸಲ್ಪಡಬೇಕೆಂದು ಕೆಲವರು ಅಭಿಪ್ರಾಯ ಪಟ್ಟರು. ಎರಡೂ ಮಂಡಳಗಳಿಗೆ ನೇರವಾಗಿ ಸಭಾಸದರನ್ನು ಆರಿಸಿ ಕಳಿಸಬೇಕೆಂದು ಇನ್ನುಳಿದವರ ಅಭಿಪ್ರಾಯವಾಯಿತು. ಯಾವದೂ ನಿರ್ಣಯವಾಗದೆ ಸಭೆಯು ಮುಂದುವರಿಸಲ್ಪಟ್ಟಿತು.

ಪ್ರಾಂತಿಕ ರಾಜ್ಯಭಾರ ಉಪಮಂಡಳದವರು ತಾ|| ೩೧ ನೆಯ ದಿವಸ ಜಫರುಲ್ಲಾಖಾನ, ಚಿಂತಾಮಣಿ, ಜೋಶಿ, ಅಂಬೇಡಕರ, ಪ್ಯಾಟ್ರೊ, ರಾಜಾ ನರೇಂದ್ರನಾಥ ಮತ್ತು ಸೆಟಲವಾಡ ಈ ಜನರ ಉಪಮಂಡಳವನ್ನು ನಿಯಮಿಸಿ, ವರ್ಗೀಕರಣವಾಗದೆ ಉಳಿದಿರುವ ವಿಷಯಗಳನ್ನು ಸರಿಪಡಿಸಲು ಸಂಯುಕ್ತ ಘಟನೆಯ ಉಪಮಂಡಳದವರೊಡನೆ ಸಹಕರಿಸಲು ಅವರಿಗೆ ಕೇಳಿಕೊಂಡರು.

ಹಿಂದೂ ಮುಸಲ್ಮಾನರ ಪ್ರಶ್ನೆಯನು ಹಿಂದುಸ್ಥಾನದಲ್ಲಿಯೇ ಬಿಡಿಸಬೇಕು

ಹಿಂದೂ ಮುಸಲ್ಮಾನರ ಪ್ರಶ್ನೆಯು ನಮಗೆ ಯಾವ ರೀತಿಯಿಂದಲೂ ಸಂಬಂಧಿಸಿಲ್ಲವಾದ್ದರಿಂದ ಅದನ್ನು ಇಂಗ್ಲಂಡದಲ್ಲಿ ಬಗೆಹರಿಸುವದು ಶಕ್ಯವಿಲ್ಲವೆಂದೂ, ಸಂದರ್ಭಾನುಸಾರ, ಕಂದಾಯ ಹಾಗೂ ಪರಕೀಯ ಧೋರಣ ಈ ಬಗ್ಗೆ ವಿಚಾರ ಮಾಡುವದು ಯುಕ್ತವಿದ್ದಿದೆಯೆಂದೂ, ಕಂದಾಯದ ಬಗ್ಗೆ ನಿಜವಾದ ಅಧಿಕಾರವನ್ನು ಹಿಂದುಸ್ಥಾನಕ್ಕೆ ಕೊಟ್ಟಲ್ಲಿ, ಜವಾಬದಾರ ರಾಜ್ಯಪದ್ಧತಿಯು ಒಂದು ಹೆಜ್ಜೆ ಮುಂದೆ ವರಿಸಲ್ಪಟ್ಟಂತಾಗುವದೆಂದೂ " ನ್ಯೂ ಸ್ಟೇಟ್ಸ್‌ಮನ್ ಆ್ಯಂಡ ನೇಶನಲ್ " ಪತ್ರಿಕೆಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಹಿಂದುಸ್ಥಾನದ ಗವ್ಹರ್ನರರು ಹಾಗೂ ಯುರೋಪಿಯನ್ ಪ್ರತಿನಿಧಿಗಳು ಇವರ ಹೊರತಾಗಿ ಇಂಗ್ಲಂಡದಲ್ಲಿ ಉಳಿದವರಾರೂ ಹಿಂದೀ ಜನರಿಗೆ ಜವಾಬದಾರಿಯನ್ನು ಒಪ್ಪಿಸುವ ವಿಷಯಕ್ಕೆ ವಿರೋಧಿಗಳಿರುವದಿಲ್ಲವೆಂದು ಲಂಡನ್ ಟಾಯಿಮ್ಸ ಪತ್ರಿಕೆಯು ತನ್ನದೊಂದು ಲೇಖದಲ್ಲಿ ಧ್ವನಿತ ಮಾಡಿದೆ.

ಮಿ. ಚರ್ಚಹಿಲ್ಲರನ್ನು ಅಭಿನಂದಿಸಿದರು

ಡಿಸೆಂಬರ ೧೧ ನೆಯ ತಾರೀಖಿನ ದಿವಸ ಹಿಂದುಸ್ಥಾನದ ಸಂಬಂಧವಾಗಿ ಸ್ಫೋಟಕದಾಯಕವಾದ ಭಾಷಣ ಮಾಡಿ, ಇಂಗ್ಲಂಡ ಹಾಗು ಹಿಂದುಸ್ಥಾನಕ್ಕೆ ಉಪಕಾರ ಮಾಡಿದ ಸಂಬಂಧವಾಗಿ, ಲಂಡನದಲ್ಲಿಯ ಇಂಡಿಯನ್ ಎಂಪಾಯರ್ ಸೊಸಾಯಿಟಿಯ ಕಾರ್ಯಕಾರೀ ಮಂಡಳದವರು, ಮಿ. ಚರ್ಚಹಿಲ್ಲರಿಗೆ ತಮ್ಮ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಈ ಭಾಷಣದ ಸಂಬಂಧವಾಗಿ ಮಿ. ಮ್ಯಾಕಡೋನಾಲ್ಡರು, ಬಿಕಾನೇರ ಮಹಾರಾಜರು ಮೊದಲಾದವರು ಮಿ. ಚರ್ಚಹಿಲ್ಲರನ್ನು ಬೈದು ಬೈದು ಮರ್ಚಿದ್ದರಿಂದ ಅವರಿಗೆ ಸಾಕುಬೇಕಾಗಿ ಹೋಗಿತ್ತು! ಅಭಿನಂದಿಸುವವರು ಒಬ್ಬರಾದರೂ ದೊರೆತರ ! ಸಾಕು! ಅವರು ಇನ್ನು ಜೀವ ಹಿಡಿಯಬಹುದು !

ಬುಲಡಾಣಾ ಜಿಲ್ಲೆಯ ರೈತರ ನಿರ್ಧಾರ

ಬುಲಡಾಣಾ ಜಿಲ್ಲೆಯ ರೈತರ ಪರಿಷತ್ತು ತಾ|| ೩೧ ಹಾಗು ೧ ಈ ದಿನಗಳಲ್ಲಿ ನಂದುರಾ ಎಂಬಲ್ಲಿ ಶ್ರೀ ಜಮನಾದಾಸ ಮೇಹತಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ೧೫೦೦೦ ಜನ ರೈತರು ಬೇರೆ ಬೇರೆ ಭಾಗಗಳಿಂದ ಪರಿಷತ್ತಿಗೆ ಬಂದಿದ್ದರು. ಈ ವರ್ಷ ಬೆಳೆಯು ಕಡಿಮೆ ಬಂದದ್ದರಿಂದ ಸರಕಾರದವರು ಭೂಕಂದಾಯವನ್ನು ಸೂಟಬಿಡಬೇಕಾಗಿಯೂ, ಜಾನೇವರಿ ೨೦ ನೆಯ ತಾರೀಖಿನೊಳಗಾಗಿ ಸೂಟ ಬಿಡದಿದ್ದ ಪಕ್ಷದಲ್ಲಿ ಭೂಕಂದಾಯ ... ದಂತೆ ವ್ಯವಸ್ಥೆ ಮಾಡಲು ೧೦ ಜನರ ... ಮಂಡಳವನ್ನು ನಿಯಮಿಸಬೇಕಾಗಿಯೂ ಠರಾವುಗಳು ಅಲ್ಲಿ ಸ್ವೀಕೃತವಾದವು. ಈ ಠರಾವನ್ನು ಅರ್ಧಕ್ಕರ್ಧ ಕಡಿಮೆ ಮಾಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುವ ಬಗ್ಗೆಯೂ ಒಂದು ಠರಾವು ಪಾಸಾಯಿತು.

ಇ... ಮಂಜಾಬಿನಲ್ಲಿ ಲಾಲಾ ... ರಾಷ್ಟ್ರಧ್ವಜ ...ನೆಯ ಸಮಾರಂಭವು ಜರುಗಿತು. ಪ್ರಭಾತಸಂಕೀರ್ತನೆಯು ಮರೂ ಧ್ವನಿ ... ಮಾಡುತ್ತ ಬಂದು ರಾಷ್ಟ್ರ ಧ್ವಜಕ್ಕೆ ವಂದನೆ ಸಲ್ಲಿಸಿದರು.

ಬಿಹಾರದಲ್ಲಿ ೩೦೦ ಜನರನ್ನು ಹಿಡಿದರು.

ಬಿಹಾರ ಪ್ರಾಂತದ ಮುಜಫರಪುರದಲ್ಲಿ ೨೬ನೆಯ ತಾರೀಖಿನ ದಿವಸ ಸ್ವಾತಂತ್ರ್ಯ ದಿನದ ನಿಮಿತ್ತವಾಗಿ ಸಾವಿರಾರು ಜನರ ಪ್ರಚಂಡ ಮೆರವಣಿಗೆಯು ಹೊರಟಿತ್ತು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿ ಮಾಡಿ ೩೦೦ ಜನರನ್ನು ಸೆರೆ ಹಿಡಿದುಕೊಂಡು ಹೋದರು.

ಮುಂಬಯಿಯಲ್ಲಿ
ಲಕ್ಷ್ಮೀದಾಸರ ಪ್ರಾಣಾಹುತಿ.

ಮುಂಬಯಿಯಲ್ಲಿ ಸ್ವಾತಂತ್ರ್ಯ ದಿನದ ದಿವಸ ಸಂಭವಿಸಿದ ಗೋಳೀಬಾರಿನ ಸಮಯದಲ್ಲಿ ಗುಂಡಿನೇಟಿಗೆ ತುತ್ತಾಗಿ ಗಾಯಗೊಂಡಿದ್ದ ಶ್ರೀ. ಲಕ್ಷ್ಮೀದಾಸ ಎಂಬ ಪಂಜಾಬಿ ತರುಣರು [illegible] ತಾ ೧ನೆಯ ದಿವಸ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಈ ಮೂಲಕವಾಗಿ ಮುಂಬಯಿಯಲ್ಲಿ ಅಂದು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ತುರಂಗದಲ್ಲಿ
ಸತ್ಯಾಗ್ರಹಿಯು ಮರಣಹೊಂದಿದನು

ದಿಲ್ಲಿಯಲ್ಲಿ ಸಿಂಧೀ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಶಿಕ್ಷೆಗೆ ಗುರಿಯಾಗಿ ದಿಲ್ಲಿ ಜೇಲಿನಲ್ಲಿ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ೬೦ ವರ್ಷ ವಯಸ್ಸಿನ ಶ್ರೀ ಸಾಜ್ಞಾ ಎಂಬವರು ಪುಪ್ಪುಸ ಬೇನೆಯಿಂದ ಜೇಲಿನಲ್ಲಿಯೇ ಮರಣ ಹೊಂದಿದಂತಾಗಿ ತಿಳಿದು ಬರುತ್ತದೆ.

ಜಳಗಾವದಲ್ಲಿ
ಅಸ್ಪೃಶ್ಯರ ಸತ್ಯಾಗ್ರಹ

ಜಳಗಾವದಲ್ಲಿ ಸೇರಿದ ವರ್ಣಾಶ್ರಮ ಪರಿಷತ್ತಿನ ವಿರುದ್ಧವಾಗಿ ಸತ್ಯಾಗ್ರಹ ಹೂಡಿದ ಸಂಬಂಧವಾಗಿ ತಾ॥ ೨೭ನೆಯ ದಿವಸ ೧೯ ಜನರು ಕೈದು ಮಾಡಲ್ಪಟ್ಟಿದ್ದಾರೆ, ಅವರಲ್ಲಿ ೩ ಜನರು ಸ್ತ್ರೀಯರಿರುವರು. ಸತ್ಯಾಗ್ರಹವು ಹಾಗೆಯೇ ಸಾಗಿದೆ.

ವರ್ಣಾಶ್ರಮ ಪರಿಷತ್ತಿನ ಗೊತ್ತುಗಳು

ನಥವ್ವಾರದಲ್ಲಿ ಶ್ರೀ ಟಿಕಾಮಾತ್ ಮಹಾರಾಜರ ಅಧ್ಯಕ್ಷತೆಯಲ್ಲಿ ಜಳಗಾವದಲ್ಲಿ ಸೇರಿದ ವರ್ಣಾಶ್ರಮ ಸ್ವರಾಜ್ಯ ಸಂಘದ ಪರಿಷತ್ತಿನಲ್ಲಿ ಸೊಲ್ಲಾಪುರದ ಆರೋಪಿಗಳಿಗೆ ಜೀವದಾನ ಕೊಡಬೇಕಾಗಿ ವ್ಹಾಯಿಸರಾಯರಿಗೆ ವಿನಂತಿ ಮಾಡಿಕೊಳ್ಳುವದು, ವರ್ಣಾಶ್ರಮ ಧರ್ಮದ ಬಗೆ ಜನರಲ್ಲೆಲ್ಲ ಜಾಗೃತಿ ಹುಟ್ಟಿಸುವದು, ಧಾರ್ಮಿಕ ಹಾಗು ಸಾಮಾಜಿಕ ವಿಷಯಗಳಲ್ಲಿ ಶಾಸನ ಸಭೆಗಳು ಕೈ ಹಾಕದಂತೆ ಭಾವೀ ರಾಜ್ಯಘಟನೆಯಲ್ಲಿ ಯೋಗ್ಯ ಏರ್ಪಾಡು ಮಾಡುವ ಕುರಿತು ದುಂಡಿಗಾಲಿಯ ಪರಿಷತ್ತಿಗೆ ಕೇಳಿಕೊಳ್ಳುವದು ಮೊದಲಾದ ವಿಷಯಗಳನ್ನು ಕುರಿತು ಗೊತ್ತುಗಳು ತೀರ್ಮಾನಿಸಲ್ಪಟ್ಟವು. ಅಸ್ಪೃಶ್ಯರು ಹಿಂದೂಗಳಿದ್ದದ್ದು ನಿಜವಿದ್ದರೂ, ಅವರು ನಾಲ್ಕು ವರ್ಣಗಳಲ್ಲಿ ಸೇರ್ಪಡೆಯಾಗುವದಿಲ್ಲವಾಗಿ ಪರಿಷತ್ತಿನವರು ಅಭಿಪ್ರಾಯಪಟ್ಟರು.

ಸತ್ಯಾಗ್ರಹಿಗಳ ಮೇಲೆ
ದರೋಡೆಯ ಆರೋಪ

ಮೀರತ ಜಿಲ್ಲೆಗೆ ಸೇರಿದ ಬಾರಾವ್ಹತದಲ್ಲಿ ೧೭ ಜನ ಸತ್ಯಾಗ್ರಹಿಗಳು ಇ.ಪಿ.ಕೋಡಿನ ೩೯೫ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟಿದ್ದು ಅವರ ಮೇಲೆ ದರೋಡೆಯ ಆರೋಪವು ಹೊರಿಸಿದ್ದಾರೆ.

ಡಾ॥ ಹರ್ಡೀಕರರ ವಿಚಾರಣೆ

ಡಾ॥ ಹರ್ಡೀಕರರ ಖಟ್ಲೆಯ ವಿಚಾರಣೆಯು ಮುಂಬಯಿಯಲ್ಲಿ ತಾ॥ ೧೦ನೆಯ ದಿವಸ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುವದಾಗಿ ತಿಳಿದು ಬರುತ್ತದೆ.

ನಡಿಯಾದದಲ್ಲಿ
ಡೊಣ್ಣೆಯ ರಾಜ್ಯ

ತಾ॥ ೩ನೆಯ ದಿವಸ ವಾನರ ದಿನದ ನಿಮಿತ್ತವಾಗಿ ನಡಿಯಾದದಲ್ಲಿ ವಾನರ ಸೇನೆಯ ಮೆರವಣಿಗೆ ಹೊರಟಿತ್ತು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಮೆರವಣಿಗೆಗೆ ಎರಡು ಸಲ ಅಡ್ಡಿ ಮಾಡಿ, ಅವರನ್ನು ಡೊಣ್ಣೆಗಳಿಂದ ಥಳಿಸಿ ವಾನರ ಸೇನೆಯ ಕಪ್ತಾನರಾದ ಪುಂಜಾಭಾಯಿಯವರನ್ನು ಸೆರೆಹಿಡಿದುಕೊಂಡು ಹೋದರು. ಸಂಜೆಯಲ್ಲಿ ವಾನರ ಸೇನೆಯವರು ಮತ್ತೆ ಮೆರವಣಿಗೆ ಹೊರಡಿಸಿ ಕಾರ್ಯಕ್ರಮವನ್ನು ಪೂರ್ತಿಗೊಳಿಸಿದರು. ಲಾಠಿ ಪ್ರಹಾರದ ಮೂಲಕವಾಗಿ ಸುಮಾರು ೧೦೦ ಜನರಿಗೆ ಗಾಯಗಳಾಗಿವೆ.

ಮುಂಬಯಿಯಲ್ಲಿ
೧೭ ಜನರಿಗೆ ಶಿಕ್ಷೆ

ಮುಂಬಯಿಯ ಉಪನಗರವಾದ ಘಾಟಕೋಪುರದಲ್ಲಿ ಜವಾಹರಲಾಲ ದಿನದ ನಿಮಿತ್ತವಾಗಿ ಬಂಧನಕ್ಕೊಳಗಾದ ಶ್ರೀ ಮಣಿಲಾಲ ಶಹಾರವರಿಗೆ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ಉಳಿದ ೧೬ ಜನರಿಗೆ ಬೇರೆ ಬೇರೆ ದಂಡ ಹೀಗೆ ಶಿಕ್ಷೆಗಳು ವಿಧಿಸಲ್ಪಟ್ಟಿವೆ. ಇವರಲ್ಲಿ ೧೨ ಜನ ಸ್ತ್ರೀಯರಿದ್ದು, ಅವರಿಗೆ ಪ್ರತ್ಯೇಕವಾಗಿ ೩೦ ರು. ದಂಡ ಇಲ್ಲವೆ ೧ ತಿಂಗಳ ಸಾದಾ ಕಾರಾಗೃಹವಾಸ ಹೀಗೆ ಶಿಕ್ಷೆಯು ದೊರೆತಿದೆ.

ಹತ್ತು ಜನ ಮಕ್ಕಳಿದ್ದರೆ
ಅವರನ್ನಾದರೂ ಅರ್ಪಿಸುತ್ತಿದ್ದೆ

ಮುಂಬಯಿಯ ಮಾಂಡವಿ ಭಾಗದ ಸರ್ವಾಧಿಕಾರಿಗಳಾದ ಶ್ರೀ ಪ್ರಾಗಜಿ ವೇಲಜಿಯವರನ್ನು ಅಧಿಕಾರಿಗಳು ಸೆರೆ ಹಿಡಿದುಕೊಂಡು ಹೋದ ಕೂಡಲೆ, ಅವರ ತಾಯಿಯವರು ಕೆಳಗಿನಂತೆ ಸಂದೇಶ ಕೊಟ್ಟರು.

"ದೇಶದ ಸಲುವಾಗಿ ಮಗನು ತುರಂಗಕ್ಕೆ ಹೋಗುತ್ತಿರುವದು ನನಗೆ ಅಭಿಮಾನಾಸ್ಪದವಾಗಿದೆ. ಅವನು ಲಾಠಿಯ ಪೆಟ್ಟುಗಳಿಗೂ ಒಳಗಾಗಿದನೆಂಬುದನ್ನು ಕೇಳಿ ಹಿಡಿಸಲಾರದಷ್ಟು ಆನಂದವಾಯಿತು. ಅಧಿಕಾರಿಗಳು ಅವನ ಮೇಲೆ ಗುಂಡಿನ ಮಳೆಗರೆದಿದ್ದರೆ ಇದಕ್ಕಿಂತ ಹೆಚ್ಚು ಸಂತೋಷವಾಗುತ್ತಿತ್ತು, ನನಗೆ ಅವನೊಬ್ಬನೇ ಮಗ. ಹತ್ತು ಜನ ಮಕ್ಕಳಿದ್ದರೆ ಅವರನ್ನಾದರೂ ದೇಶಸೇವೆಗೆ ಅರ್ಪಿಸಿಬಿಡುತ್ತಿದ್ದೆ. ಈ ಯೋಗವು ದೊರೆಯದ್ದಕ್ಕಾಗಿ ನನಗೀಗ ವಿಷಾದ ಪಡಬೇಕಾಗಿದೆ!

ಮೀರತದಲ್ಲಿ ದಬ್ಬಾಳಿಕೆ

ಮೀರತದಲ್ಲಿಯ ಕಾಂಗ್ರೆಸ್ ಕೆಲಸಗಾರರಾದ ಡಾ॥ ಗುಲಾಮ ಸಿದ್ಧೀಕ, ಮೋತೀರಾಮ, ಶ್ರೀಮತಿ ದುರ್ಗೇಶನಂದಿನಿ, ರಾಧಾಮೋಹನ ಮೊದಲಾದ ೬ ಜನರು ಕ್ರಿ. ಲಾ. ಅಮೆಂಡಮೆಂಟ್ ಕಾಯದೆಯ ೧೭ ನೇ ಕಲಮಿನನ್ವಯ ತಾ॥ ೩ನೆಯ ದಿವಸ ಕೈದು ಮಾಡಲ್ಪಟ್ಟಿದ್ದಾರೆ. ಶ್ರೀಮತಿ ದುರ್ಗೇಶನಂದಿನಿಯವರ ಪತಿ ಹಾಗು ಚಿರಂಜೀವರು ಈ ಮೊದಲೇ ಸೆರೆಮನೆಗೆ ತೆರಳಿರುವರು.

೪೦೦೦ ಜನರ ಅನ್ನತ್ಯಾಗ

ಕಾಠೇವಾಡ ಪ್ರಾಂತದ ಮಹುವಾದಲ್ಲಿಯ ಜವಳಿ ವ್ಯಾಪಾರಸ್ಥರು ಪರದೇಶಿ ಬಟ್ಟೆಗಳನ್ನು ಮಾರುವದಿಲ್ಲವೆಂಬ ವಚನ ಕೊಡಲು ನಿರಾಕರಿಸಿದ್ದರಿಂದ ಅಲ್ಲಿಯ ಸ್ವಯಂಸೇವಕರು ಅವರ ಅಂಗಡಿಗಳ ಮುಂದೆ ಅನ್ನತ್ಯಾಗ ಸತ್ಯಾಗ್ರಹ ಹೂಡಿದರು. ಸ್ವಯಂಸೇವಕರಿಗೆ ತಮ್ಮ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಪಟ್ಟಣದಲ್ಲಿಯ ಸುಮಾರು ೪೦೦೦ ಜನ ಅಬಾಲವೃದ್ಧ ಸ್ತ್ರೀಪುರುಷರೆಲ್ಲರೂ ಕೂಡಲೆ ಅನ್ನತ್ಯಾಗ ಕೈಕೊಂಡರು. ಸಾವಿರಾರು ಜನರು ಅನ್ನತ್ಯಾಗ ಕೈಕೊಂಡಿದ್ದನ್ನು ಕಂಡು ವ್ಯಾಪಾರಸ್ಥರು ತಮ್ಮಲ್ಲಿಯ ಪರದೇಶಿ ಬಟ್ಟೆಗಳನ್ನು ಒತ್ತಟ್ಟಿಗೆ ಕಟ್ಟಿಡಲು ಒಪ್ಪಿಕೊಂಡರು.

ಪ್ರೊಸಿಕ್ಯೂಟರರಿಗೆ ಬೆದರಿಕೆ ಹಾಕಿದರು.

ಚೀನೇರ ದಂಗೆಯ ಖಟ್ಲೆಯಲ್ಲಿಯ ಪೋಲೀಸ ಪ್ರೊಸೀಕ್ಯೂಟರರಾದ ಶ್ರೀ ಚಿತ್ರೆಯವರಿಗೆ ಯಾರೋ ಒಬ್ಬರು ಮುಂಬಯಿಯಿಂದ ಪತ್ರ ಬರೆದು ಖಟ್ಲೆಯು ಯೋಗ್ಯ ರೀತಿಯಿಂದ ನಡೆದುಕೊಳ್ಳಲಿಲ್ಲವಾದರೆ ಕೋರ್ಟಿನಲ್ಲಾಗಲಿ ಇಲ್ಲವೆ ಮನೆಯಲ್ಲಾಗಲಿ ೧೫ ದಿವಸಗಳಲ್ಲಿ ಗುಂಡು ಹೊಡೆದು ಕೊಲ್ಲುವೆವು ಎಂಬುದಾಗಿ ಅವರಿಗೆ ಬೆದರಿಕೆ ಹಾಕಿದ್ದಾರೆ. ಪತ್ರದ ಕೆಳಗಡೆಯಲ್ಲಿ ಬಂಗಾಲಿ ತರುಣ ಎಂಬುದಾಗಿ ಅಕ್ಷರಗಳು ಬರೆಯಲ್ಪಟ್ಟಿವೆ.

ಮೌಲಾನಾ ಅಜಾದ್‌ರಿಗೆ ಅಸ್ವಸ್ಥತೆ

ಮೀರತ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಮೌಲಾನಾ ಅಬ್ದುಲ್ ಕಲಾಮ್ ಆಜಾದರು, ಕಾಲು ಜಾತಿ ಜ್ವರದಿಂದ ಬಹು ಅಸ್ವಸ್ಥರಾಗಿರುವರೆಂದು ತಿಳಿದುಬರುತ್ತದೆ. ಈ ಸಲ ತುರುಂಗಕ್ಕೆ ಹೋದ ಎಲ್ಲ ಮುಖಂಡರೂ ಜೇಲಿನಲ್ಲಿ ಒಂದಿಲ್ಲೊಂದು ಜಡ್ಡಿನಿಂದ ಬಳಲುತ್ತಲೇ ಇರುವರು. ಇನ್ನಾದರೂ ಈ ರಹಸ್ಯವನ್ನು ಬಿಡಿಸುವರೇ.

ಪಾನಾಮಾದಲ್ಲಿ ಭಯಂಕರ ಬಂಡು

ಪಾನಾಮಾದಲ್ಲಿಯ ಕೆಲವು ಜನ ಒಂದು ಸಾರಿ ಒಮ್ಮಿಂದೊಮ್ಮೆ ಪ್ರೆಸಿಡೆಂಟರ ಅರಮನೆಯ ಮೇಲೆ ಹಲ್ಲೆಮಾಡಿ ಪ್ರೆಸಿಡೆಂಟರಾದ ಆರೋಸಮೇನಾರವರನ್ನು ಕೈದು ಮಾಡಿಕೊಂಡು ಹೋದರು.

ಸತ್ಯಾಗ್ರಹಕ್ಕೆ ಮುಂಬಯಿಯ ಬಲಿದಾನ

ಸತ್ಯಾಗ್ರಹ ಚಳವಳಿಯು ಪ್ರಾರಂಭವಾದಂದಿನಿಂದ ೧೫ನೆಯ ತಾರೀಖಿನ ವರೆಗೆ ಮುಂಬಯಿಯಲ್ಲಿ ಒಟ್ಟಿಗೆ ೩೩೮೪ ಜನರಿಗೆ ಚಳವಳಿಯ ಮೂಲಕವಾಗಿ ಶಿಕ್ಷೆಯಾಗಿದ್ದು, ಅದರಲ್ಲಿ ೧೧೦ ಜನರು ಸ್ತ್ರೀಯರು ಇರುತ್ತಾರೆ.

ಶ್ರೀ ಕಿಡವಾಯಿಯವರಿಗೆ ಬಿಡುಗಡೆ

ಕಾಯದೆಭಂಗದ ಸಲುವಾಗಿ ೬ ತಿಂಗಳ ಶಿಕ್ಷೆಗೆ ಗುರಿಯಾದ ಸಂಯುಕ್ತ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ರಫಿ ಅಹಮ್ಮದ ಕಿಡವಾಯಿಯವರು, ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ|| ೩ನೆಯ ದಿವಸ ಗೋರಖಪುರ ಜೇಲಿನಿಂದ ಬಿಡುಗಡೆ ಹೊಂದಿದರು.

||ಶ್ರೀ ಸಿದ್ಧೇಶ್ವರ ಪ್ರಸನ್ನ||

ಔದ್ಯೋಗಿಕ, ಒಕ್ಕಲತನ ಮತ್ತು ದನಗಳ ಪ್ರದರ್ಶನ, ವಿಜಾಪೂರ,

ಶ್ರೀ ಸಿದ್ಧೇಶ್ವರ ಜಾತ್ರೆಯ ಸಮಯದಲ್ಲಿ ತಾ|| ೧೮-೧-೩೧ ರಿಂದ ೧೭-೧-೩೧ರ ವರೆಗೆ ವಿಜಾಪುರದಲ್ಲಿ ಈ ಪ್ರದರ್ಶನವು ನಡೆಯುವದು. ಹಿಂದುಸ್ಥಾನದಲ್ಲಿ ಸಿದ್ಧಪಡಿಸಿದ ಮಾಲನ್ನು ಇಡಲು ಕಳುಹಿಸಿದಲ್ಲಿ ಅವುಗಳಿಗೆ ಬಹುಮಾನ ದೊರೆಯಬಹುದು. ಸ್ವದೇಶಿ ಮಾಲಿನ ಉತ್ತೇಜನವಾಗಬೇಕೆಂದು ಫೀ ಏನೂ ಇಟ್ಟಿರುವದಿಲ್ಲ. ರೇಲವೇ ಫ್ರೀಟು ಮುಂಗಡವಾಗಿ ಕಳುಹಿಸಿದಲ್ಲಿ ೫೦ ರೂಪಾಯಿ ಕಿಂತ ಹೆಚ್ಚಿನ ಮಾಲನ್ನು ತಿರುಗಿ ಕಳುಹಿಸುವದರಲ್ಲಿ ಬರುವದು. ಎಲ್ಲರೂ ತಮ್ಮ ಮಾಲನ್ನು ಕಳುಹಿಸಬೇಕಾಗಿ ವಿನಂತಿ.

ವಿಜಾಪುರ { ಜಿ. ಎಂ. ವಸ್ತ್ರದ
ಸೆಕ್ರೆಟರಿ
ಶ್ರೀ ಸಿದ್ಧೇಶ್ವರ ಸಂಸ್ಥೆ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಗಳಿಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಾಚ, ಟಾಯಂಪೀಸು ದುರುಸ್ತಿಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ನೋಡಿದರಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ. ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಎಲ್ಲ ತರದ ಚಳಿಜ್ವರದ ಮೇಲೆ ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೮-೦

ಏಜಂಟರಿಗೆ ಧಾರಾಳವಾದ ಕಮೀಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ.
ಕಿಲ್ಲಾ ೭೦ ಓಣಿ, ಬಾಗಲಕೋಟೆ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೨೩ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಾದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧಾರವಾಡ
ವಕೀಲರು ಬಾಗಲಕೋಟೆ.

ಹಿಟ್ಟಿನ ಗಿರಣಿ ಮಾರತಕ್ಕದ್ದಿದೆ.

ರಸ್ಟನ ಮೇಕರ್ ಇಂಜಿನ್ ೮|| ಬಿ. H. P. ಆದದ ಚಕ್ಕಿ ಸಹಿತ ಸದ್ಯಕ್ಕೆ ಚಾಲು ಇದ್ದದ್ದು ಮಾರುವದಿದೆ. ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟೆ.

ಈ ಪತ್ರಿಕೆಯು ವೆಂಕಟೇಶ ಕೇಶವಾಚಾರ್ಯ ಶಹೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೆ. ನಂ. ಬಿ. ೨೭೮೮ ನಿತ್ಯಸಂಚಿಕೆಯು. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥-मनु.

ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:- ವೆಂಕಟೇಶ ಭೀಮರಾವ ಆಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಮಂಗಳವಾರ ಮಿತಿ ಪುಷ್ಯ ಬಹುಳ ೨ ಶಕೆ ೧೮೫೨ ತಾ॥ ೬—೧—೩೧ [ಸಂಚಿಕೆ ೧೫೭

ಹಿಂದುಸ್ಥಾನದ ಮೇಲೆ ವಜ್ರಾಘಾತ.

ಮೌಲಾನಾ ಮಹಮ್ಮದ ಅಲ್ಲಿಯವರು ಮರಣಹೊಂದಿದರು.

[ತಂತಿಯ ವಾರ್ತೆ ಮುಂಬಯಿ. ತಾ| ೫]

ಬಂಡೀಗಾಲಿಯ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಪ್ರಸಿದ್ಧ ಮುಖಂಡರಾದ ಮೌಲಾನಾ ಮಹಮ್ಮದ ಅಲ್ಲಿಯವರು ಉಬ್ಬಸದ ಮೂಲಕವಾಗಿ ಕೆಲವು ದಿನಗಳ ವರೆಗೆ ಹಾಸಿಗೆ ಹಿಡಿದಿದ್ದರಷ್ಟೇ. ಅವರು ಈಗ ಅಲ್ಲಿಯೇ ಮರಣ ಹೊಂದಿದರೆಂಬ ದುಃಖದಾಯಕ ವಾರ್ತೆಬಂದಿದೆ. ಈ ಮೂಲಕ ವಾಗಿ ಇಂದು ಮುಂಬಯಿಯಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಉದ್ಯೋಗ ವ್ಯವಹಾರಗಳೆಲ್ಲವೂ ನಿಲ್ಲಿಸಲ್ಪಟ್ಟಿದ್ದವು.

ಕಲಕತ್ತೆಯಲ್ಲಿ ಹರತಾಳ

(ತಂತಿಯ ವಾರ್ತೆ)

ಮಹಮ್ಮದ ಅಲ್ಲಿಯವರ ಮರಣದ ದುಃಖದಾಯಕ ವಾರ್ತೆಯನ್ನು ಕೇಳಿ ಕಲಕತ್ತೆಯಲ್ಲಿಯೂ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಮುಂಬಯಿಯಲ್ಲಿ

ಮತ್ತೆ ಬಡಿಗೆಯ ರಾಜ್ಯ

(ತಂತಿಯ ವಾರ್ತೆ)

ತಾ॥ ೫ ನೆಯ ದಿವಸ ಗಾಂಧಿ ದಿನದ ನಿಮಿತ್ತವಾಗಿ ಮೆರವಣಿಗೆಗಳ ಹೊರಡಿಸಲ್ಪಟ್ಟಿದ್ದವು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಅವುಗಳಿಗೆ ಅಡ್ಡಿ ಮಾಡಿ ಜನರನ್ನು ಲಾಠಿಗಳಿಂದ ಥಳಿಸಿದರು. ಅನೇಕರಿಗೆ ಗಾಯಗಳಾಗಿವೆ.

ಅಸಫ ಅಲ್ಲಿಯವರಿಗೆ ಬಿಡುಗಡೆ

(ತಂತಿಯ ವಾರ್ತೆ)

ಕಾಯದೆ ಭಂಗದ ಮೂಲಕವಾಗಿ ಶಿಕ್ಷೆಗೆ ಗುರಿಯಾದ ದಿಲ್ಲಿಯ ಸರ್ವಾಧಿಕಾರಿಗಳಾಗಿದ್ದ ಅಸಫ ಅಲ್ಲಿಯವರು, ಹಾಯಕೋರ್ಟಿನ ಅಪ್ಪಣೆಯಿಂದ ತುರಂಗದಿಂದ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಬಂಡೀಗಾಲಿಯ ಪರಿಷತ್ತಿನ ಕಾರ್ಯಕಲಾಪ

ತಾ| ೨೧ನೇ ದಿವಸ ರಾತ್ರಿಯಲ್ಲಿ ಅಲ್ಪಸಂಖ್ಯಾಕ ಉಪಮಂಡಳದವರು ಒಂದು ತಾಸಿನವರೆಗೆ ತಮ್ಮ ಕಾರ್ಯವನ್ನು ಮುಂದೆ ಸಾಗಿಸಿದರು. ಶ್ರೀಮತಿ ಸುಬ್ಬರಾಯನ್‌ರು ಹಿಂದೀ ಸ್ತ್ರೀಯರ ಪರವಾಗಿ ತಮ್ಮ ಮತಗಳನ್ನು ಸಭೆಯ ಮುಂದೆ ಮಂಡಿಸಿದರು. ಬಳಿಕ ಸರ್ ಚಿಮನಲಾಲ ಸೆಟಲ್‌ವಾಡ ಮತ್ತು ಮುಖ್ಯ ಪ್ರಧಾನರು ಹಿಂದೂ ಮುಸಲ್ಮಾನರಲ್ಲಿರುವ ಮತಭೇದವನ್ನು ಬಗೆಹರಿಸಲು ವಿಂತಿ ಮಾಡಿಕೊಂಡರು. ತಮ್ಮ ಧರ್ಮ, ಶಿಕ್ಷಣ ಹಾಗೂ ಸಂಸ್ಕೃತಿ ಇವುಗಳ ಸಂರಕ್ಷಣೆಯ ವಿಷಯವಾಗಿ ಯೋಗ್ಯ ಆಶ್ವಾಸನ ದೊರೆತರೆ ಮುಸಲ್ಮಾನರು ಸಂಯುಕ್ತ ಮತದಾನ ಸಂಘಗಳ ಯೋಜನೆಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕಾಗಿ ಸರ್ ಸೆಟಲ್‌ವಾಡರು ತಮ್ಮ ಭಾಷಣದಲ್ಲಿ ಹೇಳಿದರು. ಅಲ್ಪಸಂಖ್ಯಾಕರ ಹಿತಸಂರಕ್ಷಣೆಯ ಸಂಬಂಧವಾಗಿ ಪಾರ್ಲಿಮೆಂಟಿನವರು ತಮಗೆ ಶಕ್ಯವಿದ್ದಷ್ಟು ಪ್ರಯತ್ನ ಮಾಡುವರೆಂಬುದಾಗಿ ಮುಖ್ಯ ಪ್ರಧಾನರು ಆಶ್ವಾಸನೆ ಕೊಟ್ಟು ೬ನೆ ತಾರೀಖಿಗೆ ಸಭೆಯು ಮತ್ತೆ ಕೂಡುವದರೊಳಗಾಗಿ ಎಲ್ಲರೂ ತಮ್ಮ ತಮ್ಮ ಪ್ರಶ್ನೆಗಳನ್ನು ಬಿಡಿಸಿಕೊಂಡು ಬರಬೇಕೆಂದೂ, ಹಿಂದುಸ್ಥಾನದ ಅಂತಸ್ಥ ವಿಷಯದಲ್ಲಿ ಬ್ರಿಟಿಶ್ ಪ್ರತಿನಿಧಿಗಳು ಕೈಹಾಕುವದಿಲ್ಲವೆಂದೂ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸರ್ ಸೆಟಲವಾಡ ಹಾಗು ಮುಖ್ಯ ಪ್ರಧಾನರು ವಿನಂತಿ ಮಾಡಿಕೊಂಡಿದ್ದನ್ನು ಅನುಸರಿಸಿ, ಹಿಂದೂ ಮುಸಲ್ಮಾನರಲ್ಲಿ ಐಕ್ಯವನ್ನುಂಟು ಮಾಡುವ ಉದ್ದೇಶವಾಗಿ ಪ್ರತಿನಿಧಿಗಳು ತಮ್ಮ ತಮ್ಮೊಳಗೆ ವಿಚಾರ ನಡೆಸಿದ್ದಾರೆ. ಸರ್ ಸೆಟಲವಾಡರು ನುಡಿದು ತೋರಿಸಿದಂತೆ, ಬಂಗಾಲ ಪ್ರಾಂತದ ಸಂಬಂಧವಾಗಿ ಒಪ್ಪಂದವನ್ನು ಮಾಡಿಕೊಳ್ಳಲು ನಾಮದಾರ ಆಗಾಖಾನರು ಮಿ| ಗಜನವಿಯವರಿಗೆ ಅಧಿಕಾರ ಕೊಟ್ಟಿದ್ದಾರೆ. ಮಂಗಳವಾರದೊಳಗಾಗಿ ಒಡಂಬಡಿಕೆಯುಂಟಾಗುವ ಸಂಭವವಿದೆಯಾಗಿ ಗಜನವಿಯವರು ಅಭಿಪ್ರಾಯಪಟ್ಟರು.

ಬ್ರಿಟಿಶ್ ಪ್ರತಿನಿಧಿಗಳಲ್ಲಿಯು ಮತಭೇದ

ಬಂಡೀಗಾಲಿಯ ಪರಿಷತ್ತಿನಲ್ಲಿ ಹಿಂದೂ ಮುಸಲ್ಮಾನರ ಪ್ರಶ್ನೆಯ ಸಂಬಂಧವಾಗಿ ಬ್ರಿಟಿಶ್ ಪ್ರತಿನಿಧಿಗಳಲ್ಲಿ ಮತಭೇದ ಉಂಟಾದ್ದನ್ನು ಲಕ್ಷಿಸಿ ಅಲ್ಲಿಯ "ನೇಶನ್" ಪತ್ರಿಕೆಯು ಬ್ರಿಟಿಶ್ ಪ್ರತಿನಿಧಿಗಳಿಗೆ ಕೆಳಗಿನಂತೆ ಬುದ್ಧಿ ಹೇಳಿದೆ

ಹಿಂದು ಮುಸಲ್ಮಾನರ ಪ್ರಶ್ನೆಯು ಅಷ್ಟೇನೂ ಮಹತ್ವದ್ದಿರುವದಿಲ್ಲ. ಮಧ್ಯವರ್ತಿ ಸರಕಾರದ ವಿಷಯವು ಬಹು ಮಹತ್ವದಿದೆ. ಕೆಲವು ವಿಷಯಗಳ ಸಂಬಂಧವಾಗಿ ಪರಿಷತ್ತಿನಲ್ಲಿ ಈಗ ನಿರ್ಣಯಗಳಾಗಿವೆ. ಬ್ರಿಟಿಶ ಪ್ರತಿನಿಧಿಗಳಲ್ಲಿ ಮತಭೇದವುಂಟಾದ ಕಾರಣದ ಉಳಿದ ವಿಷಯಗಳನ್ನು ನಿರ್ಣಯಿಸದೆಯೇ ಬಿಟ್ಟುಕೊಟ್ಟರೆ, ಅದು ಘಾತಕವಾಗದೆ ಉಳಿಯದು.

ಸರಕಾರದವರು ನಾಚಿಕೆ ಪಡಬೇಕು.

ಮಧ್ಯವರ್ತಿ ಸರಕಾರದ ಜವಾಬದಾರಿಯ ವಿಷಯವಾಗಿ ಸಂಸ್ಥಾನಿಕ ಉಪಮಂಡಳದಲ್ಲಿ ಭಾಷಣ ಮಾಡುವಾಗ, ಸರ್ ತೇಜಬಹಾದ್ದೂರ ಸಪ್ರೂ ಅವರು ಸರಕಾರದವರು ಈಗ ಕೈಕೊಂಡಿರುವ ದಬ್ಬಾಳಿಕೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕೆಳಗಿನಂತೆ ವ್ಯಕ್ತಪಡಿಸಿದರು,

೫೦೦೦೦—೬೦೦೦೦ ದಷ್ಟು ಜನರನ್ನು ಜೇಲಿನಲ್ಲಿ ಕೊಳೆಯಿಸುವದು ಯಾವ ಸರಕಾರಕ್ಕೂ ಭೂಷಣಾಸ್ಪದವಾಗಿರುವದಿಲ್ಲ. ಅವರು ತಮ್ಮ ಪದ್ಧತಿಗಳಲ್ಲಿ ತಪ್ಪು ಹಾದಿಯನ್ನು ಹಿಡಿದಿರಬಹುದಾಗಿದ್ದರೂ, ವಿಶ್ವಾಸವನ್ನು ಕಳೆದುಕೊಂಡಿರುವದಿಲ್ಲ! ಅವರು ಹೇಗೆ ಕಷ್ಟನಷ್ಟಗಳನ್ನು ಸಹಿಸುತ್ತಿರುವರು ಬೇರೆ ಹಾಕಲಿ. ನಾನೇನೂ ಹೀಗೆ ಮಾತಾಡುತ್ತಿರುವದಿಲ್ಲ. ನಿಜವಾಗಿಯೂ ಹಿಂದೂ ತರುಣ-ತರುಣಿಯರು ತಮ್ಮ ವಿಚಾರಗಳನ್ನು ಸಂಕಟಮಯವಾದ ವಿಷಯಗಳ ಕಡೆಗೆ ಹೊರಳಿಸಹತ್ತಿದ್ದಾರೆ. ದಂಡಿನ ಕಾಯಿದೆಯಿಂದಾಗಲಿ ಇಲ್ಲವೆ ಆರ್ಡಿನನ್ಸುಗಳಿಂದಾಗಲಿ ಸರಕಾರದವರು ತಮ್ಮ ರಾಜ್ಯಕಾರಭಾರವನ್ನು ಸಾಗಿಸುತ್ತಿರುವದು ನಿಜವಾಗಿಯೂ ಲಾಂಛನಾಸ್ಪದವಾದ ವಿಷಯವಾಗಿದೆ.

ಈಗೇನೂ ಕಾಲವು ಅಷ್ಟು ಕಳೆದು ಹೋಗಿಲ್ಲ. ಕಳೆದು ಹೋದ ವಿಶ್ವಾಸವನ್ನು ಸಂಪಾದಿಸಿಕೊಳ್ಳಲು ಬ್ರಿಟಿಶರು ಪ್ರಯತ್ನ ಮಾಡಬೇಕು. ಈ ಬಗ್ಗೆ ಯೋಗ್ಯವಾದ ಉಪಾಯಗಳನ್ನು ಕೈಕೊಳ್ಳದಿದ್ದಲ್ಲಿ, ಹಿಂದುಸ್ಥಾನ ಮತ್ತು ಬ್ರಿಟಿಶರ ವಿಷಯವಾಗಿ ಯಾರಿಗೂ ಸ್ವಲ್ಪಾದರೂ ಸಮಾಧಾನವೆನಿಸುವದಿಲ್ಲ. ಅವಿಶ್ವಾಸವನ್ನು ಹೋಗಲಾಡಿಸಲು ವಿಶ್ವಾಸವೇ ದಿವ್ಯವಾದ ಔಷಧಿಯಾಗಿದೆಯೆಂದು ಬ್ರಿಟಿಶರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಇರ್ವಿನ್ ಸಾಹೇಬರು ಗೋಳಿಟ್ಟರು

ಹಿಂದುಸ್ಥಾನದ ಈಗಿನ ವ್ಹಾಯಿಸರಾಯರಾಗಿರುವ ಲಾರ್ಡ ಇರ್ವಿನ ಸಾಹೇಬರು ಕೆಳಗಿನಾಶಯದ ಒಂದು ತಂತಿಯನ್ನು ಲಂಡನಕ್ಕೆ ಕಳಿಸಿರುವರಾಗಿ ತಿಳಿದು ಬರುತ್ತದೆ.

ಎಷ್ಟೋ ಆರ್ಡಿನನ್ಸುಗಳನ್ನು ಹೊರಡಿಸಿ ನೋಡಿದೆ ಆದರೂ ಸತ್ಯಾಗ್ರಹ ಚಳವಳಿಯು ಸಾಯಲೊಲ್ಲದಾಗಿದೆ. ಪೋಲೀಸರು ಲಾಠಿಗಳಿಂದ ಲಕ್ಷಾವಧಿ ಜನರ ತಲೆ ಒಡೆದು ನೋಡಿದರು. ಆದರೂ ಕಾಯಿದೆಭಂಗವು ತಗ್ಗಲೊಲ್ಲದಾಗಿದೆ. ತೀಕ್ಷ್ಣತರವಾದ ದಬ್ಬಾಳಿಕೆಯನ್ನು ಅವಲಂಬಿಸಿದರೂ ಜನರು ಮಣಿಯುವ ಹಾಗಿಲ್ಲ. ಹಿಂದುಸ್ಥಾನಕ್ಕೆ ಕೊಡತಕ್ಕಂಥ ಹಕ್ಕುಗಳನ್ನು ಕೊಟ್ಟುಬಿಡಿರಿ. ಇಲ್ಲವಾದರೆ ಹಿಂದುಸ್ಥಾನದ ತುಂಬೆಲ್ಲ ದಂಡಿನ ಕಾಯದೆಯನ್ನು ಪ್ರಾರಂಭಿಸಬೇಕಾಗುವದು ನೋಡಿಕೊಳ್ಳಿರಿ!

ದಬ್ಬಾಳಿಕೆಯನ್ನು ಇನ್ನು ಸಾಕು ಮಾಡಿರಿ

ವರಿಷ್ಠ ಕಾಯದೆ ಮಂಡಳದ ಸಭಾಸದರಾದ ಶ್ರೀ ಬಿ ಆರ್. ಪುರಿಯವರು ಈ ಸಲದ ಅಧಿವೇಶನದಲ್ಲಿ ಮುಂದಿನದೊಂದು ಸೂಚನೆಯನ್ನು ಸಭೆಯ ಮುಂದೆ ಮಂಡಿಸತಕ್ಕವರಿದ್ದಾರೆ

ಸರಕಾರದವರು ಈಗ ಕೈಕೊಂಡಿರುವ ದಬ್ಬಾಳಿಕೆಯ ವೃತ್ತಿಯನ್ನು ಈ ಸಭೆಯು ನಿಷೇಧಿಸುತ್ತದೆ ಮತ್ತು ಸರಕಾರ ಹಾಗು ಪ್ರಜೆಗಳನ್ನು ಸಂಕಟದಲ್ಲಿ ಸಿಕ್ಕಿಸುವಂತಹ ದಬ್ಬಾಳಿಕೆಯ ವೃತ್ತಿಯನ್ನು ಒಮ್ಮೆಲೆ ನಿಲ್ಲಿಸಿ, ಶಾಂತವಾದ ಉಪಾಯಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ಗವ್ಹರ್ನರ ಜನರಲ್ ಇನ್ ಕೌನ್ಸಿಲರವರಿಗೆ ಕೇಳಿಕೊಳ್ಳುತ್ತದೆ.

ಶಿಕಾರಪುರ ಜೇಲಿನಲ್ಲಿ ಅನ್ನತ್ಯಾಗ

ಜೇಲಿನಲ್ಲಿ ತಮಗೆ ಕೀಳು ತರದ ಆಹಾರವು ಕೊಡಲ್ಪಡುತ್ತಿರುವದರ ನಿಷೇಧಾರ್ಥವಾಗಿ, ಶಿಕಾರಪುರ ಜೇಲಿನಲ್ಲಿಯ ಎಲ್ಲ ರಾಜಕೀಯ ಕೈದಿಗಳು ಮೂರು ದಿನಗಳಿಂದ ಅನ್ನತ್ಯಾಗ ಕೈಕೊಂಡಿದ್ದಾರೆ.

ದಿಲ್ಲಿಯಲ್ಲಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ.

೩೨ ಜನರನ್ನು ಹಿಡಿದರು.

ದಿಲ್ಲಿಯ ಪೋಲೀಸ ಅಧಿಕಾರಿಗಳು ತಾ|| ೩ನೇ ದಿವಸ ಅಲ್ಲಿಯ ಕಾಂಗ್ರೆಸ್ ಕಚೇರಿಗೆ ಮುತ್ತಿಗೆಯನ್ನು ಹಾಕಿ ಒಂದು ತಾಸಿನವರೆಗೆ ಅದನ್ನು ಝಡತಿ ಮಾಡಿದರು. ಆಕ್ಷೇಪಾರ್ಹವಾದ ಕಾಗದ ಪತ್ರಗಳೇನೂ ದೊರೆಯಲಿಲ್ಲ. ನಂತರ ಅವರು ೩೨ ಜನ ಸ್ವಯಂಸೇವಕರನ್ನು ಸೆರೆ ಹಿಡಿದುಕೊಂಡು ಹೋದರು.

ಮಹಾತ್ಮರನ್ನು ಬಿಡುಗಡೆ ಮಾಡಿರಿ

ತಮ್ಮ ಕಾರ್ಯಭಾರವನ್ನು ತಾವೇ ಸಾಗಿಸಿಕೊಳ್ಳಲು ಹಿಂದೀ ಜನರು ಸಮರ್ಥರಾಗಿರುವರೆಂಬುವದು ಹಾಗು ಅವರಿಗೆ ಅವರ ಹಕ್ಕುಗಳನ್ನು ಕೊಡಬೇಕೆಂಬುವದು ಮಹಾತ್ಮರ ಛಲದಿಂದ ಬ್ರಿಟಿಶರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಒಂದು ಗಾಲಿಯ ಪರಿಷತ್ತಿನಲ್ಲಿ ಇದಕ್ಕೆ ಮಾನ್ಯತೆ ದೊರೆತಲ್ಲಿ, ಅವರು ಬ್ರಿಟಿಶರಿಗೆ ಸ್ನೇಹಿತರಾಗಿ ನಿಂತುಕೊಂಡು, ಹೊಸರಾಜ್ಯದಾಡಳಿತವು ಸುವ್ಯವಸ್ಥಿತವಾಗಿ ಸಾಗುವಂತೆ ಮಾಡಲು ತರುಣ ಜನರ ಮನವೊಲಿಸುವರು. ಹೀಗಾಗದಿದ್ದರೆ ಮಾತ್ರ ಅವರು ಬ್ರಿಟಿಶರಿಗೆ ಪ್ರಬಲ ವಿರೋಧಕರಾಗಿ ನಿಲ್ಲುವರು. ಮಧ್ಯವರ್ತಿ ಸರಕಾರದ ಅಧಿಕಾರಿಗಳ ಹಿತಸುಕ್ಕೆ ಪರಿಷತ್ತಿನಲ್ಲಿ ನಿರ್ಣಯವಾದ ಕೂಡಲೆ, ಮಹಾತ್ಮರನ್ನು ಬಿಡುಗಡೆ ಮಾಡಿ ವ್ಹಾಯಿಸ್‌ರಾಯರೊಡನೆ ಮಾತುಕತೆಯಾಡಲು ಅವರನ್ನು ಆಮಂತ್ರಿಸಿದಲ್ಲಿ, ಕೂಡಲೆ ಸಂಪೂರ್ಣವಾದ ಶಾಂತತೆಯು ನೆಲೆಗೊಳ್ಳುವದು. ಎಂಬುದಾಗಿ ಮಿ. ಹೊರೇಸ ಅಲೆಕ್ಝಾಂಡರರವರು "ಸ್ಪೆಕ್ಟೇಟರ" ಪತ್ರಿಕೆಯಲ್ಲಿ ಒಂದ ಲೇಖವನ್ನು ಬರೆದಿದ್ದಾರೆ.

ಲಖನೌದಲ್ಲಿ ಮುಖಂಡರಿಗೆ ಕೈದು

ಲಖನೌ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಸಿ. ಬಿ. ಗುಪ್ತರು ಅಲ್ಲಿಯ ಸ್ವಾಗತ ಸೇವಕ ಸಂಸ್ಥಾನದ ಜಗದಂಬಾ ಪ್ರಸಾದರವರೊಂದಿಗೆ ತಾ|| ೧ನೆಯ ದಿವಸ ಸೆರೆ ಹಿಡಿಯಲ್ಪಟ್ಟಿದ್ದಾರೆ. ಪಿಕೆಟಿಂಗದ ಮೂಲಕವಾಗಿ ೨ ಜನ ಸ್ವಯಂಸೇವಕರು ಬಂಧನಕ್ಕೊಳಗಾಗಿದ್ದಾರೆ. ಕೃಷ್ಣಕುಮಾರ ಶ್ರೀವಾಸ್ತವರು ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮಹಾತ್ಮರ ತೂಕವು ಹೆಚ್ಚಾಯಿತು

ತಾವು ಈಗ ಸ್ವಸ್ಥತೆಯಿಂದ ನೆಟ್ಟಗಿದ್ದು ತಮ್ಮ ತೂಕವು ೧|| ಪೌಂಡು ಹೆಚ್ಚಾಗಿರುವದೆಂದೂ, ಪ್ರತಿ ದಿನದಲ್ಲಿಯೂ ನಿತ್ಯಕೆಲಸ ಎರಡು ತಾಸುಗಳವರೆಗೆ ಕಾಲುವೇಳೆ ನೂಲು ತೆಗೆಯುತ್ತಿದ್ದರೂ ತಮಗೆ ಏನೂ ದಣವು ಆಗುವದಿಲ್ಲವೆಂದು ಮಹಾತ್ಮಾ ಗಾಂಧಿಯವರು ಶ್ರೀಮತಿ ಮೀರಾಬೇನರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಜಪ್ತಿಯ ಜುಲುಮೆ

(ಸ್ವಂತ ಸುದ್ದಿಗಾರರಿಂದ.)

ಇಲ್ಲಿ ಸತ್ಯಾಗ್ರಹಿಗಳಿಗೆ ಆದ ದಂಡದ ಹಣ ವಸೂಲು ಮಾಡುವದು ಒಳ್ಳೇ ಜೋರಿನಿಂದ ಪ್ರಾರಂಭವಾಗಿದೆ. ಚಂದನ ಗಿಡ ಕಡಿದ ಬಗ್ಗೆ ಶ್ರೀ ಕುಳೇನೂರ ಬಂಧುಗಳಿಗೆ ೨೫೦ ರೂ ದಂಡವಾಗಿತ್ತು. ಪೋಲಿಸ ಅಧಿಕಾರಿಗಳು ಅವರ ಮನೆಯನ್ನು ಮುತ್ತಿ ಕೆಲವು ಭಾಂಡಿಗಳನ್ನು ಜಪ್ತಿ ಮಾಡಿಕೊಂಡು ಹೋದರು. ಪೋಲೀಸರು ಮತ್ತೊಬ್ಬರ ಮನೆಗಾದರೂ ಜಪ್ತಿಯ ವಾರಂಟು ತೆಗೆದುಕೊಂಡು ಹೋದ್ದರು. ಮನೆಯ ಹಿರಿಯರು ಊರಲ್ಲಿಲ್ಲ ಆದ್ದರಿಂದ ಹಿಂದುಗಡೆ ಬನ್ನಿರಿ ಎಂದು ಮನೆಯಲ್ಲಿದ್ದವರು ಅವರಿಗೆ ತಿಳಿಸಿದರು. ರೂಪಾಯಿಗಳನ್ನು ಈಗ ಕೊಡದಿದ್ದರೆ ಮನೆಯೊಳಗಿನ ಸಾಮಾನುಗಳನ್ನು ಜಪ್ತಿ ಮಾಡುತ್ತೇವೆಂದು ಜಮಾದಾರ ಹೇಳಿದರು. ನಿಮ್ಮ ಹುಡುಗನನ್ನು ಕಪಾಳಕ್ಕೆ ಹೊಡೆದು ಮನೆಯಲ್ಲಿ ಕೂಳ್ಳಿರಿಸಿದ್ದರೆ ನಾವಿಲ್ಲಿ ನಿಮ್ಮ ಮನೆಗೆ ಜಪ್ತಿಗೆ ಬರುತ್ತಿದ್ದೆವು ಎಂದು ಒಬ್ಬ ಪೋಲೀಸನು ನುಡಿದನು. ಮನೆಯವರು ನಿರುಪಾಯರಾಗಿ ಕೇರಿ ಕಡೆಯವರಿಂದ ರೂಪಾಯಿ ತಂದುಕೊಟ್ಟು ಅವರನ್ನು ಕಳಿಸಿಕೊಟ್ಟರು.

ಸಿಂದಿಯವನ ಕುದುರೆಯು ಮಾಯವಾಯಿತು

ಕಿತ್ತೂರಿನ ಬಳಿಯಲ್ಲಿರುವ ಶಿಗೇಹಳ್ಳಿಯ ಸಿಂದೀ ಅಂಗಡಿಗೆ ಸಿಂದಿ ತುಂಬಿದ ಪಕಾಲಿಯನ್ನು ಹೇರಿಕೊಂಡು ಬರುವ ಕುದುರೆಯನ್ನು ಯಾರೋ ಓಡಿಸಿಕೊಂಡು ಹೋಗಿ ಅದನ್ನು ಮಟಾಮಾಯ ಮಾಡಿದ್ದಾರೆ.

ಗದಗಿನಲ್ಲಿ ಡಾ. ಹುಯಿಲಗೋಳರ ಮನೆಗೆ ಜಪ್ತಿ.

(ಸ್ವಂತ ಸುದ್ದಿಗಾರರಿಂದ)

೧೪೪ ನೆಯ ಕಲಮನ್ನು ಮೀರಿದ್ದಕ್ಕಾಗಿ ಡಾ. ಹುಯಿಲಗೋಳ ವೆಂಕಟರಾಯರಿಗೆ ವಿಧಿಸಲ್ಪಟ್ಟ ೩೦೦ ರೂ. ದಂಡವನ್ನು ವಸೂಲ ಮಾಡಲು ಪೋಲೀಸ ಅಧಿಕಾರಿಗಳು ತಾ|| ೩ನೆಯ ದಿವಸ ಅವರ ಮನೆಗೆ ಹೋಗಿ, ರೂಪಾಯಿಗಳನ್ನಾಗಲಿ ಇಲ್ಲವೆ ಭಂಗಾರದ ಆಭರಣಗಳನ್ನಾಗಲಿ ಕೊಡಲು ಅವರಿಗೆ ಕೇಳಿದರು. ನಾನು ನನ್ನ ಕೈಯಿಂದ ಏನನ್ನೂ ಎತ್ತಿ ಕೊಡುವದಿಲ್ಲ. ನಿಮಗೆ ಬೇಕಾದ ಪದಾರ್ಥವನ್ನು ನೀವೇ ತೆಗೆದುಕೊಂಡು ಹೋಗಿರಿ. ಎಂದು ಡಾ|| ಉತ್ತರ ಕೊಟ್ಟರು. ಮನೆಯಲ್ಲಿ ಬೆಲೆಬಾಳುವ ಸಾಮಾನುಗಳು ಏನೂ ಸಿಗದ್ದರಿಂದ ಪೋಲೀಸ ಅಧಿಕಾರಿಗಳು ನಿರುಪಾಯರಾಗಿ ಹೊರಟು ಹೋದರು.

ಕಳೆದ ಎರಡು ವಾರಗಳಿಂದ "ಉಲ್ಲಾಲ್ಯಾಂಡ ಸನ್ಸ" ಎಂಬ ಬಳೆ ಅಂಗಡಿಯ ಮೇಲೆ ಪಿಕೆಟಿಂಗ ನಡೆದಿದ್ದು, ಅಂಗಡಿಯಲ್ಲಿಯ ವ್ಯಾಪಾರವು ತೀರ ಕಟ್ಟಾಗಿ ಹೋಗಿದೆ. ೨—೩ ದಿನಗಳಿಂದ ಮಾತ್ರ ಪೋಲೀಸರು ಇಲ್ಲಿಯ ಸ್ವಯಂಸೇವಕರ ಬೇಡಿಕೆಗಳನ್ನು ವಿರೋಧಿಸಿ ಪರದೇಶಿ ಅರಿವೆಗಳನ್ನು ಕೊಂಡುಕೊಳ್ಳುತ್ತಿದ್ದಾರೆ.

ಮುಂಬಯಿಯಲ್ಲಿ ೭ ಜನರಿಗೆ ಶಿಕ್ಷೆ

"ಕಾಂಗ್ರೆಸ್ ದಿನ"ದ ದಿವಸ ಮುಂಬಯಿಯಲ್ಲಿ ಬಂಧಿಸಲ್ಪಟ್ಟವರಾದ ೭ ಜನರಿಗೆ ೧ ತಿಂಗಳಿಂದ ೪ ತಿಂಗಳವರೆಗೆ ಬೇರೆ ಬೇರೆ ಅವಧಿಯ ಕಠಿಣ ಶಿಕ್ಷೆಗಳು ವಿಧಿಸಲ್ಪಟ್ಟವೆ.

ಬಂಗಾಲದಲ್ಲಿ ಬಾಂಬುಗಳು ಸಿಕ್ಕವು

ಬಂಗಾಲ ಇಲಾಖೆಯಲ್ಲಿಯ ನಾರಾಯಣಗಂಜದ ಪೋಲೀಸ ಅಧಿಕಾರಿಗಳು, ಅನಂತರಂಜನ ಗಂಗೂಲಿ ಮೊದಲಾದ ೯ ಜನರನ್ನು ದೇಶದ್ರೋಹದ ಆರೋಪದಿಂದ ಸೆರೆ ಹಿಡಿದಿದ್ದು, ಅವರಲ್ಲಿ ೧೧ ಬಾಂಬುಗಳು, ಸುತ್ತಿಗೆ, ಪಂಜು, ಬಾಂಬಿನ ಉಪಕರಣ ಮೊದಲಾದವುಗಳು ಪೋಲೀಸರಿಗೆ ಸಿಕ್ಕಿವೆ.

ಅಲಹಾಬಾದದಲ್ಲಿ
ಒತ್ತಾಯದ ಕರ

ಅಲಹಾಬಾದದ ಮೊಡರ್ನ ಹಾಯಸ್ಕೂಲದ ಮುಂದೆ ಅಲ್ಲಿಯ ಸ್ವಯಂಸೇವಕರು ಪಿಕೆಟಿಂಗ ಮಾಡಿ ಗೋಂದಲ ಹಾಕುತ್ತಿದ್ದದ್ದನ್ನು ತಪ್ಪಿಸುವದಕ್ಕಾಗಿ, ಅಧಿಕಾರಿಗಳು ಆ ಹಾಯ್ಸ್ಕೂಲದ ಮುಂದೆ ಮೂರು ತಿಂಗಳುಗಳ ವರೆಗೆ ಪೋಲೀಸರು ಕಾವಲಿಟ್ಟಿದ್ದರು. ಈ ಪೋಲೀಸರಿಗೆ ತಗಲಿದ ವೆಚ್ಚವನ್ನು ಅಲ್ಲಿಯ ಎಟಾಯಪುರ, ಮುಠಿಗಂಜ, ಬಹಾದ್ದೂರಗಂಜ, ಬಾಲುವಾಘಾಟ ಮೊದಲಾದ ಭಾಗಗಳೊಳಗಿನ ನಿವಾಸಿಗಳಿಂದ ವಸೂಲ ಮಾಡಬೇಕೆಂದು ಮೇಲಧಿಕಾರಿಗಳು ಅಪ್ಪಣೆ ಕೊಟ್ಟಿದ್ದು, ಮುಸಲ್ಮಾನರು, ಸರಕಾರಿ ನೌಕರರು, ಆನರರಿ ಮ್ಯಾಜಿಸ್ಟ್ರೇಟರು ಇದರಿಂದ ಮುಕ್ತರಾಗಿದ್ದಾರೆ. ಮ್ಯಾಜಿಸ್ಟ್ರೇಟರ ಮನೆಗಳು ಕಾಯಿದೆ ಭಂಗದಲ್ಲಿ ಭಾಗ [illegible] ಇವರಿಂದಲೂ ಈ ಕರವನ್ನು ವಸೂಲ ಮಾಡಬೇಕೆಂದು ಆಜ್ಞೆ ಕೊಡುವದರಲ್ಲಿ ಒಂದಿಡೀ ನೋ(ಪರಿ) ಸರಕಾರದ ಧೋರಣವನ್ನು ! ಮುಸಲ್ಮಾನರನ್ನು ಬಿಟ್ಟು ಕೇವಲ ಹಿಂದೂ ಜನರ ಮೇಲೆಯೇ ಕರ ಹೇರಿರುವರು.]

ದಿಲ್ಲಿಯಲ್ಲಿ
ಬಾಂಬಿನ ಸ್ಫೋಟ

ದಿಲ್ಲಿಯ ರೇಲ್ವೆ ಸ್ಟೇಶನದಲ್ಲಿ ಸ್ವಲ್ಪ ದಿನಗಳ ಹಿಂದೆ ಬಾಂಬು ಹಾರಿದ್ದರ ಸಂಬಂಧವಾಗಿ, ಮಹಾತ್ಮಾ ಗಾಂಧಿಯವರ ಕಾರ್ಯದರ್ಶಿಗಳಾದ ಶ್ರೀ ಪ್ಯಾರಿಲಾಲರ ತಮ್ಮಂದಿರಾದ ಶ್ರೀ ಮೋಹನಲಾಲರು ಸೆರೆ ಮಾಡಲ್ಪಟ್ಟಿದ್ದಾರೆ. ಇವರ ಮೇಲೆ ಮತ್ತೊಂದು ಒಳಸಂಚಿನ ಆರೋಪವಿರುವದಾಗಿ ತಿಳಿಯುತ್ತದೆ.

ಅಹಮದಾಬಾದದಲ್ಲಿ
ಬಾಂಬಿನ ಸ್ಫೋಟ

ಅಹಮ್ಮದಾಬಾದದಲ್ಲಿ ಸ್ವಲ್ಪ ದಿನಗಳ ಹಿಂದೆ ಓವರ ಸೀಯರನ ಮನೆಯಲ್ಲಿ ಬಾಂಬು ಹಾರಿದ್ದರ ಸಂಬಂಧವಾಗಿ ಶೋಧ ನಡೆದಿದೆ. ಸ್ಥಳಿಕ ಪೋಲೀಸರಿಗೆ ಸಹಾಯ ಮಾಡಲು ಪುಣೆಯಿಂದ ಕೆಲವು ಜನ ಗುಪ್ತ-ಪೋಲೀಸರು ಇಲ್ಲಿಗೆ ಬಂದಿದ್ದಾರೆ. ಈ ವರೆಗೆ ಒಟ್ಟಿಗೆ ೭ ಜನರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಹಳ್ಳಿಯು ಹಾಳು ಸುರಿಯಿತು

ಅಹಮ್ಮದಾಬಾದ ಜಿಲ್ಲೆಯ ದಾಸ್ಕ್ರೋಯಿ ತಾಲೂಕದೊಳಗಿನ ಭಡಾಯು ಎಂಬ ಹಳ್ಳಿಯ ನಿವಾಸಿಗಳು ತಮ್ಮ ಹಳ್ಳಿಯನ್ನು ಬಿಟ್ಟು ಹೊರಟು ಹೋಗಿ ಬಡೋದಾ ಸಂಸ್ಥಾನದ ಹದ್ದಿಯಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದು, ಮಹಾತ್ಮಾ ಗಾಂಧಿ ಇಲ್ಲವೆ ಸರದಾರ ವಲ್ಲಭಭಾಯಿ ಯವರು ಹಿಂತಿರುಗಿ ಬರಲು ಆಜ್ಞಾಪಿಸುವವರೆಗೆ ತಮ್ಮ ಹಳ್ಳಿಯಲ್ಲಿ ಕಾಲಿಡುವದಿಲ್ಲವೆಂದು ಅವರು ನಿರ್ಧರಿಸಿಕೊಂಡಿದ್ದಾರೆ.

ಸ್ವಯಂಸೇವಕ ಸಂಘಗಳು
ಕಾಯಿದೆಗೆ ವಿರುದ್ಧವಾದವು

ಬಿಹಾರ ಜಿಲ್ಹೆಯಲ್ಲಿಯ ಎಲ್ಲ ಕಾಂಗ್ರೆಸ್ ಸ್ವಯಂಸೇವಕ ಸಂಘಗಳು, ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ೧೬ನೆಯ ಕಲಮಿನನ್ವಯ ಕಾಯಿದೆಗೆ ವಿರುದ್ಧವಾದ ಸಂಘಗಳಾಗಿವೆಯೆಂಬುದಾಗಿ ಗವ್ಹರ್ನರ ಇನ್ ಕೌನ್ಸಿಲರವರು ಪ್ರಸಿದ್ಧಪಡಿಸಿದ್ದಾರೆ.

||ಶ್ರೀ ಸಿದ್ಧೇಶ್ವರ ಪ್ರಸನ್ನ||

ಔದ್ಯೋಗಿಕ, ಒಕ್ಕಲತನ ಮತ್ತು ದನಗಳ ಪ್ರದರ್ಶನ, ವಿಜಾಪೂರ.

ಶ್ರೀ ಸಿದ್ಧೇಶ್ವರ ಜಾತ್ರೆಯ ಸಮಯದಲ್ಲಿ ತಾ|| ೧೦=೧-೩೨ ರಿಂದ ೧೭-೧-೩೨ರ ವರೆಗೆ ವಿಜಾಪುರದಲ್ಲಿ ಈ ಪ್ರದರ್ಶನವು ನಡೆಯುವದು. ಹಿಂದುಸ್ಥಾನದಲ್ಲಿ ಸಿದ್ಧಪಡಿಸಿದ ಮಾಲನ್ನು ಇದರಲ್ಲಿ ಕಳಿಸಿದಲ್ಲಿ ಅವುಗಳಿಗೆ ಬಹುಮಾನ ದೊರೆಯಬಹುದು. ಸ್ವದೇಶಿ ಮಾಲಿನ ಉತ್ತೇಜನವಾಗಬೇಕೆಂದು ಫೀ ಏನೂ ಇಟ್ಟಿರುವದಿಲ್ಲ. ಕೇಲವೇ ಫ್ರೀ ಮುಂಗಡವಾಗಿ ಕಳಿಸಿದಲ್ಲಿ ೫ರೂಪಾಯಿಕಿಂತ ಹೆಚ್ಚಿನ ಮಾಲನ್ನು ತಿರುಗಿ ಕಳುಹಿಸುವದರಲ್ಲಿ ಬರುವದು. ಎಲ್ಲರೂ ತಮ್ಮ ಮಾಲನ್ನು ಕಳುಹಿಸಬೇಕಾಗಿ ವಿನಂತಿ.

ವಿಜಾಪುರ { ಜಿ. ಎಂ. ಪತ್ತಾರ
ಸೆಕ್ರೆಟರಿ
ಶ್ರೀ ಸಿದ್ಧೇಶ್ವರ ಸಂಸ್ಥೆ }

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರದಿಂದ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಾಚ, ಟಾಯಂಪೀಸು ದುರಸ್ತಿಮಾಡಿಸುವವರಿಗೆ ಸುಸಂಧಿ.

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವೀದರದಿಂದ ಖರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ [illegible] ಟಾಯಂಪೀಸ ಗ್ರಾಮೋಫೋನ ಸಾಮಾನು [illegible] ದೆವು. ಒಂದು ಸಲ ದುರಸ್ತಿ ಮಾಡಿಸಿ ಖಾತ್ರಿಮಾಡಿಕೊಳ್ಳಿರಿ.

ವಿಳಾಸ:- ಆರ್. ಡಿ. ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೊಫೊನೋ ಡೀಲರ ಬಾಗಲಕೋಟೆ.

ಎಲ್ಲ ತರದ ಜ್ವರದ ಮೇಲೆ

ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲ ತರದ ಜ್ವರಗಳ ಮೇಲೆ ಈ ಗುಳಿಗೆಗಳು [illegible]ಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. [illegible] ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೮-೦

ಏಜಂಟರಿಗೆ ಧಾರಾಳವಾದ ಕಮೀಶನ ಕೊಡಲಾಗುವದು.

ವಿಳಾಸ:- [illegible]

ಪ್ಲಾಟುಗಳು ಮಾರಾಟಕ್ಕಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತಿರವಿರುವ ೩೩೦ನೆಯ ಸರ್ವೆ ನಂಬರದಲ್ಲಿಯ ಬಿನಶೇತಿಯಾದ ಪ್ಲಾಟುಗಳು ಮಾರಾಟಕ್ಕಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಬಳಗಾವಕರರಾವ ಧಾರವಾಡ
ವಕೀಲರು ಬಾಗಲಕೋಟೆ.

ಹಿಟ್ಟಿನ ಗಿರಣಿ ಮಾರಾಟಕ್ಕಿಟ್ಟಿದೆ.

ರಸ್ಟನ ಮೇಕರ್ ಇಂಜಿನ್ ಆರು H. P. ಅದರ ಚಕ್ಕಿ ಸಹಿತ ಸದ್ಯಕ್ಕೆ ಚಾಲೂ ಇದ್ದದ್ದು ಮಾರುವದಿದೆ. ಸಮಕ್ಷಮ ಅಥವಾ ಪತ್ರವ್ಯವಹಾರ ಮಾಡಬೇಕು.

ಟಿ. ಜಿ. ದೇಸಾಯಿ c/o ಕನ್ನಡಿಗ
ಬಾಗಲಕೋಟೆ.

ಈ ಪತ್ರಿಕೆಯನ್ನು [illegible] ಬಾಗಲಕೋಟೆಯ [illegible] ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅದರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

सर्वं परवशं दुःखं । सर्वमात्मवशं सुखम् ॥ -मनु.

ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ತಿಥಿ ಪುಷ್ಯ ಬಹುಳ ೩ ಶಕೆ ೧೮೫೨ ತಾ|| ೭—೧—೩೧ [ಸಂಚಿಕೆ ೧೫೮

ವಲ್ಲಭಭಾಯಿಯವರಿಗೆ ೬ ತಿಂ. ಸಾ. ಶಿಕ್ಷೆ

(ತಂತಿಯ ವಾರ್ತೆ)

ಮುಂಬಯಿಯಲ್ಲಿ ಭಾಷಣ ಮಾಡಿದ ಸಂಬಂಧವಾಗಿ ಕ್ರಿ, ಲಾ. ಅಮೆಂಡಮೆಂಟ ಕಾಯಿದೆಯ ೧೭ ನೆಯ ( ) (೨) ಈ ಕಲಮು

ಗಳನ್ನು ಅಹಮ್ಮದಾಬಾದದಲ್ಲಿ ಸೆರೆಹಿಡಿ ಯಲ್ಪಟ್ಟ ಕಾಂಗ್ರೆಸ್ಸಿನ ಸರ್ವಾಧಿಕಾರಿಗಳಾದ ಸರದಾರ ವಲ್ಲಭಭಾಯಿಯವರಿಗೆ ೬ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ

ಕಾಂಗ್ರೆಸ್ ಸಂಸ್ಥೆಗಳು ಕಾಯಿದೆಗೆ ವಿರುದ್ಧವಾದವು

(ತಂತಿಯ ವಾರ್ತೆ)

ಸಿಂಧಪ್ರಾಂತದಲ್ಲಿಯ ಕಾಂಗ್ರೆಸ್ ಸಂಸ್ಥೆಗಳು ಕಾಯಿದೆಗೆ ವಿರುದ್ಧವಾದ ಸಂಘಗಳಾಗಿವೆಯೆಂದು ಮುಂಬಯಿ ಸರಕಾರದವರಿಂದ ಸಾರಲ್ಪಟ್ಟಿದೆ ಬಂದಿದೆ.

ಬಿಹಾರದಲ್ಲಿ ಒತ್ತಾಯದ ಕರ

(ತಂತಿಯ ವಾರ್ತೆ)

ಬಿಹಾರ ಸರಕಾರದವರು ತಮ್ಮ ಪ್ರಾಂತದಲ್ಲಿ ಹೆಚ್ಚಿಗೆ ಪೋಲೀಸರನ್ನಿಟ್ಟು, ಅವರ ವೆಚ್ಚವನ್ನು ಅಲ್ಲಿಯ ನಿವಾಸಿಗಳ ಮೇಲೆ ಹೇರಿದ್ದಾರೆ. ಮುಸಲ್ಮಾನರನ್ನು ಮಾತ್ರ ಈ ಕರದಿಂದ ಮುಕ್ತ ಮಾಡಿದ್ದಾರೆ. ಅವರು ಚಳವಳಿಯಲ್ಲಿ ಭಾಗ ತೆಗೆದುಕೊಳ್ಳದಿರುವದೇ ಇದಕ್ಕೆ ಕಾರಣವಾಗಿದೆ.

ಲಾರ್ಡ ರೀಡಿಂಗರು ಸಪ್ರೂರವರಿಗೆ ಬೆಂಬಲಕೊಟ್ಟರು

ಮಧ್ಯವರ್ತಿ ಸರಕಾರದ ಜವಾಬುದಾರಿಯ ವಿಷಯವಾಗಿ ಸಂಯುಕ್ತ ಘಟನೆಯ ಉಪಮಂಡಳದಲ್ಲಿ ಸರ್ ತೇಜಬಹದ್ದೂರ ಸಪ್ರೂರವರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ, ಲಾರ್ಡ ರೀಡಿಂಗರವರು ಲಿಬರಲ್ ಪಕ್ಷದ ಪರವಾಗಿ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ.

ಗದಗ ಬೆಟಗೇರಿಯ ಪತ್ರ

(ಸ್ವಂತ ಸುದ್ದಿಗಾರರಿಂದ)

ಇಲ್ಲಿಯ ಸ್ವದೇಶಿ ಮಂಡಳದವರು ಹೋದ ವಾರದಲ್ಲಿ ಗಜೇಂದ್ರಗಡ ಮತ್ತು ಲಕ್ಕುಂಡಿಗೆ ಸ್ವದೇಶಿ ಪ್ರಚಾರಕಾರ್ಯಕ್ಕೆ ಹೋಗಿದ್ದರು. ಗಜೇಂದ್ರಗಡದಲ್ಲಿ ಸುಮಾರು ೮೦೦ ಮಗ್ಗಗಳು ಮತ್ತು ಲಕ್ಕುಂಡಿಯಲ್ಲಿ ೫೦೦ ಮಗ್ಗಗಳು ಇರುತ್ತವೆ. ಗಜೇಂದ್ರಗಡದಲ್ಲಿ ಸೀರಿ ಮತ್ತು ಖಣಗಳು ಸಿದ್ಧವಾಗುತ್ತಿದ್ದು, ಅವರು ಖಣಗಳಿಗೆ ಕುದುರೆ, ಮತ್ತು "ಹನುಮಾನ್" ಎಂಬ ಮುದ್ರೆ ಹಾಕಿದ ವಿಲಾಯತಿ ನೂಲನ್ನು ಉಪಯೋಗ ಮಾಡುತ್ತಾರೆ. ಇನ್ನು ಮುಂದೆ ವಿಲಾಯತಿ ನೂಲನ್ನು ಕೊಂಡು ಕೊಳ್ಳುವದಿಲ್ಲವಾಗಿ ಅಲ್ಲಿಯ ನೇಕಾರರು ಪ್ರತಿಜ್ಞಾಪತ್ರ ಕೊಟ್ಟರು. ಲಕ್ಕುಂಡಿಯಲ್ಲಿ ಛತ್ರಿ ಸಿದ್ಧವಾಗುತ್ತಿದ್ದು, ಅಲ್ಲಿ ನೇಕಾರರು ಅವುಗಳಿಗೆ "ಹಡಗ" ಮತ್ತು 'ಗೋಲ್' ಮುದ್ರೆ ಹಾಕಿದ ಚೀನ ಮತ್ತು ಜಪಾನದ ನೂಲು ಉಪಯೋಗಿಸುತ್ತಾರೆ. ಇನ್ನು ಮುಂದೆ ಈ ಪರದೇಶಿ ನೂಲು ಉಪಯೋಗಿಸುವದಿಲ್ಲವೆಂದು ಅವರೂ ವಚನಕೊಟ್ಟರು.

ವಕೀಲಿಗೆ ಶರಣು ಹೊಡೆದರು

ಸಿಂಧ ಪ್ರಾಂತದಲ್ಲಿಯ ಲಾರಕಾನಾ ಪಟ್ಟಣದ ಪ್ರಸಿದ್ಧ ವಕೀಲರಾದ ಶ್ರೀನಿಹಾಲ ಚಂದರವರು ತಮ್ಮ ವಕೀಲಿಯ ಸನದ [illegible]

ಲಾಹೋರ ಅತ್ಯಾಚಾರದ ವಿಚಾರಣೆ

ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದ ಸಮಯದಲ್ಲಿ ಗವರ್ನರರ ಮೇಲೆ ಗುಂಡು ಹಾರಿದ್ದರ ಸಂಬಂಧವಾಗಿ ಸೆರೆಹಿಡಿಯಲ್ಪಟ್ಟ ಶ್ರೀ ಹರಿಕಿಶನ ಇವರ ಖಟ್ಲೆಯ ವಿಚಾರಣೆಯು ತಾ|| ೩ನೆಯ ದಿವಸ ಲಾಹೋರದಲ್ಲಿ ಮಿ. ಅಕ್ಕಾಯಿಸರವರ ಮುಂದೆ ಪ್ರಾರಂಭವಾಯಿತು. ಆವರ ಮೇಲೆ ಇ. ಪಿ. ಕೋಡಿನ ೩೦೨ ಹಾಗೆ ೩೦೭ ಈ ಕಲಮುಗಳನ್ವಯ ಖಟ್ಲೆಯು ಹಾಕಲ್ಪಟ್ಟಿದೆ. ಪಂಜಾಬ ವಿಶ್ವವಿದ್ಯಾಲಯದ ರಜಿಸ್ಟ್ರಾರರಾಗಿರುವ ಶ್ರೀ ಪಿ. ಎನ್. ದತ್ತರವರು ತಮ್ಮ ಸಾಕ್ಷಿಯಲ್ಲಿ:—

ತಾ|| ೨೩ನೆಯ ದಿವಸ ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ಸಮಾರಂಭವು ಜರುಗಿತು. ಗವರ್ನರರು ಆ ಸಮಯದಲ್ಲಿ ಅಧ್ಯಕ್ಷರಾಗಿದ್ದರು. ಸಮಾರಂಭಕ್ಕೆ ಒಟ್ಟಿಗೆ ೧೫೦೦ ಜನರು ಬಂದಿದ್ದರು. ಪ್ರೇಕ್ಷಕರು ಭವನದ ಎರಡೂ ಬದಿಗಳಲ್ಲಿ ಕೂಡಿಸಲ್ಪಟ್ಟಿದ್ದರು. ಡಿಸ್ಟ್ರಿಕ್ಟ ಪೋಲೀಸ ಅಧಿಕಾರಿಗಳು ಹಾಗು ಗುಪ್ತ ಪೋಲೀಸರು ವ್ಯವಸ್ಥೆಯನ್ನು ನೋಡುತ್ತಿದ್ದರು. ೧-೩೦ ಗಂಟೆಗೆ ಸಮಾರಂಭವು ಮುಗಿಯಿತು.

ಬಳಿಕ ಎಲ್ಲ ಜನರೂ ಸಾಲಾಗಿ ಮೆರವಣಿಗೆಯಿಂದ ಹೊರಬಿದ್ದೆವು. ಚಾನ್ಸಲರರಾದ ಗವರ್ನರರು, ವ್ಹಾಯಿಸ ಚಾನ್ಸಲರರು ಹಾಗು ನಾನು ಒಬ್ಬರಹಿಂದೊಬ್ಬರು ಇದ್ದೆವು. ಗವರ್ನರರ ಏಡಿ ಡಿ ಕ್ಯಾಂಪರವರು ತೀರ ಹಿಂದೆ ಇದ್ದರು. ಮುಖ್ಯದ್ವಾರದ ಹೊರಗೆ ಕಾಲಿಟ್ಟ ಕೂಡಲೆ ಒಳಗಿನಿಂದ ಭಯಂಕರ ಸಪ್ಪಳವು ನನಗೆ ಕೇಳಬಂತು. ಗವರ್ನರರು ನನ್ನಗಿಂತ ಒಂದು ಯಾರ್ಡ ಹಿಂದೆ ಇದ್ದರು. ವಸ್ತ್ರಪರಿಧಾನ ಕೋಣೆಗೆ ಹೋಗಲು ನಾವು ಅತ್ತ ಹೊರಳುವಷ್ಟರಲ್ಲಿ ಮತ್ತೆ ಎರಡು ಸಲ ಸಪ್ಪಳವು ಕೇಳಬಂತು. ನಾನು ತಿರುಗಿ ನೋಡಿದೆ. ಆರೋಪಿಯು ಪಾರಾಗಿ ಹೋಗಲು ಯತ್ನಿಸುತ್ತಿದ್ದದ್ದು ಕಂಡುಬಂತು. ಆಗ ಅವನ ಕೈಯಲ್ಲಿ ಒಂದು ಪಿಸ್ತೂಲವಿತ್ತು. ನಾಲ್ಕೈದು ಜನ ಪೋಲೀಸರು ಅವನನ್ನು ಹಿಡಿದುಕೊಂಡು ನಿಂತಿದ್ದರು. ಚಾನ್ಸಲರ ಮತ್ತು ವ್ಹಾಯಿಸ ಚಾನ್ಸಲರರಿಗೆ ವಸ್ತ್ರಪರಿಧಾನ ಕೋಣೆಗೆ ಹೋಗಲು ನಾನು ಹೇಳಿಕೊಂಡು ಆರೋಪಿಯ ಬಳಿಗೆ ಹೋದೆ. ಅಷ್ಟು ಸ್ವಲ್ಪ ಹೊತ್ತು ಇದ್ದು ನಂತರದಲ್ಲಿ ವಸ್ತ್ರಪರಿಧಾನ ಕೋಣೆಗೆ ನಾನೂ ಹೋದೆ. ಗವರ್ನರರಿಗೆ ಗಾಯವಾಗಿದೆಯೆಂಬುದು ಅಲ್ಲಿ ನನಗೆ ತಿಳಿದು ಬಂದಿತು, "ನರ್ಸ ಹಾರ್ಪರನೆಲ್ಸನರನ್ನು ಕರೆದುಕೊಂಡು ಬಂದೆ. ಅವರು ಗವರ್ನರರ ಗಾಯ ಕಟ್ಟಿದರು. ಎಡತೊಡೆ ಹಾಗು ಎಡತೋಳು ಇವುಗಳಿಗೆ ಗಾಯವಾಗಿದೆಯೆಂದು ಗವರ್ನರರು ಹೇಳುತ್ತಿದ್ದದ್ದನ್ನು ಕೇಳಿದೆ" ಎಂಬುದಾಗಿ ಹೇಳಿದರು.

ಬಳಿಕ ಪೋಲೀಸ ಅಧಿಕಾರಿಗಳಾದ ರಾಯಬಹದ್ದೂರ ದಿವಾನಚಂದ, ರಾವಸಾಹೇಬ ಜವಾಹರಲಾಲ ಹಾಗು ಕರ್ನಲ್ ಹಾರ್ಪರನೆಲ್ಸನ, ಕರ್ನಲ್ ಬ[illegible] ವೆಂಕಟರಾಮ ದವರ ಸಾಕ್ಷಿಗಳಾದವು.

ಶ್ರೀ ಹರಿಕಿಶನರು ವಕೀಲರನ್ನು ಕೊಟ್ಟು ಸ್ವಸಂರಕ್ಷಣೆ ಮಾಡಿಕೊಳ್ಳಲಿಲ್ಲ. ಮತ್ತು ಸಾಕ್ಷಿದಾರರನ್ನು ಸವಾಲು ಮಾಡಲಿಲ್ಲ. ಸೋಮವಾರ ದಿವಸ ಅವರು ತಮ್ಮ ವಾಜ್ಮೂಲವನ್ನು ಕೋರ್ಟಿಗೆ ಸಾದರ ಪಡಿಸುವವರಿದ್ದರು.

ಸಂಯುಕ್ತ ಮತದಾರ ಸಂಘಗಳಿಗೆ ಮುಸಲ್ಮಾನರ ಬೆಂಬಲ

ಮಹಾಜಾತಿ ರಾಜ್ಯಕಾರಭಾರದಲ್ಲಿ ಭಿನ್ನ ಭಿನ್ನ ಮತದಾರ ಸಂಘಗಳಿರುವದು ಇಷ್ಟವಿಲ್ಲ. ಇದು ತಮ್ಮ ಜಾತೀಯತ್ವಕ್ಕೆ ವಿಘಾತಕವಾಗಿದೆಯೆಂದು ಎಷ್ಟೋ ಜನ ಮುಸಲ್ಮಾನರು ಅಭಿಪ್ರಾಯ ಪಡುತ್ತಾರೆ. ಈ ದುಷ್ಟ ಪದ್ಧತಿಯು ಸಮೂಲವಾಗಿ ಅಳಿದು ಹೋಗಲಿಕ್ಕೇ ಬೇಕು. ಸಂಯುಕ್ತ ಮತದಾರ ಸಂಘಗಳನ್ನು ಒಳಕೊಳ್ಳದ ಯಾವ ಆಳಿಕೆಯೂ, ಭರತಖಂಡಕ್ಕೆ ಒಪ್ಪಿತವಾಗುವದಿಲ್ಲ" ವೆಂಬುದಾಗಿ ಮುಸಲ್ಮಾನರ ಪ್ರಸಿದ್ಧ ಮುಂದಾಳುಗಳಾದ ಸರ್ ಅಲ್ಲೀ ಇಮಾಮ, ಹಸನ ಇಮಾಮ, ಚೌಧರಿ ಖಲೀಕುಜಮಾನ್, ಮೊದಲಾದವರು ಸರ್ ತೇಜಬಹದ್ದೂರ ಸಪ್ರು ಹಾಗು ಕೆಲವು ಪ್ರತಿನಿಧಿಗಳಿಗೆ ಮೇಲಿನದೊಂದು ತಂತಿಯನ್ನು ಕೊಟ್ಟು ಕಳಿಸಿದ್ದಾರೆ.

ಸತ್ತವನಿಗೆ

ರಾಯಬಹದ್ದೂರ ಪದವಿ ಸಿಕ್ಕಿತು

ಸಿಂಧ ಪ್ರಾಂತದಲ್ಲಿ ಡಿಸ್ಟ್ರಿಕ್ಟ ಪಬ್ಲಿಕ್ ಪ್ರೊಸಿಕ್ಯೂಟರರಾಗಿದ್ದುಕೊಂಡು, ಹೋದ ಆಗಸ್ಟ ತಿಂಗಳದಲ್ಲಿ ಮರಣಹೊಂದಿದ ಓರ್ವ ಗೃಹಸ್ಥರಿಗೆ ಹೊಸ ವರ್ಷದ ಪದವಿದಾನದಲ್ಲಿ ರಾಯಬಹದ್ದೂರ ಪದವಿಯು ಕೊಡಲ್ಪಟ್ಟಿದೆಯಾಗಿ ತಿಳಿದು ಬರುತ್ತದೆ.

ನಾನು ಸತ್ತರೆ

ನನ್ನ ಆಸ್ತಿಯನ್ನು ಕಾಂಗ್ರೆಸಕ್ಕೆ ಕೊಡಿರಿ

ಸ್ವಲ್ಪ ದಿನಗಳ ಹಿಂದೆ ಕಾರವಾರ ಸೆರೆಮನೆಯಿಂದ ಕೆಲವು ರಾಜಕೀಯ ಕೈದಿಗಳನ್ನು ವಿಸಾಪುರಕ್ಕೆ ಕಳಿಸಿದರಷ್ಟೆ, ಅವರಲ್ಲಿ ಒಬ್ಬರಾದ ಶ್ರೀ ವೆಂಕಟಪ್ಪ ಹೆಗಡೆಯವರು ಅಲ್ಲಿ ದೇಹಾಲಸ್ಯದಿಂದ ನರಳುತ್ತಿದ್ದು, ಅವರು ನಾನು ಸತ್ತರೆ ನನ್ನ ಆಸ್ತಿಯನ್ನೆಲ್ಲ ಕಾಂಗ್ರೆಸಕ್ಕೆ ಕೊಟ್ಟುಬಿಡಿರಿ, ಎಂಬುದಾಗಿ ತಮ್ಮ ಅಣ್ಣಂದಿರಿಗೆ ಪತ್ರ ಬರೆದಿದ್ದಾರೆ.

ಇಹಸ್ವೃತ್ತ

ಮೌಲಾನಾ ಮಹಮ್ಮದ ಅಲ್ಲಿಯವರು ಮರಣಹೊಂದಿದ ಮೂಲಕವಾಗಿ ನಿನ್ನಿನ ದಿವಸ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಅಡತಿ, ಜವಳಿ, ಕಿರಾಣಿ ಮೊದಲಾದ ವ್ಯಾಪಾರಸ್ಥರೆಲ್ಲರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು.

ಶ್ರೀಮತಿ ಸೀತಾಬಾಯಿ ಬಳವಳ್ಳಿಯವರು ಸ್ವಲ್ಪ ದಿನಗಳಲ್ಲಿ ಈ ಊರು ಬಿಟ್ಟು ಮುಂಬಯಿಗೆ ಹೋಗತಕ್ಕವರಿದ್ದಾರಾಗಿ ತಿಳಿದು ಬರುತ್ತದೆ.

ಅನ್ಯಾಯದೊಂದು ಮಾದರಿ

(ಬರೆದುಬಂದದ್ದು)

ಇಲ್ಲಿಯ ಪ್ರಭಾತಸಂಕೀರ್ತನೆಯ ಪಥಕಗಳು ಕಾಯಿದೆಗೆ ವಿರುದ್ಧವಾದವುಗಳಾಗಿವೆಯೆಂದು ಮೇಲಧಿಕಾರಿಗಳಿಂದ ಸಾರಲ್ಪಟ್ಟಿರದಿದ್ದರೂ, ಇಲ್ಲಿಯ ಪೋಲೀಸ ಅಧಿಕಾರಿಗಳು ಸ್ವಲ್ಪ ದಿನಗಳ ಹಿಂದೆ ಸಂಕೀರ್ತನೆಯ ಸಮಯದಲ್ಲಿ ೬ ಜನ ಸ್ವಯಂಸೇವಕರನ್ನು ಸೆರೆಹಿಡಿದು ಅವರನ್ನು ವಿಚಾರಣೆಗೆ ಗುರಿಮಾಡಿದರು. ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೂ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಿ ಅವರನ್ನು ಕಾರಾಗೃಹಕ್ಕೆ ಅಟ್ಟಿಬಿಟ್ಟರು. ಹಂ ಕರೇಂಗೆ ಕಾಯದಾ!

ಕ್ರಿಮಿನಲ್ ಅಮೆಂಡಮೆಂಟ ಕಾಯಿದೆಯ ೧೭ನೆಯ ಕಲಮಿನನ್ವಯ ಶಿಕ್ಷೆಗೆ ಗುರಿಯಾದ ವಿಜಾಪುರ ಜಿಲ್ಲೆಯೊಳಗಿನ ಯಾವತ್ತೂ ರಾಷ್ಟ್ರಸೇವಕರ ಖಟ್ಲೆಯ ಕಾಗದ ಪತ್ರಗಳು, ಪುನರಾಲೋಚನೆಕ್ಕಾಗಿ ಮುಂಬಯಿ ಹಾಯಕೋರ್ಟಿಗೆ ಈಗ ಕಳಿಸಲ್ಪಟ್ಟಿದ್ದು, ಇನ್ನು ೧೫ ದಿನಗಳ ಮೇಲೆ ಅವುಗಳ ವಿಷಯವಾಗಿ ಅಲ್ಲಿ ವಿಚಾರಣೆಯಾಗತಕ್ಕದ್ದಿದೆಯಾಗಿ ತಿಳಿದು ಬರುತ್ತದೆ.

ಸುರತದಲ್ಲಿ ೬೯ ಜನರನ್ನು ಸೆರೆಹಿಡಿದರು.

(ತಂತಿಯ ವಾರ್ತೆ ತಾ|೬)

ತಾ|| ೫ ನೆಯ ದಿವಸ ಸುರತದಲ್ಲಿ ಮಹಾತ್ಮಾಗಾಂಧಿಯವರ ಬಂಧನ ದಿವಸವು ಆಚರಿಸಲ್ಪಟ್ಟಿತು ಆ ಸಮಯದಲ್ಲಿ ಅಧಿಕಾರಿಗಳು ಅಡ್ಡಿಮಾಡಿ ೬೯ ಜನರನ್ನು ಕೈದುಮಾಡಿಕೊಂಡು ಹೋದರು. ಸೆರೆಯಾಳುಗಳಾದವರಲ್ಲಿ ೩೬ ಜನರು ಸ್ತ್ರೀಯರಿರುವರು.

ಪಂ. ಮೋತೀಲಾಲರ ಪ್ರಕೃತಿ.

ಕವಿರಾಜ ಶ್ಯಾಮದಾಸ ವಾಚಸ್ಪತಿಯವರಲ್ಲಿ ಉಪಚಾರ ಹೊಂದುತ್ತಿದ್ದಾಗಿನಿಂದ ಪಂಡಿತ ಮೋತೀಲಾಲರ ಪ್ರಕೃತಿಯು ಸುಧಾರಿಸಹತ್ತಿದ್ದು, ಅವರು ೭ ನೆಯ ತಾರೀಖಿಗೆ ಅಲಹಾಬಾದವನ್ನು ಕುರಿತು ತೆರಳತಕ್ಕವರಿದ್ದಾರೆ.

ಶ್ರೀ ಅಪ್ಪಾಸಾಹೇಬರಿಗೆ ಕೈದು

ಮಾಳವಣ ಸತ್ಯಾಗ್ರಹ ಶಿಬಿರದ ಅಧಿಕಾರಿಗಳಾದ ಶ್ರೀ ಅಪ್ಪಾಸಾಹೇಬ ಪಟವರ್ಧನರವರು ೧೪೪ ನೆಯ ಕಲಮನ್ನು ಮುರಿದ ಸಂಬಂಧವಾಗಿ ತಾ|| ೨ ನೆಯ ದಿವಸ ಸೆರೆಹಿಡಿಯಲ್ಪಟ್ಟರು. ಮಾಲವಣದಲ್ಲಿ ಅವರ ವಿಚಾರಣೆಯು ನಡೆಯತಕ್ಕದ್ದಿದೆ,

ಮಾಲವಣದ ಮ್ಯಾಜಿಸ್ಟ್ರೇಟರು ಮೊದಲು ಅವರ ಮೇಲೆ ೧೪೪ನೆಯ ಕಲಮಿನನ್ವಯ ಸಮನ್ಸು ಕಳಿಸಿಕೊಟ್ಟರು. ಶ್ರೀ ಅಪ್ಪಾಸಾಹೇಬರು ಅದನ್ನು ನಿರಾಕರಿಸಿ, ಹಾದಿಯ ವೆಚ್ಚಕ್ಕಾಗಿ ಹಣವನ್ನು ಕಳಿಸಿ ಕೊಡಲು ಇಲ್ಲವೆ ತಮ್ಮನ್ನು ಕರೆದುಕೊಂಡು ಹೋಗಲು ಮ್ಯಾಜಿಸ್ಟ್ರೇಟರಿಗೆ ಬರೆದುಕೊಂಡರು

ಅಲಹಾಬಾದದಲ್ಲಿ ೩೫ ಜನರಿಗೆ ಶಿಕ್ಷೆ.

ಪಿಕೆಟಿಂಗ, ಸಭೆ ಮೊದಲಾದವುಗಳನ್ನು ಜರುಗಿಸಿಯೂ, ಕರನಿರಾಕರಣೆ ಚಳವಳಿಯನ್ನು ಸಾಗಿಸಿಯೂ ಕಾಯಿದೆಗೆ ವಿರುದ್ಧವಾಗಿ ವರ್ತಿಸಿದ ಸಂಬಂಧವಾಗಿ ಅಲಹಾಬಾದದಲ್ಲಿ ೩೫ ಜನರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಕಾರವಾರ ಜೇಲಿನಲ್ಲಿ ಕೈದಿಗಳಿಗೆ ಸ್ಥಳವಿಲ್ಲದಾಯಿತು

ಕಾರವಾರ ಸುರಂಗದಲ್ಲಿ ಸ್ಥಳ ಸಾಲದ್ದಕ್ಕಾಗಿ ಅಲ್ಲಿಯ ಅಧಿಕಾರಿಗಳು ಕೆಲವು ದಿವಸಗಳ ಹಿಂದೆ ಕೆಲವು ರಾಜಕೀಯ ಕೈದಿಗಳನ್ನು, ವಿಜಾಪುರಕ್ಕೆ, ಕಳಿಸಿದರು ಇನ್ನು, ಕೆಲವರನ್ನು ಬೆಳಗಾವಿಯ ಹಿಂಡಲಗದವರಿಗೆ ಬಿಟ್ಟರು. ಸುರಂಗದಲ್ಲಿ ಸ್ಥಳವು ಸಾಲದಂತಾಗಿ ಅನೇಕರಿಗೆ ಹೊರಗಿಂದ ಕಳಿಸಿಕೊಂಡರು. ಸ್ಥಳವುಂಟು ಆದರೆ ರಾಜಕೀಯ ಕೈದಿಗಳನ್ನು ಕಟ್ಟಿ, ಜೇರೆಯವರನ್ನು ಕಳಿಸ ಮಡಾದರೆ ಕಳಿಸಿ ಎಂದು ಕಾರವಾರದವರು ಉತ್ತರ ಕೊಟ್ಟರು ಹಿಂದೆ ಉಳಿದವರು ಕೈದಿಗಳನ್ನು, ಕಳಿಸಿದರು. ಅಷ್ಟರಲ್ಲಿಯೇ ಕುಮಟೆ, ಅಂಕೋಲಾ, ಶಿರ್ಸಿ, ಹೊನ್ನಾವರ ಮೊದಲಾದ ಕಡೆಗಳಿಂದ ರಾಜಕೀಯ ಸೆರೆಯಾಳುಗಳು ಜೇಲಿನಲ್ಲಿ ಬಂದು ತುಂಬಿಕೊಂಡರು, ಹಿಂದುಗಡೆಯಿಂದ ಬಂದವರಿಗೆ ಸ್ಥಳವಿಲ್ಲದಾಯಿತು. ಅಧಿಕಾರಿಗಳು ಚಪ್ಪರ ಹಾಕಿದರು.

ಪೇಶಾವರ ಪ್ರಾಂತದಲ್ಲಿ ಬಾಂಬು ಹಾರಿತು.

ಪೇಶಾವರ ಪ್ರಾಂತದ ಚಾರಸಾದದ ಅಮೀರಗುಲ್ಲಾ ಎಂಬ ತರುಣನು ಹೋದ ಶುಕ್ರವಾರ ದಿವಸ ಒಂದು ಬಾಂಬನ್ನು ತೆಗೆದುಕೊಂಡು ಎಲ್ಲಿಗೋ ಹೋಗುತ್ತಿದ್ದನು. ಹಾದಿಯಲ್ಲಿ ಅದು ಒಮ್ಮಿಂದೊಮ್ಮೆ ಹಾರಿ ಅವನನ್ನು ಗಾಯ ಪಡಿಸಿತು. ಕೆಲವು ಹೊತ್ತಿನ ಮೇಲೆ ಅವನು ಮರಣ ಹೊಂದಿದನು

ಶ್ರೀ ಪದಕಿಯವರ ತೂಕವು ಕಡಿಮೆಯಾಯಿತು

ಕ್ರಿ. ಲಾ. ಅಮೇಂಡಮೆಂಟ ಕಾಯಿದೆಯ ೧೭ ನೆಯ ಕಲಮಿನನ್ವಯ ೪ ತಿಂಗಳ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ, ಹಿಂದೂಸ್ಥಾನೀ ಸೇವಾದಲದ ಸಂಘಟಕರಾದ ಇಲ್ಲಿಯ ಶ್ರೀ ಕೃಷ್ಣ ಪದಕಿಯವರ ದೇಹಸ್ಥಿತಿಯು ನೆಟ್ಟಗಿರುವದಿಲ್ಲವೆಂದೂ; ಅವರ ತೂಕವು ೨ ಪೌಂಡು ಕಡಿಮೆಯಾಗಿದೆಯೆಂದೂ ತಿಳಿದು ಬರುತ್ತದೆ.

ಶ್ರೀ ಗೋವರ್ಧನ ದಾಸರ ಮೇಲೆ ಮತ್ತೆ ಒಂದು ಆರೋಪವು

ಕಾಯಿದೆ ಭಂಗದ ಬಗ್ಗೆ ಈಗ ಎರಡು ಸಲ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ, ಶ್ರೀ ಗೋವರ್ಧನದಾಸ ಇವರನ್ನು ಪೋಲೀಸರು ಮೊನ್ನಿನ ದಿವಸ ಬಾದಾಮಿಗೆ ಕರೆದೊಯ್ದರು. ಅವರ ಮೇಲೆ ಮತ್ತೊಂದು ಖಟ್ಲೆಯು ಹಾಕಲ್ಪಟ್ಟಿರುವದಾಗಿ ತಿಳಿಯುತ್ತದೆ.

ಹುಬ್ಬಳ್ಳಿಯಲ್ಲಿ ಇಬ್ಬರ ಮೇಲೆ ಖಟ್ಲೆ.

ತಾ|| ೧೦—೬—೩೦ ನೆಯ ದಿವಸ ಹುಬ್ಬಳ್ಳಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ ಕಮೀಟಿಯ ನಿರ್ಣಯಗಳನ್ನು ಓದಿ ಹೇಳಿದರ ಸಂಬಂಧವಾಗಿ ಶ್ರೀ ತವನಪ್ಪಾಜಿ ವಿ ರಜಪೂತ ಹಾಗು ಶ್ರೀ ನಾರಾಯಣ ಜಂತಾರಿ ಇವರ ಮೇಲೆ ಖಟ್ಲೆಯು ಹಾಕಲ್ಪಟ್ಟಿದೆ.

ಮೂವರು ಸ್ವಯಂಸೇವಕರಿಗೆ ಹದ್ದುಪಾರು

ಮುಂಡಗೋಡದಲ್ಲಿ ಅರಣ್ಯ ಸತ್ಯಾಗ್ರಹ ಮಾಡಿದ ಬಗ್ಗೆ ೩ ತಿಂಗಳ ಶಿಕ್ಷೆಗೆ ಪಾತ್ರರಾದ ಮೈಸೂರಿನ ಶ್ರೀ ಎಂ. ವಿರುಪಾಕ್ಷಪ್ಪ, ಡಿ ಆರ್. ರಾಮೇಶ್ವರಪ್ಪ, ಮತ್ತು ಎಸ್ ಬಿ ಕೃಷ್ಣಮೂರ್ತಿ ಇವರು ಮೊನ್ನೆ ೩ ನೆಯ ತಾರೀಖಿನ ದಿವಸ ಜೇಲಿನಿಂದ ಬಿಡುಗಡೆ ಹೊಂದಿದರು. ಕೂಡಲೆ ಅಧಿಕಾರಿಗಳು ಅವರ ಮೇಲೆ ಪರಸ್ಥಳಕಾಯಿದೆಯ ಅನ್ವಯ ನೋಟೀಸು ಹೊರಡಿಸಿ, ಅವರನ್ನು ಬ್ರಿಟಿಶ ಹದ್ದಿನಿಂದ ಹೊರಗೆ ಅಟ್ಟಿದರು.

ಚೀನದಲ್ಲಿ ಮನುಷ್ಯನಿಗೆ ಕೋಡು

ಚೀನದಲ್ಲಿ ಒಬ್ಬ ಮನುಷ್ಯನಿಗೆ ತಲೆಯ ಮೇಲೆ ಕೋಡು ಇದ್ದು, ಓರ್ವ ಜಪಾನಿ ಡಾಕ್ಟರರು ಅವನನ್ನು ಪರೀಕ್ಷಿಸಿ ಬಹು ಆಶ್ಚರ್ಯಪಟ್ಟರು.

ಬಹಿಷ್ಕಾರವೇ ರಣಗರ್ಜನೆಯಾಗಬೇಕು

ಯಾವತ್ತೂ ಪರದೇಶಿ ಸರಕುಗಳನ್ನು ವಿಶೇಷತಃ ಬ್ರಿಟಿಶ್ ಸರಕುಗಳನ್ನು ಬಹಿಷ್ಕರಿಸಲು ಪ್ರತಿಯೊಬ್ಬ ಭಾರತೀಯನು ಈಗ ನಿರ್ಧಾರಮಾಡಬೇಕು. ಬಹಿಷ್ಕಾರವೇ ಈ ವರ್ಷ ಪ್ರತಿಯೊಬ್ಬನ ರಣಗರ್ಜನೆಯಾಗಿರಬೇಕು. ಇಂಗ್ಲೆಂಡದ ಪಕ್ಷದ ಪ್ರಭುಗಳು ಬಹಿಷ್ಕಾರಕ್ಕೇನೆ ವಿಶೇಷವಾಗಿ ಹೆದರುವರು. ಟೋರಿ ಹಾಗು ಲಿಬರಲ್ ಪಕ್ಷದವರಾದರೂ ಬಹಿಷ್ಕಾರಕ್ಕೇನೆ ಹೆದರುವರು. ರಾಜಕೀಯ ಹಕ್ಕುಗಳನ್ನು ಸಂಪಾದಿಸಿಕೊಳ್ಳಲು ಬಹಿಷ್ಕಾರದ ಹೊರತು ಬೇರೊಂದು ದಿವ್ಯ ಔಷಧವು ದೊರೆಯುವದೂ ಇಲ್ಲ. ಬಹಿಷ್ಕಾರದ ಜೊತೆಗೆ ವಿಧಾಯಕ ಕಾರ್ಯಗಳಾದ ಸ್ವದೇಶಿ ಹಾಗು ಖದ್ದರದ ಪ್ರಚಾರವನ್ನಾದರೂ ಪ್ರತಿಯೊಬ್ಬರೂ ಕೈಕೊಳ್ಳಬೇಕು. ಈ ಎರಡೂ ಕಾರ್ಯಗಳನ್ನೂ ಏಕಮುಖವಾಗಿ ಸಾಗಿಸಿದರೇನ ಯಶಸ್ಸು ಸಿಗುವದು.

ಅಫಘಾಣಿಸ್ಥಾನದಲ್ಲಿ ೮ ಜನರಿಗೆ ಹದ್ದುಪಾರು

ಪ್ರಭುತ್ವದ ವಿರುದ್ಧವಾಗಿ ಬಂಡುಮಾಡಿದ ಆರೋಪದ ನಿಮಿತ್ತವಾಗಿ ಅಫಗಾಣಿಸ್ಥಾನದಲ್ಲಿ ೮ ಜನ ಮುಖಂಡರಿಗೆ ೬ ತಿಂಗಳವರೆಗೆ ಹದ್ದುಪಾರಿನ ಶಿಕ್ಷೆಯು ದೊರೆತದೆ. ಅಫಗಾಣ ಸಂಸ್ಥಾನದವರಿಗೆ ತೊಂದರೆಯನ್ನು ಕೊಡತಕ್ಕದ್ದು [illegible] ಜನರ ಮುಖ್ಯಸ್ಥರೆಂದು ಅಬ್ದುಲ್ ರಹಿಮಾನ ಟ್ರಕ್ಕಿಯವರು ಮತ್ತು ಅವರ ಕೆಲವು ಅನುಯಾಯಿಗಳು [illegible] ಸೈನಿಕರಿಂದ ಹಿಡಿಯಲ್ಪಟ್ಟಿದ್ದಾರೆ. ಈ ಸಮಯದಲ್ಲಿ ಸೈನಿಕರಿಗೂ ಬಂಡುಗಾರರಿಗೂ ಕದನವಾಗಿ ಕೆಲವು ಬಂಡುಗಾರರು ಕೊಲ್ಲಲ್ಪಟ್ಟರು.

ರೇಲ್ವೆ ಪೋಲೀಸ ಇನಸ್ಪೆಕ್ಟರರ ಕೊಲೆಯ ವಿಚಾರಣೆ

ಡಿಸಂಬರ ೧೧ನೆಯ ತಾರೀಖಿನ ದಿವಸ ಚಂದಾಪುರ ಸ್ಟೇಶನದಲ್ಲಿ ಬಾಂಬುಹಾರಿಸಿ ರೇಲ್ವೆ ಪೋಲೀಸ ಇನಸ್ಪೆಕ್ಟರರಾದ ತಾರಿಣೀ ಮುಖರ್ಜಿಯವರ ಕೊಲೆಮಾಡಿದ ಸಂಬಂಧವಾಗಿ ಬಂಧನಕ್ಕೊಳಗಾದ, ಶ್ರೀ ಕಲಿಪದ ಚಕ್ರವರ್ತಿ ಹಾಗೆ. ರಾಮಕೃಷ್ಣ ವಿಶ್ವಾಸರವರ [illegible] ವಿಚಾರಣೆಯು, ತಾ|| ೩ನೆಯ ದಿವಸ ಅಲೀಪೂರದಲ್ಲಿ ಸ್ಪೇಶಲ್ ಟ್ರಿಬ್ಯೂನಲದ ಮುಂದೆ ಪ್ರಾರಂಭವಾಗಿದೆ.

ರಂಗೂನದಲ್ಲಿ ದಂಗೆ

ಮೂವರಿಗೆ ಮರಣ. ೨೫ ಜನರಿಗೆ ಗಾಯ.

ರಂಗೂನದಲ್ಲಿ ಲಾಮ್ಮಾ ಕ್ವಾರ್ಟರದಲ್ಲಿ ಇರುವಂಥ ಕೆಲವು ಚಿನಿ ಹಾಗು ಬರ್ಮೀ ಜನಗಳಲ್ಲಿ ತಾ|| ೩ ನೆಯ ದಿವಸ ಕೆಲವೊಂದು ವಿಷಯದ ಬಗ್ಗೆ ಜಗಳವಾಗಿ ಅದು ದಂಗೆಯ ಸ್ವರೂಪವನ್ನು ಹೊಂದಿತು. ಈ ಮೂಲಕವಾಗಿ ಮೂವರು ಜನರು ಮರಣ ಹೊಂದಿದ್ದು, ೨೫ ಜನರಿಗೆ ಭಯಂಕರ ಗಾಯಗಳಾಗಿವೆ.

ಕಂಡಿಯಲ್ಲಿ ಉಪ್ಪಿನ ಕಾಯಿದ ಭಂಗ

ಬಂಗಾಲ ಪ್ರಾಂತದಲ್ಲಿಯ ಕಂಡಿ ಸ್ವರಾಜ್ಯ ಆಶ್ರಮದ ಅಧಿಪತಿಗಳಾದ ಶ್ರೀ ಕೇಶವ ಚಕ್ರವರ್ತಿ ಶ್ರೀ ಭವಾನಿಭಾಯಿಯವರೊಂದಿಗೆ ಉಪ್ಪಿನ ಕಾಯಿದ ಭಂಗದ ನಿಮಿತ್ತವಾಗಿ ಸೆರೆ ಹಿಡಿಯಲ್ಪಟ್ಟಿದ್ದಾರೆ. ಕಂಡಿ, ಮಾಲವಾಡ ಮೊದಲಾದ ಸ್ಥಳಗಳಲ್ಲಿ ಉಪ್ಪಿನ ಕಾಯಿದ ಭಂಗವು ಮತ್ತೆ ಜೋರಿನಿಂದ ಪ್ರಾರಂಭವಾಗಿದೆ.

ಹಿಂದೂ ಮುಸಲ್ಮಾನರಲ್ಲಿಯ ಮತಭೇದ

ಹಿಂದೂ ಮುಸಲ್ಮಾನರಲ್ಲಿಯ ಮತಭೇದವನ್ನು [illegible] ಹಿಂದುಸ್ಥಾನಕ್ಕೆ ಸ್ವತಂತ್ರ [illegible] ಸಂಪಾದಿಸಿದಲ್ಲಿ, ಹಿಂದೂಗಳಿಂದ [illegible] ಅಲ್ಪಸಂಖ್ಯಾಕರಾದ [illegible] "ಟೈಮ್ಸ ಆಫ ಇಂಡಿಯಾ" ಪತ್ರಿಕೆಯು [illegible] ಅಭಿಪ್ರಾಯವನ್ನು [illegible].

[illegible]

ಮ್ಯುನಸಿಪಲಟಿಗೆ ಬಿದರ ಹಾಕಿದರು.

[illegible] ದ ರೀತ್ಯನುಸಾರ [illegible] ತಗದೂಗಿದ್ದರು, [illegible] ದಾಗಿ [illegible] ಬಾದ [illegible] ಬದಲಿ ಹಾಕಿ [illegible] ದ್ವಾರಿ

ವಾಚ, ಟಾಯಂಪೀಸು ದುರಸ್ತಿಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೇರ್ವೀಸದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಎಲ್ಲ ತರದ ಚಳಿಜ್ವರದ ಮೇಲೆ ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುತ್ತವೆ. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಪ ಇನಾಮದಾರ.
ಕಿಲ್ಲೆದ ಓಣಿ, ಬಾಗಲಕೋಟೆ

ಪ್ಲಾಟುಗಳು ಮಾರಾಟಕ್ಕಿವೆ.

ಟ್ರಾವೆಲರ್ಸ ಬಂಗಲೆಯ ಹತ್ತರವಿರುವ ೨೨೦ನೆಯ ಸರ್ವೆ ನಂಬರದಲ್ಲಿಯ ಕಾವೇರಿ [illegible] ಪ್ಲಾಟುಗಳು ಮಾರಾಟಕ್ಕಿವೆ. ತೆಗೆದುಕೊಳ್ಳಬಯಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗೂರದರಾವ ಧಾರವಾಡ
ವಕೀಲರು ಬಾಗಲಕೋಟೆ

ಶುದ್ಧ ಖಾದಿ! ಶುದ್ಧ ಖಾದಿ

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು [illegible] ಬಾಗಲಕೋಟೆ [illegible] ಮುದ್ರಣಾಲಯದಲ್ಲಿ
ಮುದ್ರಿಸಲ್ಪಟ್ಟು [illegible] ಪ್ರಸಿದ್ಧಿಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮

ನಿತ್ಯ ಸಂಚಿಕೆ.

ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT.

BI-WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಗುರುವಾರ ಮಿತಿ ಪುಷ್ಯ ಬಹುಳ ೪ ಶಕೆ ೧೮೫೨ ತಾ॥ ೮—೧—೩೧ [ಸಂಚಿಕೆ ೧೫೯

ಶ್ರೀ ವಿಠ್ಠಲಭಾಯಿಯವರನ್ನು ಬಿಟ್ಟರು

(ತಂತಿಯ ವಾರ್ತೆ ತಾ | ೭)

ಕೊಯಿಮತ್ತೂರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ವಿಠ್ಠಲಭಾಯಿ ಪಟೇಲರವರು ತಾ। ೭ ನೆಯ ದಿವಸ ಮುಂಜಾನೆ ಜೇಲಿನಿಂದ ಬಿಡುಗಡೆ ಮಾಡಲ್ಪಟ್ಟದ್ದಾಗಿ ಅವರು ಮದ್ರಾಸದಿಂದ ಶುಕ್ರವಾರ ದಿವಸ ಮುಂಬಯಿಗೆ ಹೊರಡತಕ್ಕವರಿದ್ದಾರೆ.

ಶ್ರೀ. ಸದಾನಂದರಿಗೆ ೪ ತಿಂಗಳ ಶಿಕ್ಷೆ.

ಕ್ರಿ. ಲಾ. ತಿದ್ದು ಮಾಡದ ಕಾಯದೆಯ ೧೭ ನೆಯ ಕಲಮಿನನ್ವಯ ಮುಂಬಯಿಯಲ್ಲಿ ಬಂಧನಕ್ಕೊಳಗಾದ "ಫ್ರೀ ಪ್ರೆಸ್" ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಸದಾನಂದರವರಿಗೆ ೩ ತಿಂಗಳ ಶಿಕ್ಷೆ ಹಾಗು ದಂಡವು ವಿಧಿಸಲ್ಪಟ್ಟಿದೆ. ದಂಡ ಕೊಡದಿದ್ದಲ್ಲಿ ಮತ್ತೆ ೧ ತಿಂಗಳ ಶಿಕ್ಷೆಯನ್ನು ಅನುಭೋಗಿಸಬೇಕಾಗಿ ಹೇಳುವದಲ್ಲ ಬಂದಿದೆ

ಅಮೃತಸರದಲ್ಲಿ ಮುಖಂಡರನ್ನು ಹಿಡಿದರು

(ತಂತಿಯ ವಾರ್ತೆ)

ಅಮೃತಸರದಲ್ಲಿಯ ಯೂವಕ ಕಾಂಗ್ರೆಸ್ ಮುಂದಾಳುಗಳು ತಾ॥ ೭ ನೆಯ ದಿವಸ ಮುಂಜಾನೆ ಸೆರೆ ಹಿಡಿಯಲ್ಪಟ್ಟಿದ್ದಾರೆ. ಮುಂದಾಳುಗಳನ್ನು ಸೆರೆ ಹಿಡಿಯುವ ಸಮಯದಲ್ಲಿ ಅಧಿಕಾರಿಗಳು ಅಲ್ಲಲ್ಲಿ ಸೈನಿಕರನ್ನು ನಿಲ್ಲಿಸಿದ್ದರು

ಲ್ಯಾಂಕೆಶಾಯರದಲ್ಲಿ ಕಾರ್ಮಿಕರ ಸಂಪು.

ಲ್ಯಾಂಕೆಶಾಯರದ ಅರಿವೆ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ೫೦೦೦೦ ಜನ ... ರರು ತಮ್ಮ ಕಷ್ಟವನ್ನು ಪರಿಹರಿಸದಿ ... ಸಂಪು ಮಾಡುವೆವಾಗಿ ಬೆದರಿಕೆ ಹಾಕಿದ್ದಾರೆ

—

(ತಂತಿಯ ವಾರ್ತೆ)

ಲಂಡನದಲ್ಲಿ ಮರಣ ಹೊಂದಿದ ಮೌಲಾನಾ ಮಹಮ್ಮದ ಅಲ್ಲಿಯವರ ದೇಹವನ್ನು ಹಿಂದುಸ್ಥಾನಕ್ಕೆ ತರುವದಕ್ಕಾಗಿ ತಗಲುವ ಎಲ್ಲ ವೆಚ್ಚವನ್ನು ಸರಕಾರದವರು ಕೊಡುವವರಿದ್ದಾರಾಗಿ ತಿಳಿದು ಬರುತ್ತದೆ

ವಿಜಾಪುರ ಜಿಲ್ಹೆಯಲ್ಲಿ ಅನ್ಯಾಯದೊಂದು ಮಾದರಿ

ಶ್ರೀ ಗೋವರ್ಧನದಾಸರು ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿದ ... ಪೋಲೀಸರು ಅವರನ್ನು ಸೆರೆಹಿಡಿದು, ಬದಾಮಿಗೆ ಕರೆದೊಯ್ದು ಅವರನ್ನು ಅಲ್ಲಿ ಲಾಕಪ್ಪಿನಲ್ಲಿ ... ಬಂದವರಷ್ಟೆ, ನಮ್ಮ ಪ್ರತಿನಿಧಿಯು ಅವರನ್ನು ಕಂಡುಕೊಂಡು ಈ ಬಗ್ಗೆ ವಿಚಾರಿಸಲಾಗಿ ತಮ್ಮನ್ನು ವಾರಂಟು ಇಲ್ಲದೆ ಸೆರೆಹಿಡಿದ ಲಾಕಪ್ಪಿನಲ್ಲಿ ಇಟ್ಟಿರುವರೆಂದೂ ವಾರಂಟು ತೋರಿಸಲ ಪೋಲೀಸ ಅಧಿಕಾರಿಗಳು ಹಾಗು ಮಾಮಲೇದಾರರಿಗೆ ಮೂರು ನಾಲ್ಕು ಸಲ ಕೇಳಿಕೊಂಡಾಗ್ಯೂ, ವಾರಂಟನ್ನು ತೋರಿಸುವದರಲ್ಲಿ ಬಂದಿಲ್ಲವೆಂಬುದಾಗಿ ಅವರು ತಿಳಿಸಿದರು. ಈ ಮೊಗಲಾಯಿ ರಾಜ್ಯವು ಎಂದು ನಿಂತುಹೋಗುವದೋ ಏನೋ ದೇವರೇ ಬಲ್ಲ!

ಗವ್ಹರ್ನರರನ್ನು ಕೊಲ್ಲುವದೆ ನನ್ನ ಉದ್ದೇಶವಾಗಿತ್ತು.

ಲಾಹೋರ ಅತ್ಯಾಚಾರ ವಿಚಾರಣೆಯ ಸಮಯದಲ್ಲಿ ಮ್ಯಾಜಿಸ್ಟ್ರೇಟ ಮಿ. ಲ್ಯೂಯಿಸರವರು ಪ್ರಶ್ನೆ ಮಾಡಿದ್ದಕ್ಕೆ ಆರೋಪಿಯಾದ ಶ್ರೀ ಹರಿಕಿಶನರು ಕೆಳಗಿನಂತೆ ಉತ್ತರ ಕೊಟ್ಟರು.

ಗವ್ಹರ್ನರರನ್ನು ಕೊಲ್ಲುವದಕ್ಕಾಗಿಯೇ ನಾನು ಲಾಹೋರಕ್ಕೆ ಬಂದೆ. ಒಟ್ಟಿಗೆ ೬ ಸಾರೆ ಗುಂಡು ಹಾರಿಸಿದೆ. ಅವುಗಳಲ್ಲಿ ಎರಡು ಗುಂಡುಗಳನ್ನು ಗವ್ಹರ್ನರರಿಗೆ ಗುರಿಯಿಟ್ಟೆ. ಉಳಿದ ನಾಲ್ಕು ಗುಂಡುಗಳನ್ನು ಸ್ವಸಂರಕ್ಷಣೆಗಾಗಿ ಹಾರಿಸಿದೆ. ಗುಂಡು ಹಾರಿಸುವದೊಂದೇ ತಪ್ಪು, ಅಧಿಕಾರಿಗಳು ನನ್ನನ್ನು ಕೈದು ಮಾಡಿದರು. ಗವ್ಹರ್ನರರನ್ನು ಕೊಲ್ಲಲು ಏಕೆ ಪ್ರಯತ್ನಿಸಿದೆನೆಂಬುದನ್ನು ನಾನು ಹೇಳುವದಿಲ್ಲ.

✓ಮಹಮ್ಮದ ಅಲ್ಲಿಯವರ

ಸಂಕ್ಷಿಪ್ತ ಜೀವನ ಚರಿತ್ರೆ:

ಮಹಮ್ಮದ ಅಲ್ಲಿಯವರು ೧೮೭೮ ರಲ್ಲಿ ಜನ್ಮ ತಾಳಿದರು ಅವರು ಚಿಕ್ಕವರಿರುವಾಗಲೆ ಅವರ ತಂದೆಯವರು ತೀರಿಕೊಂಡರು. ಶೌಕತ ಅಲ್ಲಿಯವರು ಆಗ ಎರಡ ವರ್ಷದವರಿದ್ದರು. ಆದ್ದರಿಂದ ಅವರಿಬ್ಬರನ್ನು ಸಂರಕ್ಷಿಸುವ ಎಲ್ಲ ಭಾರವು ಅವರ ತಾಯಿಯವರಾದ ಬಿಆಮ್ಮಾ ಅವರ ಮೇಲೆ ಬಿತ್ತು. ಅವರು ಮಕ್ಕಳನ್ನು ಅಲ್ಲೀಗಡಕ್ಕೆ ಕಳಿಸಿ ಅವರ ವಿದ್ಯಾಭ್ಯಾಸ ಸಾಗಿಸಿದರು.

ಮಹಮ್ಮದ ಅಲ್ಲಿಯವರು ಅಲ್ಲೀಗಡದಲ್ಲಿ ತಮ್ಮ ಶಿಕ್ಷಣವನ್ನು ಮುಗಿಸಿಕೊಂಡು, ೧೮೯೮ ರಲ್ಲಿ ಇಂಗ್ಲಂಡಕ್ಕೆ ತೆರಳಿ, ಆಕ್ಸಫರ್ಡ ವಿಶ್ವವಿದ್ಯಾಲಯದ ಲಿಂಕಲನ್ ಕಾಲೇಜದಲ್ಲಿ ೪ ವರ್ಷಗಳವರೆಗೆ ಅಭ್ಯಾಸ ಮಾಡಿದರು. ಅವರು ಸಾಹಿತ್ಯ ಮತ್ತು ಇತರ ವಿಷಯಗಳಲ್ಲಿ ವಿಶೇಷ ಹಾಕಣಿಕೆ ಪಡೆದರೂ, ಇಂಡಿಯನ್ ಸಿವ್ಹಿಲ ಸರ್ವಿಸ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದು ಅವರಿಗೆ ಶಕ್ಯವಾಗಲಿಲ್ಲ.

ಅಂದು ೧೯೦೨ ರಲ್ಲಿ ಇಂಗ್ಲಂಡದಿಂದ ತಿರುಗಿ ಹಿಂದುಸ್ಥಾನಕ್ಕೆ ಬಂದು ರಾಮಪುರ ಸಂಸ್ಥಾನದಲ್ಲಿ ಉದ್ಯೋಗ ವಹಿಸಿ, ಕೆಲವು ವರ್ಷಗಳ ಮೇಲೆ ಬರೋಡಾ ಸಿವ್ಹಿಲ್ ಸರ್ವಿಸದಲ್ಲಿ ಸೇರಿದರು ಕೆಲವು ವರ್ಷಗಳ ನಂತರದಲ್ಲಿ ತಮ್ಮ ಉದ್ಯೋಗಕ್ಕೆ ಶರಣು ಹೊಡೆದು, "ಕಾಮ್ರೇಡ" ಪತ್ರಿಕೆಯನ್ನು ಹೊರಡಿಸುವ ಉದ್ದೇಶದಿಂದ ಕಲಕತ್ತೆಗೆ ತೆರಳಿದರು. ೧೯೦೬ ರಲ್ಲಿ ಎಲ್ಲ ಜನರೊಂದಿಗೆ ಕೂಡಿಕೊಂಡು ಮುಸ್ಲಿಮ್ ಲೀಗ ಸಂಸೆಯನ್ನು ಸ್ಥಾಪಿಸಿದರು. ಜನಸಾಮಾನ್ಯರಲ್ಲಿ ಜಾಗೃತಿಯನ್ನುಂಟು ಮಾಡಬೇಕಾದರೆ ಉರ್ದು ಪತ್ರಿಕೆಯು ಅವಶ್ಯವಾಗಿದೆಯೆಂಬುದನ್ನು ತಿಳಿದುಕೊಂಡು "ಹಮದರ್ದ" ಪತ್ರಿಕೆಯನ್ನು ಹೊರಡಿಸಿದರು. ಬಾಲ್ಕನ್ ಯುದ್ಧದ ಸಮಯದಲ್ಲಿ ಅವರು ಡಾ. ಅನಸಾರಿಯವರೊಂದಿಗೆ ಕೂಡಿಕೊಂಡು ರೆಡ್ ಕ್ರಿಸೆಂಟ ಮಿಶನ್ ಸಂಸ್ಥೆಯನ್ನು ಸ್ಥಾಪಿಸಿ ಬಹಳ ಸಹಾಯ ಮಾಡಿದರು ಈ ಮೂಲಕವಾಗಿ ೧೯೧೫ ರಲ್ಲಿ ಅವರಿಗೆ ಹದ್ದುಪಾರು ಆಯಿತು.

ಅರಸರ ಜಾಹೀರನಾಮೆಯನ್ನು ಅನುಸರಿಸಿ ೧೯೧೯ ನೆಯ ಡಿಸೆಂಬರ ತಿಂಗಳದಲ್ಲಿ ಅವರು ಬಿಡುಗಡೆ ಹೊಂದಿ ಅಮೃತಸರದ ಕಾಂಗ್ರೆಸಕ್ಕೆ ಬಂದರು. ಅಲ್ಲೀ ಬಂಧುಗಳು ಕಾಂಗ್ರೆಸಕ್ಕೆ ಬಂದು ಕೂಡಿಕೊಂಡಿದ್ದನ್ನು ಕಂಡು ಮುಸಲ್ಮಾನರು ರಾಷ್ಟ್ರೀಯ ಪಕ್ಷದಲ್ಲಿ ಬಂದು ಸೇರಹತ್ತಿದರು. ಆದ್ದರಿಂದ ರಾಷ್ಟ್ರಪಕ್ಷಕ್ಕೆ ಆಗ ಒಳ್ಳೇ ಬಲ ಬಂತು. ೧೯೨೦ ರಲ್ಲಿ ಅವರು ಅಖಿಲ ಭಾರತ ಖಿಲಾಫತ್ ಶಿಷ್ಟ ಮಂಡಳವನ್ನು ಇಂಗ್ಲಂಡಕ್ಕೆ ತೆಗೆದುಕೊಂಡು ಹೋಗಿ ಇಂಗ್ಲಂಡ ಫ್ರಾನ್ಸ, ಮತ್ತು ಇಟಲಿ ಈ ದೇಶಗಳಲ್ಲಿ ಆ ಬಗ್ಗೆ ಚಳವಳಿ ಸಾಗಿಸಿದರು. ಅಲ್ಲಿ ಅವರ ಕಾರ್ಯಕ್ಕೆ ಯಶ ದೊರೆಯಲಿಲ್ಲ. ಅವರು ಮರಳಿ ಹಿಂದುಸ್ಥಾನಕ್ಕೆ ಬಂದು ಕಾಂಗ್ರೆಸ್ಸಿನಲ್ಲಿ ಸೇರಿಕೊಂಡು ಅಸಹಕಾರ ಚಳವಳಿಯೊಂದಿಗೆ ಖಿಲಾಫತ ಚಳವಳಿಯನ್ನು ಜೋರಿನಿಂದ ಸಾಗಿಸಿದರು. ಅಸಹಕಾರಯುಗದಲ್ಲಿ ರಾಜದ್ರೋಹಕ್ಕಾಗಿ ಅವರಿಗೆ ಕರಾಚಿಯಲ್ಲಿ ಎರಡು ವರ್ಷ ಶಿಕ್ಷೆ ವಿಧಿಸಲ್ಪಟ್ಟಿತು ೧೯೨೩ ರಲ್ಲಿ ಅವರು ಜೇಲಿನಿಂದ ಬಿಡುಗಡೆ ಹೊಂದಿ ಬಂದರು ಆಗ ಕಾಂಗ್ರೆಸ್ ಪಕ್ಷದಲ್ಲಿ ಅಸಹಕಾರಿಗಳ ಪಕ್ಷ ಹಾಗು ಸ್ವರಾಜ್ಯದ ದಿಗ ಪಕ್ಷ ಹೀಗೆ ಎರಡು ಬಣಗಳಾಗಿದ್ದವು. ೧೯೨೩ ರಲ್ಲಿ ಕೋಕೋನಾಡಿನಲ್ಲಿ ಕೂಡಿದ ರಾಷ್ಟ್ರಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಕಾಂಗ್ರೆಸ್ ಕಾರ್ಯವನ್ನು ಮುಂದಕ್ಕೆ ಸಾಗಿಸಿದರು, ೧೯೨೪ ರಲ್ಲಿ ದಿಲ್ಲಿಯಲ್ಲಿ ಸೇರಿದ ಸರ್ವ ಪಂಗಡಗಳ ಪರಿಷತ್ತಿಗೆ ಅವರು ಅಧ್ಯಕ್ಷರಾದರು. ಅಲ್ಲಿ ಮಹಾತ್ಮಾಗಾಂಧಿ ಹಾಗು ಅವರಲ್ಲಿ ಮತಭೇದ ಉಂಟಾಯಿತು ಅಂದಿನಿಂದ ಅವರು ಜಾತೀಯತ್ವದ ಕಡೆಗೆ ತಮ್ಮ ಲಕ್ಷವನ್ನು ಹೊರಳಿಸಿ ಹಕ್ಕುಗಳ ಸಂಬಂಧವಾಗಿ ರಾಷ್ಟ್ರೀಯ ಮುಖಂಡರೊಡನೆ ವಿರೋಧ ಭಾವವನ್ನು ತಳೆದರು. ೧೯೩೦ ರಲ್ಲಿ ದುಂಡಿಗಾಲಿಯ ಪರಿಷತ್ತಿನ ಪ್ರತಿನಿಧಿಗಳಾಗಿ ಆರಿಸಲ್ಪಟ್ಟು ಅವರು ಲಂಡನಕ್ಕೆ ಹೋದರು ಅಲ್ಲಿ ಪರಿಷತ್ತಿನಲ್ಲಿ ಭಾಷಣ ಮಾಡುವಾಗ ಅವರು "ಸ್ವರಾಜ್ಯ ದೊರಕಿಸಿಕೊಂಡೇ ಹಿಂದುಸ್ಥಾನಕ್ಕೆ ಮರಳಿ ಹೋಗುವೆನು. ಇಲ್ಲದಿದ್ದರೆ ಇಲ್ಲಿಯೇ ಪ್ರಾಣ ಬಿಡುವೆನು ಎಂಬುದಾಗಿ ನುಡಿದಿದ್ದರು. ಅಲ್ಲಿ ಅವರು ಉಬ್ಬಸದ ಮೂಲಕವಾಗಿ ಕೆಲವು ದಿನಗಳ ವರೆಗೆ ಹಾಸಿಗೆ ಹಿಡಿದು ೪ನೆಯ ತಾರೀಖಿನ ದಿವಸ ಮರಣ ಹೊಂದಿದರು.

✝ ಮುಧೋಳದ ಯುವರಾಜರು ಮರಣ ಹೊಂದಿದರು

ಮುಧೋಳ ಸಂಸ್ಥಾನದ ಯುವರಾಜ ರಾಜಾ ಶ್ರೀ ಜಯಸಿಂಗರಾವ ಘೋರ್ಪಡೇ ಇವರು ಪುಣೆಯಲ್ಲಿ ೩ ದಿವಸ ಮರಣ ಹೊಂದಿದರೆಂದು ತಿಳಿದು ವಿಷಾದವಾಗುತ್ತದೆ

✝ ಸೊಲಾಪುರದ ಆರೋಪಿಗಳಿಗೆ ಜೀವದಾನ

ಸೊಲ್ಲಾಪುರದಲ್ಲಾದ ದಂಗೆಯ ಸಂಬಂಧವಾಗಿ ಫಾಶಿಯ ಶಿಕ್ಷೆಗೆ ಗುರಿಯಾದ ನಾಲ್ವರು ಆರೋಪಿಗಳಿಗೆ ದಯೆ. ತೋರಿಸಿ ಫಾಶಿಯ ಶಿಕ್ಷೆಯನ್ನು ರದ್ದು ಮಾಡಬೇಕಾಗಿ ಅಖಿಲ ಭಾರತ ಜೈನ ಸಂಘದವರು ವ್ಹಾಯಿಸರಾಯರಿಗೆ ತಂತಿ ಕಳಿಸಿದ್ದಾರೆ.

✓ ಗದಗದಲ್ಲಿ ಗಾಂಧಿ ದಿನ

(ಸ್ವಂತ ಸುದ್ದಿಗಾರರಿಂದ)

ಇಲ್ಲಿ ತಾ|| ೫ ನೆಯ ದಿವಸ ಮಹಾತ್ಮರ ಬಂಧನ ದಿನವನ್ನು ಆಚರಿಸುವದರಲ್ಲಿ ಬಂದಿತು. ಸಂಜೆಯ ೫ ಗಂಟೆಗೆ ಮೆರವಣಿಗೆಯು ಹೊರಡಿಸಲ್ಪಟ್ಟಿತ್ತು. ಮೆರವಣಿಗೆಯು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೭ ಗಂಟೆಗೆ ಗಾಂಧಿ ಚೌಕಿಗೆ ತಲುಪಿತು. ಅಲ್ಲಿ ಸಾರ್ವಜನಿಕ ಸಭೆಯಾಗಿ, ಶ್ರೀ ಕೃಷ್ಣಾಚಾರ್ಯ ಪೂಜಾರಿಯವರ ಒಳ್ಳೇ ಸ್ಫೂರ್ತಿದಾಯಕ ಭಾಷಣವಾಯಿತು.

ಇಲ್ಲಿಯ ಬೇರೆ ಬೇರೆ ವರ್ತಕರು ಅಂದರೆ ನೂಲು ಮತ್ತು ರೇಶಿಮೆಯವರು, ಜವಳಿ ವರ್ತಕರು, ಸಿರೇಟಿನವರು ಈ ಪ್ರಕಾರ ಯಾವರೂ ಇನ್ನು ಮುಂದೆ ಪರದೇಶಿ ಸರಕನ್ನು ಮಾರಾಟ ಮಾಡುವದಿಲ್ಲವೆಂದು ಪ್ರತಿಜ್ಞಾಪತ್ರದ ಮೇಲೆ ಬರೆದುಕೊಟ್ಟಿದ್ದಾರೆ. ಇವರೆಲ್ಲರೂ ಪ್ರತಿಜ್ಞೆಯಂತೆ ನಡೆದುಕೊಳ್ಳುವರೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಕೆಲವು ಸ್ವಯಂಸೇವಕರು ನಿಯಮಿಸಲ್ಪಟ್ಟಿದ್ದು, ಅವರೂ ತಮ್ಮ ಕಾರ್ಯವನ್ನು ಒಳ್ಳೇ ದಕ್ಷತೆಯಿಂದ ಸಾಗಿಸಿದ್ದಾರೆ.

ಇಲ್ಲಿಯ ಮ್ಯಾಜಿಸ್ಟ್ರೇಟರು, ಶ್ರೀ ನಾಡಗೀರ ವಕೀಲರಿಗೆ ೪ ತಿಂಗಳ ಕಠಿಣ ಶಿಕ್ಷೆ ಹಾಗು ೨೦೦ ರೂ ದಂಡ ವಿಧಿಸಿ ಅವರನ್ನು "ಕ" ವರ್ಗದಲ್ಲಿ ಇರಿಸಲು ಬರೆದುಕೊಂಡಿದ್ದರ ವಿರೋಧಾರ್ಥವಾಗಿ, ಗದಗ ಬೆಟಗೇರಿಯ ನ್ಯಾಯವಾದಿಗಳು ಡಿ. ಮ್ಯಾಜಿಸ್ಟ್ರೇಟರ ಕಡೆಗೆ ಒಂದು ಅರ್ಜಿ ಕಳಿಸಿ, ಅವರನ್ನು "ಬ" ವರ್ಗದಲ್ಲಿ ಇಡಲು ಅಪ್ಪಣೆ ಕೊಡುವಂತೆ ಅವರಿಗೆ ಕೇಳಿಕೊಂಡಿದ್ದಾರೆ

✓ಶ್ರೀ ಭಿಸೆಯವರನ್ನು ಸೆರೆ ಹಿಡಿದರು.

ಧಾರವಾಡದಲ್ಲಿಯ ಮಂದಿರಾ ಸಮಾಜದ ಮುಂದಾಳುಗಳೂ ಹಾಗು ಅಲ್ಲಿಯ ವ್ಯಾಯಾಮಶಾಲೆಯ ಸ್ಥಾಪಕರೂ ಆಗಿರುವ ಶ್ರೀ ನರಸಿಂಗರಾವ ಭಿಸೆಯವರು ಬಾಗಲಕೋಟೆದಲ್ಲಿ ರಾಜದ್ರೋಹಾತ್ಮಕವಾದ ಭಾಷಣವನ್ನು ಮಾಡಿದ ಸಂಬಂಧವಾಗಿ ತಾ|| ೧೯ ನೆಯ ದಿವಸ ಧಾರವಾಡದಲ್ಲಿ ಸೆರೆಹಿಡಿಯಲ್ಪಟ್ಟು ಬಾಗಲಕೋಟೆಕ್ಕೆ ಕಳಿಸಲ್ಪಟ್ಟರು

ಬಾಬು ರಾಜೇಂದ್ರ ಪ್ರಸಾದರು

ಕಾಂಗ್ರೆಸದ ಸರ್ವಾಧಿಕಾರಿಗಳಾದರು.

ಕಾಂಗ್ರೆಸದ ಸರ್ವಾಧಿಕಾರಿಗಳಾದ ಸರದಾರ ವಲ್ಲಭಭಾಯಿ ಯವರಿಗೆ ಕ್ರಿ ಲಾ. ಅಮೆಂಡ ಮೆಂಟ ಕಾಯದೆಯ ಅನ್ವಯ ೯ ತಿಂಗಳ ಸಾದಾ ಶಿಕ್ಷೆಯ ವಿಧಿಸಲ್ಪಟ್ಟಿದ್ದರಿಂದ, ಅವರ ಸ್ಥಳದಲ್ಲಿ ಬಿಹಾರದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಬಾಬು ರಾಜೇಂದ್ರ ಪ್ರಸಾದರವರು ಕಾಂಗ್ರೆಸದ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಗುಜರಾಥದಲ್ಲಿ ದಬ್ಬಾಳಿಕೆ

ಉಪ್ಪಿನ ಕಾಯಿದೆಭಂಗ ಮಾಡಿದ ಬಗ್ಗೆ ಸುರತದಲ್ಲಿ ಶ್ರೀಮತಿ ಶಾರದಾಬಾಯಿ ಅಸಡಿ ಹಾಗು ೧೮ ಜನ ಸ್ವಯಂಸೇವಕರಿಗೆ ೩ ತಿಂಗಳಿಂದ ೩॥ ತಿಂಗಳ ವರೆಗೆ ಬೇರೆ ಬೇರೆ ಅವಧಿಯ ಶಿಕ್ಷೆಗಳಾಗಿವೆ. ಸುರತ ಜಿಲ್ಹೆಯ ಸರ್ವಾಧಿಕಾರಿಗಳಾದ ಶ್ರೀ ಪ್ರೇಮ ಚಂದ ಪೊಂಡ್ಯಾರವರು ಕ್ರಿ ಲಾ ಅಮೆಂಡಮೆಂಟ ಕಾಯದೆಯ ಅನ್ವಯ ಬಂಧನಕ್ಕೊಳಗಾಗಿದ್ದಾರೆ. ಖೇಡಾ ಜಿಲ್ಹೆಯ ಸರ್ವಾಧಿಕಾರಿಗಳಾದ ಶ್ರೀ ನಾನುಭಾಯಿ ದಾವೆಯವರಿಗೆ ೩ ತಿಂಗಳ ಕಠಿಣ ಶಿಕ್ಷೆಯು ಪ್ರಾಪ್ತವಾಗಿದೆ ಸಾಬರಮತಿ ಸ್ವರಾಜ್ಯಾಶ್ರಮದ ಶ್ರೀ ಮತಿ ಮಣಿಬೇನ ಪಟೇಲರಿಗೆ ಕೈದು ಆಗಿದೆ.

ಚಕ್ರವರ್ತಿಯವರ

೭೨ ದಿವಸದ ಅನ್ನತ್ಯಾಗ

ಕಷ್ಟಗಳನ್ನು ನಿವಾರಣ ಮಾಡುತ್ತೇನೆಂಬುದಾಗಿ ಜೇಲಿನ ಅಧಿಕಾರಿಗಳು ವಚನ ಕೊಟ್ಟಿದ್ದರಿಂದ, ಪಾಟಣಾ ಜೇಲಿನಲ್ಲಿಯ ರಾಜಕೀಯ ಕೈದಿಗಳಾದ ಶ್ರೀ ಕೇಶವ ಚಕ್ರವರ್ತಿಯವರು ತಮ್ಮ ಅನ್ನತ್ಯಾಗ ವ್ರತವನ್ನು ಮುರಿದು ತಾ| ೫ ನೆಯ ದಿವಸ ಆಹಾರವನ್ನು ತೆಗೆದುಕೊಂಡರು. ಇವರು ಒಟ್ಟಿಗೆ ೭೨ ದಿನಗಳ ವರೆಗೆ ಅನ್ನತ್ಯಾಗ ಮಾಡಿದ್ದರು.

ಶ್ರೀ ಬೆಳವಣಿಕಿಯವರ

ಖಟ್ಲೆಯ ವಿಚಾರಣೆ

(ಸ್ವಂತ ಸುದ್ದಿಗಾರರಿಂದ).

ಶ್ರೀ ಬೆಳವಣಿಕಿ ಹಣಮಂತರಾಯರ ಖಟ್ಲೆಯ ವಿಚಾರಣೆಯು ತಾ|| ೫ ನೆಯ ದಿವಸ ಗದಗದಲ್ಲಿ ಡಿ ಡಿ ಕಡೆಕ್ಕರ ಇವರ ಮುಂದೆ ಪ್ರಾರಂಭವಾಯಿತು. ಇವರ ಮೇಲೆ ಕ್ರಿ, ಲಾ. ಅಮೆಂಡಮೆಂಟ ಕಾಯದೆಯ ೧೭ (೧) ನೆಯ ಕಲಮಿನ ಪ್ರಕಾರ ಆರೋಪವು ಇಡಲ್ಪಟ್ಟಿದೆ. ಈ ಬಗ್ಗೆ ಏನಾದರೂ ಸಾಕ್ಷಿ ಕೊಡುವಿರೇನೆಂದು ಮಾ. ಜಿಸ್ಟ್ರೇಟರು ಆವರಿಗೆ ಪ್ರಶ್ನೆ ಮಾಡಿದಾಗ ಸಾಕ್ಷಿ ವಗೈರೆ ಏನೂ ಕೊಡುವದಿಲ್ಲವಾಗಿ ಹಣಮಂತರಾಯರು ಉತ್ತರ ಕೊಟ್ಟರು ಶ್ರೀ ಶಿರಹಟ್ಟಿ ತಿಮ್ಮಣ್ಣ ವಕೀಲರು "ಅವಿ ಆಸ್ಟ್ಯಾಕ್ರಿ" ಪ್ರಕಾರ ಆಗ್ರೀಮೆಂಟ ಮಾಡಿದರು. ಕೇಸು ಮುಂದಕ್ಕೆ ಹಾಕಲ್ಪಟ್ಟಿತು.

ಹುಬ್ಬಳ್ಳಿಯಲ್ಲಿ

ಸಾಜಂಟನ ಮೇಲೆ ಮಾನಹಾನಿ ದಾವೆ

(ಸ್ವಂತ ಸುದ್ದಿಗಾರರಿಂದ)

ಗಾಂಧಿ ಟೊಪಿಗಳನ್ನು ಹಾಕಿಕೊಂಡು ಸೇಶನದಲ್ಲಿ ನಿಂತಿದ್ದ ಜನರನ್ನು ಪೋಲೀಸರು ಬಲಾತ್ಕಾರದಿಂದ ಓಡಿಸಿದರು. ಆದರ ಸಂಬಂಧವಾಗಿ ಶ್ರೀ ಶಂಕರ ದೀಕ್ಷಿತರವರು ರೇಲ್ವೆ ಸಾರ್ಜಂಟ ಮಿ ಹಾಲ್ ಇವರ ಮೇಲೆ ತಾ|| ೫ ನೆಯ ದಿವಸ ಮಾನಹಾನಿಯ ಬಗ್ಗೆ ದಾವೆ ಮಾಡುತ್ತಾರೆ.

ಬೆಳಗಾವಿಯಲ್ಲಿ

ಶ್ರೀ ದೇಶಪಾಂಡೆಯವರ ವಿಚಾರಣೆ

ಬೆಳಗಾವಿಯ ಡಿ ಮ್ಯಾಜಿಸ್ಟ್ರೇಟರು ಹೊರಡಿಸಿದ ಆಜ್ಞೆಯನ್ನು ಮುರಿದ ಪ್ರಾತಃಸಂಕೀರ್ತನೆಯಲ್ಲಿ ಭಾಗವಹಿಸಿದುದಕ್ಕಾಗಿ ವಿಚಾರಣೆಗಾಗಿ ಗುರಿಮಾಡಲ್ಪಟ್ಟ, ಹಳೇಕೇರಿಯ ಶ್ರೀ ತಿರುಮಲ ದೇಶಪಾಂಡೆಯವರ ವಿಚಾರಣೆ ತಾ|| ೬ಕ್ಕೆ ಮುಂದೆ ಬಿದ್ದಿದೆಯೆಂದು ತಿಳಿದು ಬರುತ್ತದೆ.

ಇಹವೃತ್ತ

ತಾ| ೬ನೆಯ ದಿವಸ ಸಂಜೆಯ ೭ ಗಂಟೆಗೆ ಪಂಚಾಯತ ಕಮೇಟಿಯಲ್ಲಿ ಸಾರ್ವಜನಿಕ ಸಭೆಸೇರಿ ಮೌಲಾನಾ ಮಹಮ್ಮದಲಿಯವರ ಮರಣದ ಬಗ್ಗೆ ದುಃಖ ಪ್ರದರ್ಶನವು ಮಾಡಲ್ಪಟ್ಟಿತು. ಶ್ರೀ ಅಬ್ದುಲ್ ಸಾಹೇಬ ಗಣಿ, ಗುರುರಾವ ಜೋರಾಪೂರ ಹಾಗು ಶ್ರೀಮತಿ ಸೀತಾಬಾಯಿ ಬಳುವಳ್ಳಿಯವರು ಭಾಷಣ ಮಾಡಿದರು.

ಮಹಾತ್ಮರನ್ನು

ಬಿಡುಗಡೆಮಾಡಿರಿ

"ಮಹಾತ್ಮಾ ಗಾಂಧಿ ಹಾಗು ಅವರ ೫೦೦೦೦ ಅನುಯಾಯಿಗಳನ್ನು ಸೆರೆಮನೆಗಳಲ್ಲಿಟ್ಟು, ಹಿಂದೀ ರಾಜ್ಯದಾಡಳಿತೆಯು ಮುಂದುವರಿಯನ್ನು ಸಿದ್ಧಪಡಿಸುವದು ನಿರರ್ಥಕವಾಗಿದೆಯಾಗಿದ್ದರಿಂದ ಅವರೆಲ್ಲರನ್ನು ಕೂಡಲೆ ಬಿಡುಗಡೆ ಮಾಡಿ, ಹಿಂದುಸ್ಥಾನ ಹಾಗು ಇಂಗ್ಲಂಡ ಈ ಎರಡೂ ರಾಷ್ಟ್ರಗಳ ನಡುವೆ ಒಡಂಬಡಿಕೆಯನ್ನುಂಟು ಮಾಡಲು ಸಹಾಯ ಮಾಡಬೇಕಾಗಿ ಬ್ರಿಟಿಶ ಸರಕಾರದವರಿಗೆ ಈ ಸಭೆಯು ಕೇಳಿಕೊಳ್ಳುತ್ತದೆ" ಎಂಬುದಾಗಿ ಲಂಡನದ ಗಾಂಧಿ ಸಂಘದವರು ತಮ್ಮ ವಾರ್ಷಿಕ ಸಮಾರಂಭದಲ್ಲಿ ನಿರ್ಣಯ ಮಾಡಿಕೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ

ಜನರನ್ನು ಹಿಡಿದರು

ಮಹತ್ಮಾ ಗಾಂಧಿಯ ಸೆರಬಂಧನ ದಿನದ ಬಗ್ಗೆ ತಾ|| ೫ ನೆಯ ದಿವಸ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಸಭಾಸ್ಥಾನಕ್ಕೆ ತಲಪಿತು. ಅಲ್ಲಿ ಸರ್ವಾಧಿಕಾರಿಗಳಾದ ಶ್ರೀ ಪಾವಣಸ್ಕರರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಪರದೇಶಿ ಸರಕುಗಳನ್ನು ಬಹಿಷ್ಕರಿಸಲು ಅಧ್ಯಕ್ಷರ ಜನರಿಗೆ ವಿನಂತಿಮಾಡಿಕೊಂಡರು. ಬಳಿಕ ೫ ಜನ ವಿದ್ಯಾರ್ಥಿಗಳು ಅಲಹಾಬಾದದಲ್ಲಿ ಕೂಡಿದ ವರ್ಕಿಂಗ ಕಮೇಟಿಯಲ್ಲಿ ಗೊತ್ತಾದ ಸ್ವಾತಂತ್ರ್ಯ ವಿಷಯವಾದ ನಿರ್ಣಯವನ್ನು ಸಭೆಯಲ್ಲಿ ಓದಿ ತೋರಿಸಿದರು. ಸಭೆಗೆ ಬಂದಿದ್ದ ಪೋಲೀಸ ಅಧಿಕಾರಿಗಳು ಸರ್ವಾಧಿಕಾರಿಗಳನ್ನೂ ಮತ್ತು ನಿರ್ಣಯವನ್ನು ಓದಿದ ಐದು ಜನವಿದ್ಯಾರ್ಥಿಗಳನ್ನೂ ಆಗಿಂದಾಗ್ಗೆ ಕೈದು ಮಾಡಿಕೊಂಡು ಹೋದರು. ಸೆರೆಯಾಳಾದವರು ೧ ಪಾವಣಸ್ಕರ ೨ ರಾಮಚಂದ್ರ ಕುಲಕರ್ಣಿ ೩ ಚಂದ್ರಪ್ಪ ಗಡ್ಡದಕೇರಿ ೪ ದತ್ತಾತ್ರಯ ಪಂಢರಕರ ೫ ಲಕ್ಷ್ಮಣ ಕಬ್ಬೂರ ೬ ಹನುಮಂತಪ್ಪ ಇಜಾರಿ.

ಉಪ್ಪಿನ ಕಾಯಿದೆ ಭಂಗಕ್ಕಾಗಿ ಸೆರೆ ಹಿಡಿಯಲ್ಪಟ್ಟ ಮಹಾತ್ಮಾ ಗಾಂಧಿಯವರ ಚಿರಂಜೀವರಾದ ರಾಮದಾಸ ಗಾಂಧಿಯವರಿಗೆ ೬ ತಿಂಗಳ. ಶಿಕ್ಷೆಯಾಗಿದೆ.

ಕಲೆಕ್ಟರರು ಮ್ಯುನಿಸಿಪಾಲಟಿಗೆ ಎಚ್ಚರ ಕೊಟ್ಟರು

ಕಾಂಗ್ರೆಸ್ ಅಧಿಕಾರಿಗಳು ಜನಗಣತಿಗೆ ಬಹಿಷ್ಕಾರ ಹಾಕಲು ಹೇಳಿಕೊಂಡಿದ್ದನ್ನು ಅನುಸರಿಸಿ, ಅಹಮ್ಮದಾಬಾದ ಮ್ಯುನಿಸಿಪಾಲಿಟಿಯವರು ಜನಗಣತಿಯ ಕಾರ್ಯದಲ್ಲಿ ಸರಕಾರಕ್ಕೆ ಸಹಾಯ ಮಾಡಕೂಡದೆಂದು ಠರಾವು ಮಾಡಿ ಆ ಗೊತ್ತನ್ನು ಕಲೆಕ್ಟರರ ಕಡೆಗೆ ಕಳಿಸಿಕೊಟ್ಟರು. ಕಲೆಕ್ಟರರು ಅದಕ್ಕೆ ಇನ್ನೊಮ್ಮೆ ವಿಚಾರಮಾಡಿ ನೋಡಿರಿ ಇಲ್ಲವಿದ್ದರೆ ಎಲ್ಲ ವೆಚ್ಚನ್ನು ಮ್ಯುನಿಸಿಪಾಲಟಿಯಿಂದ ವಸೂಲ ಮಾಡವದರಲ್ಲಿ ಬರುವದೆಂಬದಾಗಿ ಬರೆದು ಕಳಿಸಿದ್ದಾರೆ.

ಮುಂಬಯಿಯಲ್ಲಿ ೭ ಜನರಿಗೆ ಶಿಕ್ಷೆ

ಮುಂಬಯಿಯಲ್ಲಿ ಸ್ವಾತಂತ್ರ್ಯದಿನದ ಸಂಬಂಧವಾಗಿ ನೆರೆಹಿಸಲ್ಪಟ್ಟ ಪ್ರಿಲಿಪಾಲೀ ಮಸರ್ವಾಧಿಕಾರಿಗಳಾದ ಶ್ರೀ ಭಾಯಿ ಸಾಹೇಬ ಕೊತವಾಲ ಹಾಗೂ ೬ ಜನ ಸ್ವಯಂಸೇವಕರಿಗೆ ಅಧಿಕಾರಿಗಳಿಂದ ಕ್ರಮವಾಗಿ ೧೬ ಹಾಗೂ ೪ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸುವದರಲ್ಲಿ ಬಂದಿದೆ.

೩೦೦ ದಾಳಿಗಾರರು ಕೊಲ್ಲಲ್ಪಟ್ಟರು

ಬರ್ಮಾ ಪ್ರಾಂತದ ಥಾರವಾಡಿ ಭಾಗದಲ್ಲಿ ಕೆಲವು ದಿನಗಳಿಂದ ದಾಳಿ ಮಾಡಹತ್ತಿದ್ದ ದಾಳಿಗಾರರನ್ನು ಸೈನಿಕರು ಎದುರಿಸಿ, ೧೧೭ ಜನರನ್ನು ಕೈದು ಮಾಡಿದರು. ಈ ಕದನದಲ್ಲಿ ಒಟ್ಟಿಗೆ ೩೦೦ ಜನ ದಾಳಿಗಾರರು ಕೊಲ್ಲಲ್ಪಟ್ಟಿದ್ದು, ೨೧ ಜನರಿಗೆ ಗಾಯಗಳಾಗಿವೆ.

ಪಂಡಿತ ನೀಲಕಂಠ ದಾಸರ ಬಾಯಿಗೆ ಬೀಗ

ಪುರಿಯ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಪಂಡಿತ ನೀಲಕಂಠ ದಾಸರು ಮೊನ್ನೆ ಮೊನ್ನೆ ಜೇಲಿನಿಂದ ಬಿಡುಗಡೆ ಹೊಂದಿ ತಾ|| ೩ನೆಯ ದಿವಸ ಪುರಿಗೆ ಹೋದಾಗ, ಅಲ್ಲಿಯ ಸ್ಟೇಶನದಲ್ಲಿ ಅಧಿಕಾರಿಗಳು [illegible] ಅವರನ್ನು ಅವರ ಬಾಯಿಗೆ ಬೀಗ ಹಾಕಿ ಅವರ ಸ್ವಾಗತಕ್ಕೆ ಬಂದ ೩೦ ಜನರನ್ನು [illegible] ತೊಂಡು ಹೋದರು.

ಇಟಲಿಯಲ್ಲಿ ಭಯಂಕರ ಭೂಕಂಪ

ಇಟಲಿಯಲ್ಲಿರುವ ಕೋರಿಂಥ ಎಂಬಲ್ಲಿ ಭೂಕಂಪವಾಗಿದ್ದರಿಂದ ಅಲ್ಲಿಯ ಎಷ್ಟೋ ಮನೆಗಳು ನೆಲಸಮವಾಗಿವೆ. ನಿವಾಸಿಗಳು ಬೈಲಿನಲ್ಲಿ ವಾಸವಾಡಹತ್ತಿದ್ದಾರೆ. ಯಾರಿಗೂ ಗಾಯ ಸಂಭವಿಸಿರುವದಿಲ್ಲ

ಕನ್ನಾನೂರ ಜೇಲಿನಲ್ಲಿ ಅನ್ನತ್ಯಾಗ

ರಾಜಕೀಯ ಕೈದಿಗಳ ವರ್ಗೀಕರಣ ಪದ್ಧತಿಯ ನಿಷೇಧಾರ್ಥವಾಗಿ ಕನ್ನಾನೂರ ಜೇಲಿನಲ್ಲಿಯ "ಕ" ವರ್ಗದ ೧೦ ಜನ ರಾಜಕೀಯ ಕೈದಿಗಳು ತಾ|| ೧ ರಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿದ್ದಾರೆ.

ಜೇಲಿನಲ್ಲಿ ೭ ಜನರಿಗೆ ಮತ್ತೆ ಶಿಕ್ಷೆಯಾಯಿತು.

ಜೇಲಿನಲ್ಲಿಯ ನಿಯಮಗಳ ವಿರುದ್ಧವಾಗಿ ವರ್ತಿಸಿದ ಸಂಬಂಧವಾಗಿ ಅಲಹಾಬಾದ ಜೇಲಿನಲ್ಲಿಯ ೭ ಜನ ರಾಜಕೀಯ ಕೈದಿಗಳಿಗೆ ಮತ್ತೆ ಪ್ರತ್ಯೇಕವಾಗಿ ೧ ವರ್ಷದ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಅಲಹಾಬಾದ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಗಳಾದ ಶ್ರೀ ಮಂಗಲ ಪ್ರಸಾದರು ಸೆರೆಹಿಡಿಯಲ್ಪಟ್ಟಿದ್ದಾರೆ.

ಬಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಖಾತ್ರಿ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳ ಆರ್ಡರ ಒಳ್ಳೆ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಟೀಲ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬಟಗೇರಿ ಬ್ರದರ್ಸ

ಸ್ಟೇಶನ್ ರೋಡ

ಹಳೇಪೇಟೆ ಮಾರ್ಕೆಟ ಬಾಗಲಕೋಟ

ವಾಚ, ಟಾಯಿಂಪೀಸ ದುರಸ್ತಿಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗೂ ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಜನ್ನಾಗಿ ಸೋವೀದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ

ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟ.

ಎಲ್ಲ ತರದ ಚಳಿಜ್ವರದ ಮೇಲೆ ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦

೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ. ಕಿಲ್ಲಾಓಣಿ, ಬಾಗಲಕೋಟೆ

ಪ್ಲಾಟುಗಳು ಮಾರಾಟಕ್ಕಿವೆ.

ಟ್ರಾವೆಲರ್ಸ ಬಂಗಲೆಯ ಹತ್ತರವಿರುವ ೩೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರಾಟಕ್ಕಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರದರಾವ ಧಾರವಾಡ

ವಕೀಲರು ಬಾಗಲಕೋಟೆ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು [illegible] ಬಾಗಲಕೋಟೆ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ [illegible] ಮುದ್ರಿಸಲ್ಪಟ್ಟು, [illegible] ರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮

ನಿತ್ಯ ಸಂಚಿಕೆ.

ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

ಸಂಪಾದಕರು:— ವೆಂಕಟೇಶ ಭೀಮರಾವಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

[illegible] — ಬುಧವಾರ [illegible] ತಾ॥ ೮—೮—೩೦ [ಸಂಖ್ಯೆ ೧೮೩

"ವಂದೇ ಮಾತರಂ" ಪತ್ರಿಕೆಗೆ

೧೦೦೦೦ ರೂಪಾಯಿ ಹೊಣೆ ಬೇಡಿದರು

(ತಂತಿಯ ವಾರ್ತೆ).

ಲಾಹೋರದಲ್ಲಿಯ ಕಾಂಗ್ರೆಸ್ ಪಕ್ಷದ ಪತ್ರಿಕೆಯಾಗಿರುವ "ವಂದೇ ಮಾತರಂ" ಪತ್ರಿಕೆಗೆ ೧೦೦೦೦ ರೂಪಾಯಿಯ ಹೊಣೆಯು ಕೇಳಲ್ಪಟ್ಟಿದೆ.

ಶ್ರೀ ವಿಠ್ಠಲಭಾಯಿಯವರು ಮುಂಬಯಿಗೆ ಬರುವರು.

(ತಂತಿಯ ವಾರ್ತೆ)

ಕೊಯಿಮುತ್ತೂರ ಜೇಲಿನಿಂದ ಮೊನ್ನೆ ಮೊನ್ನೆ ಬಿಡುಗಡೆಹೊಂದಿದ ಶ್ರೀ ವಿಠ್ಠಲಭಾಯಿ ಪಟೇಲರವರು ಮದ್ರಾಸದಿಂದ ಮುಂಬಯಿಗೆ ಶನಿವಾರ ದಿವಸ ಮುಂಜಾನೆ ಬರತಕ್ಕವರಿದ್ದಾರೆ.

ಮುಂಬಯಿಯ ಮುಖಂಡರ ಖಟ್ಲೆಯು ಮುಂದೆ ಬಿತ್ತು

(ತಂತಿಯ ವಾರ್ತೆ)

ತಾ| ೨೫ ನೆಯ ದಿವಸ ಮುಂಬಯಿಯಲ್ಲಿ ಸೆರೆ ಹಿಡಿಯಲ್ಪಟ್ಟ ಯುಸೂಫಮೆಹರಅಲ್ಲಿ, ಏಕಾಂಬರ ಅಯ್ಯರ, ಮೂಲರಾಜ ಕರಸನದಾಸ, ಪುರುಷೋತ್ತಮದಾಸ ತ್ರಿಕಮದಾಸ ಮೊದಲಾದ ೨೫ ಜನ ಕಾಂಗ್ರೆಸ್ ಕಾರ್ಯಕರ್ತರ ಖಟ್ಲೆಯ ವಿಚಾರಣೆಯು ತಾ| ೨೦ಕ್ಕೆ ಮುಂದೆ ಬಿದ್ದಿದೆ.

ಹಿಂಡಲಗಿ ಜೇಲಿನಲ್ಲಿ ಮುಹಾಲೆಯವರ ಕಠಿಣಸ್ಥಿತಿ

(ತಂತಿಯ ವಾರ್ತೆ. ಬೆಳಗಾವ ತಾ| ೮)

ಸ್ವಲ್ಪ ದಿವಗಳ ಹಿಂದೆ ಕಾರವಾರ ಜೇಲದಿಂದ ಹಿಂಡಲಗಿ ಜೇಲಿಗೆ ತರಲ್ಪಟ್ಟಿರುವ ರಾಜಕೀಯ ಕೈದಿಗಳಲ್ಲಿಯ ಅಂಕೋಲೆಯ ಶ್ರೀ ಅನಂತ ಮುಹಾಲೆಯವರು ತಾ|೩೦ ನೆಯ ದಿನಾಂಕದಿಂದ ಅನ್ನತ್ಯಾಗ ವ್ರತ ಕೈಕೊಂಡಿರುವರಾಗಿ ತಿಳಿದುಬರುತ್ತದೆ. ಜೇಲಿನ ಅಧಿಕಾರಿಗಳು ಒಂದು ದಿವಸ ವಿನಾಕಾರಣವಾಗಿ ಅವರ ಪ್ರತಿನಿತ್ಯದ ಪ್ರಾರ್ಥನೆಗೆ ಅಡ್ಡಿಮಾಡಿ, ಅವರಿಗೆ ತೊಂದರೆ ಕೊಟ್ಟಿದ್ದರಿಂದ, ತಮ್ಮ ಪ್ರಾರ್ಥನೆಯ ನ್ಯಾಯವಾದ ಹಕ್ಕನ್ನು ಪ್ರಸ್ಥಾಪಿಸುವದಕ್ಕೋಸ್ಕರ ಅವರು ಅಂದಿನಿಂದಲೇ ಅನ್ನತ್ಯಾಗ ಪ್ರಾರಂಭಿಸಿದರು. ಸ್ವಲ್ಪ ದಿನಗಳ ಹಿಂದೆ ಹಿಂಡಲಗಿ ಜೇಲಿಗೆ ಭೆಟ್ಟಿಕೊಟ್ಟ ಸೆರೆಮನೆಯ ಇನಸ್ಪೆಕ್ಟರ ಜನರಲ್‌ರವರಾದರೂ ಈ ಅನ್ಯಾಯವನ್ನು ಹೋಗಲಾಡಿಸುವವರ ಕಡೆಗೆ ಲಕ್ಷ್ಯ ಕೊಡಲಿಲ್ಲ. ಈ ಬಗ್ಗೆ ಮಿತ್ರರನ್ನು ವಿಚಾರ ಮಾಡಲು ಅಪ್ಪಣೆಕೊಡಿರಿ ಎಂದು ಶ್ರೀ ಮುಹಾಲೆಯವರು ಅಧಿಕಾರಿಗಳಿಗೆ ಬೇಡಿಕೊಂಡರೂ ಸಹ ಅಧಿಕಾರಿಗಳು ಮಿತ್ರರನ್ನು ವಿಚಾರಿಸಲು ಅವರಿಗೆ ಅಪ್ಪಣೆ ಕೊಡಲಿಲ್ಲ. ಶ್ರೀ ಮುಹಾಲೆಯವರ ದೇಹಸ್ಥಿತಿಯು ಚಿಂತಾಜನಕವಾಗಿದೆಯೆಂದಾಗಿ ತಿಳಿದು ಬರುತ್ತದೆ.

(ತಂತಿಯ ವಾರ್ತೆ)

ಮುಂಬಯಿಯಲ್ಲಿ ಪರದೇಶಿ ಬಟ್ಟೆಯ ಪಿಕೆಟಿಂಗ ಕಾರ್ಯಕ್ರಮವನ್ನು ಸಾಗಿಸುವ ಮುಂದೆ ಮೋಟಾರ ಹಾಯ್ದದ್ದರಿಂದ ಮರಣ ಹೊಂದಿದ ಬಾಬು ಗೇನೂರವರ ಬಗ್ಗೆ ಕೋರೋನರ್ಸ ಕೋರ್ಟಿನಲ್ಲಿ ವಿಚಾರಣೆ ನಡೆಯಿತು. ಜ್ಯೂರಿ ಜನರು ೬ ವಿರುದ್ಧ ೫ ಮತಗಳಿಂದ ಅಪಘಾತದಿಂದ ಮರಣ ಹೊಂದಿದ ಸಂಬಂಧವಾಗಿ ತೀರ್ಪು ಕೊಟ್ಟರು.

ಸಾಬರಮತಿ ಜೇಲಿನಲ್ಲಿ ಬೆಂಕಿ ಹತ್ತಿತು

ಸಾಬರಮತಿ ಜೇಲಿನಲ್ಲಿ ತಾ| ೬ ನೆಯ ದಿವಸ ಮಧ್ಯಾನ್ಹದಲ್ಲಿ ಜೇಲಿನ ಅಧಿಕಾರಿಗಳ ಕೋಣೆಗಳಿಗೆ ಒಮ್ಮಿಂದೊಮ್ಮೆ ಬೆಂಕಿ ಹತ್ತಿತು. ಎರಡು ಕೋಣೆಗಳು ಸಂಪೂರ್ಣವಾಗಿ ಸುಟ್ಟು ಹೋದವು. ಕ್ಯಾಪ್ಟನ್ ಅಡವಾನಿಯವರು, ಜೇಲಿನ ಅಧಿಕಾರಿಗಳು, ಹಾಗು ಕೆಲವು ಕೈದಿಗಳು ಕೂಡಿ ಬೆಂಕಿ ಆರಿಸಿದರು.

ಬಂಡಿಗಾಲಿಯ ಪರಿಷತ್ತಿನ ಕಾರ್ಯಕಲಾಪ.

ಸಂಯುಕ್ತ ರಾಷ್ಟ್ರ ಸಂಘ ಉಪ ಮಂಡಳದವರ ತಾ|| ೫ ರಂದು ಬೈಠಕ ಸಾತ್ರಿ ಚರ್ಚೆನಡಿಸಿದ ... ಪ್ರದೇಶಗಳು ಮುಸಲ್ಮಾನರ ಬಹುಮತ ಭಾಷಣ ಮಾಡುವಾಗ, ಸ್ವಾತಂತ್ರ್ಯವನ್ನು ಎಲ್ಲ ಸಂಘಟನಕ್ಕೆ ತಂದ ಕೊಟ್ಟು, ಬ್ರಿಟಿಷರು ... ದಲ್ಲಿ ಭ್ರಾಂತಿಯನ್ನು ... ಮತ್ತು ... ರಾಜ್ಯದ ... ವಾಗಿ ಜನರಲ್ಲಿ ಆತಂಕವು ಹುಟ್ಟಿಸಿದ್ದ ಇವು ಇಂತಹ ... ಯೆಂಬುದಾಗಿ ಹಿತ ... ಸಂಖ್ಯಾ ... ಮುಸಲ್ಮಾನರ ಹಿತಸಂಬಂಧಗಳನ್ನು ಸಂರಕ್ಷಿಸುವಂತಹ ಪದ್ಧತಿಯು ಬೇಕಾಗಿರುವದೆಂದೂ, 'ಇಂಡಿಯಾ ಕೌನ್ಸಿಲನ್ನು ಮುಚ್ಚಿಬಿಡಬೇಕೆಂದೂ ಹೇಳಿ ಅವರು ತಮ್ಮ ಭಾಷಣ ಮುಗಿಸಿದರು.

ಬಳಿಕ ಲಾರ್ಡ ರಿಡಿಂಗರು, ಹಿಂದೂ ಮುಸಲ್ಮಾನರ ಪ್ರಶ್ನೆಯು ಬೇಗನೆ ಬಗೆಹರಿಯ ಬೇಕೆಂಬುದಾಗಿ ಆಶೆಯನ್ನು ವ್ಯಕ್ತಪಡಿಸಿ, ಸರ್ ಸಪ್ರೂರವರ ಯೋಜನೆಗೆ ಲಿಬರಲ್ ಪಂಗಡದವರ ಬೆಂಬಲವಿದೆಯೆಂದೂ, ಹಿಂದುಸ್ಥಾನದ ಭಾವೀ ರಾಜ್ಯಘಟನೆಯಲ್ಲಿ ಇಂತಿಂತಹ ಭದ್ರತೆಗಳಿರಬೇಕೆಂದೂ ತಮ್ಮ ಮತವನ್ನು ವ್ಯಕ್ತಪಡಿಸಿದರು.

ಆಗಾಖಾನರು ಲಂಡನಕ್ಕೆ ಬಂದ ಕೂಡಲೆ ಮುಸಲ್ಮಾನ ಪ್ರತಿನಿಧಿಗಳು ಅವರ ಮನೆಯಲ್ಲಿ ಸೇರಿ, ಹಿಂದೂ ಮುಸಲ್ಮಾನರ ಪ್ರಶ್ನೆಯು ಬಗ್ಗೆ ಅಲ್ಪಸಂಖ್ಯಾಕ ಉಪಮಂಡಳದಲ್ಲಿ ಸರ್ ಸೆಟಲ್‌ವಾಡರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕುರಿತು ವಿಚಾರ ಮಾಡಿದರು. ಪಂಜಾಬದಲ್ಲಿ ೧೦೦ ಕ್ಕೆ ೫೬ ಹಾಗು ಬಂಗಾಲದಲ್ಲಿ ೧೦೦ ಕ್ಕೆ ೫೫ ರಂತೆ ಪ್ರಾತಿನಿಧ್ಯತೆಯನ್ನು ಕೊಡಲು ಹಿಂದೂ ಪ್ರತಿನಿಧಿಗಳು ಒಪ್ಪಿದಲ್ಲಿ ಮಾತ್ರ, ಸರ್ ಸೆಟಲ್‌ವಾಡರ ಸಂಯುಕ್ತ ಮತದಾರ ಸಂಘದ ಯೋಜನೆಗೆ ಒಪ್ಪಿಗೆ ಕೊಡಬೇಕಾಗಿ ಕೆಲವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬಹಳ ಹೊತ್ತಿನ ವರೆಗೆ ಚರ್ಚೆಯಾಗಿ ಯಾವದೂ ನಿರ್ಣಯವಾಗಲಿಲ್ಲ. ಬಳಿಕ ಜನರು ಮುಸಲ್ಮಾನರ ಈ ಬೇಡಿಕೆಗಳನ್ನು ಪೂರೈಸಿಕೊಳ್ಳಿದಲ್ಲಿ ಮಾತ್ರ ಅವರು ಸಂಯುಕ್ತ ಮತದಾರ ಸಂಘದ ಯೋಜನೆಗೆ ಒಪ್ಪಿಗೆ ಕೊಡುವಂತಾಗಿ ಅಲ್ಪಸಂಖ್ಯಾಕ ಉಪಮಂಡಳದ ಸಭೆಯಲ್ಲಿ ಭಾಷಣ ಮಾಡಲು ಸರ್ ಶಾಫಿಯವರಿಗೆ ಕೇಳಿಕೊಂಡರು.

ಅಸೆಂಬ್ಲಿಯ ಅಧಿವೇಶನ

ಈ ಸಲದ ವರಿಷ್ಠ ಸಭೆಯ ಮುಂದಿನ ಅಧಿವೇಶನದಲ್ಲಿ ಕೆಳಗಿನ ... ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಮಾಡುವೆನೆಂಬುದಾಗಿ ಆ ಆ ಸಭಾಸದರು ಮುಂಗಡ ಸೂಚನೆ ಕೊಟ್ಟಿದ್ದಾರೆ.

ಬಾಬು ಗಯಾ ಪ್ರಸಾದ ಸಿಂಗರವರು ಪೇಶಾವರ ಪ್ರಾಂತದಲ್ಲಿಯ ದಂಗೆಯ ಆಕ ಮತ್ತು ಕಮಿಟಿಯ ಆಡಳಿತ ಬಗ್ಗೆ ಸವಿಸ್ತರ ಸಂಗತಿಗಳನ್ನು ತಿಳಿಸಲು ಪ್ರಶ್ನೆ ಮಾಡುವವರಿದ್ದಾರೆ.

ದಂಗೆ, ಧೋಪೆ, ಕೊಲೆ, ಮೊದಲಾದವುಗಳಿಗಾಗಿ ಸೆರೆ ಮನೆ ಸೇರಿದವರನ್ನು ಬಿಟ್ಟು ... ಒಟ್ಟಿಗೆ ಎಷ್ಟು ಜನ ಸೆರೆಮನೆ ಸೇರಿದರು, ಮತ್ತು ... ಎಷ್ಟು ಜನರು ಹೊರಗೆ ಬಂದಿರುವರು ಎಂಬುದನ್ನು ತಿಳಿಸಲು ಶ್ರೀ ಸಿ. ಎಸ್. ರಂಗಅಯ್ಯರವರು ಪ್ರಶ್ನೆ ಕೇಳತಕ್ಕವರಿದ್ದಾರೆ.

ಈ ಕ್ರಿಮಿನಲ್ ದಬ್ಬಾಳಿಕೆಯ ಕಾನೂನಿನ ಪ್ರಕಾರವಾಗಿ ಎಷ್ಟು ಪತ್ರಗಳು ನಿಂತು ಹೋದವು, ಎಷ್ಟು ಮುದ್ರಣಾಲಯಗಳು ಜಪ್ತವಾದವು, ಎಷ್ಟು ಪತ್ರಿಕೆ ಹಾಗು ಮುದ್ರಣಾಲಯಗಳಿಂದ ಹೊಣೆಯ ಹಣ ಕೇಳಲ್ಪಟ್ಟಿತು, ಹೊಣೆಯಾಗಿ ಒಂದ ಹಣದಲ್ಲಿ ಎಷ್ಟು ಹಣವು ಜಪ್ತ ಮಾಡಲ್ಪಟ್ಟಿತು, ... ದೋಷಿಯನ್ನರ ಆಸ್ತಿಯಲ್ಲಿ ... ಎಷ್ಟು ... ದಬ್ಬಾಳಿಕೆ ... ಪತ್ತೆಯಲ್ಲಿತ್ತು. ... ಆರ್ಡಿನನ್ಸದ ಅನ್ವಯ ಒಟ್ಟಿಗೆ ಎಷ್ಟು ಸುದ್ದಿಗಳು ... ದ ... ತೆಗೆದು ಕೊಳ್ಳಲ್ಪಟ್ಟವು ಮೊದಲಾದ ವಿಷಯಗಳ ವಿಷಯವಾಗಿ, ಸವಿಸ್ತರ ಸಂಗತಿ ತಿಳಿಸಲು ಕೇಳವೆವಾಗಿ ಸರದಾರ ಶಾಂತಸಿಂಗರು ಸೂಚನೆ ಕೊಟ್ಟಿದ್ದಾರೆ

ಪೋಲೀಸರು
ಮಣ್ಣು ತೂರಿದರು-

ಬೋರಸಾದ ತಾಲೂಕದ ಸುನಾವ ಎಂಬ ಹಳ್ಳಿಯಲ್ಲಿ ಸ್ವರಾಜ್ಯ ದಿನವು ಆಚರಿಸಲ್ಪಟ್ಟಿತು. ಅಂದು ಸ್ತ್ರೀ ಪುರುಷರು ಬೇರೆ ಬೇರೆ ಮೆರವಣಿಗೆಗಳನ್ನು ಹೊರಡಿಸಿದ್ದರು ಪೋಲೀಸ ಸಬ್ ಇನಸ್ಪೆಕ್ಟರು ೬೦ ಜನ ಪೋಲೀಸರೊಂದಿಗೆ ಹೋಗಿ ಮೆರವಣಿಗೆ ತಡೆದರು ರಾಷ್ಟ್ರ ಧ್ವಜಗಳನ್ನು ಜುಲುಮೆಯಿಂದ ಕಸಿದುಕೊಂಡರು. ಲಾಠಿಗಳಿಂದ ಜನರನ್ನು ಥಳಿಸಿದರು. ೨೫ ಜನರಿಗೆ ಗಾಯಗಳಾದವು. ಒಬ್ಬ ಸ್ವಯಂಸೇವಕನಿಗೆ ಲಾಠಿಯಿಂದ ... ಹೊಡೆತ ಬಿದ್ದವು ಅವನ ಎರಡೂ ಕೈಗಳು ಮುರಿದು ಹೋದವು. ಇನ್ನಿಬ್ಬರೂ ಹೊಟ್ಟೆಗೆ ಹಲವೆತ್ತಿ ರಕ್ತ ಸುರಿಸಿದರು. ಬಳಿಕ ಪೋಲೀಸರು ಸ್ತ್ರೀಯರ ಮೆರವಣಿಗೆಯಿದ್ದಲ್ಲಿಗೆ ಹೋಗಿ ಅದನ್ನು ತಡೆದರು. ಸ್ತ್ರೀಯರು ತಿರುಗಿ ಹೋಗಲು ನಿರಾಕರಿಸಿದರು. ಪೋಲೀಸರು ಅವರ ಮೇಲೆ ಮಣ್ಣು ತೂರಿ ಅವರನ್ನು ಚದುರಿಸಿದರು

ಸರಕಾರಕ್ಕೆ
ಪೋಲೀಸರ ಕೊರತೆ ಬಿತ್ತು

ಸಿಲ್ಹೇಟ ಜಿಲ್ಹೆಯ ಕರಿಮಗಂಜದ ಅಧಿಕಾರಿಗಳು ಅಲ್ಲಿಯ ೭ ಜನ ಸಭ್ಯಗೃಹಸ್ಥರಿಗೆ ಸ್ಪೆಶಲ್ ಪೋಲೀಸರಾಗಿ ಕೆಲಸ ಮಾಡಲು ವಿನಂತಿ ಮಾಡಿಕೊಂಡಿದ್ದಾರೆ. ಸರಕಾರಕ್ಕೆ ಪೋಲೀಸರ ಕೊರತೆಯು ಬೀಳಹತ್ತಿದೆಯೆಂಬುದಕ್ಕೆ ಇದು ಒಳ್ಳೇ ಉದಾಹರಣೆಯಾಗಿದೆ!

ಜಮಖಂಡಿಯಲ್ಲಿ
ಸಾಯಕಲ್ಲಿನ ಸ್ಪರ್ಧೆ

ಜಮಖಂಡಿಯಲ್ಲಿ ಶ್ರೀಮಂತ ರಾವ ಚಂದ್ರರಾವ ಅಪ್ಪಾಸಾಹೇಬ ಕ್ಲಬ್ಬಿನ ೧೬ ನೆಯ ವಾರ್ಷಿಕ ಸಮಾರಂಭದ ಕಾಲಕ್ಕೆ ೫೦ ಮೈಲಿನ ಸಾಯಕಲ್ಲಿನ ಸ್ಪರ್ಧೆಯು ಏರ್ಪಡಿಸಲ್ಪಟ್ಟಿತ್ತು. ಒಟ್ಟಿಗೆ ೩೩ ಜನರು ಸ್ಪರ್ಧೆಯಲ್ಲಿ ಭಾಗ ತೆಗೆದುಕೊಂಡಿದ್ದರು. ಶ್ರೀ ಮಲ್ಲಪ್ಪ ಅಂಗಡಿಯವರು ೨ ತಾಸು ೫೩ ಮಿನಿಟು ೩೧ ಸೆಕೆಂದುಗಳಲ್ಲಿ ೫೦ ಮೈಲು. ಸಾಯಕಲ್ಲು ಹೊಡೆದು, ಮೊದಲನೆಯ ಬಹುಮಾನವನ್ನು ಪಡೆದರು.

ಮುಂಬಯಿ ಸರಕಾರಕ್ಕೆ
ಹಣವು ಕಡಿಮೆ ಬಿತ್ತು

ಈ ವರ್ಷದ ಅಂದಾಜ ಪತ್ರಿಕೆಯನ್ನು ಪಾಸುಗೊಡಿಸುವದಕ್ಕಾಗಿ ಮುಂಬಯಿ ಸರಕಾರದವರಿಗೆ ೧ ಕೋಟಿ ೫೦ ಲಕ್ಷ ರುಪಾಯಿಗಳ ಹಣದ ಕೊರತೆ ಬಿದ್ದಿದೆಯೆಂದು ಹೇಳುತ್ತಾರೆ.

ಲಾಹೋರದಲ್ಲಿ ೩೧ ಜನರನ್ನು ಹಿಡಿದರು.

(ಸಂತಿಯ ವಾರ್ತೆ)

ಕಾಂಗ್ರೆಸ್ ಕಾರ್ಯವನ್ನು ಸಾಗಿಸುವದಕ್ಕಾಗಿ ಪೇಶಾವರದಿಂದ ಲಾಹೋರಕ್ಕೆ ಬಂದ ೩೧ "ರೆಡ್ ಶರ್ಟ" ತರುಣರು ಅಲ್ಲಿಯ ಪೋಲೀಸ ಅಧಿಕಾರಿಗಳಿಂದ ಸೆರೆಹಿಡಿಯಲ್ಪಟ್ಟಿದ್ದಾರೆ.

ಸಿಂಧ ಪ್ರಾಂತದಲ್ಲಿ ಕಾಂಗ್ರೆಸ್ ಸಂಸ್ಥೆಗಳಿಗೆ ಮುತ್ತಿಗೆ

ಸಿಂಧಪ್ರಾಂತದಲ್ಲಿಯ ಕರಾಚಿ ಹಾಗು ಹೈದರಾಬಾದದಲ್ಲಿಯ ೧೯ ಕಾಂಗ್ರೆಸ್ ಸಂಸ್ಥೆಗಳು ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಕಾಯದೆಗೆ ವಿರುದ್ಧವಾದವುಗಳೆಂದು ಸಾರಿದ್ದನ್ನು ಅನುಸರಿಸಿ, ಅಲ್ಲಿಯ ಪೋಲೀಸ ಅಧಿಕಾರಿಗಳು ತಾ|| ೫ನೆಯ ದಿವಸ ಅವುಗಳನ್ನು ಮುತ್ತಿ, ಅಲ್ಲಿ ಇದ್ದ ಹಾಸಿಗೆ ಹೊದಿಕೆ ಜಮಖಾನೆ, ರಾಷ್ಟ್ರಧ್ವಜ ಮೊದಲಾದವುಗಳನ್ನು ಜಪ್ತ ಮಾಡಿಕೊಂಡು ಅವುಗಳಿಗೆ ಕೀಲಿಹಾಕಿಕೊಂಡು ಹೋದರು.

ಬ್ಯಾರಿಸ್ಟರ ಅಭ್ಯಂಕರರ ತೂಕವು ಕಡಿಮೆಯಾಯಿತು

ಅಡಿಗೆಯ ಸಂಬಂಧವಾಗಿ ಸಿಯೋನಿ ಜೇಲಿನ ಅಧಿಕಾರಿಗಳು ಯೋಗ್ಯ ಅನುಕೂಲತೆಗಳನ್ನು ಒದಗಿಸಿಕೊಡದ್ದಕ್ಕಾಗಿ ಸ್ವಲ್ಪ ದಿನಗಳಿಂದ ಒಂದೇ ಹೊತ್ತು ಆಹಾರವನ್ನು ತೆಗೆದುಕೊಳ್ಳುತ್ತಿದ್ದರಿಂದ, ಬ್ಯಾರಿಸ್ಟರ ಅಭ್ಯಂಕರರ ತೂಕವು ಮೂರು ಪೌಂಡು ಕಡಿಮೆಯಾಗಿರುತ್ತದೆ

ಲಾಹೋರ ಒಳಸಂಚಿನ ಶ್ರೀ ಸುಖದೇವರು ಸಿಕ್ಕರು

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಬೇಕಾಗಿದ್ದ ಶ್ರೀ ಸುಖದೇವರು ತಾ|| ೭ನೆಯ ದಿವಸ ದಿಲ್ಲಿಯಲ್ಲಿ ಸೆರೆ ಹಿಡಿಯಲ್ಪಟ್ಟಿದ್ದಾರೆ. ಅವರು ಇಷ್ಟು ದಿನಗಳ ವರೆಗೆ ಅಧಿಕಾರಿಗಳ ಕಣ್ಣಿಗೆ ಮಣ್ಣು ಹಚ್ಚಿದ್ದರು. ಸರಕಾರದವರು ಅವರನ್ನು ಸೆರೆ ಹಿಡಿದು ಕೊಟ್ಟವರಿಗೆ ೨೦೦೦ ರೂ. ಇನಾಮು ಇಟ್ಟಿದ್ದರು.

ಮದ್ರಾಸದ ಶ್ರೀ ಭಾಷ್ಯಂ ಅಯ್ಯಂಗಾರರವರು ವರಿಷ್ಠ ಕಾಯದೆ ಮಂಡಳಕ್ಕೆ ಸರಕಾರ ನಿಯುಕ್ತ ಸಭಾಸದರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಿತ್ತೂರಿನಲ್ಲಿ ಸೆರೆಹಿಡಿಯುವ ಸುಗ್ಗಿ

ಕಿತ್ತೂರಿನ ಸತ್ಯಾಗ್ರಹ ಯುದ್ಧ ಮಂಡಳದ ಸೇನಾಪತಿಗಳಾದ ಶ್ರೀ ಎ. ಚಂದನವಳ್ಳಿಯವರು ರಂಗನಾಥ ಮೊಗಳಿ, ನೇಮಿನಾಥ ಇಂಗಳೆ, ... ಕಿತ್ತೂರ ಇವರು ಈ ನಾಲ್ವರನ್ನು ... ಧರ್ಮಾಗಿ ಬೇರೆ ಬೇರೆ ... ಸ್ಥಳ ಬಂಧಿಸಿದ್ದಾರೆ. ಶ್ರೀ ಚಂದನವಳ್ಳಿಯವರ ಮೇಲೆ ಸದ್ಯಕ್ಕೆ ಮೂರು ಖಟ್ಲೆಗಳಿದ್ದು, ... ಗಳನು ವಿಚಾರ ಮಾಡದೆ ಅಧಿಕಾರಿಗಳು ಅವರನ್ನು ಗೋಕಾಕಕ್ಕೆ ಹತ್ತಿಸಿದ್ದಾರೆ

ಬ್ಯಾಂಡು ಬಾರಿಸಿದ್ದಕ್ಕೆ ದಂಡವಾಯಿತು

ಕಿತ್ತೂರಿನ ಶ್ರೀ ಶಾಂತಿನಾಥ ಇಂಗಳೆಯವರು ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದ ಕೂಡಲೆ ಅವರ ಸನ್ಮಾನಾರ್ಥವಾಗಿ ಹೊರಡಿಸಲ್ಪಟ್ಟ ಮೆರವಣಿಗೆಯಲ್ಲಿ ಬ್ಯಾಂಡು ಬಾರಿಸಿದ್ದಕ್ಕೆ ಅಲ್ಲಿಯ ಹುಸೇನಿ ಮೊದಲಾದ ಮೂರು ಜನರಿಗೆ ಡಿಸ್ಟ್ರಿಕ್ಟ ಪೋಲೀಸ ಕಾಯದೆಯ ಪ್ರಕಾರ ಪ್ರತ್ಯೇಕವಾಗಿ ೧೦ ರೂಪಾಯಿ ದಂಡವಾಗಿದೆ. ವಿಚಿತ್ರ ನ್ಯಾಯಪದ್ಧತಿ!

ನಮಾಜ ಮಾಡಲಿಕ್ಕೆ ಹೋಗಿ ಖಟ್ಲೆಗೆ ಗುರಿಯಾದರು

ಕಿತ್ತೂರಿನ ಮಹಮ್ಮದಗೌಸ ಸಾಹೇಬರು ಒಂದು ದಿವಸ ನಮಾಜು ಮಾಡಲಿಕ್ಕೆಂದು ಮಸೀದಿಗೆ ಹೋಗುತ್ತಿದ್ದರು. ಪೋಲೀಸರು ದಾರಿಯಲ್ಲಿ ಅವರಿಗೆ ಭೆಟ್ಟಿಯಾಗಿ ಜಪ್ತಿಯ ಕೆಲಸಕ್ಕೆ ಸಹಾಯಕ್ಕೆ ಬರುವಂತೆ ಹೇಳಿದರು. ನಮಾಜ ಮಾಡಲಿಕ್ಕೆ ಹೋಗುವದಿದೆ, ಬರುವದಾಗಿಲ್ಲವೆಂದು ಹೇಳಿ ಅವರು ಹೊರಟುಹೋದರು. ಅಧಿಕಾರಿಗಳು ಅವರ ಮೇಲೆ ಸಿಟ್ಟಿಗೆದ್ದು, ಸಹಕಾರವನ್ನು ನಿರಾಕರಿಸಿದರೆಂಬ ಆರೋಪ ಹೊರಿಸಿ ಅವರ ಮೇಲೆ ಈಗ ಖಟ್ಲೆ ಹಾಕಿದ್ದಾರೆ,

ಬೆಳಗಾವಿಯಲ್ಲಿ ನಾಲ್ಕು ಜನರನ್ನು ಹಿಡಿದರು

ತಾ|| ೪ನೆಯ ದಿವಸ ಬೆಳಗಾವಿಯಲ್ಲಿ ಜವಾಹಿರಲಾಲ ಚೌಕಿನಲ್ಲಿ ಧ್ವಜವಂದನೆಯಾಗತಕ್ಕದ್ದಿತ್ತು. ಆದ್ದರಿಂದ ಅಲ್ಲಿಯ ಎಲ್ಲ ನಗರ ಸಂಕೀರ್ತನೆಯವರೂ ಅಂದು ಒಟ್ಟುಗೂಡಿ ಜವಾಹಿರಲಾಲ ಚೌಕದ ಕಡೆಗೆ ಮೆರವಣಿಗೆಯಿಂದ ಸಾಗಿದರು. ಪೋಲೀಸರು ದಾರಿಯಲ್ಲಿ ಅವರಿಗೆ ಅಡ್ಡಮಾಡಿ, ರಾಷ್ಟ್ರಧ್ವಜಗಳನ್ನು ಕಸಿದುಕೊಂಡು, ಶ್ರೀ ಗೋಡಗೇರಿ, ಸಂಪಗಾವಕರ, ರಾಜಪ್ಪ ಮತ್ತು ಅನಗೋಳ ಈ ನಾಲ್ವರನ್ನು ಸೈದು ಮಾಡಿಕೊಂಡು ಹೋದರು. ನಂತರದಲ್ಲಿ ಮೆರವಣಿಗೆಯು ಮುಂದಕ್ಕೆ ಸಾಗಿಹೋಗಿ ಜವಾಹಿರಲಾಲ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯ ಕಾರ್ಯವನ್ನು ಪೂರ್ತಿಗೊಳಿಸಿತು,

ಬೆಳಗಾವಿಯ ಮ್ಯಾಜಿಸ್ಟ್ರೇಟರು ವಕೀಲರ ವಿನಂತಿಯನ್ನು ನಿರಾಕರಿಸಿದರು

ಬೆಳಗಾವಿಯ ೩೦ ಜನ ವಕೀಲರು ಶ್ರೀ ಡಿ. ವ್ಹಿ. ಬೆಳವಿಯವರ ಮುಖಂಡತ್ವದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ. ಮೊಂಟಿಗಮೊರಿಯವರನ್ನು ಕಂಡು ಕೊಂಡು, ಪ್ರಭಾತಫೇರಿಯ ವಿರುದ್ಧವಾಗಿ ಹೊರಡಿಸಿದ ಕಟ್ಟಪ್ಪಣೆಯನ್ನು ತಿರುಗಿ ತೆಗೆದುಕೊಳ್ಳಲು ಅವರಿಗೆ ವಿನಂತಿ ಮಾಡಿಕೊಂಡರು. ಮೇಲಿನ ಕೋರ್ಟಿನಿಂದ ಅನುಮತಿ ದೊರೆಯುವತನಕ ತಾವು ಅದನ್ನು ತಿರುಗಿ ತೆಗೆದುಕೊಳ್ಳುವದಿಲ್ಲವಾಗಿ ಮ್ಯಾಜಿಸ್ಟ್ರೇಟರು ಹೇಳಿ ಅವರೆಲ್ಲರ ವಿನಂತಿಯನ್ನು ನಿರಾಕರಿಸಿದರು. ಈ ಅಪ್ಪಣೆಯನ್ನು ತಿರುಗಿ ತೆಗೆದುಕೊಳ್ಳಲು ಒಟ್ಟಿಗೆ ೧೭೦೦ ಜನರು ೩೪ ಅರ್ಜಿಗಳನ್ನು ಕೊಟ್ಟು ಕಳಿಸಿದ್ದಾರೆ.

ಕರ್ನಾಟಕದಲ್ಲಿ ಹರತಾಳ ಹಾಗು ಸಭೆ

ಮೌಲಾನಾ ಮಹಮ್ಮದ ಅಲ್ಲಿಯವರು ಮರಣಹೊಂದಿದ ಮೂಲಕವಾಗಿ ಕರ್ನಾಟಕದಲ್ಲಿ ವಿಜಾಪೂರ, ಬಾಗಲಕೋಟೆ, ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೊದಲಾದ ಸ್ಥಳಗಳಲ್ಲಿ ಹರತಾಳ ಹಾಗು ದುಃಖಪ್ರದರ್ಶಕ ಸಭೆಗಳು ಜರುಗಿದವೆಂದ ತಿಳಿದು ಬರುತ್ತದೆ.

ಪೆಶಾವರದಲ್ಲಿ ವನಭೋಜನದ ಕಾಲಕ್ಕೆ ಸ್ವಲ್ಪ ದಿನಗಳ ಹಿಂದೆ ಸಂಭವಿಸಿದ ಪೋಲೀಸ ಅಧಿಕಾರಿಗಳ ಪುಂಡಾಟಿಕೆಯ ತನಿಖೆ ಕರ್ತರ ಸಂಗತಿಗಳನ್ನು ಕಳಿಸಿಕೊಡಲು ಮುದ್ರಾಸ ಸರಕಾರದವರು ಅಲ್ಲಿಯ ಅಧಿಕಾರಿಗಳಿಗೆ ಕೇಳಿಕೊಂಡಿದ್ದಾರೆ.

"ಟಾಯಿಮ್ಸ್" ಕಾರರ ಸುಳ್ಳು ಹೊರಬಿತ್ತು

ಜಗಲು ಗೋಂದಲ ಹಾಕಲು ಪ್ರಾರಂಭಿಸಿರುವದರಿಂದ ಇನ್ನು ಮುಂದೆ ಮೆರವಣಿಗೆ ಮೊದಲಾದವುಗಳನ್ನು ಹೋಡಿಸ ಕೂಡದಾಗಿ ಸರದಾರ ವಲ್ಲಭಭಾಯಿಯವರು ಮುಂಬಯಿಯ ಕಾಂಗ್ರೆಸ್ ಮುಖಂಡರಿಗೆ ಆಜ್ಞೆ ಕೊಟ್ಟಿರುವರೆಂಬುದಾಗಿ ಒಂದು ಆಶಯದ ಬರಹವು "ಈ ವ್ಹಾಶಿಂಗನ್ಯೂಜ" ಪತ್ರಿಕೆಯಲ್ಲಿ ಶ್ರೀ ಹೀರಾಲಾಲ ಗಾಂಧಿಯವರ ಹೆಸರಿನಿಂದ ಪ್ರಸಿದ್ಧವಾಗಿತ್ತು. ಟಾಯಿಮ್ಸಕಾರರು ಅದನ್ನು ತಮ್ಮ ಪತ್ರಿಕೆಯಲ್ಲಿಯೂ ಪ್ರಕಟಿಸಿದ್ದರು. ಕಾಂಗ್ರೆಸ್ ಪತ್ರಿಕೆಗಳು ಈ ವಿಧಾನವು ಸುಳ್ಳಿನಿಂದು ಪ್ರಸಿದ್ಧವಾಗಿ, ವ್ಹಾಶಿಂಗ ಮೇಲ ಟೀಕೆಯನ್ನು ಮಾಡಿ ... ವೇಚಾರಿಸಲ್ಲಿ ... ದಿಂದ ಟಾಯಿಮ್ಸಕಾರರು ತಮ್ಮ ಪ್ರತಿನಿಧಿಯನ್ನು ವಲ್ಲಭಭಾಯಿಯವರನ್ನು ಕಾಣಲು ಜೇಲಿಗೆ ಕಳಿಸಿದರು. ಆ ಬಳಿಕ ಭೆಟ್ಟಿಯಾಗಲು ಅಪ್ಪಣೆ ಕೊಡಲು ನಿರಾಕರಿಸಿ ಹೀರಾಲಾಲ ಗಾಂಧಿಯವರು ಪ್ರಸಿದ್ಧ ಮಾಡಿದ ವಿಧಾನವನ್ನು ವಲ್ಲಭಭಾಯಿಯವರು ನಿರಾಕರಿಸುತ್ತಾರೆಂದು ಅವರಿಗೆ ತಿಳಿಸಿದರು. ಈ ಬಗ್ಗೆ ಟಾಯಿಮ್ಸಕಾರರು ೭ನೆಯ ತಾ|| ಪತ್ರಿಕೆಯಲ್ಲಿ ವಿಷಾದ ವ್ಯಕ್ತ ಪಡಿಸಿದ್ದಾರೆ.

ಚೌಕೀದಾರರು ರಾಜೀನಾಮೆ ಕೊಟ್ಟರು

ಮುಜಫರಪೂರ ಜಿಲ್ಲೆಯೊಳಗಿನ ದರಭಂಗೆ ಭಾಗದ ಮೂವರು ಚೌಕೀದಾರರು, ಸರಕಾರ ದಬ್ಬಾಳಿಕೆಯ ನೀತಿಯನ್ನು ನಿಷೇಧಿಸಿ, ತಮ್ಮ ಸರಕಾರಿ ಉದ್ಯೋಗಕ್ಕೆ ತಿಲಾಂಜಲಿ ಕೊಟ್ಟಿದ್ದಾರೆ.

ಅಲ್ಮೋಗಡದಲ್ಲಿ ೨೫ ಜನರಿಗೆ ಕೈದು.

ಪರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ಅಲ್ಮೋಗಡದಲ್ಲಿ ಡಾ. ಶೇಖದಯಾಳ, ಹಿಂ ಪ್ರಕಾಶ ಮೊದಲಾದ ೨೫ ಜನರು ಕೈದು ಮಾಡಲ್ಪಟ್ಟಿದ್ದಾರೆ. ಅಲ್ಲಿಯ ಬಟ್ಟೆ ವ್ಯಾಪಾರಸ್ಥನು ಕಾಂಗ್ರೆಸ ಇಚ್ಛೆಯಂತೆ ನಡೆದುಕೊಳ್ಳಲು ನಿರಾಕರಿಸಿದ್ದರಿಂದ ಮೇಲಿನವರು ಅವನ ಅಂಗಡಿಯ ಮುಂದೆ ಪಿಕೆಟಿಂಗ ನಡಿಸಿದರು. ವ್ಯಾಪಾರಸ್ಥನು ಬೆದರಿ ಪೋಲೀಸರನ್ನು ಕರೆದುಕೊಂಡು ಬಂದು ಅವರನ್ನು ಹಿಡಿಸಿದನು.

ಹಿಂದೂ ಕಿಶ್ಚಿಯನ್ನನ ಮೇಲೆ ಕೊಲೆಯ ಆರೋಪ

ಜೇಲ ಇನಸ್ಪೇಕ್ಟರ ಕರ್ನಲ್ ಸಿಂಪಸನ್ನರ ಕೊಲೆ ಮಾಡಲು ತನ್ನ ಪಿಸ್ತೂಲನ್ನು ಕೊಟ್ಟು ಕೊಲೆಗೆ ಸಹಾಯ ಮಾಡಿದ ಆರೋಪದ ಸಂಬಂಧವಾಗಿ ಚಾರ್ಲ್ಸ ... ಎಂಬ ಒಬ್ಬ ಹಿಂದೂ-ಕ್ರಿಶ್ಚಿಯನ್ನನು ಸೆರೆ ಹಿಡಿಯಲ್ಪಟ್ಟಿದ್ದಾನೆ.

ಅಖಿಲ ಭಾರತ ಭಾವಸಾರ ಕ್ಷತ್ರಿಯ ಪರಿಷತ್ತು

ಈ ಸಮಾಜದ ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾ ಸಭೆಯ ಅಧಿವೇಶನವು ತಾ|| ೨-೩-೧೯೩೦ನೆಯ ದಿವಸ ಗದಗದಲ್ಲಿ ಶ್ರೀ ಗುರುದತ್ತಾರಣ್ಯಸ್ವಾಮಿ ಮಠ ಸಂಸ್ಥಾನ ಕುಳಿ ಜಾಪೂರ ಇವರ ಅಧ್ಯಕ್ಷತೆಯಲ್ಲಿ ನೆರವೇರತಕ್ಕದ್ದಿದ್ದು ಎಲ್ಲಾ ಸಮಾಜ ಬಾಂಧವರು ಅದರಲ್ಲಿ ಭಾಗ ವಹಿಸಿ ಅದನ್ನು ಯಶಸ್ವಿ ಮಾಡಬೇಕೆಂದು, ಸ್ವಾಗತ ಮಂಡಳದವರು ತಿಳಿಸುತ್ತಾರೆ.

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತಿ ಮಾಡಿಕೊಡುವದಲ್ಲದೆ, ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್. ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಪಬ್ಲಿಕ ಮುತ್ತ, ಬಾಗಲಕೋಟೆ

ವಾಚ, ಟಾಯಿಂಪೀಸ ದುರಸ್ತಿಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಜಸ್ತಾಗಿ ಸೋವಿ ದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ... ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿಕೊಳ್ಳಿರಿ.

ವಿಳಾಸ:- ಆರ್. ಡಿ, ಸಿಂಧೆ
ವಾಚ ರಿಪೇರಿ ಸ್ಪೆಶ್ಯಾಲಿಸ್ಟ ಗ್ರಾಮೋಫೋನ ...
ಬಜಾರ ಬಾಗಲಕೋಟೆ.

... ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲ ತರದ ಜ್ವರಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯದ ... ಕಾರಣವಿಲ್ಲ. ಹುಣಸೀ ಬೆಲ್ಲ ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ನೋಡಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು,

ವಿಳಾಸ:- ಕೃಷ್ಣಾಚಾರ್ಯ ಮಾಹೂರ.
ಕಿಲ್ಲಾ ೨೦ ಓಣಿ, ಬಾಗಲಕೋಟೆ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವೆಲ್ಸ ಬಂಗಲೆಯ ಹತ್ತಿರವಿರುವ ೨೫೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ ತೆಗೆದುಕೊಳ್ಳಲಿಚ್ಛಿಸುವವರು ನಮ್ಮನ್ನು ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕಳಿಸುವದರೊಡನೆ ಪತ್ರವ್ಯವಹಾರ ಮಾಡಬೇಕು.

ಬಾಲಗುರುರಾವ ಧಾರವಾಡ
ವಕೀಲರು ಬಾಗಲಕೋಟೆ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯನ್ನು ... ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ... ಪ್ರಸಿದ್ಧಿಸಲ್ಪಟ್ಟಿತು.

ನಿತ್ಯ ಸಂಚಿಕೆ. ಬೆಲೆ. ೦-೦-೩.
ರ. ನಂ. ಬಿ. ೨೭೮೮
यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.
ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.
ವರ್ಷ ೧] ಬಾಗಲಕೋಟೆ— ಶನಿವಾರ ಪುಷ್ಯ ಬಹುಳ ೭ ಶಕೆ ೧೮೫೨ ತಾ॥ ೧೦—೧—೩೧ [ಸಂಚಿಕೆ ೧೬೧

ಹಿಂದುಸ್ಥಾನದ ಬಗ್ಗೆ

ಮಿ. ಮ್ಯಾಕಡೋನಾಲ್ಡರ ಮತ.

(ತಂತಿಯ ವಾರ್ತೆ)

ಹಿಂದುಸ್ಥಾನದ ಸಂಬಂಧವಾಗಿ ಭಾಷಣ ಮಾಡುವಾಗ ಮಿ. ಮ್ಯಾಕಡೋನಾಲ್ಡರು ಹೀಗೆ ಹೇಳಿದರು:— ತಾನೇ ತನ್ನ ರಾಜ್ಯಕಾರಭಾರವನ್ನು ಹಿಂದುಸ್ಥಾನಕ್ಕೆ ಸಾಗಿಸಿಕೊಳ್ಳುವಷ್ಟು ಸ್ವಾತಂತ್ರ್ಯ ಅಧಿಕಾರಗಳನ್ನು ಕೊಟ್ಟಲ್ಲಿ ಯಾವ ಅನಿಷ್ಟವೂ ಸಂಭವಿಸದು. ಇಂಥಹ ಅಧಿಕಾರಗಳನ್ನು ಕೊಟ್ಟರೇನೆ, ತನ್ನ ರಾಜ್ಯಭಾರವನ್ನು ಸಾಗಿಸಿಕೊಳ್ಳುವ ಸಂಪೂರ್ಣವಾದ ಭಾರವು ಹೊರಗಿನವರ ಮೇಲೆ ಇರದೆ, ತನ್ನ ಮೇಲೆಯೇ ಬಿದ್ದಿದೆಯೆಂದು ಹಿಂದುಸ್ಥಾನಕ್ಕೆ ಎನಿಸುವದು. ಆದರೆ ಇಂಥಹ ಅಧಿಕಾರಗಳನ್ನು ಕೊಡುವ ಮುಂದೆ ಅದರ ಭದ್ರತೆಯ ಕಡೆಗೆ ಮಾತ್ರ ಲಕ್ಷ್ಯಕೊಡಲು ಮರೆಯತಕ್ಕದ್ದಲ್ಲ.

ಮುಂಬಯಿಯಲ್ಲಿ ಮತ್ತೊಬ್ಬನ ಪ್ರಾಣಾಹುತಿ.

(ತಂತಿಯ ವಾರ್ತೆ)

“ಸ್ವಾತಂತ್ರ್ಯ ದಿನದ ದಿವಸ ಮುಂಬಯಿಯಲ್ಲಿ ಸಂಭವಿಸಿದ ಗೋಳೀಬಾರಿನ ಮೂಲಕ ಭಯಂಕರವಾಗಿ ಗಾಯಹೊಂದಿ, ಆಸ್ಪತ್ರೆಯಲ್ಲಿ ಉಪಚಾರಹೊಂದುತ್ತಿದ್ದ ಮತ್ತೊಬ್ಬ ತರುಣನು ತಾ॥ ೯ ನೆಯ ದಿವಸ ಅಲ್ಲಿಯೇ ಮರಣಹೊಂದಿದನು.

ಶ್ರೀ ಅಣೆಯವರು ಬಂಧಮುಕ್ತರಾದರು

(ತಂತಿಯ ವಾರ್ತೆ)

ವರ್‍ಹಾಡ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಮಾಧವರಾವ ಅಣೆಯವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ॥ ೯ ನೆಯ ದಿವಸ ಬಿಡುಗಡೆ ಹೊಂದಿದರು. ಅಡವಿಯ ಕಾಯಿದೆ ಭಂಗಕ್ಕಾಗಿ ಇವರಿಗೆ ೬ ತಿಂಗಳ ಶಿಕ್ಷೆ ಯಾಗಿತ್ತು.

ಡಾ. ಹರ್ಡೀಕರ ಮೇಲಿನ ಖಟ್ಲೆಯು ಹೋಯಿತು.

(ಸ್ವಂತ ಸುದ್ದಿಗಾರರಿಂದ)

ಜಮಖಂಡಿಯಲ್ಲಿಯ ಲೋಕಪ್ರಿಯ ಡಾಕ್ಟರರಾಗಿರುವ ಹುಲ್ಯಾಳಕರ ಇವರ ಮೇಲಿನ ೧೦೭ ನೆಯ ಕಲಮಿನ ಪ್ರಕರಣವು ಮುಂದೆ ಮುಂದೆ ಬೀಳುತ್ತ ಬಂದು, ತಾ॥ ೫—೧—೩೧ ನೆಯ ದಿವಸ ಪೋಲೀಸ ಫಿರ್ಯಾದಿಯು ತಿರುಗಿ ತೆಗೆದುಕೊಳ್ಳಲ್ಪಟ್ಟಿತು.

ಈ ಸಂಸ್ಥಾನದ ಪ್ರಜಾಪರಿಷತ್ತಿನ ೩ ನೆಯ ಅಧಿವೇಶನವು ಹುನ್ನೂರಲ್ಲಿ ಇದೇ ತಿಂಗಳ ಕೊನೆಗೆ ಅಥವಾ ಫೆಬ್ರುವರಿಯ ಮೊದಲನೆಯ ವಾರದಲ್ಲಿ ಕೂಡುವದಿದೆ.

ಕೋರ್ಟು ಸುಟ್ಟು ಹೋಯಿತು

ಬಂಗಾಲ ಪ್ರಾಂತದ ಹಾಬೀಗಂಜದಲ್ಲಿಯ ಕೋರ್ಟು ಕಚೇರಿಗೆ ತಾ॥ ೨ ನೆಯ ದಿವಸ ರಾತ್ರಿ ಒಮ್ಮಿಂದೊಮ್ಮೆ ಬೆಂಕಿ ಹತ್ತಿದ್ದರಿಂದ, ಅದು ಸಂಪೂರ್ಣವಾಗಿ ಸುಟ್ಟುಹೋಯಿತು. ಕಾಗದ ಪತ್ರಗಳೆಲ್ಲ ಭಸ್ಮವಾಗಿ ಹೋದವು. ಸುಮಾರು ೧ ಲಕ್ಷದವರೆಗೆ ಹಾನಿಯಾಗಿದೆ ಯಾಗಿ ತಿಳಿಯುತ್ತದೆ

ಶ್ರೀ. ಭಿಸೆಯವರ ಖಟ್ಲೆಯ ವಿಚಾರಣೆ

೧೯೨೮ ರಲ್ಲಿ ನವ್ಯ ಧಾರವಾಡದಲ್ಲಿ ಬಂಧನಕ್ಕೊಳಗಾದ ಶ್ರೀ ನರಸಿಂಗರಾವ ಭಿಸೆಯವರ ಖಟ್ಲೆಯ ವಿಚಾರಣೆಯು ತಾ॥ ೬ ನೆಯ ದಿವಸ ತಿಗ್ಗಾವಿಯಲ್ಲಿ ಸಬ್ ಡಿವಿಜನ ಮ್ಯಾಜಿಸ್ಟ್ರೇಟರ ಮುಂದೆ ಪ್ರಾರಂಭವಾಗಿ, ಪೋಲೀಸ ಸಬ್ ಇನಸ್ಪೆಕ್ಟರರ ಸಾಕ್ಷಿಯಾಯಿತು. ಮುಂದಿನ ವಿಚಾರಣೆ ಕಾಗಿಕ್ಕೆ ಮುಂದೆ ಹಾಕಲ್ಪಟ್ಟಿತು.

ಬಂಡೀಗ್ಯಾಲಿಯ ಪರಿಷತ್ತಿನ ಕಾರ್ಯಕಲಾಪ.

ಬಹುಸಂಖ್ಯಾಕ ಮುಸಲ್ಮಾನರಿಗೆ ಭಿನ್ನ ಭಿನ್ನ ವ ಕದಾರ ಸಂಘಗಳೂ ಬೇಕಾಗಿದ್ದರೂ [illegible], [illegible] ಇಷ್ಟ ಪತ್ರಾಂತಗ [illegible] ಅವರಿಗೆ [illegible] ಗಳನ, [illegible] [illegible] ಸಂಯುಕ್ತ ಮತದಾರ ಸಂಘದ [illegible] ಹಾಗು [illegible] [illegible] ಅವರ [illegible] [illegible] ಪ್ರತಿನಿಧಿತ್ವವನ್ನು [illegible], ಮುಸಲ್ಮಾನ ಪ್ರತಿನಿಧಿಗಳು [illegible] [illegible] ಯೋಜನೆಗೆ ಒಪ್ಪಿಕೊಳ್ಳುವ [illegible] ಸರ್ [illegible] ಶಾಫಿ [illegible] [illegible] ಉಪಪಂಗಡಗಳ [illegible] [illegible]. ಡಾ. ಮುಂಜೆಯವರು [illegible] ಜನ [illegible] ಮಹಮ್ಮದ [illegible] ಉಕ್ತ [illegible], [illegible] [illegible] ಸಮ್ಮತಿಸ್ಸ [illegible] [illegible], ಸರ್ [illegible] ಮಹಮ್ಮದ ಶಫಿಯವರು ತಮ್ಮ ಯೋಜನೆಯನ್ನು [illegible] ತೆಗದುಕೊಂಡರು.

ಇಷ್ಟು ದಿನಗಳ [illegible] [illegible] [illegible] ಮುಸಲ್ಮಾನ [illegible] ಬಹುತ್ವಗಳ ಸಂಬಂಧವಾಗಿ ವಿಚಾರ [illegible] [illegible] ವರದಿಯನ್ನು [illegible] ಪಡಿಸುವನೆಂಬುದಾಗಿ ಹೇಳಿ, [illegible] [illegible] [illegible], ಅಷ್ಟರಲ್ಲಿ [illegible] [illegible] ವಾದಿಯ [illegible] [illegible] [illegible] ಮುಗಿಸಿಕೊಂಡರು.

[illegible] [illegible] [illegible] ಉಪ ಸಂಘದಲ್ಲಿ [illegible] [illegible] ಪ್ರತಿನಿಧಿಗಳ [illegible] ಭಾಷಣಮಾಡುವ [illegible] [illegible] [illegible] [illegible] [illegible] [illegible] [illegible] [illegible] ಅದರಲ್ಲಿ [illegible] [illegible] [illegible] ತನ್ನ ವಿವರ [illegible] [illegible] [illegible] ಮಾಡಿಕೊಳ್ಳಲಿಕ್ಕೆ [illegible] ಇನ್ನು [illegible] ಸರ್ಕಾರವೆಂದೂ, ಭಾರತೀಯರ [illegible] ತಮ್ಮಗೆ [illegible] [illegible] ಧರ್ಮ [illegible] ಸಂಬಂಧವಾಗಿ ಹೊಣೆಗಾರ [illegible] [illegible] [illegible] ಹೇಳಿದರು. ಬಳಿಕ ಶ್ರೀ [illegible], [illegible] ಬಹಸ್ವಾ [illegible] [illegible] [illegible] [illegible] [illegible] [illegible] ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. [illegible] ಸಭೆಯು [illegible] ಮುಂದೂಡಲ್ಪಟ್ಟಿತು.

ಎಲ್ಲ ಉಪಸಂಘಗಳೂ ಮುಂದಿನ ವಾರದಲ್ಲಿ ತಮ್ಮ ತಮ್ಮ ವರದಿಗಳನ್ನು ಒಪ್ಪಿಸುವದರಿಂದ ಪರಿಷತ್ತಿನ ಕಾರ್ಯವು [illegible] [illegible] ವರೆಗೂ ಸಾಗತಕ್ಕದ್ದಿದೆ.

ಬಹಿಷ್ಕಾರದ ಪರಿಣಾಮ

೧೯೩೦ ನೆಯ ಎಪ್ರಿಲದಿಂದ ನವ್ಹೆಂಬರ್ ವರೆಗಿನ [illegible] ಈ ವರ್ಷ ೧೧೩ ಕೋಟಿ [illegible] [illegible] ಪರದೇಶಗಳಿಂದ ಇಲ್ಲಿಗೆ [illegible], ಹೋದ ವರ್ಷ [illegible] [illegible] [illegible] [illegible] ಕೋಟಿ [illegible] [illegible] ಬಂದಿದ್ದವು ಹೋದ [illegible] [illegible] [illegible] [illegible] [illegible] [illegible] [illegible] [illegible] ಇದರಿಂದ [illegible] [illegible], ಈ ವರ್ಷ ಕೇವಲ [illegible] ಕೋಟಿ [illegible] [illegible] [illegible] ಪರದೇಶಗಳಿಗೆ [illegible] [illegible] [illegible] ನಿರ್ಗತ ವ್ಯಾಪಾರದ [illegible] [illegible] [illegible] [illegible] [illegible] [illegible] ಅಂಕಿ [illegible] [illegible].

ಆಯಾತ ವ್ಯಾಪಾರ

೧೯೨೯— ೧೯೩೦

ಲಕ್ಷಗಳಲ್ಲಿ

ಎಪ್ರಿಲ್	೨೪೫೪	೧೮೨೬
ಮೇ	೨೧೨೩	೧೬೬೦
ಜೂನ	೧೬೫೨	೧೩೮೬
ಜುಲೈ	೧೯೦೬	೧೩೬೬
ಅಗಸ್ಟ	೨೭೩೪	೧೨೬೪
ಸಪ್ಟೆಂಬರ	೧೯೨೩	೧೧೯೮
ಅಕ್ಟೋಬರ	೧೯೨೪	೧೨೮೮
ನವ್ಹೆಂಬರ	೨೨೫೦	೧೯೯೧

ನಿರ್ಗತ ವ್ಯಾಪಾರ

ಎಪ್ರಿಲ್	೨೮೧೦	೨೪೫೮
ಮೇ	೨೬೩೨	೨೧೮೪
ಜೂನ	೨೬೭೧	೨೦೬೧
ಜುಲೈ	೨೫೬೩	೨೦೯೬
ಅಗಸ್ಟ	೨೭೩೧	೧೬೬೪
ಸಪ್ಟೆಂಬರ	೨೬೨೭	೧೯೪೦
ಅಕ್ಟೋಬರ	೨೬೨೬	೧೮೧೫
ನವ್ಹೆಂಬರ	೨೭೩೪	೧೬೨೩

ಹೋದ ವರ್ಷದ ನವ್ಹೆಂಬರ ತಿಂಗಳದಲ್ಲಿ ಪರದೇಶಗಳಿಂದ ಬಂದ ಸರಕುಗಳ ಅರ್ಧದಷ್ಟು [illegible] ಈ ವರ್ಷ ನವ್ಹೆಂಬರ ತಿಂಗಳದಲ್ಲಿ ಇಲ್ಲಿಗೆ ಬಂದಿದ್ದನ್ನು ನೋಡಿದಲ್ಲಿ, ಬಹಿಷ್ಕಾರ ಚಳವಳಿಯಿಂದ ಪರದೇಶದವರ ವ್ಯಾಪಾರವು ಹೇಗೆ ಮುಣುಗಹತ್ತಿದೆಯೆಂಬುದು ಪ್ರತಿಯೊಬ್ಬರಿಗೂ ತಿಳಿಯದೆ ಇರಲಾರದು.

ಬೆಳಗಾವಿಯಲ್ಲಿ

ಗಾಂಧಿ ಕಡ್ಡಿ ಪೆಟ್ಟಿಗೆಗೆ ಅಗ್ನಿ

ಬೆಳಗಾವಿಯ ಕ್ಯಾಂಟೋನಮೆಂಟ (ದಂಡಿನ) ಹದ್ದಿಯಲ್ಲಿ ಗಾಂಧಿ ಕಡ್ಡಿ ಪೆಟ್ಟಿಗೆಯ [illegible] ಟಕ್ಕೆ ಅಗ್ನಿ [illegible].

ಬೆಳಗಾವಿಯಲ್ಲಿ ಈಗ ೭-೮ ದಿನಗಳಿಂದ ಪ್ರತಿನಿತ್ಯದಲ್ಲಿಯೂ ನಾಲ್ಕು ನಾಲ್ಕು ಜನ ಸ್ವಯಂಸೇವಕರು ಪ್ರಾತಃಸಂಕೀರ್ತನೆಯನ್ನು ಹೊರಡಿಸಿ ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಮೀರಿಯ ಹತ್ತಿದ್ದಾರೆ. ಪೋಲೀಸ ಅಧಿಕಾರಿಗಳು ಅವರನ್ನು ದಿನಾಲು ಸೆರೆ ಹಿಡಿದು ಹೊಣೆಯ ಮೇಲೆ ಬಿಟ್ಟು ಬಿಡುವ ಕ್ರಮವನ್ನು ಪ್ರಾರಂಭಿಸಿದ್ದಾರೆ.

ಗಲಗಲಿಯಲ್ಲಿ ಹರತಾಳ

(ಸ್ವಂತ ಪ್ರತಿನಿಧಿಗಳಿಂದ)

ಮೌಲಾನಾ ಮ. ಹಮ್ಮದ ಅಲ್ಲಿಯವರ ಮರಣದ ವಾರ್ತೆಯನ್ನು ಕೇಳಿ ತಾ|| ೭ ನೆಯ ದಿವಸ ಇಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು. ಸಾಯಂಕಾಲಕ್ಕೆ ದೊಡ್ಡ ನೆತ್ತಿಯ ಮೆರವಣಿಗೆ ಹೊರಟಿತ್ತು. ನಂತರದಲ್ಲಿ ಸಾರ್ವಜನಿಕ ಸಭೆ ಸೇರಿ ಅವರ ಅಕಾಲ ಮೃತ್ಯುವಿನ ಬಗ್ಗೆ ದುಃಖಪ್ರದರ್ಶಕ ಠರಾವು ಸ್ವೀಕರಿಸಲ್ಪಟ್ಟಿತು. ಅವರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಅಲ್ಲಾನಲ್ಲಿ ಅನನ್ಯಭಾವದಿಂದ ಬೇಡಲಾಯಿತು.

ಇಹವೃತ್ತ

ಇಲ್ಲಿಯ ವಕೀಲರಾದ ಶ್ರೀ ಭಪ್ಪ ಶ್ರೀನಿವಾಸರಾಯರು ತಮ್ಮನ್ನು ಅವಮಾನಗೊಳಿಸಿದಬಗ್ಗೆ ಸಬ್ ಇನಸ್ಪೆಕ್ಟರ ಮೇಲೆ ಮಾನ[illegible]ನಿಯ ದಾವೆ ಮಾಡತಕ್ಕವರಿದ್ದರಷ್ಟೆ. ನಮ್ಮ ಪ್ರತಿನಿಧಿಯು ಅವರನ್ನು ಕಂಡ ಕೊಂಡು ಈ ಬಗ್ಗೆ ವಿಚಾರಿಸಲಾಗಿ ನೋಟೀಸು ಕೊಟ್ಟಮೇಲೆ ಡಿಸ್ಟ್ರಿಕ್ಟ ಪೋಲೀಸ ಕಾಯದೆಯ ಪ್ರಕಾರ ಒಂದು ತಿಂಗಳವರೆಗೆ ಅವರ ಉತ್ತರದಬಗ್ಗೆ ಹಾದಿ ನೋಡಬೇಕಾಗುತ್ತದೆಯಾದ್ದರಿಂದ ಇಲ್ಲಿಯವರೆಗೆ ಹಾದಿನೋಡಿ, ಆಮೇಲೆ ಮಾನಹಾನಿಯ ದಾವೆ ಹಾಕತಕ್ಕವರಿದ್ದೇವಾಗಿ ಅವರು ತಿಳಿಸಿದರು.

''ಕೇಸರಿ'' ಪತ್ರಿಕೆಗೆ

೧೦೦೦ ರೂಪಾಯಿ ಹೊಣೆ ಬೇಡಿದರು.

ಪುಣೆ [illegible] ಬಿ ಎಸ್ [illegible] ಶಾಸ್ತ್ರಿ [illegible] ಮಿಸ್ಟರ [illegible] ''ಕೇಸರಿ'' ಪತ್ರಿಕೆಗೆ ಸಂಪಾದಕ, [illegible] ಪ್ರೆಸ್ [illegible] ಪ್ರಕಾಶಕರು ಪ್ರೆಸ್ ಆಕ್ಟನ್ವಯವಾಗಿ ಅವರಿಗೆ ೧೦೦೦ ರೂಪಾಯಿ ಹೊಣೆ ಇಡಲು ಕೇಳಿಕೊಂಡಿ[illegible] ಇದ್ದಾರೆ.

ಅಹಮದಾಬಾದದಲ್ಲಿ

[illegible] ಸತ್ಯಾಗ್ರಹ.

[illegible] ಅಹಮದಾಬಾದ [illegible] ರಾಷ್ಟ್ರಧ್ವಜವನ್ನು ಪುನಃ ನಿಲ್ಲಿಸುವ ಬಗ್ಗೆ [illegible] ಕಾಂಗ್ರೆಸ್ ಅಧಿಕಾರಿಗಳು [illegible] ಸತ್ಯಾಗ್ರಹ [illegible] ರಾಷ್ಟ್ರಧ್ವಜಗಳನ್ನು [illegible] ಸತ್ಯಾಗ್ರಹ [illegible] ಸರದಾರ [illegible] ಸ್ವಯಂಸೇವಕರಿಗೆ [illegible] ಸ್ವಯಂಸೇವಕರು [illegible] ಪೊಲೀಸ ಅಧಿಕಾರಿಗಳು ರಾಷ್ಟ್ರಧ್ವಜಗಳನ್ನು ಕಸಿದುಕೊಂಡು ಅವರನ್ನು [illegible] ಹಾಕಿದ್ದಾರೆ.

ಬಾಂಬಿನ ಸಾಮಾನುಗಳು

ಸಿಕ್ಕವು

ಧವನಗರ ಸಂಸ್ಥಾನದ [illegible] ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ನರಸಿಂಗ ಪ್ರಸಾದನನ್ನು [illegible] ಪೋಲೀಸ ಅಧಿಕಾರಿಗಳು [illegible] ದಿವಸ ಸೆರೆಹಿಡಿದೊಯ್ದರು. ಆ ಸಮಯದಲ್ಲಿ ಅವನ ಹತ್ತರ [illegible] ಬಾಂಬಿನ [illegible] ಸಾಮಾನುಗಳು ಪೋಲೀಸರಿಗೆ ಸಿಕ್ಕವು. ಪೊಲೀಸರು ಅವನ ಮನೆಯನ್ನು ಶೋಧಿಸಿದರು ಅಲ್ಲಿ ಏನೂ ಸಿಗಲಿಲ್ಲ ಈಗ ಅವರು [illegible] ಬಾದದಲ್ಲಿ [illegible] ಇಡಲ್ಪಟ್ಟಿದ್ದಾರೆ.

ಶ್ರೀಮತಿ ಸೇನಗುಪ್ತರಿಗೆ

ಅನಾರೋಗ್ಯ

ದಿಲ್ಲಿ [illegible] ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಶ್ರೀಮತಿ ಸೇನ ಗುಪ್ತರವರು [illegible], ಕೃತ್ಯ ಮೊದಲಾದವುಗಳಿಂದ ಅಸ್ವಸ್ಥರಾಗಿರುವರು.

ಬೆಳಗಾಂವಿಯ

[illegible] ರಿಗೆ ಶಿಕ್ಷೆ.

([illegible] ಬಾಗಿ[illegible] ಗಾರರಿಂದ)

[illegible] ಬಟ್ಟೆಯ [illegible] ಮೊದಲಾದ [illegible] ಸತ್ಯಾಗ್ರಹ [illegible] ದಿವಸ [illegible] ಶಿಕ್ಷೆ [illegible] ಕಾಂಗ್ರೆಸ್ [illegible] ಇಲ್ಲ. ಆದರ [illegible] ಶ್ರೀ [illegible] ಬೆಳಗಾಂವಿಯ ಕಾಂಗ್ರೆಸ್ ಕಮಿಟಿ [illegible] ಸಾರಲ್ಪಟ್ಟಿದ್ದ [illegible] ನಾವಿಲ್ಲ ವೆಂದು [illegible].

ಗದಗದಲ್ಲಿ

ಮಾಮಲೇದಾರರು ಸಿಟ್ಟಿಗೆದ್ದರು

([illegible] ಬಾತ್ಮೀಗಾರರಿಂದ)

[illegible] ಬಟ್ಟೆ [illegible] ಪಿಕೆಟಿಂಗ ನಡೆದಿತ್ತು. [illegible] ದಿವಸ [illegible] ಗಂಟೆ [illegible] ಸ್ವಯಂಸೇವಕ [illegible] ಗೃಹದಿಂದ [illegible] ಹೋದರು. [illegible] ಸ್ವಯಂಸೇವಕ[illegible] ಇಲ್ಲಿ ನಿಲ್ಲಬೇಡ, ನಿನ [illegible] ಹೋಗು ಎಂದು ಹೇಳಿದರು. ಪರದೇಶಿ ಅರಿವೆ ತೆಗೆದುಕೊಳ್ಳಬೇಡಿರಿ ಎಂದು ಜನರಿಗೆ [illegible] ವದು ತನ್ನ ಕರ್ತವ್ಯವಾಗಿದ್ದು, [illegible] ಹೋಗುವದಿಲ್ಲವೆಂದು ಸ್ವಯಂಸೇವಕನು ಉತ್ತರ ಕೊಟ್ಟನು. ಅಷ್ಟರಲ್ಲಿ ಮತ್ತೊಬ್ಬ ವ್ಯಕ್ತಿಯು ಅಂಗಡಿಯಲ್ಲಿ ಹೋಗ[illegible] ಅಂಗಡಿಯ ಮುಂದೆ [illegible] ಸ್ವಯಂಸೇವಕನು [illegible] ನಾಹೇಬರು [illegible] ಬೇ[illegible] [illegible] ಎಂದು [illegible] ಕರೆದ [illegible] ತಿರುಗಿ ಹೋಗಿ ಬಿಟ್ಟನು. ಮುಂದೆ [illegible] ಮಾಮಲೇದಾರರು [illegible] ಬೇಕಾದ [illegible] ತಮ್ಮ [illegible]. ಅಂಗಡಿಯ ಮುಂದೆ [illegible] ಜನರು [illegible]. [illegible] ಪರದೇಶಿ [illegible] ಎಂದು ಗರ್ಜನೆ ಮಾಡಿ[illegible] ಮಾಮಲೇದಾರರು ಗಾಡಿಯಿಂದ ಇಳಿದು, ಒದರಿದವರು ಯಾರೆಂದು ಕೇಳುತ್ತ [illegible] ಎತ್ತಿಕೊಂಡು [illegible] ವೇಳೆ ಏರಿ ಹೋದರು. [illegible] ಎಂಬ ಉತ್ಸಾಹಿ ತರುಣನು ಮುಂದೆ ಬಂದು ನಾನು ಒದರಿದೆನು ಎಂಬುದಾಗಿ ಹೇಳಿದನು.

ಮಾಮಲೇದಾರ:- ನೀನು ಹೀಗೆ ಮಾಡಲಿಕ್ಕೆ ಏನು ಕಾರಣ ಒದಗಿದೆ?

ಗೌಡರ:- ಪರದೇಶಿ ಅರಿವೆ ಕೊಳ್ಳುವದು ಹರಾಮವೆಂದು ನಾನು ಸಿದ್ಧ ಮಾಡುತ್ತೇನೆ. ಪರದೇಶಿ ಬಟ್ಟೆಯನ್ನು [illegible] ಕದಾರ್ಥ ಹಚ್ಚಿ ಸಿದ್ಧ ಮಾಡುವದರಿಂದ ಅದು ಅಪವಿತ್ರವಾಗಿದ್ದು, ಧರ್ಮಬಾಹ್ಯವಾಗಿರುವದರಿಂದ ನಾನ ಹರಾಮ ಎಂದು ಒದರಿದೆ. ಪರದೇಶಿ ಅರಿವೆ ಕೊಳ್ಳುವದು ದೇಶದ್ರೋಹ [illegible] ವಾಗುತ್ತದೆ.

ಮಾಮಲೇದಾರ:- ನಿನ್ನ ಹೆಸರೇನು?

ಗೌಡರ ಇವರು ತಮ್ಮ [illegible] ಹೆಸರು ತಿಳಿಸಿದರು ಮಾಮಲೇದಾರರು ಅಲ್ಲಿದ್ದ ಪೋಲೀಸರಿಗೆ ನಾಳಿನ ದಿವಸ ಇವನನ್ನು ಕಚೇರಿಗೆ [illegible] ಬರಲು ಹೇಳಿದರು. ಗೌಡರ ಇವರು ಪೋಲೀಸರು ಏತಕ್ಕೆ ಬೇಕು, ನಾನೇ ಸ್ವತಃ ಬರುತ್ತೇನೆ. ಎಷ್ಟು ಹೊತ್ತಿಗೆ ಬರಬೇಕು ಹೇಳಿರಿ ಎಂದು ಸಾಹೇಬರಿಗೆ ಕೇಳಿದರು. ೧೨ ಗಂಟೆಗೆ ಕಚೇರಿಗೆ ಬರಲಿಕ್ಕೆ ಹೇಳಿ ಮಾಮಲೇದಾರರು ಹೊರಟು ಹೋದರು.

ರೇಲ್ವೆ ಗಾರ್ಡರ ಮೇಲೆ ಕೊಲೆಯ ಆರೋಪ

ಜಗತಪುರಿಯ ರೇಲ್ವೆ ಇನಸ್ಟಿಟ್ಯೂಟದ ಕಾನೋಶಿಯನ್ನು ಕೊಂದು ಒಗೆದು, ತಿಜೋರಿಯೊಳಗಿಂದ ೨೦೦೦ ರುಪಾಯಿಗಳನ್ನು ಕಳವು ಮಾಡಿಕೊಂಡು ಹೋದ ಸಂಬಂಧವಾಗಿ, ಜೆ ಎಸ್ ವಾಯಲ್ಡ ಹಾಗು ಎ. ಈ. ಕೂನರ್ ಎಂಬ ಇಬ್ಬರು ಯುರೋಪಿಯನ್ ರೇಲ್ವೆ ಗಾರ್ಡರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಡಾ. ಜ್ಯೋತಿರಾಮರನ್ನು ಬಿಟ್ಟರು.

ತಾ. ೩. ಜೂನಿನ ೧೧೭ ನೆಯ ಕಲಮಿನನ್ವಯ ೨ ವರ್ಷ ಕರಿಣ ಶಿಕ್ಷೆಗೆ ಗುರಿಯಾದ ಸಿಂಧಪ್ರಾಂತದ ಸತ್ಯಾಗ್ರಹ ಯುದ್ಧ ಮಂಡಳದ ಸರ್ವಾಧಿಕಾರಿಗಳಾದ ಡಾ. ಜ್ಯೋತಿರಾಮ ರಿವಾನಿರವರು ಕರಾಚಿ ಸೆಂಟ್ರಲ್ ಜೇಲಿನಿಂದ ಬಿಡುಗಡೆ ಮಾಡಲ್ಪಟ್ಟರು. ಕೆಲವು ದಿನಗಳಿಂದ ಅವರು ಬೇನೆಯಿಂದ ನರಳುತ್ತಿದ್ದದ್ದರಿಂದ ಸಿವ್ಹಿಲ್ ಸರ್ಜನರು ಅವರನ್ನು ಬೇಗನೆ ಬಿಡುಗಡೆ ಮಾಡಲು ಸರಕಾರಕ್ಕೆ ಕೇಳಿಕೊಂಡಿದ್ದರು.

ಸತ್ಯಾಗ್ರಹಿಗೆ ಜೇಲಿನಲ್ಲಿ ಕ್ಷಯರೋಗ

ಸಿಂಧಪ್ರಾಂತದ ಹೈದರಾಬಾದ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಮೌಲವಿ ಮಹಮ್ಮದ ಕಾಶೀಮರವರಿಗೆ ಕ್ಷಯರೋಗವು ಅಂಟಿಕೊಂಡಿದ್ದು, ಅದರ ಲಕ್ಷಣವನ್ನು ಉಗುಳಿನ ಮೂಲಕ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಕರಾಚಿಯಲ್ಲಿ ಶಾಲೆಯ ಮೇಲೆ ಹಲ್ಲೆ

ಮೌಲಾನಾ ಮಹಮ್ಮದ ಅಕ್ಷಯವರ ಮರಣದ ಮೂಲಕವಾಗಿ ಕರಾಚಿಯಲ್ಲಿ ಹರತಾಳವನ್ನು ಆಚರಿಸುತ್ತಿದ್ದಾಗ ಬಂದಿತು. ಅಲ್ಲಿಯ ಮಾಡೆಲ್ ಹಾಯಸ್ಕೂಲದವರು ಅಂದು ಶಾಲೆಯನ್ನು ಮುಚ್ಚಲು ನಿರಾಕರಿಸಿದ್ದರಿಂದ ಕೆಲವು ಮುಸಲ್ಮಾನರು ಆ ಶಾಲೆಯ ಮೇಲೆ ಹಲ್ಲೆ ಮಾಡಿ, ಕಲ್ಲು ಮೊದಲಾದವುಗಳನ್ನು ಒಗೆದರು. ಎಷ್ಟೋ ವಿದ್ಯಾರ್ಥಿಗಳಿಗೆ ಗಾಯವಾಗಿದ್ದು, ಕಿಡಕಿಯ ಕಾಜುಗಳಾದರೂ ಒಡೆದು ಹೋಗಿವೆ.

ಬರ್ಮಾದಲ್ಲಿ ಪೋಲೀಸರ ಮೇಲೆ ಹಲ್ಲೆ

ತಾ || ೨ ನೆಯ ದಿವಸ ರಾತ್ರಿ ಸುಮಾರು ೧೦೦ ಜನ ಬಂಡಗಾರರು, ಬರ್ಮಾ ಪ್ರಾಂತದ ಕಿಂಪಾತ ಎಂಬ ಸ್ಥಳದಲ್ಲಿಯ ಪೋಲೀಸ ಚೌಕಿಯ ಮೇಲೆ ಹಲ್ಲೆ ಮಾಡಿದರು. ಪೋಲೀಸರು ಗೋಳಿಬಾರ ಮಾಡಿದರು. ೭ ಜನರು ಮರಣ ಹೊಂದಿದ್ದು ಎಷ್ಟೋ ಜನರಿಗೆ ಗಾಯಗಳಾಗಿವೆ, ಪೋಲೀಸ ಚೌಕಿಯ ಕಾವಲುಗಾರನು ಗಾಯಗೊಂಡಿದ್ದಾನೆ.

ಅಮೃತಸರದಲ್ಲಿ ೧೧ ಜನ ಮುಖಂಡರಿಗೆ ಕೈದು

ಅಮೃತಸರದ ಪೋಲೀಸ ಅಧಿಕಾರಿಗಳು ತಾ|| ೭ ನೆಯ ದಿವಸ ಮುಂಜಾನೆಯಲ್ಲಿ ಅಲ್ಲಿಯ ಕಾಂಗ್ರೆಸ್ ಮುಖಂಡರ ಮನೆಗಳನ್ನು ಝಡತಿ ಮಾಡಿ, ಅಮೀರಚಂದ ಗುಪ್ತ, ಸ್ವಾಮಿ ಆನಂದಾನಂದ, ಸೋಮದೇವ, ಪೂರ್ಣಾನಂದ, ಶ್ರೀಮತಿ ವಿದ್ಯಾವತಿ, ಡಾ ಬಶೀರ ಮೊದಲಾದ ೧೧ ಜನರನ್ನು ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ಅನ್ವಯ ಸೆರೆಹಿಡಿದುಕೊಂಡು ಹೋದರು. ಇವರನ್ನು ಸೆರೆಹಿಡಿಯುವ ಸಮಯದಲ್ಲಿ ಸೈನಿಕರು ಪಟ್ಟಣವೆಲ್ಲ ಸಂಚರಿಸುತ್ತಿದ್ದರು.

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ವಾಚ, ಟಾಯಿಂಪೀಸ ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವಿ ದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ:- ಆರ್. ಡಿ. ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೊಫೊನ ಡೀಲರ ಬಾಗಲಕೋಟ.

ಎಲ್ಲ ತರದ ಚಳಿಜ್ವರದ ಕಾಲ
ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲ ತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು,

ವಿಳಾಸ:- ಕೃಷ್ಣಾಚಾರ್ಯ ಮುಜುಮ್ದಾರ.
ಕಿಲ್ಲಾದ ಓಣಿ, ಬಾಗಲಕೋಟ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೨೫೧ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ ತೆಗೆದುಕೊಳ್ಳಬಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಂಗುಡರಾವ ಧಾರವಾಡ
ವಕೀಲರು ಬಾಗಲಕೋಟೆ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಭೀಮರಾವ ಮಹಾಚಾರ್ಯ ಕೌಜಲಗಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT.

BI-WEEKLY
ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಸೋಮವಾರ ಮಿತಿ ಪುಷ್ಯ ಬಹುಳ ೯ ಶಕೆ ೧೮೫೨ ತಾ॥ ೧೨—೧—೩೧ [ಸಂಚಿಕೆ ೧೬೨

ವಿಜಾಪುರ ಜೇಲಿನಲ್ಲಿ

ಶ್ರೀ ಕಟ್ಟೀ ಆಚಾರ್ಯರ ಅನ್ನತ್ಯಾಗ.

೪೫ ದಿನಗಳಾದವು.

(ಬರೆದು ಬಂದದ್ದು.)

ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯಿದೆಯ ೧೭ ನೆಯ ಕಲಮಿನನ್ವಯ ಅನ್ಯಾಯವಾಗಿ ಶಿಕ್ಷೆ ಅನುಭವಿಸುತ್ತಿರುವ ಹುನಗುಂದದ ವೇದಮೂರ್ತಿ ಕಟ್ಟಿ ಕಮಲಾಚಾರ್ಯರು, ಅಶುದ್ಧ ಅನ್ನವನ್ನು ತಾವು ತಿನ್ನಲಿಕ್ಕಿಲ್ಲೆಂದು ಅನಶನ ವ್ರತವನ್ನು ಸ್ವೀಕರಿಸಿ ಈಗ ೪೫ ದಿನಗಳಿಂದಲೂ ಅನ್ನ ನೀರು ಇಲ್ಲದೆ ಪ್ರಾಯೋಪವಾಸನ ಬಿದ್ದಿರುವರು. ಆದರೂ ಜೇಲ ಅಧಿಕಾರಿಗಳ ಲಕ್ಷ್ಯವು ಅತ್ತ ಕಡೆಗೆ ಹೋಗದಾಗಿದೆ, ಕುಡಿಯಲಿಕ್ಕೆ ಸಹ ಶುದ್ಧವಾದ ನೀರನ್ನು ಕೊಡದೆ, ಕೇವಲ ಸೇರು ಸೇರೂವರೆ ಹಾಲಿನಮೇಲೆ ಅವರಿಗೆ ಜೀವಧಾರಣ ಮಾಡಲಿಕ್ಕೆ ಹಚ್ಚಿರುವರು. ಮನುಷ್ಯನು ಜೀವಿಸಬೇಕಾದರೆ ಗಾಳಿಯಷ್ಟೇ ಅವಶ್ಯವಾದ ನೀರಿನ ಬಿಂದು ಸಹ ಬಾಯಿಯಲ್ಲಿ ಬೀಳದೆ ಇದ್ದಮೇಲೆ, ಶ್ರೀ. ಕಟ್ಟಿಯವರ ದೇಹದ ಅವಸ್ಥೆಯು ಏನಾಗಿರುವದೆಂಬದನ್ನು ಬೇರೆ ಬರೆಯಬೇಕೇ? ಶರೀರವು ಅತ್ಯಂತ ಕೃಶವಾಗಿದೆ. ಕಣ್ಣು ಒಳನಟ್ಟಿವೆ. ತೂಕವು ಇಳಿಯುತ್ತ ನಡೆದಿದೆ. ಈ ಬಹಳ ದಿನಗಳ ವರೆಗೆ ನೀರು ಇಲ್ಲದ್ದಕ್ಕಾಗಿ ಅವರ ಗಂಟಲಿನಲ್ಲಿ ಇತ್ತಿತ್ತಲಾಗಿ ಏನೋ ವಿಕಾರವಾಗಿ ಅವರ ಬಳಲಿಕೆಯು ಈಗಂತೂ ಹೆಚ್ಚಾಗಿದೆಂಬ ಸುದ್ದಿ ಬಂದಿದೆ. ಇಷ್ಟಾದ ಮೇಲಾದರೂ ಅಧಿಕಾರಿಗಳ ಎದೆ ಕರಗಬಾರದೇ? ಕಾಯಿದೆ ಕಾಯಿದೆಯೆಂದು ನೀರಿಲ್ಲದೆ ಒಬ್ಬರ ಜೀವ ಕೊಲ್ಲಿಸುವದೆಂದರೆ ಕಟುಕನ ಕಟುಕತನಕ್ಕಿಂತಲೂ ಹೆಚ್ಚಿನ ಕಟುಕತನವೇ ಸರಿ. ಕಡಗ, ಕೋವು, ಹೊಡೆದಾಟ, ಬಡಿದಾಟದವರ ಸದೋದಿತ ಸಹವಾಸದ ಮೂಲಕ ಜೇಲ ಅಧಿಕಾರಿಗಳ ಮನಸ್ಸು ಕಲ್ಲಾಗಿ ಹೋಗುವ ಸಂಭವವಿದೆ. ಆದರೆ ಕೈದಿಗಳ ಸುಖದುಃಖಗಳನ್ನು ವಿಚಾರಿಸಲು ಆರಿಸಲ್ಪಟ್ಟ ದಯಾಶೀಲರಾದ ಜೇಲ ವ್ಹಿಜಿಟರರಾದರೂ, ಪ್ರಾಣಾಂತ್ಯದ ವರೆಗೆ ಪರಿಣಮಿಸಿದ ಅನ್ಯಾಯವಾದ ಈ ನಿರ್ಣಯವನ್ನು ನಿಷೇಧಿಸಿಯಾಗಲಿ, ವಿರೋಧಿಸಿಯಾಗಲಿ, ಅಥವಾ ವರಿಷ್ಠ ಅಧಿಕಾರಿಗಳಿಗೆ ಈ ಅನಾಹುತದ ಬಗ್ಗೆ ಯಥಾವತ್ತಾದ ವರದಿಯನ್ನು ಬರೆದುಕೊಂಡಾಗಲಿ— ಹೇಗಾದರೂ ಏನಾದರೂ ಮಾಡಿ ನೀರಿಲ್ಲದೆ ಅಹೋರಾತ್ರಿ ಕೊಳಲಾಡುತ್ತಿರುವ ತಮ್ಮಂಥವರದೇ ಒಂದು ಜೀವವನ್ನು ರಕ್ಷಿಸಿಕೊಳ್ಳಬಾರದೇ! ಇದು ಕೇವಲ ಭೂತದಯದ ಪ್ರಶ್ನೆಯಲ್ಲವೇ?

ಶ್ರೀ. ಕಟ್ಟಿಯವರ ಜೀವನವೇನು ಸಾಮಾನ್ಯ ಕೋಟಿಯದೆ? ಅವರ ಜೀವನವು ಉಪೇಕ್ಷಣೀಯವೆಂದು ತಿಳಿಯಲಿಕ್ಕಾದೀತೇ? ಕಟ್ಟಿ ಇವರ ಜೀವನವು ಉಚ್ಚ ಕೋಟಿಯದು. ಅವರ ಮನಸ್ಸು ಸುಸಂಸ್ಕೃತವಾದದ್ದು; ಕಾವ್ಯನ್ಯಾಯ ವೇದಾಂತ ಮೊದಲಾದ ಅನೇಕ ಶಾಸ್ತ್ರ ಸಂಪನ್ನರು. ಅವರು ಸಂಗೀತ ಚಿತ್ರಕಲೆ ಮೊದಲಾದ ಕಲೆಗಳಲ್ಲಿ ಒಳ್ಳೇ ನಿಷ್ಣಾತರು. ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಪದವಿಯ ವರೆಗೆ ಆಂಗ್ಲವಿದ್ಯಾವಿಭೂಷಿತರು. ಜನ್ಮತಃ ಸ್ವಾರ್ಥತ್ಯಾಗಿಗಳು ಅಂತೆಯೆ ಅವರು ಹಿಂದಿನ ಅಸಹಕಾರ ಚಳವಳಿಯ ಪ್ರಾರಂಭದಲ್ಲಿಯೆ ತಮ್ಮ ಆಂಗ್ಲವಿದ್ಯಾಭ್ಯಾಸಕ್ಕೆ ಶರಣು ಹೊಡೆದ, ಅಂದಿನಿಂದಲೂ ದೀನೋದ್ಧಾರ ವ್ರತವನ್ನು ಕೈಕೊಂಡಿರುವರು. ವಿರಕ್ತಿ, ಸತ್ಯ, ಅಹಿಂಸೆ ಇವೇ ಅವರ ಸಾಧನತ್ರಯವು. ಲೋಕಸಂಗ್ರಹವೇ ಅವರ ಜೀವನ ಗುರಿಯು. ತೋಪಿನ ಬಾಯಿಗೆ ಕಟ್ಟಿದರೂ ತಮ್ಮ ಧರ್ಮಪಥದಿಂದ ಒಂದು ಎಳ್ಳು ಕಾಳಷ್ಟು ಸಹ ವಿಮುಖರಾಗದಂಥ ಧೀರಸ್ವಭಾವಿಗಳು. ಇಂಥವರು ಹಳ್ಳಿಯೊಳಗಿನ ಬಡಬಗ್ಗರಿಗೆ ನೂಲುವ ನೇಯುವ ಕೆಲಸ ಹಚ್ಚಿ, ಅವರ ಮಧ್ಯಾಹ್ನದ ಚಿಂತೆಯನ್ನು ನೀಗಿಸುವ ಯತ್ನದಲ್ಲಿ, ತಮ್ಮ ಹಸಿವು ನೀರಡಿಕೆಗಳ ಪರಿವೆಯಿಲ್ಲದೆ, ಹಳ್ಳಿ ಹಳ್ಳಿ ತಿರುಗುತ್ತಿರುವಾಗ, ಅವರನ್ನು ಎತ್ತಿಕೊಂಡು ಕಾರಾಗೃಹದಲ್ಲಿಟ್ಟು, ನೀಂ

ನೀರು ಎಂದು ಹಲ ಬಸಿ ಕೊರಗಿಸುತ್ತಿರುವದು ಯಾವ ಕಾಯದೆ! ಅಬಿಂಥ ನ್ಯಾಯ!! ಜೇಲ ಮ್ಯಾಜಿಸ್ಟ್ರೇಟರಲ್ಲಿ ನ್ಯಾಯ ದಯಾಮಾಯ, ಅಂತಃ ಕರಣ, ಧಂತಕದಯೆ ಇವ್ಯಾವವೂ ಇಲ್ಲದಿಲ ಹುದೆ? ತಮ್ಮ ವೇಲ್ವಿಚಾರಣೆಗೊಳಗಾದ ಈ ಜೀವಪ್ಪ ಸಡುತ್ತಿರುವ ಕಳವಳದ ಹಾಕಳ ತಮಗೂ ತಗಲೀತೆಂಬ ಭೀತಿಯು ಇವರಿಗಿರಬಾರದೆ? ಕಲೆಕ್ಟರ, ಡಿಸ್ಟ್ರಿಕ್ಟಜಡ್ಜ, ಸಿವ್ಹಿಲ್ ಸರ್ಜನ್ ಇವರೇ ಮೊದಲಾದ ಜವಾಬದಾರಿಯುಳ್ಳ ಅಧಿಕಾರಿಗಳು ಈ ವಿಷಯದಲ್ಲಿ ಏನೂ ಮಾಡದೆ ಸುಮ್ಮನೆ ಕುಳಿತಿರುವರೇಕೆ? ಅವರಿಗೆ ಇದೆಲ್ಲ ಪ್ರಕರಣವು ಗೊತ್ತಿರಲಿಕ್ಕಿಲ್ಲೇನು? ಈ ಬಗ್ಗೆ ಸಮಾಜವೂ ಕೂಡ ತನ್ನ ಕರ್ತವ್ಯವನ್ನು ಮರೆತಿಲ್ಲವೆಂದು ಹೇಳಲು ವ್ಯಸನವೆನಿಸುತ್ತದೆ. ಇನ್ನಾದರೂ ಇವರೆಲ್ಲರು ಎಚ್ಚರಾಗುವರೋ [illegible] ತಮ್ಮ ಕರುಣ ಹೃದಯದ ದಯಾಶೀಲತೆಗೆ ಶ್ರೀ ಶಟ್ಟಿಯ ವರಂಥ ಧೀರಾತ್ಮನನ್ನು ಆಹುತಿಗೊಡುವರೋ!!

ಶ್ರೀ ಮೋಹರೆಯವರಿಗೆ

ಬಿಡುಗಡೆ.

ಉಪ್ಪಿನ ಕಾಯದೆಭಂಗದ ಮುಂಖಂತರವಾಗಿ ೯ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ''ಕರ್ನಾಟಕ ವೈಭವ''ದ ಸಂಪಾದಕರಾಗಿದ್ದ ಶ್ರೀ ಮೋಹರೆ ಹಣಮಂತರಾಯರು, ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ|| ೯ ನೆಯ ದಿವಸ ಜೇಲಿನಿಂದ ಬಿಡುಗಡೆ ಹೊಂದಿದರು

ಸೊಲ್ಲಾಪುರದ

ಆರೋಪಿಗಳಿಗೆ ಜೀವದಾನ

ಸೊಲ್ಲಾಪುರದ ದಂಗೆಯ ನಿಮಿತ್ತವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಧನಸೆಟ್ಟಿ ಮೊದಲಾದ ನಾಲ್ಕು ಜನರಿಗೆ ಸರಕಾರದವರು ದಯತೋರಿಸಬೇಕೆಂದು ವಿಜಾಪುರ ಮ್ಯುನಸಿಪಾಲಿಟಿಯವರು ಠರಾವು ಮಾಡಿದ್ದಾರೆ.

ಸೊಲ್ಲಾಪುರದಲ್ಲಾದ ದಂಗೆಯ ನಿಮಿತ್ತವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾದ ಆರೋಪಿಗಳಿಗೆ ವ್ಹಾಯಿಸರಾಯರು ದಯತೋರಿಸಿ ಅವರ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಬೇಕಾಗಿ ಅವುರಾವತಿಯ ಶ್ರೀ ಎಸ್. ಜಿ. ಜೋಗರು ಪರಿಸ್ತ್ರಕಾಯದೆ ಮಂಡಳದಲ್ಲಿ ಸೂಚನೆ ತಂತಿಕ್ಕವರು ದ್ದಾರೆ ಕರ್ನಾಟಕದವರು!

ಸಿದ್ದಾಪುರ ತಾಲೂಕದಲ್ಲಿ

ದರೋಡೆಯ ಹಾವಳಿ.

ಈ ವಾರ ಜಿಲ್ಹೆಯ ಸಿದ್ದಾಪುರ ತಾಲೂಕದಲ್ಲಿ ಕಳೆದ ೧೫ ದಿನಗಳಿಂದ ದರೋಡೆಯ ಹಾವಳಿಯು ಪ್ರಾರಂಭವಾಗಿದೆ ಸುಮಾರು [illegible] ಜನ ದರೋಡೆಕಾರರು ಪ್ರತಿನಿತ್ಯವಲ್ಲಿಯ ಒಂದು ಹಳ್ಳಿಗೆ ಸಾಗಿ ಹೋಗಿ ಅಲ್ಲಿಯ ಸಾವಕಾರರ ಮನೆಗಳಿಗೆ ಮುತ್ತಿಗೆ ಹಾಕುವರು. ಮನೆಯಲ್ಲಿದ್ದವರಿಗೆ ಮರಣದ ಹೆದರಿಕೆ ಹಾಕಿ, ಅವರನ್ನು ಹೊಡೆದ ಬಡೆದು, ಬೆಲೆಯುಳ್ಳ ಆಭರಣಗಳನ್ನು ಎತ್ತಿಕೊಂಡು ಹೋಗುವರು.

ಇಲ್ಲಿಯ ಅಧಿಕಾರಿಗಳು ಈಗ ಸ್ವಲ್ಪ ದಿನಗಳ ಹಿಂದೆ ಬಂದೂಕಿನ ಲಾಯಸನ್ಸ ಕಸಿದುಕೊಂಡಿದ್ದರಿಂದ ಹಳ್ಳಿಯ ಜನರು ದರೋಡೆಗಾರರಿಂದ ಸಂರಕ್ಷಣೆ ಮಾಡಿಕೊಳ್ಳಲು ಅಸಮರ್ಥರಾಗಿದ್ದಾರೆ ಅದರೂ ಅಲ್ಲ, ಆ ಜನರು ಸ್ವಯಂಸೇವಕ ಸಹಾಯದಿಂದ ರಾತ್ರಿಯಲ್ಲೆಲ್ಲ ಗಸ್ತು ತಿರುಗಹತ್ತಿದ್ದಾರೆ

ಅಂಕೋಲಾ ತಾಲೂಕದಲ್ಲಿ

ಜನಗಣತಿಯ ಬಹಿಷ್ಕಾರ

ಅಂಕೋಲಾ ತಾಲೂಕದ ಹಳ್ಳಿಗಳಲ್ಲಿ ಜನಗಣತಿಯ ಬಹಿಷ್ಕಾರದ ಚಳವಳಿಯು ಬಳ್ಳೇ ಭರದಿಂದ ನಡೆದಿದೆ ಎಷ್ಟೋ ಹಳ್ಳಿಗಳಲ್ಲಿ ಮನೆಗಳ ಮೇಲಿನ ಅಂಕಿಗಳು ಅಳಿಸಲ್ಪಟ್ಟಿವೆ ಜನಗಣತಿಯ ಬಹಿಷ್ಕಾರದ ಬಗ್ಗೆ ಭಾಷಣ ಮಾಡಿದ್ದಕ್ಕಾಗಿ ಶ್ರೀ ವಿಶ್ವನಾಥ ನಾವೇಕರರು ಬಂಧನಕ್ಕೊಳಗಾಗಿದ್ದಾರೆ

ಮಾಜಿ ಮಂತ್ರಿ ಕೃಷ್ಣರಾಯರ

ಮೇಲೆ ಸಮನ್ಸ

ಧಾರವಾಡದಲ್ಲಿ ಭಾಷಣ ಮಾಡಕೂಡದಾಗಿ ಅಧಿಕಾರಿಗಳು ಹೊರಡಿಸಿದ ಕಟ್ಟಪ್ಪಣೆಯನ್ನು ಮೀರಿ ರಾಷ್ಟ್ರಧ್ವಜ ವಂದನೆಯ ಸಮಾರಂಭದಲ್ಲಿ ಭಾಷಣ ಮಾಡಿದ ಬಗ್ಗೆ, ಕರ್ನಾಟಕದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಮುದವೀಡು ಕೃಷ್ಣರಾಯರ ಮೇಲೆ ಸಮನ್ಸ ಹೊರಟಿದ್ದು, ಅವರ ಖಟ್ಲೆಯ ವಿಚಾರಣೆಯು ಬೇಗನೆ ಆಗತಕ್ಕದ್ದಿರುವದಾಗಿ ತಿಳಿಯುತ್ತದೆ

"ದೇಶದ ಸಂಸ್ಥಾನ ಬಜೆಟ್ಟಿನ ಸ್ಥಿತಿಯಲ್ಲಿ [illegible] ಅಲ್ಲಿಯವರು ಸಿಧ್ಧತ ಹೊಂದಿರತಕ್ಕಾಗಿ ನನಗೆ ಅತ್ಯಂತ ದುಃಖವೆನಿಸುತ್ತದೆ" ಎಂಬುದಾಗಿ ಡಾ ಹರ್ಡೀಕರರು [illegible] ಅಲ್ಲಿಯವರಿಗೆ ತಂತಿಕಳಿಸಿದ್ದಾರೆ.

ಹಿಂದುಸ್ಥಾನವನ್ನು

ಹಿಂದಿಯರೇ ಆಳಬೇಕು.

ಸಂಯುಕ್ತ ರಾಜ್ಯಘಟನೆಯ ಉಪಮಂಡಳದಲ್ಲಿ ಭಾಷಣಮಾಡುವಾಗ ಹೈದರಾಬಾದ ಸಂಸ್ಥಾನದ ಪ್ರತಿನಿಧಿಗಳಾದ ಸರ್ ಅಕಬರ ಹೈದರಿಯವರು, ಹಿಂದುಸ್ಥಾನವನ್ನು ಹಿಂದಿಯರೇ ಆಳಬೇಕೆಂಬುದಾಗಿ ಹಿಂದುಸ್ಥಾನದಿಂದ ಬಂದ ಪ್ರತಿಯೊಬ್ಬ ಪ್ರತಿನಿಧಿಯು ಇಚ್ಛಿಸುತ್ತಿರುವನೆಂದೂ, ಬಹುಸಂಖ್ಯಾಕ ಭಾರತೀಯ ಸಂಸ್ಥಾನಿಕರು ಸಂಯುಕ್ತ ರಾಜ್ಯಘಟನೆಗೇನೆ ಬೆಂಬಲ ಕೊಡುವರೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು

ಒಳಿಕ ಸರ್ ಮಿರ್ಜಾ ಇಸ್ಮಾಯಿಲರು, ಮಧ್ಯವರ್ತಿ ಸರಕಾರದ ಮೇಲೆ ಹೇರಲ್ಪಡುವ ಜವಾಬದಾರಿಯ ನೀತಿಯು ಸಂಪತ್ತಿನ ಯಶಾಪಯಶವು ಅವಲಂಬಿಸಿದ್ದರಿಂದ, ಬ್ರಿಟಿಶರು ಈ ಕಾರ್ಯದಲ್ಲಿ ಧೈರ್ಯದಿಂದ ಮುಂದೆ ಬಂದು, ಭಾರತೀಯರಿಗೆ ಸ್ವತಂತ್ರ ಅಧಿಕಾರಗಳನ್ನು ಕೊಟ್ಟು ಅವರನ್ನು ಸಂತುಷ್ಟಗೊಳಿಸಬೇಕಾಗಿ ಬೇಡಿಕೊಂಡರು.

ನಂತರದಲ್ಲಿ ಬಿಕಾನೇರದ ಮಹಾರಾಜರವರು ಭಾಷಣಮಾಡಿ, ಭರತಖಂಡಕ್ಕೆ [illegible] ಸ್ವರಾಜ್ಯವನ್ನು ದಯಪಾಲಿಸದಲ್ಲಿ, ೧೦೦ ಕ್ಕೆ ೭೫ ರಂತೆ ಭಾರತೀಯ ಸಂಸ್ಥಾನಿಕರು ಈ ಜಲೆ ಅದರಲ್ಲಿ ಸೇರುವರೆಂದೂ, ಬ್ರಿಟಿಶ ಹಿಂದುಸ್ಥಾನ ಹಾಗು ಸಂಸ್ಥಾನಗಳನ್ನು ಇನ್ನು ಮುಂದೆ ಅಪ್ರಬುದ್ಧರಂತೆ ನಡಿಸಿಕೊಳ್ಳುವದು ಸಮಂಜಸವಲ್ಲವೆಂದೂ ಹೇಳಿದರು.

ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡರು ಮುಂದಿನ ವಾರದಲ್ಲಿ ಈ ವಿಷಯದ ಸರಕಾರಿ ಧೋರಣವನ್ನು ವ್ಯಕ್ತಪಡಿಸತಕ್ಕವರಿದ್ದಾರೆ.

ಚಂದಾದಾರರಲ್ಲಿ ಬಿನ್ನಹ.

ಯಾರ ಚಂದಾ ಹಣವು ಮುಗಿದಿರುವದೋ ಅವರಿಗೆ ವ್ಹಿ. ಪಿ. ಮಾಡುವದರಲ್ಲಿ ಬಹಳ ಪೋಸ್ಟ ಖರ್ಚ ತಗಲುವದು. ವ್ಹಿ. ಪಿ. ಯನ್ನು ಮೂರೇ ದಿನಗಳ ವರೆಗೆ ಇಟ್ಟುಕೊಳ್ಳತಕ್ಕದ್ದೆಂಬುದಾಗಿ ಹೊಸ ನಿಯಮವನ್ನು ಮಾಡಿರುವರು. ಆದುದರಿಂದ ಚಂದಾದಾರರು ತಮ್ಮ ಕಡೆಗೆ ವ್ಹಿ. ಪಿ. ಬಂದ ಕೂಡಲೆ ಅದನ್ನು ಸ್ವೀಕಾರ ಮಾಡಬೇಕಾಗಿ ವಿನಂತಿ.

ಡಾ. ಹರ್ಡೀಕರರಿಗೆ ೯ ತಿಂಗಳ ಕಠಿಣ ಶಿಕ್ಷೆ

ಹುಬ್ಬಳ್ಳಿಯಲ್ಲಿ ತಾ॥ ೨೫ ನೆಯ ದಿವಸ ಕ್ರಿಮಿನಲ್ ಅಮೆಂಡಮೆಂಟ ಕಾಯದೆಯ ೧೭ (೧) (೨) ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟು ವಿಚಾರಣೆಗಾಗಿ ಮುಂಬಯಿಗೆ ಒಯ್ಯಲ್ಪಟ್ಟ, ಹಿಂದುಸ್ಥಾನೀ ಸೇವಾದಳದ ಸಂಸ್ಥಾಪಕರು ಹಾಗು ಕಾರ್ಯದರ್ಶಿಗಳಾದ ಡಾ. ಹರ್ಡೀಕರರ ಖಟ್ಲೆಯ ವಿಚಾರಣೆಯು, ತಾ| ೧೦ನೆಯ ದಿವಸ ಮುಂಬಯಿಯಲ್ಲಿ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ನಡೆಯಿತು. ಆವಾಗ ಮೊದಲನೆಯ ಅಪರಾಧಕ್ಕಾಗಿ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರೂ. ದಂಡ, ಇಲ್ಲವೆ ಮತ್ತೆ ೧ ವಾರ ಸೆರೆಮನೆ, ಮತ್ತು [illegible] ಅಪರಾಧಕ್ಕಾಗಿ ೯ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರೂ. ದಂಡ, ಇಲ್ಲವೆ ೧ ವಾರ ಸೆರೆಮನೆ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಎರಡೂ ಶಿಕ್ಷೆಗಳನ್ನು ಏಕಕಾಲಕ್ಕೆ ಅನುಭೋಗಿಸಬೇಕು. [illegible] ಬಲ್ಲಿ [illegible] ಒಟ್ಟಿಗೆ ಅವರಿಗೆ ೯ ತಿಂಗಳ ಕಠಿಣ ಕಾರಾಗೃಹವಾಸ [illegible] ೪೦೦ ರು ದಂಡ, ಇಲ್ಲವೆ ೩ ವಾರ ಸೆರೆಮನೆ ಹೀಗೆ ಶಿಕ್ಷೆಯಾದಂತಾಯಿತು. ಡಾ ಹರ್ಡೀಕರರು ವಿಚಾರಣೆಯಲ್ಲಿ ಯಾವ ತರದಿಂದಲೂ ಭಾಗ ತೆಗೆದುಕೊಳ್ಳಲಿಲ್ಲ.

ಅಲಹಾಬಾದದಲ್ಲಿ
೧೬ ಜನರಿಗೆ ಶಿಕ್ಷೆ

ಅಲಹಾಬಾದದಲ್ಲಿ ೧೬ ಜನ ಕಾಂಗ್ರೆಸ್ ಕಾರ್ಯಕರ್ತರಿಗೆ ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ಪ್ರತ್ಯೇಕವಾಗಿ ೬ ತಿಂಗಳ ವರೆಗೆ ಕಠಿಣ ಶಿಕ್ಷೆಯಾಗಿದೆ.

ಕಾಂಗ್ರೆಸ್ ಸಂಸ್ಥೆಗಳು
ಕಾಯಿದೆಗೆ ವಿರುದ್ಧವಾದವು

ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ೧೬ನೆಯ ಕಲಮಿನನ್ವಯ ಕಲ್ಕತ್ತಾ ಜಿಲ್ಲೆಯ ೯ ಕಾಂಗ್ರೆಸ್ ಹಾಗು ಸತ್ಯಾಗ್ರಹ ಸಂಸ್ಥೆಗಳು ಕಾಯಿದೆಗೆ ವಿರುದ್ಧವಾದವುಗಳಾಗಿವೆಯೆಂದು ಸಾರಲಾಗಿದೆ [illegible] ಹಾಡವಲ್ಲಿಯ ವ್ಯಾಪಾರಿ ಸಂಘವೂ ಅವುಗಳಲ್ಲಿ ಒಂದಾಗಿದೆ. ವ್ಯಾಪಾರಿ ಸಂಘಗಳೂ ಸರಕಾರದವರಿಗೆ ಕಣ್ಣಿಗೆ ಚುಚ್ಚುತ್ತಿದವು.

ಮಹಾತ್ಮಾ ಗಾಂಧಿಯವರು
ಹಾಲು ತೆಗೆದುಕೊಳ್ಳುವದನ್ನು ಬಿಟ್ಟರು

ಪಚನ ಕ್ರಿಯೆಯು ಮಂದವಾಗಿ ಮಲಬದ್ಧತೆಯುಂಟಾದ ಮೂಲಕವಾಗಿ ಮಹಾತ್ಮಾ ಗಾಂಧಿಯವರು ಇತ್ತೀಚೆಗೆ ಹಾಲು ತೆಗೆದುಕೊಳ್ಳುವದನ್ನು ಬಿಟ್ಟುಬಿಟ್ಟಿದ್ದಾರೆ. ಅವರು ಈಗ ಪ್ರತಿನಿತ್ಯದಲ್ಲಿಯೂ ಜೋಳ ಇಲ್ಲವೆ ಸಜ್ಜೆಯ ರೊಟ್ಟಿ, ಬದಾಮಿ ಹಾಗು ಕಾಯಿ ಪಲ್ಲೆ ತೆಗೆದುಕೊಳ್ಳುತ್ತಿರುವರು. ಸ್ವಲ್ಪ ದಿನಗಳ ಹಿಂದೆ ಅವರಿಗೆ ಭಯಂಕರ ಹೊಟ್ಟೆಕಡಿತವಿದ್ದಿತ್ತು. ಅಂದು ಅವರು ತೆಗೆದುಕೊಂಡ ಆಹಾರವನ್ನೆಲ್ಲ ಕಾರಿಬಿಟ್ಟು, ತಿಳಿ ತಾಸು ಉಪವಾಸ ಮಾಡಿದರು. ಯರವಡಾ ಜೇಲಿನಲ್ಲಿಯ ನೀರು ಮತ್ತು ಆಹಾರ ಈಗ ಅವರಿಗೆ ಬಾಧಿಸುತ್ತಿರುವದು. ಅವರನ್ನು ಬೇರೆ ಜೇಲಿಗೆ ಒಯ್ಯುವರಿದ್ದಾರಾಗಿ ವದಂತಿಯಿದೆ.

ಭಗಿನಿಯರೇ,

ಸಂಕ್ರಾಂತಿ ಹಬ್ಬಕ್ಕಾಗಿ ಸ್ವದೇಶಿ ವಸ್ತುಗಳನ್ನೇ ಸಿದ್ಧಪಡಿಸಿರಿ. ಮಹಾತ್ಮಾ ಗಾಂಧಿ ಹಾಗು ಅವರ ೨೦,೦೦೦ ಅನುಯಾಯಿಗಳು ಏತಕ್ಕಾಗಿ ಸೆರೆಮನೆಗಳಲ್ಲಿ ಕಷ್ಟನಷ್ಟಗಳನ್ನು ಸಹಿಸುತ್ತಿರುವರೆಂಬುದನ್ನು ಸ್ಮರಿಸಿರಿ. ಪರದೇಶಿ ವಸ್ತುಗಳಿಗೆ ಬಹಿಷ್ಕಾರ ಹಾಕಿರಿ. ಲಕ್ಷಾನುಗಟ್ಟಲೆ ಗೋಗಳ ವಧೆಯನ್ನು ನಿಲ್ಲಿಸಿರಿ. ೬೦ ಕೋಟಿ ರುಪಾಯಿಗಳನ್ನು ಹಿಂದುಸ್ಥಾನದಲ್ಲಿಯೇ ಉಳಿಸಿಕೊಳ್ಳಲು ನೆರವಾಗಿರಿ.

ಸುಖದೇವರು
ಇನ್ನೂ ಸಿಕ್ಕಿಲ್ಲ

ಲಾಹೋರದ ಒಳಸಂಚಿನ ಖಟ್ಲೆಯ ಆರೋಪಿಗಳಾಗಿರುವ ಶ್ರೀ ಸುಖದೇವರು ಇನ್ನೂ ಸಿಕ್ಕಿಲ್ಲವೆಂಬುದಾಗಿ ಸರಕಾರಿ ವರ್ತಮಾನ ಪ್ರಸಿದ್ಧವಾಗಿದೆ.

ಸತ್ಯಮೂರ್ತಿಯವರನ್ನು
ಮತ್ತೆ ಸೆರೆಹಿಡಿದರು.

ತಮಿಳುನಾಡ ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಮದ್ರಾಸದ ಶ್ರೀ ಸತ್ಯಮೂರ್ತಿಯವರು, ಪರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ತಾ| ೯ನೆಯ ದಿವಸ ಮತ್ತೆ ಸೆರೆಹಿಡಿಯಲ್ಪಟ್ಟಿದ್ದಾರೆ. ಪೋಲೀಸ ಕಮೀಶನರರ ಆಜ್ಞೆಯನ್ನು ಮೀರಿ ರಾಷ್ಟ್ರಧ್ವಜ ಸಮಾರಂಭ ಸಾಗಿಸಿದ ಬಗ್ಗೆ ಇವರಿಗೆ ಈಗೊಮ್ಮೆ ೧೦ ರುಪಾಯಿ ದಂಡವಾಗಿತ್ತು. ಆ ಖಟ್ಲೆಯಿಂದ ಬಿಡುಗಡೆ ಹೊಂದಿ ಬಂದ ಕೂಡಲೆ ಇವರು ಪಿಕೆಟಿಂಗ ಕಾರ್ಯವನ್ನು ಕೈಕೊಂಡಿದ್ದರು.

೭ ಬೆರಳಿನ
ವಿಚಿತ್ರ ಕೂಸು.

[illegible] ಒಂದು ಕೂಸು ತಾಯಿಯ ಹೊಟ್ಟೆಯಿಂದ ವಿಕಾರವಾಗಿ ಹುಟ್ಟಿ ಸತ್ತು ಹೋಯಿತು. ಅದರ ತಲೆಯು ಭವ್ಯವಾಗಿದೆ [illegible]. ಕಿರಿದಾಗಿರುವವು ಕೈಗೆ ಏಳೇಳು ಬೆರಳುಗಳುಂಟು. ಶ್ರೀ [illegible] ಕೆಳಗೆ [illegible]ಗಳುಂಟು. ಇದನ್ನು ಸೆರೆಯಲ್ಲಿ ಕಾದಿಟ್ಟಿದ್ದು, ಇದನ್ನು ನೋಡಲು ಜನರು ತಂಡತಂಡವಾಗಿ ಹೋಗುತ್ತಿರುವರು.

ಮೌ. ಮಹಮ್ಮದ ಅಲ್ಲಿಯವರ
ಮರಣದ ಸುದ್ದಿ ಕೇಳಿ
ಪುತ್ರನೊಬ್ಬನು ಮರಣಹೊಂದಿದನು.

ಮೌಲಾನಾ ಮಹಮ್ಮದ ಅಲ್ಲಿಯವರು ಮರಣ ಹೊಂದಿದರೆಂಬ ಸುದ್ದಿಯನ್ನು ಕೇಳಿ, ಅಖಿಲಭಾರತ ಮುಸ್ಲಿಮ್ ಸ್ವಯಂಸೇವಕ ಸಂಘದ ಕಪ್ತಾನರಾದ ನೇಲಮದ [illegible] ಹಸೇನ [illegible] ಒಮ್ಮೆಂದೊಮ್ಮೆ ಮೂರ್ಛೆಹೊಂದಿ ಮರಣ ಹೊಂದಿದರಾಗಿ ತಿಳಿದು ಬರುತ್ತದೆ.

ಮೌಲಾನಾ ಮಹಮ್ಮದಲ್ಲಿಯವರ ದೇಹವನ್ನು ಜರುಸಲೇಮದ ಜನಾಬ ಮಸೀದಿಯಲ್ಲಿ ಹಗಿಯಲು [illegible] ತಮ್ಮ ಸಮ್ಮತಿಯಿದೆಯೆಂಬದಾಗಿ ಮಹಮ್ಮದಲ್ಲಿಯವರ ಬಂಧುಬಳಗದವರು ಜರುಸಲೇಮದ ಗ್ರಾಂಡ ಮುಫ್ತಿಯವರಿಗೆ ತಿಳಿಸಿದ್ದಾರೆ

ಅಲ್ಲಲ್ಲಿಯ ದಬ್ಬಾಳಿಕೆ

ಲಖನೌ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ಬಾಬು ಮೋಹನಲಾಲ ಸೆಕ್ಸೆನಾರವರಿಗೆ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೮೦ ರು. ದಂಡ, ಇಲ್ಲವೆ ಮತ್ತೆ ೧ ತಿಂಗಳ ಸೆರೆವಸನೆ ಹೀಗೆ ಶಿಕ್ಷೆಯಾಗಿದೆ. ಉಪಾಧ್ಯಕ್ಷರಾದ ಹರಿಪ್ರಸಾದ ಸೆಕ್ಸೆನಾರವರಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಉಪ್ಪಿನ ಕಾಯಿದೆಭಂಗಕ್ಕೆ ಉತ್ತೇಜನ ಕೊಟ್ಟ ನಿಮಿತ್ತವಾಗಿ ಠಾಣೆಯ ಮ್ಯುನಸಿಪಾಲಿಟಿಯ ಸಭಾಸದರಾದ ಶ್ರೀ ಮೊರಾರಜಿ ಜೇಠಾಭಾಯಿ ಅವರಿಗೆ ೧ ವರ್ಷ ಕಠಿಣ ಶಿಕ್ಷೆ ದೊರೆತಿದ್ದು, ಅವರಿಗೆ 'ಅ' ವರ್ಗ ಕೊಡಲ್ಪಟ್ಟಿದೆ.

ಪೋಲೀಸರಿಗೆ ಹಸ್ತಪತ್ರಿಕೆಗಳನ್ನು ಹಂಚಿದ ಬಗ್ಗೆ ಸೋನೇಪುರದ ಶಿಬಿಕುಮಾರರಿಗೆ ೧ ವರ್ಷ ಕಠಿಣ ಶಿಕ್ಷೆಯು ಪ್ರಾಪ್ತವಾಗಿದೆ.

ಶಾಲೆಯ ಗ್ರ್ಯಾಂಟನ್ನು ನಿಲ್ಲಿಸಿದರು

ಮುಖ್ಯಾಧ್ಯಾಪಕರು ಹಾಗು ವಿದ್ಯಾರ್ಥಿಗಳು ಇವರ ವರ್ತನೆಯು ಅಸಮಾಧಾನಕರವಾಗಿದೆಯೆಂಬ ಕಾರಣವನ್ನು ಮುಂದೆ ಮಾಡಿ ಬಂಗಾಲ ಸರಕಾರದವರು ಬಾಜಿತಪೂರ ಶಾಲೆಯ ಗ್ರ್ಯಾಂಟನ್ನು ನಿಲ್ಲಿಸಿಬಿಟ್ಟಿದ್ದಾರೆ.

ಮಧ್ಯಪ್ರಾಂತದಲ್ಲಿ ಸರ್ವಾಧಿಕಾರಿಗಳನ್ನು ಹಿಡಿದರು.

ಮರಾಠಿ ಮಧ್ಯಪ್ರಾಂತ ಸತ್ಯಾಗ್ರಹ ಯುದ್ಧ ಮಂಡಳದ ೧೨ನೆಯ ಸರ್ವಾಧಿಕಾರಿಗಳಾದ ಶ್ರೀ ಅಪ್ಪಾಸಾಹೇಬ ಹಳದೆಯವರು ತಾ|| ೯ನೆಯ ದಿವಸ "ನ್ಯೂಜಶೀಟ" ಆರ್ಡಿನನ್ಸ ದನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ.

ಕೌನ್ಸಿಲ್ ಆಫ್ ಸ್ಟೇಟದ ಸರಕಾರಿ ನಿಯುಕ್ತ ಸಭಾಸದರು

ನಾ. ಗವ್ಹರ್ನರ ಜನರಲ್‌ರವರು ಕೆಳಗಿನ ಸದ್ಗೃಹಸ್ಥರನ್ನು ಕೌನ್ಸಿಲ್ ಆಫ್ ಸ್ಟೇಟಕ್ಕೆ ಸರಕಾರಿ ನಿಯುಕ್ತ ಸಭಾಸದರನ್ನಾಗಿ ಆರಿಸಿದ್ದಾರೆ.

೧ ಜೆ ಎನ್. ಘೋಸಾಲ. ೨ ಖಾನ ಬಹದ್ದೂರ ಶೇಖ ಮಾಬಲ ಹುಸೇನ ೩ ಎಮ್. ಜೆ. ಟಿ. ಹ್ಹಿಟ. ೪ ಎ. ಪೈಲ್ಸ ಆಯರ್ವಿಂಗ ೫ ಸರ್ ದಿನಶಾ ವಾಛಾ. ೬ ದೇವದಾಸ. ೭ ಸರದಾರ ಚರಣಜಿತಸಿಂಗ ೮ ಸರ್ ಮಾಣಿಕಜಿ ದಾದಾಭಾಯ್. ೯ ಸರ್ ಅಕಬರಖಾನ ಹೋತಿ ೧೦ ಢಾಕಾದ ನವಾಬರು. ೧೧ ಜಿ. ಎ. ನಟೇಶನ್ ೧೨ ಸರ್ ಶಂಕರನ್ ನಾಯರ್ ೧೩ ಬಿ. ಕೆ. ಬೋಸ, ೧೪ ದುಥೋರಿಯಾದ ರಾಜರು.

ಹಳ್ಳಿಗಳು ಹಾಳು ಸುರಿಯಹತ್ತಿದವು.

ಪಂಚಮಹಾಲ ಜಿಲ್ಹೆಯ ಹಲೋಲ ತಾಲೂಕದಲ್ಲಿ ಕರನಿರಾಕರಣೆಯ ಚಳವಳಿಯು ಜೋರಿನಿಂದ ನಡೆದಿದೆ. ಹಳ್ಳಿಯೊಳಗಿನ ಜನರು ತಮ್ಮತಮ್ಮ ಮನೆಮಾರುಗಳನ್ನು ಬಿಟ್ಟುಕೊಟ್ಟು ಸಂಸ್ಥಾನದ ಹದ್ದಿಯಲ್ಲಿ ವಾಸಮಾಡಲು ಹೋಗಹತ್ತಿದ್ದಾರೆ. ಸರಕಾರದವರಾದರೂ ಅಲ್ಲಲ್ಲಿ ಪೋಲೀಸರನ್ನಿಟ್ಟು ಅವರಿಗೆ ಅಡ್ಡಿಮಾಡಹತ್ತಿದ್ದಾರೆ.

ಪರದೇಶಿ ಬಟ್ಟೆಯ ವಿರುದ್ಧ ೨೦೦ ಜನರ ಅನ್ನತ್ಯಾಗ

ಬಡೋದಾ ಸಂಸ್ಥಾನದಲ್ಲಿಯ ಪಟ್ಟಣದ ಜವಳಿ ವ್ಯಾಪಾರಸ್ಥರು ತಮ್ಮಲ್ಲಿಯ ಪರದೇಶಿ ಬಟ್ಟೆಯನ್ನು ಒತ್ತಟ್ಟಿಗೆ ಕಟ್ಟಿಡಲು ಒಪ್ಪಿಕೊಳ್ಳದ್ದರಿಂದ ಅಲ್ಲಿಯ ೨೦೦ ಜನರು ಕುಮಾರಿ ರಹನಾ ತಯ್ಯಬಜಿಯವರ ನೇತೃತ್ವದಲ್ಲಿ ತಾ|| ೬ರಿಂದ ಆ ಅಂಗಡಿಗಳ ಮುಂದೆ ಅನ್ನತ್ಯಾಗ ಸತ್ಯಾಗ್ರಹ ಹೂಡಿದ್ದಾರೆ. ಕುಮಾರಿ ರಹನಾ ತಯ್ಯಬಜಿಯವರು ಶ್ರೀ ಅಬ್ಬಾಸ ತಯ್ಯಬಜಿಯವರ ಮಕ್ಕಳಾಗಿರುವರು!

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್. ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ. ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟೆ

ವಾಚ, ಟಾಯಿಂಪೀಸ ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವಿದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಎಲ್ಲ ತರದ ಚಳಿಜ್ವರದ ಮೇಲ ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಒಳ್ಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೮-೦

ಏಜಂಟರಿಗೆ ಧಾರಾಳವಾದ ಕಮೀಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮಣ್ಣೂರ. ಕಿಲ್ಲಾರಿ ಓಣಿ, ಬಾಗಲಕೋಟೆ

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧಾರವಾಡ
ವಕೀಲರು ಬಾಗಲಕೋಟೆ.

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ -मनु.

ಕನ್ನಡಿಗ

KANNADIGA BAGALKOT.

BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:- ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಮಂಗಳವಾರ ಮಿತಿ ಪುಷ್ಯ ಬಹುಳ ೧೦ ಶಕೆ ೧೮೫೨ ತಾ॥ ೧೩—೧—೩೧ [ಸಂಚಿಕೆ ೧೬೩

ಶ್ರೀ ಧನಶೆಟ್ಟಿ, ಸಾರ್ಡಾ, ಸಿಂದೆ ಹಾಗು ಕುರ್ಬಾನ ಹುಸೇನರನ್ನು

ಯರೋಡಾದಲ್ಲಿ ಗಲ್ಲಿಗೇರಿಸಿದರು.

[ಸ್ಪೇಶಲ್ ತಂತಿವಾರ್ತೆ ಮುಂಬಯಿ ತಾ॥ ೧೨—೧—೧೯೩೧]

ಸೊಲ್ಲಾಪುರದಲ್ಲಾದ ದಂಗೆಯ ನಿಮಿತ್ತವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ. ಮಲ್ಲಪ್ಪ ಧನಶೆಟ್ಟಿ, ಸಾರ್ಡಾ, ಸಿಂದೆ ಹಾಗು ಕುರ್ಬಾನ ಹುಸೇನ ಈ ನಾಲ್ವರನ್ನೂ ನಿನ್ನಿನ ದಿವಸ ಮುಂಜಾನೆ ೬—೧೫ ಗಂಟೆಗೆ ಯರೋಡಾ ಜೇಲಿನಲ್ಲಿ ಗಲ್ಲಿಗೆ ಹಾಕಿದರು. ಗೃಹಮಂತ್ರಿಗಳು ಆಸಮಯದಲ್ಲಿ ಅಲ್ಲಿ ಪ್ರತ್ಯಕ್ಷ ಇದ್ದರು. ಯರೋಡಾಕ್ಕೆ ಹೋಗುವ ಎಲ್ಲ ಮಾರ್ಗಗಳಲ್ಲಿಯೂ ಪೋಲೀಸರ ಕಾವಲು ಇತ್ತು. ಆ ಮಾರ್ಗಗಳಲ್ಲಿಯ ಹೋಗಿಬರುವವರೆಲ್ಲರೂ ಪೋಲೀಸರಿಂದ ಸೂಕ್ಷ್ಮವಾಗಿ ಪರೀಕ್ಷಿಸಲ್ಪಡುತ್ತಿದ್ದರು

ಗಲ್ಲಿಗೆ ಹಾಕಲ್ಪಟ್ಟ ಮೇಲೆ ಅವರವರ ಜಡದೇಹಗಳು ಅವರವರ ಧರ್ಮಾನುಸಾರವಾಗಿ ಅಲ್ಲಿಯೇ ವ್ಯವಸ್ಥೆ ಮಾಡಲ್ಪಟ್ಟವು. ಅವರ ಜಡದೇಹಗಳು ಅವರ ಬಂಧು ಬಳಗದವರಿಗೆ ಕೊಡಲ್ಪಡಲಿಲ್ಲ. ಪುಣೆ ಹಾಗು ಮುಂಬಯಿಯಲ್ಲಿ ಈ ಮೂಲಕವಾಗಿ ಎಲ್ಲೆಲ್ಲಿಯೂ ಅಸಂತೋಷವುಂಟಾಗಿದೆ. ಕಠಿಣ ಪರಿಸ್ಥಿತಿಯುಂಟಾದಲ್ಲಿ ಅದನ್ನು ಕೂಡಲೆ ಎದುರಿಸಲು ಈ ಎರಡೂ ಸ್ಥಳಗಳಲ್ಲಿ ಅನೇಕ ಜನ ಪೋಲೀಸರು ಕಾದಿಡಲ್ಪಟ್ಟಿದ್ದಾರೆ

ಬಂಡಿಗಾಲಿಯ ಪರಿಷತ್ತಿನ
ಕಾರ್ಯಕಲಾಪ

ಸಂರಕ್ಷಣೆಯ ಉಪಮಂಡಳದವರು ಮಿ. ಥಾಮಸರವರ ಅಧ್ಯಕ್ಷತೆಯಲ್ಲಿ ಕಲೆತು ಹಿಂದೀಕರಣದ ವಿಷಯವಾಗಿ ಚರ್ಚೆನಡಿಸಿದರು. ಜವಾಬದಾರ ಸರಕಾರವನ್ನು ದೊರಕಿಸಿಕೊಂಡರೂ ಸಹ ಹಿಂದೀಕರಣವು ಅಗತ್ಯವಾಗಿಲ್ಲವೆಂದೂ, ಕೆಲವು ಪಂಗಡಗಳು ಸಂರಕ್ಷಣೆಗಾಗಿ ಇನ್ನೂ ಬ್ರಿಟಿಶ ಹಡಗುಪಡೆಯನ್ನೇ ಅವಲಂಬಿಸಿಕೊಂಡಿರುವವೆಂದೂ, ಹಿಂದುಸ್ತಾನದಲ್ಲಿ ಹಿಂದೀಯರಿಗಾಗಿ ಸ್ಯಾಂಡಹರ್ಸ್ಟ ಕಾಲೇಜ ಸ್ಥಾಪಿಸಲು ತಮ್ಮದೇನೂ ಅಡ್ಡಿಯಿಲ್ಲವೆಂದೂ ಮಿ. ಥಾಮಸರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಬರಬರುತ್ತ ಹಿಂದೀಕರಣ ಮಾಡುತ್ತ ಬರಬೇಕಾಗಿ ಸರ್ ಪಶ್ರೋವರು ನುಡಿದರು. ಹಡಗುಪಡೆ, ಸೈನ್ಯ ಹಾಗು ಏರಫೋರ್ಸ ಇವುಗಳ ಮುಖ್ಯರನ್ನೇ ನಿಯಮಿಸಬೇಕೆಂದೂ, ನಿಯಮಿಸುವ ಅಧಿಕಾರವು ಹಿಂದೀ ಜನರ ಕೈವಶವಿರಬೇಕೆಂದೂ, ಹಿಂದುಸ್ಥಾನದಲ್ಲಿ ಇವುಗಳಿಗೆ ಸಾಕಷ್ಟು ಜನರು ಸಿಗದಿದ್ದಲ್ಲಿ ಮಾತ್ರ ಸರಕಾರದವರು ಬ್ರಿಟನದಲ್ಲಿ ಆ ಸ್ಥಳವನ್ನು ತುಂಬಬೇಕೆಂದೂ ಡಾ. ಮುಂಜೆಯವರು ಮಾತಾಡಿದರು. ಹಿಂದುಸ್ಥಾನದಲ್ಲಿ ಬೇಗನೆ ಒಂದು ಸ್ಯಾಂಡಹರ್ಸ್ಟ ಕಾಲೇಜ ಸ್ಥಾಪಿಸಬೇಕಾಗಿ ಸರ್ ಪಿ. ಜಾರ್ಜ ಇಸ್ಮಾಯಿಲರು ಭಾಷಣ ಮಾಡಿದರು ಇವುಗಳಿಗೆ ಹಿಂದುಸ್ಥಾನದಲ್ಲಿ ಸಾಕಷ್ಟು ಜನರು ಸಿಗುತ್ತಿರುವದರಿಂದ ಬ್ರಿಟಿಶರನ್ನು ನಿಯಮಿಸಿಕೊಳ್ಳುವದು ಏನೂ ಅಗತ್ಯವಿಲ್ಲವೆಂದು ಜಿನ್ನಾರವರು ಹೇಳಿದರು. ಇಷ್ಟಕ್ಕೆ ಸಭೆಯು ಮುಂದುವರಿಸಲ್ಪಟ್ಟಿತು.

ಸಿಂಧಪ್ರಾಂತ ನಿರ್ಮಾಣ
ಮಹಾತ್ಮರು ಪಂಚರಾಗಬೇಕು

ಬಂಡಿಗಾಲಿಯ ಪರಿಷತ್ತಿನ ಕಾರ್ಯಕಾರಿ ಮಂಡಳದವರು ಲಾರ್ಡ ರಸೆಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವನ್ನು ನಿಯಮಿಸಿ, ಸಿಂಧಕ್ಕೆ ಪ್ರತ್ಯೇಕ ಪ್ರಾಂತವನ್ನು ಕೊಡಬೇಕೋ ಹೇಗೆಂಬುದರ ವಿಚಾರ ಮಾಡುವ ಕಾರ್ಯವನ್ನು ಆ ಮಂಡಳದ ಕಡೆಗೆ ಒಪ್ಪಿಸಿದ್ದಾರೆ ಹಿಂದೂ ಮುಸಲ್ಮಾನರಲ್ಲಿ ಈ ವಿಷಯವಾಗಿ ತಿಕ್ಕಾಟ ನಡೆದರೆ, ಮಹಾತ್ಮಾಗಾಂಧಿ ಹಾಗು ಪ್ರೊಫೆಸರ ಗಿಲ್ಬರ್ಟ ಮರೆಯವರನ್ನು ಪಂಚರನ್ನಾಗಿ ನಿಯಮಿಸಿ ಈ ವಿಷಯವನ್ನು ಅವರ ಕಡೆಗೆ ಒಪ್ಪಿಸಬೇಕೆಂದೂ, ಅವರು ತೀರ್ಮಾನಿಸಿದಂತೆ ಹಿಂದೂ ಜನರು ನಡೆದುಕೊಳ್ಳಲು ಸಿದ್ಧರಿರುವರೆಂದೂ ಡಾ. ಮುಂಜೆಯವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ

ಅಹಮ್ಮದಾಬಾದ ಮ್ಯುನಿಸಿಪಾಲಿಟಿಯು
ಸರಕಾರಕ್ಕೆ ಸೊಪ್ಪು ಹಾಕಲಿಲ್ಲ

ಅಹಮ್ಮದಾಬಾದ ಮ್ಯುನಿಸಿಪಾಲಿಟಿಯವರು, ಕೆಲವು ದಿನಗಳಹಿಂದೆ ಜನಗಣತಿಯ ಕಾರ್ಯದಲ್ಲಿ ಸರಕಾರಕ್ಕೆ ಸಹಾಯ ಮಾಡಕೂಡದೆಂಬದಾಗಿ ಒಂದು ಠರಾವು ಪಾಸು ಮಾಡಿಕೊಂಡು ಅದನ್ನು ಕಲೆಕ್ಟರರ ಕಡೆಗೆ ಕಳಿಸಿದರು, ಕಲೆಕ್ಟರರು ಅದನ್ನು ಮ್ಯುನಿಸಿಪಾಲಿಟಿಗೆ ತಿರುಗಿ ಕಳಿಸಿ ಈ ಬಗ್ಗೆ ಪುನರ್ವಿಚಾರಣೆ ಮಾಡದಿದ್ದರೆ ಜನಗಣತಿಯ ವೆಚ್ಚವನ್ನೆಲ್ಲ ನಿಮ್ಮಿಂದ ವಸೂಲ ಮಾಡುವದರಲ್ಲಿ ಬರುವದೆಂಬುದಾಗಿ ಮ್ಯುನಿಸಿಪಾಲಿಟಿಗೆ ಬರೆದು ತಿಳಿಸಿದರು. ಮ್ಯುನಿಸಿಪಾಲಿಟಿಯವರು ತಾ|| ೭ನೆಯ ದಿವಸ ಸಭೆಯಲ್ಲಿ ನೆರೆದು ಕಲೆಕ್ಟರರಿಂದ ಬಂದ ಪತ್ರದ ಬಗ್ಗೆ ವಿಚಾರ ಮಾಡಿ, ಜನಗಣತಿಯಲ್ಲಿ ಸಹಾಯ ಮಾಡಬಾರದೆಂಬದಾಗಿಯೇ ಪುನಃ ನಿರ್ಧರಿಸಿಕೊಂಡರು.

ಪುಣೆಯ ಜಿಲ್ಹಾ ಲೋಕಲ್ ಬೋರ್ಡಿನ
ಏಕತ್ವದ ನಿರ್ಣಯ

ಪುಣೆಯ ಜಿಲ್ಹಾ ಲೋಕಲ್ ಬೋರ್ಡಿನವರು ಸಾಧಾರಣ ಸಭೆಯನ್ನು ಕೂಡಿಸಿಕೊಂಡು ಮೌಲಾನಾ ಮಹಮ್ಮದ ಅಲ್ಲಿಯವರ ದೆಸೆಯಿಂದ ದುಃಖಪ್ರದರ್ಶನ ಮಾಡಿ, ನಂತರದಲ್ಲಿ ಈ ಸಲ ಪಟ್ಟಿಯ ಧೋರಣೆಯು ತೀವ್ರವಾದದ್ದರಿಂದ ಸರಕಾರದವರು ರೈತರಿಗೆ ಎಂಟಾಣೆಯಂತೆ ಪಟ್ಟಿ ವಸೂಲ ಮಾಡಬೇಕೆಂದು ನಿರ್ಣಯ ಮಾಡಿಕೊಂಡರು, ಕರ್ನಾಟಕದೊಳಗಿನ ಲೋಕಲ್ ಬೋರ್ಡಗಳೂ ರೈತರ ಗೋಳನ್ನು ಕಿವಿಯಲ್ಲಿ ಹಾಕಿಕೊಳ್ಳುವವೇ?

ಪಿಕೆಟಿಂಗಕ್ಕಾಗಿ
ವಕೀಲರು ಪ್ರಾಣಕೊಟ್ಟರು

ಮಧ್ಯಪ್ರಾಂತದ ಬುಲಡಾಣಾದಲ್ಲಿ ಒಂದು ಅಂಗಡಿಯ ಮುಂದೆ ಶ್ರೀ ಸಿದ್ಧೇಶ್ವರ ಗೋರೆ ಎಂಬ ತರುಣ ವಕೀಲರು ಪಿಕೆಟಿಂಗ ಮಾಡುತ್ತಿರುವಾಗ, ಯಾರೋ ಕೆಲವು ದುಷ್ಟ ಜನರು ಅವರ ಮೇಲೆ ಕಲ್ಲು ಒಗೆದಿದ್ದರಿಂದ, ಅವರ ತಲೆ ಬುರುಡೆ ಒಡೆದು ಹೋಗಿ, ಅವರು ತಟ್ಟನೆ ಮರಣ ಹೊಂದಿದರು.

ಗದಗದಲ್ಲಿ ಹರತಾಳ

(ಸ್ವಂತ ಸುದ್ದಿಗಾರರಿಂದ)

ಮೌಲಾನಾ ಮಹಮ್ಮದ ಅಲ್ಲಿಯವರು ನಿಧನಹೊಂದಿದ ಸುದ್ದಿಯು ತಾ|| ೬ನೆಯ ದಿವಸ ಇಲ್ಲಿಗೆ ತಿಳಿದ ಕೂಡಲೆ ಗದಗ ಬೆಟಗೇರಿಗಳಲ್ಲಿ ಸಂಪೂರ್ಣ ಹರತಾಳ ಆಚರಿಸಲಾಯಿತು.- ಒಬ್ಬನೇ ಒಬ್ಬ ಚಹಾದ ಅಂಗಡಿಯವನು ಮಾತ್ರ, ಸ್ವಯಂಸೇವಕರ ಬಿನ್ನಹಕ್ಕೆ ಲಕ್ಷ್ಯಕೊಡದೆ, ತನ್ನ ಅಂಗಡಿಯನ್ನು ಮುಚ್ಚಲಿಲ್ಲ, ಊರ ಜನರು ಅವನ ಅಂಗಡಿಗೆ ಪಿಕೆಟಿಂಗ ಮಾಡಿದರು. ಸಾಯಂಕಾಲಕ್ಕೆ ಸಾವಿರ ಜನರು ಬಟ್ಟತಲೆಯ ಮೆರವಣಿಗೆಯಿಂದ ಹೊರಟು, ಪಟ್ಟಣದಲ್ಲೆಲ್ಲ ಸಂಚರಿಸಿ ಗಾಂಧಿ ಚೌಕಿಗೆ ಬಂದರು. ಅಲ್ಲಿ ಸಾರ್ವಜನಿಕ ಸಭೆಯಾಗಿ, ಅನೇಕರು ಮಹಮ್ಮದ ಅಲ್ಲಿಯವರ ಅಪೂರ್ವ ಸ್ವಾರ್ಥತ್ಯಾಗ, ಮುತ್ತು. ಅವರು ಮಾಡಿದ ಕಾರ್ಯದ ವಿಷಯವಾಗಿ ಭಾಷಣ ಮಾಡಿದರು

ಊರ ಜನರ ಇಚ್ಛೆಯ ವಿರುದ್ಧವಾಗಿ ವರ್ತಿಸಿದ್ದಕ್ಕಾಗಿ ತಾ| ೭ನೆಯ ದಿವಸ ಪುನಃ ಆ ಚಹಾದ ಅಂಗಡಿಯ ಮೇಲೆ ಪಿಕೆಟಿಂಗ ನಡೆಯಿತು. ಪಿಕೆಟಿಂಗ ಸುರುವಾದ ಒಂದು ತಾಸಿನಲ್ಲಿಯೇ ಚಹಾದ ಅಂಗಡಿಯ ಒಡೆಯನು ಊರಲ್ಲಿ ಹರತಾಳ ಪಾಲಿಸಲಿಕ್ಕೆ ಅಪ್ಪಣೆಯಾದ ಕೂಡಲೆ ನಾನು ಆ ಪ್ರಕಾರ ನಡೆಯುತ್ತೇನೆಂದು ಬರೆದುಕೊಟ್ಟನು. ಅವನ ಅಂಗಡಿಯ ಮೇಲಿನ ಪಿಕೆಟಿಂಗ ತೆಗೆಯುವದರಲ್ಲಿ ಬಂದಿತು.

ಹಾನಗಲ್ಲದಲ್ಲಿ
ದೇಸಾಯಿಯವರಿಗೆ ಶಿಕ್ಷೆ

ಜವಾಹಿರಲಾಲ ದಿನದ ನಿಮಿತ್ತವಾಗಿ ಹಾನಗಲ್ಲದಲ್ಲಿ ಬಂಧನಕ್ಕೊಳಗಾದ ಶ್ರೀ ವಾಮನರಾವ ದೇಸಾಯಿ ಶಿರಮಾಪೂರ ಇವರಿಗೆ ತಾ|| ೭ನೆಯ ದಿವಸ ೨೦೦ ರೂ. ದಂಡ ಇಲ್ಲವೆ ೧|| ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು.

ಚಂದಾದಾರರಲ್ಲಿ ಬಿನ್ನಹ

ಯಾರ ಚಂದಾ ಹಣವು ಮುಗಿದಿರುತ್ತದೆಯೋ ಅವರಿಗೆ ವ್ಹಿ. ಪಿ. ಮಾಡುವದರಲ್ಲಿ ಬರುವದು. ಪೋಸ್ಟ ಖಾತೆಯವರು ವ್ಹಿ. ಪಿ. ಯನ್ನು ಮೂರೇ ದಿನಗಳ ವರೆಗೆ ಇಟ್ಟುಕೊಳ್ಳತಕ್ಕದ್ದೆಂಬುದಾಗಿ ಹೊಸ ನಿಯಮವನ್ನು ಮಾಡಿರುವರು. ಆದುದರಿಂದ ಚಂದಾದಾರರು ತಮ್ಮ ಕಡೆಗೆ ವ್ಹಿ. ಪಿ. ಬಂದ ಕೂಡಲೆ ಅದನ್ನು ಸ್ವೀಕಾರ ಮಾಡಬೇಕಾಗಿ ಬಿನ್ನಹ.

ಬನಾರಸದಲ್ಲಿ ಬಾಂಬು ಹಾರಿತು.

ಬನಾರಸ ಪಟ್ಟಣದಲ್ಲಿಯ ಕೊಡಾಯಿ ಚೌಕಿಯೆಂಬ ಪೋಲೀಸ ಚೌಕಿಯಲ್ಲಿ ತಾ। ೮ ನೆಯ ದಿವಸ ರಾತ್ರಿ ಒಬ್ಬಂದೊಬ್ಬ ಬಾಂಬಿನ ಸ್ಫೋಟವಾಯಿತು ಬಾಗಿಲಲ್ಲಿ ನಿಂತಿರುವ ಒಬ್ಬ ಪೋಲೀಸನಿಗೆ ಅದರಲ್ಲಿಯ ಕಾಚಿನ ಚೂರುಗಳು ತಗಲಿದ್ದರಿಂದ ಅವನ ಕೋಟು ಹರಿದು ಹೋಯಿತು. ಅದನ ದೇಹಕ್ಕೆ ಏನೂ ಅಪಾಯ ಸಂಭವಿಸಿಲ್ಲ. ಪೋಲೀಸ ಅಧಿಕಾರಿಗಳು ಈ ಬಗ್ಗೆ ಶೋಧ ನಡಿಸಿದ್ದಾರೆ.

ಸತ್ಯಮೂರ್ತಿಯವರಿಗೆ

೬ ತಿಂಗಳ ಕಠಿಣ ಶಿಕ್ಷೆ

ಮದ್ರಾಸದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಸ್ವಯಂಸೇವಕರೊಂದಿಗೆ ಪಿಕೆಟಿಂಗ ನಡಿಸಿದ ನಿಮಿತ್ತವಾಗಿ ತಮಿಳುನಾಡು ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ ಎಸ್. ಸತ್ಯಮೂರ್ತಿಯವರಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ ಉಳಿದ ೧೦ ಜನ ಸ್ವಯಂಸೇವಕರಿಗೂ ಪ್ರತ್ಯೇಕವಾಗಿ ೬ ತಿಂಗಳ ಶಿಕ್ಷೆಯು ದೊರೆತಿದೆ. ಶ್ರೀ ಸತ್ಯಮೂರ್ತಿಯವರ ಸ್ಥಳದಲ್ಲಿ ಶ್ರೀ ಕೆ. ಭಾಷ್ಯಂರವರು ಅಧ್ಯಕ್ಷರಾಗಿರುವರಾಗಿ ತಿಳಿದು ಬಂತ್ತದೆ

ಮಾಮಲೇದಾರರು

ಎಮ್ಮೆಗಳನ್ನು ಜಪ್ತಮಾಡಿದರು.

ಕಾಯಿರಾ ಜಿಲ್ಲೆಯಲ್ಲಿಯ ಬೋರಸದ ತಾಲೂಕದ ಮಾಮಲೇದಾರರು ವಾಕನಾ ಎಂಬ ಹಳ್ಳಿಗೆ ಹೋಗಿ ಹಪ್ತೆಯನ್ನು ಕೊಡಲಿದ್ದ ಕೆಲವು ರೈತರ ಎಮ್ಮೆಗಳನ್ನು ಜಪ್ತ ಮಾಡಿದರು. ಜಪ್ತಿಗೆ ಬೆದರಿ ಅಲ್ಲಿಯ ಒಬ್ಬ ರೈತನಾದ ಶ್ರೀ ಜಸ್ಜೀ ಭಾಯಿಯವರು ಹಪ್ತೆ ಕೊಡಲು ಒಪ್ಪಿಕೊಂಡರು ಅದನ್ನು ಕಂಡು ಅವರ ಚಿರಂಜೀವನು ಉಪವಾಸ ಮಾಡಿದನು. ಮಗನು ಉಪವಾಸ ಕೈಕೊಂಡಿದ್ದಕ್ಕೆ ಕಂಡು ತಂದೆಯು ಹಪ್ತೆ ಕೊಡುವದನ್ನು ಬಿಟ್ಟುಗೊಟ್ಟು ದೇಶಾಂತರ ಹೊರಟು ಹೋದನು.

ಅನ್ನತ್ಯಾಗ ಸತ್ಯಾಗ್ರಹಕ್ಕೆ

ವ್ಯಾಪಾರಿಗಳು ಮಣಿದರು.

ಬಡೋದಾ ಸಂಸ್ಥಾನದ ಪಟಾಣದಲ್ಲಿಯ ಅವಳಿ ವರ್ತಕರು ಪರದೇಶಿ ಬಟ್ಟೆಯ ಗಂಟುಗಳನ್ನು ಒತ್ತಟ್ಟಿಗೆ ಕಟ್ಟಿಡಲು ನಿರಾಕರಿಸಿದ್ದರಿಂದ, ಅಲ್ಲಿಯ ಸಾವಿರಾರು ಜನ ಸ್ತ್ರೀ ಪುರುಷರು ಅವರ ಅಂಗಡಿಗಳ ಮುಂದೆ ಪಿಕೆಟಿಂಗ ಹಾಗು ಅನ್ನತ್ಯಾಗ ಸತ್ಯಾಗ್ರಹ ಹೂಡಿದ್ದರಷ್ಟೆ, ಹೀಗೆ ಸಾವಿರಾರು ಜನರು ಸತ್ಯಾಗ್ರಹ ಹೂಡಿದ್ದನ್ನು ಕಂಡುಕೊಂಡು ವರ್ತಕರು ಗಾಬರಿಯಾಗಿ ತಮ್ಮ ಸಭೆಯನ್ನೇರ್ಪಡಿಸಿಕೊಂಡು ಪರದೇಶಿ ಬಟ್ಟೆಯನ್ನು ಕಟ್ಟಿಡಲು ನಿರ್ಧರಿಸಿಕೊಂಡರು. ಬಳಿಕ ಜನರು ಅನ್ನತ್ಯಾಗ ಸತ್ಯಾಗ್ರಹವನ್ನು ನಿಲ್ಲಿಸಿದರು.

ನಾಗಪುರ ಜೇಲಿನಲ್ಲಿ

ಅನ್ನತ್ಯಾಗ

ನಾಗಪುರದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಪಿಕೆಟಿಂಗದ ಸಂಬಂಧವಾಗಿ ಶಿಕ್ಷೆಗೆ ಗುರಿಯಾದ ೮ ಜನ ಸ್ವಯಂಸೇವಕರಿಗೆ "ಸಿ" ವರ್ಗ ಕೊಟ್ಟಿದ್ದರ ನಿಷೇಧಾರ್ಥವಾಗಿ ನಾಗಪುರ ಜೇಲದಲ್ಲಿಯ ರಾಜಕೀಯ ಕೈದಿಗಳು ತಾ। ೧೨ರಿಂದ ಅನ್ನತ್ಯಾಗ ವ್ರತವನು ಕೈಕೊಂಡಿದ್ದಾರೆ

ಲ್ಯಾಂಕೆಶಾಯರದಲ್ಲಿ

೨ ಲಕ್ಷ ಕೂಲಿಕಾರರ ಸಂಪು

೧೬ನೆಯ ತಾರೀಖಿನೊಳಗಾಗಿ ತಮ್ಮ ಬೇಡಿಕೆಗಳು ಮನ್ನಿಸಲ್ಪಡದಿದ್ದಲ್ಲಿ ಅಂದು ಎಲ್ಲ ಕೂಲಿಕಾರರು ತಮ್ಮ ತಮ್ಮ ಕಾರಖಾನೆಯೊಳಗಿಂದ ಹೊರಬಿದ್ದು ಬರಬೇಕಾಗಿ ಮ್ಯಾಂಚೆಸ್ಟರ ಮಧ್ಯವರ್ತಿ ಸಂಘದವರು ನಿರ್ಧಾರ ಮಾಡಿಕೊಂಡಿದ್ದು ಒಟ್ಟಿಗೆ ೨ ಲಕ್ಷ ಜನ ಕೂಲಿಕಾರರು ಸಂಪು ಮಾಡುವವರಿದ್ದಾರೆಂದು ತಿಳಿಯುತ್ತದೆ

ಆನರರಿ ಮ್ಯಾಜಿಸ್ಟ್ರೇಟರು

ಕಾಂಗ್ರೆಸಕ್ಕೆ ಸೇರಿದರು

ಸರಕಾರಿ ದಬ್ಬಾಳಿಕೆಯನ್ನು ನಿಷೇಧಿಸುತ್ತ್ತೀಚೆಗೆ ತಮ್ಮ ಆನರರಿ ಮ್ಯಾಜಿಸ್ಟ್ರೇಟ ಪದಕ್ಕೆ ರಾಜಿನಾಮೆ ಕೊಟ್ಟ ಪಂಢರಪುರದ ಶ್ರೀ ಭಾವುಸಾಹೇಬ ದೇಶಮುಖರವರು ಕಾಂಗ್ರೆಸ ಪಕ್ಷಕ್ಕೆ ಕೂಡಿಕೊಂಡಿದ್ದು, ಅವರು ಇನ್ನು ಮುಂದೆ ಕಾಂಗ್ರೆಸ್ ಸೇವೆಯಲ್ಲಿಯೇ ತಮ್ಮ ದೇಹವನ್ನು ಸವೆಸತಕ್ಕವರಿದ್ದಾರೆ

ಡಾ. ಹರ್ಡೀಕರರ ಸಂದೇಶ

ಮಹಾತ್ಮರನ್ನೇ ಹಿಂಬಾಲಿಸಿರಿ

ಡಾ. ಹರ್ಡೀಕರರಿಗೆ ಶಿಕ್ಷೆಯಾದ ಕೂಡಲೆ "ಕ್ರಾನಿಕಲ್" ಪತ್ರಿಕೆಯ ಪ್ರತಿನಿಧಿಯು ಅವರನ್ನು ಕಂಡು ಕೊಂಡನು. ಆಗ ಡಾ. ಹರ್ಡೀಕರರು ಕೆಳಗಿನ ಸಂದೇಶವನ್ನು ಕೊಟ್ಟರು.

"ದೇವರ ಮೇಲೆ ವಿಶ್ವಾಸವನ್ನಿಟ್ಟು ಮಹಾತ್ಮಾ ಗಾಂಧಿಯವರನ್ನೇ ಹಿಂಬಾಲಿಸಿರಿ. ನಿಶ್ಚಯವಾಗಿ ಜಯವು ಸಿಕ್ಕೇಸಿಗುವದು"

ಅಲಹಾಬಾದ ವಿಶ್ವವಿದ್ಯಾಲಯದ

ಗ್ರ್ಯಾಂಟಿಗೆ ಚಕ್ರಬಂಧ

ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಿದ್ದರಿಂದ ವಿಶ್ವವಿದ್ಯಾಲಯಕ್ಕೆ ಕೊಡತಕ್ಕ "ಗ್ರ್ಯಾಂಟ"ನ್ನು ನಿಲ್ಲಿಸುವವರಲ್ಲಿ ಬಂದಿದೆಯೆಂಬುದಾಗಿ ಸರಕಾರದವರು ಅಲಹಾಬಾದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ತಿಳಿಸಿದ್ದಾರಾಗಿ ಪ್ರಸಿದ್ಧವಾಗಿದೆ.

ಚರಸಾದದಲ್ಲಿ

೧೦೫ ಜನರನ್ನು ಹಿಡಿದರು

ಪೇಶಾವರ ಪ್ರಾಂತದ ಚರಸಾದದಲ್ಲಿ ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ ಜೋರಿನಿಂದ ನಡೆದಿದೆ. ತಾ॥ ೮ ಹಾಗು ೯ ಈ ದಿನಗಳಲ್ಲಿ ಈ ಸಂಬಂಧವಾಗಿ ೧೦೫ ಜನ ಸ್ವಯಂಸೇವಕರು ಬಂಧನಕ್ಕೊಳಗಾಗಿದ್ದಾರೆ

ಕೇಯೂರದಲ್ಲಿ

ಇಬ್ಬರಿಗೆ ಶಿಕ್ಷೆ

ಸಿಂದಿ ಗಿಡಗಳನ್ನು ಕಡಿದ ಅಪರಾಧದ ಸಲುವಾಗಿ ಧಾರವಾಡದ ಬಳಿಯಲ್ಲಿರುವ ಕೇಯೂರದಲ್ಲಿ ಇಬ್ಬರು ರೈತರಿಗೆ ಪ್ರತ್ಯೇಕವಾಗಿ ೧೬ ತಿಂಗಳ ಕಠಿಣ ಶಿಕ್ಷೆಯು ದೊರೆತಿದೆ.

ಇಹವೃತ್ತ

ಇಲ್ಲಿ ಈಗ ಪ್ಲೇಗು ಹೆಚ್ಚಾಗಿದ್ದರ ಮೂಲಕವಾಗಿ ಇಂದಿನಿಂದ "ಬಲಭೀಮ ವಾಚನಾಲಯ"ವು ಕೆಲವು ದಿನಗಳ ವರೆಗೆ ಮುಚ್ಚಲ್ಪಟ್ಟಿರುವದಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸತ್ಯಾಗ್ರಹಿಯು ಜೇಲಿನಲ್ಲಿಯೇ ಸತ್ತನು.

ಕಾಯದೆಭಂಗದ ಮೂಲಕವಾಗಿ ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ ಮಥುರಾ ಜೇಲಿನಲ್ಲಿ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಕನ್ನಯ್ಯಾ ಎಂಬ ಓರ್ವ ಸತ್ಯಾಗ್ರಹಿಯು ತಾ॥ ೯ನೆಯ ದಿವಸ ಚಟ್ಟಜ್ವರದಿಂದ ಜೇಲಿನಲ್ಲಿಯೇ ಮರಣ ಹೊಂದಿದನೆಂಬುದಾಗಿ ತಿಳಿಯುತ್ತದೆ.

ದಂಗೆಯಲ್ಲಿ ಸತ್ತ ಪೋಲೀಸರ ಮನೆಯವರಿಗೆ ಸಹಾಯ

ಕಳೆದ ಸಪ್ಟೆಂಬರ ೨೫ನೆಯ ತಾರೀಖಿನ ದಿವಸ ಚಿಂಚೇರದಲ್ಲಾದ ದಂಗೆಯಲ್ಲಿ ಮರಣ ಹೊಂದಿದ ಪೋಲೀಸರ ಆಶ್ರಿತರಿಗೆ ಕಲವು ವರ್ಷಗಳವರೆಗೆ ಧನಸಹಾಯ ಮಾಡಲು ಮುಂಬಯಿ ಸರಕಾರದವರು ಕೆಲವೊಂದು ಹಣವನ್ನು ಮಂಜೂರಮಾಡಿದ್ದಾರೆ.

ಶ್ರೀ ಕಬಾಡಿಯವರು ನಿರ್ದೋಷಿಗಳಾದರು

ಮುಂಬಯಿಯಲ್ಲಿ ಕ್ರಿ. ಲಾ. ಅಮೆಂಡ ಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಶಿಕ್ಷೆಗೆ ಗುರಿಯಾಗಿ ಯರವಡಾ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ, ಅಲ್ಲಿಯ ಯುವಕ ಸಂಘದ ಸರ್ವಾಧಿಕಾರಿಗಳಾದ ಶ್ರೀ ವಾಮನ ಕಬಾಡಿಯವರು ಹಾಯಕೋರ್ಟಿನಲ್ಲಿ ನಿರ್ದೋಷಿಗಳಾಗಿ ನಿಯುಯಿಸಲ್ಪಟ್ಟಿದ್ದಾರೆ.

ಕಾಂಗ್ರೆಸ್ ಅಧಿಕಾರಿಗಳೂ ಜಕಾತಿ ಎತ್ತುತ್ತಿದರು

ನಾಗಪೂರ ಪಟ್ಟಣದ ಕಾಂಗ್ರೆಸ್ ಅಧಿಕಾರಿಗಳು, ಸಂತೆಯ ದಿವಸ ಅಲ್ಲಿ ನೆರೆಯುವ ಪ್ರತಿಯೊಬ್ಬ ವ್ಯಾಪಾರಿಯ ಮೇಲೆ ಒಂದು ರೂಪಾಯಿಗೆ ಒಂದು ಪೈಯಂತೆ ಕರ ಕೂಡಿಸಿದ್ದು, ಮೊನ್ನೆ ೧೪ ನೇ ತಾರೀಖಿನಿಂದ ಅದನ್ನು ವಸೂಲಮಾಡಹತ್ತಿದ್ದಾರೆ.

ಶ್ರೀ ಸ್ವಾಮಿ ನಾರಾಯಣರಿಗೆ ಬಿಡುಗಡೆ

ಕರನಿರಾಕರಣೆಯ ಚಳವಳಿಯ ಸಂಬಂಧವಾಗಿ ಭಾಷಣ ಮಾಡಿದ್ದಕ್ಕೆ ಶಿಕ್ಷೆಗೆ ಗುರಿಯಾದ ಅಹಮ್ಮದಾಬಾದದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಜೆ. ಸಿ. ಸ್ವಾಮಿ ನಾರಾಯಣರು ತಾ॥ ೯ ನೆಯ ದಿವಸ ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಸಾಬರಮತಿ ಜೇಲಿನಿಂದ ಬಿಡುಗಡೆ ಹೊಂದಿದರು.

ಕಾಂಗ್ರೆಸ್ ಸಂಸ್ಥೆಗಳು ಕಾಯದೆಗೆ ವಿರುದ್ಧವಾದವು.

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಮುಂಬಯಿಯ ಉಪನಗರಗಳಾದ ಕುರ್ಲಾ, ಘಾಟಕೋಪೂರ, ಸಾಂಟಾಕ್ರೂಜ್, ಬೊರಿವಿಲಿ, ಮಲಾಡ, ಚೆಂಬೂರ ಮೊದಲಾದ ಭಾಗಗಳಲ್ಲಿಯ ಕಾಂಗ್ರೆಸ್ ಕಮಿಟಿಗಳು ಕಾಯದೆಗೆ ವಿರುದ್ಧವಾದವುಗಳಾಗಿವೆಯೆಂದು ಸಾರುವದರಲ್ಲಿ ಬಂದಿದೆ.

ಬಂಗಾಲ ಇಲಾಖೆಯಲ್ಲಿಯ ತಮಲುಕ್ ಹಾಗು ಕೊಂಟಾಯಿ ಭಾಗಗಳಲ್ಲಿಯ ಕಾಂಗ್ರೆಸ್ ಸಂಸ್ಥೆಗಳು ಶಾಸನ ಬಾಹಿರ ಸಂಸ್ಥೆಗಳಾಗಿ ಸಾರಲ್ಪಟ್ಟಿದ್ದರಿಂದ ಅಲ್ಲಿಯ ೪೧ ಸಂಸ್ಥೆಗಳನ್ನು ಸರಕಾರದವರು ೯ ನೆಯ ಆರ್ಡಿನನ್ಸದನ್ವಯ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ.

ಸ್ವಾಮಿ ಶ್ರದ್ಧಾನಂದರ ಮೊಮ್ಮಗಳಿಗೆ ಶಿಕ್ಷೆ.

ಕ್ರಿ. ಲಾ. ಅಮೆಂಡಮೆಂಟ ಕಾಯದೆಯನ್ವಯ ಬಂಧನಕ್ಕೊಳಗಾದ ಕುಮಾರಿ ಕೌಶಲ್ಯಾದೇವಿಯವರಿಗೆ ೫ ತಿಂಗಳ ಸಾದಾ ಶಿಕ್ಷೆಯಾಗಿದೆ. ಇವರು ದಿವಂಗತ ಸ್ವಾಮಿ ಶ್ರದ್ಧಾನಂದರ ಮೊಮ್ಮಕ್ಕಳಿರುವರು.

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣಿಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟ

ವಾಚ, ಟಾಯಂಪೀಸ ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚ ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನ ಚನ್ನಾಗಿ ಸೋವಿದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ. ಸಿಂಧೆ.
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟ.

ಎಲ್ಲ ತರದ ಚಳಿಜ್ವರದ ಮೇಲೆ
ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರ್ತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ. ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು.

ವಿಳಾಸ:- ಕೃಷ್ಣಾಚಾರ್ಯ ಮುಜೂರ.
ಕಿಲ್ಲಾ ೭೦ ಓಣಿ, ಬಾಗಲಕೋಟ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವೆಲರ್ಸ ಬಂಗಲೆಯ ಹತ್ತರವಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ. ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಿಗುದರಾವ ಧಾರವಾಡ.
ವಕೀಲರು ಬಾಗಲಕೋಟ.

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT.

BI-WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ಮಿತಿ ಪುಷ್ಯ ಬಹುಳ ೧೧ ಶಕೆ ೧೮೫೨ ತಾ|| ೧೪—೧—೩೧ [ಸಂಚಿಕೆ ೧೬೪

ಬೆಳಗಾವಿಯಲ್ಲಿ ಬಡಿಗೆಯ ರಾಜ್ಯ.

ನೂರಾರು ಜನರಿಗೆ ಗಾಯ

(ತಂತಿಯ ವಾರ್ತೆ)

ಸೊಲ್ಲಾಪುರದ ಮುಂದಾಳುಗಳಾದ ಶ್ರೀ ಧನಶೆಟ್ಟಿ, ಸಾರ್ಡಾ, ಸಿಂಧೆ ಹಾಗು ಕುರ್ಬಾನ ಹುಶೇನ ಈ ನಾಲ್ವರನ್ನು ಗಲ್ಲಿಗೇರಿಸಿದ ಸುದ್ದಿಯು ತಾ| ೧೨ ನೆಯ ದಿವಸ ಮಧ್ಯಾಹ್ನಕ್ಕೆ ಇಲ್ಲಿ ಗೊತ್ತಾಯಿತು. ಈ ದುಃಖದಾಯಕವಾದ ಸುದ್ದಿಯು ತಿಳಿದ ಕೂಡಲೆ ಅಂಗಡಿಕಾರರೆಲ್ಲರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿ ಹರತಾಳ ಪಾಲಿಸಿದರು. ನಿಷೇಧವನ್ನು ವ್ಯಕ್ತಪಡಿಸುವದಕ್ಕಾಗಿ ನಾಗರಿಕರು ಬಕ್ಕನೆತ್ತಿಯ ಪ್ರಚಂಡ ಮೆರವಣಿಗೆಯನ್ನು ಹೊರಡಿಸಿದರು. ಸುಮಾರು ೩೦೦೦ ಜನರು ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡಿದ್ದರು. ಆಕ್ಟಿಂಗ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಶ್ರೀ ಹಿರೇಮಠ ಸಾಹೇಬರು ೧೪೪ ನೆಯ ಕಲಮಿನನ್ವಯ ಹೊರಡಿಸಿದ ಕಟ್ಟಪ್ಪಣೆಯು ೪-೩೦ ಗಂಟೆಗೆ ಪಟ್ಟಣದಲ್ಲಿ ಸಾರಲ್ಪಟ್ಟಿತು. ೭ ದಿನಗಳ ವರೆಗೆ ಮೆರವಣಿಗೆಗಳನ್ನು ಜರುಗಿಸಕೂಡದೆಂಬದಾಗಿ ಆ ಕಟ್ಟಪ್ಪಣೆಯಲ್ಲಿ ಬರೆಯುವದರಲ್ಲಿ ಬಂದಿತ್ತು. ಮ್ಯಾಜಿಸ್ಟ್ರೇಟರು ಹೊರಡಿಸಿದ ಕಟ್ಟಪ್ಪಣೆಯನ್ನು ಮೀರಿ ಸುಮಾರು ೩೦೦೦ ಜನರು ಮೆರವಣಿಗೆಗಳಿಂದ ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿದರು. ಮೆರವಣಿಗೆಯು ಖಡೆ ಬಜಾರದ ಪೋಲೀಸ ಚೌಕಿಯ ಹತ್ತಿರ ಹೋದ ಕೂಡಲೆ ಅಲ್ಲಿ ಪೋಲೀಸರು ಅದಕ್ಕೆ ಅಡ್ಡಿ ಮಾಡಿದರು. ಜನರು ಚದುರಲು ನಿರಾಕರಿಸಿ ಶಾಂತವೃತ್ತಿಯಿಂದ ಅಲ್ಲಿಯೇ ಕುಳಿತುಕೊಂಡರು. ಜನರು ಚದುರಿ ಹೋಗದೆ ಕುಳಿತುಕೊಂಡಿದ್ದನ್ನು ಕಂಡು ಪೋಲೀಸರು ಅವರ ಮೇಲೆ ಏರಿ ಹೋಗಿ ಅವರನ್ನು ಲಾಠಿಗಳಿಂದ ಥಳಿಸಿದರು. ಒಟ್ಟಿಗೆ ೧೩೫ ಜನರಿಗೆ ಗಾಯಗಳಾಗಿದ್ದು, ಅವರಲ್ಲಿ ಇಬ್ಬರು ಸ್ತ್ರೀಯರಿರುತ್ತಾರೆ. ೧೨ ಜನರು ಕಠಿಣ ಸ್ಥಿತಿಯಲ್ಲಿದ್ದಾರೆ. ೧೨ ವರ್ಷದೊಳಗಿನ ಸಣ್ಣ ಸಣ್ಣ ಬಾಲಕರಿಗೂ ಮತ್ತ ಸ್ವಾಸ್ತಿಕ ಸಂಘದ ಸ್ವಯಂಸೇವಕರಿಗೂ ಪೆಟ್ಟುಗಳು ಬಿದ್ದವೆ. ಸ್ವಾಸ್ತಿಕ ಸಂಘದ ಡಾಕ್ಟರರು ಹಾಗು ಸ್ವಯಂ ಸೇವಕರು ಗಾಯಹೊಂದಿದವರಿಗೆ ಉಪಚಾರ ಮಾಡಿದರು. ಗಾಯಹೊಂದಿದವರಲ್ಲಿ ಶ್ರೀ ಜೀವನರಾವ ಯಾಳಗಿ, ಕಲಘಟಗಿ, ನಕಡಿ, ಗಿಂಡೆ ಹಾಗು ರಾವುತ ಇವರೇ ಮೊದಲಾದವರು ಪ್ರಮುಖರಾಗಿರುವರು.

ಸಂಜೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಸಾವಿರಾರು ಜನರು ಸಭೆಗೆ ಬಂದಿದ್ದರು. ಗಲ್ಲಿಗೇರಿಸಲ್ಪಟ್ಟ ಶ್ರೀ ಧನಶೆಟ್ಟಿ, ಸಾರ್ಡಾ, ಸಿಂಧೆ ಮತ್ತು ಕುರ್ಬಾನ ಹುಶೇನ ಇವರ ಆತ್ಮಗಳಿಗೆ ಶಾಂತಿಯು ಸಿಗಲೆಂಬುದಾಗಿ ಸಭೆಯಲ್ಲಿ ಸಾರ್ವಜನಿಕವಾಗಿ ಪ್ರಾರ್ಥನೆಯು ಜರುಗಿ, ಲಾಠಿ ರಾಜ್ಯದ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸುವದರಲ್ಲಿ ಬಂತು.

ಇವತ್ತಾದರೂ ಹರತಾಳವನ್ನು ಆಚರಿಸುವದರಲ್ಲಿ ಬಂದಿದೆ.

ತಿಳಕವಾಡಿಯಲ್ಲಿಯೂ ಮೆರವಣಿಗೆಯನ್ನು ಹೊರಡಿಸುವದರಲ್ಲಿ ಬಂದಿತ್ತು. ಪೋಲೀಸರು ಅಲ್ಲಿಯೂ ಮೆರವಣಿಗೆಗೆ ಅಡ್ಡಿ ಮಾಡಿ ಒಂದು ತಾಸಿನ ವರೆಗೆ ಅವರಿಗೆ ಮುಂದಕ್ಕೆ ಹೋಗಗೊಡಲಿಲ್ಲ. ನಂತರದಲ್ಲಿ ಜನರು ಗಾಂಧಿ ಮೈದಾನದಲ್ಲಿ ಪ್ರಾರ್ಥನೆ ಮಾಡಿ, ಶಾಂತವೃತ್ತಿಯಿಂದ ತಿರುಗಿ ಹೊರಟು ಹೋದರು.

ಈ ೧೪೪ ನೆಯ ಕಲಮನ್ನು ಇಡೀ ಜಿಲ್ಲೆಯಲ್ಲೆಲ್ಲ ಬಳಕೆಯಲ್ಲಿ ತಂದಿರುವರಾಗಿ ತಿಳಿಯುತ್ತದೆ. ಆ್ಯಕ್ಟಿಂಗ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾಗಿರುವ ಶ್ರೀ ಹಿರೇಮಠ ಸಾಹೇಬರು ಜಿಲ್ಲೆಯಲ್ಲೆಲ್ಲ ದಬ್ಬಾಳಿಕೆಯನ್ನು ಜೋರಾಗಿ ಪ್ರಾರಂಭಿಸುವವರಿದ್ದಾರಾಗಿ ಕಂಡು ಬರುತ್ತದೆ,

---

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

ಪುಣೆಯ ಕ್ರೈಸ್ತ ಸೇವಾ ಸಂಘದ ಫಾದರ ಎಲ್ವಿನ್‌ರವರು ೧೫ ದಿನಗಳ ವರೆಗೆ ಗುಜರಾಥ ಪ್ರಾಂತದಲ್ಲಿ ಸಂಚರಿಸಿ, ಅಲ್ಲಿಯ ಸ್ಥಿತಿಗತಿಗಳನ್ನು ಕುರಿತು "ಕ್ರಾನಿಕಲ್" ಪತ್ರಿಕೆಯಲ್ಲಿ ಒಂದು ಲೇಖವನ್ನು ಬರೆದಿದ್ದು, ಅದರ ಸಾರವನ್ನು ಕೆಳಗೆ ಕೊಟ್ಟಿದೆ.

ನಾನು ಸ್ವಲ್ಪ ದಿನಗಳ ಹಿಂದೆ ಗುಜರಾಥ ಪ್ರಾಂತದಲ್ಲಿಯ ಆನಂದ, ನಡಿಯಾದ, ಬಾರ್ಡೋಲಿ, ಬೋರಸಾದ ಮೊದಲಾದ ತಾಲೂಕುಗಳಲ್ಲಿಯ ಒಟ್ಟಿಗೆ ೬೦ ಹಳ್ಳಿಗಳಲ್ಲಿ ೧೫ ದಿನಗಳ ವರೆಗೆ ಸಂಚರಿಸಿ ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಿಟ್ಟು ನೋಡಿದೆನು. ಮುಂಬಯಿ ಸರಕಾರದ ಒಬ್ಬ ಮಾಜಿ ಮಂತ್ರಿಗಳು ಹಾಗು ಎಷ್ಟೋ ಜನ ಗೆಳೆಯರಾದರೂ ನನ್ನೊಂದಿಗೆ ಆ ಹಳ್ಳಿಗಳಿಗೆ ಬಂದಿದ್ದರು. ಶ್ರೀ ಅಮೃತಲಾಲ ಠಕ್ಕರರವರು ಬೇರೆ ಬೇರೆ ಹಳ್ಳಿಗಳಿಗೆ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಲ್ಲಿಯ ಸ್ಥಿತಿಗತಿಗಳನ್ನು ವಿಚಾರಿಸಲು ನಮಗೆ ಹೇಳಿಕೊಂಡರು. ನಾವು ಆ ಆ ಹಳ್ಳಿಗಳಲ್ಲಿ ರೈತರಿಗೆ ಭೆಟ್ಟಿಯಾಗಿ, ಅವರಿಗೆ ಪ್ರಶ್ನೆ ಮಾಡಿ ಅವರ ಸಂಕಷ್ಟಗಳನ್ನು ಚನ್ನಾಗಿ ತಿಳಿದುಕೊಂಡೆವು, ರೈತರಾದರೂ ತಮ್ಮತಮ್ಮ ಕಷ್ಟನಷ್ಟಗಳನ್ನು ಪ್ರಾಮಾಣಿಕತನ ಹಾಗು ಸಲೀಸತನದಿಂದ ನಮ್ಮ ಮುಂದೆ ಚನ್ನಾಗಿ ಮಂಡಿಸಿದರು.

ಸಲೂನದಲ್ಲಿ ನನಗೊಬ್ಬ ತರುಣ ಮನುಷ್ಯನು ಭೆಟ್ಟಿಯಾದನು. ಅವನ ಸ್ಥಿತಿಯು ಆಗ ಭಯಂಕರವಾಗಿತ್ತು. ಅವನು ಬಹಳೇ ಅಶಕ್ತನಾಗಿದ್ದನು. ಅವನು ಆಗಾಗ್ಗೆ ಕೆಮ್ಮುತ್ತಿದ್ದನು ಮತ್ತು ಕಾರಿಕೊಳ್ಳುತ್ತಿದ್ದನು. ಅವನು ಸರಕಾರಕ್ಕೆ ಹಪ್ತೆ ಕೊಡಲು ನಿರಾಕರಿಸಿದ್ದನ್ನು ತಾ|೨೬ ನೇ ನವ್ಹಂಬರ ದಿವಸ ಪೋಲೀಸ ಅಧಿಕಾರಿಗಳು ಅವನ ಹೊಲಕ್ಕೆ ಹೋಗಿ ಹಪ್ತೆ ಕೊಡಲು ಅವನಿಗೆ ಕೇಳಿಕೊಂಡರು. ಅವನು ಕೊಡುವದಿಲ್ಲವಾಗಿ ಹೇಳಿದನು. ಪೋಲೀಸರು ಅವನನ್ನು ಒಳಿತಾಗಿ ಥಳಿಸಿ ಅವನನ್ನು ಪೋಲೀಸ ಚೌಕಿಗೆ ಕರಕೊಂಡು ಹೋದರು. ಅಂದು ರಾತ್ರಿ ಅವನು ಭಯಂಕರ ಗಾಬರಿ ಮಾಡಿದ್ದರಿಂದ ಸರರಾತ್ರಿಯಲ್ಲಿ ಅವನನ್ನು ಬಿಟ್ಟುಬಿಟ್ಟರು.

ಥವಸಾದಲ್ಲಿ ಅನೇಕ ಜನ ರೈತರು ತಮ್ಮ ಹೊಲಗಳ [illegible] ಉದ್ವೇಗದಿಂದ ಹೊಲಗಳಲ್ಲಿ ಮಲಗಿಕೊಂಡಿದ್ದರು. ತಾ| ೨೫ನೇಯ ದಿವಸ ರಾತ್ರಿ ಕೆಲವು ಜನ ಪೋಲೀಸರು ಆ ಹೊಲಗಳಲ್ಲಿ ಹೊಕ್ಕು ಅವರನ್ನು ಒಳಿತಾಗಿ ಥಳಿಸಿದರು. ಒಬ್ಬ ಮನುಷ್ಯನು ಬಂದೂಕಿನ ಮೊನೆಯಿಂದ ೧೫—೨೦ ಸಲ ಹೊಡೆಯಲ್ಪಟ್ಟನು ಅವನ ಎಲುಬುಗಳು ಜಜ್ಜಿ ಹೋಗಿದ್ದು ಗಾಯವು ಇನ್ನೂ ಮಾದಿಲ್ಲ. ಒಬ್ಬ ಅಶಕ್ತ ಮನುಷ್ಯನನ್ನು ಕುತ್ತಿಗೆಹಿಡಿದು ಕೆಳಗೆ ನೂಕಿ ಅವನ ಮೋರೆಯ ಮೇಲೆ ಒಳಿತಾಗಿ ಪೆಟ್ಟುಕೊಟ್ಟರು. ಇದೇ ಹಳ್ಳಿಯಲ್ಲಿ ಇಬ್ಬರು ವಿಧವೆಯರೊಡನೆ ನಾನು ಮಾತುಕತೆಯಾಡಿದೆನು. ಅವರು ಹೀಗೆ ಹೇಳಿದರು

ತಾ|೧೬ ನೆಯ ದಿವಸ ಸಂಜೆಯಲ್ಲಿ ಇಬ್ಬರು ಪೋಲೀಸರು ಮನೆಗೆ ಬಂದು ಬಾಗಿಲುಗಳನ್ನು ನೂಕಿದರು. ಬಾಗಿಲ ತೆರೆದೆವು ಅವರು ಒಮ್ಮಿಲೆ ಒಳಹೊಕ್ಕರು. ಆಗ ಮನೆಯಲ್ಲಿ ಗಂಡಸರು ಯಾರೂ ಇದ್ದಿದ್ದಿಲ್ಲ ಪೋಲೀಸರು ನಮ್ಮನ್ನು ಕುತ್ತಿಗೆ ಹಿಡಿದು ನೆಲದ ಮೇಲೆ ಕೆಡವಿ ಒಳಿತಾಗಿ ಥಳಿಸಿದರು. ಸಬ್ ಇನಸ್ಪೆಕ್ಟರರು ಹೊರಗೆ ನಿಂತಿದ್ದರು. ನಾವು ಈ ಬಗ್ಗೆ ಅವರ ಕಡೆಗೆ ದೂರು ಹೇಳಿದೆವು ನಾವು ವಿಧವೆಯರಿರುವೆವೆಂಬುದು ಗೊತ್ತಿದ್ದರೂ ಸಹ, ಅವರು ಅಗದಿ ನೀಚತನದಿಂದ "ಗಂಡಂದಿರಲ್ಲಿ ಹೋಗಿ ನಿಮ್ಮ ದುಃಖ ತೋರಿಕೊಳ್ಳಿರಿ" ಎಂಬುದಾಗಿ ಉತ್ತರ ಕೊಟ್ಟರು,

ಪೋಲೀಸರಿಂದ ಹೀಗೆ ಅನ್ಯಾಯವಾಗಿ ಹೊಡೆತ ತಿಂದು ಅಪಮಾನಕ್ಕೊಳಗಾದ ಜನರನ್ನು ನೋಡಿದ ಕೂಡಲೆ, ತನ್ನ ಅನುಯಾಯಿಗಳಿಗಾಗಿ ಕಷ್ಟ ಸಹಿಸಿದ ಕ್ರೈಸ್ತನ ಮೂರ್ತಿಯೇ ಪ್ರತ್ಯಕ್ಷವಾಗಿ ನನ್ನ ಮುಂದೆ ಬಂದು ನಿಂತುಕೊಂಡಂತಾಗುತ್ತಿತ್ತು, ನಿರಾಶ್ರಿತರಾದ ಈ ವಿಧವೆಯರೊಡನೆ ಮಾತಾಡುತ್ತ ನಿಂತಾಗಂತೂ, ಅವರು ನನ್ನ ತಾಯಿಯಂತೆಯೇ ಇರುವರಾಗಿ ನನಗೆ ಎನಿಸಿತು. ನನ್ನ ತಾಯಿ ಹಾಗು ಭಗಿನಿಯರು ಪೋಲೀಸರಿಂದ ಅಪಮಾನ ಹೊಂದಿದ್ದರೆ ಎಷ್ಟು ದುಃಖವಾಗುತ್ತಿತ್ತೊ ಅಷ್ಟೇ ದುಃಖವು ಅವರ ಕಷ್ಟದ ಪರಿಯನ್ನು ಕೇಳುವ ಸಮಯದಲ್ಲಿಯೂ ನನಗೆ ಒತ್ತರಿಸಿ ಬಂತು. (ಮುಂದೆ ಸಾಗುವದು.)

ಹೊಸರಿತ್ತಿಯಲ್ಲಿ ಶ್ರೀ ಹಳ್ಳಿಕೇರಿಯವರಿಗೆ ಕೈದು.

ಧಾರವಾಡ ಜಿಲ್ಲೆಯ ಹೊಸರಿತ್ತಿಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರನ್ನು ತಾ| ೯ ನೆಯ ದಿವಸ ಸೆರೆಹಿಡಿದು, ಮರುದಿವಸ ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ. ಸತ್ಯಾಗ್ರಹದ ಮೂಲಕವಾಗಿ ಇವರು ಈಗೊಮ್ಮೆ ಸ್ವರಾಜ್ಯಾಶ್ರಮವನ್ನು ಕಂಡು ಬಂದಿದ್ದಾರೆ.

ಹಜಾಮನಿಗೆ ಪ್ರೊಫೆಸರ ಪದವಿ.

ಅಮೇರಿಕೆಯಲ್ಲಿ ಪ್ರತಿವರ್ಷವೂ ನಾವಲಿಗರ ಪರಿಷತ್ತು ಸೇರಿ, ಒಳ್ಳೇ ಕಸ್ಬ ಮಾಡುವವನಿಗೆ ಅಲ್ಲಿ ಇನಾಮು ಕೊಡಲ್ಪಡುವದು. ಜರ್ಮನಿಯ ಒಬ್ಬ ನಾವಲಿಗನು ಮೂರು ವರ್ಷ ಒಂದೇ ಸವನೆ ಮೊದಲನೆ ನಂಬರನ್ನು ಪಡೆದಿದ್ದರಿಂದ, ಅವನಿಗೆ ಪ್ರೊಫೆಸರ ಎಂಬ ಪದವಿಯು ದೊರೆತಿದೆ.

ಇಹವೃತ್ತ

ಶ್ರೀ ಧನಶೆಟ್ಟಿ, ಸಾರ್ಡಾ, ಶಿಂದೆ ಹಾಗು ಕುರ್ಬಾನ ಹುಸೇನರನ್ನು ಗಲ್ಲಿಗೇರಿಸಿದ ಬಗ್ಗೆ ನಿಷೇಧ ಹಾಗು ಉದ್ವೇಗವನ್ನು ವ್ಯಕ್ತಪಡಿಸುವ ಸಲುವಾಗಿ ತಾ|| ೧೩ ನೆಯ ದಿವಸ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಅಡಿತ, ಜವಳಿ, ಕಿರಾಣಿ ಹಾಗು ಸ್ಟೇಶನರಿ ಅಂಗಡಿಕಾರರೆಲ್ಲರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಸಂಜೆಯ ೪ ಗಂಟೆಗೆ ಒಕ್ಕ ನೆತ್ತಿಯ ಮೆರವಣಿಗೆಯು ಹೊರಟು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲ ಸಂಚರಿಸಿತು. ನೂರಾರು ಜನ ನಾಗರಿಕರು ಮೆರವಣಿಗೆಯಲ್ಲಿ ಭಾಗ ತೆಗೆದುಕೊಂಡಿದ್ದರು. ಸಂಜೆಯಲ್ಲಿ ೭ ಗಂಟೆಗೆ ಮಾರ್ಕೆಟ ಬೈಲಿನಲ್ಲಿ ಸಾರ್ವಜನಿಕ ಸಭೆ ಸೇರಿ ನಿಷೇಧವನ್ನು ವ್ಯಕ್ತಪಡಿಸಲಾಯಿತು.

ಇಲ್ಲಿಯ ಧರ್ಮಶಾಲೆಯಲ್ಲಿ ಪ್ರತಿನಿತ್ಯದಲ್ಲಿಯೂ ಸೇವಾದಲದ ಕವಾಯಿತನ್ನು ತೆರೆದುಕೊಂಡು ಕಲಿತು ಅಧಿಕಾರಿಗಳ ದಬ್ಬಾಳಿಕೆಗೆ ಯೋಗ್ಯವಾದ ಉತ್ತರವನ್ನು ಕೊಟ್ಟ ಸೇವಾದಲದ ಕರ್ಣಧಾರ ಶ್ರೀ ಮಲ್ಲಪ್ಪನವರ, ನಿನ್ನೆ ದಿವಸ ಮುಂಜಾನೆಯಲ್ಲಿ ಪ್ಲೇಗು ಬೇನೆಯಿಂದ ಮರಣ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ನೂರಾರು ಜನ ನಾಗರೀಕರು ಅವರ ಪ್ರೇತಯಾತ್ರೆಯ ಮೆರವಣಿಗೆಯಲ್ಲಿ ಭಾಗ ವಹಿಸಿದರು.

ಶ್ರೀ ನರಿಮನ್ನರು ನಿರ್ದೋಷಿಗಳಾದರು.

ಶ್ರೀ ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಶಿಕ್ಷೆಗೆ ಗುರಿಯಾದ ಮುಂಬಯಿಯ ಪ್ರಸಿದ್ಧ ಮುಂದಾಳುಗಳಾದ ಶ್ರೀ ಕೆ. ಎಫ್. ನರಿಮನ್ನರ ಖಟ್ಲೆಯ ಕಾಗದ ಪತ್ರಗಳನ್ನು ಹಾಯಕೋರ್ಟಿನವರು ತಾ| ೧೨ ನೆಯ ದಿವಸ ಪುನರ್ವಿಚಾರಣೆ ಮಾಡಿ, ಅವರು ನಿರ್ದೋಷಿಗಳಿದ್ದಾರೆಂದು ನಿರ್ಣಯಿಸಿದರು.

ಬನಾರಸದಲ್ಲಿ

ಮನೆಗಳಿಗೆ ಮುತ್ತಿಗೆ

ಬನಾರಸದಲ್ಲಿ ಟಪಾಲು ಮೋಟಾರಿಗೆ ಅಡ್ಡಿಮಾಡಿ ಹಣವನ್ನು ಅಪಹರಿಸಿಕೊಂಡು ಹೋಗಲು ಪ್ರಯತ್ನಿಸಿದ ಆರೋಪಿಗಳನ್ನು ಕಂಡು ಹಿಡಿಯುವ ಉದ್ದೇಶದಿಂದ ಅಲ್ಲಿಯ ಪೋಲೀಸ ಅಧಿಕಾರಿಗಳು ಏಳು ಮನೆಗಳಿಗೆ ಮುತ್ತಿಗೆ ಹಾಕಿ, ಅವುಗಳನ್ನು ಝಡತಿ ಮಾಡಿದರು. ಇಬ್ಬರು ತರುಣರು ಕೈದು ಮಾಡಲ್ಪಟ್ಟಿದ್ದಾರೆ.

ಬಡೋದಾದಲ್ಲಿ ಡೊಣ್ಣೆಯ ರಾಜ್ಯ

ನೂರಾರು ಜನರಿಗೆ ಗಾಯ

ಬಡೋದಾ ಸಂಸ್ಥಾನದ ಪ್ರಜಾಮಂಡಳದ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರಿಗೆ ಶಿಕ್ಷೆಯಾದ ಬಗ್ಗೆ ಅವರನ್ನು ಅಭಿನಂದಿಸುವದಕ್ಕಾಗಿ ಬಡೋದೆಯಲ್ಲಿ ತಾ| ೯ ನೆಯ ದಿವಸ ಯುವಕ ಸಂಘದವರು ಮೆರವಣಿಗೆ ಹೊರಡಿಸಿದ್ದರು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿಮಾಡಿ, ಜನರನ್ನು ಲಾಠಿಗಳಿಂದ ಥಳಿಸಿ, ಮುಂದಾಳುಗಳನ್ನು ಸೆರೆ ಹಿಡಿದುಕೊಂಡು ಹೋದರು. ಲಾಠಿ ಪ್ರಹಾರದ ಮೂಲಕವಾಗಿ ನೂರಾರು ಜನರಿಗೆ ಗಾಯಗಳಾಗಿವೆ.

ಕಮಿಶನರರಿಗೆ

ಕರೇ ನಿಶಾನೆಯ ಮೆರವಣಿಗೆ

ಮದ್ರಾಸಿನ ತಾ| ೯ ನೆಯ ದಿವಸ ಜ. ಕೋಬಾಬಾದದಲ್ಲಿ ಕಮಿಶನರ ಸಾಹೇಬರು ದರಬಾರವನ್ನು ನಡಿಸಿದ್ದರು. ಸುತ್ತುಮುತ್ತಲಿನ ಜಿಲ್ಲೆಗಳಲ್ಲಿಯ ಸರದಾರರು, ನವಾಬರು ಮತ್ತು ಉಚ್ಚ ಅಧಿಕಾರಿಗಳು ದರಬಾರಕ್ಕೆ ಬಂದಿದ್ದರು. ಕಾಂಗ್ರೆಸ್ ಸ್ವಯಂಸೇವಕರಾದರೂ ಆ ಸಮಯದಲ್ಲಿ ಕರೇ ನಿಶಾನೆಯ ಮೆರವಣಿಗೆ ಹೊರಡಿಸಿ, ದರಬಾರಕ್ಕೆ ಸಾಗಿ ಹೋಗಿ "ಕಮಿಶನರರೇ ತಿರುಗಿ ಹೋಗಿರಿ" ಎಂಬುದಾಗಿ ಗಟ್ಟಿಯಾಗಿ ಕೂಗಿ, ಕರೇ ನಿಶಾನೆಗಳಿಂದ ಕಮಿಶನರರಿಗೆ ಸ್ವಾಗತ ಮಾಡಿದರು. ಒಬ್ಬ ಸ್ವಯಂಸೇವಕನು ದರಬಾರದಲ್ಲಿಯೇ ಕಾಯಿದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪನ್ನು ಮಾರಿದನು. ಪೋಲೀಸರು ಅವನನ್ನೂ ಹಾಗು ಇಬ್ಬರು ಸ್ವಯಂಸೇವಕರನ್ನೂ ಸೆರೆ ಹಿಡಿದುಕೊಂಡು ಹೋದರು.

ಮುಚ್ಚೀಸರ ಕಟ್ಟಿ

ಸ್ವಯಂಸೇವಕನನ್ನು ಮೆರೆಸಿದರು

ದಿಲ್ಲಿಯಲ್ಲಿ ಸಿಂದಿ ಅಂಗಡಿಯ ಮುಂದೆ ಪಿಕೆಟಿಂಗ ಜೋರಿನಿಂದ ನಡೆದಿದೆ. ತಾ| ೯ ನೆಯ ದಿವಸ ಒಬ್ಬ ಸ್ವಯಂಸೇವಕನು ಲಂಚ ತಗೆದುಕೊಂಡು ಒಬ್ಬನಿಗೆ ಸಿಂದಿಯನ್ನು ಒಯ್ಯಗೊಟ್ಟನು; ಇದು ಅಲ್ಲಿಯ ಕಾಂಗ್ರೆಸ್ ಅಧಿಕಾರಿಗಳಿಗೆ ತಿಳಿಯಿತು. ಅವರು ಅವನ ಮುಖಕ್ಕೆ ಮಸಿ ಹಚ್ಚಿ, ಅವನ ಕೊರಳೊಳಗೆ ಮುಚ್ಚೀಸರ ಹಾಕಿ, ಅವನನ್ನು ಊರ ತುಂಬೆಲ್ಲ ಮೆರೆಸಿದರು. ಪೋಲೀಸರು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿ ಮಾಡಿ, ಅವನನ್ನು ಬಿಡಿಸಿಕೊಂಡು ಹೋದರು. ಈ ಮೂಲಕವಾಗಿ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಹಾಗು ೫ ಜನ ಸ್ವಯಂಸೇವಕರು ಬಂಧನಕ್ಕೊಳಗಾಗಿದ್ದಾರೆ.

ಸೊಲ್ಲಾಪುರದಲ್ಲಿ

ಮೆರವಣಿಗೆಗೆ ಪ್ರತಿಬಂಧ

ತಾ| ೧೨ ರಿಂದ ೨೬ ರ ವರೆಗೆ ಸೊಲ್ಲಾಪುರ ಪಟ್ಟಣದಲ್ಲಿ ಮೆರವಣಿಗೆಗಳನ್ನು ಹೊರಡಿಸಕೂಡದಾಗಿ ಅಲ್ಲಿಯ ಡಿ. ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನನ್ವಯ ಅಪ್ಪಣೆಯನ್ನು ಹೊರಡಿಸಿದ್ದಾರೆ.

ಕಾಂಗ್ರೆಸ್‌ದವರು ಗೋಕಾವಿಯ ಗಿರಣಿ ಬಹಿಷ್ಕಾರ ಹಾಕಿದ್ದನ್ನು ತೆಗೆದಿರುವದು ಹಬ್ಬಿದ ಸುದ್ದಿಯು ನಿರಾಧಾರವಾದದ್ದು. ಬಹಿಷ್ಕಾರವು ಮುಂಚಿನಂತೆ ಇದೆ. ಕಾರಣ ಅದರ ಸಾಲನ್ನು ಕೊಳ್ಳಬಾರದೆಂದು ಕಾಂಗ್ರೆಸ್ ಅಧಿಕಾರಿಗಳು ಪ್ರಸಿದ್ಧಮಾಡಿದ್ದಾರೆ.

ಥಂಡಿಯಿಂದ

೧೦೦ ಜನರು ಸತ್ತರು

ಚೀನ ದೇಶದಲ್ಲಿ ಇತ್ತಿತ್ತಲಾಗಿ ಬಹಳ ಥಂಡಿಯು ಬೀಳಹತ್ತಿದ್ದರಿಂದ ನದಿಗಳು ಹಾಗು ಕಾಲುವೆಗಳೆಲ್ಲವೂ ಹೆಪ್ಪುಗಟ್ಟಿವೆ. ಈ ಮೂಲಕವಾಗಿ ಈ ತಿಂಗಳದಲ್ಲಿ ನೂರಾರು ನಿರಾಶ್ರಿತ ಜನರು ಮರಣಹೊಂದಿದ್ದಾರೆ. ಇನ್ನೂ ಅನೇಕ ಕಡೆಗಳಲ್ಲಿ ಎಷ್ಟೋ ಜನರು ಮರಣ ಹೊಂದಿರುವಂತಾಗಿ ತಿಳಿಯುತ್ತದೆ.

ಮುಂಬಯಿಯಲ್ಲಿ

ಯುದ್ಧ ಮಂಡಳದವರಿಗೆ ಶಿಕ್ಷೆ

ಜನಗಣತಿಯ ಬಹಿಷ್ಕಾರ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಬಂಧವಾಗಿ ಮುಂಬಯಿಯ ೨೦ ನೆಯ ಯುದ್ಧ ಮಂಡಳದ ಅಧಿಕಾರಿಗಳಾದ ಶ್ರೀ ಜಿ. ಸಿ. ಮೈತ್ರ, ಕಾಂತಿಲಾಲ ಪರೇಖ, ಶ್ರೀ ಬೇಗಾವಾಲಾ ಹಾಗು ಮೋಹನಲಾಲ ರಕ್ಷಾ ಇವರಿಗೆ ೫|| ತಿಂಗಳಿಂದ ೭|| ತಿಂಗಳದ ವರೆಗೆ ಬೇರೆ ಬೇರೆ ಅವಧಿಯ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

ಕಾಲಿಯಾನಪುರದಲ್ಲಿ

ಗೋಳೀಬಾರು.

ಅಲಹಾಬಾದ ಜಿಲ್ಲೆಯ ಕಾಲಿಯಾನಪುರದಲ್ಲಿ ಕಾಂಗ್ರೆಸ್ ಸಭೆಯು ಕೂಡಿದಾಗ ಪೋಲೀಸ ಅಧಿಕಾರಿಗಳು ಇಬ್ಬರನ್ನು ಸೆರೆಹಿಡಿದರು. ಜನರು ಅವರನ್ನು ಪೋಲೀಸರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದರು. ಆಗ ಪೋಲೀಸ ಹಾಗು ಜನರಲ್ಲಿ ಕದನವಾಯಿತು. ಪೋಲೀಸರು ಗೋಳೀಬಾರ ಮಾಡಿದರು. ಇಬ್ಬರಿಗೆ ಭಯಂಕರ ಗಾಯಗಳು ಸಂಭವಿಸಿವೆ.

ಕರನಿರಾಕರಣೆಯ ಚಳವಳಿಯಲ್ಲಿ ಭಾಗವಹಿಸಿ ತಮ್ಮ ತಮ್ಮ ಹಳ್ಳಿಗಳನ್ನು ಬಿಟ್ಟು ಹೋದ ರೈತ ಮಕ್ಕಳಿಗೋಸ್ಕರವಾಗಿ, ಕಾಯರಾ ಜಿಲ್ಲೆಯಲ್ಲಿ ಬೋಚಸನ ಎಂಬ ಹಳ್ಳಿಯಲ್ಲಿ ಮೊನ್ನೆ ಮೊನ್ನೆ ಒಂದು ಔದ್ಯೋಗಿಕ ಶಾಲೆಯನ್ನು ಸ್ಥಾಪಿಸಿದವರಲ್ಲಿ ಒಂದಿದ್ದು, ಕಾಯರಾ ಜಿಲ್ಲೆಯ ಸರ್ವಾಧಿಕಾರಿಗಳಾದ ಶ್ರೀಮತಿ ಭಕ್ತಿಲಕ್ಷ್ಮೀ ದೇಸಾಯಿಯವರು ಅದನ್ನು ತೆರೆಯುವ ಸಮಾರಂಭವನ್ನು ಸಾಂಗಗೊಳಿಸಿದರು.

ಕರಾಚಿಯಲ್ಲಿ
ಸ್ತ್ರೀ ಸರ್ವಾಧಿಕಾರಿಯನ್ನು ಹಿಡಿದರು

ಕರಾಚಿಯ ಸತ್ಯಾಗ್ರಹ ಯುದ್ಧ ಮಂಡಳದ ಸರ್ವಾಧಿಕಾರಿಗಳಾದ ಶ್ರೀಮತಿ ಶಿಕೀಬೇನರು ಆಕ್ಷೇಪಾರ್ಹವಾದ ಭಾಷಣ ಮಾಡಿದ ಸಂಬಂಧವಾಗಿ ತಾ|| ೯ ನೆಯ ದಿವಸ ಸೆರೆಹಿಡಿಯಲ್ಪಟ್ಟಿದ್ದಾರೆ.

ಕರಾಚಿಯ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಗಿಧ್ವಾನಿಯವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಮೊನ್ನೆ ಮೊನ್ನೆ ಬಿಡುಗಡೆ ಹೊಂದಿದ್ದಾರೆ

ಮುಂಬಯಿಯಲ್ಲಿ
೧೬ ಜನರಿಗೆ ಶಿಕ್ಷೆ

ಪರದೇಶಿ ಬಟ್ಟೆಯ ಗಂಟುಗಳನ್ನು ತೆಗೆದುಕೊಂಡು ಹೋಗುತ್ತಿರುವ ಮೋಟಾರ ಲಾರಿಯನ್ನು ಹಾದಿಯಲ್ಲಿ ತಡೆದ ಬಗ್ಗೆ ಮುಂಬಯಿಯಲ್ಲಿ ೧೬ ಜನ ಸ್ವಯಂ ಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಾರಾಗೃಹವಾಸ ಹಾಗು ೫೦ ರು. ದಂಡ, ಇಲ್ಲವೆ ೧|| ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ.

ಹಿಂದುಸ್ಥಾನಕ್ಕೆ
ಹೊಸಸೈನ್ಯ ಬಂತು

"ಡರಸೇಟ್" ಶಾಯರ್ ಹಡಗದಲ್ಲಿ ಬಂದ ಐದನೇ ಫೀಲ್ಡಬ್ರಿಗೇಡದ ೧೩೪ ಅಫೀಸರರೂ ೧೨೪೬ ಸೈನಿಕರೂ ೯ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಇಳಿದರು. ಈ ಸೈನ್ಯದಲ್ಲಿ ಕೆಲವು ಭಾಗವು ಝಾಂಸಿಗೂ, ಕೆಲವು ಭಾಗವು ಅಲಹಾಬಾದಕ್ಕೂ ಹೋಯಿತೆಂದು ತಿಳಿಯುತ್ತದೆ,

ಶ್ರೀ ಎಹಸಿನಲಾಹಿಯವರಿಗೆ
೨೦೦೦೦ ರುಪಾಯಿ ಹೊಣೆ

ಲಾಹೋರದಲ್ಲಿ ಗವ್ಹರ್ನರರ ಮೇಲೆ ಗುಂಡುಹಾರಿಸಿದ್ದರ ಸಂಬಂಧವಾಗಿ ಬಂಧನಕ್ಕೊಳಗಾದ ಶ್ರೀ ಎಹಸಿನಲಾಹಿಯವರನ್ನು ೨೦೦೦೦ ರುಪಾಯಿ ಹೊಣೆ ತೆಗೆದುಕೊಂಡು ಬಿಡುಗಡೆ ಮಾಡಿದ್ದಾರೆ.

ಝಂಡಾ ಹಾರಿಸಿದ್ದಕ್ಕೆ
೧೦ ರುಪಾಯಿ ದಂಡ

ಝಾಂಗಟಿಯನ್ನು ಬಾರಿಸಿ ಜನಗಣತಿಗೆ ಬಹಿಷ್ಕಾರ ಹಾಕಲು ಜನರಿಗೆ ಬೋಧಿಸಿದ್ದಕ್ಕಾಗಿ ನಂದಗಡದಲ್ಲಿ ಶ್ರೀ ಬಸಯ್ಯ ವೈಜನಾಥಮಠ ಎಂಬ ತರುಣನಿಗೆ ಡಿ. ಡಿ. ಕಲೆಕ್ಟರರಾದ ಶ್ರೀ ಹಿರೇಮಠ ಸಾಹೇಬರು ೧೦ ರುಪಾಯಿ ದಂಡ ಇಲ್ಲವೆ ೧ ತಿಂಗಳ ಕಠಿಣ ಕಾರಾಗೃಹವಾಸ ಹೀಗೆ ಶಿಕ್ಷೆ ವಿಧಿಸಿದರು.

ಮಥುರಾದಾಸರನ್ನು
ಬೆಳಗಾವಿಯಿಂದ ಠಾಣೆಗೆ ಒಯ್ದರು

ದಿಲ್ಲಿಯಲ್ಲಿ ವರ್ಕಿಂಗ ಕಮಿಟಿಯ ಸೇರಿದಾಗ ಬಂಧನಕ್ಕೊಳಗಾಗಿ ಶಿಕ್ಷೆಗೆ ಗುರಿಯಾದ ಶ್ರೀ ಮಥುರಾದಾಸ ತ್ರಿಕಮಜಿಯವರನ್ನು ಬೆಳಗಾವಿ ಜೇಲಿನಿಂದ ಠಾಣೆಯ ಜೇಲಿಗೆ ಒಯ್ದರೆಂಬದಾಗಿ ತಿಳಿದು ಬರುತ್ತದೆ,

---

ನೋಟೀಸು

ನಾನು, ನಾಗೂಸಾ ರಾಮಾಸಾ ಬಾಚನಳ್ಳಿ ಸಾ| ಬಾಗಲಕೋಟ ಈ ನೋಟೀಸಿನಿಂದ ಯಾವತ್ತೂ ಜನರಿಗೆ ತಿಳಿಸುವದೇನಂದರೆ:—

ನನ್ನ ತಮ್ಮ ವಿಠ್ಠಲಸಾ ಈತನು ನನ್ನಿಂದ ವಿಭಕ್ತನಾಗಿ ಈಗ ನಾಲ್ಕು ತಿಂಗಳಾಯಿತು. ಸದರಿಯವನು ಯಾವ ತರದ್ದಾದರೂ ಲೇವಾದೇವಿ ಮಾಡಿದರೆ ಅದಕ್ಕೆ ನಾನು ಅಗರ ನನ್ನ ಮಕ್ಕಳು ಯಾವ ರೀತಿಯಿಂದಲೂ ಜವಾಬುದಾರಿ ಇರುವದಿಲ್ಲ" ಅಂತಾ ಈ ಜಾಹೀರ ನೋಟೀಸು ಕೊಟ್ಟಿರುತ್ತದೆ.

ಬಾಗಲಕೋಟ ತಾ|| ೧೩-೧-೩೧ } ನಗೂಸಾ ರಾಮಾಸಾ ಬಾಚನಳ್ಳಿ

ಬೆಟಗೇರಿ ಬ್ರದರ್ಸ
ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟ

ವಾಚ, ಟಾಯಿಂಪೀಸ
ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವಿ ದರದಿಂದ ಸರಿಯಾದ ವೇಳೆಗೆ ದುರಸ್ತು ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿ ಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟಿ.

ಎಲ್ಲ ತರದ ಚಳಿಜ್ವರದ ಮೇಲೆ
ರಾಮಬಾಣ ಗುಳಿಗೆಗಳು

ವಿಷಮಜ್ವರದ ಹೊರತಾಗಿ ಎಲ್ಲತರದ ಚಳಿಜ್ವರಗಳ ಮೇಲೆ ಈ ಗುಳಿಗೆಗಳು ಬಹಳೇ ಗುಣಕಾರಿಯಾಗಿರುವವು. ವಿಶೇಷ ಪಥ್ಯವನ್ನು ಮಾಡುವ ಕಾರಣವಿಲ್ಲ ಹುಣಸೀ ಹಣ್ಣು ಮತ್ತು ಮಜ್ಜಿಗೆ ತೆಗೆದುಕೊಳ್ಳಲು ಏನೂ ಅಡ್ಡಿ ಇಲ್ಲ. ಒಮ್ಮೆ ತೆಗೆದುಕೊಂಡು ಅನುಭವ ಪಡೆಯಿರಿ.

ಒಂದು ಗುಳಿಗೆಗೆ ೦-೧-೦
೧೦೦ ಗುಳಿಗೆಗಳಿಗೆ ೫-೦-೦

ಏಜಂಟರಿಗೆ ಧಾರಾಳವಾದ ಕಮಿಶನ ಕೊಡಲಾಗುವದು,

ವಿಳಾಸ:- ಕೃಷ್ಣಾಚಾರ್ಯ ಮುನ್ನೂರ.
ಕಿಲ್ಲಾದ ಓಣಿ, ಬಾಗಲಕೋಟೆ

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟಿ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳುಮಾರತಕ್ಕವಿವೆ. ಕೊಂಡುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧಾರವಾಡ
ವಕೀಲರು ಬಾಗಲಕೋಟಿ.

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕೆರೂರ ಇವರಿಂದ ಬಾಗಲಕೋಟಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦-೦-೩.

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ -ಮನು.

ಕನ್ನಡಿಗ

KANNADIGA BI-WEEKLY

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಗುರುವಾರ ಮಿತಿ ಪುಷ್ಯ ಬಹುಳ ೨ ಶಕೆ ೧೮೫೧ ತಾ॥ ೧೬-೧-೩೦ [ಸಂಚಿಕೆ ೧೬೫

ಹುತಾತ್ಮರಾದ
ಶ್ರೀ ಧನಶೆಟ್ಟಿ ಮೊದಲಾದವರ ಸಂದೇಶ

ಸೊಲ್ಲಾಪುರದಲ್ಲಾದ ದಂಗೆಯ ಮೂಲಕ ವಾಗಿ ಯರೋಡಾದಲ್ಲಿ ಗಲ್ಲಿಗೇರಿಸಲ್ಪಟ್ಟ ಶ್ರೀ ಧನಶೆಟ್ಟಿ, ಸಾ ರ್ಡಾ ಮೊದಲಾದವರು, ತಮ್ಮನ್ನು ಕಾಣಲು ಬಂದ ಆಪ್ತೇಷ್ಟರ ಮೂಲಕವಾಗಿ ಕೊಟ್ಟು ಕಳುಹಿದ ಸಂದೇಶದ ಸಾರವನ್ನು "ಫ್ರೀಪ್ರೆಸ್" ಪತ್ರಿಕೆಯ ಪ್ರತಿನಿಧಿಯು ಆ ಪತ್ರದಲ್ಲಿ ಪ್ರಸಿದ್ಧ ಮಾಡಿದ್ದು, ಅದನ್ನು ಕೆಳಗೆ ಕೊಟ್ಟಿದ್ದೇವೆ:—

ನಾವು ಇಷ್ಟು ದಿನಗಳವರೆಗೆ ಕತ್ತಲೆಯಲ್ಲಿ ಇದ್ದೆವು. ಸರಕಾರದವರು ನಮ್ಮನ್ನು ಅನ್ಯಾಯದಿಂದ ಗಲ್ಲಿಗೆ ಹಾಕುವದರಿಂದ ನಾವು ಅಮರರಾಗುವೆವು. ಸಂತೋಷದಿಂದಲೂ, ಸ್ಥೈರ್ಯದಿಂದಲೂ ನಾವು ಮರಣವನ್ನು ಅಪ್ಪಿಕೊಳ್ಳುತ್ತೇವೆಂಬುದಾಗಿ ದೇಶಬಾಂಧವರಿಗೆ ತಿಳಿಸ್ಸಿರಿ. ನಾವು ನಿರುಪದ್ರವಿಗಳು. ೨೦ ವರ್ಷಗಳವರೆಗೆ ಪಂಜರದಲ್ಲಿ ಬಿದ್ದು ಕಾಲಹರಣ ಮಾಡುವದಕ್ಕಿಂತಲೂ ಸಾಯುವದೇ ಮೇಲಾಗಿದೆಯಾದ್ದರಿಂದ ನಾವು ಇದಕ್ಕೆ ಎಳ್ಳಷ್ಟು ದುಃಖ ಪಡುವದಿಲ್ಲ. ನಮಗಾದ ಅನ್ಯಾಯವನ್ನು ಕಂಡು ಭಾರತೀಯರೆಲ್ಲರೂ ಸರಕಾರದವರೊಡನೆ ಹೋರಾಡಿ, ಇಂತಹ ಅನ್ಯಾಯಗಳು ಇನ್ನು ಮುಂದೆ ಸಂಭವಿಸದಂತೆ ಪ್ರಯತ್ನಿಸಿದಲ್ಲಿ, ನಾವು ಮರಣಹೊಂದಿದ್ದು ಸಾರ್ಥಕವಾಗುವದು

ದಿಲ್ಲಿಯಲ್ಲಿ
ಶ್ರೀ ಚೆಟ್ಟಿಯವರ ಬಿಡಾರಕ್ಕೆ ಪಿಕೆಟಿಂಗ.

(ಸಂತಿಯ ವಾರ್ತೆ)

ದಿಲ್ಲಿಯಲ್ಲಿ ನಿನ್ನಿನ ದಿವಸ ಲೇಜಿಸ್ಲೇಟಿವ್ಹ ಅಸೆಂಬ್ಲಿಯ ಅಧಿವೇಶನವು ಪ್ರಾರಂಭವಾಯಿತು. ಅಂದು ಅಲ್ಲಿಯ ಕಾಂಗ್ರೆಸ್ ಸ್ವಯಂ ಸೇವಕರು ಅಸೆಂಬ್ಲಿಯ ತಾತ್ಪೂರ್ತಿಕ ಅಧ್ಯಕ್ಷರಾದ ಶ್ರೀ ಷಣ್ಮುಖಂ ಚೆಟ್ಟಿಯವರ ಬಿಡಾರದ ಮುಂದೆ ಪಿಕೆಟಿಂಗ ಮಾಡಿದರು. ಈ ಸಂಬಂಧವಾಗಿ ೧೩ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ.

ಕಾಬೂಲದಲ್ಲಿ ಬಾಂಬು ಹಾರಿತು

ಕಾಬೂಲದಲ್ಲಿ ಆರ್ಕ ಎಂಬ ಸ್ಥಳದಲ್ಲಿ ತಾ॥ ೧೩ ನೆಯ ದಿವಸ ಒಂದು ಬಾಂಬು ಹಾರಿತು. ಒಬ್ಬನು ಮರಣ ಹೊಂದಿದನು, ಇಬ್ಬರಿಗೆ ಭಯಂಕರ ಗಾಯಗಳಾಗಿವೆ.

ಬೆಳಗಾವಿ ಜಿಲ್ಹೆಯ ರೈತರ ಪರಿಷತ್ತು

(ಸಂತಿಯ ವಾರ್ತೆ ಬೆಳಗಾವಿ)

ಬೆಳಗಾವಿ ಜಿಲ್ಹೆಯ ರೈತರ ಪರಿಷತ್ತು ತಾ॥ ೧೮ ನೆಯ ದಿವಸ ಸಂಕೇಶ್ವರದಲ್ಲಿ ಕೂಡುವದು ಗೊತ್ತಾಗಿದ್ದು, ಹಾವೇರಿಯ ಪ್ರಸಿದ್ಧ ವಕೀಲರಾದ ಶ್ರೀ ಸಿದ್ದಪ್ಪ ಹೊಸಮನಿಯವರು ಅದರ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ಬೆಲ್ಲದ ಬಾಗೇವಾಡಿಯ ಪ್ರಸಿದ್ಧ ವತನದಾರರಾದ ಶ್ರೀ ಮಲ್ಲಪ್ಪ ಶಟ್ಟಿಯವರು ಸ್ವಾಗತ ಸಭೆಯ ಚೇರಮನ್ನರಾಗಿದ್ದಾರೆ. ಜಿಲ್ಹೆಯೊಳಗಿನ ರೈತರು ಹಾಗು ವತನದಾರರು ಪರಿಷತ್ತಿಗೆ ಬಂದು ಅದನ್ನು ಯಶಸ್ವಿ ಮಾಡಬೇಕಾಗಿ ಪರಿಷತ್ತಿನ ಚಾಲಕರು ವಿನಂತಿ ಮಾಡಿಕೊಂಡಿದ್ದಾರೆ.

ಮೊನ್ನಿನ ದಿವಸ ಬೆಳಗಾವಿಯಲ್ಲಿ ನಡೆದ ಲಾಠಿ ಪ್ರಹಾರದಲ್ಲಿ ಗಾಯ ಹೊಂದಿದ ಎಲ್ಲ ಜನರೂ ಗುಣ ಹೊಂದುತ್ತಲಿದ್ದಾರೆ.

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

(ಹಿಂದಿನಿಂದ ಮುಂದೆ ಸಾಗಿದ್ದು)

ಜಪ್ತಿಯ ಜುಲುಮೆ

ರೈತರ ಜೀವನಕ್ಕೆ ಅತ್ಯವಶ್ಯವಾದ ಸರಕು ಹಾಗು ಧಾನ್ಯಗಳನ್ನು ಜಪ್ತ ಮಾಡಕೂಡದೆಂಬುದಾಗಿ ಲ್ಯಾಂಡ್ ರೆವಿನ್ಯೂ ಕೋಡದಲ್ಲಿ ಬರೆದಿದ್ದರೂ ಸಹ, ಅಧಿಕಾರಿಗಳು ಅತ್ತ ಲಕ್ಷ್ಯ ಕೊಡದೆ ಅನ್ಯಾಯವಾಗಿ ನೇಗಿಲು, ದನಕರು ಒಕ್ಕಲುತನದ ಉಪಕರಣ ಮತ್ತು ಪಂಪುಗಳನ್ನು ಜಪ್ತ ಮಾಡಿಕೊಂಡು ಹೋಗಿರುವರು. ಜಪ್ತ ಮಾಡಿದ ಸಾಮಾನುಗಳನ್ನು ತೀರ ಕಡಿಮೆ ಬೆಲೆಗೆ ಮಾರಿರುವರು. ಭೂಮಿಗಳ ಒಡೆಯರಿಂದ ಹಣವನ್ನು ವಸೂಲ ಮಾಡಲು ಶಕ್ಯವಾಗದಿದ್ದಾಗ ಕಂದಾಯ ಖಾತೆಯ ಅಧಿಕಾರಿಗಳು ನೆರೆ ಹೊರೆಯವರಿಗೆ ಪೀಡೆ ಕೊಟ್ಟು, ಅವರಿಂದ ಆ ಹಣವನ್ನು ವಸೂಲ ಮಾಡಿಕೊಂಡಿರುವರು. ಇಲ್ಲಿ ಕೆಳಗೆ ಅವುಗಳನ್ನು ಉದಹರಿಸಿರುತ್ತದೆ.

ಪಿಪಲಾಗ ಎಂಬ ಹಳ್ಳಿಯಲ್ಲಿ ಎಷ್ಟೋ ಖಾಂಡೆಕೊಂಡೆಗಳನ್ನು ಜಪ್ತ ಮಾಡಿರುವರು. ನರಸಂದಾ ಎಂಬ ಹಳ್ಳಿಯಲ್ಲಿ ಒಬ್ಬರ ಮನೆಯ ಬಾಗಿಲು ಹಾಗು ಚೌಕಟ್ಟುಗಳನ್ನು ಕಿತ್ತಿ ಒಗೆದು ಅವರಿಗೆ ನೂರಾರು ರೂಪಾಯಿಗಳ ಹಾನಿ ಮಾಡಿರುವರು. ತಾ|| ೭ ನೆಯ ದಿವಸ ಕೆಲವು ಜನ ಪೋಲೀಸರು ಅಜಾರಪುರಕ್ಕೆ ಹೋಗಿ ಅಲ್ಲಿಯ ರೈತರನ್ನು ಒಳಿತಾಗಿ ಹೊಡೆದರು. ಅಲ್ಲಿ ಒಂದು ಗಿಡದ ಮೇಲೆ ಕಟ್ಟಿದ ರಾಷ್ಟ್ರಧ್ವಜವನ್ನು ಕೆಳಗೆ ತೆಗೆದುಕೊಳ್ಳಲು ಆಜ್ಞೆ ವಿಧಿಸಿದರು. ರೈತರು ಅದಕ್ಕೆ ಒಪ್ಪಲಿಲ್ಲ. ಪೋಲೀಸರು ಅವರನ್ನು ಹೊಡೆದು ಬಡೆದು ಅವರ ತಲೆಯ ಮೇಲಿನ ಗಾಂಧಿ ಟೊಪ್ಪಿಗೆಗಳನ್ನು ಕಸಿದುಕೊಂಡು ಅವುಗಳನ್ನು ಸುಟ್ಟು ಬಿಟ್ಟರು. ಇದಾದ ಎರಡು ದಿನಗಳ ತರುವಾಯದಲ್ಲಿ ಮಾಮಲೇದಾರರು ಅಲ್ಲಿಗೆ ಹೋಗಿ ಜಪ್ತಿಯ ಸತ್ರ ಸುರುವು ಮಾಡಿದರು. ಪಂಪುಗಳ ಕೆಲವು ಸಾಮಾನುಗಳನ್ನು ಜಪ್ತ ಮಾಡಿದರು. ಪಂಪುಗಳ ಸಾಮಾನುಗಳನ್ನು ಜಪ್ತ ಮಾಡಿದ್ದರಿಂದ ಹೊಲಗಳಿಗೆ ನೀರು ಬಿಡುವದು ನಿಂತು ಹೋಯಿತು. ಬೆಳೆಯೆಲ್ಲ ಒಣಗಿ ಹೋದವು. ಆದ್ದರಿಂದ ಒಬ್ಬನು ಎಲ್ಲರ ಪರವಾಗಿ ಹಪ್ತೆಯನ್ನು ಕಟ್ಟಿದನು. ಮಾಮಲೇದಾರರೂ, ಅವರ ಕೈಕೆಳಗಿನ ಅಧಿಕಾರಿಗಳೂ ಅವನನ್ನು ಒಳಿತಾಗಿ ಥಳಿಸಿ ಅವನನ್ನು ಅವಮಾನಗೊಳಿಸಿದರು,

ಬೋರಿಸಾವಿಯಲ್ಲಿ ಒಬ್ಬ ಪಟೇದಾರರಿರುವರು. ಅವರಿಗೆ ಸರಕಾರದಿಂದ ಪದವಿಯು ಸಿಕ್ಕಿತ್ತು. ಅವರು ಇತ್ತೀಚಿಗೆ ಪದವಿಗೆ ಶರಣು ಹೊಡೆದು, ಕಾಯದೆ ಭಂಗ ಚಳವಳಿಯಲ್ಲಿ ಸೇರಿ, ಈಗ ಸುರಂಗಕ್ಕೆ ಹೋಗಿರುವರು. ಅವರಿಗೆ ೨೫೦ ರು. ದಂಡವಾದರೂ ಆಗಿದ್ದು ಅವರು ದಂಡವನ್ನು ಕೊಟ್ಟಿಲ್ಲ. ತಾ|| ೩೦ ನೆಯ ದಿವಸ ಕೆಲವು ಜನ ಪೋಲೀಸರು ಅವರ ಮನೆಯಲ್ಲಿ ನುಗ್ಗಿ ಹೋಗಿ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋದರು. ಇಷ್ಟಕ್ಕೆ ಸಂತೋಷಪಡದೆ ಅವರು, ವಿಧವೆಯಾಗಿರುವ ಅವರ ಅತ್ತಿಗೆಯ ಮನೆಗೂ ಮುತ್ತಿಗೆ ಹಾಕಿ ಅಡಿಗೆಯ ಮನೆಯಲ್ಲಿ ಒಳಹೊಕ್ಕರು. ಆಗ ಮನೆಯಲ್ಲಿ ಗಂಡಸರು ಯಾರೂ ಇದ್ದಿದ್ದಿಲ್ಲ. ಹೆಂಗಸರು ಆದೇ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ಪೋಲೀಸರು ಅಲ್ಲಿಯ ಎಲ್ಲ ಸಾಮಾನುಗಳನ್ನೂ ಅಸ್ತವ್ಯಸ್ತ ಮಾಡಿದರು. ಎಣ್ಣೆ ಮತ್ತು ತುಪ್ಪವನ್ನು ನೆಲದ ಮೇಲೆ ಚಲ್ಲಿದರು. ಅಡಿಗೆಯನ್ನು ಕೆಡಿಸಿದರು. ಕೆಲವು ಸಾಮಾನು ಹಾಗು ರೂಪಾಯಿಗಳನ್ನು ತೆಗೆದುಕೊಂಡು ಹೋದರು.

ಡಾಕ್ಟರರಿಗಾದರೂ ಅಧಿಕಾರಿಗಳು ಪೀಡೆ ಕೊಡಹತ್ತಿದ್ದಾರೆ. ಪೋಲೀಸರ ಅಪ್ಪಣೆಯನ್ನು ಪಡೆದುಕೊಳ್ಳದೆ ಯಾರಿಗೂ ಉಪಚಾರ ಮಾಡಕೂಡದಾಗಿ ನಡಿಯಾದದಲ್ಲಿ ಸಿವ್ಹಿಲ್ ಸರ್ಜನರಿಗೆ ಅಪ್ಪಣೆಕೊಟ್ಟಿದ್ದಾರೆ. ಸಲೂನದಲ್ಲಿ ಗಾಯ ಹೊಂದಿದ ಮನುಷ್ಯನಿಗೆ ಅಲ್ಲಿಯ ಡಾಕ್ಟರರು ಔಷಧೋಪಚಾರ ಮಾಡಲಿಲ್ಲ. ಗಿಡದಿಂದ ಬಿದ್ದದ್ದರಿಂದ ಗಾಯಹೊಂದಿರುವೆನೆಂಬದಾಗಿ ಹೇಳಲು ಅವರು ಅವನಿಗೆ ಒತ್ತಾಯಪಡಿಸಿದರು. ಅವನು ಹಾಗೆ ಹೇಳಲು ಒಪ್ಪಲಿಲ್ಲ. ಔಷಧೋಪಚಾರ ಮಾಡದೆ ತಿರುಗಿ ಕಳಿಸಿಕೊಟ್ಟರು.

ನಡಿಯಾದ ಹಾಗು ಆನಂದ ತಾಲೂಕಗಳಲ್ಲಿ ನನಗೆ ತಿಳಿದು ಬಂದ ಸಂಗತಿಗಳನ್ನಷ್ಟೇ ಮೇಲೆ ವರ್ಣಿಸಿದ್ದಾಗಿದೆ. ಇಂತಹ ಎಷ್ಟೋ ಸಂಗತಿಗಳು ನನ್ನ ಟಿಪ್ಪಣಿಯಲ್ಲಿವೆ. ಇಂತಹ ಚಳವಳಿಯಲ್ಲಿ ಸೇರಿದವರಿಗೆ ಕಷ್ಟನಷ್ಟಗಳು ಬರುವದೂ ಆಸ್ತಿಪಾಸ್ತಿಗಳು ಜಪ್ತವಾಗುವದೂ ದಂಡ, ಶಿಕ್ಷೆ ಮೊದಲಾದವುಗಳು ಆಗುವದು ಸಹಜವೇ ಆಗಿದ್ದೆ ಇದೆ. ಆದರೆ ದಬ್ಬಾಳಿಕೆಯನ್ನು ಅವಲಂಬಿಸಿದಾಗ ಅಧಿಕಾರಿಗಳು ನ್ಯಾಯದ ಕಡೆಗೆ ವಿಶೇಷವಾಗಿ ಲಕ್ಷ್ಯಕೊಡಬೇಕು. ಮಾಮಲೇದಾರರು ಹಾಗು ಸಬ್ ಇನಸ್ಪೆಕ್ಟರರು ಬಹಳೇ ಸಿಟ್ಟಿಗೇಳುತ್ತಾರೆ. ಪೋಲೀಸರು ಹುಂಬರೂ ಅಜ್ಞಾನಿಗಳೂ ಇರುತ್ತಾರೆ. ಕೆಳಗಿನ ಅಧಿಕಾರಿಗಳು ನಡಿಸಿದ ಕೃತಿಗಳ ವಿಷಯವಾಗಿ ಮೇಲಿನ ಅಧಿಕಾರಿಗಳಿಗೆ ಏನೂ ಗೊತ್ತಾಗುವದಿಲ್ಲ. ಆದ್ದರಿಂದ ಸರಕಾರದವರು ಒಂದು ವಿಚಾರಣಾಮಂಡಳವನ್ನು ನಿಯಮಿಸಿ ಮೇಲಿನ ಸಂಗತಿಗಳ ಬಗ್ಗೆ ವಿಚಾರ ಮಾಡಬೇಕು.

ಹೊಗೆಬಂಡಿಯು ನದಿಯಲ್ಲಿ ಬಿತ್ತು.

ಟೋಕಿಯೋ ಪಟ್ಟಣಕ್ಕೆ ಹೋಗುವ ಒಂದು ಹೊಗೆಬಂಡಿಯು, ಕೋಚಿ ಎಂಬ ಪೂಲಿನ ಮೇಲಿಂದ ಹೋಗುತ್ತಿರುವಾಗ ಹಳಿಯನ್ನು ಬಿಟ್ಟು ಸರಿದು, ಒಮ್ಮಿಂದೊಮ್ಮೆ ನದಿಯಲ್ಲಿ ಬಿತ್ತು. ೪೯ ಜನರು ಮರಣಹೊಂದಿದ್ದು, ಸುಮಾರು ೮೦ ಜನರಿಗೆ ಅಪಾಯವಾಗಿದೆ.

ಸಕ್ಕರದಲ್ಲಿ ಒಬ್ಬನಿಗೆ ಗಲ್ಲು

ಕೆಲವು ತಿಂಗಳುಗಳ ಹಿಂದೆ ಸಕ್ಕರದಲ್ಲಿ ಸಂಭವಿಸಿದ ದಂಗೆಯ ಕಾಲಕ್ಕೆ ತೇಜುಮಲ್ಲ ಎಂಬ ಓರ್ವ ಹಿಂದೂ ಗೃಹಸ್ಥನ ಕೊಲೆ ಮಾಡಿದ್ದಕ್ಕಾಗಿ ಅಲ್ಲಿಯ ಇಬ್ಬರು ಆಗಸರಿಗೆ ಕ್ರಮವಾಗಿ ಕರಿನೀರು ಹಾಗು ಗಲ್ಲಿನ ಶಿಕ್ಷೆಯನ್ನು ವಿಧಿಸುವದರಲ್ಲಿ ಬಂದಿದೆ.

ಮುಂಬಯಿ ಕಾಯದೆಮಂಡಳದ ಅಧಿವೇಶನ.

ಮುಂಬಯಿ ಕಾಯದೆ ಮಂಡಳದ ಅಧಿವೇಶನವು ತಾ|| ೧೮ ನೆಯ ಫೆಬ್ರುವರಿಗೆ ಪ್ರಾರಂಭವಾಗುವದಿದ್ದು, ಅಂದು ಸಭಾಸದರಿಂದ ಶಪಥ ತೆಗೆದುಕೊಳ್ಳುವದು ಹಾಗು ಅಧ್ಯಕ್ಷರನ್ನು ಆರಿಸುವದು ಈ ಕಾರ್ಯಗಳು ನಡೆಯತಕ್ಕವಿವೆ.

ಅಸೆಂಬ್ಲಿಯಲ್ಲಿ ಬಾಂಬುಗಳ ಬಗ್ಗೆ ಪ್ರಶ್ನೆ.

ಈ ಸಲದ ಲೆಜಿಸ್ಲೆಟಿವ್ಹ ಅಸೆಂಬ್ಲಿಯಲ್ಲಿ ರಾಯಬಹದ್ದೂರ [illegible] ರಾಮರಾವರು, ರಾಜ್ಯಕ್ರಾಂತಿಪರ ಚಳವಳಿಯವರು ೧೯೩೦ ನೆಯ ಇಸ್ವಿಯಲ್ಲಿ ಒಟ್ಟಿಗೆ ಎಷ್ಟು ಬಾಂಬುಗಳನ್ನು ಒಗೆದರು? ಎಷ್ಟು ಜನರು ಆ ಕಾಲಕ್ಕಾಗಿ ಗಾಯ ಹೊಂದಿದರು ಹಾಗು ಎಷ್ಟು ಜನ ಅಧಿಕಾರಿಗಳು ಬಂಧನಕ್ಕೊಳಗಾದರು? ಈ ಸಂಬಂಧವಾಗಿ ಅಂಕಿಗಳನ್ನು ಕೇಳಿಕೊಳ್ಳುವವರಿದ್ದಾರೆ.

ಸಾಬರಮತಿ ಜೇಲಿನಲ್ಲಿ

ಕೈದಿಗಳ ವರ್ಗೀಕರಣಕ್ಕೆ ವಿರೋಧ.

(ಶಂಕಿಯ ವಾರ್ತೆ ತಾ|| ೧೪)

ಸಾಬರಮತಿ ಜೇಲಿನಲ್ಲಿಯ ರಾಜಕೀಯ ಕೈದಿಗಳು, "ವರ್ಗೀಕರಣ ಪದ್ಧತಿಯನ್ನು ತೆಗೆದೊಗೆಯಿರಿ ಇಲ್ಲದಿದ್ದರೆ ಅನ್ನತ್ಯಾಗ ಸತ್ಯಾಗ್ರಹವನ್ನು ಹೂಡುವೆವು" ಎಂಬುದಾಗಿ ಜೇಲಿನ ಅಧಿಕಾರಿಗಳಿಗೆ ನಿರ್ವಾಣಿಯ ಪತ್ರ ಬರೆದಿದ್ದಾರೆ.

ಬೆಳಗಾವಿಯಲ್ಲಿ
೧೪೪ ನೆಯ ಕಲಮು

ಶ್ರೀ ವಲ್ಲಭ ಧನಶೆಟ್ಟಿ ಮೊದಲಾದವರನ್ನು ಗಸ್ತಿಗೇರಿಸಿದ್ದರ ನಿಷೇಧಾರ್ಥವಾಗಿ ತಾ|| ೧೫ ರಿಂದ ಒಂದು ವಾರದ ವರೆಗೆ ಪಟ್ಟಣದಲ್ಲಿ ಮೆರವಣಿಗೆಗಳನ್ನು ಹೊರಡಿಸಕೂಡದೆಂಬುದಾಗಿ ಬೆಳಗಾವದ ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟರು, ೧೪೪ ನೆಯ ಕಲಮಿನನ್ವಯ ಒಂದು ಕಟ್ಟಪ್ಪಣೆಯನ್ನು ಹೊರಡಿಸಿದ್ದಾರೆ.

ರಾಷ್ಟ್ರಧ್ವಜಕ್ಕೆ
ಶಾಲೆಯ ಗ್ರ್ಯಾಂಟು ಹೋಯಿತು

ಶಾಲೆಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿದ ಕಾರಣವನ್ನು ತೋರಿಸಿ ಸರಕಾರದವರು ಬನಾರಸ ಸೆಂಟ್ರಲ್ ಹಾಯಸ್ಕೂಲಿಗೆ ಪ್ರತಿವರ್ಷವು ಕೊಡುವ ೩೨೦೦ ರು. ಗ್ರ್ಯಾಂಟನ್ನು ಈ ವರ್ಷ ನಿಲ್ಲಿಸಿಬಿಟ್ಟಿದ್ದಾರೆ.

ಮುಂಬಯಿಯಲ್ಲಿ
೧೨೨ ಜನರಿಗೆ ಬಿಡುಗಡೆ

ಕ್ರಿ. ಲಾ ಅಮೆಂಡಮೆಂಟ ಕಾಯಿದೆಯ ಅನ್ವಯ ಶಿಕ್ಷೆಗೆ ಗುರಿಯಾದ ೧೨೨ ಜನ ಕಾಂಗ್ರೆಸ್ ಕಾರ್ಯಕರ್ತರ ಬಗ್ಗೆಯ ಕಾಗದಪತ್ರಗಳನ್ನು ಹಾಯಕೋರ್ಟಿನವರು ಪುನರ್ವಿಚಾರಣೆ ಮಾಡಿ, ಅವರಲ್ಲಿ ೧೨೨ ಜನರನ್ನು ನಿರಪರಾಧಿಗಳೆಂದು ನಿರ್ಣಯಿಸಿದರು.

ದಾದಾಭಾಯಿಯವರ
ಮೊಮ್ಮಗಳನ್ನು ಮತ್ತೆ ಹಿಡಿದರು

ದಿವಂಗತ ದಾದಾಭಾಯಿ ನವರೋಜಿಯವರ ಮೊಮ್ಮಕ್ಕಳಾದ ಶ್ರೀಮತಿ ಖುರಶೇದಬೇನರು ತಾ|| ೧೧ನೆಯ ದಿವಸ ಮತ್ತೆ ಸೆರೆಹಿಡಿಯಲ್ಪಟ್ಟಿದ್ದಾರೆ. ಈ ಎಂಟು ತಿಂಗಳ ಅವಧಿಯಲ್ಲಿ ಇವರು ಈಗಾಗಲೆ ಎರಡು ಸಾರೆ ಸ್ವರಾಜ್ಯಾಶ್ರಮವು ಕಂಡು ಬಂದಿದ್ದಾರೆ.

ಮೌ. ಮುಹಮ್ಮದ ಅಲ್ಲಿಯವರ
ಮಗಳಿಗೆ ಅಪಮಾನ

ಮೌಲಾನಾ ಮಹಮ್ಮದ ಅಲ್ಲಿಯವರು ಮರಣ ಹೊಂದಿದ ಬಗ್ಗೆ ದುಃಖಪ್ರದರ್ಶನ ಮಾಡಲು ಜರುಗತಕ್ಕ ಸಭೆಯಲ್ಲಿ ಮುಖ್ಯವಾದ ಭಾಗ ತೆಗೆದುಕೊಳ್ಳಲು, ರಾಂಪುರದ ನಾಗರಿಕರು ಮಹಮ್ಮದ ಅಲ್ಲಿಯವರ ಮಗಳಿಗೆ ಕೇಳಿಕೊಂಡಿದ್ದರು. ಅಲ್ಲಿಯ ನಾಗರಿಕರ ಬಿನ್ನಹಕ್ಕೆ ಒಪ್ಪಿಕೊಂಡು ಅವರು ತಾ|| ೬ ನೆಯ ದಿವಸ ಮುರಾದಾಬಾದದಿಂದ ರಾಮಪುರಕ್ಕೆ ಹೊರಟರು. ಹಾದಿಯಲ್ಲಿ ಕೆಲವು ಜನ ಗುಪ್ತ ಪೋಲೀಸರು ಅವರನ್ನು ಝಡತಿಮಾಡಿ ಅವರನ್ನು ಅವಮಾನಗೊಳಿಸಿದರು. ಮುರಾದಾಬಾದದ ನಾಗರಿಕರು ಈ ಬಗ್ಗೆ ಸಭೆ ಸೇರಿಸಿ ನಿಷೇಧವನ್ನು ವ್ಯಕ್ತಪಡಿಸಿದರು.

ಶ್ರೀ ರಂಕಾರವರ ತೂಕವು
೪೦ ಪೌಂಡು ಕಡಿಮೆಯಾಯಿತು.

ಜೇಲಿನಲ್ಲಿ ಸಿಗುವ ಕೆಟ್ಟ ಆಹಾರದ ನಿಷೇಧಾರ್ಥವಾಗಿ ಖಾಂಡವಾ ಜೇಲಿನಲ್ಲಿಯ ರಾಜಕೀಯ ಕೈದಿಗಳು ೪ನೆಯ ತಾರೀಖಿನಿಂದ ಅನ್ನತ್ಯಾಗವ್ರತ ಕೈಕೊಂಡಿದ್ದಾರೆ. ಶ್ರೀ ಪೂರ್ಣಚಂದ್ರ ರಂಕಾರವರಿಗೆ ಜೇಲಿನ ಅಧಿಕಾರಿಗಳು ಒತ್ತಾಯದಿಂದ ಆಹಾರವನ್ನು ಹಾಕುತ್ತಿರುವರಾಗಿ ತಿಳಿಯುತ್ತದೆ. ಶ್ರೀ ರಂಕಾರವರ ತೂಕವು ೪೦ ಪೌಂಡು ಕಡಿಮೆಯಾಗಿದೆ.

ದಿಲ್ಲಿಯಲ್ಲಿ
ಪೋಲೀಸರು ಬೆದರಿದರು

ದಿಲ್ಲಿಯಲ್ಲಿ ಸೋನಾರಿ ಬಾಗದಲ್ಲಿ ತಾ|| ೧೧ ನೆಯ ದಿವಸ ಬಾಂಬು ಹಾರಿದಂತೆ ಭಯಂಕರವಾದ ಸಪ್ಪಳವು ಕೇಳಿಸಿತು. ಪೋಲೀಸರು ಭಯಭೀತರಾಗಿ ಎಲ್ಲ ವಾಹನಗಳನ್ನೂ ನಿಲ್ಲಿಸಿ ಆ ಬಗ್ಗೆ ಶೋಧ ಮಾಡಿದರು. ಮೋಟಾರ ಹಾಗು ಟಾಂಗೆಗಳ ನಂಬರು ಬರೆದುಕೊಂಡರು. ಆ ಹಾದಿಯಲ್ಲಿ ಹೋಗಿ ಬರುವವರನ್ನು ಝಡತಿ ಮಾಡಿದರು. ಏನೆಂಬುವದು ಪತ್ತೆಯಾಗಲಿಲ್ಲ.

ಅಂಕೋಲೆಯಲ್ಲಿ
ಹೆಂಗಸರ ಕಾಯದೆ ಭಂಗ

ಅಂಕೋಲೆಯ ಮೂವರು ಒಕ್ಕಲಗಿತ್ತಿಯರು ಒಂದು ದಿವಸ ಗುಡ್ಡದಿಂದ ಹೊರೆ ತಂದು ಅವುಗಳನ್ನು ಪಟ್ಟಣದಲ್ಲಿ ಮಾರಬಂದರು. ಆಗ ಅಡವಿಯ ಅಧಿಕಾರಿಗಳು ಅವರಿಗೆ ಅಡ್ಡಮಾಡಿ ಅವುಗಳನ್ನು ಜಪ್ತಮಾಡಿಕೊಂಡು ಹೋದರು. ಮರುದಿವಸ ನೂರಾರು ಜನ ಒಕ್ಕಲಗಿತ್ತಿಯರು ಅಡವಿಗೆ ಹೋಗಿ ಕಟ್ಟಿಗೆ ತಂದು ಅವುಗಳನ್ನು ಸಾರ್ವಜನಿಕವಾಗಿ ಲಿಲಾವು ಮಾಡಿದರು. ಸುಮಾರು ೫೦೦—೬೦೦ ಹೊರೆಗಳು ಮಾರಾಟವಾದವು. ಅಡವಿಯ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕೂತಿದ್ದರು.

ಸ್ವದೇಶಿಯ ಪ್ರಸಾರ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿಯ ಮಹಾಶಿವರಾತ್ರಿಯ ಜಾತ್ರೆಯಲ್ಲಿ ಯಾರೂ ಪರದೇಶಿ ಸರಕುಗಳನ್ನು ಮಾರಲು ತರಕೂಡದೆಂದೂ, ಹಾಗೆ ಮಾರಿದಲ್ಲಿ ಆ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದಲ್ಲಿ ಬರುವದೆಂದೂ, ಅಲ್ಲಿಯ ಬಹಿಷ್ಕಾರ ಮಂಡಳದವರು ಪ್ರಸಿದ್ಧ ಮಾಡಿದ್ದಾರೆ.

ಶ್ರೀ ಏಕಾಂಬರ ಅಯ್ಯರರ
ಪ್ರಕೃತಿ

ಕರುಳು ರೋಗದ ಬಗ್ಗೆ ಶಸ್ತ್ರಕ್ರಿಯೆಯನ್ನು ಹೊಂದಿ ಜಿ. ಟಿ. ಹೊಸ್ಪಿಟಲದಲ್ಲಿ ಉಪಚಾರ ಪಡೆಯುತ್ತಿರುವ ಹಿಂದುಸ್ಥಾನೀ ಸೇವಾದಳದ ಸಂಘಟಕರಾಗಿರುವ ಶ್ರೀ ಏಕಾಂಬರ ಅಯ್ಯರರವರ ಪ್ರಕೃತಿಯು ಈಗ ಸ್ವಲ್ಪ ಸುಧಾರಿಸಹತ್ತಿದೆಯಾಗಿ ತಿಳಿಯುತ್ತದೆ.

೫೬ ವರ್ಷದಲ್ಲಿ
೭೯ ಮಕ್ಕಳನ್ನು ಹಡೆದವಳು

ಜರ್ಮನಿಯಲ್ಲಿ ಮಿಸೆಸ್ ಬರ್ನರ್ಡ್ ಶೀನಬರ್ಗ ಎಂಬುವವಳು ತನ್ನ ೫೬ನೆಯ ವರ್ಷದೊಳಗಾಗಿ ಒಟ್ಟಿಗೆ ೭೯ ಮಕ್ಕಳನ್ನು ಹಡೆದಳು. ಆಕೆಯು ಸತ್ತನಂತರ ಅವಳ ಗಂಡನು ಎರಡನೆಯವಳನ್ನು ಲಗ್ನವಾಗಲು ಆಕೆಯಿಂದ ೧೮ ಮಕ್ಕಳಾದವಂತೆ! ಹುಟ್ಟಿದ ಮಕ್ಕಳಲ್ಲಿ ೬೬ ಮಾತ್ರ ಜೀವಂತವಿರುವವು. ಅವನ ವಯಸ್ಸು ಈಗ ೬೬.

ಕರಾಚಿಯಲ್ಲಿ ದೊಣ್ಣೆಯ ರಾಜ್ಯ

ಕರಾಚಿಯ ಕಾಂಗ್ರೆಸ್ ಅಧಿಕಾರಿಗಳು ತಾ॥ ೧೧ನೆಯ ದಿವಸ ರಾಣೀಬಾಗದಲ್ಲಿ ಸಭೆಯನ್ನು ಜರುಗಿಸ ತಕ್ಕವರಿದ್ದರು. ಪೋಲೀಸ ಅಧಿಕಾರಿಗಳು ಅವರಿಗೆ ಅಡ್ಡಿ ಮಾಡಿದರು. ಸಭೆಗೆಂದು ಬಂದ ಸಾವಿರಾರು ಜನರು ಅಲ್ಲಿಂದಲೇ ಮೆರವಣಿಗೆ ಹೊರಡಿಸಿಕೊಂಡು ಪಟ್ಟಣದಲ್ಲೆಲ್ಲ ಸಂಚರಿಸಿದರು. ಮ್ಯಾಜಿಸ್ಟ್ರೇಟರ ಕೋರ್ಟಿನ ಎದುರಿಗೆ ಬರುತ್ತಿರುವಾಗ ಪೋಲೀಸರು ಅವರನ್ನು ತಡೆದು, ಅವರ ಮೇಲೆ ಹಲ್ಲೆ ಮಾಡಿದರು. ಲಾಠಿಗಳಿಂದ ಥಳಿಸಿದರು. ಸುಮಾರು ೩೦ ಜನರಿಗೆ ಬಹಳೇ ಪೆಟ್ಟು ಬಿದ್ದಿದೆ. ಸರ್ವಾಧಿಕಾರಿ ಹಾಗು ೩೦ ಜನರು ಬಂಧನಕ್ಕೊಳಗಾಗಿದ್ದಾರೆ.

ಪೋಲೀಸ ಅಧಿಕಾರಿಗಳ ಮೇಲೆ ಮಾನಹಾನಿಯ ದಾವೆ

ವೆದ್ದಾಮಪುರದಲ್ಲಿ ವನಭೋಜನದ ಕಾಲಕ್ಕೆ ತಮ್ಮ ಮೇಲೆ ಹಲ್ಲೆ ಮಾಡಿ ತಮ್ಮನ್ನು ಅವಮಾನಗೊಳಿಸಿದ ಸಂಬಂಧವಾಗಿ ಪಿ. ಸಂತಾನಮ್ ಅಯ್ಯಂಗಾರ, ಅಲ್ಲಿಯ ಡೆಪ್ಯೂಟಿ ಪೋಲೀಸ ಸುಪರಿಂಟೆಂಡೆಂಟರು, ಪೋಲೀಸ ಸರ್ಕಲ್ ಇನ್ಸ್‌ಪೆಕ್ಟರು ಮೊದಲಾದ ನಾಲ್ಕು ಜನ ಅಧಿಕಾರಿಗಳ ಮೇಲೆ ೫೦,೦೦೦ ರೂಪಾಯಿಗಳ ಬಗ್ಗೆ ಮಾನ ಹಾನಿಯ ದಾವೆ ಹೂಡಿದ್ದಾರೆ.

ಬಳ್ಳಾರಿಯಲ್ಲಿ ಹರತಾಳ.

(ಸ್ವಂತ ಸುದ್ದಿಗಾರರಿಂದ)

ಶ್ರೀ ಮಲ್ಲಪ್ಪ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ್ದು ತಿಳಿದ ಕೂಡಲೆ ಅಂಗಡಿಕಾರರೆಲ್ಲರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿ ಸಂಪೂರ್ಣವಾಗಿ ಹರತಾಳ ಆಚರಿಸಿದರು.

ಅಹಮ್ಮದನಗರದಲ್ಲಿ ಕಾಂಗ್ರೆಸ್ ಸಂಸ್ಥೆಗೆ ಮುತ್ತಿಗೆ

ಅಹಮ್ಮದನಗರದ ಪೋಲೀಸ ಅಧಿಕಾರಿಗಳು ಹೋದ ವಾರದಲ್ಲಿ ಅಲ್ಲಿಯ ಕಾಂಗ್ರೆಸ್ ಕಮೀಟಿ, ಸ್ವದೇಶೀ ಪ್ರದರ್ಶನದ ಕಚೇರಿ ಹಾಗು ಸರ್ವಾಧಿಕಾರಿ ಶ್ರೀ ಗರುಡಾಚಾರ್ಯ ಮನೆ ಇವುಗಳನ್ನು ಝಡತಿ ಮಾಡಿ, ಕೆಲವು ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು.

ಪಿಯಾನು ಬಾರಿಸುವಾಗ ಮರಣ ಹೊಂದಿದ್ದು.

ವೆಸ್ಟ್‌ನಾರವುಡ್ಡದ ಮಿಸೆಸ್ ಇಸಾಬೆಲ್ ಬ್ರಿಟನ್ ಎಂಬ ೭೦ ವರ್ಷದ ಮುದುಕಿಯು ತನ್ನ ಮನೆಯಲ್ಲಿ ಪಿಯಾನ ಬಾರಿಸುತ್ತ ಕುಳಿತಾಗ ಒಮ್ಮಿಂದೊಮ್ಮೆ ಮರಣ ಹೊಂದಿದಳು.

ಮುಂಬಯಿಯಲ್ಲಿ ೨೦ ಜನರಿಗೆ ಕೈದು

ಮುಂಬಯಿಯ ಬೇರೆ ಬೇರೆ ಭಾಗಗಳಲ್ಲಿಯ ಮನೆಗಳ ಮೇಲಿನ ಅಂಕಿಗಳನ್ನು ಅಳಿಸಿದ ಸಂಬಂಧವಾಗಿ ಅಲ್ಲಿ ಈಗ ಒಟ್ಟಿಗೆ ೨೦ ಜನ ಕಾರ್ಯಕರ್ತರಿಗೆ ಕೈದು ಜರಿದೆ.

ಶ್ರೀ ಕಬಾಡಿಯವರಿಗೆ ಬಿಡುಗಡೆ.

ಕಾಯದೆಭಂಗದ ಮೂಲಕವಾಗಿ ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ, ಯರೋಡಾ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ, ಮುಂಬಯಿಯ ಯುವಕ ಸಂಘದ ಸನ್ನಾಹಕಾರಿಗಳಾದ ಶ್ರೀ ವಾಮನ ಕಬಾಡಿಯವರು ಪುನರ್ವಿಚಾರಣೆಯಲ್ಲಿ ನಿರ್ದೋಷಿಗಳಾಗಿ ನಿರ್ಣಯಿಸಲ್ಪಟ್ಟ ಮೂಲಕವಾಗಿ, ತಾ॥ ೧೧ ನೆಯ ದಿವಸ ಜೇಲಿನಿಂದ ಬಿಡುಗಡೆ ಹೊಂದಿದರು. ಅವರು ಬಹಳೇ ಅಶಕ್ತರಾಗಿದ್ದಾರೆ. ಯರೋಡಾ ಜೇಲಿನಲ್ಲಿ ಅವರಿಗೆ ಚಕ್ಕಿ ಹಾಗು ಕಲ್ಲು ಒಡೆಯುವ ಕೆಲಸ ಕೊಟ್ಟಿದ್ದರು.

ಮುಂಬಯಿಯಲ್ಲಿ ದೊಣ್ಣೆಯ ರಾಜ್ಯ.

ಸೊಲ್ಲಾಪುರದ ಶ್ರೀ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ಮುಂಬಯಿಗೆ ತಿಳಿದ ಕೂಡಲೆ ಮುಂಬಯಿಯಲ್ಲಿ ಸಂಪೂರ್ಣ ಹರತಾಳ ಆಚರಿಸಲಾಯಿತು. ಕೆಲವು ಜನರು ಟ್ರ್ಯಾಮ್‌ಕಾರ್ ಹಾಗು ಮೋಟಾರುಗಳಿಗೆ ಅಡ್ಡಿಮಾಡ ಪ್ರಯಾಣಿಕರಿಗೆ ತೊಂದರೆ ಕೊಟ್ಟರು. ಕೆಲವು ಪುಂಡ ಜನರು ಕಲ್ಲುಗಳನ್ನು ಒಗೆಯಲಾರಂಭಿಸಿದರು. ಇಷ್ಟರಲ್ಲಿ ಅಲ್ಲಿ ಪ್ರಚಂಡ ಜನಸಮುದಾಯವು ಬಂದು ನೆರೆಯಿತು. ಪೋಲೀಸರು ಹಾಗು ಸಾರ್ಜಂಟರು ಲಾಠಿಗಳಿಂದ ಜನರನ್ನು ಥಳಿಸಿ ಅವರನ್ನು ಚದುರಿಸಿದರು. ಸುಮಾರು ೭೦ ಜನರಿಗೆ ಪೆಟ್ಟುಗಳು ಬಿದ್ದವು.

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಾಗಿ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ವಾಚ, ಟಾಯಿಂಪೀಸ ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಿಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವೀದರದಿಂದ ಸರಿಯಾದ ವೇಳೆಗೆ ದುರಸ್ತು ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತು ಮಾಡಿಸಿಕೊಂಡು ಖಾತ್ರಿಮಾಡಿಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ.
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವೆಲರ್ಸ್ ಬಂಗಲೆಯ ಉತ್ತರದಲ್ಲಿರುವ ೨೩೦ನೆಯ ಸರ್ವೆ ನಂಬರದಲ್ಲಿಯ ಕೆಲವೇ ಪ್ಲಾಟುಗಳು ಮಾರತಕ್ಕವಿವೆ ತೆಗೆದುಕೊಳ್ಳಬಯಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಮುಲಗುಂದರಾವ ಧಾರವಾಡ
ವಕೀಲರು ಬಾಗಲಕೋಟೆ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಕ್ಕೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶೇಷರಾಮಾಚಾರ್ಯ ಕೊರ್ತಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥-मनु.

ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶುಕ್ರವಾರ ಮಿತಿ ಪುಷ್ಯ ಬಹುಳ ೧೩ ಶಕೆ ೧೮೫೨ ತಾ॥ ೧೬—೧—೩೧ [ಸಂಚಿಕೆ ೧೬೬

ಕ್ಯಾಪ್ಟನ್ನರ ಹೆಂಡತಿಗೆ ಕತ್ತಿಯಿಂದ ಹೊಡೆದನು.

ಲಾಹೋರ ಜಿಲ್ಲೆಯ ವಲತೋಹದ ನಿವಾಸಿಯಾಗ ಭಜ್ಜನಸಿಂಗ ಎಂಬ ಸರದಾರನು, ತಾ| ೧೩ನೆ ದಿವಸ ಸಂಜೆಗೆ ಮೊಗಲಪುರದಲ್ಲಿ ಕ್ಯಾಪ್ಟನ ಕರ್ಟಿಸರ ಮನೆಯಲ್ಲಿ ನುಗ್ಗಿ ಹೋಗಿ, ಅವರ ಹೆಂಡತಿಯನ್ನು ಮತ್ತು ಹೆಣ್ಣುಮಕ್ಕಳನ್ನು ಕತ್ತಿಯಿಂದ ಹೊಡೆದು ಗಾಯಪಡಿಸಿದನು. ಮಿಸೆಸ್ ಕರ್ಟಿಸರು ಅಂದೇ ಸಂಜೆಯಲ್ಲಿ ಆಸ್ಪತ್ರಿಯಲ್ಲಿ ಮರಣ ಹೊಂದಿದರು.- ಅಪರಾಧಿಯು ಆಗಿಂದಾಗ್ಗೆ ಸೆರೆಹಿಡಿಯಲ್ಪಟ್ಟನು.

ಪೋಲೀಸರ ಮುಂದೆ ಅವನು ಕೆಳಗಿನಂತೆ ಜವಾಬು ಕೊಟ್ಟಿರುವನಾಗಿ ತಿಳಿಯುತ್ತದೆ

ಒಬ್ಬ ಬ್ರಿಟಿಶ ಅಧಿಕಾರಿಯನ್ನು ಕೊಲ್ಲುವ ಉದ್ದೇಶದಿಂದ ಹೋದ ವರ್ಷ ಪಂಜಾಬ ರೆಜಿಮೆಂಟದ ಬ್ಯಾಟಲಿಯನ್ನದಲ್ಲಿ ಸೇರಿದೆ. ನನ್ನ ಉದ್ದೇಶವು ಸಫಲವಾಗಲಿಲ್ಲ ಅಲ್ಲಿಂದ ಹೊರಬಿದ್ದು ಬಂದ ಮೇಲೆ ಕಾಂಗ್ರೆಸ್ ಚಳವಳಿಯಲ್ಲಿ ತೊಡಗಿಕೊಂಡೆ. ಚಳವಳಿಯ ಮೂಲಕವಾಗಿ ನನಗೆ ಆರು ತಿಂಗಳ ಶಿಕ್ಷೆಯಾಯಿತು. ಆ ಶಿಕ್ಷೆಯನ್ನು ಅನುಭವಿಸಿ, ಮೂರು ತಿಂಗಳದ ಹಿಂದೆ ಬಿಡುಗಡೆ ಹೊಂದಿ ಬಂದೆ. ಅಂದಿನಿಂದ ಬ್ರಿಟಿಶ ಅಧಿಕಾರಿಯನ್ನು ಕೊಲ್ಲುವ ಯೋಚನೆಯಲ್ಲಿಯೇ ನಾನು ತೊಡಗಿಕೊಂಡೆ ನನ್ನ ಹಳ್ಳಿಯಲ್ಲಿ ಇನ್ನೂ ಎಷ್ಟೋ ಜನರು ಬ್ರಿಟಿಶ ಅಧಿಕಾರಿಗಳನ್ನು ಕೊಲ್ಲುವ ವಿಚಾರದಲ್ಲಿರುವರು.

ಅಸೆಂಬ್ಲಿಯಲ್ಲಿ ಮುದ್ರಣಾಲಯದ ಕಾಯದೆ.

(ತಂತಿಯ ವಾರ್ತೆ ತಾ| ೧೫)

ಪ್ರೆಸ್ ಹಾಗು ಅನಲಾಫುಲ್ ಇನಸ್ಟಿಗೇಶನ್ನಗಳಿಗೆ ಸಂಬಂಧಿಸಲ್ಪಟ್ಟ ಮಸೂದೆಗಳು ಇಪತ್ತಿನ ದಿವಸ ಅಸೆಂಬ್ಲಿಯಲ್ಲಿ ಮಂಡಿಸಲ್ಪಡಕಕ್ಕವಿವೆ ಮುದ್ರಣಾಲಯಗಳಿಗೆ ಸಂಬಂಧಿಸಿದ್ದನ್ನು ಕೇವಲ ಒಂದೇ ವರ್ಷದವರೆಗೆ ಬಳಕೆಯಲ್ಲಿ ಇಡದೇ ಆಗಿ ಆ ಮಸೂದೆಯಲ್ಲಿ ಕಾಣಿಸಲ್ಪಟ್ಟಿದೆ.

(ತಂತಿಯ ವಾರ್ತೆ)

ಕಾಂಗ್ರೆಸ್ ಕಾರ್ಯಕ್ರಮಕ್ಕೆ ಅಡ್ಡಿ.

ಮುಂಬಯಿ ಸತ್ಯಾಗ್ರಹ ಯುದ್ಧ ಮಂಡಳದವರು ತಾ| ೧೬ ನೆಯ ದಿವಸ ಹರತಾಳವನ್ನು ಪಾಲಿಸಬೇಕಾಗಿ ನಾಗರಿಕರಿಗೆ ವಿನಂತಿ ಮಾಡಿಕೊಂಡಿದ್ದರಿಂದ ಅಧಿಕಾರಿಗಳು ಒಂದು ಪ್ರಕಟನೆ ಹೊರಡಿಸಿ ಅಂದಿನ ಕಾರ್ಯಕ್ರಮಗಳು ನಡೆಯದಂತೆ ಈಗಿನಿಂದಲೆ ವ್ಯವಸ್ಥೆ ಮಾಡತೊಡಗಿದ್ದಾರೆ. ಕಾಯದೆಗೆ ವಿರುದ್ಧವಾದ ಸಂಸ್ಥೆಗಳ ಪರವಾಗಿ ಜರಗುವ ಮೆರವಣಿಗೆ, ಸಭೆ ಮೊದಲಾದವುಗಳನ್ನು ಚದುರಿಸಲು ಪೋಲೀಸರಿಗೆ ಆಜ್ಞೆ ವಿಧಿಸಿದ್ದಾರೆ.

ಯರೋಡಾ ಜೇಲಿನಿಂದ ಕೈದಿಯು ಓಡಿ ಹೋದನು.

ಮೂರು ವರ್ಷದ ಶಿಕ್ಷೆಗೆ ಗುರಿಯಾಗಿ ಯರೋಡಾ ಜೇಲಿನಲ್ಲಿ ತನ್ನ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಒಬ್ಬ ಕ್ರಿಶ್ಚಿಯನ್ ಕೈದಿಯು, ತಾ|| ೧೩ನೆಯ ದಿವಸ ಹೊರಗೆ ಕೆಲಸ ಮಾಡುತ್ತಿದ್ದಾಗ, ಕಾವಲುಗಾರರ ಕಣ್ಣಿಗೆ ಮಂಗು ಹಚ್ಚಿ, ಓಡಿಹೋಗಿದ್ದಾನೆ. ಜೇಲಿನ ಅಧಿಕಾರಿಗಳು ಪಟ್ಟಣ ಹಾಗು ಸ್ಟೇಶನದಲ್ಲಿ ಅವನ ಬಗ್ಗೆ ಶೋಧನಡೆಸಿದ್ದಾರೆ.

ಬಂಡೀಗಾಲಿಯ ಪರಿಷತ್ತಿನ ಪ್ರಹಸನ

ಆಗ್ರಾದಲ್ಲಿ ಕೆಲವು ವಿದ್ಯಾರ್ಥಿಗಳು ಸ್ವಲ್ಪ ದಿನಗಳ ಹಿಂದೆ ಬಂಡೀಗಾಲಿಯ ಪರಿಷತ್ತಿನ ಪ್ರಹಸನ ಮಾಡಿದ್ದರು. ಆ ಪ್ರಹಸನದಲ್ಲಿ ಬಿಹಾರಿಲಾಲ ಎಂಬ ವಿದ್ಯಾರ್ಥಿಯು, ಜಾರ್ಜ ಬಾದಶಹರ ಪಾತ್ರವನ್ನು ವಹಿಸಿದ್ದನು. ಆಗ ಸರಕಾರದ ವಿಷಯಕ್ಕೆ ಅಪ್ರೀತಿಯನ್ನು ಹುಟ್ಟಿಸುವ ಹಾಗೆ ಭಾಷಣ ಮಾಡಿದನೆಂಬ ದೋಷ ಹೊರಿಸಿ, ಅಧಿಕಾರಿಗಳು ಈಗ ಅವನನ್ನು ವಿಚಾರಣೆಗೆ ಗುರಿಮಾಡಿದ್ದಾರೆ.

ಬಂಡಿಗಾಲಿಯ ಪರಿಷತ್ತು.

ಸಂರಕ್ಷಣೆ ಉಪಮಂಡಳದ ಅಧಿವೇಶನ ದಲ್ಲಿ ಅದರ ಅಧ್ಯಕ್ಷರಾದ ಮಿ ಥಾಮಸರವರು ಕೆಳಗಿನ ಮಸೂದೆಗಳನ್ನು ಸಭೆಯ ಮುಂದೆ ಮಂಡಿಸಿದರು.

೧ ಭರತಖಂಡವು ರಾಜಕೀಯ ವಿಷಯ ದಲ್ಲಿ ಪ್ರಗತಿಯನ್ನು ಹೊಂದಹತ್ತಿದ ಹಾಗೆ, ಸಂರಕ್ಷಣೆಗೆ ಸಂಬಂಧಿಸಿದ ಬಹಳ ಎಲ್ಲ ಅಧಿ ಕಾರಗಳನ್ನು ಭಾರತೀಯರಿಗೇನೆ ಬಿಟ್ಟುಕೊಡ ಬೇಕು, ಬ್ರಿಟಿಶರು ಅದರಲ್ಲಿ ಕೈ ಹಾಕತಕ್ಕದ್ದಲ್ಲ

೨ ಈ ತತ್ವವನ್ನು ಬೇಗನೆ ಬಳಕೆಯಲ್ಲಿ ತರುವದಕ್ಕಾಗಿ ಹಿಂದುಸ್ಥಾನದ ಸೈನ್ಯಖಾತೆ ಯಲ್ಲಿ ಹಿಂದೀಕರಣವನ್ನು ಪ್ರಾರಂಭಿಸಬೇಕು. ಸೈನಿಕರಿಗೆ ಶಿಕ್ಷಣವನ್ನು ಕೊಡುವ ಉದ್ದೇಶ ದಿಂದ ಹಿಂದುಸ್ಥಾನದಲ್ಲಿ ಬೇಗನೆ ಒಂದು ಕಾಲೇಜು ಸ್ಥಾಪಿಸಬೇಕು. ಈ ಕಾಲೇಜನ್ನು ಸ್ಥಾಪಿಸುವ ವಿಷಯವಾಗಿ ವಿಚಾರಮಾಡಲು, ಬ್ರಿಟಿಶರು, ಹಿಂದೀಯರು ಹಾಗು ಸಂಸ್ಥಾನದ ಪ್ರತಿನಿಧಿಗಳು ಇವರದೊಂದು ಮಂಡಳವನ್ನು ನಿಯಮಿಸಲು ಹಿಂದುಸ್ಥಾನ ಸರಕಾರಕ್ಕೆ ಕೇಳಿ ಕೊಳ್ಳಬೇಕು

೩ ಹಿಂದುಸ್ಥಾನದಲ್ಲಿಯ ಬ್ರಿಟಿಶ ಸೈನ್ಯ ವನ್ನು ಅಗದಿ ಕಡಿಮೆ ಮಾಡಬೇಕಾಗಿ ಅನೇಕ ಭಾರತೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದ ಬಹು ಮಹತ್ವದ ವಿಷಯವಾಗಿದೆಯೆಂದು ಈ ಮಂಡಳಕ್ಕೆ ತೋರುತ್ತಿರುವದರಿಂದ, ಆ ಬಗ್ಗೆ ವಿಚಾರ ಮಾಡಲು ತಜ್ಞರದೊಂದು ಮಂಡಳವನ್ನು ನಿಯಮಿಸಬೇಕಾಗಿ ಈ ಮಂಡ ಳವು ಅಭಿಪ್ರಾಯ ಪಡುತ್ತದೆ.

ಸಂಯುಕ್ತ ರಾಜ್ಯಘಟನೆಯ ಉಪಮಂಡ ಳದ ಅಧ್ಯಕ್ಷರಾದ ಲಾರ್ಡ ಸ್ಯಾಂಕಿಯವರು ಉಪಮಂಡಳದಲ್ಲಿ ನಡೆದ ಕಾರ್ಯಕ್ರಮಗಳ ಪತ್ರ್ಯಾವರದಿಯನ್ನು ಉಪಮಂಡಳದ ಸಭೆ ಯಲ್ಲಿ ಓದಿ ತೋರಿಸಿದರು.

ಅಲ್ಪಸಂಖ್ಯಾಕರು ಹಾಗು ಮುಸಲ್ಮಾ ನರು ಇವರ ಹಕ್ಕು ಬಾಧ್ಯತೆಗಳ ಸಂರಕ್ಷಣೆಯ ಸಂಬಂಧವಾಗಿ ಯೋಗ್ಯವಾದ ವಿಚಾರಣುಗ ಳನ್ನು ಮಾಡದಲೆ ಪರಿಷತ್ತಿನವರು ಹಿಂದುಸ್ಥಾ ನದ ರಾಜ್ಯಪದ್ಧತಿಯ ವಿಷಯವಾಗಿ ಪ್ರಕಟನೆ ಹೊರಡಿಸಿದಲ್ಲಿ, ಪರಿಷತ್ತಿನಿಂದ ಎದ್ದು ಹೋಗ ಬೇಕೆಂಬುದಾಗಿ ಮುಸಲ್ಮಾನ ಪ್ರತಿನಿಧಿಗಳು ತಮ್ಮ ಸಭೆಯಲ್ಲಿ ನಿರ್ಧರಿಸಿಕೊಂಡಿದ್ದಾರೆ

ಶ್ರೀ ಹಳ್ಳಿಕೇರಿಯವರ

ಬಾಯಿಗೆ ಬೀಗ ಬಿತ್ತು

ಹೊಸರಿತ್ತಿಯ ಕಾಂಗ್ರೆಸ್ ಕಾರ್ಯ ಕರ್ತರಾದ ಶ್ರೀ ಗುದ್ದೆಪ್ಪ ಹಳ್ಳಿಕೇರಿಯವರ ಮೇಲೆ ೧೪೪ ನೆಯ ಕಲಮಿನನ್ವಯ ನೋಟೀ ಸು ಹೊರಡಿಸಿ, ಎರಡು ತಿಂಗಳ ವರೆಗೆ ಧಾರ ವಾಡ ಜಿಲ್ಹೆಯಲ್ಲಿ ಭಾಷಣ ಮಾಡಕೂಡದಾಗಿ ಅಧಿಕಾರಿಗಳು ಅವರಿಗೆ ಅಪ್ಪಣೆ ವಿಧಿಸಿದ್ದಾರೆ.

ಕರ್ನಾಟಕದಲ್ಲಿ

ಕರನಿರಾಕರಣೆಯ ಚಳವಳಿ

ಕಾರವಾರ ಜಿಲ್ಹೆಯ ಸಿರಸಿ ತಾಲೂಕ ದಲ್ಲಿ ಕರನಿರಾಕರಣೆಯ ಚಳವಳಿಯು ಬೇಗನೆ ಪ್ರಾರಂಭವಾಗತಕ್ಕದ್ದಿದೆ. ಅಧಿಕಾರಿಗಳು ಪ್ರತಿ ವರ್ಷವೂ ಫೆಬ್ರವರಿ ೧೦ ನೆಯ ತಾರೀಖಿನ ಸುಮಾರಕ್ಕೆ ಹಪ್ತೆ ಎತ್ತುವರು. ಸಿದ್ದಾಪೂರ ತಾಲೂಕದಲ್ಲಿಯ ಕೆಲವು ಪ್ರಮುಖ ಜನರ ಮೇಲೆ ಅಧಿಕಾರಿಗಳು ಅಪ್ಪಣೆ ಹೊರಡಿಸಿ ತೆರಿ ಗೆಯನ್ನು ವಿಲ್ಲಿಸುವದಿಲ್ಲವಾಗಿ ಹೊಣೆ ಕೊಡಲು ಅವರಿಗೆ ಕೇಳಿಕೊಂಡಿದ್ದರಿಂದ, ಅವರು ಹಾಗೆ ಹೊಣೆ ಕೊಡಲು ನಿರಾಕರಿಸಿದ್ದಾರೆ. ಅಧಿಕಾರಿ ಗಳು ಅವರ ಕೆಲವು ಆಸ್ತಿಯನ್ನು ಜಪ್ತ ಮಾಡಿದ್ದಾರೆ.

ಸಿದ್ದಾಪುರದಲ್ಲಿ

ಸಕ್ಕರೆಯ ವ್ಯಾಪಾರವು ನಿಂತಿತು

ಸ್ವದೇಶಿಯಾವುದು ಹಾಗು ಪರದೇಶಿ ಯಾವುದು ಎಂಬುದನ್ನು ಕಂಡು ಹಿಡಿಯು ವದು ದುಶ್ಶಕ್ಯವಾಗಿದ್ದರಿಂದ ಸಕ್ಕರೆಗೆ ಸಂಪೂ ರ್ಣವಾಗಿ ಬಹಿಷ್ಕಾರವನ್ನು ಹಾಕಬೇಕೆಂಬು ದಾಗಿಯೂ ಇದಕ್ಕೆ ತಪ್ಪಿ ನಡೆದವರು ೫೦ ರೂ. ದಂಡ ಕೊಡಬೇಕಾಗಿಯೂ ಸಿದ್ದಾಪುರದ ವ್ಯಾಪಾರಿಗಳೆಲ್ಲರೂ ನಿರ್ಧರಿಸಿಕೊಂಡಿದ್ದಾರೆ.

ಸಿದ್ದಾಪೂರ ತಾಲೂಕದಲ್ಲಿ

ಗೌಡರಿಗೆ ಬಹಿಷ್ಕಾರ

ಸಿದ್ದಾಪೂರ ತಾಲೂಕದ ತಾರೇಸರ, ಕೋರ್ಲಕೈ ಹೆಗ್ಗೆಕೊಪ್ಪ, ತಿರಳಗಿ ಮೊದಲಾದ ಗ್ರಾಮಗಳ ಗೌಡರ ಮೇಲೆ ಅಲ್ಲಲ್ಲಿಯ ಜನರು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಗೌಡರು ತಮ್ಮ ತಮ್ಮ ಉದ್ಯೋಗಗಳಿಗೆ ರಾಜೀನಾಮೆ ಕೊಡದೆ ಯಿದ್ದದ್ದೇ ಇದಕ್ಕೆ ಕಾರಣವಾಗಿದೆ. ಹೆಗ್ಗೆ ಕೊಪ್ಪದ ಗೌಡರ ಚಿಗಪ್ಪನವರು ತೀರಿಕೊಂ ಡಾಗ, ಅವರಿಗೆ ಹುಗಿಯಲಿಕ್ಕೆ ಕುಣಿ ತೋಡಲು ಹೊಲೆಯರು ಸಿಗಲಿಲ್ಲ

ಸಿದ್ದಾಪುರ ತಾಲೂಕದ ಓರ್ವ ಪಟೀಲರು ತಮ್ಮ ಆಡಿಕೆಯ ಚೀಲಗಳನ್ನು ಕುಮಟಾ ಪೇಟೆಗೆ ಮಾರಾಟಕ್ಕೆ ಕಳಿಸಿದ್ದರು. ಕುಮಟೆ ಯಲ್ಲಿಯ ಯಾವ ವ್ಯಾಪಾರಸ್ಥರೂ ಅವುಗಳನ್ನು ಕೊಂಡುಕೊಳ್ಳಲಿಲ್ಲ ಅನೇಕ ದಿನಗಳ ವರೆಗೆ ಅಲ್ಲಿ ಹಾಗೆಯೇ ಬಿದ್ದವು. ಅದನ್ನು ಕಂಡು ಕೊಂಡು ಆ ಪಟೀಲರು ಅವುಗಳನ್ನು ಬೇರೆ ಕಡೆಗೆ ಕಳಿಸಿದರು. ಅಲ್ಲಿಯಾದರೂ ಅವುಗಳನ್ನು ಯಾರೂ ಬೇಡಲಿಲ್ಲ ಅವು ಮತ್ತೆ ಕುಮಟೆಗೆ ತರಲ್ಪಟ್ಟವು. ಅಲ್ಲಿ ಚಕ್ಕಡಿಯವರು ಸ್ವಯಂಸ್ಸೇ ವಕರ ಮಾತಿಗೆ ಲಕ್ಷ್ಯಕೊಟ್ಟು, ಅವನ್ನು ಹೇರಿ ಕೊಂಡು ಹೋಗಲು ಒಲ್ಲೆಂದು ಹೇಳಿ, ಅವನ್ನು ಹಾದಿಯಲ್ಲಿಯೇ ಒಗೆದು ಬಿಟ್ಟರು. ಪಟೇಲರು ಪೋಲೀಸರು ಹಾಗು ಮಾಮಲೇದಾರರಲ್ಲಿಗೆ ಹೋಗಿ ನಡೆದ ಸಂಗತಿಯನ್ನೆಲ್ಲ ಅವರ ಕಿವಿಯ ಮೇಲೆ ಹಾಕಿದರು. ಅವರಾದರೂ ಅದನ್ನು ಮನಸಿನ ಮೇಲೆ ತೆಗೆದುಕೊಳ್ಳಲಿಲ್ಲ. ಗೌಡರು ನಿರಾಶರಾಗಿ ತಿರುಗಿ ಬಂದರು. ಚೀಲಗಳು ಇನ್ನೂ ಹಾದಿಯಲ್ಲಿ ಹಾಗೆಯೆ ಬಿದ್ದುಕೊಂಡಿವೆ.

ಅಂಕೋಲೆಯಲ್ಲಿ

ಶ್ರೀ ನಾಡಕರ್ಣಿಕರರಿಗೆ ಶಿಕ್ಷೆ

ಜನಗಣತಿಗೆ ಬಹಿಷ್ಕಾರ ಹಾಕಲು ಹೇಳಿದ ಸಂಬಂಧವಾಗಿ ಅಂಕೋಲೆಯ ಶ್ರೀ ವಿಶ್ವನಾಥ ನಾಡಕರ್ಣಿಯರಿಗೆ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೫೦ ರು. ದಂಡ, ಇಲ್ಲವೆ ೧ ತಿಂಗಳ ಸೆರೆಮನೆ ಹೀಗೆ ಶಿಕ್ಷೆಯಾ ಗಿದೆ. ಆದವಿಯ ಕಾಯದೆಭಂಗದ ಬಗ್ಗೆ ಇವರು ಈಗೊಮ್ಮೆ ಸೆರೆಮನೆಯಾತ್ರೆ ಮಾಡಿ ಬಂದಿದ್ದಾರೆ

ಗುಳೆದಗುಡ್ಡದಲ್ಲಿ

ಪ್ರಚಂಡ ಹರತಾಳ.

(ಸ್ವಂತ ಸುದ್ದಿಗಾರರಿಂದ)

ಶ್ರೀ ಮಲ್ಲಪ್ಪಧನಶೆಟ್ಟಿ, ಸಾರ್ಡಾ,ಸಿಂದೆ, ಹಾಗು ಕುರ್ಬಾನ ಹುಸೇನ್‌ರನ್ನು ಗಲ್ಲಿಗೇರಿಸಿ ದ್ದಕ್ಕಾಗಿಯೂ ಮತ್ತು ಲಾಲಾಜೀ ಮಹಾ ಶಯರ ಅಲ್ಲಿಯವರು ಮರಣಹೊಂದಿದ್ದಕ್ಕಾ ಗಿಯೂ ತಾ| ೧೩ ನೆಯ ದಿವಸ ಹರತಾಳವನ್ನು ಆಚರಿಸಲಾಯಿತು. ಕಿರಾಣಿ, ಬಟ್ಟೆ, ಸರಾಫ, ಚಹಾ ಮೊದಲಾದ ಸಣ್ಣದೊಡ್ಡ ಅಂಗಡಿಗಳೆ ಲ್ಲವೂ ಮುಚ್ಚಲ್ಪಟ್ಟಿದ್ದವು. ಹಿಂದೂ ಮುಸಲ್ಮಾ ನರು ತಮ್ಮತಮ್ಮ ಧರ್ಮದ ಪ್ರಕಾರದುಃಖ ವ್ಯಕ್ತಗೊಳಿಸಿದರು. ಶ್ರೀ ಸಾಬಣ್ಣ ಸಿಂಗದ, ಕೊಟ್ಟಣ್ಣ, ಶಿವಪ್ಪ ಸಿಂಗದ, ದೇವಣಭಳ್ಳಿ ಜೋಶಿ ಮೊದಲಾದವರು ಉಪವಾಸ ಮಾಡಿ ದರು.

ಜನಗಣತಿಯ ಬಹಿಷ್ಕಾರವು ಇಲ್ಲಿ ಜೋ ರಿನಿಂದ ನಡೆದಿದ್ದು, ಈಗಾಗಲೆ ೨೦೦೦ ಮನೆ ಗಳ ಮೇಲಿನ ಅಂಕಿಗಳು ಅಳಿಸಿಹೋಗಿವೆ.

ಡೆ. ಕಲೆಕ್ಟರರ ಡೇರೆಗೆ ಬಾಂಬು ಒಗೆದರು

...ತನ್ನು ಭಾಗದಲ್ಲಿ ಸಂಚಾರಕ್ಕೆ ಹೋಗಿದ್ದ ... ಡೆಪ್ಯುಟಿ ಕಲೆಕ್ಟರರಾದ ವಿ. ಕೇ. ...ವರು ಒಂದು ಕಡೆಗೆ ತಳವೂರಿದಾಗ, ... ಡೇರೆಯ ಮೇಲೆ ಯಾವನೋ ಒಬ್ಬನು ಬಾಂಬು ಒಗೆದನಾಗಿ ತಿಳಿದು ಬರುತ್ತದೆ. ಯಾರಿಗೂ ಅಪಾಯ ಸಂಭವಿಸಿರುವದಿಲ್ಲ ಈ ಬಗ್ಗೆ ಶೋಧ ಮಾಡಲು ಅಲ್ಲಿ ಬಾಂಬಿನ ಉಪಕರಣಗಳು ಸಿಕ್ಕವು.

ಕೋರ್ಟಿಗೆ ಬೆಂಕಿ ಹತ್ತಿತು.

ಸಂಯುಕ್ತ ಪ್ರಾಂತದ ತಿಪ್ಪೆರಾ ಎಂಬಲ್ಲಿಯ ಸಿವ್ಹಿಲ್ ಕೋರ್ಟ ಕಂಪೌಂಡದೊಳಗಿನ ಎರಡು ಬಂಗಲೆಗಳಿಗೆ ತಾ|| ೧೧ ನೆಯ ದಿವಸ ಒಮ್ಮಿಂದೊಮ್ಮೆ ಬೆಂಕಿ ಹತ್ತಿ, ಅವು ಸಂಪೂರ್ಣವಾಗಿ ಸುಟ್ಟು ಹೋದವು, ಅಲ್ಲಿ ಇದ್ದ ಜನಗಣತಿಯ ಕಾಗದ ಪತ್ರಗಳೆಲ್ಲವೂ ಸುಟ್ಟು ಬೂದಿಯಾದವು. ಪೋಲೀಸ ಅಧಿಕಾರಿಗಳು ಈ ಬಗ್ಗೆ ಕಾಂಗ್ರೆಸ್ ಸಂಸ್ಥೆಯನ್ನು ಝಡತಿ ಮಾಡಿದರು.

ಕಚೇರಿಯ ಕಾರಕೂನನ ಮೇಲೆ ಗುಂಡು ಹಾರಿಸಿದರು

ಢಾಕಾದ ಭೋವಾಲ ಕೋರ್ಟ ಆಫ್ ವಾರ್ಡ್ಸದ ಕಾರಕೂನರಾದ ಶ್ರೀ ಕಾಲಿಪಾದ ಬ್ಯಾನರ್ಜಿಯವರು ತಾ|| ೧೨ ನೆಯ ದಿವಸ ಸಾಬರ ಬಜಾರದಲ್ಲಿ ಸಿವ್ಹಿಲ್ ಕೋರ್ಟಿನ ಹತ್ತರ ಗುಂಡಿನಿಂದ ಹೊಡೆಯಲ್ಪಟ್ಟರು. ಅವರ ಕೈಗೆ ಅಪಾಯ ಸಂಭವಿಸಿತು.

ಇಂಪೀರಿಯಲ್ ಬ್ಯಾಂಕದೊಳಗಿಂದ ೬೦೦೦ ರೂಪಾಯಿಗಳನ್ನು ತೆಗೆದುಕೊಂಡು, ಭೋವಾಲ [illegible] ಸಂಬಂಧವಾಗಿ ಸರಕಾರಕ್ಕೆ ಸಲ್ಲತಕ್ಕ ಹಣವನ್ನು ಕೊಟ್ಟು ಬರಲು ಸಿವ್ಹಿಲ್ ಕೋರ್ಟಿಗೆ ಶ್ರೀ ಬ್ಯಾನರ್ಜಿಯವರು ಬಂದು ಹೋಗಿದ್ದರು. ಅಲ್ಲಿ ಹಣವನ್ನು ಇಟ್ಟು ತಿರುಗಿ ಬರುತ್ತಿರುವಾಗ ಸಾಬರ ಬಜಾರದಲ್ಲಿ ಯಾರೋ ಕೆಲವರು ಅವರ ಮೇಲೆ ಮೂರು ಸಾರೆ ಪಿಸ್ತೂಲ ಹಾರಿಸಿದರು. ಒಂದು ಗುಂಡು ಅವರಿಗೆ ತಗುಲಿ, ಅವರು ನೆಲದ ಮೇಲೆ ಬಿದ್ದುಬಿಟ್ಟರು. ಕೂಡಲೆ ಜನರು ಅಲ್ಲಿ ನೆರೆದು, ಅವರನ್ನು ಆಸ್ಪತ್ರೆಗೆ ಒಯ್ದರು. ಪೋಲೀಸರು ಅಪರಾಧಿಗಳ ಬಗ್ಗೆ ಶೋಧ ನಡಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಮೆರವಣಿಗೆಗೆ ಅಡ್ಡಿ.

(ಸ್ವಂತ ಸುದ್ದಿಗಾರರಿಂದ)

ನೇಕ್ಲಾಪುರದ ಮಲ್ಲಪ್ಪ ಧನಶೆಟ್ಟಿ ಮೊದಲಾದವರನ್ನು ಯರೋಡಾ ಜೇಲಿನಲ್ಲಿ ಗಲ್ಲಿಗೇರಿಸಿದ ಸುದ್ದಿಯನ್ನು ಕೇಳಿ ಹುಬ್ಬಳ್ಳಿಯಲ್ಲಿ ಸಂಪೂರ್ಣ ಹರತಾಳವು ಆಚರಿಸಲಾಯಿತು. ಶ್ರೀ ಪಾವಟೆ, ಬಿಳೇ ಅಂಗಡಿ, ಮರಾಠೆ, ಕೆಂಪಣ್ಣವರ ಮಹೇಂದ್ರಕರ ಮೊದಲಾದ ೮ ಜನ ಪ್ರಮುಖರು ವಿನಂತಿ ಪತ್ರ ಹೊರಡಿಸಿ, ಮೆರವಣಿಗೆ ಸಭೆ ಮೊದಲಾದವುಗಳನ್ನು ಜರುಗಿಸಿ, ನಿಷೇಧ ವ್ಯಕ್ತಪಡಿಸಬೇಕಾಗಿ ನಾಗರಿಕರಿಗೆ ಕೇಳಿಕೊಂಡಿದ್ದರು. ಅವರ ಮೇಲೆ ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನ ಪ್ರಕಾರ ನೋಟೀಸು ಹೊರಡಿಸಿದ್ದರು. ಅವರಲ್ಲಿ ಕೆಲವರು ತಮ್ಮ ಸಹಿಯನ್ನು ತಿರುಗಿ ತೆಗೆದುಕೊಂಡರು. ಮಧ್ಯಾಹ್ನದಲ್ಲಿ ಇಲ್ಲಿ ಕಾಂಗ್ರೆಸ್ ಕಮಿಟಿ ಇಲ್ಲವೆಂದೂ, ಮೆರವಣಿಗೆ ಸಭೆ ಮೊದಲಾದವುಗಳು ಆಗುವದಿಲ್ಲವೆಂದೂ ಸರಕಾರದ ಪರಿಯಿಂದ ಡಂಗುರ ಸಾರುವದರಲ್ಲಿ ಬಂದಿತ್ತು. ಕಾಂಗ್ರೆಸ್ಸಿನ ಸ್ವಯಂಸೇವಕನು ಸಭೆಯು ಆಗುವದೆಂದು ಡಂಗುರ ಸಾರಿದ್ದರಿಂದ ಪೋಲೀಸರು ಅವನನ್ನು ಬಂಧಿಸಿಟ್ಟು ಕೆಲಹೊತ್ತಿನ ಮೇಲೆ ಬಿಟ್ಟುಕೊಟ್ಟರು. ೩॥ ಗಂಟೆಯ ಸುಮಾರಕ್ಕೆ ಕಿಲ್ಲೆಯಲ್ಲಿಯ ಲೋಕಮಾನ್ಯ ಬೈಲಿನ ಸುತ್ತಲೂ ಪೋಲೀಸರು ಕಾವಲು ರಚಿಸಿಕೊಂಡು ನಿಂತಿದ್ದರು. ಮೆರವಣಿಗೆಯು ಬೇರೆ ಕಡೆಯಿಂದ ಹೊರಟು ಗಾಂಧಿ ಚೌಕಿಗೆ ಬಂದು ತಲುಪಿತು. ಅಲ್ಲಿ ಪೋಲೀಸರು ಅಡ್ಡಿ ಮಾಡಿದರು. ಮೆರವಣಿಗೆಯಲ್ಲಿ ಸೇರಿದವರು ಬೇರೆ ಬೇರೆ ಗುಂಪುಗಳನ್ನು ಮಾಡಿಕೊಂಡು, ಹಿಂದಿರುಗಿ, ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿಯೂ, ಗಾಂಧಿ ಚೌಕಿನಲ್ಲಿ ಹಾಯ್ದು ವಿಜಯವನ್ನು ಸಂಪಾದಿಸಿ ಸಭಾಸ್ಥಾನಕ್ಕೆ ತಲುಪಿದರು.

ಗುಳಕವ್ವನ ಬೈಲಿನಲ್ಲಿ ಶ್ರೀ ಪುರಾಣಿಕರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಗೋಖಲೆ, ಕೆಂಪಣ್ಣವರ, ಗೋಕಾಕೇರಿ, ಕರಿಗುದರಿ, ಪಾ, ರಾಭಕ್ಕ ಮುದವೀಡು ಮುಂತಾದವರ ಭಾಷಣಗಳಾಗಿ, ಪರಮೇಶ್ವರನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂಬ ಆಶಯದ ಠರಾವು ಪಾಸು ಮಾಡಲ್ಪಟ್ಟಿತು. ೧೫೦೦೦ ಜನಸಮುದಾಯವು ಸಭೆಯಲ್ಲಿ ಕೂಡಿತ್ತು.

ಕರ್ನಾಟಕ ಕಾಲೇಜವು ಹಾಳು ಸುರಿಯಿತು.

ಶ್ರೀ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ಧಾರವಾಡಕ್ಕೆ ತಿಳಿದ ಕೂಡಲೆ ಅಲ್ಲಿ ಸಂಪೂರ್ಣ ಹರತಾಳವಾಯಿತು. ಶಾಲೆ ಕಾಲೇಜುಗಳೆಲ್ಲವೂ ಬಂದಾದವು. ಪೋಲೀಸರು ಶಾಲೆ ಕಾಲೇಜಕ್ಕೆ ಹೋಗಿ ಮೆರವಣಿಗೆ ತೆಗೆಯಬೇಡಿರೆಂದು ವಿದ್ಯಾರ್ಥಿಗಳಿಗೆ ಅಡ್ಡಿ ಮಾಡಿದರು. ಶಾಲೆಯ ವಿದ್ಯಾರ್ಥಿಗಳು ಮೆರವಣಿಗೆಯಿಂದಲೆ ಗಾಂಧಿ ಚೌಕಿಗೆ ಹೊರಟು ಬಂದರು ಕರ್ನಾಟಕ ಕಾಲೇಜದ ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿ ಅಲ್ಲಿಯೇ ಕುಳಿತರು. ಪ್ರೊಫೆಸರ ಧೋಪೇಶ್ವರಕರರು ಊರೊಳಗೆ ಹೋಗಿ ಶ್ರೀ ದಿವಾಕರ ಹಾಗು ಕರಮರಕರರನ್ನು ಕರೆದುಕೊಂಡು ಬಂದರು. ವಿದ್ಯಾರ್ಥಿಗಳು ಬೇರೆ ಬೇರೆ ಗುಂಪುಗಳನ್ನು ಮಾಡಿಕೊಂಡು ಮೆರವಣಿಗೆಯಿಂದ ಗಾಂಧಿ ಚೌಕಿಗೆ ಹೋಗಿ ಬಂದರು ಅಲ್ಲಿ ರಾಷ್ಟ್ರಗೀತೆಯನ್ನು ಅಂದು ತಿರುಗಿ ಹೊರಟು ಹೋದರು.

ಸಾಯಂಕಾಲದಲ್ಲಿ ಹೆಣ್ಣುಮಕ್ಕಳು ಕರೀ ನಿಶಾನಿಯ ಮೆರವಣಿಗೆ ತೆಗೆದರು. ನಂತರದಲ್ಲಿ ಕಡಪಾ ಬೈಲಿನಲ್ಲಿ ಸಾರ್ವಜನಿಕ ಸಭೆಯಾಗಿ ದುಃಖಪ್ರದರ್ಶನ ಮಾಡಲಾಯಿತು.

ಮುಛಲಿಪಟ್ಟಣದಲ್ಲಿ ರಾಷ್ಟ್ರಧ್ವಜಕ್ಕೆ ಪ್ರತಿಬಂಧ

ಮಛಲಿಪಟ್ಟಣದಲ್ಲಿ ಮೂರು ತಿಂಗಳವರೆಗೆ ಯಾರೂ ರಾಷ್ಟ್ರಧ್ವಜಗಳನ್ನು ಹಚ್ಚಕೂಡದು ಮತ್ತು ಸಭೆಗಳನ್ನು ಜರುಗಿಸಕೂಡದೆಂಬುದಾಗಿ ಅಲ್ಲಿಯ ಅಧಿಕಾರಿಗಳು ೧೪೪ನೇಯ ಕಲಮಿನನ್ವಯ ಅಪ್ಪಣೆ ಹೊರಡಿಸಿದ್ದಾರೆ

ಶ್ರೀ ವಿಠ್ಠಲಭಾಯಿಯವರ ಪ್ರಕೃತಿ

ಶ್ರೀ ವಿಠ್ಠಲಭಾಯಿ ಪಟೇಲರು ತಾ|| ೧೩ ನೆಯ ದಿವಸ ಮುಂಬಯಿಯಲ್ಲಿ ಡಾ. ಜೆ. ಎಲ್. ದೇಸಾಯಿಯವರ "ಎಕ್ಸರೇ" ಥಿಯೇಟರಕ್ಕೆ ಕರೆದೊಯ್ಯಲ್ಪಟ್ಟು, ಅಲ್ಲಿ "ಎಕ್ಸರೇ" ಉಪಚಾರವನ್ನು ಹೊಂದಿದರು,

ಸಭೆಯಲ್ಲಿ ಕುರ್ಚಿಗಳನ್ನು ತೂರಾಡಿದರು

ಆಫ್ರಿಕಾಖಂಡದ ನೈರೋಬಿಯಲ್ಲಿ ಕೂಡಿದ ಪೂರ್ವ ಆಫ್ರಿಕಾ ಭಾರತೀಯರ ರಾಷ್ಟ್ರಸಭೆಯ ಅಧಿವೇಶನದಲ್ಲಿ ತಾ|| ೧೨ನೆಯ ದಿವಸ ಸೆಕ್ರೆಟರಿಯವರನ್ನು ಆರಿಸುವ ಕಾಲಕ್ಕೆ ಮತಭೇದವುಂಟಾದ್ದರಿಂದ, ಹಿಂದೂ-ಮುಸಲ್ಮಾನರಲ್ಲಿ ಹೊಡೆದಾಟಕ್ಕೆ ಪ್ರಾರಂಭವಾಯಿತು. ಕೆಲವರು ಕುರ್ಚಿಗಳನ್ನು ತೂರಾಡಿದರು. ಕೆಲವರು ಕಲ್ಲುಗಳನ್ನು ಒಗೆಯುತ್ತಿದ್ದರು. ಬಡಿಗೆಗಳಿಂದಲೂ ಹೊಡೆದಾಡಿದರು. ಪೋಲೀಸರು ಕೂಡಲೆ ಅಲ್ಲಿಗೆ ಬಂದು, ಶಾಂತತೆಯನ್ನುಂಟು ಮಾಡಿದರು. ಪರಿಷತ್ತು ಮುಂದೂಡಲ್ಪಟ್ಟಿತು. ಎಷ್ಟೋ ಜನರಿಗೆ ಅಪಾಯ ಸಂಭವಿಸಿದೆ.

ಆಚಾರ್ಯ ರಬಡೆಯವರಿಗೆ

೪ ತಿಂಗಳ ಕಠಿಣ ಶಿಕ್ಷೆ.

ರಾಣೆಯ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಆಚಾರ್ಯ ರಬಡೆಯವರಿಗೆ ಉಪ್ಪಿನ ಕಾಯದೆಭಂಗಕ್ಕೆ ಉತ್ತೇಜನ ಕೊಟ್ಟ ಸಂಬಂಧವಾಗಿ, ೪ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೫೦ ರೂ. ದಂಡ, ಇಲ್ಲವಾದರೆ ೧ ತಿಂಗಳ ಸಾದಾ ಶಿಕ್ಷೆಯಾಗಿದೆ.

ಪಂಜಾಬ ಸರಕಾರಕ್ಕೆ

೮೦ ಲಕ್ಷ ರುಪಾಯಿ ಕೊರತೆ ಬಿದ್ದವು

ಈ ಸಲದ ಅಂದಾಜ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಪಂಜಾಬ ಸರಕಾರದವರಿಗೆ ೮೦ ಲಕ್ಷ ರೂಪಾಯಿಗಳು ಕಡಿಮೆ ಬಿದ್ದದ್ದರಿಂದ, ಅವರು ಕೆಲವು ಅಧಿಕಾರಿಗಳ ಸಂಬಳವನ್ನು ೧೦೦ ಕ್ಕೆ ೫ರಂತೆ ಕಡಿಮೆ ಮಾಡುವವರಿದ್ದಾರೆಂದು ತಿಳಿದು ಬರುತ್ತದೆ.

ಕಾಲಿಕತ್ತದಲ್ಲಿ

ಸ್ತ್ರೀಯರಿಗೆ ಕೈದು

ತಾ|೧೩ನೆಯ ದಿವಸ ರಾಷ್ಟ್ರಧ್ವಜ ವಂದನೆಯ ಸಮಾರಂಭವನ್ನು ನೆರವೇರಿಸಿದ ಬಗ್ಗೆ ಕಾಲೀಕತ್ತದಲ್ಲಿ ಮಿಸೆಸ್ ಸ್ಯಾಮ್ಯುಯೆಲ್ ಆ ಂಗನಾ ಶ್ರೀಪತಿ ದೇವವತಿಅವ್ವಾ, ದೇವಕೀಅವ್ವಾ ಮೊದಲಾದ ಐದು ಜನ ಸ್ತ್ರೀಯರು ಕೈದು ಮಾಡಲ್ಪಟ್ಟಿದ್ದಾರೆ.

ಮುಂಬಯಿಯ

೨೧ನೆಯ ಯುದ್ಧಮಂಡಳ

ಮುಂಬಯಿಯ ೨೦ನೆಯ ಸತ್ಯಾಗ್ರಹ ಯುದ್ಧ ಮಂಡಳದ ಅಧಿಕಾರಿಗಳಿಗೆ ಜನಾಬ ತಿಲಕ ಪುರಸ್ಕಾರ ಚಳವಳಿಯ ಸಂಬಂಧವಾಗಿ ಶಿಕ್ಷೆಯಾದ್ದರಿಂದ, ಕೆಳಗಿನ ಸದ್ಗೃಹಸ್ಥರು ೨೧ನೆಯ ಯುದ್ಧಮಂಡಳದ ಅಧಿಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ.

೧ ಡಿ. ಎಸ್. ಜಾಂಬೇಕರ, ಅಧ್ಯಕ್ಷರು ೨ ಜಮನಾಲಾಲ ರಘುನಾಥದಾಸ್, ಉಪಾಧ್ಯಕ್ಷರು. ೩ ಅಬ್ದುಲ್ ರಹಿಮಾನ ಅಬ್ದುಲ್ ಸತ್ತಾರ ೪ ಪರಮಾನಂದ ಕಂಥಾರಿ. ಕಾರ್ಯದರ್ಶಿಗಳು. ೫ ವಿಠ್ಠಲದಾಸ ಜವ್ಹೇರಿ ಕಾಂಗ್ರೆಸ್ ಪತ್ರಿಕೆಯ ಸಂಪಾದಕರು.

ಬಿಹಾರದಲ್ಲಿ

೧೫೦ ಮನೆಗಳ ಝಡತಿ

ಧರವಾಡಿಯ ಭಾಗದಲ್ಲಿ ನಡೆದ ಲೂಟಿಯ ಸಂಬಂಧವಾಗಿ ಬಿಹಾರ ಪ್ರಾಂತದಲ್ಲಿಯ ಪೋಲೀಸ ಅಧಿಕಾರಿಗಳು ಬಿಹಿಜ ಅಸೋಸಿಯೇಶನದ ಸಿಂಗಾರ, ೧೫೦ ಸ್ಥಳಗಳನ್ನು ಝಡತಿಮಾಡಿ, ಕೆಲವು ಕಾಗದ ಪತ್ರಗಳನ್ನು ತಗದುಕೊಂಡು ಹೋದರು.

ಬುಕ್ಕ ಬಾಯಿಂಡಿಂಗದ

ಹೊಸ ವ್ಯವಸ್ಥೆ

ನಮ್ಮಲ್ಲಿ ಗಿರಾಕಿಗಳ ಹಿತ ಲಕ್ಷ್ಯವಾಗಿ ಬಾಯಿಂಡಿಂಗದ ಕೆಲಸವು ಸೋವೀದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸಗಳನ್ನು ಕಾಗದಪತ್ರ ಇಡುವ ಮತ್ತು ರೊಕ್ಕ ಹಾಕುವ ಪಾಕೀಟಗಳನ್ನು ಕೂಗಲಿನಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವೆವು. ಪೋರ್ಟಫೋಲಿಯೋ ಮತ್ತು ಫಾಯಿಲದ ಕಟ್ಟುಗಳನ್ನು ಮಾರಾಟಕ್ಕೆ ತಯಾರಿಸಿ ಇಟ್ಟಿದ್ದೇವೆ ವ್ಯಾಪಾರಸ್ಥರಿಗೆ ಕಡಿಮೆ ದರದಿಂದ ಸಪ್ಲಾಯ ಮಾಡುವವು. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉಡಪ್ಪೀಕರ
ಪ್ರೊಪ್ರಾಯಿಟರ ದಿನ್ಯೂ ಬುಕ್ಕ ಬಾಯಿಂಡಿಂಗ
ವರ್ಕ್ಸ ಹೊಸಬಾಜಾರ ಹವಾಲದಾರ ಬಿಲ್ಡಿಂಗ
ವಿಜಾಪೂರ.

ವಾಚ, ಟಾಯಂಪೀಸ

ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚ್ಚು ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಸೋವೀದರದಿಂದ ಸರಿಯಾದ ವೇಳೆಗೆ ದುರಸ್ತ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಂಪೀಸ ಗ್ರಾಮೋಫೋನುಗಳನ್ನು ಮಾರಿ ಕೊಡುವೆವು ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ. ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆಸಿಥ್, ಓಮೆಗ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣಿಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಪ್ಲಾಟುಗಳು ಮಾರತಕ್ಕವವ.

ಟ್ರಾವ್ಹೆಲರ್ಸ ಬಂಗಲೆಯ ಉತ್ತರದಿಕ್ಕಿನ ೨೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವವೆ ತಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಇಲಗುಂದಕರ ರಾವ ಧಾರವಾಡ
ವಕೀಲರು ಬಾಗಲಕೋಟ

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟ

ಈ ಪತ್ರಿಕೆಯು ವೆಂಕಟೇಶ ಶಂಕರಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BAGALKOT. BI-WEEKLY

ಸಂಪಾದಕರು:– ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ– ಶನಿವಾರ ಮಿತಿ ಪುಷ್ಯ ಬಹುಳ ೧೪ ಶಕೆ ೧೮೫೨ ತಾ॥ ೧೭—೧—೩೧ [ಸಂಚಿಕೆ ೧೬೭

ಬಾಗಲಕೋಟೆಯಲ್ಲಿ "ಸ್ವದೇಶಿ ಸ್ಟೋರ್ಸ" ಉದ್ಘಾಟನ ಸಮಾರಂಭ.

ಸೋಮವಾರ ಮಾಘ ಶುದ್ಧ ೧ ತಾರೀಖು ೧೯—೧—೧೯೩೧ ನೇ ದಿವಸ ಮುಂಜಾನೆ ೧೦॥ ಗಂಟೆಗೆ

ಪೋಸ್ಟ ಆಫೀಸದ ಹತ್ತರಿರುವ ಅಂಗಡಿಯಲ್ಲಿ

ದೇಶದಲ್ಲೆಲ್ಲ ಈಗ ಸ್ವದೇಶಿ ಮತ್ತು ಬಹಿಷ್ಕಾರದ ಗಾಳಿಯು ಬೀಸಹತ್ತಿರುವದರಿಂದ ಜನರ ಒಲವು ಹೆಚ್ಚಾಗಿ ಸ್ವದೇಶಿ ಒಡವೆಗಳ ಕಡೆಗೆ ಹೊರಳಹತ್ತಿದೆ. ಆದರೆ ನಿಜವಾದ ಸ್ವದೇಶಿ ವಸ್ತುಗಳು ಯಾವವೆಂಬದನ್ನು ತಿಳಿಯು ವ ಸಾಮಾನ್ಯಮನುಷ್ಯರಿಗೆ ಮೊದಲೇ ದುಸ್ತರವಾದ ಮಾತು. ಇದಲ್ಲದೆ ತಮ್ಮ ಬೇಳೆಬೆಯಿಸಿಕೊಳ್ಳಲು ಇದೇ ಸಮಯವೆಂದು ಕೆಲವರ್ತಕರು ವಿದೇಶಿ ಸಾಮಾನುಗಳಿಗೆ 'ಸ್ವದೇಶಿಯ'ವೆಂದು ಸುಳ್ಳು ಸಟ್ಟು ಹೇಳಿ ಗಿರಾಕಿಗಳನ್ನು ತಕ್ಕಿಸ ಹತ್ತಿರುವರೆಂದು ಇದಕ್ಕೆ ಜೋಡಾಗಿದೆ. ವರ್ತಕರ ಈ ಘಾತಕುಕ ವೃತ್ತಿಗೆ ತಡೆಹಾಕಬೇಕೆಂದೂ ಮತ್ತು ಗಿರಾಕಿಗಳಿಗೆ ವಿಶ್ವಸನೀಯವಾದ ಸ್ವದೇಶಿ ಒಡವೆಗಳು ಸುಲಭವಾಗಿ ದೊರೆಯಬೇಕೆಂದೂ ಈಗ ಅಲ್ಲಲ್ಲಿಗೆ ಕೇವಲ ಸ್ವದೇಶಿ ವಸ್ತುಗಳನ್ನಷ್ಟೆ ಮಾರುವಂಥ ಅಂಗಡಿಗಳು ಹೊರಡಹತ್ತಿವೆ. ದೇಶಪ್ರೇಮದಿಂದ ಪ್ರೇರಿತರಾದವರೇ ಎಲೆಲ್ಲಿಯೂ ಈ ಉದ್ಯಮದಲ್ಲಿ ಮುಂದೆ ಬಂದಿದ್ದರಿಂದ ಆ ಅಂಗಡಿಗಳಿಗೆ ಜನರ ಮನ್ನಣೆಯೂ ಹೆಚ್ಚಿದೆ. ಅಂಥದೆ ಒಂದು ಅಂಗಡಿಯನ್ನು ಬಾಗಲಕೋಟೆಯಲ್ಲಿಯೂ ಹೊರಡಿಸಬೇಕೆಂದು ಯೋಚಿಸಿದ್ದಾಗಿದೆ. ಅದು ಊರ ಜನರ ವಿಶ್ವಾಸಕ್ಕೆ ಪಾತ್ರವಾಗಬೇಕಾದರೆ ಅದು ಒಬ್ಬಿಬ್ಬರ ಒಡೆತನದ್ದಾಗಿರಕೂಡದೆಂದು ನೆನೆದ ಅದನ್ನು 'ಶೇರ್ಸ' ಪದ್ಧತಿಯ ಮೇಲೆ ತೆರೆಯತಕ್ಕದ್ದೆಂದು ನಿರ್ಧರಿಸಿದೆ. ಇದರಿಂದ ಊರೊಳಗಿನ ದೇಶಪ್ರೇಮಿಯುವರೆಲ್ಲರೂ ಇದರಲ್ಲಿ ಭಾಗ ತೆಗೆದುಕೊಳ್ಳಲು ಅನುಕೂಲವಾಗಿದೆ. ಈಗ ಕೆಲವು "ಶೇರ್ಸ"ಗಳು ಕೂಡಿದ್ದು ಸದರೀ ಅಂಗಡಿಯನ್ನು ಇದೇ ತಿಂಗಳ ೧೯ ನೇ ತಾರೀಖಿಗೆ (ಮಾಘ ಶುದ್ಧ ಪ್ರತಿಪದೆ) ಸ್ಥಾಪಿಸಿ ಅದರ ಉದ್ಘಾಟನೆ ಸಮಾರಂಭವನ್ನು ಹಿರಿಯ ದೇಶಭಕ್ತರಾದ ಶ್ರೀಮಾನ್ ದಿವಾಕರರ ಹಸ್ತದಿಂದ ಜರುಗಿಸಬೇಕೆಂದು ಗೊತ್ತು ಮಾಡಿದೆ. ಶೇರ್ಸ ಕೊಳ್ಳತಕ್ಕವರಾಗಲಿ, ಈ ಬಗ್ಗೆ ಇನ್ನೂ ಹೆಚ್ಚು ಸಂಗತಿಗಳನ್ನು ತಿಳಿಯಬಿಚ್ಛಿಸುವವರಾಗಲಿ ಶ್ರೀ ಪರ್ವತಿ ವೆಂಕಟರಾಯರಿಗೆ (ಯೂನಿಯನ್ ಬ್ಯಾಂಕ) ಸಮಕ್ಷಮ ಭೆಟ್ಟಿಯಾಗಬೇಕು. ಉದ್ಘಾಟನ ಸಮಾರಂಭದ ಸಮಯದಲ್ಲಿ (ಸೋಮವಾರ ಬೆಳಗಿನ ೧೦॥ ಘಂಟೆಗೆ) ಎಲ್ಲರೂ ಬಂದು ಈ ನೂತನ ಪ್ರಯತ್ನಕ್ಕೆ ತಮ್ಮ ಅನುಮತಿ ಆಶೀರ್ವಾದಗಳನ್ನೀಯಬೇಕೆಂದು ಬೇಡಿಕೊಳ್ಳುವ.

ಬಾಗಲಕೋಟೆ ತಾ॥ ೧೭-೧-೧೯೩೧	ಶ್ರೀ ಜೋರಾಪೂರ ಗುರುರಾಯರು.

"ಫ್ರೀಪ್ರೆಸ್' ಪತ್ರಿಕೆಗೆ ೪೦೦೦ ರುಪಾಯಿ ಹೊಣೆ ಬೇಡಿದರು

ಮುಂಬಯಿಯ ರಾಷ್ಟ್ರೀಯ ಪಕ್ಷದ ಇಂಗ್ಲೀಷ ದೈನಿಕ ಪತ್ರಿಕೆಯಾದ "ಫ್ರೀಪ್ರೆಸ್" ಪತ್ರಿಕೆಗೆ ಮುಂಬಯಿ ಸರಕಾರದವರು ಮುದ್ರಣಾಲಯ ಹಾಗು ಪತ್ರಿಕೆ ಇವುಗಳಿಗೆ ಪ್ರೆಸ್ ಆರ್ಡಿನನ್ಸದನ್ವಯ ಒಟ್ಟಿಗೆ ೪೦೦೦ ರುಪಾಯಿ ಹೊಣೆ ಬೇಡಿದ್ದಾರೆ.

ಅಹಮ್ಮದನಗರದ ಜೇಲಿನಲ್ಲಿ ಬಾಂಬುಬಿತ್ತು

ಅಹಮ್ಮದನಗರದಲ್ಲಿ ತಾ ।೧೩ ನೆಯ ದಿವಸ ರಾತ್ರಿ ೯ ಗಂಟೆಗೆ ಯಾರೋ ಕೆಲವರು ಅಲ್ಲಿಯ ಸೊಸಾಯಿಟಿ ಹಾಯಸ್ಕೂಲಿನ ಕಂಪೌಂಡಿನಲ್ಲಿ ನಿಂತುಕೊಂಡು ಜೇಲಿನೊಳಗೆ ಒಂದು ಬಾಂಬು ಒಗೆದರು. ಜೇಲಿನ ಕಾವಲುಗಾರನನ್ನು ಕೊಲ್ಲುವದೇ ಅವರ ಉದ್ದೇಶವಾಗಿತ್ತು. ಅಂದು ಮುಂಜಾನೆ ಮೆರವಣಿಗೆಯ ಕಾಲಕ್ಕೆ ಸೆರೆ ಹಿಡಿಯಲ್ಪಟ್ಟ ಇಬ್ಬರು ಸ್ವಯಂಸೇವಕರು ಅಲ್ಲಿ ಇಡಲ್ಪಟ್ಟಿದ್ದರು. ಯಾರಿಗೂ ಅಪಾಯ ಸಂಭವಿಸಲ್ಲ. ಪೋಲೀಸರು ಈ ಬಗ್ಗೆ ಶೋಧ ನಡೆಸಿದ್ದಾರೆ.

ಧಾರವಾಡದ ಪತ್ರ

(ಸ್ವಂತ ಸುದ್ದಿಗಾರರಿಂದ)

ಶ್ರೀ ಮುದವೀಡು ಕೃಷ್ಣರಾಯರ ಮೇಲಿನ ಖಟ್ಲೆಯ ವಿಚಾರಣೆಯು

ಡಿಸೆಂಬರ ೨೨ನೇ ತಾರೀಖಿನ ದಿನ ಧಾರವಾಡ ಸಿಟಿ ಮ್ಯಾಜಿಸ್ಟ್ರೇಟರು ಶ್ರೀ ಮುದವೀಡು ಕೃಷ್ಣರಾಯರು ಧಾರವಾಡ ಪಟ್ಟಣದ ಹದ್ದಿನಲ್ಲಿ ಮಾತನಾಡಕೂಡದೆಂದು ನೋಟೀಸು ತೆಗೆದಿದ್ದರು. ಅದನ್ನು ಕೃಷ್ಣರಾಯರು ಮುರಿದು ಅಂದೇ ಧ್ವಜವಂದನೆಯ ಸಮಾರಂಭದಲ್ಲಿ ಭಾಷಣ ಮಾಡಿದರು. ಸಿಟಿ ಮ್ಯಾಜಿಸ್ಟ್ರೇಟರ ನೋಟೀಸನ್ನು ಅವಮಾನ್ಯ ಮಾಡಿದ್ದಕ್ಕಾಗಿ ಡಿಸ್ಟ್ರಿಕ್ಟ ಪೋಲೀಸ ಆ್ಯಕ್ಟ ೪೨ನೇ ಕಲಮಿನ ಪ್ರಕಾರ ಅವರ ಮೇಲೆ ಖಟ್ಲೆಯನ್ನು ಹಾಕಿರುವರು. ಈ ಖಟ್ಲೆಯ ವಿಚಾರಣೆಯು ಸೋಮವಾರ ೧೨ನೇ ತಾರೀಖಿನ ದಿನ ಶ್ರೀ. ಡಿಪೇಕರ ಇವರ ಎದುರಿಗೆ ನಡೆಯಿತು. ಕೃಷ್ಣರಾಯರು ಚಾರ್ಜಶೀಟು ಓದಿ ತೋರಿಸಿದನಂತರ, ತಮ್ಮ ಗಂಭೀರವಾದ ಸ್ವರದಲ್ಲಿ ತಾವು ಬರೆದು ತಂದ ವಾಕ್ಯವನ್ನು ಓದಿ ತೋರಿಸಿ ಈ ವಿಚಾರಣೆಯಲ್ಲಿ ತಾವು ಯಾವರೀತಿಯಿಂದಲೂ ಭಾಗ ತೆಗೆದುಕೊಳ್ಳುವದಿಲ್ಲವೆಂದು ಹೇಳಿದರು. ಶ್ರೀ ಬಾಗೇವಾಡಿ, ಪೋಲೀಸ ಕಾನ್‌ಸ್ಟೇಬಲ್ ಮುರಗೋಡ, ಬಸವನಗೌಡಾ ಪಾಟೀಲ ಮತ್ತು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ. ಹಿರೇಮಠ ಇವರೆಲ್ಲರ ಸಾಕ್ಷಿಯಾಯಿತು. ತೀರ್ಪು ಮುಂದುವರಿಸಲ್ಪಟ್ಟಿತು.

ಸೊಲ್ಲಾಪುರ ವೀರಾಳುಗಳ ಗಲ್ಲು

ಶ್ರೀ ಮಲ್ಲಪ್ಪ ಧನಶೆಟ್ಟಿ, ಸಾರಡಾ, ಶಿಂದೆ, ಕುರ್ಬಾನ ಹುಸೇನ ಈ ನಾಲ್ಕು ಸೊಲ್ಲಾಪೂರದ ದಂಡಿನ ಕಾಯಿದೆಯ ವೀರರನ್ನು ಯರವಡಾ ಜೇಲಿನಲ್ಲಿ ಗಲ್ಲಿಗೇರಿಸಿದ ಸುದ್ದಿಯು ಮಧ್ಯಾನ್ಹದಿಂದ ಇದ್ದೇ ಇತ್ತು. ಆದರೆ ವಿಶ್ವಸನೀಯವಾದ ತಾರು ರಾತ್ರಿ ಬಂದು ಮುಟ್ಟಿತು. ಕೂಡಲೆ ಈ ಸುದ್ದಿಯನ್ನು ಊರೆಲ್ಲೆಲ್ಲ ಘಂಟೆಗಳನ್ನು ಹೊಡೆದು ಸಾರಲಾಯಿತು. ಮತ್ತು ಮರುದಿವ ಮಂಗಳವಾರ ಎಲ್ಲರೂ ಹರತಾಳವನ್ನೇ ಪಾಲಿಸಬೇಕಾಗಿ ತಿಳಿಸಿತ್ತು. ಗಲ್ಲಿಗೇರಿಸಿದ ಸುದ್ದಿಯು ಊರಲ್ಲೆಲ್ಲ ಹಬ್ಬಿದ ಕೂಡಲೇ ಒಂದು ತರದ ಹಾಹಾಕಾರವು ಎಲ್ಲ ಕಡೆಯಲ್ಲಿ ಎದ್ದಿತು. ಎಲ್ಲರಿಗೂ ಅಸಮಾಧಾನ. ಹಳಹಳಿ, ನ್ಯಾಯಸರಾಯ ಸಾಹೇಬರು ಅಖಿಲ ಹಿಂದುಸ್ಥಾನವಲ್ಲಿಯ ಎಲ್ಲ ಜನರೂ ಏಕಮತದಿಂದ ಅವರನ್ನು ಕ್ಷಮಿಸಲು ಕೇಳಿಕೊಂಡ ಬೇಡಿಕೆಗೆ ಇನ್ನೂ ವಿಚಾರಮಾಡುತ್ತಲಿದ್ದೇವೆ ಎಂದು ಉತ್ತರ ಕೊಡುತ್ತ, ಇತ್ತ ಈ ನಾಲ್ವರನ್ನು ಗಲ್ಲಿಗೇರಿಸಿದ್ದು ತೀರ ಅನ್ಯಾಯವೆಂದು ಎಲ್ಲರೂ ಗುಣುಗುಟ್ಟುತ್ತಿದ್ದರು ಆಯಿತು. ಬೆಳಗಾಯಿತು. ಗಾಂಧಿ ಚೌಕಿನಲ್ಲಿ ನಿಲ್ಲಿಸಿದ ರಾಷ್ಟ್ರಧ್ವಜವು ಕೆಳಗೆ ಅರ್ಧಕ್ಕೆ ಇಳಿಸಲಾಯಿತು. ಎಲ್ಲ ಶಾಲೆಗಳೂ ಬಂದಾದವು. ಅಂಗಡಿಯವರಲ್ಲಿ ಒಮ್ಮತರವಾಗಿ ಎಲ್ಲರೂ ವ್ಯವಹಾರವನ್ನು ಬಂದು ಮಾಡಿದ್ದರು. ಮೆರವಣಿಗೆಗಳು ಹೊರಡಬಾರದೆಂದು ಪೋಲೀಸರು ಎಷ್ಟೋ ಪ್ರಯತ್ನ ಮಾಡಿದರೂ, ಮಧ್ಯಾನ್ಹದಲ್ಲಿ ಕಾಲೇಜ ಮತ್ತು ಶಾಲೆಯ ವಿದ್ಯಾರ್ಥಿಗಳದ್ದು ಹಾಗು ಸಾಯಂಕಾಲದಲ್ಲಿ ಹೆಂಗಸರದು ಮೆರವಣಿಗೆಗಳಾದವು.

ಸಾಯಂಕಾಲ ೬॥ ಘಂಟೆಗೆ ಕಡಪಾ ಬೈಲಿನಲ್ಲಿ ಶ್ರೀ ಶಂಕರಪ್ಪಾ ಮುಗಜಿಗಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಸಭೆಗೆ ಏನಿಲ್ಲೆಂದರೂ ೪॥೫ ಸಾವಿರ ಜನರಿದ್ದರು. ಶ್ರೀ. ಬೆಳಗಾವಿ ರಾಮಚಂದ್ರರಾಯರು ಶ್ರೀ. ಹುಬಳಿ, ಶ್ರೀಮತಿ ಕೃಷ್ಣಾಬಾಯಿ ಪಣಜೀಕರ, ಬೆಳಗಾವಿಯಿಂದ ಬಂದಿದ್ದ ಶ್ರೀ. ಜೋಶಿ ನಾರಾಯಣರಾಯರು, ಶ್ರೀ ದಿವಾಕರರು ಭಾಷಣಗಳನ್ನು ಮಾಡಿದರು. ಸಭೆಯು ೯ ಗಂಟೆಯವರೆಗೆ ಜರುಗಿತು. ಸಭೆಯಲ್ಲಿ ಕಲಿತ ಎಲ್ಲರ ಮುಖದ ಮೇಲೂ ದುಃಖವು ವ್ಯಕ್ತವಾಗುತ್ತಿತ್ತು.

ಮಿತ್ರಸಮಾಜದಲ್ಲಿ

ಸ್ತ್ರೀಯರ ಮೆರವಣಿಗೆಯು ಕಡಪಾ ಬೈಲಿಗೆ ಹೋಗುವಾಗ ಮಾರ್ಗದಲ್ಲಿರುವ ಮಿತ್ರಸಮಾಜಕ್ಕೆ ಭೆಟ್ಟಿಯನ್ನು ಕೊಟ್ಟಿತು. ಸಮಾಜದಲ್ಲಿ ಕಾಲೇಜದ ಪ್ರೋಫೆಸರರು, ವಕೀಲರು, ಇನ್ನಿತರರು ಬ್ರಿಜಬಾಜಿಯಿಂದ ಬ್ರಿಜ್ ಮುಂತಾದವುಗಳನ್ನು ಆಡುತ್ತ ಕುಳಿತಿದ್ದರು. ಶ್ರೀಮತಿ ಕೃಷ್ಣಾಬಾಯಿ ಪಣಜೀಕರ, ರಾಧಾಬಾಯಿ ದಿವಾಕರ ಇವರು ಒಳಗೆ ಹೋದ ಕೂಡಲೇ ಎಲ್ಲ ಮಹನೀಯರು ಗಡಿಬಿಡಿ ಎದ್ದು ಸಮಾಜವನ್ನು ಬಂದು ಇಡಲು ಸಮ್ಮತಿಸಿದರು.

ದಿ ಧಾರವಾಡ ಡ್ರಾಮಾಟಿಕ ಅಸೋಸಿಯೇಶನ್ನದವರು ವಿಲಾಯತ ಖಾನರ ಸಂಗೀತ ಕಚೇರಿಯನ್ನು ಏರ್ಪಡಿಸಿದ್ದರು. ಅವರಾದರೂ ತಮ್ಮ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಿದರು.

ವಿಜಾಪುರದಲ್ಲಿ ಹರತಾಳ

(ಸ್ವಂತ ಸುದ್ದಿಗಾರರಿಂದ)

ಸೊಲ್ಲಾಪುರದ ಶ್ರೀ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ ನಿಮಿತ್ತವಾಗಿ ವಿಜಾಪುರದಲ್ಲಿ ತಾ। ೧೩ ಸೋಮವಾರ ದಿವಸ ಸಂಪೂರ್ಣ ಹರತಾಳ ಪಾಲಿಸಲಾಯಿತು. ಸಂಜೆಯಲ್ಲಿ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಸಭಾಸ್ಥಾನವಾದ ಶಿವಹರ್ಡ ಭವನಕ್ಕೆ ತಲುಪಿತು. ಸಭೆಯಲ್ಲಿ ತರುಣರೇ ವಿಶೇಷವಾದ ಭಾಗ ತೆಗೆದುಕೊಂಡಿದ್ದರು. ಸಭೆಯಲ್ಲಿ ನಿಷೇಧ ವ್ಯಕ್ತಪಡಿಸಲಾಯಿತು.

ಸಿದ್ಧೇಶ್ವರ ಜಾತ್ರೆಯಲ್ಲಿ ಇಲ್ಲಿಯ ಸ್ವಯಂಸೇವಕರು ಸ್ವದೇಶಿ ಪ್ರಚಾರ ಕಾರ್ಯವನ್ನು ಒಳ್ಳೇ ಉತ್ಸಾಹದಿಂದ ಸಾಗಿಸಿದ್ದಾರೆ. "ಪರದೇಶಿ ವಸ್ತುಗಳನ್ನು ಬಹಿಷ್ಕರಿಸಿರಿ" ಎಂಬುದಾಗಿ ಬರೆಯಲ್ಪಟ್ಟ ಹಲಿಗೆಗಳನ್ನು ಹಿಡಿದುಕೊಂಡು ಅವರು ಮೆರವಣಿಗೆಯಿಂದ ಊರಲ್ಲೆಲ್ಲ ಸಂಚಾರ ಮಾಡಹತ್ತಿದ್ದಾರೆ.

ಶ್ರೀ ಗೋವರ್ಧನದಾಸರಿಗೆ ೮ ತಿಂಗಳ ಕಠಿಣ ಶಿಕ್ಷೆ

ಬಾಗಲಕೋಟೆಯಲ್ಲಿ ಕೌನ್ಸಿಲ್ ಚುನಾವಣೆಯ ಪಿಕೆಟಿಂಗ ಮಾಡಿದ ಕಾರಣದಲ್ಲಿ ಅಡವಿಯ ಕಾಯದೆಭಂಗ ಇವುಗಳ ಬಗ್ಗೆ ಪ್ರಾಪ್ತವಾದ ಬೇರೆ ಬೇರೆ ಶಿಕ್ಷೆಗಳನ್ನು ಮುಗಿಸಿಕೊಂಡು, ವಿಜಾಪುರ ಜೇಲಿನಿಂದ ಹೊರಬಿದ್ದಕೂಡಲೆ ಮತ್ತೆ ಬಂಧನಕ್ಕಾಗಿ ಬದಾಮಿಗೆ ಕರೆದೊಯ್ಯಲ್ಪಟ್ಟ, ಶ್ರೀ ಗೋವರ್ಧನದಾಸರಿಗೆ ಬೇರೊಂದು ಅಪರಾಧಕ್ಕಾಗಿ ಮತ್ತೆ ೮ ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯು ದೊರೆತಿರುವದಾಗಿ ತಿಳಿದು ಬರುತ್ತದೆ.

ಶ್ರೀ ಜೀರಗಿ ಹಾಗು ಶ್ರೀಕಂಠಯ್ಯನವರ ಮೇಲೆ ಮತ್ತೆ ಒಂದು ಖಟ್ಲೆ

ಬಾಗಲಕೋಟೆಯಲ್ಲಿ ಸ್ವಾತಂತ್ರ್ಯಕೀರ್ತನೆಯ ಕಾಲಕ್ಕೆ ಸ್ವಲ್ಪ ದಿನಗಳ ಹಿಂದೆ ಸೆರೆಹಿಡಿಯಲ್ಪಟ್ಟು ಕ್ರಿಮಿನಲ್ ಅಮೆಂಡಮೆಂಟ ಕಾಯದೆಯ ೧೭ನೆಯ ಕಲಮಿನನ್ವಯ ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಜೀರಗಿ ಹಾಗು ಶ್ರೀ ಕಂಠಯ್ಯ ಎಂಬ ಇಬ್ಬರು ಸ್ವಯಂಸೇವಕರನ್ನು ಮೊನ್ನಿನ ದಿವಸ ಅಧಿಕಾರಿಗಳು ಬದಾಮಿಗೆ ಕರೆದೊಯ್ದಿದ್ದಾರೆ. ಬೇರೊಂದು ಅಪರಾಧದ ಬಗ್ಗೆ ಅವರ ಮೇಲೆ ಇಲ್ಲಿ ಖಟ್ಲೆ ನಡೆಸುವದಾಗಿ ತಿಳಿಯುತ್ತದೆ.

ಪೋಲೀಸನು ರಾಜೀನಾಮೆ ಕೊಟ್ಟನು

ಬೆಳಗಾವಿ ಜಿಲ್ಲೆಯ ಅಕ್ಕತಂಗೇರಹಾಳದ ರಾ। ತುಪ್ಪದ ಬಸಪ್ಪ ಎಂಬ ಪೋಲೀಸನು, ಸರಕಾರಿ ದಬ್ಬಾಳಿಕೆಯನ್ನು ನಿಷೇಧಿಸಿ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವನು.

ಮುಂಬಯಿಯಲ್ಲಿ

ಸೊಲ್ಲಾಪೂರ ವೀರಾಳುಗಳ ದಿನಾಚರಣೆ

ನೂರಾರು ಜನರಿಗೆ ಡೊಣ್ಣೆಯ ಪೆಟ್ಟು.

(ತಂತಿಯ ವಾರ್ತೆ)

ತಾ|| ೧೬ ನೆಯ ದಿವಸ "ಸೊಲ್ಲಾಪೂರ ವೀರಾಳುಗಳ ದಿನ" ವನ್ನು ಆಚರಿಸಬೇಕೆಂದು ಮುಂಬಯಿಯ ಸತ್ಯಾಗ್ರಹ ಯುದ್ಧ ಮಂಡಳದವರು ಕೇಳಿಕೊಂಡ ಮೇರೆಗೆ ಅಂದು ಮುಂಬಯಿಯಲ್ಲಿ ಆ ದಿನವು ಯಥಾಸಾಂಗವಾಗಿ ಆಚರಿಸಲ್ಪಟ್ಟಿತು. ಪಟ್ಟಣದಲ್ಲೆಲ್ಲ ಸಂಪೂರ್ಣ ಹರತಾಳವಾಯಿತು. ಶಾಲೆ, ಕಾಲೇಜ, ಗಿರಣಿ ಅಂಗಡಿ ಮೊದಲಾದವುಗಳೆಲ್ಲವೂ ಮುಚ್ಚಿ ಹೋಗಿದ್ದವು. ಸ್ವಯಂಸೇವಕರು ಟ್ರ್ಯಾಮ್ಸ ಕಾರಗಳ ಮುಂದೆ ಪಿಕೆಟಿಂಗ ಮಾಡಿದರು. ಪೋಲೀಸರು ಅವರ ಮೇಲೆ ಏರಿಹೋಗಿ, ಅವರನ್ನು ಲಾಠಿ ಯಿಂದ ಒಳಿತಾಗಿ ಥಳಿಸಿದರು. ಸ್ತ್ರೀಸ್ವಯಂಸೇವಿಕೆಯರು ಹಾಯಕೋರ್ಟಿನ ಮುಂದೆ ಪಿಕೆಟಿಂಗ ಮಾಡಿದರು. ಅವರಿಗಾದರೂ ಹೊಡೆತಗಳು ಬಿದ್ದಿವೆ. ಪೋಲೀಸರು ಹಾಗು ಸೈನಿಕರು ಅಲ್ಲಲ್ಲಿ ಸಶಸ್ತ್ರರಾಗಿ ನಿಂತುಕೊಂಡಿದ್ದಾರೆ. ನೂರಾರು ಜನರಿಗೆ ಗಾಯಗಳಾಗಿದ್ದು, ಇವರಲ್ಲಿ ೧೪ ಜನರು ಚಿಂತಾಸ್ಥಿತಿಯಲ್ಲಿದ್ದಾರೆ,

ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಅಧಿವೇಶನ

ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಅಧಿವೇಶನವು ತಾ|| ೧೪ ನೆಯ ದಿವಸ ದಿಲ್ಲಿಯಲ್ಲಿ ಪ್ರಾರಂಭವಾಯಿತು. ಶ್ರೀ ಷಣ್ಮುಖಂ ಚೆಟ್ಟಿಯವರನ್ನು ಕಾಯಮ್ಮಿನ ಅಧ್ಯಕ್ಷರನ್ನಾಗಿ ನಿಯಮಿಸಿದ ಬಗ್ಗೆ ವ್ಹಾಯಿಸರಾಯರಿಂದ ಬಂದ ಸಂದೇಶವನ್ನು ಸೆಕ್ರೆಟರಿಯವರು ಓದಿ ತೋರಿಸಿದರು. ಶ್ರೀ ಚೆಟ್ಟಿಯವರು ಅಧ್ಯಕ್ಷಸ್ಥಾನದಲ್ಲಿ ಕುಳಿತುಕೊಂಡರು. ಬಳಿಕ ಶ್ರೀ ಚೆಟ್ಟಿ ಹಾಗು ಎಲ್ಲ ಸಭಾಸದರೂ ರಾಜ್ಯನಿಷ್ಠೆಯ ಬಗ್ಗೆ ಶಪಥ ತೆಗೆದುಕೊಂಡರು

ಶಪಥ ತೆಗೆದುಕೊಳ್ಳುವ ವಿಧಾನವು ಮುಗಿದ ಬಳಿಕ ಶ್ರೀ ಚೆಟ್ಟಿಯವರು, ಸೊಲ್ಲಾಪುರದ ಮುಂದಾಳುಗಳಿಗೆ ಆದ ಗಲ್ಲಿನ ಶಿಕ್ಷೆಯ ಬಗ್ಗೆ ಅಧಿವೇಶನವನ್ನು ಮುಂದೂಡಬೇಕಾಗಿ ಶ್ರೀ ಗುಂಜಾಳರವರಿಂದ ಬಂದ ಸೂಚನೆಯನ್ನು ಸಭೆಯ ಮುಂದಿಟ್ಟರು.

ಸೊಲ್ಲಾಪುರದ ಶ್ರೀ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೆ ಹಾಕಿದ್ದು ನಿಜವಿದೆಯೋ ಎಂಬುದಾಗಿ ಶ್ರೀ ಗುಂಜಾಳರವರು ಕೇಳಿದರು. 'ಗಲ್ಲಿಗೆ ಹಾಕಿದ್ದು ನಿಜವಿದೆ' ಯೆಂಬುದಾಗಿ ಜೇಮ್ಸ ಕ್ರೆರಾರವರು ಉತ್ತರ ಕೊಟ್ಟರು. ಶ್ರೀ ಗುಂಜಾಳರು ತಮ್ಮ ಸೂಚನೆಯನ್ನು ತಿರುಗಿ ತೆಗೆದುಕೊಂಡರು

ಬಳಿಕ ಸರ್ ಜಾರ್ಜ ಶೆಸ್ಟರರು ಸ್ಟ್ಯಾಂಡಿಂಗ ಫಾಯನಾನ್ಸ ಕಮಿಟಿ ಹಾಗು ಪಬ್ಲಿಕ್ ಅಕಾಂವಟ್ಸ ಕಮಿಟಿಗಳಿಗೆ ಸಭಾಸದರನ್ನು ಆರಿಸುವ ವಿಷಯವಾಗಿ ಸೂಚನೆ ತಂದರು. ಅದು ಸ್ವೀಕೃತವಾಯಿತು.

ನಂತರದಲ್ಲಿ ಸರ್ ಜಾರ್ಜ ರೇನಿಯವರು ಮುಂದಿನ ವಾರದ ಕಾರ್ಯದ ವಿವರವನ್ನು ತಿಳಿಸಿ, ಮುದ್ರಣಾಲಯ, ಕರನಿರಾಕರಣೆ, ಬಂಗಾಲ ಕ್ರಿಮಿನಲ್ ಲಾ. ಅಮೆಂಡಮೆಂಟ ಕಾಯದೆ, ಪಂಜಾಬ ಕ್ರಿಮಿನಲ್ ಪ್ರೊಸೀಜರ ಆಕ್ಟ ಹಾಗು ಇಂಡಿಯನ್ ಮರ್ಚಂಟ ಶಿಪಿಂಗ ಆಕ್ಟ ಮೊದಲಾದವುಗಳ ಸಂಬಂಧವಾಗಿ ಸರಕಾರದವರು ನಾಳಿನ ದಿವಸ ಸೂಚನೆ ತರತಕ್ಕವರಿದ್ದಾರಾಗಿ ಹೇಳಿದರು.

ತಾ|| ೧೭ ನೆಯ ದಿವಸ ಅಧ್ಯಕ್ಷರನ್ನಾರಿಸುವ ಕಾರ್ಯವು ನಡೆಯತಕ್ಕದ್ದಿದ್ದು, ವ್ಹಾಯಿಸರಾಯರ ಭಾಷಣವಾದರೂ ಅಂದೇ ಆಗುವದು

ಕೋರ್ಟಿನ ಹಲಿಗೆಗೆ ಬೆಂಕಿ ಹಚ್ಚಿದರು.

ಮುನಸಿಗಂಜದಲ್ಲಿಯ ದಿವಾಣಿ ಕೋರ್ಟಿನ ಹೊರಭಾಗದಲ್ಲಿ ಅಲ್ಲಿಯ ಅಧಿಕಾರಿಗಳು ಒಂದು ಹಲಿಗೆಯ ಮೇಲೆ ಸರಕಾರಿ ಪ್ರಕಟನೆ ಹಾಗು ಕಾಯದೆಭಂಗ ಚಳವಳಿಗೆ ಪರಿಹಾಸಕರವಾದ ಕೆಲವು ಚಿತ್ರಗಳನ್ನು ಅಂಟಿಸಿದ್ದರು. ತಾ|| ೧೧ ನೆಯ ದಿವಸ ರಾತ್ರಿ, ಯಾರೋ ಕೆಲವರು ಅಲ್ಲಿಗೆ ಹೋಗಿ ಅವುಗಳಿಗೆ ಬೆಂಕಿ ಹಚ್ಚಿ ಆ ಹಲಿಗೆಯನ್ನು ಸಂಪೂರ್ಣ ಸುಟ್ಟುಬಿಟ್ಟರು.

ಬನಾರಸದಲ್ಲಿ ಬಾಂಬು ಹಾರಿತು

ಬನಾರಸದಲ್ಲಿ ತಾ|| ೧೧ ನೆಯ ದಿವಸ ಸಂಜೆಯಲ್ಲಿ ಗೇಟಚಾಕ ಪೋಲೀಸ ಸ್ಟೇಶನದ ಹತ್ತಿರ ಒಂದು ದುಂಡಗಿನ ಪದಾರ್ಥವು ಇಡಲ್ಪಟ್ಟಿತ್ತು. ಇಲ್ಲಿ ಹಾಯ್ದು ಹೋಗುತ್ತಿದ್ದ ಒಬ್ಬ ಮುಸಲ್ಮಾನ ಹುಡುಗನು ಕೈಯಲ್ಲಿ ತೆಗೆದುಕೊಂಡು ಅದನ್ನು ಪರೀಕ್ಷಿಸಿ ನೆಲದ ಮೇಲೆ ಧೊಪ್ಪನೆ ಒಗೆದನು. ಅದು ಒಮ್ಮಿಂದೊಮ್ಮೆ ಹಾರಿ ಅವನ ಕೈಗಳಿಗೆ ಗಾಯ ಮಾಡಿತು.

ದಾಧಾಭಾಯಿಯವರ ಮೊಮ್ಮಗಳಿಗೆ ಶಿಕ್ಷೆ

ಸ್ವಲ್ಪ ದಿನಗಳ ಹಿಂದೆ ಧೋಲಕಾದಲ್ಲಿ ಬಂಧನಕ್ಕೊಳಗಾದ ಕುಮಾರಿ ಖುರಶೇದ ಬೇನ ನವರೋಜಿಯವರಿಗೆ ಇ. ಪಿ. ಕೋಡಿನ ೧೪೩ ಹಾಗು ೧೧ ನೆಯ ಆರ್ಡಿನನ್ಸದನ್ವಯ ೪ ತಿಂಗಳ ಸಾದಾ ಕಾರಾಗೃಹವಾಸ ಹಾಗು ೧೫೦ ರೂ. ದಂಡ ಇಲ್ಲವೆ ೧|| ತಿಂಗಳ ಶಿಕ್ಷೆ ಹೀಗೆ ಶಿಕ್ಷೆಯಾಗಿದೆ. ಇವರು ದಿವಂಗತ ದಾಧಾಭಾಯಿಯವರ ಮೊಮ್ಮಕ್ಕಳಿದ್ದು, ಈಗ ಎರಡು ಸಾರೆ ತಿಂಗಳದ ಅವಧಿಯಲ್ಲಿ ಈಗ ಎರಡು ಸಾರೆ ಸ್ವರಾಜ್ಯಾಶ್ರಮ ಕಂಡು ಬಂದಿದ್ದಾರೆ.

ವಿಜಾಪುರದಲ್ಲಿ ಟಾಂಗೆಗಳ ಸಂಪು

(ಸ್ವಂತ ಬಾತ್ಮೀದಾರರಿಂದ)

ಇಲ್ಲಿಯ ಟಾಂಗೆಯವರು ಮೂರ. ನಾಲ್ಕು ದಿನಗಳಿಂದ ಸಂಪು ಮಾಡಿದ್ದಾರೆ ಯಾವ ಟಾಂಗೆಯೂ "ಪಾಸ" ಇಲ್ಲದೆ ಅವಿ ಎತ್ತರ ಕಾದುಕೆ ಮೊದಲಾದವುಗಳನ್ನು ಇಟ್ಟರೇನೇ "ಪಾಸ" ಮಾಡುವೆವೆಂಬುದಾಗಿ ಅಧಿಕಾರಿಗಳು ಅವರಿಗೆ ಹೇಳಿದ್ದೇ ಸಂಪಿಗೆ ಕಾರಣವಾಗಿದೆ.

ಹಿಂದುಸ್ಥಾನದ ರಾಜ್ಯಘಟನೆಯು ಹಿಂದೀಯರನ್ನೆ ಅವಲಂಬಿಸಿದೆ

ಲಂಡನ್ ಗೋಲಮೇಜ ಪರಿಷತ್ತಿನ ಬ್ರಿಟಿಶ ಹಿಂದುಸ್ಥಾನದ ಪ್ರತಿನಿಧಿಗಳು ತಾ|| ೧೪ನೆಯ ದಿವಸ, ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡ, ಮಿ. ಬಾಲ್ಡವಿನ ಮೊದಲಾದ ರಾಜಕೀಯ ಮುಖಂಡರಿಗೆ ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಮಯದಲ್ಲಿ ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡರು ಕೆಳಗಿನಂತೆ ಭಾಷಣಮಾಡಿ ಹಿಂದುಸ್ಥಾನದ ವಿಷಯವಾಗಿ ತಮ್ಮ ಹೃದ್ಗತವನ್ನು ಚೆನ್ನಾಗಿ ವ್ಯಕ್ತಪಡಿಸಿದರು.

"ಹಿಂದುಸ್ಥಾನದ ಭಾವೀ ರಾಜ್ಯಘಟನೆಯ ವಿಷಯವು ಬಹಳೇ ಗಹನವಾದದ್ದಿದೆ. ಅದನ್ನು ಹೇಗೆ ಬಿಡಿಸಬೇಕೆಂಬುದು ನನಗೆ ಹೊಳೆಯದಂತಾಗಿದೆ. ಅದನ್ನು ಸುರಳಿತವಾಗಿ ಬಿಡಿಸುವದು ಡಾ. ಮುಂಜೆ, ಸರ್ ಮಹಮ್ಮದ ಶಾಫಿ ಮತ್ತು ಮಿ. ಜಿನ್ನಾರವರ ಕೈಯಲ್ಲಿಯೇ ಉಂಟು.

ಸಿಂಹ ಮತ್ತು ಕುರಿ ಇವುಗಳು ಈಗ ಒಂದೇ ಕಡೆಗೆ ಕೂಡಿರುವದರಿಂದ ರಾಜ್ಯಘಟನೆಯ ಪ್ರಶ್ನೆಯು ಸುಲಭವಾಗಿ ಬಗೆಹರಿಯುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಯಾವ ರಾಜ್ಯಪದ್ಧತಿಯನ್ನು ಕೊಟ್ಟರೆ ಹಿಂದುಸ್ಥಾನಕ್ಕೆ ಶಾಶ್ವತವಾದ ಸುಖವು ಸಿಕ್ಕೀತೆಂಬುದರ ಬಗ್ಗೆಯೇ ನಾವು ಈಗ ವಿಚಾರ ನಡೆಸಿರುವೆವು. ಈ ಕಾರ್ಯದಲ್ಲಿ ನೀವೂ ನಮಗೆ ನೆರವಾಗಬೇಕು.

ಉಗಿಬಂಡಿಯನ್ನು ಉರುಳಿಸಿದರು

ಈಸ್ಟರ್ನ ಬಂಗಾಲ ರೇಲ್ವೆಯ ಒಂದು ಪ್ರವಾಸಿಕರ ಹೊಗೆಬಂಡಿಯು, ತಾ|| ೧೩ನೆಯ ದಿವಸ ರಂಗಪುರ ಹಾಗು ಶ್ಯಾಮಪುರ ಸ್ಟೇಶನುಗಳ ಮಧ್ಯದಲ್ಲಿ ಉರುಳಿ ಬಿದ್ದಿತೆಂಬುದಾಗಿ ತಿಳಿದು ಬರುತ್ತದೆ. ಈ ಅಪಘಾತವು ಸಂಭವಿಸುವದಕ್ಕಿಂತ ಸ್ವಲ್ಪ ಮುಂಚಿತವಾಗಿ ವ್ಹಾಯಿಸರಾಯರ ಸ್ಪೇಶಲ್ ಹೊಗೆಬಂಡಿಯು ಅದೇ ಮಾರ್ಗದಿಂದ ಹಾಯ್ದು ಹೋಗಿತ್ತು.

ಇಂದೂರ ಸಂಸ್ಥಾನದಲ್ಲಿ ಸಭೆಗಳಿಗೆ ಪ್ರತಿಬಂಧ

ಇಂದೂರ ರೆಸಿಡೆನ್ಸಿಯ ಪೋಲೀಸ ಸುಪರಿಂಟೆಂಡೆಂಟರು ಪೋಲೀಸ ಕಾಯದೆಯ ಪ್ರಕಾರ ಒಂದು ಅಪ್ಪಣೆಯನ್ನು ಹೊರಡಿಸಿ, ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಇಲ್ಲವೆ ಪೋಲೀಸ ಸುಪರಿಂಟೆಂಡೆಂಟರ ಅಪ್ಪಣೆಯನ್ನು ಪಡೆಯದೆ ಯಾರೂ ರೆಸಿಡೆನ್ಸಿ ಹದ್ದಿಯಲ್ಲಿ ಸಭೆಗಳನ್ನು ಜರುಗಿಸಕೂಡದೆಂಬುದಾಗಿ ಆಜ್ಞೆ ವಿಧಿಸಿದ್ದಾರೆ.

ಬಂಗಾಲ ಸರಕಾರಕ್ಕೆ ೮೭ ಲಕ್ಷ ರೂಪಾಯಿಯ ಹಾನಿ

ಈ ವರ್ಷದ ಅಂದಾಜ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಬಂಗಾಲ ಸರಕಾರಕ್ಕೆ ೮೭ ಲಕ್ಷ ರೂಪಾಯಿ ಕಡಿಮೆ ಬಿದ್ದಿವೆಯೆಂದೂ, ಸಿಂದಿಸರೆ, ಸ್ಟ್ಯಾಂಪ್ಸ್, ಅಡವಿ ಮೊದಲಾದವುಗಳಿಂದ ಮೊದಲು ಲೆಕ್ಕಮಾಡಿದಷ್ಟು ಉತ್ಪನ್ನವು ಬರದೆಯಿದ್ದದ್ದೇ ಇದಕ್ಕೆ ಕಾರಣವಾದದೆಯೆಂದೂ ತಿಳಿದು ಬರುತ್ತದೆ. ಚಳವಳಿಯ ಪ್ರಭಾವ!

ಗಲ್ಲಿನ ಶಿಕ್ಷೆಯನ್ನು ತೆಗೆದು ಹಾಕಬೇಕು

ಪಿನಲ್ ಕೋಡಿನ ಕೆಳಗೆ ಬರುವ ಅಪರಾಧಗಳಿಗಾಗಿ ಗಲ್ಲಿನ ಶಿಕ್ಷೆ ವಿಧಿಸುವದನ್ನು ಇನ್ನು ಮುಂದೆ ನಿಲ್ಲಿಸಬೇಕೆಂಬುದಾಗಿ ಶ್ರೀ ಗಯಾಪ್ರಸಾದರವರು ಈ ಸಲದ ಅಸೆಂಬ್ಲಿಯಲ್ಲಿ ಸೂಚನೆ ತರತಕ್ಕವರಿದ್ದಾರೆ.

ಬುಕ್ಕ ಬಾಯಿಂಡಿಂಗದ ಹೊಸ ವ್ಯವಸ್ಥೆ

ನಮ್ಮಲ್ಲಿ ಗೋಲ್ಡ ಲೆಟರ ಸಹಿತ ಅತ್ಯುತ್ತಮವಾಗಿ ಬಾಯಿಂಡಿಂಗದ ಕೆಲಸವು ಸೋವಿದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸಗಳನ್ನೂ ಕಾಗದಪತ್ರ ಇಡುವ ಮತ್ತು ರೊಕ್ಕ ಹಾಕುವ ಪಾಕೀಟುಗಳನ್ನು ತೊಗಲಿನಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವೆವು. ಪೋರ್ಟಫೋಲಿಯೋ ಮತ್ತು ಫಾಯಿಲದ ರಟ್ಟುಗಳನ್ನು ಮಾರಾಟಕ್ಕೆ ತಯಾರಿಸಿ ಇಟ್ಟಿದ್ದೇವೆ. ವ್ಯಾಪಾರಸ್ಥರಿಗೆ ಕಡಿಮೆ ದರದಿಂದ ಸಪ್ಲಾಯ ಮಾಡುವೆವು. ಒಮ್ಮೆ ಒಂದು ಪರೀಕ್ಷಿಸಿರಿ.

ಎಂ. ಎಸ್. ಉಡಪೀಕರ
ಪ್ರೊಪ್ರಾಯಿಟರ ದಿ ನ್ಯೂ ಬುಕ್ಕ ಬಾಯಿಂಡಿಂಗ ವರ್ಕ್ಸ ಹೊಸಬಾಜಾರ ಹವಾಲದಾರ ಬಿಲ್ಡಿಂಗ
ವಿಜಾಪೂರ.

ವಾಚ, ಟಾಯಂಪೀಸ ದುರಸ್ತಿ ಮಾಡಿಸುವವರಿಗೆ



ನಮ್ಮಲ್ಲಿ ಎಲ್ಲ ... ಹಾಗು ಮೇಕರಗಳ ... ಟಾಯಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚಿಕ್ಕ ... ಸೋವಿ ದರದಿಂದ ಸರಿಯಾದ ವೇಳೆಗೆ ದು... ಮಾಡಿಕೊಡುವದಲ್ಲದೆ, ಹೊಸ ವಾಚ, ಟಾ... ಪೀಸ ಗ್ರಾಮೋಫೋನುಗಳನ್ನು ಮಾರಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿ ಖಾತ್ರಿಮಾಡಿ ಕೊಳ್ಳಿರಿ

ವಿಳಾಸ- ಆರ್. ಡಿ. ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮ ... ಖಾತ್ರಿಯ ಉತ್ತಮ ... ಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಂ ಪೀಸ ವಗೈರೆ ದುರಸ್ತಿ ಮಾಡಿಕೊಡುವದು. ಯಾವದೇ ಕಂಪನಿಯ ಘಡಿಯಾಳ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ... ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೆ... ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗು... ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಪ್ಲಾಟುಗಳು ಮಾರಾಟಕ್ಕಿವೆ

ಟ್ರಾವೆಲರ್ಸ ಬಂಗಲೆಯ ಹತ್ತಿರ ... ಸರ್ವೆ ನಂಬರದಲ್ಲಿಯ ... ಪ್ಲಾಟುಗಳು ಮಾರಾಟಕ್ಕಿವೆ. ಕೊಳ್ಳಬಯಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧ...
ವಕೀಲರು ಬಾ...

ಶುದ್ಧ ಖಾದಿ! ಶುದ್ಧ ಖಾದಿ

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಕ್ಕೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಶಾ...
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम्॥ – मनु.

ಕನ್ನಡಿಗ

KANNADIGA
BAGALKOT.

BI-WEEKLY
ಅರವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಸೋಮವಾರ ಮಿತಿ ಮಾಘ ಶುದ್ಧ ೧ ಶಕೆ ೧೮೫೨, ತಾ|| ೧೯—೧—೩೧ [ಸಂಚಿಕೆ ೧೬೪

ಮುಂಬಯಿಯಲ್ಲಿ ಗೋಳೀಬಾರು.

ಸಾರ್ಜಂಟರು ಗಾಂಧೀ ಟೊಪ್ಪಿಗೆಗಳನ್ನು ಸುಟ್ಟರು.

ಗಲ್ಲಿಗೇರಿಸಲ್ಪಟ್ಟ ಸೊಲ್ಲಾಪುರದ ಮುಂದಾಳುಗಳಿಗೆ ಸಹಾನುಭೂತಿ ತೋರಿಸುವದಕ್ಕಾಗಿ ಮುಂಬಯಿಯ ಜಿ. ಕೆ. ಯೂನಿಯನ್ನದ ಕೆಲಸಗಾರರು ಆಜಾದ ಮೈದಾನದಲ್ಲಿ ತಾ|೧೬ನೇ ದಿವಸ ಸಭೆ ಕರೆದಿದ್ದರು. ಸಭೆಯು ಸುರುವಾಗುವದಕ್ಕಿಂತ ಪೂರ್ವದಲ್ಲಿಯೇ ಜನರು ತಂಡ ತಂಡವಾಗಿ ಅಲ್ಲಿಗೆ ಬಂದು ಕೂಡಿದರು. ಲಾಠೀ ಪೋಲೀಸರಾದರೂ ಬಂದೋಬಸ್ತಿಗಾಗಿ ಅಲ್ಲಿ ಬಂದು ನಿಂತುಕೊಂಡಿದ್ದರು. ಶ್ರೀ ಗೋವಾಂಡೆ ಹಾಗು ಮಾಷ್ಟ್ಣಕರರು ಭಾಷಣ ಮಾಡಲು ಎದ್ದ ಕೂಡಲೆ ಸುಪರಿಂಟೆಂಡೆಂಟ ಫರ್ನ ಸಾಹೇಬರು ಚದುರಿ ಹೋಗಲು ಅವರಿಗೆ ಹೇಳಿಕೊಂಡರು. ಅವರು ಅದಕ್ಕೆ ಸಮ್ಮತಿಸಲಿಲ್ಲ. ಸುಪರಿಂಟೆಂಡೆಂಟರು ಗೋಳೀಬಾರ ಮಾಡಲು ಪೋಲೀಸರಿಗೆ ಅಪ್ಪಣೆ ಕೊಟ್ಟರು. ಪೋಲೀಸರು ಗೋಳೀಬಾರ ಮಾಡಿದರು. ಮೂರು ನಾಲ್ಕು ಸಣ್ಣ ಸಣ್ಣ ಹುಡುಗರಿಗೆ ಗುಂಡಿನ ಪೆಟ್ಟುಗಳು ಬಿದ್ದವು. ಅವರನ್ನು ಆಸ್ಪತ್ರಿಗೆ ಕರೆದೊಯ್ಯಲಾಯಿತು.

ಹಾಯಕೋರ್ಟಿನ ಮುಂದೆ ಪಿಕೆಟಿಂಗ ಮಾಡುವದು ಹಾಗೆಯೇ ಸಾಗಿತ್ತು. ಜನರು ಗುಂಪು ಗುಂಪಾಗಿ ಅಲ್ಲಿ ಬಂದು ಸೇರಿದರು. ವಿಶ್ವವಿದ್ಯಾಲಯದ ಗಾರ್ಡನದಲ್ಲಿಯೂ ಜನರು ನೆರೆದಿದ್ದರು. ಅವರು ಜಯಜಯಕಾರ ಮಾಡುತ್ತಿದ್ದರು. ಸಾರ್ಜಂಟರು ಕೆಲವು ಲಾಠೀಪೋಲೀಸರೊಂದಿಗೆ ಅಲ್ಲಿಗೆ ಬಂದು ಅವರನ್ನೆಲ್ಲ ಹೊರಗೆ ಅಟ್ಟಿದರು. ವಿಶ್ವ ವಿದ್ಯಾಲಯದ ಮಾರ್ಗದಲ್ಲಿ ಒಬ್ಬ [illegible]ನು ಗಾಂಧಿ ಟೊಪ್ಪಿಗೆ ಹಾಕಿಕೊಂಡು ನಿಂತಿದ್ದನು. ಒಬ್ಬ ಸಾರ್ಜಂಟನು ಅವನಿಗೆ ಹೊರಟುಹೋಗಲು ಹೇಳಿದನು. ಅವನು ನಿರಾಕರಿಸಿದನು. ಸಾರ್ಜಂಟನು ಅವನ ಕಾಲಿಗೆ ಹೊಡೆದು ಅವನನ್ನು ನೂಕಿದನು. ಅಷ್ಟರಲ್ಲಿಯೇ ಓರ್ವ ಯುರೋಪಿಯನ್ [illegible] ಅಲ್ಲಿಗೆ ಬಂದು ಅವರಿಬ್ಬರ ನಡುವೆ ನಿಂತುಕೊಂಡು, ಸಾರ್ಜಂಟನಿಗೆ ಛೀ ಹಾಕಿದನು. ಪೋಲೀಸ ಕಮೀಶನರಾದ ಮಿ. ವ್ಹಿಲ್ಸನ್ನರು ಅಲ್ಲಿಗೆ ಬಂದು ದಯಮಾಡಿ ನಿಮ್ಮ ಹೆಸರು ತಿಳಿಸಿರಿ, ಎಂದು ಕೇಳಿದರು "ಹಿಂದುಸ್ಥಾನವನ್ನು ನಾನು ಪ್ರೀತಿಸುತ್ತೇನೆ" ಎಂದು ಅವರು ಉತ್ತರ ಕೊಟ್ಟರು. ನಾವೂ ಹಿಂದುಸ್ಥಾನವನ್ನು ಪ್ರೀತಿಸುತ್ತೇವೆ ಎಂಬುದಾಗಿ ಪೋ. ಕಮೀಶನರು ಹೇಳಿದರು. ಪತ್ರಿಕೆಯ ಪ್ರತಿನಿಧಿಗಳಿಗೂ ಅವರು ತಮ್ಮ ಹೆಸರು ಹೇಳಲಿಲ್ಲ.

ಆಜಾದ ಮೈದಾನದಲ್ಲಿ ಯುದ್ಧ ಮಂಡಳದವರು ಸಭೆ ಕರೆದಿದ್ದರು. ಪ್ರಚಂಡ ಜನಸಮುದಾಯವು ಅಲ್ಲಿ ನೆರೆದಿತ್ತು. ಪೋಲೀಸ ಅಧಿಕಾರಿಗಳು ಅಲ್ಲಿಗೆ ಬಂದು ಅವರನ್ನು ಚದುರಿಸಿದರು. ೬ ಗಂಟೆಗೆ ಯುದ್ಧಮಂಡಳದ ಅಧಿಕಾರಿಗಳು ಅಲ್ಲಿಗೆ ಬಂದರು. ಅಧ್ಯಕ್ಷರು ಭಾಷಣ ಮಾಡಹತ್ತಿದ ಕೂಡಲೆ ಪೋಲೀಸರು ಅವರನ್ನೂ ಹಾಗು ಇತರ ಅಧಿಕಾರಿಗಳನ್ನೂ ಸೆರೆಹಿಡಿದರು. ಜನರು ಮತ್ತೆ ಅಲ್ಲಿ ನೆರೆದರು. ಪೋಲೀಸರು ಲಾಠೀ ಚಾರ್ಜ ಮಾಡಿದರು, ನೂರಾರು ಜನರಿಗೆ ಗಾಯಗಳಾದವು. ಪೋಲೀಸ ಕಮೀಶನರ ಹಾಗು ಹೋಮಮೆಂಬರರು ಅಲ್ಲಿ ಪ್ರತ್ಯಕ್ಷ ಇದ್ದರು. ಜನರು ತಮ್ಮ ಮನೆಗೆ ಹೋಗುವ ಮುಂದೆ ಜಯ ಜಯಕಾರ ಮಾಡುತ್ತ ಹೋದರು. ಹಾದಿಯಲ್ಲಿ ನಿಂತಿದ್ದ ಸಾರ್ಜಂಟರು ಅವರ ತಲೆಯ ಮೇಲಿನ ಗಾಂಧಿ ಟೊಪ್ಪಿಗೆ ಕಸಿದುಕೊಂಡು ಅವುಗಳನ್ನು ಸುಟ್ಟರು. ಜನರು ಅಲ್ಲಿಯೇ ಅವರ ಸುತ್ತ ನೆರೆದು ನಿಷೇಧ ವ್ಯಕ್ತಪಡಿಸಿದರು. ಸಾರ್ಜಂಟರು ಲಾಠಿ ಪೆಟ್ಟು ಕೊಟ್ಟರು. ಜನರು ಹೊರಟು ಹೋದರು.

ಇವತ್ತಿನ ದಿವಸ ೧೦|| ಗಂಟೆಗೆ ಇಲ್ಲಿಯ ಪೋಸ್ಟ ಆಫೀಸದ ಹತ್ತಿರಿರುವ ಅಂಗಡಿಯಲ್ಲಿ, ಸ್ವದೇಶಿ ಸ್ಟೋರ್ಸದ ಉದ್ಘಾಟನ ಸಮಾರಂಭವು ಕರ್ಮವೀರ ದಿವಾಕರರ ಹಸ್ತದಿಂದ ಜರುಗತಕ್ಕದ್ದಿದೆ.

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

(ಪೂಣೆಯ ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನರವರ ಲೇಖದ ಅನುವಾದವು)

(ಹಿಂದಿನಿಂದ ಮುಂದೆ ಸಾಗಿದ್ದು)

ಬೋರಸಾದ ತಾಲೂಕದಲ್ಲಿಯ ಸ್ಥಿತಿಯಾದರೂ ನಡಿಯಾದ ಮತ್ತು ಆನಂದ ತಾಲೂಕಗಳಲ್ಲಿಯ ಸ್ಥಿತಿಗಿಂತ ಬೇರೆ ಪ್ರಕಾರವಿಲ್ಲ. ಭೂಮಿಯು ಸುಪೀಕವಾಗಿದ್ದು ಜೋಳ, ಸಜ್ಜೆ, ತಂಬಾಕು ಭತ್ತ ಮೊದಲಾದ ಬೆಳೆಗಳು ಇಲ್ಲಿ ಒಳ್ಳೇ ಫಲದಿಂದ ಬೆಳೆಯುತ್ತಿವೆ. ಈ ತಾಲೂಕದೊಳಗಿನ ಹಳ್ಳಿಗಳೂ ದೊಡ್ಡವಿದ್ದು, ಮತ್ತು ಅಲ್ಲಿಯ ಉತ್ತಮೋತ್ತಮ ಮನೆಗಳಿಂದಲೂ ಊರಲ್ಲಿರುವ ದೊಡ್ಡ ದೊಡ್ಡ ಕೆರೆಗಳಿಂದಲೂ ಆ ಹಳ್ಳಿಗಳು ಒಳ್ಳೇ ಭಂಭರಾಟಿಯಲ್ಲಿದ್ದದ್ದು ಕಣ್ಣಿಗೆ ಕಾಣುವಂತಿದೆ. ಇಲ್ಲಿ ಬೇರೆ ಬೇರೆ ಜಾತಿಯ ಜನ ಒಬ್ಬರೊಬ್ಬರ ಕೂಡ ನಿಜವಾಗಿಯೂ ಸ್ನೇಹ ಭಾವದಿಂದಿರುವರು. ಪಾಟಿದಾರರೇ ಭೂಮಿಗಳ ಒಡೆಯರಿದ್ದು ಅವರ ಬೇಸಾಯದ ಜಾಣ್ಮೆಯು ಸರ್ವಶ್ರುತವಿದೆ ಇಲ್ಲಿ ಬ್ರಾಹ್ಮಣರ ಸಂಖ್ಯೆಯು ತೀರ ಕಡಿಮೆ ಇದೆ. ಪಟ್ಟಣದಲ್ಲಿ ಮಾತ್ರ ಎಲ್ಲಿಗಾದರೊಬ್ಬ ಮುಸಲ್ಮಾನರನ್ನು ಪಾರ್ಸಿಯರನ್ನು ಕಾಣಬಹುದು. ಇಲ್ಲಿ ವಾಸಿಸುತ್ತಿರುವ ಮುಖ್ಯ ಜನಾಂಗವೆಂದರೆ ಧಾರಾಳಾ ಮತ್ತು ಬಾರಿಯಾ ಜಾತಿಯವರು. ಈ ಬಾರಿಯಾ ಜಾತಿಯ ಜನರು ಕ್ಷತ್ರಿಯ ರಜಪೂತ ವಂಶಜರಾಗಿರುವರು. ಮತ್ತು ಗುಜರಾಥದ ಉಳಿದ ೨೨ ಜಿಲ್ಲೆಗಳಿಗಿಂತಲೂ ಈ ಕೈರಾ ಜಿಲ್ಲೆಯಲ್ಲಿ, ಕಳವು, ಕೊಲೆ, ಸುಲಿಗೆ, ಹಾವಳಿಯು ಹೆಚ್ಚಿರುವದರ ಕಾರಣವಾದರೂ ಇವರೇ ಇರಬಹುದು. ಈಗ ಹತ್ತು ವರುಷಗಳ ಹಿಂದೆ ಈ ಕೈರಾ ಜಿಲ್ಲೆಯೆಂದರೆ ಹಿಂಸೆ ಮತ್ತು ಕೊಲೆ ಸುಲಿಗೆಗಳ ಆಗರವಾಗಿತ್ತು. ಆದರೆ ಈ ಹೊತ್ತು ಅದೇ ಕೈರಾ ಜಿಲ್ಲೆಯು ಅಹಿಂಸೆಯ ಅಗ್ರಸ್ಥಾನವಾಗಿ ಪರಿಣಮಿಸಿದೆ. ೧೯೨೩ನೇ ಇಸ್ವಿಯಲ್ಲಿ ಇಲ್ಲಿಯವರು ಪೋಲೀಸ ಟ್ಯಾಕ್ಸದ ವಿರುದ್ಧ ಸತ್ಯಾಗ್ರಹವನ್ನು ಹೂಡಿ ಆಗ ಎಚ್ಚೆತ್ತವರು. ಇಂದಿನವರೆಗೂ ಮಹಾತ್ಮಾ ಗಾಂಧಿಯವರ ತತ್ವಗಳನ್ನೇ ಹಿಂಬಾಲಿಸಲು ಯತ್ನಿಸುತ್ತಿರುವರು. ಸದ್ಯದ ಈ ಚಳವಳಿಯ ಆರಂಭದಿಂದಂತೂ ಇವರ ಆಚರಣೆಯು ಅತ್ಯಂತ ಸ್ತೋತ್ರಾರ್ಹವಾದದ್ದು. ಕಳೆದ ವರ್ಷದಲ್ಲಿ ಒಂದಾದರೂ ಹಿಂಸಾಚರಣೆಯು ಇವರಿಂದ ಸಂಭವಿಸಿಲ್ಲ. ಈ ತಾಲೂಕದಲ್ಲಿ ಸುತ್ತಿ ಒಡಾಡುವ ನಾಲ್ಕು ದಿನಗಳ ವರೆಗೆ ಒಂದೇ ಸಮನೆ ಬಲು ಶ್ರಮಪಟ್ಟೆವು. ಶಾಂತವಾದ ಈ ಹಳ್ಳಿಗಳ ಸ್ವಾಭಾವಿಕವಾದ ವಾತಾವರಣವೆಲ್ಲ ಅಳಿದುಹೋಗಿ ಎಲ್ಲಿ ನೋಡಿದಲ್ಲಿ ಸರಕಾರದ ಅತ್ಯಾಚಾರ ಜುಲುಮೆ ವ್ಯಾಕುಲತೆ ಇವೆ ನೆಲಗೊಂಡಿದ್ದನ್ನು ನಾವು ಕಂಡೆವೆಂದು ಹೇಳಲು ನನಗೆ ಯಾವ ಅತಂಕವೂ ಅನಿಸುವದಿಲ್ಲ. ಎದ್ದು ಆಡ್ಡಾಡಲಿಕ್ಕೆ ಕೂಡ ತ್ರಾಣವಿಲ್ಲದ ಮುಪ್ಪಿನ ಮುದುಕರನ್ನು ಸಹ ಪೋಲೀಸರು ಪ್ರಹರಿಸಿದ್ದನ್ನು ನಾವು ನಮ್ಮ ಎರಡೂ ಕಣ್ಣುಗಳಿಂದ ನೋಡಿದೆವು.

ಸ್ವಲ್ಪೇ ದಿನಗಳ ಹಿಂದೆ ಸುಖ ಸಮಾಧಾನದಿಂದ ತುಂಬಿ ತುಳುಕುತ್ತಿದ್ದ ಮನೆಗಳು ಸಟ್ಟನೆ ನೆಲಸಮವಾಗಿ ನಿಂತಿರುವ ಹೃದಯ ದ್ರಾವಕ ನೋಟವು ನಮ್ಮ ಕಣ್ಣಿಗೆ ಆಗಾಗ್ಗೆ ಬೀಳುತ್ತಿತ್ತು. ಲ್ಯಾಂಡರೆವಿನ್ಯೂ ಕೋಡದಲ್ಲಿಯ ನಿಯಮಗಳಿಗೆ ವಿರುದ್ಧವಾಗಿದ್ದರೂ, ರಂಟೆ ಕುಂಟೆ ಪಂಪು ಮೊದಲಾದ ಬೇಸಾಯದ ಅವಶ್ಯ ಉಪಕರಣಗಳನ್ನು ಸಹ ಜಪ್ತ ಮಾಡಿಕೊಂಡು ಹೋದ ಸಂಗತಿಯನ್ನಂತೂ ಹೆಜ್ಜೆ ಹೆಜ್ಜೆಗೆ ಕೇಳುತ್ತಿದ್ದೆವು. ಪೋಲೀಸರ ಒಡೆತಕ್ಕೆ ಬೆದರಿ ರೈತರೆಲ್ಲರೂ ತಮ್ಮ ಮನೆಮಾರುಗಳನ್ನು ಬಿಟ್ಟು ಓಡಿಹೋದದ್ದರಿಂದ "ಬೇಚರಾಕ" ಆಗಿರುವ ಅನೇಕ ಹಳ್ಳಿಗಳು ನಮ್ಮ ಹಾದಿಯಲ್ಲಿ ಹತ್ತಿದವು. ಆಯಾ ಊರುಗಳ "ಬದ್ಧಾಕಿ" ಗಳನ್ನು ಆರಿಸಿ ಅವರನ್ನು ಆ ಆ ಊರ ಗೌಡರನ್ನಾಗಿ ಹೊಸದಾಗಿ ನೇಮಿಸಿರುವದನ್ನೂ ನಾವು ನೋಡಿದೆವು. ಜಾತಿಮತ್ಸರಕ್ಕೆ ಪ್ರಯತ್ನ ಪೂರ್ವಕ ಪ್ರೋತ್ಸಾಹನೆ ಕೊಟ್ಟು, ಜಾತಿಜಾತಿಗಳಲ್ಲಿ ದ್ವೇಷ ಬೆಳೆಸುತ್ತಿರುವದರ ಅಂದರೆ ಪ್ರಜೆಗಳಲ್ಲಿ ಒಡಕು ಹುಟ್ಟಿಸಿ ಅವರನ್ನಾಳಬೇಕೆಂಬ ಇಂಗಿತದ ಪ್ರತ್ಯಕ್ಷ ಪುರಾವೆಗಳು ಇಲ್ಲಿ ನಮಗೆ ಅನೇಕ ಸಿಕ್ಕಿವೆ. ಇವೆಲ್ಲ ಸಂಗತಿಗಳ ಬಗ್ಗೆ ಆಯಾ ಹಳ್ಳಿಗಳಲ್ಲಿ ಆಗಿಂದಾಗಲೆ ನಾನು ಟಿಪ್ಪಣಿ ಮಾಡಿಕೊಂಡದ್ದು ಅದು ಐದು ಪುಟಗಳಿಗಿಂತ ಹೆಚ್ಚಾಗಿವೆ ನಾವು ಕರೆದು ಸಾಕ್ಷಿ ತಗೊಂಡ ಜನರ ಹೆಸರುಗಳು ನನ್ನ ಟಿಪ್ಪಣಿಯಲ್ಲಿವೆ ಹೀಗೆ ನಾನು ಟೀಪು ಮಾಡಿಕೊಂಡಿರುವದರೊಳಗಿಂದ ಮಾದರಿ ಎಂದು ಸ್ವಲ್ಪ ಇಲ್ಲಿ ಹೇಳಬೇಕೆನ್ನುತ್ತೇನೆ

(ಮುಂದೆ ಸಾಗುವದು)

ಜೇಲಿನಲ್ಲಿ ಹುಟ್ಟಿ ಜೇಲಿನಲ್ಲಿಯೇ ಮರಣ ಹೊಂದಿತು

ಕಾನಪುರದಲ್ಲಿ ಶ್ರೀ ವೀರೇಂದ್ರ ಶರ್ಮಾ ಎಂಬ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಿರುವರು. ಅವರಿಗೆ ಶ್ರೀಮತಿ ಸರಲಾದೇವಿಯೆಂಬ ಒಬ್ಬ ಹೆಂಡತಿ ಇರುವಳು. ಇಬ್ಬರೂ ಕೂಡಿಯೇ ಕಾಂಗ್ರೆಸ್ ಚಳವಳಿಯನ್ನು ಆ ಭಾಗದಲ್ಲಿ ಜೋರಿನಿಂದ ನಡೆಸಿದರು. ಅಧಿಕಾರಿಗಳ ವಕ್ರದೃಷ್ಟಿಯು ಅವರ ಮೇಲೆ ಬಿತ್ತು. ಶ್ರೀಮತಿಯವರನ್ನು ಡಿಸೆಂಬರ ೨೪ನೆಯ ತಾರೀಖಿನ ದಿವಸ ಸೆರೆ ಹಿಡಿದೊಯ್ದರು. ಲಾಕಪ್ಪಿನಲ್ಲಿ ಇಟ್ಟರು. ಶ್ರೀಮತಿಯವರು ತುಂಬಾ ಬಸುರಾಗಿದ್ದರು. ೯ ತಿಂಗಳುಗಳು ತುಂಬಿ ಹೋಗಿದ್ದವು. ಹೆರಿಗೆಯ ಕಾಲವು ತೀರ ಸಮೀಪಿಸಿತ್ತು. ತಾ|| ೯ನೆಯ ದಿವಸ ಅವರು ಲಾಕಪ್ಪಿನಲ್ಲಿಯೇ ಒಂದು ಕೂಸನ್ನು ಹೆತ್ತರು. ಜೇಲಿನ ಅಧಿಕಾರಿಗಳು ಈ ಬಗ್ಗೆ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ ಶ್ರೀ ವೀರೇಂದ್ರ ಶರ್ಮಾರವರಿಗೂ ಈ ಸುದ್ದಿಯನ್ನು ಹೇಳಿ ಕಳಿಸಲಿಲ್ಲ

ಶ್ರೀ ವೀರೇಂದ್ರ ಶರ್ಮಾರವರು ಕೆಲವು ಜನರೊಂದಿಗೆ ಕೂಡಿಕೊಂಡು ಎಂದಿನಂತೆಯೆ ಶ್ರೀಮತಿಯವರನ್ನು ಕಾಣಲು ತಾ|| ೧೧ನೆಯ ದಿವಸ ಜೇಲಿಗೆ ಹೋದರು. ತಮ್ಮ ಹೆಂಡತಿಯು ಹಡೆದ ಸುದ್ದಿಯು ಅವರಿಗೆ ಜೇಲ ಕಂಪೌಂಡಿನಲ್ಲಿಯೇ ತಿಳಿದು ಬಂತು ಅವರು ಆನಂದ ಭರಿತರಾದರು. ಲಗುಬಗೆಯಿಂದ ಶ್ರೀಮತಿಯವರ ಕೋಣೆಗೆ ತೆರಳಿದರು. ಅಲ್ಲಿ ಹೋಗಿ ನೋಡುತ್ತಾರೆ! ಆ ಕೂಸು ಸತ್ತು ಹೋಗಿತ್ತು! ಕೂಸಿನ ದೇಹವು ತನಗೂ ತನ್ನ ಪತಿಗೂ ಸಂಬಂಧಿಸಿದ್ದಿರದೆ, ಕಾಂಗ್ರೆಸ್ಸದವರಿಗೆ ಸಂಬಂಧಿಸಿದೆಯೆಂದು ಹೇಳಿ, ಶ್ರೀಮತಿಯವರು ಅದನ್ನು ಜೇಲ ಅಧಿಕಾರಿಗಳ ಕೈಯಲ್ಲಿ ಒಪ್ಪಿಸಲು ನಿರಾಕರಿಸಿದರು.

ಅಷ್ಟರಲ್ಲಿಯೇ ಈ ಸುದ್ದಿಯು ಊರಲ್ಲೆಲ್ಲ ಹಬ್ಬಿಕೊಂಡಿತು. ಎಲ್ಲರಿಗೂ ಅಸಂತೋಷವುಂಟಾಯಿತು. ಶ್ರೀಮತಿಯವರಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ಕಾಂಗ್ರೆಸ್ ಅಧಿಕಾರಿಗಳು ಸಾರ್ವಜನಿಕ ಸಭೆ ಸೇರಿಸಿದರು. ಅಪೂರ್ವ ಆತ್ಮತ್ಯಾಗಕ್ಕಾಗಿ ಶ್ರೀಮತಿಯವರನ್ನು ಹೊಗಳಿ, ಸರಕಾರಿ ಅಧಿಕಾರಿಗಳ ನಿಷ್ಠುರ ವರ್ತನೆಯನ್ನು ನಿಷೇಧಿಸಿದರು. ಬಳಿಕ ಎಲ್ಲರೂ ಕೂಡಿಕೊಂಡು ಮೆರವಣಿಗೆಯಿಂದ ಆ ಕೂಸನ್ನು ಗಂಗಾನದಿಯ ತೀರಕ್ಕೆ ತೆಗೆದುಕೊಂಡುಹೋಗಿ, ಅದನ್ನು ಅಲ್ಲಿ [illegible] ಬಂದರು

ಶ್ರೀ ಮುದವೀಡು ಕೃಷ್ಣರಾಯರಿಗೆ ೧ ತಿ. ಶಿಕ್ಷೆ

ಧಾರವಾಡದಲ್ಲಿ ಸಾರ್ವಜನಿಕವಾಗಿ ಭಾಷಣ ಮಾಡಕೂಡದೆಂಬುದಾಗಿ ಅಧಿಕಾರಿಗಳು ಹೊರಡಿಸಿದ ಅಪ್ಪಣೆಯನ್ನು ಅಮಾನ್ಯ ಮಾಡಿ, ರಾಷ್ಟ್ರಧ್ವಜವಂದನೆಯ ಸಮಾರಂಭದ ಕಾಲಕ್ಕೆ ಭಾಷಣ ಮಾಡಿದ ಕರ್ನಾಟಕದ ಕಡುಗಲಿಗಳಾದ ಶ್ರೀ ಮುದವೀಡು ಕೃಷ್ಣರಾಯರ ಖಟ್ಲೆಯ ವಿಚಾರಣೆಯು, ಧಾರವಾಡದಲ್ಲಿ ಶ್ರೀ ದಿವೇಕರರ ಕೋರ್ಟಿನಲ್ಲಿ ನಡೆದು, ತಾ|೧೫ ನೆಯ ದಿವಸ ಅವರಿಗೆ ೫೦ ರು ದಂಡ ಇಲ್ಲವೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲಾಯಿತು. ಶ್ರೀ ಕೃಷ್ಣರಾಯರು ದಂಡವನ್ನು ಕೊಡಲು ನಿರಾಕರಿಸಿ, ಸೆರೆಮನೆಯ ಅನುಭವವನ್ನು ತೆಗೆದುಕೊಳ್ಳಲು ಮತ್ತೆ ಮೂರನೆಯ ಸಾರೆ ಕಾರಾಗೃಹಕ್ಕೆ ತೆರಳಿದರು. ಅಸಹಕಾರ ಚಳವಳಿಯಲ್ಲಿ ಇವರಿಗೆ ಎರಡು ಸಾರೆ ಶಿಕ್ಷೆಯಾಗಿತ್ತು.

ಶ್ರೀ ಭಿಸೆಯವರಿಗೆ
೯ ತಿಂಗಳ ಶಿಕ್ಷೆ

ಮರಾಠಾ ಸಮಾಜದ ಸುಪ್ರಸಿದ್ಧ ಮುಂದಾಳುಗಳೂ, ಧಾರವಾಡ ನಗರ ಸಭೆಯ ಸಭಾಸದರೂ ಆಗಿರುವ ಶ್ರೀ ನಾಗಿಂಗರಾವ ಭಿಸೆಯವರಿಗೆ ೧೨೪ ನೆಯ ಕಲಮಿನನ್ವಯ ತಾ|೧೬ ನೆಯ ದಿವಸ ೯ ತಿಂಗಳ ಕಾರಾಗೃಹವಾಸದ ಶಿಕ್ಷೆಯು ದೊರೆತಿದೆ.

ಹಾವೇರಿಯಲ್ಲಿ ಲಾಠೀರಾಜ್ಯ
೧೨ ಜನರಿಗೆ ಗಾಯ

ಶ್ರೀ ನಥಶಿಪ್ಪಿ ಮೊದಲಾದವರನ್ನು ಸೆರೆಗೆ ಹಾಕಿದ ಸುದ್ದಿಯನ್ನು ಕೇಳಿದ ಕೂಡಲೆ ತಾ|| ೧೩ ನೆಯ ದಿವಸ ಸಂಪೂರ್ಣ ಹರತಾಳ ಪಾಲಿಸಲಾಯಿತು. ಊರ ಜನರು ಮೆರವಣಿಗೆ ಹೊರಡಿಸಿದರು. ಊರಲ್ಲಿ ಅಲ್ಲಲ್ಲಿ ಪೋಲೀಸರ ಗುಂಪುಗಳ ಸಜ್ಜಾಗಿ ನಿಲ್ಲಿಸಲ್ಪಟ್ಟಿದ್ದವು. ಮೆರವಣಿಗೆಯು ದ್ಯಾಮವ್ವನ ಕಟ್ಟೆಗೆ ಬರುವತನಕ ಮಾಮಲೇದಾರರೂ ಫೌಜದಾರರೂ ಅಲ್ಲಲ್ಲಿ ಅದಕ್ಕೆ ಅಡ್ಡಿ ಮಾಡಿದರು. ಆದರೂ ಮೆರವಣಿಗೆಯವರು ಚದರಿ ಹೋಗಲಿಲ್ಲ. ಪೋಲೀಸರು ಲಾಠೀ ಪ್ರಹಾರ ಮಾಡಿದರು. ೧೦-೧೨ ಜನರಿಗೆ ಗಾಯಗಳಾಗಿವೆ. ಶ್ರೀ ಚನ್ನಮಲ್ಲಪ್ಪ, ಶಾಂತಾರಾಮ, ಅನಘಾನ, ಕರಿಗುದರಿ, ಕಾಂಡೂರ, ನಾಡಿಗೇರ, ಗುಡ್ಡೋ ಕುಲಕರ್ಣಿ ಮೊದಲಾದ ೧೩ ಜನರನ್ನು ಹಿಡಿದಿದ್ದಾರೆ. ಒಂದು ವಾರದವರೆಗೆ ಸಭೆಗಳನ್ನು ಜರುಗಿಸಕೂಡದೆಂಬುದಾಗಿ ಅಧಿಕಾರಿಗಳು ಪ್ರಕಟನೆಯನ್ನು ಹೊರಡಿಸಿದ್ದಾರೆ.

ಬಳ್ಳಾರಿಯಲ್ಲಿ
೧೪೪ನೆಯ ಕಲಮು ಮುರಿದರು

(ಸ್ವಂತ ಸುದ್ದಿಗಾರರಿಂದ)

ತಾ|| ೧೬ನೆಯ ದಿವಸ ಇಲ್ಲಿಯ ಶ್ರೀ ಆಸುರಪ್ಪ ಗದಗ ಇವರು ಇತರ ನಾಲ್ಕು ಜನ ಸ್ವಯಂಸೇವಕರೊಡನೆ, ಬೆಳಗ್ಗೆ ಪ್ರಭಾತಸಂಕೀರ್ತನೆಯನ್ನು ಹೊರಡಿಸಿ, ೧೪೪ನೆಯ ಕಲಮನ್ನು ಮುರಿದರು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಅವರಿಗೆ ಅಡ್ಡಿಮಾಡಿ ಅವರನ್ನು ಸೆರೆಹಿಡಿದು ಕೊಂಡು ಹೋದರು.

ಲಾಹೋರ ಒಳಸಂಚಿನ ಖಟ್ಲೆಯ ಆರೋಪಿಗಳಾಗಿರುವ ಇಬ್ಬರು ಪಂಜಾಬಿ ತರುಣರನ್ನು ಈ ಊರಿನ ಸೆಂಟ್ರಲ್ ಜೇಲಿಗೆ ತಂದಿರುತ್ತಾರೆ.

ಅಜಮೀರದಲ್ಲಿ
ಬಾಂಬು ಹಾರಿತು

ಅಜಮೀರದಲ್ಲಿಯ ಪೋಲೀಸ ಚಾಕಿಯ ಬಾಗಿಲದ ಹತ್ತರ ತಾ|೧೨ ನೆಯ ದಿವಸ ರಾತ್ರಿ ಒಮ್ಮಿಂದೊಮ್ಮೆ ಒಂದು ಬಾಂಬು ಹಾರಿತು. ಬಾಂಬು ಹಾರಿದ ಸಪ್ಪಳವನ್ನು ಕೇಳಿದಕೂಡಲೆ ಯಾವತ್ತು ಪೋಲೀಸರು ಅಲ್ಲಿಗೆ ಬಂದು ಆ ಬಗ್ಗೆ ಶೋಧ ನಡಿಸಿದರು. ಕೆಲವು ಕಾಜಿನ ಚೂರುಗಳು ಅವರಿಗೆ ಸಿಕ್ಕವು. ಬಾಂಬು ಹಾರಿದ್ದರಿಂದ ಯಾರಿಗೂ ಅಪಾಯವಾಗಿಲ್ಲ. ಅಧಿಕಾರಿಗಳು ಅಪರಾಧಿಗಳನ್ನು ಕಂಡು ಹಿಡಿಯಲು ಓಡಾಡುತ್ತಾರೆ.

ಬರ್ಮಾದಲ್ಲಿ ಬಂಡುಗಾರರು
ಸ್ಟೇಶನ್‌ಮಾಸ್ತರನನ್ನು ಕೊಂದರು

ಬರ್ಮಾ ಪ್ರಾಂತದಲ್ಲಿಯ ೫೦ ಜನ ಬಂಡುಗಾರರು ಇಬ್ಬಗಾನ ಎಂಬ ಸ್ಟೇಶನದ ಮೇಲೆ ಹಲ್ಲೆಮಾಡಿ ತಂತಿಯ ಕಂಬಗಳನ್ನು ಕಿತ್ತಿ ಒಗೆದು, ಅಲ್ಲಿಯ ಸ್ಟೇಶನ್‌ಮಾಸ್ತರನನ್ನು ಕೊಂದು ಒಗೆದಿದ್ದಾರೆಂಬಾಗಿ ಸರಕಾರಿ ಪ್ರಕಟನೆಯು ಪ್ರಸಿದ್ಧವಾಗಿದೆ

ಕರ್ನಾಟಕ ವ್ಯಾಪಾರ ಸಂಘ
೨ನೇ ವಾರ್ಷಿಕ ಸಾಧಾರಣ ಸಭೆ

ಈ ಸಂಘದ ೨ನೇ ವಾರ್ಷಿಕ ಸಾಧಾರಣ ಸಭೆಯು ಇದೇ ತಿಂಗಳ ಸೋಮವಾರ ತಾ|೨೬ನೇಯ ದಿವಸ ಮುಂಜಾನೆ ೮ ಘಂಟೆಗೆ ಗದಗಿನ ಕಾಟನ್ ಮಾರ್ಕೇಟದ ಆಫೀಸಿನಲ್ಲಿ ಸೇರತಕ್ಕದ್ದಿದ್ದು, ಅಲ್ಲಿ ಸೊಲ್ಲಾಪುರದ ವೀರಾಳುಗಳು, ಮಹನ್ಮದಅಲ್ಲಿ, ಶಂಕರಪ್ಪಣ್ಣಾ ಸಕ್ರಿ ಹಾಗು ದೆಂಬಳಿಗ ಇವರ ಬಗ್ಗೆ ದುಃಖ ಪ್ರದರ್ಶನ ಮಾಡುವದು, ಮುಂದಿನ ವರ್ಷದ ಬಗ್ಗೆ ಕಾರ್ಯಕಾರಿ ಮಂಡಳದ ಅಧಿಕಾರಿಗಳನ್ನು ಆರಿಸುವದು, ಕಳೆದ ವರ್ಷದ ವರದಿ ಹಾಗು ಲೆಕ್ಕ ಓದುವದು, ವಿಜಾಪುರ ಮತ್ತು ಇತರ ಎಂ.ಎಸ್.ಎಮ್. ರೆಲ್ವೆಸ್ಟೇಶನುಗಳ ಮೇಲೆ ನೀರಿನ ವ್ಯವಸ್ಥೆ ಮಾಡಲು ಅಧಿಕಾರಸ್ಥರಿಗೆ ಕೇಳಿಕೊಳ್ಳುವದು, ಗುದಾಮು ಹಾಗು ದಸ್ತೈವಜ ಚಾರ್ಜುಗಳನ್ನು ಇಳಿಸಲು ಒತ್ತಾಯ ಪಡಿಸುವದು, ನ್ಯಾಯಕ್ಕಾಗಿ ರಾಜಕೀಯ ಕೈದಿಗಳಿಗೆ ಅ ಇಲ್ಲವೆ ಬ ವರ್ಗ ಕೊಡಬೇಕೆಂದೂ ಧಾರ್ಮಿಕ ವಿಷಯಗಳಲ್ಲಿ ಅವರಿಗೆ ತೊಂದರೆ ಕೊಡಬಾರದಾಗಿಯೂ ಸರಕಾರದವರಿಗೆ ಕೇಳಿಕೊಳ್ಳುವದು, ಕಾರ್ಡ್, ಪಾಕೀಟು ಹಾಗು ತಾರಿನ ದರಗಳನ್ನು ಕಡಿಮೆ ಮಾಡಲು ಮತ್ತು ಎಷ್ಟಿಯ ಹೊಸ ನಿಯಮವನ್ನು ರದ್ದುಪಡಿಸಲು ಅಧಿಕಾರಿಗಳಿಗೆ ವಿನಂತಿ ಮಾಡಿಕೊಳ್ಳುವದು, ಇನಕಂಟ್ಯಾಕ್ಸ ತೆಗೆದು ಹಾಕಲು ಕೇಳಿಕೊಳ್ಳುವದು, ಕರವನ್ನು ಹೆಚ್ಚಿಸಕೂಡದೆಂದೂ, ಕೆಲವು ಅನಾವಶ್ಯಕ ಖಾತೆಗಳನ್ನು ತೆಗೆದುಹಾಕಬೇಕೆಂದೂ ಸರಕಾರಕ್ಕೆ ಕೇಳಿಕೊಳ್ಳುವದು, ಹಸ್ತೆ ಸೂಟಬಿಡಲು ಹಾಗು ಅದನ್ನು ಅರ್ಧಕ್ಕೆ ಇಳಿಸಲು ಒತ್ತಾಯಪಡಿಸುವದು, ಕರಿಕಾಲುವೆಗಳ ಯೋಜನೆಯನ್ನು ಮಾಡಲು ಕೇಳಿಕೊಳ್ಳುವದು, ಮೋಟಾರು ದ್ವಾರದಿಂದ ಟಪಾಲು ಕಳಿಸುವ ಯೋಜನೆ ಮಾಡಬೇಕಾಗಿ ಬೇಡಿಕೊಳ್ಳುವದು, ಇವೇ ಮೊದಲಾದ ವಿಷಯಗಳು ಸಭೆಯ ಮುಂದೆ ಬರತಕ್ಕವಿವೆ. ಕಾರಣ ಎಲ್ಲರೂ ಅವಶ್ಯಕವಾಗಿ ಬರಲೇಬೇಕಾಗಿ ನಮ್ರ ಬಿನ್ನಹವಿದೆ.

ಬಾಗಲಕೋಟೆ } ಮುರಿಗೆಪ್ಪ ಜಂಗಿನ
೧೬—೧—೧೯೩೧ } ಗೌ. ಕಾರ್ಯದರ್ಶಿಗಳು

ಶ್ರೀ ಮಹಾದೇವ ಭಾಯಿಯವರು ಉಪವಾಸ ಮಾಡಿದರು.

ಸಾಬರಮತಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಶ್ರೀ ಮಹಾದೇವ ಭಾಯಿ ದೇಸಾಯಿಯವರು, ಗಲ್ಲಿಗೇರಿಸಲ್ಪಟ್ಟ ಸೊಲ್ಲಾಪುರದ ಮುಂದಾಳುಗಳಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ತಾ|| ೧೨ನೆಯ ದಿವಸ ಉಪವಾಸ ಮಾಡಿದರು.

ಸಾಬರಮತಿ ಜೇಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ರಾಜಕೀಯ ಕೈದಿಗಳ ವರ್ಗೀಕರಣವನ್ನು ರದ್ದುಪಡಿಸಲು ಅವರು ಜೇಲ ಇನಸ್ಪೆಕ್ಟರರಿಗೆ ಒಂದು ಪತ್ರವನ್ನು ಬರದಿರುವರಾಗಿ ತಿಳಿಯುತ್ತದೆ.

ಶಿರಾಸ ಸಾಹೇಬರು ಮತ್ತೆ ಸಿಟ್ಟಿಗೆದ್ದರು.

ಸೊಲ್ಲಾಪುರದ ಮುಂದಾಳುಗಳನ್ನು ಗಲ್ಲಿಗೇರಿಸಿದ್ದರ ನಿಷೇಧಾರ್ಥವಾಗಿ ಅಹಮ್ಮದಾಬಾದದಲ್ಲಿ ತಾ|| ೧೩ನೆಯ ದಿವಸ ಹರತಾಳ ಪಾಳಿಸಿದರು. ಅಲ್ಲಿಯ ಕಾಲೇಜದ ವಿದ್ಯಾರ್ಥಿಗಳು ಅಂದು ಕಾಲೇಜಕ್ಕೆ ಹೋಗಲಿಲ್ಲ. ಪ್ರಿನ್ಸಿಪಾಲರಾದ ಶಿರಾಸ ಸಾಹೇಬರು ಸಿಟ್ಟಿಗೆದ್ದು, ಅಂದು ಕಾಲೇಜಕ್ಕೆ ಬಂದೇ ಇದ್ದ ಎಲ್ಲ ವಿದ್ಯಾರ್ಥಿಗಳಿಗೂ ಜವಾಬು ಕೊಡಲು ಕೇಳಿಕೊಂಡಿದ್ದಾರೆ. ವಿದ್ಯಾರ್ಥಿಗಳು ಹಿಂದಕ್ಕೊಮ್ಮೆ ಇವರಿಗೆ ಚಳ್ಳಹಣ್ಣು ತಿನಿಸಿದ್ದರು. ಅದನ್ನು ಸಾಹೇಬರು ಇಷ್ಟರಲ್ಲಿಯೇ ಹೇಗೆ ಮರೆತರೋ ಏನೋ!

ಡಾಕೋರದಲ್ಲಿ ಗೋಳಿಬಾರು

ಯರೋಡಾದಲ್ಲಿ ಗಲ್ಲಿಗೇರಿಸಲ್ಪಟ್ಟ ಸೊಲ್ಲಾಪುರದ ಮುಂದಾಳುಗಳಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ, ತಾ|| ೧೩ನೆಯ ದಿವಸ, ಅಹಮ್ಮದಾಬಾದ ಜಲ್ಲೆಯ ಡಾಕೋರದಲ್ಲಿ ಮೆರವಣಿಗೆಯು ಹೊರಟಿತ್ತು. ಪೋಲೀಸ ಅಧಿಕಾರಿಗಳು ಅದನ್ನು ಹಾದಿಯಲ್ಲಿ ತಡೆದರು. ಜನರು ಅಲ್ಲಿಯೇ ಕುಳಿತುಕೊಂಡು ಬಿಟ್ಟರು. ಪೋಲೀಸರು ಮೊದಲು ಎಚ್ಚರಿಕೆಯನ್ನು ಕೊಡದೆ ಒಮ್ಮೆಂದೊಮ್ಮೆ ಗೋಳೀಬಾರ ಮಾಡಿದರು. ಇಷ್ಟರಿಂದ ಭಯಂಕರ ಗಾಯಗಳಾದವು. ಗೋಳೀಬಾರಿಗೆ ಬೆದರಿ ಅನೇಕ ಜನರು ಓಡಿಹೋದರು.

ಕೆಲವರು ಅಲ್ಲಿಯೇ ನಿಂತುಕೊಂಡರು. ಪೋಲೀಸರು ಅವರ ಮೇಲೆ ಏರಿಹೋಗಿ ಅವರನ್ನು ಲಾಠಿಗಳಿಂದ ಥಳಿಸಿದರು. ಒಟ್ಟಿಗೆ ೧೭೫ ಜನರಿಗೆ ಪೆಟ್ಟು ಬಿದ್ದವೆ.

ಹಿಂದುಸ್ಥಾನ ಸರಕಾರಕ್ಕೆ ೭ ಕೋಟಿ ರುಪಾಯಿ ಹಾನಿ

ಈ ವರ್ಷದ ಅಂದಾಜ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಹಿಂದುಸ್ಥಾನ ಸರಕಾರಕ್ಕೆ ಒಟ್ಟಿಗೆ ೭ ಕೋಟಿ ರುಪಾಯಿಗಳು ಕಡಿಮೆ ಬಿದ್ದಿವೆಯೆಂದೂ, ಪರದೇಶದಿಂದ ಇಲ್ಲಿಗೆ ಈ ವರ್ಷ ಸರಕುಗಳು ಕಡಿಮೆ ಬಂದಿದ್ದರಿಂದ, ಸಮುದ್ರ ಹಾಗು ಭೂಮಿಯ ಮೇಲಿನ ಜಕಾತಿಯು ಲೆಕ್ಕ ಮಾಡಿದಷ್ಟು ಬರದೇ ಇದ್ದದ್ದೇ ಇದಕ್ಕೆ ಕಾರಣವಾಗಿದೆಯೆಂದೂ ತಿಳಿಯಬರುತ್ತದೆ. ಬಹಿಷ್ಕಾರದ ಪರಿಣಾಮ!

ಪ್ರಕಟನೆ

ಬಾಗಲಕೋಟೆಯ ಶ್ರೀ ಬಸವೇಶ್ವರ ಹಾಯಸ್ಕೂಲ ಪ್ಲೇಗಿನ ಮೂಲಕ ಬಂದು ಇಡಲ್ಪಟ್ಟಿದ್ದು ಈಗ ಸೋಮವಾರ ತಾ|| ೧೯-೧-೩೧ ನೇ ದಿವಸ ಪುನಃ ಪ್ರಾರಂಭ ವಾಗುವದು. ೧ ರಿಂದ ೭ನೇ ಇಯತ್ತೆಯ ವರೆಗೆ ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾಪ್ರಕಾರ ನಡೆಯುವದು. ವಿದ್ಯಾರ್ಥಿಗಳು ಸಕಾಲಕ್ಕೆ ಬರಬೇಕು.

ಬಾಗಲಕೋಟ ತಾ|| ೧೭-೧-೧೯೩೧

ಎಚ್. ಎಫ್. ಕಟ್ಟೀಮನಿ

ಪ್ರಿನ್ಸಿಪಾಲ.

ಬುಕ್ ಬಾಯಿಂಡಿಂಗದ ಹೊಸ ವ್ಯವಸ್ಥೆ

ನಮ್ಮಲ್ಲಿ ಗೋಲ್ಡಗಿಲ್ಟ ಸಹಿತ ಅತ್ಯುತ್ತಮವಾಗಿ ಬಾಯಿಂಡಿಂಗದ ಕೆಲಸವು ಸೋವಿದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸಗಳನ್ನೂ ಕಾಗದಪತ್ರ ಇಡುವ ಮತ್ತು ರೊಕ್ಕಾ ಹಾಕುವ ಪಾಕೇಟುಗಳನ್ನು ಕೊಗಲಿನಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವೆವು. ಪೋರ್ಟಫೋಲಿಯೋ ಮತ್ತು ಫಾಯಿಲದ ರಟ್ಟುಗಳನ್ನು ಮಾರಾಟಕ್ಕೆ ತಯಾರಿಸಿ ಇಟ್ಟಿದ್ದೇವೆ. ವ್ಯಾಪಾರಸ್ಥರಿಗೆ ಕಡಿಮೆ ದರದಿಂದ ಸಪ್ಲಾಯ ಮಾಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉಡಪೀಕರ

ಪ್ರೊಪ್ರಾಯಟರ ದಿ ನ್ಯೂ ಬುಕ್ಕ ಬಾಯಿಂಡಿಂಗ ವರ್ಕ್ಸ ಹೊಸಬಾಜಾರ ಹವಾಲದಾರ ಬಿಲ್ಡಿಂಗ

ವಿಜಾಪೂರ.

ವಾಚ, ಟಾಯಿಂಪೀಸ ದುರಸ್ತಿ ಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನು ಮೊದಲಾದವುಗಳನ್ನು ಜನಕ್ಕೆ ಸೋವಿದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದುಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ- ಆರ್. ಡಿ. ಸಿಂಧೆ

ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟ

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತಿರವಿರುವ ೩೩೦ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧಾರವಾಡೆ

ವಕೀಲರು ಬಾಗಲಕೋಟೆ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಕ್ಕೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಸೇತುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮

ನಿತ್ಯ ಸಂಚಿಕೆ.

ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥ - मनु.

ಕನ್ನಡಿಗ

KANNADIGA
BAGALKOT

BI-WEEKLY
ಅರೆವಾರ ಪತ್ರಿಕೆ.

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೦] ಬಾಗಲಕೋಟೆ— ಮಂಗಳವಾರ ತಿಥಿ ಮಾಘ ಶುದ್ಧ ೨ ಶಕೆ ೧೮೫೧ ತಾ|| ೨೦—೧—೩೦ [ಸಂಚಿಕೆ ೧೬೯

ಬೆಳಗಾವಿಯಲ್ಲಿ

೧೮ ಜನ ಹೆಂಗಸರನ್ನು ಸೆರೆಹಿಡಿದರು.

[ತಂತಿಯ ವಾರ್ತೆ ಬೆಳಗಾವಿ ತಾರೀಖು ೧೯—೧—೧೯೩೦]

ನಿನ್ನೆ ಆದಿತ್ಯವಾರ ದಿವಸ ಮುಂಜಾನೆ ಸುಮಾರು ೬೦ ಜನ ಸ್ತ್ರೀಯರು ಟಿಳಕ ಚೌಕಿನಲ್ಲಿ ಜರುಗಲಿಕ್ಕಿದ್ದ ರಾಷ್ಟ್ರಧ್ವಜವಂದನೆಯ ಸಮಾರಂಭಕ್ಕೆ ಮೆರವಣಿಗೆಯಿಂದ ಹೊಂಟಿದ್ದರು. ಆಗ ಕೆಲವು ಜನ ಪೋಲೀಸರು ಮೋಟಾರ ಲಾರಿಯಲ್ಲಿ ಕುಳಿತುಕೊಂಡು ಬಂದು ಅವರನ್ನು ಹಾದಿಯಲ್ಲಿ ಅಡ್ಡಗಟ್ಟಿ, ಅವರಲ್ಲಿ ಶ್ರೀಮತಿ ಲಕ್ಷ್ಮೀಬಾಯಿ ಸೋಹನಿ, ಗಂಗಾಬಾಯಿ ಸೋಹನಿ, ಕಾಶೀಬಾಯಿ ಗದ್ರೆ, ಲಕ್ಷ್ಮೀಬಾಯಿ ಜೋಶಿ (ಜೋಶಿ ನಾರಾಯಣರಾಯರ ಪತ್ನಿಯವರು), ಸತ್ಯಭಾಮಾಬಾಯಿ ಪ್ರಭು, ಮಾನಕಾಬಾಯಿ ಗುಂಜೀಕರ, ಕಮಲಾಬಾಯಿ ಗುಂಜೀಕರ, ಕಮಲಾಬಾಯಿ ನಾಯಿಕ, ಯಲ್ಲೂಬಾಯಿ ಪಾಟೀಲ, ತಾರಾಬಾಯಿ ಜೋಶಿ, ಮುಕ್ತಾಬಾಯಿ ಶಿರೋಡಕರ, ಗಂಗಾಬಾಯಿ ಪಾಲನಕರ, ಶಾಂತಾಬಾಯಿ ಕೋವಾಡಕರ, ಯಮುನಾಬಾಯಿ ಧಾರವಾಡಕರ, ಪಾರ್ವತಿಬಾಯಿ ಕಜರೇಕರ, ದುರ್ಗಾಬಾಯಿ ಕಜರೇಕರ, ಶಾಂತಾಬಾಯಿ ಸಾಡಕರ್ಣಿ, ಕುಳವಾಬಾಯಿ ಆನಿಖಿಂಡಿ ಹೀಗೆ ೧೮ ಜನರನ್ನು ಸೆರೆ ಹಿಡಿದುಕೊಂಡು ಪೋಲೀಸ ಚೌಕಿಗೆ ಕರೆದೊಯ್ದರು. ಅಲ್ಲಿ ಅವರಿಂದ ಹೊಣೆ ತೆಗೆದುಕೊಂಡು ಅವರನ್ನು ಬಿಟ್ಟುಬಿಟ್ಟರು. ಇವರ ವಿಚಾರಣೆಯು ಇಂದು ನಡೆಯತಕ್ಕದ್ದಿದೆ. ಉಳಿದವರೂ ಬಂಧನಕ್ಕೊಳಗಾಗಲು ಸಿದ್ಧರಾಗಿಯೇ ನಿಂತಿದ್ದರು. ಆದರೆ ಮೋಟಾರ ಲಾರಿಯಲ್ಲಿ ಅವರೆಲ್ಲರಿಗೂ ಸ್ಥಳವಿದ್ದಿದ್ದಿಲ್ಲ.

ಉಳಿದವರು ಹಾಗೆಯೇ ಮೆರವಣಿಗೆಯನ್ನು ಮುಂದಕ್ಕೆ ಸಾಗಿಸಿಕೊಂಡು ಹೋಗಿ, ಟಿಳಕ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯ ಸಮಾರಂಭವನ್ನು ಪೂರ್ತಿಗೊಳಿಸಿ ತಿರುಗಿ ಹೊರಟುಹೋದರು.

ಮ್ಯಾಜಿಸ್ಟ್ರೇಟರು ಕೊಡಿಸಿದ ಅಪ್ಪಣೆಯನ್ನು ಮೀರಿ ಪುನಃ ಅದೇ ರೀತಿಯಿಂದಲೇ ಬೇರೆ ಕೆಲವು ಜನರು ೬|| ಘಂಟೆಗೆ ಮೆರವಣಿಗೆಯನ್ನು ಹೊರಡಿಸಿ, ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿ, ಟಿಳಕ ಚೌಕಿಗೆ ಬಂದು ಮುಟ್ಟಿದರು. ಅಲ್ಲಿ ಅವರು ರಾಷ್ಟ್ರಧ್ವಜವಂದನೆಯ ಕಾರ್ಯವನ್ನು ಪೂರೈಸಿ ತಿರುಗಿ ಹೊರಟುಹೋದರು. ಅವರು ತಿರುಗಿ ಹೋದ ಸ್ವಲ್ಪ ಹೊತ್ತಿನಲ್ಲಿಯೇ, ಪೋಲೀಸರು ಅಲ್ಲಿಗೆ ಬಂದು ರಾಷ್ಟ್ರಧ್ವಜವನ್ನು ಬಲಾತ್ಕಾರದಿಂದ ತೆಗೆದುಕೊಂಡು ಹೋಗಲು ಬಹು ಪ್ರಯತ್ನಪಟ್ಟರು. ಆದರೆ ಅದು ಅವರಿಗೆ ಸಾಧ್ಯವಾಗಲಿಲ್ಲ. ಪಟ್ಟಣದಲ್ಲಿ ಎಲ್ಲೆಲ್ಲಿಯೂ ಉತ್ಸಾಹವೆ ಕಂಡುಬರಹತ್ತಿದೆ.

ಮೌಲಾನಾ ಮಹಮ್ಮದ ಅಲ್ಲಿಯವರ ನಿಧನ ಹೊಂದಿದ ಮೂಲಕವಾಗಿ ತಾ|| ೧೫ಕ್ಕೆ ಮುಂದರಿಸಲ್ಪಟ್ಟ ಮ್ಯುನಸಿಪಾಲಿಟಿಯ ಸಾಧಾರಣ ಸಭೆ, ತಾ|| ೧೫ ನೆಯ ದಿವಸವಾದರೂ, ಸೊಲ್ಲಾಪುರದ ಮುಂದಾಳುಗಳನ್ನು ಗಲ್ಲಿಗೆ ಏರಿಸಿದ್ದರ ಹಾಗು ಬೆಳಗಾವಿಯಲ್ಲಿ ಲಾಠೀ ಪ್ರಹಾರ ಪ್ರಾರಂಭಿಸಿದ್ದರ ನಿಷೇಧಾರ್ಥವಾಗಿ ಮತ್ತೆ ಮುಂದಕ್ಕೆ ಹಾಕಲ್ಪಟ್ಟಿತು. ಸಭೆಯಲ್ಲಿ ದುಃಖಪ್ರದರ್ಶನ ಠರಾವುಗಳು ಸ್ವೀಕೃತವಾಗಿ, ಅವು ಆಯಾಯವರ ಸಂಬಂಧಿಕರಿಗೆ ಕಳಿಸಲ್ಪಟ್ಟವು.

ಇಹವೃತ್ತ.

ಸ್ವದೇಶಿ ಸ್ಟೋರ್ಸದ ಉದ್ಘಾಟನ ಸಮಾರಂಭವು ನಿನ್ನಿನ ದಿವಸ ಶ್ರೀ. ಮೋಹರೆ ಹಣಮಂತರಾಯರ ಹಸ್ತದಿಂದ ಜರುಗಿತು.

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

(ಪ್ರಣೆಯು ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನರವರ ಲೇಖದ ಅನುವಾದವು)

(ಹಿಂದಿನಿಂದ ಮುಂದೆ ಸಾಗಿದ್ದು)

ಮೈಮುರಿ ಥಳಿಸಿದ ಉದಾಹರಣೆಗಳು

ಬಾನಪೂರದಲ್ಲಿ ನಾವು ಓರ್ವ ಮನುಷ್ಯನ ಮಂದಕನಿಗೆ ಭೆಟ್ಟಿಯಾದೆವು. ಅವನ ವಯಸ್ಸು ೭೦ ಕ್ಕೆ ಮಿಕ್ಕಿದ್ದು ವೃದ್ಧಾಪ್ಯದ ಭಾರದಿಂದ ಅವನ ಸೊಂಟವು ಬಾಗಿದ್ದಲ್ಲದೆ ಅವನ ಸರ್ವಾಂಗವೂ ಲಿಕಿ ಲಿಕಿಯಾಗಿತ್ತು. ಅವನು ಹೇಳಿದ್ದೇನಂದರೆ— "ನಾನು ೨೬ ರೂಪಾಯಿ ಸಾರಾ ಕೊಡತಕ್ಕದ್ದಿದೆ. ನವ್ಹೆಂಬರ ೬ ನೇ ತಾರೀಖಿನ ರಾತ್ರಿ ಬೆಳೆ ಕಾಯುತ್ತ ನಾನು ನನ್ನ ಹೊಲದಲ್ಲಿ ಮಲಗಿಕೊಂಡಿದ್ದೆನು. ಅಗ್ಗೆ ಪೋಲೀಸರೊಡನೆ ಓರ್ವ ಸರ್ಕಲ್ ಇನಸ್ಪೆಕ್ಟರನು ಬಂದು ತೆಗೆಕೊಂಡು ನನ್ನನ್ನು ಬಡಿಯಹತ್ತಿದನು. ನಾನು ಕೊಡಲಿಕ್ಕೆ ನಿರಾಕರಿಸಲು ಅವರು ನನ್ನನ್ನು ಹಾದಿಯಲ್ಲೆಲ್ಲ ಹೊಡೆಯುತ್ತ ಬಡಿಯುತ್ತ ನನ್ನ ಹಳ್ಳಿಗೆ ಎಳೆದೊಯ್ದರು. ಆರಾತ್ರಿಯಲ್ಲಿ ನನ್ನನ್ನು ಸೇಡಕೋದಲ್ಲಿ ಕೂಡ್ರಿಸಿದರು. ಆಗಲೂ ಸಹ ನಡನಡುವೆ ಹೊಡೆಯುವದನ್ನು ನಡಿಸೇ ಇದ್ದರು. ಮರುದಿವಸ ಸಹ ಅನ್ನ ನೀರು ಏನನ್ನೂ ಕೊಡದೆ ಅಲ್ಲಿಯೇ ಕೂಡ್ರಿಸಿದ್ದರು. ರಾತ್ರಿಯಲ್ಲಿ ನಾನು ಚಳಿಯಿಂದ ನಡುಗುತ್ತಿದ್ದರೂ ಹೊದ್ದುಕೊಳ್ಳಲಿಕ್ಕೆ ಒಂದು ಹರಕ ಕಂಬಳಿಯನ್ನು ಸಹ ಕೊಟ್ಟಿರಲಿಲ್ಲ. ಕಟ್ಟಕಡೆಗೆ ಏನೋ ಆಲೋಚಿಸಿ ಅವರು ನನ್ನನ್ನು ಬಿಟ್ಟುಕೊಟ್ಟರು. ಆದರೆ ಅದೇ ರಾತ್ರಿ ನನ್ನ ತಮ್ಮನ ಮನೆಗೆ ಬೆಂಕಿ ಬಿದ್ದು ಸುಟ್ಟು ಹೋಲಸವಾಯಿತು. ನಾನು ನನ್ನ ತಮ್ಮನಲ್ಲಿಯೇ ಊಟಮಾಡುತ್ತಿದ್ದೆ.

ಗಾಂಧೀನಗರವೆಂಬ ಅಡವಿಯಲ್ಲಿ ಗುಡಾರ ಹೊಡೆದುಕೊಂಡು ವಾಸಿಸುತ್ತಿರುವ ರಾಸ ಹಳ್ಳಿಯ ನಿವಾಸಿಗಳೊಳಗೆ ೪೫ ವಯಸ್ಸಿನ ಓರ್ವ ಸದ್ಗೃಹಸ್ಥರ ಸಂಗತಿಯನ್ನು ಇಲ್ಲಿ ಕೊಡುತ್ತೇನೆ. ಅವನು ತೆರಿಗೆಯನ್ನು ನಿರಾಕರಿಸಲು ಅವನನ್ನು ಪೋಲೀಸ ಚೌಕಿಗೆ ಎಳೆದೊಯ್ದು ಸ್ವತಃ ಸರ್ಕಲ ಇನಸ್ಪೇಕ್ಟರೂ ಮತ್ತು ಕೆಲವು ಪೋಲೀಸರೂ ಕೂಡಿ ಅವನಿಗೆ ಹೊಡೆದು ಬಡಿದ. ನಾನಾರೀತಿಯಿಂದ ಬೆದರಿಸಿದ್ದನ್ನು ಅವನು ಈ ಪ್ರಕಾರ ವಿವರಿಸಿದನು. ತನಗೆ ಕಾಲಿನ ಹೆಬ್ಬೆರಳುಗಳನ್ನು ಹಿಡಿದುಕೊಂಡು ಬೊಗ್ಗಿ ನಿಲ್ಲಲಿಕ್ಕೆ ಹಚ್ಚಿ ನನ್ನ ಬೆನ್ನ ಮೇಲೆ ಬೆತ್ತದಿಂದ ಒಂದೇ ಸವನೆ ೧೦೦ ಏಟುಗಳನ್ನು ಹೊಡೆದರು. ನಡುನಡುವೆ ವಿಚಾರಪೂರ್ವಕ ಗುರಿಯಿಟ್ಟು ನನ್ನ ಕೈಬೆರಳುಗಳಿಗೂ ಕಾಲ ಅಂಗುಷ್ಟಗಳಿಗೂ ಹೊಡೆಯುತ್ತಿದ್ದರು. ಮತ್ತು ಹೀಗೆ ಹೊಡೆಯುತ್ತಿರುವಾಗೆಲ್ಲ 'ನಿನಗೆ ಸ್ವರಾಜ್ಯ ಬೇಕಲ್ಲವೆ? ಇದು ತಗೋ ಸ್ವರಾಜ್ಯವೆಂದು" ಅಪಹೇಲನ ಮಾಡುತ್ತಿದ್ದರು. ನಿನ್ನನ್ನು ಜೀವಂತ ಸುಡಿಸಿ ನದಿಯಲ್ಲಿ ಒಗೆದು ಬಿಡುವೆ ಎಚ್ಚರಿಕೆ? ಎಂದು ಸ್ವತಃ ಇನಸ್ಪೆಕ್ಟರನೇ ಬೆದರಿಸಿದನು. ಇದೇ ಸ್ಥಿತಿಯಲ್ಲಿ ನನ್ನನ್ನು ೩೪ ತಾಸುಗಳ ವರೆಗೆ ಅನ್ನನೀರುಗಳನ್ನು ಕೊಡದೆ ಕೂಡಿ ಹಾಕಿದ್ದರು. ಆದರೆ ಓರ್ವ ಪೋಲೀಸನು ಮಾತ್ರ ನನ್ನ ಮರುಗು ನೋಡಲಾರದೆ ಯಾರಿಗೂ ತಿಳಿಯದಂತೆ ಸ್ವಲ್ಪ ನೀರನ್ನು ಕುಡಿಯಲಿಕ್ಕೆ ತಂದು ಕೊಟ್ಟನು."

ಬ್ರಿಟಿಶ ಪೋಲೀಸರು ಬಡೋದಾ ಸಂಸ್ಥಾನದ ಭಾಗದಲ್ಲಿ ಹೋಗಿ ನಿಂತ ಕೊಂಡಿರುವ ಜನರ ಬತ್ತಲೆ ಮುತ್ತಿಗೆ ಹಾಕಿ ಅವರನ್ನು ಬಡಿದು ಹೊಡೆದು ಗಾಯಕವಾದ ಸರದಾರನಿಗೆ ಬಾಯಿಗೆ ಬಂದದ್ದು ಅಂದು ಅವಮಾನಗೊಳಿಸಿದ್ದನ್ನು ನಾವು ಜೋಖುಮುದಲ್ಲಿ ಕೇಳಿದೆವು. ಇದೆಲ್ಲ ವೃತ್ತಾಂತವು ಈ ಮೊದಲೇ ಬೈಲಿಗೆ ಬಿದ್ದು ಪ್ರಸಿದ್ಧಿಯನ್ನು ಹೊಂದಿಯೇ ಇದೆ. ಇಲ್ಲಿಯೇ ಪೋಲೀಸರು ಓರ್ವ ಅಬಲೆಯ ಹೆಗಲು ಮತ್ತು ಮೊತಿಯ ಮೇಲೆ ಬಡಿಗೆಯಿಂದ ಹೊಡೆದು ಒದ್ದು ನೆಲಕ್ಕುರುಳಿಸಿದ್ದರು. ಕವಿಠಾದಲ್ಲಿ ೭೦ ವರ್ಷದ ವಯಸ್ಸಿನ ಮುದುಕನಿಗೆ ಸ್ವತಃ ಮಾಮಲೇದಾರನೆ ಘಟಕಿ ಹೊಡೆದು ನೂಗಿಸಿ ನೆಲಕ್ಕೊಗೆದು ಬೆನ್ನು ಬೆನ್ನು ಒದ್ದಿರುವನು. ಪಿಪಲಾವ ಮತ್ತು ಈಶ್ನಾವದಲ್ಲಿ ಪೋಲೀಸರು ಜನರ ಮನೆಗಳ ಮೇಲೆ ಲೂಟಿ ಸ್ವಾರಿ ಮಾಡಿ ೧೭ ಜನರನ್ನು ಒಳಿತಾಗಿ ಥಳಿಸಿರುವರು. ಮತ್ತು ಆ ಹಳ್ಳಿಯ ಲಾಯ್ಬ್ರರಿಯಲ್ಲಿ ಒಳನುಗ್ಗಿ ಅಲ್ಲಿರುವ ಟೆಬಲ ಮತ್ತು ಗಾಂಧಿಯವರ ಛಾಯಾಪಟಗಳನ್ನು ಒಡೆದು ಹರಿದು ಹಾಕಿ, ಕಪಾಟು ಮುರಿದು ಅದರೊಳಗಿನ ರಾಷ್ಟ್ರೀಯ ನಿಶಾನೆಗಳನ್ನು ನಡುಓಣಿಯಲ್ಲಿ ಸುಟ್ಟಿರುವರು. ಮತ್ತು ಇಲ್ಲಿಯೇ ಡಿಸೆಂಬರ ೭ ನೇ ತಾರೀಖಿನ ದಿವಸ ತನ್ನ ಮಗಳು ಮತ್ತು ಚಿಕ್ಕನ ಮಗನೊಡನೆ ಮುನ್ನೋಡಿ ತನ್ನ ಹೊಲಕ್ಕೆ ಹೋಗುತ್ತಿರುವ ಓರ್ವ ಗಂಡಸತ್ತ ಹೆಣ್ಣುಮಗಳನ್ನು ಪೋಲೀಸರು ಹಿಂದಿನಿಂದಲೆ ಒಮ್ಮೆಲೆ ತಮ್ಮ ಪಿಸ್ತೂಲಿನ ತಲೆಯಿಂದ ಬಡಿದು ತೆರಿಗೆ ಕೊಡೆಂದು ಕೇಳಿದರು.

ಮುಂಬಯಿಯಲ್ಲಿ ಯುರೋಪಿಯನ್ನರ ಉದ್ಧಟತನ

ಮುಂಬಯಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಪುರುಷೋತ್ತಮದಾಸ ತ್ರಿಕಮದಾಸರವರು ತಾ|೧೫ ನೆಯ ದಿವಸ ಶ್ರೀ ನವೀನ ಖಂಡಾಲಾವಾಲಾರವರೊಂದಿಗೆ ತಮ್ಮ ಮೋಟಾರಿನಲ್ಲಿ ಕುಳಿತುಕೊಂಡು ಡೊಂಗರಿ ಮಾರ್ಗದಿಂದ ಎಲ್ಲಿಗೋ ಹೋಗುತ್ತಿದ್ದರು. ಆಗ ಅವರ ಹಿಂದಿನಿಂದ ಒಂದು ಮೋಟಾರು ಬಂತು. ಆ ಮೋಟಾರಿನಲ್ಲಿ ಇಬ್ಬರು ಯುರೋಪಿಯನ್ನರು ಕುಳಿತಿದ್ದರು. ಅವರಲ್ಲಿ ಒಬ್ಬನು ಶ್ರೀ ಪುರುಷೋತ್ತಮದಾಸರಿಗೆ ಮೋಟಾರನ್ನು ವೇಗದಿಂದ ಹೊಡೆದುಕೊಂಡು ಹೋಗಲು ಆಜ್ಞಾಪಿಸಿದನು. ಶ್ರೀ ಪುರುಷೋತ್ತಮದಾಸರು ತಮ್ಮ ಮೋಟಾರನ್ನು ನಿಲ್ಲಿಸಿ, ನಿನ್ನ ಪೃಕ್ಕಿನ ಹೊರಟು ಹೋಗು" ಎಂದು ಅವನಿಗೆ ಹೇಳಿದರು. ಅಷ್ಟಕ್ಕೆ ಒಬ್ಬನು ಸಿಟ್ಟಿಗೆದ್ದು ಮೋಟಾರಿನಿಂದ ಕೆಳಗಿಳಿದು ಬಂದು, ಪುರುಷೋತ್ತಮದಾಸರ ಕಪಾಳದ ಮೇಲೆ ಒಳಿತಾಗಿ ಪೆಟ್ಟು ಕೊಟ್ಟನು. ಪುರುಷೋತ್ತಮದಾಸರು ಕೆಳಗಿಳಿದು ಬಂದು ಅವನಿಗೆ ಅವನ ಹೆಸರು ಕೇಳಿದರು. ಹೆಸರು ಕೇಳಿದ್ದೊಂದೇ ತಡ ಆ ಯೂರೋಪಿಯನ್ನನು ಮತ್ತೆ ಅವರ ಕೆನ್ನೆಯ ಮೇಲೆ ಒಳಿತಾಗಿ ಹೊಡೆದನು. ಪುರುಷೋತ್ತಮದಾಸರು ರಕ್ತವನ್ನು ಸುರಿಸುತ್ತ ಕೆಳಗೆ ಬಿದ್ದುಬಿಟ್ಟರು. ಯುರೋಪಿಯನ್ನರು ಹೊರಟುಹೋದ ಮೇಲೆ ಶ್ರೀ ಖಂಡಾಲವಾಲಾರವರು ಅವರನ್ನು ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಅವರಿಗೆ ಉಪಚಾರ ಮಾಡಲಾಯಿತು.

ಕಲಕತ್ತೆಯ ಕಾಂಗ್ರೆಸ್ ಮುಖಂಡರಾದ

ಸುಭಾಷಚಂದ್ರ ಬೋಸರಿಗೆ ೧ ವಾರ ಶಿಕ್ಷೆ

(ತಂತಿಯ ವಾರ್ತೆ)

ಕಲಕತ್ತೆಯ ಮ್ಯಾಜಿಸ್ಟ್ರೇಟರು ೧೪೪ನೆಯ ಕಲಮಿನನ್ವಯ ಹೊರಡಿಸಿದ ಅಪ್ಪಣೆಯ ವಿರುದ್ಧವಾಗಿ ವರ್ತಿಸಿದ್ದಕ್ಕಾಗಿ, ಬಂಗಾಲ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಸುಭಾಷಚಂದ್ರ ಬೋಸರಿಗೆ ೧ ವಾರದ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದೆ.

ವರ್ಕಿಂಗ ಕಮೀಟಿಯ ಸಭೆ

(ತಂತಿಯ ವಾರ್ತೆ)

ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡರು ಒಡಿಗಾಲಿಯ ಪರಿಷತ್ತಿನಲ್ಲಿ ವ್ಯಕ್ತಪಡಿಸಿದ ಸರಕಾರಿ ಧೋರಣವನ್ನು ವಿಚಾರಿಸುವ ಕುರಿತು ತಾ|| ೨೧ ನೆಯ ದಿವಸ ಅಲಹಾಬಾದದಲ್ಲಿ ಕಾಂಗ್ರೆಸ್ ವರ್ಕಿಂಗ ಕಮೀಟಿಯ ಸಭೆಯು ಸೇರತಕ್ಕದ್ದಿದೆಯಾಗಿ ತಿಳಿಯುತ್ತದೆ.

ಮುದ್ರಣ ಹಾಗು ಕರನಿರಾಕರಣೆಯ ಮಸೂದೆಗಳ ವಿಚಾರವು ಮುಂದೆಬಿತ್ತು

(ತಂತಿಯ ವಾರ್ತೆ.)

"ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡರು ಇಂದು ಸರಕಾರಿ ಧೋರಣದ ವಿಷಯವಾಗಿ ಬಂಡಿಗಾಲಿಯ ಪರಿಷತ್ತಿನಲ್ಲಿ ಭಾಷಣ ಮಾಡತಕ್ಕವರಿದ್ದಾರೆ. ಈ ಸಮಯದಲ್ಲಿ ಮುದ್ರಣ ಹಾಗು ಕರನಿರಾಕರಣೆಯ ಮಸೂದೆಗಳ ವಿಷಯವಾಗಿ ಚರ್ಚೆ ನಡಿಸಿದರೆ ವಾತಾವರಣವು ಕೆಟ್ಟುಹೋಗುವ ಸಂಭವವಿದೆ ಆದ್ದರಿಂದ ಆ ಮಸೂದೆಗಳ ಸಂಬಂಧವಾಗಿ ವಿಚಾರ ಮಾಡುವದನ್ನು ಮುಂದರಿಸಿದೆ" ಯೆಂಬುದಾಗಿ ಸರ್ ಜೇಮ್ಸ್ ಕ್ರೆರಾರರವರು ಸರಕಾರದ ಪರವಾಗಿ ಅಸೆಂಬ್ಲಿಯಲ್ಲಿ ಹೇಳಿದರು.

ವಿಜಾಪುರ ಜೇಲಿನಲ್ಲಿ ಕೈದಿಗಳ ಉಪವಾಸ

(ಸ್ವಂತ ಸುದ್ದಿಗಾರರಿಂದ)

ಸೊಲ್ಲಾಪುರದ ವೀರರನ್ನು ಅನ್ಯಾಯವಾಗಿ ಗಲ್ಲಿಗೇರಿಸಿದ್ದರ ನಿಷೇಧಾರ್ಥವಾಗಿ ಇಲ್ಲಿಯ ಜೇಲಿನಲ್ಲಿಯ ಕೆಲವು ರಾಜಕೀಯ ಕೈದಿಗಳು ೨೪ ತಾಸುಗಳ ವರೆಗೆ ಉಪವಾಸ ಮಾಡಿದರೆಂದೂ, ಅಧಿಕಾರಿಗಳು ಅವರಿಗೆ ಅನ್ನತ್ಯಾಗದ ಬಗ್ಗೆ ಕಾರಣ ಕೇಳಲು ಎಲ್ಲರೂ ಸುಮ್ಮನಿದ್ದರೆಂದೂ ತಿಳಿದು ಬರುತ್ತದೆ.

ಶ್ರೀ ಸುಗುಣೇಂದ್ರರ ತೂಕವು ೧೩ ಪೌಂಡು ಕಡಿಮೆಯಾಯಿತು.

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಶಿಕ್ಷೆಗೆ ಗುರಿಯಾಗಿ ವಿಸಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ, ಇಲ್ಲಿಯ ಶ್ರೀ ಕೇರೂರ ಸುಗುಣೇಂದ್ರಾಚಾರ್ಯರ ತೂಕವು ೧೩ ಪೌಂಡು ಕಡಿಮೆಯಾಗಿದ್ದು, ಅವರು ಅಮಾಂಶದಿಂದ ಬಳಲುತ್ತಿರುವರೆಂದೂ, ಅವರ ಔಷಧೋಪಚಾರದ ಬಗ್ಗೆ ಅಲ್ಲಿಯ ಅಧಿಕಾರಿಗಳು ಯೋಗ್ಯ ಕಾಳಜಿಯನ್ನು ತೆಗೆದುಕೊಳ್ಳುತ್ತಿರುವದಿಲ್ಲವೆಂದೂ ತಿಳಿದು ಬರುತ್ತದೆ.

ಬೆಳಗಾವಿ ಜಿಲ್ಲೆಯ ರೈತರ ಪರಿಷತ್ತು.

(ತಂತಿಯ ವಾರ್ತೆ)

ಬೆಳಗಾವಿ ಜಿಲ್ಲೆಯ ರೈತರ ಪರಿಷತ್ತು ತಾ|೧೪ ನೆಯ ದಿವಸ ಸಂಕೇಶ್ವರದಲ್ಲಿ ಹಾವೇರಿಯ ಸುಪ್ರಸಿದ್ಧ ವಕೀಲರಾದ ಶ್ರೀ. ಹೊಸಮನಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸುಮಾರು ೪೦೦ ಜನರು ಸಭೆಗೆ ಆಗಮಿಸಿದ್ದರು ಸ್ವಾಗತ ಕಮೀಟಿಯ ಚೇರಮನ್ನರಾದ ಬೆಳ್ಳದ ಬಾಗೇವಾಡಿಯ ಶ್ರೀ ವಲ್ಲಪ್ಪಾ ಕಟ್ಟಿಯವರು ತಮ್ಮ ಭಾಷಣದಲ್ಲಿ ರೈತರ ಕಷ್ಟನಷ್ಟಗಳನ್ನು ಕುರಿತು ಚನ್ನಾಗಿ ವಿವರಿಸಿ ಹೇಳಿದರು ಬಳಿಕ ಅಧ್ಯಕ್ಷರ ಸ್ಫೂರ್ತಿದಾಯಕ ಭಾಷಣವಾಯಿತು ಸಭೆಯಲ್ಲಿ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯಗಳು ಸ್ವೀಕೃತವಾದವು.

೧ ಈ ವರ್ಷದ ಹಪ್ತೆಯನ್ನು ತಹಕೂಬ ಇಡಲು ಸರಕಾರಕ್ಕೆ ಕೇಳಿಕೊಂಡಿದ್ದು ೨ ರೈತರಿಗೆ ಕೆಲವು ಸವಲತ್ತುಗಳನ್ನು ತೋರಿಸಬೇಕಾಗಿ ಜಮೀನದಾರರಿಗೆ ವಿನಂತಿ ಮಾಡಿಕೊಂಡಿದ್ದು. ೩ ಹಪ್ತೆಯ ದರವನ್ನು ಶಾಶ್ವತವಾಗಿ ಈಗಿನ ಅರ್ಧದಷ್ಟಕ್ಕೆ ಇಳಿಸಬೇಕಾಗಿ ಸರಕಾರಕ್ಕೆ ಕೇಳಿಕೊಂಡಿದ್ದು. ೪ ಸ್ವದೇಶಿ ಹಾಗು ಖದ್ದರಕ್ಕೆ ಉತ್ತೇಜನ ಕೊಡಬೇಕೆಂದೂ ೫ ಪರದೇಶಿ ಸರಕುಗಳಿಗೆ ಬಹಿಷ್ಕಾರ ಹಾಕಬೇಕೆಂದೂ ೬ ಜನಗಣತಿಯ ಕಾರ್ಯದಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಕೂಡದೆಂದೂ ರೈತರಿಗೆ ಕೇಳಿಕೊಂಡಿದ್ದು. ೭ ಕಂದಾಯ ಖಾತೆಯ ಅಧಿಕಾರಿಗಳು ಗುಜರಾಥದಲ್ಲಿ ರೈತರಿಗೆ ನಾನಾ ತರದಿಂದ ಪೀಡೆಕೊಡುತ್ತಿದ್ದದನ್ನು ನಿಷೇಧಿಸಿದ್ದು. ೮ ಗೋಕಾಕ ಗಿರಣಿಯಲ್ಲಿ ರೈತರು ನೌಕರಿ ಮಾಡತಕ್ಕದ್ದಲ್ಲ ಹಾಗು ಅವುಗಳಿಗೆ ತಮ್ಮ ಹತ್ತಿ, ಅರಳೆ ಮಾರತಕ್ಕದ್ದಲ್ಲವೆಂಬುದಾಗಿ ಗೊತ್ತು ಪಡಿಸಿದ್ದು. ೯ ಈಗಿನ ರಾಜ್ಯಕಾರಭಾರ ಪದ್ಧತಿಯು ರೈತರಿಗೆ ಹಾನಿಕಾರಕವಾಗಿದೆಯೆಂದು ಸಾರಿದ್ದು.

ಅಥಣಿ ತಾಲೂಕಿನ ರೈತರ ಪರಿಷತ್ತು ತಾ|| ೨೬ ನೆಯ ದಿವಸ ಅಥಣಿಯಲ್ಲಿ ಸೇರತಕ್ಕದ್ದಿದೆ. ಹುಕ್ಕೇರಿಯ ಪ್ರಸಿದ್ಧ ವಕೀಲರಾದ ಶ್ರೀ ಎಂ. ಪಿ ಪಾಟೀಲರವರು ಅದರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದು, ಅಥಣಿಯ ಮ್ಯುನಿಸಿಪಾಲಿಟಿಯ ಚೇರಮನ್ನರಾದ ಶ್ರೀ ಮಹಾಜನರವರು ಸ್ವಾಗತಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಗೋಕಾಕ ತಾಲೂಕದ ರೈತರ ಪರಿಷತ್ತಾದರೂ ಫೆಬ್ರುವಾರಿ ೧ ನೆಯ ತಾರೀಖಿನ ದಿವಸ ಕೂಡತಕ್ಕದ್ದಿದೆ. ಉಳಿದ ತಾಲೂಕುಗಳಲ್ಲಿಯಾದರೂ ರೈತರ ಪರಿಷತ್ತುಗಳನ್ನು ಕೂಡಿಸುವ ಬಗ್ಗೆ ವಿಚಾರ ನಡೆದಿದೆ.

ಸಂಕೇಶ್ವರದಲ್ಲಿ ಪರಿಷತ್ತಿನ ಕಾರ್ಯವು ಮುಕ್ತಾಯ ಹೊಂದಿದ ಮೇಲೆ ಕರ್ನಾಟಕದ ಪ್ರಸಿದ್ಧ ಮುಂದಾಳುಗಳಾದ ಶ್ರೀ ದೇಶಪಾಂಡೆ ಗಂಗಾಧರರಾಯರು ರೈತರನ್ನುದ್ದೇಶಿಸಿ, ರೈತರೇ ರಾಷ್ಟ್ರದ ಜೀವಾಳವಿದ್ದು, ಯಾಚನೆಯ ಮಾರ್ಗವನ್ನು ಬಿಟ್ಟುಕೊಟ್ಟು ಅವರು ತಮ್ಮ ಕಾಲಮೇಲೆ ತಾವೇ ನಿಂತುಕೊಳ್ಳಬೇಕೆಂದೂ, ಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳಂತೆ ನಡೆದುಕೊಂಡು ವಿಧಾಯಕ ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಬೇಕೆಂದೂ ಭಾಷಣ ಮಾಡಿದರು. ಸ್ವದೇಶಿ ವಸ್ತುಗಳನ್ನೇ ಕೊಂಡುಕೊಳ್ಳುತ್ತೇವಾಗಿಯೂ, ಖದ್ದರ ಬಟ್ಟೆಯನ್ನೇ ಉಪಯೋಗಿಸುತ್ತೇವಾಗಿಯೂ ಎಲ್ಲ ರೈತರೂ ಅಲ್ಲಿಂವಲ್ಲೇ ಪ್ರತಿಜ್ಞೆ ಮಾಡಿದರು.

ಭಗತಸಿಂಗರನ್ನು ಗಲ್ಲಿಗೆ ಹಾಕಿದರಂತೆ?

(ಶಂತಿಸು ವಾರ್ತೆ ಮುಂಬಯಿ ತಾ|| ೧೯.)

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗರನ್ನು ಗಲ್ಲಿಗೇರಿಸಿದರೆಂಬ ವಾರ್ತೆಯು ಇಲ್ಲಿ ಹಬ್ಬಿದ ಮೂಲಕವಾಗಿ ಇಲ್ಲಿಯ ನಾಲ್ಕು ಗಿರಣಿಗಳ ಕೂಲಿಕಾರರು ಗಿರಣಿಗಳಿಂದ ಹೊರಬಿದ್ದು ಹರತಾಳ ಆಚರಿಸಿದರು

ಮುಂಬಯಿಯಲ್ಲಿ

ವಾನರ ಯುದ್ಧಮಂಡಳದವರಿಗೆ ಶಿಕ್ಷೆ

ಸೊಲ್ಲಾಪುರದ ವೀರರ ದಿನದ ದಿವಸ ಶ್ರೀ. ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಬಂಧನಕ್ಕೊಳಗಾದ ಮುಂಬಯಿಯ ವಾನರ ಯುದ್ಧ ಮಂಡಳದ ಅಧಿಕಾರಿಗಳಾದ ಶ್ರೀ ಸಾವಳಕರ, ಚಂಪಕಲಾಲ, ಸಾಂಘವಿ, ಅಬ್ದುಲ್ ರಹಿಮಾನ್‌ಸೇಟ ಮತ್ತು ವಿಠ್ಠಲದಾಸ ಜವೇರಿಯವರಿಗೆ ಪ್ರತ್ಯೇಕವಾಗಿ ೧೨ ತಿಂಗಳ ಕಾರಾಗೃಹವಾಸ ಹಾಗು ೧೦೦ರೂ. ದಂಡ ಇಲ್ಲವೆ ಮತ್ತೆ ೬ ವಾರಗಳ ಸೆರೆವಾಸ ಹೀಗೆ ಶಿಕ್ಷೆಯಾಗಿದೆ. ಡಾ. ಎಸ್. ಕೆ. ವೈದ್ಯರವರು ಯುದ್ಧ ಮಂಡಳದ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

ಸರ್ ರಹಿಮತುಲ್ಲಾರವರು ಅಸೆಂಬ್ಲಿಯ ಅಧ್ಯಕ್ಷರಾದರು.

ಅಸೆಂಬ್ಲಿಗೆ ಅಧ್ಯಕ್ಷರನ್ನು ಆರಿಸುವ ಕಾರ್ಯವು ತಾ|| ೧೭ಕ್ಕೆ ನಡೆಯಿತು. ಸರ್ ಇಬ್ರಾಹಿಮ ರಹಿಮತುಲ್ಲಾ ಹಾಗು ಸರ್ ಹರಿಸಿಂಗ ಗೌರ ಇವರಿಬ್ಬರು ಉಮೇದುವಾರರಾಗಿ ನಿಂತುಕೊಂಡಿದ್ದರು. ಅವರಿಗೆ ಕ್ರಮವಾಗಿ ೭೬,೩೬ ಮತಗಳು ಬಿದ್ದವು. ಸರ್ ರಹಿಮತುಲ್ಲಾರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಝಾರಿಯಾದಲ್ಲಿ 7 ಗೋಳಿಬಾರು

೪ ಜನರು ಮರಣ ಹೊಂದಿದರು

ಬಿಹಾರ ಪ್ರಾಂತದಲ್ಲಿಯ ಝಾರಿಯಾ ಎಂಬಲ್ಲಿ ಮೇಳಿಯ ಸಂಬಂಧವಾಗಿ ತಾ|| ೧೫ ನೆಯ ದಿವಸ ಪೊಲೀಸ ಹಾಗು ಜನರಲ್ಲಿ ಕಲಹವಾಗಿದ್ದರಿಂದ, ಪೊಲೀಸರು ಜನರಮೇಲೆ ಗೋಳಿಬಾರ ಮಾಡಿದರು. ಎಷ್ಟೋ ಜನರಿಗೆ ಗಾಯಗಳಾಗಿದ್ದು, ೪ ಜನರು ಮರಣ ಹೊಂದಿದ್ದಾರೆ.

ಮೆಕ್ಸಿಕೋದಲ್ಲಿ ಭೂಕಂಪ

ಆಲಜನರು ಮರಣಹೊಂದಿದರು.

ಮೆಕ್ಸಿಕೋ ಪಟ್ಟಣದ ದಕ್ಷಿಣಕ್ಕಿರುವ ಓಯಾಕ್ಸಕಾ ಎಂಬಲ್ಲಿ ಭಯಂಕರ ಭೂಕಂಪವಾಗಿ ೪೦ ಜನರು ಮರಣಹೊಂದಿದ್ದಾರೆ

ಪ್ರಕಟಣೆ

ಬಾಗಲಕೋಟೆಯ ಶ್ರೀ ಬಸವೇಶ್ವರ ಹಾಯಸ್ಕೂಲ ಪ್ಲೇಗಿನ ಮೂಲಕ ಬಂದು ಇಡಲ್ಪಟ್ಟದ್ದು ಈಗ ಸೋಮವಾರ ತಾ|| ೧೯-೧-೩೧ ನೇ ದಿವಸ ಪುನಃ ಪ್ರಾರಂಭ ವಾಗುವದು. ೧ ರಿಂದ ೭ನೇ ಇಯತ್ತೆಯ ವರೆಗೆ ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾಪ್ರಕಾರ ನಡೆಯುವದು ವಿದ್ಯಾರ್ಥಿಗಳು ಸಕಾಲಕ್ಕೆ ಬರಬೇಕು.

ಬಾಗಲಕೋಟ ತಾ|| ೧೭-೧-೧೯೩೧

ಎಚ್. ಎಫ್ ಕಟ್ಟೀಮನಿ

ಪ್ರಿನ್ಸಿಪಾಲ.

ಬುಕ್ಕ ಬಾಯಿಂಡಿಂಗದ

ಹೊಸ ವ್ಯವಸ್ಥೆ

ನಮ್ಮಲ್ಲಿ ಗೋಲ್ಡಗಿಲ್ಟ ಸಹಿತ ಅತ್ಯುತ್ತಮವಾಗಿ ಬಾಯಿಂಡಿಂಗದ ಕೆಲಸವು ಸೋವಿ ದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸಗಳನ್ನೂ ಕಾಗದಪತ್ರ ಇಡುವ ಮತ್ತು ರೊಕ್ಕಾ ಹಾಕುವ ಪಾಕೀಟಗಳನ್ನು ತೊಗಲಿನಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವೆವು. ಪೋರ್ಟಫೋಲಿಯೋ ಮತ್ತು ಫಾಯಿಲದ ರಟ್ಟುಗಳನ್ನು ಮಾರಾಟಕ್ಕೆ ತಯಾರಿಸಿ ಇಟ್ಟಿದ್ದೇವೆ. ವ್ಯಾಪಾರಸ್ಥರಿಗೆ ಕಡಿಮೆ ದರದಿಂದ ಸಪ್ಲಾಯಿ ಮಾಡುವವು. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉಡಪೀಕರ

ಪ್ರೊಪ್ರಾಯಿಟರ ದಿ ನ್ಯೂ ಬುಕ್ಕ ಬಾಯಿಂಡಿಂಗ ವರ್ಕ್ಸ ಹೊಸಬಾಜಾರ ಹವಾಲದಾರ ಬಿಲ್ಡಿಂಗ

ವಿಜಾಪೂರ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವ.

ಕೃಷ್ಣಾಜಿ. ಹಣಮಂತರಾವ ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ.

ವಾಚ, ಟಾಯಂಪೀಸ

ದುರಸ್ತಿಮಾಡಿಸುವವರಿಗೆ ಸುಸಂಧಿ



ನಮ್ಮಲ್ಲಿ ಎಲ್ಲ ನಮೂನೆಯ ... ಹಾಗು ಮೇಕರಗಳ ವಾಚ, ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವಿದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ

ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟ.

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮ ... ಖಾತ್ರಿಯಿಂ... ಉತ್ತಮ ರೀ... ಯಿಂದ ... ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳ ... ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆ... ಎಂಡ್, ಜೆನಿಥ್, ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ. ಬೆಟಗೇರಿ ಬ್ರದರ್ಸ.

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟ

ಪ್ಲಾಟುಗಳು ಮಾರಾಟಕ್ಕಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರದ ... ನೆಯ ಸರ್ವೆ ನಂಬರದಲ್ಲಿಯ ... ಯಾವ ಪ್ಲಾಟುಗಳು ಮಾರಾಟಕ್ಕಿವೆ ತೆಗೆದುಕೊಳ್ಳಲಿಚ್ಛಿಸುವವರು ಸಮಕ್ಷಮ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ- ಧಾರವಾಡ

ವಕೀಲರು ಬಾಗಲಕೋಟ

ಈ ಪತ್ರಿಕೆಯು ವೆಂಕಟೇಶ ಶೇ. ಕ. ರಾಮಾಚಾರ್ಯರ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT.
WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ಮಿತಿ ಮಾಘ ಶುದ್ಧ ೩ ಶಕೆ ೧೮೫೨ ತಾ॥ ೨೧—೧—೩೧ [ಸಂಚಿಕೆ ೧೭೦

ಮಹಾತ್ಮರನ್ನು ನಾಶಿಕ ಜೇಲಿಗೆ ಒಯ್ದರು?

ಯರವಡಾದಲ್ಲಿಯ ಹವೆ ಮತ್ತು ನೀರು ಮಹಾತ್ಮಾ ಗಾಂಧಿಯವರ ಪ್ರಕೃತಿಗೆ ಬಾಧಿಸುತ್ತಿದ್ದದರಿಂದ, ಅವರನ್ನು ನಾಸಿಕ ಜೇಲಿಗೆ ಕರೆದೊಯ್ದಿದ್ದಾರೆಂದು ಮುಂಬಯಿಯಲ್ಲಿ ದಟ್ಟವಾದ ವಾರ್ತೆಯಿದೆ.

ರಾಹೂರಿಯಲ್ಲಿ

ಕೋರ್ಟಿಗೆ ಬೆಂಕಿ ಹತ್ತಿತು.

ತಾ॥ ೧೬ ನೆಯ ದಿವಸ ಸಂಜೆಯಲ್ಲಿ, ಅಹಮ್ಮದನಗರ ಜಿಲ್ಹೆಯಲ್ಲಿರುವ ರಾಹುರಿ ಎಂಬಲ್ಲಿ ಕೋರ್ಟಿಗೆ ಬೆಂಕಿ ಹತ್ತಿ, ಕಟ್ಟಡವೆಲ್ಲವೂ ಸಂಪೂರ್ಣವಾಗಿ ಸುಟ್ಟು ಹೋಯಿತು. ಅಧಿಕಾರಿಗಳು ಈ ಬಗ್ಗೆ ಶೋಧ ನಡಿಸಿದ್ದಾರೆ.

ಮುಂಬಯಿಯಲ್ಲಿ

೬ ಜನರನ್ನು ಹಿಡಿದರು

ಮುಂಬಯಿಯ ಗುಪ್ತ ಪೋಲೀಸರು ತಾ॥ ೧೮ ನೆಯ ದಿವಸ ಅಲ್ಲಿಯ ಅಖಿಲ ಭಾರತ ಸ್ವದೇಶಿ ಸಭೆಯ ಕಚೇರಿಯನ್ನು ಝಡತಿ ಮಾಡಿ, ಕೆಲವು ಕಾಗದಪತ್ರಗಳನ್ನು ತೆಗೆದುಕೊಂಡು ಶ್ರೀ ಜಿನಾಭಾಯಿ ಜೋಶಿ, ಈಶ್ವರಭಾಯಿ ಸರಾಫ, ಎನ್. ಜಿ. ದಪ್ತರ, ಲಾಲಜಿ ಗೋಕುಳ ದಾಸ, ಸುಖರಾಮ ಕೇಣಿ ಹಾಗು ವಾಕನಜಿ ಚಂದನ್‌ರವರನ್ನು ಸೆರೆಹಿಡಿದುಕೊಂಡು ಹೋದರು.

(ತಂತಿಯ ವಾರ್ತೆ ತಾ ೨೦)

ಮುಂಬಯಿಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಅಬೀದ ಅಲ್ಲಿ ಹಾಗು ಶ್ರೀ ನಾರಾಯಣ ಅಯ್ಯಂಗಾರರು ಇಂದು ಸೆರೆಹಿಡಿಯಲ್ಪಟ್ಟಿದ್ದಾರೆ.

ಮುಂಬಯಿಯ

ಕಾಂಗ್ರೆಸ್ ಕಾರ್ಯಕರ್ತರ ವಿಚಾರಣೆ

(ತಂತಿಯ ವಾರ್ತೆ)

ಶ್ರೀ. ಲಾ ಅಮೆಂಡಮೆಂಟ ಕಾಯದೆಯನ್ವಯ ಮುಂಬಯಿಯಲ್ಲಿ ಸ್ವಲ್ಪ ದಿನಗಳ ಹಿಂದೆ ಸೆರೆಹಿಡಿಯಲ್ಪಟ್ಟ, ಶ್ರೀ ಮೂಲರಾಜ ಕರಸನದಾಸ, ಮೋಹರ ಅಲ್ಲಿ, ವೆ.ನನ್, ಮೊದಲಾದ ೨೫ ಜನರ ಖಟ್ಲೆಯ ವಿಚಾರಣೆಯು ತಾ॥ ೨೦ ನೆಯ ದಿವಸ ಪ್ರಾರಂಭವಾಯಿತು. ಪ್ರೊಸೀಕ್ಯೂಟರರು ಅವರು ನಡಿಸಿದ ಕಾರ್ಯಗಳ ಆಪಾದನೆಗಳನ್ನು ವಿಸ್ತರಿಸಿ ಹೇಳಿ, ಕಾಂಗ್ರೆಸ್ ರಾಜ್ಯವನ್ನು ಸ್ಥಾಪಿಸಲು ಅವರು ಗುಪ್ತವಾಗಿ ಕಾರ್ಯ ನಡಿಸಿರುವರೆಂದು ಸಿದ್ಧಮಾಡಲು ಪ್ರಯತ್ನಿಸಿದರು. ವಿಚಾರಣೆಯು ಇನ್ನೂ ನಡೆದಿದೆ.

ಹೆಣ್ಣು ಗಂಡು ಆಯಿತು

ಫ್ರಾನ್ಸ ದೇಶದಲ್ಲಿ ಲಿಲ್ಲೆ ಎಂಬಲ್ಲಿ ಕರ್ವರ್ನ ಎಂಬ ವಿದ್ಯಾರ್ಥಿಯು ೧೯೧೮ ನೆಯ ಜನವರಿ ತಿಂಗಳದಲ್ಲಿ ಬಾಲಮಗುವನ್ನು ಹೆತ್ತಳು. ಡಾಕ್ಟರರೂ ದಾಯಿಯರೂ ಅದನ್ನು ಹೆಣ್ಣೆಂದ ರಜಿಸ್ಟರ ಮಾಡಿಸಿದರು. ಮಗುವಿಗೆ ಮೇರಿಯೆಂಬುದಾಗಿ ನಾಮಕರಣ ಮಾಡಲ್ಪಟ್ಟಿತು. ಹುಡುಗಿಯು ದೊಡ್ಡವಳಾಗುತ್ತ ಹೋದ ಹಾಗೆ ಹುಡುಗನಂತೆ ಅಸಾಧಾರಣ ಶಕ್ತಿ ತೋರಿಸಹತ್ತಿದಳು. ತಾಯಿಗೆ ಸಂಶಯ ಹುಟ್ಟಿತು. ಹುಟ್ಟುವಾಗ ಪರೀಕ್ಷಿಸಿದ ಡಾಕ್ಟರರ ಬಳಿಗೆ ಹೋಗಿ ಮತ್ತೆ ಆ ಬಗ್ಗೆ ವಿಚಾರಿಸಿದಳು. ಅವರು ಮೊದಲಿನಂತೆಯೇ ನಿರ್ಣಯ ಕೊಟ್ಟರು. ತಾಯಿಗೆ ಸಮಾಧಾನವಾಗಲಿಲ್ಲ. ಹುಡುಗಿಗೆ ೧೨ ವರ್ಷ ತುಂಬಿದ ಕೂಡಲೆ ಅವಳ ತಾಯಿಯು ಬೇರೆ ಡಾಕ್ಟರರಿಂದ ಅವಳನ್ನು ಪರೀಕ್ಷಿಸಿದರು. ಅವರು ಅವಳು ಹುಡುಗಿಯಲ್ಲ ಹುಡುಗನೆಂದು ನಿಶ್ಚಯವಾದ ಸರ್ಟಿಫಿಕೇಟು ಕೊಟ್ಟರು. ಮೇರಿಯ ತಾಯಿಯು ಈ ಸರ್ಟಿಫಿಕೇಟನ್ನು ಸರಕಾರಿ ಅಧಿಕಾರಿಗಳಿಗೊಪ್ಪಿಸಿ, ಹುಡುಗಿಯಾಗಿ ರಜಿಸ್ಟರ ಮಾಡಿದ್ದನ್ನು ಹುಡುಗನಾಗಿ ಸ್ವೀಕರಿಸಬೇಕೆಂದು ಅರ್ಜಿ ಮಾಡಿದಳು. ರಜಿಸ್ಟ್ರೇಶನ್ ಅಧಿಕಾರಿಗಳು ಹಾಗೆ ಮಾಡಲು ಬರುವಂತಿಲ್ಲವೆಂದು ಅವಳಿಗೆ ಉತ್ತರ ಕೊಟ್ಟರು. ಮೇರಿಯ ತಾಯಿಯವರು ಈ ಬಗ್ಗೆ ಕೋರ್ಟಿಗೆ ಹೋಗತಕ್ಕವರಿದ್ದಾರೆ. ಹೆಣ್ಣು ಗಂಡಾದದ್ದು, ಇದೀಗ ಸೋಜಿಗವೇ ಸರಿ.

ಮ್ಯಾಕ್ಡೋನಾಲ್ಡರ ಹುರುಳಿಲ್ಲದ ಭಾಷಣ.

ಕಾಂಗ್ರೆಸ್ ಚಳವಳಿ ನಿಲ್ಲದ ಹೊರತು, ರಾಜಕೀಯ ಕೈದಿಗಳಿಗೆ ಬಿಡುಗಡೆಯಿಲ್ಲ.

(ತಂತಿಯ ವಾರ್ತೆ)

ಬಂಡೀಗಾಲಿಯ ಪರಿಷತ್ತಿನಲ್ಲಿ ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡರು ಬ್ರಿಟಿಶ ಸರಕಾರದ ಧೋರಣವನ್ನು ಕುರಿತು ಕೆಳಗಿನಂತೆ ಹೇಳಿದರು.

“ಸಂಯುಕ್ತ ರಾಜ್ಯಘಟನೆಯಲ್ಲಿ ಮಧ್ಯವರ್ತಿ ಸರಕಾರದ ಮೇಲೆ ಜವಾಬದಾರಿ ಹೊರಿಸಬೇಕು. ಪ್ರಾಂತಗಳಲ್ಲಿ ದ್ವಿದಲ ರಾಜ್ಯ ಪದ್ಧತಿಯೇ ಇರಬೇಕು. ಕಾಂಗ್ರೆಸ್‌ದವರು ಚಳವಳಿ ನಿಲ್ಲಿಸಿದಲ್ಲಿ ಮಾತ್ರ ರಾಜಕೀಯ ಕೈದಿಗಳಿಗೆ ಬಿಡುಗಡೆಯಾಗುವದು.”

ಮಿ. ಮ್ಯಾಕಡೋನಾಲ್ಡರು ವ್ಯಕ್ತಪಡಿಸಿದ ಧೋರಣವನ್ನು ಕುರಿತು ಸರ್ ಸಪ್ರೂರವರು ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು.

ಗದಗ-ಬೆಟಗೇರಿಯ ಸುದ್ದಿಯು.

(ಸ್ವಂತ ಸುದ್ದಿಗಾರರಿಂದ)

ಗದಗಿನಲ್ಲಿ ಅಖಿಲ ಭಾರತ ಔದ್ಯೋಗಿಕ ಪ್ರದರ್ಶನವು ಇದೇ ತಿಂಗಳ ೨೫ ನೆಯ ತಾರೀಖಿನ ದಿವಸ ನೆರೆಯುತಕ್ಕದ್ದದೆ ಪ್ರದರ್ಶನ ತೆರೆಯುವ ಸಮಾರಂಭವು ಮುಂಬಯಿಯಲ್ಲಿರುವ ಸ್ವದೇಶೀ ಮಂಡಳದ ಅಧ್ಯಕ್ಷರಾದ ಕೆ. ನಟರಾಜನ್ ಇವರ ಹಸ್ತದಿಂದ ಜರುಗಬೇಕೆಂದು ಮೊದಲೇ ಗೊತ್ತಾಗಿತ್ತು. ಆದರೆ ಕೆ. ನಟರಾಜನ್‌ರವರು ತಮ್ಮ ಸ್ವಂತ ಕೆಲಸಗಳ ಮೂಲಕವಾಗಿ ಇಲ್ಲಿಗೆ ಬರಲಿಕ್ಕೆ ಶಕ್ಯವಿಲ್ಲವೆಂಬ ತಂತಿಯಿಂದ ತಿಳಿಸಿದ್ದರಿಂದ ತುಂಗಭದ್ರದಲ್ಲಿರುವ ಪಂಡಿತ ತಾರಾನಾಥ ಇವರ ಹಸ್ತದಿಂದ ಆ ಸಮಾರಂಭವು ಜರುಗಬೇಕೆಂದು ಠರಾಯಿಸಿದೆ. ಪಂಡಿತರನ್ನು ಒಡಂಬಡಿಸಿಕೊಳ್ಳಲು ಪ್ರದರ್ಶನ ಕಮೀಟಿಯವರು ತಮ್ಮ ಪೈಕಿ ಒಬ್ಬರನ್ನು ತುಂಗಭದ್ರಕ್ಕೆ ಈಗಲೇ ಕಳಿಸಿಕೊಟ್ಟಿದ್ದಾರೆ.

ಈ ಊರಲ್ಲಿ ಸಿಗರೇಟಿನ ವ್ಯಾಪಾರವು ಸಂಪೂರ್ಣವಾಗಿ ಕಡಿಮೆ ಆಗಿರುತ್ತದೆ ಆದರೆ ಲಕ್ಷ್ಮಣರಾವ ಶೆಗ್ಗೇಸಿ ಎಂಬೊಬ್ಬ ಸಿಗರೇಟಿನ ವ್ಯಾಪಾರಿಯು ೬-೭ ದಿನಗಳ ಕೆಳಗ ಚೀನದೇಶದಲ್ಲಿ ತಯಾರಿಸಿದ ಸಿಗರೇಟಿನ ಪ್ಯಾಕುಗಳನ್ನು ಈ ಊರಲ್ಲಿಯ ಉಳಿದ ವ್ಯಾಪಾರಸ್ಥರಿಗೆ ಅವುಗಳನ್ನು ಕೊಟ್ಟು, ಅವರಿಗೆ ‘ಚೀನದೇಶದ ಸಿಗರೇಟಿನ ಮೇಲೆ ಕಾಂಗ್ರೆಸದವರು ಬಹಿಷ್ಕಾರ ಹಾಕಿಲ್ಲ ಕಾರಣ ಅವುಗಳ ವ್ಯಾಪಾರ ಮಾಡಲಿಕ್ಕೆ ಯಾವ ತರದಿಂದ ಅಡ್ಡಿ ಇಲ್ಲ’ ಅಂತಾ ಅಂಗಡಿಕಾರರಿಗೆ ಬೋಧವಮಾಡಿಕೊಟ್ಟಿದ್ದನು. ಈ ಸುದ್ದಿ ಸ್ವದೇಶಿ ಪ್ರಚಾರಕ ಮಂಡಲಕ್ಕೆ ತಿಳಿದ ಕೂಡಲೆ ಯಾವತ್ತೂ ಸಿಗರೇಟಿನ ವ್ಯಾಪಾರಿಗಳ ಕಡೆಗೆ ಹೋಗಿ ಆ ಸಿಗರೇಟು ಪ್ಯಾಕುಗಳನ್ನು ತಿರುಗಿ ಇಸಕೊಂಡು ಲಕ್ಷ್ಮಣರಾವ ಶೆಗ್ಗೇಸಿಯವರಿಗೆ ಮುಟ್ಟಿಸಿದರು.

ಗದಗಿನ ಮ್ಯಾಜಿಸ್ಟ್ರೇಟರಾದ ಮಿ ಪರಾಣಸಾಹೇಬರವರು ಹಳ್ಳಿಗಳ ಮೇಲೆ ಸಂಚಾರಕ್ಕೆ ಹೋದಾಗ ರಾಜನಿಷ್ಠ ಸಭೆಗಳನ್ನು ನೆರೆಯಿಸಿ ತಾವೇ ಸ್ವಂತ ವ್ಯಾಖ್ಯಾನ ಕೊಡುತ್ತಿದ್ದಾರೆ. ೮-೫ ದಿನಗಳ ಹಿಂದ ಕಳಸಾಪುರ ಗ್ರಾಮಕ್ಕೆ ಹೋಗಿ ಅಲ್ಲಿಯೂ ರಾಜನಿಷ್ಠ ಸಭೆಯನ್ನು ನೆರೆಯಿಸಿ ಆ ಸಭೆಯಲ್ಲಿ ವ್ಯಾಖ್ಯಾನ ಕೊಟ್ಟರು ಅವರ ವ್ಯಾಖ್ಯಾನದ ಸಾರಾಂಶ ಕೆಳಗೆ ಬರೆದಂತೆ ಇರುವದು ‘ಈಗ ನಡೆದ ರಾಜಕೀಯ ಚಳವಳಿಯನ್ನು ಬ್ರಾಹ್ಮಣರೇ ಹೂಡಿದ್ದರಿಂದ ನೀವು ಯಾರೂ ಆ ಚಳವಳಿಗೆ ಸಹಾಯ ಮಾಡಬೇಡಿರಿ, ಮತ್ತು ಬ್ರಾಹ್ಮಣರು ಲುಚ್ಚೇರು, ಲಫಂಗರು, ಇದ್ದು ಜನರನ್ನು ಮೋಸಗೊಳಿಸಿ ತಾವು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬೇಕೆಂಬ ಹೇತುವಿನಿಂದ ಈ ಚಳವಳಿಯನ್ನು ಹೂಡಿದ್ದಾರೆ. ಈ ಪ್ರಕಾರ ಬ್ರಾಹ್ಮಣರ ನಿಂದೆಯನ್ನು ಮಾಡಿದರಂತೆ. ದೊಡ್ಡ ಸರಕಾರೀ ಅಮಲದಾರರು ಈ ಪ್ರಕಾರ ಪ್ರಜೆಗಳಲ್ಲಿ ಜಾತಿಮತ್ಸರವನ್ನು ಹುಟ್ಟಿಸುವರೆಂದರೆ ಅದು ಕೇವಲ ಗರ್ಹಣೀಯವಾದದ್ದು. ಬ್ರಾಹ್ಮಣ ಸಮಾಜದವರು ಮಾಮಲೇದಾರ ಸಾಹೇಬರವರ ಈ ತರಹದ ಭಾಷಣವನ್ನು ಯಾವ ರೀತಿಯಿಂದ ಪ್ರತಿಷೇಧಿಸುವರು? ನೋಡಬೇಕು.

ವಿಜಾಪುರಕ್ಕೆ

ಲಷ್ಕರವು ಬರುವದಂತೆ!

ಇದೇ ತಿಂಗಳ ೨೫ ನೆಯ ತಾರೀಖಿನ ಸುಮಾರಕ್ಕೆ ಒಂದು ನೂರು ಅಥವಾ ಇನ್ನೂರರಷ್ಟು ಕಾಲಾಳು ಲಷ್ಕರಿ ಸಿಪಾಯರು ತಮ್ಮ ಊರಿನಿಂದ ಹಾಯ್ದು ವಿಜಾಪುರಕ್ಕೆ ಹೋಗುವವರಿದ್ದಾರೆಂಬುದಾಗಿಯೂ, ವಿಜಾಪುರದಲ್ಲಿ ಒಂದು ಹೊಸದಾಗಿ ಲಷ್ಕರಿ ಠಾಣೆಯನ್ನು ಮಾಡತಕ್ಕವರಿದ್ದು, ಅಲ್ಲಿಗೆ ಈ ಲಷ್ಕರಿ ದಂಡನ್ನು ಒಯ್ಯುವವರಿದ್ದಾರೆಂಬುದಾಗಿಯೂ ಗದುಗಿನಲ್ಲಿ ದಟ್ಟವಾದ ವಾರ್ತೆಯಿದೆಯೆಂದು ಗದುಗಿನ ನಮ್ಮ ಸುದ್ದಿಗಾರರು ತಿಳಿಸುತ್ತಾರೆ.

ಜಮಖಂಡಿ ಸಂಸ್ಥಾನ ಪ್ರಜಾ ಪರಿಷತ್ತು

ಮೂರನೇ ಅಧಿವೇಶನ.

ಜಮಖಂಡಿ ಸಂಸ್ಥಾನ ಪ್ರಜಾ ಪರಿಷತ್ತಿನ ಮೂರನೆಯ ಅಧಿವೇಶನವು ಹುನನೂರು ಗ್ರಾಮದಲ್ಲಿ ಶನಿವಾರ ಮತ್ತು ರವಿವಾರ ತಾ. ೭೦|೮ ಫೆಬ್ರುವಾರಿ ಈ ದಿನಗಳಲ್ಲಿ ಜರಗುವದು ನಿಶ್ಚಿತವಾಗಿದೆ.

ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಕರ್ನಾಟಕದ ಸುಪ್ರಸಿದ್ಧ ಮುಂದಾಳುಗಳಾದ ಶ್ರೀಯುತ ಶ್ರೀನಿವಾಸರಾವ್ ಕೌಜಲಗಿ, ವಿಜಾಪುರ, ಇವರು ವಹಿಸಲು ಒಪ್ಪಿರುವರು. ಇನ್ನೆ ಪರಿಷತ್ತಿನ ಜೊತೆಯಲ್ಲಿ ಒಂದು ಸಣ್ಣ ಖಾದಿ ಪ್ರದರ್ಶನ ಮಾಡುವ ವಿಚಾರವಿದೆ. ಅದರ ಉದ್ಘಾಟನಗೋಸ್ಕರ ಶ್ರೀಯುತ ಮಂಜಪ್ಪ ಹರ್ಡೇಕರ, ಆಲಮಟ್ಟಿ ಇವರನ್ನು ಕೇಳಲಾಗಿದೆ: ಅವರು ಸಮ್ಮತಿಸಿದ ನಂತರ ಅದರಂತೆ ಪ್ರಸಿದ್ಧಪಡಿಸಲ್ಪಡುವದು.

ಇದೇ ೧೦ನೆಯ ತಾರೀಖಿನ ದಿವಸ ಹುನನೂರದಲ್ಲಿ ಸ್ವಾಗತಮಂಡಳದ ಸಭೆಸೇರಿ ಕಾರ್ಯಕಾರಿ ಮಂಡಳವು ಆರಿಸಲ್ಪಟ್ಟಿದ್ದಲ್ಲದೆ, ಹಳ್ಳಿಗಳಲ್ಲಿ ಪ್ರಚಾರಕಾರ್ಯ ಹಾಗು ಬೇರೆ ಬೇರೆ ಕೆಲಸಗಳಿಗಾಗಿಯೂ ಬೇರೆ ಬೇರೆ ಕಮೀಟಿಗಳನ್ನು ನಿಯಮಿಸುವದರಲ್ಲಿ ಬಂದಿದೆ, ಶ್ರೀ ಮಲ್ಲೇಶಪ್ಪಾ ಹನಗಂಡಿಯವರು ಸ್ವಾಗತಾಧ್ಯಕ್ಷರಾಗಿದ್ದಾರೆ.

ಜಮಖಂಡಿ
ತಾ ೧೬-೧-೩೧ } ಸೆಕ್ರೆಟರಿ
ಜಮಖಂಡಿ ಸಂಸ್ಥಾನ
ಪ್ರಜಾ ಪರಿಷತ್ತು.

ಪೋಸ್ಟ ಅಫೀಸು

ಸುಟ್ಟು ಹೋಯಿತು.

ಬಂಗಾಲ ಇಲಾಖೆಯಲ್ಲಿಯ ನಬೀನಗರದ ಸಬ್ ಪೋಸ್ಟ ಅಫೀಸಿಗೆ ತಾ|೧೬ನೇಯ ದಿವಸ ಬೆಂಕಿಹತ್ತಿದ್ದರಿಂದ ಅದು ಸಂಪೂರ್ಣವಾಗಿ ಸುಟ್ಟುಹೋಯಿತು. ಒಳಗಿನ ಕಾಗದಪತ್ರಗಳೆಲ್ಲವೂ ಭಸ್ಮವಾಗಿಹೋದವು.

ಈ ಪತ್ರಿಕೆಯು ವೆಂಕಟೇಶ ಶೇಕುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ -मनु.

ಕನ್ನಡಿಗ

KANNADIGA BAGALKOT. BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಗುರುವಾರ ಮಿತಿ ಮಾಘ ಶುದ್ಧ ೪ ಶಕೆ ೧೮೫೨ ತಾ॥ ೨೨—೧—೩೧ [ಸಂಚಿಕೆ ೧೬೧

ಹುನಗುಂದದ

ಶ್ರೀ ಕಟ್ಟೀ ಆಚಾರ್ಯರಿಗೆ ಬಿಡುಗಡೆ

ಕ್ರಿ. ಲಾ. ಅವೆಂಡಮೆಂಟ ಕಾಯದೆಯ ಅನ್ವಯ ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಹುನಗುಂದದ ಶ್ರೀ ಕಟ್ಟಿ ಶಮಣಾಚಾರ್ಯರು ಹಾಗು ಶ್ರೀ ಪ್ಯಾಟಿ ಮಧ್ವರಾಯರು ಇವರ ಖಟ್ಲೆಯ ಕಾಗದಪತ್ರಗಳನ್ನು ಮೊನ್ನಿನ ದಿವಸ ಪುನರ್ವಿಚಾರಣೆ ಮಾಡಿ, ಅವರು ನಿಃಷಂಧಿಗಳಿದ್ದಾರೆಂದು ನಿರ್ಣಯಕೊಟ್ಟಿದ್ದರಿಂದ, ಅವರು ಬೇಗನೆ ಬಿಡುಗಡೆ ಹೊಂದುವರಾಗಿ ತಿಳಿದು ಬರುತ್ತದೆ. ಅನ್ನತ್ಯಾಗದ ಮೂಲಕವಾಗಿ ಶ್ರೀ ಕಟ್ಟಿಯವರು ಬಹಳೇ ಅಶಕ್ತರಾಗಿದ್ದಾರೆ,

---

ಹಿಂಡಲಗಿ ಜೇಲಿನಲ್ಲಿ ಸ್ಥಳವಿಲ್ಲದಾಯಿತು

(ಧಾರವಾಡದ ಸ್ವಂತ ಸುದ್ದಿಗಾರರಿಂದ)

ಬೆಳಗಾವಿಯಲ್ಲಿಯ ಹಿಂಡಲಗಿ ಜೇಲಿನಿಂದ ೩೦ ಚಿಕ್ಕ ವಯಸ್ಸಿನ ಸೆರೆಯಾಳುಗಳನ್ನು ಶುಕ್ರವಾರ ಎಕ್ಸಪ್ರೆಸ್ ಗಾಡಿಗೆ ಇಲ್ಲಿಗೆ ತರುವವರಿದ್ದಾರೆಂದು ಮೊದಲೇ ಸುದ್ದಿ ಬಂದದ್ದರಿಂದ ಶ್ರೀ ದಿವಾಕರ ಮೊದಲಾದವರು ಅಂದು ಸ್ಟೇಶನಕ್ಕೆ ಹೋಗಿ ಅವರನ್ನು ಸ್ವೀಕರಿಸಿದರು. ಎಲ್ಲ ಬಾಲಕರೂ ಬಹಳೇ ಉತ್ಸಾಹದಲ್ಲಿದ್ದರು "ಬೆಳಗಾವ ಜೇಲ ಭರತಿಯಾ, ಧಾರವಾಡ ಜೇಲ ಕುಜಾತಿಕಾಹೈ" ಎಂದು ಅವರು ಒದರುತ್ತಿದ್ದರು.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದ್ದರೆ ಒಳಿತಾಗುತ್ತಿತ್ತು

ಮಿ. ಮ್ಯಾಕಡೋನಾಲ್ಡರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ವಿಷಯವಾಗಿ ಸಹೃದಯಭಾವವನ್ನು ವ್ಯಕ್ತಪಡಿಸಿ, ಸರ್ ತೇಜ ಬಹದ್ದೂರ ಸಪ್ರೂ ಅವರ ಸೂಚನೆಯನ್ನು ಮನ್ನಿಸಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದ್ದರೆ ಒಳಿತಾಗುತ್ತಿತ್ತೆಂಬುದಾಗಿ ಸರ್ ಪುರಷೋತ್ತಮದಾಸ, ಹುಸೇನ ಭಾಯಿ ಲಾಲಜಿ, ಚುನ್ನೀಲಾಲ ಮೆಹತಾ, ಲಾಲಜಿ ನಾರಾಯಣಜಿ, ಎಲ್. ಆರ್. ಟೈರಸಿ ಮೊದಲಾದ ಮುಂಬಯಿಯ ಮುಖಂಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಭಗತಸಿಂಗರನ್ನು ಯರವಡಾ ಜೇಲಿಗೆ ತಂದಿಲ್ಲ

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಭಗತಸಿಂಗ, ರಾಜಗುರು ಹಾಗು ಸುಖದೇವ ಇವರನ್ನು ಯರವಡಾ ಜೇಲಿಗೆ ತರಲ್ಪಟ್ಟಿರುವರೆಂಬುದಾಗಿ ಹಬ್ಬಿದ ವಾರ್ತೆಯು ಸುಳ್ಳಿರುವದೆಂದು ಸರಕಾರಿ ವರ್ತಮಾನ ಪ್ರಸಿದ್ಧವಾಗಿದೆ.

ಲಂಡನದಲ್ಲಿ ರಾಷ್ಟ್ರಧ್ವಜಕ್ಕೆ ಸನ್ಮಾನ

ಹಿಂದೀ ಸ್ವಾತಂತ್ರ್ಯ ಸಂಘದ ಪರವಾಗಿ ತಾ॥ ೧೭ನೆಯ ದಿವಸ ಲಂಡನದಲ್ಲಿ ಹಿಂದೀ ರಾಷ್ಟ್ರಧ್ವಜವಂದನೆಯ ಸಮಾರಂಭವು ಜರುಗಿತು. ಅನೇಕ ಜನ ಹಿಂದೀಯರು ಹಾಗು ಬ್ರಿಟಿಶರು ಆ ಕಾರ್ಯಕ್ರಮದಲ್ಲಿ ಭಾಗತೆಗೆದು ಕೊಂಡಿದ್ದರು. ರಾಷ್ಟ್ರಗೀತೆಯಾದ ಬಳಿಕ ಸಮಾರಂಭವು ಕೊನೆಗಂಡಿತು.

ಪೋಲೀಸ ಸಾಹೇಬರು ಲಂಚ ತಿಂದರು

ಬಂಗಾಲ ಇಲಾಖೆಯ ರಂಗಪೂರ ಜಿಲ್ಲೆಯ ಪೋಲೀಸ ಸುಪರಿಂಟೆಂಡೆಂಟರಾದ ಶ್ರೀ ಸುಕುಮಾರ ಸೇನಗುಪ್ತರು ೨೧ ಸಾವಿರ ಲಂಚವನ್ನು ತಿಂದಿದ್ದಾರೆಂದು ಆ ಬಗ್ಗೆ ನಿಯಮಿಸಲ್ಪಟ್ಟ ವಿಚಾರಣಾ ಮಂಡಳದವರಿಗೆ ಕಂಡು ಬಂದದ್ದರಿಂದ, ಮೇಲಧಿಕಾರಿಗಳು ಅವರಿಗೆ ಪೆನಶನ ಕೊಟ್ಟು ಅವರನ್ನು ಒತ್ತಾಯದಿಂದ ಮನೆಗೆ ಕಳಿಸಿದ್ದಾರೆ.

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

(ಪುಣೆಯ ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನರವರ ಲೇಖದ ಅನುವಾದವು)

(ಹಿಂದಿನಿಂದ ಮುಂದೆ ಸಾಗಿದ್ದು)

ಜಂಗಮ ಅಸ್ತಿಯ ಜಪ್ತಿ:—

ಹೊತ್ತು ನಿಂತ ಬಿರಾಡದ ವಸೂಲಿಗಾಗಿ ಬಹ ಕಾದರೆ ರೈತರ ಜಂಗಮ ಆಸ್ತಿಯನ್ನು ಜಪ್ತ ಮಾಡ್ಡುವದು ಸರ್ವರಿಗೂ ಸಮ್ಮತವಾದ ಹಾದಿಯು. ಅದರಲ್ಲಿಯೂ ಬೇಸಾಯದ ಮತ್ತು ಬೇರೆ ಕೆಲವು ಪ್ರಾಪಂಚಿಕ ಅವಶ್ಯಕ ಸಾಮಾನುಗಳನ್ನು ಬಿಟ್ಟು ಜಪ್ತ ಮಾಡಬೇಕೆಂದು ಕಾಯಿದೆ ಇದೆ. ಆದರೆ ಈ ನಿಯಮವು ತೀರ ದುರ್ಲಕ್ಷಿಸಲ್ಪಟ್ಟಿದೆ. ಈ ದುರ್ಲಕ್ಷ್ಯದ ಒಂದು ಕೆಟ್ಟ ಉದಾಹರಣೆಯೆಂದರೆ ಹೀಕು ಗಳಿಗೆ ನೀರು ಪೂರೈಸಲಿಕ್ಕೆ ಅವಶ್ಯವಾಗಿದ್ದ ಪಂಪಿನ ಮುಖ್ಯ ಭಾಗಗಳನ್ನು ಜಪ್ತಿಯಲ್ಲಿ ಬಿಚ್ಚಿಕೊಂಡು ಹೋದದ್ದು. ಇದು ಅನೇಕ ಕಡೆ ಸಂಭವಿಸಿದೆ. ಇದರಿಂದ ಕೈಗೆ ಬಂದ ಬೆಳೆಗಳಿಗೆ ಅಯುತ ವೇಳೆಯಲ್ಲಿ ನೀರು ಇಲ್ಲದಾಗಿ ಹೀಕೆಲ್ಲ ಒಣಗಿ ನಿಂತಿದೆ.

ಮನೆಗಳಿಗೆ ಬೆಂಕಿ ಹಚ್ಚುವದು

ಬೋರಸಾದ ತಾಲೂಕದಲ್ಲಿ ನಡೆದಿರುವ ಇವೆಲ್ಲ ಚಮತ್ಕಾರಗಳಲ್ಲೆಲ್ಲ ಅತ್ಯಗಾಧವಾದದ್ದೆಂದರೆ ಒಮ್ಮೆಲೆ ಮನೆಗಳಿಗೆ ಬೆಂಕಿ ಹತ್ತುತ್ತಿರುವದು. ಅಗ್ನಿನಾರಾಯಣನ ಅಗಮ್ಯವಾದ ಈ ವಿಕ್ಷಿಪ್ತತನಕ್ಕೆ ಅನೇಕ ಸುಂದರವಾದ ಮನೆಗಳು ಆಹುತಿಯಾಗಿ ನೆಲಸಮವಾಗಿವೆ. ಆದರೆ ಈ ಅಗ್ನಿನಾರಾಯಣನ ಅಪೂರ್ವವಾದ ಈ ವಿಕ್ಷಿಪ್ತತನದ ಇಂಗಿತವನ್ನು ಊಹಿಸಲಿಕ್ಕೆ ಬರುವಂತೆ ಕೆಲವು ವಿಚಿತ್ರ ಸಂಗತಿಗಳು ನಮ್ಮ ಮುಂದೆ ಬಂದಿವೆ. (೧) ಬೆಂಕಿ ಹತ್ತಿ ಸುಟ್ಟು ಹೋದ ಮನೆಗಳೆಲ್ಲವೂ ಕರ ಕೊಡಲು ನಿರಾಕರಿಸಿದ ರೈತರವೇ ಇರುತ್ತವೆ. (೨) ಅಲ್ಲಿಯ ಅಧಿಕಾರಿಗಳು ಈ ಬೆಂಕಿ ಹಚ್ಚುವವರನ್ನು ಶೋಧಿಸಿ ಶಿಕ್ಷಿಸುವದಕ್ಕೆ ಇನ್ನೂವರೆಗೆ ಯಾವ ಯತ್ನವನ್ನೂ ಮಾಡಿಲ್ಲ. (೩) ಹೀಗೆ ಮಾಡಿರಿ ಎಂದು ಯಾರಾದರೂ ಸೂಚಿಸಿದರೆ ತಾವೇ ಸಿಟ್ಟುಗೇಳಿಯಾಗುವರು. (೪) ಕೆಲ ಕೆಲವು ಕಡೆಯಂತೂ ಬೆಂಕಿ ನೊಂದಿಸಲಿಕ್ಕೆ ಬಂದವರಿಗೆ ಅಧಿಕಾರಿಗಳು ಪ್ರತಿಬಂಧವನ್ನು ಮಾಡಿರುವರು. (೫) ಖಾನಪುರದಲ್ಲಿ ಉರಿ ಆರಿಸಲಿಕ್ಕೆ ಹೋದ ಜನರು ಸರಕಾರ್ಯದವರಿಂದ ಕಲ್ಲು ಒಗಿಸಿಕೊಂಡು ತಿರುಗಬೇಕಾಯಿತು. (೬) ಸೇಜಪುರದಲ್ಲಿ ಪೋಲೀಸರು, ಬೆಂಕಿ ಆರಿಸಲು ಬಂದ ಜನರ ಮೇಲೆ ಏರಿ ಹೋಗಿ ಲಾಠಿ ಪ್ರಹಾರ ಮಾಡಿರುವರು. (೭) ವಾಘಾವದಲ್ಲಿ ಹೊಂದಾಗಿ ನಿಯಮಿಸಲ್ಪಟ್ಟಿರುವ ಗೌಡರ ಓಣಿಯಲ್ಲಿಯೇ ಒಂದು ಮನೆಗೆ ಬೆಂಕಿ ಹತ್ತಿದಾಗ ಉರಿ ಆರಿಸಲಿಕ್ಕೆ ನೀರು ತರಬೇಕೆಂದು ಜನರು ಭಾವಿಗೆ ಹೋದರೆ ಗೌಡನ ಅಣ್ಣನು ಆ ಜನರಿಗೆ ಭಾವೀ ನೀರು ಸೇದಗೊಟ್ಟಿಲ್ಲ. (ಆ ರಾತ್ರಿ ಗೌಡನು ಊರಲ್ಲಿರಲಿಲ್ಲ.) ಇಷ್ಟಾದರೂ ಅಲ್ಲಿಯ ರೈತರು ಯಾರಿಗೂ ದೋಷ ಕೊಡುವದಿಲ್ಲ. ಮತ್ತು ಇಂಥವರೇ ಎಂದು ಯಾರಮೇಲೆಯೂ ಸಂಶಯ ತಕ್ಕೊಳ್ಳುತ್ತಿರುವದಿಲ್ಲ. ಆದರೆ ಈ ಬೆಂಕಿಯ ಹಾವಳಿಯು ಈ ಮೊದಲು ಅಲ್ಲಿ ಎಂದೂ ಸಂಭವಿಸಿಲ್ಲ. ಅಲ್ಲಿಯ ರೈತರಿಗೆ ಹೀಗೆ ಅವರ ಮನೆಮಾರುಗಳನ್ನು ಸುಡುವಂಥ ದ್ವೇಷಿಗಳು ಯಾರೂ ಇರುವದಿಲ್ಲ. ಅವರು ಎಲ್ಲರೊಡನೆಯೂ ಪ್ರೀತಿಯಿಂದ ಇದ್ದಾರೆ. ಬಾರಿಯಾ ಜನರೂ ಕೂಡ ಇವರೊಡನೆ ಮೊನ್ನೆ ಮೊನ್ನನವರೆಗೆ ಪರಮ ಸ್ನೇಹದಿಂದ ನಡೆಕೊಳ್ಳುತ್ತಿದ್ದರು ಆದರೆ ಮೊನ್ನೆ ಓರ್ವ ಸರ್ಕಲ್ ಇನ್‌ಸ್ಪೆಕ್ಟರನು ಪರಾಜ ಮತ್ತು ಖಾನಪುರದಲ್ಲಿ ಅಡ್ಡಾಡಿ ಎಲ್ಲ ಬಾರಿಯಾ ಜನರಿಗೆ ಭೆಟ್ಟಿಯಾಗಿ ಅವರೊಡನೆ ಮಾತುಕತೆ ನಡೆಸಿದ್ದನು. ಆದರ ಮರುದಿವಸವೇ ಅಲ್ಲಿಯ ಮನೆಗಳಿಗೆ ಬೆಂಕಿ ಹತ್ತಿದ್ದು ಸೋಜಿಗದ್ದಾಗಿದೆ. ಇವೆರಡೇ ಹಳ್ಳಿಗಳಲ್ಲಿ ಒಟ್ಟಿಗೆ ೨೬ ಮನೆಗಳು ಸುಟ್ಟಿರುವವು. ಇಷ್ಟಾದ ಮೇಲಾದರೂ ಸರಕಾರವು ಇವುಗಳ ಕಾರಣವನ್ನು ಗೊತ್ತುಹಚ್ಚಲು ಯತ್ನಿಸಬಾರದೇ ?

ವ್ಹಾಯಿಸರಾಯರು ವ್ಯರ್ಥ ಒದರಿಕೊಂಡರು

ದಿಲ್ಲಿಯಲ್ಲಿ ಸೇರಿದ ಲೇಜಿಸ್ಲೇಟಿವ್ಹ ಅಸೆಂಬ್ಲಿಯ ಸಭಾಸದರನ್ನುದ್ದೇಶಿಸಿ ತಾ| ೧೭ನೆಯ ದಿವಸ ವ್ಹಾಯಿಸರಾಯರು ಒಂದು ಭಾಷಣ ಮಾಡಿದ್ದು, ಆಗ ಕಾಯದೆಭಂಗ ಚಳವಳಿ ಹಾಗು ಮಹಾತ್ಮರ ವಿಷಯವಾಗಿ ಅವರು ಹೇಳಿದ್ದನ್ನು ಇಲ್ಲಿ ಕೆಳಗೆ ಕೊಟ್ಟಿದೆ.

ಹಿಂದುಸ್ಥಾನದ ಆರ್ಥಿಕ ಪರಿಸ್ಥಿತಿಯು ಈಗ ತೀರ ಕೆಟ್ಟುಹೋಗಿದೆ. ಅದನ್ನು ಸುಧಾರಿಸಿಕೊಳ್ಳುವ ಸಂಬಂಧವಾಗಿ ಒಂದು ಹೊಸ ಯೋಜನೆಯು ನಿಮ್ಮ ಮುಂದೆ ಬರತಕ್ಕದ್ದಿದೆ. ಅದರಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸಧಾರಿಸುವ ಬಗ್ಗೆ ವಿಚಾರವಿರುವದಷ್ಟೇ ಅಲ್ಲದೆ, ಹೊಸ ರಾಜ್ಯ ಪದ್ಧತಿಯನ್ನು ಪ್ರಾರಂಭಿಸುವ ಸಮಯದಲ್ಲಿ ಉತ್ತಮವಾದ ಆರ್ಥಿಕ ಪರಿಸ್ಥಿತಿಯು ಇಲ್ಲಿ ಇರುವದು ಅವಶ್ಯವಾಗಿದೆಯೆಂಬ ವಿಚಾರವೂ ಅವರಲ್ಲಿ ಸೇರಿಕೊಂಡಿದೆ

ಜಗತ್ತಿನಲ್ಲಿಯ ವ್ಯಾಪಾರವು ಮಂದವಾಗಿ ದುಃಸ್ಥಿತಿಯು ಪ್ರಾಪ್ತವಾಗಿರುವ ಈ ಸಮಯದಲ್ಲಿ ಕಾಯದೆ ಭಂಗ ಚಳವಳಿಯು ಪರಿಸ್ಥಿತಿಯನ್ನು ಮತ್ತಿಷ್ಟು ಕೆಡಿಸಹತ್ತಿದೆ. ರಾಜ್ಯಯಂತ್ರವನ್ನು ನಿಲ್ಲಿಸುವ ಪ್ರಯತ್ನ ಹಾಗು ಅವಿಶ್ವಾಸ ಇವುಗಳ ಬದಲಾಗಿ ಪರಸ್ಪರ ವಿಶ್ವಾಸ ಹಾಗು ಸಹಕಾರ್ಯ ಉತ್ಪನ್ನವಾದಲ್ಲಿ ಮಾತ್ರ ಸದ್ಯದ ಆರ್ಥಿಕ ಸ್ಥಿತಿಯಿಂದ ಪಾರಾಗುವ ಆಶೆಯಿದೆ. ಚಳವಳಿಯ ಧ್ಯೇಯವು ಏನೇ ಇರಲಿ, ಸರಕಾರದ ಸತ್ತೆಯ ವಿರುದ್ಧವಾಗಿ ಹೋರಾಡುವದು ಹಾಗು ಶಾಂತತೆ ಮತ್ತು ಸುವ್ಯವಸ್ಥೆಯನ್ನು ಭಂಗಗೊಳಿಸುವದು ಅಲ್ಲಲ್ಲಿ ಜೋರಿನಿಂದ ಸಾಗಿಸಲ್ಪಟ್ಟಿದೆ. ಧೂಕಂದಾಯವನ್ನು ಕೊಡಬೇಡಿರಿ ಎಂದು ಉಪದೇಶ ಮಾಡುತ್ತಿರುವದು ಅದರಲ್ಲಿ ಹೆಚ್ಚಿನದಾಗಿದೆ. ಕೆಲವು ಭಾಗಗಳಲ್ಲಿ ಚಳವಳಿಯ ಪುರಸ್ಕರ್ತರು ಭೂಕಂದಾಯವನ್ನು ಕೊಡುವದನ್ನು ನಿಲ್ಲಿಸಿ ಬಿಟ್ಟಿದ್ದು ಉಳಿದ ಕಡೆಗಳಲ್ಲಿಯೂ ಈ ಬಗ್ಗೆ ಪ್ರಯತ್ನವು ನಡೆದಿದೆ.

ಕೆಲವು ಕಡೆಗಳಲ್ಲಿ ಅತ್ಯಾಚಾರವೂ ಪ್ರಾರಂಭವಾಗಿದೆ ಅತ್ಯಾಚಾರದಿಂದ ಪ್ರತಿಷ್ಠಿತ ಸರಕಾರವನ್ನು ನಡೆಬಡಿಸುವ ಬಗ್ಗೆ ಒಂದು ಸಂಘಟನೆಯಾದರೂ ಅಸ್ತಿತ್ವದಲ್ಲಿ ಬಂದಿರುವದೆಂಬುದಾಗಿ ಕೆಲವು ತಿಂಗಳ ಅನುಭವದಿಂದ ನನಗೆ ಖಾತ್ರಿಯಾಗಿದೆ. ಈ ಸಂಘಟನೆಯನ್ನು ಮುರಿಬಡಿಯುವ ಕುರಿತು ಸರಕಾರವು ಪ್ರಯತ್ನಿಸುತ್ತಲೆ ಇದೆ. ಈ ದುಷ್ಟ ಚಳವಳಿಯನ್ನು ಸಮೂಲವಾಗಿ ನಾಶಗೊಳಿಸಲು ಜನರು ಸರಕಾರಕ್ಕೆ ಸಹಾಯಮಾಡದಿದ್ದಲ್ಲಿ ಸರಕಾರಕ್ಕೆ ಈ ಕಾರ್ಯದಲ್ಲಿ ಸಂಪೂರ್ಣ ಯಶ ಸಿಗಲಾರದು. ಕೆಲವು ವೃತ್ತಪತ್ರಿಕೆಗಳಾದರೂ ಕ್ರಾಂತಿಕಾರರಿಗೆ ಉತ್ತೇಜನ ಕೊಡಹತ್ತಿವೆ. ತಮ್ಮ ಕರ್ತವ್ಯವನ್ನು ಬಿಟ್ಟುಗೊಟ್ಟು ನಾಶಕಾರಕ ಹಾಗು ಭಯಂಕರವಾದ ತತ್ವಗಳ ಸಲುವಾಗಿ ವರ್ತಮಾನಪತ್ರಗಳು ತಮ್ಮ ಲೇಖನಿಯನ್ನು ಹೊರಳಿಸಿದಲ್ಲಿ, ಸರಕಾರವೂ ಸ್ವಸ್ಥ ಕೂಡಲಾರದು ಈ ದಸಾಗೆ ವಿಷಯವಾಗಿ ವಾದ ಮಾಡಲು ನಿಮಗೆ ಅಧಿಕಾರವಿದೆ. ನೀವು ಪೂರ್ಣ ಜವಾಬುದಾರಿಯಿಂದ ವಿಚಾರ ಮಾಡಿ ನಿರ್ಣಯ ಕೊಡುವಿರಾಗಿ ನನಗೆ ಖಾತ್ರಿಯಿದೆ.

(೪ನೇ ಪುಟ ನೋಡಿರಿ.)

ಕಲೆಕ್ಟರ ಕಚೇರಿಗೆ ರಾಷ್ಟ್ರಧ್ವಜ ಹಚ್ಚಿದರು.

ಕಾಲಿಕತ್ತದ ನಾಲ್ಕು ಜನ ಸ್ವಯಂಸೇವಕರು ತಾ|| ೧೮ ನೆಯ ದಿವಸ ಮೆರವಣಿಗೆಯಿಂದ ಕಲೆಕ್ಟರರ ಕಚೇರಿಗೆ ಸಾಗಿಹೋಗಿ, ಕಚೇರಿಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿದರು. ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಅವರು ಪಿಕೆಟಿಂಗ ಮಾಡುತ್ತ ನಿಂತಾಗ ಪೋಲೀಸರು ಅವರನ್ನು ಕೈದುಮಾಡಿಕೊಂಡು ಹೋದರು.

ಪೋಲೀಸರು ಸುಮ್ಮ ಸುಮ್ಮನೆ

ಗೋಳೀಬಾರ ಮಾಡಿದರು

ಸ್ವಾತಂತ್ರ್ಯ ದಿನದ ದಿವಸ ಮುಂಬಯಿಯಲ್ಲಿ ಸಂಭವಿಸಿದ ಗೋಳೀಬಾರಿಗೆ ಬಲಿಯಾಗಿ ಮರಣಹೊಂದಿದ ಶ್ರೀ ಲಕ್ಷ್ಮಣದಾಸ ಹಾಗು ಮೋಹನಲಾಲ ಇವರ ಬಗ್ಗೆ ಸಿಟಿ ಕೊರೋನರ ಕೋರ್ಟಿನಲ್ಲಿ ತಾ|| ೧೯ ನೆಯ ದಿವಸ ವಿಚಾರಣೆ ನಡೆಯಿತು. ಗೋಳೀಬಾರಿನ ಮೂಲಕವಾಗಿ ಗಾಯಹೊಂದಿ ಅವರು ಮರಣಹೊಂದಿದರಾಗಿಯೂ, ಪೋಲೀಸರು ಸುಮ್ಮ ಸುಮ್ಮನೆ ಗೋಳೀಬಾರಮಾಡಿದರಾಗಿಯೂ ಜ್ಯೂರಿಜನರು ಬಹುಮತದಿಂದ ನಿರ್ಣಯ ಕೊಟ್ಟರು.

ಕಲಕತ್ತೆಯಲ್ಲಿ

ಬಾಂಬುಗಳು ಸಿಕ್ಕವು.

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ|| ೧೮ ನೆಯ ದಿವಸ ಅಲ್ಲಿಯ ಎಷ್ಟೋ ಮನೆಗಳನ್ನು ಝಡತಿಮಾಡಲು ಕೆಲವು ಕಡೆಗಳಲ್ಲಿ ಪೋಲೀಸರಿಗೆ ಬಾಂಬು, ಕಾಡತೂಸು ಮೊದಲಾದವುಗಳು ಸಿಕ್ಕವೆ.

ಅಪ್ಪಾಸಾಹೇಬರು

ಅನ್ನತ್ಯಾಗ ಕೈಕೊಂಡರು.

ಜೇಲಿನ ಅಧಿಕಾರಿಗಳು ಜೇಲಿನಲ್ಲಿ ತಮಗೆ ತಕಲಿಯ ಮೇಲೆ ನೂಲು ತೆಗೆಯಲು ಅಪ್ಪಣೆಯನ್ನು ಕೊಡದ ಮೂಲಕವಾಗಿ, ರತ್ನಾಗಿರಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಅಪ್ಪಾಸಾಹೇಬ ಪಟವರ್ಧನರವರು ತಾ|| ೧೨ ರಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿದ್ದಾರೆ. ಅದೇ ಜೇಲಿನೊಳಗಿನ ನೂರಾರು ಜನ ರಾಜಕೀಯ ಕೈದಿಗಳೂ, ಅವರಿಗೆ ಸಹಾನುಭೂತಿ ತೋರಿಸುವದಕ್ಕಾಗಿ ೫೩ ತಾಸು ಉಪವಾಸ ಮಾಡಿದರು. ಈಗ ಮೂರು ನಾಲ್ಕು ದಿವಗಳಿಂದ ಅಧಿಕಾರಿಗಳು ಅವರ ಬಾಯಲ್ಲಿ ಒತ್ತಾಯದಿಂದ ಆಹಾರ ಹಾಕಹತ್ತಿದ್ದಾರೆ.

ಪೋಲೀಸ ಸಾಹೇಬರು

ತುರುಬು ಹಿಡಿದು ಜಗ್ಗಿದರು

ಸಾಬರಮತಿ ಆಶ್ರಮದಲ್ಲಿರುವ ಲೀಲಾವತಿ ಬೇನ ಆಶರರವರನ್ನು ಪೋಲೀಸ ಅಧಿಕಾರಿಗಳು ಸೆರೆ ಹಿಡಿದುಕೊಂಡು ಡಿ. ಡಿ. ಕಲೆಕ್ಟರರ ಮುಂದೆ ವಿಚಾರಣೆಗಾಗಿ ಒಯ್ದು ನಿಲ್ಲಿಸಿದರು. ಆಗ ಅವರು ಪೋಲೀಸ ಅಧಿಕಾರಿಗಳು ತಮ್ಮೊಡನೆ ಹೇಗೆ ರಕ್ಕಸತನದಿಂದ ವರ್ತಿಸಿದರೆಂಬುದನ್ನು ಕುರಿತು ಕಲೆಕ್ಟರರ ಕಡೆಗೆ ಕೆಳಗಿನಂತೆ ದೂರು ಹೇಳಿದರು :—

“ಪೋಲೀಸರು ನನ್ನನ್ನು ಸೆರೆಹಿಡಿದು ಲಾಕಪ್ಪಿನಲ್ಲಿಟ್ಟರು. ಸ್ವಲ್ಪ ಹೊತ್ತಿನ ಮೇಲೆ ಎಲ್ರಿಥಿ ಎಂಬ ಪೋಲೀಸನು ನನ್ನ ಬಳಿಗೆ ಬಂದು ನನ್ನ ಹೆಸರು ಹಾಗು ಪತ್ತೆ ಕೇಳಿದನು. ನಾನು ನನ್ನ ಹೆಸರು ಹಾಗು ಪತ್ತೆ ತಿಳಿಸಿದೆನು. ನಂತರದಲ್ಲಿ ಅವನು ನನಗೆ ನನ್ನ ಗಂಡನ ಹೆಸರು ಕೇಳಿದನು. ಹಿಂದೂ ಹೆಂಗಸು ಗಂಡನ ಹೆಸರು ಉಚ್ಚರಿಸುತ್ತಿರವದಿಲ್ಲವಾಗಿ ನಾನು ತಿಳಿಸಿದೆನು. ಆ ಮೇಲೆ ಅವನು ನನಗೆ ನನ್ನ ತವರುಮನೆಯ ಪತ್ತೆ ಕೇಳಿದನು. ನನ್ನ ತವರುಮನೆಯವರು ಮುಂಬಯಿಯಲ್ಲಿ ಇರುತ್ತಿರುವರಾಗಿ ನಾನು ತಿಳಿಸಿದೆನು. ಇಷ್ಟು ಕೇಳಿಕೊಂಡು ಅವನು ಸಬ್ ಇನಸ್ಪೆಕ್ಟರರಲ್ಲಿಗೆ ಹೋಗಿ ನಡೆದದ್ದನ್ನೆಲ್ಲ ಅವರಿಗೆ ತಿಳಿಸಿದನು. ಸಬ್ ಇನಸ್ಪೆಕ್ಟರ ಗುಲಾಮಹಮ್ಮದರು ನನ್ನನ್ನು ತಮ್ಮ ಆಫೀಸಿಗೆ ಕರೆಯಿಸಿಕೊಂಡು, ಅವಾಚ್ಯ ಶಬ್ದಗಳಿಂದ ನನ್ನನ್ನು ಬೈದರು. ಸಭ್ಯರೀತಿಯಿಂದ ವರ್ತಿಸಲು ನಾನು ಕೇಳಿಕೊಂಡೆನು. ಅವರು ಸಿಟ್ಟಿಗೆದ್ದರು. ಕುರ್ಚಿಯಿಂದ ಎದ್ದು ಬಂದು ನನ್ನ ಮೋರೆಯ ಮೇಲೆ ಒಳಿತಾಗಿ ಹೊಡೆದರು. ತುರುಬು ಹಿಡಿದು ನನ್ನನ್ನು ಮೇಲಕ್ಕೆತ್ತಿ ನಾಲ್ಕು ಸಾರೆ ನೆಲದ ಮೇಲೆ ಧೊಪ್ಪನೆ ಒಗೆದು, ಎಷ್ಟೋ ಸಾರೆ ಒದ್ದರು. ನಾನು ಪ್ರಜ್ಞೆತಪ್ಪಿ ಬಿದ್ದೆನು. ಆಗ ಅವರು ನನ್ನ ತಂದೆಯ ಹಾಗು ಅಣ್ಣನ ಪತ್ತೆಯನ್ನು ನನ್ನಿಂದ ತಿಳಿದುಕೊಂಡರು. ಆ ವೇಳೆ ಅವರು ನನ್ನನ್ನು ಮ್ಯಾಜಿಸ್ಟ್ರೇಟರಲ್ಲಿಗೆ ಒಯ್ದರು. ಮ್ಯಾಜಿಸ್ಟ್ರೇಟರು ಡಿ. ಡಿ. ಕಲೆಕ್ಟರರಲ್ಲಿಗೆ ಒಯ್ಯಲು ತಿಳಿಸಿದರು. ಅವರು ನನಗೆ ಏನೂ ಕೇಳಲಿಲ್ಲ. ೪ ಗಂಟೆಗೆ ನಾನು ಸೆರೆಹಿಡಿಯಲ್ಪಟ್ಟು ರಾತ್ರಿಯೆಲ್ಲ ಲಾಕಪ್ಪಿನಲ್ಲಿದ್ದೆ.

ಬಂಡೀಗಾಲಿಯ ಪರಿಷತ್ತು

ಬಂಜೆಯಾಯಿತು

ಕಾಂಗ್ರೆಸದವರ ಬೇಡಿಕೆಗಳನ್ನು ಮಾನ್ಯ ಮಾಡದ ಹೊರತು ಹಾಗು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ದಬ್ಬಾಳಿಕೆಯನ್ನು ನಿಲ್ಲಿಸಲು ಸರಕಾರದವರು ಒಪ್ಪದ ಹೊರತು ಬಂಡೀಗಾಲಿಯ ಪರಿಷತ್ತಿಗೆ ಯಶಸ್ಸು ಸಿಗಲಾರದೆಂದು ಹಿಂದುಸ್ಥಾನದ ಮುಖಂಡರೆಲ್ಲರೂ ಜೇಲಿನಲ್ಲಿರುವಾಗ ರಾಜ್ಯಪದ್ಧತಿಯ ಸಂಬಂಧವಾಗಿ ಇಲ್ಲಿ ವಿಚಾರ ಮಾಡುವದು ನಿರರ್ಥಕವಾಗಿದೆ ಎಂದೂ ಲಂಡನದ “ ನ್ಯೂಲೀಡರ ” ಪತ್ರಿಕೆಯು ಬ್ರಿಟಿಶ ಸರಕಾರಕ್ಕೆ ಬುದ್ಧಿ ಹೇಳಿದೆ.

ಬಂಗಾಲದಲ್ಲಿ

೪೨ ಮನೆಗಳು ಜಪ್ತವಾದವು

ಮಿದನಾಪೂರ ಜಿಲ್ಲೆಯಲ್ಲಿಯ ಕೊಂಟಾಯಿ ಹಾಗು ತಮಲುಕ್ ಭಾಗದೊಳಗಿನ ಒಟ್ಟಿಗೆ ೪೨ ಮನೆಗಳನ್ನು ಸರಕಾರದವರು ಜಪ್ತ ಮಾಡಿ, ಅಲ್ಲಿರುವವರಿಗೆ ಅವುಗಳನ್ನು ಬಿಟ್ಟುಗೊಟ್ಟು ಹೋಗಲು ಕೇಳಿಕೊಂಡಿದ್ದಾರೆ.

ಕೈದಿಯು ಓಡಿ ಹೋದನು.

ಮದ್ರಾಸ ಇಲಾಖೆಯ ಪಾಲಮಕೊಟ್ಟೆಯ ಬೋರ್ಸ್ಟಲ್ ಗೃಹದಲ್ಲಿ ಇದ್ದಂಥ ರಾಮಾ ಥೆವಾನ ಎಂಬ ಕೈದಿಯು ಪೋಲೀಸರ ಕಣ್ಣಿಗೆ ಇಂಗು ಹಚ್ಚಿ, ತಾ|| ೧೬ ನೆಯ ದಿವಸ ಅಲ್ಲಿಂದ ಓಡಿ ಹೋಗಿದ್ದಾನೆ. ಅವನು ಓಡಿ ಹೋದ ಸಮಯದಲ್ಲಿ ಜೇಲಖಾತೆಯ ಇನಸ್ಪೆಕ್ಟರರಾದರೂ ಅಲ್ಲಿಯೇ ಇದ್ದರು.

ಡಮ್ ಡಮ್ ಜೇಲಿಗೆ

ಬೆಂಕಿ ಹತ್ತಿತು.

ತಾ|| ೧೮ ನೆಯ ದಿವಸ ಮುಂಜಾನೆ ಡಮ್ ಡಮ್ ಸ್ಪೇಶಲ್ ಜೇಲಿಗೆ ಬೆಂಕಿ ಹತ್ತಿತಾಗಿ ತಿಳಿದು ಬರುತ್ತದೆ.

(೨ ನೇ ಪುಟದಿಂದ ಬಂದಿದ್ದು)

ಆದರೆ ಕೇವಲ ಈ ಒಕ್ಕಟ್ಟಿನಿಂದ ಉಪಾಯದಿಂದಲೇ ಚಳವಳಿಯು ಶಾಂತ ಗೊಳಿಸಲಾರದು. ಸರ್ವರ ಲಕ್ಷ್ಯವೂ ಈಗ ಹಿಂದೂಗಳ ಶಕ್ತಿಯ ಕಡೆಗೆ ಹೋಗಿದೆ. ಸರ್ವ ಹಿಂದುಸ್ಥಾನವೂ ಐಕ್ಯಹೊಂದಬೇಕು. ಈ ಐಕ್ಯವನ್ನು ಪ್ರಸ್ಥಾಪಿಸಲು ರಾಜ್ಯಪದ್ಧತಿಯಲ್ಲಿ ಸುಧಾರಣೆ ಮಾಡಬೇಕೆಂದು ಸಂಸ್ಥಾನಿಕರು ಸಮ್ಮತಿ ತೋರಿಸಿದ್ದಾರೆ

ಮಿ. ಗಾಂಧಿಯವರು ತಪ್ಪು ಮಾರ್ಗ ಹಿಡಿದಿರುವರೆಂದು ಯಾರಿಗೆ ಎಷ್ಟೇ ಅನಿಸಲಿ, ಅವರ ಧೋರಣದ ಪರಿಣಾಮವು ದುಃಖಜನಕವಾಗಿರುವದೆಂದು ಯಾರು ಎಷ್ಟೇ ತಿಳಿದುಕೊಳ್ಳಲಿ, ಹಿಂದುಸ್ಥಾನದ ಸಲುವಾಗಿ ಎಷ್ಟೇ ಸ್ವಾರ್ಥತ್ಯಾಗ ಮಾಡಿದರೂ ಅದನ್ನು ಕುಸುವಾಗಿಯೇ ಕಾಣುವ ಮಿ. ಗಾಂಧಿಯವರ ಆತ್ಮಿಕ ಬಲವು ಯಾರ ಸ್ಮರಣದಲ್ಲಿಯೂ ಬರದೆ ಇರಲಿಕ್ಕಿಲ್ಲ. ಅವರೊಂದಿಗೆ ಮತಭೇದ ತಳೆದವರು ತಪ್ಪು ಮಾರ್ಗ ಹಿಡಿದಿರುವರೆಂದು ಅವರ ಅನುಯಾಯಿಗಳು ಅನ್ನಬಹುದು. ಆದರೆ ಈ ದೇಶದ ರಾಜ್ಯಸೂತ್ರವನ್ನು ಸಾಗಿಸುತ್ತಿರುವ ನನ್ನ ಬ್ರಿಟಿಶ ಬಾಂಧವರು ಪ್ರಾಮಾಣಿಕತನದಿಂದಲೇ ಹಿಂದುಸ್ಥಾನದ ಸೇವೆ ಮಾಡುತ್ತಿರುವರೆಂಬುದು ಮಿ. ಗಾಂಧಿಯವರಿಗೆ ಅನಿಸದೆ ಹೋಗಲಿಕ್ಕಿಲ್ಲ. ಆದರೆ ಈಗಿನ ದಿನಮಾನವೇ ಬಹು ವಿಲಕ್ಷಣವಾಗಿದೆ. ಪರಸ್ಪರರ ಅಂತಿಮ ಉದ್ದೇಶವು ಬಹಳಷ್ಟು ಭಿನ್ನವಾಗಿರದಿದ್ದರೂ ಸಹ ಅದನ್ನು ಕೃತಿಯಲ್ಲಿ ತರಲು ಯೋಜಿಸಿದ ಪ್ರಯತ್ನಗಳೇ ಅದರ ಸಿದ್ಧಿಗೆ ವಿಘ್ನವನ್ನುಂಟು ಮಾಡುತ್ತವೆ. ಹಿಂದುಸ್ಥಾನವು ಸುಖಿಯಾಗಿದ್ದುದನ್ನು ನೋಡಬೇಕೆಂದೇ ನಾನು ಇಚ್ಛಿಸುತ್ತೇನೆ. ಕಾಂಗ್ರೆಸ್ ದಂತಹ ದೊಡ್ಡ ಸಂಸ್ಥೆಯು ಎಲ್ಲಾಯಕರಿಗೆ ರಾಜ್ಯಕಾರಭಾರದಲ್ಲಿ ಅಡ್ಡಗಾಲು ಹೂಡಿಯುಲು ಯತ್ನಿಸುತ್ತಿದೆಯೋ, ಅಲ್ಲಿಯವರೆಗೆ ಅದನ್ನು ಹತ್ತಿಕ್ಕುವ ಪ್ರಯತ್ನವು ದಿನ ನನ್ನಿಂದ ನಡೆಯತಕ್ಕದ್ದೇ. ಇಲ್ಲಿ ನಡೆದ ಅತ್ಯಾಚಾರ ಹಾಗು ದಂಡೆಗಾಲೆಯು ಮಲಬಾರಿನ ಕಾಯಿಗಳಂತಿಗ ಇನ್ನು ಕಾಂಗ್ರೆಸ್‌ದವರು ಲಕ್ಷದಲ್ಲಿ ತಗೆದುಕೊಂಡು ತಮ್ಮ ಪ್ರಸ್ತುತದ ಧೋರಣವನ್ನು ಬದಲಾಯಿಸಬೇಕು. ಲಂಡನದಲ್ಲಿ ಈಗ ನಡೆದ ಪ್ರಯತ್ನವನ್ನು ಸಿದ್ಧಗೊಳಿಸುವದಕ್ಕಾಗಿ ಅಲ್ಲಿಯ ಜನರೊಂದಿಗೆ ಇನ್ನುಳಿದವರೂ ಕೂಡಿಕೊಂಡು ನಡೆದಲ್ಲಿ ನಿಜವಾಗಿಯೂ ಹಿಂದುಸ್ಥಾನದ ಕಲ್ಯಾಣವಾಗುವದು.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಪ್ರೊಪ್ರಾ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ.

ಸ್ಯಾಂಪಲ್ ! ಪುಕ್ಕಟೆ!

ಅತ್ಯುತ್ತಮ ಮಸಿ ಚೀಟಿಗಳು

ನೀಲಿ ಕಪ್ಪು, ಕೆಂಪು, ಜಾಂಬಳೆ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ ೨-೦-೦
೧ ಸಾವಿರ ಚೀಟಿಗಳಿಗೆ, ೩-೮-೦
೫ ಸಾವಿರಕ್ಕೆ, ೧೬-೦-೦ ರೇಲ್ವೆ ಫ್ರೀ
೫ ತೊಲಾ ಪಾಕೀಟಗಳಿಗೆ / ರಬ್ಬರ ಸ್ಟಾಂಪ ಮಸಿ ½ ಔಂಸಿನ / ೧ ಡಜನ ಬಾಟ್ಲಿಗೆ } ೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬುಕ್ಕ ಬಾಯಿಂಡಿಂಗದ

ಹೊಸ ವ್ಯವಸ್ಥೆ

ನಮ್ಮಲ್ಲಿ ಗೋಲ್ಡ ಸಹಿತ ಅತ್ಯುತ್ತಮವಾಗಿ ಬಾಯಿಂಡಿಂಗದ ಕೆಲಸವು ಸೋವೀದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸ ಗಳನ್ನೂ ಕಾಗದಪತ್ರ ಇಡುವ ಮತ್ತು ರೊಕ್ಕ ಹಾಕುವ ಪಾಕೀಟುಗಳನ್ನು ತೊಗಲಿನಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವೆವು. ಪೋರ್ಟಫೋಲಿಯೋ ಮತ್ತು ಫಾಯಿಲದ ರಟ್ಟುಗಳನ್ನು ಮಾರಾಟಕ್ಕೆ ತಯಾರಿಸಿ ಇಟ್ಟಿದ್ದೇವೆ. ವ್ಯಾಪಾರಸ್ಥರಿಗೆ ಕಡಿಮೆ ದರದಿಂದ ಸಪ್ಲಾಯಿ ಮಾಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉಡಪೀಕರ
ಪ್ರೊಪ್ರಾಯಟರ ದಿ ನ್ಯೂ ಬುಕ್ಕ ಬಾಯಿಂಡಿಂಗ ವರ್ಕ್ಸ ಹೊಸಬಾಜಾರ ಹವಾಲದಾರ ಬಿಲ್ಡಿಂಗ
ವಿಜಾಪೂರ.

ಪ್ಲಾಟುಗಳು ಮಾರತಕ್ಕವಿವೆ.

ಟ್ರಾವ್ಹೆಲರ್ಸ ಬಂಗಲೆಯ ಹತ್ತರವಿರುವ ೩೩ನೆಯ ಸರ್ವೆ ನಂಬರದಲ್ಲಿಯ ಕಾವೇರಿಯವರ ಪ್ಲಾಟುಗಳು ಮಾರತಕ್ಕವಿವೆ. ತಗೆದುಕೊಳ್ಳಬೇಕೆನ್ನುವವರು ಸವಕಾಶ ಬಂದು ಭೆಟ್ಟಿಯಾಗಬೇಕು. ಇಲ್ಲವೆ ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬೇಕು.

ಯಲಗುರ್ದರಾವ ಧಾರವಾಡ.
ವಕೀಲರು ಬಾಗಲಕೋಟೆ.

ವಾಚ, ಟಾಯಿಂಪೀಸ

ದುರಸ್ತಿಮಾಡಿಸುವವರಿಗೆ ಸುಸಂಧಿ

ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವೀದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ:- ಆರ್. ಡಿ, ಸಿಂಧೆ
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಬೆಟಗೇರಿ ಬ್ರದರ್ಸ

ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತಿ ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಪ್ರಕಟಣೆ

ಬಾಗಲಕೋಟೆಯ ಶ್ರೀ ಬಸವೇಶ್ವರ ಹಾಯಸ್ಕೂಲ ಪ್ಲೇಗಿನ ಮೂಲಕ ಬಂದು ಇಡಲ್ಪಟ್ಟದ್ದು ಈಗ ಸೋಮವಾರ ತಾ|| ೧೯-೧-೪೧ ನೇ ದಿವಸ ಪುನಃ ಪ್ರಾರಂಭವಾಗುವದು. ೧ ರಿಂದ ೭ನೇ ಇಯತ್ತೆಯ ವರೆಗೆ ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾಕ್ರಮಾಂ ನಡೆಯುವವು ವಿದ್ಯಾರ್ಥಿಗಳು ಸಕಾಲಕ್ಕೆ ಬರಬೇಕು.

ಬಾಗಲಕೋಟೆ ತಾ|| ೧೭-೧-೧೯೪೧

ಎಚ್. ಎಫ್ ಕಟ್ಟೀಮನಿ
ಪ್ರಿನ್ಸಿಪಾಲ.

ಈ ಪತ್ರಿಕೆಯು ವೆಂಕಟೇಶ ಶೇಷಗಿರಿರಾವ ಮಾಚಕನೂರ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥ —मनु.

ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶುಕ್ರವಾರ ಮಿತಿ ಮಾಘ ಶುದ್ಧ ೫ ಶಕೆ ೧೮೫೧ ತಾ॥ ೩೧—೧—೩೦ [ಸಂಚಿಕೆ ೧೬೨

ಪಂಜಾಬದ ಮುಖಂಡರಿಗೆ ಸೆರೆಮನೆ

ಜವಾಹಿರ ದಿನದ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಂಡ ಬಗ್ಗೆ ಲಾಹೋರದಲ್ಲಿ ಸೆರೆಹಿಡಿಯಲ್ಪಟ್ಟ ಕೆಲವು ೧೨ ಜನ ಕಾಂಗ್ರೆಸ್ ಮುಂದಾಳುಗಳ ಖಟ್ಲೆಯ ವಿಚಾರಣೆಯು ಅಡಿಶನಲ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ ಲೂಯಿಸರವರ ಮುಂದೆ ನಡೆದು, ತಾ॥ ೨೦ ನೆಯ ದಿವಸ ಕೆಳಗಿನಂತೆ ತೀರ್ಪು ಹೇಳಲ್ಪಟ್ಟಿತು.

೧ ಲಾಲಾ ದುನೀಚಂದ, ೨ ಕೆ. ಸಂತಾನಮ್, ೩ ಪುರುಷೋತ್ತಮಲಾಲ ಸೊಂಧಿ. ೪ ಅಮೀರ ಪಹಲವಾನ್. ೫ ಬಶೀರಮಹಮೂದ ೬ ಮಹಾವೀರಸಿಂಗ. ೭ ಪ್ರಕಾಶಚಂದ ಪ್ರತ್ಯೇಕವಾಗಿ ೨॥ ತಿಂಗಳ ಶಿಕ್ಷೆ. ೮ ಗಯಾನಚಂದ ಮೆಹತಾ ೯ ಆನಂದ ಕಿಶೋರ ೧೦ ಪಿಂಡೀದಾಸ ೧೧ ಶಾಹಚಂದದಾಸ ಪ್ರತ್ಯೇಕವಾಗಿ ೩॥ ತಿಂಗಳ ಶಿಕ್ಷೆ. ೧೨ ಪ್ರಕಾಶದೇವ. ೬ ತಿಂಗಳ ಶಿಕ್ಷೆ. ಸರ್ವರಿಗೂ ಪ್ರತ್ಯೇಕವಾಗಿ ೨೫ ರೂ. ದಂಡವಾಗಿದ್ದು, ದಂಡ ಕೊಡದಿದ್ದಲ್ಲಿ ಮತ್ತೆ ೨ ವಾರಗಳ ಶಿಕ್ಷೆಯಾಗಿದೆ.

ಮಹಾತ್ಮರು ಯರವಡೆಯಲ್ಲಿಯೇ ಇರುವರು.

"ಮಹಾತ್ಮಾ ಗಾಂಧಿಯವರು ನಾಸಿಕ ಜೇಲಿಗೆ ಒಯ್ಯಲ್ಪಟ್ಟಿರುವರೆಂಬುದಾಗಿ ಪ್ರಸಿದ್ಧವಾದ ವಾರ್ತೆಯು [illegible]ವಲ್ಲ. ಅವರು ಯರವಡಾ ಜೇಲಿನಲ್ಲಿ ಇರತಕ್ಕದ್ದು, ಅವರ ಪ್ರಕೃತಿಯು ನೆಟ್ಟಗಿರುವದು. ನಾಸಿಕ ಮತ್ತು ಯರವಡ ಹವೆಯು ಒಂದೇ ಇರುವದರಿಂದ ನಾಸಿಕಕ್ಕೆ ಒಯ್ಯುವ ಅಗತ್ಯವೇ ಬೀಳುವದಿಲ್ಲ. ಎಂಬುದಾಗಿ ಸರಕಾರಿ ವರ್ತಮಾನದಿಂದ ತಿಳಿದು ಬರುತ್ತದೆ.

ಲಾರ್ಡ ಸ್ಯಾಂಕಿಯವರು ಹಿಂದುಸ್ಥಾನಕ್ಕೆ ಬರುವರಂತೆ!

ಬಂಡೀ ಗಾಲಿಯ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟ ಸಂಯುಕ್ತ ರಾಜ್ಯಘಟನೆಯ ಸಂಬಂಧವಾಗಿ ಮುಂದಿನ ಕೆಲಸ ಸಾಗಿಸಲು, ಮಂತ್ರಿ ಮಂಡಳದವರು ಲಾರ್ಡ ಸ್ಯಾಂಕಿಯವರನ್ನು ಹಿಂದುಸ್ಥಾನಕ್ಕೆ ಕಳಿಸುವ ವಿಚಾರದಲ್ಲಿ ದ್ದಾರಾಗಿ ತಿಳಿದು ಬರುತ್ತದೆ.

ಮುಂಬಯಿಯಲ್ಲಿ ಖಡ್ಗಧಾರಿಗಳ ಮೆರವಣಿಗೆ.

ಶಾರದಾ ಕಾಯದೆಯ ನಿಷೇಧಾರ್ಥವಾಗಿ ತಾ॥ ೧೮ ನೆಯ ದಿವಸ ಮುಂಬಯಿಯಲ್ಲಿ ಮುಸಲ್ಮಾನರದೊಂದು ಪ್ರಚಂಡ ಮೆರವಣಿಗೆಯಲ್ಲಿ ಸೇರಿದ ಜನರು "ಇಸ್ಲಾಮು ಝಿಂದಾಬಾದ" "ಶಾರದಾ ಕಾನೂನ ಬರಬಾದ" ಎಂದು ಜಯಜಯಕಾರ ಮಾಡುತ್ತಿದ್ದರು. ಮೆರವಣಿಗೆಯಲ್ಲಿ ಇಬ್ಬರು ಟೋಳಿಗಳ ಬಿಚ್ಚುಗತ್ತಿ ಹಿಡಿದುಕೊಂಡು ಮುಂದೆ ಸಾಗಿದ್ದರು. ಮೆರವಣಿಗೆಯು ಸಭಾಸ್ಥಾನಕ್ಕೆ ಹೋದ ಕೂಡಲೆ ಅಲ್ಲಿ ಸಾರ್ವಜನಿಕ ಸಭೆ ನೆರೆಯಿತು. ಶಾರದಾ ಕಾಯದೆಯನ್ನು ರದ್ದುಪಡಿಸದಿದ್ದರೆ ಮುಸಲ್ಮಾನರು ಅನತ್ಯಾಚಾರಿಗಳಾಗಿರುವದು ಶಕ್ಯವಿಲ್ಲವಾಗಿ ಮುಖಂಡರು ಘೋಷಣೆ ಮಾಡಿದರು.

ನಿಪ್ಪಾಣಿಯಲ್ಲಿ ಲಾಠೀ ರಾಜ್ಯ.

ತಾ॥ ೧೩ ನೆಯ ದಿವಸ ನಿಪ್ಪಾಣಿಯಲ್ಲಿ ಶ್ರೀ ಧನಶೆಟ್ಟಿ ಮೊದಲಾದವರಿಗೆ ಸಹಾನುಭೂತಿ ತೋರಿಸುವದಕ್ಕಾಗಿ ಪ್ರಚಂಡವಾದ ಪ್ರಭಾತಫೇರಿ ಹೊರಟಿತ್ತು. ಅದು ಪಟ್ಟಣದಲ್ಲಿ ಹಾಯ್ದು ಮೋಟಾರ ಸ್ಟ್ಯಾಂಡಿಗೆ ತಲುಪಿದ ಕೂಡಲೆ ಪೋಲೀಸ ಸುಪರಿಂಟೆಂಡೆಂಟರು ಹಾಗು ಕೆಲವು ಜನ ಲಾಠಿ ಪೋಲೀಸರು ಅಲ್ಲಿ ಅದಕ್ಕೆ ಅಡ್ಡಿ ಮಾಡಿ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ೧೪೪ನೆಯ ಕಲಮಿನ ಪ್ರಕಾರ ಹೊರಡಿಸಿದ ಆಜ್ಞೆಯನ್ನು ಅವರಿಗೆ ತೋರಿಸಿದರು. ಅಧಿಕಾರಿಗಳ ಅಪ್ಪಣೆಯ ಮೇರೆಗೆ ಪ್ರಭಾತಫೇರಿಯು ಮುಂದಕ್ಕೆ ಸಾಗಿತು. ತಾ॥ ೧೫ ಕ್ಕೂ ಪ್ರಭಾತಫೇರಿಯು ಹೊರಟಿತು, ಪೋಲೀಸರು ಅಡ್ಡಿ ಮಾಡಿದರು. ರಾಷ್ಟ್ರಧ್ವಜ ಕಸಿದುಕೊಳ್ಳಲು ಯತ್ನಿಸಿದರು, ಸಾಧ್ಯವಾಗಲಿಲ್ಲ. [illegible] ಲಾಠಿಗಳಿಂದ ಹೊಡೆದರು. ೫ [illegible] ಗಳಾಗಿವೆ.

ಸುಭಾಶ ಬೋಸರು ಪೊಲೀಸ ಸಾಹೇಬರಿಗೆ ಎದುರುತ್ತರ ಕೊಟ್ಟರು.

ಕಲಕತ್ತೆಯ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಸುಭಾಷಚಂದ್ರ ಬೋಸರವರು ಮಾಲಡಾಕ್ಕೆ ಹೋಗುತ್ತಿರುವಾಗ ಅಮನುರಾ ಎಂಬ ಸ್ಟೇಶನ್ನಲ್ಲಿ ಮಾಲಡಾದ ಪೋಲೀಸ ಸುಪರಿಂಟೆಂಡೆಂಟರು ಅವರಿಗೆ ಭೆಟ್ಟಿಯಾಗಿ "ಬೋಸರೆಂದರೆ ನೀವೇ ಏನು?" ಎಂದು ಅವರಿಗೆ ಕೇಳಿದರು. ಶ್ರೀ ಬೋಸರು "ಹೌದು." ಎಂದು ಉತ್ತರ ಕೊಟ್ಟರು. ಬಳಿಕ ಪೋಲೀಸ ಸಾಹೇಬರು, ಮಾಲಡಾ ಜಿಲ್ಲೆಯಲ್ಲಿ ಕಾಲಿಡಕೂಡದೆಂಬುದಾಗಿ ಅವರ ಮೇಲೆ ಹೊರಡಿಸಲ್ಪಟ್ಟ ೧೪೪ ನೆಯ ಕಲಮಿನ ನೋಟೀಸನ್ನು ಅವರ ಕೈಯಲ್ಲಿ ಕೊಟ್ಟರು. ಶ್ರೀ ಬೋಸರು ಅದನ್ನು ಓದಿಕೊಂಡರು.

ಶ್ರೀ ಬೋಸರು ನೋಟೀಸನ್ನು ಓದಿ ಮುಗಿಸುವದರೊಳಗೇ ತಡ, ಪೋಲೀಸ ಸಾಹೇಬರು "ಅಪ್ಪಣೆಯಂತೆ ನಡೆದುಕೊಳ್ಳುವಿರಾ" ಎಂಬುದಾಗಿ ಅವರಿಗೆ ಕೇಳಿದರು.

"ಈ ಜಿಲ್ಲೆಯನ್ನು ಬಿಟ್ಟು ಹೊರಟು ಹೋಗಲು ಹೇಳುವಿರಿ. ನನ್ನನ್ನು ಕರೆದುಕೊಂಡು ಹೋಗಲು ಸ್ಪೆಶಲ್ ಟ್ರೇನ ತಂದಿರುವಿರಾ ಹೇಗೆ? ಎಂಬುದಾಗಿ ಶ್ರೀ ಬೋಸರು ಮುಗುಳ್ನಗೆಯಿಂದ ಉತ್ತರ ಕೊಟ್ಟರು.

ಪೋ. ಸಾ.— ಇನ್ನು ಮೇಲೆ ಬರುವ ಗಾಡಿಯಿಂದ ಕರೆದುಕೊಂಡು ಹೋಗುವೆವು. ಅಪ್ಪಣೆಯಂತೆ ವರ್ತಿಸುವಿರಾ ಹೇಗೆ ಹೇಳಿರಿ,

ಬೋ:— ನಾನು ಮಾಲಡಾ ಜಿಲ್ಲೆಯಲ್ಲಿ ಕಾಲಿಟ್ಟರೆ ಸಾರ್ವಜನಿಕ ಶಾಂತತಾಭಂಗವಾಗುವದಾಗಿ ಅಪ್ಪಣೆಯಲ್ಲಿ ಬರೆದಿದೆ. ನಾನು ಕಳ್ಳ ಇಲ್ಲವೆ ದರೋಡೆಗಾರನಿದ್ದೇನೆಂದು ತಿಳಿದಿರುವಿರೋ ಹೇಗೆ?

ಪೋ. ಸಾ:— ಅಪ್ಪಣೆಯಂತೆ ವರ್ತಿಸಿ ಜಿಲ್ಲೆಯನ್ನು ಬಿಟ್ಟು ಹೊರಟು ಹೋಗಿರಿ. ಇಲ್ಲವೆ ಅದರ ವಿರುದ್ಧ ವರ್ತಿಸಿ ಸೆರೆಯಾಳಾಗಿರಿ.

ಬೋ:— ನನಗೆ ಸೆರೆಯದೇ ನೆಟ್ಟಗೆ ಕಾಣುತ್ತದೆ ಯಾಕಂದರೆ ಪ್ರತಿಯೊಬ್ಬ ಭಾರತೀಯನೂ ಈಗ ಒಂದಿಲ್ಲೊಂದು ರೀತಿಯಿಂದ ಸೆರೆಯಲ್ಲಿಯೇ ಇರುತ್ತಾನೆ.

ಪೋಲೀಸ ಸಾಹೇಬರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಲ್ಲಿಗೆ ಹೋಗಿ ವಿಚಾರಿಸಿಕೊಂಡು ಬಂದು "ಅಪ್ಪಣೆಯಂತೆ ನಡೆದುಕೊಳ್ಳುವಿರಾ" ಎಂದು ಬೋಸರಿಗೆ ಪ್ರಶ್ನೆ ಮಾಡಿದರು. ಬೋಸರು "ನಡೆದುಕೊಳ್ಳುವದಿಲ್ಲ"ವೆಂದು ಉತ್ತರ ಕೊಟ್ಟರು.

ಗಾಡಿಯು ಇಷ್ಟರಲ್ಲಿಯೇ ಸ್ಟೇಶನ್ ಬಿಟ್ಟಿತು. ಸಾಹೇಬರು ಗಾರ್ಡನಿಗೆ ಸಂಜ್ಞೆ ಮಾಡಿ ಗಾಡಿಯನ್ನು ನಿಲ್ಲಿಸಿದರು. ಮತ್ತು "ಸುಭಾಷ್ ಬೋಸ, ನಿಮ್ಮನ್ನು ಕೈದು ಮಾಡುವ ವಾರಂಟ ಒಂದಿದೆಯೆಂದು ಅವರಿಗೆ ಹೇಳಿದರು.

ಬೋಸರು:— ಸಭ್ಯ ಗೃಹಸ್ಥರನ್ನು ಹೇಗೆ ಕರೆಯಬೇಕೆಂಬುದು ನಿಮಗೆ ಗೊತ್ತಿಲ್ಲವೋ?

ಪೋ. ಸಾ:— ಈಗ ಏನಾಯಿತು?

ಬೋ:— "ಮಿ. ಬೋಸ" ಎಂದು ಕರೆಯಬಾರದೇಕೆ?

ಪೋ. ಸಾ:— ನೀವು ಯುರೋಪಿಯನ್ನರಾಗಿದ್ದರೆ ಹಾಗೆ ಕರೆಯುತ್ತಿದ್ದೆ.

ಬೋಸ:— ನಾನು ಹಿಂದೂ ಇದ್ದೇನೆ. "ಸುಭಾಷ ಬಾಬೂ" ಎಂದು ಕರೆಯಬೇಕಾಗಿತ್ತು.

ಬಳಿಕ ಪೋಲೀಸ ಸಾಹೇಬರು ಅವರನ್ನು ವೆಟಿಂಗ ರೂಮಕ್ಕೆ ಕರೆದುಕೊಂಡು ಹೋಗಿ, ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ೧೮೮ ನೆಯ ಕಲಮಿನನ್ವಯ ಅವರ ಮೇಲೆ ಅಪರಾಧ ಹೊರಿಸಿ, ಅವರಿಗೆ ೭ ದಿನಗಳ ಸಾದಾ ಶಿಕ್ಷೆ ವಿಧಿಸಿದ್ದಾರೆ. ಶ್ರೀ ಬೋಸರು ವಿಚಾರಣೆಯಲ್ಲಿ ಯಾವ ತರದಿಂದಲೂ ಭಾಗ ತೆಗೆದುಕೊಳ್ಳಲಿಲ್ಲ.

ಯಲ್ಲಾಪುರದಲ್ಲಿ
೪ ಜನರಿಗೆ ಶಿಕ್ಷೆ.

ಸಿಂದಿಗಿಡಗಳನ್ನು ಕಡಿದ ಆರೋಪದ ಬಗ್ಗೆ ಯಲ್ಲಾಪುರದ ಮಾಮಲೇದಾರರು ಶ್ರೀ ವಿಶ್ವೇಶ್ವರ ಗಣಪ ಜೆಕ್ಕಿಪಾಲ, ಸದಾಶಿವ ಸುಬ್ಬಾಭಟ್ಟ ಒಸಗೋಡ, ಸಾತೆಗೋಕ್ರಿಸ್ತ ದೇಸಾಯಿ ಮೊದಲಾದ ೪ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಶಿಕ್ಷೆ ಹಾಗು ೫೦ ರೂ. ದಂಡ, ಹೀಗೆ ಶಿಕ್ಷೆ ವಿಧಿಸಿದ್ದಾರೆ. ದಂಡ ಕೊಡದಿದ್ದಲ್ಲಿ ಮತ್ತೆ ೧॥ ತಿಂಗಳ ಶಿಕ್ಷೆ ಅನುಭವಿಸಬೇಕೆಂದು ಹೇಳಿದ್ದಾರೆ.

ಹಿಂಡಲಗಿ ಜೇಲಿನಲ್ಲಿ
ಅಸ್ವಸ್ಥತೆ.

.... ಕಾಯದೆಭಂಗಕ್ಕಾಗಿ ಶಿಕ್ಷೆಗೆ ಗುರಿಯಾಗಿ ಹಿಂಡಲಗಿ ಜೇಲಿನಲ್ಲಿ ಈಗ ತನ್ನ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಕುಮಟೆಯ ಶ್ರೀ ಶ್ರೀನಿವಾಸ ನಾರಾಯಣ ಶಾನಭಾಗರವರಿಗೆ ಅಧಿಕಾರಿಗಳು ದೇವರ ಪೂಜೆ ನೈವೇದ್ಯ ಅನುಷ್ಠಾನಕ್ಕೆ ಅವಕಾಶ ಕೊಡದ್ದರಿಂದ, ಅವರ ಉಪವಾಸ ಮಾಡಲಾರಂಭಿಸಿದ್ದಾರೆಂದು ತಿಳಿದು ಬರುತ್ತದೆ.

ಯೂನಿಯನ್ ಜ್ಯಾಕ್
ಕಳವು ಮಾಡಿದರು.

ಬೆಳಗಾವಿಯ ಹತ್ತಿರವಿರುವ ಅನಗೋಳದಲ್ಲಿ ಜಮಖಂಡಿ ಸಂಸ್ಥಾನಿಕರ ಬಂಗಲೆಯುಂಟು. ಅಲ್ಲಿ ಕೊಲ್ಹಾಪುರದ ಪೊಲಿಟಿಕಲ್ ಏಜಂಟ ಸಾಹೇಬರು ವಾಸಮಾಡುತ್ತಾರೆ. ಸಾಹೇಬರು ಒಂದು ದಿವಸ ಅದರ ಮೇಲೆ ರಾಷ್ಟ್ರಧ್ವಜ ನಿಲ್ಲಿಸಿದರು. ಆ ಧ್ವಜವನ್ನು ಯಾರೋ ಕಳವು ಮಾಡಿಕೊಂಡು ಹೋಗಿರುವರು.

ಬೆಳಗಾವಿಯಲ್ಲಿ
೧೨ ಜನರನ್ನು ಹಿಡಿದರು

[illegible] ಗೊಳಿಸಿ ತಾ॥ ೨೧ ಕ್ಕೆ ೧೦ ದಿನಗಳಾದವು. ಈ ನಿಮಿತ್ತವಾಗಿ ಬೆಳಗಾವಿಯ ಕಾಂಗ್ರೆಸ್ ಅಧಿಕಾರಿಗಳು ಅಂದು ನಾಗರಿಕರ ಮೆರವಣಿಗೆ ಹಾಗು ಸಭೆಗಳನ್ನು ಏರ್ಪಡಿಸಿದ್ದರು. ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟ ಮಿ. ಇನಾಮದಾರರು ೧೪೪ ನೆಯ ಕಲಮಿನ ಪ್ರಕಾರ ನೋಟೀಸು ಹೊರಡಿಸಿ, ಎರಡು ತಿಂಗಳವರೆಗೆ ಬೆಳಗಾವಿ ಶಹರ, ಕ್ಯಾಂಟೋನ್ಮೆಂಟ ಹಾಗು ಶಹಾಪುರ ಈ ಭಾಗಗಳಲ್ಲಿ ಯಾವುದೇ ಮೆರವಣಿಗೆ ಹಾಗು ಸಭೆಗಳನ್ನು ಜರುಗಿಸಕೂಡದಾಗಿ ತಾ॥ ೨೧ ನೆಯ ದಿವಸ ಸಾರ್ವಜನಿಕರಿಗೆ ಅಪ್ಪಣೆ ವಿಧಿಸಿದರು. ೧೨ ಜನರು ಮೆರವಣಿಗೆಯಿಂದ ಸಾಗಿ ಹೋಗಿ ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಮುರಿದರು. ಪೋಲೀಸರು ಅವರನ್ನು ಬಂಧಿಸಿದರು. ಬಳಿಕ ಸಾವಿರಾರು ಜನರು ಕಪಿಲೇಶ್ವರ ಕೆರೆಗೆ ಹೋಗಿ ಅಲ್ಲಿ ಸಭೆ ಜರುಗಿಸಿದರು. ಪೋಲೀಸರು ಅವರಿಗೆ ಯಾವ ತರದಿಂದಲೂ ಅಡ್ಡಿ ಮಾಡಲಿಲ್ಲ.

ಮಹಾತ್ಮರು ತುಂಬಾ ಜಯಶಾಲಿಗಳಾಗಿರುವರು

ಲಾರ್ಡ ಆಯರ್ವಿನರು ಅಸೆಂಬ್ಲಿಯ ಸಭಾಸದರನ್ನುದ್ದೇಶಿಸಿ ಮಾಡಿದ ಭಾಷಣದ ಸಂಬಂಧವಾಗಿ ಲಂಡನದ "ಮಾಂಚೆಸ್ಟರ ಗಾರ್ಡಿಯನ್ಸ್" ಪತ್ರಿಕೆಯು ಒಂದು ಅಗ್ರಲೇಖನನ್ನು ಬರೆದು, ಕೆಳಗಿನಂತೆ ಮಹಾತ್ಮಾ ಗಾಂಧಿಯವರ ಗುಣಾನುವಾದ ಮಾಡಿದೆ.

"ಕೊನೆಗೆ ಜಯವು ದೊರೆಯಿತೆಯೆಂಬುದು ದೇಶಭಕ್ತರಿಗೆ ಒಮ್ಮೊಮ್ಮೆ ತಿಳಿದು ಬರುವದಿಲ್ಲ ತಮ್ಮ ಕಷ್ಟಗಳು ಪರಿಹಾರವಾಗಿದ್ದರೂ ಅವರು ತಮ್ಮ ಚಳವಳಿಯನ್ನು ಹಾಗೆಯೇ ಸಾಗಿಸುವದುಂಟು ಹೀಗೆ ಮಾಡಿ ಅವರು ತಾವು ಸಂಪಾದಿಸಿದ್ದನ್ನು ಕಳೆದುಕೊಳ್ಳುವರು. ಲಾರ್ಡ ರೀಡಿಂಗ ಹಾಗು ಸರ್ ... ಇವರಿಬ್ಬರೂ ಈ ಒಂದೇ ವಿಚಾರದವರಾಗಿದ್ದರೆಂದು, ವಿರೋಧಿಸುವ ಕಾಲವು ಕಳೆದ ಹೋಗಿದೆ. ಒಂದುಗಾಲದ ಪರಿಷತ್ತಿನಲ್ಲಿ ಸ್ವರಾಜ್ಯದ ತತ್ವಗಳ ಕಡೆಗೆ ತಮ್ಮ ಲಕ್ಷ್ಯ ಹೊರಳಿಸಿ ಅವು ಬೆಳಕಿಗೆ ಬರುವಂತೆ ಮಹಾತ್ಮಾಗಾಂಧಿಯವರು ಇನ್ನು ಪ್ರಯತ್ನಿಸಬೇಕು. ಸ್ವದೇಶ ಪ್ರೀತಿಯನ್ನು ನಿಜವಾದ ರಾಷ್ಟ್ರಹಿತೈಕ ಬುದ್ಧಿಯನ್ನೂ ವ್ಯಕ್ತಪಡಿಸಬೇಕು. ಅಹಿಂಸಾಮಯ ... ಚಳವಳಿಯಲ್ಲಿ ಮಹಾತ್ಮರು ತುಂಬಾ ಜಯಶಾಲಿಗಳಾಗಿದ್ದಾರೆ ಅವರು ಇನ್ನು ಸಹಕಾರಿತೆಯ ಕಡೆಗೆ ತಮ್ಮ ಲಕ್ಷ್ಯ ಹೊರಳಿಸಬೇಕು.

ಪಂಡಿತ ಮಾಲವೀಯರ ಪ್ರಕೃತಿ

ಜೇಲಿನಿಂದ ಬಿಟ್ಟು ಬಂದಾಗಿನಿಂದ ಪಂಡಿತ ಮದನಮೋಹನ ಮಾಲವೀಯರವರ ಪ್ರಕೃತಿಯು ಸುಧಾರಿಸ ಹತ್ತಿದೆ ಇನ್ನು ಒಂದು ತಿಂಗಳ ವರೆಗೆ ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕಾಗಿ ಡಾಕ್ಟರರು ಅವರಿಗೆ ಹೇಳಿದ್ದಾರೆ

೭ ಜನ ಕೈದಿಗಳು ಓಡಿ ಹೋದರು

ಅಹಮ್ಮದಾಬಾದ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ, ೭ ಜನ ಸಾಮಾನ್ಯ ಕೈದಿಗಳನ್ನು ವಾರ್ಡರರು ಬೇರೊಂದು ಅಪರಾಧದ ವಿಚಾರಣೆಗಾಗಿ ವಸಾಹ ಜೇಲಿಗೆ ಒಯ್ಯುತ್ತಿರುವಾಗ ಅವರು ವಾರ್ಡರರ ಮೇಲೆ ಹಲ್ಲೆ ಮಾಡಿ, ಅವರ ಬಂದೂಕಗಳನ್ನು ಕಸಿದುಕೊಂಡು ಓಡಿಹೋದರು ಈ ಸುದ್ದಿಯು ಜೇಲರರಿಗೆ ತಿಳಿದು ಬಂದಿತು ಕೂಡಲೆ ಅವರು ತಮ್ಮ ಕೈಕೆಳಗಿನ ಅಧಿಕಾರಿಗಳೊಂದಿಗೆ ಹೋಗಿ ಸತತವಾಗಿ ಶೋಧ ಮಾಡಿ, ಅವರನ್ನು ಪುನಃ ಸೆರೆಹಿಡಿದರು.

ಜೇಲಿನಲ್ಲಿ ೨೮ ದಿನಗಳ ಉಪವಾಸ

ಸಿಯೋನಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಮಧ್ಯಪ್ರಾಂತದ ಕಾಂಗ್ರೆಸ್ ಮುಂದಾಳುಗಳಾದ ಶ್ರೀ ಪೂನಮಚಂದ ರಂಕಾರವರು, ಜೇಲಿನಲ್ಲಿ ಕೊಡಲ್ಪಡುವ ಕಟ್ಟು ಆಹಾರದ ನಿಷೇಧಾರ್ಥವಾಗಿ ಕಳೆದ ೨೮ ದಿನಗಳಿಂದ ಅನ್ನತ್ಯಾಗ ಕೈಕೊಂಡಿದ್ದು, ಅವರ ಸ್ಥಿತಿಯು ಬಹಳೇ ಚಿಂತಾಜನಕವಾಗಿದೆ

ಶಿರಾಸಸಾಹೇಬರಿಗೆ ಕಟ್ಟಕಡೆಗೆ ಬುದ್ಧಿ ಬಂತು

ಗುಜರಾಥ ಕಾಲೇಜಿನ ವಿದ್ಯಾರ್ಥಿಗಳು ತಾ| ೧೩ ನೆಯ ದಿವಸ ಆದ ಸೊಲ್ಲಾಪುರ ದಿನದ ದಿವಸ ಕಾಲೇಜಕ್ಕೆ ಹೋಗಲಿಲ್ಲ. ಅಂದು ಕಾಲೇಜ ಶಾಲೆ ಸುರಿಯಿತು ಪ್ರಿನ್ಸಿಪಾಲರಾದ ಶಿರಾಸಸಾಹೇಬರು ಸಿಟ್ಟಿಗೆದ್ದು ತಾ| ೧೫ ನೆಯ ದಿವಸ ಒಂದು ನೋಟೀಸು ಹೊರಡಿಸಿದರು ಕಾಲೇಜಕ್ಕೆ ಬಾರದ ವಿದ್ಯಾರ್ಥಿಗಳ ಜವಾಬು ಕೊಡಲು ಕೇಳಿಕೊಂಡರು. ಒಂದೆರಡು ದಿನಗಳು ಕಳೆದವು ಯಾರೂ ಜವಾಬು ಕೊಡಲಿಲ್ಲ ಸಾಹೇಬರ ಪೇಚಿನಲ್ಲಿ ಬಿದ್ದರು. ವಿದ್ಯಾರ್ಥಿಗಳನ್ನು ಹೊರಗೆ ಹಾಕಿದರೆ ಅವರು ಹಿಂದಿನಂತೆ ಚಳ್ಳೆಹಣ್ಣು ತಿನಿಸದೆ ಬಿಡುವದಿಲ್ಲವೆಂಬುದನ್ನು ನೆನಪಿಗೆ ತಂದುಕೊಂಡರು. ವಿದ್ಯಾರ್ಥಿಗಳ ಸೊಲ್ಲಾಪುರದ ವೀರರಿಗೆ ಸಹಾನುಭೂತಿ ತೋರಿಸುವದಕ್ಕಾಗಿ ಕಾಲೇಜಕ್ಕೆ ಬರದೆ ಹೋದರೇ ಹೊರತು, ಶಿಸ್ತು ಮುರಿಯುವದಕ್ಕಾಗಿಯಲ್ಲ ಎಂದು ತಿಳಿಸಿದ. ನೋಟೀಸನ್ನು ಬೇಗ ತೆಗೆದುಕೊಂಡರು. ಅಂತೂ ಸಾಹೇಬರಿಗೆ ಬುದ್ಧಿ ಬಂತು.

ದಾಧೂಭಾಯಿ ದೇಸಾಯಿಯವರಿಗೆ ಬಿಡುಗಡೆಯಾಯಿತು

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಶಿಕ್ಷೆಗೆ ಗುರಿಯಾದ ಕೈರಾ ಜಿಲ್ಲೆಯ ಸರ್ವಾಧಿಕಾರಿ ಶ್ರೀ ದಾಧೂಭಾಯಿ ದೇಸಾಯಿ ಹಾಗು ಅಹಮದಾಬಾದದ ಶ್ರೀ ಮೊರಾರಜಿ ದೇಸಾಯಿಯವರ ಖಟ್ಲೆಯ ಕಾಗದಪತ್ರಗಳನ್ನು ಮುಂಬಯಿ ಹಾಯಕೋರ್ಟಿನವರು ಪುನರ್ವಿಚಾರಣೆ ಮಾಡಿ ಅವರು ನಿರ್ದೋಷಿಗಳೆಂದ್ದಾರಾಗಿ ನಿರ್ಣಯಿಸಿದರು

ಕಾರವಾರ ಜಿಲ್ಲೆಯಲ್ಲಿ ಪೋಲೀಸರ ಪುಂಡಾಟಿಕೆ

ಮೊಣಕಿಗ ಶ್ರೀ ಸುಬ್ರಾಯ ಗೋಳಿಯವರು ಒಂದು ದಿವಸ ರಾತ್ರಿ ಚಕ್ಕಡಿಯಲ್ಲಿ ಕುಳಿತುಕೊಂಡು ತಮ್ಮ ಊರಿಗೆ ಶಿರಸಿಗೆ ಹೊರಟಿದ್ದರು. ಶಿರಸಿಯಿಂದ ಇಪ್ಪತ್ತುನಾಲ್ಕು ಮೈಲು ದೂರ ಇರುವಾಗ ಗಾಡಿಯವನು ಹಿಂದಿನ ಗಾಡಿ ಬರಲೆಂದು ಗಾಡಿಯನ್ನು ನಿಲ್ಲಿಸಿ ಅರೆಯೊಂದು ನಿಂತುಕೊಂಡನು. ಸದ್ಯಕ್ಕೆ ಸಮಯಕ್ಕೆ ಫೌಜದಾರರು ಕೆಲವು ಪೋಲೀಸರೊಂದಿಗೆ ಮೋಟಾರಿನಿಂದ ಅಲ್ಲಿಗೆ ಬಂದರು. ಪೋಲೀಸರು "ಗಾಡಿ ಎತ್ತುಗಳನ್ನು ಮಾರ್ಗದಲ್ಲಿ ತರುಬಿದ್ದೀರಾ" ಎಂದು ಸದ್ಯರೆ ಗಾಡಿಯವನಿಗೆ ಬೆತ್ತದಿಂದ ಹೊಡೆದರು. ಗಾಡಿಯೊಳಗೆ ಮಲಗಿದ್ದ ಶ್ರೀ ಗೋಳಿಯವರು ಎದ್ದು ಹೊರಗೆ ಬಂದು ಶ್ರೀ ಗೋಳಿಯವರು ಗಾಡಿಯವನಿಗೆ ಏಕೆ ಹೊಡೆಯುತ್ತೀರಿ ಎಂದು ಕೇಳಿದರು "ಈ ಗಾಡಿಯಿಂದ ಇಳಿಯದಿದ್ದರೆ ಪೆಟ್ಟಿನಿಂದ ಹೊಡೆಯುತ್ತೇನೆಂದು ಪೋಲೀಸನು ಗದರಿಸಿದನು. ಗೋಳಿಯವರು ಕೆಳಗಿಳಿದರು. ಒಬ್ಬನು ದೊಣ್ಣೆಯಿಂದ ಹೊಡೆದನು. ಇನ್ನೊಬ್ಬನ ಬಂದೂಕಿನ ಮೊನೆಯಿಂದ ತಿವಿದನು. ಮತ್ತೊಬ್ಬನು ಗುದ್ದಿದನು. ಗೋಳಿಯವರು ಫೌಜದಾರರಿಗೆ ದೂರಿಕೊಂಡರು. ಅವರು ಅತ್ತ ಲಕ್ಷ್ಯಕೊಡಲಿಲ್ಲ. ಅಷ್ಟರಲ್ಲಿ ಹಿಂದಿನ ಗಾಡಿಯವನು ಅಲ್ಲಿಗೆ ಬಂದು ಪೆಟ್ಟು ತಿಂದ ಗೋಳಿಯವರ ಅವಸ್ಥೆಯನ್ನು ನೋಡಿ, ಅವರನ್ನು ಬಿಡಿಸ ಹೋದರು. ಪೋಲೀಸರು ಅವನ ಮೇಲೆ ಕೂಡ ಬಡಿದು ಗುರಿ ಹಿಡಿದರು. ಅವನು ಅಂಜಿ ಓಡಿ ಹೋದನು. ಗೋಳಿಯವರು ಎಚ್ಚರದಪ್ಪಿ ಬಿದ್ದರು. ಫೌಜದಾರರೂ ಪೋಲೀಸರು ಮುಂದೆ ಸಾಗಿದರು. ಆ ವೇಳೆ ಗಾಡಿಯವನು ಬಂದು ಗೋಳಿಯವರಿಗೆ ಉಪಚಾರ ಮಾಡಿ, ಅವರನ್ನು ಶಿರಸಿಗೆ ಕರೆದುಕೊಂಡು ಹೋದನು.

ಖಡ್ಗಬಹದ್ದೂರಸಿಂಗರಿಗೆ

೬॥ ತಿಂಗಳ ಕಠಿಣ ಶಿಕ್ಷೆ

ದಿಲ್ಲಿಯ ಕಾಂಗ್ರೆಸ್ ಕಾರ್ಯಕರ್ತರಾದ ಖಡ್ಗಬಹದ್ದೂರ ಸಿಂಗರಿಗೆ ಕಾಯದೆಭಂಗದ ಬಗ್ಗೆ ೫ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೩೫೦ ರು. ದಂಡ ಇಲ್ಲವೆ ೧॥ ತಿಂಗಳ ಸೆರೆಮನೆ ಹೀಗೆ ಶಿಕ್ಷೆಯಾಗಿದೆ. ಧರಸಾನಾ ದಾಳಿಯಲ್ಲಿ ಇವರಿಗೆ ಈಗಾಗಲೆ ಶಿಕ್ಷೆಯಾಗಿತ್ತು.

ಸತ್ಯಾಗ್ರಹಿಯು ಜೇಲಿನಲ್ಲಿಯೇ ಸತ್ತನು.

ಲಾಹೋರ ಬೋರಸ್ಟಲ ಜೇಲಿನಲ್ಲಿ ತನ್ನ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಕರ್ತಾರಸಿಂಗ ಎಂಬ ಹೆಸರಿನ ಓರ್ವ ರಾಜಕೀಯ ಕೈದಿ ತಾ|| ೧೩ನೇಯ ದಿವಸ ಜೇಲ ದವಾಖಾನೆಯಲ್ಲಿ ಮರಣಹೊಂದಿದನೆಂದು ತಿಳಿಯುತ್ತದೆ.

ಹುಬ್ಬಳ್ಳಿಯಲ್ಲಿ ಸರ್ವಾಧಿಕಾರಿಗೆ ಶಿಕ್ಷೆ

ಧಾರವಾಡ ಜಿಲ್ಲೆ ಹಾಗು ಹುಬ್ಬಳ್ಳಿ ತಾಲೂಕದ ೫ನೆಯ ಸರ್ವಾಧಿಕಾರಿಗಳಾದ ಶ್ರೀ ರಾಮಚಂದ್ರರಾವ ಪಾಷಣ್ಣನವರಿಗೂ ಹಾಗು ವರ್ಕಿಂಗ ಕಮಿಟಿಯ ಒತ್ತಿದ ನಿರ್ಣಯವನ್ನು ಓದಿದ ಬಗ್ಗೆ ಶ್ರೀ ಮಿಂಚಕರ ಎಂಬ ಸತ್ಯಾಗ್ರಹಿಗೂ ಪ್ರತ್ಯೇಕವಾಗಿ ೫ ವಾರಗಳ ಕಠಿಣ ಶಿಕ್ಷೆಯಾಗಿದೆ.

ಮಧ್ಯಪ್ರಾಂತದಲ್ಲಿ ಕರನಿರಾಕರಣೆಯ ಆರ್ಡಿನನ್ಸ.

ವ್ಹಾಯಿಸರಾಯರು ಕರನಿರಾಕರಣೆಯ ವಿರುದ್ಧವಾಗಿ ಹೊರಡಿಸಿದ 'ಅನಲಾಫುಲ್ ಇನಸ್ಟಿಗೇಶನ್ ಆರ್ಡಿನನ್ಸ್' ಮಧ್ಯಪ್ರಾಂತದ ಹಾಗು ವರ್‍ಹಾಡದ ಅಕೋಲಾ ಮತ್ತು ಬುಲಢಾಣಾ ಜಿಲ್ಲೆಗಳಲ್ಲಿ ಬಳಕೆಯಲ್ಲಿ ಬರುವದಾಗಿ ಅಲ್ಲಿಯ ಸರಕಾರದವರಿಂದ ಪ್ರಸಿದ್ಧಿಸಲ್ಪಟ್ಟಿದೆ.

ಮಾಳವಣದಲ್ಲಿ ೨೫ ಜನರನ್ನು ಹಿಡಿದರು

ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನ ಮೇರೆಗೆ ಹೊರಡಿಸಿದ ಹುಕುಮನ್ನು ಅವಮಾನ್ಯ ಮಾಡಿ, ಸೊಲ್ಲಾಪುರದ ವೀರರಿಗಾಗಿ ಸಹಾನುಭೂತಿ ತೋರಿಸುವದಕ್ಕಾಗಿ ಮೆರವಣಿಗೆ ತೆಗೆದ ನಿಮಿತ್ತವಾಗಿ ಮಾಳವಣದಲ್ಲಿ ಶ್ರೀ ಮಹಾಜನ ಹಾಗು ೨೪ ಜನ ಸ್ವಯಂಸೇವಕರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಮದ್ರಾಸದಲ್ಲಿ

೨೨ ಜನರಿಗೆ ಶಿಕ್ಷೆ

ಪರದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಮದ್ರಾಸದಲ್ಲಿ ೨೨ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಸಕ್ತ ಶಿಕ್ಷೆಯು ದೊರೆತಿದೆ.

'ಮಿಲಾಪ' ಪತ್ರಿಕೆಗೆ ೧೦೦೦೦ ರೂಪಾಯಿ ಹೊಣೆ

ಲಾಹೋರದಲ್ಲಿ ಹೊರಡುತ್ತಿರುವ "ಮಿಲಾಪ" ಎಂಬ ಉರ್ದು ದೈನಿಕ ಪತ್ರಿಕೆಗೆ ಪ್ರೆಸ್ ಆರ್ಡಿನನ್ಸಿನನ್ವಯ ೧೦,೦೦೦ರು. ಹೊಣೆಯನ್ನು ಕೇಳುವಲ್ಲಿ ಬಂದಿದೆ.
ತ್ತದೆ.

ಬಾಕ್ಸ ಬಾಯಿಂಡಿಂಗದ

ಹೊಸ ವ್ಯವಸ್ಥೆ

ನಮ್ಮಲ್ಲಿ ಗೋಲ್ಡ ಸಹಿತ ಅತ್ಯುತ್ತಮವಾಗಿ ಬಾಯಿಂಡಿಂಗದ ಕೆಲಸವು ಸೋವಿ ದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇಲ್ಲದೆ ರುಮ್ಮಂಡ ಬಣ್ಣಗಳನ್ನು ಕಾಗದ ಪತ್ರ ಇಡುವ ಮತ್ತು ದೊಡ್ಡ ಹಾಳಿಯ ಪಾಕೀಟುಗಳನ್ನು ಕಾಗದದಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವವು. ಪೇಪರ ಫೋಲಿಯೋ ಮತ್ತು ಫಾಯಿಲದ ರಟ್ಟುಗಳನ್ನು ಮಾರಾಟಕ್ಕೆ ತಯಾರಿಸಿ ಇಟ್ಟಿದ್ದೇವೆ. ಎಲ್ಲ ಮಾಸ್ತರರಿಗೆ ಕಡಿಮೆ ದರದಿಂದ ಸಿದ್ಧಮಾಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉದಪೀಕರ
ಪ್ರೊಪ್ರಾಯಟರ ದಿ ನ್ಯೂ ಬುಕ್ಕ ಬಾಯಿಂಡಿಂಗ ವರ್ಕ್ಸ ಹಾಸಿಮಜಾಸಾಹೆಬ ಹವಾಲದಾರ ಬಿಲ್ಡಿಂಗ
ವಿಜಾಪೂರ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ, ಹಣಮಂತರಾವ, ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ.

(ಸ್ಯಾಂಪಲ್) ಮತ ಚೀಟಿಗಳು (ಪುಕ್ಕ...

ನೀಲಿ ಕಪ್ಪು ಕೆಂಪು, ಜಾಂಬಳಿ ಮ... ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ ೨—೮—೦
೧ ಸಾವಿರ ಚೀಟಿಗಳಿಗೆ, ೩-೮-೦
೫ ಸಾವಿರಕ್ಕೆ, ೧೬-೮-೦ ರೇಲ್ವೆ...
೫೧ ತೊಲಾ ಪಾಕೀಟುಗಳಿಗೆ ೧-೦-...
ರಬ್ಬರ ಸ್ಟ್ಯಾಂಪ ಮಸಿ ½ ಔನ್ಸಿನ ೧೨ ಡಜನ ಬಾಟ್ಲಿಗೆ } ೧-೦-...

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ

ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತ ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ವಾಚ, ಟಾಯಿಂಪೀಸ

ದುರಸ್ತಿಮಾಡಿಸುವವರಿಗೆ ಸುಸಂಧಿ



ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಚನ್ನಾಗಿ ಸೋವಿ ದರದಿಂದ ಸರಿಯಾದ ವೇಳೆಗೆ ದುರಸ್ತಿ ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿಕೊಳ್ಳಿರಿ.

ವಿಳಾಸ:- ಆರ್. ಡಿ. ಸಿಂಧೆ.
ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ, ಬಾಗಲಕೋಟೆ.

ಈ ಪತ್ರಿಕೆಯು ವೆಂಕಟೇಶ ಶಿವರಾವ [illegible] ಇವರಿಂದ ಬಾಗಲಕೋಟೆ [illegible] ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ - मनु.

ಕನ್ನಡಿಗ

KANNADIGA BAGALKOT

BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:- ವೆಂಕಟೇಶ ಶೇಷರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ರವಿವಾರ [illegible] ತಾ|| ೨೭-೧-೩೧ [ಸಂಚಿಕೆ [illegible]

ಅಲಹಾಬಾದದ

ವರ್ಕಿಂಗ ಕಮೀಟಿಯ ಸಭೆಯು.

ಕಾಂಗ್ರೆಸ್ ವರ್ಕಿಂಗ ಕಮೀಟಿಯವರು ತಾ|| ೨೧ನೆ ದಿವಸ ಅಲಹಾಬಾದದಲ್ಲಿ ಸೇರಿ, ಮುಖ್ಯ ಪ್ರಧಾನರು ವ್ಯಕ್ತಪಡಿಸಿದ ಸಂಧಾನ ಧೋರಣದ ವಿಷಯವಾಗಿ ವಿಚಾರಮಾಡಿ, ಆ ಬಗ್ಗೆ ಒಂದು ನಿರ್ಣಯವನ್ನು ಗೊತ್ತುಪಡಿಸಿ ಕೊಂಡರು.

ಹೀಗೆ ನಿರ್ಣಯವನ್ನು ಗೊತ್ತುಪಡಿಸಿ ಕೊಳ್ಳುವ ಕಾರ್ಯಕ್ಕೆ ಹಾಗಿದ ಕಾಲದಲ್ಲಿ ಸರ್ ಸಪ್ರೂ, ಜಯಕರ, ಶಾಸ್ತ್ರಿ ಮೊದಲಾದವರು ಬಂದಿ ಮೆರೆಯಲಿಕ್ಕೆ ಸಂತೆ ಒಂದು ತಾರು ಬಂತು.

"ನಾಳೆ ಬೊಂಬಾಯಿ ನಮ್ಮೊಡನೆ ಈ ಬಗ್ಗೆ ವಿಚಾರವಿನಿಮಯ ಮಾಡುವವರೆಗೆ ಏನೊಂದು ನಿರ್ಧಾರ ಮಾಡಬೇಡಿರಿ"

ವರ್ಕಿಂಗ ಕಮೀಟಿಯವರು ಮೇಲಿನ ಪ್ರಶ್ನೆ ವಿಚಾರಮಾಡಿ ಕೆಳಗಿನಂತೆ ಅವರಿಗೆ ತಂತಿಯಿಂದ ಉತ್ತರ ಕೊಟ್ಟರು.

"ನಾವು ಈ ಬಗ್ಗೆ ಒಂದು ನಿರ್ಣಯವನ್ನು ನಿರ್ಧರಿಸಿಕೊಂಡರೂ ವಾಯಿದದಲ್ಲಿ ನಿಮ್ಮನ್ನು ಒಂದು ಮುಟ್ಟಿಸಿ ನೀವು ವ್ಯಕ್ತಪಡಿಸಿದಂತೆ ನಿಮ್ಮೊಡನೆ ವಿಚಾರ ವಿನಿಮಯ ಮಾಡುವವರೆಗೆ, ಸಭೆಯಲ್ಲಿ ಪಾಸಾದ ನಿರ್ಣಯವನ್ನು ಪ್ರಸಿದ್ಧಪಡಿಸುವದಿಲ್ಲ. ಕಾಂಗ್ರೆಸ್ ಚಳವಳಿ ನಮ್ಮ ದಾರಿಯು ಹಿಂದಕ್ಕೆ ಸಾಗಿ ಸಾವೆವು"

ಮೌಲಾನಾ ಮಹಮ್ಮದ ಅಲ್ಲಿಯವರು ನಿಧನ ಹೊಂದಿದ ಬಗ್ಗೆ ದುಃಖ ಪ್ರದರ್ಶನ ಠರಾವು ವರ್ಕಿಂಗ ಕಮೀಟಿಯಲ್ಲಿ ಪಾಸುಮಾಡಲ್ಪಟ್ಟಿದೆ.

ಕಟ್ಟಿ, ಹಬ್ಬು, ಕಾರಖಾನೀಸ ಮೊದಲಾದವರಿಗೆ ಬಿಡುಗಡೆ

(ವಿಜಾಪುರದ ಸ್ವಂತ ಸಮಾಚಾರದಿಂದ)

ವಿಜಾಪುರ, ಹುನಗುಂದ ಹಾಗು ಗಲಗಲಿ ಈ ಊರುಗಳಲ್ಲಿ, ಶ್ರೀ ಲಾ. ಜವಳಿ ವೆಂಕಟರಾವ ಮೊದಲಾದವರು ಧನಾಢ್ಯರಿಗಾಗಿ ಶಿಕ್ಷೆಗೆ ಗುರಿಯಾದವರ ಅಪೀಲು ಕೇಸಿನ ವಿಚಾರಣೆ, ಮುಂಬಯಿ ಹಾಯಿಕೋರ್ಟ ದವರು ಪುನರ್ವಿಚಾರಣೆ ಮಾಡಿ, ಅವರನ್ನು ನಿರ್ದೋಷಿಗಳಾಗಿ ನಿರ್ಣಯಿಸಿದ್ದರಿಂದ, ಶ್ರೀ ಶಂಕರ ಕಾರಖಾನೀಸ, ಜೋಶಿ ಗಣಪತರಾವ, ಮಾಳಿ ಕೇಶವ, ರಾಘವೇಂದ್ರ ಹಬ್ಬು, ಶಾಮಾಚಾರ್ಯ ಕಟ್ಟಿ, ಮಧ್ವರಾವ ಮ್ಯಾಟಿ, ಈ ಜನರು ತಾ|| ೨೩ನೆಯ ದಿವಸ ಹಿಂಡಲಗಿ ಜೇಲಿನಿಂದ ಬಿಡುಗಡೆ ಹೊಂದಿದರು. ಶ್ರೀ ದೇಸಾಯಿ, ಚಾಮುಂಡಿ, ಗೋರೆ ಮೊದಲಾದ ಇನ್ನು ೭ ಜನರು ವಿಜಾಪುರ ಜೇಲಿನಲ್ಲಿ ಇರುವರು. ಅವರಾದರೂ ಬೇಗನೆ ಬಿಡುಗಡೆ ಹೊಂದಿ ಬರುವರು.

ಶ್ರೀ ಕಟ್ಟಿ ಶಾಮಾಚಾರ್ಯರು ಬಹಳೇ ಅಶಕ್ತರಾಗಿರುವರು. ಅವರನ್ನು ಮೋಟಾರದಲ್ಲಿ ಕರೆದುಕೊಂಡು ಹೋಗಿರುವರು. ಬಾಕಿ ಉಳಿದವರು ಮೆರವಣಿಗೆಯಿಂದ ಹೊರಟು ಬಂದರು.

ಬೆಳಗಾವಿ ಜಿಲ್ಲೆಯ ಆರೋಪಿಗಳಿಗೆ ಬಿಡುಗಡೆಯಾಯಿತು.

ಬೆಳಗಾವಿ ಜಿಲ್ಲೆಯಲ್ಲಿ ಕ್ರಿಮಿನಲ್ ಲಾ. ಅಮೆಂಡಮೆಂಟ ಕಾಯದೆ ೭ ನೆಯ ಕಲಮಿನ್ವಯ ಶಿಕ್ಷೆಗೆ ಗುರಿಯಾದ ೨೩ ಜನರ ಮುಕ್ಕದ್ದಮೆ ಕೇಸಿನ ಪತ್ರ ಪತ್ರ, ಮುಂಬಯಿ ಹಾಯಿಕೋರ್ಟದವರು ತಾ|| ೨೨ಕ್ಕೆ ಪುನರ್ವಿಚಾರಣೆ ಮಾಡಿ, ಅವರೆಲ್ಲರೂ ನಿರ್ದೋಷಿಗಳೆಂದು ತಾಂತ್ರಿಕವಾಗಿ ನಿರ್ಣಯಿಸಿ, ಅವರನ್ನು ಬಿಡುಗಡೆ ಮಾಡಲು ಅಪ್ಪಣೆ ಕೊಟ್ಟರು.

ಮುಂಬಯಿಯ ಪೋಲೀಸ ಅಧಿಕಾರಿಗಳು ತಾ|| ೨೧ನೆಯ ದಿವಸ ರಾತ್ರಿ ಅಲ್ಲಿಯ ಬಜಾರಗೇಟ ಸ್ಟ್ರೀಟದಲ್ಲಿರುವ ಕಾಂಗ್ರೆಸ್ ಕಚೇರಿಗೆ ಮುತ್ತಿಗೆಹಾಕಿ ೧೩ ಜನರನ್ನು ಸೆರೆಹಿಡಿದು ಕೊಂಡು ಹೋದರು.

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

(ಪುಣೆಯ ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನರ ಲೇಖನದ ಅನುವಾದವು)

(ಹಿಂದಿನಿಂದ ಮುಂದೆ ಸಾಗಿದೆ)

ಹೊಸ ಗೌಡರು

ಈ ಚಳವಳಿಯ ಮೂಲಕ ಅನೇಕ ಹಳ್ಳಿಗಳ ಗೌಡರು ರಾಜೀನಾಮೆಗಳನ್ನು ಕೊಟ್ಟರು. ಅವರ ಸ್ಥಳದಲ್ಲಿ ಕೆಲವು ಕಡೆ ಹೊಸ ಗೌಡರುಗಳೂ ನಿಯಮಿಸಲ್ಪಟ್ಟಿದ್ದಾರೆ. ಆದರೆ ಈ ಹೊಸ ಗೌಡರು ಕೀಳ ಮನುಷ್ಯರಿದ್ದು, ಗೌಡಿಕೆಯ ಜವಾಬದಾರಿಯನ್ನು ತಿಳಿಯದವರಾಗಿದ್ದಾರೆ. ಒಂದು ಕಡೆಯಂತೂ ಒಬ್ಬ ಬಾರಿಯಾ ಜಾತಿಯವನನ್ನು ನಿಯಮಿಸಿದ್ದಾರೆ. ಇನ್ನೊಂದು ಹಳ್ಳಿಯಲ್ಲಿಯ ಒಂದು ನೀರಿನ ಪಂಪು ಸುಡಲ್ಪಟ್ಟಿದೆ. ಈ ಬಗ್ಗೆ ಶೋಧ ನಡಿಸಬೇಕೆಂದು ರೈತನು ಕೇಳಿಕೊಂಡರೆ ಅದು ತನ್ನ ಕರ್ತವ್ಯವಲ್ಲೆಂದು ಹೊಸ ಗೌಡನು ಹೇಳಿದನಂತೆ. ಮತ್ತೆ ಪುನಃ ನಾವು ವಿಚಾರಿಸಿದಾಗ್ಯೂ, ಮನೆ ಹಾಗು ಪಂಪು ಸುಟ್ಟ ಬಗ್ಗೆ ಏನೂ ಸಂಬಂಧವಿಲ್ಲದವನಂತೆ ಅವನು ಮಾತಾಡಿದನು. ತಮ್ಮ ಜವಾಬದಾರಿ ತಿಳಿಯದವರನ್ನು ಗೌಡಿಕೆಯಂಥ ದೊಡ್ಡ ಹುದ್ದೆಯ ಕೆಲಸಕ್ಕೆ ನೇಮಿಸಿರುವದನ್ನು ನೋಡಿ ಖೇದವೆನಿಸುತ್ತದೆ

ಭೇದ ನೀತಿಯು

ಸಮಾಜಕ್ಕೆ ತಗಲಿದ ಆರ್ಥಿಕ ಹಾನಿಯು ಕಾಲಾಂತರದಿಂದ ತುಂಬಿ ಬರಬಹುದು. ದೇಹಕ್ಕೆ ಸಂಭವಿಸಿದ ಗಾಯಗಳೂ ಔಷಧೋಪಚಾರದಿಂದ ಮಾಯು ಬಹುದು. ಆದರೆ ಸಮಾಜದಲ್ಲಿ ಊರಿದ ಭೇದ ಬೀಜದ ವಿಷವೃಕ್ಷವು ಮಾತ್ರ ದಿನದಿನಕ್ಕೆ ಪಲ್ಲವಿಸಿ ಫಲಿಸಿ ಶಾಖೋಪಶಾಖೆಯಾಗಿ ತನ್ನ ವಿಷದ ಗಾಳಿಯನ್ನು ನಾಲ್ಕೂ ಕಡೆಗೆ ಪಸರಿಸುತ್ತ ಬೆಳೆಯುತ್ತಲೆ ನಡೆಯುವದು. ಸರಕಾರದವರೇ ಕೂಡ ಒಂದು ಜಾತಿಯವರ ವಿಷಯಕ್ಕೆ ಇನ್ನೊಂದು ಜಾತಿಯವರ ಮನಸ್ಸು ಕಲುಷಿತವಾಗುವಂತೆ ಪ್ರಯತ್ನಿಸುತ್ತಿರುವದು ಬೋರಸಾದ ತಾಲೂಕದಲ್ಲಿ ಹೆಚ್ಚಾಗಿ ನಮ್ಮ ದೃಷ್ಟಿಗೆ ಬಿತ್ತು. ಇದನ್ನು ಕಣ್ಣಾರೆ ನೋಡಿದಾಗಿನಿಂದಲೂ ನನಗೆ ಸಹಿಸಲಾರದಷ್ಟು ಖೇದವಾಗಿದೆ. ಈ ವಿಷವೃಕ್ಷವನ್ನು ಬೆಳೆಸಲು ಇಲ್ಲಿಯ ಸರಕಾರಿ ನೌಕರರು ಯಾವ ರೀತಿಯಿಂದ ಯತ್ನಿಸುತ್ತಿರುವರೆಂಬುದನ್ನು ತೋರಿಸಲಿಕ್ಕೆ ಓರ್ವ ಬಾರಿಯಾ ಜಾತಿಯವನು ವಿವರಿಸಿದ ವೃತ್ತಾಂತವನ್ನಷ್ಟು ಇಲ್ಲಿ ಹೇಳುವೆನು. ಆ ಬಾರಿಯಾನು ಹೇಳಿದ್ದೇನಂದರೆ "ಆಶ್ವಿನ ಮಾಸದಲ್ಲಿ ಒಂದು ದಿವಸ ಮುಂಜಾವಿನಲ್ಲಿ ನಾವೆಲ್ಲರೂ ನಮ್ಮ ಗುಡಿಯ ಹತ್ತರದ ಮಾಡದಲ್ಲಿ(?) ಕುಳಿತಿದ್ದೆವು. ಅಷ್ಟರಲ್ಲಿಯೇ ಸಾಹೇಬರ ಟೊಪ್ಪಿಗೆಯನ್ನು ಹಾಕಿಕೊಂಡಿದ್ದ ಓರ್ವ ಅಧಿಕಾರಿಯು ಪೋಲೀಸ ಜನರೊಡನೆ ನಮ್ಮ ಗುಡಿಯೊಳಗೆ ಹೋಗಿ ದೇವರ ಮುಂದೆ ೨ ಆಣೆ ಇಟ್ಟು ಸಾಷ್ಟಾಂಗ ನಮಸ್ಕಾರ ಮಾಡಿ, ನಾವು ಕುಳಿತ ಸ್ಥಳಕ್ಕೆ ಬಂದವನು ಮತ್ತೆ 'ನೀವು ಪಾಟೀದಾರರಿಗೆ ನಿಮ್ಮ ಸಾಲವನ್ನು ತಿರುಗಿ ಕೊಡಬೇಡಿರಿ, ಪಾಟೀದಾರರ ಹೊಲಗಳನ್ನೆಲ್ಲ ೨ ಆಣೆಗಳಿಗೆ ಒಂದು ವಿಘೆಯಂತೆ ಲಿಲಾವಿನಲ್ಲಿ ಕೊಂಡುಕೊಳ್ಳಿರಿ ಅವರ ಹೊಲಗಳೊಳಗೆ ನಿಂತಿರುವ ಬೆಳೆಗಳನ್ನು ಲೂಟಿ ಮಾಡಿಕೊಂಡು ಹೋಗಿರಿ. ನಾನಂತು ಯಾವಾಗಲೂ ನಿಮ್ಮ ಪಕ್ಷ ವಹಿಸಲಿಕ್ಕೆ ಸಿದ್ಧನಿದ್ದೇನೆ ನೀವು ಚಿಂತೆಯನ್ನು ಬಿಟ್ಟು ನಾನು ಹೇಳಿದ ಕಾರ್ಯ ಮಾಡಿರಿ.' ಎಂದು ಹೇಳಿದನು. ಇದೆಲ್ಲಕ್ಕೂ ನಾವು ಹಳ್ಳಿಯಲ್ಲಿ ಅಣ್ಣತಮ್ಮಂದಿರಂತೆ ಸ್ನೇಹದಿಂದ ಬಾಳುವೆ ಮಾಡಿಕೊಂಡಿರುವೆವು. ಇದಾವುದನ್ನು(?) ನಾವು ಮಾಡಲು(?) ಸಮರ್ಥರಾದೆವು(?) ಎಂದು ಉತ್ತರ ಕೊಟ್ಟೆವು. ಮತ್ತೊಂದು ದಿವಸ ನಾನು ಬೋರಸಾದಕ್ಕೆ ಹೋದಾಗ, ಸ್ವತಃ ಮಾಮಲೇದಾರರು ನನ್ನನ್ನು ಕರೆದು, ತಮ್ಮ ಕಿಸೆಯೊಳಗಿಂದ ಒಂದು ರುಪಾಯಿ ತೆಗೆದು ನನ್ನ ಕೈಯಲ್ಲಿಟ್ಟು, 'ಇಗೋ, ಲಿಲಾವಿನಲ್ಲಿ ಹೊಲಗಳನ್ನು ಕೊಳ್ಳು(?), ಅವುಗಳ ಕ್ರಯದ ಪಂಚಗಾಂವಕೆಯೆಂದು(?) ಈ ರುಪಾಯಿಯನ್ನು ಕೊಟ್ಟು ಹೋಗು ಇವೆಲ್ಲ ಹೊಲಗಳನು ನಿನ್ನ ಹೆಸರಿಗೆ ಹಚ್ಚುವೆನು' ಎಂದು ಬಹು ಪ್ರೀತಿಯಿಂದ(?) ಹೇಳಿದರು. ಆದರೆ ನಾನು ಗಟ್ಟಿ ಮನಸಿನಿಂದ ಒಲ್ಲೆ ಎಂದು ಹೇಳಿ ಬಂದೆನು

ದಭಾಸಿಯೆಂಬ ಇನ್ನೊಂದು ಹಳ್ಳಿಯಲ್ಲಿಯೂ ಇಂಥದೇ ಒಂದು ಕತೆಯನ್ನು ಕೇಳಿದೆವು. ಅಲ್ಲಿ ಪಾಟೀದಾರರ ಫಲದ್ರೂಪವಾದ ಭೂಮಿಗಳನ್ನು ಬಾರಿಯಾ ಜನರಿಗೆ ರುಪಾಯಿಗೊಂದು ಎಕರೆಯಂತೆ ಕೊಡುವೆವೆಂದು ಹೇಳಿರುವರು(?) ರಾಸದಲ್ಲಿಯೂ ಈ ಬಾರಿಯಾ ಜನರ ಬೆನ್ನು ಚಪ್ಪರಿಸುವದು ನಡೆದಿದೆ.

ಇದಲ್ಲದೆ "ಹಳ್ಳಿಯನ್ನು ಬಿಟ್ಟು ಹೋಗಿ ಅಡವಿಯಲ್ಲಿರುತ್ತಿರುವ ರೈತರ ಡೇರೆಗಳಿಗೆ ರಾತ್ರಿ ಬೆಂಕಿ ಹಚ್ಚಿರೆಂದು, ಸ್ವತಃ ಇನಸ್ಪೆಕ್ಟರರು ಬಾರಿಯಾ ಜನರಿಗೆ ಹುರಿದುಂಬಿಸುತ್ತಿರುವದನ್ನು ಅನೇಕರು ನನಗೆ ನಿಂತು ಹೇಳಿದ್ದಾರೆ. ಪಾಡಲಾದಲ್ಲಿ ಓರ್ವ ಅಧಿಕಾರಿಯು ಬಾರಿಯಾ ಜನರಿಗೆ "ಪಾಟೀದಾರರ ರಕ್ತವನ್ನು ಹೀರಲಿಕ್ಕೆ ಇದೇ ತಕ್ಕ ಸಮಯ. ಕಾರಣ ಅವರ ಸಾಲಗಳನ್ನು ತಿರುಗಿ ಕೊಡಬೇಡಿ, ಅವರ ಮನೆ ಹೊಲಗಳನ್ನು ಲೂಟಿ ಮಾಡಿರಿ ಮತ್ತು ಲಿಲಾವಿನಲ್ಲಿ ಅವರ ಮನೆ ಹೊಲಗಳನ್ನು ಕೊಂಡುಕೊಳ್ಳಿರಿ" ಎಂದು ಉಪದೇಶ ನಡಿಸಿದ್ದನ್ನು ಊರ ಜನರೇ ಕೇಳಿರುವರು. ನಿಮ್ಮ ನಿಮ್ಮೊಳಗೆ ಒಡಕು ಇರುವದರಿಂದ ನಿಮಗೆ ಸ್ವರಾಜ್ಯವನ್ನು ಕೊಡಲಿಕ್ಕಾಗದೆಂದು ಬ್ರಿಟಿಶರು ಹೇಳುತ್ತಿರುವ ಈ ಸಮಯದಲ್ಲಿ, ಅಂಥ ಒಡಕುಗಳನ್ನು ಕಿತ್ತಲು ಇದ್ದಿಯ(?) ಸರಕಾರವು ಪ್ರಯತ್ನ ಪಡುತ್ತಿರುವದನ್ನು ನೋಡಿದರೆ ಮನಸು ಉದ್ವಿಗ್ನವಾಗದೆ ಇರದು.

(ಮುಂದೆ ಸಾಗುವದು.)

ಕರ್ನಲ್ಲರನ್ನು ಸಾಯ ಹೊಡೆಯುವದೇ ನನ್ನ ಉದ್ದೇಶವಾಗಿತ್ತು.

ಲಾಹೋರದ ಕ್ಯಾಪ್ಟನ್ ಕರ್ಟಿಸರ ಹೆಂಡತಿಯನ್ನು ಗುಂಡಿನಿಂದ(?) ಹೊಡೆದ ಕೊಲೆ ಮಾಡಿದ ಅಪರಾಧಕ್ಕಾಗಿ ಸೆರೆ ಸಿಕ್ಕಿದ್ದ ಶ್ರೀ ಸಜ್ಜನಸಿಂಗ ಇವರ ವಿಚಾರಣೆಯು, ತಾ ೨೨ ನೆಯ ದಿವಸ ಮ್ಯಾಜಿಸ್ಟ್ರೇಟರಾದ ಮಿ. ಬ್ಲ್ಯಾಯಿ(?) ಸರವರ ಮುಂದೆ ಪ್ರಾರಂಭವಾಯಿತು. ಮೊದಲು ಕ್ಯಾಪ್ಟನ್ ಕರ್ಟಿಸ್, ಸಬ್ ಇನಸ್ಪೆಕ್ಟರ ಮಹಮದ ಅಕ್ಷಖಾನ, ಇನಸ್ಪೆಕ್ಟರ ಅಲ್ಲಿಸನ್(?) ಇವರ ಸಾಕ್ಷಿಗಳಾದವು. ಬಳಿಕ ಶ್ರೀ ಸಜ್ಜನಸಿಂಗರು ಜವಾಬು ಕೊಡುತ್ತ(?) ತಮ್ಮ ಜವಾಬಿನಲ್ಲಿ ಕೆಳಗಿನಂತೆ ಹೇಳಿದರು.

"ಲಾಹೋರ ಕ್ಯಾಂಟೋನಮೆಂಟಿನ ಕರ್ನಲರನ್ನು ಸಾಯಹೊಡೆಯುವದಕ್ಕಾಗಿಯೇ ನಾನು ಲಾಹೋರಕ್ಕೆ ಬಂದೆ. ಕರ್ನಲ್ಲರು ಕ್ಯಾಪ್ಟನ್ ಕರ್ಟಿಸರ ಬಂಗಲೆಯಲ್ಲಿಯೇ ಇರುತ್ತಿರುವರೆಂದು ತಿಳಿದು ಬಂದಿತು. ಆದ್ದರಿಂದ ಬಂಗಲೆಯಲ್ಲಿ ಒಳಹೊಕ್ಕೆ. ಮಿಸೆಸ್ ಕರ್ಟಿಸರನ್ನು ಅಜ್ಞಾನದಿಂದ ಗುಂಡು ಹೊಡೆದ ಬಳಿಕ ಕರ್ನಲರನು ಹುಡುಕಲು ಸುತ್ತೆಲ್ಲ ಅಡ್ಡಾಡಿದೆ ಅವರ ಸಿಗಲಿಲ್ಲ. ಮತ್ತು ತಪ್ಪಿ(?)ಗಿ ಒಂದ ಮಿಸೆಸ್ ಕರ್ಟಿಸ್ ಹಾಗೂ ಅವರ ಇಬ್ಬರು ಮಕ್ಕಳನ್ನು ಗಾಯಪಡಿಸಿದೆ. ಜಾಲಿಯನ ವಾಲಾಬಾಗ ಮತ್ತು ಪೇಶಾವರಗಳಲ್ಲಿ ಯುರೋಪಿಯನ್ನರು ಚಿಕ್ಕ ಚಿಕ್ಕವರನ್ನು ಕೊಂದಿದ್ದು ಜ್ಞಾಪಕಕ್ಕೆ ಬಂತು. ಚಿಕ್ಕವರನ್ನು ಕೊಂದು ಅದರ ಸೇಡು ತೀರಿಸಿಕೊಳ್ಳಬೇಕೆಂದೆ. ಆದರೆ ಚಿಕ್ಕವರನ್ನು ಕೊಲ್ಲುವದು ಸರಿಯಲ್ಲ(?) ತೋರಿತು(?) ಕರ್ನಲ್ಲರನ್ನು ಹುಡುಕಲು ಓಡಿ(?) ... ಪಿಕೆಟಿಂಗಕ್ಕಾಗಿ ನನಗೆ ಈಗೊಮ್ಮೆ ಶಿಕ್ಷೆಯಾಗಿತ್ತು. ಪಿಕೆಟಿಂಗ ಮಾಡಿದ್ದು ಕಾಂಗ್ರೆಸದ ಮರ್ಜಿಯಿಂದ(?) ಅಲ್ಲ. ಸಿಸಗಂಜ ಗೋಳೀಬಾರದ ಅನ್ಯಾಯವನ್ನು ನೋಡಿ ಯಾವ ಸಿಖನು ಸ್ವಸ್ಥ ಕೂಡಲಾರನು.

ಮುಖ್ಯಪ್ರಧಾನರ ಸ್ವರಾಜ್ಯದ ಕಲ್ಪನೆ

ತಾ। ೧೯ ನೆಯ ದಿವಸ ಮುಖ್ಯ ಮಂತ್ರಿಗಳಾದ ಮಿ. ಮ್ಯಾಕ್‌ಡೋನಾಲ್ಡರು, ಹಿಂದುಸ್ಥಾನದ ಭಾವೀ ರಾಜ್ಯಘಟನೆಯ ವಿಷಯವಾಗಿ ದುಂಡೀ ಗಾಲಿಯ ಪರಿಷತ್ತಿನಲ್ಲಿ ಭಾಷಣ ಮಾಡಿ, ಸರಕಾರಿ ಧೋರಣವನ್ನು ವ್ಯಕ್ತಪಡಿಸಿದರು. ಅವರ ಭಾಷಣದ ಸಾರವನ್ನು ಕೆಳಗೆ ಕೊಟ್ಟಿದೆ.

ಇನ್ನು ಸ್ವಲ್ಪ ಅವಧಿಯಲ್ಲಿಯೇ ಪರಿಷತ್ತಿನ ಕಾರ್ಯವು ಮುಗಿಯುತ್ತಿದೆ. ಇಂಥ ದೊಡ್ಡ ಪರಿಷತ್ತಿಗೆ ನಾನು ಅಧ್ಯಕ್ಷನಾದದ್ದು ನನ್ನ ಜೀವಿತದಲ್ಲಿ ಇದೇ ಮೊದಲನೆಯದಾಗಿದೆ. ಪರಿಷತ್ತಿನ ಪ್ರಾರಂಭದ ಕಾಲಕ್ಕೆ ಭಾಷಣ ಮಾಡುವಾಗ "ಸಮಯೋಚಿತ ಸಹಕಾರ ಮಾಡಿ, ಸ್ವತಂತ್ರ ರಾಜ್ಯಕಾರಭಾರವನ್ನು ಹೊಂದಲು ಬಂದಿರುವಿರಾದ್ದರಿಂದ, ನಮ್ಮ ಮನವೊಲಿಸಲು ಏನೂ ಅಗತ್ಯವಿಲ್ಲವೆಂದು" ನಾನು ನಿಮಗೆ ಹೇಳಿದ್ದೆನು. ಹೀಗೆ ಹೇಳಿದ್ದು ತಪ್ಪಾಗಿಲ್ಲವೆಂದು ನನಗೆ ತೋರುತ್ತದೆ. ಹಿಂದುಸ್ಥಾನಕ್ಕೆ ತಿರುಗಿ ಹೋಗಿ ನೀವು ತಿಳಿಸುವಿರಿ, ಹೇಳುವಿರಾಗಿ ನಾನು ಆಶಿಸುತ್ತೇನೆ.

"ಬ್ರಿಟಿಶರ ನಮಗೆ ಯೋಗ್ಯ ಆದರ ಸತ್ಕಾರ ಮಾಡಿದರು. ನಾವು ನಮ್ಮ ಪ್ರಶ್ನೆಯನ್ನು ಅವರ ಮುಂದೆ ಇಟ್ಟೆವು. ಅವರು ತಮ್ಮ ಪ್ರಶ್ನೆಯನ್ನು ನಮ್ಮ ಮುಂದೆ ಮಂಡಿಸಿದರು. ಕಾಳಜಿ ಪೂರ್ವಕವಾಗಿ ವಿಚಾರ ಮಾಡಿದೆವು. [illegible] ವಿಚಾರದ ತೀರ್ಪು ಒಳ್ಳೆ [illegible]"

ನಿಮಗೆ ತಕ್ಕ ವಿಶ್ವಾಸವ, ನಾವು ಮಾಡುತ್ತೇವೆ. ನೀವು ಹಿಂದುಸ್ಥಾನಕ್ಕೆ ಹೋಗಿ ಇಲ್ಲಿ ನಡೆದ ಕಾರ್ಯಭಾಗಗಳ ಬಗ್ಗೆ ನಿಮ್ಮ ಜನರ ಶಕ್ತಿ ಬೆಳೆಸಿಕೊಳ್ಳಬೇಕಾಗುವದು. ನಾವು ಹಾಕಿದ ಒಪ್ಪಂದ ಒಪ್ಪಿಗೆ ತಿಳಿಸಿಕೊಳ್ಳಬೇಕಾಗುವದು.

ಸಾಯಮನ್ ಕಮಿಶನ್ ನಿಯಮಿಸಲ್ಪಟ್ಟದ್ದಿಲ್ಲವಾದರೆ ಈ ಪರಿಷತ್ತು ಕಾರ್ಯವು ಆಗುತ್ತಿರಲಿಲ್ಲ. ಆದ್ದರಿಂದ ಭಾರತೀಯರು ಸಾಯಮನ್ ಕಮೀಶನಕ್ಕೆ ತುಂಬಾ ಋಣಿಯಾಗಿರಬೇಕು. ಸಾಯಮನ್ ಕಮೀಶನದ ರಿಪೋರ್ಟು ಬರೆದಿದ್ದರೆ, ಬ್ರಿಟಿಶರ ಮೂರೂ ಪಕ್ಷಗಳು ಈ ಪ್ರಶ್ನೆಯ ವಿಚಾರವನ್ನು ವಿಸ್ತೃತವಾಗಿ ವಿಚಾರ ಮಾಡಲಿಕ್ಕೆ ಸಿದ್ಧರಾಗುತ್ತಿದ್ದಿಲ್ಲ. ಹಿಂದುಸ್ಥಾನದ ಪ್ರಶ್ನೆಯ ಬಗ್ಗೆ ಇಷ್ಟು ತನ್ಮಯವಾಗಿ ಎಂದೂ ವಿಚಾರವಾಗಿದ್ದಿಲ್ಲವೆಂದು ಹೇಳಲು ನನಗೆ ಬಹಳ ಸಂತೋಷವಾಗುತ್ತದೆ.

ಜನರಿಗೆ ಪ್ರಾಂತಿಕ ಸ್ವಾತಂತ್ರ್ಯ, ಜವಾಬ್ದಾರಿ, ಸ್ಥಾನಗಳ ಬಗ್ಗೆ ತೀರ್ಮಾನ ಆಗಬೇಕಾಗಿದೆ. ಜನರಲ್ಲಿ ಸಂಘಟನೆ, ಶಿಸ್ತು, ಅನ್ಯೋನ್ಯತೆ [illegible] ಜನರಿಗೆ ಎಂಥ ಹಿತವಾಗಲಾರದು.

ಬ್ರಿಟಿಶ ಜನರ ಹಿಂದಿನ ಇತಿಹಾಸ ನೋಡಿದರೆ [illegible] ಸ್ಥಾನಗಳ ಬಗ್ಗೆ [illegible] ನಡೆಯಲಿಲ್ಲ. [illegible] ಯಾವತ್ತೂ ನಡೆದಿಲ್ಲ. ಈ ಸಂಬಂಧದಿಂದ ನಿಮ್ಮ ನಿಮ್ಮಲ್ಲಿ ನಮ್ಮ ಒಪ್ಪಂದ ಆಗಲೆಂದು ಇಚ್ಛಿಸುತ್ತಿದ್ದೇನೆ. ನಿಮ್ಮೆಲ್ಲರೂ ಒಪ್ಪಿಕೊಂಡರೆ ನಮ್ಮ ಇಚ್ಛೆ ಪೂರ್ಣವಾಗಿದೆ. ಆ ಬಗ್ಗೆ ವಿಚಾರ ಮಾಡಿ ನಿಮ್ಮ ನಿಮ್ಮೊಳಗೆ ನೀವು ಒಡಂಬಡಿಕೆ ಮಾಡಿಕೊಳ್ಳಬೇಕು.

ಹಿಂದುಸ್ಥಾನಕ್ಕೆ ಪೂರ್ಣ ಜವಾಬದಾರಿಯ ರಾಜ್ಯಪದ್ಧತಿಯನ್ನು ಕೊಡಬೇಕೆಂದೇ ಬ್ರಿಟಿಶ ಸರಕಾರವು ಇಚ್ಛಿಸುತ್ತದೆ. ಗವರ್ನರ್ ಜನರಲ್ ಕೌನ್ಸಿಲವು ಲೆಜಿಸ್ಲೇಟಿವ್ ಅಸೆಂಬ್ಲಿಗೆ ಜವಾಬದಾರವಾಗಿರಬೇಕೆಂಬ ತತ್ವವು ನಮಗೆ ಒಪ್ಪಿಗೆಯಾಗಿದೆ. ಆದರೆ ಸಂಕ್ರಮಣ ಕಾಲದಲ್ಲಿ ದೇಶದ ಕಾರಭಾರ ಈ ವಿಷಯಗಳ ವ್ಯಾಯಿಸರಾಯರಿಗೆ ಅಧೀನವಾಗಿರಲಿಕ್ಕದ್ದು ಅವಶ್ಯವಾಗಿದೆ ಎಂದು ಎನಿಸುತ್ತದೆ. ರಾಷ್ಟ್ರೀಯ ಖಾತೆಗಳ ಹೊರತು, ಹಿಂದುಸ್ಥಾನದ ಹಣದ ಖಾತೆಯನ್ನು ತನಗೆ ತೋರಿದಂತೆ ವೆಚ್ಚ ಮಾಡುವ ಹಾಗೂ ಕರಕೂಡಿಸಿ ಹಣ ಸಂಪಾದನೆ ಮಾಡುವ ಅಧಿಕಾರಿಗಳು ಅಸೆಂಬ್ಲಿಗೆ ವಶವಾಗಿರತಕ್ಕದ್ದು.

ಸದ್ಯದ ಸ್ಥಿತಿಯಲ್ಲಿ ವ್ಯಾಯಿಸರಾಯರ ಕೌನ್ಸಿಲದಲ್ಲಿ ಬ್ರಿಟಿಶ ಪದ್ಧತಿಯು ಇರದಿದ್ದರೂ ಸಹಜವೆ. ಇವೆರಡರಲ್ಲಿ ವಿರೋಧ ಬರದಂತೆ ಪ್ರಯತ್ನ ಮಾಡುವದು ಅವಶ್ಯವಿದೆ. ಗವರ್ನರ್ ಜನರಲ್ಲರಿಗೆ ವಿಶಿಷ್ಟ ಅಧಿಕಾರ ಇರುವದು ಅವಶ್ಯವಿದ್ದರೂ, ಮಂತ್ರಿಮಂಡಳದವರು ರಾಜಕೀ ಕಾರಭಾರದಲ್ಲಿ ಅಂಥ ಪ್ರಸಂಗ ಬರದಂತೆ ನೋಡಿಕೊಳ್ಳಬೇಕು. ಇಲಾಖೆಯ ಕಾರಭಾರದಲ್ಲಿ ಜನತೆಗೆ ಪೂರ್ಣ ಜವಾಬದಾರಿ ದೊರೆಯಬೇಕೆಂದೇ ಬ್ರಿಟಿಶ ಸರಕಾರದ ಧೋರಣವಿರುವದು. ಮುಸಲ್ಮಾನರಿಗೂ ವಿಶಿಷ್ಟ ಪದ್ಧತಿಯಿಂದ ಪ್ರತಿನಿಧಿತ್ವ ದೊರೆಯಬೇಕು.

ವಾಯವ್ಯ ಸರಹದ್ದಿನ ಪ್ರಾಂತಿಕ ಸ್ವರಾಜ್ಯ ಮತ್ತು ಸಿಂಧ್ ಪ್ರಾಂತವನ್ನು ಬೇರೆ ಮಾಡುವ ವಿಚಾರದ ಬಗ್ಗೆ [illegible] ಯಾವದಕ್ಕೂ ತಕರಾರು ಇರುವದಿಲ್ಲ, ಅವರವರ ವಿಚಾರ ಮಾಡಲು ನಾವು ಸಿದ್ಧರೇ ಇರುವೆವು.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಸರ್ ಸಪ್ರೂರವರು ಕೇಳಿಕೊಂಡಿರುವರು. ಅದಕ್ಕೆ ನನ್ನ ಒಪ್ಪಿಗೆಯೂ ಇದೆ. ಆದರೆ ಕಾಂಗ್ರೆಸ್ಸಿನವರು ತಮ್ಮ ಚಳವಳಿ ನಿಲ್ಲಿಸಿದಲ್ಲಿ ಮಾತ್ರ, ಸಪ್ರೂರವರ ವಿನಂತಿಯು ಮನ್ನಿಸಲ್ಪಡುವದು.

ಬ್ರಿಟಿಶ ಅಧಿಕಾರಿಗಳನ್ನೇ ಹದ್ದುಪಾರು ಮಾಡಬೇಕು

[illegible] ಯಲ್ಲಿ ಮಾತನಾಡುತ್ತ "ಬಂಗಾಲ ಕ್ರಾಂತಿ ಚಳವಳಿ [illegible] ನಾಮಾವಶೇಷ ಮಾಡಬೇಕೆಂದು [illegible] ತಿಳಿಸಲ್ಪಟ್ಟಿದೆ.

ಸರ್ ಹರಿಸಿಂಗ್ ಗೌಡ ಮಹಾಶಯರು ಕಳೆದ ವಾರ [illegible] ಈ ನಾಲ್ಕು ಮೊದಲು ಆಗ, ಮತ ಭಿನ್ನಾಭಿಪ್ರಾಯದ ನಿಲುವಾಗಿ ಎಲ್ಲ ಸಭಾಸದರ ಕಡೆಗೆ ಕೊಟ್ಟು ಕಳಿಸಬೇಕಾಗಿ ಹೇಳಿದರು. "ಬಂಗಾಲದಲ್ಲಿಯ ರಾಜ್ಯಕ್ರಾಂತಿಕಾರರನ್ನು ಹದ್ದುಪಾರ ಮಾಡಲು ಸರಕಾರದವರು ಉತ್ಸುಕರಾಗಿದ್ದರೆ ಅವರು ಮೊದಲು ಬಂಗಾಲದಲ್ಲಿ ಅಶಾಂತಿಯನ್ನು ಹುಟ್ಟಿಸಿದ ಕೆಲವು ಬ್ರಿಟಿಶ ಅಧಿಕಾರಿಗಳನ್ನು ಹದ್ದುಪಾರು ಮಾಡಬೇಕು." ಎಂದು ಶ್ರೀ. ಸುಂದರ್ಯವರು ತಿಳಿಸಿದರು.

ಬಳಿಕ ಸರ್ ಜೋನ್ಸ ಕ್ರೇರಾರವರು ಬಂಗಾಲದಲ್ಲಿ ಕಳೆದ ಎರಡು ವರ್ಷಗಳಲ್ಲಿ ಆದ ಅತ್ಯಾಚಾರಗಳು ಸಂಭವಿಸಿವೆಯೆಂದೂ, ರಾಜ್ಯಕ್ರಾಂತಿ ಚಳವಳಿಯು ಕೇವಲ ಬಂಗಾಲದಲ್ಲಷ್ಟೇ ಇರದೆ, ಅದು ಹಿಂದುಸ್ಥಾನದಲ್ಲೆಲ್ಲ ಹಬ್ಬಿಕೊಂಡಿದೆಯೆಂದೂ ಹೇಳಿ, ಆ ಮಸೂದೆಯನ್ನು ಪಾಸು ಮಾಡಲು ವಿನಂತಿ ಮಾಡಿಕೊಂಡರು.

ನಂತರದಲ್ಲಿ ಮತ ತೆಗೆದುಕೊಳ್ಳಲಾಯಿತು. ೬೪ ಜನರು, ಮತಾಧಿಕ್ಯದಿಂದ ತೆಗೆದು ಕೊಳ್ಳಲು ಅದನ್ನು ಎಲ್ಲ ಸಭಾಸದರ ಕಡೆಗೆ ಕಳಿಸಬೇಕಾಗಿ ಮತಕೊಟ್ಟರು. ೪೦ ಜನರು ಇದಕ್ಕೆ ವಿರುದ್ಧ ನಿಂತುಕೊಂಡರು.

ಬಾದಶಹರ ಹುಟ್ಟಿದ ದಿನವನ್ನು ಪಾಲಿಸಲಿಲ್ಲವೆಂದು

ಬಾದಶಹರ ಹುಟ್ಟಿದ ದಿನವನ್ನು ಶ.ಭರಿಸ ಬೇಕಾಗಿ ಆಚರಿಸಲಿಲ್ಲವೆಂದು ಅವರ್ [illegible] [illegible] [illegible] ಗಳ ಹಿಂದೆ ಠರಾವು [illegible] ಮಾಡಿ ಅದನ್ನು ಕಮೀಶನರರ ಕಡೆಗೆ ಒಪ್ಪಿಸಲಾಗಿ ಕಳಿಸಿದ್ದರು. ಕಮೀಶನರರು ನೋಡಿಕೊಂಡು "ಹೀಗೆ ಮಾಡುವುದು ಜಾರ್ಜ ಬಾದಶಹರಿಗೆ ಅಪಮಾನಸ್ಪದವಾಗಿದೆ. ಕಾರಣ [illegible] ವಿಚಾರ ಮಾಡಿರಿ" ಎಂಬುದಾಗಿ ಬರೆದ ಕಳಿಸಿದರು. ಮ್ಯುನಿಸಿಪಾಲಿಟಿಯವರು ತಾ॥ [illegible]ನೆಯ ದಿವಸ ಸಭೆಯಲ್ಲಿ ಸೇರಿ, ಆ ಬಗ್ಗೆ ಪುನಃ ವಿಚಾರ ಮಾಡಿ, ಜಾರ್ಜ ಬಾದಶಹರ ಅಪಮಾನವಾದರೂ ನಮ್ಮ ಇಚ್ಛೆ [illegible] [illegible] [illegible] ಸುವದೇ ನಮ್ಮ [illegible]ವಾಗಿದೆ ಎಂದು ಕಾರಣ [illegible] ನೊದಲಿನಂತೆ ಮತ್ತೆ ನಿರ್ಧರಿಸಿಕೊಂಡರು.

ಮದ್ರಾಸದಲ್ಲಿ ಕಾಂಗ್ರೆಸ್ ಸಂಸ್ಥೆಗಳಮೇಲೆ ಗದೆ

ಮದ್ರಾಸದಲ್ಲಿ ಈಗ ಕೆಲವು ದಿನ [illegible] ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಜೋರಾಗಿ ಸಾಗಿದ್ದರಿಂದ ಅಲ್ಲಿಯ ಅಧಿಕಾರಿಗಳು ಒಪಿಸ್ಕಾರ ಮಂಡಳ ಹಾಗೂ [illegible] [illegible] [illegible] ಮಂಡಳ ಇವುಗಳನ್ನು, ಶ್ರೀ. [illegible] ಲವೆಂಡ್ಮೆಂಟ ಕಾನೂನಿನ [illegible] ಕಾಯಿದೆಗೆ ವಿರುದ್ಧವಾದವುಗಳನ್ನಾಗಿ ಮಾಡಿದ್ದಾರೆ.

ಚೀನದೇಶದ ಬರಗಾಲದ ಹಾಹಾಕಾರ! ೨೦ ಲಕ್ಷ ಜನರು ಮರಣ ಹೊಂದಿದರು

ಚೀನ ದೇಶದ ಶೆನ್‌ಸಿ [illegible] ಪ್ರಾಂತದಲ್ಲಿ ಬರಗಾಲದ ಬಾಧೆಯನ್ನು ಸಹಿಸಲಾರದೆ ಕಳೆದ ಕೆಲವು ವರ್ಷಗಳಲ್ಲಿ ೨೦ ಲಕ್ಷ ಜನರು ಮರಣಹೊಂದಿದರೆಂದೂ, [illegible] ಲಕ್ಷ ಜನರು ಗುಲಾಮರಂತೆ ಮಾರಲ್ಪಟ್ಟರೆಂದೂ [illegible] ವರ್ತಮಾನ ಪ್ರಸಿದ್ಧವಾಗಿದೆ.

ಪಂಡಿತ ನೀಲಕಂಠದಾಸರಿಗೆ ೧ ತಿಂಗಳ ಸಾದಾ ಶಿಕ್ಷೆ

ಮ್ಯಾಜಿಸ್ಟ್ರೇಟರು ಹೊರಡಿಸಿದ ೧೪೪ ನೆಯ ಕಲಮನ್ನು ಅಮಾನ್ಯಮಾಡಿ ಭಾಷಣ ಮಾಡಿದ್ದಕ್ಕಾಗಿ ಒರಿಸಾದ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಪಂಡಿತ ನೀಲಕಂಠದಾಸರಿಗೆ ೧ ತಿಂಗಳ ಸಾದಾ ಶಿಕ್ಷೆಯು ದೊರಕಿದೆ.

ಸೌಲಾನಾ [illegible] ಸ್ಟೇಶನದಲ್ಲಿ ದಸ್ತಗಿರಿ ಮಾಡಿದರು

ಪಂಜಾಬ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕಾದೀರ ಕಸೂರಿಯವರ ಫೆಬ್ರುವರಿ [illegible] ದಿಂದ ಎಲ್ಲಿಗೋ ಹೋಗುತ್ತಿರಲು, ಪೋಲೀಸ ಅಧಿಕಾರಿಗಳು ದಿಲ್ಲಿಯ ಸ್ಟೇಶನದಲ್ಲಿ ಅವರನ್ನು ಝಡತಿ ಮಾಡಿ, ವರ್ಕಿಂಗ ಕಮಿಟಿಯ ಕಚೇರಿಯಿಂದ ಅವರಿಗೆ ಬಂದ ಕೆಲವು ಪತ್ರಗಳನ್ನು ತೆಗೆದುಕೊಂಡು ಹೋದರು.

ಬ್ಯಾಂಕು ಬಡ್ಡಿ ಬರಿಂಗದ ಹೊಸ ವ್ಯವಸ್ಥೆ

ನಮ್ಮಲ್ಲಿ ಗೌರ್ನಮೆಂಟ [illegible] ಹಿತ ಅತ್ಯಂತ ಸಮಾನ [illegible] ಕೆಲವು ಸಂಪೂರ್ಣ [illegible] [illegible] ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸ ಗಳನ್ನು [illegible] ಇಡುವ ಮತ್ತು ರೂಪಾಯಿ [illegible] ಪಾಕೀಟುಗಳನ್ನು ಕೊಳಗಳಿಂದಲೂ ಮತ್ತು ಬಟ್ಟೆಯಿಂದಲೂ ತಯಾರಿಸಿ ಕೊಡುವೆವು. [illegible] ಫೋಟೋ [illegible] [illegible] ದ ಬಟ್ಟೆಗಳನ್ನು ಮಾರಾಟಕ್ಕೆ [illegible] ಇಟ್ಟಿದ್ದೇವೆ. ವ್ಯಾಪಾರಸ್ಥರಿಗೆ ಕಡಿಮೆ ದರದಿಂದ ಸಿಕ್ಕಲಾವು [illegible]. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉಡಪೀಕರ

ಪ್ರೊಪ್ರಾಯಿಟರ [illegible] [illegible] ಬಾಯಿಂಡಿಂಗ ವರ್ಕ್ಸ ಹೊಸಪೇಟೆ [illegible] ಬಿಲ್ಡಿಂಗ ವಿಜಾಪೂರ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ, ಬಾಗಲಕೋಟೆ.

ಸ್ಯಾಂಪಲ್) ಮತಿ ಚೀಟಿಗಳು (ಪುಕ್ಕಟೆ

ಸೀಲು [illegible], ಕೆಂಪು, ಜಾಂಬಳ ಮತಿ ಚೀಟಿಗಳು ದೊರೆಯುತ್ತವೆ.

[illegible] ಬಾಟಲಿಗೆ ೨—೦—೦

[illegible]

೫ ಸಾ[illegible], ೧[illegible]—೦ [illegible] ೧-೦-೦

೫ ತೊಲದ ಪಾಕೀಟ ಗಳಿಗೆ ೧—೨-೦-೦

ರೈಟಿಂಗ ಸ್ಟ್ಯಾಂಪ ವ ೩½ ಔನ್ಸ ೧೨ ಜನ ಬಾಟ್ಲಿಗೆ } ೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಮಾತ್ರಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ಮುಂತಾದ ದುರಸ್ತಿ ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಬೆನ್ಸನ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ [illegible] ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ

[illegible] [illegible] ಬಾಗಲಕೋಟೆ

ವಾಚು, ಟಾಯಿಂಪೀಸ ದುರಸ್ತಿಮಾಡಿಸುವವರಿಗೆ ಸುಸಂಧಿ



ನಮ್ಮಲ್ಲಿ ಎಲ್ಲ ನಮೂನೆ ಹಾಗು ವೇಶರಗಳ ವಾಚು ಟಾಯಿಂಪೀಸ ಗ್ರಾಮೋಫೋನ ಮುಂದಲಾದವುಗಳನ್ನು ಬಹಳ ಸೋವಿಯಾದ ದರದಿಂದ ಉತ್ತಮವಾದ ರೀತಿಯಿಂದ ದುರಸ್ತಿ ಮಾಡಿಕೊಡುತ್ತಿದ್ದೇವೆ, ಹೊಸ ವಾಚ, ಟಾಯಿಂಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತಿ ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ

ವಿಳಾಸ— ಆರ್. ಡಿ, ಸಿಂಧೆ.

ವಾಚ ರಿಪೇರಿ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಇದು ಶ್ರೀ [illegible] ವೆಂಕಟೇಶ [illegible] ಕನ್ನಡಿಗ ಕಛೇರಿ [illegible] ಬಾಗಲಕೋಟೆ ವಿದ್ಯಾಭ್ಯಾಸ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

परवशं दुःखं । यद्यदात्मवशं सुखम् ।। – मनु.



ಸಂಪಾದಕರು:– ವೆಂಕಟೇಶ ಶೇಷುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಸೋಮವಾರ ತಿಥಿ ಮಾಘ ಶುದ್ಧ ೭ ಶಕೆ ೧೮೫೨ ತಾ॥ ೨೬—೧—೩೧ [ಸಂಚಿಕೆ ೧೭೪

ಮಹಾತ್ಮಾ ಗಾಂಧಿಯವರ ಬಿಡುಗಡೆ

ಮುಖ್ಯ ಪ್ರಧಾನರು ವ್ಯಕ್ತಪಡಿಸಿದ ಧೋರಣದ ಸಂಬಂಧವಾಗಿ ವಿಚಾರ ಮಾಡುವ ಕುರಿತು, ಮಹಾತ್ಮಾ ಗಾಂಧಿ ಹಾಗು ಕೆಲವು ಕಾಂಗ್ರೆಸ್ ಮುಂದಾಳುಗಳನ್ನು, ಸರಕಾರದವರು ಬೇಗನೆ ಬಿಡುಗಡೆ ಮಾಡುವ ಹಾದಿಯಲ್ಲಿ ಇದ್ದರೆಂದು ತಿಳಿಯುತ್ತದೆ. ಈ ಸುದ್ದಿಯಿಂದಾಗಿ ಪುಣೆ, ಮುಂಬಯಿ, ದಿಲ್ಲಿ, ಅಹಮ್ಮದಾಬಾದ ಮೊದಲಾದ ಕಡೆಗಳಲ್ಲಿ ವಿಶೇಷ ಉತ್ಸಾಹ ಹಬ್ಬಿಕೊಂಡಿದೆ.

ವ್ಹಾಯಿಸರಾಯರ ಕಾರ್ಯಕಾರಿ ಮಂಡಳದವರು ತಾ॥ ೨೪ನೆಯ ದಿವಸ ಸಭೆಯಲ್ಲಿ ಸೇರಿ, ರಾಜಕೀಯ ಕೈದಿಗಳ ಬಿಡುಗಡೆಯ ಸಂಬಂಧವಾಗಿ ಪ್ರಾಂತಿಕ ಸರಕಾರದವರು ಮಂಡಿಸಿದ ಅಭಿಪ್ರಾಯಗಳನ್ನು ವಿಚಾರ ಮಾಡಿದರು. ವ್ಹಾಯಿಸರಾಯರು ಈ ಬಗ್ಗೆ ಬೇಗನೆ ತಮ್ಮ ಧೋರಣವನ್ನು ವ್ಯಕ್ತಪಡಿಸುವರೆಂದು ತಿಳಿಯುತ್ತದೆ.

ಮಹಾತ್ಮರನ್ನು ಬಿಡುಗಡೆ ಮಾಡಿದ್ದಾರೆಂಬ [illegible] ಅಹಮ್ಮದಾಬಾದದಲ್ಲಿ ದಟ್ಟವಾದ ವಾರ್ತೆ ಇದೆ.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿರಿ.

ಲಂಡನದಲ್ಲಿರುವ “ಕಾಮನ್ ವೆಲ್ಥ ಆಫ್ ಇಂಡಿಯಾ ಸಂಘ”ದ ೨೩ ಜನ ಸಭಾಸದರು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ ದಬ್ಬಾಳಿಕೆಗಳನ್ನು ನಿಲ್ಲಿಸಬೇಕೆಂದು ಮುಖ್ಯ ಪ್ರಧಾನರಿಗೂ [illegible] ವಿನಂತಿ ಮಾಡಿಕೊಂಡಿದ್ದಾರೆ. ಜಾರ್ಜ್ ಲ್ಯಾನ್ಸಬರಿ, ಫೆನರ್ ಬ್ರಾಕ್‌ವೇ, ಸಿ. ಪಿ. ಟ್ರೆವೆಲಿಯನ್ [illegible] ಒಂದು [illegible] ತೆರೆದು [illegible] ಈ ಬಗ್ಗೆ [illegible] ಬಿಡುಗಡೆ [illegible] ಗಳ [illegible] ಸಂಘದವರು [illegible] ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿ [illegible] ಮಹಾತ್ಮಾ [illegible] ಅವರನ್ನು [illegible] ವ್ಯಕ್ತಿಗಳು [illegible] ಕೇಳಿಕೊಂಡರು.

ಸೋಲ್ಜರಿಯು ಲೂಟಿ ಮಾಡಿದರು

[illegible] ಲೂಟಿ ಕಾಲೇಜ [illegible] ತಿಂಗಳ ಮಧ್ಯದಲ್ಲಿ [illegible] ತಾ॥ ೨೦ನೆಯ ದಿವಸ ಕೆಲವು ಜನ [illegible] ಅವನ್ನು ಹತ್ತಿದರು. ಅವರ [illegible] ಒಡೆದು [illegible] ಒಬ್ಬನ ಗಾರ್ಡನ್ನ ಮೇಲೆ ಹಲ್ಲೆ ಮಾಡಿ, ಪಿಸ್ತೂಲ ಹಾರಿಸಿದರು. [illegible] ಅವನಿಗೆ ತಗುಲಲಿಲ್ಲ. ಪ್ರವಾಸಿಗರು [illegible] ಸರಕಾರದವರು [illegible] ಹೇಳಿದರು. ಗಾರ್ಡನು ಗಾಡಿ [illegible] ಇಷ್ಟರಲ್ಲಿಯೇ ಅವರು ಟಪಾಲ ಡಬ್ಬಿಯೊಳಗಿನ ಸಾವಿರಾರು ರುಪಾಯಿ ಬೆಲೆಬಾಳುವ ಒಡವೆಗಳನ್ನು ತೆಗೆದುಕೊಂಡು ಹೋಗಿದ್ದರು.

ಪೇಶಾವರದಲ್ಲಿ ಬಾಂಬು ಹಾರಿತು.

ಕಂಡಿ ಎಸ್ ವೇಳೆಗಾಡಿಯು ಪೇಶಾವರ ಸ್ಟೇಶನಕ್ಕೆ ಹೊರಡುತ್ತಿರುವಾಗ ತಾ॥ ೨೩ನೆಯ ದಿನ ಶಾಹಿಬಾಗ ಕಾಲೇಜಿನ ಹತ್ತಿರ ಒಬ್ಬನು ಒಂದು ಬಾಂಬು ಹಾರಿಸಿದನು. ಯಾರಿಗೂ ಅಪಾಯವಾಗಲಿಲ್ಲ.

ಡಾ, ಬ್ಯಾಲಿಗ್, ಕೆರ್ಲೂರ್, ಸದಕಿ ಮೊದಲಾದವರಿಗೆ ಬಿಡುಗಡೆ

[illegible] ಆರು ತಿಂಗಳ [illegible] ಕೈದಿಗಳ [illegible] ಗಳನ್ನು [illegible] ಅವರನ್ನು [illegible] ಡಾ. [illegible] ಮತ್ತು [illegible] ಶ್ರೀ [illegible] ಕರೂರ [illegible] ಗಳನ್ನು ದಿನದಿಂದ ಬಿಡುಗಡೆ ಹೊಂದಿರುವರು.

ಇತರವೃತ್ತ

ನಿನ್ನಿನ ದಿವಸ ಆಲೂರ ಜಾತ್ರೆಯಲ್ಲಿ ರಾಷ್ಟ್ರಧ್ವಜವಂದನೆಯ ಸಮಾರಂಭವು ಜರುಗಿತು.

ಗುಜರಾಥದಲ್ಲಿ ಅಧಿಕಾರಸ್ಥರ ಅನನ್ವಿತ ಕೃತ್ಯಗಳು

(ಪುಣೆಯ ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನರವರ ಲೇಖನದ ಅನುವಾದವು)

(ಹಿಂದಿನ ಅಂಕದಿಂದ ಸಾಗಿದ್ದು)

ಗ್ರಾಮತ್ಯಾಗವು:—

ಬೋರಸಾದ ತಾಲೂಕಿನ ಹಳ್ಳಿಗಳೂ ಬಡೋದಾ ಸಂಸ್ಥಾನದ ಹಳ್ಳಿಗಳೂ ಹೆಣಿಕೆ ಹಾಕಿದ ತೆರನಾಗಿ ಕೂಡಿಕೊಂಡಿರುವವು. ಹೀಗಿರುವದರಿಂದ ಅಲ್ಲಿಯ ರೈತರಿಗೆ ತಮ್ಮ ಹಳ್ಳಿಗಳನ್ನು ಬಿಟ್ಟು ಸಂಸ್ಥಾನದ ಸೀಮೆಯನ್ನು ಸೇರಲು ಅನುಕೂಲವಾಗಿದೆ. ಇಂಥ ಅನೇಕ ಪರಿತ್ಯಕ್ತ ನಿರ್ಜನ ಹಳ್ಳಿಗಳನ್ನು ನಾವು ಮಾರ್ಗದಲ್ಲಿ ಸಂದರ್ಶಿಸಿದೆವು. ಸುತ್ತುಮುತ್ತಲು ಹುಲ್ಲಿಗೆ ಹಸರು ಮುಸುಕುತ್ತಿರುವ ತಂಬಾಕದ ಹೊಲಗಳು, ಅವುಗಳ ಮಧ್ಯದಲ್ಲಿ ಗಿಡಗಳ [illegible]ನಲ್ಲಿ ಅಡಗಿದ್ದ ಆ ಹಳ್ಳಿಯ ಸೌಧ ಗೃಹಗಳ ಬೈಲ ಗೋಡೆಗಳು, ಆ ಮನೆಗಳ ಬಾಗಿಲದ ಮೇಲ್ಚಾವಣಿಗಳು, ಇವುಗಳಿಂದ ಶೋಭಿಸುತ್ತಿರುವ [illegible]ವನು ನಾನು ದೂರಿಂದಲೆ ನೋಡಿದೆನು. ಎಲ್ಲ ಮನೆಗಳು ಗಟ್ಟಿಯಾಗಿದ್ದು, ಗೋಡೆಗಳ ಮೇಲೆ ಅನೇಕ ತರದ ಆಹ್ಲಾದಕರವಾದ ಚಿತ್ರಗಳನ್ನು ತೆಗೆದಿರುವರು. ಆ ಮನೆಗಳ ಕಟ್ಟಿಗೆಯ ಬಾಗಿಲುಗಳ ಮೇಲೂ ಉತ್ತಮವಾದ ಕೆತ್ತಿಗೆಯ ಕೆಲಸವಿದೆ. ಈ ಪರಿಯಾಗಿ [illegible] ತಮ್ಮ ಭೋಗಗೃಹಗಳನ್ನು ಬಿಟ್ಟು ಹುಲ್ಲು [illegible] ಗಾಳಿಗಳನ್ನು ಎದುರಿಸಲು ಸಿದ್ಧರಾಗಿ, ಇಲ್ಲಿಯ ರೈತರೆಲ್ಲರೂ ಅರಣ್ಯದ ಪರ್ಣಕುಟೀರಗಳಲ್ಲಿಯೇ ಆನಂದದಿಂದ ವಾಸಿಸಹತ್ತಿರುವರು. ಈ ಜೋಗಾಳಿಗಳಲ್ಲಿ ಇಂಥ ಚಪ್ಪರಗಳಲ್ಲಿ ಕಾಲಕಳೆಯಬೇಕೆಂದರೆ ನಿಮಗೆ ಎಷ್ಟೊಂದು ಕಷ್ಟವಾಗುತ್ತಿರಬಹುದಲ್ಲವೆ! ಎಂದು ನಾನು ಎಷ್ಟು ಸಾರೆ ಕೇಳಿದರೂ, ಆ ಧೀರೋದಾತ್ತರು ಅವನ್ನು, ರಾಷ್ಟ್ರದ ಸ್ವಾತಂತ್ರ್ಯ ಸಂಪಾದನೆಯ ಮುಂದೆ ನಮ್ಮ ಈ ಕಷ್ಟನಷ್ಟಗಳು ಯಾವ ಗಿಡದ ತಪ್ಪಲು! ಎಂದು ಬಹಳ ಸಂತುಷ್ಟಿಯಿಂದ ಹೇಳುತ್ತಿದ್ದರು. ಸ್ತ್ರೀ ಪುರುಷರು, ಹುಡುಗರು, [illegible], ಗುಜರಾಥದಲ್ಲಿ [illegible] ಎಂದು ಎಲ್ಲೆಲ್ಲಿಯೂ ಹಬ್ಬಿ ಬಿಟ್ಟಿರುವ ಭಾವಗಳ ಮೇಲಿಂದ, ಗುಜರಾಥದ ರೈತರ ಮನೋನಿಶ್ಚಯವು ಮತ್ತು ಧೈರ್ಯವು ಎಷ್ಟಿದೆಯೆಂಬುದನ್ನು [illegible]ಳ್ಳುವಂತಿದೆ. ಈ ಅವರ ಚಪ್ಪರಗಳ [illegible] ಒಳ್ಳೇ [illegible] "ಸರ್ವಾಧಿಕಾರಿಯಾಗಿ ಚಚ್ಚಿಕಟ್ಟಿದ್ದು, ಸರ್ವಾಧಿಕಾರಿಯಾಗಿ

ಹೊರಟ ಸ್ತ್ರೀಯರ ಸಾಲಿನಂತೆ [illegible] ಕಾಣುತ್ತಿವೆ. ಈ ಮೂರೂ ತಮ್ಮ ಹೆಂಗಸರು ಹುಡುಗರು ಸಣ್ಣವರನ್ನೂ, ರಾತ್ರಿಯಲ್ಲಿ ಪೊಲೀಸರು [illegible] ಬೀಳುವರೋ ಎಂಬ ಭೀತಿಯು ಅವರ ಬೆನ್ನು ಹತ್ತಿಯೇ ಇದೆ. ನಮ್ಮ ಬಸಳು ಬಾಳುವೆ, ಹೊಲಮನೆಗಳು ಜಪ್ತಿಯಾಗು[illegible]ಟಿಗೆ ಸಿಕ್ಕು ಆಚೆಗೆ ಕೊಡಲ್ಪಡಬಹುದೆಂಬ ಗಂಡಾಂತರದ [illegible] ಪೂರ್ಣವಿದೆ. ಕಾರಣ ಅವರ ಆ ಅಂತಃಕರಣದ ಮುಖಮುದ್ರೆಗಳಲ್ಲಿ ಉದ್ವಿಗ್ನತೆಯು [illegible] ಇರುವದು ಸಹಜವಾಗಿದೆ.

ನಾನು ಈ ಲೇಖನವನ್ನು ಬರೆದದ್ದು ಕ್ರಿಸ್ತಮಾಸ ಹಬ್ಬದ ಅಂದರೆ ಡಿಸೆಂಬರ ೨೪ ನೆಯ ತಾರೀಖಿನ ದಿವಸ. ರೋಮನ್ ಜನರಲ್ಲಿ [illegible] ಒಬ್ಬರನ್ನೊಬ್ಬರು ಎದುರಿಸಿ ಇರಿದು ಕೊಲ್ಲುವ ಮಲ್ಲಯುದ್ಧಗಳ ಕ್ರೂರ ರಾಕ್ಷಸೀ ಕೋಪಿಯ ಸಂಪ್ರದಾಯವನ್ನು ನಿಲ್ಲಿಸಬೇಕೆಂದು ಟೆಲಿಮ್ಯಾಕಸ್ ನೆಂಬ ಕ್ರಿಶ್ಚಿಯನ್ ಸನ್ಯಾಸಿಯೊಬ್ಬನು, ಇಂದಿಗೆ ೧೫೦೦ ವರ್ಷಗಳ ಹಿಂದೆ ರೋಮ ಪಟ್ಟಣಕ್ಕೆ ಹೋಗಿ ಅವರಿಗೆ ಪ್ರೇಮವಾದ ಪದ್ಧತಿಯಿಂದ ಬೋಧಿಸಿದನು. ಆದರೆ ಅಲ್ಲಿ ನೆರೆದಿದ್ದ ಜನಜಂಗುಳಿಯು ಕ್ರೋಧಾವೇಶಕ್ಕೆ ಗುರಿಯಾಗಿ ಅವರಿಂದ ಕಲ್ಲು ಒಗೆಕೆ [illegible] ಸತ್ತು ಕೊನೆಗೆ ತನ್ನ ಶರೀರದ ಕೊನೆ [illegible] ಬಿಟ್ಟುಕೊಂಡು [illegible] ಕನ್ನ ಸಹದೇವನಿಗೆ ಪ್ರಾಣಬಿಡುವ ಸಮಯದಲ್ಲಿ ಅವನು "ಶಾಂತಿಯು ದೊರೆಯಲಿ! ಜಗತ್ತಿನಲ್ಲಿ ಶಾಂತಿಯುಂಟಾಗಲಿ! ಶಾಂತಿ" ಎಂದು ಹೇಳಿ ಪ್ರಾಣಬಿಟ್ಟನು.

ದಂಡಿನ ಠಾಣೆಯಲ್ಲಿ

ಮಹಾತ್ಮರ ಜಯಜಯಕಾರ.

(ಸ್ವಂತ ಸುದ್ದಿಗಾರರಿಂದ)

ಹಿರೇಬಾಗೇವಾಡಿಯಲ್ಲಿ ಮಂಗಳವಾರ ತಾ|| ೨೨ ನೆಯ ದಿವಸ ಇಲ್ಲಿ ಲಷ್ಕರದ ಪಲಟಣಗಳ ಮೇಲೆ ಬೀಡು ಬಿಟ್ಟಿತ್ತು. ಲಷ್ಕರ ಬರುವ ಮುಂಚಿತವಾಗಿಯೇ ಬೆಳಗಾವ ತಾಲೂಕದ ಮಾಮಲೇದಾರರಾದ ರಾಜೇಸಾಹೇಬರ ಮತ್ತು ಮುತ್ತಲಿನ ಹಳ್ಳಿಯ ಪಾಟೀಲ ಠಾಣೇದಾರರುಗಳಿಗೆ ಇಲ್ಲಿ ಲಷ್ಕರ ಬರುವದೆಂದು ಠಾಣೇದಾರರಿಗೆ ಇಲ್ಲ

ಮೊದಲೇ ಡಂಗುರ ಹೊಡಿಸಿದ್ದರು. ಆ ಪ್ರಕಾರ ಹಳ್ಳಿಯ ಯಾವತ್ತು ಜನರು ಕೂಡಿದ್ದರು. "ಬಂದವರಲ್ಲಿ ಕತ್ತಿ ಹಿಡಿಯುವರು ಇದ್ದರೆ ನಮ್ಮ ಲಷ್ಕರ ಕೂಡ ಹಿಡಿಸಿದರೆ ಇನಾಮು ಕೊಡುತ್ತೇವೆ" ಎಂದು ಅವರು ಹೇಳಿದರು. ಆ ಪ್ರಕಾರ ಬಾಗೇವಾಡಿಯೊಳಗಿನ ೬ ಹುಡುಗರು ಕತ್ತಿ ಹಿಡಿದು, ಲಷ್ಕರದವರನ್ನು ಒಗೆದರು. ಆ ನಂತರ ಜಗ್ಗಾ ಜಗ್ಗಿ [illegible] ನಡೆಯಿತು. [illegible] ಜನರು ಒಕ್ಕಟ್ಟಿಗೆ ಮತ್ತು ಭಂಡ [illegible] ಒಕ್ಕಟ್ಟಿಗೆ ಜಗ್ಗಲಾರಂಭಿಸಿದರು. ಆದರಲ್ಲಿ ಊರಿನವರು ಎರಡು ಸಾರೆ ಸೋತರು. [illegible]ದಲ್ಲಿ [illegible] ಜಡವಾಗಿ ಬಿಂತು. ನಮ್ಮ ಭಾರತ [illegible]ಣರೇ ಜಯಶಾಲಿಗಳಾದರು. ಇಷ್ಟಾದ ಮೇಲೆ ಮಹಾತ್ಮರ ಜಯ ಜಯಕಾರವಾಯಿತು. ಸರಕಾರೀ ಪಕ್ಷದವನ ದ[illegible]ಪ್ಪ ಎಂಬುವವನೊಬ್ಬನು ಜಯ ಜಯಕಾರ ಮಾಡಬೇಡಿರಿ ಅಂದನು. ಕೂಡಿದ ಜನರು ಅವನ ಮಾತನ್ನು ಲಕ್ಷ್ಯಕ್ಕೆ ತಾರದೆ ಮಹಾತ್ಮರ ಜಯ ಜಯಕಾರವನ್ನು ಮತ್ತಷ್ಟು ಮಾಡಿದರು.

ಇಲ್ಲಿಯ [illegible] ಕಿರುವಿಯು ಗೊಬ್ಬರವನ್ನು ಮಾರುವದಿಲ್ಲವೆಂದು ಪ್ರತಿಜ್ಞೆ ಮಾಡುತ್ತಿದ್ದಾರೆ. ಕಾಳು ಕಡಿ ಅಂಗಡ ಮಾಲಕರು ನಮಗೆ ಸರಕಾರಿ ಶೆಂಗಿನವರನ್ನು ಕೊಡುವದು ಆಗುವದಿಲ್ಲವೆಂದ ಊರ ಜನರು ಮೊಹಬೂಬನ [illegible] ಸಾಹೇಬ ದೇಗಾವ ಇವರ ಕಡೆಗೆ [illegible] ಮಾಡುತ್ತಾರೆ. ಈ ಊರಲ್ಲಿ ಪರದೇಶಿ ಮಾಲಿನ ಬಹಿಷ್ಕಾರವು ಬಹಳ ಜೋರಿನಿಂದ ನಡೆದಿತ್ತು. ಹಿಂದಿನ ಗೆಬ್ಬೋಬಡಿಯ ಬಗ್ಗೆ ೧೫ ಜನರ ಮೇಲೆ ಪಟ್ಟಿ ಹಾಕಿದ್ದು, ವಿಚಾರಣೆಯು ತಾ ೨೮ ನೆಯ ದಿವಸ ಇರುತ್ತದೆ. ಇಲ್ಲಿ [illegible] ಜನರು ಈ ಹಿಂದಲೇ ಸ್ವರಾಜ್ಯ ಆತ್ಮ[illegible]ದಲ್ಲಿ ಇರುತ್ತಾರೆ.

ಧಾರವಾಡ [illegible] ಸುಪ್ರಸಿದ್ಧ ಡಾಕ್ಟರರು, ಕರ್ನಾಟಕಾಭಿಮಾನಿಗಳೂ ಆದ ಡಾ|| [illegible] ರಾಘವೇಂದ್ರರಾಯರು ಮೊನ್ನಿನ ದಿವಸ ಧಾರವಾಡದಲ್ಲಿ ಸ್ವರ್ಗಸ್ಥರಾದರೆಂಬ ತಿಳಿಸಲು [illegible] ದುಃಖವಾಗುತ್ತದೆ. ಇವರು ನಾಡಹಬ್ಬ, ವಿದ್ಯಾವರ್ಧಕ, [illegible] ಶಾಂತೇಶ ಮೊದಲಾದ ಸಾರ್ವಜನಿಕ ಉತ್ಸವಗಳಲ್ಲಿ ಬಹಳೇ ಉತ್ಸಾಹದಿಂದ ಭಾಗ ತೆಗೆದುಕೊಳ್ಳುತ್ತಿದ್ದರಲ್ಲದೆ, ಅಲ್ಲಿಯ ಶಿಕ್ಷಕಾಲಯಗಳ ಉಪಾಧ್ಯಕ್ಷರಾಗಿಯೂ ಮನ್ನಣೆ ಹೊಂದುತ್ತಿದ್ದರು. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಮುಖ್ಯಪ್ರಧಾನರು ಹಣ್ಣಿನ ಮೇಲೆ ಬರೆಕೊಟ್ಟರು

ಮುಖ್ಯ ಪ್ರಧಾನರಾದ ಮಿ. ಚರ್ಚಿಲ್ ಸಾಹೇಬರು [illegible] ಪರಿಷತ್ತಿನಲ್ಲಿ ಓದಿದ ಜಾಹೀರನಾಮೆಯ ವಿಷಯವಾಗಿ ಶ್ರೀ ವಲ್ಲಭಭಾಯಿಯವರು ಕೆಳಗಿನಂತೆ ಅಭಿಪ್ರಾಯ ಕೊಟ್ಟಿದ್ದಾರೆ:—

ಮುಖ್ಯ ಮಂತ್ರಿಗಳ ಜಾಹೀರನಾಮೆಯು ತುಂಬಾ ತಿರಸ್ಕರಣೀಯವಾಗಿದೆ. ಅವರು ಹೀಗೆ ಜಾಹೀರನಾಮೆ ಹೊರಡಿಸಿ ಹಣ್ಣಿನ ಮೇಲೆ ಬರೆಕೊಟ್ಟಿದ್ದಾರೆ. ಈಗ ೭೦೦೦೦ಕ್ಕಿಂತ ಹೆಚ್ಚು ಜನ ಕಾಂಗ್ರೆಸ್ ಕಾರ್ಯಕರ್ತರು ಸೆರೆಮನೆ ಸೇರಿರುವರು. [illegible] ಧಾರಿಸಿದ ರಾಷ್ಟ್ರಕ್ಕೆ ಅಗೌರವವಾಗಿರುವ ರೀತಿಯಲ್ಲಿ ಅಧಿಕಾರಿಗಳು ಅವರನ್ನು ನಡೆಸಿಕೊಳ್ಳುತ್ತಿರುವರು. ದಯೆ, ಸೌಜನ್ಯ, ನಯ, ನೀತಿ, ಮೊದಲಾದವುಗಳನ್ನು ಮರೆತುಬಿಟ್ಟ ಪೋಲೀಸರು ದೇಶದಲ್ಲೆಲ್ಲ ಲಾಠಿ ರಾಜ್ಯವನ್ನು ಪ್ರಾರಂಭಿಸಿರುವರು. ಮೇಲಿಂದಮೇಲೆ ಒಂದಿಲ್ಲೊಂದು ಕಡೆ ಅನ್ಯಾಯವಾಗಿ ಗೋಳೀಬಾರುಗಳು ಆಗುತ್ತಿವೆ. 'ಸಾರ್ವಜನಿಕ ಅರ್ಜಿ, ವಿನಂತಿ, ಪ್ರಾರ್ಥನೆ ಮೊದಲಾದವುಗಳನ್ನು [illegible] ಮೇಲೆ ಹಾಕಿಕೊಳ್ಳದೆ ನೂರಾರು ಜನ [illegible] ಗುಂಡಿಕ್ಕಿದರು. [illegible] ಭಾಗಗಳಲ್ಲಿರುವ ಸಾವಿರಾರು ಜನ ಅಬಾಲವೃದ್ಧ ಸ್ತ್ರೀಪುರುಷರನ್ನು, [illegible] ಕಷ್ಟನಷ್ಟಗಳಿಗೆ ಗುರಿಮಾಡಿರುವರು. ಉಪ್ಪಿನ ಗಲಭೆಯಲ್ಲಿ ಅನೇಕರು ಭಯಂಕರ ಹಾನಿಗೀಡಾಗಿದ್ದು, ಅವರಲ್ಲಿ ಎಷ್ಟೋ ಜನರು ತುಂಬಾ ನಷ್ಟ ಹೊಂದಿದ್ದಾರೆ. ಸ್ವಾತಂತ್ರ್ಯ ಯುದ್ಧವು ಇಷ್ಟು ಸ್ವಾರ್ಥತ್ಯಾಗ ಪೂರ್ವಕವಾಗಿಯೂ, ಇಷ್ಟು ಆತ್ಮಾರ್ಪಣ ಬುದ್ಧಿಯಿಂದಲೂ ಹಿಂದಕ್ಕೆ ಎಂದೂ ಸಾಗಿರಲಿಲ್ಲ. ದಬ್ಬಾಳಿಕೆಯ ಕ್ರೂರತನದ ಸಾವಿರಾರು ಕಾಯಿದೆಗಳನ್ನು ಹೊರಗೆ ತೆಗೆದು, ಅವುಗಳಿಂದ ಅತ್ಯಾಚಾರವನ್ನು ನಡೆಸುತ್ತಿದ್ದಾರೆ. ದೇಶದಲ್ಲಿಯ ಎಷ್ಟೋ ಕಾಂಗ್ರೆಸ್ ಹಾಗು ಇತರ ಸಂಸ್ಥೆಗಳನ್ನು ಕಾಯಿದೆಗೆ ವಿರುದ್ಧ ಮಾಡಿದ್ದಾರೆ. ಈ ಒತ್ತಾಯಕತೆಯ ಪರಿಣಾಮವು ಏನಾಗಿದೆಯೆಂದರೆ— ಬ್ರಿಟಿಶರೊಡನೆ ಕೂಡಿ ನಡೆಯುವದು ಸಾರ್ವಜನಿಕರಿಗೆ ಬೇಡಾಗಿದೆ.

ಈ ಸಂಬಂಧವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಕೇಳಿದೆವಾದಲ್ಲಿ ಬಹುಸಂಖ್ಯಾತರು ಬ್ರಿಟಿಶರ ಸಂಬಂಧವು ತಮಗೆ ಬೇಡವೆಂದೇ ಹೇಳುವರೆಂಬ ಬಗ್ಗೆ ಯಾವ ಸಂಶಯವೂ ಇರಲಿಕ್ಕಿಲ್ಲ. ಈ ಸಂಸ್ಕೃತಿ [illegible] ನಡೆಯುತ್ತಿರುವದು ಮಹಾತ್ಮಾ ಗಾಂಧಿಯವರಿಗೆ [illegible] ಸಂಪೂರ್ಣ [illegible] ಜನರನ್ನು [illegible] ನಾಯಕ, ಕಾಂಗ್ರೆಸ್ ಪಕ್ಷದವರ ಎರಡು ಪಕ್ಷದವರು [illegible] ದಾಗಿದ್ದ [illegible] ಜಾಹೀರನಾಮೆಯನ್ನು [illegible]. ಇವರ [illegible] ಯಾವುದೂ ಇಲ್ಲ. [illegible] ದಿನಾಲು [illegible] ಹಿಂದೀ [illegible] ಭೇಟಿಯಾಗಿದ್ದು [illegible] ಬೇಕಾಗಿದ್ದು [illegible] ವೇಳೆಯಲ್ಲಿ [illegible] ಸ್ವರಾಜ್ಯ ಇಲ್ಲವೆ ಕೊಡತಕ್ಕ ರೀತಿಯ ರಾಜ್ಯ ಎಂದು ಹೇಳಿದ ಮೇಲೆ ಘೋಷವಾಗಿದೆ. ಭಾರತೀಯ ಸಂಯುಕ್ತ ರಾಷ್ಟ್ರಗಳು ಹಿಂದೂಸ್ಥಾನ ಹಾಗು ಸಂಸ್ಥಾನ ಇವುಗಳ ವಿಚಾರದ ಪ್ರತಿನಿಧಿಗಳನ್ನು ಒಳಕೊಳ್ಳುವದಕ್ಕೆ ಆ ಯೋಜನೆಯಿಂದ ಹಿಂದಿ ಸ್ವಾತಂತ್ರ್ಯ [illegible]. ಮುಖ್ಯ ಪ್ರಧಾನರು ಈಗ ಹೇಳಿದ್ದನ್ನು ಕೇಳಿದರೆ [illegible] ನಿಜವಾದ ಸ್ಥಿತಿಗತಿಯನ್ನು ತಿಳಿದು ಬ್ರಿಟಿಶ ಸರಕಾರದವರು ವಿಚಾರ ಮಾಡಿದರೆ. ಒಡಂಬಡಿಕೆಯಾಗುವದು ಸಾಧ್ಯವೇ ಇಲ್ಲ. ಹೋರಾಟವು ಹೀಗೆಯೇ ಮುಂದುವರಿಯುವದು. ಏಕೆಂಬುದು ಇನ್ನು ಸ್ವಲ್ಪ ದಿನಗಳಲ್ಲಿಯೇ ಹೊರಬೀಳುವದು.

ಮುಖ್ಯ ಪ್ರಧಾನರು ಧೈರ್ಯವನ್ನು ತೋರಿಸಿ, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪದೆ ಹೋಗಿತ್ತು. ಅಂದರೆ ಅದು ಮುಖ್ಯ ಜನದ ಕಾರ್ಯವಾಗುತ್ತಿತ್ತು. ಸಾರ್ವಜನಿಕರ [illegible] ವಿಶ್ವಾಸವನ್ನು ಹೊಂದಲಾರದೆ [illegible] ಭೂತವಾಗುತ್ತಿತ್ತು.

ಭಾಯಿ ಪರಮಾನಂದ.

ಮಂತ್ರಿ [illegible] ಬರೆ [illegible]. [illegible] ಸ್ವರಾಜ್ಯಕ್ಕೆ ಸಂಬಂಧ [illegible] ರಲ್ಲಿ ಇರುವದಿಲ್ಲ. —ಅಮೃತ ಬಜಾರ ಪತ್ರಿಕೆ.

“ಬ್ರಿಟಿಶ ಮಂತ್ರಿಗಳು ನಿಜಾಂಶವ ಕೂಸನ್ನು ಹೆಕ್ಕರು

ಮುಖ್ಯ ಪ್ರಧಾನರ ಜಾಹೀರನಾಮೆಯ ಬಗ್ಗೆ [illegible] ದಿವಾಕರ [illegible] ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬ್ರಿಟಿಶ ಮಂತ್ರಿಗಳು [illegible] ಬಗ್ಗೆ [illegible] ದಂಡನೀತಿಯ [illegible] ಗಾಳಿಗೆ [illegible] ಸಿದ್ಧರಾಗಿರುವರು.

ಕಾಂಗ್ರೆಸ್ಸಿನವರು ಅದರ [illegible] ಕಾಂಗ್ರೆಸ್ಸಿನ ಅಧಿಕಾರಿಗಳು [illegible] [illegible] ಮುಂದಾಳುಗಳನ್ನು [illegible] ಸಂಧಾನ [illegible] ಕಾಂಗ್ರೆಸ್ [illegible] [illegible] ಬ್ರಿಟಿಶ [illegible] [illegible] ಇವು [illegible] ಕರ್ಮಕ್ಕೆ [illegible] ಕೊಡಲು [illegible] ಬರೆದು [illegible] ಸಂಧಾನಕ್ಕೆ [illegible] ವಿರೋಧಿಸಲಾಗುತ್ತಿರುವದನ್ನು ಅವರು [illegible].

ಉಪ್ಪಿನ [illegible] ಗಳ ಹಾವಳಿ ನಿಂತಿಲ್ಲ. ಧಾರ್ಮಿಕ ದಾಯಾದಿ ಅರ್ಥವಾಗಿಲ್ಲ ಆದಾಗ್ಯೂ ಪೆಟ್ಟಿಗೆಯ ಮೇಲಿನ ಅಧಿಕಾರವು ಕೊಡಲ್ಪಟ್ಟಿತು. ಮಹಾತ್ಮಾ ಗಾಂಧಿ ಜವಾಹರಲಾಲ ನೆಹರೂ ಇವರನ್ನು [illegible]. ಬಾಡಿಗೆಯ ಮುಂದಾಳುಗಳಿಗೆ [illegible] ನ [illegible] ಬಿಟ್ಟಿರುವ [illegible] ಬಂದವನ, ಯಾರು ಪ್ರಚಾರಕೊಡ ಮಾಡಿಕೊಳ್ಳಲಿ. ಯಾವ ಯಾದಿಯಿಂದ ಸಮಾಧಾನ ನಡೆದೀತು?

ಸಮಾಧಾನ ಪಡುವವರು ಪಡಲಿ, ಬೇಕಾದವರು ಹಿಂಸೆ ಮಾಡಲಿ, ದಡ್ಡತನದ [illegible] ಲೋಕಮಾನ್ಯರು [illegible] ಬ್ರಿಟಿಶ [illegible] ಇನ್ನು ತನ್ನ ಧ್ಯೇಯದ [illegible] ಸಮಾಧಾನ ಪಡಲಿಕ್ಕಿಲ್ಲವೆಂಬುದು ಸ್ಪಷ್ಟವು.

ಸುಭಾಷ ಬೋಸರಿಗೆ ಬಿಡುಗಡೆ.

ಮಾಲ್ಡಾ ಜಿಲ್ಹಾ ಮ್ಯಾಜಿಸ್ಟ್ರೇಟರು ಹೊರಡಿಸಿದ [illegible] ಆಜ್ಞೆಯನ್ನು [illegible] ದಿನಗಳ [illegible] ಕಾಂಗ್ರೆಸ [illegible] ಸುಭಾಷ ಬೋಸ [illegible] ಬಿಡುಗಡೆ ಮಾಡಿದ್ದಾರೆ.

ಅಸೆಂಬ್ಲಿಯಲ್ಲಿ ರಾಜಕೀಯ ಕೈದಿಗಳ ಬಿಡುಗಡೆ.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದಾಗಿ ಅಸೆಂಬ್ಲಿಯು [illegible] ಸಂಬಂಧವಾಗಿ [illegible] ದಿವಸ ಅಸೆಂಬ್ಲಿಯಲ್ಲಿ ಚರ್ಚೆ ನಡೆಯುತ್ತಿದ್ದೆ.

ಕಲಕತ್ತೆಯಲ್ಲಿ ಮುಖಂಡರನ್ನು ಹಿಡಿದರು.

ಕಲಕತ್ತೆಯ ಪೋಲೀಸ ಅಧಿಕಾರಿಗಳು [illegible] ದಿವಸ ಅಲ್ಲಿಯ ಪ್ರಮುಖ ಕಾಂಗ್ರೆಸ್ [illegible] ನನ್ನು [illegible] ಅವರನ್ನು [illegible] ಹಿಡಿದರು. ಅಧಿಕಾರಿಗಳು [illegible] ಹೆಸರುಗಳನ್ನು [illegible] ಇಲ್ಲ.

ಸ್ವಾತಂತ್ರ್ಯಸ್ತಂಭಕ್ಕೆ ಡಾಂಬರ ಬಳಿದರು

ಪುಣೆಯಲ್ಲಿ [illegible] ಸ್ತಂಭ [illegible] ಸ್ತಂಭಕ್ಕೆ [illegible] ರಾತ್ರಿ [illegible] ಡಾಂಬರ ಬಳಿದ. ಅದನ್ನು [illegible] ತೊಳೆಯುತ್ತಿದ್ದರು.

ಬಾಂಬುಗಳು ಸಿಕ್ಕವು.

[illegible] ಜಿಲ್ಹೆಯ ಪೋಲೀಸ ಅಧಿಕಾರಿಗಳು [illegible] ಎಂಬ [illegible] ಒಂದು ಗೃಹಸ್ಥನ ಮನೆಯನ್ನು ಶೋಧ ಮಾಡಿದರು. ಆಗ ಅವರಿಗೆ ಅಲ್ಲಿ ಎರಡು ಬಾಂಬುಗಳು ಸಿಕ್ಕವು.

ಶ್ರೀ ಜಮನಾದಾಸರಿಗೆ [illegible] ತಿಂಗಳ ಶಿಕ್ಷೆ

ರಾಜದ್ರೋಹಾತ್ಮಕ [illegible] ಮಾಡಿದ ಸಂಬಂಧವಾಗಿ [illegible] ಕಾಂಗ್ರೆಸ [illegible] ತಿಂಗಳ [illegible]

೨೫೦ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದರು.

ಮಧ್ಯಪ್ರಾಂತ [illegible] ಜೇಲಿನೊಳಗಿನ ೨೫೦ ಜನ ರಾಜಕೀಯ ಕೈದಿ [illegible] ದಿವಸ ಬಿಡುಗಡೆ ಮಾಡಲ್ಪಟ್ಟರು. ರಾಜಕೀಯ ಕೈದಿಗಳನ್ನು [illegible] ಬಿಡುಗಡೆ ಮಾಡಬೇಕೆಂಬುದಾಗಿ [illegible] ಅಲ್ಲಿಯ [illegible]

ಬ್ಯಾಂಕ ಬಳಿಯಿಂದ [illegible] ಹೊಸ ವ್ಯವಸ್ಥೆ

[illegible] ಬಿಯಿಂದ [illegible] ಸಿಂಗಿಯ [illegible] ಬ್ಯಾಂಕ [illegible] ಸಾಲ [illegible] ಕೊಡಲಾಗುವದು.

ಎಂ. ಎಸ್. [illegible]

[illegible] ಬಾಗಲಕೋಟೆ [illegible]

ವಿಜಾಪೂರ

ಶುದ್ಧ ಹಾಲು! ಶುದ್ಧ ಹಾಲು!

ನಮ್ಮಲ್ಲಿ ಎಲ್ಲ ಕಾಲದಲ್ಲಿ ಶುದ್ಧ [illegible] ಯೋಗ್ಯ ಬೆಲೆಗೆ ದೊರೆಯುತ್ತದೆ.

ಕೃಷ್ಣಾಜಿ ಹಣಮಂತರಾವ ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

[illegible] ಟೀಕೆಗಳು (ಪುಸ್ತಕ)

[illegible] ಟೀಕೆಗಳು [illegible]

[illegible] ೧—೦—೦

[illegible] ೩–೮–೦

[illegible] ೨–೦–೦

[illegible] ೧–೦–೦

[illegible] ಬಗ್ಗೆ [illegible]

ಕರ್ನಾಟಕ ಬುಕ ಕಂಪನಿ ಬಾಗಲಕೋಟೆ

ಬಡಿಗೇರ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ [illegible] ಎಲ್ಲ ನಮೂನೆಯ ವಾಚ, ಕ್ಲಾಕ, ಟೈಮ [illegible] ದುರಸ್ತಿ ಮಾಡಿಕೊಡಲಾಗುವದಲ್ಲದೆ [illegible] ಕೊಟ್ಟಲ್ಲಿ [illegible] ಸ್ಪೇರ [illegible] ಸ್ವೀಕಾರ [illegible]

ಬಡಿಗೇರ ಬ್ರದರ್ಸ

ಸ್ಟೇಶನ ರೋಡ [illegible] ಬಾಗಲಕೋಟೆ

ವಾಚ್, ಟೈಮಪೀಸ ದುರಸ್ತಿ ಮಾಡಿಸುವವರಿಗೆ ಸುಸಂಧಿ



[illegible] ಎಲ್ಲ [illegible] ಗ್ರಾಮೋಫೋನ [illegible] ವಾಚ, ಟೈಮ [illegible] ಗ್ರಾಮೋಫೋನಗಳನ್ನು [illegible] ಖಾತ್ರಿ ಮಾಡಿಕೊಳ್ಳಿರಿ

ವಿಠ್ಠಲ [illegible]

ವಾಚ ರಿಪೇರರ [illegible] ಬಾಗಲಕೋಟೆ.

[illegible] ಶ್ರೀ [illegible] ವೆಂಕಟೇಶ [illegible] ಬಾಗಲಕೋಟೆ [illegible] ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ | ನಿತ್ಯ ಸಂಚಿಕೆ. | ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BAGALKOT, BI-WEEKLY ಅರೆವಾರಪತ್ರಿಕೆ

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಮಂಗಳವಾರ ಮಿತಿ ಮಾಘ ಶುದ್ಧ ೮ ಶಕೆ ೧೮೫೨ ತಾ॥ ೨೭—೧—೩೧ [ಸಂಚಿಕೆ ೧೭೩

ಮಹಾತ್ಮಾ ಗಾಂಧಿಯವರಿಗೆ ಬಿಡುಗಡೆ.

(ತಂತಿಯ ವಾರ್ತೆ, ಮುಂಬಯಿ ತಾ|| ೨೬, ಮುಂಜಾನೆ ೮-೩೦.)

ವ್ಹಾಯಿಸರಾಯರು ಕೆಳಗಿನಂತೆ ಒಂದು ಜಾಹೀರನಾಮೆ ತೆಗೆದಿದ್ದಾರೆ

“ ಮಹಾತ್ಮಾ ಗಾಂಧಿ ಹಾಗು ವರ್ಕಿಂಗ್ ಕಮಿಟಿಯ ಸಭಾಸದರನ್ನು (ಜಾನೇವಾರಿ ೧೯೩೦ ರಿಂದ ಈ ವರೆಗೆ ಆಗಿಹೋಗಿರುವ ಎಲ್ಲ ಸಭಾಸದರು) ಬಿಡುಗಡೆ ಮಾಡಲಿ ಪಂ. ಮುಖ್ಯ ಪ್ರಧಾನರ ಜಾಹೀರನಾಮೆಯನ್ನು ಕಾರಕ ಚರ್ಚಿಸಲು, ಅವರಿಗೆ ಸಂಪೂರ್ಣ ಮುಕ್ತ ದ್ವಾರವಿದ್ದ ವಾತಾವರಣವು ಆವಶ್ಯವಾಗಿದೆಯೆಂದು ಸರಕಾರಕ್ಕೆ ತೋರುತ್ತಬಂದದೆ. ಆದ್ದರಿಂದ ವರ್ಕಿಂಗ ಕಮಿಟಿಯನ್ನು ಕಾಯದೆ ವಿರುದ್ಧವಾಗಿರುವ ಸಂಸ್ಥೆಗಳೆನ್ನುವ ಆ ಆ ಕಾಯಿದೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ”

ಮಹಾತ್ಮಾ ಗಾಂಧಿಯವರು ಯರೋಡಾ ಜೇಲಿನಿಂದಲೂ, ಸರದಾರ ವಲ್ಲಭಭಾಯಿ ಹಾಗು ಡಾ॥ ಮಹಮೂದರು ಆರ್ಥರ ಜೇಲಿನಿಂದಲೂ ಇಂದು ಬಿಡುಗಡೆ ಹೊಂದಿ ಹೊರಬರುವವರಾಗಿ ತೋರುತ್ತದೆ.

(ತಂತಿಯ ವಾರ್ತೆ)

ಮುಂಬಯಿ ತಾ|| ೨೬. ಮಧ್ಯಾನ್ಹ ೧

ಇಂದು ಮಹಾತ್ಮರ ಉಪವಾಸ ದಿನವಿದ್ದು. ಉಪವಾಸವನ್ನು ಮುಗಿಸಿದ ಕೂಡಲೆ ಅವರನ್ನು ಬಿಡುಗಡೆ ಮಾಡುವರಾಗಿ ತಿಳಿಯುತ್ತದೆ

ಸರದಾರ ವಲ್ಲಭಭಾಯಿ ಹಾಗು ಡಾ॥ ಮಹಮೂದರು ಇನ್ನೂವರೆಗ್ಯೆ ಬಿಡುಗಡೆ ಮಾಡಲ್ಪಟ್ಟಿಲ್ಲ.

ಮಹಾದೇವಭಾಯಿಯವರಿಗೆ ಬಿಡುಗಡೆ.

(ತಂತಿಯ ವಾರ್ತೆ ತಾ॥ ೨೬)

ಸಾಬರಮತಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಮಹಾದೇವಭಾಯಿ ದೇಸಾಯಿಯವರು ಇಂದು ಮುಂಜಾನೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಶ್ರೀ ಯಲಗುರೇಶನ ಉತ್ಸವವು.

ಭಕ್ತರಲ್ಲಿ ವಿನಂತಿ

ಈ ಉತ್ಸವದ ವ್ಯವಸ್ಥೆಯನ್ನು ಹೆಚ್ಚು ಸುಸಂಘಟಿತವಾಗಿ ಮತ್ತು ಕ್ರಮಬದ್ಧವಾಗಿಯೂ ಸಾಗಿಸಬೇಕಾಗಿ ಅನೇಕರು ಸೂಚನೆ ಮಾಡುತ್ತಿದ್ದಾರೆ. ಉತ್ಸವಕ್ಕಾಗಿ ಬರುವ ಜನಗಳಿಗೆ ಇಳಿದುಕೊಳ್ಳಲಿಕ್ಕೆ ಸಾಕಷ್ಟು ಸ್ಥಳವಿಲ್ಲ. ದೇವಾಲಯದ ಸುತ್ತಲೂ ನೆರಳು ಇಲ್ಲದ್ದರಿಂದ ಜನರು ಪ್ರಖರವಾದ ಬಿಸಿಲಲ್ಲಿ ಊಟಕ್ಕೆ ಕೂಡುಕೊಳ್ಳಬೇಕಾಗುತ್ತದೆ. ಇದಲ್ಲದೆ ಇನ್ನೂ ಅನೇಕ ಅನಾನುಕೂಲತೆಗಳನ್ನೂ ತೊಂದರೆಗಳನ್ನೂ ಜನರು ಸಹಿಸಬೇಕಾಗುತ್ತದೆ. ದೇವಾಲಯದ ಮುಂಭಾಗದ ಕಟ್ಟಡವು ಅರ್ಧಕ್ಕೇನೆ ಉಳಿದು ಹೋಗಿದೆ, ಉತ್ಸವದ ಕಾರ್ಯಕ್ರಮದಲ್ಲಿಯೂ ಬದಲಾವಣೆ ಮಾಡಬೇಕಾಗಿದೆ. ಈ ಎಲ್ಲವನ್ನು ನೆರವೇರಿಸಬೇಕಾದರೆ ಹಣವು ಬೇಕು. ಅನೇಕ ಭಕ್ತರು ಹಣವನ್ನು ಕೊಡಲು ಸಿದ್ಧರಿದ್ದರೂ ಅದನ್ನು ಒಟ್ಟುಗೂಡಿಸಿ ಅದರ ಯೋಗ್ಯ ವಿನಿಯೋಗ ಮಾಡುವಂಥ ಸಂಸ್ಥೆಯಿಲ್ಲ. ಈ ವರೆಗೆ ಎಲ್ಲ ಕೆಲಸಗಳು ವ್ಯಕ್ತಿಶಃ ಆಗಿಯೇ ಸಾಗಿರುತ್ತವೆ. ಭಕ್ತರೆಲ್ಲರೂ ಒಂದೆಡೆಗೆ ಸೇರಿ ಯಾವ ಯಾವ ಸುಧಾರಣೆಗಳನ್ನು ಮಾಡಬೇಕು, ಹಣವನ್ನು ಯಾವರೀತಿಯಿಂದ ಕೂಡಿಸಬೇಕು ಇವೇ ಮೊದಲಾದ ವಿಷಯಗಳನ್ನು ವಿಚಾರ ಮಾಡುವದು ಅವಶ್ಯವಿದೆ. ಆದದರಿಂದ ಇದೇ ಮಾಘ ವದಿ ೫ ಶನಿವಾರ (ತಾ|| ೭-೧-೪೧) ಎಲಗೂರದಲ್ಲಿ ಆಗುವ ಉತ್ಸವಕಾಲಕ್ಕೆ ಒಂದು ಸಭೆಯನ್ನು ಸೇರಿಸಬೇಕೆಂದು ಗೊತ್ತಾಗಿದೆ. ಅದರ ವೇಳೆಯನ್ನೂ ಸ್ಥಳವನ್ನೂ ಆ ಹೊತ್ತಿಗೆ ಅಲ್ಲಿಯೇ ತಿಳಿಸಲಾಗುವದು. ಭಕ್ತರೆಲ್ಲರೂ ಸಭೆಗೆ ಬಂದು ಯೋಗ್ಯ ಸೂಚನೆಗಳನ್ನು ಮಾಡಬೇಕಾಗಿ ಪ್ರಾರ್ಥನೆ.

ಕೃಷ್ಣರಾವ ಜೋರಾಪೂರ
ಬಾಗಲಕೋಟೆ

ವೆಂಕಟರಾವ ಪರ್ವತಿ
ಬಾಗಲಕೋಟೆ.

ಹಣಮಂತರಾವ ಮೋಹರೆ
ವಿಜಾಪೂರ.

ಪ್ರಾಣೇಶ ಗುರುಭಟ್ಟ ಸಿದ್ಧಾಂತಿ
ವಕೀಲ ವಿಜಾಪೂರ.

ವಿಜಾಪುರದ ಪತ್ರ

(ಸ್ವಂತ ಸುದ್ದಿಗಾರರಿಂದ)

ಇಲ್ಲಿಯ ಜೇಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಚಿಕ್ಕೋಡಿಯ ಶ್ರೀಮತಿ ಪಾನಬಾಯಿ ಗುಜ್ಜರ(?) ಇವರು ತಾ|| ೨೪ ನೆಯ ದಿವಸ ಸಂಜೆಯ ಮುಂದೆ ಬಿಡುಗಡೆ ಹೊಂದಿದರು.

ತಾ|| ೨೫ ನೆಯ ದಿವಸ ಸಾಯಂಕಾಲ ೮ ಗಂಟೆಗೆ ಉಪ್ಪಲಿಬುರುಜಿನ ಹತ್ತಿರ ಧ್ವಜವಂದನೆಯ ಸಮಾರಂಭವು ಶ್ರೀಮತಿ ಪಾನಬಾಯಿಯವರ ಹಸ್ತದಿಂದ ನೆರವೇರಿತು. ಶ್ರೀಮತಿ [illegible] ಈ ಸಮಯದಲ್ಲಿ ಖಾದಿಯ ವಿಷಯವಾಗಿ ಒಳ್ಳೇ ಆವೇಶಯುಕ್ತ ಭಾಷಣ ಮಾಡಿದರು. [illegible] ಹೆಂಗಸರೂ ಗಂಡಸರೂ ಹೆಚ್ಚಾಗಿ ನೆರೆದಿದ್ದರು.

ಶ್ರೀ ನರಗುಂದ ಜಯರಾಯರು ಜೇಲಿನಲ್ಲಿ ಉಪವಾಸ ಹಾಕಿದ್ದರು. ಪತ್ಯ(?)ದಿಂದ ಅವರ ತೂಕವು ೨ ಪೌಂಡು ಹೆಚ್ಚಾಗಿದೆಯೆಂದು ತಿಳಿದು ಬಂದಿದೆ.

ಜೇರಿಗಿ ಹಾಗು ಶ್ರೀಕಂಠಯ್ಯರಿಗೆ

೪ ತಿಂಗಳ ಶಿಕ್ಷೆ

ಇಲ್ಲಿಯ ನಗರ ಸಂಕೀರ್ತನ(?) ಕಾಲಕ್ಕೆ ಸೆರೆಹಿಡಿಯಲ್ಪಟ್ಟ ೪ ತಿಂಗಳ ಶಿಕ್ಷೆಗೆ ಗುರಿಯಾದ ಶ್ರೀ ಜೇರಿಗಿ ಹಾಗು ಶ್ರೀ ಕಂಠಯ್ಯ ಎಂಬ ಇಬ್ಬರು ಸ್ವಯಂಸೇವಕರಿಗೆ ಬೇರೊಂದು ಅಪರಾಧಕ್ಕಾಗಿ ಮತ್ತೆ ಪ್ರತ್ಯೇಕವಾಗಿ ನಾಲ್ಕು ತಿಂಗಳ ಶಿಕ್ಷೆಯಾಗಿದೆ. ಶಿಕ್ಷೆಯನ್ನು ವಿಧಿಸಿದವರು ಬದಾಮಿಯ ಮಾಜಿಸ್ಟ್ರೇಟರು!

ಚಿಕ್ಕೋಡಿ ತಾಲೂಕ

ರೈತರ ಪರಿಷತ್ತು

ಫೆಬ್ರುವರಿ ತಿಂಗಳ ತಾ|| ೧ ಹಾಗು ೨ ಈ ದಿನಗಳಲ್ಲಿ ಚಿಕ್ಕೋಡಿ ತಾಲೂಕ ರೈತರ ಪರಿಷತ್ತು ಚಿಕ್ಕೋಡಿಯಲ್ಲಿ ಸೇರತಕ್ಕದ್ದಿದ್ದು, ಹುಬ್ಬಳ್ಳಿಯ "ಲೋಕಮತ"ದ ಸಂಪಾದಕರಾದ ಶ್ರೀ ಪುರಾಣಿಕರು ಅದರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಒಪ್ಪಿದ್ದಾರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಜಾಹೀರ ಸಭೆಯಲ್ಲಿ ಪತ್ರ್ಯಂತಕ್ಕಿಂತ(?) ಶಬ್ದಾಡಂಬರವೇ ಹೆಚ್ಚಾಗಿದೆ. ರಾಜಕೀಯ ದೃಷ್ಟಿಯಿಂದ ಹಿಂದುಸ್ಥಾನದ ಪ್ರಗತಿಯಾಗುವಂತೆ ಯಾವ ಯೋಜನೆಯೂ ಅದರಲ್ಲಿ ಇರುವದಿಲ್ಲ. —ಡಾ ಸುರವರ್ದಿ.

ಜಗತ್ತನ್ನು ಬೆರಗುಗೊಳಿಸಲು

ಗುಂಡು ಹಾರಿಸಿದೆ

ಪಂಜಾಬ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದ ಸಮಯದಲ್ಲಿ ಗವರ್ನರರ ಮೇಲೆ ಗುಂಡು ಹಾರಿಸಿದ ಸಂಬಂಧವಾಗಿ ಸೆರೆ ಹಿಡಿಯಲ್ಪಟ್ಟ ಶ್ರೀ ಹರಿಕಿಶನರು, ಕೋರ್ಟಿಗೆ ಕೆಳಗಿನಂತೆ ಜವಾಬನ್ನು ಸಾದರಪಡಿಸಿದ್ದಾರೆ.

"ಅಹಿಂಸಾತ್ಮಕ ಅಸಹಕಾರ ಯುದ್ಧದಲ್ಲಿ ತೊಡಗಿದ ಸಾವಿರಾರು ಜನ ಸ್ತ್ರೀಪುರುಷರನ್ನು ಅಧಿಕಾರಿಗಳು ದಬ್ಬಾಳಿಕೆಯನ್ನು ಉಪಯೋಗಿಸಿ ಜೇಲಿನಲ್ಲಿ ಒಗೆದಿದ್ದನ್ನು ಮತ್ತು ಹೊಡೆದು ಬಡಿದು ಅವರನ್ನು ಅಪಮಾನಗೊಳಿಸಿದ್ದನ್ನೂ ಕಂಡು ಕೇಳಿ ನಾನು ಹಿಂಸೆಗೆ ಪ್ರವೃತ್ತನಾದೆ. [illegible] ಮಾಡುವ ಭಾಷಣವನ್ನು ಓದಿದ ಮೇಲೆ, ಇಂಗ್ಲೀಷರು ಹಿಂದುಸ್ಥಾನವನ್ನು ದಾಸ್ಯದಿಂದ ಮುಕ್ತಮಾಡುವ ಇಚ್ಛೆಯುಳ್ಳವರಾಗಿಲ್ಲವೆಂಬುದು ನನಗೆ ತೋರಿತು. ಆದ್ದರಿಂದ ಯಾವುದಾದರೂ ಒಂದು ಕೃತಿಯನ್ನು ಮಾಡಿ, ಜಗತ್ತಿನ ದೃಷ್ಟಿಯನ್ನೆಲ್ಲ ಹಿಂದುಸ್ಥಾನದೊಳಗಿನ ಸ್ಥಿತಿಯ ಕಡೆಗೆ ಸೆಳೆಯಬೇಕೆಂಬುದಾಗಿ ನಾನು ನಿಶ್ಚಯ ಮಾಡಿಕೊಂಡೆ. ಮತ್ತು ನನ್ನ ಇಷ್ಟಾರ್ಥವನ್ನು ಸಫಲಮಾಡಿಕೊಳ್ಳುವ ಉದ್ದೇಶದಿಂದಲೇ ಅಲ್ಲಿಗೆ ಬಂದೆ. ಈ ವಿಷಯವಾಗಿ ನಾನು ಯಾರೊಡನೆಯೂ ವಿಚಾರಮಾಡಲಿಲ್ಲ. ವ್ಯಕ್ತಿಶಃ ಗವರ್ನರರಲ್ಲಿ ನನಗೆ ದ್ವೇಷವಿಲ್ಲ. ಗವರ್ನರರನ್ನು ಸ್ವಲ್ಪ ಗಾಯಪಡಿಸುವದೇ ನನಗೆ ಬೇಕಾಗಿತ್ತಲ್ಲದೆ ಅವರನ್ನು ಕೊಲ್ಲುವದು ನನ್ನ ಉದ್ದೇಶವಿದ್ದಿಲ್ಲ.

ಮುಖ್ಯ ಪ್ರಧಾನರ ಜಾಹೀರನಾಮೆಯು ಅಸಮಾಧಾನಕರವಾದದ್ದಿರುತ್ತದೆ. ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಶಬ್ದಗಳೇ ಅದರಲ್ಲಿ ಇಲ್ಲ. ಬಂಗಾಲ ಪ್ರಾಂತವು ಅದನ್ನು ಅಂಗೀಕರಿಸಲಾರದು. ಒಕ್ಕಂಚಿನ(?) ಖಟ್ಲೆಗಳನ್ನು ಹಿಂದಕ್ಕೆ ತೆಗೆದುಕೊಂಡು, ಹಿಂಸಾ ಹಾಗು ಅಹಿಂಸಾ ಮಾರ್ಗದ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡದೇನೆ ಒಡಂಬಡಿಕೆಯಾಗುವದು ಸಾಧ್ಯವಿಲ್ಲ."

ಸುಭಾಷ ಚಂದ್ರ ಬೋಸ,

ಕಾಂಗ್ರೆಸ್ಸದ ಅಧ್ಯಕ್ಷರಾದ

ಪಂಡಿತ ಜವಾಹಿರಲಾಲರನ್ನು ಬಿಟ್ಟರು.

(ತಂತಿಯ ವಾರ್ತೆ ತಾ|| ೨೬)

ನೈನಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಕಾಂಗ್ರೆಸದ ಅಧ್ಯಕ್ಷರಾಗಿರುವ ಪಂಡಿತ ಜವಾಹಿರಲಾಲ ನೆಹರೂ ಇವರನ್ನು ಈದಿನ ಮುಂಜಾನೆ ಬಿಡುಗಡೆ ಮಾಡಿದ್ದಾರೆ.

ಕಲಕತ್ತೆಯ ನಗರ ಸಭೆಯ ಮೇಲೆ ರಾಷ್ಟ್ರಧ್ವಜ

(ತಂತಿಯ ವಾರ್ತೆ ತಾ|| ೨೬)

"ಸ್ವಾತಂತ್ರ್ಯ ದಿನ ಸಮಾರಂಭದ ಶ್ರೇಯಾರ್ಥವಾಗಿ ಇಂದು ಕಲಕತ್ತೆಯ ನಗರ ಸಭೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚುವದರಲ್ಲಿ ಬಂದಿದೆ.

ಪಂಡಿತ ಮೋತೀಲಾಲರಿಗೆ ಮತ್ತೆ ಜ್ವರ.

(ತಂತಿಯ ವಾರ್ತೆ ತಾ. ೨೬)

ಪಂಡಿತ ಮೋತಿಲಾಲರು ನಿನ್ನಿನ ದಿವಸ ಮತ್ತೆ ಜ್ವರದಿಂದ ಪೀಡಿತರಾಗಿದ್ದರು. ರಾತ್ರಿಯಲ್ಲೆಲ್ಲ ನಿದ್ರೆಯಿಲ್ಲದೆ ಕಳೆದರು. ಮಹಾತ್ಮಾ ಗಾಂಧಿ ಹಾಗು ಉಳಿದವರೊಡನೆ ವಿಚಾರ ವಿನಿಮಯ ಮಾಡುವ ವರೆಗೆ ಮುಖ್ಯ ಪ್ರಧಾನರ ಜಾಹೀರನಾಮೆಯ ವಿಷಯವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವದಿಲ್ಲವಾಗಿ ಅವರು ಹೇಳಿದರು.

ಮುಂಬಯಿಯಲ್ಲಿ ೧೨ ಜನರನ್ನು ಹಿಡಿದರು

(ತಂತಿಯ ವಾರ್ತೆ ತಾ|| ೨೬)

ಮುಂಬಯಿಯಲ್ಲಿ ೧೨ ಜನ ಸ್ವಯಂಸೇವಕರನ್ನು ಕೈದ ಸೆರೆಹಿಡಿದಿದ್ದಾರೆ

ಶ್ರೀಮತಿ ವಿ. ಠಾಕರಾಯಿಯವರ ಬಾಯಿಗೆ ಬೀಗಬಿತ್ತು.

ಸಾಬರಮತಿ ಆಶ್ರಮದ ಶ್ರೀಮತಿ ವಿಜಯಾ ಬಾಯಿಯವರು ಖಾದಿ ಪ್ರಚಾರಕ್ಕಾಗಿ ಬಾಗಲಕೋಟೆ ಬಾಬಂದಕ್ಕೆ ಹೋದಾಗ, ಅಲ್ಲಿಯ ಅಧಿಕಾರಿಗಳು ಅವರ ಮೇಲೆ ೧೪೪ನೆಯ ಕಲಮಿನನ್ವಯ ನೋಟೀಸು ಹೊರಡಿಸಿ, ಸಾರ್ವಜನಿಕವಾಗಿ ಭಾಷಣ ಮಾಡಕೂಡದಾಗಿ ಅವರಿಗೆ ಅಪ್ಪಣೆ ವಿಧಿಸಿದರು.

ಪಂ. ಮಾಲವೀಯರು ಮತ ಕೊಡಲು ಒಲ್ಲೆಂದರು.

"ಅಸೋಸಿಯೇಟೆಡ್ ಪ್ರೆಸ್" ಪ್ರತಿನಿಧಿಯು, ಬಂಡೀ ಗಾಲಿಯ ಪರಿಷತ್ತಿನಲ್ಲಿ ಗೊತ್ತಾದ ರಾಜಘಟನೆಯ ವಿಷಯವಾಗಿ ಪಂಡಿತ ಮದನ ಮೋಹನ ಮಾಲವೀಯರವರಿಗೆ ಅವರ ಅಭಿಪ್ರಾಯವನ್ನು ಕೇಳಿದಾಗ ಅವರು ಹೀಗೆಂತ ಹೇಳಿದರು.

"ಸ್ವಾತಂತ್ರ್ಯ ಚಳವಳಿಯ ಪುರಸ್ಕರ್ತರಾಗಿರುವ ಮಹಾತ್ಮಾ ಗಾಂಧಿಯವರು ಕಾಂಗ್ರೆಸದ ಅಧ್ಯಕ್ಷರಾಗಿರುವ ಪಂಡಿತ ಜವಾಹಿರಲಾಲರು, ಸ್ವಾತಂತ್ರ್ಯ ಸಂಪಾದನೆಗಾಗಿ ಸ್ವಾರ್ಥತ್ಯಾಗ ಪೂರ್ವಕವಾಗಿ ಹೋರಾಡಿದ ಡಾ. ಅನ್ಸಾರಿ, ಮೌಲಾನಾ ಅಬ್ದುಲ್ ಕಲಮ್ ಆಜಾದ, ಸರದಾರ ವಲ್ಲಭಭಾಯಿ, ಹಾಗು ಇನ್ನಿತರ ೬೦—೭೦ ಸಾವಿರ ಜನ ಸ್ತ್ರೀ ಪುರುಷರು, ವಾಕ್ ಸ್ವಾತಂತ್ರ್ಯ, ಪತ್ರ ಸಂಘ ಸ್ವಾತಂತ್ರ್ಯ ಕಳೆದ ಕಾರಣ ಜೇಲಿನಲ್ಲಿ ಕೊಳೆಯುತ್ತಿರುವಾಗ, ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವದು ನನಗೆ ಸರಿಯಾಗಿ ತೋರುವದಿಲ್ಲ"

ಅನ್ನತ್ಯಾಗ ಸತ್ಯಾಗ್ರಹಕ್ಕೆ ಅಧಿಕಾರಿಗಳು ಮಣಿದರು

ರತ್ನಾಗಿರಿ ಜೇಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಶ್ರೀ ಅಪ್ಪಾಸಾಹೇಬ ಪಟವರ್ಧನರವರು, ಅಧಿಕಾರಿಗಳು ಜೇಲಿನಲ್ಲಿ ತನಗೆ ತಕಲಿಗಳ ಮೇಲೆ ನೂಲುವ ಅಪ್ಪಣೆ ಕೊಡದ ಮೂಲಕವಾಗಿ ಕಳೆದ ೯ ದಿನಗಳಿಂದ ಅನ್ನತ್ಯಾಗ ಕೈಕೊಂಡಿದ್ದರಷ್ಟೆ. ಈ ಅನ್ನತ್ಯಾಗ ಸತ್ಯಾಗ್ರಹವು ಅಧಿಕಾರಿಗಳ ಮೇಲೆ ಒಳಿತಾಗಿ ಪರಿಣಾಮಿಸಿದ್ದು, ಅವರು ನೂಲು ತೆಗೆಯಲು ಅವರಿಗೆ ಈಗ ಅಪ್ಪಣೆ ಕೊಟ್ಟಿದ್ದಾರೆ

ಬಾಯಿಬಲ್ ಓದುವದೂ ಅಪರಾಧವಾಯಿತು

ನರಸಿಂಹಪುರ ಜಿಲ್ಲೆಯ ಖಾದಿ ಕಾರ್ಯಾಲಯವನ್ನು ಅಧಿಕಾರಿಗಳು ವಶಕ್ಕೆ ತೆಗೆದುಕೊಂಡು ಅಲ್ಲಿ ಪೋಲೀಸರನ್ನಿಟ್ಟಿದ್ದಾರೆ. ಈ ಕಾರ್ಯಾಲಯದ ಮುಂಭಾಗದಲ್ಲಿ ಕೆಲವು ಅಸ್ಪೃಶ್ಯರ ಮನೆಗಳಿವೆ. ಒಂದು ದಿವಸ ಒಬ್ಬ ಅಸ್ಪೃಶ್ಯನು ತನ್ನ ಮನೆಯಲ್ಲಿ "ಬಾಯಿಬಲ್" ಓದುತ್ತ ಕುಳಿತುಕೊಂಡಿದ್ದನು. ಒಬ್ಬ ಪೋಲೀಸನು ಅವನಲ್ಲಿಗೆ ಹೋಗಿ ಅವನನ್ನು ಒಳಿತಾಗಿ ದೊಣ್ಣೆಯಿಂದ ಹೊಡೆದರು. ಅಸ್ಪೃಶ್ಯನು ಪೋಲೀಸನ ಮೇಲೆ ಖಟ್ಲೆ ಮಾಡಿದ್ದಾನೆ

ಕೇರಳದಲ್ಲಿ ಸರ್ವಾಧಿಕಾರಿಗಳಿಗೆ ಶಿಕ್ಷೆ

ಕೇರಳ ಪ್ರಾಂತದ ಸತ್ಯಾಗ್ರಹ ಸಂಘದ ಮಂಡಳದ ಸರ್ವಾಧಿಕಾರಿ ವಿ. ಕೆ. ಸ್ವಾಮಿಯಾಲ್ ಅ್ಯರ್ ಹಾಗು ಶ್ರೀಮತಿ ಕೆ. ಭಾರ್ಗವತಿ ಅಮ್ಮಾ, ಶ್ರೀಮತಿ ಕೆ. ಸ್ವ್ಯ, ದೇವಕಿ ಅಮ್ಮಾ ಇವರಿಗೆ ಕ್ರಮಶಃ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ನಾಲ್ಕನೆಯ ಸರ್ವಾಧಿಕಾರಿಗಳಾದ ಶ್ರೀ ಪ್ರಭಾಕರರವರು ಮೇಲಿನವರ ಖಟ್ಲೆಯನ್ನು ಕೇಳಲು ಕೋರ್ಟಿಗೆ ಹೋದಾಗ, ಅಧಿಕಾರಿಗಳು ಅವರನ್ನು ಅಲ್ಲಿಯೇ ಸೆರೆಹಿಡಿದರು.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿರಿ

ದಬ್ಬಾಳಿಕೆಯ ಕಾಯದೆ ಹಾಗು ಆರ್ಡಿನನ್ಸಗಳನ್ನು ರದ್ದು ಪಡಿಸಬೇಕು, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು, ಬಂಡೀ ಗಾಲಿಯ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟ ರಾಜ್ಯಘಟನೆಯ ಕಾರ್ಯ ವಿಚಾರ ಮಾಡಲು ಅನುಕೂಲ ವಾತಾವರಣವನ್ನುಂಟು ಮಾಡಬೇಕಾಗಿ ಮಹಾರಾಷ್ಟ್ರ ವರ್ತಕ ಸಂಘದವರು ಸರಕಾರಕ್ಕೆ ಕೇಳಿಕೊಂಡಿದ್ದಾರೆ.

ಈಗಿನ ಕಾಂಗ್ರೆಸ್ ಕಮಿಟಿಗಳು ಕೆಲಸ ಸಾಗಿಸುವ ಮಟ್ಟಿಗಿರುತ್ತವೆ. ಇವು ದಿನದ ಕೆಲಸಗಳನ್ನು ಮಾತ್ರ ಮಾಡುವವು. ಇವು ಇಡೀ ದೇಶದ ರಾಜ್ಯವಿಚಾರವನ್ನು ಹೇಳಲಾರವು. ಕಾಂಗ್ರೆಸ್ ಸಭೆಯು ಕೂಡಿ, ಅಲ್ಲಿಯೇ ಯಾವುದೆಂದು ನಿರ್ಣಯವಾಗತಕ್ಕದ್ದು. ಯುರವಡೆಗೆ ಹೋಗಿರಿ, ಅದರ ಬಾಗಿಲ ಬಡಿಯಿರಿ. ಅಲ್ಲಿಂದಲೇ ದೇವವಾಣಿಯಾಗುವದು.

—ಕೆ. ಎಫ್. ನರಿಮನ್

ಮುಂಬಯಿಯಲ್ಲಿ
ಕಾಂಗ್ರೆಸ್ ಕಾರ್ಯಕರ್ತರ ವಿಚಾರಣೆ

ಸ್ವಾತಂತ್ರ್ಯ ದಿನದ ದಿವಸ ಮುಂಬಯಿಯಲ್ಲಿ ಬಂಧನಕ್ಕೊಳಗಾದ ಶ್ರೀ ಮೂಲರಾಜ ಕರ್ಸನದಾಸ, ಮೇಹರ ಅಲ್ಲಿ ಮೊದಲಾದ ೩೪ ಜನರ ವಿಚಾರಣೆಯು ತಾ|| ೨೧ನೆಯ ದಿವಸ ಪೂರ್ತಿ ಸಾಗಿವಾಯಿತು. ಈ ಜನರ ಸಾಕ್ಷಿಗಳೆಲ್ಲವು ನಂತರದಲ್ಲಿ ಮ್ಯಾಜಿಸ್ಟ್ರೇಟರು ೧೮ ಜನರ ಮೇಲಿನ ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ಅನ್ವಯ ಆರೋಪ ತೊರೆದು ಉಳಿದ ಆರು ಜನರನ್ನು ಬಿಟ್ಟುಬಿಟ್ಟರು. ನಾಳಿನ ಶನಿವಾರ ತೀರ್ಪು ಆಗತಕ್ಕದ್ದಿದೆ.

ಪೇಶಾವರದಲ್ಲಿ
ಸೆರೆಮನೆಗೆ ಶಿಕ್ಷೆ

ಪೇಶಾವರದಲ್ಲಿ ಸರಕಾರ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ೩೧ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ಆರು ತಿಂಗಳ ಶಿಕ್ಷೆಯನ್ನು ವಿಧಿಸಿದರು.

ಬೋರಸದದಲ್ಲಿ
ಹೊಡೆದಾಟ

ಪೋಲೀಸ ಅಧಿಕಾರಿಗಳ ವರ್ತನದ ನಿಷೇಧಾರ್ಥವಾಗಿ ಬೋರಸದದಲ್ಲಿ ತಾ ೨೧ ನೆಯ ದಿವಸ "ಸ್ತ್ರೀ ದಿನ"ವು ಆಚರಿಸಲ್ಪಟ್ಟಿತು. ಬೋರಸದದ ಸುತ್ತು ಮುತ್ತಲಿನ ಹಳ್ಳಿಗಳಿಂದ ಎಷ್ಟೋ ಜನ ಸ್ತ್ರೀಯರು ಬಂದು ಒಟ್ಟಾಗಿ ಅಂದು ಬೋರಸದದಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗ ತೆಗೆದುಕೊಂಡಿದ್ದರು. ಇವರೆಲ್ಲರೂ ಚಾವಡಿಗೆ ಒಟ್ಟಿಗೆ ಬರುತ್ತಿರುವಾಗ ಪೋಲೀಸ ಅಧಿಕಾರಿಗಳು ಅಲ್ಲಿಗೆ ಬಂದು ಅವರನ್ನು ಲಾಠಿಯಿಂದ ಹೊಡೆದರು. ಇದನ್ನು ಕಂಡು ೫೦೦ ಜನ ಸ್ತ್ರೀಯರು ಒಮ್ಮೆಲೆ ಅಲ್ಲಿಗೆ ಬಂದು, ಸಭೆ ಜರುಗಿಸಿ ಪೋಲೀಸರ ವರ್ತನೆಯನ್ನು ನಿಷೇಧಿಸಿದರು. ಪೋಲೀಸರು ಶ್ರೀಮತಿ ಭಕ್ತಿಲಕ್ಷ್ಮೀ ದೇಸಾಯಿ ಮುಂತಾದವರನ್ನು ಸೆರೆಹಿಡಿದುಕೊಂಡು ಹೋದರು.

ದಂಡಿನ ಕಾಯಿದೆಯನ್ನು
ತಿರುಗಿ ತೆಗೆದುಕೊಂಡರು

ಪೇಶಾವರ ಜಿಲ್ಲೆಗೆ ಹಚ್ಚಿದ ದಂಡಿನ ಕಾಯಿದೆಯನ್ನು ತಾ| ೨೪ ನೆಯ ದಿನ ಮಧ್ಯರಾತ್ರಿಯಲ್ಲಿ ತಿರುಗಿ ತೆಗೆದುಕೊಂಡಿದ್ದಾರೆ.

ಅಜಮೀರ ಜೇಲಿನಲ್ಲಿ
ಅನ್ನತ್ಯಾಗ

ಜೇಲಿನಲ್ಲಿ ತಮಗೆ ಸಿಗುತ್ತಿರುವ ಕೆಟ್ಟ ತರದ ಆಹಾರದ ನಿಷೇಧಾರ್ಥವಾಗಿಯೂ ಮತ್ತು ತಮ್ಮನ್ನು ಅಧಿಕಾರಿಗಳು ಕೆಟ್ಟ ರೀತಿಯಿಂದ ನಡಿಸಿಕೊಳ್ಳುತ್ತಿರುವದರ ವಿರೋಧಾರ್ಥವಾಗಿಯೂ, ಅಜಮೀರ ಜೇಲಿನೊಳಗಿನ "ಕ" ವರ್ಗದ ರಾಜಕೀಯ ಕೈದಿಗಳು ಅನ್ನತ್ಯಾಗ ವ್ರತ ಪ್ರಾರಂಭಿಸಿದ್ದಾರೆ.

ಮೋಟಾರ ಕಾರಖಾನೆಗೆ
ಪಿಕೆಟಿಂಗ

ದಿಲ್ಲಿಯ ಸ್ವಯಂಸೇವಕರು ಕಳೆದ ಕೆಲವು ದಿನಗಳಿಂದ ಅಲ್ಲಿಯ ನಾಲ್ಕು ಮೋಟಾರ ಕಾರಖಾನೆಯ ಮುಂದೆ ಪಿಕೆಟಿಂಗ ನಡೆಸಿದ್ದು ಈ ಸಂಬಂಧವಾಗಿ ಈಗಾಗಲೆ ೩೭ ಜನರು ಕೈದು ಮಾಡಲ್ಪಟ್ಟಿದ್ದಾರೆ.

ಬುಕ್ಕ ಬಾಯಿಂಡಿಂಗದ
ಹೊಸ ವ್ಯವಸ್ಥೆ

ನಮ್ಮಲ್ಲಿ ಗೋಲ್ಡಿಂಗ ನಿಹಿತ ಅತ್ಯಂತ ಸುವಾಗಿ ಬಾಯಿಂಡಿಂಗದ ಕೆಲಸವು ಸೋವಿ ದರದಿಂದಲೂ, ಉತ್ತಮ ರೀತಿಯಿಂದಲೂ ತಯಾರಾಗುವವು. ಇದಲ್ಲದೆ ಹ್ಯಾಂಡ ಬ್ಯಾಗ್ಸ ಗಳನ್ನು ಸಿಗರೇಟು ಕೇಸ ಮುಂತಾದ ರೋಕ್ಕ ಇಡುವ ಪಾಕೀಟ ಇವುಗಳನ್ನು ಇದೆ ವಿಶ್ವಸನೀಯವಾಗಿ ತಯಾರಿಸುವದು. ಪೋಟೋ ಫ್ರೇಮ ಮತ್ತು ಫಾಯಿಲ ದ ಪಟ್ಟಿಗಳನ್ನು ಮಾರಾಟಕ್ಕೆ ತರಿಸಿ ಇಟ್ಟಿದ್ದೇವೆ. ಒಮ್ಮೆ ಅನುಭವಿಸಿ ನೋಡಿದರೆ ನಮ್ಮ ಮಾತು ನಿಜವಾದ್ದು. ಒಮ್ಮೆ ಬಂದು ಪರೀಕ್ಷಿಸಿರಿ.

ಎಂ. ಎಸ್. ಉದಪೀರ

ಪ್ರೊಪ್ರಾಯಿಟರ ದಿ ನ್ಯೂ ಬುಕ್ಕ ಬಾಯಿಂಡಿಂಗ ವರ್ಕ್ಸ ಹೊಸಬಜಾರ ಹವಾಲದಾರ ಬಿಲ್ಡಿಂಗ

ವಿಜಾಪೂರ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಸ್ಯಾಂಪಲ್) ಮತಿ ಚೀಟಿಗಳು (ಪುಕ್ಕಟ

ನೀಲಿ ಹಸ್ರು ಕೆಂಪು, ಹಳದಿ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ ೨—೧—೦

೧ ಸಾವಿರ ಚೀಟಿಗಳಿಗೆ, ೩-೮-೦

೫ ಸಾವಿರಕ್ಕೆ, ೧೬-೮-೦ ಗೇಣ್ಸೆ ಫ

೫ ತೊಲೆ ಪಾಕೀಟ ಗಳಿಗೆ ೧-೦-೦

ಸ್ಟೆರೆ ಸ್ಟಾಂಪ ೩½ ಔನ್ಸಿನ ೧ ಡಜನ ಬಾಟ್ಲಿಗೆ } ೧-೮-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ
ವಾಚಮೇಕರ್ಸ



ನಮ್ಮಲ್ಲಿ ಶಾಸ್ತ್ರೀಯ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂ ಪೀಸ ಮುಂತಾದವು ದುರಸ್ತು ಮಾಡಿಕೊಡುವದಲ್ಲದೆ ಯಾವುದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ, ಜೆನಿಥ, ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿಯೂ ದೊರೆಯುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ಎಲ್ಲರಿಗೂ ಸ್ವಾಗತ.

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ
ಕೆಳಗಿನ ಪೇಟೆ ಬಾಗಲಕೋಟೆ

ವಾಚ, ಟಾಯಿಂಪೀಸ
ದುರಸ್ತಿಮಾಡಿಸುವವರಿಗೆ ಸುಸಂಧಿ



ನಮ್ಮಲ್ಲಿ ಎಲ್ಲ ನಮೂನೆ ಹಾಗು ಮೇಕಿನ ವಾಚ, ಟಾಯಿಂಪೀಸ ಗ್ರಾಮೋಫೋನ ಮೊದಲಾದವುಗಳನ್ನು ಜಾಗ್ರತೆಯಿಂದ ನೋಡಿ ಸರಿಯಾದ ವೇಳೆಗೆ ದುರಸ್ತು ಮಾಡಿಕೊಡುವದಲ್ಲದೆ, ಹೊಸ ವಾಚ, ಟಾಯಿಂ ಪೀಸ ಗ್ರಾಮೋಫೋನುಗಳನ್ನು ತರಿಸಿ ಕೊಡುವೆವು. ಒಂದು ಸಲ ದುರಸ್ತು ಮಾಡಿಸಿಕೊಂಡು ಖಾತ್ರಿಮಾಡಿ ಕೊಳ್ಳಿರಿ.

ವಿಳಾಸ- ಆರ್. ಡಿ, ಸಿಂಧೆ.

ವಾಚ ರಿಪೇರರ ಮತ್ತು ಗ್ರಾಮೋಫೋನ ಡೀಲರ ಬಾಗಲಕೋಟೆ.

ಈ ಪತ್ರಿಕೆಯು ವೆಂಕಟೇಶ ಕೇಶವಾಚಾರ್ಯ ಕರ್ಜಗಿ ಇವರು ಬಾಗಲಕೋಟೆ ವಿದ್ಯಾವೃದ್ಧಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥-मनु.

ಕನ್ನಡಿಗ

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ತಿಥಿ ಮಾಘ ಶುದ್ಧ ೯ ಶಕೆ ೧೮೫೨ ತಾ॥ ೨೮—೧—೩೧ [ಸಂಚಿಕೆ ೧೭೩

ಶ್ರೀಮತಿ ಸರೋಜನಿದೇವಿ
ಹಾಗು

ಮಹಾತ್ಮಾ ಗಾಂಧಿಯವರನ್ನು ಬಿಟ್ಟರು.

(ಸಂತಿಯ ವಾರ್ತೆ, ತಾ॥ ೨೭)

ಕಾರವಾರ ಜಿಲ್ಹೆಯ ಹಳಿಯಾಳ, ಸಿದ್ದಾಪುರ, ಮುಂಡಗೋಡ, ಬನವಾಸಿ, ಕುಮಟಾ, ಅಂಕೋಲಾ ... ಮುಂತಾದ ಕಡೆಗಳಲ್ಲಿ ... ಮುಂತಾದ ಜನರು ಜನಗಣತಿಯನ್ನು ಬಹಿಷ್ಕರಿಸಿದ್ದಾರೆ. ... ಬಗ್ಗೆ ಬಹಳಷ್ಟು ಉದ್ಭವಿಸಿ ಹಾಗು ... ಮಂಗೇಶಭಟ್ಟ ... ಅವರಿಗೆ ... ಆಗಿದೆ. ಕೆಲವು ... ಒತ್ತಾಯದಿಂದ ... ಜನರು ಹೆಸರು ಹೇಳುವದಿಲ್ಲ, ಉಳಿದ ... ಸಂಗತಿ ತಿಳಿಸುವದಿಲ್ಲ. ಜನಗಣತಿಯ ಅಧಿಕಾರಿಗಳು ಈ ಬಗ್ಗೆ ಮೇಲಧಿಕಾರಿಗಳಿಗೆ ಬರೆದುಕೊಂಡಿದ್ದಾರೆ.

ಓದುಗರಲ್ಲಿ ಬಿನ್ನಹ

ಮುಂದಿನ ರವಿವಾರ ... "ಕನ್ನಡಿಗ"ನ ನಿತ್ಯ ಸಂಚಿಕೆಯು ಪ್ರಕಟವಾಗುವದಿಲ್ಲ. ... ದಿನದ ಕಾರಣದಿಂದ ಪ್ರಕಟವಾಗುವದು.

ವ್ಯವಸ್ಥಾಪಕ.

ಕಾಮನ್ಸ ಸಭೆಯಲ್ಲಿ ಮಹಾತ್ಮರ ಬಿಡುಗಡೆ

ಮಹಾತ್ಮ ಗಾಂಧಿ ಮೊದಲಾದ ಕಾಂಗ್ರೆಸ್ ನಾಯಕರ ಬಿಡುಗಡೆಯ ವಿಷಯವಾಗಿಯೂ, ಹಾಗು ಅದರಿಂದ ದೇಶದಲ್ಲುಂಟಾದ ಪರಿಣಾಮದ ವಿಷಯವಾಗಿಯೂ ಕಾಮನ್ಸ ಸಭೆಯಲ್ಲಿ ಪ್ರಶ್ನೆಗಳು ಕೇಳಲ್ಪಟ್ಟವು. ಅವುಗಳಿಗೆ ಭಾರತ ಮಂತ್ರಿಗಳಾದ ಮಿ. ಬೆನ್ರು "ಮಹಾತ್ಮಾ ಗಾಂಧಿ ಮೊದಲಾದವರನ್ನು ಯಾವ ಶರ್ತವೂ ಇಲ್ಲದೆ ಬಿಡುಗಡೆ ಮಾಡಿದೆವು. ಹೀಗೆ ಬಿಡುಗಡೆ ಮಾಡಿದ್ದರ ಎಲ್ಲ ಜವಾಬುದಾರಿಯೂ ಬ್ರಿಟಿಶ ಸರಕಾರದ ಮೇಲಿದೆ. ಇದಲ್ಲದೆ, ಬಿಡುಗಡೆಯಿಂದ [illegible] ಪರಿಣಾಮದ ವಿಷಯವಾಗಿ ಇಷ್ಟರಲ್ಲಿ ಏನೂ ಹೇಳಲಿಕ್ಕೆ ಬರಲಾರದೆಂದೂ" ಉತ್ತರ ಕೊಟ್ಟರು.

"ಒಡಂಬಡಿಕೆಯ [illegible] ಜೈಲಿನಿಂದ [illegible] ಬರುವದಾಗಿ ಮಹಾತ್ಮಾ ಗಾಂಧಿಯವರು ಹೋದ [illegible] ಹೇಳಿದ್ದು ಮಿ. ಬೆನ್ರ ಲಕ್ಷ್ಯದಲ್ಲಿದೆಯೇ?" ಎಂಬ ಪ್ರಶ್ನೆಯನ್ನು [illegible] ಲ್ಯಾಂಪ್ಸನರು ಕೇಳಿದರು. "ಪತ್ರಿಕೆಯಲ್ಲಿ ಓದಿದ್ದೇನೆ" ಎಂಬುದಾಗಿ ಬೆನ್ರು ಉತ್ತರ ಕೊಟ್ಟರು. "ಹಾಗಾದರೆ ಈ ಸಂಬಂಧವಾಗಿ ಏನಾದರೂ ಮಾಡಲು ಯೋಚಿಸುವಿರಾ?" ಎಂದು ಲಾರ್ಡ ಲ್ಯಾಂಪ್ಸನ್ ಕೇಳಿಕೊಂಡರು. ಸರಕಾರದವರ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿದ್ದಾರಾಗಿ ಬೆನರು ಹೇಳಿದರು.

ಬಂಡೀಗಾಲಿಯ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟವುಗಳ ವಿಷಯವಾಗಿ ವಿಚಾರ ಮಾಡಲು ಶಾಂತತೆಯ ವಾತಾವರಣವು ನಿರ್ಮಾಣವಾಗುವದು ಅವಶ್ಯವಾಗಿರುವದರಿಂದ, ಯಾವತ್ತು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ದಬ್ಬಾಳಿಕೆಯ ಕಾಯಿದೆಗಳನ್ನು ರದ್ದು ಮಾಡಬೇಕೆಂದು ಫ್ರೀಮನ್ನರು ಕೇಳಿಕೊಂಡರು. "ಮುಖ್ಯ ಪ್ರಧಾನರು ತಾ|| ೧೯ ನೆಯ ದಿವಸ ಮಾಡಿದ ಭಾಷಣದಲ್ಲಿ ವ್ಯಕ್ತಪಡಿಸಿದ್ದಕ್ಕಿಂತ ಹೆಚ್ಚಿಗೆ ಏನೂ ಹೇಳಲಾರೆ" ಎಂಬುದಾಗಿ ಮಿ. ಬೆನ್ನರು ಹೇಳಿದರು.

ಬೆಳಗಾವಿಯಲ್ಲಿ ಪೋಲೀಸರ ದುಂಡಾವರ್ತಿ

"ಸ್ವಾತಂತ್ರ್ಯ ದಿನ"ದ ದಿವಸ [illegible] ವದಲ್ಲಿ ಪೋಲೀಸರು ಸ್ತ್ರೀಯರ ಮೇಲೆ ನಡಿಸಿದ [illegible] ವಾಗಿ ನಿಜಸಂಗತಿಗಳು [illegible] ಬರಲು ಪ್ರಾರಂಭಿಸಿವೆ. [illegible] ಪಟ್ಟ [illegible] ವತಿ ವಿಜಯ [illegible] ಶ್ರೀಮತಿ ರಾಧಾಬಾಯಿ [illegible] ನ್ನು ನಿರೀಕ್ಷಿಸಿ [illegible] ನಂತೆ ಪ್ರಸಿದ್ಧಿಸಿದ್ದಾರೆ.

(೧) [illegible] ದಿನ [illegible] ರಾಷ್ಟ್ರಧ್ವಜವನ್ನು ಹಿಡಿದುಕೊಂಡು ನಿಂತಿದ್ದರು. ಪೋಲೀಸರು ಅವರು ಹಸ್ತದಲ್ಲಿದ್ದ ಅದನ್ನು ಕಸಿದುಕೊಳ್ಳಲು ಯತ್ನಿಸಿದರು. ಸೋನಾಬಾಯಿಯವರು ಅದನ್ನು ಗಟ್ಟಿಯಾಗಿ ಹಿಡಿದುಕೊಂಡರು. ಪೋಲೀಸರು [illegible] ಲಾಠಿ ಪೆಟ್ಟು ಕೊಟ್ಟರು. ಆದಾಗ್ಯೂ ಅವರು ಅದನ್ನು ಬಿಡಲಿಲ್ಲ. ಪೋಲೀಸರು ಅವರ ಕುರುಳನ್ನು ಹಿಡಿದು [illegible], ಆದರೂ ಅವರು ರಾಷ್ಟ್ರಧ್ವಜ [illegible] ಬಿಟ್ಟವರಲ್ಲ. [illegible] ಕೊಡೆಯುವ [illegible] [illegible] [illegible] ಅವರನ್ನು ಹಾಸಿಗೆ ಹಿಡಿದಿದ್ದಾರೆ.

(೨) ೧೩ ವರ್ಷದ ಓರ್ವ ಹುಡುಗಿಗೆ, [illegible] ಬೆನ್ನಿನ ಮೇಲೆ ಒಳೆತಾಗಿ ಪೆಟ್ಟು ಬಿದ್ದಿವೆ.

(೩) [illegible] ಗಂಗಾಬಾಯಿಯವರಿಗೆ ತಲೆಯ ಮೇಲೆ ಒಳೆತಾಗಿ ಹೊಡೆದದ್ದರಿಂದ ಅವರ ತಲೆಯಿಂದ ರಕ್ತವು ಸೋರುತ್ತಿತ್ತು. ಈ ಸ್ಥಿತಿಯಲ್ಲಿಯೇ ಅವರನ್ನು ಸೆರೆಹಿಡಿದುಕೊಂಡು ಹೋದರು.

ನಮಗೆ ತಿಳಿದು ಬಂದ ಸಂಗತಿಗಳೆಂದರೆ, (೧) ಮೆರವಣಿಗೆಯಲ್ಲಿದ್ದ ೧೫೦೦ ಜನ ಸ್ತ್ರೀಯರಲ್ಲಿ ೨೦೦ ಜನರಿಗೆ ಪೆಟ್ಟುಗಳು ಬಿದ್ದಿವೆ. (೨) ಈ ಜನರಲ್ಲಿ ೫೦ ಜನರು ಒಳೆತಾಗಿ ಪೆಟ್ಟು ತಿಂದಿದ್ದಾರೆ. (೩) ಲಾಠಿ, ಬಂದೂಕಿನ ಮೊನೆ ಹಾಗು ಬೂಟುಗಳಿಂದ ಹೊಡೆಯುವದರಲ್ಲಿ ಬಂದಿದೆ. (೪) ಎದೆ ಮೋರೆ, ತಲೆ, ಬೆನ್ನು, ಸೊಂಟ ಮೊದಲಾದ ಎಲ್ಲ ಭಾಗಗಳಿಗೂ ಪೆಟ್ಟು ಕೊಟ್ಟಿದ್ದಾರೆ (೫) ಕೆಲವರ ಸೀರೆ ಕುಪ್ಪಸಗಳಾದರೂ ಹರಿಯಲ್ಪಟ್ಟಿವೆ (೬) ಆ ಸಮಯದಲ್ಲಿ ಕೆಲವು ಪೋಲೀಸರು [illegible] (೭) [illegible] (೮) ಪೋಲೀಸರು ಆ ಕಾಲದ ದಸ್ತಗಿರಿ [illegible] ಮಾಡಬಾರದ ಚೇಷ್ಟೆಗಳನ್ನು ಮಾಡಿ ಸ್ತ್ರೀಯರನ್ನು ಅವಮಾನಗೊಳಿಸಿದ್ದಾರೆ.

೧೧ ವರ್ಷದ ಹುಡುಗನು

ಮ್ಯಾಜಿಸ್ಟ್ರೇಟರಿಗೆ ಉತ್ತರ ಕೊಟ್ಟಿದ್ದು

[illegible] ಜರಾದ [illegible] ಮಾತರದ [illegible] ಬಾಯಿ ಎಂಬ ೧೧ ವರ್ಷದ ಹುಡುಗನ, ಜನರಲ್ಲಿಯ ಶಾಂತಿಯನ್ನು ಅಳಿಸಿದ ಆರೋಪದಿಂದ ಬಂಧನಕ್ಕೊಳಗಾಗಿ ಮಾತಾರದಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಲ್ಪಟ್ಟನು. ಮ್ಯಾಜಿಸ್ಟ್ರೇಟರು ವಿಚಾರ ಮಾಡಿ ನಿರಪರಾಧಿಯೆಂದು ಅವನನ್ನು ಬಿಟ್ಟರು. ಕೂಡಲೆ ಆ ಹುಡುಗನು "ನಾನು ವಹಿಸಿಕೊಂಡ ಕಾರ್ಯವು ಅರ್ಧಕ್ಕೆ ಉಳಿದಿದೆ. ಮುಂದಕ್ಕೆ ಸಾಗಿಸಿ ಅದನ್ನು ಪೂರ್ತಿಗೊಳಿಸುತ್ತೇನೆ" ಎಂದು ಹೇಳಿ ಹೋದನು.

ಸೊಲ್ಲಾಪುರದ ಕೈದಿಗಳನ್ನು ಬಿಡುಗಡೆ ಮಾಡಿರಿ

ಸೊಲ್ಲಾಪುರ ದ [illegible] ತಾ|| ೩೦ ನೆಯ ದಿವಸ ಸಭೆ ಸೇರಿಸಿಕೊಂಡು, "ಬಂಡಿನಾಳಿಕೆಯ ಸಮಯದಲ್ಲಿ ಶಿಕ್ಷೆಗೆ ಪಾತ್ರರಾದ ಎಲ್ಲ ಕೈದಿಗಳನ್ನೂ ಬಿಡುಗಡೆ ಮಾಡಬೇಕಾಗಿ ಸರಕಾರಕ್ಕೆ ಈ ಸಭೆಯು ಬೇಡಿಕೊಳ್ಳುತ್ತದೆ." ಎಂಬ ಠರಾವನ್ನು ಸರ್ವಾನುಮತದಿಂದ ಪಾಸು ಮಾಡಿಕೊಂಡರು.

ಹುಬ್ಬಳ್ಳಿಯಲ್ಲಿ

ಕರ್ನಾಟಕ ಏಕೀಕರಣ ದಿನ

ಕರ್ನಾಟಕ ಏಕೀಕರಣ ಸಂಘದವರು ಕೇಳಿಕೊಂಡ ಮೇರೆಗೆ ತಾ|| ೨೩ನೇ ದಿವಸ ಹುಬ್ಬಳ್ಳಿಯಲ್ಲಿ ಶ್ರೀ ಎಲ್ ಎಸ್ ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆ ನೆರೆದ "ಏಕಾಂಗೀಕರಣದ ಕರ್ನಾಟಕಕ್ಕೆ ಸ್ವತಂತ್ರ ರಾಜ್ಯ [illegible] ಕೂಡಿದ ಹುಬ್ಬಳ್ಳಿಯ ಸಾರ್ವಜನಿಕ ಸಭೆಯು ಸಂಪೂರ್ಣ ಸ್ವರಾಜ್ಯದೊಳಗೆಯೇ ಭಾಷಾನುವಾರವಾಗಿ ಪ್ರಾಂತಗಳ ವಿಂಗಡನೆಯಾಗಬೇಕೆಂದು ತನ್ನ ಶ್ರದ್ಧೆಯಿರುವದೆಂದು ತಿಳಿಸುವದಲ್ಲದೆ ಕರ್ನಾಟಕ ಭಿನ್ನ ಭಿನ್ನ ವಿಭಾಗಗಳನ್ನು ಒಂದುಗೂಡಿಸಿ ಏಕದೇಹ ಏಕಾತ್ಮವಾದ ಅಖಂಡ ಕರ್ನಾಟಕ ಪ್ರಾಂತವಾಗಬೇಕೆಂಬುವ ಮಾತಿನ ಪುನರುಚ್ಚಾರ ಮಾಡುತ್ತದೆ." ಎಂಬ ಠರಾವು ಸರ್ವಾನುಮತದಿಂದ ಸ್ವೀಕೃತವಾಯಿತು.

ಸರಕಾರಿ ಅಧಿಕಾರಿಯು

[illegible]

[illegible] ಸ್ಪೆಷಲ [illegible] ಮಾಡಲು ಮುದ್ರಿಸಿ [illegible] ಗೃಹ ಮಂಡಳದ ಸರ್ವಾಧಿಕಾರಿಗಳಾಗಿದ್ದಾರೆ.

ಈ ಪತ್ರಿಕೆಯು ವೆಂಕಟೇಶ ಶೇಷರಾವ [illegible] ಬಾಗಲಕೋಟೆ [illegible] ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು [illegible] ಪ್ರಸಿದ್ಧಿ ಪಡಿಸಲ್ಪಟ್ಟಿತು.

ಮಹಾತ್ಮರ ದೃಢನಿಶ್ಚಯ.

ಅಹಮ್ಮದಾಬಾದದ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ರಣಛೋಡಲಾಲರು ಒಂದು ತಾರು ಕಳಿಸಿ, ಅಹಮ್ಮದಾಬಾದಕ್ಕೆ ಬರಲು ಕೇಳಿಕೊಂಡದ್ದಕ್ಕೆ, "ಸ್ವರಾಜ್ಯವು ಸಿಕ್ಕ ದಿವಸವೇ ಅಹಮ್ಮದಾಬಾದದಲ್ಲಿ ಕಾಲಿಡುವೆ"ನೆಂಬುದಾಗಿ ಮಹಾತ್ಮಾ ಗಾಂಧಿಯವರು ಉತ್ತರ ಕೊಟ್ಟಿದ್ದಾರೆ. ಉಪ್ಪಿನ ಸತ್ಯಾಗ್ರಹಕ್ಕಾಗಿ ದಾಂಡಿಗೆ ಹೋದ ಬಳಿಕ ಮುಂದೆ ಸ್ವರಾಜ್ಯ ಸಿಗದ ಹೊರತು ಆಶ್ರಮಕ್ಕೆ ತಿರುಗಿ ಬರುವದಿಲ್ಲವಾಗಿ ಅವರು ಹೇಳಿದ್ದರು.

ರಾಜಕೀಯ ಕೈದಿಗಳಿಗೆ

ಬಿಡುಗಡೆಯಾಗುವದೋ?

ಸತ್ಯಾಗ್ರಹ ಚಳವಳಿಯ ಮೂಲಕವಾಗಿ ಶಿಕ್ಷೆಗೆ ಗುರಿಯಾಗಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಜನರನ್ನೂ, ಸ್ತ್ರೀಯರನ್ನು ಬಿಡುಗಡೆ ಮಾಡುವ ಸಂಬಂಧವಾಗಿ ಹಿಂದುಸ್ಥಾನ ಸರಕಾರದವರು ಪ್ರಾಂತಿಕ ಸರಕಾರಗಳೊಡನೆ ವಿಚಾರ ನಡಿಸಿರುವರಾಗಿಯೂ ರಾಜಕೀಯ ಚಳವಳಿಯ ಸಲುವಾಗಿ ಸೆರೆಮನೆಯನ್ನು ಅನುಭವಿಸುತ್ತಿರುವ ಯಾವತ್ತೂ ಸೆರೆಯಾಳುಗಳ ಪಟ್ಟಿಯನ್ನು ಸಿದ್ಧಪಡಿಸಲು ಬಂಗಾಲ ಸರಕಾರದವರಿಗೆ ಕೇಳಿಕೊಂಡಿರುವರಾಗಿಯೂ ತಿಳಿದು ಬರುತ್ತದೆ

ದಬ್ಬಾಳಿಕೆಯು ನಿಲ್ಲದ ಹೊರತು

ಶಾಂತತೆಯಿಲ್ಲ

ವರ್ಕಿಂಗ ಕಮಿಟಿಯ ಕಾರ್ಯಕ್ರಮವನ್ನು ತೀರಿಸಿಕೊಂಡು ಶ್ರೀ ಸೇನಗುಪ್ತರು ಕಲಕತ್ತೆಗೆ ಬಂದ ಕೂಡಲೆ "ಫ್ರೀಪ್ರೆಸ್" ಪತ್ರಿಕೆಯ ಪ್ರತಿನಿಧಿಯು ಅವರನ್ನು ಕಂಡುಕೊಂಡು, ಸದ್ಯದ ಪರಿಸ್ಥಿತಿಯ ವಿಷಯವಾಗಿ ಅವರ ಅಭಿಪ್ರಾಯವು ಕೇಳಿದನು. ಆಗ ಅವರು ಕೆಳಗಿನಂತೆ ಹೇಳಿದರು.

"ಯಾವತ್ತೂ ರಾಜಕೀಯ ಕೈದಿಗಳನು ಬಿಡುಗಡೆ ಮಾಡದ ಹೊರತು, ಮುಖ್ಯ ಪ್ರಧಾನರ ಜಾಹೀರನಾಮೆಯನ್ನು ವಿಚಾರ ಮಾಡಲು ಅವಶ್ಯವಿರುವ ಸರಿಯಾದ ವಾತಾವರಣವು [illegible] ನಿರ್ಮಾಣವಾಗಲಾರದು. [illegible] ಪ್ರಾರಂಭಿಸಲ್ಪಟ್ಟಲ್ಲಿ, ದೇಶದಲ್ಲಿ ಶಾಂತತೆಯು ನೆಲೆಗೊಳ್ಳುವದು ತೀರ ಅಸಂಭವನೀಯವಾಗಿದೆ"

ಶ್ರೀ ವಿಠ್ಠಲಭಾಯಿಯವರ ಪ್ರಕೃತಿ

ಶ್ರೀ ವಿಠ್ಠಲಭಾಯಿ [illegible] ಈಗ ಮುಂಬಯಿಯಲ್ಲಿ [illegible] ನರ್ಸಿಂಗ ಹೋಮದಲ್ಲಿ ಡಾ. [illegible] ಪಟೇಲ ಭರೂಚಾ, [illegible] ಇವರಿಂದ ಔಷಧೋಪಚಾರ ಹೊಂದುತ್ತಿರುವರು. ಅವರ ಪ್ರಕೃತಿಯು ಸಾವಕಾಶವಾಗಿ ಸುಧಾರಿಸಹತ್ತಿದರೂ, [illegible] ಇನ್ನೂ ಇದೆ. ಕೆಳಭಾಗದಲ್ಲಿನ ಕರುಳು ಉಬ್ಬುವದರಿಂದ ಅವರಿಗೆ ಅದರಿಂದ ತ್ರಾಸ ಹೊಂದಬೇಕಾಗಹತ್ತಿದೆ. ಯುರೋಪಖಂಡದಲ್ಲಿಯ ಯಾವದಾದರೂ ಶೀತಲ ಪ್ರದೇಶಕ್ಕೆ ಹೋಗಿ ಅಲ್ಲಿ ಉಪಚಾರ ಹೊಂದಿ ವಿಶ್ರಾಂತಿಯನ್ನು ಮಾಡುವ ಅವಶ್ಯತೆ [illegible].

ಗುಡಿಯನ್ನು ಜಪ್ತ ಮಾಡಿದರು

ರತ್ನಾಗಿರಿ ಜಿಲ್ಹಾ ಡಿ. ಮ್ಯಾಜಿಸ್ಟ್ರೇಟರು [illegible] ಒಂದು ನೋಟೀಸ ಕೊಟ್ಟಿದ್ದು, [illegible] ದೇವಾಲಯದ [illegible] ಹಾಕಿದ್ದಾರೆ

ಶ್ರೀ [illegible]ಗೆ

ನೋಟೀಸ ಕೊಟ್ಟರು

ಅಹಮ್ಮದಾಬಾದ [illegible] ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಗುಜರಾಥ ವಿದ್ಯಾಪೀಠದ ಪ್ರೊ. ಜಿ. [illegible] ಯವರಿಗೆ [illegible] ನೋಟೀಸು ಕೊಟ್ಟು, ಒಳ್ಳೆ ನಡತೆಯ ಬಗ್ಗೆ ೫೦೦ ರೂಪಾಯಿ ಜಾಮೀನು ಕೊಡಲು ಯಾಕೆ ಹೇಳಬಾರದೆಂಬ ಬಗ್ಗೆ ಜವಾಬು ಕೊಡಲು ತಾ|| [illegible] ಕೋರ್ಟಿಗೆ ಬರಲು ಅವರಿಗೆ ಆಜ್ಞೆ ಮಾಡಿದ್ದಾರೆ

ನವಜೀವನ ಮಂದಿರವನ್ನು

ಝಡತಿ ಮಾಡಿದರು

ಅಹಮದಾಬಾದದ ಪೋಲೀಸ ಅಧಿಕಾರಿಗಳು ತಾ|| [illegible] ದಿವಸ ಅಲ್ಲಿಯ ಮಹಾತ್ಮಾಗಾಂಧಿಯವರ ನವಜೀವನ ಪ್ರಕಾಶನ ಮಂದಿರವನ್ನೂ, ಗುಜರಾಥ ವಿದ್ಯಾಪೀಠದ [illegible] ಝಡತಿ ಮಾಡಿದರು. ಝಡತಿಯಲ್ಲಿ ಆಕ್ಷೇಪಾರ್ಹವಾದ ವಸ್ತುಗಳೇನೂ ಸಿಗಲಿಲ್ಲ.

ಭೋಪಾಳದ ನವಾಬರು

ಮಹಾತ್ಮರ ಭೆಟ್ಟಿಗೆ ಹೊರಟರು

ಬಂದೀಗಾರಿಯು [illegible] ಯಿಂದ ಮೊನ್ನೆ ಮುಂಬಯಿಗೆ ಬಂದಿದ್ದ ಭೋಪಾಳದ ನವಾಬರು ಮಹಾತ್ಮಾ ಗಾಂಧಿಯವರ [illegible] ತೆಗೆದುಕೊಳ್ಳುವರು [illegible]. ಅವರೊಡನೆ ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಚಾರಿಸುವದಕ್ಕಾಗಿ ತಾ|| [illegible] ದಿವಸ ಅಲಹಾಬಾದಕ್ಕೆ ಹೊರಟು ಹೋದರು

ಕರಾಚಿಯ

ಕಾಂಗ್ರೆಸ್ ಅಧಿವೇಶನ.

ಪಂಡಿತ ಜವಾಹಿರಲಾಲರ ಸಮ್ಮತಿ ದೊರೆತಲ್ಲಿ, ಮಾ|| ೨೯ರಿಂದ ೩೧ರ ವರೆಗೆ ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನವನ್ನು ಕೂಡಿಸತಕ್ಕದ್ದಾಗಿ ಸಿಂಧ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ [illegible] ನಿರ್ಣಯ ಮಾಡಿದ್ದಾರೆ.

ಅಧಿಕಾರಿಗಳು

ರೈತರ ಮನವೊಲಿಸ ಹತ್ತಿದರು

[illegible] ಜಿಲ್ಹೆಯ [illegible] ಧೋಲಕಾ ಎಂಬ [illegible] ರೈತರು [illegible] ಇಲ್ಲವಾಗಿ ನಿರ್ಧರಿಸಿಕೊಂಡು [illegible] ಅಧಿಕಾರಿಗಳು ಬೇರೆ ಬೇರೆ ರೀತಿಯಿಂದ ಅವರ ಮನವೊಲಿಸಹತ್ತಿದ್ದಾರಾಗಿ ತಿಳಿದು ಬರುತ್ತದೆ

ಮಂತ್ರಿಗಳು

ರಾಜೀನಾಮೆ ಕೊಟ್ಟರು

ಸಂಯುಕ್ತ ಪ್ರಾಂತದ ಶಿಕ್ಷಣ ಖಾತೆಯ ಮಂತ್ರಿಗಳಾಗಿರುವ ರಾಜಾ ಬಹದ್ದೂರ ಕುಶಾಲಪಾಲಸಿಂಗರು ತಮ್ಮ ಮಂತ್ರಿಪದಕ್ಕೆ ಮೊನ್ನೆ ರಾಜೀನಾಮೆ ಕೊಟ್ಟರು.

ವಿಚಿತ್ರ ಗಡಿಯಾರ

ಜರ್ಮನಿಯು ಹೊಸ ವಿಧಾನದ ಎಲಾರ್ಮ್ ಗಡಿಯಾರವನ್ನು ತಯಾರಿಸಿದೆ. ಯಾವನಾದರೂ ತಾವು ಅಪೇಕ್ಷಿಸುವ ವೇಳೆಯಕ್ಕೆ ಆ ಗಡಿಯಾರವನ್ನು [illegible] ಬಹಳ ಉಪಕಾರ!

ಕರಾಚಿಯದಲ್ಲಿ

ಉಪ್ಪಿನ ಕಾಯಿದೆ ಭಂಗ

[illegible] ಜಿಲ್ಲೆಯ [illegible] ಕರೋಚಿ ಹಳ್ಳಿಯ [illegible] ಸ್ವಾತಂತ್ರ್ಯ [illegible] ದಿನ [illegible] ಉಪ್ಪನ್ನು [illegible] ಸ್ವಾತಂತ್ರ್ಯ ದಿನವನ್ನು [illegible] ಸಭೆ [illegible] ಭಾಷಣವು [illegible] ಸಿದ್ಧ [illegible] ಉಪ್ಪು [illegible] ಸಭೆಯಲ್ಲಿ [illegible].

ವಿರಮಗಾವದಲ್ಲಿ

೨೮ ಜನರಿಗೆ ಕೈದು

ಗುಜರಾಥ [illegible] ವೀರಮಗಾವದಲ್ಲಿ ತಾ॥ ೨೯ ನೆಯ ದಿವಸ [illegible] ಸತ್ಯಾಗ್ರಹ ಮಂಡಳದ [illegible] ಶ್ರೀ [illegible] [illegible] ೨೮ ಜನರು ಕಾಯಿದೆ ಭಂಗದ [illegible] ಕೈದು ಮಾಡಲ್ಪಟ್ಟಿದ್ದಾರೆ,

[illegible] ಮೆರವಣಿಗೆಗೆ

ಪ್ರತಿಬಂಧ

ಜನರು [illegible] ಸಮಾರಂಭದಲ್ಲಿ [illegible] ಮಾಡುತ್ತಿರುವ [illegible] ಅಧಿಕಾರಿಗಳು [illegible] ಹತ್ತಿದ್ದಾರೆ. [illegible] ಧರಿಸಿ [illegible] ಇಲ್ಲ. ಆದ್ದರಿಂದ [illegible] ಮೆರವಣಿಗೆಯನ್ನು [illegible] ಹೋಗಗೊಡಲಿಲ್ಲ.

ಶುದ್ಧ ಮಿಲು ! ಶುದ್ಧ ಮಿಲು !

ನಮ್ಮಲ್ಲಿ ಎಲ್ಲ [illegible] ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. [illegible]

ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರೊವ್ಹಿಡೆಂಟ ಕಂಪನಿ ಲಿ. ಕಲಕತ್ತಾ ಈ ಕಂಪನಿಯ ವಿಮೆದಾರರಲ್ಲಿ ವಿನಂತಿ—

ಈಗ ೩-೪ ತಿಂಗಳಿಂದ ಏಜಂಟರ ಕಡಿಂದಾ [illegible] ಕಂಪನಿಗೆ [illegible] ರೀತಿಯಿಂದಾ [illegible] ಎಷ್ಟೋ ಜನರ ಕಡಿಂದಾ [illegible] ಅಥವಾ [illegible] ಪಾವತಿ [illegible] ಕಂಪನಿಯ [illegible] ಹಿಂದಿನ [illegible] ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಕಂತು ಆಫೀಸದಲ್ಲಿ ಅಥವಾ ಏಜಂಟರ ಕಡಿಗೆ [illegible] ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದ ತಕರಾರು ನಡೆಯದಂತೆ [illegible]

ಬಾಗಲಕೋಟ — ಸ್ಪಿ. ಜೆ ಪರ್ವತಿ.
೨-೨-೩೧ — ಚೀಫ ಏಜಂಟ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಗೋಲ	೦-೬-೦
ಪ್ರಶ್ನೋತ್ತರ [illegible]	೦-೬-೬
ಪ್ರಶ್ನೋತ್ತರ [illegible]	೦-೬-೦
[illegible] ಉಪ್ಪಣೆಗಳು	೦-೧೦-೨
[illegible] ಪದ್ಧತಿ	೧-೦-೩

([illegible])

ಇಲ್ಲದೆ [illegible] ಶಾಲೆಯ [illegible] ಪುಸ್ತಕ [illegible] ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಸ್ಯಾಂಪಲ್) ಮಶಿ ಚೀಟಿಗಳು (ಪುಕ್ಕಟೆ

ನೀಲಿ [illegible], ಕೆಂಪು, ಜಾಂಬಳ ಮಶಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ಪೋಸ್ಟ ಫೀ
೫ ತೊಲಿ ಪಾಕೀಟಗಳಿಗೆ	೧-೦-೦
[illegible] ೧೨ ಜನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟೈಮ್‌ಪೀಸ ವಗೈರೆ ದುರಸ್ತು ಮಾಡಿಕೊಡುತ್ತಲಿದ್ದೇವೆ. ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, [illegible] ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಂಡು [illegible] ಸ್ವೀಕರಿಸಲಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟ

ಪುರಂದರೆಯವರ

ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲ [illegible] ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. [illegible] ಟೊಪ್ಪಿಗೆಗಳನ್ನು [illegible] ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ [illegible] ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
[illegible] ವಿಜಾಪುರ

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕೆಂಭಾವಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕೆಂಭಾವಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಿ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA BAGALKOT.

BI-WEEKLY ದ್ವಿವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶನಿವಾರ ಮಿತಿ ಮಾಘ ಬಹುಳ ೫ ಶಕೆ ೧೮೫೨ ತಾ॥ ೭—೨—೩೧ [ವಿಶೇಷ ಸಂಚಿಕೆ

ಹಿಂದುಸ್ಥಾನದ ಮೇಲೆ ಭಯಂಕರ ವಜ್ರಾಘಾತ.

ಪಂಡಿತ ಮೋತೀಲಾಲರು ಸ್ವರ್ಗಸ್ಥರಾದರು.

(ಲಖನೌ ವಾರ್ತೆ, ತಾ॥ ೬)

ಹಿಂದುಸ್ಥಾನದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರೂ, ಮೇಲಾದ ರಾಜಕಾರಣಪಟುಗಳೂ, ಆದ ಪಂಡಿತ ಮೋತೀಲಾಲ ನೆಹರೂರವರು ಇಂದು ಮುಂಜಾನೆ ೬ ಗಂಟೆಗೆ ಲಖನೌದಲ್ಲಿ ಅಸ್ವಸ್ಥತೆಯಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಹಿಂದುಸ್ಥಾನದ ಭಾವೀರಾಜ್ಯಘಟನೆಯ ವಿಷಯವಾಗಿ ಕಾಂಗ್ರೆಸ್ ಹಾಗು ಸರಕಾರದ ನಡುವೆ ಚರ್ಚೆಯಾಗಬೇಕಾದ ಈ ಸಮಯದಲ್ಲಿ ಮೇಲಾದ ಮುತ್ಸದ್ದಿಗಳಾದ ಪಂಡಿತ ಮೋತೀಲಾಲರು ಸ್ವರ್ಗಸ್ಥರಾದದ್ದು ಹಿಂದುಸ್ಥಾನದ ಮೇಲೆ ಭಯಂಕರ ವಜ್ರಾಘಾತವಾಗಿದೆ. ಈಶಚಿತ್ತಕ್ಕೆ ಉಪಾಯವಿಲ್ಲ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಮುಂಬಯಿಯಲ್ಲಿ
ಎರಡು ದಿನ ಹರತಾಳ.

(ತಂತಿಯ ವಾರ್ತೆ ತಾ|| ೬)

ಪಂಡಿತ ಮೋತೀಲಾಲ ನೆಹರೂರವರು ನಿಧನ ಹೊಂದಿದ ದುಃಖದಾಯಕ ಸುದ್ದಿಯು ಇಲ್ಲಿ ಇಂದು ತಿಳಿದದ್ದರಿಂದ ಎರಡು ದಿನಗಳ ವರೆಗೆ ಹರತಾಳ ಮಾಡಲಾಗುತ್ತದೆ. ಸಂಜೆಯಲ್ಲಿ ದುಃಖದ ದರ್ಶಕ ಸಭೆಯು ನೆರೆದು, ಸರದಾರ ವಲ್ಲಭಭಾಯಿ ಮೊದಲಾದ ವರ್ಕಿಂಗ ಕಮಿಟಿಯ ಸಭಾಸದರ ಭಾಷಣಗಳಾಗಲಿಕ್ಕಿವೆ

ಲಖನೌದಲ್ಲಿ
ಸಂಪೂರ್ಣ ಹರತಾಳ

(ತಂತಿಯ ವಾರ್ತೆ)

ಪಂಡಿತ ಮೋತೀಲಾಲರು ಮುಂಜಾನೆ ಇಲ್ಲಿ ನಿಧನ ಹೊಂದಿದ ಮೂಲಕವಾಗಿ ಇಂದು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಸಪ್ರೂ ಮೊದಲಾದವರು
ಮುಂಬಯಿಗೆ ಬಂದರು.

(ತಂತಿಯ ವಾರ್ತೆ ತಾ|| ೬)

ಲಂಡನ ಗೋಲಮೇಜು ಪರಿಷತ್ತಿನ ಪ್ರತಿನಿಧಿಗಳಾದ ಸೋದ್ದ ಸರ್, ಸಪ್ರೂ, ಶಾಸ್ತ್ರಿ, ಶ್ರೀ ಜಯಕರ ಮೊದಲಾದವರು 'ವ್ಹಾಯಿಸರಾಯ ಆಫ್ ಇಂಡಿಯಾ' ಹಡಗದಿಂದ ಇಂದು ಮುಂಜಾನೆ ಇಲ್ಲಿಗೆ ಬಂದು ಇಳಿದರು. ಅಲಹಾಬಾದಕ್ಕೆ ಹೋಗಬೇಕೆನ್ನುವಷ್ಟರಲ್ಲಿಯೇ ಪಂಡಿತ ಮೋತೀಲಾಲರು ಲಖನೌದಲ್ಲಿ ಸ್ವರ್ಗಸ್ಥರಾದರೆಂಬ ದುಃಖದಾಯಕ ಸುದ್ದಿಯು ಇಲ್ಲಿಗೆ ಬಂದಿದ್ದರಿಂದ ಅವರು ತಮ್ಮ ಪ್ರಯಾಣವನ್ನು ರದ್ದುಪಡಿಸಿದರು. ಅವರ ಮುಂದಿನ ಕಾರ್ಯಕ್ರಮಗಳು ಇನ್ನೂ ನಿಶ್ಚಿತವಾಗಿಲ್ಲ. ಮುಂದಾಳುಗಳ ಸಭೆಯು ಮುಂಬಯಿಯಲ್ಲಿಯೇ ಕೂಡಬಹುದೆಂದು ತೋರುತ್ತದೆ.

ಒಪ್ಪಂದಕ್ಕಾಗಿ
ಮಹಾತ್ಮರ ಆತುರತೆ

ಅಲಹಾಬಾದದ ಪಾಯೊನಿಯರ ಪತ್ರಿಕೆಯ ಪ್ರತಿನಿಧಿಯು ಮಹಾತ್ಮಾ ಗಾಂಧಿಯವರನ್ನು ಕಂಡು, ಸದ್ಯಸ್ಥಿತಿಯ ವಿಷಯವಾಗಿ ಅವರೊಡನೆ ಮಾತುಕತೆ ಮಾಡಿದನು. ಆಗ ಮಹಾತ್ಮಾ ಗಾಂಧಿಯವರು ಕೆಳಗಿನಂತೆ ತಿಳಿಸಿದರು.

ನಾನು ಮೂಲತಃ ಶಾಂತ ಸ್ವಭಾವದವನೇ ಇದ್ದೇನೆ. ಆದರೆ ನನ್ನ ಜೀವಿತದಲ್ಲಿ ಒದಗಿ ಬಂದ ಪ್ರಸಂಗಗಳು ನನ್ನನ್ನು ಹೋರಾಡುವ ಸ್ವಭಾವದವನನ್ನಾಗಿ ಮಾಡಿವೆ. ಶಾಂತತೆಯು ಸ್ಥಾಪನವಾಗಬೇಕೆಂತ ಪ್ರಯತ್ನಪಡುತ್ತೇನೆ. ನನ್ನನ್ನು ನಂಬಿದ ಸಾವಿರಾರು ಜನರನ್ನು ಕಷ್ಟಕ್ಕೀಡು ಮಾಡುವದರಲ್ಲಿ ನನಗೇನೂ ಆನಂದವೆನಿಸುವದಿಲ್ಲ.

ಮುಖ್ಯ ಪ್ರಧಾನರು ಕೊಡಲಿಸಿದ್ದು ನನ್ನ ೧೧ ಬೇಡಿಕೆಗಳಿಗೆ ಸರಿಹೋಗುತ್ತದೆಂಬುದಾಗಿ ಸರ್ ತೇಜಬಹದ್ದೂರ ಸಪ್ರೂ, ಶಾಸ್ತ್ರಿ, ಶ್ರೀ ಜಯಕರ ಮೊದಲಾದವರು ನನಗೆ ತಿಳಿಸಿಕೊಟ್ಟು ನನ್ನನ್ನು ಸಮಾಧಾನಪಡಿಸಿದಲ್ಲಿ ಮಾತ್ರ ಒಪ್ಪಂದವಾಗುವದು ಸಾಧ್ಯವಿದೆ. ಹೀಗಾದಲ್ಲಿ ಸತ್ಯಾಗ್ರಹ ಚಳವಳಿಯನ್ನು ನಿಲ್ಲಿಸಲು ಕೇಳಿಕೊಳ್ಳುವೆನು. ಗುಜರಾಥ ಮತ್ತು ಬಂಗಾಲ ಪ್ರಾಂತಗಳಲ್ಲಿ ಅನೇಕ ಕಡೆಗೆ ಜಪ್ತಿ ಮಾಡಿ ಬಹು ಬೆಲೆಯುಳ್ಳ ಸರಕುಗಳನ್ನು ಒಯ್ದಿದ್ದಾರೆ. ಅವರು ಕರ ಕೊಡದೆ ಇದ್ದದ್ದೇ ಈ ಜಪ್ತಿಗೆ ಕಾರಣವಾಗಬಹುದು. ೧ ಲಕ್ಷ ರೂಪಾಯಿ ತೆಗೆದುಕೊಳ್ಳುವಾಗ ೫ ಲಕ್ಷ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ಜಪ್ತು ಮಾಡಿದ್ದರೆ, ಅದೆಲ್ಲವನ್ನೂ ತಿರುಗಿ ಕೊಡಲಿಕ್ಕೇ ಬೇಕು.

ರಾಜಕೀಯ ಕೈದಿಗಳು ಬಿಡುಗಡೆ ಮಾಡಲ್ಪಡುವರೆಂದು ನನಗೆ ಅನಿಸುತ್ತದೆ. ಅಸಂಬದ್ಧವಾದ ಸಂಬಂಧವಾಗಿ ನಾನು ಈ ವರೆಗೆ ಕೇಳಿದ್ದು ಕೆಲವರಿಗೆ ಸರಿ ತೋರಲಿಲ್ಲ. ನನ್ನ ಬೇಡಿಕೆಗಳು ಪೂರ್ಣವಾಗುವವೆಂದು ನನಗೆ ಮನವರಿಕೆಯಾದಲ್ಲಿ ಚಳವಳಿಯನ್ನು ನಿಲ್ಲಿಸುತ್ತೇನೆ ಮತ್ತು ಅವರಿಗಾದರೂ ಖಾತ್ರಿ ಮಾಡಿಕೊಡುತ್ತೇನೆ.

"ಯಂಗ ಇಂಡಿಯಾ'
ಜಪ್ತು ಮಾಡಿದರು

ಅಹಮ್ಮದಾಬಾದದ ಪೋಲೀಸ ಅಧಿಕಾರಿಗಳು ತಾ|| ೪ ನೆಯ ದಿವಸ ಶ್ರೀ ಲಾಲಶಂಕರರ ಮನೆಯನ್ನು ಝಡತಿ ಮಾಡಿದರು. ಆಗ ಶ್ರೀ ಲಾಲಶಂಕರರು ಮತ್ತು ಅವರ ಸಹಕಾರಿಗಳು "ಯಂಗ ಇಂಡಿಯಾ" ಪತ್ರಿಕೆಯನ್ನು ಸಾಯಕ್ಲೋಸ್ಟಾಯಿಲ್‌ದ ಮೇಲೆ ಮುದ್ರಿಸುತ್ತಿದ್ದರು. ಪೊಲೀಸರು ಯಂತ್ರ, "ಯಂಗ ಇಂಡಿಯಾ"ದ ಪ್ರತಿ ಮತ್ತು ೧೦೦ ರೂಪಾಯಿ ಅಂಚೆ ತಿಕೀಟುಗಳನ್ನು ತೆಗೆದುಕೊಂಡು ಹೋದರು. ಅಂದಿನ "ಯಂಗ ಇಂಡಿಯಾ"ದಲ್ಲಿ ಮಹಾತ್ಮಾ ಗಾಂಧಿಯವರ ಸಂದೇಶವು ಪ್ರಸಿದ್ಧವಾಗಿತ್ತು.

ಶ್ರೀ ಭಿಸೆಯವರಿಗೆ
೬ ತಿಂಗಳ ಕಠಿಣ ಶಿಕ್ಷೆ.

ಮರಾಠಾ ಸಮಾಜದ ಮುಂದಾಳುಗಳೂ ಪ್ರಖ್ಯಾತವಾದ ವ್ಯಾಯಾಮಶಾಲೆಯ ಸಭಾಸದರೂ ಈಗಿನ ಚಳವಳಿಯಲ್ಲಿ ವಿಶೇಷ ಉತ್ಸಾಹದಿಂದ ಭಾಗ ತೆಗೆದುಕೊಂಡವರೂ ಆಗಿದ್ದ ಶ್ರೀ ಭಿಸೆ ನರಸಿಂಗರಾಯರಿಗೆ ರಾಜದ್ರೋಹದ ಆರೋಪದ ದೆಸೆಯಿಂದ ತಾ|| ೪ ನೆಯ ದಿವಸ ೬ ತಿಂಗಳ ಕಠಿಣ ಶಿಕ್ಷೆಯಾಯಿತು. ಮುಂಬಯಿ ಕರ್ನಾಟಕದಲ್ಲಿ ರಾಜದ್ರೋಹದ ಆರೋಪಕ್ಕಾಗಿ ಶಿಕ್ಷೆ ಹೊಂದಿದವರು ಇವರೇ ಮೊದಲನೆಯವರಾಗಿದ್ದಾರೆ.

ಬಾಗಲಕೋಟೆಯಲ್ಲಿ
ಹರತಾಳ

ಪಂಡಿತ ಮೋತೀಲಾಲರು ತಾ|| ೬ ನೆಯ ದಿವಸ ಲಖನೌದಲ್ಲಿ ಸ್ವರ್ಗಸ್ಥರಾಗಿದ್ದರೆಂಬ ಸುದ್ದಿಯು ಅಂದೇ ಮಧ್ಯಾಹ್ನಕ್ಕೆ ಇಲ್ಲಿಗೆ ತಾರಿನಿಂದ ತಿಳಿದು, ಅದರಿಂದ ಇಂದು ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಂಜೆಯ ೫ ಗಂಟೆಗೆ ಮೆರವಣಿಗೆಯು ಹೊರಟು ಊರೆಲ್ಲ ಸುತ್ತಿ ಬಂದಿತು. ೬ ಗಂಟೆಗೆ ಲಾಲೂಜಿ ಚೌಕಿನಲ್ಲಿ ಶ್ರೀ ದೇಸಾಯಿ ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ದುಃಖಪ್ರದರ್ಶಕ ಸಭೆ ಜರುಗಿ, ದುಃಖಪ್ರದರ್ಶನದ ಠರಾವು ಪಾಸಾಯಿತು. ಶ್ರೀ ಕಣಬೂರ ವಕೀಲರ ಭಾಷಣವಾದವು.

ಈ ಪತ್ರಿಕೆಯು ವೆಂಕಟೇಶ ಶೇಷರಾಮಾಚಾರ್ಯ ಪುರ್ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಈ ಪತ್ರಿಕೆಯು ವೆಂಕಟೇಶ ಶೇಷರಾಮಾಚಾರ್ಯ ಪುರ್ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೆ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

यद्यत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BAGALKOT. BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಸೋಮವಾರ ಮಿತಿ ಮಾಘ ಬಹುಳ ೮ ಶಕೆ ೧೮೫೨ ತಾ॥ ೦೯—೨—೩೧ [ಸಂಚಿಕೆ ೧೮೫

ಮಹಾತ್ಮರಿಗೆ

ವ್ಹಾಯಿಸರಾಯರು ಉತ್ತರ ಕೊಟ್ಟರು

ಬೋರಸಾದದ ಸ್ತ್ರೀಯರ ಅವಮಾನ ಕಲೆಕ್ಟರಿಯ ಪೋಲೀಸರ ಪುಂಡಾಟಿಕೆ ಮೊದಲಾದವುಗಳನ್ನು ಉಲ್ಲೇಖಿಸಿ ಮಹಾತ್ಮಾ ಗಾಂಧಿಯವರು ಸ್ವಲ್ಪದಿನಗಳ ಹಿಂದೆ ವ್ಹಾಯಿಸರಾಯರಿಗೆ ಒಂದು ಪತ್ರ ಬರೆದಿದ್ದರಷ್ಟೆ. ಆ ಪತ್ರಕ್ಕೆ ವ್ಹಾಯಿಸರಾಯರು ಈಗ ಉತ್ತರ ಕೊಟ್ಟಿರುವರೆಂದೂ, ಅದರಿಂದ ಮಹಾತ್ಮರಿಗೆ ಸಾಕಷ್ಟು ಸಮಾಧಾನ ಹೊಂದುವಂತಿಲ್ಲವೆಂದೂ ತಿಳಿದು ಬರುತ್ತದೆ.

ಕಾಂಗ್ರೆಸ್ ಮುಖಂಡರ ಪ್ರಯಾಣ

(ತಂತಿಯ ವಾರ್ತೆ ತಾ॥ ೯)

ವರ್ಕಿಂಗ ಕಮೀಟಿಯ ಸಭಾಸದರಾದ ಸರದಾರ ವಲ್ಲಭಭಾಯಿ, ಶ್ರೀ ಜಯರಾಮ ದಾಸ, ಡಾ. ಪಟ್ಟಾಭಿ ಸೀತಾರಾಮಯ್ಯ ಇವರು ಇನ್ನೂ ಮುಂಬಯಿಯಲ್ಲಿರುವರು. ಅಲಹಾಬಾದಿನಲ್ಲಿ ಸೇರಲಿಕ್ಕಿದ್ದ ವರ್ಕಿಂಗ ಕಮೀಟಿಯ ಸಭೆಗೆ ಅವರು ಬುಧವಾರ ದಿವಸ ಇಲ್ಲಿಂದ ಹೊರಡಬಹುದಾಗಿ ತೋರುತ್ತದೆ.

ಮುಂಬಯಿ ಸರಕಾರದವರು ಪೋಲೀಸರ ಬೆನ್ನು ಚಪ್ಪರಿಸಿದರು.

(ತಂತಿಯ ವಾರ್ತೆ ತಾ॥ ೯)

ಬೋರಸಾದದ ಸ್ತ್ರೀಯರ ಪೋಲೀಸರ ಪುಂಡಾಟಿಕೆಯನ್ನು ಕುರಿತು ಮುಂಬಯಿ ಸರಕಾರದವರು ಒಂದು ಪ್ರಕಟನೆಯನ್ನು ಹೊರಡಿಸಿದ್ದು, ಅದರಲ್ಲಿ ಅವರು ಪೋಲೀಸರದೇನೂ ತಪ್ಪಿಲ್ಲವೆಂಬುದಾಗಿ ಧ್ವನಿತಮಾಡಿದ್ದಾರೆ.

ಮುಂಬಯಿಯಲ್ಲಿ ಯುದ್ಧಮಂಡಳದವರಿಗೆ ಶಿಕ್ಷೆ

(ತಂತಿಯ ವಾರ್ತೆ ತಾ॥ ೯)

ಉಪ್ಪಿನ ಕಾಯದೆಭಂಗ ಮಾಡಿದ್ದಕ್ಕಾಗಿ ಮುಂಬಯಿಯಲ್ಲಿ ಬಂಧನಕ್ಕೊಳಗಾದ ೧೩ನೆಯ ಯುದ್ಧ ಮಂಡಳದ ಡಾ. ಎಸ್. [illegible] ವೈದ್ಯ ಮೊದಲಾದ ೪ ಜನ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ೬ ತಿಂಗಳ ಕಾರಾಗೃಹವಾಸದ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಅಸೆಂಬ್ಲಿಯಲ್ಲಿ ದುಃಖಪ್ರದರ್ಶನ

(ತಂತಿಯ ವಾರ್ತೆ ತಾ॥ ೯)

ಪಂಡಿತ ಮೋತೀಲಾಲರು ನಿಧನ ಹೊಂದಿದ ಬಗ್ಗೆ ಅಸೆಂಬ್ಲಿಯಲ್ಲಿ ಈ ಹೊತ್ತು ದುಃಖಪ್ರದರ್ಶಕವಾಗಿ ಸಭೆಯ ಕಾರ್ಯವು ಮುಂದುವರಿಸಲ್ಪಟ್ಟಿತು. ಮಿ. [illegible]ಯವರು ದುಃಖಪ್ರದರ್ಶಕ ಠರಾವನ್ನು ಸಭೆಯ ಮುಂದೆ ಮಂಡಿಸಿ ಹಿಂದುಸ್ಥಾನ ಸರಕಾರ ಹಾಗು ಭಾರತ ಮಂತ್ರಿಗಳೂ ಈ ದುಃಖದಲ್ಲಿ ಸಹಕಾರಿಗಳಾಗಿದ್ದಾರೆಂಬುದನ್ನು ವ್ಯಕ್ತಪಡಿಸಿದರು.

ವರ್ಕಿಂಗ ಕಮೀಟಿಯ ಸಭೆ

ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭೆಯು ಇದೇ ತಿಂಗಳ ೧೩ನೆಯ ತಾರೀಖಿಗೆ ಅಲಹಾಬಾದದಲ್ಲಿ ಆನಂದ ಭವನದಲ್ಲಿ ಸೇರುವದಾಗಿ ಪಂಡಿತ ಜವಾಹಿರಲಾಲರು ಪ್ರಸಿದ್ಧ ಮಾಡಿದ್ದಾರೆ.

ಬಡಕುಂದ್ರಿಯಲ್ಲಿ ೧೪೪ನೇ ಕಲಮಿನ ಅವತಾರ

(ಸ್ವಂತ ಸುದ್ದಿಗಾರರಿಂದ)

ಬೆಳಗಾವಿ ಜಿಲ್ಲೆಯ ಬಡಕುಂದ್ರಿಯಲ್ಲಿ ಈಗ ಜಾತ್ರೆಯಿದ್ದು, ಜಾತ್ರೆಯಲ್ಲಿ ಸಭೆ, ಪಿಕೆಟಿಂಗ ಮೊದಲಾದವುಗಳನ್ನು ಮಾಡಕೂಡದೆಂದು ಅಧಿಕಾರಿಗಳು ೧೪೪ ನೇ ಕಲಮನ್ನು ಹೊರಡಿಸಿರುವರು. ಸ್ವಯಂಸೇವಕರು, ಹಾಗು ಹುಕ್ಕೇರಿಯ ಶ್ರೀ ಎಂ. ಪಿ. ಪಾಟೀಲ ವಕೀಲರು ಈ ಅಪ್ಪಣೆಯನ್ನು ಅಮಾನ್ಯಮಾಡಿ, ಸಭೆ ಮತ್ತು ಪಿಕೆಟಿಂಗ ಮಾಡಿದರು. ಈ ಸಂಬಂಧವಾಗಿ ೪ ಜನ ಸ್ವಯಂಸೇವಕರಿಗೆ ಈಗಾಗಲೇ ಶಿಕ್ಷೆಯು ಆಗಿದೆ, ಶ್ರೀ ಪಾಟೀಲ ವಕೀಲರನ್ನೂ ಸೆರೆ ಹಿಡಿಯುವವರಿದ್ದಾರಾಗಿ ವಾರ್ತೆಯಿದೆ. ಜಾತ್ರೆಯಲ್ಲಿ ಎಲ್ಲೆಲ್ಲಿಯೂ ಉತ್ಸಾಹವೇ ತೋರುತ್ತದೆ.

ಅಂಕೋಲೆಯು ಕರನಿರಾಕರಣೆಯ ಕೇಂದ್ರವಾಯಿತು.

(ಸ್ವಂತ ಸುದ್ದಿಗಾರರಿಂದ)

ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳಿಂದ ಬಂದ ಸುಮಾರು ೬೦ ಜನ ಕಾಂಗ್ರೆಸ್ ಕಾರ್ಯಕರ್ತರ ತಾ|| ೮ನೆಯ ದಿವಸ ಧಾರವಾಡದಲ್ಲಿ ಒಟ್ಟಿಗೆ ಕಲೆತು, ಮುಖ್ಯ ಪ್ರಧಾನರ ಜಾಹೀರನಾಮೆಯ ಬಗ್ಗೆ ವಿಚಾರ ಮಾಡಿದರು. ವಿಚಾರಾಂತ್ಯದಲ್ಲಿ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಸ್ವೀಕೃತವಾದವು.

(ಅ) ಮುಖ್ಯಪ್ರಧಾನರ ಜಾಹೀರನಾಮೆಯು ಅತ್ಯಂತ ಅಸ್ಪಷ್ಟತರವಾಗಿದ್ದು ಬಹಳೇ ಸಂದಿಗ್ಧ ಭಾಷೆಯಲ್ಲಿದೆ. ಅದರಿಂದ ಹಿಂದೀ ರಾಷ್ಟ್ರೀಯ ಮಹಾಸಭೆಯ ವ್ಯಕ್ತ ಆಕಾಂಕ್ಷೆಗಳಿಗೆ ಸ್ವಲ್ಪವೂ ಸಮಾಧಾನವಾಗುವಂತಿಲ್ಲ.

(ಬ) ಕೆಳಗಿನ ಕರಾರುಗಳನ್ನು ಸರಕಾರದವರು ಪೂರೈಸಿದ ಹೊರತು ಅವರ ಕೂಡ ಸಂಧಾನದ ಮಾತುಗಳನ್ನು ಆಡಕೂಡದೆಂದು ಈ ಸಭೆಯ ಅಭಿಪ್ರಾಯವಿರುತ್ತದೆ. ಆ ಕರಾರುಗಳೆಂದರೆ:—

(೧) ರಾಜಕೀಯ ಚಳವಳಿಯ ಮೂಲಕವಾಗಿ ಶಿಕ್ಷೆಗೆ ಗುರಿಯಾಗಿ ಈಗ ಜೇಲಿನಲ್ಲಿರುವ ಎಲ್ಲ ರಾಜಕೀಯ ಕೈದಿಗಳನ್ನು ಕೂಡಲೆ ಬಿಡುಗಡೆ ಮಾಡಬೇಕು. ಎಲ್ಲ ರಾಜಕೀಯ ಖಟ್ಲೆಗಳನ್ನು ಹಿಂತೆಗೆದುಕೊಳ್ಳಬೇಕು. ಈ ಚಳವಳಿಯಲ್ಲಿ ಭಾಗವಹಿಸಿದ ವಕೀಲರ ಬಗ್ಗೆ ನಡೆಸಿರುವ ವಿಚಾರಣೆಯನ್ನು ರದ್ದುಪಡಿಸಬೇಕು.

(೨) ಈ ಚಳವಳಿಯಲ್ಲಿ ಭಾಗತೆಗೆದುಕೊಂಡ ನಿಮಿತ್ತವಾಗಿ ಯಾವ ಯಾವ ಆಸ್ತಿಗಳನ್ನು ಜಪ್ತು ಮಾಡುವದರಲ್ಲಿ ಬಂದಿದೆಯೋ ಆ ಆ ಆಸ್ತಿಗಳನ್ನು ಅವುಗಳ ಒಡೆಯರಿಗೆ ತಿರುಗಿ ಕೊಡಬೇಕು. ಶಿಕ್ಷೆಗೊಳಗಾದವರಿಂದ ವಸೂಲ ಮಾಡಿದ ದಂಡದ ಹಣವನ್ನು ಆ ಆ ಜನರಿಗೆ ತಿರುಗಿ ಒಪ್ಪಿಸಬೇಕು.

(೩) ಯಾವತ್ತು ಆರ್ಡಿನನ್ಸಗಳನ್ನು ಹಾಗು ದಬ್ಬಾಳಿಕೆಯ ಕಾಯಿದೆಗಳನ್ನು ರದ್ದು ಮಾಡಬೇಕು.

(೪) ಕರನಿರಾಕರಣೆ ಚಳವಳಿಯು ಪ್ರಾರಂಭವಾದ ಭಾಗಗಳಲ್ಲಿ ಎಲ್ಲಿಯಾದರೂ ಈಗಾಗಲೆ ಹಪ್ತೆ ಎತ್ತುವದು ನಡೆದಿದ್ದರೆ, ಒಡಂಬಡಿಕೆಯ ಮಾತುಕತೆಗಳು ಮುಗಿಯುವ ವರೆಗೆ ಅದನ್ನು ಮುಂದಕ್ಕೆ ಹಾಕಬೇಕು.

ಕರನಿರಾಕರಣೆ ಚಳವಳಿ

ಕರನಿರಾಕರಣೆ ಚಳವಳಿಯ ಸಂಬಂಧವಾಗಿ ಸಭೆಯಲ್ಲಿ ಈ ಕೆಳಗಿನ ಠರಾವು ಸ್ವೀಕೃತವಾಗಿದೆಯೆಂದು ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ರಾಜಕೀಯ ಕಾರಣಗಳಿಗಾಗಿ ಕರನಿರಾಕರಣೆಯನ್ನು ಕೈಕೊಂಡ ಅಂಕೋಲೆ ತಾಲೂಕನ್ನು ಈ ಚಳವಳಿಯ ಕೇಂದ್ರವನ್ನಾಗಿ ಮಾಡಿಕೊಂಡು, ಸಿರಸಿ, ಸಿದ್ದಾಪುರ, ಹಿರೇಕೆರೂರುಗಳಲ್ಲಿ ಆರ್ಥಿಕ ಕಾರಣಗಳಿಗಾಗಿ ನಡೆಯುವ ಇದೇ ಚಳವಳಿಗೆ ಕರ್ನಾಟಕವು ಎಲ್ಲ ತರದಿಂದ ಸಹಾಯ ಮಾಡುತ್ತದೆಂದು ಆಶ್ವಾಸನ ಕೊಡುತ್ತದೆ.

ಕರ್ನಾಟಕ ಏಕೀಕರಣ

ಕರ್ನಾಟಕ ಏಕೀಕರಣದ ಸಲುವಾಗಿಯೂ ಮೇಲ್ಕಂಡ ಸಭೆಯಲ್ಲಿ ಮುಂದೆ ಕಾಣಿಸಿದ ನಿರ್ಣಯವು ಪಾಸಾಗಿದೆ.

ಸ್ವರಾಜ್ಯ ಹಾಗು ಭಾಷಾನ್ವಯ ಪ್ರಾಂತರಚನೆಯ ಸ್ಥಾಪನೆಯು ಒಂದೇ ಕಾಲಕ್ಕೆ ಆಗಬೇಕೆಂದು ಈ ಸಭೆಯ ಅಭಿಪ್ರಾಯವಿದ್ದದರಿಂದ ಹಿಂದುಸ್ಥಾನದ ಭಾವೀ ರಾಜ್ಯಘಟನೆಯಲ್ಲಿ ಕರ್ನಾಟಕವನ್ನು ಸ್ವತಂತ್ರ ಪ್ರಾಂತವನ್ನು ಮಾಡಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಮಂಡಳಕ್ಕೆ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ

ಅಂಕೋಲೆಯಲ್ಲಿ ಸೇನಾಪತಿ ಹರ್ಡೀಕರರು

(ಸ್ವಂತ ಸುದ್ದಿಗಾರರಿಂದ)

ಕರ್ನಾಟಕದ ಮುಖಂಡರೂ ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭಾಸದರೂ ಆದ ಸೇನಾಪತಿ ಹರ್ಡೀಕರರು ಕಳೆದ ೨-೩ ತಾರೀಖಗಳಿಗೆ ಅಂಕೋಲಾ ತಾಲೂಕಿನ ಬೇರೆ ಬೇರೆ ಹಳ್ಳಿಗಳನ್ನು ಸಂದರ್ಶಿಸಿ ಅಲ್ಲಿಯ ಜನರಲ್ಲಿ ಜಾಗೃತಿಯನ್ನುಂಟುಮಾಡಿದರು. ಅವರು ಬಿಡುಗಡೆಯಾಗಿಬಂದ ಕೆಲವೆ ದಿನಗಳಲ್ಲಿಯೇ ಇಲ್ಲಿಗೆ ಬಂದದರಿಂದಲೂ, ಈ ತಾಲೂಕಿನಲ್ಲಿ ಕರನಿರಾಕರಣೆಯ ಚಳವಳಿಯ ಮೂಲಕ ಅತ್ಯಂತ ಉತ್ಸಾಹ ಉಂಟಾಗಿರುವದರಿಂದಲೂ ಅವರು ಹೋದಹೋದಲ್ಲಿ ಮೆರವಣಿಗೆ, ಮಾನಪತ್ರ, ಸಭೆ, ಕಾಣಿಕೆ ಮೊದಲಾದ ಸಮಾರಂಭಗಳು ನಡೆದವು.

೨ ನೇ ತಾರೀಖಿನ ಸಂಜೆಗೆ ಸೇನಾಪತಿಗಳು ಸೂರ್ವೆಗೆ ಹೋಗಲು ಅಲ್ಲಿಯ ಜನರು ಅತ್ಯಂತ ಉತ್ಸಾಹದಿಂದ ಅವರನ್ನು ಎದುರುಗೊಂಡು ಮೆರವಣಿಗೆಯನ್ನು ಹೊರಡಿಸಿದರು. ಅನಂತರ ಸುಮಾರು ಒಂದು ಸಾವಿರ ಜನರ ಸಭೆಯು ಕೂಡಿತು. ಸುತ್ತುಮುತ್ತಲಿನ ಹಳ್ಳಿಗಳ ಪರವಾಗಿ ಸೇನಾಪತಿಗಳಿಗೆ ಮಾನಪತ್ರವು ಅರ್ಪಿಸಲಾಯಿತು. ಸೇನಾಪತಿಗಳು ತಮ್ಮ ಭಾಷಣದಲ್ಲಿ "ನಾನು ಗಾಂಧಿ ಮಹಾರಾಜರಿಗೂ ವರ್ಕಿಂಗ ಕಮೀಟಿಗೂ ಇಲ್ಲಿಯ ಪರಿಸ್ಥಿತಿಯ ಬಗ್ಗೆ ಏನು ಹೇಳಬೇಕು" ಎಂದು ಕೇಳಲು ಕೂಡಿದ ಜನರೆಲ್ಲರು "ಪ್ರಾಣ ಹೋದರೂ ಚಿಂತೆಯಿಲ್ಲ ಸ್ವಾತಂತ್ರ್ಯ ದೊರೆಯುವವರೆಗೆ ಹೋರಾಡಲು ಸಿದ್ಧರಿರುವೆವೆಂದು ಹೇಳಿರಿ" ಎಂದು ಉತ್ತರವಿತ್ತರು. ೩ ನೇ ತಾರೀಖಿನ ಮಧ್ಯಾಹ್ನಕ್ಕೆ ಭಾವಿಕೇರಿಯಲ್ಲಿ ದೊಡ್ಡ ಸಭೆಯಾಯಿತು. ಅಲ್ಲಿಯೂ ಸೇನಾಪತಿಗಳು ವ್ಯಾಖ್ಯಾನ ಕೊಟ್ಟು ಜನರನ್ನು ಹುರಿದುಂಬಿಸಿದರು. ಸಾಯಂಕಾಲಕ್ಕೆ ಅಂಕೋಲೆಯಲ್ಲಿ ಸೇನಾಪತಿಗಳ ಸ್ವಾಗತಕ್ಕಾಗಿ ಪ್ರಚಂಡ ಮೆರವಣಿಗೆಯಲ್ಲಿ ಮಾನಪತ್ರ ಅರ್ಪಿಸಲ್ಪಟ್ಟಿತು. ಅಲ್ಲಿಗೆ ಇಲ್ಲಿಯ ಲಾರೀಕ್ಲಾಸಿನ ಪರವಾಗಿ ೭೫ ರೂಪಾಯಿಗಳ ಕಾಣಿಕೆಯೂ ಕೊಡಲ್ಪಟ್ಟಿತು. ಡಾ ಹರ್ಡೀಕರರು ಅದನ್ನು ಮರಳಿ ಅದೇ ಕ್ಲಾಸಿಗೆ ಕೊಟ್ಟರು. ಚಂದನದ ಕರಡಿಗೆಯನ್ನು ಜಾಹೀರ ಸಭೆಯಲ್ಲಿ ಲಿಲಾವು ಮಾಡಲಾಗಿ ೨೬ ರೂಪಾಯಿಗಳು ಬಂದವು. ಸಭೆಯು ಮುಗಿದನಂತರ ಸೇನಾಪತಿಗಳು ಅವರ್ಸಾ ಗಂಡಬಾಳ ಮೊದಲಾದ ಹಳ್ಳಿಗಳಿಗೆ ಹೋಗಿ ಅಲ್ಲಿಯ ಕಾರ್ಯಕ್ರಮವನ್ನು ತೀರಿಸಿಕೊಂಡರು ಅದೇ ರಾತ್ರಿ ಹುಬ್ಬಳ್ಳಿಗೆ ತೆರಳಿದರು.

ಕೆಲವು ಸಭೆಗಳಲ್ಲಿ ಪೋಲೀಸರು ಹಾಜರಿದ್ದರು, ಅವರು ಯಾವ ಅಧಿಕಪ್ರಸಂಗ ಮಾಡಲಿಲ್ಲ.

ಮ್ಯಾಜಿಸ್ಟ್ರೇಟನನ್ನು ಸೆರೆ ಹಿಡಿದರು

ಭೂಕಂದಾಯವನ್ನು ಕೊಡಲು ನಿರಾಕರಿಸಿದ ಬಗ್ಗೆ ಪೇಶಾವರ ಪ್ರಾಂತದ ಬತ್ತಾ ಘರಸದ ಆನರರಿ ಮ್ಯಾಜಿಸ್ಟ್ರೇಟರಾದ ಖಾನಸಾಹೇಬ ಅಬ್ದುಲ್ಲಾ ಶಹಾರವರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಈ ಪತ್ರಿಕೆಯು ವೆಂಕಟೇಶ ಶೇಷುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಸಪ್ರೂ ಹಾಗು ಮಹಾತ್ಮರ ನಡುವೆ ಚರ್ಚೆ

ಸರ್ ಸಪ್ರೂರವರು ತಾ॥ ೭ ನೆಯ ದಿವಸ ಅಲಹಾಬಾದಕ್ಕೆ ತಲುಪಿ, ಅಂದು ಸಂಜೆಯಲ್ಲಿ ಮಹಾತ್ಮರನ್ನು ಕಂಡುಕೊಂಡು ಮುಖ್ಯ ಪ್ರಧಾನರು ಕೊಡಲೊಪ್ಪಿದ ಸುಧಾರಣೆಗಳ ವಿಷಯವಾಗಿ ಅವರೊಡನೆ ಎರಡು ತಾಸುಗಳ ವರೆಗೆ ಚರ್ಚೆ ಮಾಡಿದರು. ಈ ಚರ್ಚೆಗಾಗು ಸಮಯದಲ್ಲಿ ಪಂಡಿತ ಮಾಲವೀಯಾ ಹಾಗು ಶ್ರೀ ಸೇನಗುಪ್ತರು ಅಲ್ಲಿಯೇ ಇದ್ದರು. ಈ ಎರಡು ತಾಸುಗಳಲ್ಲಿ ಸರ್ ಸಪ್ರೂರವರು ಸರಕಾರದವರು ಕೊಡಲೊಪ್ಪಿದ್ದನ್ನು ಮಹಾತ್ಮರಿಗೆ ತಿಳಿಸಿ ಕೊಟ್ಟರು. ~~ತಾ॥ ೮ ನೆಯ ದಿವಸ ಮತ್ತೆ ಚರ್ಚೆಯು ನಡೆಯತಕ್ಕದ್ದಿತ್ತು.~~

(ತಂತಿಯ ವಾರ್ತೆ ತಾ॥ ೯) ✗

ಮಹಾತ್ಮಾ ಗಾಂಧಿ ಹಾಗು ಸರ್ ಸಪ್ರೂರವರ ನಡುವೆ ಇನ್ನೂ ಚರ್ಚೆ ನಡೆದಿದೆಯೆಂದು ತಿಳಿಯುತ್ತದೆ.

ದುಂಡ ಮೇಜಿನ ಪ್ರತಿನಿಧಿಗಳು ✗
ತುತೂರಿ ಊದಿದರು

ಬಂಡೀ ಗಾಲಿಯ ಪರಿಷತ್ತಿಗೆ ಹೋಗಿದ್ದ ಪ್ರತಿನಿಧಿಗಳಲ್ಲಿ ಕೆಲವು ಪ್ರಮುಖ ಜನರು ಮೊನ್ನಿನ ಶುಕ್ರವಾರ ಮುಂಬಯಿಗೆ ಬಂದಿಳಿದು, ಬಂಡೀ ಗಾಲಿಯ ಪರಿಷತ್ತಿನ ಕಾರ್ಯಕಲಾಪವನ್ನು ಕುರಿತು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಅವರು ಅನ್ನುವದೇನಂದರೆ:—

ಬಂಡೀ ಗಾಲಿಯ ಪರಿಷತ್ತಿನ ಕಾರ್ಯಕಲಾಪವನ್ನು ಭಾರತೀಯರ ಮುಂದೆ ಸಂಕ್ಷಿಪ್ತವಾಗಿ ಮಂಡಿಸುವದು ನಮ್ಮ ಕರ್ತವ್ಯವಾಗಿದೆಯೆಂದು ವಿಚಾರ ಮಾಡಿ ಈ ಪ್ರಕಟನೆಯನ್ನು ಹೊರಡಿಸುತ್ತೇವೆ. ನಿಮ್ಮನ್ನು ಕಂಡ ಕೂಡಲೆ ನಿಮ್ಮೊಡನೆ ಬಂಡೀ ಗಾಲಿಯ ಪರಿಷತ್ತಿನ ವಿಷಯವಾಗಿ ಚರ್ಚೆ ಮಾಡುವವರಿದ್ದೇವೆಂದು ಸರ್ ಸಪ್ರೂ ಶ್ರೀ ಜಯಕರ ಹಾಗು ನಾ. ಶಾಸ್ತ್ರಿ ಇವರು ಮಹಾತ್ಮಾ ಗಾಂಧಿ ಹಾಗು ಇತರ ಇಬ್ಬರು ಕಾಂಗ್ರೆಸ್ ಮುಖಂಡರಿಗೆ ಮೊದಲೇ ತಿಳಿಸಿದ್ದಾರೆ.

ಈಗ ಇಂಗ್ಲಂಡದಲ್ಲಿ ಹಿಂದುಸ್ಥಾನಕ್ಕೆ ಅನುಕೂಲವಾದ ವಾತಾವರಣವು ನಿರ್ಮಾಣವಾಗಹತ್ತಿದೆ. ಹಿಂದುಸ್ಥಾನಕ್ಕೆ ಸ್ವತಂತ್ರಕಾರಭಾರ ಕೊಡಬೇಕೆಂಬುದಾಗಿ ಉದಾರ ಮತವಾದಿಗಳ ಸಂಗಡದವರು ಸಾರಿದ್ದಾರೆ. ಮಿ. ಚರ್ಚಹಿಲ್ಲರನ್ನು ಎದುರಿಸಿ, ಮಿ. ಬಾಲ್ಡವಿನರು ಕಾಮನ್ಸ ಸಭೆಯಲ್ಲಿ ಮಾಡಿದ ಭಾಷಣವನ್ನು ಓದಿದರೆ, ಕಾನ್ಸರ್ವೆಟಿವ್ಹ ಸಂಗಡದವರೂ ಹಿಂದುಸ್ಥಾನಕ್ಕೆ ಅನುಕೂಲರಾಗಿರುವರೆಂದು ತಿಳಿದು ಬರುವದು. ಎರಡು ಮೂರು ಪತ್ರಿಕೆಗಳ ಹೊರತಾಗಿ ಉಳಿದ ಎಲ್ಲ ಪತ್ರಿಕೆಗಳೂ ನಮಗೆ ಅನುಕೂಲವಾಗಿದ್ದವು. ಬಂಡೀ ಗಾಲಿಯ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟ ಯೋಜನೆಗೆ ಹಿಂದುಸ್ಥಾನದೊಳಗಿನ ಯಾವತೂ ಸಂಗಡಗಳ ಸಮ್ಮತಿಯನ್ನು ದೊರಕಿಸಕೊಳ್ಳಬೇಕೆಂಬ ಉದ್ದೇಶದಿಂದಲೆ ಸರಕಾರದವರು ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಿದ್ದಾರೆ. ಯೋಜನೆಯು ಇನ್ನೂ ಪೂರ್ಣವಾಗಿಲ್ಲ. ಅದರ ರೂಪರೇಷೆಗಳು ಮಾತ್ರ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟವೆ. ಅತ್ಯಂತ ಮಹತ್ವದ ವಿಷಯಗಳ ಸಂಬಂಧವಾಗಿ ಇನ್ನೂ ಕಾರ್ಯವಾಗತಕ್ಕದ್ದಿದೆ. ಕಾಂಗ್ರೆಸ್ ಹಾಗು ಉಳಿದ ಪಕ್ಷಗಳ ಮುಖಂಡರು ಈ ಸಮಯದಲ್ಲಿ ಮುಂದೆ ಬಂದು ಆ ಯೋಜನೆಯನು ಪೂರ್ತಿಗೊಳಿಸಬೇಕು. ಈ ಮಹತ್ವದ ಪ್ರಶ್ನೆಗಳ ಸಂಬಂಧವಾಗಿ ವಿಚಾರ ಮಾಡಲು ಸರಕಾರದವರು ಸರಿಯಾದ ವಾತಾವರಣವನ್ನು ನಿರ್ಮಾಣ ಮಾಡುವರಾಗಿಯೂ, ಯಾವತ್ತೂ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವರಾಗಿಯೂ ನಾವು ಆಶಿಸುತ್ತೇವೆ.

ವಸಾಹತಿ ಸ್ವರಾಜ್ಯದ ಪ್ರಶ್ನೆಯ ಸಂಬಂಧವಾಗಿ ಈಗ ಯಾರಲ್ಲಿಯೂ ಮತಭೇದವಿಲ್ಲ. ಹಿಂದುಸ್ಥಾನದ ರಾಜ್ಯಕಾರಭಾರವನ್ನು ಇನ್ನು ಮುಂದೆ ಹಿಂದೀ ಕಾಯದೆ ಮಂಡಳಿಕ್ಕೆ ಜವಾಬದಾರಿಯಾದ ಒಂದು ಮಂಡಳಕ್ಕೆ ಒಪ್ಪಿಸಿಬಿಡಬೇಕೆಂದು ಪರಿಷತ್ತಿನಲ್ಲಿ ಗೊತ್ತಾಗಿದೆ. ಸಂಯುಕ್ತ ರಾಜ್ಯಘಟನೆಯೇ ಈ ಹೊಸ ಆಡಳಿತೆಯ ತಳಹದಿಯಾಗಿದೆ,

✓ ಅಂಕೋಲೆಯಲ್ಲಿ
ಅಪರಿಮಿತ ಉತ್ಸಾಹ!
ಮತ್ತೆ ರಾಜೀನಾಮೆಗಳು.

೩೪ ಪಟೇಲರು ರಾಜೀನಾಮೆ ಕೊಟ್ಟಿದ್ದರಿಂದ ಬೇರೆ ಪಟೇಲರಿಗೂ ಉತ್ಸಾಹವುಂಟಾಗಿ ಒಬ್ಬೊಬ್ಬರಾಗಿ ಅವರೂ ರಾಜೀನಾಮೆಗಳನ್ನು ಕಳಿಸುತಿರುವರು. ಮಂಜಗುಣಿ, ಹೊನ್ನೇಬೈಲ, ಹಿಲ್ಲೂರ ಮೊದಲಾದ ಹಳ್ಳಿಗಳ ಪಟೇಲರೂ ತಮ್ಮ ಕೆಲಸಕ್ಕೆ ರಾಜೀನಾಮೆ ದರು. ಒಟ್ಟು ರಾಜೀನಾಮೆಗಳ ಸಂಖ್ಯೆ ೪೦ ಆಯಿತು.

ಹಿಲ್ಲೂರಿನ ಪಟೇಲರ ರಾಜೀನಾಮೆಯ ಹಕೀಕತ್ತನ್ನು ನೋಡಿದರೆ ಸಾಮಾಜಿಕ ಬಹಿಷ್ಕಾರದ ಸಾಮರ್ಥ್ಯದ ಕಲ್ಪನೆ ಬರುವದು! ಈ ಪಟೇಲರು ತಮ್ಮ ಊರಲ್ಲಿ ಕಾಂಗ್ರೆಸ್ ಪಕ್ಷದ ಪಕ್ಷಿಯಿಂದ ಪಟ ಕೊಡಿಸಿ ಹೇಳಿ ಹಾವು ಬೇಕೆಂದರೆ ಆ ಸಭೆಗೆ ಪೋಲೀಸರನ್ನು ಕರೆದುಕೊಂಡು ಬಂದರು! ಇದರಿಂದ ಊರವರೆಲ್ಲ ಸಿಟ್ಟಾಗಿ ಇವರನ್ನು ಬಹಿಷ್ಕರಿಸಿದ್ದರಿಂದ ತಮ್ಮ ಪಟೇಲಕಿಗೆ ರಾಜೀನಾಮೆ ಕೊಟ್ಟರು ಆದರೆ ಕೆಲವು ದಿವಸಗಳ ತರುವಾಯ ಕಾಂಗ್ರೆಸಿನ ವಿರುದ್ಧವಾಗಿ ಆಚರಣೆಮಾಡಿ ಗೋಚರವಾದ ಪೀಯನ್ನು ವಸೂಲ ಮಾಡಿದರು ಊರವರು ಇದಕ್ಕಾಗಿ ೫ ರೂಪಾಯಿ ದಂಡ ಕೊಟ್ಟರು ದಂಡವನ್ನೇನೋ ತುಂಬಿದರು. ಆದರೆ ತಾವು ಕಳಿಸಿದ್ದ ರಾಜೀನಾಮೆಯನ್ನು ಮಾತ್ರ ತಿರುಗಿ ತೆಗೆದುಕೊಂಡರು. ಈಗ ಮತ್ತೆ ಊರವರು ಇವರನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದರಿಂದ, ಇವರ ಅಡಕೆಯ ಬೆಳೆಯನ್ನು ಕೊಯ್ಯುವದಕ್ಕೆ ಕೂಲಿಕಾರರೂ ಇವರಿಗೆ ಸಿಗದೆ ಹಾಗಿದೆ. ಪುನಃ ರಾಜೀನಾಮೆ ಕಳಿಸಿರುವರು, ಊರವರ ಸಿಟ್ಟು ಮಾತ್ರ ಇನ್ನೂ ಇಳಿದಂತೆ ಕಾಣುವದಿಲ್ಲ.

ಜನಗಣನೆಯ ಬಹಿಷ್ಕಾರ.

ಈ ತಾಲೂಕಿನಲ್ಲಿ ಜನಗಣತಿಯ ಬಹಿಷ್ಕಾರವು ಅತ್ಯಂತ ಪ್ರಖರವಾಗಿದೆ ಅಧಿಕಾರಿಗಳಿಗೆ ಯಾವತೇ ತರದ ಸಂಗತಿಯು ದೊರೆಯದಂತಾದ್ದರಿಂದ ಅವರು ಗ್ರಾಮಸ್ಥರಿಗೆ ಜನಗಣನೆಯ ಫಾರ್ಮಗಳನು ಜೋಗಾದರೂ ತುಂಬಿ ಕಳಿಸಲಿಕ್ಕೆ ತಿಳಿಸಿರುವದರಿಂದ ಅವರೂ ಹಾಗೆಯೇ ಮಾಡಿದ್ದಾರಂತೆ! ಇದು ನಿಜವಾದ ಜನಗಣನೆಯೋ?

ಸರಕಾರದ ರೊಕ್ಕ ಹೋಯಿತು!

ಬೇಲೇಕೇರಿಯ ಮುಲು ಗಾಂವದ ಉಪ್ಪಿನಿಂದ ಪ್ರತಿವರ್ಷ ಸರಕಾರಕ್ಕೆ ೩೦೦-೪೦೦ ರೂ. ಗಳ ಪ್ರಾಪ್ತಿಯಾಗುತ್ತಿತ್ತು ಈ ಸಲ ಊರವರೆಲ್ಲ ಒಕ್ಕಟ್ಟಾಗಿ ಬಹಿಷ್ಕರಿಸಿದರಿಂದ ಸರಕಾರಕ್ಕೆ ಒಂದು ಪೈ ಸಹ ಹುಟ್ಟಲಿಲ್ಲ!

ಅಧಿಕಾರಿಗಳ ಆಗೆಮನ!

ಈ ಭಾಗದ ಡೆಪ್ಯುಟಿ ಕಲೆಕ್ಟರರಾದ ಮಿ. ಮುಂಡಕೂರರು ೩ ನೇ ತಾರೀಖಿಗೆ ಅಂಕೋಲೆಗೆ ಬಂದು ಕರ ನಿರಾಕರಣೆಯನು ಹೇಗೆ ತಡೆಯಬೇಕೆಂಬ ಬಗ್ಗೆ ಸ್ಥಾನಿಕ ಅಧಿಕಾರಿಗಳು ಹಾಗೂ ಸಾವಕಾರರೊಡನೆ ಚರ್ಚಿಸಿದರಂತೆ! ಚರಆಸ್ತಿಯನ್ನು ಜಪ್ತಿ ಮಾಡಲಿಕ್ಕೆ ಹೊಲಗಳನ್ನು ಮಾರಲಿಕ್ಕೆ ಮಾಡಲಿಕ್ಕೆ ತಾವು ಜನರಿಗೆ ಯಾವ ಸಹಾಯವು ಬೇಕೆಂದು ಕೇಳಿದರೆ ಇಲ್ಲಿಗೆ ಒಬ್ಬ ಸ್ಪೆಶಲ್ ಮೊಜದಾರರೂ ೧೦ ಜನ ಪೋಲೀಸರೂ ಬರುವವರಿದ್ದಾರೆಂದು ಸುದ್ದಿ.

ಶ್ರೀ ಸಜ್ಜನಸಿಂಗರಿಗೆ ಗಲ್ಲಿನ ಶಿಕ್ಷೆಯಾಯಿತು

ಲಾಹೋರದಲ್ಲಿ ಕ್ಯಾಪ್ಟನ್ ಕರ್ಟಿಸರ ಮನೆಯನ್ನು ಹೊಕ್ಕು, ಅವರ ಹೆಂಡತಿ ಹಾಗು ಮಕ್ಕಳನ್ನು ಗುಂಡಿಯಿಂದ ಗಾಯಪಡಿಸಿ, ಪುತ್ರತಿಯನ್ನು ಸಾಯಹೊಡೆದ ಆ ರೋಷ ದಿಂದ ಸರೆಹಿಡಿಯಲ್ಪಟ್ಟ ಸಜ್ಜನಸಿಂಗ ಎಂಬ ತರುಣನಿಗೆ ಲಾಹೋರಿನ ಸೆಸನ್ಸ ಜಡ್ಜರು ತಾ|| ೭ನೆಯ ದಿನ ಗಲ್ಲಿನ ಶಿಕ್ಷೆಯನ್ನು ವಿಧಿಸಿದರು. ಈ ತೀರ್ಪಿನ ವಿರುದ್ಧವಾಗಿ ತಾವು ಅಪೀಲು ಮಾಡುವದಿಲ್ಲವಾಗಿ ಸಜ್ಜನ ಸಿಂಗರು ಕೋರ್ಟಿಗೆ ನಗೆ ಮೊಗದಿಂದ ತಿಳಿಸಿದರು.

ಭಯಂಕರ ಭೂಕಂಪ

೧೩೦ ಜನರು ಸತ್ತರು

ನ್ಯೂಝೀಲಂಡದ ನೇಪಿಯರ ಪ್ರದೇಶದಲ್ಲಿ ಭಯಂಕರ ಭೂಕಂಪವಾಗಿದ್ದರಿಂದ ಅಲ್ಲಿಯ ಸಾಪಂಚಿ ಕಟ್ಟಡಗಳು ನೆಲಸಮನಾಗಿ ಹೋಗಿದ್ದು, ನೂರಾರು ಜನರು ಮೃತ್ಯುಮುಖದಲ್ಲಿ ಬಿದ್ದಿದ್ದಾರೆ. ಹೇಸ್ಟಿಂಗ್ಸ ಪಂಬಲ್ಲಿ ಈ ವರೆಗೆ ೧೩೦ ಜನರು ಮರಣ ಹೊಂದಿದ್ದಾರೆ.

ಸಿಂಧೀ ಅಂಗಡಿಗಳಿಗೆ

ಇನ್ನುಮೇಲೆ ದಿಕ್ಕುಗಳಿಲ್ಲ

ರತ್ನಾಗಿರಿಯಲ್ಲಿ ತಾ|| ೭ ನೆಯ ದಿವಸ ಆ ಜಿಲ್ಲೆಯ ಸಿಂದಿ ಅಂಗಡಿಗಳ ಲಿಲಾವು ನಡೆಯಿತು, ೨೦೦ ಜನರು ಅವುಗಳನ್ನು ಲಿಲಾವಿನಲ್ಲಿ ಬೇಡಲಿಕ್ಕೆ ಬಂದಿದ್ದರು. ಕಾಂಗ್ರೆಸ್ ಅಧಿಕಾರಿಗಳು ಆ ಸಮಯದಲ್ಲಿ ಪಿಕೆಟಿಂಗ ಮಾಡುವದು ಮಾಡಿದ್ದರಿಂದ ಯಾರೂ ಅವುಗಳನ್ನು ಬೇಡಲಿಲ್ಲ. ಒಂದು ತಿಂಗಳವರೆಗೆ ಸಿಂದಿ ಅಂಗಡಿಗಳನ್ನು ಲಿಲಾವಿನಲ್ಲಿ ಬೇಡಬಾರದೆಂದು ಅವರು ನಿರ್ಧರಿಸಿಕೊಂಡಿದ್ದಾರೆ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಧಾರಣೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರಾವ್ಹಿಡೆಂಟ ಕಂಪನಿ ಲಿ. ಕಲಕತ್ತಾ ಈ ಕಂಪನಿಯ ವಿಮೇದಾರರಲ್ಲಿ ವಿನಂತಿ:—

ಈಗ ೩-೪ ತಿಂಗಳಿಂದ ಏಜಂಟರ ಕಡಿಂದಾ ಹಣವು ಕಂಪನಿಗೆ ಬರೋಬರಿ ರೀತಿಯಿಂದಾ ಜಮಾ ಆಗಿಲ್ಲ ಅಂತಾ ಎಷ್ಟೋ ಜನರ ಕಡಿಂದಾ ತಕರಾರ ಬಂದಿದೆ, ಹೀಗೆ ತಕರಾರ ಇದ್ದವರು ನಮ್ಮಕಡಿಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ಕಚ್ಚಾ ಪಾವತಿ ಸಹಿತ ಹಾಜರ ಮಾಡಿ ತಕರಾರ ನಿಕಾಲೆ ಮಾಡಿಕೊಳ್ಳಬೇಕು.. ಮತ್ತು ಫೆಬ್ರುವರಿ ತಿಂಗಳು ಕಂಪನಿಯ ವಾರ್ಷಿಕ ಆಖೈರ ಇದ್ದು ತಾರೀಖು ೨೦| ರೊಳಗಾಗಿ ಹಿಂದಿನ ರೊಖನ ಕಂತಿನ ಹಣವನ್ನು ಜಮಾ ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಕಂತು ಆಫೀಸದಲ್ಲಿ ಅಥವಾ ಏಜಂಟರ ಕಡಿಗೆ ನೇರ ದಿಂದ ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದೆ ತಕರಾರು ಮಾಡಿದರೆ ವಿಚಾರಿಸಲಿಕ್ಕಾಗದು.

ಬಾಗಲಕೋಟೆ ೨-೨-೩೧ — ವ್ಹಿ. ಜೆ. ಪರ್ವತಿ. ಚೀಫ ಏಜಂಟ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಶ್ರೀಪುರಂದರಿಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರಿ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಸಬಾಜಾರ ವಿಜಾಪುರ

ಸ್ಟ್ಯಾಂಪಲ್) ಮತಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ ,	೧೬-೦-೦	ರೇಲ್ವೆ ಫಿ
೫ ತೊಲಾ ಪಾಕೀಟುಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮತಿ ಪೆಂಸಿನ ಗಡಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ ಸ್ಟೇಶನ್ ರೋಡ ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶೇಷರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ಈ ಪತ್ರಿಕೆಯು ವೆಂಕಟೇಶ ಶೇಷರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರಿ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

सर्वं परवशं दुःखं । सर्वमात्मवशं सुखम् ॥ – मनु.

ಸಂಪಾದಕರು:- ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ಮಿತಿ ಮಾಘ ಬಹುಳ ೯ ಶಕೆ ೧೮೫೨ ತಾ|| ೧೧-೨-೩೧ [ಸಂಚಿಕೆ ೧೮೬.

ವ್ಹಾಯಿಸರಾಯರು
ಮಹಾತ್ಮರ ವಿನಂತಿಯನ್ನು ಧಿಕ್ಕರಿಸಿದರು

(ತಂತಿಯ ವಾರ್ತೆ, ತಾ|| ೧೦)

ಕಲಕತ್ತೆಯಲ್ಲಿಯೂ ಪೋಲೀಸರ ಪುಂಡಾಟಿಕೆ, ಬೋರಸಾದದಲ್ಲಿಯ ಸ್ತ್ರೀಯರ ಅವಮಾನಕೃತ್ಯಗಳ ಬಗ್ಗೆ ವಿಚಾರ ಮಾಡಲು ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರಿಗೆ ಕೇಳಿಕೊಂಡಿದ್ದಕ್ಕೆ, ವ್ಹಾಯಿಸರಾಯರು ಅವರ ವಿನಂತಿಯನ್ನು ಧಿಕ್ಕರಿಸಿ ನಿಷ್ಠುರವಾದ ಉತ್ತರ ಕೊಟ್ಟದ್ದು, "ಹಿಂದುಸ್ತಾನ ಟಾಯಿಮ್ಸ" ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ. ಅದರ ಮತಿತಾರ್ಥವು ಕೆಳಗಿನಂತೆ ಇದೆ.

ಪೋಲೀಸರ ಅತ್ಯಾಚಾರಗಳ ವಿಷಯವಾಗಿ ವಿಚಾರ ಮಾಡಲು ಕಮೀಟಿಗಳನ್ನು ನಿಯಮಿಸುವದು ನನಗೆ ಅಗತ್ಯಕಾಣುವದಿಲ್ಲ. ಯಾಕೆಂದರೆ ಪೋಲೀಸರು ಆ ಸಮಯದಲ್ಲಿ ಒಳ್ಳೇ ಸಭ್ಯರೀತಿಯಿಂದ ವರ್ತಿಸಿದ್ದುಂಟು. ಕಾಂಗ್ರೆಸ್ ಸ್ವಯಂಸೇವಕರೇ ಶಾಂತರೀತಿಯಿಂದ ನಡೆದುಕೊಳ್ಳಲಿಲ್ಲ. ಏನೇ ಇರಲಿ, ಹಿಂದಿನ ಸಂಗತಿಗಳನ್ನೆಲ್ಲ ಮರೆತು ಬಿಡುವದೇ ಈಗ ಯೋಗ್ಯವಾಗಿದೆ. ಸೈನ್ಯದಲ್ಲಿ ಬಂಡಾಯವನ್ನೆಬ್ಬಿಸಲು ಪ್ರಯತ್ನ ಮಾಡಿದ ಘಡವಾಲಿ ಸೈನಿಕರನ್ನು ಅಲ್ಲಲ್ಲಿ ಅಭಿನಂದಿಸಿದ್ದು ಇವೇ ಮೊದಲಾದ ಸಂಗತಿಗಳು ಅಶಾಂತತೆಯನ್ನು ಹುಟ್ಟಿಸಲು ಬಹು ಮಟ್ಟಿಗೆ ಕಾರಣವಾಗಿವೆ."

ವ್ಹಾಯಿಸರಾಯರ ಈ ಪತ್ರಕ್ಕೆ ಮಹಾತ್ಮಾ ಗಾಂಧಿಯವರು ತೀವ್ರದೃಷ್ಟಿಯಿಂದ ಉತ್ತರ ಕೊಡುವವರಿದ್ದಾರೆಂದು ತಿಳಿದು ಬರುತ್ತದೆ.

ತಾ|| ೧೫ ಕ್ಕೆ ಪಂ. ಮೋತೀಲಾಲರ ದಿನ.

(ತಂತಿಯ ವಾರ್ತೆ ತಾ|| ೧೦)

ತಾ|| ೧೫ ನೆಯ ದಿವಸ ಅಖಿಲ ಭರತಖಂಡದಲ್ಲೆಲ್ಲ ದಿವಂಗತ ಪಂಡಿತ ಮೋತೀಲಾಲರ ದಿನವನ್ನು ಆಚರಿಸಬೇಕೆಂದು ಮಹಾತ್ಮಾ ಗಾಂಧಿಯವರು ಪ್ರಕಟನೆ ಹೊರಡಿಸಿದ್ದಾರೆ.

ದಬ್ಬಾಳಿಕೆಯು ನಿಂತರೇನೆ
ಒಪ್ಪಂದದ ಮಾತುಕತೆ

ಮಹಾತ್ಮಾ ಗಾಂಧಿಯವರು ಲಂಡನದ ನ್ಯೂಜಕ್ರಾನಿಕಲ್ ಎಂಬ ಪತ್ರಿಕೆಗೆ ಒಂದು ತಂತಿ ಕಳಿಸಿದ್ದು, ಅದರಲ್ಲಿ ಅವರು ಅನ್ನುವದೇನಂದರೆ—

ಬಂಡೀಗಾಲಿಯ ಪರಿಷತ್ತಿನ ವಿಷಯವಾಗಿ ನಾನು ಇನ್ನೂ ಕಟ್ಟಕಡೆಯ ಅಭಿಪ್ರಾಯವನ್ನು ಈಗಲೆ ವ್ಯಕ್ತಪಡಿಸಲಾರೆ. ಇಲ್ಲಿಯ ಸೋಲಿವು ನನ್ನನ್ನು ಮುಕ್ತಿಪತ್ರ ದುಃಖಿತನ್ನ ಮಾಡಿದೆ ಹಿಂದುಸ್ತಾನಕ್ಕೆ ಸ್ವತಂತ್ರ ರಾಜ್ಯಭಾರ ಕೊಡಲೊಪ್ಪಿದಲ್ಲಿ ಮಾತ್ರ ಇಲ್ಲಿಯ ಸ್ಥಿತಿಗತಿಯು ಸುಧಾರಿಸಬಹುದಾಗಿತ್ತು. ಆದರೆ ಏನು ನಡೆದಿದೆ ನೋಡಿರಿ! ಕರಾಳವಾದ ದಬ್ಬಾಳಿಕೆಯು ಹಾಗೆಯೆ ಸಾಗಿದೆ. ನಿರುಪದ್ರವಿಗಳಿಗೆ ಪೀಡೆ ಕೊಡುವದು ಇನ್ನೂ ನಿಂತಿಲ್ಲ. ದೊಡ್ಡ ದೊಡ್ಡವರ ಆಸ್ತಿಪಾಸ್ತಿಗಳೆಲ್ಲ ವಿನಾ ಕಾರಣವಾಗಿ ಜಪ್ತ ಮಾಡಲ್ಪಟ್ಟಿವೆ. ಸ್ತ್ರೀಯರ ಮೆರವಣಿಗೆಯು ಬಡಿಗೆಯಿಂದ ಚದುರಿಸಲ್ಪಟ್ಟಿದೆ. ಅವರ ತುರುಬು ಜಗ್ಗಿ ಅವರನ್ನು ಬೂಟಿನಿಂದ ಒದ್ದದ್ದಾಗಿದೆ. ದಬ್ಬಾಳಿಕೆಯು ಹೀಗೆಯೆ ಸಾಗಿದಲ್ಲಿ, ಕಾಂಗ್ರೆಸ್ ಪಕ್ಷದವರು ಸರಕಾರದವರೊಡನೆ ಸಹಕರಿಸುವದು ಶಕ್ಯವಿಲ್ಲ.

ಮಾಮಲೇದಾರರಿಗೆ ಹಿಂಬಡತಿಯಾಯಿತು.

ಬಾರ್ಡೋಲಿ ಸತ್ಯಾಗ್ರಹ ಸಮಯದಲ್ಲಿ ರೈತರಿಗೆ ಬೇಕಾಗಿ ಪೀಡೆ ಕೊಟ್ಟು ಪ್ರಖ್ಯಾತಿಯನ್ನು ಹೊಂದಿದ ಶ್ರೀ ಮೋಹನಲಾಲ ಕಪಾ ಇವರನ್ನು ಮಾಮಲೇದಾರ ಹುದ್ದೆಯಿಂದ ಅವ್ವಲ ಕಾರಕೂನ ಜಾಗೆಗೆ ಹಿಂಬಡತಿ ಮಾಡಿದ್ದರೆಂದು ತಿಳಿಯುತ್ತದೆ.

ಯಲಗುರೇಶೋತ್ಸವದಲ್ಲಿ
ರಾಷ್ಟ್ರೀಯ ಚಟುವಟಿಕೆಗಳು
(ನಮ್ಮ ಪ್ರತಿನಿಧಿಯಿಂದ)

ಶ್ರೀ ಯಲಗುರೇಶೋತ್ಸವವು ತಾ|| ೭ ನೆಯ ದಿವಸ ಯಥಾಸಾಂಗವಾಗಿ ಪ್ರಾರಂಭವಾಯಿತು. ಸಾವಿರ ಎರಡು ಸಾವಿರದ ವರೆಗೆ ಭಕ್ತ ಸಮುದಾಯವು ಕೂಡಿತ್ತು. ಎಲ್ಲರೂ ಉತ್ಸಾಹಭರಿತರಾಗಿದ್ದರು. ಆದರೆ ಪಂಡಿತ ಮೋತೀಲಾಲರ ನಿಧನವಾರ್ತೆಯು ಅಂದು ಮುಂಜಾನೆ ಇಲ್ಲಿಗೆ ತಿಳಿದ ಕೂಡಲೆ ಎಲ್ಲರೂ ಶೋಕಾಕುಲರಾದರು. ಇಲ್ಲಿ ನೆರೆದ ರಾಷ್ಟ್ರಸೇವಕರು ರಾಷ್ಟ್ರಧ್ವಜವನ್ನು ಅರ್ಧಕ್ಕೆ ನಿಲ್ಲಿಸಿ ತಮ್ಮ ಶೋಕವನ್ನು ವ್ಯಕ್ತಮಾಡಿದರು. ಮರು ದಿವಸ ಆದಿತ್ಯವಾರವಿದ್ದದರಿಂದ ರಾಷ್ಟ್ರಧ್ವಜ ವಂದನೆಯ ಸಮಾರಂಭವು ಜರುಗಿತು. ಸಾವಿರಾರು ಜನರು ಇದರಲ್ಲಿ ಭಾಗ ವಹಿಸಿದ್ದರು. ಸಂಜೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಶ್ರೀ ಮೊಹರೆ ಹಣಮಂತರಾಯರು ಸದ್ಯದ ಸ್ಥಿತಿಯನ್ನು ಸಭಿಕರಿಗೆ ತಿಳಿಸಿಕೊಟ್ಟು, ಧಾರವಾಡದಲ್ಲಿ ಕೂಡಿದ ಕಾರ್ಯಕರ್ತರ ಸಭೆಯಲ್ಲಿ ಪಾಸಾದ ನಿರ್ಣಯಗಳನ್ನು ಜನರ ಮುಂದೆ ಮಂಡಿಸಿ, ರಾಷ್ಟ್ರಕಾರ್ಯವನ್ನು ಅವ್ಯಾಹತವಾಗಿ ಸಾಗಿಸಲು ನೆರೆದವರಿಗೆ ಕೇಳಿಕೊಂಡರು. ಶ್ರೀ ಜೋರಾಪುರ ಗುರುರಾಯರು ಬಹಳ ಸ್ಫೂರ್ತಿದಾಯಕ ಭಾಷಣ ಮಾಡಿ, ಈ ಸ್ವಾತಂತ್ರ್ಯ ಸಮರದಲ್ಲಿ ತಂಡ ತಂಡವಾಗಿ ಬಂದು ಸೇರಿಕೊಳ್ಳಲು ತರುಣರಿಗೆ ಬಿನ್ನವಿಸಿಕೊಂಡರು. ನಂತರದಲ್ಲಿ "ವಂದೇ ಮಾತರಂ" ಪದವಾದ ಬಳಿಕ ಸಭೆಯು ಮುಕ್ತಾಯವಾಯಿತು.

ಉತ್ಸವಕ್ಕೆಂದು ಬಂದ ವರಿಷ್ಠ ಅಧಿಕಾರಿಗಳು ಈ ರಾಷ್ಟ್ರೀಯ ಚಟುವಟಿಕೆಗಳಿಗೆ ಯಾವ ತರದಿಂದಲೂ ಅಡ್ಡಿ ಮಾಡಲಿಲ್ಲ. ಒಬ್ಬ ಪೋಲೀಸನು ಮಾತ್ರ ಹಿಂಬದಿಯಲ್ಲಿ ನಿಂತುಕೊಂಡು ಗೊಂದಲ ಹಾಕಿ, ಸಭೆ ಮುರಿಯುವ ಪ್ರಯತ್ನ ನಡಿಸಿದ್ದನು. ಆದರೆ ಅವನ ಇಷ್ಟಾರ್ಥವು ಸಫಲವಾಗಲಿಲ್ಲ. ಸಭೆ ಮುಗಿದ ಬಳಿಕ ಜನರ ಮೇಲೆ ಸಿಕ್ಕ ಸಿಕ್ಕ ಹಾಗೆ ಹರಿಹಾಯ್ದು, ಆಡಬಾರದ ಶಬ್ದಗಳನ್ನಾಡುತ್ತ ಅವನು ತನ್ನ ಹಾದಿ ಹಿಡಿದು ಹೊರಟು ಹೋದನು. ರಾಷ್ಟ್ರಸೇವಕರಿಗೆ ಅವಾಚ್ಯ ಶಬ್ದಗಳನ್ನು ಉಚ್ಚರಿಸಿ ಬಾಯ್ತುಂಡಿಯನ್ನು ತೀರಿಸಿಕೊಳ್ಳಲು ವರಿಷ್ಠ ಅಧಿಕಾರಿಗಳು ಪೋಲೀಸರಿಗೆ ಮುಕ್ತದ್ವಾರವನ್ನಿಟ್ಟಿರುವರೋ ಏನೋ!

ಶ್ರೀ ಗುಬ್ಬಿ ವೀರಣ್ಣನವರ ಸದಭಿಮಾನ.
(ಬಳ್ಳಾರಿಯಿಂದ ಬರೆದು ಬಂದಿದ್ದು.)

ಮೊನ್ನೆ ಆಂಧ್ರ ಪತ್ರಿಕೆಯ ಏಜನ್ಸಿಗೆ ಶ್ರೀ ಪಂಡಿತ ಮೋತೀಲಾಲಜಿಯವರ ನಿಧನದ ಸುದ್ದಿಯು ಮೊದಲು ಬಂತು. ಏಜಂಟನ ಕಡೆಯಿಂದ ಅಲ್ಲಲ್ಲಿ ಕೆಲವರಿಗೆ ಮಾತ್ರ ಈ ದುಃಖದ ವಾರ್ತೆಯು ತಿಳಿಯಿತು. ಶ್ರೀ ಗುಬ್ಬಿ ವೀರಣ್ಣನವರ ನಾಟಕ ಕಂಪನಿಯು ಬಳ್ಳಾರಿಯ ಆ ಸಂತೆಯ ದಿನ ತಮ್ಮ ಪ್ರಸಿದ್ಧ ಸದಾರಮೆಯನ್ನು ಆಡುವದಕ್ಕಿತ್ತು. ನಾಟಕಕ್ಕೆ ಎರಡೇ ತಾಸುಗಳಿರುವಾಗ ಶ್ರೀ ವೀರಣ್ಣನವರಿಗೂ ಅವರ ಈಗಿನ ಮ್ಯಾನೇಜರರಾದ ಶ್ರೀ ದೇವಡು ನರಸಿಂಹ ಶಾಸ್ತ್ರಿಗಳಿಗೂ ಈ ಸುದ್ದಿಯು ಗೊತ್ತಾಯಿತು. ನಾಟಕಶಾಲೆಯ ಮುಂದೆ ನೂರಾರು ಜನರು ತಿಕೀಟು ಕೊಂಡುಕೊಳ್ಳಲಿಕ್ಕಿದ್ದರು. ಆದರೂ ಕೂಡಲೆ ಅವರು ಅಂದಾಗಲಿಕ್ಕಿದ್ದ ನಾಟಕವನ್ನು ನಿಲ್ಲಿಸಿಯೇ ಬಿಟ್ಟರು. ಬಳ್ಳಾರಿಯ ಜನ ಸಮೂಹಕ್ಕೆ ಈ ನಿಧನ ದುಃಖದ ವಾರ್ತೆಯು ಮುಟ್ಟಿ ಹಬ್ಬಿದ್ದೆಂದರೆ ಇವರ ಇಂತಹ ಉದಾರತ್ಯಾಗದಿಂದಲೇ. ಇಂತಹ ಸದಭಿಮಾನಕ್ಕಾಗಿ ಕರ್ನಾಟಕ ದೇವಿಯು ಇವರನ್ನು ಇವರ ಸಂಸ್ಥೆಯನ್ನು ಹರಿಸದಿರಳು. ಕರ್ನಾಟಕವು ಇವರ ಉತ್ಕಟ ದೇಶಸೇವಾವೃತ್ತಿಯನ್ನು ಅನುಸರಿಸದಿರದು.

ಗುಳೇದಗುಡ್ಡದಲ್ಲಿ
ದುಃಖಪ್ರದರ್ಶನ
(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರ ನಿಧನ ವಾರ್ತೆಯು ತಾ|| ೭ ನೆಯ ದಿವಸ ಇಲ್ಲಿಗೆ ತಿಳಿದ ಕೂಡಲೆ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಾಯಂಕಾಲಕ್ಕೆ ಪಂಚಕಚೇರಿಯ ಮುಂದೆ ಶ್ರೀ ಗುಂಡೇರಾವ ಜೋಶಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ದುಃಖಪ್ರದರ್ಶನ ಮಾಡಲಾಯಿತು. ಶ್ರೀ ಸಾಬಣ್ಣ ಸಿಂಗದ ಇವರು ಸಮಯೋಚಿತ ಭಾಷಣಮಾಡಿದರು.

ಹುಬ್ಬಳ್ಳಿಯಲ್ಲಿ
ಉಪ್ಪಿನ ಕಾಯದೆಭಂಗ.

ತಾ|| ೫ ನೆಯ ದಿವಸ ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಸರಕಾರಾಧಿಕಾರಿಗಳು ಕಾಯಿದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪನ್ನು ಸಭೆಯಲ್ಲಿ [illegible] ಬಾದದಲ್ಲಿ ಕೂಡಿದ ವರ್ಕಿಂಗ ಕಮಿಟಿಯಲ್ಲಿ ಪಾಸಾದ ಪೋಲೀಸರಿಗೆ ಸಂಬಂಧಿಸಿದ ನಿರ್ಣಯವಾದರೂ ಸಭೆಯಲ್ಲಿ ಓದಿ ಹೇಳಲ್ಪಟ್ಟಿತು.

ತಾ|| ೬ ನೆಯ ದಿವಸ ಪ್ರಭಾತಫೇರಿಗಳ ಸಮ್ಮೇಲನವು ಕೂಡಿತ್ತು. ಡಾ. ಹರ್ಡೀಕರರು ಆ ಸಮಯದಲ್ಲಿ ಭಾಷಣ ಮಾಡಿ, ಬಹಿಷ್ಕಾರ ಚಳವಳಿಯನ್ನು ಜೋರಿನಿಂದ ಸಾಗಿಸಲು ಅವಶ್ಯವಿದ್ದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಲೂ ತರುಣರಿಗೆ ಉಪದೇಶಿಸಿದರು.

ಇಲ್ಲಿಯ ಪ್ರಮುಖ ಜನರು ವ್ಯಾಪಾರಸ್ಥರ ಕಡೆಗೆ ಹೋಗಿ ಪರದೇಶಿ ಬಟ್ಟೆಗಳನ್ನು ಒತ್ತಟ್ಟಿಗೆ ಕಟ್ಟಿಡಲು ಕೇಳಿಕೊಳ್ಳಹತ್ತಿದ್ದಾರೆ.

ಕರ್ನಾಟಕದಲ್ಲಿ
ಕರನಿರಾಕರಣ ಚಳವಳಿ

ಅಂಕೋಲೆ ಹಾಗು ಇತರ ೧೪ ಹಳ್ಳಿಗಳ ಜನರು ಸ್ವರಾಜ್ಯ ಸಿಗುವ ವರೆಗೆ ಸರಕಾರಕ್ಕೆ ಯಾವುದೂ ಕಂದಾಯವನ್ನು ಕೊಡತಕ್ಕದ್ದಲ್ಲವಾಗಿ ಪ್ರತಿಜ್ಞೆ ಮಾಡಿದ್ದಾರೆ.

ಪಂ. ಮೋತೀಲಾಲರ ನಿಧನದ ಬಗ್ಗೆ
ಶೋಕ ಪ್ರದರ್ಶನ
(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರು ಲಖನೌ ಪಟ್ಟಣದಲ್ಲಿ ಸ್ವರ್ಗವಾಸಿಗಳಾದರೆಂಬ ದುಃಖ ಸಮಾಚಾರವು ಮುಟ್ಟಿದೊಡನೆಯೆ — ಹರಪನಹಳ್ಳಿಯ ಯಾವತ್ತು ಜನರು ಶೋಕಾಕುಲರಾಗಿ ಬೊಕ್ಕತಲೆಯ ಮೆರವಣಿಗೆ ಹೊರಡಿಸಿದರು. ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆಯಾಗಿ ಶ್ರೀ ತಿರುಮಲರಾವ ಹೊಸಪ್ಯಾಟಿ ಇವರು ದೇಶಭಕ್ತ ಮೋತೀಲಾಲರ ಸಿರಿವಂತಿಕೆ, ಅದ್ಭುತ ಸ್ವಾರ್ಥತ್ಯಾಗ, ಅನುಪಮ ದೇಶಭಕ್ತಿ ಈ ವಿಷಯಗಳಲ್ಲಿ ಉಪನ್ಯಾಸ ಕೊಟ್ಟರು. ಎಲ್ಲರೂ ದುಃಖ ಪ್ರದರ್ಶನ ಮಾಡಿದ ಮೇಲೆ ಸಭೆಯು ವಿಸರ್ಜನೆಯಾಯಿತು.

ಕಾಂಗ್ರೆಸ ಸಂಸ್ಥೆಗಳು
ಕಾಯಿದೆಗೆ ವಿರುದ್ಧವಾದವು

ಗುಜರಾಥ ಪ್ರಾಂತದ ಪಂಚಮಹಾಲ ಹಾಗು ಅಹಮ್ಮದಾಬಾದ ಜಿಲ್ಲೆಯೊಳಗಿನ ಒಟ್ಟು ೧೭ ಕಾಂಗ್ರೆಸ ಸಂಸ್ಥೆಗಳು ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಕಾಯಿದೆಗೆ ವಿರುದ್ಧವಾದ ಸಂಸ್ಥೆಗಳಾಗಿವೆಯೆಂದು ಸರಕಾರದವರು ಸಾರಿದ್ದಾರೆ.

ಈ ಪತ್ರಿಕೆಯು ವೆಂಕಟೇಶ ಶೀನುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಸಪ್ರೂ ಹಾಗು ಮಹಾತ್ಮರ ನಡುವೆ ಚರ್ಚೆ

(ಅಲಹಾಬಾದ ತಾ|| ೮)

ಸರ್ ತೇಜಬಹದ್ದೂರ ಸಪ್ರೂರವರು ತಾ|| ೮ ನೇಯ ದಿವಸ ಸಂಜೆಯಲ್ಲಿ ಮಹಾತ್ಮಾ ಗಾಂಧಿಯವರನ್ನು ಆನಂದಭವನದಲ್ಲಿ ಕಂಡು ಕೊಂಡರು. ಮಹಾತ್ಮರ ಜೊತೆಯಾಗಿ ಪಂಡಿತ ಜವಾಹರಲಾಲ ನೆಹರು, ಮಹಾದೇವಭಾಯಿ ದೇಸಾಯಿ, ಡಾ ಅನ್ಸಾರಿ, ಶಿವಪ್ರಸಾದ ಗುಪ್ತ, ಸೇನಗುಪ್ತ, ಶ್ರೀಮತಿ ಸರೋಜಿನಿದೇವಿ, ಶಫಿ ಅಹಮ್ಮದ ಕಿಡವಾಯಿ, ಶೆರವಾಣಿ, ಚೌಧರಿ ಖಲೀಲ್ ಖುಜಮಾನ್, ಬಾಬು ರಾಜೇಂದ್ರಪ್ರಸಾದ ಡಾ. ಬಿ. ಸಿ. ರಾಯ ಇವರಾದರೂ ಈ ಸಮಯದಲ್ಲಿ ಆನಂದ ಭುವನದಲ್ಲಿಯೇ ಇದ್ದರು. ಸರ್ ಸಪ್ರೂರವರು ಭದ್ರಸ್ಥಾನಗಳ ಫಲಿತಾರ್ಥವನ್ನು ಮತ್ತು ಇಂಡೀ ಗಾಲಿಯ ಪರಿಷತ್ತಿನ ತಮ್ಮ ಅನುಭವವನ್ನು ಕಾಂಗ್ರೆಸ್ ಮುಖಂಡರಿಗೆ ತಿಳಿಸಿ ಹೇಳಿದರು.

ವ್ಹಾಯಿಸರಾಯರು ಕೊಟ್ಟ ಉತ್ತರವು ಮಹಾತ್ಮಾ ಗಾಂಧಿಯವರಿಗೆ ಸಮಾಧಾನಕರವಾಗಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷದಲ್ಲಿ ಒಪ್ಪಂದದ ಬಗ್ಗೆ ವಿರೋಧಾಭಿಪ್ರಾಯವು ತಲೆಯೆತ್ತುತ್ತಿದೆ. ವ್ಹಾಯಿಸರಾಯರು ಹಾಗು ಮಹಾತ್ಮಾ ಗಾಂಧಿಯವರು ಇವರ ನಡುವೆ ನಡೆದ ಪತ್ರವ್ಯವಹಾರವು ಬೇಗನೆ ಪ್ರಸಿದ್ಧವಾಗತಕ್ಕದ್ದಿದೆ.

(ತಂತಿಯು ವಾರ್ತೆ ತಾ|| ೧೦)

ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರನ್ನು ಬೇಗನೆ ಕಂಡುಕೊಳ್ಳಬಹುದೆಂದು "ಟಾಯಿಮ್ಸ್" ಪತ್ರಿಕೆಯ ಅಲಹಾಬಾದದ ಸುದ್ದಿಗಾರನು ಆ ಪತ್ರಿಕೆಗೆ ತಿಳಿಸಿದ್ದಾನೆ.

ಮಹಾತ್ಮಾ ಗಾಂಧಿ ಹಾಗು ಸರ ಸಪ್ರೂರವರ ನಡುವೆ ನಡೆದ ಚರ್ಚೆಯು ಮುಗಿದ ಮೇಲೆ ಕಾಂಗ್ರೆಸ್ ಮುಖಂಡರು ತಾ|| ೧೩ ರ ವರೆಗೆ ಆ ಬಗ್ಗೆ ಚರ್ಚೆ ಮಾಡತಕ್ಕವರಿದ್ದಾರೆ. ಮಹಾತ್ಮಾ ಗಾಂಧಿ ಹಾಗು ಪಂಡಿತ ಜವಾಹಿರಲಾಲರು ಸಹಕಾರ ಮಾಡುವ ಮನಸಿಲ್ಲದವರಾಗಿದ್ದಾರೆಂತು ತಿಳಿಯುತ್ತದೆ. ಜವಾಹಿರಲಾಲರು ರಾಜ್ಯದಾಡಳಿತೆಯ ಪ್ರಶ್ನೆಗಳನ್ನು ವಿಚಾರಿಸಲಿಕ್ಕನ್ನು ನಿರಾಕರಿಸಿದರಾಗಿ ಕಂಡು ಬರುತ್ತದೆ.

ಕಾಂಗ್ರೆಸ್ ಮುಖಂಡರು ಮತ್ತೆ ಜೇಲಿಗೆ ಹೋಗುವರು ?

ಪಂಡಿತ ಮೋತೀಲಾಲರು ನಿಧನ ಹೊಂದಿದ ಬಗ್ಗೆ ದುಃಖಪ್ರದರ್ಶನ ಮಾಡುವದಕ್ಕಾಗಿ ತಾ|| ೭ ನೆಯ ದಿವಸ ಅಲಹಾಬಾದದಲ್ಲಿ ಪಂಡಿತ ಮಾಲವೀಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಆಗ ಭಾಷಣ ಮಾಡುವಾಗ ಶ್ರೀ ಸೇನಗುಪ್ತರು ಈಗ ಬಿಡುಗಡೆ ಮಾಡಲ್ಪಟ್ಟ ಮುಖಂಡರೆಲ್ಲರೂ ಇನ್ನು ೩—೪ ತಿಂಗಳಲ್ಲಿ ಮತ್ತೆ ಜೇಲಿಗೆ ಕಳಿಸಲ್ಪಡುವರೆಂಬುದಾಗಿ ನುಡಿದು ತೋರಿಸಿದರು. ನಂತರದಲ್ಲಿ ಶ್ರೀ ಸುಂದರಲಾಲರು ಭಾಷಣ ಮಾಡಿ "ತಮ್ಮಿಂದಿನ್ನು ಸಲ್ಲತಕ್ಕ ೩೦೦೦೦ ರುಪಾಯಿ ಇನಕಮ್ ಟ್ಯಾಕ್ಸನ್ನು ಈ ಸಲ ಸರಕಾರಕ್ಕೆ ಕೊಡದಿರಲು ಪಂಡಿತ ಮೋತೀಲಾಲರು ನಿರ್ಧರಿಸಿಕೊಂಡಿದ್ದರೆಂದೂ, ಈ ಬಗ್ಗೆ ಸರಕಾರವು ಆನಂದ ಭವನವನ್ನು ಜಪ್ತ ಮಾಡಿದಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಅದರಲ್ಲಿ ಅವರು ವಾಸಿಸತಕ್ಕವರಿದ್ದರೆಂದೂ ಹೇಳಿದರು.

ದಿವಂಗತ ಮೋತೀಲಾಲರ ಗುಣಾನುವಾದ

ಪಂಡಿತ ಮೋತೀಲಾಲರ ಪ್ರೇತಯಾತ್ರೆಯ ಮೆರವಣಿಗೆಯು ತ್ರಿವೇಣೀ ಸಂಗಮಕ್ಕೆ ತಲುಪಿದ ಕೂಡಲೆ ಮಹಾತ್ಮಾ ಗಾಂಧಿಯವರು ಪಂಡಿತ ಮೋತೀಲಾಲರ ಗುಣಾನುವಾದ ಮಾಡಿ ಕೆಳಗಿನಂತೆ ಹೇಳಿದರು

ಈ ಸಮಯವು ದುಃಖಪಡುವಂತಹದಿರುವದಿಲ್ಲ. ಇತ್ತೀಚೆಗೆ ಮೋತೀಲಾಲರೊಡನೆ ಸಂಭಾಷಣ ಮಾಡುವ ಮುಂದೆ "ನಿಮ್ಮ ಪ್ರಕೃತಿಯು ನೆಟ್ಟಗಾದಲ್ಲಿ ನಮಗೆ ಸ್ವರಾಜ್ಯವು ಸಿಗುವದು." ಎಂತು ನಾನು ಅವರಿಗೆ ಹೇಳಿದೆ. ಅವರು "ಸ್ವರಾಜ್ಯವು ಸಿಕ್ಕೇ ಹೋಗಿದೆಯೆಂಬದಾಗಿ" ಉತ್ತರ ಕೊಟ್ಟರು. ಹಿಂದೀಯರು ಮಾಡಿದ ಸ್ವಾರ್ಥತ್ಯಾಗವನ್ನು ಲಕ್ಷ್ಯದಲ್ಲಿ ತಂದು ಅವರು ಹೀಗೆ ನುಡಿದರು. ಆದ್ದರಿಂದ ಎಲ್ಲರೂ ಅಹಿಂಸಾ, ಸತ್ಯ ಹಾಗು ಸ್ವರಾಜ್ಯ ಈ ಬಗ್ಗೆ ಶಪಥ ತೆಗೆದುಕೊಂಡು ರಾಷ್ಟ್ರಕಾರ್ಯಕ್ಕಾಗಿ ದುಡಿಯಲು ಸಿದ್ಧರಾಗಬೇಕು.

ಮುದ್ರಣಬಕಾಸುರನಿಗೆ ತರುಣಭಾರತವು ಬಲಿಯಾಯಿತು

ಬೆಳಗಾವಿಯಲ್ಲಿಯ "ತರುಣ ಭಾರತ" ಮುದ್ರಣಾಲಯಕ್ಕೆ ಮುಂಬಯಿ ಸರಕಾರದವರು ಮುದ್ರಣ ಕಾಯದೆಯ ಅನ್ವಯ ೨೦೦೦ ರುಪಾಯಿಗಳನ್ನು ಆಮಾನತ ಇಡಲು ಕೇಳಿಕೊಂಡಿದ್ದರಿಂದ, ಆ ಮುದ್ರಣಾಲಯವು ಮುಚ್ಚಲ್ಪಟ್ಟಿದೆ. ಮುದ್ರಣಾಲಯದಲ್ಲಿ ಪ್ರಸಿದ್ಧವಾಗುತ್ತಿದ್ದ "ತರುಣ ಭಾರತ" ಪತ್ರಿಕೆಯೂ ಸಹ ತನ್ನ ಕಾರ್ಯವನ್ನು ನಿಲಿಸಿ ಬಿಟ್ಟಿತು. ಮುದ್ರಣ ಬಕಾಸುರನು ಕರ್ನಾಟಕದಲ್ಲಿಯೂ ಕಾಲಿಟ್ಟಂತಾಯಿತು! ಇನ್ನು ಯಾರ ಸರತಿ ಬರುವದೋ ಏನೋ!

ಹುಬ್ಬಳ್ಳಿಯಲ್ಲಿ ಹರತಾಳ

(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರು ನಿಧನಹೊಂದಿದ ವಾರ್ತೆಯು ಇಲ್ಲಿಗೆ ತಿಳಿದ ಕೂಡಲೆ ಊರಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸುವದರಲ್ಲಿ ಬಂದಿತು. ೫ ಗಂಟೆಗೆ ದೊಡ್ಡದೊಂದು ಪ್ರಚಂಡ ಮೆರವಣಿಗೆ ಹೊರಟು, ಊರಲ್ಲೆಲ್ಲ ಹಾಯ್ದು, ಸಭಾಸ್ಥಾನಕ್ಕೆ ಬಂದು ತಲುಪಿತು. ಅಲ್ಲಿ ಶ್ರೀ ಪುರಾಣಿಕರ ಅಧ್ಯಕ್ಷತೆಯ ಕೆಳಗೆ ಸಭೆ ಜರಗಿ ದುಃಖ ಪ್ರದರ್ಶನ ಮಾಡಲಾಯಿತು ಮತ್ತು ಪಶ್ಚಿಮ ದಿಕ್ಕಿಗೆ ಇರುವ ಬೈಲಿಗೆ ಮೋತೀಲಾಲ ಬೈಲೆಂದು ಹೆಸರು ಇಡಲಾಯಿತು.

ತಾ|| ೮ನೆಯ ದಿವಸ ಭಾರತ ಮಂಡಳದ [illegible] ಸಭೆ ಕರೆದು ಮೋತೀಲಾಲರ ಬಗ್ಗೆ ಶೋಕ ಪ್ರದರ್ಶನವಾಯಿತು. ಡಾ. ಹರ್ಡೀಕರ ಮೊದಲಾದವರು ಭಾಷಣ ಮಾಡಿದರು

ವ್ಯಾ. ಕೆರೂರ ವಾಸುದೇವಾಚಾರ್ಯರ ಭಾವಪಟದ ಅನಾವರಣ ಸಮಾರಂಭ

ತಾ|| ೭—೨—೩೧ ನೆಯ ದಿವಸ ಸಾಂಗಲಿಯ ವಿಲಿಂಗಡನ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ವೈ. ವಾ. ಕೆರೂರ ವಾಸುದೇವಾಚಾರ್ಯರ ಭಾವಪಟದ ಅನಾವರಣ ಸಮಾರಂಭವು ಶ್ರೀ ಆಲೂರ ವೆಂಕಟರಾಯರ ಹಸ್ತದಿಂದ ನೆರವೇರಿತೆಂದು ತಿಳಿದು ಬರುತ್ತದೆ.

ಕೋರ್ಟಿನಲ್ಲಿ ಭಯಂಕರ ಕಳವು

ಕೆಲವು ಜನ ಕಳ್ಳರು ತಾ|| ೫೯ನೇ ದಿನದ ರಾತ್ರಿ ೧೦ ಗಂಟೆಯ ಕಾಲಕ್ಕೆ ಕೋರ್ಟಿಗೆ ಹೋಗಿ ಅಲ್ಲಿಯ ಕಿಡಕಿಯನ್ನು ಮುರಿದು ತಿಜೋರಿಯಿದ್ದ ಕೋಣೆಯಲ್ಲಿ ಒಳಹೊಕ್ಕರು. ಅಲ್ಲಿ ಕೀಲಿ ಕೈಯಿಂದ ಸರಕಾರಿ ತಿಜೋರಿಯನ್ನು ತೆಗೆದು [illegible] ರೂಪಾಯಿ ಬೆಲೆ ಬಾಳುವ [illegible] ಗಳನ್ನು ತೆಗೆದುಕೊಂಡು ಹೋದರು

ಸಾಬರಮತಿ ಜೇಲಿನಿಂದ ಕೈದಿಗಳು ಓಡಿ ಹೋದದ್ದು

ಸಾಬರಮತಿ ಜೇಲಿನಿಂದ ಇಬ್ಬರು ಕೈದಿಗಳು ಓಡಿ ಹೋಗಿರುವರೆಂಬುದಾಗಿ ಹಿಂದಕ್ಕೆ ಪ್ರಸಿದ್ಧವಾಗಿತ್ತಷ್ಟೆ. ಆ ಬಗ್ಗೆ ಈಗ ಸವಿಸ್ತರ ಸಂಗತಿ ಗೊತ್ತಾಗಿದ್ದು ಅದನ್ನು ಇಲ್ಲಿ ಕೊಡಲಾಗಿದೆ.

ದರೋಡೆಯ ಅಪರಾಧಕ್ಕಾಗಿ ಅವರಿಗೆ ಪ್ರತ್ಯೇಕವಾಗಿ ೭ ವರ್ಷದ ಶಿಕ್ಷೆಯಾಗಿತ್ತು. ಜೇಲಿನಲ್ಲಿ ಉಪಯೋಗಿಸಲು ಕೊಟ್ಟ ಬ್ಲಾಂಕೆಟುಗಳನ್ನು ಹರಿದು ಅವರು ಒಂದು ಉದ್ದ ಹಗ್ಗವನ್ನು ಸಿದ್ಧಮಾಡಿದರು. ಅದನ್ನು ಅಂಗಳದ ಗೋಡೆಯ ಮೇಲೆ ಒಗೆದರು. ರಾತ್ರಿ ಸಮಯದಲ್ಲಿ ಅಂಗಳದ [illegible] ಒಡೆದು ಹೋಗಿ ಒಂದು ಉದ್ದ [illegible] ಗೋಡೆಯನ್ನು ಏರಿ ಮೊದಲು ಒಗೆದ ಹಗ್ಗವನ್ನು ಹಿಡಿದುಕೊಂಡು ಇಳಿದರು. ಅಲ್ಲಿ ಜೇಲಿನ ವೇಷವನ್ನು ತೆಗೆದೊಗೆದು, ಖಾದಿಯ ಬಟ್ಟೆಗಳನ್ನು ಧರಿಸಿಕೊಂಡು ಪಾರಾಗಿ ಹೋದರು.

ಇವರು ಓಡಿ ಹೋದ ಮೂರು ತಾಸುಗಳ ಮೇಲೆ ಈ ಸುದ್ದಿಯು ಜೇಲ ಅಧಿಕಾರಿಗಳಿಗೆ ಗೊತ್ತಾಯಿತು. ಅಧಿಕಾರಿಗಳು ಸುತ್ತಲೂ ಶೋಧ ಮಾಡಿದರು. ಇನ್ನೂ ಪತ್ತೆಯಾಗಿಲ್ಲ.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರಾವ್ಹಿಡೆಂಟ ಕಂಪನಿ ಲಿ, ಕಲಕತ್ತಾ ಈ ಕಂಪನಿಯ ವಿಮೇದಾರರಲ್ಲಿ ವಿನಂತಿ:—

ಈಗ ೩-೪ ತಿಂಗಳಿಂದ ಏಜಂಟರ ಕಡಿಂದಾಗಲಿ ಕಂಪನಿಗೆ ಒರೋಬರಿ ರೀತಿಯಿಂದಾಗಲಿ ಜಮಾ ಆಗಿಲ್ಲ. ಅಂತಾ ಎಷ್ಟೋ ಜನರ ಕಡಿಂದಾ ತಕರಾರು ಬಂದವೆ. ಹೀ ತಕರಾರ ಇದ್ದವರು ನಮ್ಮ ಕಡೆಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ಕಚ್ಚಾ ಪಾವತಿ ಸಹಿತ ಹಾಜರ ಮಾಡಿ ತಕರಾರ ನಿಕಾಲೆ ಮಾಡಿಕೊಳ್ಳಬೇಕು. ಮತ್ತು ಫೆಬ್ರುವರಿ ತಿಂಗಳು ಕಂಪನಿಯ ವಾರ್ಷಿಕ ಆಖೈರ ಇದ್ದು ತಾರೀಖು ೨೦| ರೊಳಗಾಗಿ ಹಿಂದಿನ ಬಾಕಿ ಉಳಿದ ಹಪ್ತಿನ ಹಣವನ್ನು ಜಮಾ ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಹಪ್ತು ಆಫೀಸದಲ್ಲಿ ಅಗರ ಏಜಂಟರ ಕಡಿಗೆ ಸ್ವತಃ ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದೆ ತಕರಾರು ಮಾಡಿದರೆ ವಿಚಾರಿಸಲಿಕ್ಕಾಗದು.

ಬಾಗಲಕೋಟೆ — ವ್ಹಿ. ಜೆ. ಪರ್ವತಿ.
೨-೨-೩೧ — ಚೀಫ ಏಜಂಟ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯಸಮಯದಲ್ಲಿ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಖಾತ್ರಿಯ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗ ಕ್ಲಾಸ್ ಶಿಕ್ಷಣವನ್ನು ಯಾರೂ ಕೊಡ [illegible]. ಒಮ್ಮೆ ಒಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಅ್ಯಂಡ ಟೇಲರ್ಸ
ಹೊಸಬಾಜಾರ [illegible]

ಸ್ಟ್ಯಾಂಪಲ್) ಮುದ್ರೆ ಚೀಟಿಗಳು (ಪ್ರಕಟಿ

ನೀಲಿ ಕಪ್ಪು, ಕೆಂಪು, ಜಾಂಬಳಿ ಮುದ್ರೆ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ,	೧೬-೦-೦	ಡೇಲ್ವೆಫಿ
೫ ತೊಲಾ ಪಾಕೀಟಗಳಿಗೆ		೧-೦-೦
ರಬ್ಬರ ಸ್ಟ್ಯಾಂಪ ಮುದ್ರೆಯೊಂದಿನ ೧ ಡಜನ ಬಾಟ್ಲಿಗೆ		೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ
ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಮಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ್ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೆ. ನಂ. ಬಿ. ೨೭೮೮ ನಿತ್ಯ ಸಂಚಾರಿ. ಬೆಲೆ. ೦-೧-೬.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA BAGALKUT.

BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಗುರುವಾರ ಮಿತಿ ಮಾಘ ಬಹುಳ ೧೦ ಶಕೆ ೧೮೫೨ ತಾ॥ ೧೨—೩—೩೧ [ಸಂಖ್ಯೆ ೧೮೭

ಸಪ್ರೂರವರ ಚರ್ಚೆ ಮುಗಿಯಿತು.

ಸರ್ ತೇಜಬಹದ್ದೂರ ಸಪ್ರೂರವರು ಕಾಂಗ್ರೆಸ್ ಮುಖಂಡರೊಡನೆ ಮತ್ತೆ ಒಪ್ಪಂದದ ಬಗ್ಗೆ ಮಾತುಕತೆಯಾಗಿ ತಮ್ಮ ಚರ್ಚೆಯನ್ನು ಮುಗಿಸಿದರು. ಕಾಂಗ್ರೆಸ್ ಮುಖಂಡರು ಒಟ್ಟಿಗೆ ಕಲೆತು ಸರ್ ಸಪ್ರೂರವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ವಿಚಾರ ಮಾಡುವವರಿದ್ದಾರೆ.

ಶ್ರೀ. ಶಾಸ್ತ್ರಿಯವರು ಶುಕ್ರವಾರ ದಿವಸ ದಿಲ್ಲಿಯಿಂದ ಅಲಹಾಬಾದಕ್ಕೆ ಬರತಕ್ಕವರಿದ್ದಾರೆ. ಮಹಾತ್ಮಾ ಗಾಂಧಿ ಮತ್ತು ವ್ಹಾಯಿಸರಾಯರನ್ನು ಪರಸ್ಪರ ಭೆಟ್ಟಿ ಮಾಡಿಸುವ ಕಾರ್ಯದಲ್ಲಿ ಅವರು ಈಗ ತೊಡಗಿದ್ದಾರೆಂದು ತಿಳಿದು ಬರುತ್ತದೆ.

ಹಿಂದುಸ್ಥಾನದ ಭಾವೀರಾಜ್ಯಘಟನೆಯ ವಿಷಯವಾಗಿ ಬ್ರಿಟಿಶರ ಅಭಿಪ್ರಾಯವು ಈಗ ಎಷ್ಟೋ ಬದಲಾಗಿದೆಯೆಂಬುದನ್ನು ತೋರಿಸಿ ಸರ್ ಸಪ್ರೂರವರು ಮಹಾತ್ಮರನ್ನು ಒಪ್ಪಂದಕ್ಕೆ ಮನವೊಲಿಸಲು ಪ್ರಯತ್ನಿಸಿದರು. ಆದರೆ ಮಹಾತ್ಮಾ ಗಾಂಧಿಯವರಿಗೆ ತೃಪ್ತಿಯಾಗಲಿಲ್ಲ.

ವ್ಹಾಯಿಸರಾಯರೊಡನೆ ಪತ್ರವ್ಯವಹಾರ ನಡಿಸಿ, ಹಾಗು ಅವರನ್ನು ಕಂಡುಕೊಂಡು ಮಹಾತ್ಮಾ ಗಾಂಧಿಯವರು ಸದ್ಯದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಚರ್ಚೆ ಮಾಡುವವರಿದ್ದಾರೆಂದು ತರ್ಕ ಮಾಡಲ್ಪಟ್ಟಿದೆ.

ಸರ್ ಸಪ್ರೂರವರಾದರೂ ವ್ಹಾಯಿಸರಾಯರನ್ನು ಕಂಡುಕೊಳ್ಳುವವರಿದ್ದಾರೆಂದೂ, ಅವರ ಈ ಭೆಟ್ಟಿಯು ಕಾಂಗ್ರೆಸಕ್ಕೆ ಏನೂ ಸಂಬಂಧಿಸಿಲ್ಲವೆಂದೂ ತಿಳಿಯುತ್ತದೆ.

ಪಂಡಿತ ಮೋತೀಲಾಲರ ಪುಣ್ಯ ದಿನ ತಾ॥ ೧೫ ಕ್ಕೆ

ಪಂ. ಮೋತೀಲಾಲರ ದಿನ.

ಬರುವ ಆದಿತ್ಯವಾರ ಅಂದರೆ ತಾ॥ ೧೫ ಕ್ಕೆ ದಿವಂಗತ ಪಂಡಿತ ಮೋತೀಲಾಲರ ಮೊದಲನೆಯ ಶ್ರಾದ್ಧ ದಿನವಿರುವದರಿಂದ ಕಾಂಗ್ರೆಸ್ ಅನುಯಾಯಿಗಳು ಆ ದಿವಸ ತಮ್ಮ ಕಾರ್ಯಕಲಾಪಗಳನ್ನು ನಿಲ್ಲಿಸಿ ಅದನ್ನು ಪುಣ್ಯದಿನವನ್ನಾಗಿ ಆಚರಿಸಬೇಕೆಂದೂ, ಉಪವಾಸದಲ್ಲಿ ವಿಶ್ವಾಸವಿದ್ದವರು ಸಂಜೆಯ ವರೆಗೆ ಉಪವಾಸ ಮಾಡಬೇಕೆಂದೂ ಮಹಾತ್ಮಾ ಗಾಂಧಿಯವರು ಸೂಚಿಸಿ ಕೆಳಗಿನ ಕಾರ್ಯಕ್ರಮಗಳನ್ನು ಹಾಕಿಕೊಟ್ಟಿದ್ದಾರೆ.

೧) ಮಧ್ಯಾಹ್ನ ಮೂರು ಗಂಟೆಗೆ ಸಭೆ ಮಾಡಬೇಕು. ೨) ರಾಷ್ಟ್ರಧ್ವಜ ಸಹಿತವಾಗಿ ಮೆರವಣಿಗೆ ಹೊರಡಿಸಿಕೊಂಡು ಮೌನವೃತ್ತಿಯಿಂದ ಸಭಾ ಸ್ಥಾನಕ್ಕೆ ಹೋಗಬೇಕು. ೩) ಸಭೆಗಳಲ್ಲಿ ಸಂಪೂರ್ಣ ಮೌನವ್ರತದಿಂದ ಇರಬೇಕು. ೪) ಈ ಕೆಳಗಿನದನ್ನು ಅಧ್ಯಕ್ಷರು ಮೊದಲು ಉಚ್ಚರಿಸಿ ಅದನ್ನು ಸಭಿಕರ ಕಡೆಯಿಂದ ಉಚ್ಚಾರ ಮಾಡಿಸಬೇಕು. "ದಿವಂಗತ ಮಾನ್ಯ ಪಂಡಿತ ಮೋತೀಲಾಲ ನೆಹರೂರವರ ನಿಸ್ಸೀಮ ಸ್ವಾರ್ಥತ್ಯಾಗವನ್ನು ಸ್ಮರಿಸುತ್ತ ಉದ್ದೇಶದಿಂದ ಇಲ್ಲಿ ನೆರೆದವರಾದ ನಾವು, ಸಂಪೂರ್ಣ ಸ್ವರಾಜ್ಯವನ್ನು ದೊರಕಿಸಿಕೊಳ್ಳಲು ಇದಕ್ಕೂ ಹೆಚ್ಚಿಗೆ ಆತ್ಮಾರ್ಪಣ ಮಾಡುತ್ತೇವಾಗಿ ಈ ಮೂಲಕ ಪ್ರತಿಜ್ಞೆ ಮಾಡುತ್ತೇವೆ.

ಶ್ರೀ ಜಯಕರರು ಅಲಹಾಬಾದಕ್ಕೆ ಹೋದರು

ಅಲಹಾಬಾದದಿಂದ ಸರ್ ತೇಜ ಬಹದ್ದೂರ ಸಪ್ರೂರವರು "ಮಹಾತ್ಮಾ ಗಾಂಧಿಯವರನ್ನು ಎರಡು ಸಾರೆ ಕಂಡುಕೊಂಡೆ. ಅವರು ನಿಮ್ಮನ್ನು ಕಾಣಬಯಸುತ್ತಾರೆ. ಕೂಡಲೆ ಬನ್ನಿರಿ" ಎಂಬುದಾಗಿ ಶ್ರೀ ಜಯಕರರಿಗೆ ತಾರಿನಿಂದ ಕೇಳಿಕೊಂಡಿದ್ದರಿಂದ ಶ್ರೀ ಜಯಕರರು ತಾ॥ ೧೨ ನೆಯ ದಿವಸ ಅಲಹಾಬಾದಕ್ಕೆ ಹೊರಟು ಹೋದರು.

ಅಲಹಾಬಾದದಲ್ಲಿಯ ಕಾರ್ಯವನ್ನು ಮುಗಿಸಿಕೊಂಡು ಶ್ರೀ ಜಯಕರರು ದಿಲ್ಲಿಗೆ ಹೋಗಿ ವ್ಹಾಯಿಸರಾಯರನ್ನು ಕಂಡುಕೊಳ್ಳುವರಾಗಿ ತಿಳಿಯುತ್ತದೆ.

ಗದಗ—ಬೆಟಗೇರಿಯ ಸುದ್ದಿಯು

(ಸ್ವಂತ ಸುದ್ದಿಗಾರರಿಂದ)

ಹರತಾಳ ಹಾಗು ಸಭೆ

ಪಂಡಿತ ಮೋತೀಲಾಲರು ನಿಧನ ಹೊಂದಿದ ಸುದ್ದಿಯು ತಾ|| ೭ಕ್ಕೆ ಇಲ್ಲಿ ತಿಳಿಯಿತು. ಸರ್ವರೂ ಹರತಾಳವನ್ನು ಆಚರಿಸಿದರು. ಮ್ಯುನಸಿಪಾಲಟಿಯ ಶಾಲೆ ಹಾಗು ಖಾಸಗಿ ಶಾಲೆಗಳು ಮುಚ್ಚಲ್ಪಟ್ಟವು. ಸಂಜೆಯ ೫ ಗಂಟೆಗೆ ಚೊಕ್ಕಟಲೆಯ ಮೆರವಣಿಗೆಯಾಗಿ, ೭ ಗಂಟೆಗೆ ಗಾಂಧಿ ಚೌಕಿನಲ್ಲಿ ಡಾ. ಹುಯಿಲಗೋಳರ ಅಧ್ಯಕ್ಷತೆಯಲ್ಲಿ ದುಃಖಪ್ರದರ್ಶಕ ಸಭೆ ಜರುಗಿತು. ಡಾ. ಹುಯಿಲಗೋಳರ ಹಾಗು ಶ್ರೀ ಶಿವ್ವಣ್ಣ ಶಾಸ್ತ್ರಿ ಕಳ್ಳಿಯವರು ಸಮಯೋಚಿತ ಭಾಷಣ ಮಾಡಿದರು.

ಪಿಕೆಟಿಂಗಕ್ಕೆ ಮಾರವಾಡಿಯು

ಹಣ್ಣಾದನು

ತಾ|| ೬ನೆಯ ದಿವಸ ಹರತಾಳವು ಸಾರಲು ಜಲು ಇಬ್ಬರು ಮಾರವಾಡಿ ಬಂಧುಗಳು ತಮ್ಮ ಅಂಗಡಿಗಳನ್ನು ಮುಚ್ಚಲಿಲ್ಲ. ಇಬ್ಬರು ಸ್ವಯಂಸೇವಕರು ಅವರ ಅಂಗಡಿಯ ಮುಂದೆ ಪಿಕೆಟಿಂಗ ಮಾಡಹತ್ತಿದರು. ಸ್ವಲ್ಪ ಹೊತ್ತಿನಲ್ಲಿಯೇ ಅವರು ಅಪರಾಧ ಒಪ್ಪಿಕೊಂಡು, ಇಂಥಹ ಅಪರಾಧವು ಆಗದ ಹಾಗೆ ಇನ್ನು ಮುಂದೆ ಎಚ್ಚರದಿಂದಿರುವದಾಗಿ ಆಶ್ವಾಸನ ಕೊಟ್ಟರು. ಪಿಕೆಟಿಂಗ ತಪ್ಪಿಸಲ್ಪಟ್ಟಿತು.

ಸಿಗರೇಟ ವ್ಯಾಪಾರಿಗಳಾದ ರಾಮನಾಥಸಾ ಮತ್ತು ಮಾಂಡ್ರೆ ಇವರ ಅಂಗಡಿಗಳ ಮೇಲೆ ಪಿಕೆಟಿಂಗ ನಡೆದಿದೆ. ಮಾಂಡ್ರೆಯವರು ಸಿಗರೇಟ ಎಲ್ಲಾ ಮಾರಾಟವನ್ನು ೧೦ ನೇ ತಾರೀಖಿಗೆ ಬಿಟ್ಟುಬಿಡುವೆನಾಗಿ ವಚನ ಕೊಟ್ಟಿದ್ದಾನೆ, ರಾಮನಾಥಸಾ ಇವರು ಪಿಕೆಟಿಂಗ ಸುರುವು ಆದ ದಿವಸವೇ ತಮ್ಮಲ್ಲಿಯ ೧೦೦೦ ಪು. ಕಿಮ್ಮತ್ತಿನ ಸಿಗರೇಟುಗಳನ್ನು ಎಲ್ಲಾ ಬೇರೆ ಕಡೆಗೆ ರವಾನಿಸಿದ್ದಾರೆ.

“ಉಲ್ಲಾಳ ಟ್ಯಾಂಡ ಸನ್ಸ” ಎಂಬ ಪರದೇಶಿ ಅರಿವೆಯ ಅಂಗಡಿಯ ಮುಂದೆ ಪಿಕೆಟಿಂಗ ಯಥಾಪ್ರಕಾರ ನಡೆದಿದೆ. ಮೊನ್ನೆ ಶ್ರೀ ಸಿದ್ರಾಮಪ್ಪ ಮಾನ್ವಿಯವರು ಅವರಿಂದ ಗುಪ್ತವಾಗಿ ತನ್ನ ಮಗನ ಲಗ್ನದ ಹಂದರದೊಳಗೆ ಛತ್ತು ಹೊಡೆಯಲಿಕ್ಕೆಂದು ಕೆಲವು ಅರಿವೆ ತೆಗೆದುಕೊಂಡರು. ಈ ಕೃತಿಯು ಪರಮಾತ್ಮನ ಮನಸಿಗೆ ಬಾರದಿದ್ದರಿಂದ ಆ ಹಂದರವು ಬೆಂಕಿ ಹತ್ತಿ ಸುಟ್ಟು ಹೋಯಿತು.

ನೂಲಿನ ವ್ಯಾಪಾರಿಗಳಾದ ಪಿಟಪಟ ಮತ್ತು ಕಲ್ಯಾಣ ಇವರ ಅಂಗಡಿಗಳ ಮುಂದೆಯೂ ಪಿಕೆಟಿಂಗ ಪ್ರಾರಂಭವಾಗಿದೆ.

ಇಳಕಲ್ಲಿನಲ್ಲಿ ಹರತಾಳ.

(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರು ನಿಧನ ಹೊಂದಿದ ಸುದ್ದಿಯು ಶನಿವಾರ ದಿವಸ ತಿಳಿದ ಕೂಡಲೆ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಂಜೆಯ ೭ ಗಂಟೆಗೆ ಶ್ರೀ ವಿಠ್ಠಲ ಧರ್ಮಾರ್ಥ ವಾಚನಾಲಯದ ಮುಂದಿನ ಬೈಲಿನಲ್ಲಿ ಶ್ರೀ ಶಿವ್ವಣ್ಣ ಶಾಸ್ತ್ರಿ ಕಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ, ದುಃಖಪ್ರದರ್ಶನ ಮಾಡಲಾಯಿತು. ಹುಂಗಲೂರಿನ ಶ್ರೀ ಗೋವರ್ಧನರಾವ ಮಳಿಯೆ ಇವರು ಸಮಯೋಚಿತವಾಗಿ ಭಾಷಣ ಮಾಡಿದರು. ಅಧ್ಯಕ್ಷರು ಸ್ವರ್ಗಸ್ಥ ಮೋತೀಲಾಲರ ಜೀವನ ಚರಿತ್ರೆಯನ್ನು ತಿಳಿಸಿ ಹೇಳಿದರು. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಸರ್ವರೂ ಪ್ರಾರ್ಥಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಹರಪನಹಳ್ಳಿಯಲ್ಲಿ

ವಿಷಮವಿವಾಹ

(ಸ್ವಂತ ಸುದ್ದಿಗಾರರಿಂದ)

ಶ್ರೀ ಕೊಟ್ರಬಸಪ್ಪ ನಲ್ಲಗದರಿ ಎಂಬುವವರು ಈ ಊರಿನ ಆಗರ್ಭ ಶ್ರೀಮಂತರು. ಇವರಿಗೆ ಸುಮಾರು ಅರವತ್ತು ನಾಲ್ಕು ವರ್ಷ ವಯಸ್ಸಿದೆ. ಮದ್ರಾಸ ವಿಶ್ವವಿದ್ಯಾಲಯದ ಪದವೀಧರರಾದ ಮೂವತ್ತೈದು ವರ್ಷದ ಒಬ್ಬ ಮಗನಿದ್ದಾನೆ. ಇವರಿಗಾದರೂ ಒಬ್ಬ ಮಗನಿದ್ದಾನೆ. ಮುದುಕರು ತಮ್ಮ ಮೊಮ್ಮಗಳಿಗಿಂತಲೂ ಚಿಕ್ಕವಳಾಗಿರುವ ೧೨-೧೩ ವರ್ಷದ ಕನ್ಯೆಯನ್ನು ಕೊಳ್ಳುವವರಿದ್ದಾರೆ. ಎಲೈ ಹಾಳು ಹಿಂದೂ ಸಮಾಜವೇ!! ನಿನ್ನ ಸುಧಾರಣೆಯಾಗುವದೆಂತು?

ಇಹವೃತ್ತ.

ಶ್ರೀ ಮನ್ನಿರಂಜನ ನಿರಾಭಾರಿಗಳಾದ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಮೊದಲನೆ ವರ್ಷದ ಪುಣ್ಯತಿಥಿಯ ನಿಮಿತ್ತವಾಗಿ ತಾ|| ೯ ನೆಯ ದಿವಸ ಸಂಜೆಯಲ್ಲಿ ಟೀಕಿನ ಮಠದಲ್ಲಿ ಪಂಡಿತ ಕಲಿಗಣನಾಥ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನೆರೆದು, ಪುಣ್ಯತಿಥಿಯು ಯಥಾಸಾಂಗವಾಗಿ ಆಚರಿಸಲ್ಪಟ್ಟಿತು.

ಶ್ರೀ ಮನ್ನಿರಂಜನ ಲೀಲಾಸಿದ್ಧ ಸ್ವಾಮಿಗಳು ಟೀಕಿನ ಮಠ ಇವರ ಪುಣ್ಯತಿಥಿಯು ನಿನ್ನಿನ ದಿವಸ ವೇದೋಕ್ತ ಪೂಜಾ, ಅಭಿಷೇಕ ಮೊದಲಾದ ಕಾರ್ಯಕ್ರಮದೊಡನೆ ಭಕ್ತಿಪೂರ್ವಕವಾಗಿ ನೆರವೇರಿಸಲ್ಪಟ್ಟಿತು.

ಡಾ. ಹುಯಿಲಗೋಳರ

ಸಾಯಕಲ್ ಜಪ್ತ ಮಾಡಿದರು.

ಗದಗದಲ್ಲಿಯ ಪ್ರಸಿದ್ಧ ಡಾಕ್ಟರರಾದ ಹುಯಿಲಗೋಳ ವೆಂಕಟರಾಯರು ತಮ್ಮ ಸ್ನೇಹಿತನ ಸಾಯಕಲ್ ಹತ್ತಿಕೊಂಡು ತಾ|| ೯ನೆಯ ದಿವಸ ಪೋಲೀಸ ಕಚೇರಿಯ ಮುಂದೆ ಹಾಯ್ದು ಹೋಗುತ್ತಿದ್ದಾಗ, ಜಮಾದಾರನು ಡಾಕ್ಟರರನ್ನು ಕಚೇರಿಯಲ್ಲಿ ಕರೆದನು. ಡಾಕ್ಟರರು ಕಚೇರಿಯಲ್ಲಿ ಹೋದ ಕೂಡಲೆ ಜಮಾದಾರನು “ನಿಮ್ಮ ದಂಡ ವಸೂಲ ಮಾಡಲು ಮೇಲಿನವರ ಅಪ್ಪಣೆಯಾಗಿದೆ. ಕಾರಣ ಸಾಯಕಲ್ ಬಿಟ್ಟು ಹೋಗಿರಿ” ಎಂದು ಅವರಿಗೆ ಹೇಳಿದನು. ಅದಕ್ಕೆ ಡಾಕ್ಟರರು ಎರಡನೇ ಮಾತಾಡದೆ ಸಾಯಕಲ್ ಬಿಟ್ಟುಕೊಟ್ಟು ಹೊರಗೆ ಬಂದರು. ಸಾಯಕಲ್‌ದ ಒಡೆಯರು ಈ ಬಗ್ಗೆ ಕೇಸ ನಡೆಸತಕ್ಕವರಿದ್ದಾರೆಂದು ತಿಳಿಯುತ್ತದೆ. ಜಪ್ತ ಮಾಡುವ ಕಾಲಕ್ಕೆ ಪಂಚನಾಮೆ ಸಹ ಮಾಡಲಿಲ್ಲವಂತೆ! ಪೋಲೀಸರು ಏನು ಮಾಡಿದರೂ ಚಂದ!

ಗದಗ ಸ್ಟೇಶನದಲ್ಲಿ ಪಿಕೆಟಿಂಗ ಸುರುವಾಯಿತು.

(ಹಂತಿಯ ವಾರ್ತೆ)

ಬಹಿಷ್ಕಾರ ಹಾಗು ಪಿಕೆಟಿಂಗ ಚಳವಳಿಗಳು ಇಲ್ಲಿ ಜೋರಿನಿಂದ ಸಾಗಿಸಲ್ಪಟ್ಟಿವೆ. ಕೆಲವು ಸ್ವಯಂಸೇವಕರು ಇವತ್ತಿನ ದಿವಸ ರೇಲ್ವೆ ಗೂಡತೆಡ್ಡಿಗೆ ಹೋಗಿ ಗೋಕಾಕ ಗಿರಣಿಯ ನೂಲಿನ ವಿರುದ್ಧವಾಗಿ ಪಿಕೆಟಿಂಗ ಪ್ರಾರಂಭಮಾಡಿದರು. ನೂಲನ್ನು ತರಿಸಿದವರಿಗೆ ನೂಲಿನ ಗಂಟುಗಳನ್ನು ಗೂಡ್ಸತೆಡ್ಡಿಂದ ಹೊರಗೆ ತೆಗೆದುಕೊಂಡು ಹೋಗುವದೂ ದುಸ್ತರವಾಯಿತು. ಸಾರ್ವಜನಿಕರ ವಿರುದ್ಧವಾಗಿ ವ್ಯಾಪಾರ ಮಾಡುವದು ಒಳ್ಳೆದಲ್ಲವೆಂದು ತಿಳಿದುಕೊಂಡು ಅವರು ಆ ಗಂಟುಗಳನ್ನು ತಿರುಗಿ ಗೋಕಾಕಕ್ಕೆ ಕಳಿಸಿಕೊಟ್ಟುಬಿಟ್ಟರು. ಪಿಕೆಟಿಂಗ ಯಶಸ್ವಿಯಾಯಿತು.

ಗದಗದಲ್ಲಿ ಪ್ರಿಯರಿಗೆ ವಿಧಿಸಿದ ಹಿಂಸೆ ಪಡಿಸಿದ ಪೋಲೀಸರ ಕೃತ್ಯದ ನಿಷೇಧಾರ್ಥವಾಗಿ, ಹಾವೇರಿಯ ಸ್ತ್ರೀಯರು ಮೆರವಣಿಗೆ ಹೊರಡಿಸಿ ಮತ್ತು ಈಶ್ವರ ದೇವರ ಗುಡಿಯಲ್ಲಿ ಸಭೆ ಸೇರಿಸಿ ಆ ಕೃತ್ಯವನ್ನು ನಿಷೇಧಿಸಿದರು.

ಈ ಪತ್ರಿಕೆಯು ವೆಂಕಟೇಶ ಶೇತುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಜಾಲಿಹಾಳ ವಕೀಲರು ಬಿಡುಗಡೆ ಹೊಂದಿದರು

(ತಂತಿಯ ವಾರ್ತೆ ಗದಗ ತಾ|| ೧೧)

ಹಿಂಡಲಗಿ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಇಲ್ಲಿಯ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಜಾಲಿಹಾಳ ಅನಂತರಾಯರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಬಿಡುಗಡೆ ಹೊಂದಿ ಇವತ್ತಿನ ದಿವಸ ಇಲ್ಲಿಗೆ ಬಂದರು. ನಾಗರಿಕರು ಅವರಿಗೆ ಯೋಗ್ಯವಾದ ಆದರ ಸತ್ಕಾರಗಳನ್ನು ಮಾಡಿ ಅವರನ್ನು ಊರಲ್ಲಿ ಕರೆದು ಕೊಂಡು ಬಂದರು. ಇವರು ಬಿಡುಗಡೆಯಾಗಿ ಬಂದಿದ್ದರಿಂದ ಇಲ್ಲಿ ಕಾಂಗ್ರೆಸ್ ಕಾರ್ಯಕ್ಕೆ ಹೆಚ್ಚು ಬಲದೊರೆತಂತಾಗಿದೆ.

ಶ್ರೀ ಹಿರೇಮಠ ಸಾಹೇಬರ ಕಾರಭಾರ.

ಬೆಳಗಾವ ಜಿಲ್ಹೆಯ ತಾತ್ಕಾಲಿಕ ಕಲೆಕ್ಟರರಾದ ಶ್ರೀ ಹಿರೇಮಠ ಸಾಹೇಬರು ಚಂದಗಡ ಶ್ರೀ ರಾಮಚಂದ್ರ ಯಶವಂತ ದೇಶಪಾಂಡೆ ಎಂಬ ಗೃಹಸ್ಥರಿಗೆ ತಾ|| ೨೯ ನೆಯ ದಿವಸ ನೋಟೀಸು ಕೊಟ್ಟು, ಪರಗಣೆಯ ವತನವನ್ನು ಯಾಕೆ ಜಪ್ತ ಮಾಡಬಾರದೆಂಬ ಬಗ್ಗೆ ಕಾರಣ ತೋರಿಸಲು ತಾ|| ೧೬—೨—೩೧ ನೆಯ ದಿವಸ ಕೋರ್ಟಿಗೆ ಬರಲು ಅವರಿಗೆ ಕೇಳಿಕೊಂಡಿದ್ದಾರೆ.

ಶ್ರೀ ಧನಶೆಟ್ಟಿಯವರ ಚಿತ್ರ ಮಾರುವದೂ ಅಪರಾಧವಾಯಿತು

ಯರೋಡೆಯಲ್ಲಿ ಗಲ್ಲಿಗೇರಿಸಲ್ಪಟ್ಟ ಸೊಲ್ಲಾಪುರದ ವೀರಾಳುಗಳಾದ ಶ್ರೀ ಧನಶೆಟ್ಟಿ ಮೊದಲಾದವರ ಚಿತ್ರಗಳನ್ನು ಶುಕಾರಾಮ ಪೀರಾಜ ಎಂಬುವವನೊಬ್ಬನು ಸೊಲ್ಲಾಪುರದಲ್ಲಿ ತಾ|| ೩ ನೆಯ ದಿವಸ ಬೀದಿಗಳಲ್ಲಿ ಮಾರುತ್ತ ಹೋಗುತ್ತಿದ್ದನು. ಪೋಲೀಸರು ಅವನನ್ನು ಹಾದಿಯಲ್ಲಿ ಸೆರೆಹಿಡಿದು ಪೋಲೀಸ ಕಾಯದೆಯ ೧೨ ನೆಯ ಕಲಮಿನ್ವಯ ಅವನ ಮೇಲೆ ಖಟ್ಲೆ ಹಾಕಿದರು. ತಾ|| ೪ ನೆಯ ದಿವಸ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಡೆದು, ಅವನಿಗೆ ೫೦ ರೂ ದಂಡ, ಇಲ್ಲವೆ ೧೫ ದಿವಸ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿತು.

ರತ್ನಾಗಿರಿ ಜಿಲ್ಹೆಯಲ್ಲಿ ಸರಕಾರಕ್ಕೆ ಲಕ್ಷಗಟ್ಟಲೆ ಹಾನಿ

ರತ್ನಾಗಿರಿಯಲ್ಲಿ ತಾ|| ೩ ನೆಯ ದಿವಸ ಕಲೆಕ್ಟರರ ಎದುರಿನಲ್ಲಿ ಆ ಜಿಲ್ಹೆಯ ಸೆಂದಿ ಸೀಂದಿ, ಗಾಂಜಾ ಮೊದಲಾದ ಅಂಗಡಿಗಳ ಲಿಲಾವು ನಡೆಯಿತು. ೧೧೩ ಸೇಂದಿಯ ಅಂಗಡಿಗಳಲ್ಲಿ ಮೂರೇ ಅಂಗಡಿಗಳು ಲಿಲಾವಿನಲ್ಲಿ ಬೇಡಲ್ಪಟ್ಟವು. ಮಾದಕ ಪದಾರ್ಥಗಳ ೨೩ ಅಂಗಡಿಗಳಿಗೆ ಕೇವಲ ೧೧ ಜನರೇ ಅರ್ಜಿ ಮಾಡಿದ್ದರಿಂದ ಅವರಿಗೆ ಅವು ಕೊಡಲ್ಪಟ್ಟವು. ಇವುಗಳ ಲಿಲಾವಿನಿಂದ ಹೋದವರ್ಷದಲ್ಲಿ ಸರಕಾರದವರಿಗೆ ೨೬೮೦೦೦ ರುಪಾಯಿಗಳು ದೊರೆತಿದ್ದವು. ಆದರೆ ಈ ವರ್ಷ ಖರೇ ೮೦೦೦ ರುಪಾಯಿಗಳ ಮೇಲೆ ಅವರು ಸಂತುಷ್ಟರಾಗಬೇಕಾಯಿತು! ಲಿಲಾವಿನ ಸಮಯದಲ್ಲಿ ಸ್ವಯಂಸೇವಕರು ಪಿಕೆಟಿಂಗ ನಡಿಸಿದ್ದರಿಂದಲೆ ಸರಕಾರಕ್ಕೆ ಹೀಗೆ ಹಾನಿಯಾಯಿತು.

ಬಹಿಷ್ಕಾರದ ಪರಿಣಾಮ.

೧೯೨೯ ನೆಯ ಡಿಸೆಂಬರ ತಿಂಗಳದಲ್ಲಿ ಪರದೇಶಗಳಿಂದ ೧೦ ಕೋಟಿ ರೂಪಾಯಿಗಳ ಮಾಲು ಅರಿವೆಯು ಈ ದೇಶಕ್ಕೆ ಬಂದಿತ್ತು. ಆದರೆ ಬಹಿಷ್ಕಾರ ಚಳವಳಿಯು ಈಗ ಇಲ್ಲಿ ಜೋರಾಗಿ ಸಾಗಿದ್ದರಿಂದ ಈ ವರ್ಷದ ಡಿಸೆಂಬರ ತಿಂಗಳದಲ್ಲಿ ಕೇವಲ ೨ ಕೋಟಿ ರೂಪಾಯಿಗಳ ಮಾಲು ಅರಿವೆಯಷ್ಟೇ ಪರದೇಶಗಳಿಂದ ಇಲ್ಲಿಗೆ ಬಂದಾದಾಗಿದೆ. ಪರದೇಶಿ ಬಟ್ಟೆಯ ವ್ಯಾಪಾರವು ೧೦೦ಕ್ಕೆ ೮೦ ರಷ್ಟು ಕಡಿಮೆಯಾದಂತಾಯಿತು.

ಒಂದೇ ಮನೆಯಲ್ಲಿ ೧೪ ಜನರ ಕೊಲೆ.

ಮಧುರಾ ಜಿಲ್ಹೆಯಲ್ಲಿಯ ಧಿಲ್ಪಂಪಟ್ಟಿ ಎಂಬ ಹಳ್ಳಿಯ ಮ್ಯಾಜಿಸ್ಟ್ರೇಟರನ್ನು ಹಾಗು ಅವರ ಮನೆಯ ೧೩ ಜನರನ್ನು ತಾ|| ೩ ನೆಯ ದಿವಸ ಯಾರೋ ಕೆಲವರು ಕೊಂದು ಒಗೆದಿದ್ದಾರೆ. ಈ ಕೊಲೆಯು ಘಟಿಸುವದಕಿಂತ ಪೂರ್ವದಲ್ಲಿ ಮ್ಯಾಜಿಸ್ಟ್ರೇಟರು ಮಧುರಾ ಜಿಲ್ಹೆಯ ಪೋಲೀಸ ಸುಪರಿಂಟೆಂಡೆಂಟರಿಗೆ ತಂತಿ ಕೊಟ್ಟು ತಿಳಿಸಿದ್ದರು. ೫ ರ ದಿವಸ ಮುಂಜಾನೆಯಿಂದ ಮಧ್ಯಾಹ್ನದೊಳಗಾಗಿಯೇ ೧೩ ನೆಯವರೆಲ್ಲರ ಗುಂಡಿನಿಂದ ಕೊಡೆಯಲ್ಪಟ್ಟು, ಇಲ್ಲವೆ ಕರೆರಿಯಿಂದ ಇರಿಯಲ್ಪಟ್ಟು ಸತ್ತು ಬಿದ್ದರು. ಪೋಲೀಸರು ಅಪರಾಧಿಗಳ ಬಗ್ಗೆ ಶೋಧ ನಡಿಸಿದಾರೆ.

ಪಂಡಿತ ಮೋತೀಲಾಲರ ನಿಧನ ವಾರ್ತೆಯನ್ನು ಕೇಳಿ ಲಾಹೋರ ೨ ನೇ ಬಳಗಂಚಿನ ಪಟ್ಟಿಯ ಆರೋಪಿಗಳು ೩ ದಿನಗಳ ವರೆಗೆ ಉಪವಾಸ ಮಾಡಿ ದುಃಖಪ್ರದರ್ಶನ ಮಾಡಿದರು.

"ಮಹಾತ್ಮರನ್ನು ಮತ್ತೆ ಸೆರೆಹಿಡಿಯಿರಿ"

"ಮಹಾತ್ಮಾ ಗಾಂಧಿಯವರ ಲೇಖನ ಮತ್ತು ಭಾಷಣ ಇವುಗಳಿಗೆ ಪ್ರತಿಬಂಧವು ಈಗ ಅತ್ಯವಶ್ಯವಿದೆ. ಕಾರಣ ಅವರನ್ನು ಮತ್ತೆ ಸೆರೆಹಿಡಿಯುವ ಸಂಬಂಧವಾಗಿ ಹಿಂದುಸ್ತಾನ ಸರಕಾರದವರಿಗೆ ಕೇಳಿಕೊಳ್ಳಬೇಕು." ಎಂಬುದಾಗಿ ಮಿ. ಬ್ಯಾಕನರು ಕಾಮನ್ಸ ಸಭೆಯಲ್ಲಿ ಪ್ರಶ್ನೆ ಕೇಳಿದರು. ಮಿ. ಬೆನ್ನರು 'ಅದು ಅಗದು' ಎಂದು ಉತ್ತರಕೊಟ್ಟರು.

ಬಾರಿಸಾದಲ್ಲಿ ಬಾಂಬು ಹಾರಿತು

ತಾ|| ೮ ನೆಯ ದಿವಸ ರಾತ್ರಿ ಬಾರಿಸಾಲದಲ್ಲಿ ಯಾರೋ ಕೆಲವರು ಅಲ್ಲಿಯ ಬಿ. ಎಮ್. ಕಾಲೇಜದ ಕಟ್ಟಡದ ಮೇಲೆ ಬಾಂಬು ಒಗೆದದ್ದರಿಂದ, ಅದು ಸ್ಫೋಟವಾಗಿ ಭಯಂಕರ ಶಬ್ದವಾಯಿತು. ಶಬ್ದವನ್ನು ಕೇಳಿ ಪೋಲೀಸರು ಕೂಡಲೆ ಅಲ್ಲಿಗೆ ಹೋದರು. ಅಲ್ಲಿ ಅವರಿಗೆ ಕೆಲವು [illegible], ಗಬ್ಬಿಣ ಮೊಳೆ ಮೊದಲಾದ ಬಾಂಬಿನ ಉಪಕರಣಗಳು ಸಿಕ್ಕವು.

೧೪೯ ಜನರಿಗೆ ಬಿಡುಗಡೆಯಾಯಿತು.

ಶ್ರೀ ಲಾ. ಅಮೆಂಡಗೊಟ ಕಾಯದೆಯನ್ವಯ ಕೆಳಗಿನ ಕೋರ್ಟಿನಲ್ಲಿ ಶಿಕ್ಷೆಗೊಳಗಾದ ದಿಲ್ಲಿಯ ಶ್ರೀ ದೇಶರಾಜ ಮೊದಲಾದ ೧೪೯ ಜನರ ಖಟ್ಲೆಯ ಕಾಗದಪತ್ರಗಳನ್ನು ಲಾಹೋರ ಹಾಯಕೋರ್ಟಿನ ನ್ಯಾಯಾಧೀಶರಾದ ಟೇಕಚಂದರು ಪುನರ್ವಿಚಾರಣೆ ಮಾಡಿ, ಸರ್ವರನ್ನು ನಿರಪರಾಧಿಗಳಾಗಿ ನಿರ್ಣಯಿಸಿದರು.

ಲಖನೌ ಜೇಲಿನ ಅತ್ಯಾಚಾರದ ವಿಚಾರಣೆ

ಲಖನೌ ಜೇಲಿನಲ್ಲಿ ಇತ್ತೀಚಿಗೆ ಸಂಭವಿಸಿದ ಅತ್ಯಾಚಾರಗಳ ವಿಷಯವಾಗಿ ವಿಚಾರಮಾಡಲು ಕಾಂಗ್ರೆಸದವರು ಶ್ರೀ ಮೋಹನಲಾಲ ಸಕ್ಸೆನಾ ಶ್ರೀ ಸುಂದರಲಾಲ ಫಿರೋಜಿನ್ಸ್ಕರ ಕಿದವಾಯಿ ಮೊದಲಾದವರದೊಂದು ಮಂಡಳವನ್ನು ನಿಯಮಿಸಿ, ಒಂದು ವಾರದೊಳಗಾಗಿ ಆ ಬಗ್ಗೆ ವರದಿ ಒಪ್ಪಿಸಲು ಅವರಿಗೆ ಕೇಳಿಕೊಂಡಿದ್ದಾರೆ.

ಮಾಮಲೇದಾರರಿಗೆ ಮನೆ ಸಿಗಲಿಲ್ಲ

ಗುಜರಾಥ ಪ್ರಾಂತದ ಪಾರಡೀ ತಾಲೂಕಿನ ಮಾಮಲೇದಾರರು ಒಂದು ದಿವಸ ಪಲಸಾನಾ ಎಂಬ ಹಳ್ಳಿಗೆ ಹೋಗಿದ್ದರು. ಅಲ್ಲಿಯ ಒಬ್ಬ ರೈತನು ಅವರನ್ನು ತನ್ನ ಮನೆಯಲ್ಲಿ ಇಳಿಸಿಕೊಳ್ಳುವ ಬಗ್ಗೆ ವ್ಯವಸ್ಥೆ ನಡೆಸಿದ್ದನು. ರೈತನ ಮಗನಿಗೆ ಅದು ತಿಳಿಯಿತು. ಅವನು "ಮಾಮಲೇದಾರರನ್ನು ನನ್ನ ಮನೆಯಲ್ಲಿ ಕಾಲಿಡುವದಾದರೆ, ಅವನು ಕಾಲಿಡುವದಕ್ಕಿಂತ ಪೂರ್ವದಲ್ಲಿಯೇ ಅವನ ಮನೆಯ ಮುಂದೆ ಅಡ್ಡಬಿದ್ದು ಪ್ರಾಣ ಕೊಡುವೆನು" ಎಂಬುದಾಗಿ ತಂದೆಗೆ ಅರುಹಿದನು. ಮಗನ ಇಚ್ಛೆಯ ವಿರುದ್ಧವಾಗಿ ವರ್ತಿಸುವದು ಸರಿಯಲ್ಲವೆಂದು ಭಾವಿಸಿ ಆ ರೈತನು ಮಾಮಲೇದಾರರನ್ನು ತನ್ನ ಮನೆಯಲ್ಲಿ ಇಳಿಸಿಕೊಳ್ಳುವ ವಿಚಾರವನ್ನು ಬಿಟ್ಟುಬಿಟ್ಟನು.

ತೆರಾಲ ಸಿಂಗರಿಗೆ ೩೦ ವರ್ಷ ಕಠಿಣ ಶಿಕ್ಷೆ

ನವ್ಹೆಂಬರ ಒಂದನೇ ತಾರೀಖಿನ ದಿವಸ ತೆರಾಲಸಿಂಗನೆಂಬ ಒಬ್ಬ ತರುಣನು ಪೋಲೀಸನ ಕೊಲೆ ಮಾಡಲು ಪ್ರಯತ್ನಿಸಿದ ಆರೋಪದಿಂದ ಲಾಹೋರದ ಬಳಿಯಲ್ಲಿ ಒಂದು ಹಳ್ಳಿಯಲ್ಲಿ ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟನು ಅವನಲ್ಲಿ ಆಗ ಒಂದು ಪಿಸ್ತೂಲವು ಪೋಲೀಸರಿಗೆ ಸಿಕ್ಕಿತು. ಮ್ಯಾಜಿಸ್ಟ್ರೇಟರು ಈ ಎರಡೂ ಅಪರಾಧಗಳ ಬಗ್ಗೆ ವಿಚಾರಣೆ ಮಾಡಿ ತಾ|| ೬ನೆಯ ದಿವಸ ಅವನಿಗೆ ಒಟ್ಟು ೩೦ ವರ್ಷ ಕಠಿಣ ಶಿಕ್ಷೆ ವಿಧಿಸಿದರು.

ಮದ್ರಾಸದಲ್ಲಿ ಸಂದೇಶ ಪತ್ರಿಕೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದಬಗ್ಗೆ ಶ್ರೀ ಎಸ್. ಎಸ್. ಸುಂದರರಾಮ ಶ್ರೀ ವಿ. ತಿ ಕಮಲಾಬಾಯಿ ಲಕ್ಷ್ಮಣರಾವ, ಶ್ರೀ ವಿ. ತಿ ಕೃಷ್ಣಾಬಾಯಿ ಹಂಪರಾವ ಈ ಮೂವರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಾರಾಗ್ರಹವಾಸದ ಶಿಕ್ಷೆಯು ದೊರೆತಿದೆ. ಶ್ರೀಮತಿ ಕಮಲಾಬಾಯಿ ಹಾಗು ಶ್ರೀ ವಿ. ತಿ ಕೃಷ್ಣಾಬಾಯಿಯವರು ದಿವಂಗತ ರಾಜಾ ಸರ್. ಟಿ. ಮಾಧವರಾಯರ ಮೊಮ್ಮಕ್ಕಳಾಗಿರುವರು.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರಾವ್ಹಿಡೆಂಟ ಕಂಪನಿ ಲಿ. ಕಲಕತ್ತಾ ಈ ಕಂಪನಿಯು ಏಜೇಂಟರಲ್ಲಿ ವಿನಂತಿ:—

ಈಗ ೩-೪ ತಿಂಗಳಿಂದ ಏಜಂಟರ ಕಡೆಂದಾ ಕೆಲವು ಕಂಪನಿಗೆ ಬರೋಬರಿ ರೀತಿಯಿಂದಾ ಜಮಾ ಆಗಿಲ್ಲಾ ಅಂತಾ ಎಷ್ಟೋ ಜನರ ಕಡೆಂದಾ ತಕರಾರ ಬಂದಿದೆ, ಹೀಗೆ ತಕರಾರ ಇದ್ದವರು ನಮ್ಮ ಕಡೆಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ಕಚ್ಚಾ ಪಾವತಿ ಸಹಿತ ಹಾಜರ ಮಾಡಿ ತಕರಾರ ನಿಕಾಲೆ ಮಾಡಿಕೋಬೇಕು. ಮತ್ತು ಫೆಬ್ರುವರಿ ತಿಂಗಳು ಕಂಪನಿಯ ವಾರ್ಷಿಕ ಆಖೈರ ಇದ್ದು ತಾರೀಖು ೩೦|೧೧ರೊಳಗಾಗಿ ಹಿಂದಿನ ಬಾಕಿಯನ್ನು ಅಂತಿನ ಹಣವನ್ನು ಜಮಾ ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಕಂತು ಆಫೀಸದಲ್ಲಿ ಅಥವಾ ಏಜಂಟರ ಕಡಿಗೆ ನೇರ ದಿಂದ ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದೆ ತಕರಾರು ಮಾಡಿದರೆ ವಿಚಾರಿಸಲಿಕ್ಕಾಗದು.

ಬಾಗಲಕೋಟೆ ವ್ಹಿ. ಜಿ. ಪವಾರ.
[illegible] ಚೀಫ ಏಜಂಟ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಟ್ಯಾಂಪಲ್) ಮತಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, [illegible] ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦	
೧ ಸಾವಿರ ಚೀಟಿಗಳಿಗೆ	೩-೮-೦	
೫ ಸಾವಿರಕ್ಕೆ,	೧೬-೦-೦	ರೇಲ್ವೆ [illegible]
೫ ತೊಲಾ ಪಾಕೀಟಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮಸಿ ½ ಔಂಸಿನ ೧೨ ಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ
ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ

ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟೈಮಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶ್ರೀಧರಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಈ ಪತ್ರಿಕೆಯು ವೆಂಕಟೇಶ ಶ್ರೀಧರಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೆ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT.
WEEKLY

ಸಂಪಾದಕರು:— ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶುಕ್ರವಾರ ತಿಥಿ ಮಾಘ ಬಹುಳ ೧೧ ಶಕೆ ೧೮೫೨ ತಾ॥ ೧೩—೨—೩೧ [ಸಂಚಿಕೆ ೧೮೪

ಕಾಕಾ ಕಾರಖಾನೀಸರನ್ನು ಮತ್ತೆ ಹಿಡಿದರು

ಸ್ವಲ್ಪ ದಿನಗಳ ಹಿಂದೆ ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿದ ಶ್ರೀ ಕಾಕಾ ಕಾರಖಾನೀಸರು ಮೊನ್ನಿನ ದಿವಸ ಅಂಕೋಲೆಗೆ ಹೋಗಲು ಹೊರಟಿದ್ದರು. ಸಾದಾವೇಷದ ಓರ್ವ ಪೋಲೀಸನು ಅವರಿಗೆ ಹಾದಿಯಲ್ಲಿ ಅವರ ಹೆಸರು ಕೇಳಿದನು. ಅವರು ತಮ್ಮ ಹೆಸರು ಹೇಳಲಿಲ್ಲ. ಈ ಅಪರಾಧಕ್ಕಾಗಿ ಅವರ ಮೇಲೆ ೧೧೯ ನೆಯ ಕಲಮಿನನ್ವಯ ಅಪರಾಧ ಹೊರಿಸಿ ಪೋಲೀಸರು ಸುಂಕಶಾಲಾ ಎಂಬಲ್ಲಿ ಅವರನ್ನು ಸೆರೆ ಹಿಡಿದಿದ್ದಾರೆ.

———o———

ಅಲಹಾಬಾದಕ್ಕೆ ಕರ್ನಾಟಕದ ಮುಖಂಡರ ಪ್ರಯಾಣ

(ತಂತಿಯ ವಾರ್ತೆ ತಾ॥ ೧೨)

ಹಿಂದುಸ್ಥಾನೀ ಸೇವಾದಳದ ಸಂಸ್ಥಾಪಕರೂ ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭಾಸದರೂ ಆದ ಡಾ. ಹರ್ಡೀಕರರು ಕರ್ಮವೀರ ದಿವಾಕರರೊಡನೆ ಅಲಹಾಬಾದಕ್ಕೆ ಹೊರಟಿದ್ದು, ಇಂದು ಅವರು ಅಲ್ಲಿಗೆ ಮುಟ್ಟತಕ್ಕವರಿದ್ದಾರೆ.

ಶ್ರೀ ಓಗಳೆಯವರನ್ನು ಸೆರೆಹಿಡಿದರು.

(ತಂತಿಯ ವಾರ್ತೆ ತಾ॥ ೧೨)

ನಾಗಪುರದ 'ಮಹಾರಾಷ್ಟ್ರ', ಪತ್ರಿಕೆಯ ಸಂಪಾದಕರಾದ ಶ್ರೀ ಓಗಳೆಯವರು ರಾಜದ್ರೋಹದ ಆರೋಪದಿಂದ ಇಂದು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಬಟ್ಟೆಯ ವ್ಯಾಪಾರಿಗೆ ಗುಂಡು ಹೊಡೆದರು.

(ತಂತಿಯ ವಾರ್ತೆ ತಾ॥ ೧೨)

ಅಮೃತಸರದಲ್ಲಿಯ ಓರ್ವ ಪರದೇಶಿ ಬಟ್ಟೆಯ ವ್ಯಾಪಾರಿಯು ಗುಂಡಿನಿಂದ ಹೊಡೆಯಲ್ಪಟ್ಟು ಗಾಯಹೊಂದಿ ಬಿದ್ದಿದ್ದಾನೆ.

ಅಲಹಾಬಾದದಲ್ಲಿ ಒಪ್ಪಂದದ ಮಾತುಕತೆ

ಮಹಾತ್ಮಾಗಾಂಧಿ, ಪಂಡಿತ ಜವಾಹಿರಲಾಲ, ಮಾಲವಿಯಾ, ಡಾ. ಅನಸಾರಿ ಮೊದಲಾದ ಕಾಂಗ್ರೆಸ್ ಮುಖಂಡರು ಸರ್ ಸಪ್ರೂವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಂಬಂಧವಾಗಿ ಈಗ ತಮ್ಮ ತಮ್ಮೊಳಗೆ ಚರ್ಚೆ ನಡಿಸಿದ್ದಾರೆ. ಶ್ರೀ ಜಯಕರ ಮತ್ತು ಸಾ ಶಾಸ್ತ್ರಿಯವರೊಡನೆ ಚರ್ಚೆ ಮಾಡಿದ ಮೇಲೆಯೇ ಅವರು ತಮ್ಮ ನಿರ್ಣಯವನ್ನು ಹೊರಗೆಡಹುವರು.

ಶ್ರೀ ಲಾಲಜಿ ನಾರಾಯಣಜಿ ಹಾಗು ಶ್ರೀ ಸಿ. ರಾಜಗೋಪಾಲಾಚಾರ್ಯರು ಈಗ ಇಲ್ಲಿಗೆ ಬಂದಿದ್ದಾರೆ.

ಮಹಾತ್ಮಾ ಗಾಂಧಿಯವರು ತಾವೇಸ್ವತಃ ಹೋಗಿ ವ್ಹಾಯಿಸರಾಯರನ್ನು ಕಂಡುಕೊಳ್ಳುವ ವಿಚಾರದಲ್ಲಿದ್ದವರಾಗಿಯೂ, ದಿಲ್ಲಿಯಿಂದ ಆಮಂತ್ರಣ ಬಂದರೆ ಅದನ್ನು ಅವರು ಸ್ವಸಂತೋಷದಿಂದ ಸ್ವೀಕರಿಸುವವರಿದ್ದವರಾಗಿಯೂ ತಿಳಿಯುತ್ತದೆ.

ಸತ್ಯಾಗ್ರಹ ಚಳವಳಿಯನ್ನು ಹೀಗೆಯೇ ಮುಂದೆ ಸಾಗಿಸಿದಲ್ಲಿ ಅದಕ್ಕೆ ತಮ್ಮದೇನೂ ವಿರೋಧವಿಲ್ಲವೆಂದು ಮುಂಬಯಿ ಹಾಗು ಕಲಕತ್ತೆಯ ಉದ್ಯೋಗಸ್ಥರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವಂತೆ ಕಂಡುಬರುತ್ತದೆ.

(ತಂತಿಯ ವಾರ್ತೆ ತಾ॥ ೧೨)

ಸಾ. ಶಾಸ್ತ್ರಿ, ಶ್ರೀ ಜಯಕರ ಹಾಗು ಶ್ರೀ ಪುರುಷೋತ್ತಮದಾಸ ಇವರು ಇಂದು ಅಲಹಾಬಾದಕ್ಕೆ ಬಂದು, ಮಹಾತ್ಮಾ ಗಾಂಧಿ ಹಾಗು ಉಳಿದ ಕಾಂಗ್ರೆಸ್ ಮುಖಂಡರೊಡನೆ ಒಪ್ಪಂದದ ಬಗ್ಗೆ ಚರ್ಚೆ ಮಾಡಿದರು. ರಾಜದಾಡಳಿತೆಯ ಸಂಬಂಧವಾಗಿ ವಿಚಾರ ಮಾಡಲಿಕ್ಕೆ ಕಾಂಗ್ರೆಸ್ ಪಕ್ಷದವರು ನಿರಾಕರಿಸಿದರಾಗಿ ತಿಳಿದು ಬರುತ್ತದೆ.

ಬೆಂಗಳೂರ ಕೂಲಿಕಾರ ಸಂಘದ ಕಾರ್ಯದರ್ಶಿಗಳೂ, ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರೂ ಆದ ಪಿ. ಎಂ. ರಾಮಶರ್ಮಾ ಇವರಿಗೆ ಮೈಸೂರ ಪೋಲೀಸ ಕಾಯದೆಯ ೫೬ ನೆಯ ಕಲಮಿನನ್ವಯ ೩೦ ರೂ. ದಂಡ, ಇಲ್ಲವೆ ೭ ದಿವಸ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದ್ದು, ಅವರು ದಂಡವನ್ನು ಕೊಡದೆ ಕಾರಾಗೃಹಕ್ಕೆ ತೆರಳಿದರು.

ರೆ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ –मनु.

ಕನ್ನಡಿಗ

KANNADIGA BAGALKOT. WEEKLY

ಸಂಪಾದಕರು:— ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶುಕ್ರವಾರ ಮಿತಿ ಮಾಘ ಬಹುಳ ೧೧ ಶಕೆ ೧೮೫೨ ತಾ॥ ೧೩—೨—೩೧ [ಸಂಚಿಕೆ ೧೮೮

ಕಾಕಾ ಕಾರಖಾನೀಸರನ್ನು ಮತ್ತೆ ಹಿಡಿದರು

ಸ್ವಲ್ಪ ದಿನಗಳ ಹಿಂದೆ ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿಬಂದ ಶ್ರೀ ಕಾಕಾ ಕಾರಖಾನೀಸರು ಮೊನ್ನಿನ ದಿವಸ ಅಂಕೋಲೆಗೆ ಹೋಗಲು ಹೊಂಟಿದ್ದರು. ಸಾದಾವೇಷದ ಓರ್ವ ಪೋಲೀಸನು ಅವರಿಗೆ ಹಾದಿಯಲ್ಲಿ ಅವರ ಹೆಸರು ಕೇಳಿದನು. ಅವರು ತಮ್ಮ ಹೆಸರು ಹೇಳಲಿಲ್ಲ. ಈ ಅಪರಾಧಕ್ಕಾಗಿ ಅವರ ಮೇಲೆ ೧೦೯ ನೆಯ ಕಲಮಿನನ್ವಯ ಅಪರಾಧ ಹೊರಿಸಿ ಪೋಲೀಸರು ಕುಂಕಣಿಹಾಳ ಎಂಬಲ್ಲಿ ಅವರನ್ನು ಸೆರೆ ಹಿಡಿದಿದ್ದಾರೆ.

———o———

ಅಲಹಾಬಾದಕ್ಕೆ ಕರ್ನಾಟಕದ ಮುಖಂಡರ ಪ್ರಯಾಣ

(ತಂತಿಯ ವಾರ್ತೆ ತಾ॥ ೧೨)

ಹಿಂದುಸ್ಥಾನೀ ಸೇವಾದಲದ ಸಂಸ್ಥಾಪಕರೂ ವರ್ಕಿಂಗ ಕಮಿಟಿಯ ಸಭಾಸದರೂ ಆದ ಡಾ. ಹರ್ಡೀಕರರು ಕರ್ಮವೀರ ದಿವಾಕರರೊಡನೆ ಅಲಹಾಬಾದಕ್ಕೆ ಹೊರಟಿದ್ದು, ಇಂದು ಅವರು ಅಲ್ಲಿಗೆ ಮುಟ್ಟತಕ್ಕವರಿದ್ದಾರೆ.

ಶ್ರೀ ಓಗಳೆಯವರನ್ನು ಸೆರೆಹಿಡಿದರು.

(ತಂತಿಯ ವಾರ್ತೆ ತಾ॥ ೧೨)

ನಾಗಪುರದ 'ಮಹಾರಾಷ್ಟ್ರ', ಪತ್ರಿಕೆಯ ಸಂಪಾದಕರಾದ ಶ್ರೀ ಓಗಳೆಯವರು ರಾಜದ್ರೋಹದ ಆರೋಪದಿಂದ ಇಂದು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಬಟ್ಟೆಯ ವ್ಯಾಪಾರಿಗೆ ಗುಂಡು ಹೊಡೆದರು.

(ತಂತಿಯ ವಾರ್ತೆ ತಾ॥ ೧೨)

ಅಮೃತಸರದಲ್ಲಿಯ ಓರ್ವ ಪರದೇಶಿ ಬಟ್ಟೆಯ ವ್ಯಾಪಾರಿಯು ಗುಂಡಿನಿಂದ ಹೊಡೆಯಲ್ಪಟ್ಟು ಗಾಯಹೊಂದಿ ಬಿದ್ದಿದ್ದಾನೆ.

ಅಲಹಾಬಾದದಲ್ಲಿ ಒಪ್ಪಂದದ ಮಾತುಕತೆ

ಮಹಾತ್ಮಾ ಗಾಂಧಿ, ಪಂಡಿತ ಜವಾಹಿರಲಾಲ, ಮಾಲವಿಯಾ, ಡಾ. ಅನಸಾರಿ ಮೊದಲಾದ ಕಾಂಗ್ರೆಸ್ ಮುಖಂಡರು ಸರ್ ಸಪ್ರೂ ಮೊದಲಾದವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಂಬಂಧವಾಗಿ ಈಗ ತಮ್ಮ ತಮ್ಮೊಳಗೆ ಚರ್ಚೆ ನಡಿಸಿದ್ದಾರೆ. ಶ್ರೀ ಜಯಕರ, ಮತ್ತು ನಾ ಶಾಸ್ತ್ರಿಯವರೊಡನೆ ಚರ್ಚೆ ಮಾಡಿದ ಮೇಲೆಯೇ ಅವರು ತಮ್ಮ ನಿರ್ಣಯವನ್ನು ಹೊರಗೆಡಹುವರು.

ಶ್ರೀ ಲಾಲಜಿ ನಾರಾಯಣಜಿ ಹಾಗು ಶ್ರೀ ಸಿ ರಾಜಗೋಪಾಲಾಚಾರ್ಯರು ಈಗ ಇಲ್ಲಿಗೆ ಬಂದಿದ್ದಾರೆ.

ಮಹಾತ್ಮಾ ಗಾಂಧಿಯವರು ತಾವೇ ಸ್ವತಃ ಹೋಗಿ ವ್ಹಾಯಿಸರಾಯರನ್ನು ಕಂಡುಕೊಳ್ಳುವ ವಿಚಾರದಲ್ಲಿದ್ದಾರಾಗಿಯೂ, ದಿಲ್ಲಿಯಿಂದ ಆಮಂತ್ರಣ ಬಂದರೆ ಅದನ್ನು ಅವರು ಸ್ವಸಂತೋಷದಿಂದ ಸ್ವೀಕರಿಸುವವರಿದ್ದಾರಾಗಿಯೂ ತಿಳಿಯುತ್ತದೆ.

ಸತ್ಯಾಗ್ರಹ ಚಳವಳಿಯನ್ನು ಹೀಗೆಯೆ ಮುಂದಕ್ಕೆ ಸಾಗಿಸಿದಲ್ಲಿ ಅದಕ್ಕೆ ತಮ್ಮದೇನೂ ವಿರೋಧವಿಲ್ಲವೆಂದು ಮುಂಬಯಿ ಹಾಗು ಕಲಕತ್ತೆಯ ಉದ್ಯೋಗಸ್ಥರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವರಾಗಿ ಕಂಡುಬರುತ್ತದೆ.

(ತಂತಿಯ ವಾರ್ತೆ ತಾ॥ ೧೨)

ನಾ. ಶಾಸ್ತ್ರಿ, ಶ್ರೀ ಜಯಕರ ಹಾಗು ಶ್ರೀ ಪುರುಷೋತ್ತಮದಾಸ ಇವರು ಇಂದು ಅಲಹಾಬಾದಕ್ಕೆ ಬಂದು, ಮ. ಗಾಂಧಿ ಹಾಗು ಉಳಿದ ಕಾಂಗ್ರೆಸ್ ಮುಖಂಡರೊಡನೆ ಒಪ್ಪಂದದ ಬಗ್ಗೆ ಚರ್ಚೆ ಮಾಡಿದರು. ರಾಜಬಂದಿಗಳ ಬಿಡುಗಡೆಯ ಸಂಬಂಧವಾಗಿ ವಿಚಾರ ಮಾಡಲಿಕ್ಕೆ ಕಾಂಗ್ರೆಸ್ ಪಕ್ಷದವರು ನಿರಾಕರಿಸಿದರಾಗಿ ತಿಳಿದು ಬರುತ್ತದೆ.

———

ಬೆಂಗಳೂರ ಕೂಲಿಕಾರ ಸಂಘದ

ಕಾರ್ಯದರ್ಶಿಗಳೂ, ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರೂ ಆದ ಪಿ. ಎಂ. ರಾಮಶರ್ಮಾ ಇವರಿಗೆ ಮೈಸೂರ ಪೋಲೀಸ ಕಾಯದೆಯ ೩೮ ನೆಯ ಕಲಮಿನನ್ವಯ ೩೦ ರು, ದಂಡ, ಇಲ್ಲವೆ ೬ ದಿವಸ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದ್ದು, ಅವರು ದಂಡವನ್ನು ಕೊಡದೆ ಕಾರಾಗೃಹಕ್ಕೆ ತೆರಳಿದರು.

ಬೋರಸಾದದಲ್ಲಿ ಪೋಲೀಸರ ಪುಂಡಾಟಿಕೆ

ಬೋರಸಾದದಲ್ಲಿಯ ಪೋಲೀಸರ ಪುಂಡಾಟಿಕೆಯನ್ನು ನಿಷೇಧಿಸುವ ಕುರಿತು ಮುಂಬಯಿಯಲ್ಲಿ ತಾ|| ೪ನೆಯ ದಿವಸ ನೆರೆದ ಸಭೆಯಲ್ಲಿ ಭಾಷಣ ಮಾಡುವಾಗ ಶ್ರೀಮತಿ ಲಕ್ಷ್ಮೀ ಜೇರಾಜನಿ ಯವರು ಅಲ್ಲಿಯ ಹೃದಯ ದ್ರಾವಕ ದೃಶ್ಯವನ್ನು ಕೆಳಗಿನಂತೆ ಬಣ್ಣಿಸಿದರು.

ಸ್ತ್ರೀಸಿಕರ್ಸ್ ದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸುತ್ತು ಮುತ್ತಲಿನ ಹಳ್ಳಿಗಳಿಂದ ಎಷ್ಟೋ ಜನ ಸ್ತ್ರೀಯರು ಬೋರಸಾದಕ್ಕೆ ಬಂದಿದ್ದರು. ನಾನೂ ಕೆಲವು ಜನ ಸಹಚರಿಗಳೊಂದಿಗೆ ಅಂದು ಅಲ್ಲಿಗೆ ಹೋಗಿದ್ದೆ. ನಾವೆಲ್ಲರೂ ಅಲ್ಲಿ ಒಂದು ಧರ್ಮಶಾಲೆಯಲ್ಲಿ ಇಳಿದುಕೊಂಡಿದ್ದೆವು. ಬೇರೆ ಬೇರೆ ಹಳ್ಳಿಗಳಿಂದ ಬಂದ ಸ್ತ್ರೀಯರೂ ಬೇರೆ ಬೇರೆ ಧರ್ಮಶಾಲೆಗಳಲ್ಲಿ ಇಳಿದುಕೊಂಡಿದ್ದರು. ಒಂದೇ ಕಾಲಕ್ಕೆ ಅನೇಕ ಮೆರವಣಿಗೆಗಳನ್ನು ಹೊರಡಿಸಿಕೊಂಡು ಹೋಗಬೇಕೆಂಬುದಾಗಿ ನಮ್ಮೆಲ್ಲರ ವಿಚಾರವಿತ್ತು.

ನಾವು ಮೆರವಣಿಗೆಯನ್ನು ಹೊರಡಿಸಿಕೊಂಡು ಹೋಗುವದಕ್ಕಿಂತ ಪೂರ್ವದಲ್ಲಿಯೇ ಪೋಲೀಸರು ನಮ್ಮ ಧರ್ಮಶಾಲೆಗೆ ಬಂದು ಅದನ್ನು ಮುತ್ತಿದರು. ಅವರು ಹೊರಗಿನವರನ್ನು ಒಳಗೆ ಬಿಡಲಿಲ್ಲ ಮತ್ತು ಒಳಗಿನವರಿಗೆ ಹೊರಗೆ ಹೋಗಗೊಡಲಿಲ್ಲ. ಆದ್ದರಿಂದ ಹೊರಗಿನ ಸುದ್ದಿಯು ಏನೂ ತಿಳಿಯದಾಯಿತು. ಮೆರವಣಿಗೆ ಹೊರಡಿಸಿಕೊಂಡು ಹೋಗಬೇಕೆಂಬುದಾಗಿ ನಿರ್ಣಯಿಸಿಕೊಂಡು ನಾವು ಹೊರಗೆ ಹೊರಟೆವು. ಪೋಲೀಸರು ನಮ್ಮನ್ನು ಮುಂದಕ್ಕೆ ಹೋಗಗೊಡಲಿಲ್ಲ. ನಾವು ಅಲ್ಲಿಯೇ ನಿಂತುಕೊಂಡೆವು. ಪೋಲೀಸರು ಒಮ್ಮಿಂದೊಮ್ಮೆ ನಮ್ಮ ಮೇಲೆ ಏರಿ ಬಂದು ನಮ್ಮನ್ನು ಒಳಗೆ ತಳ್ಳಹತ್ತಿದರು. ಕೆಲವರು ನಮಗೆ ಸಿಕ್ಕ ಹಾಗೆ ಬೈದು ನಮ್ಮನ್ನು ಅವಮಾನಗೊಳಿಸಿದರು. ಕೆಲವರು ನಮ್ಮ ತುರುಬು ಹಿಡಿದು ನಮ್ಮನ್ನು ದರ ದರ ಎಳೆದರು. ಪೋಲೀಸರು ಹೊರಟುಹೋದ ಮೇಲೆ ಕೆಲವು ಜನರು ನಮ್ಮ ಬಳಿಗೆ ಬಂದು ನಮ್ಮನ್ನು ತಮ್ಮ ಮನೆಗೆ ಔಷಧೋಪಚಾರಕ್ಕಾಗಿ ಕರೆದುಕೊಂಡು ಹೋದರು.

[ಬೋರಸಾದದಲ್ಲಿಯ ಪೋಲೀಸರ ಪುಂಡಾಟಿಕೆಯ ಸಂಬಂಧವಾಗಿ ಸರಕಾರದ ಸುದ್ದಿ ಖಾತೆಯ ಅಧಿಕಾರಿಗಳು ಒಂದು ಉದ್ದವಾದ ಪ್ರಕಟನೆಯನ್ನು ಹೊರಡಿಸಿದ್ದು, ಅದರಲ್ಲಿ ಅವರು ಅನ್ನುವದೇನಂದರೆ:— ಜಾನೇವರಿ ೨೧ನೆಯ ತಾರೀಖಿನ ದಿವಸ ಬೋರಸಾದದಲ್ಲಿ ಜನಸಮುದಾಯವು ಹೆಚ್ಚಿಗೆ ಕೂಡಿತ್ತು. ಕೆಲವರ ಕೈಯಲ್ಲಿ ಲಾಠಿ, ಚಾಕು ಮೊದಲಾದವುಗಳು ಇದ್ದವು. ಸ್ತ್ರೀಯರ ಮೆರವಣಿಗೆಯಲ್ಲಿ ಕೆಲವು ಗಂಡಸರೂ ಇದ್ದರು. ಅವರು ತಮ್ಮ ಕೈಯಲ್ಲಿ ಲಾಠಿ ಹಿಡಿದಿದ್ದರು. ಅಲ್ಲಿ ಆ ಸಮಯದಲ್ಲಿ ಪೋಲೀಸ ಅಧಿಕಾರಿಗಳನ್ನೊಳಗೊಂಡು ೩೦ ಜನ ಪೋಲೀಸರಿದ್ದರು. ೧೪ ಜನರ ಕೈಯಲ್ಲಿ ಬಂದೂಕುಗಳಿದ್ದವು. ೧೦ ಜನರು ಲಾಠಿ ಹಿಡಿದಿದ್ದರು. ಸಬ್ ಇನಸ್ಪೆಕ್ಟರರ ಅಪ್ಪಣೆಗನುಸಾರವಾಗಿ ಮೆರವಣಿಗೆಗೆ ಅಡ್ಡಿ ಮಾಡಲಾಯಿತು. ಸ್ತ್ರೀಯರು ಮುಂದಕ್ಕೆ ಸಾಗಿಹೋಗಲು ಪ್ರಯತ್ನಿಸಿದರು. ಪೋಲೀಸರು ಲಾಠಿ ಮತ್ತು ಬಂದೂಕಗಳನ್ನು ಅಡ್ಡಹಿಡಿದು ಅವರನ್ನು ಹಿಂದಕ್ಕೆ ದಬ್ಬಿದರು. ಹೆಂಗಸರ ಹಿಂಬದಿಯಲ್ಲಿದ್ದ ಗಂಡಸರು ಕಲ್ಲು ಒಗೆಯಲಾರಂಭಿಸಿದರು. ಇಬ್ಬರು ಪೋಲೀಸರು ಗಾಯಹೊಂದಿದರು. ಕೆಲವು ಹೆಂಗಸರ ಕೈಯಲ್ಲಾದರೂ ಕಲ್ಲುಗಳಿದ್ದವು. ಅವರು ಅವುಗಳನ್ನು ಒಗೆದರೋ ಇಲ್ಲವೋ ಹೇಳಲು ಬರುವಂತಿಲ್ಲ. ಪೋಲೀಸರ ಸಮೀಪದಲ್ಲಿದ್ದವರು ಪೋಲೀಸರ ಮೇಲೆ ಮಣ್ಣು ತೂರಿದರು. ಈ ಗೊಂದಲವನ್ನು ಕಂಡು ಸಬ್ ಇನಸ್ಪೆಕ್ಟರರು ಗಂಡಸರನ್ನು ಚದುರಿಸಲು ಪೋಲೀಸರಿಗೆ ಅಪ್ಪಣೆ ಮಾಡಿದರು. ಗಂಡಸರು ಹೆಂಗಸರ ಹಿಂಬದಿಯಲ್ಲಿದ್ದರು. ಪೋಲೀಸರು ಬಂದೂಕ ಹಾಗು ಲಾಠಿಗಳ ಸಹಾಯದಿಂದ ಹೆಂಗಸರನ್ನು ಸರಿಸಿ ಗಂಡಸರ ಬಳಿಗೆ ಹೋದರು. ಈ ಸಮಯದಲ್ಲಿ ಗಾಯವಾಗಿರಬಹುದು. ಕೆಲವರು ಗದ್ದಲದಲ್ಲಿ ತುಳಿಯಲ್ಪಟ್ಟಿರಬಹುದು. ಪೋಲೀಸರು ಯಾರನ್ನೂ ಬೇಕಂತಲೆ ಒದ್ದಿರುವದಿಲ್ಲ. ಪೋಲೀಸರು ಕುಡಿದು ಬಂದಿದ್ದರೆಂಬುದಾಗಿ ಕೆಲವರು ಆರೋಪಹೊರಿಸಿದ್ದಾರೆ. ಇದನ್ನು ನಂಬುವಂತಿಲ್ಲ. ಇಂತಹ ಗಂಡಾಂತರದಲ್ಲಿ ಹೆಂಗಸರನ್ನು ನೂಕಿದವರೇ ಜವಾಬದಾರರು. ಹೊರತಾಗಿ ಸಬ್ ಇನಸ್ಪೆಕ್ಟರರು ಇದಕ್ಕೆ ಜವಾಬದಾರರಲ್ಲ ಯಾಕಂದರೆ ಅವರು ತಮ್ಮ ಕರ್ತವ್ಯಕರ್ಮವನ್ನು ಮಾಡಿದರು.]

"ತಾ|| ೨೧ನೆಯ ಜಾನೇವರಿ ದಿವಸ ಬೋರಸಾದದಲ್ಲಿ ಪೋಲೀಸರು ಸ್ತ್ರೀಯರ ಮೆರವಣಿಗೆಗೆ ಅಡ್ಡಿ ಮಾಡಿ ಅವರನ್ನು ಲಾಠಿಗಳಿಂದ ಥಳಿಸಿದರು. ಈ ಬಗ್ಗೆ ಸರಕಾರದವರು ಏನಾದರೂ ವಿಚಾರಣೆ ನಡಿಸಿರುವರೋ" ಎಂದು ಕಮಾಂಡರ ಕೆನವರ್ದಿಯವರು ಕಾಮನ್ಸ ಸಭೆಯಲ್ಲಿ ಪ್ರಶ್ನೆ ಮಾಡಿದರು.

ಇದಕ್ಕೆ ಭಾರತ ಮಂತ್ರಿಗಳಾದ ಮಿ. ಬೆನ್ನರು "ಮುಂಬಯಿ ಸರಕಾರದವರು ವಿಚಾರಣೆ ಮಾಡಿದ್ದಾರೆ. ಹೆಂಗಸರ ಹಿಂಬದಿಯಲ್ಲಿದ್ದ ಗಂಡಸರು ಪೋಲೀಸರ ಮೇಲೆ ಕಲ್ಲು ಒಗೆದರು. ಇಬ್ಬರು ಪೋಲೀಸರು ಗಾಯ ಹೊಂದಿದರು. ಅಲ್ಲಿ ನೆರೆದ ೨೦೦೦ ಜನರು ಪೋಲೀಸರ ಮೇಲೆ ಹಲ್ಲೆ ಮಾಡುವ ವಿಚಾರದಲ್ಲಿದ್ದರು. ಆಗ ಪೋಲೀಸರು ಲಾಠಿಗಳಿಂದ ಅವರನ್ನು ಚದುರಿಸಿದರು." ಹೀಗೆ ಉತ್ತರ ಕೊಟ್ಟರು.

ಪಾರ್ಲಮೆಂಟಿದಲ್ಲಿ ಸಂಧಾನದ ಬಗ್ಗೆ ಪ್ರಶ್ನೆ

ಒಪ್ಪಂದದ ಸಂಬಂಧವಾಗಿ ಮಹಾತ್ಮಾ ಗಾಂಧಿಯವರು ಹಿಂದುಸ್ಥಾನ ಸರಕಾರಕ್ಕೆ ಯಾವ ಯಾವ ಕರಾರುಗಳನ್ನು ಹಾಕಿದ್ದಾರೆ. ಮತ್ತು ಹಿಂದುಸ್ಥಾನ ಸರಕಾರದವರು ಆ ಸಂಬಂಧವಾಗಿ ಏನು ಉತ್ತರ ಕೊಟ್ಟಿದ್ದಾರೆ ಇವುಗಳನ್ನು ತಿಳಿಸಲು ಮಿ. ಪೇಟರ ಮ್ಯಾಕಡೋನಾಲ್ಡರು ಕಾಮನ್ಸ ಸಭೆಯಲ್ಲಿ ಕೇಳಿಕೊಂಡರು.

ಮಹಾತ್ಮಾ ಗಾಂಧಿಯವರು ಪತ್ರಿಕಾ ಪ್ರತಿನಿಧಿಗಳ ಮುಂದೆ ವ್ಯಕ್ತಪಡಿಸಿದ ಹಾಗು ಅವರು ಮತ್ತು ಇನ್ನಿತರ ಕಾಂಗ್ರೆಸ್ ಮುಖಂಡರು ತಮ್ಮ ಭಾಷಣಗಳಲ್ಲಿ ಹೊರಗೆಡಹಿದ ಕರಾರುಗಳ ಹೊರತಾಗಿ ಆ ಸಂಬಂಧವಾಗಿ ಹೆಚ್ಚಿಗೆ ಏನೂ ತಿಳಿದಿಲ್ಲವೆಂದೂ, ಸರ್ ಸಪ್ರೂ ಮೊದಲಾದವರು ಮಹಾತ್ಮಾ ಗಾಂಧಿಯವರೊಡನೆ ಸದ್ಯದ ಸಂಬಂಧವಾಗಿ ಚರ್ಚೆ ಮಾಡುವವರಿದ್ದಾರೆಂದೂ ಮಿ. ಬೆನ್ನರು ಹೇಳಿದರು.

ಇಹವೃತ್ತ

ಶ್ರೀ ಶಿವಪ್ಪ ಪಟ್ಟೇದ ಇವರ ಅಂಗಡಿಯವರಾದ ಶ್ರೀ ಬಸಯ್ಯ ಸಾಳುಭಾವಿಯವರು ಪಟ್ಟೆಯ ವ್ಯಾಪಾರಸ್ಥರ ಸಂಘದ ನಿಯಮದ ವಿರುದ್ಧ ವರ್ತಿಸಿ ಪರದೇಶಿ ಮಾಲು ತರಿಸಿದ್ದರಿಂದ, ಅವರ ಸಂಗಡ ಯಾವ ರೀತಿಯಿಂದಲೂ ಕೊಡಕೊಳ್ಳುವ ವ್ಯವಹಾರ ಮಾಡಬಾರದೆಂದು ಪಟ್ಟೆಯ ವ್ಯಾಪಾರ ಸಂಘದವರು ತಾ|| ೧೭—೨—೩೧ ನೆಯ ದಿವಸ ಸ್ಪೆಶಲ್ ಜನರಲ್ ಮೀಟಿಂಗದಲ್ಲಿ ಠರಾವು ಮಾಡಿಕೊಂಡಿದ್ದಾರೆ.

ಪರದೇಶಿ ಅರಿವೆಯ ವ್ಯಾಪಾರಿಯನ್ನು ಗುಂಡುಹೊಡೆದು ಕೊಂದರು.

ಬನಾರಸದಲ್ಲಿಯ ಪರದೇಶಿ ಅರಿವೆಯ ವ್ಯಾಪಾರಿಯಾದ ಮಹಮ್ಮದ ಜ್ಞಾನ ಖಾನ ಆಗಾರವರು ತಾ|| ೧೦ ನೆಯ ದಿವಸ ರಾತ್ರಿ ತಮ್ಮ ಅಂಗಡಿಯಿಂದ ಮನೆಗೆ ಹೋಗುತ್ತಿದ್ದರು. ಆಗ ಯಾವನೋ ಒಬ್ಬನು ಹಾದಿಯಲ್ಲಿ ಅವರ ಮೇಲೆ ಗುಂಡು ಹಾರಿಸಿ ಅವರನ್ನು ಗಾಯಪಡಿಸಿದನು. ಅವರು ತಾ || ೧೧ ನೆಯ ದಿವಸ ಮುಂಜಾನೆ ಮರಣ ಹೊಂದಿದರು. ಸಾಯುವ ಮುಂದೆ ಅವರು ಒಬ್ಬ ಕಾಂಗ್ರೆಸ್ ಸ್ವಯಂಸೇವಕನ ಹೆಸರು ತೆಗೆದುಕೊಂಡು; ಅವನೇ ತಮ್ಮನ್ನು ಗುಂಡಿನಿಂದ ಹೊಡೆದಿರು ವನೆಂಬುದಾಗಿ ಹೇಳಿದರೆಂದು ತಿಳಿದು ಬರುತ್ತದೆ. ಪೋಲೀಸರು ಈ ಸಂಬಂಧವಾಗಿ ಕಾಂಗ್ರೆಸ್ ಸ್ವಯಂಸೇವಕರ ಕಪ್ತಾನನನ್ನು ಸೆರೆ ಹಿಡಿದಿದ್ದಾರೆ.

'ಯಂಗ ಇಂಡಿಯಾ' ಪ್ರಸಿದ್ಧಿಸಿದ್ದಕ್ಕೆ ಶಿಕ್ಷೆಯಾಯಿತು

ನಾಯಕ್ಲಿಸ್ಟೈಲ್ ಯಂತ್ರದ ಮೇಲೆ "ಯಂಗ ಇಂಡಿಯಾ" ಪತ್ರಿಕೆಯನ್ನು ಮುದ್ರಿಸುತ್ತ ಒಳಿತರುವಾಗ ಸೆರೆಹಿಡಿಯಲ್ಪಟ್ಟ ಅಹಮ್ಮದಾಬಾದದ ಶ್ರೀ ಚಂಲಶೇಖರ ಮೋದಲಾಲ ಮಾಮಾಪರಿಗೆ ೧೦ ನೆಯ ಆರ್ಡಿನನ್ಸದ ಪ್ರಕಾರ ಪ್ರತ್ಯೇಕವಾಗಿ ೫ ತಿಂಗಳ ಕಾರಾಗೃಹವಾಸ ಹಾಗು ೧೦೦ ರು. ದಂಡ, ಇಲ್ಲವೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ.

"ಮಹಾರಾಷ್ಟ್ರ" ಪತ್ರಕ್ಕೆ ೨೦೦೦ ರು. ಹೊಣೆ ಬೇಡಿದರು.

ನಾಗಪುರದಲ್ಲಿ ಹೊರಡುತ್ತಿದ್ದ ರಾಷ್ಟ್ರೀಯ ಪಕ್ಷದ ಸಾಪ್ತಾಹಿಕ ಪತ್ರವಾದ "ಮಹಾರಾಷ್ಟ್ರ" ಪತ್ರಿಕೆಗೆ ಮಧ್ಯಪ್ರಾಂತ ಸರಕಾರದವರು ಪ್ರೆಸ್ ಆರ್ಡಿನನ್ಸದನ್ವಯ ೨೦೦೦ ರೂಪಾಯಿ ಹೊಣೆ ಬೇಡಿದ್ದಾರೆ.

ಗುಜರಾಥದಲ್ಲಿ ಹೊಸ ಕಾಂಗ್ರೆಸ್ ಸಂಸ್ಥೆಗಳ ಉದಯ

ಗುಜರಾಥ ಪ್ರಾಂತಿಕ ಧಂಡ. ಕ. ಮತ್ತು ವಿರಮಗಾವದಲ್ಲಿಯ ಸತ್ಯಾಗ್ರಹ ಶಿಬಿರಗಳನ್ನು ಅಧಿಕಾರಿಗಳು "ಸೀಲ" ಮಾಡಿ ಅವುಗಳನ್ನು ತಮ್ಮ ವಶಪಡಿಸಿಕೊಂಡಿದ್ದರಿಂದ, ಧಂಡ. ಕಾದಲ್ಲಿ ಒಂದು ಮನೆಯಲ್ಲಿ ಹೊಸದೊಂದು ಸತ್ಯಾಗ್ರಹ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ವಿರಮಗಾವ ತಾಲೂಕದವರು ಬರೋಡಾ ಸಂಸ್ಥಾನದ ಹದ್ದಿಯಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಕಾಂಗ್ರೆಸ್ ಕಾರ್ಯವನ್ನು ಸಾಗಿಸಿದ್ದಾರೆ.

ಗಂಗಾಧರರಾಯರು ಅಲಹಾಬಾದಕ್ಕೆ ಹೋದರು

ಅಲಹಾಬಾದಕ್ಕೆ ಬರಲು ಪಂಡಿತ ಜವಾಹಿರಲಾಲರು ತಮಗೆ ಕೇಳಿಕೊಂಡಿದ್ದರಿಂದ ಅವರ ವಿನಂತಿಯನ್ನು ಮನ್ನಿಸಿ ದೇ. ಭ. ದೇಶಪಾಂಡೆ ಗಂಗಾಧರರಾಯರು ತಾ || ೯ ನೆಯ ದಿವಸ ಬೆಳಗಾವಿಯಿಂದ ಅಲಹಾಬಾದಕ್ಕೆ ಹೊರಟು ಹೋದರು

ಯಲ್ಲಾಪುರ ತಾಲೂಕದಲ್ಲಿ ಕರನಿರಾಕರಣೆಯು ಸುರುವಾಯಿತು

ಕಾರವಾರ ಜಿಲ್ಲೆಯ ಯಲ್ಲಾಪುರ ತಾಲೂಕದೊಳಗಿನ ಐದು ಹಳ್ಳಿಗಳ ಜನರು ಸರಕಾರಕ್ಕೆ ಘೂಕಂದಾಯ ಕೊಡಬಾರದಾಗಿ ನಿರ್ಧರಿಸಿಕೊಂಡು ಕರನಿರಾಕರಣ ಚಳವಳಿಯನ್ನು ಜೋರಿನಿಂದ ಸಾಗಿಸಿದ್ದಾರೆ. ಯಲ್ಲಾಪುರದಲ್ಲಿಯ ಓರ್ವ ಕಾಂಗ್ರೆಸ್ ಕಾರ್ಯಕರ್ತನು ೧೧೭ ನೆಯ ಕಲಮಿನನ್ವಯ ಕೈದು ಮಾಡಲ್ಪಟ್ಟಿದ್ದಾನೆ.

ಹುಕ್ಕೇರಿಯಲ್ಲಿ ಶ್ರೀ ಪಾಟೀಲ ವಕೀಲರನ್ನು ಸೆರೆಹಿಡಿದರು.

ಸಭೆ ಪಿಕೆಟಿಂಗ ಮೊದಲಾದವುಗಳನ್ನು ನಿರ್ಬಂಧಿಸಕೂಡದೆಂಬುದಾಗಿ ಮ್ಯಾಜಿಸ್ಟ್ರೇಟರು ಹೊರಡಿಸಿದ ಆಜ್ಞೆಯನ್ನು ಅವಮಾನ್ಯಮಾಡಿ ಬಡಕಲಿಂದ್ರ ಜಾತ್ರೆಯಲ್ಲಿ ಸಭೆ ಪಿಕೆಟಿಂಗ ಮೊದಲಾದವುಗಳನ್ನು ಜರುಗಿಸಿದ್ದಕ್ಕಾಗಿ, ಹುಕ್ಕೇರಿಯಲ್ಲಿ ಶ್ರೀ ಎ. ಪಿ ಪಾಟೀಲ ವಕೀಲ, ಶ್ರೀನಿವಾಸರಾವ ದೇಶಪಾಂಡೆ ವಕೀಲ, ಚನ್ನಬಸಪ್ಪ ಗಾಂಧಾ ಈ ಮೂವರು ಕೈದು ಮಾಡಲ್ಪಟ್ಟಿದ್ದಾರೆ.

ಮಹಾತ್ಮರನ್ನು ಬಿಟ್ಟಿದ್ದು ಘೋರ ಅಪರಾಧವಾಯಿತು

ಕಲಕತ್ತೆಯ ಯುರೋಪಿಯನ್ ಅಸೋಸಿಯೇಶನದ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುವಾಗ ಮಿ. ಆರ್ಮಸ್ಟ್ರಾಂಗರು "ಸದ್ಯದ ರಾಜಕೀಯ ಪರಿಸ್ಥಿತಿ" ಯ ಸಂಬಂಧವಾಗಿ ಕೆಳಗಿನಂತೆ ಹೇಳಿದರು.

ಮಹಾತ್ಮಾ ಗಾಂಧಿ ಹಾಗು ಉಳಿದ ಕಾಂಗ್ರೆಸ್ ಮುಖಂಡರನು ಬಿಡುಗಡೆ ಮಾಡಿ ಸರಕಾರದವರು ತಮ್ಮ ಮೌರ್ಖ್ಯದ ಬಿನದ ದಿವಾಳಿ ತೆಗೆದಿದ್ದಾರೆ. ಚಳವಳಿಯು ನಿಂತು ಹೋಗುವ ವರೆಗೆ ಸರಕಾರವು ತನ್ನ ಮಾತನ್ನು ಬದಲಿಸಕೂಡದೆಂದು ಯುರೋಪಿಯನ್ನರು ಕೆಲವು ದಿನಗಳ ಹಿಂದೆ ಠರಾವು ಮಾಡಿಕೊಂಡು ಅದನ್ನು ಸರಕಾರಕ್ಕೆ ಕೊಟ್ಟು ಕಳಿಸಿದ್ದರು. ಆದರೆ ಸರಕಾರದವರು ಅತ್ತ ಲಕ್ಷ್ಯಕೊಡದೆ ಚಳವಳಿಯು ನಿಂತು ಹೋಗಿರದಿದ್ದರೂ ಮುಖಂಡರನ್ನು ಬಿಡುಗಡೆ ಮಾಡಿದ್ದಾರೆ ಇದರ ಪರಿಣಾಮವೆಂದರೆ—ಉಳಿದವರನ್ನು ಬಿಡುಗಡೆ ಮಾಡುವದಕ್ಕೂ ಪಿಕೆಟಿಂಗ ಮಾಡುವವರ ಮೇಲಾದದ್ದೇಗಳಿಗೆ ಅಡ್ಡಿ ಮಾಡಕೂಡದೆಂದೂ ಪೋಲೀಸರ ಅತ್ಯಾಚಾರಗಳ ಸಂಬಂಧವಾಗಿ ನಿಷ್ಪಕ್ಷಪಾತವಾಗಿ ವಿಚಾರಣೆ ನಡಿಸಬೇಕೆಂದೂ ಮಹಾತ್ಮಾ ಗಾಂಧಿಯವರು ಕೇಳಿಕೊಳ್ಳುತ್ತಿದ್ದಾರೆ. ಆದರೆ ಅವರು ಎಫ್. ಜಿ ಲೋಮನ್ ಮತ್ತು ಕರ್ನಲ್ ಸಿಂಪಸನ್ನರ ಕೊಲೆಯ ಬಗ್ಗೆ ವಿಚಾರ ನಡಿಸಲು ಕೇಳಿಕೊಂಡಿದ್ದರೆ ಒಳಿತಾಗುತ್ತಿತ್ತು. ಕಾಂಗ್ರೆಸದವರು ಹೇಳಿದಂತೆ ಸರಕಾರದವರು ಕುಣಿಯುತ್ತಿರುವರಾಗಿ ತೋರಿಬರುತ್ತದೆ. ಆದ್ದರಿಂದ ಹಿಂದುಸ್ಥಾನದಲ್ಲಿ ನೆಲಸಿದ ಬ್ರಿಟಿಶರು ಈಗ ಎಚ್ಚತ್ತು ಮಹಾತ್ಮರ ಸ್ವರಾಜ್ಯದ ವಿರುದ್ಧವಾಗಿ ಚಳವಳಿ ಹೂಡಬೇಕು.

ಪಂಚಮಹಾಲ ಹಾಗು ಅಹಮ್ಮದಾಬಾದ ಜಿಲ್ಲೆಯೊಳಗಿನ ಕಾಂಗ್ರೆಸ್ ಸಂಸ್ಥೆಗಳು ಮುಂಬಯಿ ಸರಕಾರದವರು ಕಾಯಿದೆಗೆ ವಿರುದ್ಧವಾದವೆಂದು ಸಾರಿದ್ದನ್ನು ಅನುಸರಿಸಿ ಅಲ್ಲಿಯ ಅಧಿಕಾರಿಗಳು ಅವುಗಳನ್ನು "ಸೀಲ" ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು.

ಮುಕ್ತೇದಾರರಿಗೆ

ಜಾಹೀರ ಬಿನ್ನಹ

ಶೆರೆ, ಶಿಂದಿ, ಗಾಂಜಾ, ಅಫೂ ಮುಂತಾದ ಮಾದಕ ಪದಾರ್ಥಗಳ ಸೇವನೆಯು ಆರ್ಥಿಕ, ನೈತಿಕ, ಆತ್ಮ ಧಾರ್ಮಿಕ ದೃಷ್ಟಿಯಿಂದ ಅತ್ಯಂತ ಅನಿಷ್ಟವಾದದ್ದೆಂಬುದು ಸರ್ವಸಿದ್ಧವಾದ ಮಾತು. ಆ ವ್ಯಸನಗಳನ್ನು ನಿರ್ಮೂಲ ಮಾಡಿ ಬಿಡುವದು ಎಲ್ಲ ಜನರ ಆದ್ಯ ಕರ್ತವ್ಯವು. ಇದನ್ನು ಲಕ್ಷ್ಯಕ್ಕೆ ತಂದು ರಾಷ್ಟ್ರದವರು ಈ ವ್ಯಸನವನ್ನು ನಿರ್ಮೂಲ ಮಾಡುವ ನಿಶ್ಚಯ ಮಾಡಿದ್ದಾರೆ. ಈ ಕಾರ್ಯದಲ್ಲಿ ಎಲ್ಲರೂ ಸಹಾಯ ಮಾಡಬಹುದೆಂದು ರಾಷ್ಟ್ರದ ಭರವಸೆಯು.

ಈ ಪವಿತ್ರ ಕಾರ್ಯದಲ್ಲಿ ಮುಕ್ತೇದಾರರು ವಿಶೇಷ ರೀತಿಯಿಂದ ಸಹಾಯ ಮಾಡಬಹುದು. ಅದು ಹೇಗೆಂದರೆ, ಅವರು ಈಗ ನಡಿಸುತ್ತಿರುವ ಅಂಗಡಿಗಳನ್ನು ಮುಂದಿನ ಲಿಲಾವಿನಲ್ಲಿ ಹಿಡಿಯದೆ ಬೇರೆ ಉದ್ಯೋಗವನ್ನು ಮಾಡಬಹುದು. ಇದು ಸ್ವಾರ್ಥತ್ಯಾಗದ ಕೆಲಸವು. ಅವರು ಹೀಗೆ ಮಾಡುವದರಿಂದ ಅನೇಕರ ಮೇಲೆ, ಅದೇಕೆ ಇಡೀ ದೇಶದ ಮೇಲೆಯೇ ಉಪಕಾರ ಮಾಡಿದಂತಾಗುವದು. ಆದುದರಿಂದ ಅವರು ಈ ಮುಂದೆ ಬರುವ ಶೆರೆ ಶಿಂದಿ ಮುಂತಾದ ಅಂಗಡಿಗಳ ಲಿಲಾವಿನಲ್ಲಿ ಲಿಲಾವಿಗೆ ನಿಲ್ಲಬಾರದೆಂದು ನಮ್ಮ ಬಿನ್ನಹವಿರುವದು. ಇದನ್ನು ಅವರೆಲ್ಲರೂ ಮನ್ನಿಸಬೇಕಾಗಿ ಪ್ರಾರ್ಥನೆ.

೧ ವೆ. ನಾ. ಜೋಗ ಎಂ. ಎಲ್. ಸಿ.
೨ ಭ. ಗೋ. ದೇಶಪಾಂಡೆ ಎಮ್. ಬಿ. ಬಿ. ಎಸ್.
೩ ಮು. ಭೀ. ಕಬ್ಬೂರ ಎಂ. ಎ. ಎಲ್‌ಎಲ್. ಬಿ.
೪ ಗೋ. ಗು. ಗುತ್ತಲ ಬಿ. ಎ. ಎಲ್‌ಎಲ್. ಬಿ.
೫ ಪಿ. ಎಸ್. ಟಕಾರಿ ವ್ಯಾಪಾರಿ
೬ ಪಿ. ಬಿ. ಇಚಂತಕರ ವ್ಯಾಪಾರಿ.
೭ ಕಾಂತೇಶ ಕಮಲಾಪೂರ ಎಂ. ಬಿ. ಬಿ. ಎಸ್.

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರಾವ್ಹಿಡೆಂಟ ಕಂಪನಿ ಲಿ. ಕಲಕತ್ತಾ ಈ ಕಂಪನಿಯ ವಿಮೇದಾರರಲ್ಲಿ ವಿನಂತಿ:--

ಈಗ ೩-೪ ತಿಂಗಳಿಂದ ಏಜಂಟರ ಕಡಿಂದಾ ಹಣವು ಕಂಪನಿಗೆ ಬರೋಬರಿ ರೀತಿಯಿಂದಾ ಜಮಾ ಆಗಿಲ್ಲ ಅಂತಾ ಎಷ್ಟೋ ಜನರ ಕಡಿಂದಾ ತಕರಾರು ಬಂದಿದೆ. ಹೀಗೆ ತಕರಾರು ಇದ್ದವರು ನಮ್ಮ ಕಡಿಗೆ ಮುಖಶಃ ಅಥವಾ ಪತ್ರದ್ವಾರದಿಂದ ಕಚ್ಚಾ ಪಾವತಿ ಸಹಿತ ಹಾಜರು ಮಾಡಿ ತಕರಾರ ನಿಕಾಲ ಮಾಡಿಕೊಳ್ಳಬೇಕು. ಮತ್ತು ಫೆಬ್ರುವರಿ ತಿಂಗಳು ಕಂಪನಿಯ ವಾರ್ಷಿಕ ಅಖೇರ ಇದ್ದು ತಾರೀಖು ೨೦ರೊಳಗಾಗಿ ಹಿಂದಿನ ಬಾಬತ್ತು ಕಂತಿನ ಹಣವನ್ನು ಜಮಾ ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಕಂತು ಆಫೀಸದಲ್ಲಿ ಅಥವಾ ಏಜಂಟರ ಕಡಿಗೆ ನೇರ ದಿಂದ ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದೆ ತಕರಾರು ಮಾಡಿದರೆ ವಿಚಾರಿಸಲಿಕ್ಕಾಗದು.

ಬಾಗಲಕೋಟೆ ವ್ಹಿ. ಜಿ. ಪರ್ವತಿ.
೨-೨-೩೧ ಚೀಫ ಏಜಂಟ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಟ್ಯಾಂಪಲ್) ಮಸಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ರೇಲ್ವೆ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪ ಮಸಿ ಸ್ಟ್ಯಾಂಪಿನ ೧ ಡಜನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಕೇಶವಾಚಾರ್ಯ ಕೆಂಭಾರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರಿ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦–೦–೩.

यद्यत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA, BAGALKOT. ... WEEKLY

ಸಂಪಾದಕರು:– ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ– ಶನಿವಾರ ಮಿತಿ ಮಾಘ ಬಹುಳ ೧೨ ಶಕೆ ೧೮೫೨ ತಾ|| ೧೪–೨–೩೧ [ಸಂಚಿಕೆ ೧೪೮

ವರ್ಕಿಂಗ ಕಮಿಟಿಯ ಸಭೆ.

(ತಂತಿಯ ವಾರ್ತೆ, ತಾ|| ೧೩)

ವರ್ಕಿಂಗ ಕಮಿಟಿಯ ಸಭೆಯು ಅಲಹಾಬಾದದಲ್ಲಿ ಇಂದು ಮುಂಜಾನೆ ೯ ಘಂಟೆಗೆ ಪ್ರಾರಂಭವಾಗಿ, ಪಂಡಿತ ಮೋತೀಲಾಲರ ನಿಧನದ ಬಗ್ಗೆ ದುಃಖಪ್ರದರ್ಶನ, ಕರಾಚಿಯಲ್ಲಿ ಮಾರ್ಚ ತಿಂಗಳ ತಾ|| ೨೯ ರಿಂದ ೩೧ ರವರೆಗೆ ಕಾಂಗ್ರೆಸ್ ಅಧಿವೇಶನವನ್ನು ಕೂಡಿಸತಕ್ಕದ್ದು, ಈ ವಿಷಯವಾಗಿ ಠರಾವುಗಳು ಪಾಸು ಮಾಡಲ್ಪಟ್ಟವು. ಕಾಂಗ್ರೆಸಕ್ಕೆ ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ಏರ್ಪಾಡು ಮಾಡಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

ನಾಳಿನ ದಿನ ವರ್ಕಿಂಗ ಕಮಿಟಿಯವರು ಸಭೆಯಲ್ಲಿ ಸೇರಿ ಒಪ್ಪಂದದ ವಿಷಯವಾಗಿ ಏನೆಂಬುವದನ್ನು ನಿರ್ಧರಿಸುವರು.

ಬನಾರಸದಲ್ಲಿ ಭಯಂಕರ ದಂಗೆ.

(ತಂತಿಯ ವಾರ್ತೆ ತಾ|| ೧೩)

ಪರದೇಶಿ ಅರಿವೆಯ ವ್ಯಾಪಾರಿಯಾದ ಖಾನ ಜಾನ ಆಗಾರವನ್ನು ಯಾವನೋ ಒಬ್ಬನು ಮೊನ್ನಿನ ದಿವಸ ಗುಂಡಿನಿಂದ ಸಾಯ ಹೊಡೆದ ಕಾರಣಕ್ಕಾಗಿ ಬನಾರಸದಲ್ಲಿ ಇಂದು ಹಿಂದೂ ಮುಸಲ್ಮಾನರಲ್ಲಿ ದಂಗೆಯಾಯಿತು. ಅನೇಕ ಜನರಿಗೆ ಗಾಯಗಳಾಗಿವೆ. ಯಾವತ್ತು ಅಂಗಡಿಗಳು ಮುಚ್ಚಲ್ಪಟ್ಟಿವೆ. ಶಾಂತತೆಯನ್ನು ಪ್ರಸ್ಥಾಪಿಸಲು ಪೋಲೀಸರು ಪ್ರಯತ್ನಿಸಹತ್ತಿದ್ದಾರೆ.

ಅಲಹಾಬಾದದಲ್ಲಿ ಒಪ್ಪಂದದ ಮಾತುಕತೆ

ಅಲಹಾಬಾದದಲ್ಲಿ ಕಾಂಗ್ರೆಸ್ ಮುಖಂಡರಲ್ಲಿ ನಡೆದ ಚರ್ಚೆಯ ಸಂಬಂಧವಾಗಿ "ಪಾಯೋನಿಯರ,, ಪತ್ರಿಕೆಯ ಸುದ್ದಿಗಾರನು ಆ ಪತ್ರಿಕೆಗೆ ಕೆಳಗಿನಂತೆ ತಿಳಿಸಿದ್ದಾನೆ.

ಸರ್ ತೇಜ ಬಹದ್ದೂರ ಸಪ್ರೂರವರ ಸ್ಪಷ್ಟೀಕರಣವನ್ನನುಸರಿಸಿ ಕಾಂಗ್ರೆಸ್ ಮುಖಂಡರು ಮುಖ್ಯ ಪ್ರಧಾನರ ಜಾಹೀರನಾಮೆಯನ್ನು ವಿಚಾರ ಮಾಡಿದರು ಈ ಸಮಯದಲ್ಲಿ ಕಾಂಗ್ರೆಸ್ ಮುಖಂಡರಲ್ಲಿ ಬಹಳೇ ವಾದವಿವಾದವಾಯಿತು ಈಗಿನ ಧೋರಣವನ್ನು ಬಿಟ್ಟುಬಿಡುವ ಬಗ್ಗೆ ಪಂಡಿತ ಮಾಲವಿಯಾರವರು ಕಾಂಗ್ರೆಸ್ ಪಕ್ಷದವರ ಮನ ಒಲಿಸಲು ಪ್ರಯತ್ನಿಸಿದರು ಡಾ. ಅನಸಾರಿ ಹಾಗು ಶ್ರೀಮತಿ ಸರೋಜನಿಯವರಾದರೂ ಪಂಡಿತರ ಅಭಿಪ್ರಾಯವನ್ನೆ ಎತ್ತಿ ಹಿಡಿದರು.

[ಪಾಯೊನಿಯರ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯ ಸಂಬಂಧವಾಗಿ, ಪಂ. ಮಾಲವಿಯಾರ [illegible] ಸಭಾಸದರಲ್ಲಿ ಮತ ಭೇದ ಹುಟ್ಟಿಲ್ಲ ಹಾಗು ಈಗಿನ ಧೋರಣವನ್ನು ಬಿಟ್ಟು ಬಿಡಲು ಕಾಂಗ್ರೆಸ್ ದವರ ಮನ ವಲಿಸಲು ತಾವು ಪ್ರಯತ್ನಪಟ್ಟಿಲ್ಲ ವೆಂಬದಾಗಿ ಪ್ರಸಿದ್ಧ ಮಾಡಿದ್ದಾರೆ.]

(ತಂತಿಯವಾರ್ತೆ ತಾ|| ೧೩)

ನಾ. ಶಾಸ್ತ್ರಿ, ಶ್ರೀ ಜಯಕರ, ಹಾಗು ಗೋಪಾಳದ ನವಾಬರು ಇಂದು ಮಧ್ಯಾನ್ಹದಲ್ಲಿ ವರ್ಕಿಂಗ ಕಮಿಟಿಯ ಯಾವತ್ತೂ ಸಭಾಸದರನ್ನು ಕಂಡು ಕೊಂಡು ಅವರೊಡನೆ ಸಂಧಾನದ ವಿಷಯವಾಗಿ ಚರ್ಚೆ ಮಾಡಿದರು.

ಪೋಸ್ಟಮನ್ನನ ಮೇಲೆ ಹಲ್ಲೆ ಮಾಡಿದರು

ಕಾನೂನಗೋಪಲಾದಿಂದ ಖುರಾಂದೀಪಕ್ಕೆ ಟಪಾಲನ್ನು ತೆಗೆದುಕೊಂಡು ಹೋಗುತ್ತಿರುವಾಗ ಖುರಾಂದೀಪದ ಬಳಿಯಲ್ಲಿ ಯಾರೋ ಕೆಲವರು ಅವನ ಮೇಲೆ ಹಲ್ಲೆ ಮಾಡಿ,ಅವನನ್ನು ಲಾಠಿಯಿಂದ ಹೊಡೆದು,ಟಪಾಲ ಚೀಲವನ್ನು ಎತ್ತಿಕೊಂಡು ಹೋದರು.ಪೋಸ್ಟಮನ್ನನ ಸ್ಥಿತಿಯು ಚಿಂತಾಜನಕವಾಗಿದೆ.

ಕಾಕಾ ಕಾರಖಾನೀಸರಿಗೆ ಕೈದು ಪೋಲೀಸರ ಉದ್ಧಾಮತನ

(ಸ್ವಂತ ಸುದ್ದಿಗಾರರಿಂದ)

ಕರ್ನಾಟಕದ ಸುಪ್ರಸಿದ್ಧ ಕಾರ್ಯಕರ್ತರಾದ ಕಾಕಾ ಕಾರಖಾನೀಸರು ಮೊನ್ನೆ ೯ ನೆಯ ತಾರೀಖಿನ ದಿವಸ ಅಂಕೋಲೆಯಿಂದ ಹೊರಟಿರುವಾಗ ಹಾದಿಯಲ್ಲಿ ಸುಂಕಸಾಳದ ಪೋಲೀಸ ಕಚೇರಿಯ ಹತ್ತಿರ ಒಬ್ಬ ಪೋಲೀಸನು ಬಂದು ಅವರಿಗೆ "ನಿಮ್ಮ ಹೆಸರು ಹೇಳಿರಿ" ಎಂದು ಕೇಳಿದನು. ಅದಕ್ಕೆ ಕಾರಖಾನೀಸರು "ನಿಮಗೆ ನನ್ನ ಪರಿಚಯವಿದೆ. ಹೆಸರು ಹೇಳುವ ಆವಶ್ಯಕತೆ ಇಲ್ಲ" ಎಂದು ಉತ್ತರ ಕೊಟ್ಟರು. ಆಗ ಪೋಲೀಸನು ಸಮೀಪದಲ್ಲಿದ್ದ ಸಬ್ ಇನಸ್ಪೆಕ್ಟರರನ್ನು ಕರೆದುಕೊಂಡು ಬಂದನು. ಅವರ ಪ್ರಶ್ನೆಗೂ ಕಾರಖಾನೀಸರು ಅದೇ ಉತ್ತರ ಹೇಳಿದರು. ಆಗ ಫೌಜದಾರರ ಪಿತ್ತವು ತಲೆಗೇರಿತು. ಅವರು ಕಾರಖಾನೀಸರನ್ನು ಕೈದು ಮಾಡಿದರು. ಸ್ವಾಭಿಮಾನಿಗಳಾದ ಕಾರಖಾನೀಸರು ಮೋಟಾರಿನಿಂದ ಇಳಿಯಲಿಕ್ಕೆ ಒಪ್ಪಲಿಲ್ಲವಾದ್ದರಿಂದ ಪೋಲೀಸರು ಅವರನ್ನು ಕೆಳಕ್ಕೆಳೆದು ಕೈಗೆ ಬೇಡಿಗಳನ್ನು ಹಾಕಿ ಅಂಕೋಲೆಗೆ ತಂದರು. ಅವರ ಮೇಲೆ ೧೦೯ ನೆಯ ಕಲಮಿನ ಪ್ರಕಾರ ಖಟ್ಲೆ ಹಾಕಿ [illegible]ವರಂತೆ! ಇಲ್ಲಿಯ ಪೋಲೀಸರ ಪುಂಡಾಟಿಕೆಗೆ ಇದು ಬಿಸಿ ಬಿಸಿ ಉದಾಹರಣೆ!

ಅಂಕೋಲೆಯ ವೀರಪ್ರತಿಜ್ಞೆ

(ಸ್ವಂತ ಸುದ್ದಿಗಾರರಿಂದ)

ಕಳೆದ ೫ ನೆಯ ತಾರೀಖಿಗೆ ಈ ತಾಲೂಕಿನಲ್ಲಿ ತೀರ್ವೆ ವಸೂಲ ಮಾಡುವ ಕಾರ್ಯವು ಪ್ರಾರಂಭವಾಗುವದಿದ್ದದರಿಂದ ಅಂದೇ ಸಾಯಂಕಾಲಕ್ಕೆ ಈ ತಾಲೂಕಿನ ೧೦ ಕೇಂದ್ರಗಳಲ್ಲಿಯೂ ಉಳಿದ ಕೆಲವು ಹಳ್ಳಿಗಳಲ್ಲಿಯೂ [illegible] ಸಭೆಗಳು ಕೂಡಿ, ಕಾಂಗ್ರೆಸದವರು ಹೇಳುವವರೆಗೆ ಸರಕಾರಕ್ಕೆ ತೀರ್ವೆ ಕೊಡತಕ್ಕದ್ದಲ್ಲವೆಂದು ಠರಾವುಗಳಾದವು. ಮೊದಲು ಸಭೆಯಲ್ಲಿ ರಾಷ್ಟ್ರಧ್ವಜದ ಪೂಜೆಯಾದ ಬಳಿಕ ಕೂಡಿದ ಎಲ್ಲ ಜನರೂ ಈ ಕೆಳಗಿನ ಪ್ರತಿಜ್ಞೆಯನ್ನು ಗಂಭೀರವಾಗಿ ಉಚ್ಚರಿಸಿದರು.

"ನಾವು ದೇವರನ್ನೂ ಮಹಾತ್ಮಾ ಗಾಂಧಿಯವರನ್ನೂ ಸ್ಮರಿಸಿ ಪ್ರತಿಜ್ಞೆ ಮಾಡುವದೇನಂದರೆ:— ಕಾಂಗ್ರೆಸದ ಆಜ್ಞೆಯ ಪ್ರಕಾರ ನಾವು ಕರನಿರಾಕರಣೆಯನ್ನು ಕೈಕೊಂಡಿದ್ದೇವೆ. ನಾವು ಈ ವರ್ಷ ಸರಕಾರಕ್ಕೆ ಕೈಯೆತ್ತಿ ತೀರ್ವೆ ಕೊಡಲಿಕ್ಕಿಲ್ಲ. ತೀರ್ವೆ ವಸೂಲ ಮಾಡುವ ಕಾಲದಲ್ಲಿ ನಾವು ಸರಕಾರಕ್ಕೆ ಯಾವ ರೀತಿಯಿಂದಲೂ ಸಹಾಯ ಮಾಡಲಿಕ್ಕಿಲ್ಲ. ಈ ನಮ್ಮ ಪ್ರತಿಜ್ಞೆಯನ್ನು ಪಾಲಿಸಲು ದೇವರು ನಮಗೆ ಶಕ್ತಿಯನ್ನು ದಯಪಾಲಿಸಲಿ."

ರಾಷ್ಟ್ರಗೀತವಾದ ಬಳಿಕ ಎಲ್ಲರೂ ದೃಢ ನಿಶ್ಚಯ ಮಾಡಿ ತಮ್ಮ ತಮ್ಮ ಮನೆಗಳಿಗೆ ಹೋದರು.

ಶ್ರೀಮತಿ ಕಿಕೀಬೇನರು ಅನ್ನತ್ಯಾಗ ಕೈಕೊಂಡರು

ಕಾಯಿದೆಗೆ ವಿರುದ್ಧವಾದ ಸಂಘದಲ್ಲಿ ಸೇರಿದ ಅಪರಾಧಕ್ಕಾಗಿ ಕರಾಚಿಯಲ್ಲಿ ಶಿಕ್ಷೆಗೊಳಗಾದ ಶ್ರೀಮತಿ ಕಿಕೀಬೇನ ಲಾಲವಾನಿಯವರು, ಜೇಲ ಅಧಿಕಾರಿಗಳು ತಮ್ಮನ್ನು ಕೆಟ್ಟ ರೀತಿಯಿಂದ ನಡಿಸಿಕೊಳ್ಳುತ್ತಿರುವದರ ನಿಷೇಧಾರ್ಥವಾಗಿ, ಕಳೆದ ನಾಲ್ಕು ದಿನಗಳಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿರುವರಾಗಿ ತಿಳಿದು ಬರುತ್ತದೆ.

ಮೋತೀಲಾಲರ ಮರಣದಿಂದ

ಪತ ಹುತ್ಮರಿಗೆ ವೈಧವ್ಯ ಬಂದಂತಾಯಿತು.

ಅಲಹಾಬಾದದ ಲೀಡರ ಪತ್ರದ ಸಂವಾದದಾತರ ಮುಂದೆ ಮಹಾತ್ಮಾ ಗಾಂಧಿಯವರು ಕೆಳಗಿನಂತೆ ದುಃಖೋದ್ಗಾರ ತೆಗೆದಿದ್ದಾರೆ.

ಪಂಡಿತ ಮೋತೀಲಾಲರ ಮರಣದಿಂದ ನನಗೆ ವೈಧವ್ಯ ಬಂದಂತಾಗಿದೆ. ಪತಿಭಕ್ತಿಪರಾಯಣ ಹೆಂಡತಿಯು ಗಂಡನು ಉಳಿಸಿಟ್ಟು ಹೋದದ್ದರಲ್ಲಿಯೇ ತನ್ನ ಜೀವಿತ ಧರ್ಮ ನಡಿಸುವಳು. ಆದರೆ ನನ್ನ ಪಾಲಿಗೇನೂ ಉಳಿದಿಲ್ಲ. ಮೋತೀಲಾಲರ ಮರಣದಿಂದ ನಾನು ಕಳೆದುಕೊಂಡದ್ದು ಆ ಜನ್ಮ ಗಳಿಸಿಕೊಂಡಂತಾಯಿತು. ಅನಂತ ಕಾಲದಿಂದ ಒಂದೇ ಸ್ಥಳದಲ್ಲಿ ನೆಲಸಿರುವ ಪರ್ವತಶ್ರೇಣಿಯು ಯಾವದಾದರೂ ಒಂದು ಕ್ಷಣದಲ್ಲಿ ಕಾಲಹರಣ ಮಾಡಿ, ಪಲಾಯನವನ್ನೈದುವದೇ ನನ್ನ ದೈವದಲ್ಲಿ ಬರೆದಂತಾಗಿದೆ.

ಪೋಲೀಸರೆದುರಿನಲ್ಲಿ ಉಪ್ಪಿನ ಕಾಯದೆ ಮುರಿದರು

ದಾಂಡಿಯ ನಿವಾಸಿಗಳು ಸ್ವಲ್ಪ ದಿನಗಳ ಹಿಂದೆ ಸಮುದ್ರ ತೀರಕ್ಕೆ ಹೋಗಿ ಅಲ್ಲಿ ಉಪ್ಪನ್ನು ಸಿದ್ಧ ಪಡಿಸಿಕೊಂಡು ಅದನ್ನು ಮನೆಗೆ ತೆಗೆದುಕೊಂಡು ಒಂದರು. ಆ ಸಮಯದಲ್ಲಿ ಅಲ್ಲಿ ಇದ್ದ ಪೋಲೀಸರು ಅವರಿಗೆ ಯಾವ ರೀತಿಯಿಂದಲೂ ಅಡ್ಡಿ ಮಾಡಲಿಲ್ಲ.

ಹಿಂದುಸ್ಥಾನಕ್ಕೆ ಅಯರ್ಲಂಡದ ಸಹಾನುಭೂತಿ

ಹಿಂದುಸ್ಥಾನದ ಸದ್ಯಸ್ಥಿತಿಯ ಸಂಬಂಧವಾಗಿ ಡಬ್ಲಿನದಲ್ಲಿ ಭಾಷಣ ಮಾಡುವಾಗ ಮಿ. ಡಿ-ವ್ಹೆಲೆರಾ ಅವರು ಕೆಳಗಿನಂತೆ ನುಡಿದರು "ಭಾರತೀಯರು ಸಾಗಿಸಿದ ಅಹಿಂಸಾತ್ಮಕ ಹೋರಾಟವು ಜಗತ್ತಿನ ಇತಿಹಾಸದಲ್ಲಿಯೇ ಅಭೂತಪೂರ್ವವಾದದ್ದಿದೆ. ಅವರ ಮುಖಂಡನು ಅಹಿಂಸಾ ತತ್ವಕ್ಕೆ ಗಟ್ಟಿಯಾಗಿ ಅಂಟಿಕೊಂಡು ಅದರಂತೆ ಈ ವರೆಗೆ ಆಚರಿಸಿದ್ದಾನೆ."

ಹಿಂದೆಸ್ಥಾನದಲ್ಲಿಯ ಬ್ರಿಟಿಶರ ಧೋರಣವನ್ನು ಟೀಕಿಸಿ ಅವರು ಹೀಗೆ ಹೇಳಿದರು.

"ನಾವು ಬ್ರಿಟಿಶ ಸಾಮ್ರಾಜ್ಯದಲ್ಲಿ ಇರುತ್ತಿರುವದೇನೋ ನಿಜ. ಆದರೆ ಅದಕ್ಕೆ ನಾವು ಸಂಬಂಧಿಸಿಲ್ಲ. ಆದ್ದರಿಂದ ನಾವು ಬ್ರಿಟಿಶರ ಕೃತ್ಯಗಳಿಗೆ ಎಳ್ಳಷ್ಟೂ ಜವಾಬದಾರರಿಲ್ಲ."

ಕಾಂಗ್ರೆಸ್ ಸೆಕ್ರೆಟರಿಯನ್ನು ಗುಂಡುಹೊಡೆದುಕೊಂದರು

ಪ್ಯಾಸಿಫಿಕ್ ಕೋಸ್ಟದ ಇಂಡಿಯನ್ ನ್ಯಾಶನಲ್ ಕಾಂಗ್ರೆಸದ ಸೆಕ್ರೆಟರಿಯವರಾದ ಶ್ರೀ ನಾಚಿಪ್ಪಿ ರಾಮಸ್ವಾಮಿಯವರು ಹಾದಿಯಲ್ಲಿ ಹಾಯ್ದು ಹೋಗುತ್ತಿರುವಾಗ ಯಾವನೋ ಒಬ್ಬನು ಅವರ ಮೇಲೆ ಗುಂಡು ಹಾರಿಸಿ ಅವರನ್ನು ಕೊಂದಿದ್ದಾನೆ. ಒಬ್ಬ ಭಾರತೀಯನು ಅವರ ಮೇಲೆ ಪಿಸ್ತೂಲ ಹಾರಿಸಿದ್ದನ್ನು ನೋಡಿದ್ದೇವೆಂಬುದಾಗಿ ಕೆಲವರು ಹೇಳುತ್ತಿರುವರು. ಅವರು ಮರಣ ಹೊಂದಿ ಬಿದ್ದ ಸ್ಥಳದಲ್ಲಿ ಎರಡು ಪಿಸ್ತೂಲುಗಳು ಸಿಕ್ಕಿವೆ.

ಭಯಂಕರ ಭೂಕಂಪ

೨೧೨ ಜನರಿಗೆ ಮರಣ ೯೫೦ ಜನರಿಗೆ ಗಾಯ

ನ್ಯೂಜೀಲಂಡದ ನೇಪಿಯರ ಪ್ರದೇಶದಲ್ಲಿ ಸ್ವಲ್ಪ ದಿನಗಳ ಹಿಂದೆ ಸಂಭವಿಸಿದ ಭೂಕಂಪದ ಮೂಲಕವಾಗಿ ಒಟ್ಟಿಗೆ ೨೧೨ ಜನರು ಮರಣ ಹೊಂದಿದ್ದಲ್ಲದೆ ೯೫೦ ಜನರಿಗೆ ಗಾಯ [illegible]ವೆಯೆಂಬುದಾಗಿ ಅಲ್ಲಿಯ ಗವರ್ನರ ಜನರಲ್ಲರು ಪ್ರಸಿದ್ಧ ಮಾಡಿದ್ದಾರೆ.

"ಸರ್ಚಲಾಯಿಟ್" ಪತ್ರಿಕೆಯು ಆರ್ಡಿನನ್ಸಕ್ಕೆ ಆಹುತಿಯಾಯಿತು.

ಪಾಟಣಾದಲ್ಲಿ ಹೊರಡುತ್ತಿದ್ದ "ಸರ್ಚಲಾಯಿಟ" ಪತ್ರಿಕೆಗೆ ಸರಕಾರದವರು ಪ್ರೆಸ್ ಆರ್ಡಿನನ್ಸದನ್ವಯ ೩೦೦೦ ರೂ. ಜಾಮೀನು ಕೇಳಿದ್ದರಿಂದ ಆ ಪತ್ರಿಕೆಯು ನಿಂತು ಹೋಗಿದೆ.

ಸರಕಾರದವರದೊಂದು ದೊಡ್ಡ ಸುಳ್ಳು

ಬೋರಸಾದದಲ್ಲಿಯ ಪೋಲೀಸರ ದುಂಡಾಟಿಕೆಯನ್ನು ಕುರಿತು ಸರಕಾರದ ಸುದ್ದೀ ಖಾತೆಯವರು ಪ್ರಕಟಿಸಿದ ಪ್ರಕಟನೆಯ ಸಂಬಂಧವಾಗಿ ಶ್ರೀ ಎ. ವ್ಹಿ. ಠಕ್ಕರರವರು ಮುಂಬಯಿಯ ಕ್ರಾನಿಕಲ್ ಪತ್ರಿಕೆಯಲ್ಲಿ ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದು, ಅದರಲ್ಲಿ ಅವರು ಅನ್ನುವದೇನಂದರೆ:—

(೧) ಬೋರಸಾದ ಗೊಂದಲವು ತಾ|| ೨೨ಕ್ಕೆ ಸಂಭವಿಸಿತೆಂದು ಸುದ್ದಿ ಖಾತೆಯ ಮುಖ್ಯಾಧಿಕಾರಿಗಳು ಪ್ರಸಿದ್ಧಿಸಿದ್ದಾರೆ. ಆದರೆ ಅದು ಅಂದು ಸಂಭವಿಸಿರದೆ ತಾ|| ೨೧ಕ್ಕೆ ಸಂಭವಿಸಿತು.

(೨) ಮೆರವಣಿಗೆಯು ಕೇವಲ ಸ್ತ್ರೀಯರದೇ ಇತ್ತು. ರಾಷ್ಟ್ರಧ್ವಜಗಳನ್ನಾದರೂ ಅವರೇ ಹಿಡಿದು ಕೊಂಡಿದ್ದರು. ಮೆರವಣಿಗೆಯಲ್ಲಿ ಸ್ತ್ರೀಯರೂ ಮತ್ತು ಪುರುಷರೂ ಕೂಡಿಯೇ ಇದ್ದರೆಂದು ಹೇಳುವದು ನಿಜಸ್ಥಿತಿಗೆ ವಿರುದ್ಧವಾಗಿದೆ. ಮೆರವಣಿಗೆಯಲ್ಲಿದ್ದವರು ಪೋಲೀಸರ ಮೇಲೆ ಕಲ್ಲು ಒಗೆದರೆಂಬುದಾಗಿ ಸುದ್ದಿ ಖಾತೆಯವರು ಪ್ರಸಿದ್ಧಿಸಿದ್ದಾರೆ ಆದರೆ ಬೋರಸಾದದಲ್ಲಿ ಕಲ್ಲುಗಳೇ ಇರುವದಿಲ್ಲ. ಬೀದಿಗಳಾದರೂ ಕಲ್ಲುಗಳಿಂದ ಗಟ್ಟಿ ಮಾಡಲ್ಪಟ್ಟಿರದೆ, ಕೇವಲ ಮಣ್ಣಿನಿಂದ ಗಟ್ಟಿ ಮಾಡಲ್ಪಟ್ಟಿವೆ.

ಮೆರವಣಿಗೆಯನ್ನು ನೋಡುವ ಉದ್ದೇಶದಿಂದ ಬೀದಿಗಳಲ್ಲಿ ನೆರೆದ ಜನರು ಪೋಲೀಸರ ಮೇಲೆ ಹಲ್ಲೆ ಮಾಡುವ ವಿಚಾರದಲ್ಲಿದ್ದರೆಂಬುದಾಗಿ ಪ್ರಸಿದ್ಧವಾಗಿದೆ. ಇದು ಕಲ್ಪಿತವಾದದ್ದಿರುತ್ತದೆ. ಯಾಕೆಂದರೆ ಪೋಲೀಸರು ಜುಲುಮೆಯಿಂದ ಎಲ್ಲ ಅಂಗಡಿಗಳನ್ನು ಮುಚ್ಚಿಸಿ, ಅಂಗಡಿಕಾರರನ್ನು ಆ ಬೀದಿಗಳಿಂದ ಬೇರೆ ಕಡೆಗೆ ಕಳಿಸಿದ್ದರು. ಸಾರ್ವಜನಿಕ ವಾಚನಾಲಯದಲ್ಲಿ ಪೋಲೀಸರು ನುಗ್ಗಿ ಹೋಗಿ ಅಲ್ಲಿ ಓದುತ್ತ ಕುಳಿತ ಅನೇಕ ಜನ ಸ್ತ್ರೀಯರಿಗೆ ಲಾಠಿ ಪೆಟ್ಟು ಕೊಟ್ಟು ಅವರನ್ನು ಅಲ್ಲಿಂದ ಹೊರ ದೂಡಿದರು.

೪) ತಮ್ಮ ತಮ್ಮ ಗಾಯಗಳಿಗೆ ಬೋರಸಾದದ ದವಾಖಾನೆಯಲ್ಲಿ ಔಷಧೋಪಚಾರ ಹೊಂದುತ್ತಿದ್ದ ಸ್ತ್ರೀಯರನ್ನು, ಪೋಲೀಸರು ತಮ್ಮ ದುಷ್ಕೃತ್ಯಗಳಿಗೆ ಸಾಕ್ಷಿ ಪುರಾವೆಗಳು ಸಿಗಬಾರದೆಂಬ ಉದ್ದೇಶದಿಂದ ಹೊರಗೆ ದಬ್ಬಿದರು.

ಸುದ್ದಿ ಖಾತೆಯವರು ಈ ಪ್ರಕಟನೆಯನ್ನು ಹೊರಡಿಸಿ ಜನರ ಕಣ್ಣಲ್ಲಿ ಮಣ್ಣು ಒಗೆಯಲು ಪ್ರಯತ್ನಿಸಿದ್ದಾರೆ. ಇಂತಹ ಅಸತ್ಯ ಪ್ರಕಟನೆಗಳನ್ನೋದಿ ಸಾರ್ವಜನಿಕರು ಈ ಮೊದಲೇ ಬೇಸರಗೊಂಡಿದ್ದಾರೆ. ಕಾರಣ ಇಂತಹ ಪ್ರಕಟನೆಗಳು. ಅದರೊಂದಿಗೆ ಸುದ್ದಿ ಖಾತೆಯು ಎಷ್ಟು ಬೇಗ ರದ್ದು ಮಾಡಲ್ಪಡುವವೋ ಅಷ್ಟು ಒಳಿತು. ಯಾಕಂದರೆ ಇದರಿಂದ ಹಣವೂ ಉಳಿಯುವದಲ್ಲದೆ, ಕಿಡಿಗೇಡಿತನವೂ ಇಲ್ಲದಂತಾಗುತ್ತದೆ.

ಪರದೇಶಿ ಅರಿವೆಯ ವ್ಯಾಪಾರಿಯನ್ನು ಗುಂಡಿನಿಂದ ಹೊಡೆದದ್ದು

ಅಮೃತಸರದಲ್ಲಿಯ ಪರದೇಶಿ ಅರಿವೆಯ ವ್ಯಾಪಾರಿಗಳಾದ ಶ್ರೀ ಸೋಹನಲಾಲರು ತಾ|| ೧೧ನೆಯ ದಿವಸ ಮಧ್ಯರಾತ್ರಿಯಲ್ಲಿ ಟಾಂಗೆಯಲ್ಲಿ ಕುಳಿತುಕೊಂಡು ತಮ್ಮ ಅಂಗಡಿಯಿಂದ ತಿರುಗಿ ಮನೆಗೆ ಬರುತ್ತಿದ್ದರು. ಸಾಯಕಲ್ ಮೇಲೆ ಕುಳಿತುಕೊಂಡು ಓರ್ವ ತರುಣನು ಆ ಸಮಯದಲ್ಲಿ ಕೇವಲ ಅಂತರದ ವರೆಗೆ ಅವರನ್ನು ಹಿಂಬಾಲಿಸಿ, ಚೌಕ ಗಂಪರಸ್ಸಹಾಲದ ಬಳಿಯಲ್ಲಿ ಅವರ ಮೇಲೆ ಪಿಸ್ತೂಲ ಹಾರಿಸಿ ಓಡಿ ಹೋದನು. ಶ್ರೀ ಸೋಹನಲಾಲರಿಗೆ ತೊಡೆಯಲ್ಲಿ ಸ್ವಲ್ಪ ಗಾಯವಾಯಿತು. ಅವರು ಅದೇ ಟಾಂಗೆಯಲ್ಲಿ ಹಾಗೆಯೆ ಸಿವ್ಹಿಲ್ ಹಾಸ್ಪಿಟಲಕ್ಕೆ ಹೋದರು. ಅಲ್ಲಿ ಕರ್ನಲ್ ಪುರಿಯವರು ಶಸ್ತ್ರಕ್ರಿಯೆ ಮಾಡಿ ಗುಂಡನ್ನು ಹೊರಗೆ ತೆಗೆದರು. ಪೋಲೀಸರು ಅಪರಾಧಿಯನ್ನು ಕಂಡು ಹಿಡಿಯುವ ಬಗ್ಗೆ ಓಡಾಡ ಹತ್ತಿದ್ದಾರೆ.

ಶ್ರೀ ಭಗತಸಿಂಗರಿಗೆ ಅಪೀಲ ಮಾಡಲು ಅಪ್ಪಣೆ ಸಿಗಲಿಲ್ಲ

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲು, ಕರಿನೀರು, ಕಠಿಣ ಕಾರಾಗೃಹವಾಸ ಹೀಗೆ ಬೇರೆ ಬೇರೆ ಶಿಕ್ಷೆಗಳಿಗೆ ಗುರಿಯಾದ ಶ್ರೀ ಭಗತಸಿಂಗ, ರಾಜಗುರು, ಸುಖದೇವ, ಶಿವರಾಮ ಮೊದಲಾದ ೧೨ ಜನ ಆರೋಪಿಗಳು ಟ್ರಿಬ್ಯೂನಲದ ತೀರ್ಪಿನ ವಿರುದ್ಧವಾಗಿ ಅಪೀಲ ಮಾಡಲು ಅಪ್ಪಣೆ ಕೊಡಲು ಪ್ರಿವ್ಹಿ ಕೌನ್ಸಿಲಕ್ಕೆ ಅರ್ಜಿ ಮಾಡಿದ್ದರು. ಪ್ರಿವ್ಹಿ ಕೌನ್ಸಿಲದವರು ಅರ್ಜಿಯನ್ನು ವಿಚಾರ ಮಾಡಿ, ಅವರ ವಿನಂತಿಯನ್ನು ನಿರಾಕರಿಸಿದರು.

ಶ್ರೀವಿಠ್ಠಲಭಾಯಿಯವರು ವ್ಹಿಯೆನ್ನಾಕ್ಕೆ ಹೋಗುವರು

ಈಗ ಮುಂಬಯಿಯ ಪೋಲಿಕ್ಲಿನಿಕ್ ನರ್ಸಿಂಗಹೋಮದಲ್ಲಿ ಔಷಧೋಪಚಾರವನ್ನು ಹೊಂದುತ್ತಿರುವ ಶ್ರೀ ವಿಠಲಭಾಯಿ ಪಟೇಲರವರು ಶೀಘ್ರದಲ್ಲಿಯೇ ವ್ಹಿಯನ್ನಾಕ್ಕೆ ಹೋಗಿ ೨—೩ ತಿಂಗಳ ವರೆಗೆ ಅಲ್ಲಿ ಔಷಧೋಪಚಾರ ಹೊಂದುವವರಿದ್ದಾರೆ.

ಒಂದು ಬಹಿಷ್ಕಾರಕ್ಕಾಗಿ ಮತ್ತೊಂದು ಬಹಿಷ್ಕಾರ

(ಸ್ವಂತ ಸುದ್ದಿಗಾರರಿಂದ)

ಭಾದಸ್ಥೇಡ ಎಂಬ ಹಳ್ಳಿಯ ಸರಕಾರಿ ಶಾಲಾ ಮಾಸ್ತರರು ತಮ್ಮ ವಿದ್ಯಾರ್ಥಿಗಳಿಂದ ಜನಗಣತಿಯ ಬಗ್ಗೆ ಸಂಗತಿಯನ್ನು ಕೇಳಲು ಆ ಹುಡುಗರು ಹೇಳಲಿಲ್ಲ. ಇತ್ತ ಕಡೆಯಲ್ಲಿ ಜನಗಣತಿಯ ಬಹಿಷ್ಕಾರವು ಅತ್ಯಂತ ಪ್ರಖರವಾಗಿರುವದರಿಂದ ಊರವರಂತೂ ಅವರಿಗೆ ಯಾವ ಸಂಗತಿಯನ್ನೂ ತಿಳಿಸಿಲ್ಲ. ಅದರಿಂದ ಮಾಸ್ತರರು ಊರ ಹೆಂಗಸರ ಕಡೆಯಿಂದ ಯಾವದೊಂದು ರೀತಿಯಿಂದ ಸುದ್ದಿ ತಿಳಿಯಹತ್ತಿದರು. ಇದರಿಂದ ಊರವರು ಸಿಟ್ಟಾಗಿ ಶಾಲೆಗೂ ಬಹಿಷ್ಕರಿಸಿದರು. ಹುಡುಗರೆಲ್ಲ ಕಾಂಗ್ರೆಸ್ ಶಿಬಿರದೊಳಗಿನ ರಾಷ್ಟ್ರೀಯ ಶಾಲೆಗೆ ಹೋಗುತ್ತಿರುವದರಿಂದ ಸರಕಾರಿ ಶಾಲೆಯವರು ನೊಣ ಜಾಡಿಸುತ್ತ ಕುಳಿತಿರುವರು.

೧೪ ಪವನುಗಳಿಗೆ, ಗಂಡನನ್ನು ಮಾರಿದ್ದು

ಪ್ಯಾರಿಸದಲ್ಲಿ ಒಬ್ಬ ಸ್ತ್ರೀಯು ದಂತ ಚಿಕಿತ್ಸಕನ ಹತ್ತರ ಹೋದಳು. ಆ ದಂತ ಚಿಕಿತ್ಸಕನಿಗೆ ಮದುವೆಯಾಗಿರಲಿಲ್ಲ. "ಇನ್ನೂ ಲಗ್ನ ಮಾಡಿಲ್ಲವೇ?" ಎಂದು ಚಿಕಿತ್ಸೆಗೆ ಹೋದವಳು ದಂತ ಚಿಕಿತ್ಸಕನಿಗೆ ಕೇಳಿದಳು. ಅದಕ್ಕೆ ಚಿಕಿತ್ಸಕನು "ನಾನೇನು ಮಾಡಲಿ, ನನಗೆ ಪರಸ್ತ್ರೀ ಇಲ್ಲ ಗಂಡನನ್ನು ಆರಿಸಿ ಮಾರಲು ಮೇಳೆಯೇ ಇಲ್ಲ ಬೇಕಾದಷ್ಟು ದುಡ್ಡು ಕೊಡುತ್ತೇನೆ. ಒಬ್ಬ ಗಂಡನನ್ನು ಹುಡುಕಿಕೊಡು" ಎಂದು ಅವನು ಉತ್ತರ ಕೊಟ್ಟನು. ಚಿಕಿತ್ಸೆಗೆ ಹೋದವಳು ಅವನಿಂದ ೧೪ ಪವನಗಳನ್ನು ತೆಗೆದುಕೊಂಡು ತನ್ನ ಗಂಡನನ್ನು ಆಕೆಯು ಒಡನೆ ಕೆಲವು ದಿವಸ ಇರಲು ಕಳಿಸಿದಳು. ಅವರಿಬ್ಬರಲ್ಲಿ ಕ್ರಮೇಣ ಪ್ರೇಮವು ಬೆಳೆದು ಅವರಿಬ್ಬರೂ ದಂಪತಿಗಳಾದರು, ಚಿಕಿತ್ಸೆಗೆ ಹೋದ ಸ್ತ್ರೀಯು ತನ್ನ ಮೂರ್ಖತನಕ್ಕೆ ಪಶ್ಚಾತ್ತಾಪ ಪಡುತ್ತ ಕುಳಿತುಕೊಂಡಳು.

ರಾಮೇಶ್ವರದಲ್ಲಿ

ಮೂವರು ರೈತರಿಗೆ ಶಿಕ್ಷೆ

ಹೊಲದಿಂದ ಬೆಳೆಗಳನ್ನು ತೆಗೆದುಕೊಂಡು ಹೋಗಗೊಡಸೆಂಬುದಾಗಿ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯನ್ನು ಅವಮಾನ್ಯ ಮಾಡಿದ್ದಕ್ಕಾಗಿ ಪಂಚಮಹಾಲ ಜಿಲ್ಲೆಯ ರಾಮೇಶ್ವರ ಹಳ್ಳಿಯ ಮೂವರು ರೈತರಿಗೆ ಪ್ರತ್ಯೇಕವಾಗಿ ೧| ತಿಂಗಳ ಕಾರಾಗೃಹವಾಸದ ಶಿಕ್ಷೆಯು ದೊರೆತದ್ದಾಗಿದೆ.

ಕಲಕತ್ತೆಯಲ್ಲಿ

೨೩ ಜನರಿಗೆ ಕೈದು

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ||೧೦ ನೆಯ ದಿವಸ ಅಲ್ಲಿಯ ೨೩ ಜನ ಕಾಂಗ್ರೆಸ್ ಸ್ವಯಂಸೇವಕರನ್ನು ಇ ಪಿ. ಕೋಡಿ ತ್ರ್ಯಾಂಗಲ ನೆಯ ಕಲಮಿನನ್ವಯ ಸೆರೆಹಿಡಿದಿದ್ದಾರೆ

ಬೆಳಗಾವಿಯಲ್ಲಿ

೧೪ ಜನರನ್ನು ಹಿಡಿದರು

ತಾ|| ೧೧ನೆಯ ದಿವಸ ಬೆಳಗಾವಿಯಲ್ಲಿ ಶ್ರೀ ಹಿರೇಮಠರ ನೇತೃತ್ವದಲ್ಲಿ ಆ ಜಿಲ್ಲೆ ತಾಗು ಸುತ್ತು ಮುತ್ತಲಿನ ಸಂಸ್ಥಾನಗಳಲ್ಲಿಯ ಹಿಂದೀ ಅಂಗಡಿಗಳ ಲಿಲಾವು ನಡೆಯಿತು. ಕೆಲವು ಸ್ವಯಂ ಸೇವಕರು ಈ ಸಮಯದಲ್ಲಿ ಪಿಕೆಟಿಂಗ ನಡಿಸಿದರು. ಅಧಿಕಾರಿಗಳು ೧೪ ಜನರನ್ನು ಸೆರೆ ಹಿಡಿದೊಯ್ದರು. ಇದರ ಪರಿಣಾಮವೆಂದರೆ ಬೆಳಗಾವ ತಾಲೂಕ ಲೋಕಗಿನ ಸಿಂದಿ ಅಂಗಡಿಗಳನ್ನು ಯಾರೂ ಮಕ್ತೆ ಹಿಡಿಯಲಿಲ್ಲ.

ಭಾರತಮಂತ್ರಿಗಳು

ಹಿಂದುಸ್ಥಾನಕ್ಕೆ ಬರುವರಂತೆ

ಭಾರತ ಮಂತ್ರಿಗಳಾದ ಮಿ. ಬೆನ್ನರು ಇನ್ನು ಸ್ವಲ್ಪ ದಿನಗಳಲ್ಲಿಯೇ ಹಿಂದುಸ್ಥಾನಕ್ಕೆ ಬಂದು ಕಾಂಗ್ರೆಸ್ ಮುಖಂಡರನ್ನು ಕಂಡು ಕೊಳ್ಳುವವರಿದ್ದಾರೆಂದು, "ಹಿಂದುಸ್ಥಾನ ಟಾಯಿಮ್ಸ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

(ಸ—೦—ಮ)

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರಾವ್ಹಿಡೆಂಟ ಕಂಪನಿ ಲಿ. ಕಲಕತ್ತಾ ಈ ಕಂಪನಿಯ ವಿಮೇದಾರರಲ್ಲಿ ವಿನಂತಿ:—

ಈ ೩-೪ ತಿಂಗಳಿಂದ ಏಜಂಟರ ಕಡಿಂದಾ ರಕಮು ಕಂಪನಿಗೆ ಒರೋಬರಿ ರೀತಿಯಿಂದಾ ಜಮಾ ಆಗಿಲ್ಲ ಅಂತಾ ಎಷ್ಟೋ ಜನರ ಕಡಿಂದಾ ತಕರಾರು ಬಂದದೆ. ಹೀಗೆ ತಕರಾರ ಇದ್ದವರು ನಮ್ಮ ಕಡಿಗೆ ಸಮಕ್ಷಮ. ಅಥವಾ ಪತ್ರದ್ವಾರದಿಂದ ಕಚ್ಚಾ ಪಾವತಿ ಸಹಿತ ಹಾಜರ ಮಾಡಿ ತಕರಾರ ನಿಕಾಲೆ ಮಾಡಿಕೋಬೇಕು. ಮತ್ತು ಫೆಬ್ರುವರಿ ತಿಂಗಳು ಕಂಪನಿಯ ವಾರ್ಷಿಕ ಆಖೈರ ಇದ್ದು ತಾರೀಖು ೨೦|ರೊಳಗಾಗಿ ಹಿಂದಿನ ಬಾಕಿ ವ ಸದ್ಯ ಕಂತಿನ ಹಣವನ್ನು ಜಮಾ ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಕಂತು ಆಫೀಸದಲ್ಲಿ ಅಗರ ಏಜಂಟರ ಕಡಿಗೆ ನೇರ ದಿಂದ ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದೆ ತಕರಾರು ಮಾಡಿದರೆ ವಿಚಾರಿಸಲಿಕ್ಕಾಗದು.

ಬಾಗಲಕೋಟೆ ವ್ಹಿ. ಜಿ. ಪರ್ವತಿ.

೨-೨-೩೧ ಚೀಫ ಏಜಂಟ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದಂದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಒಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಸಬಾಜಾರ ವಿಜಾಪುರ

ಸ್ಯಾಂಪಲ್) ಮಸಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳಿ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ ,	೧೬-೦-೦	ರೇಲ್ವೆ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮಸಿ ೩ ಔನ್ಸಿನ ೧ಡಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ. **ಬೆಟಗೇರಿ ಬ್ರದರ್ಸ**

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಸೇತುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರೆ. ನಂ. ಬಿ. ೨೭೨೪   ನಿತ್ಯ ಸಂಚಿಕೆ.   ಬೆಲೆ. ೦—೦—೩.

परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA BAGALKOT   BI-WEEKLY ಅರ್ಧವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಸೋಮವಾರ ಮಿತಿ ಮಾಘ ಬಹುಳ ೧೪ ಶಕೆ ೧೮೫೨ ತಾ|| ೧೬—೨—೩೧ [ಸಂಚಿಕೆ ೧೯೦

ವರ್ಕಿಂಗ ಕಮೀಟಿಯು ಕರಾರುಗಳು.

ಸರಕಾರದ ಧೋರಣವು ಬದಲಾದರೇನೇ ಸಂಧಾನದ ಮಾತುಕತೆ

ಮಹಾತ್ಮರು ಮತ್ತೆ ಉಪ್ಪಿನ ಸತ್ಯಾಗ್ರಹಸುರುವು ಮಾಡುವರು

(ತಂತಿಯು ವಾರ್ತೆ, ತಾ|| ೧೪)

ವರ್ಕಿಂಗ ಕಮೀಟಿಯವರು ಇವತ್ತಿನ ದಿವಸ ಮತ್ತೆ ಸಭೆಯಲ್ಲಿ ಕೂಡಿ, ಕೆಲವು ಕಚ್ಚಾ ಠರಾವುಗಳನ್ನು ಗೊತ್ತು ಮಾಡಿಕೊಂಡು ಸಭೆಯನ್ನು ಮುಂದರಿಸಿದರು. ಆ ಠರಾವುಗಳಲ್ಲಿ ಸಂಧಾನದ ಪ್ರಶ್ನೆಯು ಸಂಬಂಧವಾಗಿ ಕೆಲವು ಠರಾವುಗಳಿದ್ದು ಅವುಗಳ ಆಶಯವೆಂದರೆ:— ಕಾಂಗ್ರೆಸ್‌ದವರು ತಮ್ಮೊಡನೆ ಸಹಕಾರ ಮಾಡಬೇಕೆಂಬುದಾಗಿ ಸರಕಾರದವರ ಇಚ್ಛೆಯಿದ್ದಲ್ಲಿ ಅವರು ಕೆಳಗಿನ ಈ ಐದು ಕರಾರುಗಳನ್ನು ಮೊದಲು ಪೂರ್ತಿಗೊಳಿಸಬೇಕು. ಅಂದರೆ(?) ಕಾಂಗ್ರೆಸದವರು ಅವರೊಡನೆ ಸಹಕಾರ ಮಾಡುವರು. ಆ ಕರಾರುಗಳೆಂದರೆ:— (೧) ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು ೨) ಪೋಲೀಸರ ಅತ್ಯಾಚಾರಗಳ ವಿಷಯವಾಗಿ ವಿಚಾರಣೆ ಮಾಡಬೇಕು ೩) ದಬ್ಬಾಳಿಕೆಯುಕ್ತ ನಿಲ್ಲಿಸಬೇಕು. ೪) ಜಪ್ತ ಮಾಡಿದ ಆಸ್ತಿ ಪಾಸ್ತಿಗಳನ್ನು ತಿರುಗಿ ಕೊಡಬೇಕು. ೫) ಪಿಕೆಟಿಂಗಕ್ಕೆ ಅಡ್ಡಿ ಮಾಡಬಾರದು.

ವರ್ಕಿಂಗ ಕಮೀಟಿಯ ಸಭೆಯು ಮುಂಬಯಿಯಲ್ಲಿ ಮತ್ತೆ ಸೇರಕಲ್ಪದ್ದಿದೆ.

ಮಹಾತ್ಮಾ ಗಾಂಧಿ ಹಾಗು ವ್ಹಾಯಸರಾಯರಲ್ಲಿ ಪರಸ್ಪರ ಭೆಟ್ಟಿ ಮಾಡಿಕುವ ಬಗ್ಗೆ ಕೆಲವರು ಪ್ರಯತ್ನ ನಡಿಸಿದ್ದು, ವ್ಹಾಯಿಸರಾಯರು ಮಹಾತ್ಮರನ್ನು ಬೇಗನೆ ಕರೆಯಿಸುವವರಿದ್ದಾರಾಗಿ ತಿಳಿಯುತ್ತದೆ.

ಪೋಲೀಸರ ಅತ್ಯಾಚಾರದ ವಿಷಯವಾಗಿ ವ್ಹಾಯಿಸರಾಯರು ಕೊಟ್ಟ ಉತ್ತರಕ್ಕೆ ಮಹಾತ್ಮಾ ಗಾಂಧಿಯವರು ಪ್ರತ್ಯುತ್ತರ ಬರೆಯುತ್ತಿದ್ದಾರೆ. ವರ್ಕಿಂಗ ಕಮೀಟಿಯ ಬಹುತರ ಎಲ್ಲ ಸಭಾಸದರೂ ತಮ್ಮ ತಮ್ಮ ಸ್ಥಳಗಳಿಗೆ ತಿರುಗಿ ಹೊರಟಿದ್ದಾರೆ.

ಮಹಾತ್ಮಾ ಗಾಂಧಿಯವರು ಗುಜರಾಥದಲ್ಲಿ ಪ್ರವಾಸ ಮಾಡಿ ಮತ್ತೆ ಉಪ್ಪಿನ ಸತ್ಯಾಗ್ರಹವನ್ನು ಸುರುವು ಮಾಡುವವರಿದ್ದಾರಾಗಿ ತಿಳಿಯುತ್ತದೆ.

———o———

ವರ್ಕಿಂಗ ಕಮೀಟಿಯ ಸಭೆಯು ಸುರುವಾಗುವದಕ್ಕಿಂತ ಮೊದಲು ಮಹಾತ್ಮಾ ಗಾಂಧಿಯವರು ಭೋಪಾಳದ ನವಾಬರಲ್ಲಿಗೆ ಹೋಗಿ, ಸರ್ ಸಪ್ರೂ, ನಾ. ಶಾಸ್ತ್ರಿ, ಶ್ರೀ ಜಯಕರ ಹಾಗು ಭೋಪಾಳದ ನವಾಬರು ಇವರೊಡನೆ ಚರ್ಚೆ ಮಾಡಿ ಬಂದರು; ಆ ವೇಳೆಯ ವರ್ಕಿಂಗ ಕಮೀಟಿಯ ಸಭೆಯು ಸುರುವಾಯಿತು.

ಸರ್ ಸಪ್ರೂ, ನಾ. ಶಾಸ್ತ್ರಿ, ಶ್ರೀ ಜಯಕರ ಇವರಾದರೂ ವರ್ಕಿಂಗ ಕಮೀಟಿಯ ಸಭೆಗೆ ಬಂದಿದ್ದರು.

ನಾ. ಶಾಸ್ತ್ರಿಯವರು ಇಂದು ದಿಲ್ಲಿಗೆ ಹೋಗತಕ್ಕವರಿದ್ದಾರೆ.

ಮಹಾತ್ಮರು

ಗುಜರಾಥದಲ್ಲಿ ಪ್ರವಾಸಮಾಡುವರು

ಮಹಾತ್ಮಾ ಗಾಂಧಿಯವರು ತಾ|| ೧೫ನೇಯ ದಿವಸ ಅಲಹಾಬಾದದಿಂದ ಹೊರಟು ಅಹಮದಾಬಾದಕ್ಕೆ ಬಂದು ಅಲ್ಲಿ ಒಂದೆರಡು ದಿನಗಳ ವರೆಗೆ ವಾಸ ಮಾಡುವರು. ಬಳಿಕ ಅವರು ಸರದಾರ ವಲ್ಲಭಭಾಯಿ ಹಾಗು ಕೆಲವು ಕಾಂಗ್ರೆಸ್ ಮುಖಂಡರೊಡನೆ ಬೋರಸಾದಕ್ಕೆ ಹೋಗಿ ಪೋಲೀಸರ ಪುಂಡಾಟಿಕೆಯ ವಿಷಯವಾಗಿ ನಿಜಸಂಗತಿಗಳನ್ನು ತಿಳಿದುಕೊಳ್ಳುವರು. ಅಲ್ಲಿಂದ ಖಾಡೇರೀಲಿ, ಜಲಾಲಪೂರ ತಾಲೂಕಗಳೊಳಗಿನ ಕೆಲವು ಸ್ಥಳಗಳಿಗೆ ಭೆಟ್ಟಿಕೊಟ್ಟು ಅವರು ಮುಂಬಯಿಗೆ ತೆರಳುವರು.

ಅಂಕೋಲಾ ತಾಲೂಕಿನಲ್ಲಿ ರೈತರು ಹಸ್ತೆ ಕೊಡದಾದರು

(ಸ್ವಂತ ಸುದ್ದಿಗಾರರಿಂದ)

ಈ ತಾಲೂಕಿನಲ್ಲಿ ತೀರ್ವೆ ವಸೂಲಿಯ ಕೆಲಸವು ಪ್ರಾರಂಭವಾಗಿದೆಯಂತೆ. ನಾಳೆ ೧೫ ನೇ ತಾರೀಖಿಗೆ ಮೊದಲನೆ ಕಂತು ತುಂಬುವ ಅವಧಿಯು ಮುಗಿಯುವದರಿಂದ ತೀರ್ವೆ ನಿರಾಕರಣೆಯ ಯುದ್ಧವು ಅನಂತರವೇ ಪ್ರಾರಂಭವಾಗುವದೆನ್ನಲಿಕ್ಕೆ ಅಡ್ಡಿಯಿಲ್ಲ. ರೈತರೂ ಸರಕಾರದವರೂ ಸರಿಯಾಗಿಯೇ ಮುಂದಿನ ಯುದ್ಧದ ಸಿದ್ಧತೆ ನಡಿಸಿರುವರು. ಜಪ್ತಿಯ ಶಸ್ತ್ರವನ್ನು ಎದುರಿಸುವದಕ್ಕಾಗಿ ಕೆಲವು ರೈತರು ತಮ್ಮ ಕಾಳುಕಡಿಯ ಸುರಕ್ಷಿತತೆ ನಡಿಸಿದ್ದಾರೆ. ಹಲವರು ಇದಕ್ಕಾಗಿಯೇ ತಮ್ಮ ಕಬ್ಬಿನ ಗಾಣದಳನ್ನು ಬೇಗ ಮುಗಿಸಿಕೊಂಡರು. ಸ್ಥಾನಿಕ ಅಧಿಕಾರಿಗಳೂ ಒಂದೇ ಸವನೆ ಕಾರವಾರಕ್ಕೆ ಎಡತಾಕಹತ್ತಿರುವರು. ಅವರ ಧೋರಣವನ್ನು ನೋಡಿದರೆ ಅವರು ದಂಡನೀತಿಗಿಂತಲೂ ಭೇದನೀತಿಯನ್ನೇ ಹೆಚ್ಚಾಗಿ ಅವಲಂಬಿಸುವಂತೆ ಕಾಣುತ್ತದೆ. "ನಾವೇನು ಒಮ್ಮೆಲೆ ದಬ್ಬಾಳಿಕೆಯನ್ನು ಹೂಡುವದಿಲ್ಲ" ವೆಂದು ಕೆಲವು ಅಧಿಕಾರಿಗಳು ಆಡಿ ತೋರಿಸಿದ್ದಾರಂತೆ. ಆದರೂ ಸ್ಪೆಶಲ್ ಪೋಲೀಸರೇ ಮುಂತಾದ ಮುಂಜಾಗ್ರತೆಯನ್ನು ಮಾತ್ರ ಅವರು ಮರೆತಿಲ್ಲ. ನಿನ್ನೆ ತಾನೇ ಅಂಕೋಲೆಗೆ ೪೦ ಜನ ಪೋಲೀಸರು ಬಂದರು. ಹೊಲಗಳನ್ನು ಫಾರ್‌ಫೀಟ್ ಮಾಡುವದೇ ಮುಂತಾದ ಆತ್ಯಂತಿಕ ಉಪಾಯಗಳನ್ನು ಯೋಜಿಸದೆ ಜಂಗಮ ಮಾಲಿನ ಜಪ್ತಿಯಿಂದಲೇ ಬಗೆಹರಿಸುವರೆಂಬ ಸುದ್ದಿ ಇದೆ. ಜನರಂತೂ "ಬಂದದ್ದೆಲ್ಲಾ ಬರಲಿ; ಗೋವಿಂದನ ದಯವೊಂದಿರಲಿ" ಎಂದು ಯಾವದೇ ಸಂಕಟವನ್ನು ಎದುರಿಸಲು ಸಿದ್ಧರಾಗಿರುವರು.

ಅಂಕೋಲಾ ತಾಲೂಕಿನಲ್ಲಿ ಶಾನುಭೋಗರು ತೀರ್ವೆಯನ್ನು ಎತ್ತುವದಕ್ಕಾಗಿ ಊರಿಂದೂರಿಗೆ ಅಡ್ಡಾಡುತ್ತಿರುವರು. ಶಿರೂರು, ಬೆಳಸೆಗಳಿಗೆ ಶಾನುಭೋಗರು ಹೋಗಿ ತೀರ್ವೆ ವಸೂಲ ಮಾಡುವ ಯತ್ನ ಮಾಡಿದರು. ಆದರೆ ಯಾರೊಬ್ಬರೂ ಒಂದು ಪೈಸಹ ಕೊಡಲಿಲ್ಲ. ಬಾವೀಕೇರಿಯಲ್ಲಿ ಒಬ್ಬ ಪೋಲೀಸನು ಮಾತ್ರ ತೀರ್ವೆ ತುಂಬಿದನಂತೆ! ಉಳಿದವರಾರೂ ಯಾವ ಹಳ್ಳಿಗಳಲ್ಲಿಯೂ ತೆರಿಗೆ ಕೊಡದ್ದರಿಂದ ಶಾನುಭೋಗರು "ಬಂದದಾರಿಗೆ ಸುಂಕವಿಲ್ಲ" ವೆಂದು ಹೊರಟು ಹೋದರು.

ಸಶಸ್ತ್ರ ಪೋಲೀಸರ ಸುಳಿದಾಟ

ಕೆಲವು ಶಾನುಭೋಗರೊಡನೆ ನಾಲ್ಕು ನಾಲ್ಕು ಜನ ಸಶಸ್ತ್ರ ಪೋಲೀಸರೂ ತಿರುಗುತ್ತಿರುವರು. ಹಳ್ಳಿಗರನ್ನು ಹೆದರಿಸುವದಕ್ಕಾಗಿಯೇ, ಶಾನುಭೋಗರನ್ನು ಸಂರಕ್ಷಿಸುವದಕ್ಕಾಗಿಯೂ ಅವರು ಕೋವಿಗಳನ್ನೂ ಬೇರೆ ಬೇರೆ ಶಸ್ತ್ರಗಳನ್ನೂ ತಮ್ಮ ಸಂಗಡ ತೆಗೆದುಕೊಂಡಿರುವರು. ಆದರೆ ಜನರ ಮೇಲೆ ಮಾತ್ರ ಇವರ ಆಗಮನದಿಂದ ಯಾವ ಪರಿಣಾಮವೂ ಆಗಿಲ್ಲ. ಅವರು ಶಾಂತರೀತಿಯಿಂದ ತಮ್ಮ ಕಾರ್ಯ ನಡಿಸಿರುವರು. ೧೧ ನೆಯ ತಾರೀಖಿನ ದಿವಸ ಶಾನುಭೋಗರು ನಾಲ್ಕು ಜನ ಪೋಲೀಸರೊಡನೆ ಹಾರವಾಡ ಗ್ರಾಮಕ್ಕೆ ಹೋಗಿ ದೇಸಾಯಿ ಎಂಬವರ ಮನೆಯಲ್ಲಿ ಬಿಡಾರ ಮಾಡಿದರು. ಎಲ್ಲರೂ ತೀರ್ವೆ ಕೊಡಬೇಕೆಂದು ಊರಲ್ಲಿ ಹೇಳಿಸಿದರು. ಊರವರು "ಈ ವರ್ಷ ತೆರಿಗೆ ಕೊಡುವದು ಸಾಧ್ಯವಿಲ್ಲ" ವೆಂದು ಹೇಳಿದರು. ಶಾನಭೋಗರಿಗೂ ಪೋಲೀಸರಿಗೂ ಯಾರೂ ಆದರಾತಿಥ್ಯ ಮಾಡಲಿಲ್ಲ. ತಮ್ಮ ತಂಬಿಗೆಗಳಲ್ಲಿಯೇ ಬಾವಿ ನೀರು ಸೇದಿಕೊಂಡು ಅದನ್ನೇ ಹೊಟ್ಟೆತುಂಬ ಕುಡಿದು ಈ ಸರಕಾರಿ ಅಮಲದಾರರು ತಮ್ಮ ಹಾದಿ ಹಿಡಿದರು.

ಹಾರವಾಡದಿಂದ ಇವರು ಕಣಗಿಲಕ್ಕೆ ಹೋದರು. ಅಲ್ಲಿಯ ಪಟೇಲರ ಕಟ್ಟೆಯ ಮೇಲೆ ಕುಳಿತುಕೊಂಡು ಒಲೇಕಾರನ ಮುಖಾಂತರ ಊರಲ್ಲೆಲ್ಲ ತೀರ್ವೆ ಕೊಡುವ ಬಗ್ಗೆ ಹೇಳಿಸಿದರು. ಆದರೆ ಯಾರೂ ಅವರೆಡೆಗೆ ಹಾಯಲೇ ಇಲ್ಲ. ಕೆಲವು ಹೊತ್ತು ಮಿಕಿಮಿಕಿ ನೋಡುತ್ತ ಕುಳಿತು ಕೊನೆಗೆ ಕೈ ಜಾಡಿಸುತ್ತ ಹೊರಟು ಹೋದರು. ಸರ್ವೆ ಎಂಬ ಹಳ್ಳಿಗೂ ನಾಲ್ಕು ಪೋಲೀಸರ ಸಹಿತವಾಗಿ ಶಾನುಭೋಗರು ಹೋಗಿದ್ದರು. ಅಲ್ಲಿ ಸಹ ಅವರನ್ನು ಯಾರೂ ಮಾತಾಡಿಸಲಿಲ್ಲ! ಬಾವಿಕೇರಿಗೆ ೧೦ ಜನ ಪೋಲೀಸರನ್ನು ಕರೆದುಕೊಂಡು ಹೋಗಿರುವರು. ಅಲ್ಲಿಯ ಸುದ್ದಿಯು ಇಷ್ಟರಲ್ಲಿಯೇ ತಿಳಿಯಬಹುದು. ಈ ಪೋಲೀಸರಿಂದ ಏನೂ ಉಪಯೋಗವಿಲ್ಲೆಂಬುದು ಕೆಲವು ಶಾನುಭೋಗರಿಗೆ ಈಗಾಗಲೇ ತಿಳಿಯಹತ್ತಿದಂತೆ ಕಾಣುತ್ತದೆ. ಶಿರೂರ ಬೆಳಸೆಗಳ ಶಾನುಭೋಗರು ತಮಗೆ ಪೋಲೀಸರ ಸಹಾಯವೇ ಬೇಡವೆಂದು ಹೇಳಿದರಂತೆ!

ಹೊಸ ನಿಯಮ

ಫೆಬ್ರುವರಿ ೧೫ ಕ್ಕೆ ಮೊದಲನೇ ಕಂತದ ಅವಧಿಯು ಮುಗಿಯುತ್ತಿದ್ದರೂ, ಪ್ರತಿವರ್ಷ ಮೂರು ದಿನಗಳ ಹೆಚ್ಚಿನ ಅವಧಿಯು ಕೊಡಲ್ಪಡುತ್ತಿತ್ತು. ಈ ವರ್ಷ ಈ ಅವಧಿಯು ತೆಗೆದು ಹಾಕಲ್ಪಟ್ಟಿದೆ.

ಬೇಗೆ ಹಬ್ಬುವದೋ?

ಪಂ. ಮೋತೀಲಾಲರ ನಿಧನದ ಬಗ್ಗೆ ದುಃಖ ಪ್ರದರ್ಶನ ಮಾಡುವದಕ್ಕಾಗಿ ಬಂಕೀಕೊಡ್ಲದಲ್ಲಿ ಕೂಡಿದ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಅಗರಗೋಣದ ಶ್ರೀ ರಾಮ ನಾಯ್ಕರು "ನಮ್ಮ ಅಂಕೋಲಾ ತಾಲೂಕಿನಂತೆ ಇಲ್ಲಿಯವರೂ ತೀರ್ವೆನಿರಾಕರಣೆಗೆ ಸಿದ್ಧರಾಗುವರೆಂದು ನನಗೆ ಭರವಸೆಯಿದೆ" ಎಂದು ಹೇಳಿದರು. ಇದರಿಂದ ಆ ಊರಲ್ಲಿಯೂ, ಸಮೀಪದ ಹಳ್ಳಿಗಳಲ್ಲಿಯೂ ಜಾಗೃತಿಯಾಗಹತ್ತಿದೆ. ಅಂತೂ ಅಂಕೋಲೆಯ ಬೇಗೆಯು ಬೇರೆಕಡೆಗಳಲ್ಲಿಯೂ ಹಬ್ಬಹತ್ತಿತು.

ಹುಕ್ಕೇರಿಯ

ಶ್ರೀ ಪಾಟೀಲ ವಕೀಲರಿಗೆ ಶಿಕ್ಷೆ

ಮ್ಯಾಜಿಸ್ಟ್ರೇಟರು ಹೊರಡಿಸಿದ ೧೪೪ ನೆಯ ಕಲಮನ್ನು ಅಮಾನ್ಯಮಾಡಿ ಬಡಕುಂದ್ರಿ ಜಾತ್ರೆಯಲ್ಲಿ ಪಿಕೆಟಿಂಗ, ಸಭೆ ಮೊದಲಾದವುಗಳನ್ನು ಜರುಗಿಸಿದ್ದಕ್ಕಾಗಿ ಹುಕ್ಕೇರಿಯ ಶ್ರೀ ಎಂ. ಪಿ. ಪಾಟೀಲ ವಕೀಲ, ಶ್ರೀನಿವಾಸರಾವ ದೇಶಪಾಂಡೆ ವಕೀಲ ಹಾಗು ಶ್ರೀ ಚನಬಸಪ್ಪ ಗಂಧಾಳ ಈ ಮೂವರಿಗೆ ಪ್ರತ್ಯೇಕವಾಗಿ ೧| ತಿಂಗಳ ಕಾರಾಗ್ರಹವಾಸದ ಶಿಕ್ಷೆಯು ದೊರೆತಿದ್ದಾಗಿದೆ.

"ಕ್ಷಮೆ ಬೇಡುವದು ದೇವರಿಗೆ, ಸರಕಾರಕ್ಕಲ್ಲ"

ಬೋರಸಾದ ತಾಲೂಕಿನ ಕಥನಾ ಎಂಬ ಹಳ್ಳಿಯಲ್ಲಿ ಮೂವರು ಹುಡುಗರು ಉಪ್ಪಿನ ಕಾಯಿದೆಭಂಗಕ್ಕಾಗಿ ಬಂಧನಕ್ಕೊಳಗಾಗಿ ಪೋಲೀಸ ಚೌಕಿಗೆ ಕರೆದೊಯ್ಯಲ್ಪಟ್ಟರು. ಅಲ್ಲಿ ಸಬ್ ಇನಸ್ಪೆಕ್ಟರರು ಅವರಿಗೆ "ಕ್ಷಮೆ ಬೇಡಿ, ಬಿಡುಗಡೆ ಹೊಂದಿರಿ" ಎಂಬುದಾಗಿ ಕೇಳಿಕೊಂಡರು. ಅವರು ಹೀಗೆ ಕೇಳಿಕೊಂಡದ್ದೇ ತಡ, ಒಬ್ಬ ಹುಡುಗನು "ಕ್ಷಮೆ ಬೇಡುವದು ದೇವರಲ್ಲಿ; ಸರಕಾರದಲ್ಲಲ್ಲ" ಎಂದು ಥಟ್ಟನೆ ಉತ್ತರ ಕೊಟ್ಟನು.

"ಒಪ್ಪಂದದ ಆಶೆಯಿಲ್ಲ ಚಳವಳಿಯು ಸಾಗಲಿಕ್ಕೇ ಬೇಕು"

ಲಂಡನದ "ನ್ಯೂಜ ಕ್ರಾನಿಕಲ್" ಪತ್ರಿಕೆಯ ಸುದ್ದಿಗಾರನು ಮಹಾತ್ಮಾ ಗಾಂಧಿಯವರನ್ನು ಕಂಡುಕೊಂಡು ಸಂಧಾನದ ಸಂಬಂಧವಾಗಿ ಅವರ ಅಭಿಪ್ರಾಯ ಕೇಳಿದಾಗ, ಮಹಾತ್ಮಾ ಗಾಂಧಿಯವರು "ಸಂಧಾನದ ಆಶೆಯೇನೂ ಕಾಣಿಸುವದಿಲ್ಲ ಕಾಯದೆ ಭಂಗ ಚಳವಳಿಯು ಸಾಗಲಿಕ್ಕೇಬೇಕು." ಎಂಬದಾಗಿ ಅವನಿಗೆ ತಿಳಿಸಿದ್ದರು. ಈ ಸಂಬಂಧವಾಗಿ ನ್ಯೂಜ ಕ್ರಾನಿಕಲ್ ಪತ್ರಿಕೆಯು ಒಂದು ಲೇಖವನ್ನು ಬರೆದು ಮಹಾತ್ಮಾ ಗಾಂಧಿಯವರನ್ನು ಕೆಳಗಿನಂತೆ ಟೀಕಿಸಿದೆ.

'ಮಹಾತ್ಮಾ ಗಾಂಧಿಯವರಿಗೆ ಈಗ ಮುಂದಿನ ಹಾದಿಯು ತೋಚದಾಗಿದೆ. ಪಂಡಿತ ಮೋತೀಲಾಲರು ಈ ಸಮಯದಲ್ಲಿ ಇರಬೇಕಾಗಿತ್ತು. ಅವರು ತಮ್ಮ ಅನುಭವವನ್ನೂ ಮುತ್ಸದ್ದಿತನವನ್ನೂ ವೆಚ್ಚಮಾಡಿ ಕಾಂಗ್ರೆಸದವರಿಗೆ ಒಳ್ಳೇ ದಾರಿ ತೋರಿಸಿ ಕೊಡುತ್ತಿದ್ದರು."

ಸತ್ಯಾಗ್ರಹ ಚಳವಳಿಯು
ಸಾಗಲಿಕ್ಕೇ ಬೇಕು

ಅಲಹಾಬಾದದಲ್ಲಿ ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣ ಮಾಡುವಾಗ ವರ್ಕಿಂಗ ಕಮಿಟಿಯ ಒರ್ವ ಸಭಾಸದರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಕೆಳಗಿನಂತೆ ಹೇಳಿದರು.

ಸಂಧಾನವಂತೂ ಆಗುವಂತಿಲ್ಲೆಂಬುದು ಈಗ ನಿಚ್ಚಳವಾಗಿ ಒಡೆದು ಕಾಣುತ್ತಿದೆ. ಆದ್ದರಿಂದ ಸತ್ಯಾಗ್ರಹ ಚಳವಳಿಯು ಎಂದಿನಂತೆಯೆ ಸಾಗಲಿಕ್ಕೇ ಬೇಕು. ಕಳೆದ ಲಡಾಯಿಗಳಲ್ಲಿ ನಮಗೆ ದೊರೆತ ಗೆಲವು ಅಷ್ಟೇನೂ ಮಹತ್ವದ್ದಿರುವದಿಲ್ಲ. ನಾವು ಇನ್ನು ಮುಂದೆ ಸಾಗಿಸುವ ಸ್ವಾತಂತ್ರ್ಯ ಸಮರವೇ ಬಹು ಮಹತ್ವದ್ದಾಗಿರುವದು.

ಹಿಂದೀಗಾಲಿಯ ಪರಿಷತ್ತನ್ನುದ್ದೇಶಿಸಿ ಅವರು ಹೀಗೆ ಹೇಳಿದರು:— ತಿಜೋರಿಯ ಕೀಲಿಕೈಯನ್ನು ಮತ್ತು ಆಳುಗಳನ್ನು ಗಂಡನು ತನ್ನ ಅಧೀನದಲ್ಲಿಟ್ಟುಕೊಂಡು ಹೆಂಡತಿಗೆ ಮನೆಯ ಆಡಳಿತೆಯನ್ನು ಒಪ್ಪಿಸಿದರೆ, ಅದರಿಂದ ಹೆಂಡತಿಗೇನೂ ನಿಜವಾದ ಸ್ವಾತಂತ್ರ್ಯ ಲಭ್ಯವಾಗುವದಿಲ್ಲ.

ಸರಕಾರಿ ಕಾವಲಗಾರನನ್ನು ಸಾಯಹೊಡೆದರು.

ರೈತರು ತಮ್ಮ ತಮ್ಮ ಹೊಲಗಳೊಳಗಿಂದ ಬೆಳೆಗಳನ್ನು ಕೊಯ್ದುಕೊಂಡು ಹೋಗದಂತೆ ನೋಡಿಕೊಳ್ಳಲು ಸರಕಾರದವರಿಂದ ನಿಯಮಿಸಲ್ಪಟ್ಟ ೮ ಜನ ಕಾವಲುಗಾರರು ಜೋಳಿಪುರದ ಬಳಿಯಲ್ಲಿ ಕಾವಲು ಮಾಡುತ್ತಿರುವಾಗ, ತಾ|| ೧೨ ನೇಯ ದಿವಸ ೪೦-೫೦ ಜನ ರೈತರು ಅವರ ಮೇಲೆ ಹಲ್ಲೆ ಮಾಡಿದರು. ಈ ಹಲ್ಲೆಯಲ್ಲಿ ಒಬ್ಬ ಕಾವಲುಗಾರನು ಕೊಲ್ಲಲ್ಪಟ್ಟಿದ್ದು, ಇಬ್ಬರಿಗೆ ಗಾಯಗಳಾಗಿವೆ.

ಕೈದಿಯು
ಪಲಾಯನ ಹೇಳಿದನು

ಅಲೀಪೂರ ಸೆಂಟ್ರಲ್ ಜೇಲಿನ ಕಂಪೌಂಡದ ಹೊರಬದಿಯಲ್ಲಿ ಕೆಲಸ ಮಾಡುತ್ತ ನಿಂತುಕೊಂಡಿದ್ದ ಒರ್ವ ಕೈದಿಯು ತಾ|| ೧೧ ನೆಯ ದಿವಸ ತನ್ನ ವೇಷವನ್ನು ಬದಲಾಯಿಸಿಕೊಂಡು ಕಾವಲಗಾರರ ಕಣ್ಣಿಗೆ ಇಂಗು ಹಚ್ಚಿ ಅಲ್ಲಿಂದ ಓಡಿ ಹೋಗಿದ್ದಾನೆ ಪೋಲೀಸರು ಅವನ ಬಗ್ಗೆ ಶೋಧ ನಡಿಸಿದ್ದಾರೆ.

ಹಿಂದುಸ್ಥಾನಕ್ಕೆ
ಇಂಗ್ಲಂಡದ ಸಹಾನುಭೂತಿ

ಹಿಂದುಸ್ಥಾನದಲ್ಲಿ ನಡೆದಿರುವ ಸ್ವಾತಂತ್ರ್ಯ ಚಳವಳಿಗೆ ಇಂಗ್ಲಂಡ ಹಾಗು ಸ್ಕಾಟಲಂಡಗಳಲ್ಲಿಯ ಜನರ ಸಹಾನುಭೂತಿಯನ್ನು ದೊರಕಿಸುವ ಉದ್ದಿಶ್ಯವಾಗಿ ಮಿ. ರೆಜಿನಾಲ್ಡ ರೆನೋಲ್ಡರವರು ಸ್ಕಾಟಲಂಡ ಹಾಗು ಇಂಗ್ಲಂಡಗಳಲ್ಲಿ ಸಂಚಾರಕ್ಕೆ ಹೊರಟು ಒಟ್ಟಿಗೆ ೧೨೦ ಸ್ಥಳಗಳಿಗೆ ಭೆಟ್ಟಿ ಕೊಟ್ಟು, ಹಿಂದುಸ್ಥಾನದ ಸ್ವಾತಂತ್ರ್ಯ ಚಳವಳಿಯ ಸಂಬಂಧವಾಗಿ ಅಲ್ಲಲ್ಲಿ ವ್ಯಾಖ್ಯಾನ ಕೊಡುವವರಿದ್ದಾರೆ. "ಫ್ರೆಂಡ್ಸ ಆಫ್ ಇಂಡಿಯಾ ಅಸೋಸಿಯೇಶನ್"ದ ಪರವಾಗಿ ಅವರು ಈ ಕಾರ್ಯ ಕೈಕೊಂಡಿದ್ದಾರೆ.

ಇಹವೃತ್ತ.

ಇಲ್ಲಿ ತಾ|| ೧೩ ನೆಯ ದಿವಸ "ರೈತರ ದಿನದ" ನಿಮಿತ್ತವಾಗಿ ಸಂಜೆಯಲ್ಲಿ ಧನಪೇಟೆ ಚೌಕಿನಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಶ್ರೀ ಮಿರ್ಜಿ ವೆಂಕಣ್ಣನವರು "ರೈತರೆಂದರೆ ರಾಷ್ಟ್ರ, ರಾಷ್ಟ್ರವೆಂದರೆ ರೈತರು ಹಾಗು ರೈತರ ಹೀನ ಸ್ಥಿತಿ" ಈ ಸಂಬಂಧವಾಗಿ ಪ್ರಕಟವಾದ ಪತ್ರಿಕೆಗಳನ್ನು ಸಭೆಯಲ್ಲಿ ಓದಿ ತೋರಿಸಿದರು. ನಂತರದಲ್ಲಿ ಶ್ರೀ ಜೋರಾಪುರ ಗುರುರಾಯರ ಭಾಷಣವಾದ ಬಳಿಕ ಸಭೆಯು ಮುಕ್ತಾಯವಾಯಿತು.

ಮಹಾತ್ಮಾ ಗಾಂಧಿಯವರ ಅಪ್ಪಣೆಯ ಮೇರೆಗೆ ತಾ|| ೧೫ ನೆಯ ದಿವಸ ಇಲ್ಲಿ ಮೋತೀಲಾಲರ ಶ್ರಾದ್ಧ ದಿವಸವು ಆಚರಿಸಲ್ಪಟ್ಟಿತು. ಮುಂಜಾನೆ ದಲಿತರಿಗೆ, ಚೌಕಿನಲ್ಲಿ ರಾಷ್ಟ್ರಧ್ವಜ ವಂದನೆಯಾಗಿ ರಾಷ್ಟ್ರಧ್ವಜದ ಆದರ್ಶಕ್ಕೆ ವಿಲ್ಲಿಸಿ ಟಿಕೆಟು ಜವಳಿ ಅಂಗಡಿ ಮೊದಲಾದ ಅಂಗಡಿಕಾರರು ತಮ್ಮ ತಮ್ಮ ಅಂಗಡಿ ಮುಚ್ಚಿ ಹರತಾಳ ಪಾಲಿಸಿದರು. ಶಿವಪ್ಪ ಪತ್ತೇಪೂರ ಇವರ ಅಂಗಡಿಯವರಾದ ಬಸಯ್ಯ ಕಾಳೇಬಾವಿಯವರು ಮಾತ್ರ ತಮ್ಮ ಜವಳಿ ಅಂಗಡಿ ತೆರೆದಿದ್ದರು. ಜನರು ಎಷ್ಟೇ ವಿನಂತಿ ಮಾಡಿಕೊಂಡರೂ ಅವರು ತಮ್ಮ ಹಟಬಿಡಲಿಲ್ಲ. ಇದನ್ನು ನೋಡಿ ಬಂದ ಗಿರಾಕಿಗಳು ಹಾಗೆಯೆ ತಿರುಗಿ ಹೋದರು. ಸಂಜೆಯಲ್ಲಿ ೫ ಗಂಟೆಗೆ ಸ್ವಯಂಸೇವಕರು ಹಾಗು ಕರಿನಿಶಾನಿಯ ಮೆರವಣಿಗೆ ಹೊರಟು ಊರಲ್ಲೆಲ್ಲ ಸುತ್ತಿ ಧನಪೇಟೆ ಚೌಕಿಗೆ ತಲಪಿತು. ಅಲ್ಲಿ ಶ್ರೀ ಜೋರಾಪುರ ಗುರುರಾಯರು ದಿವಂಗತ ಮೋತೀಲಾಲರ ಜೀವನ ಚರಿತ್ರೆಯನ್ನು ಸಂಕ್ಷೇಪದಲ್ಲಿ ವಿವರಿಸಿ, ಕೆಳಗಿನ ಪ್ರತಿಜ್ಞೆಯನ್ನು ಸಭಿಕರಿಗೆ ಓದಿ ತೋರಿಸಿ ಅದನ್ನು ಅವರಿಂದ ಉಚ್ಚರಿಸಿಸಿದರು.

"ನಮಗೆ ಅತ್ಯಂತ ಪ್ರಿಯರಾಗಿದ್ದ ದಿವಂಗತ ಪಂಡಿತ ಮೋತೀಲಾಲ ನೆಹರು ಇವರು ನಿಸ್ಸೀಮ ಸ್ವಾರ್ಥತ್ಯಾಗವನ್ನು ಮಾಡಿ ಶ್ರೇಷ್ಠ ತರದ ದೇಶಸೇವೆಯನ್ನು ಮಾಡಿದ್ದಕ್ಕಾಗಿ ನಮಗೆ ಅವರ ಕುರಿತಾಗಿ ಅತ್ಯಂತ ಆದರವೂ ಕೃತಜ್ಞತೆಯೂ ಅನಿಸುತ್ತದೆ. ಇದನ್ನು ವ್ಯಕ್ತಗೊಳಿಸುವದಕ್ಕಾಗಿ ಈ ಸಭೆಯಲ್ಲಿ ಸೇರಿದ ನಾವು ನಿರ್ಧಾರ ಮಾಡುವದೇನೆಂದರೆ, ಸಂಪೂರ್ಣ ಸ್ವರಾಜ್ಯವು ಹಿಂದುಸ್ಥಾನಕ್ಕೆ ಆದಷ್ಟು ತೀವ್ರ ದೊರೆಯ ಬೇಕೆಂಬ ಉದ್ದೇಶದಿಂದ ನಾವು ಇದುವರೆಗೆ ಮಾಡಿದ ಪ್ರಯತ್ನಕ್ಕಿಂತ ಇನ್ನೂ ಹೆಚ್ಚಿನ ಪ್ರಯತ್ನವನ್ನು ಇನ್ನು ಮೇಲೆ ಮಾಡುವೆವು. ಹಾಗೂ ಮೊದಲಿನಕಿಂತ ಹೆಚ್ಚು ಉತ್ಸಾಹದಿಂದ ರಾಷ್ಟ್ರಕಾರ್ಯವನ್ನು ಕೈಕೊಳ್ಳುವೆವು."

ಬಟ್ಟೆಯ ವ್ಯಾಪಾರಿ ಸಂಘದವರ ನಿಯಮವನ್ನನುಸರಿಸಿ ಇನ್ನು ಮುಂದೆ ನಡೆದುಕೊಳ್ಳುತ್ತೇನೆಂಬುದಾಗಿ ಶ್ರೀ ಶಿವಯ್ಯಾ ಸೊಲಬಾವಿಯವರು ಇಂದು ೧೨ ಗಂಟೆಯೊಳಗಾಗಿ ಒಪ್ಪಿಕೊಳ್ಳದಿದ್ದಲ್ಲಿ, ಅವರ ಅಂಗಡಿಯ ಮುಂದೆ ಪಿಕೆಟಿಂಗ ಪ್ರಾರಂಭವಾಗುವದಾಗಿ ತಿಳಿಯುತ್ತದೆ.

ರೇಲ್ವೆ ಚಾರ್ಜು ಹೆಚ್ಚಾಯಿತು.

ಮದ್ರಾಸ ಸದರ್ನ ಮರಾಠಾ ರೇಲ್ವೆಯು ವರು ಬರುವ ಎಪ್ರಿಲ್ ತಿಂಗಳಿಂದ ರೇಲ್ವೆ ದರವನ್ನು ಹೆಚ್ಚು ಮಾಡಿರುವರು. ಇಂಟರ ವರ್ಗಕ್ಕೆ ಪ್ರತಿಯೊಂದು ಮೈಲಿಗೆ ೬ ಪೈ ಯಂತೆ ದರವನ್ನು ಮಾಡಿರುವರು. ಮೂರನೇ ವರ್ಗದ ಮೇಲಿಗೆ ಮೊದಲಿನ ೧೦೧ ಮೈಲಿನಿಂದ ೩೦೦ ಮೈಲಿಗೆ ಮೊದಲು ೩| ಪೈ ಇದ್ದದ್ದು ಎಪ್ರಿಲ್ ದಿಂದ ೪ ಪೈ ಆಗುವದು ೩೦೧ ಮೈಲಿನಿಂದ ಮುಂದೆ ಮೊದಲು ೨|| ಪೈ ಇದ್ದದ್ದು ಈಗ ೩|| ಪೈ ಆಗುವದು. ಮೂರನೇ ವರ್ಗದ ಡಾಕ ಗಾಡಿಗಳಿಗೆ ಮೊದಲಿನ ೫೦ ಮೈಲಿನಿಂದ ೧೫೦ ಮೈಲುಗಳವರೆಗೆ ಮೊದಲು ೧ ಮೈಲಿಗೆ ೩ ಪೈ ಇದ್ದಿತು. ಇನ್ನು ಮೇಲೆ ೩|| ಪೈ ಯಾಗುವದು. ೧೫೧ ಮೈಲಿನಿಂದ ೩೦೦ ಮೈಲಿನವರೆಗೆ ಮೈಲಿಗೆ ೨|| ಪೈ ಇದ್ದದ್ದು ಇನ್ನು ಮೈಲಿಗೆ ೩ ಪೈ ಯಾಗುವದು. ೩೦೧ ಮೈಲಿನಿಂದ ಮುಂದಿನ ಮೈಲಿಗೆ ೨ ಪೈ ಇದ್ದದ್ದು ೨|| ಪೈ ಯಾಗುವದು. ಇವೆಲ್ಲ ದರಗಳು ಬರುವ ಎಪ್ರಿಲ್ ತಿಂಗಳಿಂದ ಅಮಲದಲ್ಲಿ ಬರುವವು.

ಬಾರಿಸಾಲ ಜೇಲಿನಲ್ಲಿ ಅನ್ನತ್ಯಾಗ

ಬಂಗಾಲ ಆರ್ಡಿನನ್ಸದನ್ವಯ ಬಂಧನ ಶಿಕ್ಷೆಗಾಗಿ ಬಾರಿಸಾಲ ಜೇಲನಲ್ಲಿ ಕಾಲಕಳೆಯುತ್ತಿರುವ ೧೮ ಜನ ಕೈದಿಗಳು, ಜೇಲ ಅಧಿಕಾರಿಗಳು ತಮ್ಮನ್ನು ಕೆಟ್ಟ ರೀತಿಯಿಂದ ನಡಿಸಿಕೊಳ್ಳುತ್ತಿರುವದರ ನಿಷೇಧಾರ್ಥವಾಗಿ, ೪-೫ ದಿನಗಳಿಂದ ಅನ್ನತ್ಯಾಗ ವ್ರತ ಕೈಕೊಂಡಿರುವದಾಗಿ ತಿಳಿಯುತ್ತದೆ.

ಮಂಗಳೂರದಲ್ಲಿ

೨೪ ಜನರಿಗೆ ಕೈದು

ಸೆರೆ ಸಿಂದಿ ಅಂಗಡಿಗಳ ಮುಂದೆ ನಿಂತುಕೊಂಡು ಪಿಕೆಟಿಂಗ ಮಾಡಿದ ಸಂಬಂಧವಾಗಿ ಮಂಗಳೂರದಲ್ಲಿ ತಾ|| ೧೦ ನೆಯ ದಿವಸ ೨೪ ಜನ ಸ್ವಯಂಸೇವಕರು ಕೈದು ಮಾಡಲ್ಪಟ್ಟಿದ್ದಾರೆ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಶ್ರೀ ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿನಂತಿ

ಇಂಡಿಯಾ ಪ್ರಾವ್ಹಿಡೆಂಟ ಕಂಪನಿ ಲಿ. ಕಲಕತ್ತಾ ಈ ಕಂಪನಿಯ ವಿಮೇದಾರರಲ್ಲಿ ವಿನಂತಿ:—

ಈಗ ೩-೪ ತಿಂಗಳಿಂದ ಏಜಂಟರ ಕಡಿಂದಾ ಕೆಲವು ಕಂಪನಿಗೆ ಬರೋಬರಿ ರೀತಿಯಿಂದಾ ಜಮಾ ಆಗಿಲ್ಲಾ ಅಂತಾ ಎಷ್ಟೋ ಜನರ ಕಡಿಂದಾ ತಕರಾರ ಬಂದಿದೆ, ಹೀಗೆ ತಕರಾರ ಇದ್ದವರು ನಮ್ಮ ಕಡಿಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ರಿಜಿಸ್ಟ್ರಿ ಪಾವತಿ ಸಹಿತ ಹಾಜರ ಮಾಡಿ ತಕರಾರ ನಿಕಾಲಿ ಮಾಡಿಕೊಳ್ಳಬೇಕು. ಮತ್ತು ಫೆಬ್ರುವರಿ ತಿಂಗಳು ಕಂಪನಿಯ ವಾರ್ಷಿಕ ಅಖೈರ ಇದ್ದು ತಾರೀಖು ೨೦| ರೊಳಗಾಗಿ ಹಿಂದಿನ ಬಾಕಿ ಸುದ್ಧಾ ಕಂತಿನ ಹಣವನ್ನು ಜಮಾ ಮಾಡಿಸಬೇಕು.

ಇನ್ನು ಮುಂದೆ ಪ್ರತಿತಿಂಗಳದ ಕಂತು ಆಫೀಸದಲ್ಲಿ ಅಗರ ಏಜಂಟರ ಕಡಿಗೆ ನೇರ ದಿಂದ ಕೊಟ್ಟು ಪಾವತಿ ಪಡಕೊಳ್ಳಬೇಕು. ಪಾವತಿ ಇಲ್ಲದೆ ತಕರಾರು ಮಾಡಿದರೆ ವಿಚಾರಿಸಲಿಕ್ಕಾಗದು.

ಬಾಗಲಕೋಟೆ ೨-೨-೩೧
ಪ್ಹಿ. ಜಿ. ಪರ್ವತಿ. ಚೀಫ ಏಜಂಟ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಟ್ಯಾಂಪಲ್) ಮಶಿ ಚೀಟಿಗಳು (ಪ್ರಕ್ಕಟಿ

ನೀಲಿ ಕಪ್ಪು, ಕೆಂಪು, ಜಾಂಬಳ ಮಶಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ,	೧೬-೦-೦	ರೇಲ್ವೆ ಫ್ರೀ
೫ ತೊಲಾ ಪಾಕೆಟುಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮಶಿ ½ ಔಂಸಿನ ೧೫ ಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಗ್ಯಾರಂಟಿ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್. ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶೇಷರಾಮಾಚಾರ್ಯರ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ ೦—೦—೩.

सर्वं परवशं दुःखं । सर्वमात्मवशं सुखम् ॥ —मनु.

ಕನ್ನಡಿಗ

KANNADIGA BAGALKOT. BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಮಂಗಳವಾರ ಮಿತಿ ಮಾಘ ಬಹುಳ ೩೦ ಶಕೆ ೧೮೫೨ ತಾ॥ ೧೭—೨—೩೧ [ಸಂಚಿಕೆ ೧೧೧

ಮಹಾತ್ಮಾ ಗಾಂಧಿಯವರು

ವ್ಹಾಯಿಸರಾಯರಿಗೆ ಪತ್ರ ಕಳುಹಿದರು

(ಅಲಹಾಬಾದ ತಾ॥ ೧೪)

ಡಾ. ಶಾಸ್ತ್ರಿ, ಸರ್ ಸಪ್ರೂ, ಶ್ರೀ ಜಯಕರ ಇವರು ಇವತ್ತಿನ ದಿವಸ ಮತ್ತೆ ಆನಂದ ಭವನಕ್ಕೆ ಭೆಟ್ಟಿ ಕೊಟ್ಟರು. ಅಲ್ಲಿ ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರಿಗೆ ಪತ್ರ ಬರೆಯುವದರಲ್ಲಿ ತೊಡಗಿದ್ದರು. ಪತ್ರ ಬರೆಯುವ ಕಾರ್ಯವು ತೀರಿದ ಬಳಿಕ ಅವರು ಅದನ್ನು ನೋಡಿಕೊಂಡು ಹೊರಟು ಹೋದರು. ಈ ಪತ್ರದಲ್ಲಿ ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರಿಗೆ "ನಿಮಗೆ ಭೆಟ್ಟಿಯಾಗಿ ನಿಮ್ಮೊಡನೆ ಸದ್ಯದಸ್ಥಿತಿಯ ಬಗ್ಗೆ ವಿಚಾರ ಮಾತಾಡಬೇಕೆನ್ನುತ್ತೇನೆ" ಎಂಬುದಾಗಿ ತಿಳಿಸಿದ್ದಾರೆ. ವ್ಹಾಯಿಸರಾಯರಿಂದ ಉತ್ತರ ಬಂದ ಬಳಿಕ ಮಹಾತ್ಮರು ದಿಲ್ಲಿಗೆ ಹೋಗುವರು. ಮಹಾತ್ಮರು ತಮ್ಮ ಪತ್ರವನ್ನು ರಥ ಜಹವ್ರದ ಕಡವಾಯಿಯವರ ಕೈಯಲ್ಲಿ ಕೊಟ್ಟಿದ್ದು ಅವರು ಇವತ್ತಿನ ದಿವಸ ದಿಲ್ಲಿಗೆ ಹೋಗಿ, ಅದನ್ನು ವ್ಹಾಯಿಸರಾಯರಿಗೆ ಮುಟ್ಟಿಸತಕ್ಕವರಿದ್ದಾರೆ. ತಮ್ಮನ್ನು ಭೆಟ್ಟಿಯಾಗಲು ವ್ಹಾಯಿಸರಾಯರು ಅಪ್ಪಣೆ ಕೊಟ್ಟಲ್ಲಿ, ಮಹಾತ್ಮರು ಅವರನ್ನು ಬಹುಶಃ ಮಂಗಳವಾರ ಇಲ್ಲವೆ ಬುಧವಾರ ಕಂಡುಕೊಳ್ಳಬಹುದು.

ಸರ್ ಸಪ್ರೂ ಹಾಗು ಶ್ರೀ ಜಯಕರ ಇವರು ವ್ಹಾಯಿಸರಾಯರ ಪ್ರೈವ್ಹೇಟ ಸೆಕ್ರೆಟರಿಯವರಿಗೆ ತಂತಿ ಕಳಿಸಿ, ಸೋಮವಾರ ದಿವಸ ವ್ಹಾಯಿಸರಾಯರನ್ನು ಭೆಟ್ಟಿಯಾಗುವೆವೆಂದು ತಿಳಿಸಿದ್ದಾರೆ.

ಡಾ. ಶಾಸ್ತ್ರಿ, ಸರ್ ಪುರುಷೋತ್ತಮದಾಸ ಠಾಕೂರದಾಸ, ಭೋಪಾಲ ನವಾಬ ಹಾಗು ಬಿಕಾನೇರ ಮಹಾರಾಜರು ಇವರೂ ದಿಲ್ಲಿಗೆ ಹೋಗಿದ್ದಾರೆ.

ಪೋಲೀಸರ ಅತ್ಯಾಚಾರದ ಸಂಬಂಧವಾಗಿ ವಿಚಾರಣೆ ಮಾಡಲು ಒಂದು ಅಂತರರಾಷ್ಟ್ರೀಯ ಮಂಡಳವನ್ನು ನಿಯಮಿಸಬೇಕಾಗಿಯೂ, ಆ ಮಂಡಳದಲ್ಲಿ ಭಾರತೀಯರಾಗಲಿ ಇಲ್ಲವೆ ಬ್ರಿಟಿಶರಾಗಲಿ ಯಾರೂ ಇರಕೂಡದಾಗಿಯೂ ಅಮೇರಿಕೆಯ ಪತ್ರಿಕಾಕರ್ತರಾದ ಮಿ. ಎಡ್ವರ್ಡ ಹಾಲ್ಟನ್ ಜೇಮ್ಸರವರು ಸೂಚಿಸಿದ್ದಾರೆ. ಇವರ ಸೂಚನೆಗೆ ಕೆಲವು ಜನ ಕಾಂಗ್ರೆಸ್ ಮುಖಂಡರೂ ತಮ್ಮ ಸಮ್ಮತಿ ಕೋರಿದ್ದಾರೆ.

ಸ್ವರಾಜ್ಯ ಭವನದ ಸಂಬಂಧವಾಗಿ ವಿಚಾರಮಾಡಲು ವರ್ಕಿಂಗ ಕಮಿಟಿಯವರಿಂದ ನಿಯಮಿಸಲ್ಪಟ್ಟ ಸರದಾರ ವಲ್ಲಭಭಾಯಿ ಶ್ರೀ ಸಿ. ರಾಜಗೋಪಾಲಾಚಾರ್ಯ, ಹಾಗು ಸೇಟ ಜಮನಾಲಾಲ ಬಜಾಜರು ಆ ಬಗ್ಗೆ ವಿಚಾರ ಮಾಡಿ ಕೆಳಗಿನಂತೆ ಶಿಫಾರಸು ಮಾಡಿದ್ದಾರೆ.

ಶ್ರೀ ಸಿ. ರಾಜಗೋಪಾಲಾಚಾರ್ಯ, ಡಾ. ಅನಸಾರಿ, ಸೇಟ ಜಮನಾಲಾಲಬಜಾಜ ಹಾಗು ಪಂಡಿತ ಜವಾಹಿರಲಾಲ ನೆಹರು ಈ ನಾಲ್ವರನ್ನು ಟ್ರಸ್ಟಿಗಳನ್ನಾಗಿ ಮಾಡಿ, ಸ್ವರಾಜ್ಯ ಭವನದ ಆಡಳಿತವನ್ನು ಅವರ ಕಡೆಗೆ ಒಪ್ಪಿಸಬೇಕು.

ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿಯ ಜನರಲ್ ಸೆಕ್ರೆಟರಿಯವರು ತಾ॥ ೧೪ ನೆಯ ದಿವಸ ಕೆಳಗಿನಂತೆ ಪ್ರಸಿದ್ಧಪಡಿಸಿದ್ದಾರೆ,

ಕಾಂಗ್ರೆಸ್ ವರ್ಕಿಂಗ ಕಮೀಟಿಯವರು ಇಂದು ಮುಂಜಾನೆ ಪಂಡಿತ ಜವಾಹಿರಲಾಲರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಸೇರಿ ಕೆಳಗಿನ ಠರಾವನ್ನು ಗೊತ್ತುಮಾಡಿಕೊಂಡರು.

"ಮಹಾತ್ಮಾ ಗಾಂಧಿಯವರ ವಿನಂತಿಯ ಮೇರೆಗೆ ವರ್ಕಿಂಗ ಕಮೀಟಿಯು ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ತನ್ನ ಕೊನೆಯ ನಿರ್ಣಯವನ್ನು ಈಗಲೆ ಕೊಡದೆ, ವರ್ಕಿಂಗ ಕಮೀಟಿಯ ಸಭೆಯನ್ನು ಮುಂದರಿಸುತ್ತದೆ. ಮತ್ತು ತಾ॥ ೧ ನೆಯ ಫೆಬ್ರುವರಿ ದಿವಸ ಕೂಡಿದ ವರ್ಕಿಂಗ ಕಮೀಟಿಯಲ್ಲಿ ಗೊತ್ತಾದ ನಿರ್ಣಯಗಳ ಪ್ರಕಾರ ಚಳವಳಿಯು ಅವ್ಯಾಹತವಾಗಿ ಸಾಗಬೇಕೆಂದು ಗೊತ್ತುಪಡಿಸುತ್ತದೆ."

ಬೆಳಗಾವಿಯಲ್ಲಿ ೧೦ ಜನ ಹೆಂಗಸರಿಗೆ ಶಿಕ್ಷೆ

ಬೆಳಗಾವಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯನ್ನು ಅಮಾನ್ಯಮಾಡಿ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ ಬೆಳಗಾವಿಯಲ್ಲಿ ವಿಚಾರಣೆಗೆ ಗುರಿ ಮಾಡಲ್ಪಟ್ಟ ೧೦ ಜನ ಸ್ತ್ರೀಯರ ಖಟ್ಲೆಯ ವಿಚಾರಣೆಯು ತಾ|| ೧೪ ನೆಯ ದಿವಸ ಮುಗಿದು ಅಂದು ತೀರ್ಪು ಹೇಳಲ್ಪಟ್ಟಿತು. ಮ್ಯಾಜಿಸ್ಟ್ರೇಟರು ೧೦ ಜನರಿಗೆ ಪ್ರತ್ಯೇಕವಾಗಿ ೧೦೦ ರು. ದಂಡ, ಇಲ್ಲವೆ ೪ ತಿಂಗಳ ಕಠಿಣ ಕಾರಾಗೃಹವಾಸ ಹೀಗೆ ಶಿಕ್ಷೆ ವಿಧಿಸಿ, ಉಳಿದ ೮ ಜನರನ್ನು ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟರು. ಶಿಕ್ಷೆಗೊಳಗಾದವರನ್ನೆಲ್ಲ "ಕ" ವರ್ಗದಲ್ಲಿ ಇರಿಸಿದ್ದಾರೆ. ದಂಡದ ಹಣ ತುಂಬಲು ೪ ದಿನಗಳ ಅವಧಿಯು ಕೊಡಲ್ಪಟ್ಟಿದೆ.

ಪಂಚಾಯತಿಗಳ ಬಗ್ಗೆ

ಸರಕಾರದ ಸವತಿ—ಮತ್ಸರ !!

ಅಂಕೋಲಾ ತಾಲೂಕಿನಲ್ಲಿ ಜನರು ಸರಕಾರೀ ಕೋರ್ಟುಗಳ ಸಹಾಯವನ್ನು ಬಯಸದೆ ತಮ್ಮ ತಮ್ಮೊಳಗೆ ವ್ಯಾಜ್ಯಗಳನ್ನು ತೀರಿಸುವ ಉಪಕ್ರಮ ನಡಿಸಿದ್ದರಿಂದ ಸರಕಾರೀ ಅಧಿಕಾರಿಗಳ ಹೊಟ್ಟೆಯಲ್ಲಿ ಹೇಗೆ ಹೇಗೋ ಆಗಹತ್ತಿರುವಂತೆ ತೋರುತ್ತದೆ! ಈ ವಿಷಯವಾಗಿ ಕಾರವಾರ ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಡಿಸಿರುವ ನೋಟೀಸನ್ನು ನೋಡಿದರೆ ಅವರ ಅಂತಃಕರಣವು ಗೊತ್ತಾಗುವದು. ಅದನ್ನು ಇದ್ದಕ್ಕಿದ್ದ ಹಾಗೆ ಈ ಕೆಳಗೆ ಕೊಡಲಾಗಿದೆ.

"ನೋಟೀಸು"

ಅಂಕೋಲಾ ತಾಲೂಕಿನ ಕೆಲವು ಗ್ರಾಮಗಳಲ್ಲಿ ಕೆಲಕೆಲವು ಜನರು ತಮ್ಮ ತಮ್ಮೊಳಗೆ ಒಂದು ಕಮಿಟಿ ಎಂತ ಮಾಡಿಕೊಂಡು ಅದಕ್ಕೆ ಪಂಚಾಯತ ಕೋರ್ಟ ಎಂತ ಹೆಸರನ್ನು ಇಟ್ಟುಕೊಂಡು, ದಾವಾ ಫಿರ್ಯಾದಿ ದಾಖಲು ಮಾಡಿಕೊಂಡು, ಡಿಕ್ರೀ ಮಾಡುತ್ತೇವಾಗಿ ಹೇಳುವದು ಮೆ|| ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾ|ಬಾ| ಕಾನಡಾ ಇವರ ನಜರಿಗೆ ಬಂದಿರುತ್ತದೆ.

ಕಾರಣ ಮೆ|| ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾ| ಬಾ| ರವರು ಯಾವತ್ತು ಜನರಿಗೆ ತಿಳಿಸುವದೇನಂದರೆ

ಇಂಥ ಪಂಚಾಯತ ಕಮಿಟಿ ಸರಕಾರದಿಂದ ನೇಮಿಸಿದ್ದು ಅಲ್ಲ ಮತ್ತು ಅಂಥ ಕಮಿಟಿಗೆ ಪಕ್ಷಗಾರನಾತನಿಂದ ಆಗಲೀ ಸಾಕ್ಷೀದಾರನಾತನಿಂದಾಗಲೀ ತನ್ನ ಮುಂದೆ ಹಾಜರಾಗಲಿಕ್ಕೆ ಸಮನ್ಸ ಮಾಡಲಿಕ್ಕೆ ಆ ಕಮಿಟಿಯವರಿಗೆ ಅಧಿಕಾರವಿಲ್ಲ. ಉಭಯ ಪಕ್ಷಗಾರರು ಖಾವಾಗಿ ತಮ್ಮ ತಮ್ಮೊಳಗಿನ ವ್ಯಾಜ್ಯ ನಿಕಾಲಿ ಮಾಡಿಕೊಂಡ ಕಾಗದ ಹೊರತು ಅವರಿಗೆ ತೀರ್ಪು ಮಾಡಲಿಕ್ಕೆ ಅಧಿಕಾರವಿಲ್ಲ. ಇಂಥ ಪಂಚಾಯತ ಕಮಿಟಿಯಿಂದ ಸಮನ್ಸ ಬಂದಲ್ಲಿ ಜನರು ಅದನ್ನು ತಿರಸ್ಕರಿಸಬೇಕು. ಲೇಖಿ ಬಂದಲ್ಲಿ ಅದನ್ನು ಮಾಮಲೇದಾರರ ಕಡೆಗೆ ಒಪ್ಪಿಸಬೇಕು. ಇಂಥ ಪಂಚಾಯತ ಕಮಿಟಿ ಮಾಡಿದ ತೀರ್ಪಿಗೆ ಯಾರೂ ಲಕ್ಷ ಕೊಡಬಾರದು. ಸಿವ್ಹಿಲ್ ಕೋರ್ಟ ಡಿಕ್ರಿ ಎನ್ಫೋರ್ಸ ಮಾಡುವವರೂ ತಮ್ಮ ಪಂಚಾಯತ ಕೋರ್ಟಿನ ಡಿಕ್ರಿ ಅಮಲಬಜಾವಣಿಯಲ್ಲಿ ತರಲಿಕ್ಕೆ ಪ್ರಯತ್ನ ಮಾಡುವವರು ಖಟ್ಲೆಗೆ ಪಾತ್ರರಾದಾರು.

ಕಾರವಾರ
೨೨-೧-೧೯೪೧

(ಸಹಿ) ಎಫ್. ಡಿ. ಭಾಸ್ಕಂವಿಲೆ

ರಾಷ್ಟ್ರಧ್ವಜ ನೋಡಿ

ಮಾಮಲೇದಾರರು ರೇಗಿದ್ದರು

ಕಾರವಾರದ ಮಾಮಲೇದಾರರು ಮೊನ್ನಿನ ದಿವಸ ಹಟಗಾ ಎಂಬ ಹಳ್ಳಿಗೆ ಹೋಗಿ ಅಲ್ಲಿ ಒಂದು ಮನೆಯಲ್ಲಿ ಇಳಿದುಕೊಂಡರು. ಆ ಮನೆಯಲ್ಲಿ ಮೊದಲು ಚರಖಾ ಸಂಘವಿತ್ತು. ಆಗ ಕಟ್ಟಡದ ಮೇಲೆ ಒಂದು ರಾಷ್ಟ್ರಧ್ವಜ ನಿಲ್ಲಿಸಿದ್ದರು. ಅದು ಇನ್ನೂ ಹಾಗೆಯೇ ಇತ್ತು. ಮಾಮಲೇದಾರರು ಅದನ್ನು ನೋಡಿ ರೇಗಿದ್ದು, ಒಮ್ಮೆಲೆ ಅದನ್ನು ಕೆಳಕ್ಕಿಳಿಸಿದರು. ಅಲ್ಲಿ ನೆರೆದ ಜನರು ರಾಷ್ಟ್ರಧ್ವಜಕ್ಕಾದ ಅಪಮಾನವನ್ನು ಸಹಿಸಲಾರದೆ ಆಗಿಂದಾಗ್ಗೆ ತಿರುಗಿ ಅದನ್ನು ಆ ಕಟ್ಟಡದ ಮೇಲೆ ನಿಲ್ಲಿಸಿದರು. ಮಾಮಲೇದಾರರು ಮಿಕಿ ಮಿಕಿ ನೋಡುತ್ತ ಕುಳಿತುಕೊಂಡರು. ಹಳ್ಳಿಗರ ಎದೆಗಾರಿಕೆಯನ್ನು ನೋಡಿ ಇನ್ನೆಯವರು ಇಷ್ಟು ನಾಚಬೇಕು.

ಹುಬ್ಬಳ್ಳಿಯಲ್ಲಿ ಸರ್ವಾಧಿಕಾರಿಗಳು ಅಧಿಕಾರಿಗಳ ಅಪ್ಪಣೆ ಮುರಿದರು

(ಸ್ವಂತ ಸುದ್ದಿಗಾರರಿಂದ)

ಇಲ್ಲಿಯ ಅಧಿಕಾರಿಗಳು, ಈಗ ಮೂರು ತಿಂಗಳ ಹಿಂದೆ ಸಾರ್ವಜನಿಕ ಬೀದಿಗಳಲ್ಲಿ ಯಾರೂ ವ್ಯಾಖ್ಯಾನ ಮಾಡಬಾರದೆಂದು ಪ್ರಕಟಪಡಿಸಿದ್ದರು. ಈ ಅಪ್ಪಣೆಯನ್ನು ಮುರಿಯುವ ಉದ್ದೇಶದಿಂದ ಕಾಂಗ್ರೆಸ್ ಅಧಿಕಾರಿಗಳು ತಾ|| ೧೧ನೆಯ ದಿವಸ ರಾತ್ರಿ ೯|| ಗಂಟೆಗೆ ನೆಹರೂ ಚೌಕಿನಲ್ಲಿ ವ್ಯಾಖ್ಯಾನವನ್ನೇರ್ಪಡಿಸಿದ್ದರು. ಅದರಂತೆ ಚಾವಡಿಯಲ್ಲಿ ೯ ಗಂಟೆಗೆ ಪೋಲೀಸರ ಹಾಜರಿ ನಡೆದ ವೇಳೆಯಲ್ಲಿ ಇಲ್ಲಿಯ ಸರ್ವಾಧಿಕಾರಿಗಳು ನೂರಾರು ಜನರ ಮುಂದೆ ೧೦ ನಿಮಿಷ ವ್ಯಾಖ್ಯಾನ ಮಾಡಿದರು. ಅಷ್ಟರಲ್ಲಿಯೇ ಫೌಜದಾರರು ಅಲ್ಲಿಗೆ ಬಂದರು. ಸರ್ವಾಧಿಕಾರಿಗಳು ವ್ಯಾಖ್ಯಾನ ಮುಗಿಯಿತೆಂದು ಹೇಳಿದರು. ಫೌಜದಾರರು ಅವರನ್ನು ತಮ್ಮ ಸಂಗಡ ಕರೆದುಕೊಂಡು ಹೋಗಿ ಅವರ ಹೆಸರನ್ನು ಬರೆದುಕೊಂಡು ಬಿಟ್ಟುಕೊಟ್ಟರು.

ಇಳಕಲ್ಲಿನಲ್ಲಿ ಪಂಡಿತ ಮೋತೀಲಾಲರ ಶ್ರಾದ್ಧದಿನ

(ಸ್ವಂತ ಸುದ್ದಿಗಾರರಿಂದ)

ಇಳಕಲ್ಲ ನಿವಾಸಿಗಳು ಮಹಾತ್ಮರ ಆಜ್ಞೆಯ ಮೇರೆಗೆ ತಾ|| ೬ನೆಯ ದಿವಸ ಪಂಡಿತ ಮೋತೀಲಾಲರ ಶ್ರಾದ್ಧ ದಿನವನ್ನು ಆಚರಿಸಿದರು. ಸಾಯಂಕಾಲ ಬನಶಂಕರಿ ದೇವಾಲಯದಲ್ಲಿ ಮಂಗಳೂರ ಗೋವರ್ಧನರಾಯರು ಸ್ವಲ್ಪ ಪ್ರಸ್ತಾವಿಕ ಭಾಷಣ ಮಾಡಿ ಮಹಾತ್ಮರು ಹೇಳಿದ ನಿರ್ಣಯವನ್ನೂ ಪ್ರತಿಜ್ಞೆಯನ್ನೂ ಸಭೆಯ ಮುಂದಿಟ್ಟು ಅವಕ್ಕೆ ಎಲ್ಲರ ಸಮ್ಮತಿ ಪಡೆದರು.

ಗದುಗಿನ ಸಿದ್ರಾಮಪ್ಪ ಎಂಬಾತ ತನ್ನ ಮಗನ ಲಗ್ನದ ಹಂದರದ ಸಮಾ... ಅಂಗಡಿಯಿಂದ ಖಾದಿಯನ್ನು ಗೊತ್ತು ಕೊಂಡಿದ್ದರಿಂದಾಗಿ ಮೊನ್ನಿನ ಕಂ... ಬಹಿಷ್ಕಾರ ಸುದ್ದಿ ಪತ್ರದಲ್ಲಿ ಪ್ರಕಟವಾದದ್ದು ನಿಜವಿರುವದಿಲ್ಲ ... ಅವರು ತಮ್ಮ ಅಂಗಡಿಯಿಂದ ಯಾವ ಬಟ್ಟೆ ... ತೆಗೆದುಕೊಂಡು ಹೋಗಿಲ್ಲ ಎಂಬುದಾಗಿ ... ಅಂಗಡಿ ನವರು ತಿಳಿಸುತ್ತಾರೆ.

ವ್ಹಾಯಿಸರಾಯರು

ಮಹಾತ್ಮರನ್ನು ಭೆಟ್ಟಿಗೆ ಕರೆಕಳುಹಿದರು

(ತಂತಿಯ ವಾರ್ತೆ ತಾ || ೧೬)

ಮಂಗಳವಾರ ಇಲ್ಲವೆ ಬುಧವಾರ ದಿವಸ ಬಂದು ತಮಗೆ ಭೆಟ್ಟಿಯಾಗಬೇಕೆಂದು ವ್ಹಾಯಿಸರಾಯರು ಮಹಾತ್ಮಾ ಗಾಂಧಿಯವರಿಗೆ ತಿಳಿಸಿದ್ದರಿಂದ, ಮಹಾತ್ಮಾ ಗಾಂಧಿಯವರು ಈ ದಿವಸ ರಾತ್ರಿಯಾಗಲಿ ಇಲ್ಲವೆ ನಾಳೆಗಾಗಲಿ ದಿಲ್ಲಿಗೆ ಹೋಗತಕ್ಕವರಿದ್ದಾರೆ.

ಸರ್ ಸಪ್ರೂ, ನಾ. ಶಾಸ್ತ್ರಿ, ಶ್ರೀ ಜಯಕರ ಇವರು ಇವತ್ತಿನ ದಿವಸ ಮಧ್ಯಾನ್ಹದಲ್ಲಿ ವ್ಹಾಯಿಸರಾಯರನ್ನು ಕಂಡುಕೊಳ್ಳುವವರಿದ್ದರು

ಮಹಾತ್ಮಾ ಗಾಂಧಿಯವರು ತಮ್ಮ ಪತ್ರದಲ್ಲಿ, ಭೆಟ್ಟಿಯ ಸಂಬಂಧವಾಗಿ ಯಾವ ಕರಾರುಗಳನ್ನು ಹಾಕದೆ ಪ್ರಾಂಜಲ ಮನಸಿನಿಂದ ಚರ್ಚೆ ಮಾಡಬೇಕೆಂಬುದಾಗಿ ವ್ಹಾಯಿಸರಾಯರಿಗೆ ಕೇಳಿಕೊಂಡಿರುವರಾಗಿ ತಿಳಿದು ಬರುತ್ತದೆ.

ಡಾ ಹರ್ಡೀಕರರು ಮುಂಬಯಿಗೆ ಬರುವರು

(ತಂತಿಯ ವಾರ್ತೆ ತಾ|| ೧೯)

ವರ್ಕಿಂಗ ಕಮಿಟಿಯ ಸಭೆಗಾಗಿ ಅಲಹಾಬಾದಕ್ಕೆ ತೆರಳಿದ ಕರ್ನಾಟಕ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಕರ್ಮವೀರ ದಿವಾಕರರು ಹಾಗು ಹಿಂದುಸ್ಥಾನೀ ಸೇವಾದಲದ ಸಂಸ್ಥಾಪಕರಾದ ಡಾ ಹರ್ಡೀಕರರು ನಾಳಿನ ದಿವಸ ಅಲಹಾಬಾದದಿಂದ ಇಲ್ಲಿಗೆ ಬರತಕ್ಕವರಿದ್ದಾರೆ.

ಬನಾರಸದಲ್ಲಿ ಶಾಂತತೆಯುಂಟಾಯಿತು.

(ತಂತಿಯವಾರ್ತೆ ತಾ|| ೧೬)

ಪಂಡಿತ ಮಾಲವೀಯರು ಇವತ್ತಿನ ದಿವಸ ಬನಾರಸಕ್ಕೆ ತಲುಪಿ, ಪಟ್ಟಣದಲ್ಲಿ ಶಾಂತತೆಯನ್ನು ನೆಲೆಗೊಳಿಸಲು ಪ್ರಯತ್ನಿಸಿದರು. ಅವರ ಈ ಪ್ರಯತ್ನದ ಮೂಲಕವಾಗಿ ಈಗ ಬಹುಮಟ್ಟಿಗೆ ಎಲ್ಲಿ ನೋಡಿದಲ್ಲಿಯೂ ಶಾಂತತೆಯುಂಟಾಗಿದೆ. ಮತ್ತೆ ಎಲ್ಲಿಯೂ ದಂಗೆಯು ಸಂಭವಿಸಿಲ್ಲ.

ಟಪಾಲ ಚೀಲವನ್ನು ಅಪಹರಿಸಿದರು

ಪೋಷ್ಟಲ್ ಒಫೀಸಿಯ ದರವಾದ ಖೈರಾತಅಲ್ಲಿಯವರು ಪಲೀಪುರದ ಬದಾಮಿ ಬೀದಿಯಲ್ಲಿ ಟಪಾಲ ಚೀಲದೊಡನೆ ಹೋಗುತ್ತಿರುವಾಗ ಮೂವರು ಅವರ ಮೇಲೆ ಹಲ್ಲೆ ಮಾಡಿ ಟಪಾಲ ಚೀಲವನ್ನು ಅಪಹರಿಸಿಕೊಂಡು ಹೋದರು. ಆ ಚೀಲದಲ್ಲಿ ೧೩೦೫ ರುಪಾಯಿಗಳು ಇದ್ದವು. ಅವರು ಬದಾಮಿ ಬೀದಿಗೆ ಬಂದ ಕೂಡಲೆ ಒಬ್ಬನು ಹಿಂದಿನಿಂದ ಬಂದು ಅವರ ಕುತ್ತಿಗೆಯನ್ನು ಹಿಡಿದನು. ಮತ್ತು ಇಬ್ಬರು ಅವರನ್ನು ನೆಲದ ಮೇಲೆ ಕೆಡವಿ ಟಪಾಲ ಚೀಲವನ್ನು ಅಪಹರಿಸಿದರು. ಬಳಿಕ ಆ ಮೂವರೂ ಒಂದು ಟ್ಯಾಕ್ಸಿ ಗಾಡಿಯಲ್ಲಿ ಕುಳಿತು ಪಾರಾಗಿ ಹೋದರು ಪೋಲೀಸರು ಈಗ ಟ್ಯಾಕ್ಸಿಗಾಡಿಯವನನ್ನು ಸೆರೆ ಹಿಡಿದಿದ್ದು, ಅಪರಾಧಿಗಳ ಬಗ್ಗೆ ಶೋಧ ನಡಿಸಿದಾರೆ

ಭಗತಸಿಂಗರ ಜೀವವುಳಿಸಲು

ಪಂ. ಮಾಲವೀಯವರು ಕೇಳಿಕೊಂಡರು

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಪಾತ್ರರಾದ ಶ್ರೀ ಭಗತಸಿಂಗ ಹಾಗು ರಾಜಗುರು ಇವರ ಗಲ್ಲಿನ ಶಿಕ್ಷೆಯನ್ನು ಕರಿನೀರಿನ ಶಿಕ್ಷೆಗೆ ಕಡಿಮೆ ಮಾಡಲು, ಪಂಡಿತ ಮಾಲವೀಯವರು ವ್ಹಾಯಿಸರಾಯರಿಗೆ ತಾರಿನಿಂದ ಬಿನ್ನವಿಸಿಕೊಂಡಿದ್ದಾರಾಗಿ ತಿಳಿಯುತ್ತದೆ.

ಬನಾರಸದಲ್ಲಿ ದಂಗೆ

ಇಬ್ಬರಿಗೆ ಮರಣ ೨೭ ಜನರಿಗೆ ಗಾಯ

ಪರದೇಶಿ ಅರಿವೆಯ ವ್ಯಾಪಾರಿಯಾದ ನ ಪದ್ಮ ದ ಜಾನಬಾನ ಬಗ ರವರನ್ನು ಗುಂಡಿನಿಂದ ಸಾಯ ಹೊಡೆದ ಸಂಬಂಧವಾಗಿ ಬನಾರಸದಲ್ಲಿ ಸಂಭವಿಸಿದ ದಂಗೆಯಲ್ಲಿ ಈ ವರೆಗೆ ಇಬ್ಬರು ಮರಣ ಹೊಂದಿದ್ದು, ೨೭ ಜನರಿಗೆ ಗಾಯಗಳಾಗಿವೆ

ತ್ರಾವಣಕೋರ ಸಂಗ ಚಳವಳಿಗೆ ಸುರನಾಡು ದಂಡನಿಂದ ೯. ವರೆಗೆ ನಾಲ್ಕು ಜಿಲ್ಲೆಯಲ್ಲಿ ಸತ್ಯಾಗ್ರಹ ಸಂಬಂಧವಾಗಿ ಒಟ್ಟಿಗೆ ೨೭೦ ಜನರಿಗೆ ಶಿಕ್ಷೆಯಾಗಿದೆಯೆಂದು ತಿಳಿಯುತ್ತದೆ.

ಸರಕಾರಿ ಅಧಿಕಾರಿಯು ರಾಜೀನಾಮೆ ಕೊಟ್ಟನು

ಜಾಮನಪುರದ ಗೌತರಾದ ಶ್ರೀ ವಿಠಾಬಾಯಿ ಪಟೇಲರ, ಬೋರಸಾದದಲ್ಲಿಯ ಪೋಲೀಸರ ಅತ್ಯಾಚಾರವನ್ನು ನಿಷೇಧಿಸಿ ತಮ್ಮ ಗಾಡಿಕೆಗೆ ರಾಜೀನಾಮೆ ಕೊಟ್ಟಿದ್ದಾರೆ.

ಕರನಿರಾಕರಣೆಯು ಕಾಯಿದೆಗೆ ವಿರುದ್ಧವಾಗಿರುವದಿಲ್ಲ.

ಸರ್ ಜಾನ್ ಫೋರ್ಟೆಸ್ಕ್ಯೂ ಎಂಬುವರು ಮುಂಬಯಿಯ "ಕ್ರಾನಿಕಲ್" ಪತ್ರಿಕೆಯಲ್ಲಿ 'ಕರನಿರಾಕರಣೆಯು ಕಾಯದೆಗೆ ವಿರುದ್ಧವಾಗಿರುವದಿಲ್ಲ" ಎಂಬುದರ ವಿಷಯವಾಗಿ ಒಂದು ವಿಸ್ತಾರವಾದ ಲೇಖವನ್ನು ಬರೆದಿದ್ದಾರೆ. ಅದರ ಮತಿತಾರ್ಥವೆಂದರೆ—

ಸಂಪು ನಿರ್ಮಿಸುವದು ಕಾಯದೆಗೆ ವಿರುದ್ಧವಾಗಿರದಿದ್ದರೆ, ಸರಕಾರಕ್ಕೆ ಸಲ್ಲತಕ್ಕ ಕಂದಾಯವನ್ನು ನಿಲ್ಲಿಸುವದೂ ಕಾಯದೆಗೆ ವಿರುದ್ಧವಾಗಿರುವದಿಲ್ಲ. ನನ್ನನ್ನು ಮತ್ತು ನನ್ನ ಕಡೆಯವರನ್ನು ವಿನಾಕಾರಣವಾಗಿ ನಷ್ಟಕ್ಕೆ ಗುರಿಮಾಡುತ್ತಿರುವ ಸರಕಾರಕ್ಕೆ ತನ್ನ ಕಾರಭಾರವನ್ನು ಸಾಗಿಸಿಕೊಂಡು ಹೋಗಲು, ನನ್ನ ಪರಿಶ್ರಮಪೂರ್ವಕ ಗಳಿಕೆಯನ್ನು ನಾನೇಕೆ ಸಲ್ಲಿಸಬೇಕ ?

ಮುಂಬಯಿಯ ಗವ್ಹರ್ನರರೂ ದಿಲ್ಲಿಗೆ ಹೋದರು

ವ್ಹಾಯಿಸರಾಯರು ಕೂಡಲೆ ದಿಲ್ಲಿಗೆ ಹೊರಟು ಬರಲು ಕೇಳಿಕೊಂಡಿದ್ದರಿಂದ, ಮುಂಬಯಿ ಗವ್ಹರ್ನರರು ಮೊನ್ನೆ ಶನಿವಾರ ದಿವಸ ದಿಲ್ಲಿಗೆ ಹೊರಟು ಹೋದರಾಗಿಯೂ ಮಹಾತ್ಮಾ ಗಾಂಧಿಯವರನ್ನು ಕಂಡು ಕೊಳ್ಳುವದಕ್ಕಿಂತ ಪೂರ್ವದಲ್ಲಿ ವ್ಹಾಯಿಸರಾಯರು ಅವರನ್ನು ಕಂಡುಕೊಂಡು ಎರಡನೆ ಚರ್ಚೆ ಮಾಡ ಬೇಕೆಂದಿದ್ದಾರಾಗಿಯೂ ತಿಳಿಯುತ್ತದೆ.

ಕರ್ನಾಟಕದ ಕಾಂಗ್ರೆಸ್ ಕಮಿಟಿಯ ಪದಾಧಿಕಾರಿಗಳು ... ಶಿಬಿರಾವ ... ಇಂಪ್ರಿ ... ತ್ರಿ ... ಅವರೆಂದು ... ಅನ್ವಯ ... ವಾಗಿ ... ವರ್ಷದ ಶಿಕ್ಷೆಯಾಗಿದೆ.

ಆಲೀಬಾಗದಲ್ಲಿ
೬೦ ಜನರನ್ನು ಹಿಡಿದರು

ತಾ|| ೧೨ನೆಯ ದಿವಸ ಕಲೆಕ್ಟರ ಕಚೇರಿಯಲ್ಲಿ ಕುಲಾಬಾ ಜಿಲ್ಹೆಯಲ್ಲಿಯ ಸಿಂದೀ ಅಂಗಡಿಗಳ ಲಿಲಾವು ನಡೆಯಿತು ಕಾಂಗ್ರೆಸ ಅಧಿಕಾರಿಗಳು ಪಿಕೆಟಿಂಗ ಮಾಡುವರೆಂದು ತಿಳಿದುಕೊಂಡು ಮ್ಯಾಜಿಸ್ಟ್ರೇಟರು ಪೋಲೀಸ ಕಾಯದೆಯ ಅನ್ವಯ ನೋಟೀಸ ಹೊರಡಿಸಿ ಪಿಕೆಟಿಂಗಕ್ಕೆ ಪ್ರತಿಬಂಧ ಮಾಡಿದ್ದರು. ಸ್ವಯಂಸೇವಕರೂ ಸ್ವಯಂಸೇವಿಕೆಯರೂ ಲಿಲಾವಿನ ಸಮಯದಲ್ಲಿ ಕಚೇರಿಯ ಮುಂದೆ ನಿಂತುಕೊಂಡು ಪಿಕೆಟಿಂಗ ಮಾಡಿದರು. ಪೋಲೀಸರು ಒಟ್ಟಿಗೆ ೬೦ ಜನರನ್ನು ಸೆರೆ ಹಿಡಿದುಕೊಂಡು ಹೋದರು ಇದರ ಪರಿಣಾಮವೆಂದರೆ ಬಹಳ ಅಂಗಡಿಗಳ ಲಿಲಾವು ಆಗದೆ ಹಾಗೆಯೆ ಉಳಿದವು.

ಅಮೃತಸರದಲ್ಲಿ
೧೬ ಜನರಿಗೆ ಕೈದು

ಪರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ತಾ|| ೧೩ನೆಯ ದಿವಸ ಅಮೃತಸರದಲ್ಲಿ ೧೬ ಜನರು ಸೆರೆ ಹಿಡಿಯಲ್ಪಟ್ಟಿದ್ದು, ಅವರಲ್ಲಿ ೪ ಜನರು ಸ್ತ್ರೀಯರಿದ್ದಾರೆ.

ಬಿಹಾರ ಸರಕಾರಕ್ಕೆ
೪೨ ಲಕ್ಷ ರೂಪಾಯಿ ಹಾನಿ

ಬಿಹಾರ ಕಾಯದೆ ಮಂಡಳದಲ್ಲಿ ತಾ|| ೧೩ನೆಯ ದಿವಸ ಜಮಾ ಖರ್ಚಿನ ಪತ್ರಿಕೆಯನ್ನು ಮಂಡಿಸುವಾಗ ಜಮಾಖರ್ಚಿನ ಮಂತ್ರಿಗಳು "ಕಾಯದೆಭಂಗ ಚಳವಳಿ ಹಾಗು ಪೇಟೆಯಲ್ಲಿಯ ಮಂದ ಧಾರಣೆ ಇವುಗಳ ಮೂಲಕ ಬಿಹಾರ ಸರಕಾರಕ್ಕೆ ಅರ್ಧ ಕೋಟಿ ರುಪಾಯಿಗಳವರೆಗೆ ಹಾನಿಯಾಗಿದೆಯೆಂದೂ, ೪೨ ಲಕ್ಷ ರುಪಾಯಿ ಉತ್ಪನ್ನದಲ್ಲಿ ಕಡಿಮೆ ಬಂದಿದ್ದು, ೧೨ ಲಕ್ಷ ರುಪಾಯಿ ಹೆಚ್ಚಿಗೆ ವೆಚ್ಚ ಬಂದಿದೆಯೆಂದೂ, ಭಾಷಣ ಮಾಡಿದರು,

ಕಾಯರಾ ಜಿಲ್ಹೆಯಲ್ಲಿ
ಉಪ್ಪಿನ ಕಾಯದೆಭಂಗ

ಮಹಾತ್ಮಾ ಗಾಂಧಿಯವರು ಹಾಕಿಕೊಟ್ಟ ಉಪ್ಪಿನ ಕಾಯದೆಭಂಗ, ಸೆರೆಸಿಂದಿ ಪಿಕೆಟಿಂಗ ಹಾಗು ಪರದೇಶಿ ಅರಿವೆಯ ಬಹಿಷ್ಕಾರ ಈ ಮೂರೂ ಕಾರ್ಯಕ್ರಮಗಳು ಕಾಯರಾ ಜಿಲ್ಹೆಯಲ್ಲಿ ಜೋರಿನಿಂದ ನಡೆಸಲ್ಪಟ್ಟಿವೆ.

ಜಿನ್ನಾರವರು
ಸರಕಾರಕ್ಕೆ ದೋಷ ಕೊಟ್ಟರು

ಪಂಡಿತ ಮೋತೀಲಾಲರು ನಿಧನ ಹೊಂದಿದ ಬಗ್ಗೆ ದುಃಖ ಪ್ರದರ್ಶನ ವ್ಯಕ್ತ ಮಾಡುವದಕ್ಕಾಗಿ ಲಂಡನದ "ಭಾರತ ಸ್ತ್ರೀ ಸಂಘ"ದವರು ಮಿ.ಜಿನ್ನಾರವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿಸಿ,ದುಃಖಪ್ರದರ್ಶನ ಮಾಡಿದರು. ಆಗ ಮಿ.ಜಿನ್ನಾರವರು 'ಯಾವಸರಕಾರದಲ್ಲಿ ಪಂಡಿತ ಮೋತೀಲಾಲರಂತಹ ಗೃಹಸ್ಥರಿಗೆ ಜೇಲಿನ ಹೊರತಾಗಿ ಮತ್ತೆಲ್ಲಿಯೂ ಆಸರ ಸಿಗುವದಿಲ್ಲವೋ ಆ ಸರಕಾರವು 'ಅಸಹ್ಯವಾದದ್ದೇ ಸರಿ" ಎಂಬುದಾಗಿ ಭಾಷಣ ಮಾಡಿ ಮೋತೀಲಾಲರ ಮರಣದ ಬಗ್ಗೆ ಸರಕಾರದ ಮೇಲೆ ಆರೋಪ ಹೊರಿಸಿದರು,

---

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ
ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಟ್ಯಾಂಪಲ್) ಮಸಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳೆ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ ,	೧೬-೦-೦ ರೇಲ್ವೆ ಫ್ರಿ
೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪ ಮಸಿ ೩ ಔನ್ಸಿನ ೧೨ ಡಜನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಿಗೇರಿ ಬ್ರದರ್ಸ
ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತಿ ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಒಮೇಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಿಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಸೇತುರಾಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮ | ನಿತ್ಯ ಸಂಚಿಕೆ. | ಬೆಲೆ. ೦-೦-೩.

...धत् परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA

ಸಂಪಾದಕರು:- ವೆಂಕಟೇಶ ಶೀಕುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ತಿಥಿ ಫಾಲ್ಗುಣ ಶುದ್ಧ ೧ ಶಕೆ ೧೮೫೨ ತಾ॥ ೧೮—೨—೩೧ [ಸಂಚಿಕೆ ೧೯೨

ಮಹಾತ್ಮಾ ಗಾಂಧಿಯವರು
ವ್ಹಾಯಿಸರಾಯರ ಭೆಟ್ಟಿಗೆ ಹೋದರು.

(ತಂತಿಯ ವಾರ್ತೆ ತಾ॥ ೧೭)

ಮಹಾತ್ಮಾ ಗಾಂಧಿಯವರು ಇವತ್ತಿನ ದಿವಸ ಮುಂಜಾನೆ ದಿಲ್ಲಿಗೆ ತಲುಪಿದ್ದು, ಮಧ್ಯಾಹ್ನ ೨—೩೦ ಗಂಟೆಗೆ ವ್ಹಾಯಿಸರಾಯರನ್ನು ಕಂಡುಕೊಳ್ಳುವವರಿದ್ದಾರೆ. ಸರ್ ಸಪ್ರೂ, ಶಾ. ಶಾಸ್ತ್ರಿ, ಮೊದಲಾದವರು ಮಹಾತ್ಮರನ್ನು ಇಂದು ಮುಂಜಾನೆ ಕಂಡುಕೊಂಡರು.

"ಹೆರಾಲ್ಡ" ಪತ್ರಿಕೆಯ ಕಚೇರಿಯನ್ನು ಝಡತಿ ಮಾಡಿದರು

(ತಂತಿಯ ವಾರ್ತೆ ತಾ॥ ೧೭)

ಮುಂಬಯಿಯ ಪೊಲೀಸ ಅಧಿಕಾರಿಗಳು ಇವತ್ತಿನ ದಿವಸ ಸ್ವಯಂಸೇವಕರ ಶಿಬಿರ, ವಿಲೇಪಾರ್ಲೆಯಲ್ಲಿನ "ಹೆರಾಲ್ಡ" ಪತ್ರಿಕೆಯ ಕಚೇರಿ, ಇವುಗಳನ್ನು ಝಡತಿ ಮಾಡಿದ್ದು ಇಬ್ಬರು ಸ್ವಯಂಸೇವಕರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಡಾ. ಹರ್ಡೀಕರ ಮೊದಲಾದವರು ಮುಂಬಯಿಗೆ ಬಂದರು

(ತಂತಿಯ ವಾರ್ತೆ ತಾ॥ ೧೭).

ಕರ್ನಾಟಕ ಪ್ರಾಂತಿಕ ಸಭೆಗಾಗಿ ಅಲಹಾಬಾದಕ್ಕೆ ತೆರಳಿದ ಸರದಾರ ವಲ್ಲಭಭಾಯಿ ಪಟೇಲ, ಡಾ. ಹರ್ಡೀಕರ [illegible] ಇವರು ಇವತ್ತಿನ ದಿವಸ ಮುಂಬಯಿಗೆ ಬಂದರು.

ಡಾ. ಹರ್ಡೀಕರ ಮತ್ತು ಶ್ರೀ ದಿವಾಕರರು ನಾಳಿನ ದಿವಸ [illegible] ಪುಣೆ ಮಾರ್ಗವಾಗಿ ಧಾರವಾಡಕ್ಕೆ ಹೋಗುವವರಿದ್ದಾರೆ,

ಏಕಾಂಬರ ಅಯ್ಯರರನ್ನು ಯರವಡೆಗೆ ಒಯ್ದರು

(ತಂತಿಯ ವಾರ್ತೆ ತಾ॥ ೧೭)

ಶ್ರೀ ಲಾ [illegible] ನೋಟ ಶಾಯಿಯ [illegible] ಹಿಂದುಸ್ಥಾನೀ ಸೇವಾದಳದ ಸಂಘಟಕರಾದ ಶ್ರೀ ಏಕಾಂಬರ ಅಯ್ಯರರ ಇವತ್ತಿನ ದಿವಸ ಯರವಡಾ ಜೇಲಿಗೆ ಕಳಿಸಲ್ಪಟ್ಟರು, ಅವರಿಗೆ ೧॥ ವರ್ಷ [illegible] ಕೊಡಲ್ಪಟ್ಟಿದೆ.

ವಿಜಾಪುರ ಜಿಲ್ಹೆಯಲ್ಲಿ
ಶ್ರೀ ಕರಮರಕರರ ಸಂಚಾರ

(ತಂತಿಯ ವಾರ್ತೆ, ವಿಜಾಪುರ, ತಾ॥ ೧೭)

ಧಾರವಾಡದ "ಕರ್ಮವೀರ" ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಕರಮರಕರ ದತ್ತಾತ್ರಯರಾಯರು ಈ ಜಿಲ್ಹೆಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಉದ್ದೇಶವಾಗಿ ಈಗ ಈ ಜಿಲ್ಹೆಯಲ್ಲಿ ಸಂಚರಿಸುತ್ತಿರುವರು

ವಿಜಾಪುರ ಜಿಲ್ಹೆಯ ರಾಜಕೀಯ ಸೆರೆಯಾಳುಗಳ ಪರಿಷತ್ತು.

ತಾ॥ ೨೭ ಕ್ಕೆ ವಿಜಾಪುರದಲ್ಲಿ ಕೂಡುವದು

(ತಂತಿಯ ವಾರ್ತೆ ವಿಜಾಪುರ ತಾ॥ ೧೭)

ವಿಜಾಪುರ ಜಿಲ್ಹೆಯ ರಾಜಕೀಯ ಸೆರೆಯಾಳುಗಳ ಪರಿಷತ್ತನ್ನು ಇದೇ ೨೭ ನೆಯ ತಾರೀಖಿಗೆ ವಿಜಾಪುರದಲ್ಲಿ ಕೂಡಿಸುವದಾಗಿ ನಿರ್ಧರಿಸಲ್ಪಟ್ಟಿದೆ. ಈಗಾಗಲೆ ಜೇಲಿನಿಂದ ಬಿಡುಗಡೆ ಹೊಂದಿ ಬಂದ ಯಾವತ್ತೂ ರಾಜಕೀಯ ಸೆರೆಯಾಳುಗಳೂ, ದೇಶಸೇವೆಗಾಗಿ ಕಷ್ಟ ಸಹಿಸುವ ಇತರರೂ ಈ ಪರಿಷತ್ತಿಗೆ ಬಂದು ಪರಿಷತ್ತನ್ನು ಯಶಸ್ವಿ ಮಾಡಬೇಕು. ಬೇರೆ ಬೇರೆ ಜೇಲುಗಳಲ್ಲಿ ಅಧಿಕಾರಿಗಳು ಸೆರೆಯಾಳುಗಳನ್ನು ಹೇಗೆ ನಡಿಸಿಕೊಂಡಿರುವರೆಂಬುದನ್ನು ತಿಳಿದುಕೊಳ್ಳುವದಕ್ಕೋಸ್ಕರ ಒಂದು ಪ್ರಶ್ನೆ ಪತ್ರಿಕೆಯನ್ನು ಹೊರಡಿಸುವದರಲ್ಲಿ ಬಂದಿದೆ.

ರಾಜಕೀಯ ಅಪರಾಧಿಗಳಾಗಿ ಶಿಕ್ಷೆ ಹೊಂದಿದ ಯಾವತ್ತೂ ತರುಣರನ್ನು ಜೇಲಿನಿಂದ ಬಿಡುಗಡೆ ಮಾಡುವ ಸಂಬಂಧವಾಗಿ ಬಂಗಾಲ ಸರಕಾರದವರು ವಿಚಾರ ನಡಿಸಿರುವರಾಗಿ ತಿಳಿದು ಬರುತ್ತದೆ.

ಅಂಕೋಲೆಯ ರಣಾಂಗಣದ ಸಮಾಚಾರ

(ಸ್ವಂತ ಸುದ್ದಿಗಾರರಿಂದ)

ಎಲ್ಲೆಲ್ಲಿಯೂ ನಕಾರ ಘಂಟೆ.

ಶಾನಭೋಗರು ತೀರ್ವೆ ಎತ್ತುವದಕ್ಕಾಗಿ ಸಂಚಾರಕ್ಕೆ ಹೋದಾಗ ಕೆಲವು ಹಳ್ಳಿಗಳಲ್ಲಿ ಅವರಿಗೆ ಬಂದ ಅನುಭವಗಳು ವಾಚಕರಿಗೆ ಗೊತ್ತಾಗಿವೆಯಷ್ಟೇ? ಬೇರೆ ಹಳ್ಳಿಗಳಲ್ಲಿಯೂ ಅವರಿಗೆ ಇದೇ ತರದ ಅನುಭವವು ಬರುತ್ತಿದೆ. ಊರೊಳಗೆ ಶಾನಭೋಗರು ಹೋದರೆ ಅವರಿಗೆ ಉಳಿಯುವದಕ್ಕೆ ಸ್ಥಳ ಸಿಕ್ಕದೆ ಇದ್ದುದರಿಂದ ಧರ್ಮಶಾಲೆಯಲ್ಲಿಯೇ ರಾತ್ರಿ ಹಾಕಿರುವರು. ಮೂರು ದಿನಗಳಾದರೂ ಒಂದು ಪೈ ಸಹ ವಸೂಲಾಗಲಿಲ್ಲ. ಉಗ್ರಾಣಿಯು ದಿನಾಲು ಊರೆಲ್ಲ ಸುತ್ತಿ ಹರಕೆ ಹಾಕಿ ಬರುತ್ತಿರುವನು!

ಸಣಗೇರಿಯ ಜನರು ತಾವು ಈ ಸರ್ವ ತೀರ್ವೆ ಕೊಡುವದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು.

ಬಳವೆಯಲ್ಲಿ ಶಾನಭೋಗರು ಮುಂಜಾವಿನಿಂದ ಸಂಜೆಯವರೆಗೆ ಹೆಣಗಾಡಿದರೂ ನಿಷ್ಫಲವಾಯಿತು.

ಅವರ್ಸಾ, ಹಾರವಾಡ, ಭಾವಿಕೇರಿಗಳಲ್ಲಿ ಏನೂ ವಸೂಲಾಗಲಿಲ್ಲ. ಪೋಲೀಸ ದಲವನ್ನು ಕಟ್ಟಿಕೊಂಡು ಹೋದದ್ದು ವ್ಯರ್ಥವಾಯಿತು!

ಅಡಿಗೋಣದ ಕತೆಯು ಸ್ವಾರಸ್ಯವಾಗಿದೆ. ಶಾನಭೋಗರು ಈ ಊರಿಗೆ ಬಂದಕೂಡಲೆ ವಾಡಿಕೆಯಂತೆ ಪಟೇಲರ ಮನೆಗೆ ಹೋದರು. ಇವರನ್ನು ಕಂಡ ಕೂಡಲೆ ಪಟೇಲರು, "ನೀವು

ನನ್ನ ಮನೆಯಲ್ಲಿ ಉಳ್ಳಿರ ಬೇಡಿರಿ

ನೀವು ಇಲ್ಲಿದ್ದುದನ್ನು ನಮ್ಮ ಊರವರು ಕಂಡರೆ ನನ್ನ ಮೇಲೆ ಬಹಿಷ್ಕಾರ ಹಾಕುವರು. ಹೊರಟು ಹೋಗಿರಿ" ಎಂದು ಹೇಳಿದರು. ತೀರ್ವೆಯ ಬಗ್ಗೆ ಕೇಳಲು, "ನಾನು ತೀರ್ವೆಯನ್ನು ಕೊಡುವದಿಲ್ಲ. ಕೊಟ್ಟರೆ ನಾನು ಊರಲ್ಲಿ ಉಳಿಯುವದೇ ಕಠಿಣವಾಗುವದು," ಎಂದನು. ಮುಂದೆ ಶಾನಭೋಗರು ದೇವಸ್ಥಾನದಲ್ಲಾದರೂ ಸ್ಥಳ ದೊರಕೀತೆಂದು ಹೋಗಲು, ಅಲ್ಲಿ ಗುನಗನು (ಪೂಜಾರಿ) "ಇಲ್ಲಿಂದ ಹೊರಟು ಹೋಗಿರಿ," ಎಂದು ಹೇಳಿದ್ದರಿಂದ ಅವರು ಖಿನ್ನವದನರಾಗಿ ಮನೆಯ ಹಾದಿ ಹಿಡಿದರು.

ಬಿಟ್ಟಿಯ ಬಲುಮೆ?

ಕುಂಟಗಣಿಯಲ್ಲಿ ಸರ್ವೆ ಆಫೀಸರರು ಗಾಡಿಗಳನ್ನು ಬಿಟ್ಟೀ ಹಿಡಿಯುವ ವಿಷಯದಲ್ಲಿ ಬಹಳೇ ಜುಲುಮೆ ನಡಿಸಿರುವರು. ಬಂಡಿಗಳ ಬಿಟ್ಟೀ ಹಿಡಿದು ಕೊಡದಿದ್ದರೆ ನಿಮ್ಮ ಪಾಟೀಲಕಿಯನ್ನು ಕಿತ್ತಿ ಹಾಕುವೆನೆಂದು ಅವರು ಪಟೇಲರಿಗೆ ಬೆದರಿಸುತ್ತಿರುವರಂತೆ! ಸರ್ವೆ ಆಫೀಸರರಿಗೆ ಈ ಅಧಿಕಾರವು ಯಾವ ಆರ್ಡಿನನ್ಸಿನಿಂದ ಪ್ರಾಪ್ತವಾಯಿತು!

ಎಂಟಾಣೆಯ ಮೀನ ಬೇಕಂತೆ!

ಗಂಗಾವಳಿಯ ದಂಡೆಯ ಹತ್ತರವಿರುವ ಕಸ್ಸವಾಡೆಯ ಜನರು ಅಲ್ಲಿಯ ಹರಿಕಂತರಿಂದ (ಮೀನ ಹಿಡಿಯುವವರು) ದಿನಾಲು ಯಥೇಚ್ಛವಾಗಿ ಮೀನ ಹೊಡೆಯುತ್ತಿದ್ದರು. ಕೆಲವು ದಿನಗಳಿಂದ ಅವರು ತಮಗೆ ಎಂಟಾಣೆ ಬೆಲೆ ಬಾಳುವ ದೊಡ್ಡ ದೊಡ್ಡ ಮೀನಗಳನ್ನು ಕೊಡಿರೆಂದು ಪೀಡಿಸಹತ್ತಿದ ಮೂಲಕ ಹರಿಕಂತರು ಮೀನ ಕೊಡುವದನ್ನೇ ಬಿಟ್ಟರು. ಯಾವ ಸಹನಶೀಲತೆಗಾದರೂ ಮಿತಿ ಇರುವದಷ್ಟೇ?

ರಾಜೀನಾಮೆಗಳು ಬರುತ್ತಲೇ ಇವೆ!

ಅಗರಗೋಣದ ಶ್ರೀ ಮಾಣನಾಯ್ಕರು ಪಟೇಲಕಿಗೆ ಶರಣು ಹೊಡೆದರು. ಶಿರೂರ, ಬೇಲೆಗಳ ಪಟೇಲರು ರಾಜೀನಾಮೆ ಕಳಿಸಿದರು. ರಾಜೀನಾಮೆ ಕೊಟ್ಟವರ ಸ್ಥಳದಲ್ಲಿ ಬಂದಿದ್ದ ಇಬ್ಬರೆ ಬದ್ಲೀ ಪಟೇಲರೂ ರಾಜೀನಾಮೆ ಕೊಟ್ಟರು. ದಿನಾಲು ಒಂದೆರಡು ರಾಜೀನಾಮೆಗಳು ಬರುತ್ತಲೇ ಇವೆ.

ಗುಳೇದಗುಡ್ಡದಲ್ಲಿ
ಪಂ. ಮೋತೀಲಾಲರ ಶ್ರಾದ್ಧ ದಿನ

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಯ ಮೇರೆಗೆ ತಾ|| ೧೫ ನೆಯ ದಿವಸ ಇಲ್ಲಿ ಪಂ. ಮೋತೀಲಾಲರ ಶ್ರಾದ್ಧ ದಿನವನ್ನು ಪಾಲಿಸಲಾಯಿತು. ಸಾಯಂಕಾಲ ಶ್ರೀ ಬಸವಣ್ಣದೇವರ ಗುಡಿಯ ಮುಂದೆ ಸಾರ್ವಜನಿಕ ಸಭೆ ಸೇರಿ ಪುರಸ್ಥರು ಹಾಕಿಕೊಟ್ಟ ಪ್ರತಿಜ್ಞೆ ಮಾಡಲಾಯಿತು. ಶ್ರೀ ಜೋಶಿ ಗಂಡೇರಾಯರು ಸಭೆಗೆ ಅಧ್ಯಕ್ಷರಾಗಿದ್ದರು.

ಹುಬ್ಬಳ್ಳಿಯಲ್ಲಿ
ಪಂ. ಮೋತೀಲಾಲರ ಶ್ರಾದ್ಧ ದಿನ.

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಗನುಸರಿಸಿ ತಾ|| ೧೫ ನೆಯ ದಿವಸ ಇಲ್ಲಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವು ಆಚರಿಸಲ್ಪಟ್ಟಿತು. ಸರಾಫರು, ಕಂಚುಗಾರರು ಹಾಗು ಕೆಲವು ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿ ಮುಚ್ಚಿ ಹರತಾಳ ಪಾಲಿಸಿದರು. ಮಧ್ಯಾಹ್ನ ೪ ಗಂಟೆಗೆ ಕೋಟೆಯ ಲೋಕಮಾನ್ಯ ಬೈಲಿನಿಂದ ಚೊಕ್ಕನೆತ್ತಿಯ ಪ್ರಚಂಡ ಮೆರವಣಿಗೆಯು ಹೊರಟು, ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು, ಗುಳಕವ್ವನ ಬೈಲಿಗೆ ತಲುಪಿತು. ಅಲ್ಲಿ ಶ್ರೀ ಎಲ್. ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಶ್ರೀ ಪುರಾಣಿಕ, ಶ್ರೀ ಗುಡಗುಂಟಿ ಇವರ ಭಾಷಣಗಳಾದವು. ಅಧ್ಯಕ್ಷರು ಪ್ರತಿಜ್ಞೆಯ ಒಂದೊಂದೇ ವಾಕ್ಯವನ್ನು ಓದಿ ಹೇಳಿ, ಸಭಿಕರಿಂದ ಅದನ್ನು ಉಚ್ಚರಿಸಿದರು. "ವಂದೇ ಮಾತರಂ" ಪದವಾದ ಬಳಿಕ ಸಭೆಯು ಮುಕ್ತಾಯವಾಯಿತು.

ಹುಬ್ಬಳ್ಳಿಯ
ಶ್ರೀ ಯಾದವರಿಗೆ ಶಿಕ್ಷೆ

ಕಾರವಾರದಲ್ಲಿರುವ ಹುಬ್ಬಳ್ಳಿಯ ಶ್ರೀ ವೆಂಕಟೇಶ ಹಣಮಂತ ಯಾದವ ಎಂಬ ಮರಾಠಾ ತರುಣರಿಗೆ ಕಾರವಾರದ ಅಧಿಕಾರಿಗಳು ನೋಟೀಸು ಕೊಟ್ಟು, ಮುನಸಿಪಲ್ ಹದ್ದು ಬಿಟ್ಟು ಹೋಗಲು ಹೇಳಿಕೊಂಡಿದ್ದರು. ಅವರು ಅಧಿಕಾರಿಗಳ ಅಪ್ಪಣೆ ಮೀರಿ ಅಲ್ಲಿಯೇ ತಳವೂರಿ ವಾನರ ಸೇನೆಯ ಸಂಘಟನೆಯನ್ನು ಮಾಡಿದರು. ಅಧಿಕಾರಿಗಳು ಅವರನ್ನು ಈ ಬಗ್ಗೆ ವಿಚಾರಣೆಗೆ ಗುರಿಮಾಡಿ ಅವರಿಗೆ ೧೯ ತಿಂಗಳ ಶಿಕ್ಷೆ ವಿಧಿಸಿದರು.

ಅಂಕೋಲೆಯಲ್ಲಿ
ಪೋಲೀಸನ ಫಜೀತಿ.

ಅಂಕೋಲೆಯ ಓರ್ವ ಪೋಲೀಸನು ಅಲ್ಲಿಯ ಒಬ್ಬ ಸ್ವಯಂಸೇವಕನನ್ನು ಹಾದಿಯಲ್ಲಿ ತರುಬಿ, ಕೈಯೊಳಗಿನ ಗಂಟು ಕೊಡಬೇಕೆಂದು ಅವನಿಗೆ ಕೇಳಿಕೊಂಡನು. ಸ್ವಯಂಸೇವಕನು ಅದನ್ನು ಕೊಡಲು ನಿರಾಕರಿಸಿದನು. ಪೋಲೀಸನು ಅವನನ್ನು ತರುಬಿ ಹಿಡಿದು, ಗಂಟನ್ನು ಕಸಿದುಕೊಂಡು, ಅದನ್ನು ಬಿಚ್ಚಿ ನೋಡಿದನು. ಗಂಟಿನಲ್ಲಿ ಜೋಡಗಳಿದ್ದವು. ಪೋಲೀಸನು ಪಶ್ಚಾತ್ತಾಪಪಟ್ಟು ಸ್ವಯಂಸೇವಕನನ್ನು ಬಿಟ್ಟನು.

ಅಮೇರಿಕೆಯ ಪತ್ರಿಕಾ ಪ್ರತಿನಿಧಿಗೆ

ಪಂ- ಜವಾಹಿರಲಾಲರ ನಿಷ್ಠುರ ಮಾತು

“ನಮಗೆ ಇಂಗ್ಲೀಷರ ಔದಾರ್ಯ ಬೇಕಾಗಿಲ್ಲ'

“ರಾಜ್ಯವನ್ನಪಹರಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ”

ಅಮೇರಿಕೆಯ “ಹಾರ್ಟಫೋರ್ಡ ಟಾಯಿಮ್ಸ” ಪತ್ರಿಕೆಯ ಪ್ರತಿನಿಧಿಯು ಪಂಡಿತ ಜವಾಹಿರಲಾಲರನ್ನು ಕಂಡುಕೊಂಡು, ಸದ್ಯದ ಸ್ಥಿತಿಯ ಸಂಬಂಧವಾಗಿ ಅವರಿಗೆ ಅವರ ಅಭಿಪ್ರಾಯ ಕೇಳಿದರು. ಆಗ ಪಂಡಿತ ಜವಾಹಿರಲಾಲರು ಕೆಳಗಿನಂತೆ ತಿಳಿಸಿದರು.

ಇವತ್ತಿನ ದಿವಸವೇ ನಾವು ಗೆದ್ದಿಯಲಿ ಇಲ್ಲವೆ ನಾಳೆಗೆ ನಮಗೆ ಗೆಲವು ಸಿಗಲಿ, ಎಂದಾದರೂ ಒಮ್ಮೆ ಹಿಂದುಸ್ಥಾನವು ಬ್ರಿಟಿಶರ ಕೈಬಿಟ್ಟು ಹೋಗತಕ್ಕದ್ದೇ. ಸ್ವತಂತ್ರತೆಯನ್ನು ಸಂಪಾದಿಸಿಕೊಳ್ಳಲು ಹಿಂದುಸ್ಥಾನವು ಟೊಂಕ ಕಟ್ಟಿದೆ. ಇನ್ನು ಮೇಲೆ ತಮ್ಮ ವ್ಯಾಪಾರವನ್ನು ಇಲ್ಲಿ ಪುನರುಜ್ಜೀವನಗೊಳಿಸುವದು ಬ್ರಿಟಿಶರಿಗೆ ಶಕ್ಯವಿಲ್ಲ. ಅವರು ಹೆಚ್ಚು ಹೆಚ್ಚು ಹಣ ವೆಚ್ಚಮಾಡಿ, ಹಾನಿಗೊಳಗಾಗಿ ಬರೆಬರುತ್ತ ದಿವಾಳಿ ತೆಗೆಯುವರು.

ಇಷ್ಟಾದ ಬಳಿಕ ಆ ಪ್ರತಿನಿಧಿಯು ಕಾಯಿದೆಗನುಸರಿಸಿ ವರ್ತಿಸಿದಲ್ಲಿ ನಿಮ್ಮ ಇಷ್ಟಾರ್ಥವು ಸಫಲವಾಗಲಿಕ್ಕಿಲ್ಲವೇ ಎಂಬುದಾಗಿ ಜವಾಹಿರಲಾಲರಿಗೆ ಪ್ರಶ್ನೆ ಮಾಡಿದನು. ಅದಕ್ಕೆ ಪಂಡಿತರು 'ಹಿಂದುಸ್ಥಾನದಲ್ಲಿ ಕಾಯಿದೆ ಎಂಬುವದು ಇಲ್ಲವೇ ಇಲ್ಲ. ಕಾಯಿದೆಯೇ ಇಲ್ಲದಿರುವಾಗ ಕಾಯಿದೆಶೀರ ಪದ್ಧತಿಯ ವಿಷಯವಾಗಿ ಮಾತಾಡುವದೂ ಅಸಂಬದ್ಧವಾಗಿದೆ' ಎಂದು ಉತ್ತರ ಕೊಟ್ಟರು.

ಇಂಗ್ಲಂಡದೊಡನೆ ಸಹಕರಿಸಿದಲ್ಲಿ, ಬರಬರುತ್ತ ಎಲ್ಲವೂ ಸರಿಹೋಗುವದಾಗಿ ಪ್ರತಿನಿಧಿಯು ಅಭಿಪ್ರಾಯ ವ್ಯಕ್ತಪಡಿಸಿದನು. “ಇದಕ್ಕೇಕೆ ಕಾಲಾವಧಿ? ಆಗುವದೆಲ್ಲ ಈಗಲೇ ಆಗಬೇಕು' ಎಂದು ಹೇಳಿ, ಪಂಡಿತರು “ರಾಜ್ಯವನ್ನು ಸಂಪಾದಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ'ವೆಂದು ಅವರಿಗೆ ತಿಳಿಸಿದರು.

“ಇಂಗ್ಲೀಷರ ಔದಾರ್ಯದಲ್ಲಿ ನಿಮಗೆ ವಿಶ್ವಾಸವಿಲ್ಲವೇ” ಎಂದು ಪ್ರತಿನಿಧಿಯು ಕೇಳಿದನು. ಅದಕ್ಕೆ ಪಂಡಿತರು “ನಾನು ಇಂಗ್ಲೀಷರ ಇತಿಹಾಸವನ್ನು ಸಂಪೂರ್ಣವಾಗಿ ಅರಿತಿದ್ದೇನೆ-ಇಂಗ್ಲೀಷರ ಔದಾರ್ಯದ ವಿಷಯವಾಗಿ ಅದರಲ್ಲಿ ಒಂದಾದರೂ ಉದಾಹರಣೆಯು ಕಂಡುಬಂದಿಲ್ಲ. ಇಂಗ್ಲೀಷರ ಔದಾರ್ಯವು ನಮಗೆ ಬೇಕಾಗಿಲ್ಲ'ವೆಂಬುದಾಗಿ ಹೇಳಿದರು.

ಮುಖ್ಯ ಪ್ರಧಾನರ ಜಾಹೀರನಾಮೆಯ ಸಂಬಂಧವಾಗಿ ಕಾಂಗ್ರೆಸ್ಸದವರ ಅಭಿಪ್ರಾಯವನ್ನು ತಿಳಿಸಲು ಪ್ರತಿನಿಧಿಯು ಕೇಳಲಾಗಿ “ವರ್ಕಿಂಗ ಕಮೀಟಿಯು ಇನ್ನು ಸ್ವಲ್ಪ ದಿನಗಳಲ್ಲಿಯೇ ಅದನ್ನು ನಿರ್ಧರಿಸುವದಾಗಿ” ಪಂಡಿತರು ಅವರಿಗೆ ತಿಳಿಸಿದರು.

ಮಹಾತ್ಮರು ಕಾಯರಾಕ್ಕೆ ಬರುವರು

ಕಾಯರಾ ಜಿಲ್ಹಾ ಕಾಂಗ್ರೆಸ ಕಮೀಟಿಯ ಓರ್ವ ಸಭಾಸದರಿಗೆ ಮಹಾತ್ಮಾ ಗಾಂಧಿಯವರು ಕೆಳಗಿನಂತೆ ಪತ್ರ ಬರೆದಿದ್ದಾರೆ—

ನಾನು ಬೇಗನೆ ಕಾಯರಾ ಜಿಲ್ಹೆಗೆ ಬರುವನಿದ್ದೇನೆ. ಒಪ್ಪಂದವಂತೂ ಆಗುವ ಆಶೆಯಿಲ್ಲ. ಒಪ್ಪಂದವು ಒಂದು ವೇಳೆ ಸಾಧ್ಯವಾದಲ್ಲಿ ಈ ಸತ್ಯಾಗ್ರಹ ಚಳವಳಿಯಲ್ಲಿ ನಷ್ಟಕ್ಕೆ ಗುರಿಯಾದ ರೈತರ ನಷ್ಟ ತುಂಬಿಕೊಡುವ ಬಗ್ಗೆ ನಿಸ್ಸಂದೇಹವಾಗಿ ಪ್ರಯತ್ನಿಸುವೆನು.

ಸರಕಾರಕ್ಕೆ ೫ ಕೋಟಿ ರುಪಾಯಿ ಹಾನಿ

(ಶಿಮ್ಲಾ ವಾರ್ತೆ ತಾ|| ೧೭)

ರೇಲ್ವೆ ಖಾತೆಯು ಬಹಿಷ್ಕಾರ ಪತ್ರಿಕೆಯನ್ನು ಬಾಯಿಗೊಡಿಸುವದರಿಂದಾಗಿ ಸರಕಾರಕ್ಕೆ ೫ ಕೋಟಿ ರುಪಾಯಿಗಳು ಕಡಿಮೆ ಬಿದ್ದವೆಂದಾಗಿ ರೇಲ್ವೆಯ ಆಯವ್ಯಯ ಪತ್ರಿಕೆಯಿಂದ ತಿಳಿದು ಬರುತ್ತದೆ.

ಶ್ರೀ ವಿಠ್ಠಲಭಾಯಿಯವರು ಯುರೋಪಕ್ಕೆ ಹೋಗುವರು

ಮುಂಬಯಿಯ 'ಪೋಲಿಕ್ಲಿನಿಕ ನರ್ಸಿಂಗ ಹೋಮು”ದಲ್ಲಿ ಈಗ ಔಷಧೋಪಚಾರ ಹೊಂದುತ್ತಿರುವ ಶ್ರೀ ವಿಠ್ಠಲಭಾಯಿ ಪಟೇಲರವರು ಔಷಧೋಪಚಾರ ಪಡೆಯುವದಕ್ಕಾಗಿ ತಾ|| ೨೪ ನೆಯ ದಿವಸ ಯುರೋಪಖಂಡಕ್ಕೆ ಹೊರಡುವವರಿದ್ದಾರೆ.

ಮದುಮಗನ ಫಜೀತಿಯಾಯಿತು

ಪೋರಬಂದರದ ಸ್ವಯಂಸೇವಕರು ಒಂದು ದಿವಸ ಅಲ್ಲಿಯ ಕುಡುಕರ ಹಾಗೂ ಗಾಂಜಾಸೇವಕರ ಹೆಸರುಗಳನ್ನು ಕಾಗದಗಳಲ್ಲಿ ಬರೆದು, ಅವುಗಳನ್ನು ಅಲ್ಲಲ್ಲಿ ಗೋಡೆಗೆ ಅಂಟಿಸಿದ್ದರು. ಕುಡುಕರ ಪಟ್ಟಿಯಲ್ಲಿ ಬೇಗನೆ ಮದುವೆಯಾಗತಕ್ಕ ಓರ್ವ ಮೀನಗಾರನದಾದರೂ ಹೆಸರು ಇತ್ತು. ವಧುವಿನ ಪಕ್ಷದವರು ಅದನ್ನು ನೋಡಿಕೊಂಡು ಆ ಮೀನಗಾರನಿಗೆ ಹೆಣ್ಣನ್ನು ಕೊಡಲು ನಿರಾಕರಿಸಿದರು. ಮದುಮಗನ ಕೈಕಾಲೇ ಹೋದವು. ಅವನು ಸ್ವಯಂಸೇವಕರಲ್ಲಿಗೆ ಹೋಗಿ ಇನ್ನು ಮುಂದೆ ಕುಡಿಯುವದಿಲ್ಲವಾಗಿ ವಚನ ಕೊಟ್ಟನು. ಸ್ವಯಂಸೇವಕರು ವಧುವಿನ ಪಕ್ಷದವರಲ್ಲಿಗೆ ಹೋಗಿ “ಕುಡಿಯುವದಿಲ್ಲವಾಗಿ ವಚನಕೊಟ್ಟಿದ್ದಾನೆ. ಕಾರಣ ಲಗ್ನ ಕಾರ್ಯವನ್ನು ನೆರವೇರಿಸಿರಿ” ಎಂದು ತಿಳಿಸಿದರು. ಅವರು ಒಪ್ಪಿ ಆ ಮೇಲೆ ಕೆಲವು ದಿನಗಳಲ್ಲಿ ಲಗ್ನ ಸಮಾರಂಭವನ್ನು ನೆರವೇರಿಸಿದರು.

ದೊಡ್ಡ ಆಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿತು

ಬಂಗಾಲ ಇಲಾಖೆಯ ಪುಂಡರಬಾನೆಯ ಜಮೀನದಾರರಾಗಿದ್ದ ಶರದಾಪ್ರಸಾದರಾಯ ಚೌಧರಿಯವರ ಜಮೀನಿನಲ್ಲಿ ಒಂದು ದೊಡ್ಡ ಆಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿದ್ದು ಅದರಂತಹ ಅದ್ಭುತವಾದ ಮೂರ್ತಿಯು ಈ ವರೆಗೆ ಎಲ್ಲಿಯೂ ಕಂಡು ಬಂದಿಲ್ಲ. ಮೂರ್ತಿಯು ಕರೇಕಲ್ಲಿನದಿದ್ದು, ಅದರ ಮೂಗು ಮಾತ್ರ ಸ್ವಲ್ಪ ಒಡೆದು ಹೋಗಿದೆ.

ಅಂಕೋಲೆಯ ರಣಾಂಗಣದ ಸಮಾಚಾರ

(ಸ್ವಂತ ಸುದ್ದಿಗಾರರಿಂದ)

ಎಲ್ಲೆಲ್ಲಿಯೂ ನಕಾರ ಘಂಟೆ.

ಶಾನಭೋಗರು ತೀರ್ವೆ ಎತ್ತುವದಕ್ಕಾಗಿ ಸಂಚಾರಕ್ಕೆ ಹೋದಾಗ ಕೆಲವು ಹಳ್ಳಿಗಳಲ್ಲಿ ಅವರಿಗೆ ಬಂದ ಅನುಭವಗಳು ವಾಚಕರಿಗೆ ಗೊತ್ತಾಗಿವೆಯಷ್ಟೇ? ಬೇರೆ ಹಳ್ಳಿಗಳಲ್ಲಿಯೂ ಅವರಿಗೆ ಇದೇ ತರದ ಅನುಭವವು ಬರುತ್ತಿದೆ. ಊರೊಳಗೆ ಶಾನಭೋಗರು ಹೋದರೆ ಅವರಿಗೆ ಉಳಿಯುವದಕ್ಕೆ ಸ್ಥಳ ಸಿಕ್ಕದೆ ಇದ್ದುದರಿಂದ ಧರ್ಮಶಾಲೆಯಲ್ಲಿಯೇ ಠಾಣ್ಯಾ ಹಾಕುವರು. ಮೂರು ದಿನಗಳಾದರೂ ಒಂದು ಪೈ ಸಹ ವಸೂಲಾಗಲಿಲ್ಲ. ಉಗ್ರಾಣಿಯು ದಿನಾಲು ಊರೆಲ್ಲ ಸುತ್ತಿ ಹರಕಿ ಹಾಕಿ ಬರುತ್ತಿರುವನು!

ಸಾಣಗೇರಿಯ ಜನರು ತಾವು ಈ ವರ್ಷ ತೀರ್ವೆ ಕೊಡುವದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು.

ಬಳವೆಯಲ್ಲಿ ಶಾನಭೋಗರು ಮುಂಜಾವಿನಿಂದ ಸಂಜೆಯವರೆಗೆ ಹೆಣಗಾಡಿದರೂ ನಿಷ್ಫಲವಾಯಿತು.

ಅವರ್ಸಾ, ಹಾರವಾಡ, ಭಾವಿಕೇರಿಗಳಲ್ಲಿ ಏನೂ ವಸೂಲಾಗಲಿಲ್ಲ. ಪೋಲೀಸ ದಳವನ್ನು ಕಟ್ಟಿಕೊಂಡು ಹೋದದ್ದೂ ವ್ಯರ್ಥವಾಯಿತು!

ಅಡಿಗೋಣದ ಕತೆಯು ಸ್ವಾರಸ್ಯವಾಗಿದೆ. ಶಾನಭೋಗರು ಈ ಊರಿಗೆ ಬಂದ ಕೂಡಲೆ ವಾಡಿಕೆಯಂತೆ ಪಟೇಲರ ಮನೆಗೆ ಹೋದರು. ಇವರನ್ನು ಕಂಡ ಕೂಡಲೆ ಪಟೇಲರು, "ನೀವು

ನನ್ನ ಮನೆಯಲ್ಲಿ ಉಳಿಯಬೇಡರಿ

ನೀವು ಇಲ್ಲಿದ್ದುದನ್ನು ನಮ್ಮ ಊರವರು ಕಂಡರೆ ನನ್ನ ಮೇಲೆ ಬಹಿಷ್ಕಾರ ಹಾಕುವರು. ಹೊರಟು ಹೋಗಿರಿ" ಎಂದು ಹೇಳಿದರು. ತೀರ್ವೆಯ ಬಗ್ಗೆ ಕೇಳಲು, "ನಾನು ತೀರ್ವೆಯನ್ನು ಕೊಡುವದಿಲ್ಲ. ಕೊಟ್ಟರೆ ನಾನು ಊರಲ್ಲಿ ಉಳಿಯುವದೇ ಕಠಿಣವಾಗುವದು," ಎಂದನು. ಮುಂದೆ ಶಾನಭೋಗರು ದೇವಸ್ಥಾನದಲ್ಲಾದರೂ ಸ್ಥಳ ದೊರಕೀತೆಂದು ಹೋಗಲು, ಅಲ್ಲಿಯ ಗುರವನು (ಪೂಜಾರಿ) "ಇಲ್ಲಿಂದ ಹೊರಟು ಹೋಗಿರಿ," ಎಂದು ಹೇಳಿದ್ದರಿಂದ ಅವರು ಖಿನ್ನವದನರಾಗಿ ಮನೆಯ ಹಾದಿ ಹಿಡಿದರು.

ಬಿಟ್ಟಿಯ ಬಲುಮೆ?

ಕುಂಟಗಣಿಯಲ್ಲಿ ಸರ್ವೆ ಆಫೀಸರರು ಗಾಡಿಗಳನ್ನು ಬಿಟ್ಟೀ ಹಿಡಿಯುವ ವಿಷಯದಲ್ಲಿ ಬಹಳೇ ಜುಲುಮೆ ನಡಿಸಿರುವರು. ಬಂಡಿಗಳ ಬಿಟ್ಟೀ ಹಿಡಿದು ಕೊಡದಿದ್ದರೆ ನಿಮ್ಮ ಪಾಟೀಲಕಿಯನ್ನು ಕಿತ್ತುಹಾಕುವೆನೆಂದು ಅವರು ಪಟೇಲರಿಗೆ ಬೆದರಿಸುತ್ತಿರುವರಂತೆ! ಸರ್ವೆ ಆಫೀಸರರಿಗೆ ಈ ಅಧಿಕಾರವು ಯಾವ ಆರ್ಡಿನನ್ಸಿನಿಂದ ಪ್ರಾಪ್ತವಾಯಿತು!

ಎಂಟಾಣೆಯ ಮೀನ ಬೇಕಂತೆ!

ಗಂಗಾವಳಿಯ ದಾರಿಯ ಹತ್ತರವಿರುವ ಕಸ್ಟಮ್ ಖಾತೆಯ ಜನರು ಅಲ್ಲಿಯ ಹರಿಕಂತ್ರರಿಂದ (ಮೀನ ಹಿಡಿಯುವವರು) ದಿನಾಲು ಯಥೇಚ್ಛವಾಗಿ ಮೀನ ಹೊಡೆಯುತ್ತಿದ್ದರು. ಕೆಲವು ದಿನಗಳಿಂದ ಅವರು ತಮಗೆ ಎಂಟಾಣೆ ಬೆಲೆ ಬಾಳುವ ದೊಡ್ಡ ದೊಡ್ಡ ಮೀನಗಳನ್ನು ಕೊಡಿರೆಂದು ಪೀಡಿಸಹತ್ತಿದ ಮೂಲಕ ಹರಿಕಂತ್ರರು ಮೀನ ಕೊಡುವದನ್ನೇ ಬಿಟ್ಟರು. ಯಾರ ಸಹನಶೀಲತೆಗಾದರೂ ಮಿತಿ ಇರುವದಷ್ಟೇ?

ರಾಜೀನಾಮೆಗಳು ಬರುತ್ತಲೇ ಇವೆ!

ಅಗರಗೋಣದ ಶ್ರೀ ಮಾಣಿನಾಯ್ಕರು ಪಟೇಲಕಿಗೆ ಶರಣು ಹೊಡೆದರು. ಶಿರೂರ, ಬೇಸಗಳ ಪಟೇಲರು ರಾಜೀನಾಮೆ ಕಳಿಸಿದರು. ರಾಜೀನಾಮೆ ಕೊಟ್ಟವರ ಸ್ಥಳದಲ್ಲಿ ಬಂದಿದ್ದ ಇಬ್ಬರ ಬದಲೀ ಪಟೇಲರೂ ರಾಜೀನಾಮೆ ಕೊಟ್ಟರು. ದಿನಾಲು ಒಂದೆರಡು ರಾಜೀನಾಮೆಗಳು ಬರುತ್ತಲೇ ಇವೆ

ಗುಳೇದಗುಡ್ಡದಲ್ಲಿ ಪಂ. ಮೋತೀಲಾಲರ ಶ್ರಾದ್ಧದಿನ

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಯ ಮೇರೆಗೆ ತಾ|| ೧೫ ನೆಯ ದಿವಸ ಇಲ್ಲಿ ಪಂ. ಮೋತೀಲಾಲರ ಶ್ರಾದ್ಧ ದಿನವನ್ನು ಪಾಲಿಸಲಾಯಿತು. ಸಾಯಂಕಾಲ ಶ್ರೀ ಬಸವಣ್ಣದೇವರ ಗುಡಿಯ ಮುಂದೆ ಸಾರ್ವಜನಿಕ ಸಭೆ ಸೇರಿ ಮಹಾತ್ಮರು ಹಾಕಿಕೊಟ್ಟ ಪ್ರತಿಜ್ಞೆ ಮಾಡಲಾಯಿತು. ಶ್ರೀ ಜೋಶಿ ಗುಂಡೇರಾಯರು ಸಭೆಗೆ ಅಧ್ಯಕ್ಷರಾಗಿದ್ದರು.

ಹುಬ್ಬಳ್ಳಿಯಲ್ಲಿ ಪಂ. ಮೋತೀಲಾಲರ ಶ್ರಾದ್ಧದಿನ.

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಯನುಸರಿಸಿ ತಾ|| ೧೫ ನೆಯ ದಿವಸ ಇಲ್ಲಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವು ಆಚರಿಸಲ್ಪಟ್ಟಿತು. ಸರಾಫರು, ಕಂಚುಗಾರರು ಹಾಗು ಕೆಲವು ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿ ಮುಚ್ಚಿ ಹರತಾಳ ಪಾಲಿಸಿದರು. ಮಧ್ಯಾಹ್ನ ೪ ಗಂಟೆಗೆ ಕೋಟೆಯ ಲೋಕಮಾನ್ಯ ಬೈಲಿನಿಂದ ಚೊಕ್ಕನೆತ್ತಿಯ ಪ್ರಚಂಡ ಮೆರವಣಿಗೆಯು ಹೊರಟು, ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು, ಗುಳಕವ್ವನ ಬೈಲಿಗೆ ತಲುಪಿತು. ಅಲ್ಲಿ ಶ್ರೀ ಎಲ್. ಎಚ್. ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಶ್ರೀ ಪುರಾಣಿಕ, ಶ್ರೀ ಗುಡಗುಂಟಿ ಇವರ ಭಾಷಣಗಳಾದವು. ಅಧ್ಯಕ್ಷರು ಪ್ರತಿಜ್ಞೆಯ ಒಂದೊಂದೇ ವಾಕ್ಯವನ್ನು ಓದಿ ಹೇಳಿ, ಸಭಿಕರಿಂದ ಅದನ್ನು ಉಚ್ಚರಿಸಿದರು. "ವಂದೇ ಮಾತರಂ" ಪದವಾದ ಬಳಿಕ ಸಭೆಯು ಮುಕ್ತಾಯವಾಯಿತು.

ಹುಬ್ಬಳ್ಳಿಯ ಶ್ರೀ ಯಾದವರಿಗೆ ಶಿಕ್ಷೆ

ಕಾರವಾರದಲ್ಲಿರುವ ಹುಬ್ಬಳ್ಳಿಯ ಶ್ರೀ ವೆಂಕಟೇಶ ಹಣಮಂತ ಯಾದವ ಎಂಬ ಮುರಾರಾ ತರುಣಂಗೆ ಕಾರವಾರದ ಅಧಿಕಾರಿಗಳು ನೋಟೀಸು ಕೊಟ್ಟು, ಮುನಸಿಪಲ್ ಹದ್ದು ಬಿಟ್ಟು ಹೋಗಲು ಹೇಳಿಕೊಂಡಿದ್ದರು. ಅವರು ಅಧಿಕಾರಿಗಳ ಅಪ್ಪಣೆ ಮೀರಿ ಅಲ್ಲಿಯೇ ತಳವೂರಿ ವಾನರ ಸೇನೆಯ ಸಂಘಟನೆಯನ್ನು ಮಾಡಿದರು. ಅಧಿಕಾರಿಗಳು ಅವರನ್ನು ಈ ಬಗ್ಗೆ ವಿಚಾರಣೆಗೆ ಗುರಿಮಾಡಿ ಅವರಿಗೆ ೧೫ ತಿಂಗಳ ಶಿಕ್ಷೆ ವಿಧಿಸಿದರು.

ಅಂಕೋಲೆಯಲ್ಲಿ ಪೋಲೀಸನ ಫಜೀತಿ.

ಅಂಕೋಲೆಯ ಓರ್ವ ಪೋಲೀಸನು ಅಲ್ಲಿಯ ಒಬ್ಬ ಸ್ವಯಂಸೇವಕನನ್ನು ಹಾದಿಯಲ್ಲಿ ತರುಬಿ, ಕೈಯೊಳಗಿನ ಗಂಟು ಕೊಡೆಂದು ಅವನಿಗೆ ಕೇಳಿಕೊಂಡನು. ಸ್ವಯಂಸೇವಕನು ಅದನ್ನು ಕೊಡಲು ನಿರಾಕರಿಸಿದನು. ಪೋಲೀಸನು ಅವನನ್ನು ಸೆರೆಹಿಡಿದು, ಗಂಟನ್ನು ವಶಕ್ಕೆ ತೆಗೆದುಕೊಂಡು, ಅದನ್ನು ಬಿಚ್ಚಿ ನೋಡಿದನು. ಗಂಟಿನಲ್ಲಿ ಜೋಡುಗಳಿದ್ದವು. ಪಶ್ಚಾತ್ತಾಪಪಟ್ಟು ಸ್ವಯಂಸೇವಕನನ್ನು ಬಿಟ್ಟನು.

ಅಮೇರಿಕೆಯ ಪತ್ರಿಕಾ ಪ್ರತಿನಿಧಿಗೆ

ಪಂ. ಜವಾಹಿರಲಾಲರ ನಿಷ್ಠುರ ಮಾತು

“ನಮಗೆ ಇಂಗ್ಲೀಷರ ಔದಾರ್ಯ ಬೇಕಾಗಿಲ್ಲ”

“ರಾಜ್ಯವನ್ನಪಹರಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ”

ಅಮೇರಿಕೆಯ “ಹಾರ್ಟಫೋರ್ಡ ಟಾಯಿಮ್ಸ” ಪತ್ರಿಕೆಯ ಪ್ರತಿನಿಧಿಯು ಪಂಡಿತ ಜವಾಹಿರಲಾಲರನ್ನು ಕಂಡುಕೊಂಡು, ಸದ್ಯದ ಸ್ಥಿತಿಯ ಸಂಬಂಧವಾಗಿ ಅವರಿಗೆ ಅವರ ಅಭಿಪ್ರಾಯ ಕೇಳಿದರು. ಆಗ ಪಂಡಿತ ಜವಾಹಿರಲಾಲರು ಕೆಳಗಿನಂತೆ ತಿಳಿಸಿದರು.

ಇವತ್ತಿನ ದಿವಸವೇ ನಾವು ಗೆದಿಯಲಿ ಇಲ್ಲವೆ ನಾಳೆಗೆ ನಮಗೆ ಗೆಲವು ಸಿಗಲಿ, ಎಂದಾದರೂ ಒಮ್ಮೆ ಹಿಂದುಸ್ಥಾನವು ಬ್ರಿಟಿಶರ ಕೈಬಿಟ್ಟು ಹೋಗತಕ್ಕದ್ದೇ. ಸ್ವತಂತ್ರ್ಯವನ್ನು ಸಂಪಾದಿಸಿಕೊಳ್ಳಲು ಹಿಂದುಸ್ಥಾನವು ಟೊಂಕ ಕಟ್ಟಿದೆ. ಇನ್ನು ಮೇಲೆ ತಮ್ಮ ವ್ಯಾಪಾರವನ್ನು ಇಲ್ಲಿ ಪುನರುಜ್ಜೀವನಗೊಳಿಸುವದು ಬ್ರಿಟಿಶರಿಗೆ ಶಕ್ಯವಿಲ್ಲ. ಅವರು ಹೆಚ್ಚು ಹೆಚ್ಚು ಹಣ ವೆಚ್ಚ ಮಾಡಿ, ಹಾನಿಗೊಳಗಾಗಿ ಬರಬರುತ್ತ ದಿವಾಳಿ ತೆಗೆಯುವರು.

ಇಷ್ಟಾದ ಬಳಿಕ ಆ ಪ್ರತಿನಿಧಿಯು ಕಾಯದೆಗನುಸರಿಸಿ ವರ್ತಿಸಿದಲ್ಲಿ ನಿಮ್ಮ ಇಷ್ಟಾರ್ಥವು ಸಫಲವಾಗಲಿಕ್ಕಿಲ್ಲವೇ ಎಂಬುದಾಗಿ ಜವಾಹಿರಲಾಲರಿಗೆ ಪ್ರಶ್ನೆ ಮಾಡಿದನು. ಅದಕ್ಕೆ ಪಂಡಿತರು ‘ಹಿಂದುಸ್ಥಾನದಲ್ಲಿ ಕಾಯದೆ ಎಂಬುವದು ಇಲ್ಲವೇ ಇಲ್ಲ. ಕಾಯದೆಯೇ ಇಲ್ಲದಿರುವಾಗ ಕಾಯದೆಶೀರ ಪದ್ಧತಿಯ ವಿಷಯವಾಗಿ ಮಾತಾಡುವದೂ ಅಸಂಬದ್ಧವಾಗಿದೆ’ ಎಂದು ಉತ್ತರ ಕೊಟ್ಟರು.

ಇಂಗ್ಲಂಡದೊಡನೆ ಸಹಕರಿಸಿದಲ್ಲಿ ಬರಬರುತ್ತ ಎಲ್ಲವೂ ಸರಿಹೋಗುವದಾಗಿ ಪ್ರತಿನಿಧಿಯು ಅಭಿಪ್ರಾಯ ವ್ಯಕ್ತಪಡಿಸಿದನು. “ಇದಕ್ಕೇಕೆ ಕಾಲಾವಧಿ ಆಗುವದಿಲ್ಲ ಈಗಲೇ ಆಗಬೇಕು’ ಎಂದು ಹೇಳಿ, ಪಂಡಿತರು “ರಾಜ್ಯವನ್ನು ಸಂಪಾದಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ’ವೆಂದು ಅವರಿಗೆ ತಿಳಿಸಿದರು.

“ಇಂಗ್ಲೀಷರ ಔದಾರ್ಯದಲ್ಲಿ ನಿಮಗೆ ವಿಶ್ವಾಸವಿಲ್ಲವೇ” ಎಂದು ಪ್ರತಿನಿಧಿಯು ಕೇಳಿದನು. ಅದಕ್ಕೆ ಪಂಡಿತರು “ನಾನು ಇಂಗ್ಲೀಷರ ಇತಿಹಾಸವನ್ನು ಸಂಪೂರ್ಣವಾಗಿ ಅರಿತಿದ್ದೇನೆ-ಇಂಗ್ಲೀಷರ ಔದಾರ್ಯದ ವಿಷಯವಾಗಿ ಅದರಲ್ಲಿ ಒಂದಾದರೂ ಉದಾಹರಣೆಯು ಕಂಡುಬಂದಿಲ್ಲ. ‘ಇಂಗ್ಲೀಷರ ಔದಾರ್ಯವು ನಮಗೆ ಬೇಕಾಗಿಲ್ಲ’ವೆಂಬುದಾಗಿ ಹೇಳಿದರು.

ಮುಖ್ಯ ಪ್ರಧಾನರ ಜಾಹೀರನಾಮೆಯ ಸಂಬಂಧವಾಗಿ ಕಾಂಗ್ರೆಸ್‌ದವರ ಅಭಿಪ್ರಾಯವನ್ನು ತಿಳಿಸಲು ಪ್ರತಿನಿಧಿಯು ಕೇಳಲಾಗಿ “ವರ್ಕಿಂಗ ಕಮಿಟಿಯು ಇನ್ನು ಸ್ವಲ್ಪ ದಿನಗಳಲ್ಲಿಯೇ ಅದನ್ನು ನಿರ್ಧರಿಸುವದಾಗಿ” ಪಂಡಿತರು ಅವರಿಗೆ ತಿಳಿಸಿದರು.

ಮಹಾತ್ಮರು ಕಾಯುರಾಕ್ಕೆ ಬರುವರು

ಕಾಗುರಾ ಜಿಲ್ಲಾ ಕಾಂಗ್ರೆಸ ಕಮೀಟಿಯ ಓರ್ವ ಸಭಾಸದರಿಗೆ ಮಹಾತ್ಮಾ ಗಾಂಧಿಯವರು ಕೆಳಗಿನಂತೆ ಪತ್ರ ಬರೆದಿದ್ದಾರೆ—

ನಾನು ಬೇಗನೆ ಕಾಯುರಾ ಜಿಲ್ಹೆಗೆ ಬರುವವನಿದ್ದೇನೆ. ಒಕ್ಕಂದವಂತೂ ಆಗುವ ಆಶೆಯಿಲ್ಲ. ಒಕ್ಕಂದವು ಒಂದು ವೇಳೆ ಸಾಧ್ಯವಾದಲ್ಲಿ ಈ ಸತ್ಯಾಗ್ರಹ ಚಳವಳಿಯಲ್ಲಿ ನಷ್ಟಕ್ಕೆ ಗುರಿಯಾದ ರೈತರ ನಷ್ಟ ತುಂಬಿಕೊಡುವ ಬಗ್ಗೆ ನಿಸ್ಸಂದೇಹವಾಗಿ ಪ್ರಯತ್ನಿಸುವೆನು.

ಸರಕಾರಕ್ಕೆ ೫ ಕೋಟಿ ರುಪಾಯಿ ಹಾನಿ.

(ಶಂಕಿಯ ವಾರ್ತೆ ತಾ|| ೧೭)

ರೇಲ್ವೆ ಖಾತೆಯು ಬಹಿಷ್ಕಾರ ಪತ್ರಿಕೆಯಲ್ಲಿ ಬಾಯಿಗೊಳಿಸುವದರಿಂದಾಗಿ ಸರಕಾರಕ್ಕೆ ೫ ಕೋಟಿ ರೂಪಾಯಿಗಳು ಕಡಿಮೆ ಬಿದ್ದಿವೆಯಾಗಿ ರೇಲ್ವೆಯ ಆಯವ್ಯಯ ಪತ್ರಿಕೆಯಿಂದ ತಿಳಿದು ಬರುತ್ತದೆ.

ಶ್ರೀ ವಿಠ್ಠಲಭಾಯಿಯವರು ಯುರೋಪಕ್ಕೆ ಹೋಗುವರು

ಮುಂಬಯಿಯ ಪೋಲಿಕ್ಲಿನಿಕ ನರ್ಸಿಂಗ ಹೋಮು”ದಲ್ಲಿ ಈಗ ಔಷಧೋಪಚಾರ ಹೊಂದುತ್ತಿರುವ ಶ್ರೀ ವಿಠ್ಠಲಭಾಯಿ ಪಟೇಲರವರು ಔಷಧೋಪಚಾರ ಪಡೆಯುವದಕ್ಕಾಗಿ ತಾ|| ೨೪ನೇ ದಿವಸ ಯುರೋಪಖಂಡಕ್ಕೆ ಹೊರಡುವವರಿದ್ದಾರೆ.

ಮದುಮಗನ ಫಜೀತಿಯಾಯಿತು

ಪೋರಬಜಾರದ ಸ್ವಯಂಸೇವಕರು ಒಂದು ದಿವಸ ಅಲ್ಲಿಯ ಕುಡುಕರ ಹಾಗೂ ಗಾಂಜಾಸೇವಕರ ಹೆಸರುಗಳನ್ನು ಕಾಗದಗಳಲ್ಲಿ ಬರೆದು, ಅವುಗಳನ್ನು ಅಲ್ಲಲ್ಲಿ ಗೋಡೆಗೆ ಅಂಟಿಸಿದ್ದರು. ಕುಡುಕರ ಪಟ್ಟಿಯಲ್ಲಿ ಬೇಗನೆ ಮದುವೆಯಾಗತಕ್ಕ ಓರ್ವ ಮೀನಗಾರನವನದೂ ಹೆಸರು ಇತ್ತು. ವಧುವಿನ ಪಕ್ಷದವರು ಅದನ್ನು ನೋಡಿಕೊಂಡು ಆ ಮೀನಗಾರನಿಗೆ ಹೆಣ್ಣನ್ನು ಕೊಡಲು ನಿರಾಕರಿಸಿದರು. ಮದುಮಗನ ಕೈಕಾಲೇ ಹೋದವು. ಅವನು ಸ್ವಯಂಸೇವಕರಲ್ಲಿಗೆ ಹೋಗಿ ಇನ್ನು ಮುಂದೆ ಕುಡಿಯುವದಿಲ್ಲವಾಗಿ ವಚನ ಕೊಟ್ಟನು. ಸ್ವಯಂಸೇವಕರು ವಧುವಿನ ಪಕ್ಷದವರಲ್ಲಿಗೆ ಹೋಗಿ “ಕುಡಿಯುವದಿಲ್ಲವಾಗಿ ವಚನಕೊಟ್ಟಿದ್ದಾನೆ. ಕಾರಣ ಲಗ್ನಕಾರ್ಯವನ್ನು ನೆರವೇರಿಸಿರಿ” ಎಂದು ತಿಳಿಸಿದರು. ಅವರು ಒಪ್ಪಿ ಆ ಮೇಲೆ ಕೆಲವು ದಿನಗಳಲ್ಲಿ ಲಗ್ನ ಸಮಾರಂಭವನ್ನು ನೆರವೇರಿಸಿದರು.

ದೊಡ್ಡ ಆಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿತು

ಬಂಗಾಲ ಇಲಾಖೆಯ ಮುಂಶೀಗಂಜದ ಜಮೀನದಾರರಾಗಿದ್ದ ವರದಾಪ ಸಾದರಾಯ ಚೌಧರಿಯವರ ಜಮೀನಿನಲ್ಲಿ ಒಂದು ದೊಡ್ಡ ಆಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿದ್ದು ಅದರಂತಹ ಅದ್ಭುತವಾದ ಮೂರ್ತಿಯು ಈ ವರೆಗೆ ಎಲ್ಲಿಯೂ ಕಂಡು ಬಂದಿಲ್ಲ. ಮೂರ್ತಿಯು ಕರೀಕಲ್ಲಿನದಿದ್ದು, ಅದರ ಮೂಗು ಮಾತ್ರ ಸ್ವಲ್ಪ ಒಡೆದು ಹೋಗಿದೆ.

ಅಂಕೋಲೆಯ ರಣಾಂಗಣದ ಸಮಾಚಾರ

(ಸ್ವಂತ ಸುದ್ದಿಗಾರರಿಂದ)

ಎಲ್ಲೆಲ್ಲಿಯೂ ನಕಾರ ಘಂಟೆ.

ಶಾನಭೋಗರು ತೀರ್ವೆ ಎತ್ತುವದಕ್ಕಾಗಿ ಸಂಚಾರಕ್ಕೆ ಹೋದಾಗ ಕೆಲವು ಹಳ್ಳಿಗಳಲ್ಲಿ ಅವರಿಗೆ ಬಂದ ಅನುಭವಗಳು ವಾಚಕರಿಗೆ ಗೊತ್ತಾಗಿವೆಯಷ್ಟೇ? ಬೇರೆ ಹಳ್ಳಿಗಳಲ್ಲಿಯೂ ಅವರಿಗೆ ಇದೇ ತರದ ಅನುಭವವು ಬರುತ್ತಿದೆ. ಊರೊಳಗೆ ಶಾನಭೋಗರು ಹೋದರೆ ಅವರಿಗೆ ಉಳಿಯುವದಕ್ಕೆ ಸ್ಥಳ ಸಿಕ್ಕದೆ ಇದ್ದುದರಿಂದ ಧರ್ಮಶಾಲೆಯಲ್ಲಿಯೇ ಠಾಣ್ಯ ಹಾಕಿರುವರು. ಮೂರು ದಿನಗಳಾದರೂ ಒಂದು ಪೈ ಸಹ ವಸೂಲಾಗಲಿಲ್ಲ. ಉಗ್ರಾಣಿಯು ದಿನಾಲು ಊರೆಲ್ಲ ಸುತ್ತಿ ಹರಕೆ ಹಾಕಿ ಬರುತ್ತಿರುವನು!

ಸಂಚಗೇರಿಯ ಜನರು ತಾವು ಈ ವರ್ಷ ತೀರ್ವೆ ಕೊಡುವದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು.

ಬೇಲೆಯಲ್ಲಿ ಶಾನಭೋಗರು ಮುಂಜಾವಿನಿಂದ ಸಂಜೆಯವರೆಗೆ ಹೆಣಗಾಡಿದರೂ ನಿಷ್ಫಲವಾಯಿತು.

ಅವರ್ಸಾ, ಹಾರವಾಡ, ಭಾವಿಕೇರಿಗಳಲ್ಲಿ ಏನೂ ವಸೂಲಾಗಲಿಲ್ಲ. ಪೋಲೀಸ ದಲವನ್ನು ಕಟ್ಟಿಕೊಂಡು ಹೋದದ್ದು ವ್ಯರ್ಥವಾಯಿತು!

ಅಡಿಗೋಣದ ಕಥೆಯು ಕೇಳುವಂತಹದಿದೆ. ಶಾನಭೋಗರು ಈ ಊರಿಗೆ ಬಂದ ಕೂಡಲೆ ವಾಡಿಕೆಯಂತೆ ಪಟೇಲರ ಮನೆಗೆ ಹೋದರು. ಇವರನ್ನು ಕಂಡ ಕೂಡಲೆ ಪಟೇಲರು, "ನೀವು

ನನ್ನ ಮನೆಯಲ್ಲಿ ಕುಳ್ಳಿರಬೇಡರಿ

ನೀವು ಇಲ್ಲಿದ್ದುದನ್ನು ನಮ್ಮ ಊರವರು ಕಂಡರೆ ನನ್ನ ಮೇಲೆ ಬಹಿಷ್ಕಾರ ಹಾಕುವರು. ಹೊರಟು ಹೋಗಿರಿ" ಎಂದು ಹೇಳಿದರು. ತೀರ್ವೆಯ ಬಗ್ಗೆ ಕೇಳಲು, "ನಾನು ತೀರ್ವೆಯನ್ನು ಕೊಡುವದಿಲ್ಲ. ಕೊಟ್ಟರೆ ನಾನು ಊರಲ್ಲಿ ಉಳಿಯುವದೇ ಕಠಿಣವಾಗುವದು," ಎಂದರು. ಮುಂದೆ ಶಾನಭೋಗರು ದೇವಸ್ಥಾನದಲ್ಲಾದರೂ ಸ್ಥಳ ದೊರೆಯಿತೆಂದು ಹೋಗಲು ಅಲ್ಲಿಯ ಗುರವರು (ಪೂಜಾರಿ) "ಇಲ್ಲಿಂದ ಹೊರಟು ಹೋಗಿರಿ" ಎಂದು ಹೇಳಿದ್ದರಿಂದ ಅವರು ಖಿನ್ನವದನರಾಗಿ ಮನೆಯ ಹಾದಿ ಹಿಡಿದರು.

ಬಿಟ್ಟಿಯ ಬಲುಮೆ?

ಕುಂಟಗಣಿಯಲ್ಲಿ ಸರ್ವೆ ಆಫೀಸರರು ಗಾಡಿಗಳನ್ನು ಬಿಟ್ಟಿ ಹಿಡಿಯುವ ವಿಷಯದಲ್ಲಿ ಬಹಳೇ ಜುಲುಮೆ ನಡಿಸಿರುವರು. ಬಂಡಿಗಳ ಬಿಟ್ಟಿ ಹಿಡಿದು ಕೊಡದಿದ್ದರೆ ತಿಮ್ಮ ಪಾಟೀಲರಿಯನ್ನು ಶಿಕ್ಷಿಸಲಾಗುವದೆಂದು ಅವರು ಪಟೇಲರಿಗೆ ಬೆದರಿಸುತ್ತಿರುವರಂತೆ! ಸರ್ವೆ ಆಫೀಸರರಿಗೆ ಈ ಅಧಿಕಾರವು ಯಾವ ಆರ್ಡರನ್ನಿನಿಂದ ಪ್ರಾಪ್ತವಾಯಿತು!

ಎಂಟಾಣೆಯ ಮೀನ ಬೇಕಂತೆ!

ಗಂಗಾವಳಿಯ ದಂಡೆಯ ಹತ್ತರವಿರುವ ಕಟ್ಟಿಮನೆ ಜಾತಿಯ ಜನರು ಅಲ್ಲಿಯ ಹರಿಕಂತ್ರರಿಂದ (ಮೀನ ಹಿಡಿಯುವವರು) ದಿನಾಲು ಯಥೇಚ್ಛವಾಗಿ ಮೀನ ಹೊಡೆಯುತ್ತಿದ್ದರು. ಕೆಲವು ದಿನಗಳಿಂದ ಅವರು ತಮಗೆ ಎಂಟಾಣೆ ಬೆಲೆ ಬಾಳುವ ದೊಡ್ಡ ದೊಡ್ಡ ಮೀನಗಳನ್ನು ಕೊಡಿರೆಂದು ಪೀಡಿಸಹತ್ತಿದ ಮೂಲಕ ಹರಿಕಂತ್ರರು ಮೀನ ಕೊಡುವದನ್ನೇ ಬಿಟ್ಟರು. ಯಾವ ಸಹನಶೀಲತೆಗಾದರೂ ಮಿತಿ ಇರುವದಷ್ಟೇ?

ರಾಜೀನಾಮೆಗಳು ಬರುತ್ತಲೇ ಇವೆ!

ಅಗಸಗೋಣದ ಶ್ರೀ ಮಾಣನಾಯ್ಕರು ಪಟೇಲಕಿಗೆ ಶರಣು ಹೊಡೆದರು. ಶಿರೂರ, ಬೇಲೆಗಳ ಪಟೇಲರು ರಾಜೀನಾಮೆ ಕಳಸಿದರು. ರಾಜೀನಾಮೆ ಕೊಟ್ಟವರ ಸ್ಥಳದಲ್ಲಿ ಬಂದಿದ್ದ ಇಬ್ಬರ ಬದ್ಲೀ ಪಟೇಲರೂ ರಾಜೀನಾಮೆ ಕೊಟ್ಟರು. ದಿನಾಲು ಒಂದೆರಡು ರಾಜೀನಾಮೆಗಳು ಬರುತ್ತಲೇ ಇವೆ.

ಗುಳೇದಗುಡ್ಡದಲ್ಲಿ

ಪಂ. ಮೋತೀಲಾಲರ ಶ್ರಾದ್ಧದಿನ

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಯ ಮೇರೆಗೆ ತಾ|| ೧೫ ನೆಯ ದಿವಸ ಇಲ್ಲಿ ಪಂ. ಮೋತೀಲಾಲರ ಶ್ರಾದ್ಧ ದಿನವನ್ನು ಪಾಲಿಸಲಾಯಿತು. ಸಾಯಂಕಾಲ ಶ್ರೀ ಬಸವಣ್ಣದೇವರ ಗುಡಿಯ ಮುಂದೆ ಸಾರ್ವಜನಿಕ ಸಭೆ ಸೇರಿ ಸುಮಾರು ಸಾವಿರ ಜನರು ಹಾಕಿಕೊಟ್ಟ ಪ್ರತಿಜ್ಞೆ ಮಾಡಲಾಯಿತು. ಶ್ರೀ ಜೋಶಿ ಗಂಡೇರಾಯರು ಸಭೆಗೆ ಅಧ್ಯಕ್ಷರಾಗಿದ್ದರು.

ಹುಬ್ಬಳ್ಳಿಯಲ್ಲಿ

ಪಂ. ಮೋತೀಲಾಲರ ಶ್ರಾದ್ಧದಿನ.

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಗನುಸರಿಸಿ ತಾ|| ೧೫ ನೆಯ ದಿವಸ ಇಲ್ಲಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವು ಆಚರಿಸಲ್ಪಟ್ಟಿತು. ಸರಾಫರು, ಕಂಚುಗಾರರು ಹಾಗು ಕೆಲವು ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿ ಮುಚ್ಚಿ ಹರತಾಳ ಪಾಲಿಸಿದರು. ಮಧ್ಯಾಹ್ನ ೪ ಗಂಟೆಗೆ ಕೋಟೆಯ ಲೋಕಮಾನ್ಯ ಬೈಲಿನಿಂದ ಚೊಕ್ಕನೆತ್ತಿಯ ಪ್ರಚಂಡ ಮೆರವಣಿಗೆಯು ಹೊರಟು, ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು, ಗುಳಕವ್ವನ ಬೈಲಿಗೆ ತಲುಪಿತು. ಅಲ್ಲಿ ಶ್ರೀ ಎಲ್. ಎಚ್. ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಶ್ರೀ ಪುರಾಣಿಕ, ಶ್ರೀ ಗುಡಗುಂಟಿ ಇವರ ಭಾಷಣಗಳಾದವು. ಅಧ್ಯಕ್ಷರು ಪ್ರತಿಜ್ಞೆಯ ಒಂದೊಂದೇ ವಾಕ್ಯವನ್ನು ಓದಿ ಹೇಳಿ, ಸಭಿಕರಿಂದ ಅದನ್ನು ಉಚ್ಚರಿಸಿದರು. "ವಂದೇ ಮಾತರಂ" ಪದವಾದ ಬಳಿಕ ಸಭೆಯು ಮುಕ್ತಾಯವಾಯಿತು.

ಹುಬ್ಬಳ್ಳಿಯ

ಶ್ರೀ ಯಾದವರಿಗೆ ಶಿಕ್ಷೆ

ಕಾರವಾರದಲ್ಲಿರುವ ಹುಬ್ಬಳ್ಳಿಯ ಶ್ರೀ ವೆಂಕಟೇಶ ಹಣಮಂತ ಯಾದವ ಎಂಬ ಮರಾಠಾ ತರುಣರಿಗೆ ಕಾರವಾರದ ಅಧಿಕಾರಿಗಳು ನೋಟೀಸು ಕೊಟ್ಟು, ಮುನಸಿಪಲ್ ಹದ್ದು ಬಿಟ್ಟು ಹೋಗಲು ಕೇಳಿಕೊಂಡಿದ್ದರು. ಅವರು ಅಧಿಕಾರಿಗಳ ಆಜ್ಞೆಯನ್ನು ಭಂಗಿಸಿ ಅಲ್ಲಿಯೇ ಕಳವೂರಿ ವಾನರ ಸೇನೆಯ ಸಂಘಟನೆಯನ್ನು ಮಾಡಿದರು. ಅಧಿಕಾರಿಗಳು ಅವರನ್ನು ಈಚೆಗೆ ವಿಚಾರಣೆಗೆ ಗುರಿಮಾಡಿ ಅವರಿಗೆ ೧೧ ತಿಂಗಳ ಶಿಕ್ಷೆ ವಿಧಿಸಿದರು.

ಅಂಕೋಲೆಯಲ್ಲಿ

ಪೋಲೀಸನ ಫಜೀತಿ.

ಅಂಕೋಲೆಯ ಓರ್ವ ಪೋಲೀಸನು ಅಲ್ಲಿಯ ಒಬ್ಬ ಸ್ವಯಂಸೇವಕನನ್ನು ಹಾದಿಯಲ್ಲಿ ಕರೆದು, ಕೈಯೊಳಗಿನ ಗಂಟೆ ಕೊಡಲು ಅವನಿಗೆ ಕೇಳಿಕೊಂಡನು. ಸ್ವಯಂಸೇವಕನು ಅದನ್ನು ಕೊಡಲು ನಿರಾಕರಿಸಿದನು. ಪೋಲೀಸನು ಅವನನ್ನು ಸೆರೆಹಿಡಿದು, ಗಂಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡು, ಅದನ್ನು ಬಿಚ್ಚಿ ನೋಡಿದನು. ಗಂಟಿನಲ್ಲಿ ಜೋಳದ ಗಳಿದ್ದವು. ಪಶ್ಚಾತ್ತಾಪಪಟ್ಟು ಸ್ವಯಂಸೇವಕನನ್ನು ಬಿಟ್ಟನು.

ಅಮೇರಿಕೆಯ ಪತ್ರಿಕಾ ಪ್ರತಿನಿಧಿಗೆ

ಪಂ- ಜವಾಹಿರಲಾಲರ ನಿಷ್ಠುರ ಮಾತು

"ನಮಗೆ ಇಂಗ್ಲೀಷರ ಔದಾರ್ಯ ಬೇಕಾಗಿಲ್ಲ'

"ರಾಜ್ಯವನ್ನಪಹರಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ"

ಅಮೇರಿಕೆಯ "ಹಾರ್ಟಫೋರ್ಡ ಟಾಯಿಮ್ಸ" ಪತ್ರಿಕೆಯ ಪ್ರತಿನಿಧಿಯು ಪಂಡಿತ ಜವಾಹಿರಲಾಲರನ್ನು ಕಂಡುಕೊಂಡು, ಸದ್ಯದ ಸ್ಥಿತಿಯ ಸಂಬಂಧವಾಗಿ ಅವರಿಗೆ ಅವರ ಅಭಿಪ್ರಾಯ ಕೇಳಿದರು. ಆಗ ಪಂಡಿತ ಜವಾಹಿರಲಾಲರು ಕೆಳಗಿನಂತೆ ತಿಳಿಸಿದರು.

ಇವತ್ತಿನ ದಿವಸವೇ ನಾವು ಗೆದ್ದಿಯಲಿ ಇಲ್ಲವೆ ನಾಳೆಗೆ ನಮಗೆ ಗೆಲವು ಸಿಗಲಿ, ಎಂದಾದರೂ ಒಮ್ಮೆ ಹಿಂದುಸ್ಥಾನವು ಬ್ರಿಟಿಶರ ಕೈ ಬಿಟ್ಟು ಹೋಗತಕ್ಕದ್ದೇ. ಸ್ವತಂತ್ರತೆಯನ್ನು ಸಂಪಾದಿಸಿಕೊಳ್ಳಲು ಹಿಂದುಸ್ಥಾನವು ಟೊಂಕ ಕಟ್ಟಿದೆ. ಇನ್ನು ಮೇಲೆ ತಮ್ಮ ವ್ಯಾಪಾರವನ್ನು ಇಲ್ಲಿ ಪುನರುಜ್ಜೀವನಗೊಳಿಸುವದು ಬ್ರಿಟಿಶರಿಗೆ ಶಕ್ಯವಿಲ್ಲ. ಅವರು ಹೆಚ್ಚು ಹೆಚ್ಚು ಹಣ ವೆಚ್ಚ ಮಾಡಿ, ಹಾನಿಗೊಳಗಾಗಿ ಬರಬರುತ್ತ ದಿವಾಳಿ ತೆಗೆಯುವರು.

ಇಷ್ಟಾದ ಬಳಿಕ ಆ ಪ್ರತಿನಿಧಿಯು ಕಾಯಿದೆಗನುಸಾರ ವರ್ತಿಸಿದಲ್ಲಿ ನಿಮ್ಮ ಇಷ್ಟಾರ್ಥವು ಸಫಲವಾಗಲಿಕ್ಕಿಲ್ಲವೇ ಎಂಬುದಾಗಿ ಜವಾಹಿರಲಾಲರಿಗೆ ಪ್ರಶ್ನೆ ಮಾಡಿದನು. ಅದಕ್ಕೆ ಪಂಡಿತರು 'ಹಿಂದುಸ್ಥಾನದಲ್ಲಿ ಕಾಯದೆ ಎಂಬುವದು ಇಲ್ಲವೇ ಇಲ್ಲ. ಕಾಯಿದೆಯೇ ಇಲ್ಲದಿರುವಾಗ ಕಾಯಿದೆಶೀರ ಪದ್ಧತಿಯ ವಿಷಯವಾಗಿ ಮಾತಾಡುವದೂ ಅಸಂಬದ್ಧವಾಗಿದೆ' ಎಂದು ಉತ್ತರ ಕೊಟ್ಟರು.

ಇಂಗ್ಲಂಡದೊಡನೆ ಸಹಕರಿಸಿದಲ್ಲಿ, ಬರಬರುತ್ತ ಎಲ್ಲವೂ ಸರಿಹೋಗುವದಾಗಿ ಪ್ರತಿನಿಧಿಯು ಅಭಿಪ್ರಾಯ ವ್ಯಕ್ತಪಡಿಸಿದನು. "ಇದಕ್ಕೇಕೆ ಕಾಲಾವಧಿ? ಆಗುವದೆಲ್ಲ ಈಗಲೇ ಆಗಬೇಕು' ಎಂದು ಹೇಳಿ, ಪಂಡಿತರು "ರಾಜ್ಯವನ್ನು ಸಂಪಾದಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ'ವೆಂದು ಅವರಿಗೆ ತಿಳಿಸಿದರು.

"ಇಂಗ್ಲೀಷರ ಔದಾರ್ಯದಲ್ಲಿ ನಿಮಗೆ ವಿಶ್ವಾಸವಿಲ್ಲವೇ" ಎಂದು ಪ್ರತಿನಿಧಿಯು ಕೇಳಿದನು. ಅದಕ್ಕೆ ಪಂಡಿತರು "ನಾನು ಇಂಗ್ಲೀಷರ ಇತಿಹಾಸವನ್ನು ಸಂಪೂರ್ಣವಾಗಿ ಅರಿತಿದ್ದೇನೆ-ಇಂಗ್ಲೀಷರ ಔದಾರ್ಯದ ವಿಷಯವಾಗಿ ಅದರಲ್ಲಿ ಒಂದಾದರೂ ಉದಾಹರಣೆಯು ಕಂಡುಬಂದಿಲ್ಲ. ಇಂಗ್ಲೀಷರ ಔದಾರ್ಯವು ನಮಗೆ ಬೇಕಾಗಿಲ್ಲ'ವೆಂಬುದಾಗಿ ಹೇಳಿದರು.

ಮುಖ್ಯ ಪ್ರಧಾನರ ಜಾಹೀರನಾಮೆಯ ಸಂಬಂಧವಾಗಿ ಕಾಂಗ್ರೆಸ್ಸಿನವರ ಅಭಿಪ್ರಾಯವನ್ನು ತಿಳಿಸಲು ಪ್ರತಿನಿಧಿಯು ಕೇಳಲಾಗಿ "ವರ್ಕಿಂಗ ಕಮೀಟಿಯು ಇನ್ನು ಸ್ವಲ್ಪ ದಿನಗಳಲ್ಲಿಯೇ ಅದನ್ನು ನಿರ್ಧರಿಸುವದಾಗಿ" ಪಂಡಿತರು ಅವರಿಗೆ ತಿಳಿಸಿದರು.

ಮಹಾತ್ಮರು ಕಾಯರಾಕ್ಕೆ ಬರುವರು

ಕಾಯುರಾ ಜಿಲ್ಲಾ ಕಾಂಗ್ರೆಸ ಕಮೀಟಿಯ ಓರ್ವ ಸಭಾಸದರಿಗೆ ಮಹಾತ್ಮಾ ಗಾಂಧಿಯವರು ಕೆಳಗಿನಂತೆ ಪತ್ರ ಬರೆದಿದ್ದಾರೆ—

ನಾನು ಬೇಗನೆ ಕಾಯುರಾ ಜಿಲ್ಲೆಗೆ ಬರುವವನಿದ್ದೇನೆ. ಒಕ್ಕಂದವಂತೂ ಆಗುವ ಆಶೆಯಿಲ್ಲ. ಒಕ್ಕಂದವು ಒಂದು ವೇಳೆ ಸಾಧ್ಯವಾದಲ್ಲಿ ಈ ಸತ್ಯಾಗ್ರಹ ಚಳವಳಿಯಲ್ಲಿ ನಷ್ಟಕ್ಕೆ ಗುರಿಯಾದ ರೈತರ ನಷ್ಟ ತುಂಬಿಕೊಡುವ ಬಗ್ಗೆ ನಿಸ್ಸಂದೇಹವಾಗಿ ಪ್ರಯತ್ನಿಸುವೆನು.

ಸರಕಾರಕ್ಕೆ ೫ ಕೋಟಿ ರುಪಾಯಿ ಹಾನಿ

(ಸಿಮ್ಲಾ, ಮಾರ್ಚ ತಾ|| ೧೭)

ರೇಲ್ವೆ ಖಾತೆಯು ಜನವರಿ ಪತ್ರಿಕೆಯನ್ನು ಬಾಯಿಗೊಡುವದರಿಂದಾಗಿ ಸರಕಾರಕ್ಕೆ ೫ ಕೋಟಿ ರುಪಾಯಿಗಳು ಕಡಿಮೆ ದ್ರವ್ಯವಾಗಿ ರೇಲ್ವೆಯ ಆಯವ್ಯಯ ಪತ್ರಿಕೆಯಿಂದ ತಿಳಿದು ಬರುತ್ತದೆ.

ಶ್ರೀ ವಿಠ್ಠಲಭಾಯಿಯವರು ಯುರೋಪಕ್ಕೆ ಹೋಗುವರು

ಮುಂಬಯಿಯ 'ಕ್ರೋನಿಕ್ಲಿನಿಕ ನರ್ಸಿಂಗ ಹೋಮ"ದಲ್ಲಿ ಈಗ ಔಷಧೋಪಚಾರ ಹೊಂದುತ್ತಿರುವ ಶ್ರೀ ವಿಠ್ಠಲಭಾಯಿ ಪಟೇಲರವರು ಔಷಧೋಪಚಾರ ಪಡೆಯುವದಕ್ಕಾಗಿ ತಾ|| ೨೪ನೆಯ ದಿವಸ ಯುರೋಪಖಂಡಕ್ಕೆ ಹೊರಡುವವರಿದ್ದಾರೆ.

ಮದುಮಗನ ಫಜೀತಿಯಾಯಿತು

ಪೋರಬಂದರದ ಸ್ವಯಂಸೇವಕರು ಒಂದು ದಿವಸ ಅಲ್ಲಿಯ ಕುಡುಕರ ಹಾಗೂ ಗಾಂಜಾಸೇವಕರ ಹೆಸರುಗಳನ್ನು ಕಾಗದಗಳಲ್ಲಿ ಬರೆದು, ಅವುಗಳನ್ನು ಅಲ್ಲಲ್ಲಿ ಗೋಡೆಗೆ ಅಂಟಿಸಿದ್ದರು. ಕುಡುಕರ ಪಟ್ಟಿಯಲ್ಲಿ ಬೇಗನೆ ಮದುವೆಯಾಗತಕ್ಕ ಓರ್ವ ಮೀನಗಾರನವಾದರೂ ಹೆಸರು ಇತ್ತು. ವಧುವಿನ ಪಕ್ಷದವರು ಅದನ್ನು ನೋಡಿಕೊಂಡು ಆ ಮೀನಗಾರನಿಗೆ ಹೆಣ್ಣನ್ನು ಕೊಡಲು ನಿರಾಕರಿಸಿದರು. ಮದುಮಗನ ಕೈಕಾಲೇ ಹೋದವು. ಅವನು ಸ್ವಯಂಸೇವಕರಲ್ಲಿಗೆ ಹೋಗಿ ಇನ್ನು ಮುಂದೆ ಕುಡಿಯುವದಿಲ್ಲವಾಗಿ ವಚನ ಕೊಟ್ಟನು. ಸ್ವಯಂಸೇವಕರು ವಧುವಿನ ಪಕ್ಷದವರಲ್ಲಿಗೆ ಹೋಗಿ "ಕುಡಿಯುವದಿಲ್ಲವಾಗಿ ವಚನಕೊಟ್ಟಿದ್ದಾನೆ. ಕಾರಣ ಲಗ್ನ ಕಾರ್ಯವನ್ನು ನೆರವೇರಿಸಿರಿ" ಎಂದು ತಿಳಿಸಿದರು. ಅವರು ಒಪ್ಪಿ ಆ ಮೇಲೆ ಕೆಲವು ದಿನಗಳಲ್ಲಿ ಲಗ್ನ ಸಮಾರಂಭವನ್ನು ನೆರವೇರಿಸಿದರು.

ದೊಡ್ಡ ಆಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿತು

ಬಂಗಾಲ ಇಲಾಖೆಯ ಸೋನಾರಬಾಜಲ ಜಮೀನದಾರರಾಗಿದ್ದ ವರದಾಪ್ರಸಾದರಾಯ ಚೌಧರಿಯವರ ಜಮೀನಿನಲ್ಲಿ ಒಂದು ದೊಡ್ಡ ಆಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿತು. ಅದರಂತಹ ಅದ್ಭುತವಾದ ಮೂರ್ತಿಯು ಈ ವರೆಗೆ ಎಲ್ಲಿಯೂ ಕಂಡು ಬಂದಿಲ್ಲ. ಮೂರ್ತಿಯು ಕರೇಕಲ್ಲಿನದಿದ್ದು, ಅದರ ಮೂಗು ಮಾತ್ರ ಸ್ವಲ್ಪ ಒಡೆದು ಹೋಗಿದೆ.

ಗದಗ—ಬೆಟಗೇರಿಯ ಸುದ್ದಿ

(ಸ್ವಂತ ಸುದ್ದಿಗಾರರಿಂದ)

ರೈತರ ದಿನ

ತಾ॥ ೧೩ ನೆಯ ದಿವಸ "ರೈತರ ದಿನ"ವು ಆಚರಿಸಲ್ಪಟ್ಟಿತು. ಸಂಜೆಗೆ ಮೆರವಣಿಗೆಯಾದ ನಂತರ ಗಾಂಧಿ ಚೌಕಿನಲ್ಲಿ ಸಭೆ ನೆರೆದು, ಆ ದಿನದ ಕಾರ್ಯಕ್ರಮಗಳು ಜರುಗಿಸಲ್ಪಟ್ಟವು. ಶ್ರೀ ಮಹಾದೇವಪ್ಪ [illegible] ನಾ॥ ಅಬ್ಬಿಗೇರಿ ಇವರು ಸಭೆಗೆ ಅಧ್ಯಕ್ಷರಾಗಿದ್ದರು. ಶ್ರೀ [illegible]ಗಿ ವಕೀಲರು "ರೈತವೇ ಬರೆ ರಾಷ್ಟ್ರ; ರಾಷ್ಟ್ರವೆಂದರೆ ರೈತರು" ಎಂಬ ಪತ್ರಿಕೆಯನ್ನು ಓದಿ ತೋರಿಸಿದರು. ರೈತರ ಸದ್ಯದ ಸ್ಥಿತಿಯ ವಿಷಯವಾಗಿ ಶ್ರೀ ಬಾಳಿಹಾಳ [illegible] ಭಾಷಣ ಮಾಡಿದ ಬಳಿಕ ಸಭೆಯು ಮುಗಿಯಿತು.

ಪಂ. ಮೋತೀಲಾಲರ ಶ್ರಾದ್ಧ ದಿನ

ತಾ॥ ೧೫ ನೆಯ ದಿವಸ ಮ. ಮಹಾತ್ಮಾ ಗಾಂಧಿಯವರ ಆಜ್ಞಾನುಸಾರವಾಗಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವನ್ನು ಆಚರಿಸಲಾಯಿತು. [illegible] ವ್ಯಾಪಾರಸ್ಥರು ಸಂಪೂರ್ಣ ಹರತಾಳ ಮಾಡಿದರು. ಸಂಜೆಯ ೫ ಗಂಟೆಗೆ ಗಾಂಧಿ ಚೌಕಿನಿಂದ ಮೆರವಣಿಗೆ ಹೊರಟು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೭ ಗಂಟೆಗೆ ಗಾಂಧಿ ಚೌಕಿಗೆ ಮರಳಿ ಬಂತು. ಅಲ್ಲಿ ಶ್ರೀ ತಿಪ್ಪಣ್ಣಶಾಸ್ತ್ರಿ ಕಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಶ್ರೀ ಜಾಲಿಹಾಳ ವಕೀಲರ ಭಾಷಣವಾಯಿತು. ಅವರು ತಮ್ಮ ಭಾಷಣದಲ್ಲಿ, ಪರದೇಶಿ ಅರಿವೆ, ಸರಸಿಂದಿ ಮೊದಲಾದ ಪದಾರ್ಥಗಳಿಂದ ದೂರಿರುವ ಬಗ್ಗೆ ಪ್ರತಿಜ್ಞೆ ಮಾಡಲು ಸಭಿಕರಿಗೆ ಹೇಳಿಕೊಂಡರು. ಬಳಿಕ ಶ್ರೀ ಗೋಖಲೆ ಭಾಸ್ಕರರಾಯರು ಪಂಡಿತ ಮೋತೀಲಾಲರ ಜೀವನ ಚರಿತ್ರೆಯನ್ನು ಹೇಳಿದರು. ಅಧ್ಯಕ್ಷರು ಸಮಾರೋಪಭಾಷಣ ಮಾಡಿ ಮಹಾತ್ಮರು ಹಾಕಿಕೊಟ್ಟ ಪ್ರತಿಜ್ಞೆಯನ್ನು ಎಲ್ಲರಿಂದಲೂ ಉಚ್ಚಾರ ಮಾಡಿಸಿಕೊಂಡರು.

ಪಿಕೆಟಿಂಗಕ್ಕೆ ಜಯ ದೊರೆಯಿತು

ನೂಲಿನ ವ್ಯಾಪಾರಿಗಳಾದ ಶ್ರೀ ಪಟಪಟಿ ಮತ್ತು ಚವ್ಹಾಣ ಇವರ ಅಂಗಡಿಗಳ ಮೇಲೆ ಪಿಕೆಟಿಂಗ ಸುರುವಾದ ೩ ದಿನಗಳ ಮೇಲೆ ಅವರೀರ್ವರೂ ಸ್ವದೇಶಿ ಮಂಡಲದವರ ಕರಾರುಗಳಿಗೆ ಒಪ್ಪಿಕೊಂಡು ಇನ್ನು ಮೇಲೆ ಒಂದು ಎಳೆಯಾದರೂ ಪರದೇಶಿ ನೂಲು ತರಿಸುವದಿಲ್ಲವೆಂದು ಬರೆದುಕೊಟ್ಟಿದ್ದರಿಂದ ಪಿಕೆಟಿಂಗ ತೆಗೆಯಲ್ಪಟ್ಟಿದೆ.

ಈ ವಾರದಲ್ಲಿ ಪರದೇಶಿ ಸಕ್ಕರೆ ಮಾರುವವರ ಮೇಲೆ ಕಾರ್ಯಕರ್ತರು ಕಣ್ಣಿಡುವವರಿದ್ದಾರೆ.

ಬೆಳಗಾವಿಯಲ್ಲಿ ೭ ಜನರನ್ನು ಹಿಡಿದರು

ಜನಗಣತಿಯ ಬಹಿಷ್ಕಾರ ಹಾಕಲು ಜನರಿಗೆ ಬೋಧಿಸಿದ್ದಕ್ಕಾಗಿ ಬೆಳಗಾವಿಯಲ್ಲಿ ೭ ಜನರು [illegible] ಮಾಡಲ್ಪಟ್ಟಿದ್ದು, ಅವರ ಖಟ್ಲೆಯ ವಿಚಾರಣೆಯು ನಿನ್ನಿನ ದಿವಸ ಪ್ರಾರಂಭವಾಗತಕ್ಕದ್ದಿತ್ತು.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಖಾದಿಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂ[illegible]ದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ್ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಸಬಾಜಾರ ವಿಜಾಪುರ

ಸ್ಟ್ಯಾಂಪಲ್) ಮಸಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳೆ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ರೇಟ್ಸ್ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪ ಮಸಿ ೩ ಔಂಸಿನ ೧ಡಜನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೆರಿ ಬ್ರದರ್ಸ

ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ್ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು [illegible] ಸಂಪಾದಕ [illegible]ಚಾರ್ಯ ಕೇರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದಲೇ ಪ್ರಸಿದ್ಧಿ ಪಡಿಸಲ್ಪಟ್ಟಿತು.

ರ. ನಂ. ಬಿ. ೨೦೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

...परवशं दुःखं । यद्यदात्मवशं सुखम् ॥ –मनु.

ಕನ್ನಡಿಗ

KANNADIGA
BAGALKOT

ಸಂಪಾದಕರು:— ವೆಂಕಟೇಶ ಶೇಷರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ... ಫಾಲ್ಗುಣ ವದ್ಯ ೨ ಶಕೆ ೧೮೫೨ ತಾ|| ೧೯—೩—೩೧ [ಸಂಚಿಕೆ ೧೯೩

ಗಾಂಧಿ ಮತ್ತು ವ್ಹಾಯಿಸರಾಯರ ಚರ್ಚೆ

ಒಪ್ಪಂದವಾಗುವ ಆಶೆಯಿದೆ

(ತಂತಿಯ ವಾರ್ತೆ ತಾ|| ೧೮)

ಮಹಾತ್ಮಾಗಾಂಧಿಯವರು ನಿನ್ನೆ ದಿವಸ ೨—೩೦ ಗಂಟೆಗೆ ವ್ಹಾಯಿಸರಾಯರ ವಸತಿಗೃಹದಲ್ಲಿ ವ್ಹಾಯಿಸರಾಯರನ್ನು ಕಂಡು ಬೋಡರು. ಅವರಿಬ್ಬರಲ್ಲಿಯೂ ಬರೋಬರಿ ೩ ತಾಸು ೪೦ ಮಿನಿಟುಗಳವರೆಗೆ ಚರ್ಚೆಯು ನಡೆದು, ಚರ್ಚೆಯು ಮುಂದಿನದಕ್ಕೆ ಮುಂದರಿಸಲ್ಪಟ್ಟಿತು. ಚರ್ಚೆಯ ಸಮಯದಲ್ಲಿ ಮೂರನೇದವರಾರೂ ಇದ್ದಿದ್ದಿಲ್ಲ. ಮುಂದಿನ ಲಂಡನ ಗೋಲಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷದವರ ಸೇರ್ಪಡೆ, ಪೋಲೀಸರ ಅತ್ಯಾಚಾರ ಈ ಸಂಬಂಧವಾಗಿ ಇಬ್ಬರೂ ಪ್ರಾಂಜಲ ಮನಸ್ಸಿನಿಂದ ಚರ್ಚೆ ಮಾಡಿದ್ದಾಗಿಯೂ, ಮಹಾತ್ಮಾ ಗಾಂಧಿಯವರು ಈ ವರೆಗೆ ಆದ ಚರ್ಚೆಯಿಂದ ಸಮಾಧಾನ ಹೊಂದಿದವರಾಗಿಯೂ ತಿಳಿದು ಬರುತ್ತದೆ. ಒಪ್ಪಂದವು ಸಾಧ್ಯವಾಗಬಹುದು. ಮಹಾತ್ಮರು ಈ ದಿನ ಮತ್ತೆ ವ್ಹಾಯಿಸರಾಯರನ್ನು ಕಂಡು ಚರ್ಚೆ ಮಾಡತಕ್ಕವರಿದ್ದಾರೆ.

ಮುಂಬಯಿ ಸರಕಾರಕ್ಕೆ ೧ಕೋಟಿ ರುಪಾಯಿ ಹಾನಿ

(ತಂತಿಯವಾರ್ತೆ ತಾ||೧೮)

ಕಾಯದೆ ಭಂಗ ಚಳವಳಿಯ ಮೂಲಕವಾಗಿ ಪೋಲೀಸ ಖಾತೆ ಹಾಗು ಸೆಕ್ರೆಟೆರಿಯಟ ಜೇಲು ಇವುಗಳಿಗಾಗಿ ಹೆಚ್ಚು ಹಣ ವೆಚ್ಚ ಮಾಡಬೇಕಾದ ಪ್ರಸಂಗ ಬಿದ್ದದ್ದರಿಂದಲೂ, ಸರೆ ಸಿಂದಿ ಖಾತೆ ಹಾಗು ಜಂಗಲ ಖಾತೆ ಇವುಗಳಿಂದ ಕ್ರಮವಾಗಿ ೭೬ ಹಾಗು ೧೯ ಲಕ್ಷ ರುಪಾಯಿ ಉತ್ಪನ್ನ ಕಡಿಮೆ ಬಂದಿದ್ದರಿಂದಲೂ ಕಾಯಿದೆಭಂಗದ ಚಳವಳಿಯ ಮೂಲಕವಾಗಿ ಭೂಕಂದಾಯವು ವಸೂಲಾಗದ್ದರಿಂದಲೂ ಮುಂಬಯಿ ಸರಕಾರಕ್ಕೆ ಜಮಾಖರ್ಚ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಈ ವರ್ಷ ೧ ಕೋಟಿ ರುಪಾಯಿ ಹಣವು ಕಡಿಮೆ ಬಿದ್ದಿದೆ, ಅದ್ದರಿಂದ ಹೆಚ್ಚಿಗೆ ಕರವನ್ನು ಕೂಡಿಸಬೇಕಾಗಿ ಸೂಚಿಸುವದರಲ್ಲಿ ಬಂದಿದೆ. ಪ್ರಾಥಮಿಕ ಶಿಕ್ಷಣದ ಗ್ರ್ಯಾಂಟು ೧೦೦ಕ್ಕೆ ೫ರಂತೆ ಕಡಿಮೆ ಮಾಡಲ್ಪಟ್ಟಿದೆ.

ಮಹಾತ್ಮರು ಬೋರಸಾದಕ್ಕೆ ಬರುವರು

ಮಹಾತ್ಮಾ ಗಾಂಧಿಯವರು ತಾ|| ೨೦ ನೆಯ ದಿವಸ ಅಹಮ್ಮದಾಬಾದಕ್ಕೆ ಬಂದು ಅಲ್ಲಿ ಒಂದು ದಿವಸ ಇದ್ದು, ಮರುದಿವಸ ಬೋರಸಾದಕ್ಕೆ ಹೋಗುವರಾಗಿ ತಿಳಿದು ಬರುತ್ತದೆ.

ಶ್ರೀ ಕರಮರಕರರ ಮೇಲೆ ವಾರಂಟು

ಈಗ ವಿಜಾಪುರ ಜಿಲ್ಲೆಯಲ್ಲಿ ಗ್ರಾಮಸಂಘಟನೆಯ ಕಾರ್ಯವನ್ನು ಕೈಕೊಂಡಿರುವ ಧಾರವಾಡದ "ಕರ್ಮವೀರ" ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಕರಮರಕರ ದತ್ತಾತ್ರಯರಾಯರ ಮೇಲೆ, ರಾಜದ್ರೋಹಾತ್ಮಕ ಲೇಖನ ಬರೆದುದಕ್ಕಾಗಿ ೧೨೪ ಅ ಕಲಮಿನನ್ವಯ ವಾರಂಟು ಹೊರಟಿರುವದಾಗಿ ತಿಳಿದು ಬರುತ್ತದೆ.

"ಚಿರನೇರ"ದ ಸಂಬಂಧವಾಗಿ

ಮಹಾತ್ಮರಿಗೆ ತಾರು

ಪೋಲೀಸ ಅತ್ಯಾಚಾರದ ವಿಷಯವಾಗಿ ವಿಚಾರಣೆ ನಡಿಸಬೇಕೆಂದು ಒಪ್ಪಂದದ ಕರಾರುಗಳಲ್ಲಿ ನಮೂದಿಸಿದ್ದಲ್ಲಿ ಚಿರನೇರ ಗೋಳಿಬಾರ ಪ್ರಕರಣವನ್ನೂ ಸಮಾವೇಶ ಮಾಡಿಕೊಳ್ಳಬೇಕೆಂದು ಶ್ರೀ ಜಮುನಾದಾಸ ಮೆಹತಾರವರು ಮಹಾತ್ಮಾ ಗಾಂಧಿಯವರಿಗೆ ತಾರಿನಿಂದ ತಿಳಿಸಿದ್ದಾರೆ.

ಶ್ರೀ ಭಗತಸಿಂಗ, ರಾಜಗುರು ಮೊದಲಾದವರನ್ನು ಬೇಗನೆ ಗಲ್ಲಿಗೇರಿಸುವರೆಂಬುದಾಗಿ ಪ್ರಸಿದ್ಧವಾದ ಸುದ್ದಿಯು ಸುಳ್ಳಿರುವದೆಂಬುದಾಗಿ ಮುಂಬಯಿಯ ಪೋಲೀಸ ಕಮಿಶನರರು "ಕ್ರಾನಿಕಲ್", ಪತ್ರಿಕೆಗೆ ತಿಳಿಸಿರುವರು.

ಭರತಖಂಡದಲ್ಲಿಯ ಬಲುಮೆಯ ರಾಜ್ಯ.

ಪೋಲೀಸರ ಪುಂಡಾಟಿಕೆಯ ಕೆಲವು ಸಂಗತಿಗಳು

ಕೆಲವು ದಿನಗಳ ಹಿಂದೆ ಹಿಂದುಸ್ಥಾನಕ್ಕೆ ಬಂದು ಇಲ್ಲಿಯ ಸ್ಥಿತಿಗತಿಗಳನ್ನು ನೋಡಿಕೊಂಡು ಹೋದ ಇಂಗ್ಲಂಡದ ಮಿ, ಎಚ್. ಎನ್. ಬ್ರೇಲ್ಸಫೋರ್ಡರು 'ಮ್ಯಾಂಚೆಸ್ಟರ ಗಾರ್ಡಿಯನ್" ಪತ್ರಿಕೆಯಲ್ಲಿ ಪೋಲೀಸರ ಅತ್ಯಾಚಾರದ ವಿಷಯವಾಗಿ ಒಂದು ಲೇಖವನ್ನು ಬರೆದಿದ್ದು, ಅದರಲ್ಲಿ ಅವರು ಅನ್ನುವದೇನಂದರೆ:—

ಒಂದು ದಿವಸ ಕಲಕತ್ತೆಯ ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕಟ್ಟಡದ ಮುಂಭಾಗದಲ್ಲಿ ನಿಂತುಕೊಂಡು, ಲಾಠಿಗಳನ್ನು ಪಯೋಗಿಸಿ ಮೆರವಣಿಗೆಯನ್ನು ಚದುರಿಸುತ್ತಿರುವ ಪೋಲೀಸರನ್ನು ಉದ್ದೇಶಿಸಿ "ಹೇಡಿಗಳು" ಎಂಬುವದಾಗಿ ಕೂಗಿದರು. ಎರಡು ತಾಸುಗಳ ಮೇಲೆ ಪೋಲೀಸರು ವಿಶ್ವವಿದ್ಯಾಲಯದಲ್ಲಿ ಹೊಕ್ಕು, ಕ್ಲಾಸುಗಳಲ್ಲಿ ನುಗ್ಗಿ ಹೋಗಿ ಗೋಡೆಗಳಿಗೆ ರಕ್ತವು ಚಿಮ್ಮುವ ತನಕ ವಿದ್ಯಾರ್ಥಿಗಳನ್ನು ಒಳ್ಳೆ ಥಳಿಸಿದರು. ವಿಶ್ವವಿದ್ಯಾಲಯದ ಅಧಿಕಾರಿಗಳು ಪೋಲೀಸರ ಅತ್ಯಾಚಾರದ ವಿಷಯ ಮೇಲಿನ ಅಧಿಕಾರಿಗಳಿಗೆ ದೂರು ಹೇಳಿಕೊಂಡರೂ ಸಹ ಪೋಲೀಸರಿಗೆ ಆ ಬಗ್ಗೆ ಏನೊಂದೂ ಶಿಕ್ಷೆಯಾಗಲಿಲ್ಲ.

ಲಾಹೋರದಲ್ಲಿಯಾದರೂ ಇಂತಹದೇ ಒಂದು ಸಂಗತಿಯು ಸಂಭವಿಸಿತು. ಅಲ್ಲಿ ಕೆಲವು ಪೋಲೀಸರು ಓರ್ವ ಇಂಗ್ಲೀಷ ಅಧಿಕಾರಿಯ ನೇತೃತ್ವದಲ್ಲಿ ಕಾಲೇಜಕ್ಕೆ ಮುತ್ತಿಗೆ ಹಾಕಿ ಒಂದು ಕ್ಲಾಸಿನಲ್ಲಿ ನುಗ್ಗಿ ಹೋಗಿ, ಅಲ್ಲಿದ್ದ ವಿದ್ಯಾರ್ಥಿಗಳನ್ನು ಮತ್ತು ಪ್ರೊಫೆಸರರನ್ನು ಲಾಠಿಗಳಿಂದ ಹೊಡೆದರು. ಬೇರೆ ಕಾಲೇಜದ ಕೆಲವು ವಿದ್ಯಾರ್ಥಿಗಳು ಪಿಕೆಟಿಂಗ ಕಾರ್ಯದಲ್ಲಿ ತೊಡಗಿದ್ದರಿಂದ ಅವರ ಬದಲು ಇವರಿಗೆ ತಪ್ಪಿ ಹೊಡತ ಬಿದ್ದವೆಂದೂ ಹಿಂದುಗಡೆಯಲ್ಲಿ ಕೆಲವರಿಂದ ನನಗೆ ತಿಳಿದು ಬಂದಿತು.

ಬಂಗಾಲ ಇಲಾಖೆಯ ಕೊಂಟಾಯಿ ಎಂಬಲ್ಲಿ ಜನರನ್ನು ಚದುರಿಸುತ್ತಿರುವಾಗ ಪೋಲೀಸ ಅಧಿಕಾರಿಯು ಅವರಲ್ಲಿ ಐದು ಜನರನ್ನು ಕೆರೆಯಲ್ಲಿ ನೂಗಿಸಿ ಅವರನ್ನು ಮುಳುಗಿಸಿದರು. ಮೀರತದಲ್ಲಿ ಸಭೆಯು ನೆರೆದಾಗ ಪೋಲೀಸರು ಅಲ್ಲಿಗೆ, ಒಂದು ಸಭೆಯನ್ನು ಮುರಿದು, ಅಲ್ಲಿಯ ಒಬ್ಬ ಪ್ರಸಿದ್ಧ ವಕೀಲರಾಗಿದ್ದ ಅಂದಿನ ವ್ಯಾಖ್ಯಾತರನ್ನು ಸೆರೆ ಹಿಡಿದರು. ಸೆರೆ ಹಿಡಿದೊಯ್ಯುವಾಗ ಅವರು ಹೊಡೆಯಲ್ಪಟ್ಟಿದ್ದಲ್ಲದೆ, ಒಬ್ಬ ಪೋಲೀಸನು ಅವರ ಮೇಲೆ ಗುಂಡು ಹಾರಿಸಿದನು. ಈ ಮೂಲಕವಾಗಿ ಅವರ ಬಲಗೈಯನ್ನು ಕೊಯ್ದು ತೆಗೆಯಬೇಕಾಯಿತು. ಕಾಂಗ್ರೆಸ ಪಕ್ಷದವರಿಗೆ ತಮ್ಮ ಸಹಾನುಭೂತಿಯನ್ನು ತೋರಿಸಲು ಹಿಂದುಮುಂದೆ ನೋಡುತ್ತಿದ್ದವರು, ಅಧಿಕಾರಿಗಳ ಈ ದಬ್ಬಾಳಿಕೆಯ ವರ್ತನವನ್ನು ಕಂಡು, ಅವರ ಕೃತಿಯನ್ನು ನಿಷೇಧಿಸಿದರು

ಗುಜರಾಥದ ಹಳ್ಳಿಗಳಲ್ಲಿಯ ಪೋಲೀಸರ ಪುಂಡಾಟಿಕೆಯ ಸಂಬಂಧವಾಗಿ ನನ್ನಲ್ಲಿ ಸಾಕಷ್ಟು ಆಧಾರಗಳಿವೆ. ಯಾಕಂದರೆ ನಾನು ಆ ಹಳ್ಳಿಗಳಲ್ಲಿ ೫ ದಿನಗಳ ವರೆಗೆ ತಿರುಗಾಡಿದ್ದೇನೆ. ಪಟೇಲರಲ್ಲಿಯ ಮಂದ ಧಾರಣೆ, ಮಹಾತ್ಮರ ಮೇಲಿನ ಭಕ್ತಿ, ಸ್ವರಾಜ್ಯ ಸಂಪಾದನೆಯ ಉತ್ಕಟ ಇಚ್ಛೆ, ಇವುಗಳನ್ನೇ ಉದ್ದೇಶವಿಟ್ಟುಕೊಂಡು ಬಾರ್ಡೋಲಿ ಹಾಗು ಕಾಯರಾ ಜಿಲ್ಹೆಯ ರೈತರು ಭೂಕಂದಾಯವನ್ನು ಕೊಡಲು ನಿರಾಕರಿಸುತ್ತಿರುವರು, ಇದರ ಪ್ರತೀಕಾರಾರ್ಥ ಅಧಿಕಾರಿಗಳು ಅವರ ಹೊಲ, ಎಮ್ಮೆ, ಒಕ್ಕಲತನಕ್ಕೆ ಉಪಯೋಗವಾಗುವ ಉಪಕರಣ ಮೊದಲಾದವುಗಳನ್ನು ಜಪ್ತ ಮಾಡಿ ಅವುಗಳನ್ನು ಕೈಗೆ ಬಂದಂತೆ ಮಾರಿ ಬಿಡುತ್ತಿರುವರು. ಇದಲ್ಲದೆ ಕೆಲವು ಹಳ್ಳಿಗಳಲ್ಲಿ ಪೋಲೀಸರು ರೈತರಿಗೆ ಪೀಡೆಯನ್ನು ಕೊಟ್ಟಿರುವರು. ಪೋಲೀಸರು ಹಳ್ಳಿಗಳನ್ನು ಮುತ್ತಿ ರೈತರನ್ನು ಲಾಠಿಗಳಿಂದ ಹಾಗು ಬಂದೂಕಿನ ಮೊನೆಗಳಿಂದ ಸಿಕ್ಕ ಸಿಕ್ಕ ಹಾಗೆ ಹೊಡೆದಿರುವರು. ಈ ದಬ್ಬಾಳಿಕೆಗೆ ಬಲಿಬಿದ್ದ ೪೫ ಜನರು ಸ್ವತಃ ನನ್ನಲ್ಲಿಗೆ ಬಂದು ಎಲ್ಲ ಸಂಗತಿಯನ್ನು ತಿಳಿಸಿ ಹೋದರು. ನಾನು ಕೆಲವರ ಗಾಯಗಳನ್ನು ಕಣ್ಣಿಟ್ಟು ನೋಡಿದೆನು, ಒಬ್ಬನ ಕೈಯು ಮುರಿದು ಹೋಗಿತ್ತು. ಉಳಿದವರಿಗೆ ಎಲ್ಲೆಲ್ಲಿಯೂ ಪೆಟ್ಟುಗಳು ಬಿದ್ದಿದ್ದವು

ಒಂದು ಹಳ್ಳಿಯಲ್ಲಿ ಪೋಲೀಸರು ಅಲ್ಲಿಯ ಗುಡಿ ಹಾಗು ಮನೆಗಳ ಮೇಲಿನ ರಾಷ್ಟ್ರಧ್ವಜಗಳನ್ನು ಕಿತ್ತಿ ಒಗೆದು ಅಲ್ಲಿಯ ೮ ಜನ ರೈತರಿಗೆ ಒಳ್ಳೆ ಪೆಟ್ಟು ಕೊಟ್ಟರು. ರಾಷ್ಟ್ರಧ್ವಜಗಳು ನಿಲ್ಲಿಸಲ್ಪಟ್ಟ ಮನೆಗಳ ಹತ್ತರ ಅವರ ಮನೆಗಳಿದ್ದುದೇ ಅವರ ಅಪರಾಧ. ಗಾಂಧಿ ಟೊಪ್ಪಿಗೆಯನ್ನು ತಲೆಯ ಮೇಲಿಂದ ತೆಗೆಯದ್ದಕ್ಕಾಗಿಯೂ ಪೋಲೀಸರಿಗೆ ೭ ಸಾರೆ ಸಲಾಮು ಮಾಡದ್ದಕ್ಕಾಗಿಯೂ ಕೆಲವರಿಗೆ ಪೆಟ್ಟುಗಳು ಬಿದ್ದವೆ.

ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಬೇಡಿರಿ

"ಅಸೋಸಿಯೇಟೆಡ್ ಪ್ರೆಸ್" ದ ಪ್ರತಿನಿಧಿಯು ಜೇ. ಎಂ. ಸೇನಗುಪ್ತರವರನ್ನು ಅಲಹಾಬಾದದಲ್ಲಿ ಕಂಡುಕೊಂಡು, ಸಂಧಾನದ ಸಂಬಂಧವಾಗಿ ಅವರಿಗೆ ಅವರ ಅಭಿಪ್ರಾಯ ಕೇಳಿದನು. ಆಗ ಶ್ರೀ ಸೇನಗುಪ್ತರು ಅವನಿಗೆ ಕೆಳಗಿನಂತೆ ತಿಳಿಸಿದರು.

'ಒಪ್ಪಂದವು ಸಾಧ್ಯವಾಗುವದು ಇಲ್ಲವೆ ಆಗದಿರುವದು ಗಾಂಧಿ-ಅರ್ವಿನರ ಚರ್ಚೆಯನ್ನೇ ಅವಲಂಬಿಸಿದೆ. ಪಂಜಾಬ ಹಾಗು ಬಂಗಾಲಗಳಲ್ಲಿ ಗಲ್ಲಿನ ಶಿಕ್ಷೆಗೊಳಗಾದ ರಾಜ್ಯಕ್ರಾಂತಿಕಾರರನ್ನು ಗಲ್ಲಿಗೇರಿಸಿದರೆ ಒಪ್ಪಂದದಿಂದುಂಟಾದ ಪರಿಸ್ಥಿತಿಯು ತೀರ ಕೆಟ್ಟುಹೋಗುವದು. ಕಾಂಗ್ರೆಸದವರಿಗೆ ಅವರ ವರ್ತನೆಯೇನೂ ಸರಿ ಬರುವದಿಲ್ಲ. ಶಾಂತತೆಯ ವಾತಾವರಣವನ್ನು ಪ್ರಸ್ಥಾಪಿಸುವದಿದ್ದರೆ, ಅವರನ್ನು ಗಲ್ಲಿಗೇರಿಸದಿರುವದೇ ಹಿತವಾಗಿರುವದಾಗಿ ನನಗೆ ತೋರುತ್ತದೆ"

ಶ್ರೀ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸುವರೋ?

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗ, ಶ್ರೀ ಸುಖದೇವ, ಶ್ರೀ ರಾಜಗುರು ಈ ಮೂವರೂ ಲಾಹೋರ ತುರಂಗದಲ್ಲಿ ಬೇಗನೆ ಗಲ್ಲಿಗೇರಿಸಲ್ಪಡುವವರಿದ್ದಾರೆಂಬ ಸುದ್ದಿಯು ತಿಳಿದು ಬಂದದ್ದರಿಂದ, ಶ್ರೀ ರಾಜಗುರು ಇವರ ಅಣ್ಣಂದಿರು ಅವರನ್ನು ಭೆಟ್ಟಿಯಾಗಲು ಹೋಗಿದ್ದಾರೆ.

ಸರದಾರ ವಲ್ಲಭಭಾಯಿಯವರನ್ನೂ

ಮಹಾತ್ಮರು ದಿಲ್ಲಿಗೆ ಕರೆಯಿಸಿಕೊಂಡರು

(ಸಂತಿಯ ವಾರ್ತೆ ತಾ| ೧೮)

ದಿಲ್ಲಿಗೆ ಬೇಗನೆ ಹೊರಟು ಬರಲು ಮಹಾತ್ಮಾ ಗಾಂಧಿಯವರು ತಿಳಿಸಿದ್ದರಿಂದ, ಸರದಾರ ವಲ್ಲಭಭಾಯಿಯವರು ಇವತ್ತಿನ ದಿವಸ ಮಧ್ಯಾಹ್ನದ ಗಾಡಿಯಿಂದ ದಿಲ್ಲಿಗೆ ಹೊರಟು ಹೋದರು.

ಶ್ರೀ ತ್ರಿವೇದಿಯವರನ್ನು ಹದ್ದುಪಾರು ಮಾಡಿದರು

ಠಾಣಾ ಜೇಲಿನಿಂದ ಮೊನ್ನೆ ಮೊನ್ನೆ ಬಿಡುಗಡೆ ಹೊಂದಿ ಬಂದ ಧೋಲೇರಾ ಸತ್ಯಾಗ್ರಹ ಶಿಬಿರದ ಸರ್ವಾಧಿಕಾರಿಗಳಾಗಿದ್ದ ಶ್ರೀ ಮಣಿಶಂಕರ ತ್ರಿವೇದಿಯವರು ಮುಂಬಯಿ ಸರಕಾರದ ಅಪ್ಪಣೆಗನುಸಾರವಾಗಿ ಅಮರೇಲಿ ಎಂಬಲ್ಲಿಗೆ ಹದ್ದುಪಾರು ಮಾಡಲ್ಪಟ್ಟಿದ್ದಾರೆ.

ಭಡೋಚದಲ್ಲಿ ೧೮ ಜನರನ್ನು ಹಿಡಿದರು.

ಭಡೋಚ ಜಿಲ್ಲೆಯ ಕಲೆಕ್ಟರ ಇಜೇರಿಯ ಬಳಿಯಲ್ಲಿ ತಾ|| ೧೬ ನೆಯ ದಿವಸ ಆ ಜಿಲ್ಲೆಯ ಶೆರೆ ಸಿಂದಿ ಅಂಗಡಿಗಳ ಲಿಲಾವು ನಡೆಯಿತು. ಲಿಲಾವಿನ ಸಮಯದಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಅಲ್ಲಿ ಪಿಕೆಟಿಂಗ ಮಾಡಿದರು. ಕಲೆಕ್ಟರರು ಅವರಿಗೆ ಹೊರಟು ಹೋಗಲು ಹೇಳಿಕೊಂಡರು. ಅವರು ಅದಕ್ಕೆ ಒಪ್ಪಲಿಲ್ಲ. ಪೋಲೀಸರು ಅವರನ್ನು ಲಾಠಿಗಳಿಂದ ಚದುರಿಸಿ, ಅವರಲ್ಲಿ ೧೮ ಜನರನ್ನು ಸೆರೆ ಹಿಡಿದುಕೊಂಡು ಹೋದರು. ಸೆರೆಯಾಳಾದವರಲ್ಲಿ ೫೦ ಜನರು ಸ್ತ್ರೀಯರಿರುವರು.

ಲಖನೌದಲ್ಲಿ ಪಂ॰ ಮೋತೀಲಾಲರಸ್ಮಾರಕ

ಲಖನೌದಲ್ಲಿ ತಾ||೫ ನೆಯ ದಿವಸ ಪಂಡಿತ ಮೋತೀಲಾಲರ ಶ್ರಾದ್ಧ ದಿನದ ನಿಮಿತ್ತವಾಗಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಮಧ್ಯಾಹ್ನದಲ್ಲಿ ದೊಡ್ಡ ನೆತ್ತಿಯ ಪ್ರಚಂಡ ಮೆರವಣಿಗೆಯು ಶ್ರೀಮತಿ ಮಿತ್ರಾರವರ ನೇತೃತ್ವದಲ್ಲಿ ಸಾಗಿ ಪಟ್ಟಣದಲ್ಲೆಲ್ಲ ಸಂಚರಿಸಿ ಸಭಾಸ್ಥಾನಕ್ಕೆ ತಲುಪಿತು. ಶ್ರೀ ಮೋಹನಲಾಲ ಸೆಕ್ಸೆನಾರವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಮಹಾತ್ಮರು ಹಾಕಿ ಕೊಟ್ಟ ಪ್ರತಿಜ್ಞೆಯು ಉಚ್ಚರಿಸಲ್ಪಟ್ಟಿತು. ಚೌಧರಿ ಖಲೀಲ ಖುಜಮಾನರು ದಿವಂಗತ ಪಂಡಿತ ನೆಹರೂಲಾಲರ ಸ್ಮರಣಾರ್ಥವಾಗಿ ಲಖನೌದಲ್ಲಿ ೧ ಲಕ್ಷ ರೂಪಾಯಿ ವೆಚ್ಚದ ಸ್ಮಾರಕವನ್ನೇರ್ಪಡಿಸುವ ಬಗ್ಗೆ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದರು. ಸೂಚನೆಯು ಸರ್ವಾನುಮತದಿಂದ ಸ್ವೀಕೃತವಾಯಿತು. ಒಬ್ಬರು ಸ್ಮಾರಕಕ್ಕಾಗಿ ೨೦೦೦ ರೂಪಾಯಿಗಳನ್ನು ಕೊಡುವೆನಾಗಿ ಸಭೆಯಲ್ಲಿಯೇ ವಚನ ಕೊಟ್ಟರು.

ಅಲಹಾಬಾದದಲ್ಲಿ ಮಹಾತ್ಮರಭಾಷಣ

ತಾ| ೧೫ ನೆಯ ದಿವಸ ಅಲಹಾಬಾದದಲ್ಲಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವು ಆಚರಿಸಲ್ಪಟ್ಟಿತು. ಮೆರವಣಿಗೆಯಾದ ಬಳಿಕ "ಸಂಗಮ"ದ ಬಳಿಯಲ್ಲಿ ಮೌಲಾನಾ ಅಬ್ದುಲ್ ಕಲಮ್ ಆಜಾದರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ, ಮಹಾತ್ಮರು ಹಾಕಿಕೊಟ್ಟ ಪ್ರತಿಜ್ಞೆಯು ಸರ್ವಾನುಮತದಿಂದ ಉಚ್ಚರಿಸಲ್ಪಟ್ಟಿತು. ಆ ವೇಳೆಗೆ ಮಹಾತ್ಮಾ ಗಾಂಧಿಯವರು ಪಂಡಿತ ಮೋತೀಲಾಲರ ಸಾರ್ವಜನಿಕ ಸೇವೆಯನ್ನು ವಿವರಿಸಿ, ಪ್ರತಿಜ್ಞೆಯಂತೆ ನಡೆದುಕೊಳ್ಳಲು ಸಭಿಕರಿಗೆ ಹೇಳಿಕೊಂಡು, ಬನಾರಸದಲ್ಲಾದ ದಂಗೆಯ ಸಂಬಂಧವಾಗಿ ತನ್ನ ಅಸಂತೋಷವನ್ನು ವ್ಯಕ್ತಪಡಿಸಿದರು.

ಮದ್ರಾಸದ ಗವ್ಹರ್ನರರೂ ದಿಲ್ಲಿಗೆ ಹೋದರು.

ಮದ್ರಾಸ ಗವ್ಹರ್ನರರಾದ ಸರ್ ಸ್ಟ್ಯಾನಲಿಯವರೂ ಪ್ರಾಯಿ ಸರಾಯರನ್ನು ಕಂಡುಕೊಳ್ಳಲು ತಾ|| ೧೫ ನೆಯ ದಿವಸ ದಿಲ್ಲಿಗೆ ಹೊರಟು ಹೋಗಿರುವರಾಗಿ ತಿಳಿಯುತ್ತದೆ.

ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ರಾಜಕೋಟೆ ಸಂಸ್ಥಾನದ ಸರ್ಕಾರದಲ್ಲಿ ತಾ|| ೧೪ ನೆಯ ದಿವಸ ಶ್ರೀ ಪುರುಷೋತ್ತಮ ದಾಸ ಗಾಂಧಿ ಹಾಗು ೩೦ ಜನ ಸ್ವಯಂಸೇವಕರು ಕೈದು ಮಾಡಲ್ಪಟ್ಟಿದ್ದಾರೆ.

ವಿಜಾಪುರ ಜಿಲ್ಲೆಯ ರೈತರ ಪರಿಷತ್ತು.

ವಿಜಾಪುರ ಜಿಲ್ಲೆಯ ರೈತರ ಪರಿಷತ್ತು ತಾ|| ೧೪ ನೆಯ ದಿವಸ ಅಲ್ಲಿಯ ಶೆಠರ್ಜಿ ಹಾಲಿನಲಿ ಮುಂಜಾನೆ ೮|| ಗಂಟೆಗೆ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷರ ಭಾಷಣವಾದ ಬಳಿಕ ಪರಿಷತ್ತಿನ ಅಧ್ಯಕ್ಷರಾದ ರಾ. ಬ. ಎಸ್. ಎನ್. ಅಂಗಡಿಯವರು, ಪಂಡಿತ ಮೋತೀಲಾಲರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಿ, ರೈತರ ದಾರಿದ್ರ್ಯ, ರೈತರ ಸಾಲಗಾರಿಕೆ, ರಾಜಕೀಯ ವಾತಾವರಣ, ಕರ್ನಾಟಕ ಏಕೀಕರಣ ಇವುಗಳ ಸಂಬಂಧವಾಗಿ ಒಳ್ಳೇ ವಿಚಾರ ಪರಿಪ್ಲುತ ಭಾಷಣ ಮಾಡಿದರು.

ಬೆಳಗಾವಿಯಲ್ಲಿ ಜಪ್ತಿಯ ಹಾವಳಿ

ಬಿ. ಮಾ. ಚಿಕ್ಕೋಡಿ ಅಕ್ಕಣೆಯನ್ನು ಮುರಿದು ಮೊಗವನ್ನೆರಿಯುವ, ಹೊಡಿಸಿಕೊಂಡು ಹೋಗಿದ ಕ್ಕಾಗಿ ೧೦೦ ರು. ದಂಡದ ಶಿಕ್ಷೆಗೆ ಪಾತ್ರರಾದ ೧೦ ಜನ ಹೆಂಗಸರ ಮನೆಗಳನ್ನು, ಬೆಳಗಾವಿಯ ಪೋಲೀಸ ಅಧಿಕಾರಿಗಳು ಅನೇಕವಾರ ದಿವಸ ಮುತ್ತಿ, ಕೆಲವು ಸಾಮಾನುಗಳನ್ನು ಜಪ್ತ ಮಾಡಿಕೊಂಡು ಹೋದರು. ನಾಲ್ಕು ಮನೆಗಳಲ್ಲಿ ಅವರಿಗೆ ಏನೂ ಸಿಗಲಿಲ್ಲ. ದಂಡದ ಬದಲು ವಿಧಿಸಲ್ಪಟ್ಟ ೪ ತಿಂಗಳ ಸಾದಾ ಶಿಕ್ಷೆಯನ್ನು ಅವರು ಅನುಭೋಗಿಸಬೇಕಾಗುವದು.

ಇಹವೃತ್ತ

ಸ್ವಲ್ಪ ದಿನಗಳ ಹಿಂದೆ ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿ ಬಂದವರಾದ ಚಿಕ್ಕೋಡಿಯ ಶ್ರೀಮತಿ ಪಾನಬಾಯಿ ಗುಜ್ಜರವರು ತಾ|| ೧೭ ನೆಯ ದಿವಸ ಸಂತೆಯಲ್ಲಿ ಇಲ್ಲಿಯ ಲಾಲಾಜಿ ಚೌಕದಲ್ಲಿ ದೇಶದ ಸ್ಥಿತಿಯ ವಿಷಯವಾಗಿ ಭಾಷಣ ಮಾಡಿದರು.

ಸುಂತ ಸರ್ವಾಧಿಕಾರಿಗಳು ಸೆರೆಮನೆ ಸೇರಿದರು.

ತಾ||೧೫ ನೆಯ ದಿವಸ ಪಂಡಿತ ಮೋತೀಲಾಲರ ಶ್ರಾದ್ಧ ದಿನದ ನಿಮಿತ್ತವಾಗಿ ಸೂರತದಲ್ಲಿ ಮಧ್ಯಾಹ್ನ ೩ ಘಂಟೆಗೆ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯು "ಡಾಕ್ಟರ ಓವ್ಹಾರಾ"ಕ್ಕೆ ಬಂದ ಕೂಡಲೆ ಪೋಲೀಸ ಅಧಿಕಾರಿಗಳು ಸಾದಿಲಶಹಾ ಕರಾಫದ ಸರ್ವಾಧಿಕಾರಿಗಳಾದ ಶ್ರೀ ಲಕ್ಷ್ಮೀದಾಸ ಹರಿಭಾಯಿಯವರನ್ನು ಸೆರೆಹಿಡಿದರು. ಮೆರವಣಿಗೆಯ ಮಂಡಳಿಯವರೆಲ್ಲರೂ ಬೀದಿಯಲ್ಲಿ ಕುಳಿತುಕೊಂಡರು. ಪೋಲೀಸ ಅಧಿಕಾರಿಗಳು "ನಿಮ್ಮನ್ನೇನು ಸೆರೆಹಿಡಿಯುವದಿಲ್ಲ. ನೀವು ಸಭಾಸ್ಥಾನಕ್ಕೆ ಹೊರಟುಹೋಗಿರಿ" ಎಂದು ಅವರಿಗೆ ತಿಳಿಸಿದರು. [illegible] ಅಲ್ಲಿ ಸಾಯಂಕಾಲ ಸಭೆ ನೆರೆದು, ಶ್ರೀಮತಿ [illegible] ಪ್ರತಿಜ್ಞೆಯನ್ನು [illegible] ಎಂಬುವರು ಸರ್ವಾಧಿಕಾರಿಗಳಾಗಿ ಆರಿಸಲ್ಪಟ್ಟರು, ಮರುದಿವಸ ಅಧಿಕಾರಿಗಳು ಅವರನ್ನು ದ. ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ಅನ್ವಯ ಸೆರೆಹಿಡಿದರು.

ಸೂರತದಲ್ಲಿ ೪೦೦ ಜನರು ಪಿಕೆಟಿಂಗ ಮಾಡಿದರು.

ಸೂರತದಲ್ಲಿಯ 'ಬಾಲಿಕಾ ಸಂಘದ' ಸುಮಾರು ಮೂವರು ನಾಲ್ಕು ನೂರು ಸಭಾಸದರು ತಾ|| ೧೪ ನೆಯ ದಿವಸ ಮಾಂಡವಿಯಲ್ಲಿ ಅಲ್ಲಿಯ ಯಾವತ್ತು ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಿದರು ಪಿಕೆಟಿಂಗ ಪರಿಣಾಮವೆಂದರೆ ೧೧ ಗಂಟೆಗೆ ೪೦ ಜನ ವ್ಯಾಪಾರಿಗಳು ತಮ್ಮ ತಮ್ಮಲ್ಲಿಯ ಪರದೇಶಿ ಜವಳಿಯನ್ನು 'ಸೀಲ' ಮಾಡುತ್ತೇವೆಂದು ಬರೆದುಕೊಟ್ಟರು. ಉಳಿದ ಅಂಗಡಿಗಳ ಮುಂದೆ ಪಿಕೆಟಿಂಗ ಹಾಗೆ ಮುಂದುವರಿದದ್ದು ಪೋಲೀಸರಾದರೂ ಅಲ್ಲಿ ಬಂದು ಶಾಂತತೆಯ ಪರಿಸ್ಥಿತಿಯನ್ನು ಸಂರಕ್ಷಿಸುತ್ತಿದ್ದಾರೆ.

ಸಿಂದೀ ಅಂಗಡಿಗಳಿಗೆ ಯಾರೂ ದಿಕ್ಕಾಗಲಿಲ್ಲ

ಮಾವಲಿನ ತಾಲೂಕದಲ್ಲಿಯ ಸಿಂದೀ ಅಂಗಡಿಗಳ ಲಿಲಾವು ತಾ|| ೧೧ನೇ ದಿವಸ ಮಾವಲಿನ ತಾಲೂಕ ಕಚೇರಿಯಲ್ಲಿ ನಡೆಯುವದಾಗಿ ಪ್ರಸಿದ್ಧಿಸಲ್ಪಟ್ಟಿತ್ತು. ಆಂದು ಪೋಲೀಸ ಹಾಗು ಅಬಕಾರಿ ಅಧಿಕಾರಿಗಳು ಕಚೇರಿಯ ಮುಂದೆ ಒಳ್ಳೇ ಬಂದೋಬಸ್ತಿ ಇಟ್ಟಿದ್ದರು ಆದರೆ ಅಂಗಡಿಗಳನ್ನು ಲಿಲಾವಿನಲ್ಲಿ ಬೇಡಲು ಕಚೇರಿಯ ಮುಂದೆ ಒಬ್ಬರಾದರೂ ಸುಳಿಯದ್ದರಿಂದ ಅವರೆಲ್ಲರ ಪ್ರಯತ್ನವು ವ್ಯರ್ಥವಾಯಿತು. ಅಂಗಡಿಗಳು ಲಿಲಾವಾಗದೆ ಹಾಗೆಯೇ ಉಳಿದವು.

ಪ್ರಕಟನೆ

ಬಾಗಲಕೋಟೆ ಶ್ರೀ ಬಸವೇಶ್ವರ ಹಾಯಸ್ಕೂಲನ್ನು ಪ್ಲೇಗಿನ ಮೂಲಕ ತಾ|| ೧-೩-೩೧ರ ವರೆಗೆ ಪುನಃ ಬಂದು ಮಾಡಿದ್ದು ಅದು ತಾ|| ೨-೩-೩೧ನೇ ಸೋಮವಾರ ದಿವಸ ಪ್ರಾರಂಭವಾಗುವದು. ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾಪ್ರಕಾರ ನಡೆಯುವದು. ವಿದ್ಯಾರ್ಥಿಗಳು ಸಕಾಲಕ್ಕೆ ಬರಬೇಕು.

ಬಾಗಲಕೋಟೆ ತಾ|| ೧೮—೨—೩೧

ಎಚ್. ಎಫ್. ಕಟ್ಟೀಮನಿ
ಪ್ರಿನ್ಸಿಪಾಲ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ (ಟೆಕ್ಸ್ಟ ಬುಕ್ ಮಂಜೂರಾಗಿದ್ದು)	೧-೦-೦

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಯಾಂಪಲ್) ಮತಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳೆ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ರೇಲ್ವೆ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪ ಮಸಿ ೧೨ ಔಂಸಿನ ೧ಡಜನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟ್ರಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ.
ಸ್ಟೇಶನ್ ರೋಡ
ಹುಬ್ಬಳ್ಳಿ ಹುಸ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕೆಂಭಾವಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮

ನಿತ್ಯ ಸಂಚಿಕೆ.

ಬೆಲೆ. ೦—೦—೩

सर्वं परवशं दुःखं । सर्वमात्मवशं सुखम् ॥—मनु.

ಕನ್ನಡಿಗ

KANNADIGA BAGALKOT BI-WEEKLY

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶುಕ್ರವಾರ ಮಿತಿ ಫಾಲ್ಗುಣ ಶುದ್ಧ ೩ ಶಕೆ ೧೮೫೨ ತಾ|| ೨೦—೨—೩೧ [ಸಂಚಿಕೆ ೧೯೪

ಗಾಂಧಿ ಮತ್ತು ವ್ಹಾಯಿಸರಾಯರ ಚರ್ಚೆ

(ತಂತಿಯ ವಾರ್ತೆ ತಾ|| ೧೯)

ಮಹಾತ್ಮಾ ಗಾಂಧಿಯವರು ನಿನ್ನಿನ ದಿವಸ ವ್ಹಾಯಿಸರಾಯರೊಡನೆ ಚರ್ಚೆ ಮಾಡಿ ಬಂದ ಕೂಡಲೆ, ಸರ್ ಸಪ್ರೂ, ನಾ ಶಾಸ್ತ್ರಿ, ಶ್ರೀ ಜಯಕರ, ಜಮನಾಲಾಲ ಬಜಾಜ, ಡಾ. ಅನಸಾರಿ ಇವರು ಅವರನ್ನು ಕಂಡುಕೊಂಡರು. ಆಗ ಮಹಾತ್ಮರು ಅವರಿಗೆ ಚರ್ಚೆಯ ಸಂಗತಿಗಳನ್ನು ತಿಳಿಸಿ, ಒಪ್ಪಂದದ ಸಂಬಂಧವಾಗಿ ಈಗ ಏನೂ ಹೇಳಲು ಬರುವಂತಿಲ್ಲವೆಂಬುದಾಗಿ ತಮ್ಮ ಮತವನ್ನು ವ್ಯಕ್ತ ಪಡಿಸಿದರು.

ಗುರುವಾರ ಒಂದು ದಿವಸ ಬಿಟ್ಟು ಶುಕ್ರವಾರ ಹಾಗು ಶನಿವಾರ ಮತ್ತೆ ಚರ್ಚೆ ನಡೆಯಬಹುದಾಗಿ ತೋರುತ್ತದೆ

ಎರಡನೆಯ ಬಂಡೀಗಾಲಿಯ ಪರಿಷತ್ತಿನಲ್ಲಿ ನಡೆಯ ಬಹುದಾದ ರಾಜಕೀಯ ಪ್ರಶ್ನೆಗಳ ವಿಚಾರದಲ್ಲಿ ಕಾಂಗ್ರೇಸ್ ಪಕ್ಷವೂ ಭಾಗ ತೆಗೆದುಕೊಳ್ಳಬೇಕೆಂಬ ಇಚ್ಛೆಯಿದ್ದಲ್ಲಿ, ಆ ಪರಿಷತ್ತಿನಲ್ಲಿ ಅವರಿಗೆ ಮಹತ್ವದ ಸ್ಥಾನ ಬೇಕೆಂದು ಮಹಾತ್ಮರು ಕೇಳಿಕೊಂಡರೆಂದೂ, ವ್ಹಾಯಿಸರಾಯರು ಆ ಬಗ್ಗೆ ತಮ್ಮ ಮತವನ್ನು ವ್ಯಕ್ತ ಪಡಿಸಿ, ಸರಕಾರ ಧೋರಣವನ್ನು ಹಿಂದು ಗಡೆಹಾಕಬೇಕಾಗುವದೆಂದು ಉತ್ತರಕೊಟ್ಟರೆಂದೂ ತಿಳಿದು ಬರುತ್ತದೆ.

(ಅಲಹಾಬಾದ ತಾ|| ೧೮)

ಮಹಾತ್ಮಾ ಗಾಂಧಿಯವರು ತಾ|| ೧೮ ನೆಯ ದಿವಸ ಮಧ್ಯಾಹ್ನದ ೨-೩೦ ಗಂಟೆಗೆ ವ್ಹಾಯಿಸರಾಯರ ವಸತಿಗೃಹದಲ್ಲಿ ವ್ಹಾಯಿಸರಾಯರನ್ನು ಕಂಡ ಕೊಂಡು ಅವರೊಡನೆ ೩ ತಾಸುಗಳ ವರೆಗೆ ಚರ್ಚೆ ಮಾಡಿದರು. ಚರ್ಚೆಯು ಇನ್ನೂ ೨-೩ ದಿನಗಳವರೆಗೆ ನಡೆಯಬಹುದು ಸರ್ ಸಪ್ರೂ, ಶ್ರೀ ಜಯಕರ, ನಾ. ಶಾಸ್ತ್ರಿ ಹಾಗು ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು ಇವರಾದರೂ ಚರ್ಚೆಯಲ್ಲಿ ಭಾಗ ತೆಗೆದುಕೊಳ್ಳಬಹುದೆಂದು ತಿಳಿದು ಬರುತ್ತದೆ.

ವ್ಹಾಯಿಸರಾಯರನ್ನು ಕಂಡುಕೊಳ್ಳುವದಕ್ಕಿಂತ ಮೊದಲು ಮಹಾತ್ಮಾ ಗಾಂಧಿಯವರು ಸರ್ ಸಪ್ರೂ, ನಾ. ಶಾಸ್ತ್ರಿ, ಶ್ರೀ ಜಯಕರ ಇವರನ್ನು ಕಂಡ ಕೊಂಡು ಅವರೊಡನೆ ಮಾತು ಕತೆ ಮಾಡಿದರು.

ಪಂಡಿತ ಮದನ ಮೋಹನ ಮಾಲವೀಯರವರಾದರೂ ದಿಲ್ಲಿಗೆ ಕರೆಕಳುಹಲ್ಪಟ್ಟಿದ್ದು ಅವರು ತಾ|| ೧೮ ನೆಯ ದಿವಸ ದಿಲ್ಲಿಗೆ ಪ್ರಯಾಣ ಬೆಳೆಸಿದರು.

ಮಹಾತ್ಮಾ ಗಾಂಧಿಯವರು ಕರೆಕಳುಹಿದ್ದರಿಂದ ಸರದಾರ ವಲ್ಲಭಭಾಯಿಯವರು ಈಗ ದಿಲ್ಲಿಗೆ ಹೋಗಿರುವರು. ಕಾಯದೆಭಂಗ ಚಳವಳಿ ಹಾಗು ಪೋಲೀಸರ ಅತ್ಯಾಚಾರ ಇವುಗಳ ಸಂಬಂಧವಾಗಿ ಮಹಾತ್ಮರು ಅವರ ಅಭಿಪ್ರಾಯ ಕೇಳಿಕೊಳ್ಳತಕ್ಕವರಿದ್ದಾರೆಂದು ತಿಳಿಯುತ್ತದೆ.

ಶ್ರೀ ವಾಲಚಂದ ಹಿರಾಚಂದರವರಾದರೂ ತಾ|೧೭ ನೆಯ ದಿವಸ ಮುಂಬಯಿಯಿಂದ ದಿಲ್ಲಿಗೆ ಹೊರಟು ಹೋಗಿದ್ದಾರೆ.

ಗಾಂಧಿ ಆಯರ್ವಿನರಲ್ಲಿಯ ಚರ್ಚೆಯು ಹೀಗೆಯೇ ಇನ್ನೂ ೨—೩ ದಿನಗಳ ವರೆಗೆ ಸಾಗಿದಲ್ಲಿ ಮಹಾತ್ಮ ವರ್ಕಿಂಗ ಕಮಿಟಿಯ ಸಭೆಯು ತಾ|| ೨೪ ಕ್ಕೆ ದಿಲ್ಲಿಯಲ್ಲಿಯೇ ಸೇರುವದು. ಇಲ್ಲದಿದ್ದರೆ ಅದು ಮುಂಬಯಿಯಲ್ಲಿ ಕೂಡುವದು.

ಮುಂಬಯಿ ಹಾಗು ಮದ್ರಾಸದ ಗವರ್ನರರು ಈಗ ದಿಲ್ಲಿಯಲ್ಲಿಯೇ ಇದ್ದುದರಿಂದ ವ್ಹಾಯಿಸರಾಯರು ಅವರೊಡನೆ ಬೇರೆಸಾದ ಮೊದಲಾದ ಸ್ಥಳಗಳಲ್ಲಿಯ ಪೋಲೀಸರ ಅತ್ಯಾಚಾರದ ವಿಷಯವಾಗಿ ವಿಚಾರ ಮಾಡಿರಲಿಕ್ಕೇ ಬೇಕು.

ಸುರತದಲ್ಲಿ ಹೊರಡುತ್ತಿದ್ದ 'ಹಿಂದೂ' ದೈನಿಕ ಪತ್ರಿಕೆಗೆ ಪ್ರೆಸ್ ಆರ್ಡಿನನ್ಸದನ್ವಯ ಮುಂಬಯಿ ಸರಕಾರದವರು ೨೦೦೦ ರು. ಹೊಣೆ ಬೇಡಿದ್ದರಿಂದ, ಆ ಪತ್ರಿಕೆಯು ಸದ್ಯಕ್ಕೆ ತನ್ನ ಕಾರ್ಯವನ್ನು ನಿಲ್ಲಿಸಿಬಿಟ್ಟಿದೆ

ವಿಜಾಪುರ ಜಿಲ್ಹೆಯ ರೈತರ ಪರಿಷತ್ತು

ಅಧ್ಯಕ್ಷರಾದ

ರಾ. ಬ. ಎಸ್. ಎನ್. ಅಂಗಡಿ ಇವರ ಭಾಷಣವು

ವಿಜಾಪುರ ಜಿಲ್ಹೆಯ ರೈತರ ಪರಿಷತ್ತು ತಾ|| ೧೫ ನೇಯ ದಿವಸ ಅಲ್ಲಿಯ ಶಿವಯೋಗ ಹಾಲಿನಲ್ಲಿ ಕೂಡಿತ್ತು. ಪರಿಷತ್ತಿನ ಅಧ್ಯಕ್ಷರಾದ ರಾ. ಬ. ಎಸ್. ಎನ್. ಅಂಗಡಿಯವರು ತಮ್ಮ ಭಾಷಣದಲ್ಲಿ ಮೊದಲು ಪಂಡಿತ ಮೋತಿಲಾಲ ನೆಹರೂ, ವೆಂಕಣ್ಣ ಹೊಸಮನಿಯವರ ಇವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಿ, "ರೈತರ ಸ್ಥಿತಿಗತಿ"ಗಳನ್ನು ಕುರಿತು ಕೆಳಗಿನಂತೆ ಹೇಳಿದರು.

ರೈತರ ದೀನ ದಾರಿದ್ರ್ಯಾವಸ್ಥೆಯ ವಿಷಯವಾಗಿ ಮಾತಾಡುವದೇ ಇಲ್ಲ. ಭಾರತೀಯರ ಬಡತನವನ್ನು ಹೋಲುವಂಥ ಬಡತನವು ಇಡೀ ಜಗತ್ತಿನಲ್ಲಿಯೇ ಇಲ್ಲವೆಂದ ಸೈಮನ್ ಕಮಿಶನದವರೂ ಒಪ್ಪಿಕೊಳ್ಳಬೇಕಾಯಿತು. ಸಧ್ಯ ನಿಶ್ಚೇಷ ವಿಚಾರಣಾ ಸಮಿತಿಯವರ (ಬ್ಯಾಂಕಿಂಗ ಎನ್‌ಕ್ವಾಯರಿ ಕಮಿಟಿಯವರ) ಕಗಲಿಯಾಳು ಮಾಡಿದ ಹೊರಡಿಸಿದ ವರದಿಯಿಂದ ನಮ್ಮೀ ಪ್ರಾಂತದಲ್ಲಿ ಒಕ್ಕಲಿಗರಿಗೆ ೮೫ ಕೋಟಿ ರೂಪಾಯಿಗಳ ಸಾಲವಿದೆಯೆಂಬದನ್ನು ನೀವು ಅರಿತಿರಬಹುದು. ನೀವು ದಾರಿದ್ರ್ಯ ಪಾಶದಲ್ಲಿ ಸಿಲುಕಿ ಹೇಗೆ ಬದ್ಧರಾಗಿರುವಿರೆಂಬುದನ್ನು ತೋರಿಸಲು ನಿಮ್ಮ ಮುಂದೆ ಈ ಸಂಗತಿಯನ್ನು ಇಡುತ್ತೇನೆ. ಸರಾಸರಿ ೧೦೦ ಕ್ಕೆ ೧೨ ರಂತೆ ಬಡ್ಡಿಯ ದರವಿದೆಯೆಂದು ಇಟ್ಟುಕೊಂಡರೂ ಹತ್ತು ಕೋಟಿ ರೂಪಾಯಿಗಳು ನೀವು ಕೊಡಬೇಕಾಗುತ್ತವೆ. ಆದುದರಿಂದ ಇಂಥ ಸ್ಥಿತಿಗೆ ಬಂದ ಬಡ ಒಕ್ಕಲಿಗರು ಉದ್ಧಾರ ಹೊಂದುವದು ಸಾಧ್ಯವೇನು? ನಿಮ್ಮೆಲ್ಲರಿಗೆ ಬರುವ ಪ್ರತಿಯೊಬ್ಬನ ಆದಾಯ ಮಾಡಿದರೆ ಪ್ರತಿವರ್ಷ ೫೦ ರೂಪಾಯಿಗಳ ಕಿಂತ ಹೆಚ್ಚಿಲ್ಲವೆಂದು, ಮದುವೆ ಚಿತ್ರ ರೂಪ ಇಂಥ ಖರ್ಚು ಬರುವವು. ಹೀಗಿದ್ದರೂ ನಿಮ್ಮ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ನಿಮ್ಮಿಂದಲೇ ಜನಾಂಗದ ಉಪಜೀವನ. ನೀವೇ ಜನಾಂಗದ ಜೀವಾಳ, ನಿಮ್ಮಿಂದಲೇ ಸರಕಾರದ ಉಪಜೀವನವೆಂದು ಸವಿಸ್ತರ ಪ್ರತಿಯೊಬ್ಬರೂ ಹೇಳುವರು. ಹೀಗಿದ್ದರೇ ನಿಜವಾದ ಪಕ್ಷದಲ್ಲಿ ಒಕ್ಕಲಿಗರೇ ರಾಷ್ಟ್ರದ ಭಾಗ್ಯವಿಧಾತರಾಗಬಹುದಲ್ಲವೇ? ಅವರೇ ಅಳಿಕಡೆ ಕೈಕೆಳಗಿನ ಅವರ ನೀವೆಲ್ಲರೂ ಅಜ್ಞಾನಾಂಧಕಾರದಿಂದ ಅಪ್ರಕೃತರಾಗಿರುವದರಿಂದ ನಿಮ್ಮ ಸಾಮರ್ಥ್ಯವನ್ನು, ನಿಮ್ಮ ಶಕ್ತಿಯನ್ನು, ನಿಮ್ಮ ಸಂಘ ಬಲವನ್ನು ನೀವು ಅರಿತುಕೊಂಡಿಲ್ಲ. ಹೀಗೆ ಹೇಳುತ್ತ ಒಕ್ಕಲಿಗರ ಪರಿಸ್ಥಿತಿಯ ಶಿಕ್ಷಣದ ವಿಷಯವನ್ನು ಉಲ್ಲೇಖಿಸುವದು. ಕೆಲವರು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ವಿಷಯದಲ್ಲಿ ಬಹಳೇ ಅತ್ರರಾಗಿರುವರು. ಮತ್ತು ಇಂತಹ ಪಾಲಕ ವಿಷಯದಲ್ಲಿ ಒಕ್ಕಲಿಗರು ಅವನತರಾಗಿದೆ ಆದರೆ ಪ್ರಾಥಮಿಕ ಶಾಲೆಗಳಲ್ಲಿ ಮೇಲಿನ ವರ್ಗಗಳಲ್ಲಿಯು ಸುಧಾರಿತ ಸಂಖ್ಯೆಯು ಕ್ರಮವಾಗಿ ಕಡಿಮೆಯಾಗುತ್ತ ಹೋಗುವದೆಂದು ವಿದ್ಯಾಖಾತೆಯ ವರದಿಯ ಪ್ರಕಟಿಸಿದ ಅಂಕಿಗಳ ಮೇಲಿಂದ ತಿಳಿಯುತ್ತದೆ. ಇದರಿಂದ ಒಕ್ಕಲಿಗರ ಪದ್ಧತಿಗೆ ನಾವು ಹೊರಗೆ ಹೋಗಬೇಕಾಗುತ್ತದೆ ವಂಬುದು. ಸರಕಾರದ ಸಂಪತ್ತಿನ ಸ್ಥಿತಿಯು ದಿನೇ ದಿನೇ ಹೀನವಾಗುತ್ತಿರುವದರಿಂದ ಸರಕಾರದವರಿಂದ ಹೆಚ್ಚಿನ ಸಹಾಯ ದೊರೆಯುವದೆಂದು ಸಾಧಿಸಲಾರೆ.

ರೈತರ ಸಾಲಗಾರಿಕೆ

ನಿಮ್ಮ ಹೆಚ್ಚಿನ ಸಾಲಗಾರಿಕೆ ನಿಮ್ಮ ಭವಿಷ್ಯದ ಸುಖಕ್ಕೆ ಅಡ್ಡಿಯಾಗಿದೆ. ಹೆಚ್ಚು ಕೆಲಸ ಈ ಸಮಸ್ಯೆಯನ್ನು ಎದುರಿಸುವ ದಂಡೆಯು ಈ ನಮ್ಮ ಸ್ಥಿತಿ. ಇದನ್ನು ಬಿಡಿಸಲು ಸರಕಾರದ ಅನೇಕ ಯತ್ನಗಳನ್ನು ಮಾಡಿರುವರು. ಶೇತಕೀ ಕಾಯದೆಯನ್ನು ಜಾರಿಗೆ ತಂದಿರುವರು, ಸಹಕಾರೀ ಸಂಘಗಳನ್ನು ಸ್ಥಾಪಿಸಿರುವರು ಆಗ ಇವರು ಕೂಡ ತ್ತಿರುವರು. ಇವೆಲ್ಲವುಗಳಿಂದ ಎಷ್ಟು ಸಹಾಯವಿದ್ದರೂ ನಿಮ್ಮನ್ನು ದಾರಿದ್ರ್ಯರಾಕ್ಷಸನ ಹಿಡಿತದಿಂದ ಮುಕ್ತ ಮಾಡಿಲ್ಲ ಏಕೆ? ಈ ರಾಕ್ಷಸನ ಶಕ್ತಿಗೆ ಅವರು ಸರಿದೂಗಿಲ್ಲ. ಸಹಕಾರೀ ಸಂಘಗಳಿಂದ ಆರಿಸಲ್ಪಡುವ ಭಾರವಾದ ಬಡ್ಡಿಯು ದೊರೆಯುತ್ತದೆ. ಸಾಲಕ್ಕೆ ಸರಿಯಾಗಿ ಕೊಡಬೇಕಾಗುವ ದಂಡದ ಬಡ್ಡಿಯೂ, ಸಕಾಲಕ್ಕೆ ಸಾಲದ ವೇಳೆ ಹೋಗುವ ಬಡ್ಡಿಯ ಪ್ರಮಾಣವೂ ಸಾಲದ ಅವಧಿಯು ಮುಂಚೂಣಿಗಳು ಬೇಕಾಗುವವೆಂಬವೂ ಒಕ್ಕಲಿಗರ ಸಾಲಗಾರಿಕೆಯನ್ನು ಕಡಿಮೆಯಾಗದೆ ಹಾಗೆಯೇ ಉಳಿಯುವಂತೆ ಮಾಡಲು ಕಾರಣಗಳಾಗಿವೆ, ಮುಂದುವರಿಯುವದು

ಕನ್ನಡಿಗರ

ಗೌರವದ ಗುರುತು.

ಮದ್ರಾಸ ಇಲಾಖೆಯಲ್ಲಿ ಕಂಜೀವರಂ ಎಂಬ ಪಟ್ಟಣದಲ್ಲಿ ಏಳನೇ ಶತಮಾನದಲ್ಲಿಯ ಪಲ್ಲವ ವಂಶದ ರಾಜರ ಕಾಲದಲ್ಲಿಯ ಶಿಲ್ಪಕಲಾ ವೈಭವವನ್ನು ಮಾರ್ಮಿಕವಾಗಿ ಕಣ್ಣಿದುರಿಗೆ ನಿಲ್ಲಿಸುವಂಥ ಕೆಲವು ಹೊಸ ಕಟ್ಟಡಗಳು ಶೋಧಿಸಲ್ಪಟ್ಟಿವೆ. ಕೇವಲ ಶಿಲಾಮಯವಾದ ಒಂದು ಕೈಲಾಸನಾಥ(ಶಿವ)ನ ಮೂರ್ತಿಯು ಬಹಳ ಪುರಾತನವಾದದ್ದಾಗಿದೆ. ಕೆಲವು ಕಟ್ಟಡಗಳ ಗೋಡೆಗಳ ಮೇಲೆ ಕೊರೆದ ಚಿತ್ರಗಳು ಭೂಖಂಡದ ಅವಲ್ಲಿಯೂ ವಿಶೇಷವಾಗಿ ಕರ್ನಾಟಕದ ಶಿಲ್ಪಕಲಾಕೋವಿದರ ಕಲಾಕೌಶಲ್ಯವನ್ನು ಜಗತ್ತಿನಲ್ಲಿಯೇ ಸಾರಿ ಹೇಳುವಂತೆ ಇರುತ್ತವೆ ಈಗ ಕಂಡು ಹಿಡಿಯಲ್ಪಟ್ಟ ಈ ಕೈಲಾಸನಾಥನ ಗುಡಿಯು ಪಲ್ಲವ ವಂಶದ ಎರಡನೇ ನೃಸಿಂಹವರ್ಮನೆಂಬ ರಾಜನ ಆಳಿಕೆಯಲ್ಲಿ ಕಟ್ಟಿಸಲ್ಪಟ್ಟಿತೆಂದು ಆ ಗುಡಿಯ ಒಳಭಾಗದಲ್ಲಿ ಕೊರೆದ ಚಿತ್ರಗಳ ಮೇಲಿಂದ ತಜ್ಞರು ಗೊತ್ತುಮಾಡಿರುವರು. ಕನ್ನಡಿಗರೇ ಕರ್ನಾಟಕದ ಗತ ವೈಭವವನ್ನು ನಿಮ್ಮ ಮನಸ್ಸಿನ ಮೇಲೆ ಚನ್ನಾಗಿ ಮೂಡಿಸಿಕೊಳ್ಳಿರಿ!

ಹೆಡ್ ಮಾಸ್ತರರ ಸಾಹಸ!

ಗುಂಟೂರಿನ ಆಂಧ್ರ ಕ್ರಿಶ್ಚಿಯನ್ ಕಾಲೇಜ ಹಾಯಸ್ಕೂಲದ ೨೦೦ ವಿದ್ಯಾರ್ಥಿಗಳು, ಪಂಡಿತ ಮೋತಿಲಾಲರ ನಿಧನ ಹೊಂದಿದ ದಿವಸ ಶಾಲೆಗೆ ಹೋಗದೆ ಹಳಕಾಳ ಪಾಲಿಸಿ, ಮೆರವಣಿಗೆ, ಸಭೆ ಮೊದಲಾದವುಗಳನ್ನು ಜರುಗಿಸಿದರು. ಆ ಕಾರಣಕ್ಕಾಗಿ ಹಾಯಸ್ಕೂಲದ ಹೆಡ್ ಮಾಸ್ತರರು ಎಲ್ಲ ವಿದ್ಯಾರ್ಥಿಗಳ ಮೇಲೆಯೂ ದಂಡ ಹಾಕಿದ್ದು, ಪ್ರತಿಯೊಬ್ಬರಿಗೂ ೨ ರೂ. ದಂಡ ವಿಧಿಸಿದರು. ಎಷ್ಟೋ ವಿದ್ಯಾರ್ಥಿಗಳು ಅದನ್ನು ಕೊಡಬಾರದಾಗಿ ನಿರ್ಧರಿಸಿಕೊಂಡು ಕುಳಿತಿದ್ದಾರೆ. ನೋಡಿರಲ್ಲ! ಹೆಡ್ ಮಾಸ್ತರರ ಸಾಹಸವು ಎಲ್ಲಿಯವರೆಗೆ ಸಾಗುವದೋ ಯಾರಿಗೆ ಗೊತ್ತು!

ಅಸಿಸ್ಟಂಟ ಕಮೀಶನರರ ಮೇಲೆ ಗುಂಡುಗಳು ಹಾರಿದವು.

ತಾ|| ೧೭ ನೆಯ ದಿವಸ ಒಬ್ಬ ಮುಸಲ್ಮಾನ ತರುಣನು ಚರಸಾದದಲ್ಲಿಯ ಅಸಿಸ್ಟಂಟ ಕಮೀಶನರರಾದ ಕ್ಯಾಪ್ಟನ್ ಬಾರ್ನೆಸ್‌ವರ ಬಂಗಲೆಗೆ ಹೋಗಿ, 'ಅರ್ಜಿ ಕೊಡುವದಿದೆ' ಎಂದು ಕಾವಲುಗಾರರಿಗೆ ತಿಳಿಸಿದನು. ಕಾವಲುಗಾರರು ಆ ಸುದ್ದಿಯನ್ನು ಸಾಹೇಬರಿಗೆ ತಿಳಿಸಿದರು. ಸಾಹೇಬರು ಕೂಡಲೆ ಹೊರಗೆ ಬಂದು ಅರ್ಜಿಯನ್ನು ಸ್ವೀಕರಿಸಿ, ಅದನ್ನು ಅಲ್ಲಿಯೇ ಓದುತ್ತ ನಿಂತುಕೊಂಡರು. ಆ ಸಂಧಿಯನ್ನು ಸಾಧಿಸಿ ಆ ಮುಸಲ್ಮಾನ ತರುಣನು ಅವರ ಮೇಲೆ ಎರಡು ಸಾರೆ ಪಿಸ್ತೂಲ ಹಾರಿಸಿದನು. ಆದರೆ ಗುರಿ ತಪ್ಪಿದ್ದರಿಂದ ಅವರಿಗೆ ಅವು ತಗುಲಲಿಲ್ಲ. ಸಾಹೇಬರು ಒಮ್ಮಿಂದೊಮ್ಮೆ ಆ ಮುಸಲ್ಮಾನನ ಮೇಲೆ ಏರಿ ಹೋಗಿ, ಅವನನ್ನು ನೆಲಕ್ಕೆ ಕೆಡವಿ ಅವನ ಕೈಯೊಳಗಿನ ಪಿಸ್ತೂಲು ಕಸಿದುಕೊಂಡರು. ಪೋಲೀಸರು ಅವನನ್ನು ಸೆರೆಹಿಡಿದಿರುವರು, ಈ ಸಂಬಂಧವಾಗಿ ಶೋಧ ನಡೆಸಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿ ಗೋಳೀಬಾರು

ಇಬ್ಬರಿಗೆ ಮರಣ ೩೨ ಜನರಿಗೆ ಗಾಯ

ಸಂಯುಕ್ತ ಪ್ರಾಂತದ ಪ್ರತಾಪಗಡ ಜಿಲ್ಹೆಯ ಡೆಪ್ಯುಟಿ ಕಮೀಶನರರು ಒಂದು ನೋಟೀಸು ಹೊರಡಿಸಿ, ತಮ್ಮ ಜಿಲ್ಹೆಯಲ್ಲಿ ಕರನಿರಾಕರಣೆಯ ಚಳವಳಿಯ ಸಂಬಂಧವಾಗಿ ಸಭೆಗಳು ಜರುಗ ಕೂಡದಾಗಿ ಅಪ್ಪಣೆ ವಿಧಿಸಿದ್ದರು. ಆ ಜಿಲ್ಹೆಯಲ್ಲಿಯ ಕಸಲಾ ಎಂಬಲ್ಲಿ ಅಪ್ಪಣೆಯನ್ನು ಅವಮಾನ್ಯಮಾಡಿ ಸಭೆಕೂಡಿಸುವದರಲ್ಲಿ ಬಂದಿತ್ತು, ಪೋಲೀಸರು ಅಲ್ಲಿಗೆ ಬಂದು ಜನರಿಗೆ ಚದುರಿಹೋಗಲು ಹೇಳಿಕೊಂಡರು, ಜನರು ನಿರಾಕರಿಸಿದರು. ಜನರು ಹಾಗು ಪೋಲೀಸರಲ್ಲಿ ಲಗ್ಗೆ ಹತ್ತಿ ಪರಿಸ್ಥಿತಿಯು ವಿಕೋಪಕ್ಕೆ ಹೋಯಿತು. ಪೋಲೀಸರು ಗೋಳೀಬಾರ ಮಾಡಿದರು. ಇಬ್ಬರು ಮರಣ ಹೊಂದಿದ್ದು, ಒಟ್ಟಿಗೆ ೩೨ ಜನರಿಗೆ ಗಾಯಗಳಾಗಿವೆ. ಗಾಯ ಹೊಂದಿದವರಲ್ಲಿ ೬ ಜನ ಪೋಲೀಸರೂ, ಇಬ್ಬರು ಅಧಿಕಾರಿಗಳೂ ಇದ್ದಾರೆ.

ಕಾಮನ್ಸ ಸಭೆಯಲ್ಲಿ

ಸಂಧಾನದ ಬಗ್ಗೆ ಪ್ರಶ್ನೋತ್ತರ

"ಮಹಾತ್ಮಾ ಗಾಂಧಿಯವರು ಕಾಯದೆಭಂಗ ಚಳವಳಿಯನು ನಿಲ್ಲಿಸುವ ಬಗ್ಗೆ ಕೆಲವು ಕರಾರುಗಳನ್ನು ಹಾಕಿದ್ದು ಆ ಕರಾರುಗಳಿಗೆ ಸರಕಾರದವರ ಒಪ್ಪಿಗೆ ದೊರಕಿರುವದೋ ಹೇಗೆ?" ಹಾಗು ಕಾಯದೆಭಂಗ ಚಳವಳಿಯು ಮತ್ತೆ ಸುರುವಾಗಿರುವದೋ ಹೇಗೆ? ಎಂಬುದನ್ನು ತಿಳಿಸಲು ಮಿ. ಫೆಟ್ಸಿಯರ್ ಹಾಲರು ಕಾಮನ್ಸಸಭೆಯಲ್ಲಿ ಪ್ರಶ್ನೆ ಕೇಳಿದರು. ಅದಕ್ಕೆ ಮಿ. ಬೆನ ರವರು "ವೃತ್ತಪತ್ರಿಕೆಗಳಲ್ಲಿ ಪ್ರಸಿದ್ಧವಾದದ್ದರ ಹೊರತು ಹೆಚ್ಚಿಗೆ ಏನೂ ಹೇಳಲಾರೆ" ಎಂದು ಉತ್ತರ ಕೊಟ್ಟರು.

"ಮನಸಿಗೆ ಬಂದಂತೆ ಕಾಯದೆ ಮುರಿಯಲು ಮಹಾತ್ಮಾ ಗಾಂಧಿಯವರಿಗೆ ಮುಕ್ತದ್ವಾರ ಇದೆಯೆಂದು ನಾವು ತಿಳಿದುಕೊಳ್ಳಬೇಕೋ ಹೇಗೆ?" ಎಂಬುದಾಗಿ ಚರ್ಚಿಲರು ಕೇಳಿಕೊಂಡರು. ಆಗ್ಗೆ ಮಿ. ಬೆನ್ನರು "ಚರ್ಚಿಲನ್ನ ತಮ್ಮ ಮನಸಿಗೆ ಬಂದಂತೆ ತಿಳಿದು ಕೊಳ್ಳಬಹುದು" ಎಂದು ಉತ್ತರ ಕೊಟ್ಟರು.

ಸಾರ್ಜಂಟರು

ಸತ್ಯಾಗ್ರಹಿಗಳ ಕಿವಿ ಕಡಿಯುತ್ತಿದ್ದರು

ಮದ್ರಾಸ ದಕ್ಷಿಣ ಪುರದಲ್ಲಿ ಪಟ್ಟಣದ ಅಂಗಡಿಗಳ ಮುಂದೆ ಪಿಕೆಟಿಂಗ ಭರದಿಂದ ಜರಗುತ್ತಿದೆ. ತಾ|| ೧೪ ನೆಯ ದಿವಸ ೫ ಜನ ಸ್ವಯಂಸೇವಕರು ಬೇರೆ ಬೇರೆ ಗುಂಪುಗಳನ್ನು ಮಾಡಿಕೊಂಡು ಪೇಟೆ ಬಜಾರದಲ್ಲಿಯ ಗೀಸ ಎಂಡರ್ಸನ ಬ್ರದರ್ಸ್' ಇವರ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದರು. ಪೋಲೀಸರು ಅಲ್ಲಿಗೆ ಬಂದು ಅವರನ್ನು ಚದುರಿಸಿದರು. ಬಳಿಕ ಮತ್ತೊಂದು ತಂಡದವರು ಬಂದು ಪಿಕೆಟಿಂಗ ಮಾಡಿದರು. ಪೋಲೀಸರು ಅವರನ್ನಾದರೂ ಚದುರಿಸಿದರು. ಹೀಗೆಯೇ ೪-೫ ತಂಡಗಳು ಚದುರಿಸಲ್ಪಟ್ಟ ಬಳಿಕ ಗೋವಿಂದರಾಮ ಬ್ರದರ್ಸರ ಅಂಗಡಿ ಮುಟ್ಟಿಕೊಂಡು ಹೋದರು. ಸ್ವಯಂಸೇವಕರು ಕೂಗುತ್ತ ಹೋದರು. ಆಗ ಸಾರ್ಜಂಟರು ಅವರ ಮೇಲೆ ಏರಿ ಹೋಗಿ ಮೂವರು ಸ್ವಯಂಸೇವಕರ ಕಿವಿಗಳನ್ನು ಕಡಿದರು.

ಒಪ್ಪಂದದ ಬಗ್ಗೆ ಭವಿಷ್ಯ.

ಮುಂಬಯಿದ ಶ್ರೀ ಬನರ್ಜೀ. ಜೆ. ಪಂಡಿತರು ಈಗ ನಡೆದ ಸಂಧಾನದ ಮಾತುಕತೆಗಳ ಸಂಬಂಧವಾಗಿ, ಒಪ್ಪಂದವಾಗುವ ಸಂಭವವಿಲ್ಲವೆಂದೂ, ಮೇ ತಿಂಗಳದ ಕೊನೆಯವರೆಗೆ ದಬ್ಬಾಳಿಕೆಯು ಜೋರಿನಿಂದ ಸಾಗಿಕೊಳ್ಳುವದೆಂದೂ ಭವಿಷ್ಯ ಹೇಳಿದ್ದಾರೆ.

ಅಮೇರಿಕೆಯ ಭಾರತೀಯರು

ತಳಮಳಗೊಂಡರು

ಅಮೇರಿಕಾ ಖಂಡದ ಡೆಟ್ರಾಯಟದಲ್ಲಿ ನೆಲಸಿರುವ ಭಾರತೀಯರು ಮುಂಬಯಿ 'ಕ್ರಾನಿಕಲ್' ಪತ್ರಿಕೆಗೆ ಕೆಳಗಿನಂತೆ ತಂತಿ ಕಳಿಸಿದ್ದಾರೆ.

'ಮಹಾತ್ಮರು ಒಪ್ಪಂದಕ್ಕಾಗಿ ವ್ಯವಹರಿಸುತ್ತಿರುವರಾಗಿ ಇಲ್ಲಿಯ ವೃತ್ತಪತ್ರಿಕೆಗಳು ಹೇಳುತ್ತಲಿವೆ. ಆದರೆ ಹಿಂದುಸ್ಥಾನವು ಇನ್ನೂ ನಿರ್ಜೀವವಾಗಿಲ್ಲ ಒಪ್ಪಂದವನ್ನು ಮಾಡಿಕೊಳ್ಳಿರೆಂದು ಸರಕಾರದವರೇ ಕಾಂಗ್ರೆಸದವರಿಗೆ ಕೇಳಿಕೊಳ್ಳಲಿ. ಸ್ವಾತಂತ್ರ್ಯ ಚಳವಳಿಗೆ ನಾವು ತುಂಬಾ ಸಹಾಯ ಮಾಡುತ್ತೇವೆ''

'ಹೆರಾಲ್ಡ ಪತ್ರಿಕೆಗೆ'

ಮಹಾತ್ಮರ ತಾರು.

ಲಂಡನದ 'ಡೇಲಿ ಹೆರಾಲ್ಡ' ಪತ್ರಿಕೆಗೆ ಮಹಾತ್ಮಾ ಗಾಂಧಿಯವರು ಒಂದು ತಾರು ಕಳಿಸಿದ್ದು, ಅದರಲ್ಲಿ ಅವರು, ಗುಜ್ಜರ ದರ್ಜೆಯ ಕಾಂಗ್ರೆಸಿಗರು ಅತುರಪಡುವವರೂ ಇದ್ದುದರಿಂದ, ಒಪ್ಪಂದದ ಮಾರ್ಗವನ್ನು ಕಂಡು ಹಿಡಿಯುವ ಬಗ್ಗೆ ಶಕ್ತಿ ಮೀರಿ ಯತ್ನಿಸುತ್ತೇನೆ ಎಂಬುದಾಗಿ ಉಲ್ಲೇಖಿಸಿದ್ದಾರೆ.

ಪಶ್ಚಿಮ ಗೋದಾವರಿ ಜಿಲ್ಹೆಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಹಾಗು ಉಪಾಧ್ಯಕ್ಷರಾಗಿದ್ದ ಇಬ್ಬರು, ೧೪೪ ನೆಯ ಕಲಮನ್ನು ಅವಮಾನ್ಯ ಮಾಡಿದ್ದಕ್ಕಾಗಿ ಪ್ರತ್ಯೇಕವಾಗಿ ೪ ತಿಂಗಳ ಸಾದಾ ಶಿಕ್ಷೆಯಾಗಿದೆ.

ಭಗತಸಿಂಗ ಮೊದಲಾದವರ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಬೇಕಾಗಿ ದಿಲ್ಲಿಯ ನಗರವಾಸಿಗಳು ವ್ಹಾಯಿಸರಾಯರಿಗೆ ಬಿನ್ನವಿಸಿಕೊಂಡಿದ್ದಾರೆ.

ಬಹಿಷ್ಕಾರದ ಪರಿಣಾಮ

೧೯೩೦ ನೆಯ ಇಸ್ವಿಯಲ್ಲಿ ಪರದೇಶಗಳಿಂದ ಈ ದೇಶಕ್ಕೆ ಬಂದ ಜವಳಿಯ ಸಂಬಂಧವಾಗಿ ಮುಂಬಯಿಯ ಗಿರಣಿಗಳ ಸಂಘದವರು ಒಂದು ಪತ್ರಿಕೆಯನ್ನು ಪ್ರಸಿದ್ಧ ಪಡಿಸಿದ್ದು ಅದರಿಂದ ತಿಳಿದು ಬರುವದೇನಂದರೆ—

೧೯೨೯ ನೆಯ ಇಸ್ವಿಯಲ್ಲಿ ಪರದೇಶಗಳಿಂದ ಈ ದೇಶಕ್ಕೆ ೫೯೫ ಲಕ್ಷ ಯಾರ್ಡ ಜವಳಿಯು ಬಂದಿತ್ತು. ಈ ವರ್ಷ ಕೇವಲ ೨೬೭ ಲಕ್ಷ ಯಾರ್ಡ ಜವಳಿಯಷ್ಟೇ ಬಂದಿದೆ. ಅಂದರೆ ಪರದೇಶಿ ಜವಳಿಯು ಹೋದ ವರ್ಷದಕಿಂತ ೩೨೮ ಲಕ್ಷ ಯಾರ್ಡ ಕಡಿಮೆಯಾಗಿ, ಪರದೇಶದವರ ವ್ಯಾಪಾರವು ೧೦೦ಕ್ಕೆ ೫೫ರಂತೆ ಇಳಿದಂತಾಯಿತು. ಈ ವರ್ಷ ಬಂದ ೨೬೭ ಲಕ್ಷ ಯಾರ್ಡಗಳಲ್ಲಿ ೧೯೨ ಲಕ್ಷ ಯಾರ್ಡ ಅಮೇರಿಕೆಯಿಂದ, ೧೨೧ ಲಕ್ಷ ಯಾರ್ಡ ಜಪಾನದ್ದೂ ಇರುತ್ತದೆ. ಹೋದ ವರ್ಷ ಅಮೇರಿಕಾ ಹಾಗು ಜಪಾನಗಳಿಂದ ಕ್ರಮವಾಗಿ ೨೮೧ ಹಾಗು ೨೧೯ ಲಕ್ಷ ಯಾರ್ಡ ಜವಳಿಯು ಬಂದಿತ್ತು.

೧೯೨೯ ನೆಯ ಇಸ್ವಿಯಲ್ಲಿ ೨೮ ಲಕ್ಷ ಪೌಂಡು ನೂಲು ಇಲ್ಲಿಗೆ ಬಂದಿತ್ತು. ೧೯೩೦ ರಲ್ಲಿ ಕೇವಲ ೧೯ ಲಕ್ಷ ಪೌಂಡು ನೂಲು ಇಷ್ಟೇ ಇಲ್ಲಿಗೆ ಬಂದಿದೆ. ಪ್ರತಿ ತಿಂಗಳದಲ್ಲಿ ಸರಾಸರಿ ೪೭ ಲಕ್ಷ ಯಾರ್ಡ ಜವಳಿಯು ಬರುತ್ತಿತ್ತು. ಆದರೆ ಡಿಸೆಂಬರ ತಿಂಗಳಲ್ಲಿ ಆ ಅಂಕೆಯು ೬೬ ಲಕ್ಷ ಯಾರ್ಡಗೆ ಇಳಿಯಿತು.

ಮದ್ರಾಸದಲ್ಲಿ
೭ ದಿನ ಹರತಾಳ

ಪರದೇಶೀ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿರುವ ರಾಷ್ಟ್ರಸೇವಕರನ್ನು ಪೋಲೀಸರು ಲಾಠಿಗಳಿಂದ ಹೊಡೆದು ಬಡೆದು ಚದುರಿಸುತ್ತಿರುವದರ ನಿಷೇಧಾರ್ಥವಾಗಿ, ೭ ದಿವಸಗಳ ವರೆಗೆ ಹರತಾಳವನ್ನಾಚರಿಸಬೇಕೆಂದು ಮದ್ರಾಸದ ಕೆಲವು ವರ್ತಕರು ನಿರ್ಧರಿಸಿಕೊಂಡಿದ್ದಾರೆ.

ಸಿದ್ದಾಪುರದಲ್ಲಿ
ಇಬ್ಬರನ್ನು ಸೆರೆ ಹಿಡಿದರು

ಭೂಕಂದಾಯವನ್ನು ಕೊಡಬೇಡರೆಂದು ಜನರಿಗೆ ಬೋಧಿಸಿದ್ದಕ್ಕಾಗಿ ಕಾರವಾರ ಜಿಲ್ಲೆಯ ಸಿದ್ದಾಪುರದಲ್ಲಿ ಇಬ್ಬರು ಸ್ವಯಂಸೇವಕರು "ಇನ್ಸ್ಟಿಗೇಶನ ಆರ್ಡಿನನ್ಸ" ದನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ. ಅವರಲ್ಲಿ ಒಬ್ಬನು ೧೩ ವರ್ಷದವನಿದ್ದಾನೆ.

ಪ್ರಕಟನೆ

ಬಾಗಲಕೋಟೆಯ ಶ್ರೀ ಬಸವೇಶ್ವರ ಹಾಯಸ್ಕೂಲನ್ನು ಪ್ಲೇಗಿನ ಮೂಲಕ ತಾ|| ೧-೩-೩೧ರ ವರೆಗೆ ಬಂದ ಮಾಡಿದ್ದು ಅದು ತಾ|| ೨-೩-೩೧ನೇ ಸೋಮವಾರ ದಿವಸ ಪ್ರಾರಂಭವಾಗುವದು. ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾಪ್ರಕಾರ ನಡೆಯುವದು. ವಿದ್ಯಾರ್ಥಿಗಳು ಸಾಲೆಕ್ಕೆ ಬರಬೇಕು.

ಬಾಗಲಕೋಟೆ ತಾ|| ೧೮—೨—೩೧

ಎಚ್. ಎಫ್. ಕಟ್ಟೀಮನಿ
ಪ್ರಿನ್ಸಿಪಾಲ

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ದರಕ್ಕೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಪುರಂದರೆಯವರ ಟೋಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೋಪಿಗೆಗಳು ಮಾರಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೋಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಗೋಲಬಾಜಾರ ವಿಜಾಪುರ

ಸ್ಯಾಂಪಲ್) ಮಸಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳಿ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೮—೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ರೇಲ್ವೆ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪ ಮಸಿ ½ ಔಂಸಿನ ೧ ಡಜನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೆರಿ ಬ್ರದರ್ಸ
ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು [illegible] ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿ ಪಡಿಸಲ್ಪಟ್ಟಿತು.

ರ. ನಂ. ಬಿ. ೨೦೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

सर्वं परवशं दुःखं । सर्वमात्मवशं सुखम् ॥—मनु.

ಕನ್ನಡಿಗ

KANNADIGA BAGALKOT.

BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶನಿವಾರ ಮಿತಿ ಫಾಲ್ಗುಣ ಶುದ್ಧ ೪ ಶಕೆ ೧೮೫೨ ತಾ|| ೨೧—೨—೩೧ [ಸಂಚಿಕೆ ೧೯೫

ಗಾಂಧಿ–ವ್ಹಾಯಿಸರಾಯರಲ್ಲಿ

ಒಪ್ಪಂದದ ಮಾತುಕತೆಗಳು

ಮುಂದಿನವಾರದಲ್ಲಿ ಸರಕಾರ ಹಾಗು ಕಾಂಗ್ರೆಸ್ ಪಕ್ಷದವರಲ್ಲಿ ಸಭೆ

(ತಂತಿಯ ವಾರ್ತೆ ತಾ|| ೨೦)

ಗುರುವಾರ ದಿವಸ ವ್ಹಾಯಿಸರಾಯರು ಮಹಾತ್ಮಾಗಾಂಧಿಯವರನ್ನು ಭೆಟ್ಟಿಗೆ ಕರೆಕಳುಹಿದ್ದರಿಂದ, ಅವರು ಅಂದು ಮಧ್ಯಾಹ್ನದಲ್ಲಿ ೨ ಘಂಟೆಗೆ ವ್ಹಾಯಿಸರಾಯರನ್ನು ಕಂಡುಕೊಂಡರು. ಅವರಿಬ್ಬರಲ್ಲಿಯೂ ಸುಮಾರು ಅರ್ಧ ತಾಸಿನ ವರೆಗೆ ಚರ್ಚೆ ನಡೆಯಿತು. ಈಗ ಚರ್ಚೆಯಲ್ಲಿ ವಿಚಾರ ಮಾಡಲ್ಪಟ್ಟ ಬೇರೆಬೇರೆ ವಿಷಯಗಳ ಸಂಬಂಧವಾಗಿ ಸಂಧಾನವಾಗುವದು ಸಂಭವವಿದೆಯೆಂದೂ, ಆದರೆ ಅದು ಆಗಬೇಕಾದರೆ ಇನ್ನೂ ಕೆಲವೊಂದು ದಿನಗಳು ಹೋಗಬೇಕಾಗುವದಾಗಿಯೂ ತಿಳಿದು ಬರುತ್ತದೆ

ಮುಂದಿನ ವಾರದಲ್ಲಿ ಒಂದು ಪರಿಷತ್ತು ಕರೆಯಲ್ಪಟ್ಟಿದ್ದು, ಈ ಪರಿಷತ್ತಿನಲ್ಲಿ ವ್ಹಾಯಿಸರಾಯರು, ಅವರ ಕಾರ್ಯಕಾರಿ ಮಂಡಳದವರು, ನಾ. ಶಾಸ್ತ್ರಿ, ಶ್ರೀ ಜಯಕರ, ಸರ್. ಸಪ್ರು ಶಾಸ್ತ್ರಿ, ಬಿಕಾನೇರ ಮಹಾರಾಜರು, ಭೋಪಾಳದ ನವಾಬರು, ಇವರು ತಮ್ಮದೊಂದು ಪಕ್ಷ ಮಾಡಿಕೊಂಡು, ಬೇರೊಂದು ಪಕ್ಷದವರಾದ ಮಹಾತ್ಮಾ ಗಾಂಧಿ, ಪಂಡಿತ ಜವಾಹೀರಲಾಲ, ಪಂಡಿತ ಮಾಲವಿಯಾ, ಡಾ. ಅನ್ಸಾರಿ ಮೊದಲಾದವರೊಂದಿಗೆ ವಿಚಾರ ವಿನಿಮಯ ಮಾಡುವರೆಂದು ತಿಳಿದು ಬರುತ್ತದೆ. ಈ ಪರಿಷತ್ತು ಬಹುಶಃ ಗುರುವಾರ ದಿವಸ ಸೇರಬಹುದಾಗಿ ತೋರುತ್ತದೆ.

ಶ್ರೀ ಸೇನಗುಪ್ತರು ದಿಲ್ಲಿಗೆ ಹೊರಟರು.

(ತಂತಿಯ ವಾರ್ತೆ ತಾ|| ೨೦)

ಬಂಗಾಲದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರೂ ವರ್ಕಿಂಗ ಕಮಿಟಿಯ ಸಭಾಸದರೂ ಆಗಿರುವ ಶ್ರೀ ಜೆ. ಎಂ. ಸೆನಗುಪ್ತರು, ಇವತ್ತಿನ ದಿವಸ ಅಲೀಪೂರ ಜೇಲಿನಲ್ಲಿ ಶ್ರೀ ಸುಭಾಶಚಂದ್ರ ಬೋಸರೊಡನೆ ೨ ತಾಸುಗಳ ವರೆಗೆ ಮಾತುಕತೆಮಾಡಿ, ದಿಲ್ಲಿಗೆ ಹೊರಟು ಹೋದರು.

ಶ್ರೀ ಸುಭಾಶ ಬೋಸರ ಮುಂಗೈಎಲುಬು ಮುರಿದಿದೆ.

ಅಲೀಪೂರ ಸೆಂಟ್ರಲ್ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಬಂಗಾಲ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ಸುಭಾಶಚಂದ್ರ ಬೋಸರಿಗೆ ಸ್ವಾತಂತ್ರ್ಯ ದಿನದ ದಿವಸ ಲಾಠಿ ಪೆಟ್ಟುಗಳು ಬಿದ್ದವಷ್ಟೆ. ಈ ಲಾಠಿ ಪೆಟ್ಟುಗಳ ಮೂಲಕವಾಗಿ ಅವರ ಬಲಗೈಯು ಈಗ ಒಂದೇ ಸವನೆ ಬಾತುಹತ್ತಿದ್ದು, ಅದು ಈಗ ಯಾವ ಉಪಯೋಗಕ್ಕೆ ಬಾರದಂತಾಗಿದೆ. ಮುಂಗೈ ಎಲುಬು ಮುರಿದಿದೆಯೋ, ಏನೆಂಬುದನ್ನು ಕಂಡು ಹಿಡಿಯುವ ಕಾರಣ ಅಧಿಕಾರಿಗಳು ಅವರ ಕೈಯನ್ನು 'ಕ್ಷ' ಕಿರಣದಿಂದ ಬೇಗನೆ ಪರೀಕ್ಷಿಸತಕ್ಕವರಿದ್ದಾರೆ.

ಹಬೀಬ ನೂರರನ್ನು ಗಲ್ಲಿಗೇರಿಸಿದರು.

ಪಂಜಾಬದ ಅಸಿಸ್ಟಂಟ ಕಮೀಶನರ ಕ್ಯಾಪ್ಟನ್ ಬಾರ್ನೆಸರ ಮೇಲೆ ಪಿಸ್ತೂಲ ಹಾರಿಸಿ ಅವರನ್ನು ಕೊಲ್ಲಲು ಪ್ರಯತ್ನಿಸಿದ ಆರೋಪದ ಬಗ್ಗೆ ಹಬೀಬ ನೂರಮಹಮ್ಮದರಿಗೆ ಗಲ್ಲಿನ ಶಿಕ್ಷೆಯು ವಿಧಿಸಲ್ಪಟ್ಟಿದ್ದರಿಂದ ಅವರು ತಾ|| ೧೯ ನೆಯ ದಿವಸ ಪೇಶಾವರ ಜೇಲಿನಲ್ಲಿ ಗಲ್ಲಿಗೇರಿಸಲ್ಪಟ್ಟರು.

ಹುಕ್ಕೇರಿಯಲ್ಲಿ ಸೆರೆಗುಡುಕನ ಸಿಪಾಯಿಯ ಭಂಡಾಟ

ಹುಕ್ಕೇರಿಯು ಸ್ಟೇಶನ ಇದು ಆರೋಗ್ಯಕರವಾದ ಸ್ಥಳವೆಂದು ಇತ್ತೀಚಿಗೆ ಪ್ರಸಿದ್ಧಿ ಹೊಂದಿದ್ದರಿಂದ, ಸಂಗ್ರಹಣೀ ರೋಗದಿಂದ ಬಳಲುತ್ತಿರುವ ವಾಯಿಯ ಶ್ರೀ ದಿವೇಕರ ಶಾಸ್ತ್ರಿಯವರು ತಮ್ಮ ಪ್ರಕೃತಿಯನ್ನು ಸುಧಾರಿಸಿಕೊಳ್ಳುವದಕ್ಕಾಗಿ ಕಳೆದ ೩|| ತಿಂಗಳಿಂದ ಅಲ್ಲಿ ನೆಲಸಿದ್ದಾರೆ. ಒಂದು ದಿವಸ ಅಲ್ಲಿ ಅವರ ಮನೆಯಲ್ಲಿ ಕಳವಾಯಿತು. ಶಾಸ್ತ್ರಿಗಳು ಆ ಸುದ್ದಿಯನ್ನು ಫೌಜದಾರರಿಗೆ ತಿಳಿಸಿದರು. ಫೌಜದಾರರಿಗೆ ಅಂದು ಅಲ್ಲಿಗೆ ಬರಲಿಕ್ಕೆ ಆಗದ್ದರಿಂದ ಅವರು ಒಬ್ಬ ಸಿಪಾಯಿಯನ್ನು ಕೊಟ್ಟು ಕಳಿಸಿದರು. ಅವನು ಸ್ಟೇಶನದಲ್ಲಿ ಒಂದು ಅಂಗಡಿಯಲ್ಲಿ ಕುಳಿತುಕೊಂಡು ಶಾಸ್ತ್ರಿಗಳಿಗೆ ಹೇಳಿ ಕಳಿಸಿದನು. ಶಾಸ್ತ್ರಿಗಳು ಬಂದಕೂಡಲೆ ಅವರಲ್ಲಿ ಕೆಳಗಿನಂತೆ ಪ್ರಶ್ನೋತ್ತರಗಳು ಘಟಿಸಿದವು.

ಸಿಪಾಯಿ:— ನಿಮ್ಮ ಮನೆಯಲ್ಲಿ ಕಳವಾಗಿಲ್ಲವೇ? ಫೌಜದಾರರು ನಿಮ್ಮನ್ನು ಕರೆದುಕೊಂಡು ಬರಲು ಮೋಟಾರ ಕೊಟ್ಟು ಕಳಿಸಿದ್ದಾರೆ. ಈಗಿಂದಿಗ್ಗೆ ನಡೆರಿ.

ಶಾಸ್ತ್ರಿಗಳು:— ಈಗ ೧೨ ಹೊಡೆಯಲಿಕ್ಕೆ ಬಂದಿರುತ್ತದೆ. ಇನ್ನೂ ಊಟವಾಗಿಲ್ಲ ಅದ್ದರಿಂದ ಈಗ ಬರುವದು ಶಕ್ಯವಿಲ್ಲ. ನೀವು ಹೋಗಿರಿ. ಹಿಂದುಗಡೆಯಲ್ಲಿ ಬರುವೆನು. ಇಲ್ಲವೆ ಫೌಜದಾರರು ಇತ್ತಕಡೆ ಬಂದಾಗ್ಗೆ ಅವರಿಗೆಲ್ಲ ಸಂಗತಿ ತಿಳಿಸುವೆನು.

ಸಿಪಾಯಿ:— ಫೌಜದಾರರು ನಿಮ್ಮ ಅಪ್ಪನ ನೌಕರರೇನು? ಅರ್ಜಿಯನ್ನೇಕೆ ಮಾಡಿದಿರಿ? ಊಟವಾಗಿರದಿದ್ದರೇನ [illegible]? ಇದೇನು ವಾಯಿ ಎಂದು ತಿಳಿದು [illegible] ಯಾರೋ ಹೇ?

ಶಾಸ್ತ್ರಿಗಳು:— [illegible] ಹೀಗೆಕೆ ಮಾತನಾಡುತ್ತೀರಿ? [illegible] ಇದೆಯೇ? ನೀವು [illegible] ವಿರಿ? ನೀವು ಹೀಗೇಕೆ ಹುಚ್ಚನಂತೆ ಮಾತನಾಡುತ್ತೀರಿ.

ಸಿಪಾಯಿ:— ಹಿಂದುಗಡೆಯಲ್ಲಿ ಬರುವದಾದರೆ ಫಿರ್ಯಾದ ಮಾಡುವದೇನು? ನೀನೇನು ಗವರ್ನರನೇ? ಇಲ್ಲವೆ ನ್ಯಾಯಾಧೀಶನೇ? ನಿಮ್ಮನ್ನು ಕರೆದುಕೊಂಡು ಹೋಗಿಯೇ ಬಿಡುವೆನು.

ಶಾಸ್ತ್ರಿಗಳು:— ನಿಮ್ಮ ಕೂಡ ನಾನು ಹೆಚ್ಚಿಗೆ ಒಂದು ಶಬ್ದವನ್ನಾದರೂ ಮಾತಾಡಲಾರೆನು. ನಾನು ಇಲ್ಲಿ ಇನ್ನು ಕೂಡುವದಿಲ್ಲ.

ಸಿಪಾಯಿ:— ನಿಮ್ಮನ್ನು ಇಲ್ಲೆ ನನ್ನ ಹಿಡಿದಿದ್ದೇನೆ. [illegible] ವಹಿಸಿಕೊಳ್ಳಬೇಕು.

ಲೈಸೆನ್ಸು [illegible] ಇಲ್ಲದ ಹೊರತು ಬಾಯಿ ಮುಚ್ಚುವದಿಲ್ಲವೆಂದು ಹೇಳಿ ಶಾಸ್ತ್ರಿಗಳು ಅಲ್ಲಿಂದ ಹೊರಬಿದ್ದರು. ಸಿಪಾಯಿಯು ದಾರಿಯ ಅವರ ಹಿಂದೆಯೇ ಬಂದು ಅವರಿಗೆ ಗುದ್ದಿಗೆಗಳನ್ನು ಕೊಟ್ಟು ಅವರನ್ನು ಮೋಟಾರದಲ್ಲಿ ದಬ್ಬಿ ಕೂಡಿಸುವ ಪ್ರಯತ್ನ ಮಾಡಿದನು. "ಜೀವ ತೆಗೆದುಕೊಂಡರೂ ಅಲ್ಲಿಗೆ ಬರುವದಿಲ್ಲ" ವೆಂದು ದಿವೇಕರ ಶಾಸ್ತ್ರಿಗಳು ಗಟ್ಟಿಯಾಗಿ ಕೂಗಿದರು. ಅಷ್ಟರಲ್ಲಿಯೇ ಎಷ್ಟೋ ಜನರು ಅಲ್ಲಿ ಬಂದು ನೆರೆದರು. ಪೋಲೀಸ ಪಾಟೀಲನು ಆ ಸಿಪಾಯಿಗೆ ಬುದ್ಧಿ ಹೇಳಿದನು. ಆದರೆ ಆ ಸಿಪಾಯಿಯು ತಿರುಗಿ ಅವನಿಗೇನೆ ಜಬೇಸ್ತ ಬೈದನು. ಅಷ್ಟರಲ್ಲಿ ಸ್ಟೇಶನ ಮಾಸ್ತರರಾದ ಶ್ರೀ ಜೋಗಳೇಕರರು ಅಲ್ಲಿಗೆ ಬಂದರು. ಸಿಪಾಯಿಯು ಅವರನ್ನು ಬೈದು, ಪುನಃ ದಿವೇಕರರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳನ್ನು ಉಚ್ಚರಿಸಿದನು.

ಶ್ರೀ ದಿವೇಕರರು ಊಟ ಮೊದಲಾದವುಗಳನ್ನು ತೀರಿಸಿಕೊಂಡು, ಸ್ಟೇಶನ ಮಾಸ್ತರರನ್ನು ಸಂಗಡ ಕರೆದುಕೊಂಡು ಗೋಕಾಕಕ್ಕೆ ಹೋದರು. ಅಲ್ಲಿ ಫೌಜದಾರ ಸಾಹೇಬರಿಗೆ ಭೆಟ್ಟಿಯಾಗಿ ಕಳವಿನ ಹಾಗು ಪೋಲೀಸನ ಸ್ವೈರ ವರ್ತನವನ್ನು ಅವರಿಗೆ ತಿಳಿಸಿದರು. 'ಆ ಸಿಪಾಯಿಯು ಕುಡುಕ ಹಾಗು ಹಲಕಟ್ಟ ಇರುವನು' ಎಂದು ಫೌಜದಾರರು ಹೇಳಿದರು. "ಅಂತಹವನನ್ನು ಯಾಕೆ ಕಳಿಸಿದಿರಿ? ನಿಮ್ಮ ನೇಲಿನ ಪ್ರಸಂಗವೇ ಎಂದು ತಿಳಿದುಕೊಂಡು ಅವನಿಗೆ ತಕ್ಕ ಶಾಸನ ಮಾಡಿರಿ" ಎಂದು ಶಾಸ್ತ್ರಿಗಳು, ಫೌಜದಾರರಿಗೆ ತಿಳಿಸಿಕೊಂಡು ಹೊರಟು ಬಂದರು. ನೋಡಬೇಕು ಸಿಪಾಯಿಗೆ ಏನು ಶಾಸನ ಮಾಡುವರೆಂಬುದನ್ನು!

ಮುಂಬಯಿಯಲ್ಲಿ ಮದಿರಾಸುರನ ಪೀಕಲಾಟ

ಮುಂಬಯಿಯಲ್ಲಿ ಕಲೆಕ್ಟರ ಕಚೇರಿಯಲ್ಲಿ ತಾ|| ೧೭ ನೆಯ ದಿವಸ ಸೆರೆ ಸಿಂದಿ ಅಂಗಡಿಗಳ ಲಿಲಾವು ನಡೆಯುತ್ತಿದ್ದುದರಿಂದ, ಸುಮಾರು ೧೦೦ ಜನ ಸೇವಿಕೆಯರು ಹಾಗು ೨೦೦ ಜನ ಸ್ವಯಂಸೇವಕರು ಪಿಕೆಟಿಂಗ ಮಾಡುವ ಉದ್ದೇಶದಿಂದ ಮುಂಜಾನೆ ೯ ಗಂಟೆಗೆ ಅಲ್ಲಿಗೆ ಹೋಗಿ ಕಸ್ಟಮ್ ಹೌಸ ಹಾಗು ಕಲೆಕ್ಟರ ಕಚೇರಿಯ ಮುಂದೆ ನಿಂತರು. ೧೧-೩೦ ಕ್ಕೆ ಕಚೇರಿಯ [illegible] ಅಲ್ಲಿಗೆ ಬಂದು ಕಚೇರಿಯೊಳಗೆ ಹೋಗಲು ಪ್ರಯತ್ನಿಸಿದರು. ಸ್ವಯಂಸೇವಕರು ದಾರಿ ಕಟ್ಟಿದ್ದರಿಂದ ಸಾಧ್ಯವಾಗಲಿಲ್ಲ. ೧೨ ಗಂಟೆಯ ಸುಮಾರಕ್ಕೆ ಕಲೆಕ್ಟರರು ಬಂದರು. 'ನೀವು ಹೀಗೆ ಪಿಕೆಟಿಂಗ ಮಾಡಿದಲ್ಲಿ ಮುಕ್ತೇದಾರರು ಅಂಜಿ [illegible]ವಾಗಿ ಮತ್ತೆ ಹಿಡಿಯುವರು' ಎಂಬುದಾಗಿ ತಿಳಿಸಿದರು. ಒಬ್ಬಳು 'ಪೋಸ್ಟಮನ್ನರನ್ನೇ ಪಿಕೆಟಿಂಗ ಮಾಡುವೆವು' ಎಂದು ಉತ್ತರ ಕೊಟ್ಟಳು. ಕಲೆಕ್ಟರರು ಕಚೇರಿಯೊಳಗೆ ಹೋದರು.

ಅಷ್ಟರಲ್ಲಿ ಸಾರ್ಜಂಟ ರಿಮರರು ೨೦ ಜನ ಪೋಲೀಸರೊಂದಿಗೆ ಅಲ್ಲಿಗೆ ಬಂದು ಸ್ವಯಂಸೇವಕರನ್ನು ದಬ್ಬಿ, ಹೊರಗೆ ನಿಂತುಕೊಂಡ ಮುಕ್ತೇದಾರರನ್ನು ಒಳಗೆ ಕಳಿಸಿದರು. ಈ ಗೊಂದಲದಲ್ಲಿ ಕೆಲವು ಸ್ವಯಂಸೇವಿಕೆಯರ ಬಳೆಗಳು ಹಚ್ಚಿ ಹೋದದ್ದಲ್ಲದೆ, ಕೆಲವರ ಕೈಗೆ ಗಾಯವೂ ಆಯಿತು. ಸೇವಿಕೆಯರು ಮತ್ತೆ ಬಂದು ನಿಂತುಕೊಂಡರು. ಪೋಲೀಸರು ಚದುರಿಸಲು ಪ್ರಯತ್ನಿಸಿದರು. ಹೊರಗಿನ ಗೊಂದಲ ಲಕ್ಷ್ಯದೇ[illegible], ಕಲೆಕ್ಟರರು ಹೊರಗೆ ಬಂದು ಪೋಲೀಸರಿಗೆ ಹೊರಟು ಹೋಗಲು ಹೇಳಿಕೊಂಡರು. ಪೋಲೀಸರು ಅವನತಮುಖರಾಗಿ ಹೊರಟು ಹೋದರು.

ಕೆಲವು ಮುಕ್ತೇದಾರರು ಹಾಗು ಅಧಿಕಾರಿಗಳು ಶ್ರೀ ಮುನಶಿ, [illegible], ರಾಧಾಕಾಂತ ಮಾಲವೀಯಾ ಮೊದಲಾದವರನ್ನು ಕಂಡುಕೊಂಡು ಪಿಕೆಟಿಂಗ ನಿಲ್ಲಿಸಲು ಕೇಳಿಕೊಂಡರು. ಮುಕ್ತೇದಾರರು ತಿರುಗಿ ಹೋಗದ ಹೊರತು ಪಿಕೆಟಿಂಗ ನಿಲ್ಲಿಸಲಾಗುವದಿಲ್ಲವೆಂದು ಶ್ರೀ ಮುನಶಿ ಮೊದಲಾದವರು ಉತ್ತರ ಕೊಟ್ಟರು. ಮುಕ್ತೇದಾರರು ಅದಕ್ಕೆ ಒಪ್ಪಿಕೊಂಡು ಅಲ್ಲಿಂದ ಎದ್ದು ಹೋಗಿ ಬಿಟ್ಟರು. ೧೨-೩೦ ಕ್ಕೆ ಸುಪರಿಂಟೆಂಡೆಂಟ ಹೋವ್ಸರು ಬಂದು ಶ್ರೀ ಮುನಶಿಯವರಿಗೆ 'ಏನು ನಡೆದಿದೆ' ಎಂದು ಪ್ರಶ್ನೆ ಮಾಡಿದರು. "ಕೆಲವು ಜನರು ಸೆರೆಸಿಂದಿಯಿಂದ ಹಣ ಗಳಿಸಬೇಕೆನ್ನುತ್ತಾರೆ. ಅವರ ಮನವೊಲಿಸಲು ಈ ಪ್ರಯತ್ನ ನಡೆಸಿದ್ದಾಗಿದೆ" ಎಂದು ಮುನಶಿಯವರು ಉತ್ತರ ಕೊಟ್ಟರು. ಸಾಹೇಬರು ಹೊಂಟು ಹೋದರು. ಸಿಂದೀ ಅಂಗಡಿಗಳ ಲಿಲಾವು "ಬಂದ್ ಫಸಲ್" [illegible]ಯಿತು.

ವಿಜಾಪುರ ಜಿಲ್ಲೆಯ ರೈತರ ಪರಿಷತ್ತು ಅಧ್ಯಕ್ಷರಾದ ರಾ. ಬ. ಎಸ್. ಎನ್. ಅಂಗಡಿ ಇವರ ಭಾಷಣವು

(ಹಿಂದಿನ ಸಂಚಿಕೆಯಿಂದ ಬಂದದ್ದು)

ಸಹಕಾರೀ ಸಂಘಗಳ ಮುಖಾಂತರವೇ ತಗಾಯಿ ಸಾಲವನ್ನು ಕೊಡುವ ಪದ್ಧತಿಯು ಈಗೀಗ ಪ್ರಾರಂಭವಾಗಿದೆ. ಇಲ್ಲಿ ಕೂಡ ಸಾಲದ ಅರ್ಜಿಯು ವಿಚಾರಣೆಗಾಗಿ ಮಂಜೂರಾಗಲು ೩—೪ ವರ್ಷಗಳು ಬೇಕಾಗುತ್ತವೆಂಬುದನ್ನು ಕೇಳಿ ನನಗೆ ಸೋಜಿಗವೆನಿಸಹತ್ತಿದೆ. ವ್ಯವಹಾರ ದೃಷ್ಟಿಯಿಂದ ವಿಚಾರಿಸಿದರೆ ಸೊಸಾಯಿಟಿಗಳ ಬಡ್ಡಿಯ ದರದಲ್ಲಿಯೂ ಸ್ಥಾನಿಕ ಸಾವಕಾರ ಬಡ್ಡಿಯ ಪ್ರಮಾಣದಲ್ಲಿಯೂ ವಿಶೇಷ ಅಭ್ಯಂತರವಿಲ್ಲದುದರಿಂದ ರೈತರಿಗೆ ಬೇಕಾದ ನಿಜವಾದ ಕಷ್ಟನಿವಾರಕ ಸಹಾಯವು ಸಿಕ್ಕಲಾರದಾಗಿದೆ.

ಹೊಲಒತ್ತೀ ಬ್ಯಾಂಕು

ನನಗೆ ಗೊತ್ತಿದ್ದ ಮಟ್ಟಿಗೆ ರೈತರ ಸಾಲಗಾರಿಕೆಯನ್ನು ನಿರ್ಮೂಲಗೊಳಿಸಬೇಕೆಂದು ಸರಕಾರದ ಇಚ್ಛೆಯಿದ್ದರೆ ಒಂದೇ ಒಂದು ಉಪಾಯವು ಇರುತ್ತದೆ. ಸರಕಾರದವರು ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಹೊಲಗಳನ್ನು ಒತ್ತೀ ಹಿಡಿಯುವ ಬ್ಯಾಂಕನ್ನು ಸ್ಥಾಪಿಸಿ ಅತ್ಯಂತ ಅಗ್ಗವಾದ ಬಡ್ಡಿಯ ದರದಿಂದ ಅಂದರೆ ನೂರಕ್ಕೆ ಐದುವರೆ ರೂಪಾಯಿಗಳಂತೆ ಸಾಲವನ್ನು ಕೊಡಬೇಕು. ಈ ವಿಷಮಸ್ಥಿತಿಗೆ ಸರಕಾರದವರೇ ಸಂಪೂರ್ಣ ದೋಷಾರ್ಹರೆಂದು ಹೇಳಲಿಕ್ಕಾಗದು. ನಿಮ್ಮ ಸಾಲವನು ತೀರಿಸುವದು ನಿಮ್ಮಿಂದಾಗದಿದ್ದರೆ ಅದಕ್ಕೆ ನಿಮ್ಮಲ್ಲಿರುವ ಭಾವಿಕತನವೂ ದುಂದುಗಾರಿಕೆಯೂ, ಅಂತಃಕಲಹಗಳೂ ಕಾರಣಗಳು. ನೀವು ಬಡವರಿರುವದರಿಂದ ಕೈ ಬಿಗಿಹಿಡಿದು ವೆಚ್ಚಮಾಡುವದು ನಿಮ್ಮ ಕರ್ತವ್ಯವೆಂದೇ ನನ್ನ ಅಭಿಪ್ರಾಯ. ನಿಮ್ಮ ಜಿಲ್ಲೆಯ ವಿಷಯವಾಗಿ ಹೇಳಬೇಕಾದರೆ ಇತಿಹಾಸ ಪ್ರಸಿದ್ಧ ಇಮಾರತಿಗಳಿಗಾಗಿ ನಿಮ್ಮ ನಗರವು ಪ್ರಸಿದ್ಧವಿದ್ದರೂ ಕಡಿಮೆ ಮಳೆಗಾಗಿ ಹೆಸರಾಗಿರುವದು. ವಿಜಾಪುರದಲ್ಲಿ ಚಲೋ ಬೆಳೆಯು ಬಂದಿದೆಯೆಂದರೆ ಅದೊಂದು ಉತ್ಸವದ ವಿಷಯ. ಯಾಕಂದರೆ ಕರ್ನಾಟಕದ ಇತರ ಸ್ಥಳಗಳಲ್ಲಿಯ ಬೆಳೆಗಳು ಕೆಟ್ಟಿಲ್ಲವೆಂಬುದರ ಲಕ್ಷಣವದು. ಸಾಧಾರಣವಾಗಿ ನಿಮ್ಮ ಭೂಮಿಯನ್ನು (Dry tract) ನಲ್ಲಿ ಸೇರಿಸಬಹುದು. ಇದಕ್ಕೆ ಒಡ್ಡುಗಳನ್ನು ಹಾಕುವದೊಂದೇ ಒಂದು ಉಪಾಯವು. ನಿಮ್ಮೊಳಗಿನವರೇ ಆದ ದಿವಾಣಬಹಾದ್ದೂರ ಕಂಬಳಿಯವರೇ ಈಗಿನ ಒಕ್ಕಲತನ ಖಾತೆಯ ಮಂತ್ರಿಗಳಾಗಿರುವರು. ಕರ್ನಾಟಕಕ್ಕೋಸುಗ ವಿಶೇಷತಃ ವಿಜಾಪುರ ಜಿಲ್ಲೆಯ ವಿಷಯವಾಗಿ ಅವರು ಏನಾದರೂ ಮಾಡಿಯಾರೆಂದು ನನ್ನ ಅಪೇಕ್ಷೆ.

ಆಳವಾಗಿ ನೇಗಿಲವನ್ನು ಹೊಡೆಯಲು ಟ್ರ್ಯಾಕ್ಟರುಗಳನ್ನು ಉಪಯೋಗಿಸುವದು ಇನ್ನೊಂದು ಉಪಾಯವು. ಆದರೆ ಟ್ರ್ಯಾಕ್ಟರಗಳ ಬೆಲೆಯು ಬೆದರಿಸುವಂತಿದೆ. ಸರಕಾರದ ಪರಿಂದ ಉದಾರಾಶ್ರಯವನ್ನು ಹೊಂದಿ ಸ್ಥಾನಿಕ ಸಂಸ್ಥೆಗಳು ಈ ಟ್ರ್ಯಾಕ್ಟರುಗಳನ್ನು ಬಾಡಿಗೆಯಿಲ್ಲದೆ ಒಕ್ಕಲಿಗರ ಉಪಯೋಗಕ್ಕಾಗಿ ಕೊಡಬೇಕೆಂದು ನಾನು ಸೂಚಿಸುತ್ತೇನೆ.

ರೈತರ ಕಾನೂನ.

ಕರ್ನಾಟಕ ಸಹಿತವಾದ ಮುಂಬಯಿ ಇಲಾಖೆಯ ಗೇಣಿಯ ಕಾಯದೆಯ ಅವಶ್ಯಕತೆಯು ಬಹಳವಾಗಿದೆ. ಮದ್ರಾಸ ಇಲಾಖೆಯಲ್ಲಿ ಇಂತಹದೇ ಒಂದು ಮಲಬಾರ ಟೆನೆನ್ಸಿ ಯೋಜನೆಯು ಕಾಯದೆಯಾಗಿ ಮಂಜೂರ ಮಾಡಲ್ಪಟ್ಟಿದೆ. ಅದರ ಕಲಮುಗಳನ್ನು ನಾನು ಅಭ್ಯಾಸ ಮಾಡಿಲ್ಲ. ಆದರೆ ನಮ್ಮ ಪ್ರಾಂತದ ಪರಿಸ್ಥಿತಿಗೆ ತಕ್ಕಂತೆ ಆ ಕಾಯದೆಯನ್ನು ತಿದ್ದಬೇಕಾಗುತ್ತದೆ. ಇದು ಮೂರನೇ ಉಪಾಯವು. ಇನ್ನು ನಾಲ್ಕನೆಯ ಉಪಾಯವೆಂದರೆ ರಿಜಿಸ್ಟರ್ಡ ಸೆಟಲ್‌ಮೆಂಟುಗಳನ್ನು ಇನ್ನು ಮುಂದೆ ನಿಲ್ಲಿಸಿಬಿಡತಕ್ಕದ್ದು. ಸರಕಾರಕ್ಕೆ ಕಂದಾಯವು ಬೇಕಿದ್ದರೆ ಒಕ್ಕಲತನದ ಉತ್ಪನ್ನದಂತೆ ಬೇರೆ ಉಗವಗಳನ್ನು ನಿರ್ಧರಿಸಿರಿ. ಈ ರಿಜಿಸ್ಟರ್ಡ ಸೆಟಲ್‌ಮೆಂಟಿನ ವಿಷಯದಲ್ಲಿರುವ ಮೊಸರ್ಮ ಬತ್ತಿಮಾಫೀ ಮುಕ್ತ ಮನ್ನಾಸ್ವಲ್ಪದ ಮರದಿಯು ನಮ್ಮ ಕಣ್ಣುಗಳಲ್ಲಿ ತಂತನವನ್ನು ಹಾಕಿದೆ. ಈ ನಿರ್ಣಯ ಪದ್ಧತಿಯ ಯೋಗ್ಯತೆಯ ವಿಷಯವಾಗಿ ನಾವು ಸಂಶಯಖೋರರಾಗಿದ್ದೇವೆ. ಸಣ್ಣ ತುಂಡು ಹೊಲಗಳ ಒಡೆಯರಿಗೆ ಈಗ್ಗೆ ಕಂದಾಯದ ಪದ್ಧತಿಯು ಬಹಳೇ ಬಾಧಕವಾಗಿದೆ. ಬರಗಾಲವಿದ್ದ ವರುಷಗಳಲ್ಲಿ ಕಂದಾಯವನ್ನು ತಾತ್ಕಾಲಿಕವಾಗಿ ಬಂದು ಇಡುವದಲ್ಲ ಸೂಟು ಬಿಡುವದೂ ಎರಡೂ ಉತ್ತಮವು.

ಇತರವೃತ್ತ

ಬೋರಸಾದದಲ್ಲಿಯ ಸ್ತ್ರೀಯರ ಮೇಲಿನ ಪೋಲೀಸರ ಅತ್ಯಾಚಾರವನ್ನು ನಿಷೇಧಿಸುವ ಕುರಿತು ತಾ|| ೧೯ನೆಯ ದಿವಸ ಸ್ತ್ರೀಯರ ಮೆರವಣಿಗೆ ಹಾಗು ಸಭೆಗಳು ಜರುಗಿದ್ದವು. ಬೋರಸಾದದ ಅತ್ಯಾಚಾರದ ವಿಶೇಷವಾದ ಘಟನೆಗಳೊಂದಿಗೆ ಸ್ತ್ರೀಯರು ಸಂಜೆಯಲ್ಲಿ ಊರಲ್ಲೆಲ್ಲ ಸುತ್ತಿ ಮಾರುತಿ ದೇವಾಲಯಕ್ಕೆ ಬಂದ ಬಳಿಕ ಅಲ್ಲಿ ಸಭೆ ನೆರೆದು, ಶ್ರೀಮತಿ ಜಾನಬಾಯಿ ಗುಜ್ಜರ, ಪದ್ಮಾಬಾಯಿ ಶಿವಮೊಗೆ ಇವರ ಭಾಷಣಗಳಾದವು. ನೂರಾರು ಜನ ಸ್ತ್ರೀಯರು ಸ್ವಯಂಸ್ಫೂರ್ತಿಯಿಂದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

“ಅನಲಾಫುಲ್ ಆರ್ಡಿನನ್ಸ” ದನ್ವಯ ಇಲ್ಲಿಯ ಸೇವಾದಲ ಹಾಗು ಸ್ವಯಂಸೇವಕರ ಶಿಬಿರಗಳನ್ನು ನವ್ಹೆಂಬರ ತಿಂಗಳದಲ್ಲಿ ಅಧಿಕಾರಿಗಳು ಜಪ್ತಿ ಮಾಡಿ, ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದರಷ್ಟೆ. ಆ ಸಾಮಾನುಗಳಲ್ಲಿ ಕೆಲವನ್ನು ಅವರು ೩—೪ ದಿವಸಗಳ ಹಿಂದೆ ಹರಾಜು ಮಾಡಿರುವರಾಗಿ ತಿಳಿದು ಬರುತ್ತದೆ. ಕೊಂಡವರನ್ನು ಕೊಂಡಾಡಬೇಕು!!

ಪೋಲೀಸರ ವಿಷಯಕ್ಕೆ ಅಸಂತೋಷವನ್ನು ಹುಟ್ಟಿಸಲು ಪ್ರಯತ್ನ ಮಾಡಿದರೆಂಬ ಆರೋಪದಿಂದ ಇಲ್ಲಿಯ ಶ್ರೀ ಎಚ್. ಆರ್. ಪುರೋಹಿತ, ಎಂ. ಎ. ಹಾಗು ಶ್ರೀ ನಾಗೇಂದ್ರ ಕೆರೂರ ಇವರ ಮೇಲೆ ಸಮನ್ಸಗಳು ಹೊರಟಿದ್ದು, ವಿಚಾರಣೆಯು ತಾ|| ೨೪ಕ್ಕೆ ನಡೆಯುವದಾಗಿ ತಿಳಿದು ಬರುತ್ತದೆ

ಅಂಕೋಲಾ ತಾಲೂಕಿನೊಳಗಿನ ಭಾವೀಕೇರಿ, ಅವರ್ಸಾ ಹಾಗು ಬೆಳ್ಳಿಕೇರಿ ಈ ಹಳ್ಳಿಗಳೊಳಗಿನ ಕಾಂಗ್ರೆಸ ಪಂಚಾಯತ ಸಭೆಗಳನ್ನು ಮುಂಬಯಿ ಸರಕಾರದವರು ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಕಾಯಿದೆಗೆ ವಿರುದ್ಧಮಾಡಿದ್ದಾರೆ,

ವಿಜಾಪುರ ಜಿಲ್ಹೆಯ

ರಾಜಕೀಯ ಕೈದಿಗಳ ಪರಿಷತ್ತು

(ಪ್ರಕಟನೆ ೧)

ವಿಜಾಪುರ ಜಿಲ್ಹೆಯ ರಾಜಕೀಯ ಕೈದಿಗಳ ಪರಿಷತ್ತನ್ನು ಇದೇ ೬೦ ನೆ ಏಪ್ರಿಲ ನೆಯ ತಾರೀಖಿನ ದಿವಸ ವಿಜಾಪುರದಲ್ಲಿ ಕೂಡಿಸುವದು ಗೊತ್ತುಮಾಡಿದೆ. ರಾಜಕೀಯ ಕೈದಿಗಳಿಗಾಗುವ ತೊಂದರೆಗಳನ್ನು ಚರ್ಚಿಸಿ ಅವುಗಳ ನಿವಾರಣೆಯ ಉಪಾಯವನ್ನು ಯೋಜಿಸುವದು ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಪ್ರಸ್ತುತ ಚಳವಳಿಯಲ್ಲಿ, ಚಳವಳಿಗೆ ಸಹಾಯಮಾಡುವವರ ಆಸ್ತಿಯನ್ನು ಜಪ್ತ ಮಾಡುವದು, ದಂಡ ಮಾಡುವದು, ಇವೇ ಮೊದಲಾದ ಕಷ್ಟಗಳಿಗೆ ಸರಕಾರದವರು ಅನೇಕರನ್ನು ಗುರಿ ಮಾಡಿದ್ದಾರೆ. ಅಂತಹವರ ಕಷ್ಟಗಳನ್ನು ಪರಿಷತ್ತಿನಲ್ಲಿ ಚರ್ಚಿಸುವದು ಅವಶ್ಯವಿದೆ. ಆದ್ದರಿಂದ ಸರಕಾರದ ಜುಲುಮೆಗೆ ಗುರಿಯಾದವರೆಲ್ಲರೂ ಪರಿಷತ್ತಿಗೆ ಆಗಮಿಸಿ, ತಮ್ಮ ಅನುಭವವನ್ನು ಹೇಳಿ, ಪರಿಷತ್ತಿನ ಉದ್ದೇಶವನ್ನು ಸಫಲಗೊಳಿಸಬೇಕಾಗಿ ಪ್ರಾರ್ಥನೆ.

ವಿಜಾಪುರ. ತಾ|| ೨-೨-೩೧	ಬಸಪ್ಪ ಅಂಬಲಿ. ಚಾಲುರಾಯ ಗಣ ಕಾರ್ಯದರ್ಶಿಗಳು

ಮೈಸೂರಲ್ಲಿ

ಮುಖಂಡರಿಗೆ ಶಿಕ್ಷೆ

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹೊರಡಿಸಿದ ಅಪ್ಪಣೆಯನ್ನು ಅವಮಾನ್ಯ ಮಾಡಿ ಮೆರವಣಿಗೆ ಸಭೆ, ಮೊದಲಾದವುಗಳನ್ನು ಜರುಗಿಸಿದ್ದಕ್ಕಾಗಿ ಮೈಸೂರಿನಲ್ಲಿ ಶ್ರೀ ಅಗರಂ ರಂಗಯ್ಯ (ಕಾರ್ಯದರ್ಶಿ ಮೈಸೂರ ಜಿಲ್ಹಾ ಕಾಂಗ್ರೆಸ ಕಮೀಟಿ) ಎಸ್. ರಂಗರಾಮಯ್ಯ (ಅಧ್ಯಕ್ಷರು ಮೈಸೂರ ಯುವಕ ಸಂಘ), ಶ್ರೀ ರಂಗಾಚಾರ ಈ ಮೂವರಿಗೆ ಮೈಸೂರ ಪೋಲೀಸ ರೆಗ್ಯುಲೇಶನ್ ೭೦ ನೆಯ ಕಲಮಿನ ಪ್ರಕಾರ ಪ್ರತ್ಯೇಕರಿಗೆ ೩೦ ರು ದಂಡ ಇಲ್ಲವೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ. ಪೋಲೀಸರವರಿಗೆ ಬೇರೊಂದು ಅಪರಾಧಕ್ಕಾಗಿ ೨೦ ರು. ದಂಡ ಇಲ್ಲವೆ ೧೫ ದಿನ ಕಾರಾಗೃಹವಾಸ ಹೀಗೆ ಹೆಚ್ಚಿನ ಶಿಕ್ಷೆಯು ವಿಧಿಸಲ್ಪಟ್ಟಿದ್ದು, ದಂಡವನ್ನು ತುಂಬಲು ತಾ|೨೦ ರವರೆಗೆ ಅವಧಿಯು ಕೊಡಲ್ಪಟ್ಟಿದೆ.

ಪ್ರಕಟನೆ

ಬಾಗಲಕೋಟೆಯ ಶ್ರೀ ಬಸವೇಶ್ವರ ಹಾಯಸ್ಕೂಲನ್ನು ಪ್ಲೇಗಿನ ಮೂಲಕ ತಾರೀಖು ೧-೩-೩೧ರ ವರೆಗೆ ಮುಚ್ಚಿ ಬಂದು ಮಾಡಿದ್ದು ಅದು ತಾ|| ೨-೩-೩೧ನೇ ಸೋಮವಾರ ದಿವಸ ಪ್ರಾರಂಭವಾಗುವದು. ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾ-ಪ್ರಕಾರ ನಡೆಯುವದು. ವಿದ್ಯಾರ್ಥಿಗಳು ಸರಿಯಾಗಿ ಲಕ್ಷ್ಯ ಕೊಡಬೇಕು.

ಬಾಗಲಕೋಟ ತಾ|| ೧೮—೨—೩೧

ಎಚ್. ಎಫ್. ಕಟ್ಟೀಮನಿ
ಪ್ರಿನ್ಸಿಪಾಲ

ಶುದ್ಧ ಖಾದಿ ! ಶುದ್ಧ ಖಾದಿ !

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೧-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

(ಟೆಕ್ಸ್ಟ ಬುಕ್ ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನು ಯೋಗ್ಯದರದಿಂದ ತಯಾರಿಸಿ ಕೊಡುವೆವು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣ ವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಅ್ಯಾಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಟಾಂಪಲ್) ಮಸಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳ ಮಸಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ ,	೧೬-೦-೦	ರೇಲ್ವೆ ಫ್ರೀ
೫ ತೊಲೆ ಪಾಕೀಟುಗಳಿಗೆ	೧-೦-೦	
ರಬ್ಬರ ಸ್ಟಾಂಪ ಮಸಿ ½ ಔಂಸಿನ ೧ ಡಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮ ಖಾತ್ರಿಯ ಉತ್ತಮ ರೀ[illegible] ಯಿಂದ [illegible]

ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂ ಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆ[illegible] ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇ[illegible] ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕೆಂಭಾವಿ ಇವರ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೭೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ -मनु.

ಕನ್ನಡಿಗ

KANNADIGA
BAGALKOT

ಸಂಪಾದಕರು:- ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ- ಸೋಮವಾರ ಮಿತಿ ಫಾಲ್ಗುಣ ಶುದ್ಧ ೬ ಶಕೆ ೧೮೫೨ ತಾ|| ೨೩-೨-೩೧ [ಸಂಚಿಕೆ ೧೯೬

ದಿಲ್ಲಿಯಲ್ಲಿ

ಮಹಾತ್ಮಾ ಗಾಂಧಿಯವರ ಭಾಷಣ

'ಚರ್ಚೆಯ ಫಲಿತಾಂಶವು ದೇವರನ್ನೇ ಕೂಡಿದೆ. ನನಗೆ ಸಂಪೂರ್ಣ ಸ್ವರಾಜ್ಯವೇ ಬೇಕು"

(ಶಂತಿಯ ವಾರ್ತೆ ತಾ|| ೨೧)

ನಿನ್ನಿನ ದಿವಸ ಸಂಜೆಯಲ್ಲಿ ದಿಲ್ಲಿಯಲ್ಲಿ ಪ್ರಚಂಡ ಜನ ಸಮುದಾಯದ ಮುಂದೆ ಸಾರ್ವಜನಿಕವಾಗಿ ಭಾಷಣ ಮಾಡುವಾಗ ಮಹಾತ್ಮಾ ಗಾಂಧಿಯವರು ಹಿಂಸಾತ್ಮಕನಾದ ಪಿಕೆಟಿಂಗದ ಬಗ್ಗೆ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿ, ಸಂಧಾನದ ಭವಿತವ್ಯತೆಯ ಬಗ್ಗೆ ಕೆಳಗಿನಂತೆ ಹೇಳಿದರು.

ವ್ಹಾಯಿಸರಾಯರು ಹಾಗು ನಾನು, ಇಬ್ಬರೂ ಪರಸ್ಪರವಾಗಿ ಒಳ್ಳೇ ಸ್ನೇಹಭಾವದಿಂದ ಹಾಗು ಅಂತಃಕರಣ ಪೂರ್ವಕವಾಗಿ ಮಾತುಕತೆ ಮಾಡಿದೆವು ಚರ್ಚೆಯ ಫಲಿತಾಂಶವು ದೇವರನ್ನೇ ಕೂಡಿದೆ. ನನಗೆ ಸಂಪೂರ್ಣ ಸ್ವರಾಜ್ಯವು ಬೇಕು. ಒಪ್ಪಂದವು ಸಾಧ್ಯವಾಗಬೇಕೆಂಬುದಾಗಿ ನಾನು ಶಕ್ತಿ ಮೀರಿ ಪ್ರಯತ್ನ ಮಾಡಹತ್ತಿರುತ್ತೇನೆ ಆದರೆ ಒಂದು ವೇಳೆ ಅದು ಸಾಧ್ಯವಾಗದಿದ್ದಲ್ಲಿ, ಇದಕ್ಕೂ ಹೆಚ್ಚಿನ ಕಷ್ಟನಷ್ಟಗಳನ್ನು ಸಹಿಸಲು ಜನರು ಸಿದ್ಧರಾಗಬೇಕು.

(ಶಂತಿಯ ವಾರ್ತೆ ತಾ|| ೨೧)

ಶ್ರೀಮತಿ ಸರೋಜಿನಿ ದೇವಿ ಹಾಗು ಶ್ರೀ ಶಿರಿಯವರಿಗೆ ದಿಲ್ಲಿಗೆ ಹೋಟು ಬರಲು ಪಂಡಿತ ಜವಾಹಿರಲಾಲರು ತಂತಿ ಕೊಟ್ಟದ್ದರಿಂದ, ಅವರು ಬೇಗನೆ ದಿಲ್ಲಿಗೆ ಹೋಗತಕ್ಕವರಿದ್ದಾರೆ.

ಸರ್ ಹೊಟಸನ್ನ ಸಾಹೇಬರು ದಿಲ್ಲಿಗೆ ಹೊರಟರು

(ಶಂತಿಯ ವಾರ್ತೆ ತಾ|| ೨೧)

ಮುಂಬಯಿ ಗವ್ಹರ್ನರರಾದ ಸರ್ ಫ್ರೆಡರಿಕ್ ಸಾಯಿಕ್ಸರು, ದಿಲ್ಲಿಗೆ ಕೂಡಲೆ ಹೊರಟು ಬರಲು ಕೇಳಿಕೊಂಡಿದ್ದರಿಂದ, ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಸರ್ ಅರ್ನೆಸ್ಟ ಹೊಟ್‌ಸನ್ ಸಾಹೇಬರು ನಿನ್ನಿನ ದಿವಸ ಸಂಜೆಗೆ ದಿಲ್ಲಿಗೆ ಪ್ರಯಾಣ ಬೆಳೆಸಿದರು.

(ದಿಲ್ಲಿ ತಾ|| ೧೯)

ಶ್ರೀ ಜಯಕರ ಸರ್ ಸಪ್ರೂ ಇವರು ಇವತ್ತಿನ ದಿವಸ ಮುಂಜಾನೆ ವ್ಹಾಯಿಸರಾಯರನ್ನು ಕಂಡುಕೊಂಡು ಅವರೊಡನೆ ಮಾತುಕತೆಯಾಡಿ ಬಂದ ಬಳಿಕ- ಮಹಾತ್ಮಾ ಗಾಂಧಿಯವರನ್ನು ಭೆಟ್ಟಿಯಾಗಿ ಅವರೊಡನೆ ೩ ಗಂಟೆಗಳ ವರೆಗೆ ಚರ್ಚೆ ಮಾಡಿದರು.

ಮಹಾತ್ಮಾ ಗಾಂಧಿಯವರನ್ನು ವ್ಹಾಯಿಸರಾಯರು ಪುನಃ ಗುರುವಾರ ದಿವಸ ಭೆಟ್ಟಿಗೆ ಕರೆಕಳುಹಿದ್ದರಿಂದ ಅವರು ೨ ಗಂಟೆಗೆ ವ್ಹಾಯಿಸರಾಯರ ವಸತಿಗೃಹಕ್ಕೆ ಹೋಗಿ ಅವರನ್ನು ಕಂಡುಕೊಂಡರು. ಅವರಿಬ್ಬರಲ್ಲಿ ಅರ್ಧ ಗಂಟೆಯ ವರೆಗೆ ಚರ್ಚೆ ನಡೆಯಿತು. ಚರ್ಚೆಯ ವಿಷಯವು ತಿಳಿದು ಬಂದಿಲ್ಲ. ವ್ಹಾಯಿಸರಾಯರು ಆ ದಿನ ಸಂಜೆಯಲ್ಲಿ ಒಂದು ಪ್ರಕಟನೆ ಹೊರಡಿಸಿದ್ದು, ಅದರಲ್ಲಿ "ವ್ಹಾಯಿಸರಾಯರು ಇವತ್ತಿನ ದಿವಸ ಪುನಃ ಗಾಂಧಿಯವರನ್ನು ಕಂಡುಕೊಂಡರು. ಚರ್ಚೆಯಲ್ಲಿ ಮಾತಾಡಲ್ಪಟ್ಟ ಬೇರೆ ಬೇರೆ ವಿಷಯಗಳ ಸಂಬಂಧವಾಗಿ ವಿಚಾರಣೆಯು ನಡೆದಿದೆ. ಈ ವಿಷಯಗಳ ಸಂಬಂಧವಾಗಿ ಪುನಃ ಚರ್ಚೆಯಾಗಬೇಕಾದರೆ ಇನ್ನೂ ಕೆಲವು ದಿವಸಗಳ ಅವಧಿಯು ಬೇಕು" ಎಂಬುದಾಗಿ ಉಲ್ಲೇಖಿಸಲ್ಪಟ್ಟಿದೆ.

ಒಪ್ಪಂದವನ್ನು ಮಾಡಿಕೊಳ್ಳುವದಿದ್ದರೆ ಮೊದಲು ಕೆಳಗಿನ ಕರಾರುಗಳನ್ನು ಪೂರ್ತಿಗೊಳಿಸಲು ಮಹಾತ್ಮರು ವ್ಹಾಯಿಸರಾಯರಿಗೆ ಕೇಳಿಕೊಂಡಿರುವರಾಗಿ ತಿಳಿಯುತ್ತದೆ. ಅವುಗ

ಳೆಂದರೆ (೧) ರಾಜಕೀಯ ಕೈದಿಗಳನ್ನು ಬಿಡಬೇಕು. (೨) ದಬ್ಬಾಳಿಕೆಯ ಕಾಯದೆಗಳನ್ನು ತಿರುಗಿ ತೆಗೆದುಕೊಳ್ಳಬೇಕು. (೩) ಜಪ್ತುಮಾಡಿದ ಆಸ್ತಿ ಪಾಸ್ತಿಗಳನ್ನು ತಿರುಗಿ ಕೊಡಬೇಕು. (೪) ಪರದೇಶಿ ಬಟ್ಟೆ ಹಾಗು ಸೆರೆಸಿಂದಿ ಪಿಕೆಟಿಂಗಕ್ಕೆ ಅಡ್ಡಿ ಮಾಡಬಾರದು. (೫) ಪೋಲೀಸ ಅತ್ಯಾಚಾರಗಳ ಸಂಬಂಧವಾಗಿ ವಿಚಾರಣೆ ಮಾಡಬೇಕು, (೬) ರಾಜೀನಾಮೆ ಕೊಟ್ಟ ಅಧಿಕಾರಿಗಳನ್ನು ತಿರುಗಿ ನಿಯಮಿಸಿಕೊಳ್ಳಬೇಕು. ಇವುಗಳಲ್ಲಿ ಮೊದಲಿನವೆರಡು ಕರಾರುಗಳು ಸರಕಾರದವರಿಗೆ ಮಾನ್ಯವಾಗಿವೆ. ಉಳಿದ ಕರಾರುಗಳ ಸಂಬಂಧವಾಗಿ ಚರ್ಚೆ ನಡೆದಿದೆ. ಶಾಂತರೀತಿಯಿಂದ ಪಿಕೆಟಿಂಗ ನಡೆದಲ್ಲಿ ಅದಕ್ಕೆ ಅಡ್ಡಿ ಮಾಡಬಾರದಾಗಿ ವ್ಹಾಯಿಸರಾಯರ ಅಭಿಪ್ರಾಯವಿದೆ. ಆದರೆ ಕೆಲವು ಗವರ್ನರರು ಮಾತ್ರ ಇದಕ್ಕೆ ವಿರುದ್ಧರಿದ್ದಾರೆ.

ಕರನಿರಾಕರಣೆಯು ಭರದಿಂದ ಸಾಗಿದ ಸ್ಥಳಗಳಲ್ಲಿ ಸಂಧಾನವಾಗುವ ವರೆಗೆ ಭೂಕಂದಾಯವನ್ನು ಎತ್ತಕೂಡದೆಂದೂ, ಹಳ್ಳಿಗಳನ್ನು ಬಿಟ್ಟುಹೋದ ರೈತರಿಗೆ ತಮ್ಮ ತಮ್ಮ ಹಳ್ಳಿಗಳಿಗೆ ಬಂದು ವಾಸಿಸಲು ಅಪ್ಪಣೆ ಕೊಡಬೇಕೆಂದೂ ಮಹಾತ್ಮರು ಕೇಳಿರುವರಾಗಿ ತಿಳಿಯುತ್ತದೆ. ವ್ಹಾಯಿಸರಾಯರು ಈ ಸಂಬಂಧವಾಗಿ ಅಧಿಕಾರಿಗಳೊಡನೆ ಚರ್ಚೆ ನಡಿಸಿರುವರು.

ಇದಕ್ಕೂ ಮುಖ್ಯವಾದ ವಿಷಯವೆಂದರೆ ಬಂಡೀ ಗಾಲಿಯ ಪರಿಷತ್ತಿನಲ್ಲಿ ಗೊತ್ತುಮಾಡಲ್ಪಟ್ಟ ವಿಷಯಗಳ ಬಗ್ಗೆ ಪುನಃ ಚರ್ಚೆಯಾಗಬೇಕೆಂಬುದಾಗಿ ಮಹಾತ್ಮರು ಕೇಳಿಕೊಂಡಿರುವರು. ಈ ಪ್ರಶ್ನೆಯ ಸಂಬಂಧವಾಗಿ ಎರಡೂ ಪಕ್ಷದವರು ತಮ್ಮ ತಮ್ಮ ಸಹಕಾರಿಗಳೊಂದಿಗೆ ಆಲೋಚನೆ ನಡಿಸಿರುವರು.

ಮುಂದಿನ ವಾರದಲ್ಲಿ ಒಂದು ಪರಿಷತ್ತು ಕೂಡಿಸುವದಾಗಿ ಗೊತ್ತಾಗಿದ್ದು, ಈ ಪರಿಷತ್ತಿನಲ್ಲಿ ವ್ಹಾಯಿಸರಾಯರು, ಅವರ ಕಾರ್ಯಕಾರಿ ಮಂಡಳದವರು, ಸರ್ ಸಪ್ರೂ, ಶ್ರೀ ಜಯಕರ, ನಾ॥ ಶಾಸ್ತ್ರಿ, ಶೇಠ, ಬಿಕಾನೇರ ಮಹಾರಾಜರು, ಭೋಪಾಳದ ನವಾಬರು ಹಾಗು ಮಹಾತ್ಮಾ ಗಾಂಧಿ ಮತ್ತು ವರ್ಕಿಂಗ ಕಮಿಟಿಯ ಸಭಾಸದರು ಭಾಗ ತೆಗೆದುಕೊಳ್ಳುವರು. ಪರಿಷತ್ತು ಬಹುಶಃ ಗುರುವಾರ ಸೇರಬಹುದಾಗಿ ತೋರುತ್ತದೆ ಈ ಪರಿಷತ್ತು ಸೇರುವದಕ್ಕಿಂತ ಮುಂಚಿತವಾಗಿ ಅಂದರೆ ಬಹುಶಃ ಮಂಗಳವಾರ ದಿವಸ ವ್ಹಾಯಿಸರಾಯರು ಹಾಗು ಮಹಾತ್ಮಾ ಗಾಂಧಿ ಇವರಲ್ಲಿ ಪುನಃ ಚರ್ಚೆಯಾಗತಕ್ಕದ್ದಿದೆ.

ಗುಜರಾಥದಲ್ಲಿ
ಹಿಂದೂ—ಮುಸಲ್ಮಾನರಲ್ಲಿ ದಂಗೆ

ಮುಂಬಯಿ ಇಲಾಖೆಯ ಗುಜರಾಥದಲ್ಲಿ ತಾ॥ ೧೫ನೇಯ ದಿವಸ ಶಿವರಾತ್ರಿಯ ನಿಮಿತ್ತವಾಗಿ ಹಿಂದೂ ಜನರು ವಾದ್ಯ ವೈಭವದೊಂದಿಗೆ ಪಾಲಕಿಯ ಮೆರವಣಿಗೆ ಹೊರಡಿಸಿದ್ದರು. ಮೆರವಣಿಗೆಯು ಮಸೀದೆಯ ಸಮೀಪಕ್ಕೆ ಬಂದಕೂಡಲೆ ಅಲ್ಲಿಯ ಒಬ್ಬ ಕಾವಲುಗಾರನು ವಾದ್ಯವನ್ನು ನಿಲ್ಲಿಸಲು ಹೇಳಿಕೊಂಡನು. ಆದರೆ ಹಿಂದೂ ಜನರು ಅದಕ್ಕೆ ಒಪ್ಪಲಿಲ್ಲ. ಅವನು ಮೆರವಣಿಗೆಯಲ್ಲಿಯ ಸ್ತ್ರೀಯರ ಮೇಲೆ ಕಲ್ಲು ಒಗೆಯಲಾರಂಭಿಸಿದನು. ಹಿಂದೂ ಜನರು ತಿರುಗಿ ಕಲ್ಲು ಒಗೆಯಹತ್ತಿದರು. ಕೆಲವರಿಗೆ ಗಾಯಗಳಾಗಿವೆ. ಸ್ವಲ್ಪ ಹೊತ್ತಿನಲ್ಲಿ ಪೋಲೀಸ ಅಧಿಕಾರಿಗಳು ಬಂದು ಶಾಂತತೆಯನ್ನುಂಟುಮಾಡಿ ೧೫ ಜನರನ್ನು ಸೆರೆ ಹಿಡಿದಿದ್ದಾರೆ.

ಹಲೋಲದಲ್ಲಿಯೂ ಶಿವರಾತ್ರಿ ದಿವಸ ಮೆರವಣಿಗೆ ಹೊರಟಿತ್ತು. ಮೆರವಣಿಗೆಯು ಮಸೀದೆಯ ಬಳಿಗೆ ಹೋದ ಕೂಡಲೆ ಅವರು ಗಂಟೆ ಬಾರಿಸುವದೊಂದನ್ನು ಬಿಟ್ಟು ಉಳಿದ ಎಲ್ಲ ವಾದ್ಯಗಳನ್ನು ನಿಲ್ಲಿಸಿದರು. ಕೆಲವು ಮುಸಲ್ಮಾನರು ಅಲ್ಲಿಗೆ ಬಂದು ಗಂಟೆ ಬಾರಿಸುವದನ್ನು ನಿಲ್ಲಿಸಲು ಹೇಳಿಕೊಂಡರು. ಹಿಂದೂ ಜನರು ಅದಕ್ಕೆ ಒಪ್ಪಿಕೊಂಡು ಮುಂದಕ್ಕೆ ಸಾಗಿಹೋದರು. ಅವರು ಮುಂದಕ್ಕೆ ಹೋಗಿದ್ದೊಂದೇ ತಡ ಮುಸಲ್ಮಾನರು ಅವರ ಮೇಲೆ ಕಲ್ಲು ಒಗೆಯಲಾರಂಭಿಸಿದರು. ಪರಿಸ್ಥಿತಿಯು ವಿಕೋಪಕ್ಕೆ ಹೋಯಿತು. ಪೋಲೀಸರು ಇಷ್ಟರಲ್ಲಿಯೇ ಅಲ್ಲಿಗೆ ಬಂದು ಜನರನ್ನು ಚದುರಿಸಿದರು. ಒಟ್ಟಿಗೆ ೧೫ ಜನರಿಗೆ ಗಾಯಗಳಾಗಿದ್ದು ಅವರಲ್ಲಿ ಕೆಲವರು ಸ್ತ್ರೀಯರಿದ್ದಾರೆ.

ಜನಗಣತಿಯ ಅಧಿಕಾರಿಗಳ
ದೈನ್ಯಾವಸ್ಥೆ

ಅಹಮ್ಮದಾಬಾದದ ವಾನರ ಸೇನೆಯವರು ಜನಗಣತಿಯ ಬಹಿಷ್ಕಾರ ಕಾರ್ಯವನ್ನು ಬಹಳ ಜೋರಿನಿಂದ ನಡೆಸಿದ್ದರಿಂದ ಜನಗಣತಿಯ ಅಧಿಕಾರಿಗಳ ಆಟವು ಅಲ್ಲಿ ಏನೂ ನಡೆಯದಂತೆ ಆಗಿದೆ. ಅಧಿಕಾರಿಗಳು ಬಂದ ಕೂಡಲೆ ಜನರು ತಮ್ಮ ಬಾಗಿಲುಗಳನ್ನು ಮುಚ್ಚಿಕೊಳ್ಳುತ್ತಿರುವರು. ವಾನರಸೇನೆಯವರಂತೂ ಹೋದಲ್ಲಿಗೆ ಅವರನ್ನು ಹಿಂಬಾಲಿಸಿ ಅವರ ಕಾರ್ಯಕ್ಕೆ ವಿಘ್ನ ಮಾಡುತ್ತಿರುವರು. ಅಧಿಕಾರಿಗಳು ಜನಗಣತಿ ಮಾಡುವದು ಅಸಾಧ್ಯವಿದೆಯೆಂಬುದಾಗಿ ಮೇಲಧಿಕಾರಿಗಳಿಗೆ ಬರೆದು ತಿಳಿಸಿದ್ದಾರೆ.

ರಾಜಪುತ್ರನ ಕೊಲೆ.
ತಂದೆಯು ಮಗನನ್ನು ಕೊಂದದ್ದು.

ಪರ್ತಪನೇರದ ಮಹಾರಾಜರು ೭ ವರ್ಷಗಳ ಹಿಂದೆ ಗಂಡು ಮಕ್ಕಳಿಲ್ಲದೆ ಮರಣ ಹೊಂದಿದರು. ಮಹಾರಾಣಿಯು ಒಬ್ಬ ಹುಡುಗನನ್ನು ದತ್ತಕ ತೆಗೆದುಕೊಂಡಳು. ಅವನೇ ಅವರ ಆಸ್ತಿಗೆ ಬಾಧ್ಯಸ್ಥನಾದನು. ಅವನು ಇನ್ನೂ ಚಿಕ್ಕವನಿದ್ದದರಿಂದ ಕೋರ್ಟ ಆಫ ವಾರ್ಡ್ಸದವರು ತಂದೆಯ ಮನೆಯಲ್ಲಿಯೇ ಇರಲು ಅವನಿಗೆ ಅಪ್ಪಣೆ ಕೊಟ್ಟು ಅವನ ಆಸ್ತಿಯ ಆಡಳಿತೆಯನ್ನು ಸಾಗಿಸಹತ್ತಿದರು. ಸ್ವಲ್ಪ ದಿನಗಳ ಹಿಂದೆ ಕೋರ್ಟ ಆಫ ವಾರ್ಡ್ಸದವರು ಶಿಕ್ಷಣಕ್ಕಾಗಿ ಅವನನ್ನು ಲಖನೌ ಇಲ್ಲವೆ ಅಜಮೀರಕ್ಕೆ ಕಳಿಸಬೇಕೆಂಬುದಾಗಿ ನಿರ್ಧರಿಸಿಕೊಂಡು ಅವನ ತಂದೆಗೆ ಈ ಸುದ್ದಿ ತಿಳಿಸಿದರು. ಮಗನನ್ನು ಪರವೂರಿಗೆ ಕಳಿಸುವದು ತಂದೆಯ ಮನಸಿಗೆ ಬರದ್ದರಿಂದ, ಅವನು ಮಗನನ್ನು ಕೊಂದು ಹಾಕಿ ಹಿಂದುಗಡೆಯಲ್ಲಿ ತಾನೂ ಆತ್ಮಹತ್ಯ ಮಾಡಿಕೊಂಡನು.

ಬಲ್ಗೇರಿಯಾದ
ರಾಜನ ಮೇಲೆ ಗುಂಡು ಹಾರಿಸಿದರು

ವ್ಹಿಯೆನ್ನಾದಲ್ಲಿ ಈಗ ಔಷಧೋಪಚಾರ ಹೊಂದುತ್ತಿರುವ ಬಲ್ಗೇರಿಯಾದ ರಾಜನು ಚಿಕಿತ್ಸಾಗೃಹದಿಂದ ಹೊರಬಿದ್ದ ಕೂಡಲೆ ಯಾರೋ ಕೆಲವರು ಅವರಮೇಲೆ ಗುಂಡು ಹಾರಿಸಿದರು. ಆ ಗುಂಡು ಒಬ್ಬ ಅಂಗರಕ್ಷಕನಿಗೆ ತಗುಲಿ ಅವನು ಅಲ್ಲಿಂದಲೇ ಗತಪ್ರಾಣನಾದನು. ರಾಜರು ಪಾರಾದರು. ಅಪರಾಧಿಗಳು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಫೌಜದಾರರಿಗೆ
ಹಿಂಬಡತಿಯಾಯಿತು

ಕೆಲವು ದಿನಗಳ ಹಿಂದೆ ರಾಣಾಪೂರದಲ್ಲಿ ಸಂಭವಿಸಿದ ಅತ್ಯಾಚಾರಗಳಿಗೆ ಕಾರಣೀಭೂತರಾದ ಫೌಜದಾರ ಶಹಾಬುದ್ದೀನ ಸಾಹೇಬರು ಹಾಗು ಕೆಲವು ಜನ ಪೋಲೀಸರು ರಾಣಾಪೂರದಿಂದ ಬೇರೆ ಕಡೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಫೌಜದಾರರಿಗೆ ಹಿಂಬಡತಿಯಾಗಿದ್ದು ಅವರು ಡೆಪ್ಯೂಟಿ ಸುಪರಿಂಟೆಂಡೆಂಟರ ಕಾರಕೂನನ ಸ್ಥಳಕ್ಕೆ ಹಾಕಲ್ಪಟ್ಟಿದ್ದಾರೆ.

ಅಂಕೋಲೆಯ ಮಾಮಲೇದಾರರ ಅನುಭವ!!

ಮೊನ್ನೆ ೧೩ ನೇ ತಾರೀಖಿನ ದಿವಸ ಮಾಮಲೇದಾರರ ಸವಾರಿಯು ಶಿಂಗಣಮಕ್ಕಿ ಬಂದಿತು, ಉಗ್ರಾಣಿ, ಶಾನಭೋಗರು, ೬ ಜನ ಸಶಸ್ತ್ರ ಪೋಲೀಸರು ಇಷ್ಟೆಲ್ಲ ಸರಂಜಾಮು ಇವರನ್ನು ಹಿಂಬಾಲಿಸಿತ್ತು, ಆದರೇನು? ಉಳಿದುಕೊಳ್ಳಲಿಕ್ಕೆ ಸ್ಥಳವೇ ಸಿಕ್ಕದೆ ಹೋಯಿತು ಶಾಲಾಮಾಸ್ತರರನ್ನು ಕರೆಯಿಸಿ ಶಾಲೆಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರು. ಉಗ್ರಾಣಿಯ ಸಂಗಡ ಪೋಲೀಸರನ್ನು ಕೊಟ್ಟು ಖಾತೆದಾರರನ್ನು ಕರೆಯ ಕಳಿಸಿದರೂ ಯಾರೂ ಹತ್ತರ ಸುಳಿಯಲಿಲ್ಲ. ಶಾನಭೋಗರು ಚಹ ಮಾಡುವದಕ್ಕಾಗಿ ಪಾತ್ರೆಯನ್ನೂ, ಹಾಲನ್ನೂ ತರುವದಕ್ಕೆಂದು ಊರಲ್ಲಿ ಹೋದರು ಯಾರೂ ಕೊಡಲಿಲ್ಲ. ವಾಸುದೇವನೆಂಬ ಹುಡುಗನು "ಮಾಮಲೇದಾರನೇ ಆಗಲಿ, ಯಾವನೇ ಆಗಲಿ, ಸರಕಾರೀ ಜನರಿಗೆ ಪಾತ್ರೆ ಕೊಡುವದಿಲ್ಲ. ಕೂಡ್ರಲಿಕ್ಕೆ ಸ್ಥಳವನ್ನು ಕೊಡುವದಿಲ್ಲ. ನಿಮ್ಮ ಮಾಮಲೇದಾರರಿಗೆ ಹೀಗೆಯೇ ಹೇಳು ಹೋಗು" ಎಂದನು. ಸಕ್ಕರೆ ತರಲಿಕ್ಕೆಂದು ಪೋಲೀಸನನ್ನು ಅಂಗಡಿಗೆ ಕಳುಹಿಸಲು ಅಂಗಡಿಕಾರನು ಸಕ್ಕರೆ ಕೊಡುವದಿಲ್ಲೆಂದನು. ಪೋಲೀಸರು ಕಬ್ಬು ಮಾರುತ್ತಿದ್ದ ಒಬ್ಬ ಹೆಣ್ಣುಮಗಳ ಹತ್ತರ ಕಬ್ಬು ಕೊಡೆಂದು ಕೇಳಲು ಅವಳು **ನಿಮ್ಮಂಥವರಿಗೆ ಕಬ್ಬು ಮಾರುವದಿಲ್ಲ** ನೆಂದಳು. ಇದೆಲ್ಲ ಆಗಬೇಕಾದರೆ ಒಂದು ತಾಸು ಹೊತ್ತಾಯಿತು. ಇಷ್ಟು ಹೊತ್ತಿನವರೆಗೆ ಮಾಮಲೇದಾರರು ರಸ್ತೆಯ ಬದಿಯಲ್ಲಿಯೇ ಕುಳಿತಿದ್ದರು. ಬಳಿಕ ಸ್ವತಃ ಹಳ್ಳಿಯನ್ನು ಹೊಕ್ಕರು. ಊರೆಲ್ಲ ಅಡ್ಡ್ಯಾಡಿದರೂ ಇವರಿಗೆ ಭೆಟ್ಟಿಯಾದವರು ಇಬ್ಬರೇ ಖಾತೆಗಾರರು. ಅವರಿಗೆ ತೀರ್ವೆ ಕೊಡಿರೆಂದು ಕೇಳಲು ಅವರು ಇಲ್ಲವೆಂದರು. ಮಾಮಲೇದಾರರು "ಹೀಗೆ ಹುಚ್ಚರಂತೆ ಮಾಡಬೇಡಿರಿ ಅಂಕೋಲೆಯವರು ಕೊಟ್ಟರು. ನೀವೂ ಕೊಟ್ಟುಬಿಡಿರಿ. ನಿಮ್ಮ ಮೇಲೆ ಬಹಿಷ್ಕಾರ ಹಾಕುವದಿಲ್ಲೆಂದು ಡಾ. ಹರ್ಡೀಕರರು ನನಗೆ ಹೇಳಿದ್ದಾರೆ. ನನಗೂ ಸ್ವರಾಜ್ಯ ಬೇಕಾಗಿದೆ." ಎಂದು ಉಪದೇಶ ಮಾಡಿದ್ದಕ್ಕೆ ರೈತರು "ಕಾಂಗ್ರೆಸಿನ ಅಪ್ಪಣೆಯಾಗುವವರೆಗೆ ನಾವು ತೀರ್ವೆ ಕೊಡುವದಿಲ್ಲ." ವೆಂದು ರೈತರು ಖಂಡಿತವಾಗಿ ಹೇಳಿಬಿಟ್ಟರು.

ಶಾನಭೋಗರಿಗೆ ಬಂದ ಅನುಭವದ ರುಚಿಯು ಮಾಮಲೇದಾರರಿಗೂ ಗೊತ್ತಾಯಿತು

ಕುಂಟಗಣಿ, ಕೊಂತೊಳ್ಳಿ, ಗುಡಿನಾವಳಿ. ಮಾಣೇಗದ್ದೆ, ಸೂಳೇಬೈಲು, ಆಡವೆ, ರಜಗಾಲ, ಬ್ರಮ್ಹೂರ, ಹಿಲ್ಲೂರ, ಉಳುವರೆ, ದೇವೀಗದ್ದೆ, ಶಿರಗುಂಜಿ, ಮತ್ತು ಅಂಬುಗೋಣಗಳಿಗೆ ಶಾನಭೋಗರು ಹೋಗಿ ಬರಿಗೈಯಿಂದ ಹೊರಟು ಬಂದರು.

ಹರಪನಹಳ್ಳಿಯಲ್ಲಿ

ಪಂ ಮೋತೀಲಾಲರ ಶ್ರಾದ್ಧ ದಿನ

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಯ ಮೇರೆಗೆ ಪಂಡಿತ ಮೋತೀಲಾಲರ ಶ್ರಾದ್ಧ ದಿನವು ಇಲ್ಲಿ ಚನ್ನಾಗಿ ನಡೆಯಿತು. ಬಳ್ಳಾರಿಯ ಡಾ ಸರಾಫರು ಇಲ್ಲಿಗೆ ಈ ಕೆಲಸಕ್ಕೋಸ್ಕರವೇ ದಯಮಾಡಿಸಿದ್ದರು. ಮಧ್ಯಾನದಲ್ಲಿ ಡಾ. ಸರಾಫರ ಮುಖಂಡತ್ವದಲ್ಲಿ ದೊಡ್ಡ ತಲೆಯ ಮೆರವಣಿಗೆಯು ನಿಃಶಬ್ದವಾಗಿ ಊರಲ್ಲೆಲ್ಲ ಅಡ್ಡಾಡಿ ಗಾಂಧಿ ಮೈದಾನಕ್ಕೆ ತಲುಪಿತು. ಅಲ್ಲಿ ಮಹಾತ್ಮರ ಠರಾವುಗಳು ಓದಲ್ಪಟ್ಟು ಎಲ್ಲರಿಂದಲೂ ಉಚ್ಚರಿಸಲ್ಪಟ್ಟವು. ಮೋತೀಲಾಲರ ಜೀವನ ಚರಿತ್ರೆಯ ವಿಷಯವಾಗಿ ಕೊನೆಯಲ್ಲಿ ಭಾಷಣವಾಯಿತು.

ವಿಷಮವಿವಾಹವು ಸದ್ಯಕ್ಕೆ ನಿಂತಿತು

ದೈವೇಚ್ಛೆಯಿಂದಲೋ, ವೃತ್ತಪತ್ರಗಳ ಗಲಾಟೆಯಿಂದಲೋ, ಸಾರ್ವಜನಿಕಾಭಿಪ್ರಾಯದಿಂದಲೋ- ಲಗ್ನವು ವಿಚಿತ್ರರೀತಿಯಲ್ಲಿ ನಿಂತು ಹೋಯಿತು- ನಿಶ್ಚಯ ಪ್ರಸ್ತವೂ, ಶುಕ್ರವಾರ ಲಗ್ನವೂ ಆಗಬೇಕಾದುದೂ- ತಪ್ಪಿತು- ಶ್ರೀ ನಲ್ಕುದುರೆ ಕೊಟ್ರಬಸಪ್ಪನವರು ಕೊಟ್ಟೂರ ಜಾತ್ರೆಗೆ ಹೋಗಿದ್ದರು- ಅಲ್ಲಿ ಕನ್ಯಾದತಂದೆಯು ಉಪಾಯವಾಗಿ ಅವರ ಸ್ವಾಧೀನದಲ್ಲಿದ್ದ ಹೆಣ್ಣನ್ನು ಕರೆದುಕೊಂಡು ಹೋಗಿ- ಮೈಮೇಲಿದ್ದ ಆಭರಣಗಳನ್ನು ತೆಗೆದು ಕೊಟ್ಟು ಬಿಟ್ಟರು.

ಶಿರಸಿಯಲ್ಲಿ

ಕರನಿರಾಕರಣ ಚಳವಳಿ

ಶಿರಸಿಯಲ್ಲಿ ಕರನಿರಾಕರಣ ಚಳವಳಿಯು ಜೋರಿನಿಂದ ಸಾಗಿರುವದರ ಮೂಲಕವಾಗಿ ಭೂಕಂದಾಯವು ಸಾಕಷ್ಟು ವಸೂಲಾಗಿಲ್ಲ, ತಾ|| ೧೮ ನೆಯ ದಿವಸ ಕಡೆಯ ದಿನವಿದ್ದರೂ ಅಂದಿನ ವರೆಗೆ ೧೫೫೦೦೦ ರೂಪಾಯಿಗಳಲ್ಲಿ ಕೇವಲ ೨೦೦೦ ರೂಪಾಯಿಗಳಷ್ಟೇ ವಸೂಲಾಗಿರುವವು.

ಪುಟ್ಟನಮನೆಯ ಶಾನುಭೋಗರು ಅಲ್ಲಿಯ ಶ್ರೀ ಮಹಾದೇವಭಟ್ಟರಿಗೆ ಕಾಂಗ್ರೆಸಿನವರ ಅಜ್ಞೆಯಂತೆ ವರ್ತಿಸಿ ಆಸ್ತಿಪಾಸ್ತಿಗಳನ್ನು ಕಳಕೊಳ್ಳಕೂಡದಾಗಿ ಬುದ್ಧಿ ಹೇಳಿದರು. ಸ್ವರಾಜ್ಯವು ಸಿಗುವ ವರೆಗೆ ಒಂದು ಕಾಸನ್ನಾದರೂ ಕೊಡುವದಿಲ್ಲವಾಗಿ ಭಟ್ಟರು ಉತ್ತರ ಕೊಟ್ಟರು

ವಿಜಾಪುರದಲ್ಲಿ

ಶ್ರೀದೇಶಪಾಂಡೆಯವರನ್ನು ಸೆರೆ ಹಿಡಿದರು

(ಸ್ವಂತ ಸುದ್ದಿಗಾರರಿಂದ)

ತಾ|| ೨೨ ನೆಯ ದಿವಸ ಲದ್ದಿಕಟ್ಟೆಯ ಹಣಮಂತ ದೇವರ ಗುಡಿಯ ಹತ್ತರ ರಾಷ್ಟ್ರಧ್ವಜವಂದನೆಯ ಸಮಾರಂಭವು ಜರುಗಿತು. ಈ ಸಮಯದಲ್ಲಿ ಪ್ರತಿವಾರದಂತೆ 'ಬುಲೆಟಿನ್" (ಕರಪತ್ರ)ವು ಮಾರಲ್ಪಟ್ಟಿತು. ಪೋಲೀಸರು ಆ ಬುಲೆಟಿನ್'ದ ಸಂಪಾದಕರಾದ ಶ್ರೀ. ಎ. ಕೆ. ದೇಶಪಾಂಡೆಯವರನ್ನು ಸೆರೆ ಹಿಡಿದು ಅವರಲ್ಲಿದ್ದ ಪ್ರತಿಗಳನ್ನು ಜಪ್ತ ಮಾಡಿದರು. ಅವರ ಮನೆಗಾದರೂ ಜಪ್ತಿ ಹೋಗಿತ್ತು.-ಅಲ್ಲಿ ಏನೂ ಸಿಗಲಿಲ್ಲ. ಶ್ರೀ ದೇಶಪಾಂಡೆಯವರು ಈಗ "ಲಾಕಪ್"ನಲ್ಲಿದ್ದಾರೆ. ವಿಚಾರಣೆಯು ಯಾವ ದಿನ ನಡೆಯುವದೆಂಬುದು ತಿಳಿದು ಬಂದಿಲ್ಲ.

ಎಚ್ಚರಿಕೆ

ಯಾವತ್ತೂ ಖಾದೀಭಕ್ತರಿಗೆ ಈಮೂಲಕ ತಿಳಿಸುವದೇನಂದರೆ,

ಜಮಖಂಡಿ ಸಂಸ್ಥಾನದ ಹೆ.ನ್ನೂರ ಚರಖಾಲಯದ ಮಾಧವ ಗೋವಿಂದ ಕುಲಕರ್ಣಿಯೆಂಬುವರು ನಮ್ಮ ಚರಖಾಸಂಘದ ಉಪಶಾಖೆಯಲ್ಲಿ ಕೆಲವು ದಿನಗಳ ವರೆಗೆ ಕೆಲಸಮಾಡಿದ್ದು, ಈಗ ಅವರು ಆ ಕೆಲಸದಿಂದ ಬಿಡಿಸಲ್ಪಟ್ಟಿರುವರು ಅವರು ಈಗ ನಮ್ಮ ಸಂಘದ ಹೆಸರಿನಿಂದ ತಮ್ಮ ಜವಳಿಯನ್ನು ಶುದ್ಧಖಾದಿಯೆಂದು ಮಾರುತ್ತಿರುವರೆಂದೂ, ಈಸಂಬಂಧವಾಗಿ ಕೆಲವು ಹಸ್ತಪತ್ರಿಕೆಗಳನ್ನು ಹಂಚುವರೆಂದೂ ನಮಗೆ ತಿಳಿದು ಬಂದಿದೆ. ಅವರಿಗೆ ಹೀಗೆ ಖಾದೀ ಮಾರಲು ನಮ್ಮ ಸಂಘದಿಂದ ಸರ್ಟಿಫಿಕೇಟು ಸಿಕ್ಕಿರುವದಿಲ್ಲ

ಬೆಳಗಾವಿ
೧೯-೨-೩೧

ಕೆ ಬಿ. ಪುರೋಹಿತ
ಕಾರ್ಯದರ್ಶಿ
ಅಖಿಲ ಕರ್ನಾಟಕ
ಚರಖಾಸಂಘ.

ಗದಗ—ಬೆಟಗೇರಿಯ ಸುದ್ದಿಯು

(ಸ್ವಂತ ಸುದ್ದಿಗಾರರಿಂದ)

ಸಿಗ್ರೇಟ ವ್ಯಾಪಾರಿಯ ಉದ್ಧಾಮತನ

ಇಲ್ಲಿಯ ಸಿಗರೇಟ ವ್ಯಾಪಾರಿಯಾದ ಪಿ. ಕೆ. ಪಾಂಡ್ರಿಯವರು ೧೫ ನೆಯ ತಾರೀಖಿನ ನಂತರ ಏಜನ್ಸಿ ಬಿಡುತ್ತೇನೆ ಎಂಬುದಾಗಿ ವಚನ ಕೊಟ್ಟಿದ್ದರು. ೧೬ ನೆಯ ತಾ|| ದಿವಸ ಸ್ವದೇಶಿ ಮಂಡಳದವರು ಭೆಟ್ಟಿಯಾದ ಕೂಡಲೆ "ಕಂಪನಿಯವರು ಉಳಿದ ಸರಕು ಒಯ್ಯಲಿಕ್ಕೆ ಒಪ್ಪಿಕೊಳ್ಳಲಿಲ್ಲ." ವೆಂಬ ನೆವ ಹೇಳಿ ವ್ಯಾಪಾರ ಮಾಡಲಿಕ್ಕೆ ಸುರುವು ಮಾಡಿದನು. ತಾ|| ೧೮ ನೆಯ ದಿವಸ ಪಿಕೆಟಿಂಗ ಪ್ರಾರಂಭವಾಯಿತು. ಸ್ವಯಂಸೇವಕರು ರಾಷ್ಟ್ರಧ್ವಜ ಹಿಡಿದುಕೊಂಡು ಅಂಗಡಿಯ ಮುಂದೆ ನಿಂತುಕೊಂಡರು. ಪಾಂಡ್ರೆಯವರ ಮಾಲು ಗಾಡಿಯಾತನಾದ ಈರಪ್ಪನೆಂಬುವವನು "ನನ್ನ ಅಂಗಡಿಯ ಮುಂದೆ ನಿಲ್ಲಕೂಡದು" ಎಂದು ಗದ್ದರಿಸುತ್ತ ಸ್ವಯಂಸೇವಕರ ಮೇಲೆ ಏರಿ ಹೋಗಿ ಅವರನ್ನು ದಬ್ಬಿದನು. ಸ್ವಯಂಸೇವಕರಲ್ಲಿ ಲಿಂಗಾಚಾರ್ಯ ದಿಗ್ಗಾವಿ ಎಂಬುವವನು ಮೂರು ಸಾರೆ ದಬ್ಬಿಸಿಕೊಂಡರೂ, ಸಾಯುವವರೆಗೆ ಈ ಸ್ಥಳ ಬಿಟ್ಟು ಕದಲಲಿಕ್ಕಿಲ್ಲ' ಎಂದು ಹೇಳಿ ಧೈರ್ಯದಿಂದ ಅಂಗಡಿಯ ಮುಂದೆ ಮತ್ತೆ ನಿಂತನು.

ತಾ|| ೧೯ ನೆಯ ದಿವಸ ಶ್ರೀನಿವಾಸ ಪೂಜಾರ ಶಂಕರ ಕಂಪಲಿ ಈ ಸ್ವಯಂಸೇವಕರು ಅಂಗಡಿಯ ಮುಂದೆ ನಿಂತರು. ಈರಪ್ಪನು ಈದಕುಲಿಯಂತೆ ಅವರ ಮೇಲೆ ಏರಿ ಹೋಗಿ ರಾಷ್ಟ್ರಧ್ವಜ ಕಸಿದುಕೊಂಡು ಅವಾಚ್ಯಶಬ್ದಗಳನ್ನಾಡಿ ಅವರನ್ನು ಒತ್ತಾಗಿ ಹೊಡೆದನು. ಸ್ವಯಂಸೇವಕರು ಸ್ಥಳ ಬಿಟ್ಟು ಕದಲಲಿಲ್ಲ. ಅಷ್ಟರಲ್ಲಿ ಕ್ಯಾಪ್ಟನ್ ಹಣಮಂತ ಗೌಡರ ಇವರು ೩—೪ ಸ್ವಯಂಸೇವಕರೊಂದಿಗೆ ಅಲ್ಲಿಗೆ ಬಂದರು. ಈರಪ್ಪನು ೪—೫ ಮೋಟಾರ ಡ್ರಾಯ್ವರರ ಸಹಾಯ ತೆಗೆದುಕೊಂಡು ಅವನನ್ನು ಹೊಡೆಯಹತ್ತಿದನು. ಗೌಡರವರು ಅಂಗಿ ಕಳೆದು ಬಿಸಾಟಿ, ಮನಸಿಗೆ ತೃಪ್ತಿಯಾಗುವವರೆಗೆ ಹೊಡೆಯಿರಿ ಎಂದು ಹೇಳಿ ಸ್ವಸ್ಥವಾಗಿ ಕುಳಿತುಕೊಂಡರು. ಅವರು ಹೊಡೆಯಲಿಕ್ಕೆ ಪ್ರಾರಂಭ ಮಾಡಿದರು. ಅಂಗಡಿಯ ಮುಂದೆ ನೆರೆದ ನೂರಾರು ಜನರು ಅಂಗಡಿಕಾರನ ಉದ್ಧಾಮತನವನ್ನು ನೋಡಿ ಕಳವಳಗೊಂಡರು. ಈ ಸುದ್ದಿಯು ಊರಲ್ಲಿ ಹಬ್ಬಿದ ಕೂಡಲೆ ಭಗಿನಿ ಮಂಡಳದ ಮೂವರು ಸ್ತ್ರೀಯರ, ಅಲ್ಲಿಗೆ ಬಂದು, ಪಿಕೆಟಿಂಗ ಮಾಡುತ್ತ ನಿಂತುಕೊಂಡರು. ಸಂಜೆಯ ೫ ಗಂಟೆಗೆ ಗಜೇಂದ್ರಗಡ ಮೋಟಾರಿನಲ್ಲಿ ಸಿಗರೇಟುಗಳನ್ನು ಕಳಿಸಬೇಕು ಎಂದು ಈರಪ್ಪನು ಪ್ರಯತ್ನ ಮಾಡಲಾಗಿ, ಸ್ವಯಂಸೇವಕರು ಹಾಗು ಪ್ರೇಕ್ಷಕರು ಅಂಗಡಿ ಬಾಗಿಲಿನಿಂದ ಮೋಟಾರ ಸ್ಟ್ಯಾಂಡಿನ ವರೆಗೆ ಹಾದಿಯಲ್ಲಿ ಅಡ್ಡ ಮಲಗಿಕೊಂಡರು. ಇಷ್ಟಾದರೂ ಆ ನಿಷ್ಕರುಣಿಯಾದ ಮತ್ತು ಅಭಿಮಾನ್ಯ ಶೂನ್ಯನಾದ ಈರಪ್ಪನು ಬೂಟುಗಾಲಿನಿಂದ ಹೆಣ್ಣುಮಕ್ಕಳನ್ನು ಸಹ ತುಳಿಯುತ್ತ ಮೋಟಾರದ ವರೆಗೆ ಹೋದನು. ಮೋಟಾರಿನವರು ಈ ಪರಿಸ್ಥಿತಿಯನ್ನು ಕಂಡು ಡಬ್ಬಿಗಳನ್ನು ತೆಗೆದುಕೊಳ್ಳಲಿಲ್ಲ. ಆ ಮೇಲೆ ಅವನು ಅವುಗಳನ್ನು ಪೋಲೀಸರ ಕೈಯ್ಯಲ್ಲಿ ಕೊಟ್ಟನು

ಡಾ. ಉಮಚಗಿಯವರ ಬಿಡುಗಡೆ

ಡಾ. ಉಮಚಗಿ ಹಾಗು ಶ್ರೀ ರಂಗರಾವ ಕುಲಕರ್ಣಿ ಇವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಿರುಗಿ ಬಂದರು. ಗಾಂಧಿ ಚೌಕಿನಲ್ಲಿ ಶ್ರೀ ಕುರ್ತಕೋಟಿ ದತ್ತೋಪಂತರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಅವರ ಸ್ವಾಗತ ಮಾಡಲಾಯಿತು.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದೆ)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗೂ ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಸಬಾಜಾರ ವಿಜಾಪುರ

ಸ್ಯಾಂಪಲ್) ಮತಿ ಚೀಟಿಗಳು (ಪ್ರಕಟಿ

ನೀಲಿ ಕಪ್ಪು, ಕೆಂಪು, ಜಾಂಬಳಿ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ,	೧೬-೦-೦	ಡೇಲ್ವೆ ಫಿ
೫ ತೊಲಾ ಪಾಕೆಟುಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮಸಿ ತೈಲಂಗಿನ ೧ಡಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಶೇಷಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿ ಪಡಿಸಲ್ಪಟ್ಟಿತು

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦

अर्थं परवशं दुःखं । यथात्मवशं सुखम् ॥—मनु.

ಕನ್ನಡಿಗ

KANNADIGA BAGALKOT BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾವಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಮಂಗಳವಾರ ಮಿತಿ ಫಾಲ್ಗುಣ ಶುದ್ಧ ೭ ಶಕೆ ೧೮೫೨ ತಾ॥ ೨೪—೨—೩೧ [ಸಂ

ವರ್ಕಿಂಗ ಕಮಿಟಿಯುವರು

ಒಪ್ಪಂದದ ಚರ್ಚೆನಡಿಸಲು ಮಹಾತ್ಮರಿಗೆ ಅಧಿಕಾರಕೊಟ್ಟಿ

(ತಂತಿಯು ವಾರ್ತೆ ತಾ। ೨೩)

ವರ್ಕಿಂಗ ಕಮಿಟಿಯುವರು ಎರಡು ದಿನಗಳ ವರೆಗೆ ಸದ್ಯದ ಸ್ಥಿತಿಯು ಸಂಬಂಧವಾಗಿ ವಿಚಾರ ಮಾಡಿ, ತಮ್ಮ ಪರವಾಗಿ ಒಪ್ಪಂದದ ಚರ್ಚೆ ನಡಿಸಲು ಮಹಾತ್ಮಾಗಾಂಧಿಯವರಿಗೆ ಅಧಿಕಾರ ಕೊಟ್ಟರು. ಕರಾಚಿ ಕಾಂಗ್ರೆಸಕ್ಕೆ ಪ್ರತಿನಿಧಿಗಳನ್ನು ಆರಿಸುವ ಸಂಬಂಧವಾಗಿಯೂ ಸಭೆಯಲ್ಲಿ ವಿಚಾರ ಮಾಡಲಾಯಿತು. ಈ ದಿನವಾದರೂ ಸಭೆಯು ಸೇರತಕ್ಕದ್ದಿದೆ. ಮಹಾತ್ಮಾಗಾಂಧಿಯವರು ವ್ಹಾಯಿಸರಾಯರ ಉತ್ತರದ ಹಾದಿ ನೋಡುತ್ತಿದ್ದಾರೆ.

ಮಹಾತ್ಮಾಗಾಂಧಿಯವರಿಗೆ ಗಂಗಾಧರರಾಯರ ತಾರು

(ತಂತಿಯ ವಾರ್ತೆ. ಧಾರವಾಡ, ತಾ॥ ೨೩)

"ಕಾಂಗ್ರೆಸ್ ಹಾಗು ಸರಕಾರದ ನಡುವೆ ನಡೆದ ಸಂಧಾನದ ಮಾತುಕತೆಗಳ ಸಂಬಂಧವಾಗಿ ಏನೊಂದೂ ನಿರ್ಣಯವಾಗುವ ವರೆಗೆ ಸರಕಾರದವರು ಗುಜರಾಥದಲ್ಲಿ ಭೂಮಿಯನ್ನು ಎಲ್ಲಿಯೂ ಎತ್ತುಗಡೆ ಮಾಡಬಾರದು. ಹಾಗು ಈ ಬಗ್ಗೆ ಈಗ ಕೈಕೊಂಡ ಎಲ್ಲ ಉಪಾಯಗಳನ್ನು ಅವರು ಕೂಡಲೆ ನಿಲ್ಲಿಸಬೇಕು" ಹೀಗೆ ಮಹಾತ್ಮಾ ಗಾಂಧಿಯವರು ಸರಕಾರಕ್ಕೆ ಕರಾರು ಹಾಕುವದು ದ್ವಾರಾ ತಿಳಿದು ಬಂದ ಕೂಡಲೆ, ದೇ. ಭ. ಗಂಗಾಧರರಾಯರು ಮಹಾತ್ಮರಿಗೆ ತಾರುಮಾಡಿ, ಕರ್ನಾಟಕದಲ್ಲಿಯ ಅಂಕೋಲಾ, ಸಿರಸಿ, ಸಿದ್ದಾಪೂರ, ಹಿರೇಕೆರೂರ ತಾಲೂಕುಗಳ ಭೂಕಂದಾಯ ವಸೂಲಿಯು ಸಂಬಂಧವಾಗಿಯೂ ಮೇಲಿನಂತೆಯೆ ಕೇಳಿಕೊಳ್ಳಬೇಕಾಗಿ ಅವರಿಗೆ ತಿಳಿಸಿದರು. ಮಹಾತ್ಮಾ ಗಾಂಧಿಯವರು ದೇ. ಭ. ಗಂಗಾಧರರಾಯರಿಗೆ ತಂತಿಯಿಂದ ಉತ್ತರಕೊಟ್ಟಿದ್ದು, ಅದರಲ್ಲಿ ಅವರು, "ಎಲ್ಲದರ ಕಡೆಗೂ ತಮ್ಮ ಲಕ್ಷ್ಯವಿದೆಯೆಂದೂ, ಕಾಳಜಿಮಾಡುವ ಕಾರಣವಿಲ್ಲೆಂದೂ" ಕಾಣಿಸಿದ್ದಾರೆ.

ವಿಜಾಪುರದ

ಶ್ರೀ ದೇಶಪಾಂಡೆಯವರಿಗೆ ಛತ್ತಿಂ. ಕ. ಶಿಕ್ಷೆ

(ತಂತಿಯು ವಾರ್ತೆ ವಿಜಾಪುರ ತಾ॥ ೨೩)

ರವಿವಾರ ದಿವಸ ಇಲ್ಲಿ ಬಂಧಿತರಾಗಿರುವ "ಕ್ರಾಂತಿ" ಎಂಬ ಕರಪತ್ರದ ಸಂಪಾದಕರಾದ ಶ್ರೀ ಎ. ಕೆ. ದೇ... ಖಟ್ಲೆಯು ವಿಚಾರಣೆಯು ... ಇಲ್ಲಿಯ ಸಿಟಿ ಮ್ಯಾಜಿಸ್ಟ್ರೇಟರ ... ಅವರಿಗೆ ೩ ತಿಂಗಳ ಕಠಿಣ ... ಹಾಗು ೨೦೦ ರೂಪಾಯಿ ದಂಡ ... ತಿಂಗಳ ಕಾರಾಗೃಹವಾಸ ಹೀ... ವಿಧಿಸುವದರಲ್ಲಿ ಬಂದಿದೆ.

ಮುಂಬಯಿ... ಮತ್ತೆ ಲಾಠಿ

(ತಂತಿಯು ವಾರ್ತೆ ತಾ॥ ...)

ವ್ಹಾಯಿಸರಾಯರಾದ ... ರಿಗೆ ಮಾನ ಪತ್ರ ಕೊ... ಮುಂಬಯಿ ಕಾರ್ಪೋರೇಶನದ ... ಸದರು ಇಂದು ಸೂಚನೆ ... ಈ ಸಂಬಂಧವಾಗಿ ಕಾರ್ಪೋರೇ... ನಡಿಸಿ ಕೊಡಬಾರದೆಂಬ ... ರವು ಸ್ವಯಂಸೇವಕರೂ ಹಾ... ಯರೂ ಕಾರ್ಪೋರೇಶನಕ್ಕೆ ... ನ್ನು ಮುತ್ತಿದರು. ಪೋಲೀಸ... ಅವರನ್ನು ಲಾಠಿಗಳಿಂದ ... ಮಾಡಿ ೧೯ ಜನರನ್ನು ... ಹಿಡಿದುಕೊಂಡು ಹೋ...

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

... परवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BAGALKOT BI-WEEKLY ದ್ವಿವಾರ ಪತ್ರಿಕೆ

ಸಂಪಾದಕರು:– ವೆಂಕಟೇಶ ಸೀತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಮಂಗಳವಾರ ಮಿತಿ ಫಾಲ್ಗುಣ ಶುದ್ಧ ೭ ಶಕೆ ೧೮೫೨ ತಾ॥ ೨೪—೨—೩೧ [ಸಂಚಿಕೆ ೧೯೭

ವರ್ಕಿಂಗ ಕಮಿಟಿಯವರು

ಒಪ್ಪಂದದ ಚರ್ಚೆನಡಿಸಲು ಮಹಾತ್ಮರಿಗೆ ಅಧಿಕಾರಕೊಟ್ಟರು.

(ತಂತಿಯ ವಾರ್ತೆ ತಾ॥ ೨೩)

ವರ್ಕಿಂಗ ಕಮಿಟಿಯವರು ಎರಡು ದಿನಗಳ ವರೆಗೆ ಸದ್ಯದ ಸ್ಥಿತಿಯ ಸಂಬಂಧವಾಗಿ ವಿಚಾರ ಮಾಡಿ, ತಮ್ಮ ಪರವಾಗಿ ಒಪ್ಪಂದದ ಚರ್ಚೆ ನಡಿಸಲು ಮಹಾತ್ಮಾಗಾಂಧಿಯವರಿಗೆ ಅಧಿಕಾರ ಕೊಟ್ಟರು. ಕರಾಚಿ ಕಾಂಗ್ರೆಸ್ಸಕ್ಕೆ ಪ್ರತಿನಿಧಿಗಳನ್ನು ಆರಿಸುವ ಸಂಬಂಧವಾಗಿಯೂ ಸಭೆಯಲ್ಲಿ ವಿಚಾರ ಮಾಡಲಾಯಿತು. ಈ ದಿನವಾದರೂ ಸಭೆಯು ಸೇರತಕ್ಕದ್ದಿದೆ. ಮಹಾತ್ಮಾಗಾಂಧಿಯವರು ವ್ಹಾಯಿಸರಾಯರ ಉತ್ತರದ ಹಾದಿ ನೋಡುತ್ತಿದ್ದಾರೆ.

ಮಹಾತ್ಮಾಗಾಂಧಿಯವರಿಗೆ ಗಂಗಾಧರರಾಯರ ತಾರು

(ತಂತಿಯ ವಾರ್ತೆ. ಧಾರವಾಡ, ತಾ॥ ೨೩)

"ಕಾಂಗ್ರೆಸ್ ಹಾಗು ಸರಕಾರದ ನಡುವೆ ನಡೆದ ಸಂಧಾನದ ಮಾತುಕತೆಗಳ ಸಂಬಂಧವಾಗಿ ಏನೊಂದೂ ನಿರ್ಣಯವಾಗುವ ವರೆಗೆ ಸರಕಾರದವರು ಗುಜರಾಥದಲ್ಲಿ ಭೂಕಂದಾಯವನ್ನು ಎತ್ತುವ ಎತ್ತುಗಡೆ ಮಾಡಬಾರದು. ಹಾಗು ಈ ಬಗ್ಗೆ ಈಗ ಕೈಕೊಂಡ ಎಲ್ಲ ಉಪಾಯಗಳನ್ನು ಅವರು ಕೂಡಲೆ ನಿಲ್ಲಿಸಬೇಕು" ಹೀಗೆ ಮಹಾತ್ಮಾ ಗಾಂಧಿಯವರು ಸರಕಾರಕ್ಕೆ ಕರಾರು ಹಾಕಿದವರಿದ್ದಾರಾಗಿ ತಿಳಿದು ಬಂದ ಕೂಡಲೆ, ದೇ. ಭ. ಗಂಗಾಧರರಾಯರು ಮಹಾತ್ಮರಿಗೆ ತಾರುಮಾಡಿ, ಕರ್ನಾಟಕದಲ್ಲಿಯ ಅಂಕೋಲಾ, ಸಿರಸಿ, ಸಿದ್ದಾಪೂರ, ಹಿರೇಕೆರೂರ ತಾಲೂಕುಗಳ ಭೂಕಂದಾಯ ವಸೂಲಿಯ ಸಂಬಂಧವಾಗಿಯೂ ಮೇಲಿನಂತೆಯೆ ಕೇಳಿಕೊಳ್ಳಬೇಕಾಗಿ ಅವರಿಗೆ ತಿಳಿಸಿದರು. ಮಹಾತ್ಮಾ ಗಾಂಧಿಯವರು ದೇ. ಭ. ಗಂಗಾಧರರಾಯರಿಗೆ ತಂತಿಯಿಂದ ಉತ್ತರ ಕೊಟ್ಟಿದ್ದು, ಅದರಲ್ಲಿ ಅವರು, "ಎಲ್ಲದರ ಕಡೆಗೂ ತಮ್ಮ ಲಕ್ಷ್ಯವಿದೆಯೆಂದೂ, ಕಾಳಜಿಮಾಡುವ ಕಾರಣ ವಿಲ್ಲೆಂದೂ" ತಿಳಿಸಿದ್ದಾರೆ.

ವಿಜಾಪುರದ

ಶ್ರೀ ದೇಶಪಾಂಡೆಯವರಿಗೆ ೩ ತಿಂಗಳ ಶಿಕ್ಷೆ

(ತಂತಿಯ ವಾರ್ತೆ ವಿಜಾಪುರ ತಾ॥ ೨೩)

ರವಿವಾರ ದಿವಸ ಇಲ್ಲಿ ಬಂಧನಕ್ಕೊಳಗಾದ "ಕ್ರಾಂತಿ" ಎಂಬ ಕರಪತ್ರದ ಸಂಪಾದಕರಾದ ಶ್ರೀ ಎ. ಕೆ. ದೇಶಪಾಂಡೆಯವರ ಖಟ್ಲೆಯ ವಿಚಾರಣೆಯು ಇವತ್ತಿನ ದಿವಸ ಇಲ್ಲಿಯ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರೂಪಾಯಿ ದಂಡ ಇಲ್ಲವೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯನು ವಿಧಿಸುವದರಲ್ಲಿ ಬಂದಿದೆ.

ಮುಂಬಯಿಯಲ್ಲಿ ಮತ್ತೆ ಲಾಠಿ ರಾಜ್ಯ

(ತಂತಿಯ ವಾರ್ತೆ ತಾ॥ ೨೩)

ವ್ಹಾಯಿಸರಾಯರಾದ ಲಾರ್ಡ ಆಯರ್ವಿನರಿಗೆ ಮಾನ ಪತ್ರ ಕೊಡಬೇಕೆಂಬುದಾಗಿ ಮುಂಬಯಿ ಕಾರ್ಪೊರೇಶನದಲ್ಲಿ ಓರ್ವ ಸಭಾಸದರು ಇಂದು ಸೂಚನೆ ತರತಕ್ಕವರಿದ್ದರು. ಈ ಸಂಬಂಧವಾಗಿ ಕಾರ್ಪೊರೇಶನದಲ್ಲಿ ವಿಚಾರ ನಡಿಸಿ ಕೊಡಬಾರದೆಂಬ ಉದ್ದೇಶದಿಂದ ಕೆಲವು ಸ್ವಯಂಸೇವಕರೂ ಹಾಗು ದೇಶಸೇವಿಕೆಯರೂ ಕಾರ್ಪೊರೇಶನಕ್ಕೆ ಸಾಗಿಹೋಗಿ ಅದನ್ನು ಮುತ್ತಿದರು. ಪೋಲೀಸರು ಅಲ್ಲಿಗೆ ಬಂದು ಅವರನ್ನು ಲಾಠಿಯಿಂದ ಚದುರಿಸಲು ಪ್ರಯತ್ನ ಮಾಡಿ ೧೯ ಜನ ದೇಶಸೇವಿಕೆಯರನ್ನು ಸೆರೆ ಹಿಡಿದುಕೊಂಡು ಹೋದರು.

ಅಂಕೋಲೆಯ ಪೋಲೀಸರ ಸುಳಿದಾಟ

(ಸ್ವಂತ ಸುದ್ದಿಗಾರರಿಂದ)

ಮಹಾಶಿವರಾತ್ರಿಯ ನಿಮಿತ್ತವಾಗಿ ಎಲ್ಲೆಲ್ಲಿಯ ಜನರು ಗೋಕರ್ಣ ಕ್ಷೇತ್ರಕ್ಕೆ ಬರುತ್ತಿರುವಾಗ ನಮ್ಮಲ್ಲಿಯ ಪೋಲೀಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ತಿರುಗುತ್ತಿರುವರು! ಐದು, ಎಂಟು, ಹತ್ತು, ಹನ್ನೆರಡು ಜನರ ಗುಂಪುಗಳನ್ನು ಮಾಡಿಕೊಂಡು ಸಾಯುಧರಾಗಿ ದಿನಾಲು ಹಳ್ಳಿ ಹಳ್ಳಿಗೆ ಹೋಗಿ ಪರಸ್ಥರನ್ನು ಹುಡುಕುತ್ತಿರುವರು. ಹೋದ ಹೋದಲ್ಲಿ ಅವರಿಗೆ ಊಟ ಉಪಚಾರದ ಬಗ್ಗೆ ಅತ್ಯಂತ ತೊಂದರೆಯಾಗಹತ್ತಿದೆ. ಊರೊಳಗಿನ ಜನರು ಇವರಿಗೆ ಉಣಿಸು-ತಿನಿಸು, ಪಾತ್ರೆ-ಪಳಿಗೆ, ನೀರು-ನಿಡಿ ಮೊದಲಾದವುಗಳನ್ನು ಕೊಡುವದಂತೂ ಒತ್ತಟ್ಟಿಗಿರಲಿ, ಇವರಿಗೆ ನಿಲ್ಲಲಿಕ್ಕೆ ಸ್ಥಳಸಹ ಕೊಡದಾಗಿದ್ದಾರೆ. ಅವರ ಪ್ರವಾಸಕ್ರಮವನ್ನೂ ಅಲ್ಲಲ್ಲಿ ಅವರಿಗುಂಟಾದ ಆದರಾತಿಥ್ಯವನ್ನೂ ಸಂಕ್ಷಿಪ್ತವಾಗಿ ಕೆಳಗೆ ಹೇಳಲಾಗಿದೆ.

೧೭ ನೇ ತಾರೀಖಿನ ಬೆಳಿಗ್ಗೆ ಐವರು ಪೋಲೀಸರು ಹಿಚ್ಕಡಕ್ಕೆ ಬಂದು ಅತ್ತಿತ್ತ ಸುಳಿದಾಡಿ ಗಾಂಧೀ ಬಾಗಕ್ಕೆ ಹೋದರು. ಅಲ್ಲಿ ಶ್ರೀ ಕರಮರಕರರವರು ಎಲ್ಲಿರುವರೆಂದು ವಿಚಾರಿಸಲಾಗಿ ಜನರು ತಮಗೆ ಯಾವದೂ ಗೊತ್ತಿಲ್ಲವೆಂದರು. ಬಳಿಕ ಮತ್ತೆ ಹಿಚ್ಕಡಕ್ಕೆ ಹೋಗಿ ಕರಮರಕರರನ್ನು ಹುಡುಕಿದರು. ಅಲ್ಲಿ ಅವರು ಸಿಕ್ಕದಿರಲು ಪೋಲೀಸರ ಸವಾರಿಗಳು ಬೆಳಕೆಗೆ ಹೋದವು. ಇಲ್ಲಿ ಯಾರಾದರೂ ಊಟಕ್ಕೆ ಹಾಕಬಹುದೆಂದು ಅವರ ಆಶೆ! ಆದರೇನು? ಯಾರೂ ಇವರನ್ನು ಮಾತಾಡಿಸಲಿಲ್ಲ. ನೀರು ಸೇದುಕೊಳ್ಳಲಿಕ್ಕೆ ಕೊಡ ಹಗ್ಗಗಳೂ ಇವರಿಗೆ ಸಿಕ್ಕಲಿಲ್ಲ. ಹಳ್ಳಕ್ಕೆ ಹೋಗಿ ಅಕ್ಕಿ ಕುದಿಸಿಕೊಂಡು ಅದನ್ನೇ ಹೊಟ್ಟೆತುಂಬ(?) ತಿಂದು ಹೊರಟು ಹೋದರು.

ಅಂದೇ ಮುಂಜಾವಿನಲ್ಲಿ ಮೂವರು ಪೋಲೀಸರು ಬಂದೂಕುಗಳನ್ನು ಹೆಗಲಮೇಲೆ ಹೇರಿಕೊಂಡು ಬಂದು ಮಂಜಗುಣಿಯ ಧರ್ಮಶಾಲೆಯಲ್ಲಿ ತಳವೂರಿದರು. ನೀರು ಸೇದಲಿಕ್ಕೆಂದು ಒಬ್ಬ ರೈತನ ಹತ್ತರ ಕೊಡವನ್ನು ಕೇಳಲು ಅವನು ತನ್ನ ಮನೆ ದೂರವಿರುವದೆಂದು ಹೇಳಿ ಕಾಟತಪ್ಪಿಸಬೇಕೆಂದನು. ಆದರೂ ಪೋಲೀಸರು ಅಂಗಡಿಗೆ ಹೋಗಿ ತೆಗೆದುಕೊಂಡು ಬಾ ಎಂದೆನಲು ಆತನು ಹೋದನಂತೆ ನಟಿಸಿ ತಿರುಗಿಬಂದು ಯಾರೂ ಕೊಡುವದಿಲ್ಲವೆಂದು ಹೇಳಿದನು. ಬಳಿಕ ಪೋಲೀಸರು ಒಬ್ಬ ಹೆಂಗಸಿನ ಹತ್ತರ ಕೊಡವನ್ನು ಬೇಡಲಾಗಿ ಅವಳೂ ತಿರಸ್ಕರಿಸಿಬಿಟ್ಟಳು. ತರುವಾಯ ಈ ಮಹನೀಯರು ಒಂದು ಒಡಕು ಮಡಕೆಯಲ್ಲಿ ನೀರು ಸೇದಿಕೊಂಡುಹೋಗಿ ಅಡಿಗೆ ಮಾಡಿದರು. ನೆರಳಿನ ಆಸರವಿಲ್ಲದ್ದರಿಂದ ಬಿಸಿಲು ಹಣ್ಣು ತಿನ್ನುತ್ತ ೩ ಗಂಟೆಯವರೆಗೆ ಕುಳಿತು ಹೋದರು.

ಸಿಂಕಣಮಕ್ಕೆ ಹೋಗಿದ್ದ ೪ ಜನ ಪೋಲೀಸರ ಸ್ಥಿತಿಯೂ ಹೀಗೆಯೇ ಆಯಿತು. ಶಾಲಾ ಮಾಸ್ತರರ ಬಳಿಯಲ್ಲಿ ಕೊಡವನ್ನು ಕೇಳಲು ಅವರು ‘ನಾನು ನಿಮಗೆ ಯಾವ ಸಹಾಯವನ್ನೂ ಮಾಡಲಾರೆ. ಮೊನ್ನೆ ನಿಮ್ಮ ಮಾಮಲೇದಾರರಿಗೆ ಸಹಾಯಮಾಡಿದ್ದಕ್ಕೆ ನನಗೆ ಸಾಕುಬೇಕಾಗಿದೆ. ನಾನು ಇನ್ನು ಮೇಲೆ ಇಲ್ಲಿ ಇರುವದೇ ಶಕ್ಯವಿಲ್ಲವಾದ್ದರಿಂದ ೧೫ ದಿನಗಳಲ್ಲಿಯೇ ಹೊರಟು ಹೋಗುವ ಯೋಚನೆಯಲ್ಲಿದ್ದೇವೆ. ಆದ್ದರಿಂದ ನನ್ನ ಹತ್ತರ ಏನೂ ಕೇಳಬೇಡರಿ’ ಎಂದರು. ಬಳಿಕ ಪೋಲೀಸರು ಒಂದು ಮನೆಯಲ್ಲಿ ಗಂಡಸರಾರೂ ಇಲ್ಲದ್ದನ್ನು ಕಂಡು ಒಳಹೊಕ್ಕು ಒಂದು ಕೊಡವನ್ನು ತೆಗೆದರು. ಒಳಗಿದ್ದ ಹೆಣ್ಣುಮಗಳು ಬೈಯ್ಯಹತ್ತಿದಳು. ಅವಳ ವಾಕ್ಪ್ರಹಾರಕ್ಕೆ ಜರ್ಜರಿತರಾಗಿ ಪೋಲೀಸ ಬಹದ್ದೂರರು ಶೀಘ್ರವಾಗಿ ಕೊಡವನ್ನು ತಂದು ಕೊಟ್ಟರು. ಚಟ್ಣಿ ಅರೆಯುವದಕ್ಕೆ ರುಬ್ಬುಗುಂಡು ಎಲ್ಲಿಯೂ ಸಿಕ್ಕಲಿಲ್ಲ. ಒಂದು ಮನೆಯಲ್ಲಿ ಹೇಗೆ ಹೇಗೋ ಕರುವಿಕೊಂಡು ಬಂದರು. ಇಷ್ಟೆಲ್ಲ ಆಗಬೇಕಾದರೆ ೫ ಹೊಡೆಯಿತು. ಪೋಲೀಸರು ಇಲ್ಲಿ ಬಂದು ಕೇವಲ ಊಟ ಮಾಡಿ ಹೊರಟು ಹೋದಂತಾಯಿತು.

ಬಾಸ್ಗೋಡ ರಸ್ತೆಯ ಮೇಲೆ ೧೭ನೇ ತಾರೀಖಿನ ಬೆಳಿಗ್ಗೆ ೧೩ ಜನ ಪೋಲೀಸರು ಬಂದರು. ಜನರು ಎಲ್ಲಿಗೆ ಹೋಗುತ್ತೀರಿ? “ಎಂದು ಕೇಳಿದ್ದಕ್ಕೆ” ಎಂಟು ಜನ ಗೋಕರ್ಣಕ್ಕೆ ನಾಲ್ವರು ಹಾಗೇ ಅಡ್ಡಾಡಲಿಕ್ಕೆ ” ಎಂದರು. ಅಂಗಡಿಕಾರನ ಹತ್ತರ ಅಡಿಗೆ ಮಾಡಿಕೊಳ್ಳುವ ಸಾಹಿತ್ಯವನ್ನು ಕೇಳಲು ಆತನು ನಕಾರ ಹೇಳಿದನು. ಬಾಳೆಹಣ್ಣು ಕೊಡೆಂದು ಕೇಳಲು ಆತನು ಸ್ಪಷ್ಟವಾಗಿ ಕೊಡುವದಿಲ್ಲವೆಂದನು. ಕುಡಿಯುವ ನೀರನ್ನಾದರೂ ಕೊಡು ಎಂದು ಕೇಳಿದಾಗ ಅಂಗಡಿಕಾರನು ಬಾವಿಗೆ ಹೋಗಿರಿ ಎಂದು ಉತ್ತರ ಕೊಟ್ಟನು. ಅಷ್ಟರಲ್ಲಿಯೇ ಆ ದಾರಿಯಿಂದ ಕಬ್ಬಿನ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ಒಕ್ಕಲಿಗನ ಹತ್ತರ ಕಬ್ಬು ಕೇಳಲು ಆತನೂ ತಿರಸ್ಕರಿಸಿದನು. ಆದರೂ ಇವರು ಆತನ ಹಿಂದಿನಿಂದ ಹೋಗಿ ಮೆಲ್ಲನೆ ಒಂದು ಕಬ್ಬು ಸೆಳೆದುಕೊಂಡರು. ಆ ರೈತನು ಇವರ ನಿರ್ಲಜ್ಜತನವನ್ನು ನೋಡಿ ಹೊರಟುಹೋದನು.

ಗುಡ್ಡಾ ಕೋಡಿ ಇಲಿ ತೆಗೆದರು!

೧೮ ನೇ ತಾರೀಖಿನ ದಿವಸ ಪೋಲೀಸರು ಮತ್ತೆ ಪಯಣ ಬೆಳಸಿ ಹಿಚ್ಕಡ, ಬಾವಿಕೇರಿ, ಬೆಳಸೆ ಮುಂತಾದ ಕ್ಷೇತ್ರಗಳ ಸಂಚಾರ ಮುಗಿಸಿದರು. ಬೆಳಸೆಯಲ್ಲಿ ಗೋಡಬೋಲೆ ಎಂಬ ಸ್ವಯಂಸೇವಕನು ರಾಷ್ಟ್ರೀಯ ಕಾರ್ಯದ ಪ್ರಚಾರಮಾಡಲಿಕ್ಕೆ ಹೋದಾಗ ಅವನನ್ನು ಕೈದುಮಾಡಿ ಅಂಕೋಲೆಗೆ ಒಯ್ದರು. ೩-೪ ದಿನಗಳವರೆಗೆ ಸುಮ್ಮನೆ ಅಡ್ಡಾಡಿ ಊರಲ್ಲಿ ಪಾದ್ಯಪೂಜ್ಯ ಮಾಡಿಕೊಂಡು ಪೋಲೀಸ ಬಹದ್ದರರಿಗೆ ಈ ಹುಡುಗನು ಸಿಕ್ಕ ಕೂಡಲೆ ಹಿಡಿಸಲಾರದಷ್ಟು ಸಂತೋಷವಾದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಇಲ್ಲಿಂದ ಜನರು ಮಾತ್ರ “ಇಷ್ಟೆಲ್ಲ ಗುಡ್ಡಾ ಕೋಡಿದ್ದು ಇಷ್ಟಕ್ಕಾಗಿಯೇ ತಾನೆ?” ಎಂದು ಆಡಿಕೊಳ್ಳುತ್ತಿರುವರು.

ಬಾಗಲಕೋಟೆಯಲ್ಲಿ
ಪೋಲೀಸರ ಹವ್ಯಾಸ

ಇಲ್ಲಿಯ ಹಿಂದೂಸ್ಥಾನೀ ಸೇವಾದಲದ ವ್ಯಾಯಾಮ ವಿದ್ಯಾಪೀಠವು ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ಅನ್ವಯ ಮುಂಬಯಿ ಸರಕಾರದವರಿಂದ ಕಾಯಿದೆಗೆ ವಿರುದ್ಧವಾಗಿರುವದೆಂದು ಸಾರಲ್ಪಟ್ಟ ಕೂಡಲೆ ಇಲ್ಲಿಯ ಅಧಿಕಾರಿಗಳು ಅದನ್ನು ಮುತ್ತಿ ಅಲ್ಲಿಯ ಕೆಲವು ಸಾಮಾನುಗಳನ್ನು ಜಪ್ತಮಾಡಿ ಅದನು ತಮ್ಮ ವಶಪಡಿಸಿಕೊಂಡರಷ್ಟೆ. ಆದರೆ ಕಳೆದ ನಾಲ್ಕು ದಿನಗಳಿಂದ ಅಧಿಕಾರಿಗಳು ವಿದ್ಯಾಪೀಠಕ್ಕೆ ಸಂಬಂಧಿಸಿದ ಜಂಗಮ ಆಸ್ತಿಯನ್ನು ಲಿಲಾವ ಮಾಡಹತ್ತಿರುವರು. ಈ ಸಾಮಾನುಗಳನ್ನು ಲಿಲಾವಿನಲ್ಲಿ ಬೇಡಲು ಸಾಕಷ್ಟು ಜನರು ಮುಂದೆ ಬರದ್ದರಿಂದ ಪೋಲೀಸರು ತಮ್ಮ ಅಧಿಕಾರವನ್ನೂ ವರ್ಚಸ್ಸನ್ನೂ ಉಪಯೋಗಿಸಿ ಜನರನ್ನು ಕಟ್ಟಿ ಮುಚ್ಚಿ ಕರೆದುಕೊಂಡು ಬಂದು ಅವರಿಗೆ ಲಿಲಾವಿನಲ್ಲಿ ಸಾಮಾನುಗಳನ್ನು ಕೊಳ್ಳಹಚ್ಚುತ್ತಿರುವರು. ಒಪ್ಪಂದದ ಮಾತುಕತೆಗಳು ಸಾಗುವಾಗಲೇ ಇದೆಲ್ಲವೂ ನಡೆದಿದ್ದನ್ನು ನೋಡಿದಲ್ಲಿ, ಸರಕಾರದ ಹೃದಯದಲ್ಲಿ ಸ್ವಲ್ಪ ಪರಿವರ್ತನೆ ಯಾಗಿಲ್ಲವೆಂದೇ ಹೇಳಬೇಕಾಗುವದು.

ಇದಕ್ಕಿಂತಲೂ ಹೆಚ್ಚಿನ ಅನ್ಯಾಯದ ಕೃತಿಗಳು ಈಗ ಎಲ್ಲೆಲ್ಲಿಯೂ ನಡೆಸುತ್ತಿರುವದೇನೋ ನಿಜ. ಆದರೆ ಈ ಅನ್ಯಾಯವು ಮಾತ್ರ ಅವುಗಳೆಲ್ಲದರಕಿಂತಲೂ ತೀರ ವಿಚಿತ್ರವಾದದ್ದಾಗಿದೆ. ಅಧಿಕಾರಿಗಳು ಇಷ್ಟು ತೀವ್ರವಾಗಿ ಈ ಉಪಾಯವನ್ನು ಕೈಕೊಳ್ಳತಕ್ಕ ಆಗತ್ಯವೇ ಇದ್ದಿಲ್ಲ. ಯಾಕೆಂದರೆ ಅವುಗಳಿಂದೇನೂ ಸಾರ್ವಜನಿಕ ಶಾಂತತೆಗೆ ಭಂಗ ಬರುತ್ತಿದ್ದಿಲ್ಲ. ಅಧಿಕಾರಿಗಳು ಸೇಡು ತೀರಿಸಿಕೊಳ್ಳುತ್ತಿರುವರೆಂಬುದು ಇದರಿಂದ ವ್ಯಕ್ತವಾಗುವದಿಲ್ಲವೇ?

ಮುಂಬಯಿಯಲ್ಲಿ

೩೬೫ ಜನರನ್ನು ಹಿಡಿದರು

ಯುದ್ಧ ಮಂಡಳದ ಅಧಿಕಾರಿಗಳಿಗೆ ೬ ತಿಂಗಳ ಕಠಿಣ ಶಿಕ್ಷೆ

ತಾ। ೨೨ ನೆಯ ದಿವಸ ಆಜಾದ್ ಮೈದಾನದಲ್ಲಿ ರಾಷ್ಟ್ರಧ್ವಜವಂದನೆಯು ಸಮಾರಂಭವು ಜರುಗಲಿಕ್ಕಿದೆಯೆಂದು ಮುಂಬಯಿಯ ಸತ್ಯಾಗ್ರಹ ಯುದ್ಧಮಂಡಳದ ಅಧಿಕಾರಿಗಳು ಮೊದಲೇ ಪ್ರಸಿದ್ಧಪಡಿಸಿದ್ದರಿಂದ, ಬೇರೆ ಬೇರೆ ಕಡೆಗಳಿಂದ ಸ್ವಯಂಸೇವಕರು ಹಾಗು ಪ್ರೇಕ್ಷಕರು ಮುಂಜಾನೆ ೮ ಗಂಟೆಗೆ ತಂಡ ತಂಡವಾಗಿ ಬಂದು ಮೈದಾನದಲ್ಲಿ ನೆರದಿದ್ದರು. ಆದರೆ ೮—೩೦ ಗಂಟೆಗೆ ೨೦೦ ಜನ ಲಾರಿ ಪೋಲೀಸರೂ, ಪೋಲೀಸ ಕಮೀಶನರರೂ ಮೈದಾನಕ್ಕೆ ಬಂದು ಜನರನ್ನು ಮುತ್ತಿ ಅವರಿಗೆ ಹೊರಟು ಹೋಗಲು ಹೇಳಿಕೊಂಡರು. ಸ್ವಯಂಸೇವಕರು ಅಲ್ಲಿಂದ ಕದಲಲಿಲ್ಲ. ಇಷ್ಟರಲ್ಲಿಯೇ ಯುದ್ಧ ಮಂಡಳದ ಅಧಿಕಾರಿಗಳು ಅಲ್ಲಿಗೆ ಬಂದು ಮುಟ್ಟಿದರು. ಸ್ವಯಂಸೇವಕರು ಇನ ಕಿಲಾಬ ಜಿಂದಾಬಾದ ಎಂದು ಕೂಗಿ ಅವರಿಗೆ ವಂದನೆಗಳನ್ನರ್ಪಿಸಿದರು. ಕೆಲವು ಸ್ತ್ರೀಯರು ಅವರಿಗೆ ಮಾಲೆಗಳನ್ನರ್ಪಿಸಹೋದರು. ಆದರೆ ಅಲ್ಲಿ ಇದ್ದ ಪೋಲೀಸ ಅಧಿಕಾರಿಗಳು ಅವರಿಗೆ ಅಡ್ಡಿಮಾಡಿ ಆ ಮಾಲೆಗಳನ್ನು ಕಸಿದುಕೊಂಡರು. ಯುದ್ಧ ಮಂಡಳದ ಅಧಿಕಾರಿಗಳು ಮುಂದಕ್ಕೆ ಸಾಗಿ ಹೋದರು. ಅವರು ಹೀಗೆ ಸಾಗಿ ಹೋದದ್ದೊಂದೇ ತಡ, ಪೋಲೀಸರು ಅವರನ್ನು ಹಾಗು ೪೦೦ ಜನರನ್ನು ನೆರೆಹಿಡಿದು ಕೊಂಡರು. ಪೋಲೀಸ ಚೌಕಿಗೆ ಕರೆದೊಯ್ದರು. ಅಲ್ಲಿ ಅವರ ಹೆಸರನ್ನು ಬರೆದುಕೊಂಡು, ಅಲ್ಪ ವಯಸ್ಕರಾದ ೩೫ ಜನರನ್ನು ಬಿಟ್ಟುಬಿಟ್ಟರು

(ತಂತಿಯ ವಾರ್ತೆ ತಾ॥ ೨೩)

ರಾಷ್ಟ್ರಧ್ವಜವಂದನೆಯ ಸಮಾರಂಭದ ಕಾಲಕ್ಕೆ ಸೆರೆ ಹಿಡಿಯಲ್ಪಟ್ಟ ಯುದ್ಧ ಮಂಡಳದ ಅಧಿಕಾರಿಗಳಾದ ಶ್ರೀ ಎ ಬಿ. ಕೊಪ್ಪಿಟಕರ, ಡಿ. ಎನ್ ಸುರ್ವೆ, ಮಣಿಲಾಲ ಪಟೇಲ ಹಾಗು ಕೆ. ಎ. ಫ ರ್ಯೆ ಇವರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯು ದೊರೆತಿದೆ. ಅಂದಿನ ದಿನವೇ ಬಂಧನಕ್ಕೊಳಗಾದ ೩೬೫ ಜನ ಸ್ವಯಂಸೇವಕರ ವಿಚಾರಣೆಯು ನಡೆದಿದೆ.

ಹಿಂದುಸ್ಥಾನ ಸರಕಾರಕ್ಕೆ

ಡೇಲಿ ಹೆರಾಲ್ಡ”ದ ಬುದ್ಧಿವಾದ

ಲಂಡನದ “ಡೇಲಿ ಹೆರಾಲ್ಡ” ಪತ್ರಿಕೆಯು ಹಿಂದುಸ್ಥಾನದಲ್ಲಿಯ ಸದ್ಯದ ಸ್ಥಿತಿಯ ಸಂಬಂಧವಾಗಿ ಒಂದು ಅಗ್ರ ಲೇಖವನ್ನು ಬರೆದು,ಅದರಲ್ಲಿ ಹಿಂದುಸ್ಥಾನ ಸರಕಾರಕ್ಕೆ ಕೆಳಗಿನಂತೆ ಬುದ್ಧಿವಾದ ಹೇಳಿದೆ.

ಪೋಲೀಸರ ಅತ್ಯಾಚಾರ ವಿಚಾರಣೆಯ ವಿಷಯವನ್ನು ವಿಚಾರ ಮಾಡದಿರಲು ಸರಕಾರದವರು ತೋರಿಸುತ್ತಿರುವ ಕಾರಣವು ಸಮಂಜಸವಾಗಿರುವದಿಲ್ಲ. ವಿಚಾರಣೆ ನಡಿಸಿದಲ್ಲಿ ಸರಕಾರದವರ ವರ್ಚಸ್ಸೇನೂ ಕುಗ್ಗಿ ಹೋಗುವದಿಲ್ಲ. ತಮ್ಮ ವಿಷಯವಾಗಿ ಜನರಲ್ಲಿದ್ದ ವಿಶ್ವಾಸ,ವರ್ಚಸ್ಸು,ಅಳಿಸಿ ಹೋಗುವದೆಂಬ ಅಂಜಿಕೆಯಿಂದ ಅವರು ವಿಚಾರಣೆ ನಡಿಸಲು ಹಿಂದುಮುಂದೆ ನೋಡುತ್ತಿರುವರು. ಸಂಧಾನ ಮಾಗದಿರಲು ಇದೊಂದೇ ಅಡ್ಡ ಬರುತ್ತಿದ್ದರೆ,ವಿಚಾರಣೆ ನಡಿಸದ ಹೊರತು ಬೇರೊಂದು ಉಪಾಯವೇ ಇಲ್ಲ.

ಜೇಲ ಅಧಿಕಾರಿಗಳ

ಕಟುಕತನ.

ಮೈನವಾಲ ಜೇಲಿನಲ್ಲಿ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಶ್ರೀ ಕಾಬೂಲಸಿಂಗ ಎಂಬ ಸೀಖ ಸತ್ಯಾಗ್ರಹಿಯು, ಅಲ್ಲಿಯ ಅಧಿಕಾರಿಗಳ ವರ್ತನದ ನಿಷೇಧಾರ್ಥವಾಗಿ, ಸುಮಾರು ೧॥ ತಿಂಗಳಿಂದ ಅನ್ನತ್ಯಾಗ ವ್ರತ ಕೈಕೊಂಡಿದ್ದು, ಈಗ ಅವನು ಕಠಿಣ ಸ್ಥಿತಿಯಲ್ಲಿದ್ದಾನೆ. ಅವನ ಬಾಯಿಯೂ ಹೋಗಿಬಿಟ್ಟದ್ದಲ್ಲದೆ, ಒಂದು ಹೆಜ್ಜೆ ಕೂಡ ನಡೆಯುವಷ್ಟು ಶಕ್ತಿಯಿಲ್ಲದಾಗಿದೆ. ಅವನು ಹೀಗೆ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ಅಧಿಕಾರಿಗಳು ಅತ್ತ ಲಕ್ಷ್ಯಕೊಟ್ಟು ಅವನ ದುಃಖ ನಿವಾರಣ ಮಾಡಲು ಪ್ರಯತ್ನ ಮಾಡದೆ, ಅನ್ನತ್ಯಾಗದ ಅಪರಾಧಕ್ಕಾಗಿ ಅವನ ಮೇಲೆ ಖಟ್ಲೆ ಹಾಕಿ ಅವನನ್ನು ವಿಚಾರಣೆಗೆ ಗುರಿಮಾಡಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ಕಟುಕತನ ಇನ್ನಾವುದಿದೆ!

ಹಿಂದುಸ್ಥಾನದ ಸಾಲವೆಂದರೆ

ಹನುಮಪ್ಪನ ಬಾಲವೇ !

ಈ ಗುಡ್ಡದಂಥ ಸಾಲದ ಬೊಡ್ಡಿ ತುದಿಗಳು ಪ್ರಾರಂಭಕ್ಕೆ ಅಂದರೆ

೧೭೯೨ ನೇ ಇಸ್ವಿಯಲ್ಲಿ ಇದು ೩೫೦೦೦೦೦ ಡಾಲರು ಇತ್ತು. ೧ ಡಾಲರೆಂದರೆ ೩ ರುಪಾಯಿ ಮುಂದೆ ಹಾಗೇ ಅದು ಬೆಳೆಯುತ್ತ ನಡೆದುದರ ಪಟ್ಟಿ.

೧೮೩೫	೧೦೫,೮೦೦೦೦	ಡಾಲರ
೧೮೭೯	೧೩೦.೦೦೦,೦೦೦	,,
೧೮೪೫	೨೧೫,೦೦೦.೦೦೦	,,
೧೮೫೪	೨೬೫,೦೦೦,೦೦೦	,,
೧೮೫೮	೩೫೦,೦೦೦,೦೦೦	,,
೧೮೬೦	೫೭೦,೦೦೦,೦೦೦	,,
೧೯೦೧	೧೦೦೦,೦೦೦,೦೦೦	,,
೧೯೧೪	೧೫೩೫,೦೦೦ ೦೦೦	,,
೧೯೨೯	೩೫೦೦,೦೦೦ ೦೦೦	,,

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗ, ರಾಜಗುರು ಹಾಗು ಶ್ರೀ ಸುಖದೇವ ಇವರ ಬಂಧು ಬಳಗದವರು ತಾ॥ ೨೦ ನೆಯ ದಿವಸ ಲಾಹೋರ ಸೆಂಟ್ರಲ್ ಜೇಲಿನಲ್ಲಿ ಅವರನ್ನು ಕಾಣುಕೊಂಡರು. ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸುವ ಬಗ್ಗೆ ಸರಕಾರಕ್ಕೆ ಅರ್ಜಿ ಮಾಡಿಕೊಳ್ಳಲು ತಾ॥ ೨೫ ರ ವರೆಗೆ ಅವರಿಗೆ ಅವಧಿಯು ಕೊಡಲ್ಪಟ್ಟಿದೆಯಾಗಿ ತಿಳಿದು ಬರುತ್ತದೆ.

ಜಬಲಪುರ ಬ್ರಿಗೇಡದ ಮುಖ್ಯಾಧಿಕಾರಿಗಳು ಅಲ್ಲಿಯ ಶ್ರೀ ಜಗನ್ನಾಥ ಪ್ರಸಾದ, ಸೀತಾರಾಮ, ಶಂಕರಲಾಲ, ರಾಮರತನ, ಮಖನಲಾಲ, ಅಗ್ರವಾಲಾ, ಬದರಿ ನಾರಾಯಣ ಇಷ್ಟು ಜನರ ಮೇಲೆ ಒಂದು ನೋಟೀಸು ಹೊರಡಿಸಿ, ೨೪ ಗಂಟೆಗಳಲ್ಲಿ ದುಃಡಿನ ಹದ್ದು ಬಿಟ್ಟು ಹೊರಟು ಹೋಗಲು ಅವರಿಗೆ ಅಪ್ಪಣೆ ವಿಧಿಸಿದ್ದಾರೆ. ಪಂಡಿತ ಮೋತೀಲಾಲರ ನಿಧನದಿನದ ದಿವಸ ಅವರು ಹರತಾಳವನ್ನು ಪಾಳಿಸಿದ್ದೇ ಅವರ ಅಪರಾಧವಾಗಿ ಎಣಿಸಲ್ಪಟ್ಟಿದೆ.

ಅಧಿಕಾರಿಗಳಿಗೆ ತಿಳಿಸಿ
ಕಾಯದೆಭಂಗ ಮಾಡಿದರು

ಗುಜರಾಥ ಪ್ರಾಂತದ ಸುನಾವ ಹಳ್ಳಿಯ ಸ್ವಯಂಸೇವಕರು ತಾ|೧೭ ನೆಯ ದಿವಸ ಉಪ್ಪಿನ ಕಾಯದೆ ಭಂಗ ಮಾಡುತ್ತೇವೆಂದು ಅಲ್ಲಿಯ ಅಧಿಕಾರಿಗಳಿಗೆ ಮುಂಗಡವಾಗಿ ತಿಳಿಸಿ ಅಂದು ಕಾಯಿದೆಗೆ ವಿರುದ್ಧವಾದ ಉಪ್ಪನ್ನು ಎಲ್ಲೆಲ್ಲಿಯೂ ಮಾರಿದರು. ಅಧಿಕಾರಿಗಳು ಅವರಿಗೆ ಯಾವ ಪ್ರಕಾರದಿಂದಲೂ ಅಡ್ಡಿ ಮಾಡಲಿಲ್ಲ.

ಮಧ್ಯಪ್ರಾಂತದಲ್ಲಿ
ಕರನಿರಾಕರಣ ಚಳವಳಿ

ಮಧ್ಯಪ್ರಾಂತದ ಬುಲಡಾಣಾ ಜಿಲ್ಹೆಯಲ್ಲಿ ಈ ವರೆಗೆ ಒಬ್ಬನೂ ಸರಕಾರಕ್ಕೆ ಭೂಕಂದಾಯವನ್ನು ಕೊಟ್ಟಿರುವದಿಲ್ಲವಾದ್ದರಿಂದ, ಸರಕಾರದವರು ಈ ಬಗ್ಗೆ ಜವಾಬ್ದಾರಿಕೆಯನ್ನು ಕೈಕೊಂಡು ಅದನ್ನು ವಸೂಲ ಮಾಡುವ ಆಲೋಚನೆಯಲ್ಲಿದ್ದಾರೆ. ಒಬ್ಬ ಅಧಿಕಾರಿಯು ಜಪ್ತಿಯ ವಾರಂಟುಗಳನ್ನು ಹಿಡಿದುಕೊಂಡು ಮನೆಮನೆಗೂ ಅಡ್ಡಾಡಿ, 'ಭೂಕಂದಾಯವನ್ನು ಕೊಡದಿದ್ದರೆ ನಿಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಜಪ್ತ ಮಾಡಲ್ಪಡುವದಾಗಿ ಜನರನ್ನು ಬೆದರಿಸಹತ್ತಿದ್ದಾನೆ.

ಕಲಕತ್ತೆಯಲ್ಲಿ
೩೦ ಜನರನ್ನು ಹಿಡಿದರು

ಬಂಗಾಲ ಸರಕಾರದವರು ಕಲಕತ್ತೆಯ ಬುರ್ರಾಬಜಾರ ಕಾಂಗ್ರೆಸ್ ಕಮಿಟಿಯನ್ನು ಕಾಯಿದೆಗೆ ವಿರುದ್ಧ ಮಾಡಿದ್ದನ್ನು ಅನುಸರಿಸಿ, ಅಲ್ಲಿಯ ಪೋಲೀಸ ಅಧಿಕಾರಿಗಳು ಸ್ವಯಂ ಸೇವಕರ ಶಿಬಿರಕ್ಕೆ ಮುತ್ತಿಗೆ ಹಾಕಿ ೩೦ ಜನರನ್ನು ಸೆರೆಹಿಡಿದೊಯ್ದರು. ಬಳಿಕ ಅವರು ಸ್ವಯಂ ಸೇವಕರು ಊಟ ಮಾಡುತ್ತಿರುವ ಖಾನಾವಳಿಗೆ ಸಾಗಿ ಹೋಗಿ ಅದನ್ನು ಝಡತಿ ಮಾಡಿ ಖಾನಾವಳಿಯವನನ್ನು ಕೈದು ಮಾಡಿಕೊಂಡು ಹೋದರು.

ರಾಜಕೀಯ
ಕೈದಿಗಳ ಬಿಡುಗಡೆ

ಮಾರ್ಚ ತಿಂಗಳ ೫ ನೆಯ ತಾರೀಖಿಗೆ ಎಲ್ಲ ರಾಜಕೀಯ ಕೈದಿಗಳು ಬಂಧಮುಕ್ತರಾಗುವರೆಂದು ಅಜಮೀರದ ಯೋಗಿರಾಜ ಶಾಂತ ವಿಜಯಜಿಯವರು ಹೇಳುತ್ತಾರೆ.

ಜಮೀನು ಮಾರತಕ್ಕದ್ದಿದೆ

ಡಿಸ್ಟ್ರಿಕ್ಟ ವಿಜಾಪೂರ ಸ|ಡಿ| ಬಾಗಲಕೋಟ ತಾಲೂಕ ಪೈಕಿ ಕಸಬಾ ಬಾಗಲಕೋಟೆಯಲ್ಲಿ ರಿ|| ಸ|| ನಂ| ೨೯೦ ಎಕರೆ ೧೪-೨೨ ಆಕಾರ ೧೪೪. ಇದಕ್ಕೆ ಚತುಃಸೀಮೆ- ಪೂರ್ವಕ್ಕೆ ಹಳ್ಳ. ಪಶ್ಚಿಮಕ್ಕೆ ಸ|ನಂ| ೨೯೫. ಉತ್ತರಕ್ಕೆ ರೈಲ್ವೆ ಲೈನ. ದಕ್ಷಿಣಕ್ಕೆ ಸ| ನಂ| ೧೬೭ ಈ ಪ್ರಕಾರ ಚಕ್ಕಬಂದಿ ನಡುವ (ಮುಂಬಯಿ ರಾಮದಾಸ ೧೦೫ ಎದುರಿಗಿರುವ) ನಮ್ಮ ಖಾತೆ ವಹಿವಾಟಿಯ ಜಮೀನ. (ಪ್ಲಾಟುಗಳು) ಮಾರತಕ್ಕದ್ದಿದೆ. ಖರೀದಿ ತೆಗೆದುಕೊಳ್ಳಲಿಚ್ಛಿಸುವವರು ಕೆಳಗೆ ಸಹಿಮಾಡಿದವರ ಕಡೆಗೆ ಪತ್ರವ್ಯವಹಾರ ಇಲ್ಲವೆ ಸಮಕ್ಷಮ ಭೆಟ್ಟಿಯಾಗಬೇಕು. ತಾ|| ೨೩-೨- ೧೯೩೧

ಬಾಲೂರಾವ ಕೇಶವರಾವ ಪೈಠಣಕರ. ವೆಂಕಟಪೇಟ ಹಣಮ ರಥರಾದ ಭಬ್ಬೆ ವಕೀಲ ಇವರ ಮನೆ ಎದುರಿಗೆ ಬಾಗಲಕೋಟ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೨-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ ("ಟೆಕ್ಸ್ಟ ಬುಕ" ಮಂಜೂರಾಗಿದ್ದು)	೧-೦-೦

ಇವಲ್ಲದೆ, ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ಸ್ಯಾಂಪಲ್) ಮಶಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳೆ ಮಶಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ,	೧೬-೦-೦	ರೇಲ್ವೆ ಫಿ
೫ ತೊಲಾ ಪಾಕೀಟುಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮಶಿ ½ ಔಂಸಿನ ೧ ಡಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ
ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಂಪೀಸ ವಗೈರೆ ದುರಸ್ತ ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ ಕೇಶವರಾವ ಆಚಾರ್ಯ ಕೆಂಭಾವಿ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम्॥ -मनु.

ಕನ್ನಡಿಗ

KANNADIGA

BAGALKOT

ಸಂಪಾದಕರು:- ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಬುಧವಾರ ಮಿತಿ ಫಾಲ್ಗುಣ ಶುದ್ಧ ೮ ಶಕೆ ೧೮೫೨ ತಾ॥ ೨೫—೨—೩೧ [ಸಂಚಿಕೆ ೧೯೪

ಕಾಂಗ್ರೆಸ್ ಹಾಗು ಸರಕಾರದವರಲ್ಲಿ

ಒಪ್ಪಂದವಾಗುವ ಸಂಭವವಿದೆ?

(ಶಂತಿಯು ವಾರ್ತೆ ತಾ॥ ೨೪)

ವ್ಹಾಯಿಸರಾಯರು ಸರ್‌ಸಪ್ರೂ, ಶಾ. ಶಾಸ್ತ್ರಿ, ಶ್ರೀ ಜಯಕರ, ಇವರೆಲ್ಲರಿಗೂ ನಾಳಿನ ದಿವಸ ೧೧ ಗಂಟೆಗೆ ತಮ್ಮನ್ನು ಕಂಡುಕೊಳ್ಳಲು ತಿಳಿಸಿರುವರು, ಕಾಂಗ್ರೆಸ್ ಹಾಗು ಸರಕಾರ ಪಕ್ಷದ ಸಭೆಯು ಗುರುವಾರ ದಿವಸ ಸೇರುವದಿದ್ದು ಬಿಕಾನೇರ ಮಹಾರಾಜರು ಹಾಗು ಭೋಪಾಳದ ನವಾಬರು ಅದರಲ್ಲಿ ಭಾಗ ತೆಗೆದುಕೊಳ್ಳಬಹುದು. ಈ ಮಧ್ಯದಲ್ಲಿ ಮಹಾತ್ಮಾ ಗಾಂಧಿಯವರ ನಾಳಿನಿಂದ ವ್ಹಾಯಿಸರಾಯ ರೊಡನೆ ಮತ್ತೆ ಚರ್ಚೆ ಸುರುವು ಮಾಡಬಹುದಾಗಿ ತೋರುತ್ತದೆ. ವ್ಹಾಯಿಸರಾಯರಿಗೆ ಲಂಡನದಿಂದ ಒಪ್ಪಂದದ ಸಂಬಂಧವಾಗಿ ಬೋಧನೆಗಳು ಬಂದಿದ್ದು, ವ್ಹಾಯಿಸರಾಯರು ಅವುಗಳನ್ನು ಪರಿಷತ್ತಿನಲ್ಲಿ ಪ್ರಕಟಿಸುವವರಿದ್ದಾರಾಗಿ ತಿಳಿದುಬರುತ್ತದೆ.

ವ್ಹಾಯಿಸರಾಯರು ಇವತ್ತಿನ ದಿವಸ ೮ ಜನ ಬಂಡೀಗಾಲಿಯ ಪರಿಷತ್ತಿನ ಪ್ರತಿನಿಧಿಗಳನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು, ಮಹಾತ್ಮರು ಹಾಗು ತಮ್ಮ ನಡುವೆ ನಡೆದ ಚರ್ಚೆಯ ಸಂಗತಿಗಳನ್ನು ಅವರಿಗೆ ತಿಳಿಸಿ ಹೇಳಿದರು. ಮತ್ತು ರಾಜ್ಯಕಾರಭಾರದ ಪ್ರಶ್ನೆಗಳನ್ನು ವಿಚಾರ ಮಾಡಲು ಹಿಂದುಸ್ಥಾನದಲ್ಲಿ ಇನ್ನು ಮುಂದೆ ಕೂಡತಕ್ಕದ್ದಾಗಿರುವ ಪರಿಷತ್ತಿನ ಕಾರ್ಯಕಲಾಪಗಳ ಬಗ್ಗೆ ಸೂಚನೆಗಳನ್ನು ಅವರ ಮುಂದೆ ಮಂಡಿಸಿದರು. ಪ್ರತಿನಿಧಿಗಳು ವ್ಹಾಯಿಸರಾಯರ ಸೂಚನೆಗಳಿಗೆ ತಮ್ಮ ಸಮ್ಮತಿ ಕೊಟ್ಟಂತಾಗಿ ತಿಳಿದುಬರುತ್ತಿದೆ. ಪರಿಸ್ಥಿತಿಯು ಆಶಾಜನಕವಿದ್ದು, ಈ ವಾರದೊಳಗಾಗಿ ಸಂಧಾನವಾಗುವ ಸಂಭವವಿದೆ

ವ್ಹಾಯಿಸರಾಯರೊಡನೆ ಸಂಧಾನದ ಸಂಬಂಧವಾಗಿ ಮಾತುಕತೆಯಾಡಿ ಅಬಗ್ಗೆ ಏನೊಂದು ನಿರ್ಣಯ ಮಾಡಲು ವರ್ಕಿಂಗ ಕಮಿಟಿಯವರು ಮಹಾತ್ಮರಿಗೆ ಸಂಪೂರ್ಣ ಅಧಿಕಾರ ಕೊಟ್ಟರು.

(ದಿಲ್ಲಿ ತಾ॥ ೨೩)

ವ್ಹಾಯಿಸರಾಯರು ಈ ದಿವಸ ಸಂಜೆಯಲ್ಲಿ ಮಹಾತ್ಮಾ ಗಾಂಧಿಯವರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು ಕಾಂಗ್ರೆಸ್ ಪಕ್ಷದ ಬೇಡಿಕೆಗಳ ಸಂಬಂಧವಾಗಿ ತಮ್ಮ ಕೊನೆಯ ಉತ್ತರವನ್ನು ಅವರಿಗೆ ಹೇಳುವವರಿದ್ದರು.

ಲಾರ್ಡ ಆಯರ್ವಿನರು ಶಂತಿಯ ಮೂಲಕವಾಗಿ ಬ್ರಿಟಿಶ ಸರಕಾರದವರೊಡನೆ ಒಪ್ಪಂದದ ಸಂಬಂಧದ ವಿಚಾರ ನಡಿಸಿದ್ದಕ್ಕೆ, ಬ್ರಿಟಿಶ ಸರಕಾರದವರು ಈ ದಿವಸ ಉತ್ತರಕೊಟ್ಟು ತಮ್ಮ ಅಭಿಪ್ರಾಯ ತಿಳಿಸಿದ್ದಾರೆಂದು ತಿಳಿದುಬರುತ್ತದೆ.

ಮುಂಬಯಿ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರಾದ ಸರ್ ಅರ್ನೆಸ್ಟ ಹೊಟಸನ್ ಹಾಗು ಮಿ. ಹೆಡಸನ್ ಇವರು, ಬೋರಸಾದದ ಅತ್ಯಾಚಾರ, ಜಪ್ತ ಮಾಡಿದ ಆಸ್ತಿಯನ್ನು ತಿರುಗಿಕೊಡುವದು, ಈ ಸಂಬಂಧವಾಗಿ ವ್ಹಾಯಿಸರಾಯರು ಮತ್ತು ಅವರ ಕಾರ್ಯಕಾರಿ ಮಂಡಳದವರೊಡನೆ ಚರ್ಚೆ ಮಾಡಿದರು. ಅದು ಮುಗಿದ ಬಳಿಕ ಅವರು ವ್ಹಾಯಿಸರಾಯರ ಕಾರ್ಯಕಾರೀ ಮಂಡಳದ ಓರ್ವ ಸಭಾಸದರೊಂದಿಗೆ ಅಸೆಂಬ್ಲಿಯ ಓರ್ವ ಸಭಾಸದರ ಮನೆಗೆ ಹೋಗಿ ಅಲ್ಲಿ ವರ್ಕಿಂಗ ಕಮೀಟಿಯ ಓರ್ವ ಸಭಾಸದರೊಡನೆ ಮಾತುಕತೆಯಾಡಿದರು.

ಪೋಲೀಸರ ಅತ್ಯಾಚಾರದ ವಿಷಯವಾಗಿ ವಿಚಾರಣೆ ನಡಿಸಲು ಮಹಾತ್ಮಾ ಗಾಂಧಿಯವರು ಕೇಳಿಕೊಂಡಿದ್ದಕ್ಕೆ ಸರಕಾರದವರು ಕೆಲವು ಕರಾರು ಹಾಕತಕ್ಕವರಿದ್ದಾರಾಗಿಯೂ, ಮಹಾತ್ಮರು ಅವುಗಳಿಗೆ ಒಪ್ಪಿದಲ್ಲಿ ಮಾತ್ರ ಆ ಸಂಬಂಧವಾಗಿ ವಿಚಾರಣೆ ನಡಿಯುವದಾಗಿಯೂ ಸುದ್ದಿಯಿದೆ.

ದಿಲ್ಲಿಯ ಅಖಿಲ ಭಾರತ ಮುಸಲ್ಮಾನ ಸಂಘಕ್ಕೆ ಮಹಾತ್ಮಾ ಗಾಂಧಿಯವರು ತಾ॥ ೨೨ ನೆಯ ದಿವಸ ಭೆಟ್ಟಿಕೊಟ್ಟು ಆ ಸಮಯದಲ್ಲಿ ಅಲ್ಲಿ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ, “ಸರಕಾರ ಮತ್ತು ಲೋಕಪಕ್ಷದ ನಡುವೆ ಒಪ್ಪಂದವಾದಲ್ಲಿ, ಹಿಂದೂ-ಮುಸಲ್ಮಾನರು ಬಂಧುಭಾವದಿಂದ ವರ್ತಿಸಬೇಕು.” ಎಂಬುದಾಗಿ ಹೇಳಿದರು,

ಅಂಕೋಲೆಯ ಸುದ್ದಿಸಂಗತಿಗಳು

(ಸ್ವಂತ ಸುದ್ದಿಗಾರರಿಂದ)

ಮುಂಬಯಿ ಸರಕಾರದವರು ಗ್ಯಾಝೆಟಿನ ವಿಶೇಷ ಸಂಚಿಕೆಯನ್ನು ಹೊರಡಿಸಿ ಅಂಕೋಲಾ ತಾಲೂಕಿನೊಳಗಿನ ಬಾವೀಕೇರಿ, ಬೇಲೇಕೇರಿ ಮತ್ತು ಅವರ್ಸಾ ಊರುಗಳಲ್ಲಿಯ ಪಂಚಾಯತಿಗಳು ಕಟ್ಟಳೆಗೆಟ್ಟ ಸಂಸ್ಥೆಗಳೆಂದು ಪ್ರಕಟಿಸಿರುವರು. ಜನರು ತಮ್ಮೊಳಗಿನ ವ್ಯಾಜ್ಯಗಳನ್ನು ಪಂಚಾಯತಿಗಳ ಮುಖಾಂತರವಾಗಿ ತೀರಿಸಿಕೊಂಡರೆ ತಮಗೆ ಸಂತೋಷವೆಂದು ಬಾಯಿಯಿಂದ ಹೇಳುತ್ತಿದ್ದ ಸರಕಾರದವರು ನಿಜವಾದ ಕರ್ತೃತ್ವ ಶಕ್ತಿಯುಳ್ಳ ಪಂಚಾಯತಿಗಳ ಬಗ್ಗೆ ಸವತಿಮತ್ಸರವನ್ನೇ ತಾಳುವರೆಂಬುದು ಇದರಿಂದ ಗೊತ್ತಾಗುವದು. ಕಾಮಣಿಯಾದವರಿಗೆ ಜಗತ್ತೆಲ್ಲ ಅರಿಶಿಣ ಬಣ್ಣದ್ದಾಗಿ ತೋರುವಂತೆ ಸರಕಾರಕ್ಕೆ ಎಲ್ಲವೂ ಕಟ್ಟಳೆಗೆಟ್ಟದ್ದಾಗಿಯೇ ಕಾಣುತ್ತಲಿವೆಯೆಂದು ಇಲ್ಲಿಯ ಜನರು ಮಾತಾಡುತ್ತಿರುವರು.

ಸರ್ಕಲ್ ಸಾಹೇಬರ ಅವತಾರ.

ತೀರ್ವೆ ಎತ್ತುವದಕ್ಕಾಗಿ ಶಾನಭೋಗರೂ, ಮಾಮಲೇದಾರರೂ ಪ್ರಯತ್ನಮಾಡಿ ದಣಿದ ಬಳಿಕ ಈಗ ಅಂಕೋಲೆಯ ಕುರುಕ್ಷೇತ್ರದಲ್ಲಿ ಸರ್ಕಲ್ ಇನಸ್ಪೆಕ್ಟರರು ಅವತೀರ್ಣರಾಗಿದ್ದಾರೆ. ಉಳುವರೆಯಲ್ಲಿ ಅವರು ಜನರ ಹತ್ತರ ತೀರ್ವೆ ಕೇಳಲಾಗಿ ಸ್ವರಾಜ್ಯ ಸಿಕ್ಕುವವರೆಗೆ ತೀರ್ವೆ ಕೊಡುವದಿಲ್ಲೆಂದು ಉತ್ತರ ಬಂದಿತು. ಮಾಮಲೇದಾರರಂಥವರ ಆಟ ಸಾಗದಿರುವಾಗ ಸರ್ಕಲ್ ಸಾಹೇಬರ ಬೇಳೆ ಬೇಯಬಹುದೇ?

ಭೇದ ನೀತಿಗೆ ಪ್ರಾರಂಭ;

ಸರ್ಕಲ್ ಇನಸ್ಪೆಕ್ಟರರೂ ಶಾನಭೋಗರೂ ಮಾಮಲೇದಾರರೂ ತಾವು ಹೋದ ಹೋದಲ್ಲಿ ಜನರಿಗೆ "ಎಲ್ಲರೂ ತೀರ್ವೆ ಕೊಟ್ಟರು, ನೀವಷ್ಟೇ ಕಷ್ಟಕ್ಕೊಳಗಾಗಬೇಡಿರಿ. ಸುಮ್ಮನೆ ಕೊಟ್ಟು ಬಿಡಿರಿ." ಎಂದು ಜ್ಞಾನೋಪದೇಶ ಮಾಡುತ್ತಿರುವರು. "ಅಂಕೋಲಾದವರು ಕೊಟ್ಟರು, ನೀವಷ್ಟೇ ಕೆಡುವಿರೇಕೆ? ಪಟ್ಟಣಿಗರು ತಾವು ಸುಖವಾಗಿದ್ದು ಹಳ್ಳಿಗರನ್ನೇ ಬೆಂಕಿಯಲ್ಲಿ ನೂಕುತ್ತಿರುವರು." ಎಂದೂ "ಎಲ್ಲ ಸಮಾಜಗಳು ಕೊಟ್ಟಿರುವಾಗ ನಾಡವರಷ್ಟೇ ಬಿಗಿಹಿಡಿಯುವದೇಕೆ? ಹೀಗೆ ಮಾಡುವದರಿಂದ ಅಲ್ಪಸಂಖ್ಯಾಕರಾಗಿರುವ ನಾಡವರ ಸಮಾಜವು ಸಂಕಟಕ್ಕೀಡಾಗಬಹುದು' ಎಂದೂ ಭೇದನೀತಿಯನ್ನು ಪ್ರಾರಂಭಿಸಿರುವರು. ಆದರೆ ತಾಲೂಕಿನವರು ಇವೆಲ್ಲ ಗುಟ್ಟುಗಳನ್ನು ಬಲ್ಲವರಾಗಿರುವದರಿಂದ ಅಧಿಕಾರಿಗಳ ಉದ್ದೇಶವು ಈಡೇರುವ ಸಂಭವವಿಲ್ಲ.

ತೀರ್ವೆ ತುಂಬುವದಕ್ಕಾಗಿ ಪ್ರತಿವರ್ಷ ಕೊಡುತ್ತಿದ್ದ ಮೂರು ದಿನಗಳ ಅವಧಿಯನ್ನು ಈ ವರ್ಷ ಕಲೆಕ್ಟರರು ಹಾರಿಸಿಬಿಟ್ಟದ್ದರಷ್ಟೇ! ಹೀಗೆ ಮಾಡಿದ ಪಕ್ಷಕ್ಕೆ ರೈತರು ಹೆದರಿ ಆದಷ್ಟು ಬೇಗ ಕಂತು ಕೊಡುವರೆಂದು ಅವರು ತಿಳಿದುಕೊಂಡಿದ್ದರೇನೋ! ಆದರೆ ಪಾಪ! ಅವರ ಅರ್ಭಟದಿಂದ ಏನೂ ಪ್ರಯೋಜನವಾಗದ್ದರಿಂದ ಈಗ ಅವರು ರೈತರಿಗೆ ೨೫ ನೇ ತಾರೀಖಿನವರೆಗೆ ಅವಧಿಯನ್ನು ಕೊಟ್ಟಿರುವರು ಮೊದಲಿನ ಮೂರು ದಿನಗಳ ಬದಲಾಗಿ ಈಗ ಹತ್ತು ದಿನಗಳ ಅವಧಿಯನ್ನು ಕೊಟ್ಟಂತಾಯಿತು.

ಮುಂದಾಳುಗಳ ಆಗಮನ

ಮಹಾಶಿವರಾತ್ರಿಗಾಗಿ ಗೋಕರ್ಣಕ್ಷೇತ್ರಕ್ಕೆ ಹೋಗಿದ್ದ ಬೆಳಗಾವಿಯ ಮುಖಂಡರಾದ ಶ್ರೀ ಜೋಶಿ ನಾರಾಯಣರಾಯರೂ ಶ್ರೀ ದಾತಾರ ಬಲವಂತರಾಯರೂ ಅಂಕೋಲಾ ತಾಲೂಕಿನ ಮುಖ್ಯ ಮುಖ್ಯ ಹಳ್ಳಿಗಳಲ್ಲಿ ಸಂಚರಿಸಿ ಇಲ್ಲಿಯ ಪರಿಸ್ಥಿತಿಯ ನಿರೀಕ್ಷಣೆಮಾಡಿ ಹೋದರು. ಅಂಕೋಲೆಯಲ್ಲಿ ಅವರಿಬ್ಬರ ವ್ಯಾಖ್ಯಾನಗಳು ಜರುಗಿದವು. ಈ ಮುಖಂಡರ ಆಗಮನದ ಮೂಲಕ ಇಲ್ಲಿಯ ರೈತರು ತಮಗೆ ಅಖಂಡ ಕರ್ನಾಟಕದ ಸಹಾನುಭೂತಿಯೂ ಬೆಂಬಲವೂ ಇರುವದೆಂದು ಭರವಸೆತಾಳಿದ್ದಾರೆ.

ಇಲ್ಲಿಯ ರೈತರಲ್ಲಿ ಜಾಗೃತಿಯುಂಟಾಗಲಿಕ್ಕೆ ಜಿಲ್ಲೆಯ ಹೊರಗಿನ ಕಾರ್ಯಕರ್ತರೇ ಕಾರಣರೆಂದು ಅಧಿಕಾರಿಗಳ ತಪ್ಪುತಿಳುವಳಿಕೆ. ಆದುದರಿಂದ ಅವರು ಪರಸ್ಥರನ್ನು ಹೊರದೂಡುವದಕ್ಕಾಗಿ ಸೊಂಟಕಟ್ಟಿದ್ದಾರೆ. ಈ ಧೋರಣದ ಮೂಲಕ ಹಲವು ನಿರುಪದ್ರವಿಗಳಿಗೂ ತೊಂದರೆಯಾಗುತ್ತಿದೆ. ಕರ್ಮವೀರ ಪತ್ರಿಕೆಯ ಪ್ರಚಾರಕ್ಕಾಗಿ ಬಂದಿದ್ದ ಶ್ರೀ ಅವಧೂತಜೀಯವರನ್ನು ಪೋಲೀಸರು ನಿಷ್ಕಾರಣರಾಗಿ ಕಚೇರಿಗೆ ಕರೆದೊಯ್ದು 'ಇನ್ನು ಮುಂದೆ ಈ ಜಿಲ್ಲೆಯನ್ನು ಬಿಟ್ಟು ಹೋಗಿರಿ' ಎಂದು ಎಚ್ಚರಿಕೆ ಕೊಟ್ಟು ಅವರನ್ನು ಹುಬ್ಬಳ್ಳಿಗೆ ಕಳಿಸಿದರಂತೆ! ಪರಜಿಲ್ಲೆಯವರು ಇಲ್ಲಿಗೆ ಬಂದು ಚಳವಳಿ ಮಾಡುವರೆಂಬುದನ್ನು ಕ್ಷಣ ಹೊತ್ತು ಒಪ್ಪಿದರೂ ಆರುಸಾವಿರ ಮೈಲುಗಳಾಚೆಯಿಂದ ಈ ಜಿಲ್ಲೆಗೆ ಬಂದು ಕಾರಭಾರ ಮಾಡುವ ಅಧಿಕಾರಿಗಳಿಗಿಂತಲೂ ಅವರು ಹೆಚ್ಚಿಗೆ ಪರಕೀಯರಲ್ಲವಷ್ಟೇ?

ಖೇಲಾದಲ್ಲಿ ಗೋಳೀಬಾರು ಪಂ, ಜವಾಹಿರಲಾಲರ ಮತ.

"ಫ್ರಿಪ್ರೆಸ್ ಪತ್ರಿಕೆಯ ಪ್ರತಿನಿಧಿಯು ಪಂಡಿತ ಜವಾಹಿರಲಾಲರನ್ನು ಕಂಡುಕೊಂಡು, ಸಂಯುಕ್ತ ಪ್ರಾಂತದ ಪ್ರತಾಪಗಡ ಜಿಲ್ಲೆಗೆ ಸೇರಿದ ಖೇಲಾ ಎಂಬಲ್ಲಿ ಸಂಭವಿಸಿದ ಗೋಳೀಬಾರಿನ ಸಂಬಂಧವಾಗಿ ಅವರನ್ನು ವಿಚಾರಿಸಿದನು. ಆಗ ಪಂಡಿತ ಜವಾಹಿರಲಾಲರು ಕೆಳಗಿನಂತೆ ತಿಳಿಸಿದರು.

ಗೋಳೀಬಾರಿನ ನಂತರದಲ್ಲಿ ನಾನು ಖೇಲಾ ಹಳ್ಳಿಗೆ ಭೆಟ್ಟಿ ಕೊಟ್ಟೆನೆ. ಕೆಲವು ಕಾಂಗ್ರೆಸ್ ಮುಖಂಡರಾದರೂ ಅಲ್ಲಿಗೆ ಹೋಗಿ ಗೋಳೀಬಾರಿನ ಸಂಬಂಧವಾಗಿ ಜನರ ಜವಾಬುಗಳನ್ನು ತೆಗೆದುಕೊಂಡಿದ್ದಾರೆ. ಗೋಳೀಬಾರಿನಲ್ಲಿ ಗಾಯಹೊಂದಿದವರನ್ನು ಅಲಹಾಬಾದಕ್ಕೆ ತೆಗೆದುಕೊಂಡು ಬರುವದರ ಸಲುವಾಗಿ ಅಲಹಾಬಾದದ ಸ್ವಾಸ್ಥ್ಯ ಸಂಘದವರು ಅಲ್ಲಿಗೆ ಒಂದು ಮೋಟಾರು ಕೊಟ್ಟು ಕಳಿಸಿದ್ದರು. ಆದರೆ ಪೋಲೀಸರು ಅವರಿಗೆ ಗಾಯಪಟ್ಟವರನ್ನು ಅಲಹಾಬಾದಕ್ಕೆ ತೆಗೆದುಕೊಂಡು ಹೋಗಗೊಡಲಿಲ್ಲ. ಪೋಲೀಸರು ಅವರಲ್ಲಿ ೧೫ ಜನರನ್ನು ಒಂದು ಮೋಟಾರದಲ್ಲಿ ಹತ್ತಿಸಿ ಅವರನ್ನು ಕರೆದುಕೊಂಡು ಹೋದರು. ಕಾಂಗ್ರೆಸದವರು "ಹೀಗೆ ಮಾಡತಕ್ಕದ್ದಲ್ಲ" ವೆಂಬದಾಗಿ ಎಷ್ಟೇ ಕೇಳಿಕೊಂಡರೂ ಪೋಲೀಸರು ಅತ್ತ ಲಕ್ಷ್ಯಕೊಡಲಿಲ್ಲ. ಮೋಟಾರಿನ ಮೇಲ್ಭಾಗದಲ್ಲಿ ಎರಡು ಹೆಣಗಳು ಹಾಗು ಕೆಲವು ಸಾಮಾನುಗಳು ಇದ್ದವು. ಪೋಲೀಸಾಧಿಕಾರಿಗಳನ್ನು ಈ ಸಂಬಂಧವಾಗಿ ಕೇಳಲಾಗಿ ಅವರು ತಮ್ಮಲ್ಲಿ ಅಂಬಲನ್ಸ ಕಾರ' ಇಲ್ಲವೆಂದೂ, ಗಾಯಹೊಂದಿದವರನ್ನು ಜೇಲಿಗೆ ಬೇಗನೆ ಒಯ್ಯಬೇಕಾಗಿತ್ತೆಂದೂ ಉತ್ತರ ಕೊಟ್ಟರು. ಆದರೆ ಕೆಲವು ಹೊತ್ತಿನ ಮೇಲೆ ಪೋಲೀಸರು ಹಿಂದುಮುಂದೆ ನೋಡಿ ಕೆಲವರನ್ನ ಕಾಂಗ್ರೆಸ್ ಅಂಬುಲನ್ಸಕಾರಿನಲ್ಲಿ ಅಲಹಾಬಾದಕ್ಕೆ ಒಯ್ಯಲು ಅಪ್ಪಣೆ ಕೊಟ್ಟರು. ಈಗ ಅಲಹಾಬಾದದ ಕಾಂಗ್ರೆಸ್ ಆಸ್ಪತ್ರೆಯಲ್ಲಿ ೮ ಜನರು ಉಪಚಾರ ಹೊಂದುತ್ತಿರುವರು. ಮೂವರಿಗೆ ಶಸ್ತ್ರಕ್ರಿಯೆಯು ಮಾಡಲ್ಪಟ್ಟಿದ್ದು, ಗುಂಡುಗಳು ಹೊರಗೆ ತೆಗೆಯಲ್ಪಟ್ಟಿವೆ. ಅವರೆಲ್ಲರೂ ಗುಣಹೊಂದುತ್ತಿದ್ದಾರೆ. ಗೋಳೀಬಾರಿನ ಸಂಬಂಧವಾಗಿ ಪೋಲೀಸರು ಹೇಳುವದಕ್ಕೂ ಕಿಸನ ಜನರು ಹೇಳುವದಕ್ಕೂ ಬಹಳೇ ವ್ಯತ್ಯಾಸಕಂಡು ಬರುತ್ತದೆ. ಗೋಳೀಬಾರು ಆದ ಬಳಿಕ, ಕಿಸನ ಜನರು ಅದೇ ಸ್ಥಳದಲ್ಲಿ ನಿಂತುಕೊಂಡಿದ್ದರೆಂದೂ, ಅವರು ಬೆದರಿ ಓಡಿಹೋಗಲಿಲ್ಲವೆಂದೂ ಇಬ್ಬರೂ ಒಪ್ಪಿಕೊಳ್ಳುತ್ತಾರೆ

(೪ ನೇ ಪುಟಕ್ಕೆ ಸಾಗಿದ್ದು)

ಮುಂಬಯಿಯಲ್ಲಿ ೨೦೦ ಜನರಿಗೆ ಕ.ಶಿ. ಶಿಕ್ಷೆ

(ತಂತಿಯ ವಾರ್ತೆ ತಾ|| ೨೪)

ಮುಂಬಯಿಯಲ್ಲಿ ತಾ|| ೨೨ ನೆಯ ದಿವಸ ರಾಷ್ಟ್ರಧ್ವಜವಂದನೆಯ ಸಮಾರಂಭದ ಕಾಲಕ್ಕೆ ಸೆರೆಹಿಡಿಯಲ್ಪಟ್ಟ ೩೬೫ ಜನ ಸ್ವಯಂಸೇವಕರ ಖಟ್ಲೆಯ ವಿಚಾರಣೆಯು ಇವತ್ತಿನ ದಿವಸ ನಡೆದು, ಅವರಲ್ಲಿ ೨೦೦ ಜನರಿಗೆ ಪ್ರತ್ಯೇಕವಾಗಿ ೪ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು, ಉಳಿದವರು ನಿರ್ದೋಷಿಗಳಾಗಿ ಬಿಡುಗಡೆ ಹೊಂದಿದರು.

ದಿಲ್ಲಿಯಲ್ಲಿ ವರ್ಕಿಂಗ ಕಮಿಟಿಯ ಸಭೆ

ಅಖಿಲ ಭಾರತ ರಾಷ್ಟ್ರಸಭೆಯ ವರ್ಕಿಂಗ ಕಮಿಟಿಯ ಕಾರ್ಯದರ್ಶಿಗಳಾದ ಡಾ. ಸಯ್ಯದ ಮಹಮ್ಮದರು ತಾ|| ೨೧ ನೆಯ ದಿವಸ ಕೆಳಗಿನಂತೆ ಪ್ರಸಿದ್ಧಿಸಿದ್ದಾರೆ.

ವರ್ಕಿಂಗ ಕಮಿಟಿಯ ಸಭೆಯು ಇವತ್ತಿನ ದಿವಸ ಎರಡು ಗಂಟೆಗೆ ಡಾ. ಅನಸಾರಿಯವರ ಮನೆಯಲ್ಲಿ ಸೇರಿತ್ತು. ಪಂಡಿತ ಜವಾಹಿರಲಾಲರು ಅಧ್ಯಕ್ಷರಾಗಿದ್ದರು. ಮಹಾತ್ಮಾ ಗಾಂಧಿ, ಸರದಾರ ವಲ್ಲಭಭಾಯಿ, ಸಿ. ರಾಜಗೋಪಾಲಚಾರ್ಯ, ಸೇನಗುಪ್ತ, ಡಾ. ಪಟ್ಟಾಭಿಸೀತಾರಾಮಯ್ಯ, ಸರದಾರ ಶಾರ್ದೂಲಸಿಂಗ ಡಾ. ಸತ್ಯಪಾಲ, ಸೇಟ ಜಮನಾಲಾಲ ಬಜಾಜ, ಶಿವಪ್ರಸಾದ ಗುಪ್ತ, ಡಾ. ಸಯ್ಯದ ಮಹಮ್ಮದ, ಇವರೆಲ್ಲರೂ ಸಭೆಯಲ್ಲಿ ಕೂಡಿದ್ದರು. ವರ್ಕಿಂಗ ಕಮಿಟಿಯವರು ವಿನಂತಿ ಮಾಡಿಕೊಂಡಿದ್ದರಿಂದ ಡಾ. ಅನಸಾರಿ, ಪಂಡಿತ ಮಾಲವೀಯರೂ ಇವರಾದರೂ ಸಭೆಗೆ ಆಗಮಿಸಿದ್ದರು. ಕಮಿಟಿಯವರು ಸದ್ಯದ ಸ್ಥಿತಿಯ ಸಂಬಂಧವಾಗಿ ಎರಡು ಗಂಟೆಗಳ ವರೆಗೆ ಚರ್ಚೆ ನಡಿಸಿ ಸಭೆಯನ್ನು ಮರುದಿನಕ್ಕೆ ಮುಂದರಿಸಿದರು.

ಪೇಶಾವರ ಪ್ರಾಂತದಲ್ಲಿ ಗೋಳೀಬಾರು

ಇಬ್ಬರಿಗೆ ಮರಣ ೬ ಜನರಿಗೆ ಗಾಯ

ಪೇಶಾವರ ಪ್ರಾಂತದ ಉಟಮಜಾಯಿ ಎಂಬಲ್ಲಿ ತಾ|| ೨೧ ನೆಯ ದಿವಸ ಸಭೆಯು ಸೇರಿತ್ತು. ಸಭೆಯ ಕಾರ್ಯವು ನಡೆಯುತ್ತಿರುವಾಗ ಕೂಡಲೆ ಕೆಂಪು ಅಂಗಿಯ ಸ್ವಯಂಸೇವಕರು ಚರಸಾದ ಭಾಗದ ಕಡೆಗೆ ಮೆರವಣಿಗೆಯಿಂದ ಹೊರಟರು. ಪೋಲೀಸರು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿ ಮಾಡಿದರು. ಎರಡೂ ಪಕ್ಷದವರಲ್ಲಿ ಹೊಡೆದಾಟವಾಗಿ ಪರಿಸ್ಥಿತಿಯು ವಿಕೋಪಕ್ಕೆ ಹೋಯಿತು. ಪೋಲೀಸರು ಗೋಳೀಬಾರು ಮಾಡಿದರು. ಇಬ್ಬರು ಕೆಂಪು ಅಂಗಿಯವರು ಮರಣ ಹೊಂದಿದ್ದು, ೬ ಜನರಿಗೆ ಗಾಯಗಳಾಗಿವೆ.

ಫೌಜದಾರರಿಗೆ ಗುಂಡಿನ ಹೊಡತ ಬಿತ್ತು

ಸಾತಾರಾ ಜಿಲ್ಲೆಯ ತಾಸಗಾವ ತಾಲೂಕದ ಫೌಜದಾರರು ಒಬ್ಬ ಕಳ್ಳನನ್ನು ಹಿಡಿದುಕೊಂಡು ಬರುವದಕ್ಕಾಗಿ ತುರಚಿ ಎಂಬ ಹಳ್ಳಿಗೆ ಹೋದಾಗ ಎರಡೂ ಪಕ್ಷದವರಲ್ಲಿ ಹೊಡೆದಾಟವಾಯಿತು. ಆಗ ಓರ್ವ ಹೆಂಗಸು ಒಬ್ಬ ಪೋಲೀಸನ ಕೈಯಲ್ಲಿಯ ಬಂದೂಕನ್ನು ಕಸಿದುಕೊಂಡಳು. ಆ ಬಂದೂಕು ಒಮ್ಮಿಂದೊಮ್ಮೆ ಹಾರಿ ಆ ಹೆಂಗಸು ಹಾಗು ಫೌಜದಾರರಿಗೆ ತಗುಲಿ ಹೆಂಗಸು ಅಲ್ಲಿಂದಲ್ಲಿ ಗತಪ್ರಾಣಳಾಗಿ ಬಿದ್ದಳು. ಫೌಜದಾರರು ಔಷಧೋಪಚಾರಕ್ಕಾಗಿ ಮಿರಜ ಆಸ್ಪತ್ರೆಗೆ ಕರೆದೊಯ್ಯಲ್ಪಟ್ಟಿದ್ದಾರೆ.

ಶಹಾಜಿಹಾನಪುರದಲ್ಲಿ ಬಾಂಬು ಹಾರಿತು

ಸಂಯುಕ್ತ ಪ್ರಾಂತದ ಶಹಾಜಿಹಾನಪುರದಲ್ಲಿ ತಾ|| ೧೭ ನೆಯ ದಿವಸ ಅಲ್ಲಿಯ ಧರ್ಮಶಾಲೆಯ ಹತ್ತರ ಬಾಂಬು ಹಾರಿದ್ದು ಒಬ್ಬನಿಗೆ ಗಾಯವಾಗಿದೆ. ಗಾಯಹೊಂದಿದವನನು ಹಿಡಿದು ಇಬ್ಬರು ಕೈದು ಮಾಡಲ್ಪಟ್ಟಿದ್ದು ಎಷ್ಟೋ ಮನೆಗಳು ಝಡತಿ ಮಾಡಲ್ಪಟ್ಟವೆ. ಕೆಲವು ಮನೆಗಳಲ್ಲಿ ಪೋಲೀಸರಿಗೆ ಪಿಸ್ತೂಲು ಹಾಗು ಬಾಂಬುಗಳು ಸಿಕ್ಕಿವೆ. ಅಂದಿನ ದಿನ ಡಿಸ್ಟ್ರಿಕ್ಟ ಬೋರ್ಡಿನ ಸಭೆಯು ಸೇರತಕ್ಕದ್ದಿದ್ದದರಿಂದ ಅಲ್ಲಿ ಬಾಂಬು ಇಡಲ್ಪಟ್ಟಿತ್ತಾಗಿ ತಿಳಿಯುತ್ತದೆ. ಗಾಯ ಹೊಂದಿದವನು ಡಿಸ್ಟ್ರಿಕ್ಟ ಬೋರ್ಡ ಶಾಲೆಯ ಶಿಕ್ಷಕನಿದ್ದಾನೆ.

ವಿಜಾಪುರ ಜಿಲ್ಲೆಯ ರಾಜಕೀಯ ಕೈದಿಗಳ ಪರಿಷತ್ತು.

ಶ್ರೀ ಜೋಶಿ ನಾರಾಯಣರಾಯರು ಅಧ್ಯಕ್ಷರಾದರು.

(ತಂತಿಯ ವಾರ್ತೆ ವಿಜಾಪುರ ತಾ|| ೨೪)

ತಾ|| ೨೭ ನೆಯ ದಿವಸ ಇಲ್ಲಿ ಜರುಗತಕ್ಕದ್ದಾಗಿರುವ ವಿಜಾಪುರ ಜಿಲ್ಲೆಯ ರಾಜಕೀಯ ಕೈದಿಗಳ ಪರಿಷತ್ತಿಗೆ ಬೆಳಗಾವಿಯ ಪ್ರಸಿದ್ಧ ಮುಖಂಡರಾದ ಶ್ರೀ ಜೋಶಿ ನಾರಾಯಣರಾಯರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದು, ಬೆಳಗಾವಿಯ ಶ್ರೀ ದಾತಾರ ಬಲವಂತರಾಯರು ಹಾಗು ಕರ್ಮವೀರ ದಿವಾಕರ ರಂಗರಾಯರು ಪರಿಷತ್ತಿಗೆ ಆಗಮಿಸತಕ್ಕವರಿದ್ದಾರೆ.

ವಿಜಾಪುರ ಹಾಗು ಇಂಡಿಯ ವ್ಯಾಪಾರಿಗಳ ಪತಿಜ್ಞೆ

(ತಂತಿಯ ವಾರ್ತೆ. ವಿಜಾಪುರ, ತಾ|| ೨೪)

ವಿಜಾಪುರ ಹಾಗು ಇಂಡಿಯ ಜವಳಿ ವ್ಯಾಪಾರಸ್ಥರು ಇನ್ನು ಮುಂದೆ ಪರದೇಶಿ ಹಾಗು ಬಹಿಷ್ಕೃತ ಗಿರಣಿಗಳಲ್ಲಿ ತಯಾರಾದ ಬಟ್ಟೆಯನ್ನು ತರಿಸುವದಿಲ್ಲವಾಗಿ ವಚನಕೊಟ್ಟಿದ್ದಾರೆ.

ಇಹವೃತ್ತ

ಚಿಕ್ಕೋಡಿಯ ಶ್ರೀಮತಿ ಪಾನಬಾಯಿ ಗುಜ್ಜರರು ತಾ|| ೨೭ ನೆಯ ದಿವಸ ಸಂಜೆಯಲ್ಲಿ ವೆಂಕಟಪೇಟೆಯ ವೆಂಕಟೇಶ ದೇವರ ಗುಡಿಯಲ್ಲಿ "ಸದ್ಯದ ಸ್ಥಿತಿಯ" ಸಂಬಂಧವಾಗಿ ಭಾಷಣಮಾಡಿದರು.

ಪೋಲೀಸರ ವಿಷಯಕ್ಕೆ ಅಸಂತೋಷವನ್ನು ಹುಟ್ಟಿಸಿದ ಸಂಬಂಧವಾಗಿ ಶ್ರೀ ನಾಗೇಂದ್ರ ಕೆರೂರ ಇವರ ಮೇಲೆ ಹಾಕಲ್ಪಟ್ಟ ಖಟ್ಲೆಯ ವಿಚಾರಣೆಯು, ನಿನ್ನಿನ ದಿವಸ ಮಾರ್ಚ ಮೂರನೆಯ ತಾರೀಖಿಗೆ ಮುಂದುವರಿಸಲ್ಪಟ್ಟಿತು.

"ಸರಕಾರದವರು ಸೇವಾದಲದ ಸಾಮಾನುಗಳನ್ನು ಮಾರತಹತ್ತಿದ್ದು, ಅವುಗಳನ್ನು ಕೊಂಡುಕೊಳ್ಳುವದು ತೀರ ನಿಂದ್ಯ ಹಾಗು ಹರಾಮು" ಇದೆಯೆಂಬುದಾಗಿ ಊರಲ್ಲಿ ಹಸ್ತಪತ್ರಿಕೆಗಳು ಹಂಚಲ್ಪಟ್ಟಿವೆ.

(ಹಿಂದಿನ ಪುಟದಿಂದ ಮುಂದುವರಿದುದು)

ಗಾಯಹೊಂದಿದವರನ್ನು ಮಾರ ಹೊಂದಿದ ಜನರನ್ನು ಅವರವರ ಮನೆಗೆ ಒಯ್ಯಲಾಯಿತು.

ಸಾಯಂಕಾಲ ಸುಮಾರು ... ವರೆಗೆ ಪೋಲೀಸರು ಅವರನ್ನು ಸೆರೆ ಹಿಡಿದರು.

ಕಾಂಗ್ರೆಸ ಜನರು ಒಟ್ಟಿಗೆ ... ಕಿಸನ ಜನರ ಜನಾಜಾಗಳನ್ನು ತೆಗೆದುಕೊಂಡು ... ಅವರೆಲ್ಲರೂ ... [illegible] ಪೋಲೀಸರ ... ಹೋಗಲಿಲ್ಲವೆಂದು ... [illegible] ಪೋಲೀಸರು ಜನರಿಗೆ ... ಹೋಗಲು ... ಕಿಸನ ಜನರ ಜನಾಜಾದಿಂದ ... [illegible] ... ಅವರು ... [illegible] ... ಪೋಲೀಸರು ... ಜನ ... [illegible] ... ಅವರು ... ಜನರನ್ನು ... [illegible] ಕೆಲವು ಜನ ಪೋಲೀಸರಿಗೂ ... [illegible] ... ಅವರನ್ನು ನಮ್ಮ ... [illegible] ... ಅವರನ್ನು ನಮ್ಮ ದೃಷ್ಟಿಗೆ ಕಂಡಿಲ್ಲ. ಅವರು ಹೇಗೆ ... [illegible] ... ಸ್ಪಷ್ಟವಾಗಿ ತಿಳಿದು ಬಂದಿಲ್ಲ ... [illegible] ... ಅವರನ್ನು ... ಗುಂಡು ... ಕಿಸನ ಜನರು ... ಪ್ರಕಾಶಿಸಿದಂತಾದ ... [illegible] ... ಎಷ್ಟೋ ಜನ ಕಿಸನರು ... [illegible] ... ಅವರಿಗೆ ಉಪದೇಶ ಮಾಡಿದರು. ... ಪೋಲೀಸರ ಮೇಲೆ ... [illegible] ... ಕಾಂಗ್ರೆಸ್‌ದವರ ... ನಡೆದ ... [illegible] ... ಅವರು ತಿಳಿಸಿದರು.

ಸಿಂಧಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ಕೊಡಗು ಪ್ರಾಂತದ ವೀರರಾಜೇಂದ್ರ ಪೇಟೆಯಲ್ಲಿ ೧೧ ಜನ ಸತ್ಯಾಗ್ರಹಿಗಳಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯಾಗಿದೆ.

ಜಮೀನು ಮಾರತಕ್ಕದ್ದಿದೆ

ಜಿಲ್ಹಾ ವಿಜಾಪೂರ ತಾ|| ಬಾಗಲಕೋಟೆ ... ಸ್ಟೇಶನ ... ಬಾಗಲಕೋಟೆಯಲ್ಲಿ ... ನಂ| ... ಎಕರೆ ೧೯ ... [illegible] ... ಪೂರ್ವಕ್ಕೆ ... ಪಶ್ಚಿಮಕ್ಕೆ ... ಉತ್ತರಕ್ಕೆ ... ದಕ್ಷಿಣಕ್ಕೆ ... ನಂ| ... ಈ ಪ್ರಕಾರ ... [illegible] ...) ನಮ್ಮ ... ಜಮೀನು (...) ಮಾರತಕ್ಕದ್ದಿದೆ. ... ತೆಗೆದುಕೊಳ್ಳಬೇಕೆನ್ನುವವರು ... [illegible] ... ನಮ್ಮ ... ಬೇಕು. ತಾ|| ...

ಬಾಳಾರಾವ ಕೇಶವರಾವ ಪೈಠಣಕರ.
ವೆಂಕಟಪೇಟ ಹಣಮಂತರಾವ ಭಸ್ಮೆ ವಕೀಲ ಇವರ ಮನೆ ಎದುರಿಗೆ ಬಾಗಲಕೋಟೆ.

ಶುದ್ಧ ಖಾದಿ!! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ ದೇಸಾಯಿ.
ಸುದರ್ಶನ ಪ್ರೆಸ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೪-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧...
ಹಿಂದೂದೇಶದ ಶಾಸನ ಪದ್ಧತಿ	೧-...

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನುಳಿದ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನು ... ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗ ದಕ್ಕಿಗೆ ಶಿಕ್ಷಣ ನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಜೋಡಬಾಜಾರ ವಿಜಾಪುರ

ಸ್ಟ್ಯಾಂಪಲ್) ಮಶಿ ಚೀಟಿಗಳು (ಪುಸ್ತಕಟಿ

ನೀಲಿ ಕಪ್ಪು, ಕೆಂಪು, ಜಾಂಬಳೆ ಮಶಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨-೦-೦	
೧ ಸಾವಿರ ಚೀಟಿಗಳಿಗೆ,	೩-೮-೦	
೫ ಸಾವಿರಕ್ಕೆ ,	೧೬-೦-೦	ರೇಲ್ವೆ ಫ್ರೀ
೫ ತೊಲಾ ಪಾಕೇಟುಗಳಿಗೆ	೧-೦-೦	
ರಬ್ಬರ ಸ್ಟ್ಯಾಂಪ ಮಶಿ ... ೧ ಡಜನ ಬಾಟ್ಲಿಗೆ	೧-೦-೦	

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದಲೂ ಎಲ್ಲ ನಮೂನೆಯ ವಾಚ ... ರ, ಟಾಯಿಂಪೀಸ ವಗೈರೆ ದುರಸ್ತು ಮಾಡಿ ಕೊಡುವದಲ್ಲದೆ ಯಾವದೇ ಕಂಪನಿಯ ... ಗಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ... ವಾಚ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ...

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಉಪಸಂಪಾದಕರು - ವೆಂಕಟೇಶ ಶೇಷಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ನಿತ್ಯ ಸಂಚಿಕೆ. ಬೆಲೆ. ೦—೦—೩.

...ಯತ್ ಪರवशं दुःखं । यद्यदात्मवशं सुखम् ॥–मनु.

ಕನ್ನಡಿಗ

KANNADIGA BAGALKOT. BI-WEEKLY ದ್ವೈವಾರ ಪತ್ರಿಕೆ

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಗುರುವಾರ ಮಿತಿ ಫಾಲ್ಗುಣ ಶುದ್ಧ ೯ ಶಕೆ ೧೮೫೨ ತಾ॥ ೨೬—೨—೩೧ [ಸಂಚಿಕೆ ೧೯೯

ಹಿಂದುಸ್ಥಾನ ಸರಕಾರಕ್ಕೆ

೧೮ ಕೋಟಿ ರೂಪಾಯಿಗಳ ಹಾನಿ

(ತಂತಿಯ ವಾರ್ತೆ ತಾ॥ ೨೫)

ಈ ವರ್ಷದ ಜಮಾಖರ್ಚಿನ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಹಿಂದುಸ್ಥಾನ ಸರಕಾರಕ್ಕೆ ಒಟ್ಟಿಗೆ ೧೮ ಕೋಟಿ ರೂಪಾಯಿಗಳು ಕಡಿಮೆ ಬಿದ್ದಿವೆಯಾಗಿ ತೋರುತ್ತದೆ.

ಪೋಲೀಸರ ಅತ್ಯಾಚಾರ ವಿಚಾರಣಾ ಮಂಡಳ

(ತಂತಿಯ ವಾರ್ತೆ, ತಾ ॥ ೨೫)

ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರ ಉತ್ತರದ ಹಾದಿ ನೋಡುತ್ತಿದ್ದು, ಈ ವರೆಗೂ ಅವರಿಂದ ಉತ್ತರ ಬಂದಿಲ್ಲ. ಈ ವಿಳಂಬವು ಮತ್ತಷ್ಟು ಚಿಂತೆಗೆ ಕಾರಣವಾಗಿದೆ. ಬಿಹಾರ ಹಾಗು ಬಂಗಾಲ ಪ್ರಾಂತಗಳ ಗವರ್ನರರು ದಿಲ್ಲಿಗೆ ಕರೆಕಳುಹಲ್ಪಟ್ಟಿದ್ದಾರೆ. ವ್ಹಾಯಿಸರಾಯರು ಅವರೊಡನೆ ಪೋಲೀಸರ ಅತ್ಯಾಚಾರಗಳ ವಿಷಯವಾಗಿ ವಿಚಾರಮಾಡಿ, ಆ ಮೇಲೆ ಮಹಾತ್ಮಾ ಗಾಂಧಿಯವರಿಗೆ ಪತ್ರ ಬರೆಯತಕ್ಕವರಿದ್ದಾರಾಗಿ ತಿಳಿದು ಬರುತ್ತದೆ. ಪೋಲೀಸರ ಅತ್ಯಾಚಾರಗಳ ಸಂಬಂಧವಾಗಿ ವಿಚಾರಣೆ ನಡಿಸಲು ಮೂವರು ಹಾಯಕೋರ್ಟ ಜಡ್ಜರದೊಂದು ವಿಚಾರಣಾ ಮಂಡಳವನ್ನು ನಿಯಮಿಸಲು ವ್ಹಾಯಿಸರಾಯರು ನಿರ್ಧರಿಸಿಕೊಂಡಿದ್ದಾರೆಂಬದಾಗಿ ಈ ಮೊದಲು ಬಂದ ವಾರ್ತೆಗಳಿಂದ ತಿಳಿದು ಬರುತ್ತದೆ.

ಹೊಸದಿಲ್ಲಿ ನಿರ್ಮಾಣಕ್ಕಾಗಿ

೧೪॥ ಕೋಟಿ ರೂಪಾಯಿಗಳು ಹಾಳಾದವು

ಕೌನ್ಸಿಲ್ ಆಫ್ ಸ್ಟೇಟದಲ್ಲಿ ಶ್ರೀ ಎಸ್. ಸಿ. ಘೋಸಮಲಿಕರವರ ಪ್ರಶ್ನೆಗೆ ಸರ್ ಜೋಸೆಫ್ ಬೋರರವರು, "ಹೊಸ ದಿಲ್ಲಿಯ ಕಟ್ಟಡ, ಬೀದಿ ಮೊದಲಾದವುಗಳಿಗಾಗಿ ಡಿಸೆಂಬರ ತಿಂಗಳದ ಕೊನೆಯ ವರೆಗೆ ಒಟ್ಟಿಗೆ ೧೪ ಕೋಟಿ ೫೦ ಲಕ್ಷ ರೂಪಾಯಿಗಳು ಖರ್ಚಾಗಿವೆ" ಯೆಂಬುದಾಗಿ ಉತ್ತರ ಕೊಟ್ಟರು. ಹಿಂದೀಯರು ಆರ್ಥಿಕ ಸ್ವಾಯತ್ತತೆಯನ್ನು ಬೇಡುತ್ತಿರುವದು ಇದಕ್ಕಾಗಿಯೇ.

ಶ್ರೀ ಗುಳವಾಡಿಯವರು ಬಿಡುಗಡೆ ಹೊಂದಿದರು.

ಸೊಲ್ಲಾಪುರ ಪಟ್ಟಣವು ಬಂಡಿನವರ ಸತ್ತೆಗೆ ಒಳಗಾದಾಗ ಅಲ್ಲಿ ರಾಷ್ಟ್ರಧ್ವಜ ಸತ್ಯಾಗ್ರಹ ಹೂಡಿದ್ದಕ್ಕಾಗಿ ೯ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದ ಇಲ್ಲಿಯ ಶ್ರೀ ಲಕ್ಷ್ಮಣ ಗುಳವಾಡಿಯವರು, ಯರವಡೆ ಜೇಲಿನಲ್ಲಿ ತಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಮೊನ್ನಿನ ದಿವಸ ಇಲ್ಲಿಗೆ ಬಂದಿದ್ದಾರೆ. ಅವರ ಪ್ರಕೃತಿಯು ನೆಟ್ಟಗಿರುವದು.

ವಿಜಾಪುರ ಜಿಲ್ಲೆಯ ರಾಜಕೀಯ ಕೈದಿಗಳ ಪರಿಷತ್ತು

ಪ್ರಕಟನೆ ೨.

ಬೆಳಗಾವಿಯ ಸುಪ್ರಸಿದ್ಧ ದೇಶಭಕ್ತರಾದ ನಾರಾಯಣರಾವ ಜೋಶಿ ಇವರು ಪರಿಷತ್ತಿನ ಅಧ್ಯಕ್ಷರಾಗಲು ಒಪ್ಪಿಕೊಂಡಿದಾರೆ. ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯ ಮುಂದಾಳುಗಳು ಪರಿಷತ್ತಿಗೆ ಆಗಮಿಸತಕ್ಕವರಿದ್ದಾರೆ. ಕೇವಲ ರಾಜಕೀಯ ಕೈದಿಗಳಲ್ಲದೆ ಜೇಲಗಳಲ್ಲಿ ರಾಜಕೀಯ ಕೈದಿಗಳು ಯಾವ ತರದ ಕಷ್ಟಗಳನ್ನು ಸಹಿಸಬೇಕಾಗುತ್ತದೆಂಬದನ್ನು ತಿಳಿದುಕೊಳ್ಳಲಪೇಕ್ಷಿಸುವವರೂ ಸಹಾನುಭೂತಿಯುಳ್ಳವರೂ ಪರಿಷತ್ತಿಗೆ ತಪ್ಪದೇ ಬರಬೇಕಾಗಿ ವಿನಂತಿ.

ಪರಿಷತ್ತು ೨೭ ನೇ ತಾರೀಖು ಶುಕ್ರವಾರ ಮುಂಜಾನೆ ೯ ಗಂಟೆಗೆ ವಿಠ್ಠಲ ಮಂದಿರದಲ್ಲಿ ಕೂಡುವದು.

ಕಾರ್ಯದರ್ಶಿಗಳು

ಪಿಕೆಟಿಂಗಕ್ಕೆ ವ್ಯಾಪಾರಿಯು ಹಣ್ಣಾದನು.

ಗದಗ—ಬೆಟಗೇರಿಯ ಸುದ್ದಿಯು

(ಸ್ವಂತ ಸುದ್ದಿಗಾರರಿಂದ)

ಇವತ್ತಿನ ದಿವಸ ಪಿ. ಕೆ. ಮಾಂಡ್ರೆಯವರ ಅಂಗಡಿಗೆ ಪಿಕೆಟಿಂಗ ಶುರು ಆಗಿ ಶಾಂತ ರೀತಿಯಿಂದ ಕೆಲಸವು ನಡೆಯಿತು. ನಿನ್ನಿನ ದಿವಸ ಈರಪ್ಪ ಇವನು ಗೊಂದಲ ಹಾಕಿದ್ದ ಕೇಳಿ ಪಿಕೆಟಿಂಗ ನೋಡಲು ಈ ದಿವಸ ಬಹಳ ಜನರು ಅಂಗಡಿಯ ಮುಂದೆ ನೆರೆದರು, ಜನರು ಟೋಳಿ ಕಟ್ಟಿಕೊಂಡು ಪಿಕೆಟಿಂಗ ನೋಡಿ ಆಶ್ಚರ್ಯಪಟ್ಟು ಹೋದರು. ಸಾಯಂಕಾಲಕ್ಕೆ ಒಬ್ಬ ಪೋಲೀಸನು ಅಂಗಡಿಯಿಂದ ಸಿಗರೇಟ ಒಯ್ಯಲು ಪ್ರಯತ್ನ ನಡಿಸಿದ್ದನ್ನು ಕಂಡು ಸ್ವಯಂಸೇವಕರು ಅವನ ಮುಂದೆ ಅಡ್ಡ ಬಿದ್ದರು. ಅದನ್ನು ಲೆಕ್ಕಿಸದೆ ಪೋಲೀಸನು ಅವರನ್ನು ತುಳಿಯುತ್ತ ಹೋದನು. ಈರಪ್ಪನ ನಿನ್ನಿನ ಉದ್ಧಾಮ ವೃತ್ತಿಯನ್ನು ಕೇಳಿ ಜನರು ಅನೇಕ ರೀತಿಯಿಂದ ಅವನಿಗೆ ಒತ್ತಾಯ ಮಾಡಿದ್ದರಿಂದ ಇವತ್ತಿನ ದಿವಸ ಮಧ್ಯಾನದಲ್ಲಿ ಒಪ್ಪಂದ ಮಾಡಿಕೊಳ್ಳಲಿಕ್ಕೆ ಕೇಳಿಕೊಂಡನು. ರಾ॥ ಹುಕ್ಕೇರಿಯವರು ಅಕಸ್ಮಾತ್ತಾಗಿ ಧಾರವಾಡದಿಂದ ಇವತ್ತಿನ ದಿವಸ ಇಲ್ಲಿಗೆ ಆಗಮಿಸಲು ಅವರ ಮುಖಾಂತರ ಒಪ್ಪಂದದ ಮಾತು ಕತೆ ನಡೆದು ಈರಪ್ಪನು ಕೆಳಗೆ ಬರೆದ ಕರಾರುಗಳಿಗೆ ಒಪ್ಪಿಕೊಂಡನು. ೧ ಅಂಗಡಿಯಲ್ಲಿದ್ದ ಸಿಗರೇಟುಗಳನ್ನು ಕಟ್ಟಿ ಮುದ್ರೆ ಹಾಕಿ ಶ್ರೀ ಭಂಗಾರಶೆಟ್ಟಿಯವರ ಅಂಗಡಿಯಲ್ಲಿಡತಕ್ಕದ್ದು ಮತ್ತು ಪರಸ್ಥಳಗಳಿಗೆ ಅವರ ಮುಖಾಂತರವಾಗಿಯೇ ಮಾರತಕ್ಕದ್ದು. ಇನ್ನು ಮೇಲೆ ಹೊಸದಾಗಿ ಸಿಗರೇಟ ತರಿಸಬಾರದು. ಈ ಮೊದಲೇ ರೇಲ್ವೆದಲ್ಲಿ ಬಂದ ಸರಕನ್ನು ಈಗೂ ಬಿಟ್ಟು ಎರಡನೆಯ ಕಡೆಗೆ ಕಳಿಸಬೇಕು. ೨ ರಾಷ್ಟ್ರಧ್ವಜಕ್ಕೆ ಈರಪ್ಪನು ಮಾಡಿದ ಅಪಮಾನದ ದೆಸೆಯಿಂದ ರಾಷ್ಟ್ರಧ್ವಜಕ್ಕೆ ವಂದನೆ ಮಾಡಿ ಅದನ್ನು ಹುಕ್ಕೇರಿಕರರಿಗೆ ಒಪ್ಪಿಸಬೇಕು.

ಮೇಲೆ ಬರೆದ ಕರಾರುಗಳಿಗೆ ಈರಪ್ಪನು ಮತ್ತು ಮಾಂಡ್ರೆಯವನು ನೆರೆದ ಯಾವತ್ತು ಜನರ ಎದುರಿಗೆ ಕ್ಷಮೆ ಬೇಡಿಕೊಂಡ ನಂತರ ಪಿಕೆಟಿಂಗ ತೆಗೆಯಲಾಯಿತು.

ಸಿಂದಿ ಅಂಗಡಿಗಳ ಲಿಲಾವು ನಿಂತು ಹೋಯಿತು

ಮುಂಬಯಿಯ ಬಾಂದ್ರಾ ವಿಭಾಗದ ಮಾಮಲೇದಾರ ಕಚೇರಿಯಲ್ಲಿ ತಾ॥ ೨೦ ನೆಯ ದಿವಸ ಸಿಂದಿ ಅಂಗಡಿಗಳ ಲಿಲಾವು ನಡೆಯುತ್ತಿದ್ದಿತು. ಅಧಿಕಾರಿಗಳು ೧೯ನೆಯ ಕಲಮಿನನ್ವಯ ನೋಟೀಸು ಹೊರಡಿಸಿ ಪಿಕೆಟಿಂಗ ಮೊದಲಾದವುಗಳು ಜರುಗಕೂಡದಾಗಿ ಅಪ್ಪಣೆ ವಿಧಿಸಿದ್ದರು. ೭೦ ಜನ ಸ್ತ್ರೀಯರು ಅಪ್ಪಣೆಯನ್ನು ಅಮಾನ್ಯ ಮಾಡಿ ಪಿಕೆಟಿಂಗ ಮಾಡುವದಾಗಿ ಅಧಿಕಾರಿಗಳಿಗೆ ತಿಳಿಸಿ ಅಂದು ಕಚೇರಿಯ ಮುಂದೆ ಹೋಗಿ ನಿಂತುಕೊಂಡರು. ಪೋಲೀಸರಾದರೂ ಕಚೇರಿಯ ಸುತ್ತಲು ಕಾವಲು ಇಟ್ಟುಕೊಂಡು ನಿಂತಿದ್ದರು.

ಇತ್ತ ಸಿಂದಿ ಅಂಗಡಿಗಳನ್ನು ಲಿಲಾವಿನಲ್ಲಿ ಹಿಡಿಯತಕ್ಕವರೆಲ್ಲರೂ ಶ್ರೀ ಬಿ. ಬಿ. ಮುನಸೂಫರ ಮನೆಯಲ್ಲಿ ಒತ್ತಟ್ಟಿಗೆ ಕಲೆತು ಕಾಂಗ್ರೆಸ್ ಕಾರ್ಯಕರ್ತರೊಡನೆ ವಿಚಾರ ಮಾಡಿದರು. ಈ ದಿನ ಸಿಂದಿ ಅಂಗಡಿಗಳನ್ನು ಲಿಲಾವಿನಲ್ಲಿ ಯಾರೂ ಹಿಡಿಯತಕ್ಕದ್ದಲ್ಲವೆಂದೂ ಮಹಾತ್ಮಾ ಗಾಂಧಿ ಹಾಗು ವ್ಹಾಯಿಸರಾಯರ ನಡುವೆ ನಡೆದ ಚರ್ಚೆಯ ಫಲಿತಾಂಶವು ತಿಳಿದು ಬರುವವರೆಗೆ ಲಿಲಾವನ್ನು ಮುಂದರಿಸಬೇಕಾಗಿ ಕಲೆಕ್ಟರರಿಗೆ ಕೇಳಿಕೊಳ್ಳತಕ್ಕದ್ದೆಂದೂ ಅವರು ನಿರ್ಧರಿಸಿಕೊಂಡರು. ಕಲೆಕ್ಟರರಿಗೆ ಅದರಂತೆ ತಿಳಿಸಿದರು. ಕಲೆಕ್ಟರರು ಲಿಲಾವನ್ನು ೧೧ ನೆಯ ತಾರೀಖಿಗೆ ಮುಂದರಿಸಿದರು.

ಶ್ರೀ ಹುಕ್ಕೇರಿಯವರಿಗೆ ೩ ತಿಂಗಳ ಕಠಿಣ ಶಿಕ್ಷೆ

ಹಾವೇರಿ ತಾಲೂಕದಲ್ಲಿಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರಿಗೆ, ಇ. ಪಿ. ಕೋಡಿನ ೧೧೭ ಹಾಗು ಉಪ್ಪಿನ ಕಾಯದೆಯ ೪೭ ನೆಯ ಕಲಮಿನನ್ವಯ, ೧೦೦ ರ. ದಂಡ ಇಲ್ಲವೆ ೩ ತಿಂಗಳ ಕಠಿಣ ಶಿಕ್ಷೆಯು ದೊರಕಿದ್ದು ಅವರು ದಂಡ ಕೊಡದೆ ಕಾರಾಗೃಹಕ್ಕೆ ತೆರಳಿದರು. ಹೋದ ತಿಂಗಳಲ್ಲಿ ಹೊಸರಿತ್ತಿಯಲ್ಲಿ ಜಾತ್ರೆ ನಡೆದಾಗ ಅಲ್ಲಿ ಪರದೇಶಿ ವಸ್ತುಗಳ ಬಹಿಷ್ಕಾರ ಕಾರ್ಯವನ್ನು ಇವರು ಬಲ್ಲೇ ಜೋರಿನಿಂದ ಸಾಗಿಸಿದ್ದರು.

ಮಹಾತ್ಮರ ಸಂದೇಶ

"ಒಪ್ಪಂದದ ಕಡೆಗೆ ಲಕ್ಷ್ಯಕೊಡದೆ ಚಳವಳಿಯನ್ನು ಸಾಗಿಸಿರಿ"

ಮಹಾತ್ಮಾ ಗಾಂಧಿಯವರು ಈಗ ದಿಲ್ಲಿಯಲ್ಲಿ ಸಂಧಾನದ ಕಾರ್ಯದಲ್ಲಿ ತೊಡಗಿಕೊಂಡಿರುವದರಿಂದ ಗುಜರಾಥದಲ್ಲಿ ಪ್ರವಾಸ ಮಾಡುವದು ಅವರಿಗೆ ಶಕ್ಯವಿರುವದಿಲ್ಲ. ಆದ್ದರಿಂದ ಅವರು ತಮ್ಮ ಅನುಯಾಯಿಗಳಿಗೆ ಒಪ್ಪಂದದ ಕಡೆಗೆ ಲಕ್ಷ್ಯ ಕೊಡದೆ ಚಳವಳಿಯನ್ನು ಸಾಗಿಸಲು ಸಂದೇಶಕೊಟ್ಟಿದ್ದಾರೆ.

ಮಾಮಲೇದಾರರ ಸುಳ್ಳು ಹೊರಬಿತ್ತು

ಅಂಕೋಲಾ ತಾಲೂಕದ ಮಾಮಲೇದಾರರು ರೈತರಿಗೆ "ತೀರ್ವೆಯನ್ನು ಕೊಟ್ಟು ಬಿಡಿರಿ. ನಿಮ್ಮ ಮೇಲೆ ಬಹಿಷ್ಕಾರ ಹಾಕುವದಿಲ್ಲವೆಂದು ಡಾ. ಹರ್ಡೀಕರರು ಹೇಳಿದ್ದಾರೆ" ಎಂಬುದಾಗಿ ಉಪದೇಶಿಸುತ್ತಿರುವದು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆಯಷ್ಟೆ ಫ್ರೀಪ್ರೆಸ್‌ದ ಪ್ರತಿನಿಧಿಯು ಡಾ. ಹರ್ಡೀಕರರನ್ನು ಕಂಡುಕೊಂಡು ಈ ಸಂಬಂಧವಾಗಿ ಅವರ ಅಭಿಪ್ರಾಯ ಕೇಳಿದನು. ಆಗ ಡಾ. ಹರ್ಡೀಕರರು ಕೆಳಗಿನಂತೆ ತಿಳಿಸಿದರು

'ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಪ್ರಕಾರ ಮಾಮಲೇದಾರರು ಹೇಳಿದ್ದರೆ ಅದು ತೀರ ತಪ್ಪು ಇರುತ್ತದೆ. ಈ ಸಂಬಂಧವಾಗಿ ಮಾಮಲೇದಾರರಿಗೆ ಇಲ್ಲವೆ ಇತರರಿಗೆ ನಾನು ಯಾವ ಆಶ್ವಾಸನವನ್ನೂ ಕೊಟ್ಟಿಲ್ಲ. ಮಾಮಲೇದಾರರೊಡನೆ ಮಾತಾಡುವ ಪ್ರಸಂಗವೇ ನನಗೆ ಬಿದ್ದಿಲ್ಲ. ಕಾರಣ ಇಂಥವುಗಳನ್ನು ನಂಬಿ ಯಾರೂ ಮೋಸ ಹೋಗಬಾರದು.

ಬೆಂಗಳೂರಿನಲ್ಲಿ ವೈ. ವಾ. ವಾಸುದೇವಾಚಾರ್ಯ ಶಾಂತಕವಿ ಇವರ ಚಿತ್ರಪಟಗಳ ಅನಾವರಣ.

೧೮ ನೆಯ ತಾ॥ ದಿವಸ ಸಾಯಂಕಾಲ ಬೆಂಗಳೂರ "ಇಂಟರಮಿಡಿಯಟ್ ಕಾಲೇಜ" ಭವನದಲ್ಲಿ ಕರ್ನಾಟಕ ಸಂಘದ ೧೩ ನೆಯ ವಾರ್ಷಿಕೋತ್ಸವವು ಧಾರವಾಡದ ಶ್ರೀ ಬಸವನಾಳರ ಅಧ್ಯಕ್ಷತೆಯಲ್ಲಿ ನಡೆದು, ವೈ. ವಾ. ಕೆರೂರ ವಾಸುದೇವಚಾರ್ಯರು ಹಾಗು ವೈ. ವಾ. ಶಾಂತಕವಿಗಳು ಇವರ ಛಾಯಾಚಿತ್ರಗಳ ಅನಾವರಣ ಸಮಾರಂಭವು ಯಥೋಚಿತವಾಗಿ ಸಾಂಗವಾಯಿತು. ಆ ಸಮಯದಲ್ಲಿ ಶ್ರೀ ಬಸವನಾಳರು 'ಕರ್ನಾಟಕ ಏಕೀಕರಣ' 'ಕರ್ನಾಟಕ ವಿಶ್ವವಿದ್ಯಾಲಯ' ವಾಸುದೇವಚಾರ್ಯರು ಹಾಗು ಶಾಂತಕವಿಗಳ ಸಾಹಿತ್ಯಸೇವೆ ಇವುಗಳ ಕುರಿತು ಬಹು ಸಾರವತ್ತಾದ ಭಾಷಣ ಮಾಡಿದರು.

ಬೋರಸಾದದ ಅತ್ಯಾಚಾರ!

ತಾ|| ೧೫ ನೆಯ ಜನೆವರಿ ದಿವಸ ಸಾಬರಮತಿ ಸತ್ಯಾಗ್ರಹ ಆಶ್ರಮದ ಶ್ರೀಮತಿ ಲೀಲಾವತಿ ಬೇನ್ ಆಸಾರ ಇವರನ್ನು ಸೆರೆಹಿಡಿದೊಯ್ದು ಪೋಲೀಸ ಚೌಕಿಯಲ್ಲಿ ಅವರಿಗೆ ಹೊಡೆಯಲಾಯಿತು. ಅದರಂತೆ ಮೆರವಣಿಗೆಯಲ್ಲಿಯ ಉಳಿದ ಜನರಿಗೂ ಹೊಡತ ಬಿದ್ದವು. ಈ ಪೋಲೀಸರ ಅತ್ಯಾಚಾರವನ್ನು ನಿಷೇಧಿಸುವ ಕುರಿತು ತಾ|| ೨೧ ನೆಯ ಜಾನೆವರಿ ದಿವಸ ಜಿಲ್ಹೆಯಲ್ಲಿ ಎಲ್ಲೆಲ್ಲಿಯೂ "ಪೋಲೀಸ ಅತ್ಯಾಚಾರ ನಿಷೇಧ ದಿನ"ವು ಪಾಲಿಸಲ್ಪಡಬೇಕಾಗಿ ಖೇಡಾ ಜಿಲ್ಹೆಯ ಕಾಂಗ್ರೆಸ್ ಕಮೀಟಿಯವರು ಅಪ್ಪಣೆ ಹೊರಡಿಸಿದರು. ಈ ಆಜ್ಞೆಗನುಸಾರವಾಗಿ ಬೋರಸಾದದಲ್ಲಿ ಅಂದು "ಪೋಲೀಸ ಅತ್ಯಾಚಾರ ನಿಷೇಧ ದಿನ" ವನ್ನು ಪಾಲಿಸಲಾಯಿತು. ಆ ದಿನ ಹೊರಟ ಮೆರವಣಿಗೆಯಲ್ಲಿ ಕಾಯಿದೆ ಭಂಗ ಚಳವಳಿಯಲ್ಲಿ ಭಾಗ ತೆಗೆದುಕೊಂಡ ಪಾಟೀದಾರ ಜನರ ಸ್ತ್ರೀಯರು ಪ್ರಮುಖ ಭಾಗ ವಹಿಸಿದ್ದರು. ಮೆರವಣಿಗೆಗೆ ಅಧಿಕಾರಿಗಳು ಅಡ್ಡಿಯನ್ನುಂಟು ಮಾಡದಿದ್ದರೂ, ಪೋಲೀಸರು ಮೆರವಣಿಗೆಯಲ್ಲಿಯ ಸ್ತ್ರೀಯರ ಮೇಲೆ ಹಲ್ಲೆ ಮಾಡಿದರು. ಮತ್ತು ಮೆರವಣಿಗೆಯಲ್ಲಿ ಸೇರಿಕೊಳ್ಳದಿದ್ದ ಪುರುಷರನ್ನು ಯಥೇಚ್ಛವಾಗಿ ಥಳಿಸಿದರು

ಈ ಪ್ರಕರಣದ ಸಂಬಂಧವಾಗಿ ವಿಚಾರಣೆ ಮಾಡಿಕೊಂಡು ಬರಲು ಭಾರತ ಸೇವಾ ಸಂಘದವರು ಶ್ರೀ ಬಖಲೆ ಮತ್ತು ಚಿತಾಳೆಯೂ ಇವರನ್ನು ನಿಯಮಿಸಿದರು ಅವರು ಬೋರಸಾದಕ್ಕೆ ಹೋಗಿ ಎಲ್ಲ ಸ್ಥಿತಿಗತಿಗಳನ್ನು ನಿರೀಕ್ಷಿಸಿ ಗಾಯ ಹೊಂದಿದವರ ಹಾಗು ಅವರ ಬಂಧು ಬಳಗದವರ ಜವಾಬು ತೆಗೆದುಕೊಂಡು ಸ್ವತಂತ್ರವಾಗಿ ವಿಚಾರಣೆ ನಡಿಸಿ, ಒಂದು ವರದಿಯನ್ನು ಪ್ರಸಿದ್ಧ ಮಾಡಿದ್ದು ಅದರ ಸಾರಾಂಶವೇನಂದರೆ

೧. ತಾ||೧೫ ನೆಯ ಜಾನೆವಾರಿ ದಿವಸದ ಪೋಲೀಸರ ಅತ್ಯಾಚಾರವನ್ನು ನಿಷೇಧಿಸುವದಕ್ಕಾಗಿಯೇ ತಾ||೨೧ ನೆಯ ಜಾನೆವರಿ ದಿವಸ ಮೆರವಣಿಗೆಯು ಹೊರಟಿತ್ತು. ೨ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳಲು ಎಂಟು ತಂಡಗಳು ಬೋರಸಾದಕ್ಕೆ ಬಂದಿದ್ದು, ಅವುಗಳಲ್ಲಿ ಆರು ತಂಡದವರು ಧರ್ಮಶಾಲೆಗಳಲ್ಲಿ ಇಳಕೊಂಡಿದ್ದರು. ೩. ಮೆರವಣಿಗೆಯಲ್ಲಿ ೧೪೦೦ ಕ್ಕಿಂತ ಹೆಚ್ಚಿಗೆ ಜನರು ಭಾಗ ತೆಗೆದುಕೊಂಡಿದ್ದಿಲ್ಲ. ೪ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳುವ ಉದ್ದೇಶದಿಂದ ಹೊರಗಿನ ಊರವರು ತಾ||೨೧ ನೆಯ ದಿವಸ ೧೦ ಘಂಟೆಯೊಳಗಾಗಿ ಬೋರಸಾದಕ್ಕೆ ಬಂದಿದ್ದಿಲ್ಲ. ೫, ಸ್ತ್ರೀಯರ ಇಲ್ಲವೆ ಮೆರವಣಿಗೆಯ ಸಂಗಡ ಹೋಗಿರುವ ಪುರುಷರ ಸಂಖ್ಯೆಯು ೫೫ ಇಲ್ಲವೆ ೬೦ ಕ್ಕಿಂತ ಹೆಚ್ಚಿಗೆ ಇರಲಿಲ್ಲ. ೬, ಮೆರವಣಿಗೆಯಲ್ಲಿ ಕೇವಲ ಸ್ತ್ರೀಯರೇ ಭಾಗ ತೆಗೆದುಕೊಂಡಿದ್ದರು. ೭ ಬಾರಿಯಾ ಬಂದವರಿಗೆ ನೀರು ಸಿಗುವಂತೆ ಬೋರಸಾದ ಪಾಂಜರಪೋಳಿಯವರು ವ್ಯವಸ್ಥೆಯನ್ನಿಟ್ಟಿದ್ದರು. ಆದರೆ ಪೋಲೀಸರು ನೀರಿನ ಥಾಂಡೆಯನ್ನು ಒಡೆದು ನೀರನ್ನು ಚಲ್ಲಿದರೆಂದು ತಿಳಿದು ಬರುತ್ತದೆ. ೮ ಮಧ್ಯಾನದಲ್ಲಿ ೧೧|| ಯಿಂದ ೧೨ ಘಂಟೆಯವರೆಗೆ ಪೋಲೀಸರು ಬರೇ ಸ್ಟ್ರೀಟದಲ್ಲಿ ಸಂಚರಿಸಿ ಅಲ್ಲಿಯ ವ್ಯಾಪಾರಸ್ಥರಿಗೆ ಅಂಗಡಿಗಳನ್ನು ಮುಚ್ಚಹಚ್ಚಿದರು. ಈ ಸಮಯದಲ್ಲಿ ಅವರು ಕೆಲವು ಅಂಗಡಿಕಾರರಿಗೂ ಹಾಗು, ಗಿರಾಕಿಗಳಿಗೂ ಹೊಡೆದರು. ಅಲ್ಲಿಯ ವಾಚನಾಲಯದಲ್ಲಿ ಪೋಲೀಸರು ಒಳಹೊಕ್ಕು ಅಲ್ಲಿ ಓದುತ್ತ ಕುಳಿತ ಜನರನ್ನು ಹಾಗು ವ್ಯವಸ್ಥಾಪಕರನ್ನು ಹೊಡೆದರು. ೧೦, ಸರಕಾರದವರ ಎರಡನೇಯ ಪ್ರಕಟನೆಯಲ್ಲಿ ಗಾಯ ಹೊಂದಿದವರ ಹೆಸರುಗಳನ್ನು ಕೊಡಲ್ಪಟ್ಟಿದ್ದು ಅವರು ಮೆರವಣಿಗೆಯಲ್ಲಿ ಸೇರಿರದಿದ್ದರೂ, ಅವರಿಗೆ ಬಡಕಗಳು ಬಿದ್ದವೆ ಗಾಯಹೊಂದಿದ ಪುರುಷರ ಹೆಸರುಗಳನ್ನು ಗಾಯ ಹೊಂದಿದ ಸ್ತ್ರೀಯರ ಪಟ್ಟಿಯಲ್ಲಿ ಸೇರಿಸಿ, ಅಲ್ಲಿಯ ಪರಿಸ್ಥಿತಿಯ ವಿಷಯವಾಗಿ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಮಾಡುವದಕ್ಕೂ, ಪೋಲೀಸರು ಸ್ತ್ರೀಯರನ್ನು ಹೊಡೆದದ್ದನ್ನು ಬಚ್ಚಿಟ್ಟುಕೊಳ್ಳುವದಕ್ಕೂ ಸರಕಾರೀ ಪ್ರಕಟನೆಯಲ್ಲಿ ತಿಳಿದೂ ತಿಳಿದೂ, ಪ್ರಯತ್ನ ಮಾಡಲಾಗಿದೆ.

ಇಹವೃತ್ತ

ಚಿಕ್ಕೋಡಿಯ ಶ್ರೀಮತಿ ಜಾನಬಾಯಿಯವರು ನಿನ್ನಿನ ದಿವಸ ಸಂಜೆಯಲ್ಲಿ ಮುರಲೀಧರ ದೇವಾಲಯದಲ್ಲಿ ಸಧ್ಯದ ಸ್ಥಿತಿಯ ವಿಷಯವಾಗಿ ಭಾಷಣ ಮಾಡಿದರು.

ಬಹು ದಿನಗಳಿಂದ ಬೀದಿಯ ಆಚೆ ಬೆಗೆ ಒಗೆಸಿದ ಉಸುಕನ್ನು ಮ್ಯುನಸಿಪಾಲಟಿಯವರು ಏನೋ ಏನೋ ನಿನ್ನಿನ ದಿವಸ ಬೀದಿಯ ಮೇಲೆ ಹಾಕಿಸಿ, ಕಾಲು ಸುಡುತ್ತಿರುವದನ್ನು ಹಾಗು ಧೂಳು ಆಡರುತ್ತಿರುವದನ್ನು ಹೋಗಲಾಡಿಸಲು ಉಪಕ್ರಮ ಮಾಡಿದ್ದಾರೆ. ಅಭಿನಂದಿಸಬೇಕು! ಯಾಕಂದರೆ ಇಷ್ಟು ಕಾರ್ಯದಕ್ಷ ನಗರ ರಕ್ಷಕರು ಬಾಗಲಕೋಟೆಗೆ ದೊರೆತದ್ದು ಬಾಗಲಕೋಟೆಯವರ ಪುಣ್ಯ!

ಗಂಗಾವತಿಯವರ ಮೇಲೆ ಪೋಲೀಸರ ಕಡೆಗಣ್ಣು.

ಮುದ್ದೇಬಿಹಾಳದಲ್ಲಿ ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ಅನ್ವಯ ಶಿಕ್ಷೆಗೆ ಗುರಿಯಾಗಿ ಹಾಯಕೋರ್ಟಿನ ಪುನರ್ವಿಚಾರಣೆಯಲ್ಲಿ ನಿರ್ದೋಷಿಯಾಗಿ ನಿರ್ಣಯಿಸಲ್ಪಟ್ಟು ವಿಸಾಪುರ ಜೇಲಿನಿಂದ ಬಿಡುಗಡೆ ಹೊಂದಿದ ಶ್ರೀ. ಜಿ. ಬಿ. ಗಂಗಾವತಿಯವರು, ನಮಗೆ ತಾ|| ೨೩ ನೆಯ ದಿವಸ ರಾಯಚೂರಿನಿಂದ ಒಂದು ಪತ್ರ ಬರೆದಿದ್ದು, ಅದನ್ನು ಇದ್ದಕ್ಕಿದ್ದಂತೆ ಕೆಳಗೆ ಕೊಟ್ಟಿದೆ. ವಿಜಾಪುರ ಜಿಲ್ಹೆಯ ರಾಜಕೀಯ ಸೆರೆಯಾಳುಗಳ ಪರಿಷತ್ತಿನವರು ಇತ್ತ ಕಡೆಗೆ ಲಕ್ಷ್ಯಕೊಡಬೇಕು. "ನಾನು ತಾ|| ೨೦-೨-೩೧ ನೆಯ ದಿವಸ ವಿಸಾಪೂರ ಟೆಂಪರರಿ ಜೇಲಿನಿಂದ ಬಿಡುಗಡೆ ಹೊಂದಿದೆನು, ಮರು ದಿವಸ ಮುಂಜಾನೆ ೬ ಗಂಟೆಗೆ ಇಲ್ಲಿಗೆ ಬಂದು ತಲುಪಿದೆನು. ನನ್ನನ್ನು ಇಲ್ಲಿಗೆ 'ಡಿಪೋರ್ಟ' (ಹದ್ದುಪಾರು) ಮಾಡಿರುವರು. ನನ್ನ ಸಂಗಡ ಒಬ್ಬ ರೇಲ್ವೆ ಪೋಲೀಸನು ಇಲ್ಲಿಯ ವರೆಗೂ ಬಂದು ಇಲ್ಲಿಯ ಸಿಟಿ ಪೋಲೀಸರ ಚಾರ್ಜಿನಲ್ಲಿ (ವಶದಲ್ಲಿ) ನನ್ನನ್ನು ಕೊಟ್ಟು ಹೋದನು. ಬ್ರಿಟಿಶ ಹಿಂದುಸ್ಥಾನದಿಂದ ಹೊರಗೆ ಹಾಕಿರುವ ಆರ್ಡರ ಪತ್ರಿಕೆಯನ್ನು (ಆಜ್ಞಾಪತ್ರ) ನನಗೆ ಕೊಟ್ಟಿದ್ದಾರೆ. ಇಲ್ಲಿಯ ಪೋಲೀಸ ಫೌಜದಾರರು ನನ್ನ ಹಿಂದೆ ಒಬ್ಬ ಜವಾನನನ್ನು ಹಚ್ಚಿದ್ದಾರೆ. ಆದರೆ ಒಬ್ಬ ಪೋಲೀಸನು ದಿನಾಲು ನಾನು ಇರುವ ಸ್ಥಳಕ್ಕೆ ಎರಡು ಮೂರು ಸಾರೆ ಬಂದು ಹೋಗುತ್ತಾನೆ 'ಎಲ್ಲಿಗಾದರೂ ಹೋಗಬೇಕಾದರೆ ನಮಗೆ ತಿಳಿಸಿರಿ; ನಾವು ನಿಮ್ಮನ್ನು ಕಳಿಸಿಕೊಡುವೆವು; ಇಲ್ಲದಿದ್ದರೆ ನೆಟ್ಟಗಾಗಲಿಕ್ಕಿಲ್ಲ" ಎಂದು ಫೌಜದಾರರು ಹೇಳಿದ್ದಾರೆ. ಇನ್ನು ಎರಡು ಮೂರು ದಿವಸದಲ್ಲಿ ಗುಲಬುರ್ಗಾಕ್ಕೆ ಹೋಗುವೆನು. ವಿಜಾಪುರದಲ್ಲಿ ಪ್ರಿಜನರ್ಸ್ ಕಾನ್ಫರನ್ಸ (ಸೆರೆಯಾಳುಗಳ ಪರಿಷತ್ತು) ಕೂಡುವದು ಗೊತ್ತಾಗಿದೆ. ಬರಬೇಕೆಂದು ಅಪೇಕ್ಷೆಯಿದೆ, ಆದರೆ ವಿಚಾರವಾಡಿ ಬರಬೇಕಾಗುವದು"

ಮಹಾತ್ಮಾ ಗಾಂಧಿಯವರು 'ಯಂಗ ಇಂಡಿಯಾ' ಪತ್ರಿಕೆಯ ಸಂಪಾದಕತ್ವವನ್ನು ಪುನಃ ವಹಿಸಿಕೊಂಡಿರುವರಾಗಿ ತಿಳಿಯುತ್ತದೆ.

ಕರನಿರಾಕರಣೆಯ ಚಳವಳಿಯ ವಿರುದ್ಧವಾಗಿ ವ್ಹಾಯಿಸರಾಯರು ಹೊರಡಿಸಿದ 'ಅನ್‌ಲಾಫುಲ್ ಇನಸ್ಟಿಗೇಶನ್ ಆರ್ಡಿನನ್ಸ' ಬಂಗಾಲ ಇಲಾಖೆಯಲ್ಲಿಯೂ ಬಳಕೆಯಲ್ಲಿ ತರಲ್ಪಟ್ಟಿದೆ

ಸಿರಸಿ ತಾಲೂಕದಲ್ಲಿ ಸ್ತ್ರೀಯರ ಧೀರತನ.

ಸಿರಸಿ ತಾಲೂಕದ ಸುಗ್ಗಾವಿ ಎಂಬಲ್ಲಿ ಒಂದು ಪೈಸಹ ತೀರ್ವೆ ಹಣ ವಸೂಲಾಗಲಿಲ್ಲ. ಆಗ ಶಾನಭೋಗರು ಅಲ್ಲಿಯ ಮುಖಂಡರಾದ ಶ್ರೀ ಗೋವಿಂದಭಟ್ಟ ಹೆಗಡೆ ಇವರಿಗೆ 'ನೋಡಿರಿ! ತೀರ್ವೆ ಹಣ ಕೊಡದಿದ್ದರೆ ನಿಮಗೆ ನಾನಾತರದ ಕಷ್ಟವನ್ನು ಹೊಂದಬೇಕಾದೀತು' ಎಂದು ಬೋಧ-ಮಾಡಹತ್ತಿದರು. ಆಗ ಶ್ರೀ ಗೋವಿಂದ ಭಟ್ಟರ ಪತ್ನಿಯವರು ಶಾನಭೋಗರಿಗೆ ಹೇಳಿದ್ದೇನೆಂದರೆ 'ನಾವು ಯಾವುದಕ್ಕೂ ಹೆದರುವವರಲ್ಲ, ದೇಶದ ಮೇಲೆ ಇಂತಹ ಗಂಡಾಂತರ ಒದಗಿರುವಾಗ ನಾವು ಮಾತ್ರ ಸುಖದಿಂದಿರಬೇಕೆ? ಎಂದೆಂದಿಗೂ ಆಗದು. ಆದುದರಿಂದ ಎಂಥ ಕಷ್ಟ ಬಂದರೂ ನಾವು ಸಹಿಸಲು ತಯಾರಿದ್ದೇವೆ. ಆದರೆ ತೀರ್ವೆ ಹಣವನ್ನು ಮಾತ್ರ ಎಂದೆಂದಿಗೂ ಕೊಡಲಾರೆವು' ಎಂದು ಖಂಡಿತವಾಗಿ ಉತ್ತರಕೊಟ್ಟರು.

ಜನಗಣತಿಯು

ಬೀಳಗಿಬಲ್ಲನ ಕಾರ್ಯ ಲೆಖ್ಖನಾಯಿತು

ಇಲ್ಲಿ ಈ ಸರತಿಯ ಜನಗಣತಿಯ ಲೆಖ್ಖ, ಬೀಳಗಿಬಲ್ಲನ ಅಂಬರ್ಷಿಗೆ ಹೇಳಿದ ಕಾಗೆಗಳ ಲೆಖ್ಖದಂತೆ ಆಗಿರುವಂತೆ ಕಾಣುತ್ತಿದೆ. ಯಾಕೆಂದರೆ ಶ್ಯಾನುಭೋಗರು ತಮ್ಮ ತಮ್ಮ ಹಳ್ಳಿಗಳಲ್ಲಿ ಹೋಗಲು ಸಿಗಲಿಲ್ಲವಾದ್ದರಿಂದ ಅಂದಾಜಿನ ಮೇಲೆ ಜನಗಣತಿಯ ಪತ್ರಿಕೆಗಳನ್ನು ತುಂಬಿ ಅವುಗಳನ್ನು ಕಚೇರಿಗೆ ಕೊಟ್ಟು ಕಳಿಸಿದ್ದಾರೆ.

ಕುರಾಣಕ್ಕೆ ಬೆಂಕಿಹಚ್ಚಿದ್ದಕ್ಕೆ ಶಿಕ್ಷೆಯಾಯಿತು

ಕೆಲವು ದಿನಗಳ ಹಿಂದೆ ಢಾಕಾದಲ್ಲಿ ಸಂಭವಿಸಿದ ದಂಗೆಯ ಕಾಲಕ್ಕೆ ಮಸೀದೆಯಲ್ಲಿ ಕೊಟ್ಟ ಕುರಾಣಕ್ಕೆ ಬೆಂಕಿ ಹಚ್ಚಿದ್ದಕ್ಕಾಗಿ ಶ್ರೀ ನರೇಂದ್ರನಾಥ ಘೋಷ ಇವರಿಗೆ ೧ ವರ್ಷ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಪ್ಲಾಟಂ ಮಾರತಕ್ಕದ್ದಿದೆ

ಡಿಸ್ಟ್ರಿಕ್ಟ ವಿಜಾಪೂರ ಸ|ಡಿ| ಬಾಗಲಕೋಟೆ ತಾಲೂಕ ಪೈಕಿ ಕಸಬಾ ಬಾಗಲಕೋಟೆಯಲ್ಲಿ ರಿ|| ಸ|| ನಂ| ೨೯೦ ಎಕರೆ ೧೯–೩ ಆಕಾರ ೧೭೪. ಇದಕ್ಕೆ ಚತುಃಸೀಮಾ- ಪೂರ್ವಕ್ಕೆ ಹಳ್ಳ. ಪಶ್ಚಿಮಕ್ಕೆ ಸ|ನಂ| ೨೯೫. ಉತ್ತರಕ್ಕೆ ಕಲಾದಗಿ ಲೈನ ದಕ್ಷಿಣಕ್ಕೆ ಸ| ನಂ| ೧೬೭ ಈ ಪ್ರಕಾರ ಚತುಃಸೀಮಾ (ನಾರಯಣ ರಾವ ದಾಸ ಗುಡಿ ಎದುರಿಗಿರುವ) ನಮ್ಮ ಖಾತೆ ವಹಿವಾಟಿಯ ಜಮೀನು (ಪ್ಲಾಟುಗಳು) ಮಾರತಕ್ಕದ್ದಿದೆ. ಖರೀದಿ ಮಾಡಿಗೆದುಕೊಳ್ಳಲಿಚ್ಛಿಸುವವರು ಕೆಳಗೆ ಸಹಿಮಾಡಿದವರ ಸಂಗಡ ಪತ್ರವ್ಯವಹಾರ ಇಲ್ಲವೆ ಸಮಕ್ಷಮ ಭೆಟ್ಟಿಯಾಗಬೇಕು. ತಾ|| ೨೩-೨-೧೯೫೧

ಬಾಬೂರಾವ ಕೇಶವರಾವ ಪೈಠಣಕರ.
ವೆಂಕಟಪೇಟ ಹಣಮಂತರಾವ ಭಟ್ಟ ವಕೀಲ ಇವರ ಮನಿ ಎದುರಿಗೆ ಬಾಗಲಕೋಟೆ.

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದಬಗ್ಗೆ ಶಿಕ್ಷಣ ಕೂಡಾ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಕೊತಬಾಜಾರ ವಿಜಾಪುರ

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಮ ಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟ

ಜಾಹೀರ ನೋಟೀಸು

ನಾನು ರಾಚಪ್ಪಾ ತಂದಿ ಹಾವಪ್ಪಾ ದುದ್ದಗಿ ಸಾ|| ಹುನಗುಂದ ತಾಲೂಕ ಮುಜಕೂರ ಈತನು ಈ ಜಾಹೀರ ನೋಟೀಸಿನ ಮೂಲಕ ಜಾಹೀರ ಪಡಿಸುವದೇನಂದರೆ—

ಹುನಗುಂದ ಗ್ರಾಮದಲ್ಲಿರುವ ನನ್ನ ದತ್ತಕತಾಯಿ ಕಾಳವ್ವಾ ಕೋಮ ಹಾವಪ್ಪಾ ದುದ್ದಗಿ ಈಕೆ ಅಜಮಾಸ ಒಂದು ತಿಂಗಳ ಹಿಂದೆ ಪ್ರಾಣೇಶಾಚಾರ್ಯ ಗುಡ್ಡದ ಸಾ|| ಹುನಗುಂದದ ವ ಬಸಪ್ಪಾ ಹೊಸಮನಿ ಸಾ|| ಅಮೀನಗಡ ವಗೈರೆ ಸ್ವಾರ್ಥಸಾಧಣೆಯ ಮತಲಬದ ಮಾತುಗಳಿಗೆ ಫಸಾಯಿಸಿ ಮನೆಯಲ್ಲಿಯ ಅಜಮಾಸ ಐದುಸಾವಿರ ರುಪಾಯಿಗಳ ಬೆಲೆಬಾಳುವ ಯಾವತ್ತೂ ಬೆಳ್ಳಿ ಭಂಗಾರದ ದಾಗೀನೆಗಳನ್ನು ಸಹಾ ತಗೊಂಡು ಹೋಗಿ ಅಮೀನಗಡದಲ್ಲಿ ಇರುತ್ತಾಳೆ. ಅಲ್ಲದೆ ಆಕೆಯ ಕಡೆಯಿಂದ ಏನಾದರೂ ಬರಿಸಿಕೊಟ್ಟು ದೇಣೆ ವಗೈರೆ ತೆಗೆಯುವ ಆಲೋಚನೆಯಲ್ಲಿ ಇದ್ದಂತೆ ಕಂಡುಬರುತ್ತದೆ. ಕಾರಣ ನಾನು ಜಾಹೀರಪಡಿಸುವದೇನಂದರೆ—

ಸದರ ನನ್ನ ದತ್ತಕತಾಯಿಗೆ ಈಗ ಯಾವ ಪ್ರಕಾರದಿಂದಲೂ ಹಣದ ಅಡಚಣಿ ಇಲ್ಲ. ಹೀಂಗಿದ್ದು ಯಾರಾದರೂ ಆಕೆಗೆ ಫಸಾಯಿಸಿ ಆಕೆಕಡಿಗಿದ್ದ ಬೆಳ್ಳಿಭಂಗಾರದ ದಾಗೀನೆಗಳನ್ನು ಇಸಕೊಂಡಿದ್ದು ಕಂಡುಬಂದಲ್ಲಿ ಅವರ ಮೇಲೆ ಕಾಯದೇ ಪ್ರಕಾರ ಇಲಾಜ ಮಾಡಲಾಗುವದು.

ಮತ್ತು ಸದರ ನನ್ನ ದತ್ತಕತಾಯಿ ಕಾಳವ್ವಾ ಈಕೆ ಮನೆ ಮತ್ತು ಊರುಬಿಟ್ಟು ಹೋದಮೇಲೆ ಯಾವತ್ತೂ ಜಮೀನುಗಳನ್ನು ಮತ್ತು ಮನಿ ಸಹಿತಾ ನನ್ನ ಕಬಜೆದಲ್ಲಿ ತಗೊಂಡು ನಾನೇ ವಹಿವಾಟ ಮಾಡುತ್ತೇನೆ. ಕಾರಣಾ ಸದರ ಮಿಳಕತ್ತಿಯ ಮೇಲೆ ಅಗರ ಅದರ ಉತ್ಪನ್ನದಮೇಲೆ ಬೋಜಾ ಇಟ್ಟಾಗಲೀ ಅಗರ ಆಕೆಯ ಜ್ಯಾತನಿಸಿ ಯಾಗಲೀ ಯಾರೂ ದೇಣೆವಗೈರೆ ಕೊಡಬಾರದು. ಕದಾಚಿತ್ತ ಕೊಟ್ಟ[illegible] ದೇಣೇದ ಹಣಕ್ಕೆ ಅಗರ ಮೋಕಳ ಲೇಖಕ್ಕೆ ನಾನು ಅಗರ ಸದರ ಸ್ಥಾವರ ಮಿಳಕತ್ತು ಅಥವಾ ಅದರಿಂದ ಆಗುವ ಉತ್ಪನ್ನವು ಏನೂ ಸಂಬಂಧವಾಗಲಿಕ್ಕಿಲ್ಲ. ಅಗರ ಜವಾಬದಾರ ಅಲ್ಲಾ. ತಿಳಿಯುವದು. ತಾರೀಖು ೨೬—೨—೫೧ ನೇ ಇಸ್ವಿ.

ರಾಚಪ್ಪಾ ಹಾವಪ್ಪಾ ದುದ್ದಗಿ
ಹುನಗುಂದ ಹಾಲಿವಸ್ತಿ ಬಾಗಲಕೋಟಿ

ಈ ಪತ್ರಿಕೆಯು ವೆಂಕಟೇಶ ಕೇಶವಾಚಾರ್ಯ ಕೆರೂರ ಇವರಿಂದ ಬಾಗಲಕೋಟಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೨೭೮೮ ·ನಿತ್ಯ ಸಂಚಿಕೆ. ಬೆಲೆ. ೦-೦-೩.

यद्यत् परवशं दुःखं । यद्यदात्मवशं सुखम् ॥ -मनु.

ಕನ್ನಡಿಗ

ಸಂಪಾದಕರು:- ವೆಂಕಟೇಶ ಸೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧] ಬಾಗಲಕೋಟೆ— ಶುಕ್ರವಾರ ಮಿತಿ ಫಾಲ್ಗುಣ ಶುದ್ಧ ೧೦ ಶಕೆ ೧೮೫೨ ತಾ|| ೨೭—೨—೩೧ [ಸಂಚಿಕೆ ೨೦೦

ಒಪ್ಪಂದದ ಬಗ್ಗೆ ಮುಖ್ಯಪ್ರಧಾನರ ಉತ್ತರ

(ತಂತಿಯ ವಾರ್ತೆ, ತಾ|| ೨೬)

ಮಹಾತ್ಮಾ ಗಾಂಧಿ ಮತ್ತು ವ್ಹಾಯಿಸರಾಯರ ನಡುವೆ ಚರ್ಚೆಯು ನಾಳಿನ ದಿವಸ ಪುನಃ ಪ್ರಾರಂಭವಾಗುವದಾಗಿ ತಿಳಿಯುತ್ತದೆ. ವ್ಹಾಯಿಸರಾಯರ ಕಾರ್ಯಕಾರಿ ಮಂಡಳದ ಸಭೆಯು ಇಂದು ಸಂಜೆಗೆ ಕೂಡತಕ್ಕದ್ದಿದೆ. ವರ್ಕಿಂಗ ಕಮೀಟಿಯ ಸಭೆಯಾದರೂ ಇವತ್ತಿನ ದಿವಸ ಸೇರತಕ್ಕದ್ದಿದೆ ಒಪ್ಪಂದದ ಸಂಬಂಧವಾಗಿ ವ್ಹಾಯಿಸರಾಯರು ಬರೆದು ಕಳಿಸಿದ್ದಕ್ಕೆ ಮುಖ್ಯ ಪ್ರಧಾನರಿಂದ ಉತ್ತರ ಬಂದಿದೆ.

ಭಗತಸಿಂಗರನ್ನು ಗಲ್ಲಿಗೇರಿಸುವರು.

(ತಂತಿಯ ವಾರ್ತೆ ತಾ|| ೨೬)

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗರನ್ನು ಮಾರ್ಚ ೩ ನೆಯ ತಾರೀಖಿನ ದಿವಸ ಗಲ್ಲಿಗೇರಿಸುವವರಿದ್ದಾರಾಗಿ ತಿಳಿದು ಬಂದಿದೆ

ಗವ್ಹರ್ನರರು ಒಪ್ಪಂದದ ಬಗ್ಗೆ ಏನೂ ನುಡಿಯಲಿಲ್ಲ.

(ತಂತಿಯ ವಾರ್ತೆ ತಾ|| ೨೬)

ಮುಂಬಯಿ ಗವ್ಹರ್ನರರು ಇವತ್ತಿನ ದಿವಸ ಕಾಯದೆ ಮಂಡಳದ ಸಭಾಸದರನ್ನುದ್ದೇಶಿಸಿ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ, ಕಾಂಗ್ರೆಸ್ ಹಾಗು ಸರಕಾರದ ಪಕ್ಷದವರಲ್ಲಿ ನಡೆದಿರುವ ಚರ್ಚೆಯ ಸಂಬಂಧವಾಗಿ ಚಕಾರ ಶಬ್ದವನ್ನಾದರೂ ಉಚ್ಚರಿಸಲಿಲ್ಲ.

ಬಾರ್ಡೋಲಿ ರೈತರ ಹೊಲಗಳ ಲಿಲಾವು.

(ತಂತಿಯ ವಾರ್ತೆ ತಾ|| ೨೬)

ಭೂಕಂದಾಯವನ್ನು ಕೊಡದ ಮೂಲಕವಾಗಿ ಜಪ್ತ ಮಾಡಲ್ಪಟ್ಟ ಬಾರ್ಡೋಲಿ ರೈತರ ಹೊಲಗಳನ್ನು ಅಧಿಕಾರಿಗಳು ಲಿಲಾವ ಮಾಡಹತ್ತಿದ್ದಾರೆ. ಅವುಗಳನ್ನು ಲಿಲಾವಿನಲ್ಲಿ ಕೊಳ್ಳಲು ಸಾಕಷ್ಟು ಜನರು ಮುಂದೆ ಬರದ್ದರಿಂದ ಅವು ತೀರ ಕಡಿಮೆ ಬೆಲೆಗೆ ಲಿಲಾವು ಆಗಹತ್ತಿರುತ್ತವೆ

ಡಾ. ಹರ್ಡೀಕರರು ಅಂಕೋಲೆಗೆ ಹೋದರು

ಕರನಿರಾಕರಣೆಯ ಚಳವಳಿಯಲ್ಲಿ ಸೇರಿದವರಿಂದ ಭೂಕಂದಾಯವನ್ನು ಎತ್ತಲು ಪ್ರಯತ್ನಿಸುತ್ತಿರುವಾಗ ಅಧಿಕಾರಿಗಳು ಜುಲ್ಮದೊಂದು ಹೇಳಿ ಅವರನ್ನು ಮೋಸಗೊಳಿಸಹತ್ತಿರುವರೆಂಬುದು ತಿಳಿದುಬಂದದ್ದರಿಂದಲೇ, ಡಾ. ಹರ್ಡೀಕರರು ತಾ|| ೨೪ ನೆಯ ದಿವಸ ಅಂಕೋಲೆಗೆ ಪ್ರಯಾಣ ಬೆಳೆಸಿದರು. ಅವರು ಅಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರೆ ನಿರೀಕ್ಷಿಸಿ ಆ ಸಂಬಂಧವಾಗಿ ಮಹಾತ್ಮಾ ಗಾಂಧಿ ಹಾಗು ವರ್ಕಿಂಗ ಕಮೀಟಿಯವರಿಗೆ ವರದಿ ಒಪ್ಪಿಸುವವರಿದ್ದಾರೆ.

ಬೆಳಗಾವ ಜಿಲ್ಹೆಯಲ್ಲಿ ರೈತರ ಪರಿಷತ್ತುಗಳಿಗೆ ೧೪೪ ನೇ ಕಲಮು ಹಚ್ಚಿದರು

ಬೆಳಗಾವ ಜಿಲ್ಹೆಯ ಗೋಕಾಕ ಹಾಗು ಬೈಲಹೊಂಗಲ ತಾಲೂಕಗಳ ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನನ್ವಯ ನೋಟೀಸು ಹೊರಡಿಸಿ ಎರಡು ತಿಂಗಳ ವರೆಗೆ ರೈತರ ಪರಿಷತ್ತುಗಳು ಸೇರತಕ್ಕದ್ದಲ್ಲವಾಗಿ ಅಪ್ಪಣೆ ವಿಧಿಸಿದ್ದಾರೆ. ಬೈಲಹೊಂಗಲ ತಾಲೂಕ ರೈತರ ಪರಿಷತ್ತು ಮೊನ್ನಿನ ದಿವಸ ಬೈಲಹೊಂಗಲದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಸೇರತಕ್ಕದ್ದಿತ್ತು.

ಸಿಂಧ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾಗಿರುವ ಡಾ. ಚೊಯಿತರಾಮ ಗಿಡ್ವಾಣಿಯವರು ಕರಾಚಿ ಕಾಂಗ್ರೆಸದ ಸ್ವಾಗತ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಅಂಕೋಲಾ ತಾಲೂಕಿನಲ್ಲಿ ದಬ್ಬಾಳಿಕೆಯು ಮತ್ತೆ ಪ್ರಾರಂಭವಾಯಿತು.

(ಸುದ್ದಿಗಾರರಿಂದ)

ಆರ್ಡಿನನ್ಸದ ಅವತಾರ!

ಕಳೆದ ೩೦ ನೇ ತಾರೀಖಿಗೆ ಅಂಕೋಲೆಯಲ್ಲಿ ೧೧ ನೇ ಆರ್ಡಿನನ್ಸಿನ ಅವತರಣವಾಯಿತು. ಈ ಆರ್ಡಿನನ್ಸಿನಿಂದ ಎಲ್ಲಕ್ಕೂ ಮೊದಲು ಆಮಂತ್ರಿತರಾಗುವ ಬಹುಮಾನವು ಇಲ್ಲಿಯ ತರುಣ ಸ್ವಯಂಸೇವಕರಾದ ಶ್ರೀ ಕೆ. ಕೆ. ಪೈಯವರ ಪಾಲಿಗೆ ಹೋಯಿತು. ಇವರು ೧೫ ವರ್ಷದ ಎಳೆ ತರುಣರಾಗಿದ್ದರೂ ಸತ್ಯಾಗ್ರಹವು ಪ್ರಾರಂಭವಾದಂದಿನಿಂದ ಒಳ್ಳೇ ಹುರುಪಿನಿಂದ ರಾಷ್ಟ್ರೀಯ ಕಾರ್ಯವನ್ನು ಮಾಡುತ್ತಲಿದ್ದರು. ೫ ನೇ ತಾರೀಖಿನ ದಿನ ಅಂಕೋಲೆಯಲ್ಲಿ ಕೂಡಿದ ಸಭೆಯಲ್ಲಿ ಕರನಿರಾಕರಣೆಯ ವೀರಪ್ರತಿಜ್ಞೆಯನ್ನು ಓದಿ ಹೇಳಿದ ಬಗ್ಗೆ ಅವರ ಮೇಲೆ ಆರೋಪವು ಇಡಲಾಗಿದೆ. ಇವರನ್ನು ಕೈದು ಮಾಡಿದ ಬಳಿಕ ಫೌಜದಾರರು "ನೀವು ಮಾಫೀ ಬೇಡಿಕೊಂಡರೆ ನಿಮ್ಮನ್ನು ಈಗಲೇ ಬಿಟ್ಟು ಬಿಡುತ್ತೇನೆ" ಎಂದು ಪೈಯವರಿಗೆ ಹೇಳಲು ಆ ವೀರರು "ಮಾಫೀ ಬೇಡಲಿಕ್ಕೆ ನಾನೇನು ಅಪರಾಧಿಯಲ್ಲ. ನಾನು ಮಾಫೀ ಬೇಡುವದು ಶಕ್ಯವೇ ಇಲ್ಲ. ಈಗ್ಗೆ ನೀವು ನನ್ನನ್ನು ಬಿಟ್ಟರೂ ನಾನು ಮತ್ತೆ ಆ ಪ್ರತಿಜ್ಞೆಯನ್ನು ಓದುವವನೇ" ಎಂದು ಜೋಷವಾಗಿ ಹೇಳಿದರು! ಇವರ ಖಟ್ಲೆಯ ವಿಚಾರಣೆಯು ಇನ್ನೆರಡು ದಿನಗಳಲ್ಲಿಯೇ ನಡೆಯಬಹುದು.

ಭಾವೀಕೇರಿ ಬೇಲೀಕೇರಿ

೨೧ ನೇ ತಾರೀಖಿನ ಮಧ್ಯಾಹ್ನಕ್ಕೆ ಪೋಲೀಸರು ಭಾವೀಕೇರಿ, ಬೇಲೀಕೇರಿಗಳಿಗೆ ಹೋಗಿ ಪಂಚಾಯಿತಿಗಳು ಬೇಕಾಯದೇಶೀರ ಸಂಸ್ಥೆಗಳೆಂದು ಡಂಗುರ ಹೊಡೆದು ಅದೇ ಅರ್ಥದ ಕೆಲವು ಜಾಹೀರ ಪತ್ರಿಕೆಗಳನ್ನು ಊರೊಳಗೆ ಅಲ್ಲಲ್ಲಿ ಅಂಟಿಸಿ ಬಂದರು. ಮರುದಿನ ಮುಂಜಾವಿನಲ್ಲಿ ಸುಮಾರು ೨೫ ಜನ ಪೋಲೀಸರು ಈ ಹಳ್ಳಿಗಳಿಗೆ ಹೋಗಿ ಕಟ್ಟಳೆಗೆಟ್ಟ ಸಂಸ್ಥೆಗಳ ಸಭಾಸದರೆಂಬ ಆರೋಪದಿಂದ ೧೧ ಜನರನ್ನೂ ಪಾಲೇಕರರನ್ನೂ ಕೈದುಮಾಡಿ ಅಂಕೋಲೆಗೆ ತಂದರು. ಕೈದು ಮಾಡಲ್ಪಟ್ಟವರ ಹೆಸರುಗಳು.

ಭಾವೀಕೇರಿ— ನಾರಾಯಣ ಬೀರಣ್ಣ ನಾಯಿಕ. ೨ ರಾಮಕೃಷ್ಣ ನಾರಾಯಣ ನಾಯಿಕ, ೩ ತಿಮ್ಮಣ್ಣ ಬೀರಣ್ಣ ನಾಯಿಕ.

ಬೇಲೀಕೇರಿ— ನಾರಾಯಣ ವೆಂಕಯ್ಯ ನಾಯಿಕ, ೨ ತಿಮ್ಮಣ್ಣ ಕರಿಯಣ್ಣ ನಾಯಿಕ ೩ ತಿಮ್ಮಣ್ಣ ಹಮ್ಮಣ್ಣ ನಾಯ್ಕ. ೪ ನಾಗಪ್ಪ ಗಿರಿಯಣ್ಣ ನಾಯ್ಕ. ೫ ಬೊಮ್ಮಯ್ಯ ತಿಮ್ಮಣ್ಣ ನಾಯ್ಕ ೬ ಭಂಡಾರಿ. ೭ ವಿಠೋಬಾ ರಾಮಾ ಭಂಡಾರಿ ೮ ಬೀರಣ್ಣ ಕೋವಣ್ಣ ನಾಯ್ಕ.

ಬೇಲೀಕೇರಿಯ ಬೀರಣ್ಣನಾಯ್ಕರು ೯೩ ವರ್ಷದ ಮುದುಕರು. ಪೋಲೀಸರು ಅವರನ್ನು ಅಂಕೋಲೆಗೆ ಕರೆತರುವಾಗ ಅವರು "ನಾನು ಹುಟ್ಟಿನಿಂದ ತೀರ ಅಜ್ಞಾನಿ. ನನಗೆ ಮುಪ್ಪಿನಲ್ಲಿ ರೊಟ್ಟಿ ತಿನ್ನುವದನ್ನು ಕಲಿಸುವದಕ್ಕಾಗಿ ಸರಕಾರದವರು ನನ್ನನ್ನು ಜೇಲಿಗೆ ಒಯ್ಯುತ್ತಿರುವರು." ಎಂದು ಹಾಸ್ಯಯುಕ್ತರಾಗಿ ಹೇಳುತ್ತ ನಡೆದಿದ್ದರು. ಬೇಲೀಕೇರಿಯ ನಾಗಪ್ಪನಾಯ್ಕರೂ ಭಾವೀಕೇರಿಯ ನಾರಾಯಣನಾಯ್ಕರೂ ಅನುಕ್ರಮವಾಗಿ ೬೦ ಹಾಗೂ ೬೫ ವರ್ಷಗಳ ಮುದುಕರಾಗಿದ್ದಾರೆ.

ಕೈದು ಮಾಡಲ್ಪಟ್ಟ ಆರು ಜನರಿಗೆ ನಿನ್ನೆ ಡಂಗುರ ಹೊಡೆದ ಬಳಿಕ ನೀವು ಪಂಚಾಯತಿಯ ಕೆಲಸ ಮಾಡಿದ್ದೀರೇನು? ಎಂದು ಕೇಳಲಾಗಿ ಅವರು ತಾವು ಮಾಡಿಲ್ಲವಾಗಿ ಹೇಳಿದ್ದರಿಂದ ಅವರನ್ನು ಬಿಟ್ಟುಬಿಟ್ಟರು. ಉಳಿದವರು ಅಂಕೋಲೆಯ ಲಾಕಪ್ಪಿನಲ್ಲಿರುವರು.

ಪೋಲೀಸರ ಅತ್ಯಾಚಾರ!

ಮೇಲೆ ಹೇಳಿದ ಶ್ರೀ ಪಾಲೇಕರ ಎಂಬ ಸ್ವಯಂಸೇವಕರನ್ನು ಕೈದು ಮಾಡುವಾಗ ಸಬ್ ಇನಸ್ಪೆಕ್ಟರರು ಅವರನ್ನು ಜೋರಿನಿಂದ ದಬ್ಬಿ ಕಾಲಿನಿಂದ ಒದ್ದರಂತೆ. ಎದುರಿದ್ದ ಕಂಬಕ್ಕೆ ಪಾಲೇಕರರ ತಲೆಯು ಅಪ್ಪಳಿಸಿ ಅನರ್ಥವು ಆಗುವ ಪ್ರಸಂಗವು ಸ್ವಲ್ಪದರಲ್ಲಿಯೇ ತಪ್ಪಿತು. ಇವರನ್ನು ಕೈದು ಮಾಡುವ ಮುನ್ನಾ ದಿನವೇ ಇವರಿಗೂ ಪೋಲೀಸರಿಗೂ ಬಾಯಿಗೆ ಬಾಯಿ ಹತ್ತಿದ ಸಂಗತಿಯನ್ನು ನಾಳಿನ ಪತ್ರದಲ್ಲಿ ಕಾಣಬಹುದು. ಕೈದು ಮಾಡಿದ ಬಳಿಕ ಪೋಲೀಸರು ಪಾಲೇಕರರ ಕೈಯೊಳಗಿನ ತುತೂರಿಯನ್ನು ಕಸಿದು ಕೊಳ್ಳುವದಕ್ಕೆಂದು ಬೇಕಾದಷ್ಟು ಹೆಣಗಾಡಿದರೂ ಅವರು ಕೈಯೊಳಗಿನ ತುತೂರಿಯನ್ನು ಬಿಡಲಿಲ್ಲ. ಈ ಗುದ್ದುಮುಟಿಗೆಯಲ್ಲಿ ಪಾಲೇಕರರು ತೀರ ಜರ್ಜರಿತರಾಗಿದ್ದಾರೆ. ಇವರ ಮೇಲೆಯೂ ಆರ್ಡಿನನ್ಸಿನ ಗದೆಯೇ ಎತ್ತಲಾಗಿದೆಯಂತೆ.

ಇವರೆಲ್ಲರನ್ನು ಸೆರೆ ಮಾಡಿ ಅಂಕೋಲೆಗೆ ತಂದ ಕೂಡಲೆ ಅಂಕೋಲೆಯಲ್ಲಿ ಸಂಪೂರ್ಣವಾದ ಹರತಾಳವಾಯಿತು. ಭಾವೀಕೇರಿ ಬೇಲೀಕೇರಿಗಳಲ್ಲಿ ಈ ದಬ್ಬಾಳಿಕೆಯಿಂದ ಚಳವಳಿಯ ವಿರುದ್ಧವಾಗಿ ಏನೂ ಪರಿಣಾಮವಾಗಿಲ್ಲ. ಯಾವದೊಂದು ರೀತಿಯಲ್ಲಿ ಪಂಚಾಯತಗಳನ್ನು ಅಸ್ತಿತ್ವದಲ್ಲಿಡಬೇಕೆಂದು ಅಲ್ಲಿಯ ಜನರು ಪಣ ತೊಟ್ಟಿದ್ದಾರೆ.

ಬೋರಸಾದದ ಅತ್ಯಾಚಾರ!

(ನಿನ್ನಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

೧೧. ಬೇರೆ ಬೇರೆ ನಾಲ್ಕು ಸ್ಥಳಗಳಲ್ಲಿ ಬೇರೆ ಬೇರೆ ಸಮಯದಲ್ಲಿ ನಾಲ್ಕು ಮೆರವಣಿಗೆಗಳ ಮೇಲೆ ಏನಿಲ್ಲೆಂದರೂ ನಾಲ್ಕು ಸಾರೆ ಲಾಠಿ ಹಲ್ಲೆ ಮಾಡಲಾಯಿತು. ಮೆರವಣಿಗೆಯ ಮುಂಭಾಗದಲ್ಲಿದ್ದವರು ಹಾಗು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದವರು ಪೋಲೀಸರ ವಕ್ರದೃಷ್ಟಿಗೆ ಪಾತ್ರರಾಗಿದ್ದರಿಂದ, ಅವರಿಗೆ ಎಲ್ಲ ಜನರಿಗಿಂತಲೂ ಹೆಚ್ಚಾಗಿ ಹೊಡೆತ ಬಿದ್ದವು. ೧೨. ಈ ಲಾಠಿ ಪ್ರಹಾರದಲ್ಲಿ ಎಷ್ಟೋ ಸ್ತ್ರೀಯರಿಗೆ ಬಂದೂಕಿನ ತುದಿಯ ಪ್ರಸಾದವೂ ಸಿಕ್ಕಿದ್ದಲ್ಲದೆ, ಕೆಲವರಿಗೆ ಬಡಿತಗಳೂ ಬಿದ್ದವು. ಕೆಲವರ ಕೂದಲ ಹಿಡಿದು ಜಗ್ಗಿ ಅವರನ್ನು ದರದರ ಎಳೆದರು. ಈ ಮೂಲಕವಾಗಿ ಕೆಲವು ಸ್ತ್ರೀಯರು ಮೂರ್ಛೆ ಹೊಂದಿ ಬಿದ್ದರು. ೧೩. ಗಾಯ ಹೊಂದಿದವರಲ್ಲಿ ಬಂಧನಕ್ಕೊಳಗಾಗಿ ಶಿಕ್ಷೆಗೆ ಗುರಿಯಾದ ಜನರ ಹೊರತು ಗಾಯ ಹೊಂದಿದ ಇತರ ಜನರಿಗೆ ಸರಕಾರಿ ಅಧಿಕಾರಿಗಳು ಯಾವ ಔಷಧೋಪಚಾರವನ್ನೂ ಮಾಡಲಿಲ್ಲ. ಇಷ್ಟೇ ಅಲ್ಲದೆ ಅವರಿಗೆ ಒಂದು ಗುಟಕು ನೀರು ಸಹ ಕುಡಿಯಗೊಡಲಿಲ್ಲ. ಗಾಯ ಹೊಂದಿ ಬಂಧನಕ್ಕೊಳಗಾದವರು ಪೋಲೀಸ ಚೌಕಿಯಲ್ಲಿ ಇದ್ದಾಗ ಯಾರೂ ಅವರ ಸಂಬಂಧವಾಗಿ ಕಾಳಜಿಯನ್ನು ತೆಗೆದು ಕೊಳ್ಳಲಿಲ್ಲ. ೧೪. ಮೆರವಣಿಗೆಯಲ್ಲಿ ಪ್ರತ್ಯಕ್ಷವಾಗಿಯಾಗಲಿ ಇಲ್ಲವೆ ಅಪ್ರತ್ಯಕ್ಷವಾಗಿಯಾಗಲಿ

(೪ ನೇ ಪಾನು ನೋಡಿರಿ.)

ಗಾಂಧಿ ಟೊಪ್ಪಿಗೆಗೆ

ಅಧಿಕಾರಿಗಳು ಬೆದರಿದರು.

ಜಮಖಂಡಿ ಸಂಸ್ಥಾನದ ಪೊಲಿಟಿಕಲ್ ಏಜಂಟರು ಜನ.ಖಂಡಿಗೆ ಬಂದ ಸಮಯದಲ್ಲಿ ಗಾಂಧಿ ಟೊಪ್ಪಿಗೆಗಳು ಅವರ ಕಣ್ಣಿಗೆ ಬೀಳಬಾರದೆಂಬುದಾಗಿ ಸಂಸ್ಥಾನದ ಅಧಿಕಾರಿಗಳು ಒಳ್ಳೇ ಜಾಗ್ರತಿ ತೆಗೆದುಕೊಂಡಿದ್ದಲ್ಲದೆ, ರಾಮೇಶ್ವರ ದೇವಾಲಯದಲ್ಲಿಯೂ ಯಾರೂ ಗಾಂಧಿ ಟೊಪ್ಪಿಗೆ ಧರಿಸಿಕೊಂಡು ಬಾರದಂತೆ ವ್ಯವಸ್ಥೆಯನ್ನಿಟ್ಟಿದ್ದರು.

ಯುರೋಪಿಯನ್ನರು

ಪೋಲೀಸರ ಬೆನ್ನು ಚಪ್ಪರಿಸಿದರು

ಹಿಂದುಸ್ಥಾನದ ಪೋಲೀಸರ ವಿಷಯವಾಗಿ ಲೇಖಗಳನ್ನು ಬರೆದು ಅವರ ಕೃತಿಗಳನ್ನು ಟೀಕಿಸಿದ್ದಕ್ಕಾಗಿ ಯುರೋಪಿಯನ್ ಅಸೋಸಿಯೆ. ಜನದ ೨೦ ಉಪಕಾರ್ಯದವರು ಮಿ. ಫೇನರ್ ಬ್ರೋಕ್ವೇಯವರ ಮೇಲೆ ಸಿಟ್ಟಾಗಿ ಅವರ ಕೃತಿಯನ್ನು ಪ್ರತಿಷೇಧಿಸಿ ಪೋಲೀಸರ ಬೆನ್ನು ಚಪ್ಪರಿಸಿದ್ದಾರೆ.

ಸೊಲ್ಲಾಪುರದಲ್ಲಿ

ಬಂದೂಕಗಳಿಗೆ ಪ್ರತಿಬಂಧ.

ಸೊಲ್ಲಾಪುರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಡಿಸ್ಟ್ರಿಕ್ಟ ಪೋಲೀಸ ಕಾಯದೆಯ ೪೮ ನೆಯ ಕಲಮಿನನ್ವಯ ಒಂದು ಅಪ್ಪಣೆ ಹೊರಡಿಸಿ, ತಾ॥ ೨೭ ರಿಂದ ೩೪ ರ ವರೆಗೆ ಬಂದೂಕು, ಪಿಸ್ತೂಲು, ಸೋಡಾವಾಟರ ಬಾಟ್ಲಿ ಇವುಗಳನು ಹಿಡಿದುಕೊಂಡು ಯಾರೂ ತಿರುಗತಕ್ಕದ್ದಲ್ಲವಾಗಿ ಅಪ್ಪಣೆ ವಿಧಿಸಿದ್ದರು.

ಆಗ್ರಾದಲ್ಲಿ

ಜಪ್ತಿಯ ಹಾವಳಿ.

ಆಗ್ರಾದ ಪೋಲೀಸ ಅಧಿಕಾರಿಗಳು ತಾ॥ ೨೦ ನೆಯ ದಿವಸ ಅಲ್ಲಿಯ 'ಸೈನಿಕ' ಪತ್ರಿಕೆಯ ಕಚೇರಿ, ಸತ್ಯಾಗ್ರಹ ಶಿಬಿರ, ಬಾಲಭಾರತ ಮೊದಲಾದ ೩೦ ಸಂಸ್ಥೆಗಳಿಗೆ ಮುತ್ತಿಗೆ ಹಾಕಿ, ಅವುಗಳನ್ನು ಝಡತಿ ಮಾಡಿ, ಶ್ರೀ ಹರಿವಿಲಾಸಗುಪ್ತ, ಲಲಿತಪ್ರಸಾದ, ಪ್ರಕಾಶಚಂದ, ಶ್ರೀಮತಿ ಭಾಗವತಿ ಇವರನ್ನು ಸೆರೆಹಿಡಿದುಕೊಂಡು ಹೋದ

ಜನರನ್ನು ಹಿಡಿದರು.

ರಥದ ಮುಂದೆ ಅಡ್ಡ ಬಿದ್ದು ಧವನ್ನುಂಟು ಮಾಡಿದನು. ಗೆ ಪೇಚಿನಲ್ಲಿ ಸಿಕ್ಕು ನುತ್ತಿ ರನ್ನು ರಥಕ್ಕೆ ಅಂಟಿಸಿದರು. ರ ಸುತ್ತಲು ಕಾವಲು ರಚಿಸಿ ವನ್ನು ಮುಂದಕ್ಕೆ ಹೋಗ

ಏಮಾರಪ್ಪರಿಗೆ

ವರ್ಷ ಶಿಕ್ಷೆ

ಡಿಯಾ" ಪತ್ರಿಕೆಯಲ್ಲಿ ಗಳನ್ನು ಬರೆದ ಸಂಬಂಧ ದಾಪಿತರಾದ ಪ್ರೊ. ಕುಮಾ ಪ್ರೊ. ಕೋಡಿನ ೧೨೮ ಯ ಪರ್ವರ್ತನದ ಬಗ್ಗೆ ಕೇಳಲಾಗಿತ್ತು. ಪ್ರೊ. ಬಣೆ ಕೊಡಲು ನಿರಾಕರಿಸಿ ಾಬಾದ ಮ್ಯಾಜಿಸ್ಟ್ರೇಟರು ಸಾದಾ ಶಿಕ್ಷೆ ವಿಧಿಸಿ ಅವ ಕ್ಕೆ ಅಟ್ಟಿದರು.

ಸರಕಾರಕ್ಕೆ

ರೂಪಾಯಿ ಹಾನಿ

ಖರ್ಚಿನ ಪತ್ರಿಕೆಯನ್ನು ಕ್ಕಾಗಿ ಬಂಗಾಲ ಸರಕಾರ ವಿರ ರೂಪಾಯಿಗಳು ಕಡಿ ಯ,ಕಾಯದೆ ಭಂಗ ಚಳ ಲು ಹೆಚ್ಚಿನ ಹಣ ವೆಚ್ಚ ಬಿದ್ದದ್ದೇ ಇದಕ್ಕೆ ಕೆಲ ಗಿದೆಯಾಗಿಯೂ ತಿಳಿದು

ವ ಮಾತುಕತೆ

ತಾ॥ ೨೪)

ರುರು ಇವತ್ತಿನ ದಿವಸ ಶಾಸ್ತ್ರಿ, ಸರ್. ಬಿ. ಎನ್. ರ್ ಕ್ರಿಯಾವರ್, ಸರ್ , ಶ್ರೀ ಜಾಧವ, ಸರ್ ಎ. ಯಕರ ಇವರನ್ನು ತಮ್ಮ ಕು, ಮಹಾತ್ಮಾ ಗಾಂಧಿ ವೆ ನಡೆದ ಚರ್ಚೆಯು ವಿವ

ರವನ್ನೂ, ಇನ್ನು ಮುಂದೆ ಕೊಡತಕ್ಕದ್ದಾಗಿ ರುವ ಪರಿಷತ್ತಿನಲ್ಲಿ ತಾವು ಸ್ವೀಕರಿಸಬಹುದಾದ ಧೋರಣವನ್ನು ಅವರಿಗೆ ತಿಳಿಸಿ ಹೇಳಿದರು. ಮೇಲಿನವರು ವ್ಹಾಯಿಸರಾಯರ ಸೂಚನೆಗಳಿಗೆ ತಮ್ಮ ಸಮ್ಮತಿ ತೋರಿಸಿದರಾಗಿ ತಿಳಿದು ಬರುತ್ತದೆ. ಪರಿಸ್ಥಿತಿಯು ಆಶಾಜನಕವಿದೆ. ಒಪ್ಪಂದದ ಮಾತುಕತೆಗಳು ಹೀಗೆಯೆ ಸಾಗಿದಲ್ಲಿ ಈ ವಾರದೊಳಗಾಗಿ ಒಪ್ಪಂದವಾಗಬಹುದು.

ಪೋಲೀಸರ ಅತ್ಯಾಚಾರದ ವಿಷಯವಾಗಿ ವಿಚಾರಣೆ ಮಾಡಲು ಮುಂಬಯಿ ಹಾಯಕೋರ್ಟ ಜಡ್ಜರದೊಂದು ವಿಚಾರಣಾ ಮಂಡಳವನ್ನು ನಿಯಮಿಸಲು ಸರಕಾರದವರು ಒಪ್ಪಿಕೊಂಡಿರುವರಾಗಿ ತೋರುತ್ತದೆ. ಸರಕಾರದ ಈ ನಿರ್ಧಾರವು ಮಹಾತ್ಮಾ ಗಾಂಧಿಯವರಿಗೆ ಇನ್ನೂ ತಿಳಿಸಲ್ಪಟ್ಟಿಲ್ಲವಾದ್ದರಿಂದ, ಕಾಂಗ್ರೆಸ್ ಮುಖಂಡರು ವ್ಹಾಯಿಸರಾಯರ ಉತ್ತರದ ಹಾದಿ ನೋಡುತ್ತಿದ್ದಾರೆ.

(ದಿಲ್ಲಿ ತಾ॥ ೨೫)

ಪೋಲೀಸರ ಅತ್ಯಾಚಾರಗಳ ವಿಷಯವಾಗಿ ವಿಚಾರಣೆ ನಡಿಸಲು ಮಂಡಳವನ್ನು ನಿಯಮಿಸುವದಕ್ಕೆ ಮುಂಬಯಿ ಹಾಗು ಮದ್ರಾಸದ ಗವ್ಹರ್ನರರು ತಮ್ಮ ಸಮ್ಮತಿ ಕೊಟ್ಟಿದ್ದಾರೆಂದು ತಿಳಿಯುತ್ತದೆ. ಬಂಗಾಲ ಹಾಗು ಬಿಹಾರ ಪ್ರಾಂತದಲ್ಲಿಯ ಅತ್ಯಾಚಾರಗಳ ಸಂಬಂಧವಾಗಿ ವಿಚಾರಣೆ ನಡಿಸಲು ಆ ಆ ಪ್ರಾಂತಗಳ ಗವ್ಹರ್ನರರು ಇನ್ನೂ ತಮ್ಮ ಸಮ್ಮತಿ ಕೊಟ್ಟಿಲ್ಲ. ಬಿಹಾರದ ಗವ್ಹರ್ನರರು ಈಗ ದಿಲ್ಲಿಗೆ ಬಂದಿರುವರು. ಈ ಸಂಬಂಧವಾಗಿ ಅವರೊಡನೆ ಮಾತುಕತೆಗಳು ನಡೆದಿವೆ. ಬಂಗಾಲದ ಗವ್ಹರ್ನರರಾದರೂ ಇಲ್ಲಿಗೆ ಬೇಗನೆ ಬರುವವರಿದ್ದು, ಕಲಕತ್ತೆಯಲ್ಲಿ ಸ್ವಾತಂತ್ರ್ಯ ದಿನದ ದಿವಸ ಸಂಭವಿಸಿದ ಪೋಲೀಸರ ಪುಂಡಾಟಿಕೆಯ ಬಗ್ಗೆ ವ್ಹಾಯಿಸರಾಯರೊಡನೆ ಚರ್ಚೆ ಮಾಡತಕ್ಕವರಿದ್ದಾರೆ. ಇವರೊಡನೆ ಮಾತುಕತೆ ಮುಗಿಸಿದ ಮೇಲೆಯೆ ವ್ಹಾಯಿಸರಾಯರು ಮಹಾತ್ಮರಿಗೆ ಪತ್ರ ಬರೆಯುವರಾಗಿ ತಿಳಿದು ಬರುತ್ತದೆ.

ವ್ಹಾಯಿಸರಾಯರು ಮಹಾತ್ಮಾ ಗಾಂಧಿಯವರನ್ನು ಬೇಗನೆ ಕರೆಯಿಸಿಕೊಂಡು ಅವರಿಗೆ ತಮ್ಮ ಕರಾರುಗಳನ್ನು ಹೇಳುವವರಿದ್ದಾರಾಗಿಯೂ, ಮಹಾತ್ಮಾ ಗಾಂಧಿಯವರು ಈ ಸಂಬಂಧವಾಗಿ ಕಾಂಗ್ರೆಸ್ ಮುಖಂಡರೊಡನೆ ಚರ್ಚೆ ಮಾಡಿ ಉತ್ತರವನ್ನು ಕೊಡತಕ್ಕವರಿದ್ದಾರಾಗಿಯೂ ತಿಳಿದು ಬರುತ್ತದೆ.

ಅಂಕೋಲಾ ತಾಲೂ
ದಬ್ಬಾಳಿಕೆಯು ಮತ್ತೆ ಪ್ರಾ

(ಸುದ್ದಿಗಾರರಿಂದ)

ಆರ್ಡಿನನ್ಸದ ಅವತಾರ!

ಕಳೆದ ೨೦ ನೇ ತಾರೀಖಿಗೆ ಅಂಕೋಲೆಯಲ್ಲಿ ೧೧ ನೇ ಆರ್ಡಿನನ್ಸಿನ ಅವತರಣವಾಯಿತು. ಈ ಆರ್ಡಿನನ್ಸಿನಿಂದ ಎಲ್ಲಕ್ಕೂ ಮೊದಲು ಆಮಂತ್ರಿತರಾಗುವ ಬಹುಮಾನವು ಇಲ್ಲಿಯ ತರುಣ ಸ್ವಯಂಸೇವಕರಾದ ಶ್ರೀ ಕೆ. ಕೆ. ಪೈಯವರ ಪಾಲಿಗೆ ಹೋಯಿತು. ಇವರು ೧೫ ವರ್ಷದ ಎಳೆ ತರುಣರಾಗಿದ್ದರೂ ಸತ್ಯಾಗ್ರಹವು ಪ್ರಾರಂಭವಾದಂದಿನಿಂದ ಒಳ್ಳೇ ಹುರುಪಿನಿಂದ ರಾಷ್ಟ್ರೀಯ ಕಾರ್ಯವನ್ನು ಮಾಡುತ್ತಲಿದ್ದರು ೫ ನೇ ತಾರೀಖಿನ ದಿನ ಅಂಕೋಲೆಯಲ್ಲಿ ಕೂಡಿದ ಸಭೆಯಲ್ಲಿ ಕರನಿರಾಕರಣೆಯ ಪ್ರತಿಜ್ಞೆಯನ್ನು ಓದಿ ಹೇಳಿದ ಬಗ್ಗೆ ಅವರ ಮೇಲೆ ಆರೋಪವು ಇಡಲಾಗಿದೆ. ಇವರನ್ನು ಕೈದು ಮಾಡಿದ ಬಳಿಕ ಫೌಜದಾರರು "ನೀವು ಮಾಫೀ ಬೇಡಿಕೊಂಡರೆ ನಿಮ್ಮನ್ನು ಈಗಲೇ ಬಿಟ್ಟು ಬಿಡುತ್ತೇನೆ" ಎಂದು ಪೈಯವರಿಗೆ ಹೇಳಲು ಆ ವೀರರು "ಮಾಫಿ ಬೇಡಲಿಕ್ಕೆ ನಾನೇನು ಅಪರಾಧಿಯಲ್ಲ ನಾನು ಮಾಫೀ ಬೇಡುವದು ಶಕ್ಯವೇ ಇಲ್ಲ. ಈಗ್ಗೆ ನೀವು ನನ್ನನ್ನು ಬಿಟ್ಟರೂ ನಾನು ಮತ್ತೆ ಆ ಪ್ರತಿಜ್ಞೆಯನ್ನು ಓದುವವನೇ" ಎಂದು ಜೋರ್ಸವಾಗಿ ಹೇಳಿದರು! ಅವರ ಖಟ್ಲೆಯ ವಿಚಾರಣೆಯು ಇನ್ನೆರಡು ದಿನಗಳಲ್ಲಿಯೇ ನಡೆಯಬಹುದು.

ಭಾವಿಕೇರಿ ಬೇಲೀಕೇರಿ

೨೧ ನೇ ತಾರೀಖಿನ ಮಧ್ಯಾನ್ಹಕ್ಕೆ ಪೋಲೀಸರು ಭಾವಿಕೇರಿ, ಬೇಲೀಕೇರಿಗಳಿಗೆ ಹೋಗಿ ಪಂಚಾಯಿತಿಗಳು ಬೇಕಾಯದೇಶೀರ ಸಂಸ್ಥೆಗಳೆಂದು ಡಂಗುರ ಹೊಡೆದು ಅದೇ ಅರ್ಥದ ಕೆಲವು ಜಾಹೀರ ಪತ್ರಿಕೆಗಳನ್ನು ಊರೊಳಗೆ ಅಲ್ಲಲ್ಲಿ ಅಂಟಿಸಿ ಬಂದರು. ಮರು ದಿನ ಮುಂಜಾವಿನಲ್ಲಿ ಸುಮಾರು ೨೫ ಜನ ಪೋಲೀಸರು ಈ ಹಳ್ಳಿಗಳಿಗೆ ಹೋಗಿ ಕಟ್ಟಳೆಗಟ್ಟ ಸಂಸ್ಥೆಗಳ ಸಭಾಸದರೆಂಬ ಆರೋಪದಿಂದ ೧೧ ಜನರನ್ನೂ ಪಾಳೇಲಕರರನ್ನೂ ಕೈದುಮಾಡಿ ಅಂಕೋಲೆಗೆ ತಂದರು. ಕೈದು ಮಾಡಲ್ಪಟ್ಟವರ ಹೆಸರುಗಳು.

ಭಾವೀಕೇರಿ— ನಾರಾಯಣ ಬೀರಣ್ಣ ನಾಯಿಕ. ೨ ರಾಮಕೃಷ್ಣ ನಾರಾಯಣ ನಾಯಿಕ, ೩ ತಿಮ್ಮಣ್ಣ ಬೀರಣ್ಣ ನಾಯಿಕ.

ಬೇಲೀಕೇರೀ— ನಾರಾಯಣ ನಾಯಿಕ, ೨ ಕಿಮ್ಮಣ್ಣ ಕರಿಯ ೩ ತಿಮ್ಮಣ್ಣ ಹಮ್ಮಣ್ಣ ನಾಯ್ಕ ಗೋಯೆಣ್ಣ ನಾಯ್ಕ. ೫ ಬೊಮ್ಮ ನಾಯ್ಕ ೬ ಭಂಡಾರಿ. ೭ ಭಾ ಭಂಡಾರಿ ೮ ಬೀ ನಾಯ್ಕ.

ಬೇಲೀಕೇರಿಯ ಬೀ ಣ್ಣಾ ವರ್ಷದ ಮುದುಕರು ಪೋಲೀಸ ಅಂಕೋಲೆಗೆ ಕರೆತ್ತರುವಾಗ ಅ ಮುಪ್ಪಿನಿಂದ ಕೀರ ಆಗ್ರಹದ ಮುಪ್ಪಿನಲ್ಲಿ ರೊಟ್ಟೀ ತಿನ್ನದ ವದಕ್ಕಾಗಿ ಕರಕೊಂಡವರು ನ ಒತ್ತಾಯಿಸುತ್ತಿದ್ದರು. ಎಂದು ಜ ಹೇಳುತ್ತ ನಡೆದಿದ್ದರು. ಬೇಲಿ ಪ್ಪನಾಯ್ಕರೂ ಭಾವೀಕೇರಿಯ ನಾಯ್ಕರೂ ಅನುಕ್ರಮವಾಗಿ ೬ ವರ್ಷಗಳ ಮುದುಕರಾಗಿದ್ದಾ

ಕೈದು ಮಾಡಲ್ಪಟ್ಟ ಆರ ಡಂಗುರ ಹೊಡೆದ ಬಳಿಕ ನಿ ತಿರು ಕೆಲಸ ಮಾಡಿದ್ದಿರೇನು? ಲಾಗಿ ಅವರು ತಾವು ಮಾಡಿ ದಂದ ಅವರನ್ನು ಬಿಟ್ಟು ಬಿಟ್ಟ ಅಂಕೋಲೆಯ ಲಾಕಪ್ಪಿನಲ್ಲಿರು

ಪೋಲೀಸರ ಅತ್ಯಾ

ಮೇಲೆ ಹೇಳಿದ ಶ್ರೀ ಕ ಸ್ವಯಂಸೇವಕರನ್ನು ಕೈದು ಸಬ್ ಇನಸ್ಪೆಕ್ಟರರು ಅವರ ದಬ್ಬಿ ಕಾಲಿನಿಂದ ಒದ್ದರಂ ಕಂಬಕ್ಕೆ ಪಾಲೇಕರರ ತಲೆ ರ್ಥವಾಗಬೇಕಾಗವ ಪ್ರಸಂಗವು ತಪ್ಪಿತು ಇವರೆನ್ನು ಕೈದು ಮ ದಿನವೇ ಇವರಿಗೂ ಪೋಲೀ ಬಾಯಿ ಹತ್ತಿದ ಸಂಗತಿಯಿ ದಲ್ಲಿ ಕಾಣಬಹುದು. ಕೈದ ಪೋಲೀಸರು ಪಾಲೇಕರ ಕುಕೂರಿಯನ್ನು ಕಸಿದು ಬೇಕಾದಷ್ಟು ಹೆಣಗಾಡಿದರು ಳಗಿನ ಕುಕೂರಿಯನ್ನು

ಜಾಹೀರ ನೋಟೀಸು

ನಾನು ರಾಚಪ್ಪಾ ತಂದಿ ಹಾವಪ್ಪಾ ದುದ್ದಗಿ ಸಾ|| ಹುನಗುಂದ ತಾಲೂಕ ಮುಜಕೂರ ಈತನು ಈ ಜಾಹೀರ ನೋಟೀಸಿನ ಮೂಲಕ ಜಾಹೀರ ಪಡಿಸುವದೇನಂದರೆ—

ಹುನಗುಂದ ಗ್ರಾಮದಲ್ಲಿರುವ ನನ್ನ ದತ್ತಕತಾಯಿ ಕಾಳವ್ವಾ ಕೋಮ ಹಾವಪ್ಪಾ ದುದ್ದಗಿ ಈಕೆ ಅಜಮಾಸ ಒಂದು ತಿಂಗಳ ಹಿಂದ ತ್ರಿಣೇಶಾಚಾರ್ಯ ಗುದ್ದದ ಸಾ|| ಹುನಗುಂದ ಮ ಬಸಪ್ಪಾ ಹೊಸಮನಿ ಸಾ|| ಅಮೀನಗಡ ವೈರೀರ ಸ್ವಾರ್ಥಸಾಧಣೂಕೆ ಮುಕಲಬದ ಮಾತುಗಳಿಗೆ ಫಸಾಯಿಸಿ ಮನೆಯಲ್ಲಿಯ ಅಜಮಾಸ ಐದುಸಾವಿರ ರುಪಾಯಿಯ ಬೆಲೆಬಾಳುವ ಯಾವತ್ತೂ ಬೆಳ್ಳಿ ಭಂಗಾರದ ದಾಗೀನೆಗಳನ್ನು ಸಹಾ ತಗೊಂಡು ಹೋಗಿ ಅಮೀನಗಡದಲ್ಲಿ ಇರುತ್ತಾಳೆ. ಅಲ್ಲದೇ ಆಕೆಯು ಕಡಿಂದ ಏನಾದರೂ ಬರಿಸಿಕೊಟ್ಟು ದೇಣೆ ವೈರಿ ತೆಗೆಯುವ ಆಲೋಚನೆಯಲ್ಲಿ ಇದ್ದಂತೆ ಕಂಡುಬರುತ್ತದೆ. ಕಾರಣ ನಾನು ಜಾಹೀರಪಡಿಸುವದೇನಂದರೆ—

ಸದರ ನನ್ನ ದತ್ತಕತಾಯಿಗೆ ಈಗ ಯಾವ ಪ್ರಕಾರದಿಂದಲೂ ಹಣದ ಅಡಚಣೆ ಇಲ್ಲಾ' ಹೀಂಗಿದ್ದು ಯಾರಾದರೂ ಆಕೆಗೆ ಫಸಾಯಿಸಿ ಆಕೆಕಡಿಗಿದ್ದ ಬೆಳ್ಳಿಭಂಗಾರದ ದಾಗೀನೆಗಳನ್ನು ಇಸಕೊಂಡಿದ್ದು ಕಂಡುಬಂದಲ್ಲಿ ಅವರ ಮೇಲೆ ಕಾಯದೇ ಪ್ರಕಾರ ಇಲಾಜ ಮಾಡಲಾಗುವದು.

ಮತ್ತು ಸದರ ನನ್ನ ದತ್ತಕತಾಯಿ ಕಾಳವ್ವಾ ಈಕೆ ಮನೆ ಮಠ ಊರುಬಿಟ್ಟು ಹೋದಮೇಲೆ ಯಾವತ್ತೂ ಜಮೀನುಗಳನ್ನು ಮತ್ತು ಮನಿ ಸಹಿತಾ ನನ್ನ ಕಬಜೆದಲ್ಲಿ ತಗೊಂಡು ನಾನೇ ವಹಿವಾಟ ಮಾಡುತ್ತೇನೆ. ಕಾರಣಾ ಸದರ ಪಾಳ ಕತ್ತಿಯ ಮೇಲೆ ಅಗರ ಅದರ ಉತ್ಪನ್ನದ ಮೇಲೆ ಬೋಜಾ ಇಟ್ಟಾಗಲೀ ಅಗರ ಆಕೆಯು ಜಾತನಿಸಿ ಯಾಗಲೀ ರುಪಾಯಿ ದೇಣೆವೈರೆ ಕೊಡತಕ್ಕದ್ದು, ಕದಾಚಿತ್ತ ಕೊಟ್ಟರೆ ಸದರ ದೇಣೇದ ಹಣಕ್ಕೆ ಅಗರ ನೋಕಳ ಲೆಕ್ಕಕ್ಕೆ ನಾನು ಅಗರ ಸದರ ಸ್ಥಾವರ ಮಿಳಕತ್ತು ಅಥವಾ ಅದರಿಂದ ಆಗುವ ಉತ್ಪನ್ನವು ಏನೂ ಸಂಬಂಧವಾಗಲಿಕ್ಕಿಲ್ಲ. ಅಗರ ಜವಾಬದಾರ ಅಲ್ಲಾ. ತಿಳಿಯುವದು. ತಾರೀಖ ೨೬—೨—೩೧ ನೇ ಇಸ್ವಿ.

ರಾಚಪ್ಪಾ ಹಾವಪ್ಪಾ ದುದ್ದಗಿ
ಹುನಗುಂದ ಹಾಲಿವಸ್ತಿ ಬಾಗಲಕೋಟೆ

ಮದ್ರಾಸದಲ್ಲಿ ೫೦ ಜನರನ್ನು ಹಿಡಿದರು.

ಮದ್ರಾಸದ ಪೋಲೀಸ ಅಧಿಕಾರಿಗಳು ತಾ|| ೨೫ ನೆಯ ದಿವಸ ಅಲ್ಲಿನ ಎರಡು ಕಾಂಗ್ರೆಸ್ ಶಿಬಿರಗಳಿಗೆ ಮುತ್ತಿಗೆ ಹಾಕಿ ೫೦ ಜನ ಸ್ವಯಂಸೇವಕರನ್ನು ಸೆರೆ ಹಿಡಿದುಕೊಂಡು ಹೋದರು. ಸ್ವಯಂಸೇವಕರು ತಮ್ಮ ಸಂಬಂಧವಾಗಿ ಸವಿಸ್ತರ ಸಂಗತಿಗಳನ್ನು ಅಧಿಕಾರಿಗಳಿಗೆ ತಿಳಿಸದಿದ್ದುದೇ ಅವರ ಅಪರಾಧವಾಗಿ ಎಣಿಸಲ್ಪಟ್ಟಿದೆ.

ಶ್ರೀ ವಿಠ್ಠಲಭಾಯಿಯವರು

ಯುರೋಪಕ್ಕೆ ಪ್ರಯಾಣ ಬೆಳೆಸಿದರು.

ಮುಂಬಯಿಯ ಪೋಲಿಕ್ಲಿನಿಕ್ ನರ್ಸಿಂಗ ಹೋಮು"ದಲ್ಲಿ ಔಷಧೋಪಚಾರ ಹೊಂದುತ್ತಿದ್ದ ಶ್ರೀ ವಿಠ್ಠಲಭಾಯಿ ಪಟೇಲರವರು ತಾ|| ೨೪ ನೆಯ ದಿವಸ ವ್ಹಿಯೆನ್ನಾಕ್ಕೆ ಹೊರಟು ಹೋದರು. ಅಲ್ಲಿ ಅವರು ೨-೩ ತಿಂಗಳ ವರೆಗೆ ಇದ್ದು ತಮ್ಮ ಪ್ರಕೃತಿಯನ್ನು ಸುಧಾರಿಸಿಕೊಳ್ಳುವರು.

ಮುಂಬಯಿಯ ಗವ್ಹರ್ನರರು

ತಿರುಗಿ ಬಂದರು

ವ್ಹಾಯಿಸರಾಯರ ಆಮಂತ್ರಣಕ್ಕನುಸರಿಸಿ ಮುಂಬಯಿಯಿಂದ ದಿಲ್ಲಿಗೆ ಪ್ರಯಾಣ ಬೆಳೆಸಿದ ನಾಮದಾರ ಗವ್ಹರ್ನರ ಸರ್ ಫ್ರೆಡ್ರಿಕ್ ಸಾಯಿಕ್ಸ, ಸರ್ ಅರ್ನೆಸ್ಟ ಹೊಟಸನ್, ಮಿ. ಹಡಸನ್ ಇವರೆಲ್ಲರೂ ಅಲ್ಲಿಯ ಕಾರ್ಯವನ್ನು ತೀರಿಸಿಕೊಂಡು ತಾ|| ೨೪ ನೆಯ ದಿವಸ ಮುಂಬಯಿಗೆ ಮರಳಿ ಬಂದರು.

ರಥೋತ್ಸವಕ್ಕೂ

೧೪೪ ನೆ ಕಲಮು ಹಚ್ಚಿದರು.

ಗುಂಟೂರ ಜಿಲ್ಹೆಯ ತೆನ್ನಾಲಿ ಎಂಬಲ್ಲಿ ತಾ| ೧೭ ನೆಯ ದಿವಸ ಶಿವರಾತ್ರಿಯ ನಿಮಿತ್ತವಾಗಿ ರಥೋತ್ಸವವು ನಡೆದಿತ್ತು. ರಥೋತ್ಸವವು ನಡೆವ ಕಾಲಕ್ಕೆ ರಥದ ಮೇಲಿನ ಮಹಾತ್ಮಾ ಗಾಂಧಿಯವರ ಭಾವ ಚಿತ್ರವನ್ನು ಕಂಡು ಅಧಿಕಾರಿಗಳು ಕಣ್ಣು ಕೆಂಪಗೆ ಮಾಡಿದರು. ೧೪೪ ನೆಯ ಕಲಮಿನ ನೋಟೀಸು ಹೊರಡಿಸಿ ರಥೋತ್ಸವವನ್ನು ಅಷ್ಟಕ್ಕೆ ನಿಲ್ಲಿಸಿದರು. ಪೂಜಾರಿಗಳು ಮಹಾತ್ಮರ ಚಿತ್ರವನ್ನು ತೆಗೆದೊಗೆದು ರಥವನ್ನು ಎಳೆಯಲಾರಂಭಿಸಿದರು. ಒಬ್ಬ ಸ್ವಯಂಸೇವಕನು ರಥದ ಮುಂದೆ ಅಡ್ಡ ಬಿದ್ದು ಅದಕ್ಕೆ ಪ್ರತಿಬಂಧವನ್ನುಂಟು ಮಾಡಿದನು. ಪೂಜಾರಿಗಳು ಹೀಗೆ ಪೇಚಿನಲ್ಲಿ ಸಿಕ್ಕು ಮತ್ತೆ ಮಹಾತ್ಮರ ಚಿತ್ರವನ್ನು ರಥಕ್ಕೆ ಅಂಟಿಸಿದರು. ಪೋಲೀಸರು ಅದರ ಸುತ್ತಲು ಕಾವಲು ರಚಿಸಿ ನಿಂತುಕೊಂಡು ರಥವನ್ನು ಮುಂದಕ್ಕೆ ಹೋಗಗೊಡಲಿಲ್ಲ.

ಪ್ರೊ. ಕುಮಾರಪ್ಪರಿಗೆ

೧ ವರ್ಷ ಶಿಕ್ಷೆ

“ಯಂಗ ಇಂಡಿಯಾ” ಪತ್ರಿಕೆಯಲ್ಲಿ ಆಕ್ಷೇಪಾರ್ಹ ಲೇಖಗಳನ್ನು ಬರೆದ ಸಂಬಂಧವಾಗಿ ಗುಜರಾಥ ವಿದ್ಯಾಪೀಠದ ಪ್ರೊ. ಕುಮಾರಪ್ಪ ಇವರಿಗೆ ಕ್ರಿ. ಪ್ರೊ ಕೋಡಿನ ೧೦೮ ನೆಯ ಕಲಮಿನನ್ವಯ ವರ್ತನದ ಬಗ್ಗೆ ೫೦೦ ರು. ಹೊಣೆ ಕೇಳಲಾಗಿತ್ತು. ಪ್ರೊ. ಕುಮಾರಪ್ಪರು ಹೊಣೆ ಕೊಡಲು ನಿರಾಕರಿಸಿದ್ದರು. ಅಹಮ್ಮದಾಬಾದ ಮ್ಯಾಜಿಸ್ಟ್ರೇಟರು ಅವರಿಗೆ ೧ ವರ್ಷ ಸಾದಾ ಶಿಕ್ಷೆ ವಿಧಿಸಿ ಅವರನ್ನು ಕಾರಾಗೃಹಕ್ಕೆ ಅಟ್ಟಿದರು.

ಬಂಗಾಲ ಸರಕಾರಕ್ಕೆ

೯೩ ಲಕ್ಷ ರುಪಾಯಿ ಹಾನಿ

ಈ ವರ್ಷದ ಜಮಾ ಖರ್ಚಿನ ಪತ್ರಿಕೆಯನ್ನು ಬಾಯಿಗೊಡಿಸುವದಕ್ಕಾಗಿ ಬಂಗಾಲ ಸರಕಾರಕ್ಕೆ ೯೩ ಲಕ್ಷ ೯೦ ಸಾವಿರ ರುಪಾಯಿಗಳು ಕಡಿಮೆ ಬಿದ್ದಿವೆಯೆಂದಾಗಿಯೂ, ಕಾಯದೆ ಭಂಗ ಚಳವಳಿಯನ್ನು ಎದುರಿಸಲು ಹೆಚ್ಚಿನ ಹಣ ವೆಚ್ಚ ಮಾಡುವ ಪ್ರಸಂಗ ಬಿದ್ದದ್ದೇ ಇದಕ್ಕೆ ಕೆಲಮಟ್ಟಿಗೆ ಕಾರಣವಾಗಿದೆಯೆಂದಾಗಿಯೂ ತಿಳಿದು ಬರುತ್ತದೆ.

ಒಪ್ಪಂದದ ಮಾತುಕತೆ

(ದಿಲ್ಲಿ ತಾ|| ೨೪)

ವ್ಹಾಯಿಸರಾಯರು ಇವತ್ತಿನ ದಿವಸ ಸರ್ ಸಪ್ರೂ, ನಾ. ಶಾಸ್ತ್ರಿ, ಸರ್. ಬಿ. ಎನ್. ಮಿತ್ರ, ಸರ್ ಅಬ್ದುಲ್ ಕ್ವಿಯಾಮ್, ಸರ್ ಕೌಸಜಿ ಜಹಾಂಗೀರ, ಶ್ರೀ ಜಾಧವ, ಸರ್ ಎ. ಕೆ. ಗಜನವಿ ಶ್ರೀ ಜಯಕರ ಇವರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು, ಮಹಾತ್ಮಾ ಗಾಂಧಿ ಹಾಗು ತಮ್ಮ ನಡುವೆ ನಡೆದ ಚರ್ಚೆಯ ವಿವರವನ್ನೂ, ಇನ್ನು ಮುಂದೆ ಕೊಡತಕ್ಕದ್ದಾಗಿರುವ ಪರಿಸ್ಥಿತಿಯಲ್ಲಿ ತಾವು ಸ್ವೀಕರಿಸಬಹುದಾದ ಧೋರಣವನ್ನು ಅವರಿಗೆ ತಿಳಿಸಿ ಹೇಳಿದರು. ಮೇಲಿನವರು ವ್ಹಾಯಿಸರಾಯರ ಸೂಚನೆಗಳಿಗೆ ತಮ್ಮ ಸಮ್ಮತಿ ತೋರಿಸಿದರಾಗಿ ತಿಳಿದು ಬರುತ್ತದೆ. ಪರಿಸ್ಥಿತಿಯು ಆಶಾಜನಕವಿದೆ. ಒಪ್ಪಂದದ ಮಾತುಕತೆಗಳು ಹೀಗೆಯೇ ಸಾಗಿದಲ್ಲಿ ಈ ವಾರದೊಳಗಾಗಿ ಒಪ್ಪಂದವಾಗಬಹುದು.

ಪೋಲೀಸರ ಅತ್ಯಾಚಾರದ ವಿಷಯವಾಗಿ ವಿಚಾರಣೆ ಮಾಡಲು ಮೂವರು ಹಾಯಿಕೋರ್ಟ ಜಡ್ಜರದೊಂದು ವಿಚಾರಣಾ ಮಂಡಳವನ್ನು ನಿಯಮಿಸಲು ಸರಕಾರದವರು ಒಪ್ಪಿಕೊಂಡಿರುವರಾಗಿ ತೋರುತ್ತದೆ. ಸರಕಾರದ ಈ ನಿರ್ಧಾರವು ಮಹಾತ್ಮಾ ಗಾಂಧಿಯವರಿಗೆ ಇನ್ನೂ ತಿಳಿಸಲ್ಪಟ್ಟಿಲ್ಲವಾದ್ದರಿಂದ, ಕಾಂಗ್ರೆಸ್ ಮುಖಂಡರು ವ್ಹಾಯಿಸರಾಯರ ಉತ್ತರದ ಹಾದಿ ನೋಡುತ್ತಿದ್ದಾರೆ.

(ದಿಲ್ಲಿ ತಾ|| ೨೫)

ಪೋಲೀಸರ ಅತ್ಯಾಚಾರಗಳ ವಿಷಯವಾಗಿ ವಿಚಾರಣೆ ನಡಿಸಲು ಮಂಡಳವನ್ನು ನಿಯಮಿಸುವದಕ್ಕೆ ಮುಂಬಯಿ ಹಾಗು ಮದ್ರಾಸದ ಗವ್ಹರ್ನರರು ತಮ್ಮ ಸಮ್ಮತಿ ಕೊಟ್ಟಿದ್ದಾರೆಂದು ತಿಳಿಯುತ್ತದೆ. ಬಂಗಾಲ ಹಾಗು ಬಿಹಾರ ಪ್ರಾಂತದಲ್ಲಿಯ ಅತ್ಯಾಚಾರಗಳ ಸಂಬಂಧವಾಗಿ ವಿಚಾರಣೆ ನಡಿಸಲು ಆ ಆ ಪ್ರಾಂತಗಳ ಗವ್ಹರ್ನರರು ಇನ್ನೂ ತಮ್ಮ ಸಮ್ಮತಿ ಕೊಟ್ಟಿಲ್ಲ. ಬಿಹಾರದ ಗವ್ಹರ್ನರರು ಈಗ ದಿಲ್ಲಿಗೆ ಬಂದಿದ್ದು ಈ ಸಂಬಂಧವಾಗಿ ಅವರೊಡನೆ ಮಾತುಕತೆಗಳು ನಡೆದಿವೆ. ಬಂಗಾಲದ ಗವ್ಹರ್ನರರಾದರೂ ಇಲ್ಲಿಗೆ ಬೇಗನೆ ಬರುವವರಿದ್ದು, ಕಲಕತ್ತೆಯಲ್ಲಿ ಸ್ವಾತಂತ್ರ್ಯ ದಿವದ ದಿವಸ ಸಂಭವಿಸಿದ ಪೋಲೀಸರ ಪುಂಡಾಟಿಕೆಯ ಬಗ್ಗೆ ವ್ಹಾಯಿಸರಾಯರೊಡನೆ ಚರ್ಚೆ ಮಾಡತಕ್ಕವರಿದ್ದಾರೆ. ಇವರೊಡನೆ ಮಾತುಕತೆ ಮುಗಿಸಿದ ವೇಳೆಯ ವ್ಹಾಯಿಸರಾಯರು ಮಹಾತ್ಮರಿಗೆ ಪತ್ರ ಬರೆಯುವರಾಗಿ ತಿಳಿದು ಬರುತ್ತದೆ.

ವ್ಹಾಯಿಸರಾಯರು ಮಹಾತ್ಮಾ ಗಾಂಧಿಯವರನ್ನು ಬೇಗನೆ ಕರೆಯಿಸಿಕೊಂಡು ಅವರಿಗೆ ತಮ್ಮ ಕರಾರುಗಳನ್ನು ಹೇಳುವವರಿದ್ದಾರಾಗಿಯೂ, ಮಹಾತ್ಮಾ ಗಾಂಧಿಯವರು ಈ ಸಂಬಂಧವಾಗಿ ಕಾಂಗ್ರೆಸ್ ಮುಖಂಡರೊಡನೆ ಚರ್ಚೆ ಮಾಡಿ ಉತ್ತರವನ್ನು ಕೊಡತಕ್ಕವರಿದ್ದಾರಾಗಿಯೂ ತಿಳಿದು ಬರುತ್ತದೆ.

(೨ನೆಯ ಪುಟದಿಂದ ಬಂದದ್ದು)

ಕೇರದಿದ್ದ ಇಬ್ಬರು ಗೃಹಸ್ಥರಿಗೆ.ಒಬ್ಬ ನೇಕಾರ ನ ಮನೆಯಲ್ಲಿ ಕುಳಿತಿರುವಾಗ, ಪೋಲೀಸರು ಆ ಮನೆಯಲ್ಲಿ ಹೊಕ್ಕು ಅವರನ್ನು ಹೊಡೆದರು. ೧೫. ಒಟ್ಟಿಗೆ ೧೫೯ ಜನ ಹೆಂಗಸರು ಹಾಗು ೧೩ ಜನ ಗಂಡಸರಿಗೆ ಗಾಯಗಳಾಗಿವೆ. ಗಾ ಯ ಹೊಂದಿದ ೧೧೧ ಜನ ಸ್ತ್ರೀಯರ ಹಾಗು ಕೆಲವು ಗಂಡಸರ ಜವಾಬುಗಳನ್ನು ನಾವು ತೆಗೆದುಕೊಂಡೆವು.ಅವರಲ್ಲಿ ೨೬೧ ಇಷ್ಟು ಜ ನ ಸ್ತ್ರೀಯರ ದೇಹದ ಮೇಲಿನ ಗಾಯಗಳನ್ನು ನಾವು ನೋಡಿದೆವು. ೩೧೯ ಇಷ್ಟು ಜನ ಸ್ತ್ರೀ ಯರು ವೇದನೆಯಿಂದ ಬಳಲುತ್ತಿದ್ದರು. ೧೩೯ ಇಷ್ಟು ಜನ ಸ್ತ್ರೀಯರು ಪ್ರಹಾರದ ಮೂಲಕ ವಾಗಿ ಜ್ವರದಿಂದ ಪೀಡಿತರಾಗಿದ್ದರು. ೧೦ ಜನ ಸ್ತ್ರೀಯರನ್ನು ಕೂದಲು ಹಿಡಿದು ಜಗ್ಗಿ ದರ ದರ ಎಳೆದರೆಂದೂ, ೯ ಜನ ಸ್ತ್ರೀಯರು ಮೂ ರ್ಛೆ ಹೊಂದಿ ಬಿದ್ದರೆಂದೂ ಅವರ ಜವಾಬು ಗಳ ಮೇಲಿಂದ ತಿಳಿಯಿತು.

ವಿಜಾಪುರದಿಂದ ಪಂಢರಪೂರ ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾ ಪುರದಿಂದ ಮುಂಜಾನೆ ೭॥ ಗಂಟೆ ಗೆ ಹೊರಟು, ಜಡಚಣ, ಮಂಗಳವೇಢೆ ಮಾ ರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟಾ ರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕೆಳಗಿನ ವಿಳಾಸದ ವರ ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳ ಬೇಕು.

ಮ್ಯಾನೇಜರ.
ಆಟೆಲಿ ಮಹಾಲಕ್ಷ್ಮಿ ಮೋಟಾರ ಸರ್ವಿಸ
ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮ ಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯು ತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಹುನಗುಂದದಲ್ಲಿಯ ಮನಿ ಮತ್ತು ಅಂಗಡಿ ಮಾರಾತಕ್ಕದ್ದಿದೆ

ಹುಚ್ಚಪ್ಪ ತೋಟಪ್ಪ ಇಂಡಿ ಸಾ॥ ಹುನಗುಂದ ಇವರ ಮಾಲ್ಕಿ ವಹಿವಾಟಿನ ಖಾಸ ಮನಿ ಮತ್ತು ಅಂಗಡಿ ಮಾರಾತಕ್ಕದ್ದಿದೆ. ತೆಗೆದುಕೊಳ್ಳಲಿಚ್ಛಿಸುವವರು ಕೆಳಗೆ ಸಹಿ ಮಾ ಡಿದವರಿಗೆ ಪತ್ರವ್ಯವಹಾರದಿಂದ ಇಲ್ಲವೆ ಸಮ ಕ್ಷಮ ಭೆಟ್ಟಿಯಾಗಿ ತಿಳಿದುಕೊಳ್ಳಬೇಕು.

ತಾ॥ ೨೬—೨—೩೧ { ಶಿವಲಿಂಗಪ್ಪ ಶಿವಂಗಪ್ಪಾ ಜಂಜನ್ನಿ ಪೇಟೆ ಬಾಗಲಕೋಟೆ

ಪ್ಲಾಟಿಂ ಮಾರತಕ್ಕದ್ದಿದೆ

೧೫ ೧೯೩೦ ನೆಯ ಇಸ್ವಿಯ ೯ ನೆಯ ಆರ್ಡಿನನ್ಸಕ್ಕನುಸರಿಸಿ ಜಪ್ತ ಮಾಡಿದ ಯಾವತ್ತೂ ಸ್ಥಾವರ ಆಸ್ತಿಯನ್ನು ತಿರುಗಿ ಕೊಡಲಾಗುವದು. ಭೂಕಂದಾಯವನ್ನು ವಸೂಲ ಮಾಡುವದಕ್ಕಾಗಿ ಹೊಲ ಇಲ್ಲವೆ ಇತರ ಸ್ಥಾವರ ಆಸ್ತಿ ಜಪ್ತ ಮಾಡುವದರಲ್ಲಿ ಬಂದಿದ್ದಲ್ಲಿ ಅವುಗಳನ್ನು ತಿರುಗಿ ಕೊಡುವದರಲ್ಲಿ ಬರುವದು. ಆದರೆ ಯಾವನಾದರೂ ಭೂಕಂದಾಯವನ್ನು ಕೊಡುವದಿಲ್ಲವೆಂದು ಕಲೆಕ್ಟರನಿಗೆ ಕಂಡುಬಂದಲ್ಲಿ ಅವನ ಆಸ್ತಿಯು ಅವನಿಗೆ ತಿರುಗಿ ಸಿಗಲಾರದು. ಹೊಲ ಇಲ್ಲವೆ ಸ್ಥಾವರ ಆಸ್ತಿಯು ಮೂರನೇದವನಿಗೆ ಮಾರಲ್ಪಟ್ಟಿದ್ದರೆ ಅದು ತಿರುಗಿ ಸಿಗಲಾರದು. ವ್ಯವಹಾರವು ಮುಗಿದು ಹೋಗಿದೆಯೆಂದು ತಿಳಿಯಬೇಕು.

ಸೂಚನೆ— ಆಸ್ತಿಗಳ ಮಾರಾಟವು ಕೆಲವು ಕಡೆಗಳಲ್ಲಿ ಅನ್ಯಾಯದಿಂದಲೂ ಹಾಗೂ ಕಾಯಿದೆಗೆ ವಿರುದ್ಧವಾಗಿಯೂ ಮಾಡಲ್ಪಟ್ಟಿದೆಯೆಂದು ಮಿ. ಗಾಂಧಿಯವರು ಅನ್ನುತ್ತಿರುವರು. ಅವರ ಈ ಅಭಿಪ್ರಾಯವು ಸರಕಾರಕ್ಕೆ ಮಾನ್ಯವಿರುವದಿಲ್ಲ.

ಈ ಸಂಬಂಧವಾಗಿ ಕಾಯಿದೆಗೆ ವಿರುದ್ಧವಾದ ಸಂಗತಿಗಳು ಸಂಭವಿಸಿದಲ್ಲಿ, ಕೋರ್ಟಿನಲ್ಲಿ ದಾವೆ ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿದೆ.

೧೬ ಸರಕಾರಕ್ಕೆ ಸಲ್ಲತಕ್ಕ ಹಣವನ್ನು ವಸೂಲ ಮಾಡುವಾಗ ಅನ್ಯಾಯ ಹಾಗು ಕಾಯಿದೆಗೆ ವಿರುದ್ಧವಾದ ಕೃತಿಗಳು ಘಟಿಸಿವೆಯೆಂದು ಸರಕಾರಕ್ಕೆ ಅನಿಸುವದಿಲ್ಲ. ಇಂಥ ಕೃತಿಗಳು ಘಟಿಸಿವೆಯೆಂದು ಕಲೆಕ್ಟರನಿಗೆ ಅನಿಸಿದಲ್ಲಿ, ಅವನು ಆ ಬಗ್ಗೆ ವಿಚಾರ ನಡಿಸಬೇಕು ಮತ್ತು ಹಾನಿಯನ್ನು ಕೂಡಲೆ ತುಂಬಿ ಕೊಡಬೇಕು.

೧೭ ಸರಕಾರಿ ಉದ್ಯೋಗಸ್ಥರು ಇಲ್ಲವೆ ಗ್ರಾಮಾಧಿಕಾರಿಗಳ ರಾಜೀನಾಮೆ ಕೊಟ್ಟ ಮೂಲಕವಾಗಿ ತೆರವು ಬಿದ್ದ ಸ್ಥಳಗಳ ಮೇಲೆ ಯಾರಾದರೂ ಪೂರ್ತಿ ನೇಮಿಸಿದ್ದರೆ, ರಾಜೀನಾಮೆ ಕೊಟ್ಟವರನ್ನು ಆ ಸ್ಥಳಗಳ ಮೇಲೆ ಪುನಃ ತೆಗೆದುಕೊಳ್ಳಲಾಗುವದಿಲ್ಲ. ಪುನಃ ತಮ್ಮನ್ನು ನಿಯಮಿಸಿಕೊಳ್ಳಲು ಯಾರಾದರೂ ಅರ್ಜಿ ಮಾಡಿದಲ್ಲಿ, ಆ ಅರ್ಜಿಗಳನ್ನು ಸಹಾನುಭೂತಿಪೂರ್ವಕವಾಗಿ ವಿಚಾರ ಮಾಡಲಾಗುವದು.

೧೮ ಉಪ್ಪಿನ ಕಾಯಿದೇಭಂಗದ ಕಡೆಗೆ ತಮ್ಮ ಲಕ್ಷ್ಯವನ್ನು ಹೊರಳಿಸದಿರಲು ಸರಕಾರವು ಸಿದ್ಧವಿಲ್ಲ. ಬಡ ಜನರಿಗೆ ಸೋಯಿಸ್ಕರವಾಗಬೇಕೆಂಬ ಉದ್ದೇಶದಿಂದ ಈಗಿರುವ ಕಾಯಿದೆಗನುಸರಿಸಿ ಕೆಲಕೆಲವು ಕಡೆಗಳಲ್ಲಿ ಸವಲತ್ತು ಕೊಟ್ಟಿರುವಂತೆ, ಉಪ್ಪಿನ ಕ್ಷೇತ್ರಗಳಲ್ಲಿರುವ ಬಡ ಜನರಿಗೂ ತಮ್ಮ ಮನೆಯ ಉಪಯೋಗಾರ್ಥವಾಗಿ ಇಲ್ಲವೆ ತಮ್ಮ ಹಳ್ಳಿಗಳಲ್ಲಿ ಮಾರುವ ಸಲುವಾಗಿ ಉಪ್ಪು ತೆಗೆದುಕೊಳ್ಳುವದಕ್ಕೆ ಹಾಗೂ ಸಿದ್ಧಪಡಿಸಲಿಕ್ಕೆ ಅಪ್ಪಣೆಯು ಕೊಡುವದರಲ್ಲಿ ಬಂದಿದೆ. ಆದರೆ ಉಪ್ಪನ್ನು ತಮ್ಮ ಹಳ್ಳಿಯ ಹೊರಗೆ ಮಾರುವದಕ್ಕೆ ಮತ್ತು ಅದರ ವ್ಯಾಪಾರ ಸಾಗಿಸುವದಕ್ಕೆ ಅಪ್ಪಣೆಯಿಲ್ಲ.

೧೯ ಈ ಒಪ್ಪಂದದ ಕಲಮುಗಳನ್ನು ರಾಷ್ಟ್ರೀಯ ಸಭೆಯವರು ಸಂಪೂರ್ಣವಾಗಿ ಪಾಲಿಸದಿದ್ದಲ್ಲಿ, ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯುವದಕ್ಕಾಗಿ ಜನರ ಹಾಗೂ ವ್ಯಕ್ತಿಯ ಹಕ್ಕುಗಳ ಸಂರಕ್ಷಣೆಗಾಗಿ ಅವಶ್ಯವಿರುವ ಯಾವತ್ತೂ ಉಪಾಯಗಳನ್ನು ಸರಕಾರವು ಕೈಕೊಳ್ಳುವದು.

[ರುಜು] ಎಚ್. ಡಬ್ಲ್ಯು. ಇಮರ್ಸನ್
ಸೆಕ್ರೆಟರಿ, ಹಿಂದುಸ್ಥಾನ ಸರಕಾರ

ವಿರುದ್ಧ ವಾಡುವದರಲ್ಲಿ ಬಂದಿತ್ತು. ಆ ದಾಡಿ ದಸ್ತಾವೇಜಗಳನ್ನು ಈಗ ಹಿಂತೆಗೆದುಕೊಳ್ಳುವದರಲ್ಲಿ ಬರುವದು. ಬ್ರಹ್ಮದೇಶದಲ್ಲಿ ಇತ್ತೀಚೆಗೆ ಹೊರಕೆಯಲ್ಲಿ ತರಲ್ಪಟ್ಟ ಜಾಹೀರನಾಮೆಯು ಇದರಲ್ಲಿ ಸೇರ್ಪಡೆಯಾಗಿರುವದಿಲ್ಲ.

೧೦ ತಾಂತ್ರಿಕ ಅತ್ಯಾಚಾರ ಇಲ್ಲವೆ ಪ್ರತ್ಯಕ್ಷ ಅತ್ಯಾಚಾರ ಇವುಗಳನ್ನು ಬಿಟ್ಟು ಬೇರೆ ಆರೋಪಗಳಿಗಾಗಿ ಖಟ್ಲೆ ಹಾಕಲ್ಪಟ್ಟಿದ್ದರೆ ಆ ಯಾವತ್ತೂ ಖಟ್ಲೆಗಳನ್ನು ಹಿಂತೆಗೆದುಕೊಳ್ಳಲಾಗುವದು. ಮುತ್ಸಳಿಕೆಯ ಸಂಬಂಧವಾಗಿ ನಡೆದ ಖಟ್ಲೆಗಳ ವಿಷಯವಾಗಿಯೂ ಇದೇ ತತ್ವವನ್ನು ಅನುಸರಿಸಲಾಗುವದು. ಈ ಚಳವಳಿಯ ನಿಮಿತ್ತವಾಗಿ ವಕೀಲರ ಸನದನ್ನು ರದ್ದು ಪಡಿಸುವ ವಿಷಯವಾಗಿ ಕಾರ್ಯ ನಡೆಸಿದ್ದರೆ ಅದಾದರೂ ನಿಲ್ಲಿಸಲ್ಪಡುವದು. ಆಜ್ಞೆಯನ್ನು ಮೀರಿದ್ದಕ್ಕಾಗಿ ಪೋಲೀಸ ಇಲ್ಲವೆ ಆಮಲ್ದಾರ ಜನರ ಮೇಲೆ ನಡೆದ ಖಟ್ಲೆಯನ್ನು ಮಾತ್ರ ಹಿಂತೆಗೆದುಕೊಳ್ಳಲಾಗುವದಿಲ್ಲ.

೧೧ ಅತ್ಯಾಚಾರಕ್ಕೆ ಸಂಬಂಧಿಸಿದ ಆರೋಪ ಬಿಟ್ಟು ಕಾಯದೆಭಂಗದ ಬೇರೆ ಆರೋಪಗಳಿಗಾಗಿ ಶಿಕ್ಷೆಗೆ ಗುರಿಯಾಗಿರುವ ಯಾವತ್ತೂ ಕೈದಿಗಳನ್ನು ಬಿಡುಗಡೆ ಮಾಡುವದರಲ್ಲಿ ಬರುವದು. ಸೆರೆಮನೆಯಲ್ಲಿ ನಿಯಮದ ವಿರುದ್ಧವಾಗಿ ವರ್ತಿಸಿದ್ದಕ್ಕಾಗಿ ಹೆಚ್ಚಿನ ಶಿಕ್ಷೆ ವಿಧಿಸಲ್ಪಟ್ಟಿದ್ದರೆ ಅದನ್ನಾದರೂ ಮೇಲಿನ ತತ್ವಕ್ಕನುಸರಿಸಿ ರದ್ದು ಪಡಿಸಲಾಗುವದು. ಇದರಲ್ಲಿಯೂ ಆಮಲ್ದಾರ ಹಾಗು ಪೋಲೀಸ ಸಿಪಾಯರು ಸೇರ್ಪಡೆಯಾಗುವದಿಲ್ಲ.

೧೨ ವಸೂಲಾಗದೆ ಉಳಿದಿರುವ ದಂಡ ಹಾಗು ಮುಚ್ಚಳಿಕೆಯ ಹಣವನ್ನು ವಸೂಲು ಮಾಡುವದರಲ್ಲಿ ಬರುವದಿಲ್ಲ. ಈಗಾಗಲೇ ವಸೂಲಾಗಿರುವ ದಂಡ ಹಾಗು ಮುಚ್ಚಳಿಕೆಯ ಹಣವನ್ನು ತಿರುಗಿ ಕೊಡಲ್ಪಡುವದಿಲ್ಲ.

೧೩ ಈ ಚಳವಳಿಯ ಮೂಲಕವಾಗಿ ಬೇರೆ ಬೇರೆ ಪ್ರಾಂತಗಳಲ್ಲಿ ಇಟ್ಟಿರುವ ದಂಡ ವಿಧಾನ ಕ[illegible] ಪೋಲೀಸ[illegible]ದವನ್ನು ಅಲ್ಲಿಂದ [illegible] ಇಲ್ಲವೆ [illegible] ಆ ಪ್ರಾಂತಿಕ ಸರಕಾರಗಳಿಗೆ ಕೊಡಲಿ[illegible] ಸಂಬಂಧವಾಗಿ ಖರ್ಚ ಮಾಡಲ್ಪಟ್ಟ ಹಣಕ್ಕಿಂತಲೂ ಹೆಚ್ಚಿನ ಹಣವನ್ನು ವಸೂಲ ಮಾಡುವದರಲ್ಲಿ ಬರುವದಿಲ್ಲ.

೧೪ ಜಪ್ತವಾದ ಆಸ್ತಿಯು ಇನ್ನೂ ಸರಕಾರದ ವಶದಲ್ಲಿ ಇದ್ದಾದರೆ ಅದು ತಿರುಗಿ ಕೊಡಲಡುವದು. ಭೂಕಂದಾಯ ಇಲ್ಲವೆ ಸರಕಾರಕ್ಕೆ ಸಲ್ಲತಕ್ಕ ಇತರ ಹಣದ ಸಂಬಂಧವಾಗಿ ಜಪ್ತ ಮಾಡಲಟ್ಟ ಜಂಗಮ ಆಸ್ತಿಯನ್ನು ತಿರುಗಿ ಕೊಡಲಾಗುವದು. ಯಾವನಾದರೂ ಒಬ್ಬನು ಭೂಕಂದಾಯವನ್ನು ಕೊಡುವದಿಲ್ಲವೆಂದು ಕಲೆಕ್ಟರನಿಗೆ ಅನಿಸಿದರೆ ಅವನ ಆಸ್ತಿಯು ಅವನಿಗೆ ತಿರುಗಿ ಸಿಗಲಾರದು. ಆದರೆ ಅವನು ಬಹಳ ಸಮಯದ ಮೂಲಕವಾಗಿ ಭೂಕಂದಾಯವನ್ನು ಕೊಡಲು ಅಸಮರ್ಥನಾಗಿದ್ದರೆ, ರೀತಿಪ್ರಕಾರ ಅವನಿಗೆ ಸವಲತ್ತು ಕೊಡುವದರಲ್ಲಿ ಬರುವದು. ಜಂಗಮ ಆಸ್ತಿಗೆ ಯೋಗ್ಯ ಬೆಲೆಯು ಬಂದಿದ್ದಲ್ಲಿ ಆ ಬಗ್ಗೆ ಹಾನಿಯನ್ನು ತುಂಬಿ ಕೊಡುವದಿಲ್ಲ. ಜಂಗಮ ಆಸ್ತಿಯು ಮಾರಲ್ಪಟ್ಟಿದ್ದರೆ ಅದು ತಿರುಗಿ ಸಿಗಲಾರದು. ಆದರೆ ಸರಕಾರಕ್ಕೆ ಸಲ್ಲತಕ್ಕದ್ದಾಗಿರುವದಕ್ಕಿಂತಲೂ ಹೆಚ್ಚಿಗೆ ಹಣ ವಸೂಲಾಗಿದರೆ ಆ ಹೆಚ್ಚಿನ ಹಣವನ್ನು ತಿರುಗಿ ಕೊಡಲಾಗುವದು. ಜಪ್ತಿ ಮಾಡಿದ್ದು ಕಾಯಿದೆಗೆ ವಿರುದ್ಧವಾಗಿದ್ದರೆ ಆ ಬಗ್ಗೆ ಕೋರ್ಟಿನಲ್ಲಿ ದಾವೆ ಮಾಡಲು ಸರ್ವರಿಗೂ ಅಧಿಕಾರ ಇದೆ.

೧೫ ೧೯೩೦ ನೆಯ ಇಸ್ವಿಯ ೯ ನೆಯ ಆರ್ಡಿನನ್ಸಕ್ಕನುಸರಿಸಿ ಜಪ್ತ ಮಾಡಿದ ಯಾವತ್ತೂ ಸ್ಥಾವರ ಆಸ್ತಿಯನ್ನು ತಿರುಗಿ ಕೊಡಲಾಗುವದು. ಭೂಕಂದಾಯವನ್ನು ವಸೂಲ ಮಾಡುವದಕ್ಕಾಗಿ ಹೊಲ ಇಲ್ಲವೆ ಇತರ ಸ್ಥಾವರ ಆಸ್ತಿ ಜಪ್ತ ಮಾಡುವದರಲ್ಲಿ ಬಂದಿದ್ದಲ್ಲಿ ಅವುಗಳನ್ನು ತಿರುಗಿ ಕೊಡುವದರಲ್ಲಿ ಬರುವದು. ಆದರೆ ಯಾವನಾದರೂ ಭೂಕಂದಾಯವನ್ನು ಕೊಡುವದಿಲ್ಲವೆಂದು ಕಲೆಕ್ಟರನಿಗೆ ಕಂಡುಬಂದಲ್ಲಿ ಅವನ ಆಸ್ತಿಯು ಅವನಿಗೆ ತಿರುಗಿ ಸಿಗಲಾರದು. ಹೊಲ ಇಲ್ಲವೆ ಸ್ಥಾವರ ಆಸ್ತಿಯು ಮೂರನೇದವನಿಗೆ ಮಾರಲ್ಪಟ್ಟಿದ್ದರೆ ಅದು ತಿರುಗಿ ಸಿಗಲಾರದು. ವ್ಯವಹಾರವು ಪೂರ್ಣವಾಗಿದು ಹೋಗಿದೆಯೆಂದು ತಿಳಿಯಬೇಕು.

ಸೂಚನೆ:— ಆಸ್ತಿಗಳ ಮಾರಾಟವು ಕೆಲವು ಕಡೆಗಳಲ್ಲಿ ಅನ್ಯಾಯದಿಂದಲೂ, ಕಾಯಿದೆಗೆ ವಿರುದ್ಧವಾಗಿಯೂ ಮಾಡಲ್ಪಟ್ಟಿದೆಯೆಂದು ಮಿ. ಗಾಂಧಿಯವರು ಅನ್ನುತ್ತಿರುವರು. ಅವರ ಈ ಅಭಿಪ್ರಾಯವು ಸರಕಾರಕ್ಕೆ ಮಾನ್ಯವಿರುವದಿಲ್ಲ.

ಈ ಸಂಬಂಧವಾಗಿ ಕಾಯಿದೆಗೆ ವಿರುದ್ಧವಾದ ಸಂಗತಿಗಳು ಸಂಭವಿಸಿದಲ್ಲಿ, ಕೋರ್ಟಿನಲ್ಲಿ ದಾವೆ ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿರುವದು.

೧೬ ಸರಕಾರಕ್ಕೆ ಸಲ್ಲತಕ್ಕ ಹಣವನ್ನು ವಸೂಲ ಮಾಡುವಾಗ ಅನ್ಯಾಯ ಹಾಗು ಕಾಯಿದೆಗೆ ವಿರುದ್ಧವಾದ ಕೃತಿಗಳು ಘಟಿಸಿವೆಯೆಂದು ಸರಕಾರಕ್ಕೆ ಅನಿಸುವದಿಲ್ಲ. ಇಂತಹ ಕೃತಿಗಳು ಘಟಿಸಿವೆಯೆಂದು ಕಲೆಕ್ಟರನಿಗೆ ಅನಿಸಿದರೆ, ಅವನು ಆ ಬಗ್ಗೆ ವಿಚಾರಣೆ ನಡಿಸಬೇಕು. ಮತ್ತು ಹಾನಿಯನ್ನು ಕೂಡಲೆ ತುಂಬಿ ಕೊಡಬೇಕು.

೧೭ ಸರಕಾರಿ ಉದ್ಯೋಗಸ್ಥರು ಇಲ್ಲವೆ ಗಾಂವಾಧಿಕಾರಿಗಳ ರಾಜೀನಾಮೆ ಕೊಟ್ಟ ಮೂಲಕವಾಗಿ ತೆರವು ಬಿದ್ದ ಸ್ಥಳಗಳ ಮೇಲೆ ಯಾರಾದರೂ ಪ್ರತಿನಿಯಮಿಸಿದ್ದರೆ, ರಾಜೀನಾಮೆ ಕೊಟ್ಟವರನ್ನು ಆ ಸ್ಥಳಗಳ ಮೇಲೆ ಪುನಃ ತೆಗೆದುಕೊಳ್ಳಲಾಗುವದಿಲ್ಲ. ಪುನಃ ತಮ್ಮನ್ನು ನಿಯಮಿಸಿಕೊಳ್ಳಲು ಯಾರಾದರೂ ಅರ್ಜಿ ಮಾಡಿದಲ್ಲಿ, ಆ ಅರ್ಜಿಗಳನ್ನು ಸಹಾನುಭೂತಿಪೂರ್ವಕವಾಗಿ ವಿಚಾರ ಮಾಡಲಾಗುವದು.

೧೮ ಉಪ್ಪಿನ ಕಾಯಿದೇಭಂಗದ ಕಡೆಗೆ ತಮ್ಮ ಲಕ್ಷ್ಯವನ್ನು ಹೊರಳಿಸದಿರಲು ಸರಕಾರವು ಸಿದ್ಧವಿಲ್ಲ. ಬಡ ಜನರಿಗೆ ಸೋಯಿಸ್ಕರವಾಗಬೇಕೆಂಬ ಉದ್ದೇಶದಿಂದ ಈಗಿರುವ ಕಾಯಿದೆಗನುಸರಿಸಿ ಕೆಲಕೆಲವು ಕಡೆಗಳಲ್ಲಿ ಸವಲತ್ತು ಕೊಟ್ಟಿರುವಂತೆ, ಉಪ್ಪಿನ ಕ್ಷೇತ್ರಗಳಲ್ಲಿರುವ ಒಡ ಜನರಿಗೂ ತಮ್ಮ ಮನೆಯ ಉಪಯೋಗಾರ್ಥವಾಗಿ ಇಲ್ಲವೆ ತಮ್ಮ ಹಳ್ಳಿಗಳಲ್ಲಿ ಮಾರುವ ಸಲುವಾಗಿ ಉಪ್ಪು ತೆಗೆದುಕೊಳ್ಳುವ ಹಾಗೂ ಸಿದ್ಧಪಡಿಸಲಿಕ್ಕೆ ಅಪ್ಪಣೆಯನ್ನು ಕೊಡುವದರಲ್ಲಿಬಂದಿದೆ. ಆದರೆ ಉಪ್ಪನ್ನು ತಮ್ಮ ಹಳ್ಳಿಯ ಹೊರಗೆ ಮಾರುವದಕ್ಕೆ ಮತ್ತು ಅದರ ವ್ಯಾಪಾರ ಸಾಗಿಸುವದಕ್ಕೆ ಅಪ್ಪಣೆಯಿಲ್ಲ.

೧೯ ಈ ಒಪ್ಪಂದದ ಕಲಮುಗಳನ್ನು ರಾಷ್ಟ್ರೀಯ ಸಭೆಯವರು ಸಂಪೂರ್ಣವಾಗಿ ಪಾಲಿಸದಿದ್ದಲ್ಲಿ, ಶಾಂತತೆ ಮತ್ತು ಸುವ್ಯವಸ್ಥೆಯನ್ನು ಕಾಯುವದಕ್ಕಾಗಿ ಜನರ ಹಾಗೂ ವ್ಯಕ್ತಿಯ ಹಕ್ಕುಗಳ ಸಂರಕ್ಷಣೆಗಾಗಿ ಅವಶ್ಯವಿರುವ ಯಾವತ್ತೂ ಉಪಾಯಗಳನ್ನು ಸರಕಾರವು ಕೈಕೊಳ್ಳುವದು.

[ರುಜು] ಎಚ್. ಡಬ್ಲ್ಯು. ಇಮರ್ಸನ್
ಸೆಕ್ರೆಟರಿ, ಹಿಂದುಸ್ಥಾನ ಸರಕಾರ

ಭಯಂಕರ ದಂಗೆ
ನೂರಾರು ಜನರಿಗೆ ಗಾಯಗಳಾಗಿವೆ.

೭ನೇ ಫೆಬ್ರುವರಿ ರಾತ್ರಿ ಸೆನಲ್ ದೀಕ್ಷಿತರ ಜ್ವರ ಸ್ಪೆಟಲ್ ಪ್ರದೇಶದಲ್ಲಿ ಪ್ರಾರಂಭವಾದ ದಂಗೆಯು ಹೆಚ್ಚುತ್ತ ಹೋಗಿ ನೂರಾರು ಜನರಿಗೆ ಗಾಯಗಳಾಗಿ ದ್ವೇಷ ಹೆಚ್ಚು ಜನರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಬಾಗಲಕೋಟೆಯಲ್ಲಿ
ಪಿಕೆಟಿಂಗಕ್ಕೆ ಪ್ರಾರಂಭ

ವ್ಯಾಪಾರಿ ಸಂಘದ ಪ್ರಮುಖರು ವಿದೇಶಿ ಬಟ್ಟೆಯನ್ನು ಇಟ್ಟು ತಮ್ಮ ವ್ಯಾಪಾರವನ್ನು ನಡೆಸಿದ್ದರಿಂದ ಶ್ರೀ ಗೋಳಭಾವಿ ಬಸಲಿಂಗಪ್ಪನವರು ಹಾಗೂ ಶ್ರೀ ಕಲ್ಲಪ್ಪ ಶಿವಪ್ಪನವರ ಅಂಗಡಿಯ ಮುಂದೆ ಮೊನ್ನೆಯಿಂದ ಪಿಕೆಟಿಂಗ ಪ್ರಾರಂಭವಾಗಿದ್ದು, ಶ್ರೀ ಹನಗಂಡಿ ಮದ್ದು, ಸಾಲಿಮಠ, ಕೃಷ್ಣ ಹುಂಡೇಕಾರ, ಧವಳೇಶ್ವರ, ವಿಶ್ವ ವೆಂಕಣ್ಣ, ಕಾಂಚಿ ಗೋವಿಂದ, ಶ್ರೀ ಜಗ ನಾಥ, ಶ್ರೀಮತಿ ಪವಾರ ಪಂಕಜಾಬಾಯಿ, ಪಡಕಿ ಲಕ್ಷ್ಮೀಬಾಯಿ, ಅಂಬಿಗ ಚಂಪಾಬಾಯಿ, ಪವಾರ ಸಾವಿತ್ರಿದೇವಿ ಮೊದಲಾದವರು ಸರದಿ ಪ್ರಕಾರವಾಗಿ ಪಿಕೆಟಿಂಗ ಮಾಡುತ್ತಿರುವರು. ಪಿಕೆಟಿಂಗದ ಪರಿಣಾಮವಾಗಿ ಈ ಎರಡೂ ದಿನಗಳಲ್ಲಿ ಯಾವ ಗಿರಾಕಿಗಳೂ ಅವರ ಅಂಗಡಿಯಲ್ಲಿ ವ್ಯಾಪಾರ ಕೊಂಡಿಲ್ಲ.

ಕರ್ನಾಟಕ ಪ್ರಾಂತಿಕ
ಕಾಂಗ್ರೆಸ್ ಕಮಿಟಿಯ ಸಭೆ.

(ಪ್ರಂತಿಯ ವಾರ್ತೆ. ವಿಜಾಪುರ, ತಾ|| ೭)

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕ ಮಿಟಿಯ ಸಭೆಯು ಬಹುತರ ಇದೇ ೨೦ನೇ ತಾರೀಖಿನಂದು ಸೇರಬಹುದಾಗಿ ತಿಳಿದು ಬಂದಿದೆ.

ಶುದ್ಧ ಖಾದಿ ! ಶುದ್ಧ ಖಾದಿ !!

ನಮ್ಮಲ್ಲಿ ಎಲ್ಲ ತರದ ಶುದ್ಧ ಖಾದಿ ಶುದ್ಧದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿಜಾಪುರದಿಂದ
ಪಂಢರಪೂರ
ಮೋಟರ ಸರ್ವಿಸ

ಮೋಟರು ಪ್ರತಿದಿನ ವಿಜಾಪುರದಿಂದ ಮುಂಜಾನೆ ೭|| ಗಂಟೆಗೆ ಹೊರಟು, ಜತ್ತ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ಅದೇ ಮೋಟರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆ ೭ ಗಂಟೆಗೆ ವಿಜಾಪೂರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಆ ದಿನ ವಿಳಾಸದ ವರ ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳ ಬೇಕು. ಮ್ಯಾನೇಜರ.

ಆಟಲ ಮಹಾಲಕ್ಷ್ಮೀ ಮೋಟಾರ ಸರ್ವಿಸ ವಿಜಾಪುರ.

ಪ್ಲಾಟು ಮಾರಾಟಕ್ಕಿದ್ದದ

ಡಿಸ್ಟ್ರಿಕ್ಟ ವಿಜಾಪೂರ ತಾ| ಬಾಗಲಕೋಟ ಪೈಕಿ ಕಸಬಾ ಬಾಗಲಕೋಟೆಯಲ್ಲಿ ರಿ|| ಸ|| ನಂ| ೨೯೦ ಎಕರೆ ೯ ಆಕಾರ ೯ ಇದಕ್ಕೆ ಚತುಸ್ಸೀಮೆ- ಪೂರ್ವಕ್ಕೆ ಹಳ್ಳ ಪಶ್ಚಿಮಕ್ಕೆ ಸರ್ವೆನಂ| ೨೯೧. ಉತ್ತರಕ್ಕೆ ರಲ್ವೇ ಲೈನ. ದಕ್ಷಿಣಕ್ಕೆ ಸ| ನಂ| ೧೬೭ ಈ ಪ್ರಕಾರ ಚತುಸ್ಸೀಮೆ ನಡುವ (ಪಾಲು ರಾಮ ದಾಸ ಗಾಡಿ ಎದರಿಗೆ ...) ನಮ್ಮ ಖಾತೆ ವಹಿ ವಾಟಿಯ ಜಮೀನು (ಪ್ಲಾಟುಗಳು) ಮಾರಾಟಕ್ಕಿದ್ದದೆ. ಖರೀದಿ ತೆಗೆದುಕೊಳ್ಳಬೇಕೆನ್ನುವವರು ಕೆಳಗೆ ಸಹಿಮಾಡಿದವರ ಸಂಗಡ ಪತ್ರವ್ಯವಹಾರ ಇಲ್ಲವೆ ಸಮಕ್ಷಮ ಭೆಟ್ಟಿಯಾಗಬೇಕು. ತಾ|| ೨೩-೨- ೧೯೩೧

ದಾಮೋದರಾವ ಕೇಶವರಾವ ಪೈಠಣಕರ. ವೆಂಕಟಪೇಟ ಹಣಮಂತರಾವ ಭಟ್ಟ ವಕೀಲ ಇವರ ಮನಿ ಎದುರಿಗೆ ಬಾಗಲಕೋಟ.

ಸ್ಯಾಂಪಲ್ ಮತಿ ಚೀಟಿಗಳು (ಪುಕ್ಕಟೆ)

ನೀಲಿ ಕಪ್ಪು, ಕೆಂಪು, ಜಾಂಬಳಿ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ ೩—೦—೦
೧ ಸಾವಿರ ಚೀಟಿಗಳಿಗೆ, ೩-೮-೦
೫ ಸಾವಿರಕ್ಕೆ, ೧೬-೦-೦ ರೇಟ್ಪೆಶಿ
೫ ತೊಲಿ ಬಾಟಲಿಗಳಿಗೆ ೧-೦-೦
ರಬ್ಬರ ಸ್ಟ್ಯಾಂಪ ಮಸಿ ಶಿಶಿ ಬ್ರಶ ಸಹಿತ ೧-೦-೦
ಗಡಜನ ಬಾಟ್ಲಿಗೆ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟ

ಪುರಂದರೆಯವರ
ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪಿಗೆಗಳು ಮಾರಾಟಕ್ಕೆ ಸಿಗುತ್ತವೆ ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಹೊಸದಾಗಿ ಮಾಡಿ ಕೊಡಲಾಗುವದು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣ ಸಹ ಕೊಡಲಾಗುವದು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಸಬಾಜಾರ ವಿಜಾಪುರ

ಬೆಟಿಗೇರಿ ಬ್ರದರ್ಸ
ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಿಮಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡಲಾಗುವದು. ವೆಸ್ಟ ಎಂಡ್, ಜೆನಿಥ್, ಒಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೆಶ್ಯಾಲಿಟಿ. ಬೆಟಿಗೇರಿ ಬ್ರದರ್ಸ

ಸ್ಟೇಶನ್ ರೋಡ

ಹುಬ್ಬಳ್ಳಿ ಮತ್ತು ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂವಿದ್ಯೆ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿವೆ)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ, ವಿಜಾಪುರ

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸ ಕುಲಕರ್ಣಿ ಇವರು ಬಾಗಲಕೋಟೆ ವಿದ್ಯಾಸಾಗರ ಮುದ್ರಾಮಂದಿರದಲ್ಲಿ ಮುದ್ರಿಸಿ ಅವರಿಂದಲೇ ಪ್ರಸಿದ್ಧಪಡಿಸಲ್ಪಟ್ಟಿತು.

ರ ನಂ. ಬಿ. ೨೭೮೮ ನಿತ್ಯ ಸಂಚಿಕೆ ಬೆಲೆ ೦—೦—೩.

सर्वं परवशं दुःखं । सर्वमात्मवशं सुखम् ॥—मनु.

ಕನ್ನಡಿಗ

KANNADIGA BAGALKOT. BI-WEEKLY ಅರೆವಾರ ಪತ್ರಿಕೆ

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧] ಬಾಗಲಕೋಟೆ—ಮಂಗಳವಾರ ಮಿತಿ ಫಾಲ್ಗುಣ ಬಹುಳ ೭ ಶಕೆ ೧೮೫೨ ತಾ॥ ೧೦—೩—೩೧ [ಸಂಚಿಕೆ ೨೦೪

ತರುಣರಿಗೆ ಮಹಾತ್ಮರ ಆಹ್ವಾನ

ತಾ॥ ೭ ನೆಯ ದಿವಸ ದಿಲ್ಲಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವಾಗ ಮಹಾತ್ಮಾ ಗಾಂಧಿಯವರು ತರುಣರನ್ನುದ್ದೇಶಿಸಿ ಕೆಳಗಿನಂತೆ ಹೇಳಿದರು.

"ನನ್ನ ಹಾಗು ವ್ಹಾಯಿಸರಾಯರ ನಡುವೆ ಆದ ಒಪ್ಪಂದಕ್ಕೆ ಕರಾಚಿಯಲ್ಲಿ ಕಾಂಗ್ರೆಸದ ಸಮ್ಮತಿಯನ್ನು ಪಡೆದುಕೊಳ್ಳುವದಕ್ಕೆ ಇರುವದು. ಈ ಒಪ್ಪಂದವು ಬೇಡಾಗಿದ್ದಲ್ಲಿ, ತರುಣರು ವರ್ಕಿಂಗ ಕಮೀಟಿಯ ಮೇಲೆ ಅವಿಶ್ವಾಸದ ಠರಾವು ಪಾಸು ಮಾಡಿ, ಕಾಂಗ್ರೆಸ್ ಕಾರ್ಯವನ್ನು ತಾವೇ ಸಾಗಿಸಿಕೊಂಡು ಹೋಗಬೇಕು.

ಅಖಿಲ ಕರ್ನಾಟಕದಲ್ಲಿ ಸತ್ಯಾಗ್ರಹ ವಿಜಯೋತ್ಸವ

ಮಹಾತ್ಮಾ ಗಾಂಧಿಯವರು ಸ್ವತಂತ್ರ್ಯ ಸಮರಕ್ಕೆ ಸಾಗಬೇಕೆಂದು ೧೨—೩—೩೦ ನೇ ದಿನ ದಂಡಯಾತ್ರೆಯನ್ನು ಪ್ರಾರಂಭಿಸಿದರು. ಅದೇ ದಿನ ಅಖಿಲ ಕರ್ನಾಟಕದಲ್ಲಿಯೂ ಸತ್ಯಾಗ್ರಹ ವಿಜಯೋತ್ಸವವು ಆಗುವದು ಉಚಿತವು. ಭಾರತೀಯ ಕಾಂಗ್ರೆಸ್ ಕಾರ್ಯಕಾರೀ ಮಂಡಳದವರಾದರೂ ಈ ಕಾರ್ಯಕ್ಕಾಗಿ ಒಂದು ದಿನವನ್ನು ನೇಮಿಸಬಹುದು. ಇದೇ ದಿನವನ್ನು ಅವರಾದರೂ ನೇಮಿಸುವರೆಂದು ನಮ್ಮ ಆಶೆ.

ಆ ದಿನ ಅಖಿಲ ಕರ್ನಾಟಕದಲ್ಲಿ ಈ ಕೆಳಗಿನಂತೆ ಕಾರ್ಯಕ್ರಮವು ಸಾಗಬೇಕೆಂದು ನಮ್ಮ ಆಶೆ.

೧ ಊರಲ್ಲಿಯ ಎಲ್ಲ ನಗರಸಂಕೀರ್ತನೆಗಳು ಹೊರಟು ಮುಂಜಾನೆ ಸರಿಯಾಗಿ ೮ ಗಂಟೆಗೆ ಒಂದೇಕಡೆಗೆ ರಾಷ್ಟ್ರಧ್ವಜವಂದನೆಯಾಗಬೇಕು.

೨ ಊರಲ್ಲಿ ಎಲ್ಲರ ಮನೆಗೆ ಧ್ವಜವು ಇರುವಂತೆ ಪ್ರಯತ್ನ ಪಡಬೇಕು.

೩ ಸಾಯಂಕಾಲ ೫ ಗಂಟೆಗೆ ೧, ಲಾಠೀ ಪೆಟ್ಟು ತಿಂದವರು, ೨, ಸೆರೆಮನೆಗೆ ಹೋಗಿ ಬಂದ ಸ್ತ್ರೀಯರು, ೩, ಸೆರೆಮನೆಗೆ ಹೋಗಿ ಬಂದ ಪುರುಷರು ೪, ಆಯಾ ಸ್ಥಳದ ಕಾಂಗ್ರೆಸ್ ಅಧಿಕಾರಿಗಳು, ೫, ಸ್ವಯಂಸೇವಕರು, ಈ ಕ್ರಮದಿಂದ ದೊಡ್ಡ ಮೆರವಣಿಗೆ ಹೊರಡಬೇಕು.

೪ ಕಾಂಗ್ರೆಸ್ ಕಮೀಟಿಗಳು ಬೇಕಾಯದೆಶೀರ ಆಗಿದ್ದು, ಆಯಾ ಕಚೇರಿಗಳು ಸರಕಾರಕ್ಕೆ ಸೇರಿದ್ದಾಗಿದ್ದರೆ ಅವುಗಳನ್ನು ತಳಿರು ತೋರಣಗಳಿಂದ ಶೃಂಗರಿಸಿ, ಅಲ್ಲಿ ರಾಷ್ಟ್ರಧ್ವಜ ಹಚ್ಚಿ ಅವುಗಳನ್ನು ಸಂಭ್ರಮದಿಂದ ಪ್ರವೇಶಿಸಬೇಕು.

೫ ಮೆರವಣಿಗೆಯು ಸಭಾಸ್ಥಾನಕ್ಕೆ ಹೋದಮೇಲೆ ಯೋಗ್ಯ ಕಾಂಗ್ರೆಸ್ ಭಕ್ತರ ಅಧ್ಯಕ್ಷತೆಯಲ್ಲಿ ಸಭೆ ಕೂಡಬೇಕು.

೬ ಸಭೆಯಲ್ಲಿ ಅಲ್ಲಿಯ ಸತ್ಯಾಗ್ರಹದ ಸ್ವಲ್ಪ ಇತಿಹಾಸವು ಹೇಳಲ್ಪಡಬೇಕು. ತ್ಯಾಗಪೂರ್ವಕ ಕೆಲಸ ಮಾಡಿದವರ ವಿಶೇಷತಃ ಸ್ತ್ರೀಯರ ಮತ್ತು ಸ್ವಯಂಸೇವಕರ ಉಲ್ಲೇಖವನ್ನು ಚನ್ನಾಗಿ ಮಾಡಬೇಕು.

೭ ಆ ಮೇಲೆ ಕೆಳಗಿನಂತಹ ಠರಾವನ್ನು ಎಲ್ಲರೂ ಜಯಘೋಷದಿಂದ ಸ್ವೀಕರಿಸಬೇಕು.

"ಸತ್ಯಾಗ್ರಹ ತತ್ವಗಳ ಆಚರಣೆಯ ಮೂಲಕವೇ ಈಗಿನ ವಿಜಯವು ರಾಷ್ಟ್ರಕ್ಕೆ ದೊರೆತಿರುವದೆಂದು ಈ ಸಭೆಯು ವಿಶ್ವಾಸವಿಟ್ಟು ಅದರ ತತ್ವರಿಂದ ಸಂತುಷ್ಟವಾಗದೆ ಸಂಪೂರ್ಣ ಸ್ವರಾಜ್ಯ ಪ್ರಾಪ್ತಿಯಾಗುವವರೆಗೆ ಇದೇ ತತ್ವಗಳನ್ನನುಸರಿಸಿ ಹೋರಾಡುವ ನಿಶ್ಚಯವನ್ನು ಈ ಸಭೆಯು ಮಾಡುತ್ತದೆ"

ಇದರಲ್ಲಿ ಯೋಗ್ಯ ಸ್ಥಾನಿಕ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ರಂಗನಾಥ ದಿವಾಕರ.

ಗಾಂಧಿ—ಆಯರ್ವಿನರ ಭೆಟ್ಟಿ.

(ತಂತಿಯ ವಾರ್ತೆ ತಾ॥ ೯)

ಶನಿವಾರ ದಿವಸ ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರನ್ನು ಪುನಃ ಕಂಡುಕೊಂಡು ಅವರೊಡನೆ ಚರ್ಚೆ ನಡಿಸಿದರು. ಯಾವ ಯಾವ ವಿಷಯಗಳ ಸಂಬಂಧವಾಗಿ ಚರ್ಚೆ ನಡೆಯಿತೆಂಬುವದು ಇನ್ನೂ ತಿಳಿದು ಬಂದಿಲ್ಲ.

ಒಪ್ಪಂದವಾದ ಮೇಲೆ ನಾವು ಹೇಗೆ ವರ್ತಿಸಬೇಕು?

ಸಂಗಡಿಗರೇ,

ಎಲ್ಲ ಕಾಂಗ್ರೆಸ್ ಕಮಿಟಿಗಳೂ, ಕಾಂಗ್ರೆಸ್ಸಿಗೆ ಅಧೀನವಟ್ಟು ಕೆಲಸ ಮಾಡುವ ಸಂಸ್ಥೆಗಳೂ, ಕಾಂಗ್ರೆಸ್ ಕೆಲಸ ಮಾಡುವ ಸಂಸ್ಥೆಗಳೂ ಈ ಕೆಳಗಿನ ಸೂಚನೆಗಳನ್ನು ತಪ್ಪದೇ ಅಕ್ಷರಶಃ ಅಮಲಿನಲ್ಲಿ ತರತಕ್ಕದ್ದು. ಎಲ್ಲ ಕಾಂಗ್ರೆಸ ಕೆಲಸಗಾರರೂ ಇದನ್ನು ನೋಡಬೇಕು.

ಕರ್ನಾಟಕದ ಅನೇಕ ಕಾಂಗ್ರೆಸ ಸಂಸ್ಥೆಗಳು ಬೆ ಕಾಯದೇಶೀರ ಆದ್ದರಿಂದ ಕೇವಲ ಕಾಂಗ್ರೆಸ ಕಮಿಟಿಗಳಿಗೆ ಮಾತ್ರ ಈ ಆಜ್ಞೆಗಳನ್ನು ಕಳಿಸುವದು ಸಾಧ್ಯವಿಲ್ಲ ಆದ್ದರಿಂದ ಎಲ್ಲ ಕೆಲಸಗಾರರೂ ಅದರಂತೆ ನಡೆದುಕೊಳ್ಳಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

೧) ಕವಿನಯ ಕಾಯದೇ ಭಂಗ ಹಾಗೂ ಬೇರೆ ಕಾಯದೇ ಕಾನೂನುಗಳ ತಿರಸ್ಕಾರವನ್ನು ನಿಲ್ಲಿಸತಕ್ಕದ್ದು.

೨) ಬಹಳ ಜನರು ಸೇರಿ, ಸಾರ್ವತ್ರಿಕ ರೀತಿಯಿಂದ ಉಪ್ಪಿನ ಕಾಯದೆ ಭಂಗವನ್ನು ಮಾಡತಕ್ಕದ್ದಲ್ಲ ಅಥವಾ ಉಪ್ಪಿನ ಸಂಗ್ರಹಾಲಯಗಳ ಮೇಲೆ ದಾಳಿಗಳನ್ನು ಮಾಡತಕ್ಕದ್ದಲ್ಲ. ಯಾವ ಭಾಗದಲ್ಲಿ ಉಪ್ಪು ಕೂಡಿಸಬಹುದು ಅಥವಾ ಉಪ್ಪನ್ನು ಸಿದ್ಧಗೊಳಿಸಬಹುದು, ಅಲ್ಲಿಯ ಜನರು ಉಪ್ಪು ಕೂಡಿಸಲಿಕ್ಕೆ ಅಥವಾ ಸಿದ್ಧಗೊಳಿಸಲಿಕ್ಕೆ ಅಡ್ಡಿಯಿಲ್ಲ ಮನೆಯ ಉಪಯೋಗಕ್ಕಾಗಿ ಅಥವಾ ಹಳ್ಳಿಯಲ್ಲಿಯೇ ಮಾರುವದಕ್ಕಾಗಿ ಮಾತ್ರ ಈ ಉಪ್ಪನ್ನು ಉಪಯೋಗಿಸತಕ್ಕದ್ದು. ಆದರೆ ಪರ ಊರಿಗೆ ಮಾರತಕ್ಕದ್ದಲ್ಲ.

೩) ಕಾಯದೇ ಭಂಗ ಚಳವಳಿಯ ಪ್ರೋತ್ಸಾಹನಕ್ಕಾಗಿ ಸಾಯಿಕ್ಲೋಸ್ಟಾಯಿಲ ಪತ್ರಿಕೆಗಳನ್ನು ಹೊರಡಿಸತಕ್ಕದ್ದಲ್ಲ. ಉಳಿದ ಕೆಲಸಕ್ಕಾಗಿ ಇಂಥ ಮುದ್ರಣವು ನಡೆಯಬಹುದು.

೪) ರಾಜಕೀಯ ಕಾರಣಗಳಿಗಾಗಿ ಕರ ನಿರಾಕರಣೆಯ ಚಳವಳಿಯನ್ನು ಕೈಕೊಂಡ ಸ್ಥಳದಲ್ಲಿ ರೈತರು ಭೂಕಂದಾಯ ಮುಂತಾದವುಗಳನ್ನು ಕೊಡಲಿಕ್ಕೆ ಸಿದ್ಧರಾಗಬೇಕು. ಇದಕ್ಕಾಗಿ ಗ್ರಾಮಕ್ಕಾಗ ಮಾಡಿದವರು ಕೂಡ ತಮ್ಮ ಗ್ರಾಮಕ್ಕೆ ಹೋಗಬೇಕು.

೫) ಆರ್ಥಿಕ ಕಾರಣಗಳಿಗಾಗಿ ಅಥವಾ ಈ ವರ್ಷದ ಕನಿಷ್ಟ ಸ್ಥಿತಿಯ ಸಲುವಾಗಿ ಸರಕಾರಕ್ಕೆ ಭೂಕಂದಾಯ ಕೊಡುವದಾಗದೆಂದು ಯಾವ ಹಳ್ಳಿಯವರು ಅಥವಾ ತಾಲೂಕಿನವರು ಸಾರಿದ್ದಾರೋ ಅಲ್ಲಿಯ ಕರನಿರಾಕರಣೆಯನ್ನು ನಿಶ್ಚಿತ ಬೇರೆ ಮಾರ್ಗದಿಂದ ದಾದು ಹಚ್ಚಿಕೊಳ್ಳತಕ್ಕದ್ದು. (ಈ ವಿಷಯದಲ್ಲಿ ನಾನು ಮಹಾತ್ಮರಿಗೆ ಪತ್ರ ಬರೆದಿದ್ದೇನೆ. ಶಿರಸಿ, ಸಿದ್ದಾಪೂರ ಹಾಗೂ ಹಿರೇಕೆರೂರ ತಾಲೂಕುಗಳಲ್ಲಿ ಬೇರೆ ಎಲ್ಲ ಮಾರ್ಗಗಳನ್ನು ಉಪಯೋಗಿಸಿ ನೋಡಿ ರೈತರು ಕರನಿರಾಕರಣೆಯನ್ನು ಕೈಕೊಂಡಿರುವರು ಈ ವಿಷಯವಾಗಿ ವಿಚಾರ ಮಾಡುವ ಕರಿತು ಈ ಕೂಡಲೇ ಹಬ್ಬದಲ್ಲಿ ಆ ತಾಲೂಕಿನ ಪ್ರಮುಖ ಕಾರ್ಯಕರ್ತರ ಸಭೆಯು ಸೇರುವದು. ಆದ್ದರಿಂದ ಅಲ್ಲಿಯ ರೈತರು ತಮ್ಮನ್ನು ನಡುನೀರಿನಲ್ಲಿ ಕೈಬಿಟ್ಟರೆಂದು ತಿಳಿಯಕೂಡದು.)

೬) ಕೇವಲ ಬ್ರಿಟಿಶ ವಸ್ತುಗಳೆಂದು ಹಾಗೂ ಕೇವಲ ರಾಜಕೀಯ ಕಾರಣಕ್ಕಾಗಿ ಬ್ರಿಟಿಶ ವಸ್ತುಗಳನ್ನು ಬಹಿಷ್ಕರಿಸತಕ್ಕದ್ದಲ್ಲ ಪರದೇಶಿ ವಸ್ತುಗಳನ್ನು ಬಿಟ್ಟು ಸ್ವದೇಶೀ ವಸ್ತುಗಳನ್ನೇ ಉಪಯೋಗಿಸಬೇಕೆಂದು ಒತ್ತಾಯದಿಂದ ಕೇಳಬಹುದು. ಅದರಂತೆ ಎಲ್ಲ ಪರದೇಶೀ ಬಟ್ಟೆಗಳನ್ನು ಬಹಿಷ್ಕರಿಸಬೇಕೆಂದು ಬಲವಾಗಿ ಸಾರಬಹುದು.

೭) ಮಾದಕ ಪದಾರ್ಥಗಳ ಅಂಗಡಿಗಳ ಬಹಿಷ್ಕಾರವು ಎಂದಿನಂತೆಯೇ ಬಲವಾಗಿ ಸಾಗಬೇಕು.

೮) ಪರದೇಶೀ ವಸ್ತ್ರ ಹಾಗೂ ಮಾದಕ ಪದಾರ್ಥಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವಾಗ ಮಹಾತ್ಮಾ ಗಾಂಧಿಯವರು ಹೇಳಿದಂತೆ ಅದನ್ನು ಶಾಂತರೀತಿಯಿಂದ ಮಾಡಬೇಕು. ಸಾಮಾನ್ಯವಾಗಿ ಅಮಲಿನಲ್ಲಿರುವ ಕಾಯದೆಗೆ ಅದು ವಿರುದ್ಧವಾಗಿರಕೂಡದು. ಒತ್ತಾಯ, ಬೆದರಿಕೆ, ಕೈಕಟ್ಟಿ ನಿಲ್ಲುವುದು, ಕೂಗಾಟ, ಜನಸಮ್ಮರ್ದ ಪ್ರತಿಬಂಧ ಮುಂತಾದವನ್ನು ಉಪಯೋಗಿಸಬಾರದ. ಇಷ್ಟು ಶಾಂತ ರೀತಿಯಿಂದ ಪಿಕೆಟಿಂಗ ನಡೆಯದ ಸ್ಥಳದಲ್ಲಿ ಅದನ್ನು ಮಾಡಕೂಡದ.

ಧಾರವಾಡ ತಾ|೬—೩—೩೧ } ರಂಗನಾಥ ದಿವಾಕರ

ಮೀರತ ಒಳಸಂಚಿನ ಸೆರೆಯಾಳುಗಳ ಬಿಡುಗಡೆ

(ಮುಂಬಯಿ ವಾರ್ತೆ, ೫|೩)

ಮೀರತ ಒಳಸಂಚಿನ ಸೆರೆಯಾಳುಗಳನ್ನು ಇನ್ನೊಂದು ವಾರದೊಳಗಾಗಿ ಬಿಡುಗಡೆ ಮಾಡುವವರಿದ್ದಾರೆಂದು "ಮುಂಬಯಿ ಕ್ರಾನಿಕಲ್" ಪತ್ರಿಕೆಗೆ ವಿಶ್ವಸನೀಯವಾಗಿ ತಿಳಿದು ಬಂದಿದೆ.

ಮುಂಬಯಿಯಲ್ಲಿ ವಲ್ಲಭಭಾಯಿಯವರ ಭಾಷಣ

(ಮುಂಬಯಿ ವಾರ್ತೆ, ತಾ|೫)

ಮುಂಬಯಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವಾಗ ಸರದಾರ ವಲ್ಲಭಭಾಯಿಯವರು, ದಿಲ್ಲಿಯ ತರುಣರನ್ನುದ್ದೇಶಿಸಿ ಮಹಾತ್ಮರು ಕೊಟ್ಟ ಎಚ್ಚರಿಕೆಯನ್ನೇ ಪುನರುಚ್ಚಾರ ಮಾಡಿದರು

(ಮುಂಬಯಿ ವಾರ್ತೆ, ತಾ|೫)

ಮುಂಬಯಿ ಕಾಂಗ್ರೆಸ್ ಭುವನವು ಇವತ್ತಿನ ದಿವಸ ಕಾಂಗ್ರೆಸದವರ ವಶಕ್ಕೆ ಬರುವದೆಂದು ತಿಳಿದುಬಂದದ್ದರಿಂದ ಜನರು ನಸುಕಿನಲ್ಲಿಯೇ ತಂಡ ತಂಡವಾಗಿ ಅಲ್ಲಿಗೆ ಹೋಗಿದ್ದರು, ಆದರೆ ಪೋಲೀಸ ಅಧಿಕಾರಿಗಳು ಇನ್ನೂ ಅಲ್ಲಿಂದಾ ಕದಲಿದ್ದಿಲ್ಲ ಯೂನಿಯನ್ ಜ್ಯಾಕದ ಧ್ವಜ ಹಾರಾಡುತ್ತಿತ್ತು. ಜನರು ಅವುಗಳನ್ನು ನೋಡಿ ನಿರಾಶರಾಗಿ ತಿರುಗಿ ಬಂದರು. ಕಾಂಗ್ರೆಸ್ ಭುವನಗಳನ್ನು ಕಾಂಗ್ರೆಸದವರ ವಶಕ್ಕೆ ಕೊಡಬೇಕೆಂಬುದಾಗಿ ಸರಕಾರದವರು ಪ್ರಕಟನೆ ಹೊರಡಿಸಿದ್ದರೂ, ಪೋಲೀಸ ಅಧಿಕಾರಿಗಳು ಅದನ್ನು ಅವರಿಗೆ ಒಪ್ಪಿಸಲಿಕ್ಕೆ ಹೀಗೇಕೆ ವಿಳಂಬ ಮಾಡುತ್ತಿರುವರೋ ತಿಳಿಯದಾಗಿದೆ.

ಶ್ರೀ ಸೇನಗುಪ್ತರು ತರುಣರನ್ನು ಶಾಂತ ಮಾಡಿದರು.

(ಕಲಕತ್ತಾ ವಾರ್ತೆ ತಾ|೫)

೬ ಗಂಟೆ ಇಲ್ಲಿಯ ವಿದ್ಯಾರ್ಥಿಗಳು ಕಲಕತ್ತೆಯಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯ ಕೆಳಗೆ ಸಭೆ ಮಾಡಿಕೊಂಡು, ಗಾಂಧಿ—ಆಯರ್ವಿನರ ಒಪ್ಪಂದವನ್ನು ಕುರಿತು ತಮ್ಮ ಅಸಂತೋಷವನ್ನು ಸೂಚಿಸುವ ಗೊತ್ತುವಳಿಯನ್ನು ಸಭೆಯಲ್ಲಿ ನಿರ್ಧರಿಸಿಕೊಂಡರು. ಶ್ರೀ ಸೇನಗುಪ್ತರು ಸಮಯೋಚಿತವಾಗಿ ಒಪ್ಪಂದದ ಬಗ್ಗೆ ಸ್ಪಷ್ಟೀಕರಣ ಮಾಡಿ ತರುಣರ ಸಂಶಯವನ್ನು ಪರಿಹರಿಸಿದರು. ತರುಣರು ಅವರ ಸ್ಪಷ್ಟೀಕರಣಕ್ಕೆ ಸಂತುಷ್ಟರಾಗಿ ಮೊದಲಿನ ಗೊತ್ತುವಳಿಯನ್ನು ಹಿಂತೆಗೆದುಕೊಂಡರು.

ಒಪ್ಪಂದದ ಬಗ್ಗೆ

ಮಹಾತ್ಮರ ಸ್ಪಷ್ಟೀಕರಣ.

ದೇಶಿ ಹಾಗು ಪರದೇಶಿ ವೃತ್ತಪತ್ರಿಕೆಗಳ ೧೫ ಜನ ಪ್ರತಿನಿಧಿಗಳಿಗೆ ಮಹಾತ್ಮಾ ಗಾಂಧಿಯವರು ತಾ|| ೫ ನೆಯ ದಿವಸ ಒಪ್ಪಂದದ ಅರ್ಥವನ್ನು ತಿಳಿಸಿಕೊಡುವಾಗ ಹೇಳಿದ್ದೇನೆಂದರೆ:—

ಒಪ್ಪಂದವಾಗುವದು, ಸಾಧ್ಯವಿಲ್ಲವೆಂಬುದಾಗಿ ನನಗೆ ಮೊದಲು ಸಂಶಯಬಂದಿತ್ತು. ಆದರೆ ವ್ಹೈಸರಾಯರು ಪ್ರಾರಂಭದಲ್ಲಿಯೇ ಅದನ್ನು ಪರಿಹಾರಮಾಡಿದರು. ಒಪ್ಪಂದವನ್ನು ಮಾಡಿಕೊಳ್ಳಲು ಇಬ್ಬರೂ ಆತುರರಾಗಿದ್ದೆವು. ಈ ಸಮಯದಲ್ಲಿ ಹಿಂದಕ್ಕೆ ಸರಿಯತಕ್ಕದ್ದಲ್ಲವೆಂದು ನಾನು ನಿಶ್ಚಯ ಮಾಡಿಕೊಂಡಿದ್ದೆ. ನನ್ನ ಸಿಸ್ಟರ ಕಾರ್ಯ ಯಶಸ್ಸು ಸಿಕ್ಕಿತು. ಒಪ್ಪಂದವಾಗದಿದ್ದರೆ ಈಗಿನ ಕಷ್ಟನಷ್ಟಗಳು ಹೇರಾರ ಪಾಲು ಹೆಚ್ಚಾಗುತ್ತಿದ್ದವು. ಒಪ್ಪಂದದಿಂದ ಈಗಂತೂ ಶಾಂತತೆಯುಂಟಾಗಿದೆ. ಅದು ಶಾಶ್ವತವಾಗಬೇಕೆಂದೇ ನನ್ನ ಹಾರೈಕೆ.

ಯಾರು ಸೋತರು, ಯಾರು ಗೆದ್ದರು ಎಂಬುದನ್ನು ಹೇಳುವದು ಬಹು ಕಠಿಣವಾಗಿದೆ. ಇಬ್ಬರೂ ಗೆದ್ದಿರುವೆವೆಂದೇ ನನ್ನ ಮತ. ರಾಷ್ಟ್ರೀಯ ಸಭೆಯ ಧ್ಯೇಯವು ಈ ಮೊದಲೇ ನಿರ್ಧರಿಸಲ್ಪಟ್ಟಿದ್ದು ಆ ಧ್ಯೇಯವು ಸಾಧ್ಯವಾಗುವವರೆಗೂ ರಾಷ್ಟ್ರೀಯ ಸಭೆಯು ಹೋರಾಡುವದೆಂದು ಹೇಳಲು ಬಯಸುತ್ತೇನೆ. ತ್ಯಾಗದಿಂದಲೂ ಹಾಗು ಸಾಮರ್ಥ್ಯದಿಂದಲೂ ಜನರೆಲ್ಲರು ರಣರಂಗದಲ್ಲಿ ಧುಮುಕಿದವರು ಇನ್ನು ಮುಂದೆ ತಮ್ಮ ಲಕ್ಷ್ಯವನ್ನು ಮುಂದಿನ ಕಾರ್ಯದ ಕಡೆಗೆ ಹೊರಳಿಸಬೇಕು.

ಈ ಒಪ್ಪಂದವು ಎಷ್ಟೋ ಜನರಿಗೆ ಸರಿಬರಲಿಲ್ಲ. ಕ್ರಮಪಾಗ ನಷ್ಟಗಳನ್ನು ಸಹಿಸುವದು ಅವರಿಗೆ ಕಷ್ಟಸಾಧ್ಯವೆಂತೆ ಸಹಜವಾಗಿದೆ. ಅವರಿಗೆ ನಾನು ಹೇಳುವದು ಇಷ್ಟೆ: ಕಷ್ಟಸಹಿಸುವದಕ್ಕಾದರೂ ಕೆಲವೊಂದು ಮರ್ಯಾದೆಯುಂಟು. ಒಪ್ಪಂದವನ್ನು ಮಾಡಿಕೊಳ್ಳಲು ಬಯಸಿದ್ದಾಗ, ಅಂತಹ ಸಂಧಿಯನ್ನು ಶತ್ರು ಪಕ್ಷದವರು ದೊರಕಿಸಿಕೊಟ್ಟಾಗ, ಕಷ್ಟನಷ್ಟಗಳನ್ನು ಸಹಿಸುತ್ತ ಕುಳಿತುಕೊಳ್ಳುವದೆಂದರೆ ಅದು ಮೂರ್ಖತನವಾಗುತ್ತದೆ. ಒಪ್ಪಂದದ ಸಮಯದಲ್ಲಿ ಸಿಕ್ಕಿದ್ದರ ಲಾಭ ತೆಗೆದುಕೊಂಡು ಹೆಚ್ಚು ಹೆಚ್ಚು ಪಡೆಯಲು ಪ್ರಯತ್ನ ಮಾಡಬೇಕು.

ಪೂರ್ಣ ಸ್ವರಾಜ್ಯವೇ ರಾಷ್ಟ್ರೀಯ ಸಭೆಯ ಧ್ಯೇಯವಾಗಿತ್ತು. ಅದರ ಅರ್ಥವನ್ನು ಇಂಗ್ಲೀಷದಲ್ಲಿ "ಕಂಪ್ಲೀಟ ಇಂಡಿಪೆಂಡೆನ್ಸ" ಎಂದು ಮಾಡುತ್ತಿರುವರು. ಆದರೆ ಆ ಅರ್ಥವು ಸರಿಯಾಗಿರುವದಿಲ್ಲ. "ಪೂರ್ಣ ಸ್ವರಾಜ್ಯವೇ" ರಾಷ್ಟ್ರೀಯ ಸಭೆಯ ಧ್ಯೇಯವಾಗಿದೆ ಎಂಬುದನ್ನು ಒಪ್ಪಂದದ ಕರಾರುಗಳಲ್ಲಿ ಕಾಣಿಸಿರುವದಿಲ್ಲ. "ಫೆಡರೇಶನ್" "ಸೇಫ್ ಗಾರ್ಡ್ಸ" ಮೊದಲಾದವುಗಳಿಗೆ ಎರಡು ಅರ್ಥಗಳಿರುತ್ತವೆ. ಅವುಗಳ ಪರಿಣಾಮದ ಮೇಲಿಂದಲೆ ಅವುಗಳ ಹಿತಾಹಿತವನ್ನು ಕಂಡು ಹಿಡಿಯಬೇಕು. ಈ ವೇಳೆಯಲ್ಲಿ ನಮಗೆ ಸಂಸ್ಥಾನಿಕರು, ಇಂಗ್ಲೀಷರು ಮೊದಲಾದ ಎಲ್ಲ ಜನರದೂ ಸಹಾಯಬೇಕು.

ನನ್ನ ಅಭಿಪ್ರಾಯದಂತೆ ಈ ಕರಾರುಗಳನ್ನು ಎಲ್ಲರೂ ಪಾಲಿಸಿದರೆ ಯಾವತರದ ವ್ಯಕ್ತಿಗಳು ಬಿಡುಗಡೆ ಹೊಂದುವರು. ಗಲಿತ ಶಿಕ್ಷೆಗೆ ಗುರಿಯಾದ ರಾಜಕೀಯ ವ್ಯಕ್ತಿಗಳನ್ನೇ ಅಲ್ಲದೆ ಮೀರತದ ಆರೋಪಿಗಳನ್ನೂ ಸಹ ಬಿಡಿಸಿಕೊಳ್ಳಬಹುದು. ಕಾರಣ ಕ್ರಾಂತಿಕಾರಕ ಜನರಿಗೆ ನಾನು ವಿನಂತಿ ಮಾಡಿಕೊಳ್ಳುವದೇನಂದರೆ, ಅವರು ಅತ್ಯಾಚಾರವನ್ನು ನಿಲ್ಲಿಸಿ, ನನ್ನ ಧ್ಯೇಯ ಸಾಧಿಸಿಕೊಳ್ಳಲು ನಮಗೆ ಸಂಧಿ ದೊರಕಿಸಿಕೊಡಬೇಕು. ನಮಗೆ ಈಗ ಇತರ ರಾಷ್ಟ್ರಗಳ ವಿಶೇಷತಃ ಅಮೇರಿಕೆಯ ಸಹಾಯವು ಅವಶ್ಯವಾಗಿ ಬೇಕಾಗಿದೆ. ಈ ರಾಷ್ಟ್ರಗಳು ನಮಗೆ ಸಹಾಯ ಮಾಡುವವೆಂದು ನಾನು ಆಶಿಸುತ್ತೇನೆ.

ನಾಸಿಕದಲ್ಲಿ ಲಾಠಿರಾಜ್ಯ

ಲೋಕಮಾನ್ಯರ ಮಗನನ್ನು ಸೆರೆಹಿಡಿದರು.

ನಾಸಿಕದಲ್ಲಿ ತಾ|| ೭ ನೆಯ ದಿವಸ ಸಿಂದಿ ಅಂಗಡಿಗಳ ಲಿಲಾವು ನಡೆಯಿತು. ಸ್ವಯಂಸೇವಕರೂ, ದೇಶಸೇವಿಕೆಯರೂ ಮುಂಜಾನೆಯಿಂದ ಮೆರವಣಿಗೆಯಿಂದ ೧ ಗಂಟೆಗೆ ಕಲೆಕ್ಟರ ಕಚೇರಿಗೆ ಸಾಗಿ ಹೋಗಿ ಅಲ್ಲಿ ಪಿಕೆಟಿಂಗ ಮಾಡುತ್ತ ನಿಂತುಕೊಂಡರು. ಪೋಲೀಸ ಅಧಿಕಾರಿಗಳು ಶ್ರೀ ಪಾಂಡೆ ಮೊದಲಾದವರನ್ನು ಸೆರೆಹಿಡಿದರು. ಹೀಗೆ ಮೊದಲನೆಯ ದಳವನ್ನು ಸೆರೆಹಿಡಿದದ್ದೊಂದೇ ತಡ. ಎರಡನೆಯ ದಳದವರಾದ ಶ್ರೀ ಮುರಾರಿ, ಶ್ರೀ ದೇಶಪಾಂಡೆ ಮೊದಲಾದವರು ಅವರ ಸ್ಥಳದಲ್ಲಿ ನಿಂತು ದಬ್ಬಾಳಿಕೆಗೆ ಉತ್ತರ ಕೊಟ್ಟರು. ಅಧಿಕಾರಿಗಳು ಅವರನ್ನೂ ಹಾಗು ಶ್ರೀಯುತ ಶ್ರೀಧರ (ತಿಲಕರ ಮಗ) ನವರನ್ನೂ ಸೆರೆಹಿಡಿದು ಪೋಲೀಸ ಚೌಕಿಗೆ ಕರೆದೊಯ್ದರು. ಈ ಸುದ್ದಿಯು ಊರೊಳಗೆ ಹಬ್ಬಿತು. ಕೂಡಲೆ ಸಾವಿರಾರು ಜನರು ತಂಡ ತಂಡವಾಗಿ ಕಚೇರಿಯ ಮುಂದೆ ಬಂದು ನಿಂತುಕೊಂಡರು. ಜನರ ಗದ್ದಲವನ್ನು ನೋಡಿ ಪೋಲೀಸರು ಗಾಬರಿಯಾಗಿ ಲಾಠಿಗಳಿಂದ ಅವರನ್ನು ಹೊಡೆದಟ್ಟಿದರು. ಎಷ್ಟೋ ಜನರಿಗೆ ಗಾಯಗಳಾಗಿವೆ. ಸೆರೆಹಿಡಿಯಲ್ಪಟ್ಟವರೆಲ್ಲರೂ ಕೆಲವು ಹೊತ್ತಿನ ನಂತರ ಬಿಡುಗಡೆ ಹೊಂದಿದ ಕೂಡಲೆ ಜನರು ಅವರನ್ನು ಮೆರವಣಿಗೆಯಿಂದ ಊರೊಳಗೆ ಕರೆದೊಯ್ದರು. ಲಿಲಾವಿನಲ್ಲಿ ಸಿಂದಿ ಅಂಗಡಿಗಳನ್ನು, ಕಳ್ಳಿನ ಅಂಗಡಿಗಳನ್ನು ಕೊಳ್ಳುವವರು ಇಲ್ಲದ್ದರಿಂದ ಲಿಲಾವು ಮುರಿದಿದ್ದು ಮುಂದೂಡಲ್ಪಟ್ಟಿತು.

ರೈತರಿಗೆ

ಪಂ. ಜವಾಹಿರಲಾಲರ ಉಪದೇಶ.

ಅಲಹಾಬಾದದಲ್ಲಿ ಕಾಂಗ್ರೆಸ್ಸಿನ ಭಾಷಣ ಮಾಡುವಾಗ ಪಂಡಿತ ಜವಾಹಿರಲಾಲರು, ರೈತರ ಕಷ್ಟಗಳ ಸಂಬಂಧವಾಗಿ ಸರಕಾರ ಕಾಂಗ್ರೆಸದಲ್ಲಿ ವಿಚಾರಣೆಯಾಗುವವರೆಗೂ, ಅವರೆಗೆ ಯಾರಾದರೂ ಜನರು ಮಹಾತ್ಮಾ ಗಾಂಧಿಯವರ ಅಪ್ಪಣೆಯಂತೆ ನಡೆದುಕೊಳ್ಳಬೇಕೆಂದೂ ಅವರಿಗೆ ಉಪದೇಶ ಮಾಡಿದರು.

ಮಹಾತ್ಮರ ಪ್ರವಾಸಕ್ರಮ

ಮಹಾತ್ಮಾ ಗಾಂಧಿಯವರು ಇವತ್ತಿನ ದಿವಸ ದಿಲ್ಲಿಯಿಂದ ಅಹಮ್ಮದಾಬಾದಕ್ಕೆ ಬಂದು ಅಲ್ಲಿ ಗುರುವಾರದ ವರೆಗೆ ಇದ್ದು, ನಂತರದಲ್ಲಿ ಬೋರಸಾದ, ಕಲೋಲ, ಜಂಬುಸಾರ, ಬಾಡೋಲಿ, ಜಲಾಲಪುರ ಮೊದಲಾದ ಸ್ಥಳಗಳಲ್ಲಿ ಪ್ರವಾಸ ಮಾಡುವರು. ಈ ಸ್ಥಳಗಳ ಪ್ರವಾಸವನ್ನು ಮುಗಿಸಿಕೊಂಡು ಅವರು ಮುಂಬಯಿಗೆ ಹೋಗಿ ಕೆಲವು ದಿನಗಳ ವರೆಗೆ ಅಲ್ಲಿ ವಾಸಮಾಡುವರು.

ಒಂದೇ ಕಾಲಕ್ಕೆ ೬ ಮಕ್ಕಳನ್ನು ಹಡೆದಳು.

ಬ್ರಿಟೀಶ ದೇಶದ ಪ.ವಿನ್‌ವಾಳ ಗ್ರಾಮದಲ್ಲಿ ವಾಸವಾಗಿರುವ ಸೆಲಿನಾ ಹೆನೆಸ್ ಎಂಬ ಸ್ತ್ರೀಯು ಒಂದೇ ಕಾಲಕ್ಕೆ ೬ ಮಕ್ಕಳನ್ನು ಹೆತ್ತಿರುವಳು.

ನೋಟೀಸು.

ಮಿ. ಹನುಮಂತ ಜಾನ್ ಪ್ರಭಾಕರ

ಇವರಿಗೇ —

ಈ ನೋಟೀಸಿನ ಮೂಲಕ ನಾನು ತಿಳಿಸುವದೇನೆಂದರೆ — ಮಿ. ಕೆ. ಎಮ್. ಶಹ ಕೋಠಾರಿ ಇವರ ಸಂಗಡ ಕೊಟ್ಟುಕೊಳಿಸಿದ ಪತ್ರವು ನಿಮಗೆ ಮುಟ್ಟಿದಂದಿನಿಂದ ನಿಮ್ಮನ್ನು ನಮ್ಮ ಕಂಪನಿಯ ನೌಕರಿಯಿಂದ ದೂರಮಾಡಿದೆ. ನಿಮ್ಮ ಕಂಪನಿಗೆ ಸಂಬಂಧಿಸಿದ ಜಮಾ ಪತ್ರ ವ್ಯವಹಾರವನ್ನು ನೀವು ಕೂಡಲೇ ಮಿ. ಕಾಳಕೋಠಾರಿ ಇವರಿಗೆ ಒಪ್ಪಿಸಬೇಕು. ಮತ್ತು ನಿಮ್ಮಿಂದಲೂ ಕಂಪನಿ ಎದರು ಒಪ್ಪಿಸುವ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಬಿಡ್ಡು ಹೋಗಬೇಕು.

ಕಂಪನಿಯ ಪರವಾಗಿ ನೀವು ಮಾಡಿದ ಸಾಲದ ಸಂಬಂಧವಾಗಿ ನಾನು ತಿಳಿಸುವದೇನೆಂದರೆ — ಈ ಒಳಗಾಗಿ ಜಮಾ ಖರ್ಚಿನ ಪುಸ್ತಕಗಳಲ್ಲಿ ಜಮಾ ಖರ್ಚು ಮಾಡಲ್ಪಟ್ಟ ಬಾಬುಗಳಿಗಷ್ಟೇ ನಾನು ಜವಾಬದಾರನಿರುತ್ತೇನೆ. ಜಮಾ ಖರ್ಚಿನ ಪುಸ್ತಕಗಳಲ್ಲಿ ಕಾಣಿಸದೆ ಇದ್ದಂತಹ ಸಾಲಕ್ಕೆ ನಾನು ಜವಾಬದಾರನಿರುವದಿಲ್ಲ. ಜಮಾ ಖರ್ಚಿನ ಪುಸ್ತಕಗಳಲ್ಲಿ ನೀವು ಹೊಸದಾಗಿ ಏನನ್ನೂ ಸೇರಿಸಕೂಡದು. ನಾನು ಜಮಾ ಖರ್ಚಿನ ಪುಸ್ತಕಗಳನ್ನು ಪರೀಕ್ಷಿಸುವವನಿದ್ದೇನೆ. ಅಗ್ಯ ಯಾವವಾದರೂ ಬಾಬುಗಳು ಜಮಾಖರ್ಚು ಅಪ್ರಮಾಣಿಕವೆಂದು ಕಂಡುಬಂದಲ್ಲಿ, ಆ ಸಂಬಂಧವಾಗಿ ಪರಿಣಾಮಗಳನ್ನು ನೀವು ಹಜರ ಮಾಡಬೇಕಾಗುವದು.

ಬಾಗಲಕೋಟೆ ೭-೩-೩೧	(ಸಹಿ) ಜಿ. ಪಿ. ಸಂಕೇಶ್ವರ ಪ್ರೊಪ್ರಾಯಟರ, ಎಸ್. ಜಿ. ಮೋಟಾರ ಸರ್ವಿಸ, ಮೇಲ

ಕಂಟ್ರಾಕ್ಟರ್ಸ ಬಾಗಲಕೋಟೆ

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಪ್ರೊಪ್ರೈಟರ. ಹನುಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ವಿಜಾಪುರದಿಂದ ಪಂಢರಪೂರ ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಜಡಚಣ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತು ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕಾಲನ ವಿಳಾಸದವರ ಕಡೆಗೆ ಪತ್ರ ಬರೆದು ಕೇಳಿಕೊಳ್ಳಬೇಕು. ಮ್ಯಾನೇಜರ.

ಅಟೆಲ ಮಹಾಲಕ್ಷ್ಮಿ ಮೋಟಾರ ಸರ್ವಿಸ ವಿಜಾಪುರ.

ಪ್ಲಾಟು ಮಾರಾಟಕ್ಕಿದ್ದದ

ಡಿಸ್ಟ್ರಿಕ್ಟ ವಿಜಾಪೂರ ತಾ| ಬಾಗಲಕೋಟೆ ಮುನಸಿಪಲ್ ಹದ್ದಿನೊಳಗಿನ ಬಾಗಲಕೋಟೆಯಲ್ಲಿ ರಿ॥ ಸ॥ ನಂ| ೬೯೦ ಎಕರೆ ೧೯ ಆಕಾರ ೧೮೪. ಇದಕ್ಕೆ ಚತುಃಸೀಮಾ— ಪೂರ್ವಕ್ಕೆ ಹಳ್ಳ. ಪಶ್ಚಿಮಕ್ಕೆ ಸ| ನಂ| ೨೪೫. ಉತ್ತರಕ್ಕೆ ಕಲಾದಗಿ ಲೈನ. ದಕ್ಷಿಣಕ್ಕೆ ಸ| ನಂ| ೧೬೭ ಈ ಪ್ರಕಾರ ಚತುಃಸೀಮಾ ನಡುವೆ (ಪಾಲು ರಾಮದಾಸ ಗಾಡಿ ಎಡರಿಗೆ) ನಮ್ಮ ಖಾತೆ ಮಾಲಕಿಯ ಜಮೀನು (ಪ್ಲಾಟುಗಳು) ಮಾರಾಟಕ್ಕಿದೆ. ಖರೀದಿ ತೆಗೆದುಕೊಳ್ಳಬಯಸುವವರು ಕೆಳಗೆ ಸಹಿ ಮಾಡಿದವರ ಸಂಗಡ ಪತ್ರವ್ಯವಹಾರ ಇಲ್ಲವೆ ಸಮಕ್ಷಮ ಭೆಟ್ಟಿಯಾಗಬೇಕು.

ತಾ| ೨೩–೨– ೧೯೩೧

ಸಹಿ| ಬಾಬೂರಾವ ಕೇಶವರಾವ ಪೈಕಾಣಕರ. ವೆಂಕಟಪೇಟ ಹಣಮಂತರಾವ ಛಬ್ಬಿ ವಕೀಲರವರ ಮನೆ ಎದುರಿಗೆ ಬಾಗಲಕೋಟೆ.

ಸ್ಟ್ಯಾಂಪಲ್) ಮನಿ ಚೀಟುಗಳು (ಪುಸ್ತಕ

ಹೀಲಿ ಕಪ್ಪು, ಕೆಂಪು, ಜಾಂಬಳ ಮನಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨–೦–೦
೧ ಸಾವಿರ ಚೀಟಿಗಳಿಗೆ	೩–೮–೦
೫ ಸಾವಿರಕ್ಕೆ, ೧೬–೦–೦ ರೇಟ್ನಿ ಫ	
೫ ತೊಲಿ ಶಾಯಿಟಿಗಳಿಗೆ	೧–೦–೦
ರಬ್ಬರ ಸ್ಟ್ಯಾಂಪ ಮನಿ ಪ್ರಿಂಟಿನ ೧೦ ಇಂಚ ಬಾಟ್ಲಿಗೆ	೧–೦–೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಪುರಂದರಿಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರಿ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಂಬಾಜಾರ ವಿಜಾಪುರ

ಬೆಟಿಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟೈಮ ಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ.

ಹುಬ್ಬಳ್ಳಿ ಮತ್ತು ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦–೮–೦
ಪ್ರಶ್ನೋತ್ತರ ಭೂಮಿತಿ	೦–೬–೦
ಪ್ರಶ್ನೋತ್ತರ ಭೂಗೋಲ	೦–೬–೬
ಪ್ರಶ್ನೋತ್ತರ ಜಮಾಖರ್ಚ	೦–೬–೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦–೧೦–೦
ಹಿಂದೂದೇಶದ ಶಾಸನ ಪದ್ಧತಿ	೧–೦–೦

("ಟೆಕ್ಸ್ಟಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ . ವಿಜಾಪುರ

ಈ ಪತ್ರಿಕೆಯು ವೆಂಕಟೇಶ ಭೀಮಾಚಾರ್ಯ ಕಿರೋರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತ,ತಾ. ೬-೩ ಅವರಿಂದ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ. ನಂ. ಬಿ. ೨೭೮೮

ನಿತ್ಯ ಸಂಚಿಕೆ

ಬೆಲೆ ೦-೦-೩.

…परवशं दुःखं । सर्वमात्मवशं सुखम् ॥—मनु.

ಕನ್ನಡಿಗ

KANNADIGA BAGALKOT.

BI-WEEKLY ಅರವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧] ಬಾಗಲಕೋಟೆ— ಬುಧವಾರ ಮಿತಿ ಫಾಲ್ಗುಣ ಬಹುಳ ೮ ಶಕೆ ೧೮೫೧ ತಾ॥ ೧೨—೩—೩೦ [ಸಂಚಿಕೆ ೨೦೯

ದುಂಡು ಮೇಜಿನ ವಿರುದ್ಧ

ಪ್ರಾಚೀನಮತವಾದಿಗಳ ಬಂಡು

(ತಂತಿಯ ವಾರ್ತೆ ತಾ॥ ೧೦)

ಇನ್ನು ಮುಂದೆ ಕೂಡಲಿಕ್ಕಿದ್ದಿರುವ ದುಂಡುಮೇಜಿನ ಪರಿಷತ್ತಿನಲ್ಲಿ ತಾವು ಭಾಗಕ್ಕೆ ಪ್ರವೇಶಿಸಲ್ಪಡಲಿಲ್ಲವೆಂದು ಕಾನ್ಸರ್ವೇಟಿವ್ಹ (ಪ್ರಾಚೀನ ಮತವಾದಿ) ಪಂಗಡದವರು ಸರಕಾರದವರಿಗೆ ಬೆದರಿಕೆ ಹಾಕುತ್ತಾರಾಗಿ ತಿಳಿದು ಬರುತ್ತದೆ

ಕಾಂಗ್ರೆಸ್ ಭವನವು ಮತ್ತೆ ಕಾಂಗ್ರೆಸ್ಸಿಗೆ ದೊರೆಯಿತು

(ತಂತಿಯ ವಾರ್ತೆ ತಾ॥ ೧೦)

ಮುಂಬಯಿಯ ಪೋಲೀಸ ಅಧಿಕಾರಿಗಳು ನಿನ್ನಿನ ದಿನ ಸಂಜೆ ಕಾಂಗ್ರೆಸ್ ಭವನವನ್ನು ತೆರವುಮಾಡಿ ಅದನ್ನು ರಾಷ್ಟ್ರೀಯ ಮಂಡಲದ ಅಧಿಕಾರಿಗಳಿಗೆ ಒಪ್ಪಿಸಿದರು. ರಾಷ್ಟ್ರ ಮಂಡಲದವರು ವಿಶೇಷ ವಿಜೃಂಭಣೆಯಿಂದ ಕಟ್ಟಡದ ಮೇಲೆ ಪುನಃ ರಾಷ್ಟ್ರ ಧ್ವಜವನ್ನು ನಿಲ್ಲಿಸಿದರು. ಅನಾವರಣ ಸಮಾರಂಭವು ತಾ॥ ೧೩ಕ್ಕೆ ನಡೆಯತಕ್ಕದ್ದಿದೆ.

ಪಂ. ಜವಾಹರಲಾಲರ ಉಪದೇಶ

(ತಂತಿಯ ವಾರ್ತೆ ತಾ॥ ೧೦)

ಲಖನೌದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವಾಗ ಪಂಡಿತ ಜವಾಹರಲಾಲರು ಸದ್ಯದ ಸ್ಥಿತಿಯನ್ನು ವಿವರಿಸಿ, ಬಂಡಿ ಗಾಳಿಸು ಪರಿಷತ್ತಿನಲ್ಲಿ ಒಡಂಬಡಿಕೆಯಾಗುವ ಅಶಿಕ್ಷತವಾಗಿ ಕಾಣದಿಲ್ಲವೆಂದೂ ಕೈಕರ ಅಧಿಕಾರ ಹೀನಸ್ಥಿತಿಯನ್ನು ತಗ್ಗಿಸದೆ ಮಾಡಿಕೊಂಡ ಎಲ್ಲ [illegible] ಜಾಗ್ರತೆ ಪ್ರಾರಂಭಿಸಬೇಕೆಂದೂ, ಜನರಿಗೆ ಹೇಳಿದರು.

ಮಹಾತ್ಮರು ಅಹಮದಾಬಾದಕ್ಕೆ ಬಂದರು.

(ತಂತಿಯ ವಾರ್ತೆ ತಾ॥ ೧೧)

ಮಹಾತ್ಮಾ ಗಾಂಧಿಯವರು, ಸುಮಾರು ಒಂದು ವರ್ಷದ ನಂತರ ನಿನ್ನೆ ರಾತ್ರಿ ೧೦ ಗಂಟೆಗೆ ಅಹಮದಾಬಾದಕ್ಕೆ ತಿರುಗಿ ಬಂದಿದ್ದರಿಂದ ಸಹಸ್ರಾವಧಿ ಜನರು ಸ್ಟೇಶನದಲ್ಲಿ ಅವರಿಗೆ ಉತ್ಸಾಹಪೂರ್ವಕವಾಗಿ ಆದರ ಸತ್ಕಾರಮಾಡಿ ಅವರನ್ನು ಊರೊಳಗೆ ಕರೆದುಕೊಂಡು ಹೋದರು.

ಕೆಂಡಾಳ ವೆಂಕಟಕೃಷ್ಣಯ್ಯನವರು ಬಿಡುಗಡೆ ಹೊಂದಿದರು

(ತಂತಿಯ ವಾರ್ತೆ ತಾ॥ ೧೦)

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ತಾ॥ ೬ ನೆಯ ದಿವಸ ಗುಂಟೂರಿನಲ್ಲಿ ಸೆರೆಹಿಡಿಯಲ್ಪಟ್ಟ ಆಂಧ್ರದ ಸುಪ್ರಸಿದ್ಧ ಮುಖಂಡರಾದ ಶ್ರೀ. ಕೊಂಡಾ ವೆಂಕಟಪ್ಪಯ್ಯನವರು ನಿನ್ನಿನ ದಿವಸ ಬಿಡುಗಡೆ ಹೊಂದಿದರು.

ಯರವಡಾ ಸೆರೆಮನೆಯಲ್ಲಿ ಅಧಿಕಾರಿಯ ಉದ್ಧಾಮತನ.

ಯರವಡಾ ಸೆರೆಮನೆಯೊಳಗಿನ ಕೆಲವು ಸೆರೆಯಾಳುಗಳು ತಾ॥ ೭ ನೆಯ ದಿವಸ ಮಧ್ಯಾಹ್ನದಲ್ಲಿ ತಮ್ಮ ಬಿಡುಗಡೆಯ ಹಾದಿ ನೋಡುತ್ತ ಮಹಾದ್ವಾರದ ಒಳಿಯಲ್ಲಿ ಶಿಸ್ತಿನಿಂದ ಕುಳಿತುಕೊಂಡಿದ್ದರು. ಆಗ ಓರ್ವ ಅಧಿಕಾರಿಯು ಅಲ್ಲಿಗೆ ಬಂದು "ವಂದೇ ಮಾತರಂ" ಎಂದು ಕೂಗಿದರೆಂದು ಅವರನ್ನು ತನ್ನ ಕೈಯೊಳಗಿನ ಬಡಿಗೆಯಿಂದ ಬಲವಾಗಿ ಥಳಿಸಿದನು. ೬—೭ ಜನರಿಗೆ ಗಾಯಗಳಾಗಿದ್ದು, ಚಹ್ವಾಣ ಎಂಬ ಸ್ವಯಂಸೇವಕನಿಗೆ ತಲೆಯಮೇಲೆ ಭಯಂಕರ ಪೆಟ್ಟು ಬಿದ್ದಿದೆ. ಅಧಿಕಾರಿಯ ಈ ಉದ್ಧಾಮತನವನ್ನು ಕಂಡು ಸ್ವಯಂಸೇವಕರು ಹೊರಗೆ ಹೋಗುವದಿಲ್ಲವೆಂದು ಸತ್ಯಾಗ್ರಹ ಹೂಡಿದರು. ಪರಿಸ್ಥಿತಿಯು ಇಷ್ಟು ವಿಕೋಪಕ್ಕೆ ಹೋದದ್ದನ್ನು ಕಂಡು ಅಧಿಕಾರಿಯು ತನ್ನ ಕೃತಿಯ ಬಗ್ಗೆ ಕ್ಷಮೆ ಬೇಡಿಕೊಂಡನು. ಸತ್ಯಾಗ್ರಹಿಗಳು ಹೊರಟು ಬಂದರು.

ಅಂಕೋಲೆಯ ವಸ್ತುಸ್ಥಿತಿ

(ಸ್ವಂತ ಸದ್ದಿಗಾರರಿಂದ)

ಅಂಕೋಲಾ ತಾಲೂಕಿನಲ್ಲಿ ಪ್ರಾರಂಭಿಸಲ್ಪಟ್ಟಿದ್ದ ಕರನಿರಾಕರಣೆಯ ವಿಷಯವಾಗಿ ಮುಂಬಯಿ ಸರಕಾರದ ಸುದ್ದೀ ಸೂರಪ್ಪನವರ ಪ್ರಕಟನೆಯ ಬಗ್ಗೆ ಯಥಾರ್ಥ ಸಂಗತಿಗಳನ್ನು ಬೈಲಿಗೆಳೆಯುವದು ಅವಶ್ಯವಾಗಿದೆ. ಆ ಪ್ರಕಟನೆಯನ್ನು ಓದಿದವರಿಗೆ ಅಂಕೋಲೆಯಲ್ಲಿ ಕರನಿರಾಕರಣೆಯೇ ಇದ್ದಿಲ್ಲವೆಂದು ಭಾಸವಾಗುವಂತೆ ಅವರು ಯತ್ನಿಸಿದ್ದಾರೆ. ತೆರಿಗೆಯ ಮೊದಲನೆಯ ಕಂತು ತುಂಬುವ ಅವಧಿಯು ತೀರ ೧೫—೨೦ ದಿನಗಳಾದರೂ ಜನರಿಂದ ೧೮ ಸಾವಿರ ರೂಪಾಯಿಗಳು ಬರತಕ್ಕವಿದ್ದವೆಂಬ ಒಂದೇ ಸಂಗತಿಯು ಅವರ ಅಸತ್ಯವನ್ನು ಬೈಲಿಗೆಳೆಯುತ್ತಿದೆ. ಸರಕಾರಿ ಲೆಕ್ಕದಂತೆ ನೋಡಿದರೆ ಈ ಕಂತಿಗೆ ವಸೂಲಾಗಬೇಕಿದ್ದ ೫೩೦೦೦ ರೂಪಾಯಿಗಳಲ್ಲಿ ೩೮೦೦೦ ಸಾವಿರ ರೂಪಾಯಿಗಳು ಮಾತ್ರ ವಸೂಲಾಗಿದ್ದವು. ಈ ೩೮೦೦೦ ಸಾವಿರ ರೂಪಾಯಿಗಳು ವಸೂಲಾದ ಬಗೆಯನ್ನು ನೋಡುವಾ.

ಈ ರಕಮು ಕೇವಲ ಮೊದಲನೆ ಕಂತಿನ ಬಗ್ಗೆಯೇ ವಸೂಲಾಗಲಿಲ್ಲ. ಕೆಲವು ಜಮೀನದಾರರು ಎರಡೂ ಕಂತುಗಳ ಹಣವನ್ನು ಒಮ್ಮೆಲೆ ಕೊಟ್ಟು ಸರಕಾರದ ಅಂಕಿಯು ಉಬ್ಬುವಂತೆ ಮಾಡಿರುವರೆಂಬುದನ್ನು ನಾವು ಮರೆಯತಕ್ಕದ್ದಲ್ಲ. ವಸೂಲಾದ ರಕಮಿನಲ್ಲಿ ನಿಜವಾದ ರೈತರು ಕೊಟ್ಟ ಹಣವು ತೀರ ಉಪೇಕ್ಷಣೀಯವಾಗಿದೆ. ವಿಶೇಷತಃ ಪಟ್ಟಣಗಳಲ್ಲಿ ವಾಸವಾಗಿರುವ ಹಾಗೂ ತಾಲೂಕಿನಲ್ಲಿ ವಾಸವಾಗಿದ್ದು ತೀರ್ವೆಯ ಕಾಲಕ್ಕೆ ಮಾತ್ರ ಇಲ್ಲಿಗೆ ಬರುವ ಜನರೇ ತೀರ್ವೆಯನ್ನು ತುಂಬಿದರು, ಅವರಲ್ಲಿಯೂ ಹಲವರು ಕರನಿರಾಕರಣೆಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ರೂಪಾಯಿಗೊಂದಾಣೆಯಂತೆ ಹಿಡಿಸಿಕೊಂಡು ಕೊಟ್ಟರು. ಅವರು ಹಿಡಿದು ಕೊಂಡಿರುವ ಹಣದ ವಸೂಲಿಗಾಗಿ ಇನ್ನುವರೆಗೆ ಜಪ್ತಿಗಳು ನಡೆದೇ ಇವೆ. ಭೂಮಿಯಲ್ಲಿ ಪ್ರತ್ಯಕ್ಷವಾಗಿ ದುಡಿಯುವ ಜನರು ತೀರ್ವೆಯನ್ನು ಕೊಡಲಿ ಇಲ್ಲವೆಂದರೂ ಸಲ್ಲೀತು. ಯಾಕೆಂದರೆ ಇಲ್ಲಿಯ ಅತ್ಯಂತ ಮಹತ್ವದ ಜನಾಂಗವು ಅವರಲ್ಲಿ ತೀರ್ವೆಯನ್ನು ಕೊಟ್ಟವರ ಸಂಖ್ಯೆಯು ಕೈಬೆರಳುಗಳಿಂದ ಎಣಿಸುವಷ್ಟು ಸಹ ಇಲ್ಲ. ಕರನಿರಾಕರಣೆಯ ಆಂದೋಲನವನ್ನು ಅವರೇ ಸಾಗಿಸಿದರೆಂದೂ ಅನ್ನಬಹುದು. ಅವರ ತರುವಾಯ ಒಕ್ಕಲಿಗರು ಇಲ್ಲಿಯ ಮುಖ್ಯ ರೈತರು. ಅವರಾದರೂ ನಾಡವರ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ಗಟ್ಟಿಯಾಗಿ ನಿಂತರು. [illegible] ಕೊನೆಗಾರರೇ ಮುಂತಾದ ಬೇರೆ ಜನಾಂಗ[illegible] [illegible].

ತೀರ್ವೆ ಕೊಟ್ಟ ಕೆಲವರಾದರೂ ಯಾವ ಪರಿಸ್ಥಿತಿಯಲ್ಲಿ ಕೊಟ್ಟರೆಂಬುದನ್ನು ನೋಡುವದೂ ಬೋಧಪ್ರದವಾಗಿದೆ. ಸರಕಾರದ ಅಧಿಕಾರಿಗಳೂ ಅವರ ಬಗಲುಗೂಸುಗಳೂ ಜನರನ್ನು ಹೆದರಿಸುವಂಥ ಸುಳ್ಳು ಸಂಗತಿಗಳ ಪ್ರಚಾರ ಕಾರ್ಯವನ್ನೇ ಕೈಕೊಂಡಿದ್ದರು. ತೀರ್ವೆ ಕೊಡದಿದ್ದವರು ಡೊಣ್ಣೆಯ ಪೆಟ್ಟುಗಳಿಂದ ಜೀವ ಕಳಕೊಳ್ಳಬೇಕಾಗುವದು. ಅವರ ಹೆಣ್ಣುಮಕ್ಕಳು ಪೋಲೀಸರಿಂದಲೂ ದಂಡಾಳುಗಳಿಂದಲೂ ಅಪಮಾನವನ್ನು ಸಹಿಸಬೇಕಾಗುವದು. ಕಾರವಾರದ ಒಂದು ವಿಶಿಷ್ಟ ಜಾತಿಯ ಜನರು ಬಂದು ಇಲ್ಲಿಯ ಭೂಮಿ ಸೀಮೆಗಳನ್ನು ಬಲಾತ್ಕಾರದಿಂದ ಉಪಭೋಗಿಸುವರು. ಐದೇ ರೂಪಾಯಿ ತೀರ್ವೆ ಕೊಡುವದಿದ್ದರೂ ಐದುನೂರು ರೂಪಾಯಿಗಳ ಮಾಲು ಜಪ್ತಾಗುವದು. ಅಂಕೋಲಾ ತಾಲೂಕಿನಲ್ಲಿ ದಂಡಾಳಿಯನ್ನು ಪ್ರಾರಂಭಿಸುವದಕ್ಕಾಗಿ ಈಗಾಗಲೇ ೪ ಹಡಗಗಳು ತುಂಬಿ ಸೈನ್ಯವು ಕಾರವಾರಕ್ಕೆ ಬಂದಿದೆ- ಇವೇ ಮುಂತಾದ ಸುಳ್ಳು ಸುದ್ದಿಗಳಿಂದ ಅವರು ಹಗಲಿರುಳು ಬುದ್ಧಿಭೇದವನ್ನು ನಡಿಸಿದ್ದರು. ಇದು ಬುದ್ಧಿ ಭೇದದ ಸರ್ವಸಾಮಾನ್ಯವಾದ ರೀತಿಯಾಯಿತು. ಇನ್ನು ಜಾತಿ ಜಾತಿಗಳಲ್ಲಿ ಭೇದ ಹುಟ್ಟುವಂತೆಯೂ ಪ್ರಯತ್ನಗಳು ನಡೆದವು. ನಾಡವರೆಂದರೆ ತೀರ ಅಲ್ಪ ಸಂಖ್ಯಾಕರು ಚಳವಳಗಾರರ ಬೆನ್ನು ಹತ್ತಿ ಅವರು ಸರ್ವಸ್ವನಾಶ ಮಾಡಿಕೊಳ್ಳುತ್ತಿರುವರು. ಅವರು ಇತ್ತೀಚಿಗೆ ಹೊಂದುತ್ತಿರುವ ಉತ್ಕರ್ಷವು ಕೆಲವರಿಗೆ ಅಸಹ್ಯವಾಗಿರುವದರಿಂದ ನಾಡವರನ್ನು ಈ ರೀತಿಯಾಗಿ ಅವರು ಚಿಂತೆಯಲ್ಲಿ ನೂಕುತ್ತಿರುವರು ಎಂದು ಮುಂತಾಗಿ ಅವರು ನಾಡವರಿಗೆ ಹೇಳುತ್ತಿದ್ದರೆ ಒಕ್ಕಲಿಗರಿಗೆ ನಾಡವರು ಹುಚ್ಚರು. ಇಷ್ಟಾಗಿ ಅವರೆಲ್ಲರೂ ಸಾಲದಲ್ಲಿ ಮುಳುಗಿರುವದರಿಂದ ಹೀಗೆ ಮಾಡುತ್ತಾರೆ. ನೀವು ಅವರ ಹಾದಿಗೆ ಹೋಗಬೇಡಿರಿ ಎಂದು ಛೀ ಮಾತು ಹೇಳುತ್ತಿದ್ದರು. ಜಾತಿ ಜಾತಿಗಳಲ್ಲಿ ಭೇದ ಹುಟ್ಟಿಸುವದರಿಂದಲೇ ತಮ್ಮ ಕಾರ್ಯವು ಸಾಧಿಸುವದೆಂದು ತಿಳಿದು ಈ [illegible] ಹೊಸ ಹೊಸ ಪಕ್ಷಗಳನ್ನು ನಿರ್ಮಿಸತೊಡಗಿದ್ದರು. ರೈತರು ಒಡೆಯರು ಸಾವಕಾರರು ಸಾಲಗಾರರು ಮುಂತಾದ ಭೇದಗಳನ್ನು ಕಲ್ಪಿಸಿ ಅವರಿಗೂ ಬೋಧ ನಡಿಸಿದ್ದರು. ಒಡೆಯರಿಗೆ ರೈತರು ಈ ವರ್ಷ ತೀರ್ವೆ ಕೊಡುವದಿಲ್ಲ. ನಾಳೆ ಅವರು ನಿಮ್ಮ ಗೇಣಿ (ಖಾವಣೆ) ಯನ್ನೂ ಕೊಡಲಿಕ್ಕಿಲ್ಲ ಎಚ್ಚರ ಎಂದು ಹೇಳುತ್ತಿರುವಾಗಲೇ ರೈತರಿಗೆ ನಿಮ್ಮ ಒಡೆಯರಿಗೇನೋ ನಿಮ್ಮನ್ನು ಇಷ್ಟು ದಿನಗಳ ವರೆಗೆ ಹಿಂಡಿ ಹಿಂಡಿ ಬೇಕಾದಷ್ಟು ಲೂಟಿ ಮಾಡಿದ್ದಾರೆ. ಅವರದು ಹೇಗಾದರೂ ಸಾಗುವದು. ನೀವು ಮಾತ್ರ [illegible]ಗಾಗುವಿರಿ ಎಂದು ಹೇಳಲಿಕ್ಕೂ ಸಿದ್ಧರಾಗಿರುತ್ತಿದ್ದರು,

(ಮುಂದೆ ಸಾಗುವದು)

ಅಖಿಲ ಕರ್ನಾಟಕ
ಸ್ವದೇಶೀ ಸಭೆ.

ಇದೇ ೧೮ನೆಯ ತಾರೀಖಿನ ದಿನ [illegible] ವಾಡದಲ್ಲಿ ಕರ್ನಾಟಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಕೂಡತಕ್ಕದ್ದಿದೆ. ಅದೇ ಕಾಲಕ್ಕೆ ಸ್ವದೇಶಿಯ ಬಗ್ಗೆ ಕೆಲಸ ಮಾಡುವ ಸಲುವಾಗಿ ಒಂದು ಬೇರೆ ಸಭೆಯನ್ನು ಕೂಡಿಸಬೇಕೆಂದು ಸೂಚನೆಗಳು ಬಂದಿವೆ. ಅದರಂತೆ ೧೯ನೆಯ ತಾರೀಖಿನ ದಿನ ಮಧ್ಯಾಹ್ನ ೪ ಗಂಟೆಗೆ ಕಾಂಗ್ರೆಸ್ ಕಚೇರಿಯಲ್ಲಿ ಈ ಸಭೆಯನ್ನು ಕೂಡಿಸುವದು ಗೊತ್ತಾಗಿದೆ. ಎಲ್ಲ ಕೆಲಸಗಾರರು ಅವಶ್ಯವಾಗಿ ಬರಬೇಕು. ಬರುವಾಗ್ಗೆ ತಮ್ಮ ತಮ್ಮ ಜಿಲ್ಲೆಯಲ್ಲಿ ಈ ವರೆಗೆ ಮಾಡಿದ ಕೆಲಸದ ವರದಿಯನ್ನು ತರಬೇಕೆಂದು ವಿನಂತಿ. ಹಾಗೂ ಪರದೇಶೀ ವಸ್ತ್ರ, ನೂಲು, ರೇಶಿಮೆ, ಉಂಡೆ ರೇಶಿಮೆ, [illegible], ಜವಳಿ, ಸಕ್ಕರೆ, ಸಟಕಾರ, [illegible], ಸಿಗರೇಟ ಮುಂತಾದ ಪರದೇಶಿ ವಸ್ತುಗಳ ಬಹಿಷ್ಕಾರವನ್ನು ಹೇಗೆ ಮುಂದೆ ಸಾಗಿಸಬೇಕು ಮತ್ತು ಇದು ಎಷ್ಟರಮಟ್ಟಿಗೆ ಸಾಧ್ಯವಿದೆಯೆಂಬ ಬಗ್ಗೆ ತಮ್ಮ ಜಿಲ್ಲೆಯ ಜನರ ಅಭಿಪ್ರಾಯವನ್ನು ತಿಳಿಸಿಕೊಂಡರೆ, ಮುಂದಿನ ಕಾರ್ಯಕ್ರಮವನ್ನು ಮಾಡಲಿಕ್ಕೆ ಅನುಕೂಲವಾಗುವದು. ನಿಮ್ಮ ನಿಮ್ಮ ಜಿಲ್ಲೆಯಲ್ಲಿ ನಡೆದ ಸ್ವದೇಶಿ ಕಾರಖಾನೆಗಳ ಮಾಹಿತಿಯನ್ನು ತಂದರೆ ನಾವು ಪ್ರಸಿದ್ಧಪಡಿಸಬೇಕಾದ [illegible] ಸ್ವದೇಶಿ ವಸ್ತುಗಳ ಸೂಚಿಗೆ ಸಹಾಯವಾಗುವದು. [illegible] ಆರು ತಿಂಗಳ ಮಟ್ಟಿಗಾದರೂ ಇದೇ ಕೆಲಸವನ್ನು [illegible]ಲಿಕ್ಕೆ ತಯಾರಿದ್ದ ಸದ್ಗೃಹಸ್ಥರನ್ನು ಈ ಸಭೆಗೆ ಅವಶ್ಯವಾಗಿ ಕರೆದುಕೊಂಡು ಬರಬೇಕು.

ರಾ. ತ್ರಿ. ಹುಕ್ಕೇರಿಕರ
ಕಾರ್ಯದರ್ಶಿ, ಅ. ಕ. ಸ್ವ. ಸಭೆ
ಧಾರವಾಡ

ಲಂಡನದಲ್ಲಿ ಮಿ. ಸಕಲಾತವಾಲಾರವರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿ, ಶ್ರೀ ಭಗತಸಿಂಗ ಮೊದಲಾದವರಿಗೆ ಸರಕಾರದವರು ದಯೆ ತೋರಿಸಿ ಅವರ ಗಲ್ಲಿನ ಶಿಕ್ಷೆಯನ್ನು ರದ್ದು ಪಡಿಸಬೇಕು ಎಂಬ ಆಶಯದ ಗೊತ್ತುವಳಿ ಸಭೆಯಲ್ಲಿ ಸ್ವೀಕೃತವಾಯಿತು.

ತರುಣರಿಗೆ ಮಹಾತ್ಮರ ಬುದ್ಧಿವಾದ.

ದಿಲ್ಲಿಯಲ್ಲಿ "ರಾಣಿಕೋಟ"ದಲ್ಲಿ ಒಪ್ಪಂದ ಸಂಬಂಧವಾಗಿ ಭಾಷಣ ಮಾಡುವಾಗ ಮಹಾತ್ಮಾ ಗಾಂಧಿಯವರು ತರುಣರಿಗೆ ಬುದ್ಧಿವಾದ ಹೇಳಿದ್ದು, ಅದನ್ನು ಕೆಳಗೆ ಕೊಟ್ಟಿದೆ.

ವರ್ಕಿಂಗ ಕಮೀಟಿಯವರ ಸಮ್ಮತಿಯನ್ನು ಪಡೆದ ಕೊಂಡೇ ನಾನು ವ್ಹಾಯಿಸರಾಯರೊಡನೆ ಒಪ್ಪಂದ ಮಾಡಿಕೊಂಡೆ. ಈ ಒಪ್ಪಂದವು ನಿಮಗೆ ಸರಿಯಾಗಿ ತೋರದಿದ್ದಲ್ಲಿ, ನೀವು ಕರಾಚಿ ಕಾಂಗ್ರೆಸದಲ್ಲಿ ವರ್ಕಿಂಗ ಕಮಿಟಿಯ ಮೇಲೆ ಅವಿಶ್ವಾಸದ ಗೊತ್ತುವಳಿ ತಂದು, ಬೇರೊಂದು ಕಮಿಟಿಯನ್ನು ನಿಯಮಿಸಿಕೊಂಡು ಕಾಂಗ್ರೆಸ್ ಕಾರ್ಯವನ್ನು ಸಾಗಿಸಬೇಕು.

ಹಿಂಸಾವಾದಿ ರಾಜಕೀಯ ಕೈದಿಗಳ ಬಿಡುಗಡೆಯ ಸಂಬಂಧವಾಗಿಯೂ ವರ್ಕಿಂಗ ಕಮಿಟಿಯವರು ಚರ್ಚೆ ಮಾಡಿ, ಅಸಂಬಧ ವಾಗಿ ಶಕ್ಯವಿದ್ದದ್ದನ್ನು ಸಂಪಾದಿಸಲು ಪ್ರಯತ್ನ ಮಾಡಿದ್ದಾರೆ. ಒಪ್ಪಂದದ ಕರಾರುಗಳು ಅಕ್ಷರಶಃ ಪಾಲಿಸಲ್ಪಟ್ಟಲ್ಲಿ, ಹಿಂಸಾವಾದಿ ರಾಜಕೀಯ ಕೈದಿಗಳಷ್ಟೇ ಅಲ್ಲದೆ, ಗಢವಾಲಿ ಸೆರೆಯಾಳುಗಳಾದರೂ ಬಿಡುಗಡೆ ಹೊಂದುವರು.

ಅತ್ಯಾಚಾರ ಮಾರ್ಗದಿಂದಲೇ ಇಷ್ಟಾರ್ಥ ಕೈಗೂಡುವದೆಂದು ನಿಮಗೆ ಅನಿಸಿದಲ್ಲಿ, ನೀವು ನೂರಾರು ಜನ ಭಗತಸಿಂಗರನ್ನು ಬಲಿಯಾಗಿ ಅರ್ಪಿಸಬೇಕಾಗುವದು. ಇವರೆಲ್ಲರನ್ನು ಮಾತ್ರ ಬಿಡಲಿಲ್ಲ. ಒಬ್ಬನನ್ನಾದರೂ ಮರಣದಂಡನೆಗೆ ಗುರಿಮಾಡದೆ, ಅಹಿಂಸಾ ಮಾರ್ಗದಿಂದಲೇ ಸ್ವರಾಜ್ಯ ಸಂಪಾದಿಸುವದು ನಮಗೆ ಬೇಕಾಗಿದೆ. ಗಲ್ಲಿನ ಶಿಕ್ಷೆಗೆ ಗುರಿಯಾದವರನ್ನು ಉಳಿಸಿಕೊಳ್ಳಬೇಕಾಗಿದ್ದರೆ, ಈ ಒಪ್ಪಂದದ ಕರಾರುಗಳನ್ನು ಅಕ್ಷರಶಃ ಪಾಲಿಸಿ, ತಿಂಗಳ ನಂತರದಲ್ಲಿ ನನ್ನ ಬಳಿಗೆ ಬರ್ರಿ. ಆಗ ನಾನು ನಿಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಕೊಡುವೆನು.

ಪರದೇಶಿ ಅರಿವೆಯ ಬಹಿಷ್ಕಾರ ಚಳವಳಿಯು ಕುಗ್ಗತಕ್ಕದ್ದಲ್ಲ. ಯಾಕಂದರೆ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವದಕ್ಕಾಗಿಯೂ ಹಾಗು ಹೊಟ್ಟೆಬಟ್ಟೆಗಿಲ್ಲದೆ ಅಳಲುವ ಲಕ್ಷಾವಧಿ ಜನರಿಗೆ ಹಿಡಿ ಹಿಟ್ಟು ದೊರೆಕಿಸಿಕೊಡುವದಕ್ಕಾಗಿಯೂ ಅದು ಸಾಗಿಸಲ್ಪಟ್ಟದ್ದಾಗಿದೆ.

ಮೌಲಾನಾ ಶೌಕತ ಅಲ್ಲಿಯವರು ಈ ದಿನ ಮುಂಜಾನೆ ಇಲ್ಲಿಗೆ ಬಂದಿದ್ದಾರೆ. ಅವರು ಈ ಸಭೆಗೆ ಬರಬಹುದೆಂದು ನಾನು ಆಶಿಸಿದ್ದೆ. ಆದರೆ ಅವರು ಬಂದಿರುವದಿಲ್ಲವೆಂಬುದನ್ನು ತಿಳಿಸಲು ವಿಷಾದವಾಗುತದೆ. ಅವರನ್ನು ಪುನಃ ಕಾಂಗ್ರೆಸ್ಸಿನ್ನು ಸೇರಿಸಿಕೊಳ್ಳುವ ವಿಷಯವಾಗಿ ನಾನು ಅನೇಕ ಬಗೆಯಿಂದ ಪ್ರಯತ್ನಿಸಿದ್ದೇನೆ. ಅವರ ಹಾಗು ನನ್ನಲ್ಲಿ ಮತಭೇದವಿದ್ದರೂ ಸಹ ಅವರು ನನ್ನ ಬಾಂಧವರೆಂದೇ ತಿಳಿಯುತ್ತೇನೆ. ಹಿಂದೂ ಮುಸಲ್ಮಾನರಲ್ಲಿ ಐಕ್ಯವುಂಟಾಗದೆ ದುಂಡು ಮೇಜಿನ ಪರಿಷತ್ತಿಗೆ ಹೋಗುವದರಲ್ಲಿ ಏನೂ ಪ್ರಯೋಜನವಿಲ್ಲ. ಪರಿಷತ್ತಿನಲ್ಲಿ ಐಕ್ಯವು ಪ್ರಸ್ಥಾಪಿತವಾಗುವದು ಶಕ್ಯವಿಲ್ಲ. ಈ ಸಂಬಂಧವಾಗಿ ನೀವೆಲ್ಲರೂ ನನಗೆ ಸಹಾಯ ಮಾಡಿದಲ್ಲಿ ಐಕ್ಯವನ್ನು ಪ್ರಸ್ಥಾಪಿಸಲು ನಾನು ಮನಮುಟ್ಟಿ ಹೆಣಗುವೆನು. ಮುಸಲ್ಮಾನ ಮುಖಂಡರನ್ನು ಕಂಡುಕೊಂಡು ಜಾತಿಜಾತಿಗಳಲ್ಲಿ ಐಕ್ಯವನ್ನುಂಟು ಮಾಡಲು ಸಹಾಯ ಮಾಡಿರೆಂದು ಅವರಿಗೆ ಕೈಮುಗಿದು ಬೇಡಿಕೊಳ್ಳುವೆನು. ಈ ಕಾರ್ಯದಲ್ಲಿ ನನಗೆ ಪ್ರತಿಯೊಬ್ಬರದೂ ವಿಶೇಷತಃ ಸ್ತ್ರೀಯರದೂ ಸಹಾಯ ಬೇಕಾಗಿದೆ. ಕಳೆದ ೧೨ ತಿಂಗಳಲ್ಲಿ ಅವರು ಸತ್ಯಾಗ್ರಹ ಸಮರದಲ್ಲಿ ಧುಮುಕಿ ತಮ್ಮ ಶಕ್ತಿಸಾಮರ್ಥ್ಯವನ್ನು ಜಗತ್ತಿಗೆ ಚನ್ನಾಗಿ ವ್ಯಕ್ತಪಡಿಸಿದ್ದಾರೆ. ಅವರ ಪರಸ್ಪರವಾಗಿ ಜಗಳಾಡುವವರ ಮೇಲೆ ಆ ಶಸ್ತ್ರಗಳನ್ನು ಎತ್ತಿ ಹಿಡಿದು ಅವರನ್ನು ದಾರಿಗೆ ತರಬೇಕು. ಒಬ್ಬರಿಗೊಬ್ಬರು ಹೀಗೆ ಜಗಳಾಡಿದಲ್ಲಿ, ನಿಮ್ಮ ಸೇವೆ ಮಾಡುವದಿಲ್ಲವೆಂದೂ, ಅಡಿಗೆ ಮಾಡುವದಿಲ್ಲವೆಂದೂ ಅವರು ಪುರುಷರಿಗೆ ಸ್ಪಷ್ಟವಾಗಿ ಹೇಳಬೇಕು. ಪ್ರಸಂಗ ಒದಗಿದರೆ ತಾವೂ ಉಪವಾಸ ಬೀಳಬೇಕು.

ನನ್ನ ಉಪದೇಶಾನುಸಾರವಾಗಿ ನೀವು ಯಾವತ್ತೂ ನಡೆದುಕೊಂಡಲ್ಲಿ ಪೂರ್ಣ ಸ್ವರಾಜ್ಯವು ಶೀಘ್ರವಾಗಿಯೆ ಲಭಿಸುವದು.

ಗಾಂಧಿ—ಶೌಕತ ಅಲ್ಲಿಯವರ ಭೆಟ್ಟಿ

ಮಹಾತ್ಮಾ ಗಾಂಧಿಯವರು ತಾ॥ ೮ ನೆಯ ದಿವಸ ಮುಂಜಾನೆ ಮೌಲಾನಾ ಶೌಕತ ಅಲ್ಲಿ ಮೊದಲಾದ ಮುಸಲ್ಮಾನ ಮುಖಂಡರನ್ನು ಡಾ. ಅನಸಾರಿಯವರ ಮನೆಯಲ್ಲಿ ಕಂಡುಕೊಂಡು ಅವರೊಡನೆ ಹಿಂದೂ—ಮುಸಲ್ಮಾನರ ಐಕ್ಯದ ಬಗ್ಗೆ ಮಾತುಕತೆ ಮಾಡಿದರು.

ಭಗತಸಿಂಗರ ಮನೆಯಲ್ಲಿ ಭಯಂಕರ ದರೋಡೆ

ಕೆಲವು ದರೋಡೆಗಾರರು ತಾ॥ ೮ ನೆಯ ದಿವಸ ಶ್ರೀ ಭಗತಸಿಂಗರ ಮನೆಯನ್ನು ದರೋಡೆ ಮಾಡಿ, ಕೆಲವು ನಾಣ್ಯ, ಹಾಗು ಎರಡು ಎತ್ತುಗಳನ್ನು ಅಪಹರಿಸಿಕೊಂಡು ಪಲಾಯನ ಮಾಡಿದರು. ಮನೆಯವರು ಅವರನ್ನು ಹಿಂಬಾಲಿಸಿ ಅವರಲ್ಲಿ ಒಬ್ಬನನ್ನು ಹಿಡಿದರು. ತಮ್ಮಲ್ಲಿ ಒಬ್ಬನನ್ನು ಹಿಡಿದದ್ದನ್ನು ನೋಡಿ, ದರೋಡೆಗಾರರು ತಿರುಗಿ ಬಂದು, ಶ್ರೀ ಭಗತಸಿಂಗರ ತಮ್ಮನನ್ನು ಹಾಗು ಒಬ್ಬ ಸೇವಕನನ್ನೂ ಗಾಯಪಡಿಸಿ, ಅವನನ್ನು ಬಿಡಿಸಿಕೊಂಡು ಹೋದರು. ಪೋಲೀಸ ಅಧಿಕಾರಿಗಳು ಈ ಸಂಬಂಧವಾಗಿ ನಾಲ್ಕು ಜನರನ್ನು ಬಂಧಿಸಿದ್ದಾರೆ.

ಅಂಚೆಯ ಕಾರಕೂನನನ್ನು ಹಾದಿಯಲ್ಲಿ ಹೊಡೆದರು

ಪ್ರಸ್ಕೂನ ಬಜಾರಿಯಾದ ಅಂಚೆ ಕಚೇರಿಯ ಕಾರಕೂನರಾದ ಶ್ರೀ ಸೀತಾನಾಥ ನಂದಿಯವರು ತಾ॥ ೬ ನೆಯ ದಿವಸ ಕಚೇರಿಯಿಂದ ಅಂಚೆಯ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದರು. ಆಗ ಹಾದಿಯಲ್ಲಿ ಕೆಲವು ಜನರು ಅವರನ್ನು ಹೊಡೆದು ೧೨೦೦ ರುಪಾಯಿಗಳನ್ನು ಅಪಹರಿಸಿಕೊಂಡು ಪಲಾಯನ ಮಾಡಿದರು. ಈ ಸಂಬಂಧದಿಂದ ಎಷ್ಟೋ ಮನೆಗಳ ಝಡತಿ ಮಾಡಲ್ಪಟ್ಟಿದ್ದು, ಶ್ರೀ ರಾಜೇಂದ್ರ ಘೋಷ, ಪುಲಿನಪಾಲ, ಹರಿಕೃಷ್ಣ ಶಹಾ ಈ ಮೂವರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಬಾಗಲಕೋಟೆಯಲ್ಲಿ ಸತ್ಯಾಗ್ರಹ ವಿಜಯೋತ್ಸವ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ಆಜ್ಞೆಯ ಮೇರೆಗೆ ಸತ್ಯಾಗ್ರಹ ವಿಜಯೋತ್ಸವವು ನಾಳಿನ ದಿವಸ ಇಲ್ಲಿ ಪಾಲಿಸಲ್ಪಡತಕ್ಕದಿದ್ದು, ಅದರ ಕಾರ್ಯಕ್ರಮಗಳೆಂದರೆ— ೧ ಬೆಳಗಿನ ೫ ಗಂಟೆಗೆ ನಗರಸಂಕೀರ್ತನೆ ಹೊರಡುವದು. ೨ ಸಾಯಂಕಾಲ ೫ ಗಂಟೆಗೆ ಲಾಲಾಜಿ ಚೌಕಿನಿಂದ ಮೆರವಣಿಗೆಯು ಹೊರಟು, ಮ. ಬ. ಮುಖ್ಯ ಬೀದಿಗಳಲ್ಲಿ ಹಾಯ್ದು ಲಾಲಾಜಿ ಚೌಕಿಗೆ ಬರುವದು. ೩. ಸಂಜೆಯ ೭ ಗಂಟೆಗೆ ಲಾಲಾಜಿ ಚೌಕಿನಲ್ಲಿ ಸಾರ್ವಜನಿಕ ಸಭೆ ಸೇರಿ, ಮುಖಂಡರ ಭಾಷಣಗಳಾಗುವವು.

ನಲ್ಲೂರಲ್ಲಿ
ಪೋಲೀಸರ ಪುಂಡಾಟಿಕೆ.

ನಲ್ಲೂರಲ್ಲಿ ತಾ|| ೬ನೆಯ ದಿನ ಸಂಜೆಯಲ್ಲಿ ತಿಪ್ಪರಾಜು ಧರ್ಮಶಾಲೆಯ ಎದುರಿಗೆ ಸಾರ್ವಜನಿಕ ಸಭೆ ಸೇರಿತ್ತು. ಸಭೆಯು ಸೇರುವದಕ್ಕಿಂತ ಪೂರ್ವದಲ್ಲಿ ಪೋಲೀಸ ಅಧಿಕಾರಿಗಳು ಕೆಲವು ಜನ ಲಾಠೀ ಪೋಲೀಸರೊಂದಿಗೆ ಅಲ್ಲಿಗೆ ಬಂದು, ಒಂದು ಗಿಡದ ಬುಡದಲ್ಲಿ ನಿಂತುಕೊಂಡರು. ಸ್ವಲ್ಪ ಹೊತ್ತಿನಲ್ಲಿ ಸಭೆಯು ಪ್ರಾರಂಭವಾಗಿ ಕೆಲವು ಸ್ವಯಂಸೇವಕರು ಧ್ವಜ [illegible]. ಪೋಲೀಸ ಅಧಿಕಾರಿಗಳು ದಾರಿಯ ಕಟ್ಟಿಗೆ ತ್ರಿವರ್ಣ ಬಾವುಟವನ್ನು ಮುಂದೆ ಮಾಡಿ, ಸಭೆಯ ಕಡೆ ಹೋಗಲು ಅಪ್ಪಣೆ ಕೊಟ್ಟರು. ಅದನ್ನು ಕಂಡು ವ್ಯಾಸ [illegible] ಕುಳಿತುಕೊಳ್ಳದೇ ಸಭೆ [illegible] ನಿಂತುಕೊಂಡರು. ಜನರು ಸ್ಥಳ ಬಿಟ್ಟು ಕದಲಲಿಲ್ಲ. ಪೋಲೀಸರು ಲಾಠಿಗಳಿಂದ ಅವರನ್ನು ಥಳಿಸಿದರು. ರಾಷ್ಟ್ರಧ್ವಜವನ್ನು ಕಸಿದು ಅದನ್ನು ದೂರ ಬಿಸಾಟಿದರು. ಶ್ರೀ ಸುಬ್ರಹ್ಮಣ್ಯಂ ಹಾಗೂ ಶ್ರೀ ವೆಂಕಟರಾವ ಎಂಬುವವರನ್ನು ಲಾಠಿ ಹೊಡೆದು ೩೦ ಯಾರ್ಡ [illegible] ದಿಂದ [illegible]. ಅವರಿಗೆ [illegible] ಕೊಟ್ಟರು. ಕೆಲವರಿಗೆ [illegible], ಬನ್ನ [illegible] ಗಾಯಗಳಾಗಿವೆ.

ಚಂದಾದಾರರಲ್ಲಿ ಬಿನ್ನಹ.

ವ್ಹಿ ಪಿ ಗಳನ್ನು [illegible] ದಿನಗಳವರೆಗೆ ಇಟ್ಟುಕೊಳ್ಳಬೇಕೆಂತಲೂ ಅಂಚೆ [illegible] ಹಣ ನಿಯಮ ಮಾಡಿಕೊಂಡಿದ್ದರಿಂದ, 'ಕನ್ನಡಿಗ'ವನ್ನು ವ್ಹಿ ಪಿ ಯಿಂದ ಕಳಿಸುವದು ಸಾಧ್ಯವಿಲ್ಲ. ವ್ಹಿ. ಪಿ. [illegible] ಒಂದಿಲ್ಲ. 'ಕನ್ನಡಿಗ'ನ [illegible] ವ್ಹಿ. ಪಿ. [illegible] ದಿನಗಳ [illegible] ಇಟ್ಟುಕೊಂಡಲ್ಲಿ ಚಂದಾದಾರರಿಗೂ [illegible] ದ್ದರಿಂದ ಚಂದಾ ಹಣ [illegible] ಎಲ್ಲ ಚಂದಾದಾರರು ಚಂದಾ ಹಣವನ್ನು ಮನಿಆರ್ಡರದಿಂದ ಕಳಿಸಿಕೊಡಬೇಕು. ಈ ಚಂದಾ ಹಣವು ಬಾರದಿದ್ದಲ್ಲಿ, 'ಕನ್ನಡಿಗ' ಕಳಿಸುವದನ್ನು ನಿಲ್ಲಿಸಿಬಿಡುವೆವು.

ವ್ಯವಸ್ಥಾಪಕ.

ಉದ್ಯೋಗೀ ಹುಡುಗರು
ಬೇಕಾಗಿದ್ದಾರೆ.

ಛಾಪಖಾನೆಯ ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ. ಹೊಸಬರಿಗೆ ಕಂಪೋಜಿಂಗ, ಪ್ರಿಂಟಿಂಗ ವಗೈರೆ ಕೆಲಸ ಕಲಿಸಿ, ಪಗಾರ ಪ್ರಾರಂಭದಲ್ಲಿ ಕೊಡುವದು. ಅವಶ್ಯಕರು ಸಮಕ್ಷಮ ಭೆಟ್ಟಿಯಾಗಬೇಕು.

ವ್ಯವಸ್ಥಾಪಕ,
'ಕನ್ನಡಿಗ'ನ ಕಾರ್ಯಾಲಯ

ವಿಜಾಪುರದಿಂದ
ಪಂಢರಪೂರ
ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೭|| ಗಂಟೆಗೆ ಹೊರಟು, ಜತ್ತ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತು ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ [illegible] ಪಡೆಯುವವರು ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು.

ಮ್ಯಾನೇಜರ.
ಅಟ್ಲಸ್ ಮಹಾಲಕ್ಷ್ಮಿ ಮೋಟಾರ ಸರ್ವಿಸ
ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ.

ಸ್ವಾಂಪಲ್, ಮತಿ ಚೀಟುಗಳು (ಘ [illegible]
ನೀಲಿ ಕಪ್ಪು, ಕೆಂಪು, ಜಾಂಬಳಿ ಮಸಿ
ಚೀಟುಗಳು ದೊರೆಯುತ್ತವೆ.

೫೦೦ ಚೀಟುಗಳಿಗೆ	೨—೦—೦
೧ ಸಾವಿರ ಚೀಟಿಗಳಿಗೆ	೩-೮-೦
೫ ಸಾವಿರಕ್ಕೆ,	೧೬-೦-೦ ರೇಲ್ವೆ ಫ
೫ ತೊಲೆ ಪಾಕೀಟ ಗ [illegible]	೧-೦-೦
(ಬ್ಬರ ಸ್ಟಾಂಪ ಮತಿ ೪ ಬಿಂಗನ ೧೦ ಜನ ಬಾಟ್ಲಿಗೆ	೧-೦-೦

ಹಚ್ಚಿನ ಮಾಹಿತಿ [illegible]
[illegible]
ಕರ್ನಾಟಕ ಇಂಕ ಕಂಪನಿ [illegible]

ಪುರಂದರೆಯವರ
ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯತೆಯಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂ [illegible] ಶಿಕ್ಷಣ ನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸ ಬಜಾರ ವಿಜಾಪುರ

ಬೆಟಗೇರಿ ಬ್ರದರ್ಸ
ವಾಚಮೇಕರ್ಸ

ನಮ್ಮಲ್ಲಿ ಖಾತ್ರಿಯಿಂದ ಉತ್ತಮ ರೀತಿಯಿಂದ [illegible]

ಎಲ್ಲ ನಮೂನೆಯ ವಾಚ, ಕ್ಲಾಕ, ಟೈಂಪೀಸ ವಗೈರೆ ದುರಸ್ತು ಮಾಡಿಕೊಡುವದಲ್ಲದೆ ಯಾವದೇ ಕಂಪನಿಯ ಘಡಿಯಾಳಗಳಿಗೆ ಆರ್ಡರ ಕೊಟ್ಟಲ್ಲಿ ತರಿಸಿ ಕೊಡುವೆವು. ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ಸ್ಪೇರ ಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ರಿಪೇರಿಂಗ ಸ್ಪೆಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ
ಹುಬ್ಬಳ್ಳಿ ಮತ್ತು ಬಾಗಲಕೋಟೆ

ಮುಲಕೀ [illegible] ವಿದ್ಯಾರ್ಥಿಗಳಿಗೆ ಸಂಗ್ರಹಿಸಲು [illegible] ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂವಿವರಣೆ	[illegible]
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋವಿಂದ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ರಾಜ್ಯ ಪದ್ಧತಿ	೧-೦-೦

(ಟಿಕ್ಸ್ಟ ಬುಕ್ಸ ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಈ ಪತ್ರಿಕೆಯು ವೆಂಕಟೇಶ ಭೀಮರಾವ ಆಚಾರ್ಯ ಇವರ [illegible] ಮುದ್ರಣಾಲಯದಲ್ಲಿ [illegible] ಮುದ್ರಿಸಿ [illegible] ಪ್ರಸಿದ್ಧಿಪಡಿಸಿದರು.

ರ ನಂ. ಬಿ. ೨೭೮೮ ನಿತ್ಯ ಸಂಚಿಕೆ ಬೆಲೆ ೦—೦—೩.

...परवशं दुःखं । यद्यदात्मवशं सुखम् ॥—मनु.

ಕನ್ನಡಿಗ

KANNADIGA BAGALKOT BI-WEEKLY ಅರೆವಾರ ಪತ್ರಿಕೆ.

ಸಂಪಾದಕರು:— ವೆಂಕಟೇಶ ಶೇತುರಾಮಾಚಾರ್ಯ ಕೆರೂರ.

ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧] ಬಾಗಲಕೋಟಿ— ಗುರುವಾರ ಮಿತಿ ಫಾಲ್ಗುಣ ಬಹುಳ ೭ ಶಕೆ ೧೮೫೨ ತಾ|| ೧೨—೩—೩೧ [ಸಂಚಿಕೆ ೨೧೦

ಮಹಾತ್ಮರ ಭೀಷ್ಮಪ್ರತಿಜ್ಞೆ

ಸಮಾಧಾನಕರವಾದ ರಾಜ್ಯಘಟನೆ ದೊರೆಯದ ಹೊರತು ಆಶ್ರಮಕ್ಕೆ ಹೋಗುವದಿಲ್ಲ

(ತಂತಿಯ ವಾರ್ತೆ ತಾ|| ೧೧)

ಓರ್ವ ಪತ್ರಿಕಾ ಪ್ರತಿನಿಧಿಯು ಮಹಾತ್ಮರನ್ನು ಕಂಡಕೊಂಡಾಗ, ಅವರು ಅವನಿಗೆ ಕೆಳಗಿನಂತೆ ತಿಳಿಸಿದರು

ಕರಾಚಿ ಕಾಂಗ್ರೆಸದಲ್ಲಿ ಒಪ್ಪಂದಕ್ಕೆ ಮನ್ನಣೆ ದೊರೆಯದಿದ್ದ ಪಕ್ಷದಲ್ಲಿ, ನನಗೆ ಒಂಡೀಗಾಲಿಯು ಪರಿಷತ್ತಿನ ಆಮಂತ್ರಣವು ಬರುವ ಸಂಭವವಿಲ್ಲ. ಯಾಕಂದರೆ ನಾನು ನನ್ನ ಸ್ವಂತಕ್ಕಾಗಿ ವ್ಯಾಯಿವರಾಯರನ್ನ ಕಂಡುಕೊಂಡಿರದೆ, ಕಾಂಗ್ರೆಸದ ಪರವಾಗಿ ಅವರನ್ನು ಕಂಡುಕೊಂಡಿದ್ದೇನೆ. ಕಾಂಗ್ರೆಸಕ್ಕೆ ಸಮಾಧಾನಕರವಾದ ರಾಜ್ಯಘಟನೆಯು ದೊರೆಯದ ಹೊರತು ನಾನು ನನ್ನ ಆಶ್ರಮಕ್ಕೆ ತಿರುಗಿ ಹೋಗುವದಿಲ್ಲ

ಮಹಾತ್ಮರಿಗೆ

೭೦೦೦೦ ರುಪಾಯಿ ನಿಧಿ

(ತಂತಿಯ ವಾರ್ತೆ ತಾ|| ೧೦)

ಅಹಮ್ಮದಾಬಾದದ ನಿವಾಸಿಗಳು ನಿನ್ನಿನ ದಿವಸ ಸಾಬರಮತಿ ತೀರದ ಮೇಲೆ ಮಹಾತ್ಮರ ಸನ್ಮಾನಾರ್ಥವಾಗಿ ಸಾರ್ವಜನಿಕ ಸಭೆ ಕೂಡಿಸಿ ಮಹಾತ್ಮಾ ಗಾಂಧಿಯವರಿಗೆ ೭೦೦೦೦ ರುಪಾಯಿ. ನಿಧಿ ಹಾಗು ಮಾನಪತ್ರ ಸಮರ್ಪಿಸಿದರು ಸಭೆಯಲ್ಲಿ ಲಕ್ಷಾವಧಿ ಜನರು ಭಾಗ ತೆಗೆದುಕೊಂಡಿದ್ದರು

ಭಗತಸಿಂಗರ

ಗಲ್ಲಿನ ಶಿಕ್ಷೆ ರದ್ದಾಯಿತು?

(ತಂತಿಯ ವಾರ್ತೆ ತಾ|| ೧೧)

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗ, ರಾಜಗುರು, ಸುಖದೇವ ಮೊದಲಾದವರ ಗಲ್ಲಿನ ಶಿಕ್ಷೆಯು ರದ್ದು ಮಾಡಲ್ಪಟ್ಟಿದೆಯಾಗಿ ಸುದ್ದಿಯಿದೆ ಈ ಸಂಬಂಧವಾಗಿ ಸರಕಾರಿ ಪ್ರಕಟನೆ ಇನ್ನೂ ಹೊರಬಿದ್ದಿರುವದಿಲ್ಲ

ಮಹಾತ್ಮರು

ಲಂಡನಕ್ಕೆ ಪ್ರಯಾಣ ಬೆಳಿಸುವರು

(ತಂತಿಯ ವಾರ್ತೆ ತಾ|| ೧೧)

ಒಂಡೀಗಾಲಿಯ ಪರಿಷತ್ತಿನ ಧ್ಯೇಯವನ್ನು ಸಫಲಮಾಡಿಕೊಳ್ಳುವದಕ್ಕಾಗಿ ಮಹಾತ್ಮಾ ಗಾಂಧಿಯವರು ಲಂಡನಕ್ಕೆ ಹೋಗಲು ಸಿದ್ಧರಿರುವರೆಂಬುದಾಗಿ ಅಲ್ಲಿಯ ತಂತಿಗಳಿಂದ ತಿಳಿದು ಬರುತ್ತದೆ.

ಮುಂಬಯಿಯಲ್ಲಿ

ವಲ್ಲಭಭಾಯಿಯವರ ಭಾಷಣ

ಮುಂಬಯಿಯಲ್ಲಿ ಆಜಾದ ಮೈದಾನದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವಾಗ ಸರದಾರ ವಲ್ಲಭಭಾಯಿಯವರು ಒಪ್ಪಂದದ ವಿಷಯವನ್ನು ಕುರಿತು ಕೆಳಗಿನಂತೆ ಹೇಳಿದರು.

ಮುಂಬಯಿ ಪಟ್ಟಣಿಗರಿಗೆ ಒಪ್ಪಂದದ ಮತಿತಾರ್ಥವನ್ನು ತಿಳಿಸಿಕೊಡಲು ಮಹಾತ್ಮರು ನನಗೆ ಆಜ್ಞೆ ಮಾಡಿದ್ದರಿಂದ ನಾನು ಇಂದು ಇಲ್ಲಿಗೆ ಬಂದಿದ್ದೇನೆ ಸತ್ಯಾಗ್ರಹ ಸಮರದಲ್ಲಿ ಎಲ್ಲ ಸ್ಥಳಗಳಿಗಿಂತಲೂ ಹೆಚ್ಚಾಗಿ ಭಾಗತೆಗೆದುಕೊಂಡ ಈ ಪಟ್ಟಣವು ಒಪ್ಪಂದದ ಕರಾರುಗಳ ಬಗ್ಗೆ ಅಸಂತೋಷವನ್ನು ವ್ಯಕ್ತಪಡಿಸುತ್ತಿರುವದು ಸಹಜವಾಗಿದೆ ಆದರೆ ಈ ಒಡಂಬಡಿಕೆಯಿಂದೇನೂ ನಮ್ಮ ಯುದ್ಧವು ಕೊನೆಗಂಡಿಲ್ಲ ಸ್ವರಾಜ್ಯವು ಸಿಗದಿದ್ದಲ್ಲಿ, ಯುದ್ಧವು ಪುನಃ ಪ್ರಾರಂಭಿಸಲ್ಪಡುವದು. ವರ್ಕಿಂಗ ಕಮಿಟಿಯವರು ಒಂದು ತಿಂಗಳವರೆಗೆ ಪೂರ್ಣವಿಚಾರ ಮಾಡಿ, ಒಡಬಡಿಕೆಯನ್ನು ಮಾಡಿಕೊಂಡಿದ್ದಾರೆ. - ರಾಜ್ಯದಾಡಳಿತದ ಪ್ರಶ್ನೆಗಳ ಸಂಬಂಧವಾಗಿ ಸಮಾನ ಅಧಿಕಾರ

(ನಾಲ್ಕನೆಯ ಪುಟ ನೋಡಿರಿ)

ಅಂಕೋಲೆಯ ವಸ್ತುಸ್ಥಿತಿ

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದೆ)

ಇಷ್ಟೆಲ್ಲ ಬಗೆಯಿಂದ ಭೇದನೀತಿಗಳನ್ನು ಹೂಡಿದರೂ ಸರಕಾರದ ರಣೆಯ ಕಾಳಗವೇನು ತಪ್ಪಲಿಲ್ಲ. ಹೆಚ್ಚಿನ ಪೊಲೀಸರನ್ನು ಗುಂಪುಗಟ್ಟಿ ಕರಿಸಬೇಕಾಯಿತು. ಜಪ್ತಿಗಳ ಚಕ್ರವನ್ನು ಹೂಡಬೇಕಾಯಿತು. ಇಷ್ಟಾದರೂ ಸರಕಾರದ ಮೇಲೆ ಏನಾದರೂ ಪರಿಣಾಮವಾಯಿತೇ? ಏನೂ ಇಲ್ಲ. ಇವರಲ್ಲಿ ಯಾರೂ ಕಂದಾಯವನ್ನು ಕೊಡಲಿಲ್ಲವೆನ್ನಲಿಕ್ಕೆ ಅಡ್ಡಿಯಿಲ್ಲ. ಸರಕಾರದವರು ವಸೂಲ ಮಾಡಿದ ಬಗೆ ಅನೇಕ ಹಲವು. ಯಾವನೊಬ್ಬನು ಸರಕಾರೀ ಕಚೇರಿಯಲ್ಲಿ ಕಾರಕೂನನಿದ್ದರೆ ಅವನ ಅಣ್ಣನ ಕಂದಾಯ ಹಣವನ್ನು ಅವನ ಸಂಬಳದಿಂದ ಕತ್ತರಿಸಿ ಕೊಳ್ಳುವರು. ಬೇರೆ ಕೆಲಸಗಳ ಬಗ್ಗೆ ಕಚೇರಿಗೆ ಹೋದವರಿಂದ ಮೊದಲು ಕಂದಾಯ ತೆಗೆದುಕೊಂಡು ಅನಂತರ ಅವರ ಕೆಲಸದ ಬಗ್ಗೆ ವಿಚಾರಿಸುವದು. ಮುಂತಾದ ನಾನಾರೀತಿಯಿಂದ ಕಂದಾಯ ವಸೂಲ ಮಾಡಲ್ಪಟ್ಟಿತು. ಯಾರ ಹೆಸರಿಂದ ಕಂದಾಯ ವಸೂಲಾಯಿತೋ ಅವರ ಪಶ್ಚಾತ್ತಾಪವನ್ನು ಹೇಳಲಾಗದು. ಅವರು ಸತ್ಯಾಗ್ರಹದ ಸಂಚಾಲಕರ ಬಳಿಗೆ ಬಂದು ಕಣ್ಣೀರು ಸುರಿಸಿದರು. ತಾಯಿಯೊಬ್ಬಳು ಸರಕಾರದ ಪ್ರೋತ್ಸಾಹಕ್ಕೆ ಹೆದರಿ ಮಗನು ಮನೆಯಲ್ಲಿಲ್ಲದಾಗ ಕಂದಾಯ ಕೊಟ್ಟದ್ದರಿಂದ ಮಗನು ದುಃಖಿತನಾಗಿ ಉಪವಾಸ ಬಿದ್ದನು, ತಂದೆಯು ಕಂದಾಯ ತುಂಬಿದ್ದಕ್ಕಾಗಿ ಮಗನು ಮನೆ ಬಿಟ್ಟು ಹೋದನು. ಹಲವು ಸ್ಥಳಗಳಲ್ಲಿ ಖಾತೆದಾರನಿಗೆ ಏನೂ ತಿಳಿಯದಂತೆ ಯಾರೋ ಪರೋಪಕಾರಿಗಳು ಕಂದಾಯ ತುಂಬಿದ್ದರು.

ಇಷ್ಟಾಗಿಯೂ ಹಳ್ಳಿಗಳಲ್ಲಿ ಕಂದಾಯ ವಸೂಲಾಗಲಿಲ್ಲವೆಂದೇ ಹೇಳಬೇಕು. [illegible] ದ ಅಂಕಿಯನ್ನು ಒಳ್ಳೇ ಆಢ್ಯತೆಯಿಂದ ಹೇಳುವ ಸರಕಾರವು ಪ್ರತಿಯೊಂದು ಹಳ್ಳಿಯಲ್ಲಿ ಎಷ್ಟೆಷ್ಟು ವಸೂಲಾಯಿತೆಂಬದನ್ನೂ ಎಷ್ಟು ಉಳಿಯಿತೆಂಬದನ್ನೂ ಹೇಳಬಾರದೇ?

ಇವು ನೋಡಿರಿ ಕೆಲವು ಅಂಕಿಗಳು—

ಊರು	ಬಂದ ಹಣ	ಉಳಿದ ಹಣ
ಹಿಚ್ಕಡ	೧೨೨-೧೧-೪	೭೪೩-೭-೬
ಕಣಗಿಲ	೮೯-೬-೯	೨[illegible]-೪-೦
ಮಾಣೇಗದ್ದೆ	ಏನೂ ಇಲ್ಲ	[illegible]-೬-೦
ಅಚ್ವೆ	೩೩೭-೬-೪	೧[illegible]

ಇವು ಉದಾಹರಣೆಗಾಗಿ ಕೊಟ್ಟ ಹಳ್ಳಿಗಳು. ಬಹುತರ ಎಲ್ಲ ಹಳ್ಳಿಗಳಲ್ಲಿ ಇದೇ ಸ್ಥಿತಿ ಇರುತ್ತದೆ. ಜನರು ಈ ವರೆಗೆ ಧೈರ್ಯಬಿಟ್ಟಿಲ್ಲ. ಕಂದಾಯ ಕೊಟ್ಟವರೂ ಕೂಡ ಮರಳಿ ಕೂಡಲೇ ಶಾಂತಿಯ ಜೊತೆಗೆ ಒಟ್ಟಿಗೆ ಸರಕಾರವನ್ನು ಎದುರಿಸುವ ಸಿದ್ಧತೆಯಲ್ಲಿದ್ದರು. ಆದರೆ ಅಷ್ಟರಲ್ಲಿಯೇ ಒಪ್ಪಂದದ ಸುದ್ದಿ ಬಂತು. ಈ ಸುದ್ದಿಯಿಂದ ಹಲವರು ಹತಾಶರಾದರೆಂಬದನ್ನು ಹೇಳಲೇಬೇಕು. ಸರಕಾರಕ್ಕೆ ಅಂಕೋಲಾ ತಾಲೂಕಿನ ವೀರ ಸತ್ಯಾಗ್ರಹಿ ಜನರ ಮನಗಾಣಬೇಕೆಂದು ಮಾಡಿದ್ದ ಆ ಪ್ರಯತ್ನಗಳು ನಿರರ್ಥಕವಾದವು. ಇವೆಲ್ಲ ಸಂಗತಿಗಳಿಂದ ನೋಡಲಾಗಿ ಸರಕಾರಿ ಪ್ರಕಟನೆಯಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆಂಬದು ತಿಳಿಯುತ್ತದೆ. ರಾಷ್ಟ್ರೀಯ ಚಳವಳಿಗಳ ಬಗ್ಗೆ ತಪ್ಪು ತಿಳುವಳಿಕೆಯನ್ನುಂಟುಮಾಡುವ ಹುಸಿ ಸಂಗತಿಗಳನ್ನು ಪ್ರಕಟಿಸುವದು ಸರಕಾರೀ ಅಧಿಕಾರಿಗಳ ಬಿರುದಷ್ಟೇ?

ಕರ್ನಾಟಕದೊಳಗಿನ

ಕರನಿರಾಕರಣೆಯ ಸಂಘಟಕರ ಮತ.

"ಕರ್ನಾಟಕ ಧುರೀಣ" ಪತ್ರಿಕೆಯ ಸುದ್ದಿಗಾರನು ಕರ್ನಾಟಕದೊಳಗಿನ ಕರನಿರಾಕರಣೆಯ ಸಂಘಟಕರೊಡನೆ, ರೈತರ ಹೀನಸ್ಥಿತಿಯ ಸಂಬಂಧವಾಗಿ ಚರ್ಚೆ ಮಾಡಲಾಗಿ ಅವರು ಹೇಳಿದ್ದೇನಂದರೆ—

ರಾಜಕೀಯ ಕಾರಣಕ್ಕಾಗಿ ಕರನಿರಾಕರಣೆಯನ್ನು ಕೈಕೊಂಡಿದ್ದರೆ ಅದನ್ನು ನಿಲ್ಲಿಸಬೇಕೆಂದು ಕಾಂಗ್ರೆಸ್ಸಿನವರು ಆಜ್ಞೆಯಿತ್ತಿದ್ದಾರೆ. ಅಂತಹ ಕ್ಷೇತ್ರವು ಕರ್ನಾಟಕದಲ್ಲಿ ಅಂಕೋಲಾ ತಾಲೂಕೊಂದೇ ಆಗಿದೆ.

ಆರ್ಥಿಕ ಅಡಚಣೆಯಿಂದಾಗಿ ಕರನಿರಾಕರಣೆಯ ಹೊರತಾಗಿ ಬೇರೆ ಉಪಾಯಗಳನ್ನು ಕೈಕೊಳ್ಳಬೇಕೆಂದು ಕಾಂಗ್ರೆಸ್ಸಿನ ಆಜ್ಞೆ. ಸಿರಸಿ, ಸಿದ್ದಾಪುರ, ಹಿರೇಕೆರೂರ ಈ ತಾಲೂಕುಗಳ ರೈತರ ಸ್ಥಿತಿಯು ಬಹಳೇ ಕೆಟ್ಟಿದೆ. ಅವರು ಕಿರಿಯನ್ನು ಮಾಟ ಬಿಡತೆಂದು ಪರಿಷತ್ತುಗಳನ್ನು ಮಾಡಿಕೊಂಡು, ಸಹಕಾರಿ ಮಂಡಿ ಕೇಂದ್ರ ಮಂಡಲಗಳನ್ನು ಕಟ್ಟಿದರು. ಆ ರೀತಿ ಹಣ ಉಪಯೋಗವಾಗಲಿಲ್ಲ. ಕರನಿರಾಕರಣೆಯ ಚಳವಳಿ ಪ್ರಾರಂಭಿಸಿದರು. ಸಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ಕಿರಿಗೆಯಲ್ಲಿ ಅರ್ಧ ಹಣ ವಸೂಲಾಗಿದೆ, ಹಿರೇಕೆರೂರ ತಾಲೂಕಿನಲ್ಲಿ ೧೨೦ ಕ್ಕೆ ೧೦ ರಂತೆ ವಸೂಲಾಗಿದೆ. ಈ ರೈತರಿಗೆ ಈಗ ಸಹಾಯ ದೊರೆಯುವದ ಅವಶ್ಯವಿದೆ. ಸರಕಾರದವರು ತಮ್ಮ ಧೋರಣವನ್ನು ಬದಲಿಸದಿದ್ದಲ್ಲಿ, ಕರನಿರಾಕರಣೆಯ ಚಳವಳಿಯನ್ನು ಮುಂದೆ ಸಾಗಿಸದ ಹೊರತು ಇವರಿಗೆ ಬೇರೊಂದು ಮಾರ್ಗವೇ ಇಲ್ಲ. ಕಾರಣ ಸರಕಾರದವರು ಜಪ್ತಿ ಮೊದಲಾದ ಕ್ರಮಗಳನ್ನು ನಿಲ್ಲಿಸಬೇಕು. ರೈತರ ಆರ್ಥಿಕ ಹೀನಸ್ಥಿತಿಯ ಸಂಬಂಧವಾಗಿ ಬಹಿರಂಗವಾಗಿ ವಿಚಾರಣೆ ನಡಿಸಿ, ರೈತರಿಗೆ ಸಹಾಯ ಮಾಡಬೇಕು.

ರೈತರ ಹೀನಸ್ಥಿತಿಯ

ವಿಚಾರಣಾ ಮಂಡಳ.

ಸಿರಸಿ, ಸಿದ್ದಾಪುರ, ಹಿರೇಕೆರೂರ ತಾಲೂಕುಗಳಲ್ಲಿಯ ರೈತರ ಆರ್ಥಿಕ ಹೀನಸ್ಥಿತಿಯನ್ನು ಕುರಿತು ವಿಚಾರ ಮಾಡುವದಕ್ಕಾಗಿ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಒಂದು ವಿಚಾರಣಾ ಮಂಡಳವನ್ನು ನಿಯಮಿಸುವವರಿದ್ದು, ವಿಚಾರಣೆಯಾಗುವ ವರೆಗೆ ಜಪ್ತಿ, ಝಡತಿ, ದಬ್ಬಾಳಿಕೆ, ಮೊದಲಾದವುಗಳನ್ನು ನಿಲ್ಲಿಸಬೇಕೆಂದು ಗವರ್ನರ, ಕಮೀಶನರ, ಕಲೆಕ್ಟರ ಮೊದಲಾದ ಅಧಿಕಾರಿಗಳಿಗೆ ತಾರಿನ ಮೂಲಕ ವಿನಂತಿ ಮಾಡಿಕೊಂಡಿದ್ದಾರೆ.

ಕ. ಪ್ರಾಂ. ಕಾಂ. ಕಮಿಟಿಯ

ವಿಶೇಷ ಸಾಧಾರಣ ಸಭೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಿಶೇಷ ಸಾಧಾರಣ ಸಭೆಯು ಇದೇ ತಿಂಗಳ ೧೮ ನೆಯ ತಾರೀಖಿನ ದಿವಸ ಸಂಜೆಯ ೪ ಗಂಟೆಗೆ ಧಾರವಾಡದಲ್ಲಿ ಮೊದಲಿನ ಕಾಂಗ್ರೆಸ್ ಕಾರ್ಯಾಲಯದಲ್ಲಿ ನೆರವೇರುವದಿದ್ದು, ಆಗ ಕರಾಚಿ ಕಾಂಗ್ರೆಸ್ಸಿಗೆ ಪ್ರತಿನಿಧಿಗಳನ್ನು ಆರಿಸುವದು, ತಾಲೂಕ ಹಾಗು ಜಿಲ್ಲಾ ಕಾಂಗ್ರೆಸ್ ಕಮಿಟಿ ನಿರ್ಧರಿಸುವದು. ಮದ್ಯನಿಷೇಧ ಹಾಗು ಸ್ವದೇಶಿ ಪ್ರಸಾರಕ್ಕಾಗಿ ಮಂಡಳಗಳನ್ನೇರ್ಪಡಿಸುವದು, ಸದ್ಯದ ಪರಿಸ್ಥಿತಿಯನ್ನು ವಿಚಾರಿಸುವದು ಇವೇ ಮೊದಲಾದವುಗಳ ಬಗ್ಗೆ ಚರ್ಚೆ ಮಾಡಲಾಗುವದೆಂದು ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಒಪ್ಪಂದದ ಬಗ್ಗೆ ಪ್ರಶ್ನೋತ್ತರಗಳು.

ವೃತ್ತಪತ್ರಿಕೆಯ ಪ್ರತಿನಿಧಿಗಳು ಮಹಾತ್ಮಾ ಗಾಂಧಿಯವರನ್ನು ಕಂಡುಕೊಂಡಾಗ ಅವರಲ್ಲಿ ಆದ ಮುಂದಿನ ಪ್ರಶ್ನೋತ್ತರಗಳು ನಡೆದವು.

ಪ್ರ:— ಒಪ್ಪಂದವು ಸಾಧ್ಯವಾಗುವದೆಂಬ ಬಗ್ಗೆ ಎಳ್ಳಷ್ಟು ಆಶೆಯಿಲ್ಲದಿದ್ದರೂ ಸಹ, ಯಾವ ಚಮತ್ಕಾರದ ಮೂಲಕವಾಗಿ ಒಪ್ಪಂದವು ಸಾಧ್ಯವಾಯಿತು?

ಉ:— ಲಾರ್ಡ ಆರ್ಯುವಿನರ ಉದಾರ ಮನಸ್ಸು ಮತ್ತು ಅದರೊಂದಿಗೆ ನೀವು ಹೇಳಲು ಅಪ್ಪಣೆ ಕೊಟ್ಟರೆ, ನನ್ನದೂ ಉದಾರ ಮನಸ್ಸು ಕೂಡಿಕೊಂಡಿದ್ದರಿಂದಲೇ ಒಪ್ಪಂದವು ಸಾಧ್ಯವಾಯಿತು, ಇದಲ್ಲದೆ "ಸರ್ಮನ್ ಆನ್ ದಿ ಮೌಂಟ" ಎಂಬ ಹೆಸರಿನಿಂದ ಪ್ರಸಿದ್ಧವಿರುವ ಕ್ರಿಸ್ತನ ಉಪದೇಶದಲ್ಲಿಯ ತತ್ವವನ್ನು ಈ ಸಮಯದಲ್ಲಿ ಉಪಯೋಗ ಮಾಡಿಕೊಂಡಿದ್ದು ಕೆಲಮಟ್ಟಿಗೆ ಕಾರಣವಾಯಿತು.

ಪ್ರ:— ಲಾರ್ಡ ಆರ್ಯುವಿನರೊಡನೆ ಮಾಡಿಕೊಂಡ ಒಪ್ಪಂದದಿಂದ ಆಯುಷ್ಯದೊಳಗಿನ ಮುಖ್ಯ ಧ್ಯೇಯವು ಸಿದ್ಧಿ ಹೊಂದಿದೆಯೆಂದು ನಿಮಗೆ ಅನಿಸುತ್ತದೆಯೋ ಹೇಗೆ?

ಉ:— ಹಿಂದುಸ್ಥಾನಕ್ಕೆ ಪೂರ್ಣ ಸ್ವರಾಜ್ಯ ಸಿಕ್ಕನಂತರ, ನನ್ನ ಆಯುಷ್ಯದೊಳಗಿನ ಮುಖ್ಯ ಧ್ಯೇಯವು ಸಿದ್ಧಿ ಹೊಂದಿದಂತಾಗುವದು. ಈಶ್ವರ ಹಾಗು ಸೂರ್ಯ ಇವರ ಅಸ್ತಿತ್ವವು ಎಷ್ಟು ನಿಶ್ಚಿತವಿರುವದೋ ಅಷ್ಟೇ ನಿಶ್ಚಯಾತ್ಮಕವಾಗಿ ಸ್ವರಾಜ್ಯವು ಬರಹತ್ತಿದೆಯೆಂದು ನನಗೆ ಅನಿಸಹತ್ತಿದೆ.

ಪ್ರ:— "ಪೂರ್ಣ ಸ್ವಾತಂತ್ರ್ಯ" ಇದರ ಅರ್ಥವು ಬ್ರಿಟಿಶ ಸಾಮ್ರಾಜ್ಯದಿಂದ ಹೊರಬಿದ್ದು ಹೋಗುವದು ಎಂಬುದಾಗಿ ಆಗುವದಿಲ್ಲವೆ?

ಉ:— ಜನರು ಹೀಗೆ ಅರ್ಥ ಮಾಡುತ್ತಿರುವರೆಂಬುದು ನನಗೆ ಗೊತ್ತುಂಟು. ಇದಕ್ಕೆ ಕಾರಣವೆಂದರೆ ಇಷ್ಟೆ ಹಿಂದುಸ್ಥಾನದೊಡನೆ ಸರಿಸಮಾನತೆಯಿಂದ ವರ್ತಿಸಲಿಕ್ಕೆ ಬ್ರಿಟಿಶ ರಾಜ್ಯವು ಸಿದ್ಧವಿಲ್ಲವೆಂದು ಅವರು ತಿಳಿದುಕೊಂಡಿರುವರು. ಆದರೆ ನಾನು ಮಾತ್ರ ಹಾಗೆ ತಿಳಿದುಕೊಂಡಿರುವದಿಲ್ಲ. ವ್ಯರ್ಥವಾಗಿ ಮನಸಿನಲ್ಲಿ ಮಂದಿಗೆ ತಿನ್ನುತ, ಕುಳಿತಿರ್ನೆನು ತಿಳಿದುಕೊಳ್ಳಿರಿ. ಬೇಕಾದರೆ ಬ್ರಿಟಿಶ ಜನರು ಸ್ವಾತಂತ್ರ್ಯೋಪಭೋಗಿಗಳಾಗಿರುವದರಿಂದ ಅವರು ಎರಡನೆಯವರಿಗಾದರೂ ಸ್ವಾತಂತ್ರ್ಯವನ್ನು ಒದಗಿಸಿಕೊಡುವರೆಂದು ನನ್ನ ಗ್ರಹಿಕೆ. ಸ್ವತಃ ಸಂಘಟಿತರಾಗಿ ಸ್ವತಃ ರಾಜ್ಯಕಾರಭಾರ ಸಾಗಿಸುವದಕ್ಕೇನೆ ಪೂರ್ಣಸ್ವರಾಜ್ಯವೆಂದನ್ನುವರು. ಪೂರ್ಣ ಸ್ವರಾಜ್ಯ ಹಾಗು ಪರರಾಷ್ಟ್ರೀಯ ಸಂಬಂಧ ಇವುಗಳಲ್ಲಿ ಏನೂ ವಿರೋಧವಿರುವದಿಲ್ಲ. ಆಂಗ್ಲ ಜನರು ಇಂಗ್ಲಂಡದೊಡನೆ ಸಂಬಂಧವಿರಲು ಅಡ್ಡಿಯೇನು? ಸರಿಸಮಾನ ಅಧಿಕಾರವಿದ್ದರೆ ತೀರಿತು, ಇಚ್ಛೆಯಿದ್ದಲ್ಲಿ ಹಾಗು ಹಿತಕರವಿದ್ದಲ್ಲಿ ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯದಲ್ಲಿ ಉಳಿಯುವದು. ಸಾಮ್ರಾಜ್ಯದಿಂದ ಹೊರಬಿದ್ದು ಹೋಗುವದೇ ಯೋಗ್ಯವೆನಿಸಿದರೆ, ಹಾಗೆಯೂ ಮಾಡುವೆವು.

ಪ್ರ:— ಬ್ರಿಟಿಶ ಜನರು ನಿಮ್ಮ ಮೇಲೆ ಸತ್ತಾಧಾರಿಗಳಾಗಿರುವದು ನಿಮ್ಮ ಮನಸಿಗೆ ಬರುತ್ತದೆಯೋ ಹೇಗೆ?

ಉ:— ನನ್ನ ಮೇಲೆ ನನ್ನದೇ ಸತ್ತೆಯಿರುವದು ನನಗೆ ಯೋಗ್ಯವೆನಿಸುತ್ತದೆ. ಈ ಜನರ ಸತ್ತೆ, ಆ ಜನರ ಸತ್ತೆ ಇವುಗಳಲ್ಲಿ ನಾನು ಭೇದ ಭಾವ ಮಾಡುವದಿಲ್ಲ. ನನ್ನ ಮೇಲೆ ನನ್ನದೇ ಸತ್ತೆಯಿರಬೇಕು.

ಪ್ರ:— ಪೂರ್ಣ ಸ್ವರಾಜ್ಯವು ಪ್ರಸ್ಥಾಪಿತವಾದ ನಂತರ ಹಿಂದುಸ್ಥಾನದಲ್ಲಿ ಸೈನ್ಯವಿರದೆ ಇರುವದು ಶಕ್ಯವಾಗುವದೆಂದು ನಿಮ್ಮ ಕಲ್ಪನೆಯಿದೆಯೋ?

ಉ:— ನನ್ನ ಕಲ್ಪನೆಯೇನೋ ಹಾಗೆ ಇದೆ. ನನ್ನ ಜೀವಮಾನದಲ್ಲಿ ಅದು ಶಕ್ಯವಾಗುವದೆಂದು ನನಗೆ ಅನಿಸುವದಿಲ್ಲ. ಸೈನ್ಯವಿಲ್ಲದೆ ಇರುವದಕ್ಕೆ ಇನ್ನೂ ಎಷ್ಟೋ ವರ್ಷಗಳು ಕಳೆದು ಹೋಗಬೇಕಾಗುವವು.

ಪ್ರ:— ಬೊಲ್ಶೆವಿಕ ಜನರು ಶಕ್ತಿ ಮಾಡುವರಾಗಿ ನಿಮಗೆ ಭೀತಿಯುಂಟಾಗುವದಿಲ್ಲವೇ?

ಉ:— ಸ್ವಲ್ಪವೂ ಇಲ್ಲ; ನಮ್ಮ ನೀತಿರೀತಿಯ ಮೇಲೆ ನಾವು ವಿಶ್ವಾಸವಿಡುತ್ತೇವೆ. ಬೊಲ್ಶೆವಿಜಮ್‌ದಲ್ಲಿಯೂ ಕೆಲವು ಉತ್ತಮ ತತ್ವಗಳಿವೆಯೆಂದು ನನಗೆ ಅನಿಸುತ್ತದೆ.

ಪ್ರ:— ಗೋಲಮೇಜಿನ ಪರಿಷತ್ತು, ಇನ್ನು ಮೇಲೆ ಎಲ್ಲಿ ಕೂಡುವದು?

ಉ:— ಇದರ ಮೊದಲನೆಯ ಅಧಿವೇಶನವು ಹಿಂದುಸ್ಥಾನದಲ್ಲಿ, ಮತ್ತು ಎರಡನೆಯ ಅಧಿವೇಶನವು ಇಂಗ್ಲಂಡದಲ್ಲಿ ಕೂಡಿ ನಡೆ. ರಾಷ್ಟ್ರೀಯ ಪಕ್ಷದವರು ಅಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಬೇಡುವರು. ಪೂರ್ಣ ಸ್ವಾತಂತ್ರ್ಯ ಬೇಡದಿದ್ದರೆ, ನಾವು ಇದನ್ನು ಇಲ್ಲದಂತೆಯೇ ಸೈನ್ಯ ಹಾಗು ದೇಶದ ಈ ಸಂಬಂಧವಾಗಿ ಈಗ ಹಾಕಲ್ಪಟ್ಟ ಬಂಧನಗಳು ಕಾಂಗ್ರೆಸ್ಸಿಗೆ ಮಾನ್ಯವಿಲ್ಲ. ಅಲ್ಪಸಂಖ್ಯಾಕರು, ರಾಷ್ಟ್ರೀಯ ಪಕ್ಷ, ವ್ಯಾಪಾರ ಇವುಗಳಿಗೆ ಅವಶ್ಯವಿರುವ ಬಂಧನಗಳನ್ನು ಸ್ವೀಕರಿಸಲಾಗುವವು. ಕೇವಲ ದೇಶಕ್ಕಾಗಿ ಹಿಂದುಸ್ಥಾನದ ಪಾಲಿಗೆ ಬರುವ ಸಾಲವೆಲ್ಲವೂ ತೀರಿಸಲ್ಪಡುವದು. ಮತಭೇದವಾದಲ್ಲಿ ಅದನ್ನು ಪಂಚರು ಬಗೆಹರಿಸುವರು. ರಾಷ್ಟ್ರಸಂಘದವರು ಇದನ್ನು ಮಾಡಬಹುದು. ಈ ಪ್ರಶ್ನೆಗಳನ್ನು ರಾಷ್ಟ್ರಸಂಘಕ್ಕೆ ಒಪ್ಪಿಸಲು ಇಂಗ್ಲಂಡವು ಒಪ್ಪಿಕೊಳ್ಳುವದೋ ಇಲ್ಲವೋ ಹೇಳಲು ಬರುವಂತಿಲ್ಲ.

ಪ್ರ:— ಈ ಪರಿಷತ್ತು ಯಶಸ್ವಿಯಾಗಿ ಹೊಸದೊಂದು ರಾಜ್ಯಘಟನೆಯು ಬಳಕೆಯಲ್ಲಿ ಬಂದಲ್ಲಿ, ಆಗ ನೀವು ಮುಖ್ಯ ಪ್ರಧಾನರಾಗುವಿರಾ?

ಉ:— (ನಕ್ಕು) ಆ ಕಾರ್ಯವು ಹುರುಪು ಬುದ್ಧಿ ಹಾಗು ದೃಢಮನಸಿನ ತರುಣರಿಗಿರುತ್ತದೆ.

ಸ್ಪೆಕ್ಟೇಟರ ಪತ್ರಿಕೆಗೆ

ಮಹಾತ್ಮರ ತಾರು.

ಮಹಾತ್ಮಾ ಗಾಂಧಿ ಹಾಗು ಲಾರ್ಡ ಆರ್ಯುವಿನ ಇವರೊಳಗಿನ ಒಪ್ಪಂದವಾದ ಸುದ್ದಿಯು ತಿಳಿದು ಬಂದ ಕೂಡಲೆ ಸ್ಪೆಕ್ಟೇಟರ ಪತ್ರಿಕೆಯ ಸಂಪಾದಕರು, ಸ್ವಾತಂತ್ರ್ಯದ ಅಭಿನಂದನೆಗಳು, ಸಾಮ್ರಾಜ್ಯಾಂತರ್ಗತ ಹಿಂದುಸ್ಥಾನದ ಹಿತಕ್ಕಾಗಿ ಹೋರಾಡುವಿರಾ ಇಲ್ಲವೆ ಎಂಬುದಾಗಿ ಮಹಾತ್ಮರಿಗೆ ತಾರ ಕಳಿಸಿದರು. ಇದಕ್ಕೆ ಮಹಾತ್ಮಾ ಗಾಂಧಿಯವರು 'ಸಾಮ್ರಾಜ್ಯದಲ್ಲಿ ಉಳಿಯುವದು ಇಲ್ಲವೆ ಸಾಮ್ರಾಜ್ಯದಿಂದ ಹೊರಬೀಳುವದು ಬ್ರಿಟಿಶರ ವರ್ತನೆಯನ್ನೇ ಅವಲಂಬಿಸಿದೆ. ಅವರ ಸ್ವರಾಜ್ಯದೊಂದಿಗೆ ಕರಾರು ಆಶೀರ್ವಾದ' ಎಂದು ತಾರಿನಿಂದ ಉತ್ತರ ಕೊಟ್ಟಿದ್ದಾರೆ.

ಸ್ವಯಂಸೇವಕರ ಪರಿಷತ್ತು.

ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರುವದಕ್ಕಿಂತ ಮೊದಲು ಅಖಿಲ ಭಾರತೀಯ ಸ್ವಯಂಸೇವಕರ ಪರಿಷತ್ತು ಅಲ್ಲಿ ನೆರವೇರುವದೆಂದು ಡಾ. ಹರ್ಡೀಕರರು ಪ್ರಕಟ ಮಾಡಿದ್ದಾರೆ.

(೧ನೇಯ ಪುಟದಿಂದ ಮುಂದವರಿದ್ದು)

ಹಿಂದ ಚರ್ಚೆ ಮಾಡಲು ನಮಗಾವದೂ ಹಕ್ಕು ಸಿಕ್ಕಿದೆ. ೩೩ಕೋಟಿ ಜನ ಭಾರತೀಯರು ಒಂದೇ ಮತದವರಾಗಿದ್ದುದರಿಂದ ಮುಖ್ಯಪ್ರಧಾನರು ತಮ್ಮ ಭಾಷಣದಲ್ಲಿ ಈ ಮೊದಲೇ ನುಡಿದಿದ್ದಾರೆ. [illegible] ಹಿಂದುಸ್ಥಾನವನ್ನು ಬ್ರಿಟಿಶ ಹಿಂದುಸ್ಥಾನ, ಮುಸ್ಲೀಮ ಹಿಂದುಸ್ಥಾನ ಹೀಗೆ ಬೇರೆ ಬೇರೆಯಾಗಿ ವಿಭಾಗಿಸುತ್ತಿದ್ದಾರೆ. ಮಧ್ಯವರ್ತಿ ಕಾಯಿದೆ ಮಂಡಳದ ಮೇಲೆ ಹೊಣೆಗಾರಿಕೆಯನ್ನು ಹೊರಿಸಲು ಸಿದ್ಧರಿದ್ದೇನೆ. ಬ್ರಿಟಿಶ ಸರಕಾರದವರು ಹೇಳಿದ್ದಾರೆ. ನಡೆದಂತೆ ಅವರು ನಡೆಯುವರೋ ಇಲ್ಲೋ ನೋಡುವಾ, ಇನ್ನುಮೇಲೆ ಕಾಂಗ್ರೆಸ್ ಕಮಿಟಿಯವರು, ಸೈನ್ಯ, ಬೊಕ್ಕಸದ ಅಡಳಿತ ಬೇರೆಯಾಗಿ ಹೊರಬೀಳುವ ಹಕ್ಕು ಈ ಸಂಬಂಧವಾಗಿ ತಮ್ಮ ಶಕ್ತಿ ಸಾಮರ್ಥ್ಯವನ್ನೆಲ್ಲ ವೆಚ್ಚ ಮಾಡುವರು. ಈ ಪ್ರಶ್ನೆಗಳು ಪರಿಗಣಿಸಲ್ಪಡುವ ಸಮಯವರೆಗೆ ತಾತ್ಕಾಲಿಕವಾಗಿ ಬಿಡಲ್ಪಡದಿದ್ದಲ್ಲಿ ಅವರು ಪುನಃ ಚಳವಳಿ ಪ್ರಾರಂಭಿಸುವರು.

ನಾವು ಸ್ವರಾಜ್ಯ [illegible] ಸ್ವಯಂಸೇವಕರು ಮರೆಯತಕ್ಕದ್ದಲ್ಲ. ಜಿಲ್ಲೆಗಳನ್ನು ಆಳಲು ಸೇನಾಪತಿಗಳೆಂದ ಮಹಾತ್ಮರು ಈಗ ಆಜ್ಞೆ ಕೊಟ್ಟಿದ್ದಾರೆ. ಆ ಆಜ್ಞೆಯಂತೆ ಅವರು ನಡೆದುಕೊಳ್ಳಬೇಕು. ಈ ದೇಶ ಬಿಟ್ಟು [illegible] ರಾಜ್ಯ [illegible] ಕ್ರಮವನ್ನು ಎಂದಿನಂತೆಯೆ ಸ್ವಾತಂತ್ರ್ಯ [illegible] ಉದ್ದೇಶ ಅದೇನು ಒಂದು ಕಡೆಯಿಂದ [illegible] ಹಿಂದುಸ್ಥಾನದಲ್ಲಿ ಉಳಿಯುತ್ತದೆಂದು [illegible] ಕಾಂಗ್ರೆಸ್ ನಾಯಕರು ಗುರುತು ಮಾಡಿಕೊಂಡಿದ್ದಾರೆ. ಉದ್ದೇಶ ಅರಿಯಲು ಅನೇಕ ವಿಧ [illegible] ಸ್ವಾಗತ ಮಾಡಿ [illegible] ಎಂದು [illegible] ಬೇಕು. ಆದರೆ ಜುಲುಮೆ ಹಿಂಸೆ ಮೊದಲಾದವುಗಳೊಂದಿಗೆ ಇದು [illegible] ಇದನ್ನು ಸಿಕ್ಕಿಸಿಕೊಂಡು ಸರಕಾರದವರು [illegible]. ಆದರೆ ಮಹಾತ್ಮರು ಅದಕ್ಕೆ ಒಪ್ಪಿಕೊಳ್ಳಲಿಲ್ಲ.

ಪೋಲೀಸ ಅತ್ಯಾಚಾರ ವಿಷಯವಾಗಿ ವಿಚಾರ ನಡಿಸಿದ್ದರೆ, ವಿಚಾರಣೆಯಲ್ಲಿ ಹೊರ ಬೀಳುವ ಆರೋಪ ಪ್ರತಿ ಆರೋಪ ಮಾಡಲು ದಿವಸಗಳಿಂದ ಹಿಂಸ್ಸೆಯಲ್ಲಿ ಮನಸ್ತಾಪವು ಬೆಳೆಯಬಹುದಾಗಿತ್ತು. ಸತ್ಯಾಗ್ರಹಿಯವರಿಗೆ ಮಾರಲ್ಪಟ್ಟ ಭೂಮಿಗಳ ಸಂಬಂಧವಾಗಿ ಯಾವ ಚಿಂತೆ ಮಾಡತಕ್ಕದ್ದಲ್ಲ. ಪ್ರತಿಯೊಬ್ಬನಿಗೂ ಅವನವರ ಭೂಮಿಗಳು ಸಿಕ್ಕೇ ಸಿಗುವವು. ಎಂಥ ಕೈದಿಗಳಾದರೂ ಬೇಗನೆ ಬಿಡುಗಡೆ ಮಾಡಲ್ಪಡುವರಾಗಿ ನನಗೆ ವಿಶ್ವಾಸವಿದೆ.

[illegible] ಪ್ರತಿಯ ಸಂಬಂಧವಾಗಿ ಸರಕಾರದೊಡನೆ ಸಂಪೂರ್ಣವಾಗಿ ವಿಚಾರ ಮಾಡಿದ್ದಾರೆ. ಒಪ್ಪಂದದ ಕರಾರುಗಳು ಇನ್ನೂ ಪ್ರಕಟಿಸಲ್ಪಟ್ಟಿಲ್ಲ, ಎಲ್ಲ ಕೈದಿಗಳೂ ಬಿಡುಗಡೆ ಹೊಂದುವರೆಂಬುದರಲ್ಲಿ ಸಂದೇಹವಿಲ್ಲ.

ಭೂ ಕಂ ಪ ದಿಂ ದ

೩೪ ಜನರು ಮರಣಹೊಂದಿದರು

ಜುಗೋಸ್ಲಾವಿಯಾ ಪ್ರಾಂತದಲ್ಲಿ ಕಳೆದ ೨ ದಿನಗಳಿಂದ ಭಯಂಕರ ಭೂಕಂಪವಾಗಿ ೩೪ ಜನರು ಮರಣಹೊಂದಿದ್ದು, ೭೦ ಜನರಿಗೆ ಗಾಯಗಳಾಗಿವೆ.

ಉದ್ಯೋಗೀ ಹುಡುಗರು ಬೇಕಾಗಿದ್ದಾರೆ.

ಛಾಪಖಾನೆಯ ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ. ಹೊಸಬರಿಗೆ ಕಂಪೋಜಿಂಗ, ಪ್ರಿಂಟಿಂಗ ವಗೈರೆ ಕೆಲಸ ಕಲಿಸಿ, ಪಗಾರ ಪ್ರಾರಂಭಿಸುವದರಲ್ಲಿ ಬರುವದು. ಅವಶ್ಯಕರು ಸಮಕ್ಷಮ ಭೆಟ್ಟಿಯಾಗಬೇಕು.

ವ್ಯವಸ್ಥಾಪಕ,

'ಕನ್ನಡಿಗ'ನ ಕಾರ್ಯಾಲಯ

ಶುದ್ಧ ಖಾದಿ ! ಶಿವ ಖಾದಿ !!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ
ಸಾಯಂಕಾಲ ಶ್ರೀ ಕಟ್ಟೀ ವಕೀಲರ ಅಧ್ಯಕ್ಷತೆಯಲ್ಲಿ, ಶ್ರೀ ಎಸ್. ಪಾಲಪ್ಪನವರು ಸೆರೆಮನೆಯ ಅನುಭವವನ್ನೂ ಕಾಂಗ್ರೆಸ್ ಕಾರ್ಯಕ್ರಮವನ್ನೂ ವಿವರಿಸಿದರು. ಶ್ರೀ ಕೃಷ್ಣರಾಯರು ದಂಡೀಯಾತ್ರೆಯ ಮಹತ್ವ, ಅಹಿಂಸಾ ತತ್ವದ ಪ್ರಾಮುಖ್ಯತೆ, ಸ್ವಾತಂತ್ರ್ಯದ ಅಭಾವ ಈ ವಿಷಯದಲ್ಲಿ ಉಜ್ವಲ ಭಾಷಣ ಮಾಡಿದರು.

ಯಮನೂರ ಜಾತ್ರೆಯಲ್ಲಿ
ಪರದೇಶಿ ಸರಕಿಗೆ ಪೀಕಲಾಟ

ಯಮನೂರ ಜಾತ್ರೆಯ ಸಮಯದಲ್ಲಿ ಧಾರವಾಡ ಜಿಲ್ಲೆಯ ೫೦ ಜನ ಸ್ವಯಂಸೇವಕರು ಅಲ್ಲಿಯ ಪರದೇಶಿ ಸರಕುಗಳ ಅಂಗಡಿಗಳ ಮುಂದೆ ಪಿಕೆಟಿಂಗವನ್ನು ನಡೆಸಿದ್ದರಿಂದ, ಪರದೇಶಿ ಸರಕುಗಳು ಒಂದೂ ಮಾರಾಟವಾಗದೆ ಹಾಗೆಯೇ ಉಳಿದವು.

ಸಿದ್ದಾಪುರದಲ್ಲಿ
ಪಟ್ಟಿಯ ಹಾವಳಿ

ಕಾರವಾರ ಜಿಲ್ಲೆಯ ಸಿದ್ದಾಪುರ ತಾಲೂಕಿನ ರೈತರು ಅರಣ್ಯ ವಸೂಲ ಭೂಕಂದಾಯವನ್ನು ಕೊಡದ್ದರಿಂದ ಅಧಿಕಾರಿಗಳು ಅಲ್ಲಿ ಪಟ್ಟಿಯ ಹಾವಳಿಯನ್ನು ಜೋರಿನಿಂದ ಪ್ರಾರಂಭಿಸಿದ್ದಾರೆ.

ಹಿಂದುಸ್ಥಾನದ ಎಂಟು ಸರ್ಕಾರಗಳ ಆರ್ಚಬಿಷಪರು ಕ್ರಿಸ್ತಮತಸ್ಥರಾದ್ದರಿಂದ ಅವರ ಸ್ಥಾನದಲ್ಲಿ ಹಿಂದುಸ್ಥಾನದವರು ಅಂದರೆ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಒಂದೇ ವರ್ಷದ ಹಪ್ತೆ
ವಸೂಲ ಮಾಡಬೇಕು.

ಬೆಳೆಯ ಕೊರತೆ, ಧಾರಣೆಯ ಇಳಿತ, ಹಣದ ತುಟಾಗ್ರತೆ ಇವುಗಳನ್ನು ಲಕ್ಷ್ಯದಲ್ಲಿ ತಂದು, ಮುಂಬಯಿ ಸರಕಾರದವರು ರೈತರಿಂದ ಒಂದೇ ವರ್ಷದ ಹಪ್ತೆ ವಸೂಲ ಮಾಡಬೇಕೆಂದು ಮುಲಕೀ ಖಾತೆಯವರಿಗೆ ಅಪ್ಪಣೆ ಕೊಟ್ಟಿದ್ದಾರೆ. ಕಳೆದ ವರ್ಷದಲ್ಲಿ ತೆಗೆದುಕೊಳ್ಳದೆ ಬಿಟ್ಟಿದ್ದನ್ನಾಗಲಿ ಇಲ್ಲವೆ ನಡೆಯುವ ವರ್ಷದ ವಸೂಲಿಯನ್ನಾಗಲಿ ಯಾವದಾದರೂ ಒಂದನ್ನು ಮಾತ್ರ ವಸೂಲ ಮಾಡಬೇಕೆಂದು ಆ ಅಪ್ಪಣೆಯಲ್ಲಿ ಕಾಣಿಸಲ್ಪಟ್ಟಿದೆ.

ಉದ್ಯೋಗೀ ಹುಡುಗರು
ಬೇಕಾಗಿದ್ದಾರೆ.

ಛಾಪಖಾನೆಯ ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ. ಹೊಸಬರಿಗೆ ಕಂಪೋಜಿಂಗ, ಪ್ರಿಂಟಿಂಗ ವಗೈರೆ ಕೆಲಸ ಕಲಿಸಿ, ಪಗಾರ ಪ್ರಾರಂಭಿಸುವದರಲ್ಲಿ ಬರುವದು. ಅಪೇಕ್ಷಕರು ಸಮಕ್ಷಮ ಭೆಟ್ಟಿಯಾಗಬೇಕು.

ವ್ಯವಸ್ಥಾಪಕ,
'ಕನ್ನಡಿಗ'ನ ಕಾರ್ಯಾಲಯ.

ಶುದ್ಧ ಖಾದಿ ! ಶುದ್ಧ ಖಾದಿ !!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಸ್ಯಾಂಪಲ್) ಮತಿ ಚೀಟಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಪಾಂಬಳ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೦—೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ರೇಲ್ವೆ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟಾಂಪ ಮಸಿ ಸ್ಟಾಂಪಿಂಗಿನ ೧ ಔನ್ಸ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಪುರಂದರೆಯವರ
ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗೆಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಹೊಸಬಾಜಾರ ವಿಜಾಪುರ

ವಿಜಾಪುರದಿಂದ
ಪಂಢರಪೂರ
ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಚಡಚಣ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕೆಳಗಿನ ವಿಳಾಸದವರ ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು.

ಮ್ಯಾನೇಜರ.
ಅಟಲ ಮಹಾಲಕ್ಷ್ಮಿ ಮೋಟಾರ ಸರ್ವಿಸ
ವಿಜಾಪುರ.

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಪಬ್ಲಿಕ ಬೋರ್ಡ" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ಈ ಪತ್ರಿಕೆಯು ವೆಂಕಟೇಶ ಭೀಮಾಚಾರ್ಯ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಿ, ಇವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

KANNADIGA

DAILY

YEAR. 2. Nos. 1 - 26.

FROM 20-3-1931

TO 16-4-1931.

ಕನ್ನಡಿಗ

ನಿತ್ಯ ಸಂಚಿಕೆ

ವರ್ಷ. 2. ಸಂಚಿಕೆ 1-26

20-3-1931 ರಿಂದ

16-4-1931 ಗೆ.

ರ ನಂ. ಬಿ. ೨೭೮೮ ನಿತ್ಯ ಸಂಚಿಕೆ ಬೆಲೆ ೦-೦-೩.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಸಂಸ್ಥಾನದವರಿಗೆ
೧೨ ತಿಂಗಳಿಗೆ ೧೨—೦—೦
೬ ,, ೬—೦—೦
೩ ,, ೩—೦—೦
೧ ,, ೧—೦—೦
ಸ್ಥಳಿಕರಿಗೆ
೧೨ ತಿಂಗಳಿಗೆ ೬—೦—೦
೬ ,, ೩—೦—೦
೩ ,, ೧—೮—೦
೧ ,, ೦—೮—೦

...ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥—ಮನು.

ಕನ್ನಡಿಗ

KANNADIGA BAGALKOT — BI-WEEKLY ಅರ್ಧವಾರ ಪತ್ರಿಕೆ

ನಿತ್ಯಪತ್ರಿಕೆಯ
ಜಾಹೀರಾತಿನ ದರಗಳು
೧ನೇಸಲ ೧ ಇಂಚಿಗೆ ೧-೮-೦
೨ ,, ,, ೧-೦-೦
ಮುಂದೆ ಪ್ರತಿಯೊಂದು ಸಲ ೦-೧೨-೦
ಹೆಡಿಂಗದಸಾಲಿಗೆ ಅಕ್ಷರಗಳ ಪ್ರಮಾಣದಿಂದ ದರಬೀಳುವದು.

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಶುಕ್ರವಾರ ಮಿತಿ ಚೈತ್ರ ಶುದ್ಧ ೧ ಶಕೆ ೧೮೫೩ ತಾ॥ ೨೦—೩—೩೧ [ಸಂಚಿಕೆ ೧

ಭಗತಸಿಂಗರನ್ನು ಗಲ್ಲಿಗೇರಿಸುವರೇ?

(ತಂತಿಯ ವಾರ್ತೆ ತಾ॥ ೧೯)

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಫಾಸಿ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗರ ದಯೆಯ ಅರ್ಜಿಯು ತಿರಸ್ಕರಿಸಲ್ಪಟ್ಟಿದೆ ಎಂಬದಾಗಿ "ಫ್ರೀಪ್ರೆಸ್" ಪತ್ರಿಕೆಯಲ್ಲಿ ಪ್ರಕಟವಾಗಿದೆ ತಾ॥ ೨೪ನೆಯ ದಿವಸ ಅಷ್ಟರ ಕೊನೆಯ ಭೆಟ್ಟಿ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಬಂಗಾಲದ "ಡೆಟಿನ್ಯು" ಕೈದಿಗಳಿಗೆ ಬಿಡುಗಡೆಯಿಲ್ಲ

(ತಂತಿಯ ವಾರ್ತೆ ತಾ॥ ೧೯)

ವಿಚಾರಣೆ ಇಲ್ಲದೆ ಸೆರೆಮನೆಗೆ ಲ್ಲಿ ಕೊಳೆಯುತ್ತಬಿದ್ದಿರುವ "ಡೆಟಿನ್ಯು" ಕೈದಿಗಳನ್ನು ಒಪ್ಪಂದದ ಕರಾರಿಗನುಸರಿಸಿ ಬಿಡುಗಡೆ ಮಾಡಲು ಬರುವಂತಿಲ್ಲವೆಂದು ಸರ್ ಜೇಮ್ಸ್ ಕ್ರಿರಾರರು ಅಸೆಂಬ್ಲಿಯಲ್ಲಿ ಸ್ಪಷ್ಟವಾಗಿ ಹೇಳಿದರು.

ಮಹಾತ್ಮರೊಡನೆ ಸಂಸ್ಥಾನಿಕರು ಹಾಗು ಮುಸಲ್ಮಾನರ ಚರ್ಚೆ

(ತಂತಿಯ ವಾರ್ತೆ ತಾ॥ ೧೯)

ದಿಲ್ಲಿಯಲ್ಲಿ ಸೇರಿದ ಸಂಸ್ಥಾನಿಕರು ಮತ್ತು ಮುಸಲ್ಮಾನ ಮುಖಂಡರು ಮಹಾತ್ಮಾ ಗಾಂಧಿಯವರೊಡನೆ ತಮಗೆ ಸಂಬಂಧಿಸಿದ ಪ್ರಶ್ನೆಗಳ ಸಂಬಂಧವಾಗಿ ವಿಚಾರವಿನಿಮಯ ಮಾಡಹತ್ತಿದ್ದಾರೆ.

ಪನ್ನೂಗಂಜದಲ್ಲಿ ಭಯಂಕರ ದಂಗೆ

ಅನೇಕ ಜನರಿಗೆ ಮರಣ

೬೦ ಜನರಿಗೆ ಕೈದು

ಸಂಯುಕ್ತ ಪ್ರಾಂತದ ಮೀರಜಾಪುರ ಜಿಲ್ಹೆಯ ಪನ್ನೂಗಂಜ ಪೋಲೀಸ ಚೌಕಿಯ ಒಳಗಲ್ಲಿ ಹಿಂದೂ—ಮುಸಲ್ಮಾನರಲ್ಲಿ ದಂಗೆಯಾಗಿ, ಎಷ್ಟೋ ಜನ ಮುಸಲ್ಮಾನರು ಕೊಲ್ಲಲ್ಪಟ್ಟಿದ್ದಾರೆ. ಈ ಸಂಬಂಧವಾಗಿ ೬೦ ಜನರಿಗೆ ಕೈದು ಆಗಿದ್ದು, ಈಗ ಎಲ್ಲೆಲ್ಲಿಯೂ ಶಾಂತತೆಯುಂಟಾಗಿದೆ.

ವೀರ ವಾಮನರಾಯರಿಗೆ ಇನ್ನೂ ಬಿಡುಗಡೆಯಾಗಿಲ್ಲ.

೧೨೪ ಎ. ಕಲಮಿನನ್ವಯ ಶಿಕ್ಷೆಗೆ ಗುರಿಯಾಗಿ ಸಿಯೋನಿ ಜೇಲಿನಲ್ಲಿ ತಮ್ಮ ಶಿಕ್ಷೆಯನ್ನನುಭವಿಸುತ್ತಿರುವ ವರಹಾಡ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ವೀರ ವಾಮನರಾವ ಜೋಶಿಯವರು ಇನ್ನೂ ಬಿಡುಗಡೆ ಮಾಡಲ್ಪಟ್ಟಿರುವದಿಲ್ಲವಾಗಿ ತಿಳಿದು ಬರುತ್ತದೆ.

ವರ್ಕಿಂಗ ಕಮೀಟಿಯ ಸಭೆ

ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭೆಯು ತಾ॥ ೨೪ನೆಯ ದಿವಸ ಮುಂಜಾನೆ ೧೦ ಗಂಟೆಗೆ ದಿಲ್ಲಿಯಲ್ಲಿ ಮಹಾತ್ಮಾಗಾಂಧಿಯವರ ಬಿಡಾರದಲ್ಲಿ ಸೇರತಕ್ಕದ್ದಿದೆ.

ಪಂಡಿತ ಮಾಲವೀಯರು ದಿಲ್ಲಿಗೆ ಹೋದರು

ಹಿಂದುಸ್ಥಾನದ ಭಾವೀ ರಾಜ್ಯಘಟನೆಯ ಸಂಬಂಧವಾಗಿ ಸಂಸ್ಥಾನಿಕರೊಡನೆ ವಿಚಾರ ವಿನಿಮಯ ಮಾಡುವದಕ್ಕಾಗಿ ಪಂಡಿತ ಮದನ ಮೋಹನ ಮಾಲವೀಯಾರವರು ತಾ॥ ೧೭ ನೆಯ ದಿವಸ ಬನಾರಸದಿಂದ ದಿಲ್ಲಿಗೆ ಹೊರಟು ಹೋದರು, ಮಹಾತ್ಮಾ ಗಾಂಧಿಯವರು ದಿಲ್ಲಿಗೆ ಬರುವ ವರೆಗೂ ಅವರು ಸಂಸ್ಥಾನಿಕರೊಡನೆ ವಿಚಾರ ಮಾಡುವರು. ಬಳಿಕ ಅವರು ಮಹಾತ್ಮರನ್ನು ಕೂಡಿಕೊಂಡು ಹಿಂದೂ—ಮುಸಲ್ಮಾನ ಪ್ರಶ್ನೆಯ ಸಂಬಂಧವಾಗಿ ಮುಸಲ್ಮಾನ ಮುಖಂಡರೊಡನೆ ಚರ್ಚೆ ಮಾಡುವರು

ಚೀರನೇರ ಆರೋಪಿಗಳಿಗೆ ಮಹಾತ್ಮರ ಆಶ್ವಾಸನೆ

ಚೀರನೇರದ ದಂಗೆಯ ನಿಮಿತ್ತವಾಗಿ ವಿಚಾರಣೆಗೆ ಗುರಿ ಮಾಡಲ್ಪಟ್ಟ ಆರೋಪಿಗಳ ಸಂಬಂಧವಾಗಿ ಶ್ರೀ ಎಚ್. ಎಂ ಜೋಶಿಯವರಿಗೆ ಮಹಾತ್ಮಾಗಾಂಧಿಯವರು ಕೆಳಗಿನ ಸಂದೇಶವನ್ನು ಕೊಟ್ಟು ಕಳಿಸಿದ್ದಾರೆ.

ವಿಚಾರಣೆಗೆ ಗುರಿಯಾದ ಚೀರನೇರ ಬಂಧುಗಳನ್ನು ನಾನು ಮರೆತಿರುವದಿಲ್ಲ. ಅವರ ಸಂಬಂಧವಾಗಿ ಶಕ್ಯವಿದ್ದಷ್ಟು ಪ್ರಯತ್ನ ಮಾಡುತ್ತೇನೆ. ಆದರೆ ಅವರು ಮನುಷ್ಯನ ಪ್ರಯತ್ನದ ಮೇಲೆ ಭಾರ ಹಾಕಿ ಕೂಡಕೊಳ್ಳುವದಕ್ಕಿಂತ ಪರಮಾತ್ಮನಮೇಲೆ ಭಾರ ಹಾಕಿ ಕುಳಿತುಕೊಳ್ಳಲಿ.

ಬೆಲಗ್ರೇಡದಲ್ಲಿ ಬಾಂಬುಗಳು ಹಾರಿದವು

ಗ್ರೇಟಬ್ರಿಟನಕ್ಕೆ ಸೇರಿದ ಬೆಲಗ್ರೇಡದಲ್ಲಿರುವ ಸೈನಿಕರ ವಿದ್ಯಾಪೀಠ, ಯುದ್ಧದ ಕಚೇರಿ, ಭಾಂಡಾರಾಧಿಕಾರಿಗಳ ಕಚೇರಿ, ಅಧಿಕಾರಿಗಳ ಮನೆ ಈ ನಾಲ್ಕು ಕಡೆಗಳಲ್ಲಿ ತಾ॥ ೧೬ ನೆಯ ದಿವಸ ಒಂದೇ ಕಾಲಕ್ಕೆ ಬಾಂಬುಗಳು ಹಾರಿದ್ದರಿಂದ ವಿಶೇಷವಾದ ಹಾನಿಯಾಗಿದೆ. ಎಷ್ಟೋ ಜನ ಅಧಿಕಾರಿಗಳು ಗಾಯ ಹೊಂದಿದ್ದಾರೆ.

ದುಂಡು ಮೇಜಿನ ಪರಿಷತ್ತು ಅಗಸ್ಟ ತಿಂಗಳದಲ್ಲಿ ಸೇರುವದು

ಇನ್ನು ಮುಂದೆ ಕೂಡತಕ್ಕದ್ದಾಗಿರುವ ದುಂಡ ಮೇಜಿನ ಪರಿಷತ್ತನ್ನು ಹಿಂದುಸ್ಥಾನದಲ್ಲಿ ನೆರೆಯಿಸತಕ್ಕದ್ದಲ್ಲವಾಗಿ ನಿರ್ಧರಿಸಲ್ಪಟ್ಟಿದೆ. ಸಾಂಘಿಕ ರಾಜ್ಯ ಘಟನೆಯ ಉಪಮಂಡಳದವರು ತಮ್ಮ ಕಾರ್ಯವನ್ನು ಪುನಃ ಯಾವಾಗ ಪ್ರಾರಂಭಿಸುವರೆಂಬ ಬಗ್ಗೆ ಎಲ್ಲ ಕಡೆಯಲ್ಲಿಯೂ ಕುತುಹಲವುಂಟಾಗಿದ್ದು, ಕರಾಚಿ ಕಾಂಗ್ರೆಸದ ತೀರ್ಮಾನವನ್ನು ನೋಡಿಯೇ ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸುವರೆಂದು ತಿಳಿದು ಬರುತ್ತದೆ. ಈ ಉಪಮಂಡಳಗಳವರು ತಮ್ಮ ಮಂಡಳದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳನ್ನೂ ಸಮಾವಿಷ್ಟ ಮಾಡಿಕೊಳ್ಳುವರೆಂದು ಕಾಣಿಸುತ್ತದೆ. ಆದರೆ ಕಾಂಗ್ರೆಸದ ಪ್ರತಿನಿಧಿಗಳೂ, ಹಿಂದೀ ವ್ಯಾಪಾರಿಗಳ ಸಂಘದವರ ಪ್ರತಿನಿಧಿಯೂ ಅದರಲ್ಲಿ ಸೇರಿಕೊಳ್ಳಬಹುದಾಗಿ ತೋರುತ್ತದೆ. ದುಂಡು ಮೇಜಿನ ಪರಿಷತ್ತು ಅಗಸ್ಟ ತಿಂಗಳದಲ್ಲಿ ಸೇರಿ, ನವ್ಹೆಂಬರ ತಿಂಗಳದೊಳಗಾಗಿ ತನ್ನ ಕಾರ್ಯವನ್ನು ಕೊನೆಗಾಣಿಸುವದೆಂದು ತರ್ಕ ಮಾಡಲ್ಪಟ್ಟಿದೆ.

ಗ್ರೇಟಬ್ರಿಟನದಲ್ಲಿ ೨೬ ಲಕ್ಷ ಜನರು ಕೂಲಿಗೇಡಿಗಳಾದರು

ಗ್ರೇಟಬ್ರಿಟನದಲ್ಲಿ ೨೬೯೨೦೦೦ ಜನರು ಕೂಲಿಗೇಡಿಗಳಾಗಿ ಗೋಳಾಡುತ್ತಿರುವರಾಗಿ ಅಲ್ಲಿಯ ಸರಕಾರಿ ಪತ್ರಕದಿಂದ ತಿಳಿದು ಬರುತ್ತದೆ.

ಕಾಮನ್ಸ ಸಭೆಯಲ್ಲಿ ಹಿಂದುಸ್ಥಾನದ ಬಗ್ಗೆ ಪ್ರಶ್ನೋತ್ತರ

ಕಾಮನ್ಸ ಸಭೆಯಲ್ಲಿ ಹಿಂದುಸ್ಥಾನದ ಸದ್ಯಸ್ಥಿತಿಯ ಸಂಬಂಧವಾಗಿ ಕೆಲವು ಪ್ರಶ್ನೆಗಳು ಕೇಳಲ್ಪಟ್ಟವು. ಅವಕ್ಕೆ ಉತ್ತರ ಕೊಡುವಾಗ ಭಾರತ ಮಂತ್ರಿಗಳಾದ ಮಿ. ಬೆನ್ನರು ೧೨ ನೆಯ ತಾರೀಖಿನ ದಿವಸ ಹೇಳಿದ್ದರಕಿಂತಲೂ ಹೆಚ್ಚಿಗೇನೂ ಹೇಳತಕ್ಕದ್ದಿಲ್ಲವಾಗಿ ಹೇಳಿದರು.

ಬ್ರಿಟಿಶ ಸರಕುಗಳ ಬಹಿಷ್ಕಾರದ ಕಾರ್ಯವು ಅಕ್ಷರಶಃ ಪಾಲಿಸಲ್ಪಡುವದೋ ಇಲ್ಲವೋ ಈ ವಿಷಯವಾಗಿ ಜಾಗರೂಕರಾಗಿರಬೇಕೆಂದು ಮಿ. ಹ್ಯಾಕಿಂಗರು ಕೇಳಿಕೊಂಡರು.

ಇದಕ್ಕೆ ಸಂಬಂಧಿಸಿದ ಅಂಕಿಗಳನ್ನು ತಿಳಿದುಕೊಳ್ಳಲು ತಮಗೆ ಸಾಕಷ್ಟು ವೇಳೆಯು ದೊರೆತಿಲ್ಲವಾಗಿ ಮಿ. ಬೆನ್ನರು ಉತ್ತರ ಕೊಟ್ಟರು.

ಸತ್ಯಾಗ್ರಹಿಗಳು ಹಾಗು ಕೆಲವು ರಾಜಕೀಯ ಮುಖಂಡರ ಮಧ್ಯೆ ದಿಲ್ಲಿಯಲ್ಲಿ ಸಂಧಾನವಾದ್ದರಿಂದ, ಆ ಸಂಧಾನದ ಕರಾರುಗಳಿಗನುಸರಿಸಿ ಈ ವರೆಗೆ ಒಟ್ಟಿಗೆ ೧೩೬೨೭ ಜನ ಗಂಡಸರೂ, ಹಾಗು ೪೨೮ ಜನ ಹೆಂಗಸರೂ ಸೆರೆಮನೆಗಳಿಂದ ಬಿಡುಗಡೆ ಮಾಡಲ್ಪಟ್ಟಿದ್ದಾರೆಂದು ಮಿ. ಬೆನ್ನರು ಹೇಳಿದರು.

ದುಂಡೀಗಾಲಿಯ ಪರಿಷತ್ತಿನ ಅಧಿವೇಶನವನ್ನು ಹಿಂದುಸ್ಥಾನದಲ್ಲಿ ಒಮ್ಮೆಯಾದರೂ ಕೂಡಿಸಬೇಕೆಂದು ಮಿ ಫ್ರೀಮನ್ನರು ಒತ್ತಾಯ ಪಡಿಸಿದರು.

ಈ ವಿಷಯವಾಗಿ ಯೋಗ್ಯ ಕಾಳಜಿ ತೆಗೆದುಕೊಳ್ಳಲಾಗುವದೆಂತಾಗಿ ಮಿ. ಬೆನ್ನರು ಉತ್ತರ ಕೊಟ್ಟರು.

ಮುಂಬಯಿಯ ಕಾಂಗ್ರೆಸ್ ಬುಲೆಟಿನ್ ಪತ್ರಿಕೆಯನ್ನು ಈಗಾದರೂ ಆಕ್ಷೇಪಾರ್ಹವೆಂದು ನಿರ್ಣಯಿಸುವದರಲ್ಲಿ ಬಂದಿದೆಯೇ? ಎಂದು ಮಿ. ಅಲ್‌ಫ್ರೆಡ್‌ನೊಕ್ಸರು ಪ್ರಶ್ನೆ ಕೇಳಿದರು.

ಕಾಯಿದೆಭಂಗದ ವಿರುದ್ಧವಾಗಿ ಹೊರಟ ಹಾಮತ್ತು ಆರ್ಡಿನನ್ಸಗಳನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಮಿ. ಬೆನ್ನರು ಉತ್ತರ ಕೊಟ್ಟರು.

ಸಬ್ ಇನಸ್ಪೆಕ್ಟರರಿಗೆ ಗುಂಡಿನೇಟು

ಚಿತಗಾಂಗ ಪ್ರಾಂತದ ಸಿ. ಆಯ್. ಡಿ. ಖಾತೆಯ ಸಬ್ ಇನಸ್ಪೆಕ್ಟರರಾದ ಶ್ರೀ ಶಶಾಂಕ ಭಟ್ಟಾಚಾರ್ಜಿಯವರು. ಚಿತಗಾಂಗದಿಂದ ೨೦ ಮೈಲ ದೂರದಲ್ಲಿರುವ ಬರಾಮಾ ಎಂಬ ಹಳ್ಳಿಯಲ್ಲಿ ಗುಂಡಿನಿಂದ ಹೊಡೆಯಲ್ಪಟ್ಟರು ಅವರ ಸ್ಥಿತಿಯು ಚಿಂತಾಜನಕವಾಗಿದ್ದು ಅವರು ಈಗ ಚಿತಗಾಂಗ ಆಸ್ಪತ್ರೆಯಲ್ಲಿ ಔಷಧೋಪಚಾರ ಹೊಂದುತ್ತಿದ್ದಾರೆ.

ವಿಜಾಪುರದಲ್ಲಿ ಭಯಂಕರ ಕೊಲೆ

ವಿಜಾಪುರದಲ್ಲಿ ತುರುಂಗದ ದಾರಿಯಲ್ಲಿರುವ ಮ್ಯುನಿಸಿಪಾಲಿಟಿಯ ಆಕಾಶಕಟ್ಟೆಯ ಕಾವಲುಗಾರನಾಗಿದ್ದ ಘಾಟಿಕನ ಹೊಟ್ಟೆಯಲ್ಲಿ ಚೂರಿ ಇರಿದು ಕೊಂದಿದ್ದಾರೆ. ಮತ್ತು ಇವನ ಕೂಡ ಕಾವಲುಗಾರನಾಗಿದ್ದ ಹೊಲೆಯನಿಗೆ ಗಂಡಿನಿಂದ ಗಾಯ ಪಡಿಸಿದ್ದಾರೆ. ಪೋಲೀಸರು ಕೊಲೆಗಡುಕನ ಶೋಧ ನಡಿಸಿದ್ದಾರೆ.

ಕನ್ನಡಿಗ.

ಕನ್ನಡಿಗ ಚೈತ್ರ ಶುದ್ಧ ೧ ಶಕೆ ೧೮೫೩

ತನ್ನ ಮನಸಿನ ಮೋಹನವಾದ ಕಟ್ಟುವೆನಾನು
ನಿನ್ನ ಬೆಸನವ ಮಾಡಿದಂಥ ಮುಕ್ಕಳದೊಮ್ಮೆ
ಅನ್ನದಾತರು ಚನ್ನ ಮೋಹಬಟ್ಟೆಯನೊಂದು
ಚನ್ನಯ್ಯಾ...

ನಮ್ಮ ಮಾತು.

ಇಂದು ಹೊಸ ಸಂವತ್ಸರವು ಪ್ರಾರಂಭವಾಯಿತು. ಸಂವತ್ಸರದ ಸಂಧಿಕಾಲದಲ್ಲೆಲ್ಲ ಒಂದು ಹೊಸ ಚೈತನ್ಯವೇ ತಲೆದೋರುವದು, ಈ ಚೈತನ್ಯವು ಜನತೆಯ ಹೃದಯದಲ್ಲಿ ತಳವೂರಿ ಉಲ್ಲಾಸಗೊಳಿಸುತ್ತದೆ. ಪ್ರತಿಯೊಬ್ಬ ಭಾರತೀಯನ ಕರ್ತವ್ಯವೇ ಇದಾಗಿದೆ. ಭಾರತೀಯರು ಸತ್ಯಾಗ್ರಹ ಸಮರದಲ್ಲಿ ತೋರಿಸಿದ ಸಾಹಸವಿದಕ್ಕೆ ಕನ್ನಡಿಗರೂ ಮಹತ್ವಾಂಗವಾಗಿರುವರು. ಕನ್ನಡನಾಡಿನ ಸೇವೆಗಾಗಿ ಕಂಕಣಬದ್ಧನಾದ 'ಕನ್ನಡಿಗನು' ತನ್ನ ಶಕ್ತಿ ಮೀರಿ ಸಾಹಸವಮಾಡಿ, ಕನ್ನಡಿಗರ ಹಾಗೂ ಭಾರತೀಯರ ಸೇವೆಯನ್ನು ಮಾಡಿದ ಮಾತು ನಮಗೆ ಗೊತ್ತಿಲ್ಲೆಂತಲ್ಲ. ಹಿಂದಿನಲ್ಲಿ ಬಂದ ಎಡರುಗಳನ್ನು ಎಣಿಸದೆ ಎದೆಗೊಟ್ಟು ತನ್ನ ಮನಸ್ವಿನಿಂದ ತಮ್ಮೆಲ್ಲರ ಸೇವೆಯನ್ನು ಮಾಡಿದನು. ಮುಂದಾದರೂ ತಮ್ಮೆಲ್ಲರ ಅಭಯವನ್ನು ಅಪೇಕ್ಷಿಸಿ ತನ್ನ ಕಾರ್ಯವನ್ನು ಆರಂಭಿಸುವನು. ಇವತ್ತಿನಿಂದ ಕನ್ನಡಿಗನು ದೊಡ್ಡರೂಪದಿಂದ ಹೊರಡುವನು. ಕನ್ನಡಿಗನು ಮುಂದೆ ಫ್ರೀಪ್ರೆಸ್, ಅಸೋಸಿಯೇಟೆಡ್ ಪ್ರೆಸ್, ಮೊದಲಾದವರ ಸುದ್ದಿಗಳ ಸುರಿಮಳೆ ಮಾಡುವನು. ಈ ಕೆಲಸದಲ್ಲಿ ಅವನು ಹೊಸ ಭಾರವನ್ನು ಹೊರಬೇಕಾಗಿದ ತಮ್ಮೆಲ್ಲರ ಉದಾರಾಶ್ರಯದ ಧೈರ್ಯದಿಂದ ಭಾರವನ್ನು ಹೊತ್ತಿರುವನು. ಕನ್ನಡಿಗನು ಮೊನ್ನಿನ ಸತ್ಯಾಗ್ರಹದ ಕಾಲಗಳಲ್ಲಿ ಹಾಗೂ ಒಂದು ಹೊಸ ಶಕ್ತಿಯನ್ನು ತನ್ನಲ್ಲಿ ತಂದುಕೊಂಡನೆಂಬುದನ್ನು ದಿನಾಲು ಆತನು ನಾಲ್ಕು ಸಾವಿರ ಜನರ ಕೈಯಲ್ಲಿ ಕಾಣದಾಡುತ್ತಿದ್ದುದನ್ನು ನೋಡಿದ್ದರೆ ತಿಳಿಯಬಹುದು.

ಇದೇ ಶಕ್ತಿಯನ್ನು ಸುಸಂಘಟಿತವಾಗಿ ಉಪಯೋಗಿಸಿ ಈಗಲಾದರೂ ಈ ಹೊಸ ಸಾಹಸವನ್ನು ಕೈಕೊಂಡಿರುವನು. ಮೊದಲಿನಂತೆ ನಾಲ್ಕು ಸಾವಿರ ಓದುಗರು ಅವನಿಗೆ ದೊರೆತರೆ ಅವನು ತನ್ನ ಸಾಹಸವನ್ನು ಸ್ಥಿರಪಡಿಸುವನು. ಆಂಗ್ಲ ವೃತ್ತಪತ್ರಿಕೆಗಳಲ್ಲಿ ಬರುವ ಸುದ್ದಿಗಳು ಎಲ್ಲಕ್ಕೂ ಮೊದಲು ಕನ್ನಡಿಗನಲ್ಲಿ ಮೂಡಿ ಬಿಡುವವು. ತಮ್ಮೆಲ್ಲರ ಕೈಸೇರುವವು. ಹೆಚ್ಚು ವೆಚ್ಚವನ್ನು ಹೊತ್ತರೂ ಬೆಲೆ ಮಾತ್ರ ಮೊದಲಿನಷ್ಟೇ ಇರುವದು, ರಾಷ್ಟ್ರೀಯ ಸಭೆಯ ಸುದ್ದಿಗಳನ್ನು ಸವಿಸ್ತಾರವಾಗಿ ಸಮಿಟ್ಟಾಗಿ ಎಲ್ಲರಿಗಿಂತಲೂ ಮೊದಲೇ ತಿಳಿಸಿಕೊಡುವ ಈ ಹೊಸ ಉಪಕ್ರಮವನ್ನು ಅವನು ಸುರುಮಾಡಿರುವನು. ಪೇಟೆಯ ಧಾರಣಿಗಳನ್ನು ಅವನು ಎಲ್ಲರಿಗಿಂತಲೂ ಮೊದಲೇ ತಿಳಿಸಿ ವ್ಯಾಪಾರಿಗರಿಗೂ ಉಪಯೋಗಿ ಬೀಳುವನು. ಇವರ ಲಾಭವನ್ನು ಪಡೆಯುವದು ನಮ್ಮೆಲ್ಲರ ಹಳೆಯವೇಲೆ ಓದುಗರ ಸಂಖ್ಯೆಯು ಕಾಯಮವಾಯಿತೆಂದರೆ ಕನ್ನಡಿಗನು ತನ್ನ ಕೈಗಳನ್ನು ಲಂಡನಿನಲ್ಲಿ ಕೊಡಲಿಕ್ಕೆ ಬೇಕಾದ ಮಾಡು ವೇಜನ ಪಾಶ್ಚಿಮ ವರೆಗೂ ಚಾಚುವನು. ಅದರಲ್ಲಿ ನಡೆದ ಸಂಗತಿಗಳನ್ನು ತಂತಿ ಮುಖಾಂತರ ತರಿಸಿ ತಮ್ಮೆಲ್ಲರಿಗೆ ಕಿವಿಯಲ್ಲಿ ಹೇಳುವನು. ಈ ಮಗನ ಸಾಹಸವನ್ನು ಸಫಲಗೊಳಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದು ಭಾವಿಸಿದರೆ ಈ ಮಗನು ಧನ್ಯನಾಗುವನು. ತನ್ನ ಶ್ರಮವು ಸಫಲವಾದ ಬಗ್ಗೆ ನಿಮ್ಮೆಲ್ಲರಿಗೆ ಈ ಮಿದುಡಿಯನ್ನು ಕೊಟ್ಟು ಹಂಪಾತ್ಮನನ್ನು ಕೋಡೆಂದ ಎದುರು ಕಡೆಗೆ ಕರ್ನಾಟಕ ಸಾರ್ವಭೌಮರ ಸಮೃದ್ಧಿ ಹೊಂದುವ ದಿನ ಎಂಬ ನೀತಿಯು ವಾಡಿಕೆಯನ್ನು ಹಿಡಿದಿಟ್ಟುಕೊಂಡು ತನ್ನ ಕೆಲಸಕ್ಕೆ ಹತ್ತುವನು. ಓದುಗರೇ ಕನ್ನಡಿಗನ ಮೇಲೆ ತಮ್ಮ ಕರುಣೆ ಇರಲಿ.

ಮಳೆನಿಂತರೂ ಹನಿ ನಿಲ್ಲುವದಿಲ್ಲ

ವಿಜಾಪುರ ಜಿಲ್ಲಾ ಪೋಲೀಸ ಅಧಿಕಾರಿಗಳ ಹಾಗು ಮ್ಯಾಜಿಸ್ಟ್ರೇಟರು ಇಂದು ಸ್ಥಳೀಯ ಸೇವಾದಲದ ಸಂಸ್ಥಾಪಕರಾದ ಡಾ. ಹರ್ಡೀಕರರಿಗೆ ತಾರು ಮಾಡಿ, ಇಲ್ಲಿಯ ಸೇವಾದಲ ವ್ಯಾಯಾಮ ಶಾಲೆಯ ಕಟ್ಟಡವನ್ನು ಎಷ್ಟು ತೆಗೆದುಕೊಳ್ಳುವಿರಿ ತಿಳಿಸಿದ್ದರಿಂದ ಡಾ. ಹರ್ಡೀಕರರು ಸೇವಾದಲದ ಕಾರ್ಯದರ್ಶಿಯಾಗಿದ್ದ ಇಲ್ಲಿಯ ಶ್ರೀ ಜೋಶೀಸಿಂಹ ರಾಮರಾಯರಿಗೆ ಅದರಂತೆ ತಾರು ಮಾಡಿ ಸೇವಾದಲವನ್ನು ಒಪ್ಪಿಸಿಕೊಳ್ಳಲು ಹೇಳಿದ್ದರು. ಶ್ರೀ ಜೋಶಿಯವರು ಪೋಲೀಸ ಅಧಿಕಾರಿಗಳಿಗೆ ಭೆಟ್ಟಿಯಾಗಿ ಸೇವಾದಲದ ಕಟ್ಟಡವನ್ನು ತಮ್ಮ ವಶಕ್ಕೆ ಕೊಡಲು ಕೇಳಿಕೊಂಡರು, ಅಧಿಕಾರಪತ್ರವನ್ನು ತಗೆದುಕೊಂಡು ಬಂದಲ್ಲಿ ಕಟ್ಟಡವನ್ನು ನಿಮ್ಮ ವಶಕ್ಕೆ ಕೊಡಲಾಗುವದೆಂದು ಹೇಳಿ ಪೋಲೀಸ ಅಧಿಕಾರಿಗಳು ಅವರನ್ನು ಹಿಂದಕ್ಕೆ ತಿರುಗಿ ಕಳಿಸಿದರು. ಶ್ರೀ ಜೋಶಿಯವರು ತಿರುಗಿ ಬಂದು ಡಾ. ಹರ್ಡೀಕರರಿಗೆ ಅದರಂತೆ ತಾರು ಮಾಡಿದರು. ಪೋಲೀಸ ಅಧಿಕಾರಿಗಳ ಈ ಕೃತಿಯನ್ನು ಕಂಡ ಡಾಕ್ಟರರು ಶ್ರೀ ಜಂಡಿಮಠ ರಾಮರಾಯರಿಗೆ ಅಧಿಕಾರ ಪತ್ರವನ್ನು ಕೊಟ್ಟು ಅವರನ್ನು ಇಲ್ಲಿಗೆ ಕಳಿಸಿದರು. ಈ ಸಂಬಂಧವಾಗಿ ಡಾ. ಹರ್ಡೀಕರರು ಪೋಲೀಸ ಸಬ್ ಇನಸ್ಪೆಕ್ಟರರಿಗೆ ಒಂದು ಪತ್ರವನ್ನು ಬರೆದಿದ್ದು ಅದನ್ನು ಇಲ್ಲಿ ಕೆಳಗೆ ಉಲ್ಲೇಖಿಸಲಾಗಿದೆ.

ಸೇವಾದಲದ ಕಟ್ಟಡವನ್ನು ತಿರುಗಿ ಒಪ್ಪಿಸಲು ವಿಳಂಬ ಮಾಡುತ್ತಿರುವದು ಆಶ್ಚರ್ಯದ್ದಾಗಿದೆ. ಸೇವಾದಲ ಕಟ್ಟಡದ ಪ್ರವೇಶವು ಮಾರ್ಚ ತಾ|| ೨೦ ನೆಯ ದಿವಸ ಜರುಗತಕ್ಕದ್ದಾಗಿ ಗೊತ್ತುಮಾಡಲ್ಪಟ್ಟಿದೆ. ಈಗಾದರೂ ಕಟ್ಟಡವನ್ನು ನೀವು ನಮ್ಮ ವಶಕ್ಕೆ ತಿರುಗಿ ಕೊಡಲು ವಿಲಂಬಮಾಡಿದಲ್ಲಿ, ಪೋಲೀಸ ಅಧಿಕಾರಿಗಳ ವಿಷಯಕ್ಕೆ ಜನರಲ್ಲಿ ತಿರಸ್ಕಾರ ಬದ್ಧಿಯು ಹುಟ್ಟದೆ ಇರಲಾರದು. ಆದ್ದರಿಂದ ಈ ಸಂಬಂಧವಾಗಿ ಪುನರ್ವಿಚಾರ ಮಾಡಿ, ಕಟ್ಟಡವನ್ನು ಬೇಗನೆ ಒಪ್ಪಿಸಿರಿ ನೀವು ಅದನ್ನು ಸೇವಾದಲದವರಿಗೆ ಒಪ್ಪಿಸಲಿ ಅಥವಾ ಬಿಡಲಿ, ತಾ|| ೨೦ ನೆಯ ದಿವಸ ಅದರಲ್ಲಿ ಪ್ರವೇಶಮಾಡಲು ಬಾಗಲಕೋಟೆಯ ನಾಗರಿಕರಿಗೆ ನಾನು ಆಜ್ಞೆ ಕೊಟ್ಟಿದ್ದೇನೆ. ಇತರ ಎಲ್ಲ ಜವಾಬದಾರಿಯೂ ನಿಮ್ಮ ಮೇಲೆಯೇ ಇದೆ.

ಮಳೆ ನಿಂತರೂ ಗಿಡದ ಹನಿಗಳು ನಿಲ್ಲುವದಿಲ್ಲ ಎಂಬ ಮಾತು ಇಲ್ಲಿಯ ಪೋಲೀಸ ಅಧಿಕಾರಿಗಳ ವರ್ತನದಿಂದ ಕಂಡು ಬರುತ್ತದೆ. ಸರಕಾರ ಹಾಗು ಮಹಾತ್ಮರ ನಡುವೆ ಒಪ್ಪಂದವಾಯಿತು, ದಬ್ಬಾಳಿಕೆಯು ಬಾಣಗಳನ್ನು ಮ್ಯಾನೆಯ ಸರಕಾರರು ತಿರುಗಿ ಬತ್ತಳಿಕೆಯಲ್ಲಿ ಸೇರಿಸಿದರು. ಮಹಾತ್ಮರಾದರೂ ಸತ್ಯಾಗ್ರಹದ ನಾರಾಯಣಾಸ್ತ್ರವನ್ನು ತಮ್ಮ ಮಂತ್ರಶಕ್ತಿಯಿಂದ ತಿರುಗಿ ತಗೆದುಕೊಂಡರು. ಸತ್ಯಾಗ್ರಹಿಗಳಿಂದ ತುಂಬಿದ ಸೆರೆಮನೆಗಳು ಹಾಳು ಸುರಿಯಹತ್ತಿದವು. ಗುಜರಾಥ ಪ್ರಾಂತದಲ್ಲಿಯ ಹಳ್ಳಿಗರು ಊರು ಬಿಟ್ಟು ಹೋದದ್ದರಿಂದ ಭಣಗುಟ್ಟುವದು ನಿಂತು ಅವರು ತಿರುಗಿ ಬಂದ ನಂತರ ಹೊಸ ಸೊಬಗಿನಿಂದ ಭೂಷಿತವಾದವು. ಅಂತೂ ರಾಷ್ಟ್ರದಲ್ಲಿ ಒಂದು ಬಗೆಯ ಶಾಂತತೆಯು ಕಂಡು ಬಂದಿತು. ಆದರೆ ಈ ಊರಲ್ಲಿಯ ಪೋಲೀಸ ಅಧಿಕಾರಿಗಳು ಮಾತ್ರ ಇತ್ತ ಕಡೆಗೆ ಕಣ್ಣೇ ತೆರೆಯಿಲ್ಲವಾಗಿ ಅವರು ಸೇವಾದಲದ ವಿಷಯದಲ್ಲಿ ತೋರಿಸಿದ ವಿಲಂಬದಿಂದ ಕಂಡು ಬರುವದು. ಆವನೇನಾಯಿತು. ಕೋರ್ಟಾಗದಿದ್ದರೆ ಬೇಗೇ ಆದೀತೆ? ರಾಷ್ಟ್ರದಲ್ಲಿಯೇ ಒಂದು ಬಗೆಯ ದೇಶ ಬಿಡ್ಡಿರುವಾಗ್ಯೂ ಕೋರ್ಟುಗಳ ಕೋಗನ್ನು ಯಾರು ಲಕ್ಷಿಸುವರು?

ಕ. ಪ್ರಾಂ. ಕಾ. ಕಮಿಟಿಯ ಗೊತ್ತುವಳಿಗಳು

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ವಿಶೇಷ ಸಾಧಾರಣ ಸಭೆಯು ತಾ|| ೧೮ ನೆಯ ದಿವಸ ಧಾರವಾಡದಲ್ಲಿ ಕ. ಪ್ರಾ. ಕಾ. ಕಮಿಟಿಯ ಕಾರ್ಯಾಲಯದಲ್ಲಿ ಶ್ರೀ ದಿವಾಕರರ ಅಧ್ಯಕ್ಷತೆಯ ಕೆಳಗೆ ಸೇರಿತು. ಶ್ರೀಯುತರಾದ ಗಂಗಾಧರರಾವ ದೇಶಪಾಂಡೆ, ಶ್ರೀನಿವಾಸರಾವ ಕೌಜಲಗಿ, ಹಣಮಂತರಾವ ಕೌಜಲಗಿ ಮೊದಲಾದ ಮಹನೀಯರೂ, ಮಂಗಳೂರ ಜಿಲ್ಹೆಯದನ್ನು ಹೊರತುಪಡಿಸಿ ಉಳಿದ ಜಿಲ್ಹೆಗಳ ಪ್ರತಿನಿಧಿಗಳೂ ಸಭೆಗೆ ಬಂದಿದ್ದರು. ಶ್ರೀ ದಿವಾಕರರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ, ಕರ್ನಾಟಕದಲ್ಲಿಯ ಸತ್ಯಾಗ್ರಹ ಸಮರದ ಇತಿಹಾಸವನ್ನು ಪುಸ್ತಕರೂಪದಿಂದ ಪ್ರಕಟಪಡಿಸುವದು ಅವಶ್ಯವಿರುವದರಿಂದ ಕೂಡಲೇ, ತಮ್ಮ ತಮ್ಮ ಸ್ಥಳದ ವೃತ್ತಾಂತವನ್ನು ಕೂಡಲೆ ಕಳಿಸಿಕೊಡಲು ಎಲ್ಲರಿಗೂ ಬಿನ್ನವಿಸಿಕೊಂಡರು.

ಮೊದಲು ಕರಾಚಿಯ ಮಹಾಸಭೆಯಲ್ಲಿ ಪಂಡಿತ ಮೋತೀಲಾಲ ನೆಹರೂ, ಶ್ರೀ ರಾಮಚಂದ್ರ ಬಾಂಡ್ರೆ (ಕಾರವಾರ ಜೇಲಿನಲ್ಲಿ ನಿಧನ ಹೊಂದಿದ ಸತ್ಯಾಗ್ರಹಿಗಳು) ಇವರ ನಿಧನದ ಬಗ್ಗೆ ದುಃಖಪ್ರದರ್ಶಕ ಗೊತ್ತುಗಳು ಸ್ವೀಕೃತವಾದ ಬಳಿಕ ಕೆಳಗಿನ ಗೊತ್ತು ಸಭೆಯ ಮುಂದೆ ಬಂದಿತು

"ಅಹಿಂಸಾ, ಸತ್ಯ, ಮತ್ತು ಸತ್ಯಾಗ್ರಹ ಇವು ಪೂರ್ಣ ಸ್ವರಾಜ್ಯವನ್ನು ಗಳಿಸುವ ಪವಿತ್ರ ಮತ್ತು ಶಾಂತ ಸಾಧನೆಗಳೆಂದು ತಿಳಿದು, ಆ ಸಾಧನೆಗಳಲ್ಲಿ ಈ ಸಭೆಯು ತನ್ನ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿ, ಗಾಂಧಿ—ಆಯರ್ವಿನರ ಒಪ್ಪಂದದ ಕರಾರುಗಳನ್ನು ಸ್ವೀಕರಿಸುತ್ತದೆ. ಮೇಲಿನ ಕರಾರುಗಳನ್ನು ತಪ್ಪದೆ ಜಾರಿಯಲ್ಲಿ ತರಬೇಕೆಂದು ಪ್ರಾಂತಿಕ ಕಮಿಟಿಯು ತನ್ನ ಕೈಕೆಳಗಿನ ಕಾಂಗ್ರೆಸ್ ಕಮಿಟಿಗಳಿಗೆ ಆಜ್ಞೆ ಕೊಡುತ್ತದೆ. ಅದರಂತೆ ಸರಕಾರದವರಾದರೂ ಆ ಕರಾರುಗಳನ್ನು ಕೃತಿಯಲ್ಲಿ ತಂದ, ಮುಂದಿನ ಚರ್ಚೆಗೆ ಅವಶ್ಯವಾದ ಶಾಂತತೆಯನ್ನೂ, ಪರಸ್ಪರ ಸ್ನೇಹಭಾವವನ್ನೂ ಬೆಳೆಯಿಸಬೇಕೆಂದ, ಈ ಸಭೆಯು ಒತ್ತಿ ಹೇಳುತ್ತದೆ."

'ಗಾಂಧಿ—ಆಯರ್ವಿನರ ಒಪ್ಪಂದದ ಕರಾರುಗಳು ಸಮಾಧಾನಕರವಾಗಿಲ್ಲ'ವೆಂಬುದಾಗಿ ಶ್ರೀ ಕೌಜಲಗಿ ಶ್ರೀನಿವಾಸರಾಯರು ಸೂಚನೆ ತಂದರು.

'ಗಾಂಧಿ—ಆಯರ್ವಿನರ ಕರಾರುಗಳು ಕರಿಯರಿಗೆ ಸಮಾಧಾನಕರವಿರದಿದ್ದರೂ ಸರ್ವಸೇನಾಪತಿಯ ಆಜ್ಞೆಯನ್ನು ಪಾಲಿಸುವದು ನಮ್ಮ ಕರ್ತವ್ಯವಿದ್ದುದರಿಂದ, ಒಪ್ಪಂದದ ಕರಾರುಗಳಂತೆ ಕಾಂಗ್ರೆಸ್ ಜನಂಗಳು ನಡೆದುಕೊಳ್ಳಬೇಕೆಂದು ಶ್ರೀ ಗಡ್ಡಿ ಗೋವಿಂದಾಚಾರ್ಯರು ಉಪಸೂಚನೆ ತಂದರು.

ಮತಗಳನ್ನು ತೆಗೆದುಕೊಳ್ಳಲಾಗಿ ಶ್ರೀ ಕೌಜಲಗಿಯವರ ಸೂಚನೆಯು ಬಿದ್ದು ಹೋಯಿತು. ಶ್ರೀ ಗಡ್ಡಿಯವರು ತಮ್ಮ ಸೂಚನೆಯನ್ನು ಹಿಂತೆಗೆದುಕೊಂಡರು. ಮೂಲಗೊತ್ತು ಸ್ವೀಕೃತವಾಯಿತು.

ಇಪ್ಪಾದ ಒಳಿತ ಸತ್ಯಾಗ್ರಹ ಸಮರದಲ್ಲಿ ಮದಿಗಾರರಿಂದ ಕಾದಾಡಿದ ಹಾಗೂ ಸಹಾಯ ಮಾಡಿದ ಸ್ತ್ರೀಯರು, ಹಿಂದುಸ್ಥಾನಿ ಸೇವಾದಲದವರು, ವೈಸೂರು ಸಂಸ್ಥಾನದ, ರಾಷ್ಟ್ರೀಯ ಮುಂದಾಳುಗಳು, ಸ್ವಯಂಸೇವಕರು ಹಾಗು ಪ್ರಜೆಗಳು ಇವರ ಬಗ್ಗೆ ಕೃತಜ್ಞತೆ, ಮಿದಸಿಯ ಶಾಸನಿಂದ ಚಳವಳಿಯನ್ನು ನಡಿಸಿದ ಅಂಕೋಲಾ ತಾಲೂಕದ ರೈತರ ಅಭಿನಂದನ, ಸತ್ಯಾಗ್ರಹ ಚಳವಳಿಗೆ ವಿಶೇಷವಾಗಿ ಸಹಾಯಮಾಡಿದ ಕರ್ನಾಟಕದ ವರ್ತಕರ ಅಭಿನಂದನ, ಕರ್ನಾಟಕದಲ್ಲಿ ಸಂಚರಿಸಲು ಮಹಾತ್ಮರಿಗೆ ಕೇಳಿಕೊಳ್ಳುವದು, ನಿಕೃಷ್ಟ ಸಾಂಪತ್ತಿಕ ಸ್ಥಿತಿಯಿಂದ ಪೀಡಿತರಾದ ಸಿರ್ಸಿ, ಸಿದ್ದಾಪೂರ, ಹಿರೇಕೆರೂರ ತಾಲೂಕುಗಳ ರೈತರ ಬಗ್ಗೆ ಸಹಾನುಭೂತಿ, ಕರ್ನಾಟಕ ಏಕೀಕರಣದ ಪ್ರಶ್ನವನ್ನು ರಾಷ್ಟ್ರೀಯ ಕಾಂಗ್ರೆಸದಲ್ಲಿ ಮಂಡಿಸುವದು, ಇವೇ ಮೊದಲಾದ ಗೊತ್ತುಗಳು ಸಭೆಯಲ್ಲಿ ನಿರ್ಮಾಣಿಸಲ್ಪಟ್ಟವು ಇವುಗಳಲ್ಲಿ ಕೆಳಗಿನ ಗೊತ್ತುಗಳು ಮಹತ್ವದವಿರುವದರಿಂದ ಅವುಗಳನ್ನು ಇಲ್ಲಿ ಕೆಳಗೆ ಉಲ್ಲೇಖಿಸಲಾಗಿದೆ.

... ಬಾರದುದರಿಂದಲೂ, ದಿನಸ ಧಾನ್ಯಗಳ ಬೆಲೆಯು ಇಳಿದಿರುವದರಿಂದಲೂ ಉಂಟಾದ ನಿಕೃಷ್ಟ ಸಾಂಪತ್ತಿಕ ಸ್ಥಿತಿಯಿಂದ ಪೀಡಿತರಾಗಿರುವ ಸಿರ್ಸಿ ಸಿದ್ದಾಪುರ ಮತ್ತು ಹಿರೇಕೆರೂರ ತಾಲೂಕುಗಳ ಒಕ್ಕಲಿಗರ ಕಷ್ಟಗಳಿಗೆ ಈ ಸಭೆಯು ಸಹಾನುಭೂತಿಯನ್ನು ತೋರಿಸುತ್ತದೆ. ಹಾಗು ಸದ್ಯದ ಗಾಂಧಿ—ಆಯರ್ವಿನರ ಒಪ್ಪಂದದಿಂದಾದ ಶಾಂತತೆಯ ಸಮಯದಲ್ಲಿ ಸರಕಾರದವರು ಈ ಬಡರೈತರ ಗೋಳನ್ನು ನಿವಾರಿಸುವಂತೆ ಪ್ರಯತ್ನಪಡುವದಲ್ಲದೆ, ಅವರಿಗೆ ತಕ್ಕ ರೈಮೀರಿ ಸಹಾಯ ಮಾಡಬೇಕೆಂದು ಈ ಸಭೆಯು ಆಶಿಸುತ್ತದೆ.

ಸಿರ್ಸಿ, ಸಿದ್ದಾಪುರ, ಹಿರೇಕೆರೂರ ತಾಲೂಕುಗಳಲ್ಲಿ ಆರ್ಥಿಕ ಪರಿಸ್ಥಿತಿಯ ಮೂಲಕ ಸರಕಾರದ ಕಂದಾಯವನ್ನು ಕೊಡಲು ಅಸಮರ್ಥರಾಗಿರುವ ರೈತರಿಗೆ ಸಹಾಯ ಸಲಹೆಗಳನ್ನೀಯಲು ಕೆಳಗಿನ ಕಮಿಟಿಯನ್ನು ನಿಯಮಿಸುತ್ತದೆ. ೧ ಶ್ರೀ ದಿವಾಕರ, ೨ ವ್ಹಿ. ಡ್ಹಿ. ಪಾಟೀಲ, ೩ ಡಾ. ಕಬ್ಬೂರ, ೪ ನಾರಾಯಣರಾವ ಜೋಶಿ, ೫ ಬಿ. ಎನ್. ದಾತಾರ ೬ ಎಚ್. ಆರ್. ರಾಜನ್ನೆನ್ನವರ ೭ ಹಳದಿಪುರ

ಈಗ ವರ್ತಮಾನ ಪತ್ರಿಕೆಗಳಲ್ಲಿ ರಾಜಕೀಯ ಘಟನೆಯ ಕ್ರಮಗಳನ್ನು ಚರ್ಚಿಸುವವರಿದ್ದುದರಿಂದ, ಹಾಗು ಹಂಚಿ ಹೋದ ಕರ್ನಾಟಕದ ಏಕೀಕರಣವನ್ನು ಸಾಧಿಸುವ ಸಮಯವು ಇದೀಗ ಒದಗಿರುವದರಿಂದ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕೆಳಗೆ ಕಾಣಿಸಿದ ಕೈಹಸ್ತರ ಉಪಸಮಿತಿ...

(ಮುಂದಿನ ಪುಟದ ಕಾಲಮು ನೋಡಿರಿ)

ಗಾಂಧಿ-ವ್ಹಾಯಿಸರಾಯರ ಭೆಟ್ಟಿ

(ತಂತಿಯ ವಾರ್ತೆ, ತಾ। ೨೦)

ಮಹಾತ್ಮಾ ಗಾಂಧಿಯವರು ನಿನ್ನಿನ ಮಧ್ಯಾಹ್ನದಲ್ಲಿ ವ್ಹಾಯಿಸರಾಯರನ್ನು ಕಂಡುಕೊಂಡು ಇನ್ನೂ ಬಿಡುಗಡೆ ಮಾಡಲ್ಪಡದ್ದ ರಾಜಕೀಯ ಕೈದಿಗಳ ಬಿಡುಗಡೆ ವಿಷಯವಾಗಿ ಅವರೊಡನೆ ದೀರ್ಘಕಾಲದ ಚರ್ಚೆ ಮಾಡಿದರು.

ನರಂಪ್ರ ಮಂಡಳದವರು ಸಾಂಘಿಕ ರಾಜ್ಯಪದ್ಧತಿಗೆ ಬೆಂಬಲ ಕೊಟ್ಟರು

(ತಂತಿಯ ವಾರ್ತೆ)

ದುಂಡುಮೇಜಿನ ಪರಿಷತ್ತಿನಲ್ಲಿ ತೀರ್ಮಾನಿಸಲ್ಪಟ್ಟ ಸಾಂಘಿಕ ರಾಜ್ಯಪದ್ಧತಿಯ ತತ್ವಗಳಿಗೆ ನರಂಪ್ರ ಮಂಡಳದವರು ತಮ್ಮ ಸಂಪೂರ್ಣ ಒಪ್ಪಿಗೆ ಕೊಟ್ಟಿದ್ದಾರೆ.

ವ್ಹಾಯಿಸರಾಯರು ಮುಖಂಡರನ್ನು ಕರೆಕಳಿಸಿದರು

(ತಂತಿಯ ವಾರ್ತೆ ತಾ॥ ೨೦)

ನಿನ್ನೆ ದಿವಸ ತಮ್ಮನ್ನು ಭೆಟ್ಟಿಯಾಗಬೇಕೆಂದು ವ್ಹಾಯಿಸರಾಯರು ಕಾಂಗ್ರೆಸ್ ಹಾಗು ಇತರ ಪಕ್ಷದ ಮುಖಂಡರಿಗೆ ಹೇಳಿ ಕಳಿಸಿರುವರೆಂದೂ, ಭಾವೀ ರಾಜ್ಯಕಾರಭಾರದ ಪ್ರಶ್ನೆಗಳ ಸಂಬಂಧವಾಗಿ ಅವರೊಡನೆ ವಿಚಾರ ವಿನಿಮಯ ಮಾಡುವದೇ ಅವರ ಉದ್ದೇಶವಾಗಿದೆಯೆಂದೂ ತಿಳಿದು ಬರುತ್ತದೆ.

ನವಜೀವನ ಮುದ್ರಣಾಲಯದ ಆಸ್ತಿಯನ್ನು ತಿರುಗಿ ಕೊಟ್ಟರು

(ತಂತಿಯ ವಾರ್ತೆ ತಾ॥ ೨೦)

ಪ್ರೆಸ್ ಆರ್ಡಿನನ್ಸದನ್ವಯ ಜಪ್ತ ಮಾಡಲ್ಪಟ್ಟ ನವಜೀವನ ಮುದ್ರಣಾಲಯದ ಆಸ್ತಿಯು ಗಾಂಧಿ—ಅರ್ವಿನರ ಕರಾರಿನನುಸಾರ ತಿರುಗಿ ಕೊಡಲ್ಪಟ್ಟಿವೆ.

ದುಂಡು ಮೇಜಿನ ಕಾಂಗ್ರೆಸದ ಪ್ರತಿನಿಧಿಗಳು.

(ತಂತಿಯ ವಾರ್ತೆ ತಾ ೨೦)

ದುಂಡುಮೇಜಿನ ಪರಿಷತ್ತಿಗೆ ಕಾಂಗ್ರೆಸದವರು ತಮ್ಮ ಪರವಾಗಿ ೧೬ ಜನ ಪ್ರತಿನಿಧಿಗಳನ್ನು ಕಳಿಸುವರೆಂಬದಾಗಿ ತಿಳಿಯುತ್ತದೆ.

ಲಾರ್ಡ್ಸ ಸಭೆಯಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚೆ

(ತಂತಿಯ ವಾರ್ತೆ, ತಾ। ೧೯)

ಲಾರ್ಡ್ಸ ಸಭೆಯಲ್ಲಿ ಹಿಂದುಸ್ಥಾನದ ಸಂಬಂಧವಾಗಿ ಚರ್ಚೆ ನಡೆದಾಗ ಲಾರ್ಡ ಸ್ಯಾಂಕಿಯವರು ಹಿಂದುಸ್ಥಾನಕ್ಕೆ ಸಾಂಘಿಕ ರಾಜ್ಯ ಪದ್ಧತಿಯನ್ನು ದಯಪಾಲಿಸುವದೇ [illegible] ಸುರಕ್ಷಿತ ಮಾರ್ಗವಾಗಿದೆಯೆಂದು ಉತ್ತರ ತಿಳಿಸಿದರು.

ಚಿನ್ನೇರ ಹಾಗು ಸೊಲ್ಲಾಪುರ ದಿನ

ತಾ॥ ೨೨ ನೆಯ ದಿವಸ ಅಖಿಲ [illegible] ದೇಶದಲ್ಲೆಲ್ಲ ಚಿನ್ನೇರ ಹಾಗು ಸೊಲ್ಲಾಪುರ ದಿನವನ್ನಾಚರಿಸಿ, ದಂಡಿನ ಕಾಯದೆಯ ಅನ್ವಯ ಶಿಕ್ಷೆಗೆ ಗುರಿಯಾದ ಸೊಲ್ಲಾಪುರದ ಕೈದಿಗಳನ್ನು, ಮತ್ತು ದಂಗೆಯ ನಿಮಿತ್ತವಾಗಿ ಶಿಕ್ಷೆಗೆ ಗುರಿಯಾದ ಚಿನ್ನೇರ ಆರೋಪಿಗಳನ್ನೂ ಬಿಡುಗಡೆ ಮಾಡಲು ಸರಕಾರಕ್ಕೆ ಕೇಳಿಕೊಳ್ಳುವ ಠರಾವುಗಳನ್ನು ಪಾಸುಮಾಡಬೇಕಾಗಿ ಮಹಾರಾಷ್ಟ್ರದ ಮುಖಂಡರು ಪತ್ರಿಕೆಯನ್ನು ಪ್ರಕಟಿಸಿದ್ದಾರೆ.

ಪರದೇಶಿ ಬಟ್ಟೆಯನ್ನು ಹೊರಗೆ ಕಳಿಸುವ ಯೋಜನೆ

(ತಂತಿಯ ವಾರ್ತೆ, ತಾ॥ ೧೯)

ಜವಳಿ ವ್ಯಾಪಾರಸ್ಥರಲ್ಲಿ ಮಾರಾಟವಾಗದೆ ಉಳಿದಿರುವ ಪರದೇಶಿ ಜವಳಿಯನ್ನು ಪರದೇಶಗಳಲ್ಲಿ ಮಾರಾಟ ಮಾಡುವ ಬಗ್ಗೆ ಮಹಾತ್ಮಾ ಗಾಂಧಿಯವರ ಸಮ್ಮತಿಯಿಂದ ಒಂದು ಯೋಜನೆಯು ಸಿದ್ಧಮಾಡಲ್ಪಟ್ಟಿದೆ. ಈ ಯೋಜನೆಗನುಸರಿಸಿ ೨೫ ಲಕ್ಷ ಮೂಲ ಭಾಂಡವಲದ ಒಂದು ಕಂಪನಿಯು ಸ್ಥಾಪಿಸಲ್ಪಡತಕ್ಕದ್ದಿದೆ. ಪರದೇಶಿ ಜವಳಿಯನ್ನು ಪರದೇಶಗಳಲ್ಲಿ ಮಾರಾಟ ಮಾಡುವದರಿಂದ ಸಂಭವಿಸಬಹುದಾದ ಹಾನಿಯಲ್ಲಿ ಕೆಲವು ಹಾನಿಯನ್ನು ಈ ಕಂಪನಿಯು ವಹಿಸಿಕೊಳ್ಳುವದು.

ಕರಾಚಿ ಕಾಂಗ್ರೆಸ್ ಸಭೆಯ ಅಧಿವೇಶನ

(ತಂತಿಯ ವಾರ್ತೆ ತಾ। ೨೦)

ಕರಾಚಿ ಕಾಂಗ್ರೆಸ್ಸಿನ ಮೊದಲಿನ ಕಾರ್ಯಕ್ರಮದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಲ್ಪಟ್ಟಿದ್ದು, ಹೊಸ ಕಾರ್ಯಕ್ರಮದನ್ವಯ ಕಾಂಗ್ರೆಸ್ ಅಧಿವೇಶನವು ತಾ॥ ೨೯ [illegible] ೩೧ ಈ ದಿನಗಳಲ್ಲಿಯೂ ವಿಷಯ ನಿಯಾಮಕ ಮಂಡಳದ ಸಭೆಯು ತಾ॥ ೨೬ ೨೭ ಹಾಗು ೨೮ ಈ ದಿನಗಳಲ್ಲಿಯೂ ನಡೆಯತಕ್ಕದ್ದಿದೆ.

ಮಂಗಳೂರಿನಲ್ಲಿ ಮುಖಂಡರ ಭಾಷಣ

(ಸ್ವಂತ ಸುದ್ದಿಗಾರನಿಂದ.)

ಮಂಗಳೂರಿನ ಸತ್ಯಾಗ್ರಹ ಚಳವಳದಲ್ಲಿ ಪ್ರಮುಖತೆಗೊಂಡ ಶ್ರೀ [illegible] ಶಿವರಾಯರು [illegible] ಹೊರಬಿದ್ದ [illegible] ಸ್ಟೇಶನದಲ್ಲಿ ಅವರಿಗೆ ಸ್ವಾಗತವಾಡಿ, ಮೆರವಣಿಗೆಯಿಂದ ಅವರನ್ನು ಊರೊಳಗೆ ಕರೆದುಕೊಂಡು ಬಂದರು. ಸಂಜೆಯಲ್ಲಿ ಸಾರ್ವಜನಿಕ ಸಭೆಯೇರ್ಪಟ್ಟು ಆ ಕಾಲಕ್ಕೆ ಭಾಷಣಕಾರರಾದ ಶ್ರೀ [illegible] ಶಿವರಾಯರು, ತಮ್ಮ ಸ್ವಾಗತವನ್ನು ಇಷ್ಟು ಆನಂದದಿಂದ ಮಾಡಿದ್ದಕ್ಕಾಗಿ ವಂದನೆಯನ್ನು ಮಾಡಿ, ತಮ್ಮೆಲ್ಲರ ಬಿಡುಗಡೆಗೂ, ಈ ಚಳವಳಿಯು ಇಷ್ಟೊಂದು ಗಂಭೀರವಾಗಿ ನಡೆಯುವದಕ್ಕೂ, ತಮ್ಮ ಭಗಿನಿಯರಾದ ಸ್ತ್ರೀಯರೇ ಕಾರಣರೆಂದೂ, ಅದಕ್ಕೆ ನಮ್ಮ ಮಂಗಳೂರಿನ ಸ್ತ್ರೀಯರೂ ಕೂಡ ಪ್ರಯತ್ನಪಡಬೇಕೆಂದೂ ಹೇಳಿ ದೊಡ್ಡ ಭಾಷಣವನ್ನು ಕೊಟ್ಟರು.

ನಂತರ ಉಡುಪಿಯಿಂದ ಸತ್ಯಾಗ್ರಹ ಶಿಬಿರದಲ್ಲಿ ಪ್ರಮುಖರಾಗಿ ಬಂದಿದ್ದ, ಎಂ. ಯು. ಫಣಿಯಾಡಿಯವರು, ಕೂಡ ಅಲ್ಲಿ ಒಂದು ದೊಡ್ಡ ಭಾಷಣ ಮಾಡಿ, ಹುಡುಗಿಯರು ತಮ್ಮ ಗಂಡನನ್ನು ಆರಿಸುವಾಗ ಈ ಸತ್ಯಾಗ್ರಹದಲ್ಲಿ ಕಾಲಿಟ್ಟವನನ್ನೇ ಆರಿಸಬೇಕೆಂದೂ, ಗಂಡಸರು ಸತ್ಯಾಗ್ರಹದಲ್ಲಿ ಸೇರಿ ಪೆಟ್ಟು ತಿನ್ನಬೇಕೆಂದೂ, ಹೇಳಿದರು.

ನಂತರ [illegible] ಬಾಳಿಗಾ [illegible] ಪರದೇಶಿ ವಸ್ತುಗಳನ್ನು ಮಾರುವವರು ಕೂಡಲೆ ಪರದೇಶಿ ಸಾಮಾನುಗಳನ್ನು ತರಿಸದೆ, ಮಾರದೆ ಇರುವೆವೆಂದು ಪ್ರತಿಜ್ಞೆಮಾಡಿ, ಮದ್ಯಪಾನದ ಅಂಗಡಿಗಳ ಮುಂದೆ ಹುಡುಗರು ಪಿಕೆಟಿಂಗ ಮಾಡುವಂತೆ ಇಷ್ಟರಲ್ಲಿ ತಮ್ಮ ಅಂಗಡಿಗಳಲ್ಲಿ ಪಿಕೆಟಿಂಗ ಮಾಡುವದಕ್ಕೆ ಮೊದಲೇ ಪರದೇಶಿ ವ್ಯಾಪಾರವನ್ನು ನಿಲ್ಲಿಸಬೇಕೆಂತ ಭಾಷಣ ಮಾಡಿದರು.

ಒಪ್ಪಂದದ ಬಗ್ಗೆ ಮಹಾತ್ಮರ ಸ್ಪಷ್ಟೀಕರಣ.

ಸ್ವಾತಂತ್ರ್ಯವೇ ನಮ್ಮ ಹೆಗ್ಗುರಿ! ಕಾಯಿದೆಭಂಗವೇ ನಮ್ಮ ಸಾಧನ !!

ಮುಂಬಯಿಯಲ್ಲಿ ತಾ॥ ೧೭ನೆಯ ದಿನ ಆಜಾದ ಮೈದಾನದಲ್ಲಿ ಪಂಡಿತ ಜವಾಹಿರಲಾಲರ ಅಧ್ಯಕ್ಷತೆಯ ಕೆಳಗೆ ಸೇರಿದ ಸಭೆಯಲ್ಲಿ ಸಾರ್ವಜನಿಕವಾಗಿ ಭಾಷಣಮಾಡುವಾಗ ಮಹಾತ್ಮಾ ಗಾಂಧಿಯವರು ನುಡಿದದ್ದೇನಂದರೆ—

ಕಳೆದ ಒಂದು ವರ್ಷದಿಂದ ನೀವು ಸತ್ಯಾಗ್ರಹ ಸಮರವನ್ನು ಒಳ್ಳೇ ಉತ್ಸಾಹಪೂರ್ವಕವಾಗಿ ಸಾಗಿಸುತ್ತ ಬಂದಿದ್ದರಿಂದಲೇ, ಕಾಂಗ್ರೆಸ್ ಹಾಗೂ ಸರಕಾರದ ನಡುವೆ ಇಂದು ಒಪ್ಪಂದವಾಗಿದೆ. ಒಪ್ಪಂದದ ಕರಾರುಗಳ ಸಂಬಂಧವಾಗಿ ಕೆಲವು ಜನರು ಸಂದೇಹಪಡುತ್ತಿರುವದು ಅಲ್ಲಲ್ಲಿ ತೋರಿಬರುತ್ತಿದೆ. ಧ್ಯೇಯವು ಸಾಧ್ಯವಾಗುವವರೆಗೂ ನೀವು ಹೋರಾಡಲು ಸಿದ್ಧರಿರುವಿರೆಂಬದು ನನಗೆ ಗೊತ್ತುಂಟು. ಯಾವಾಗಲೂ ಕಾದಾಡುವದನ್ನೇ ನೀವು ಅಪೇಕ್ಷಿಸತಕ್ಕದ್ದಲ್ಲ. ವಿಶ್ರಾಂತಿ ತೆಗೆದುಕೊಳ್ಳುವ ಸಮಯವು ಒಂದುವೇಳೆ ದೊರೆತಲ್ಲಿ, ಆ ಸುಸಂಧಿಯನ್ನು ನೀವು ಕಳೆದುಕೊಳ್ಳಕೂಡದು

ವಿಶ್ರಾಂತಿ ತೆಗೆದುಕೊಳ್ಳಲು ಇದೇ ಯೋಗ್ಯ ಸಂಧಿಯಾಗಿದೆಯೆಂದು ಅನಿಸಿದ್ದರಿಂದ ಒಪ್ಪಂದಮಾಡಿಕೊಂಡೆ. ಒಪ್ಪಂದದ ಕರಾರುಗಳಿಗೆ ತಮ್ಮ ಸಮ್ಮತಿ ತೋರಿಸುವದೆಂದರೆ ರಾಷ್ಟ್ರದ ಅಪಮಾನಮಾಡಿದಂತಾಗುವದೆಂದು ಕೆಲವು ಜನರು ತಿಳಿದುಕೊಂಡಿರುವರು. ಆದರೆ ನನಗೇನೂ ಹೀಗೆ ತೋರುವದಿಲ್ಲ. ಸರಕಾರಕ್ಕೆ ಶರಣುಹೋಗಿರುವೆನೆಂದು ನೀವು ಕನಸಿನಲ್ಲಿಯೂ [illegible]

ಪ್ರತಿಪಕ್ಷದವರನ್ನು ನಾನು [illegible] ಪ್ರಾರಂಭಿಸಲ್ಪಟ್ಟಿತು. ಸರಕಾರದವರಿಂದ ನಮ್ಮ ಬೇಡಿಕೆಗಳನ್ನು ಪೂರ್ಣಗೊಳಿಸಿಕೊಳ್ಳಬೇಕಾದ್ದರಿಂದಲೇ ಈ ಚಳವಳಿಯು ಪ್ರಾರಂಭವಾಯಿತು. ತಮ್ಮ ಮುಂದೆ ನಮ್ಮ ಬೇಡಿಕೆಗಳನ್ನು ಮಂಡಿಸಲು ಸರಕಾರದವರು ಈಗ ನಮಗೆ ಸುಸಂಧಿಯನ್ನು ದೊರಕಿಸಿಕೊಟ್ಟಿದ್ದಾರೆ. ಈ ಸುಸಂಧಿಯನ್ನು ನಾವು ಕಳೆದುಕೊಳ್ಳಕೂಡದು. ಅವರು ನಮ್ಮ ಯಾವತ್ತೂ ಬೇಡಿಕೆಗಳನ್ನು ಪೂರ್ತಿಗೊಳಿಸುವರೋ ಇಲ್ಲವೋ ಎಂಬುದು ಬೇರೆ ವಿಷಯವಾಗಿದ್ದರಿಂದ, ಆ ಬಗ್ಗೆ ಹಿಂದುಗಡೆಯಲ್ಲಿ ವಿಚಾರಮಾಡಬಹುದು.

ಯಾವತ್ತೂ ಅಹಿಂಸಾಮಯ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿ ಒಪ್ಪಂದದ ಕರಾರುಗಳಲ್ಲಿ ನಮೂದಿಸಲ್ಪಟ್ಟದ್ದು ನಿಮಗೆ ಗೊತ್ತಿರಲಿಕ್ಕೆ ಸಾಕು. ಕಾಯದೆಭಂಗ ಚಳವಳಿಯಲ್ಲಿ ಶಿಕ್ಷೆಗೆ ಗುರಿಯಾಗಿರುವ ಇತರ ಜನರನ್ನು ಬಿಡುಗಡೆ ಮಾಡಲು ನಾನು ಕೇಳಿಕೊಂಡಿಲ್ಲವೆಂದು ಯಾರೂ ತಿಳಿಯಕೂಡದು. ಅವರನ್ನಾದರೂ ಬಿಡುಗಡೆ ಮಾಡಲು ಅಧಿಕಾರಿಗಳೊಡನೆ ನಾನು ಚರ್ಚೆ ಮಾಡಿದ್ದೇನೆ. ನೀವೆಲ್ಲರೂ ಒಮ್ಮನಸಿನಿಂದ ನಿಮ್ಮ ಕಾರ್ಯವನ್ನು ನೆರವೇರಿಸಿದಲ್ಲಿ, ಅವರಾದರೂ ಬೇಗನೆ ಬಿಡುಗಡೆ ಮಾಡಲ್ಪಡುವರೆಂದು ನನಗೆ ಅನಿಸುತ್ತದೆ. ಇದೆಲ್ಲವೂ ನಿಮ್ಮ ಕೈಯಲ್ಲಿಯೇ ಇದೆ. ಪ್ರಯತ್ನ ಮಾಡಿದಲ್ಲಿ ಯಶಸ್ಸು ಸಿಕ್ಕೇಸಿಗುವದು. ಪೂರ್ಣ ಸ್ವರಾಜ್ಯದ ಸಲುವಾಗಿ ಹೋರಾಡಿದ್ದರಿಂದಲೇ ಅವರಿಗೆ ಸೆರೆಮನೆಯಾಗಿದೆಯೆಂಬುದು ನನಗೆ ಗೊತ್ತುಂಟು; ಒಪ್ಪಂದವಾಯಿತು. ಯುದ್ಧವು ನಿಂತಿತೆಂದು ಯಾರೂ ತಿಳಿಯತಕ್ಕದ್ದಲ್ಲ. ಇದಕ್ಕೆ ಮುಂದೆ ಯುದ್ಧೋಪರಮದ [illegible] ಭಾವೀ ಯುದ್ಧದ ಸಿದ್ಧತೆಗಳನ್ನು ನಾವು ಮಾಡಿಕೊಳ್ಳಬೇಕು. ಈ ವೇಳೆಯಲ್ಲಿ ಜನಸಾಮಾನ್ಯರಲ್ಲಿ ಚಳವಳಿಯ ಜೀವವನ್ನು ಜಾಗ್ರತಗೊಳಿಸಬೇಕು. ಲಾಹೋರ ಕಾಂಗ್ರೆಸಿನಲ್ಲಿ ನಿರ್ಣಯಿಸಿಕೊಂಡಪ್ರಕಾರ ಸಂಪೂರ್ಣ ಸ್ವಾತಂತ್ರ್ಯವೇನೂ ಈ ಒಪ್ಪಂದದ ಕರಾರುಗಳಿಂದ ದೊರೆತಿಲ್ಲವಾಗಿ ಹೇಳಲ್ಪಡುತ್ತಿದ್ದು ಇದಕ್ಕೆ ನನ್ನ ಒಪ್ಪಿಗೆಯಿದೆ. ಈಗಾದರೂ ನಾವು ಸರಕಾರಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೇಳಿಕೊಳ್ಳಬಹುದು. ಒಪ್ಪಂದದ ಕರಾರುಗಳಿಂದ ಇದಕ್ಕೇನೂ ಪ್ರತಿಬಂಧವುಂಟಾಗಿಲ್ಲ. ಸಂಪೂರ್ಣ ಸ್ವಾತಂತ್ರ್ಯವನ್ನು ಬೇಡುವದು ನಮ್ಮ ಹಕ್ಕು ಇರುತ್ತದೆ. ಸರಕಾರದವರು ಅದನ್ನು ಪೂರ್ಣಮಾಡಬಹುದು; ಇಲ್ಲವೆ ತಿರಸ್ಕರಿಸಬಹುದು. ಲಾಹೋರ ಕಾಂಗ್ರೆಸದಲ್ಲಿ ತೀರ್ಮಾನಿಸಲ್ಪಟ್ಟ ಸಂಪೂರ್ಣ ಸ್ವಾತಂತ್ರ್ಯ ಗೊತ್ತುವಳಿಯನ್ನು ಕರಾಚಿ ಕಾಂಗ್ರೆಸದಲಿ ಪುನಃ ದೃಢಪಡಿಸಲಾಗುವದು. ಈ ಸಂಬಂಧವಾಗಿ ಯಾರೂ ತಪ್ಪು ತಿಳುವಳಿಕೆ ಮಾಡಿಕೊಳತಕ್ಕದ್ದಲ್ಲ. ಮಿ. ಮ್ಯಾಕಡೊನಾಲ್ಡರ ಈಗ ಕೊಡಬೊಪ್ಪಿರುವ ಹಕ್ಕುಗಳೇನೂ ನಮಗೆ ಬಂಧನಕಾರಕವಾಗಿಲ್ಲ. ಹೊಸ ರಾಜ [illegible] ಕೆಲವು [illegible] ಸರಕಾರದವರು ಯೋಜಿಸಿರುವ [illegible] ಸ್ವೀಕರಿಸುವದು [illegible] ನಮಗೆ [illegible] ನಾವು ಬಿಡುತ್ತೇವೆ [illegible] ಸ್ಪಷ್ಟ [illegible] ಸ್ವೀಕರಿಸುವದು [illegible].

ಜಮಾಯತ್ ಉಲ್ ಉಲೇಮಾ ಪರಿಷತ್ತು.

ಜಮಾಯತ್ ಉಲ ಉಲೇಮಾದ ೧೦ನೆಯ ಅಧಿವೇಶನವು ಕರಾಚಿಯಲ್ಲಿ ತಾ॥ ೩೧ನೆಯ ದಿವಸ, ಮೌಲಾನಾ ಅಬ್ದುಲ್ ಕಲಾಮ್ ಆಜಾದರ ಅಧ್ಯಕ್ಷತೆಯಲ್ಲಿ ಕೂಡತಕ್ಕದ್ದಿದೆ.

(೨ನೇ ಪುಟದಿಂದ ಬಂದದ್ದು)

ವನ್ನು ಈ ಕೆಲಸಕ್ಕಾಗಿ ನಿಯೋಜಿಸುತ್ತದೆ.

೧ ಶ್ರೀ ದಿವಾಕರ ರಂಗರಾಯರು ೨. ದತ್ತಾತ್ರ ಬಲವಂತರಾಯರು. ೩. ಮುದವೀಡು ಕೃಷ್ಣರಾಯರು. ೪. ಮಂಗಳವೇಢೆ ಶ್ರೀನಿವಾಸರಾಯರು. ೫. ಕೆ. ಎಸ್. ಪಾಟೀಲ. ೬. ಡಾ. ಕಮಲಾಪೂರ.

ಕರ್ನಾಟಕ ಏಕೀಕರಣವಾಗದ ಕನ್ನಡಿಗರಿಗೆ ಸಮಾಧಾನವಾಗುವದು ಶಕ್ಯವಿಲ್ಲದ್ದರಿಂದ, ವರ್ತುಲ ಪರಿಷತ್ತಿಗೆ ಕಳಿಸುವ ಪ್ರತಿನಿಧಿಗಳ ಚುನಾವಣೆಯಲ್ಲಿ ಕರ್ನಾಟಕದ ಒಟ್ಟು ಪ್ರತಿನಿಧಿಯನ್ನಾಗಲಿ, ಸಹಾಯಕ ಸಭಾಸದನ್ನಾಗಲಿ ಆರಿಸುವದು ಅತೀವ ಅಗತ್ಯವಿದೆಯೆಂದು ಈ ಸಭೆಯು ಅ. ಭಾ. ಕಾ. ಕಮೀಟಿಗೆ ಒತ್ತಾಯದಿಂದ ಬಿನ್ನವಿಸಿಕೊಳ್ಳುತ್ತದೆ.

ಅಖಿಲ ಭಾರತ ಕಾಂಗ್ರೆಸ್ ಕಮೀಟಿಯ ಕರ್ನಾಟಕದ ಸಭಾಸದರು ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ಕರಾಚಿ ಕಾಂಗ್ರೆಸದಲ್ಲಿ ಅವಶ್ಯವಾಗಿ ಎತ್ತುವಂತೆ ಮಾಡಬೇಕೆಂದು ಈ ಸಭೆಯು ಅವರಿಗೆ ಕೇಳಿಕೊಳ್ಳುತ್ತದೆ.

ಜಾಹೀರಾತುದಾರರಿಗೆ

ಒಳ್ಳೆ ಸುಸಮಯ.

ನಾಳಿನ ಯುಗಾದಿಯಿಂದ "ಕನ್ನಡಿಗ" ನ ವಿಶೇಷಾಂಕವು ಈಗಿನ ಕಿಂತ ದೊಡ್ಡದಾಗಿ ಹೊರಡುವದು ಆದರ ಪ್ರಚಾರವು ಮೊದಲಿನಂತೆಯೂ ಹೆಚ್ಚಾಗದೆ ಇರದು. ಜಾಹೀರಾತುದಾರರು ದೊರೆಯುವವರೆಗೆ ಅಲ್ಪ ದರ ಆದರೆ ಅತಿ ಸೋವಿ ದರದಿಂದ ಜಾಹೀರಾತು ಮುದ್ರಿಸುವೆವು. ಇಷ್ಟವುಳ್ಳವರು ಸ್ವಂತ ಬರೆಯಬೇಕು. ದರ ಮೊದಲಾದವುಗಳ ಬಗ್ಗೆ ಸವಿಸ್ತರ ಪತ್ರ ದ್ವಾರದಿಂದ ಕೇಳಿಕೊಳ್ಳಬೇಕು.

ವ್ಯವಸ್ಥಾಪಕ
"ಕನ್ನಡಿಗ" ಬಾಗಲಕೋಟೆ.

ಸ್ಯಾಂಪಲ್ (ಮಾದರಿ ಚಿತ್ರಗಳು) (ಪ್ರಕಟ ಣೆಯ ಬಗ್ಗೆ) ಇಂಗ್ಲಿಷ್ ಮಾದರಿ ಟಿಗಳು ದೊರೆಯುತ್ತವೆ.

೫೦೦ ಚಿತ್ರಗಳಿಗೆ ೨—೦—೦
೧ ಸಾವಿರ ಚಿತ್ರಗಳಿಗೆ, ೩-೮-೦
೫ ಸಾವಿರಕ್ಕೆ, ೧೫-೦-೦ ರೀತ್ಯಾ
೫ ತೊಲಿ ಪಂಚಾಂಗಗಳಿಗೆ ೧-೦-೦
೦ಷ್ಟರ ನಮ್ಮಂಥ ಬಿಸ್ಕಿಟಿನ ೧೮ ಡಜನ ಡಬ್ಬಿಗೆ } ೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ.

ಕರ್ನಾಟಕ ಇಂಡಸ್ಟ್ರಿಯಲ್ ಕಂಪನಿ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಇತಿಹಾಸ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ವ್ಯಾಕರಣ	೦-೬-೦
ಗೋಖಲೆ ಕೃತ ಭೂಗೋಲ ಇನ್ನುಳಿದ	೦-೧೦-೦
ಹಿಂದುಸ್ಥಾನದ ಶಿಕ್ಷಣ ಪದ್ಧತಿ	೧-೦-೦

("ಪಟ್ಟಣ ಬುಕ್" ಪ್ರಕಟಿಸಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗೂ ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ವಿಜಾಪುರದಿಂದ ಪಂಢರಪೂರ
ಮೋಟರ ಸರ್ವಿಸ

ಮೋಟರು ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಅಥಣಿ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕೆಳಗಿನ ವಿಳಾಸದ ಮೇಲೆ ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು.

ಮ್ಯಾನೇಜರ,
ಆಟಲೆ ಮಹಾಲಕ್ಷ್ಮಿ ಮೋಟಾರ ಸರ್ವಿಸ
ವಿಜಾಪುರ.

ದಾನಿ — ದಾಬಡೆ ಟೇಲರ್ಸ

ನಮ್ಮಲ್ಲಿ ವೇಳೆಗೆ ಸರಿಯಾಗಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಅರಿವೆಗಳನ್ನು ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ನೋಡಿರಿ.

ದಾನಿ—ದಾಬಡೆ
ಟೇಲರ್ಸ
ಬಾಗಲಕೋಟೆ—ಗ. ಕೇದಗೇರಿ

ಚರಖಾಸಂಘ.

ಬಾಗಲಕೋಟೆಯಲ್ಲಿ ಚರಖಾಸಂಘವು ಸಣ್ಣ ಪ್ರಮಾಣದ ಮೇಲೆ ಒಂದು ಶಿಕ್ಷಣ ಶಾಲೆಯನ್ನೇ ನಡಿಸುತ್ತದೆ. ಈ ಶಾಲೆಯಲ್ಲಿ ಬಡಿಗತನವನ್ನು ಹೊಲಿಗೆ ಕಲಿಸಿ ಹತ್ತಿಯ ಕಾರು ತೆಗೆಯುವದು, (ಅರಳೆ ಬಿಡಿಸುವದು) ಹಿಂಜುವದು ಹಿಂಜಿ ಹಂಜಿ ಮಾಡುವದು, ನೂಲುವದು, ನೂಲಿಗೆ ಹುಣ್ಣಿ ಮಾಡುವದು, ನೇಯುವದು, ಮತ್ತು ಖಾದಿ ಪ್ರಸಾರ ಮಾಡುವದು, ಮುಂತಾದ ವಿಷಯಗಳನ್ನು ಕಲಿಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಊಟವಸತಿಗಳ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕು. ಯಾವನಾದರೂ ಕಾಸು ತೀರ ಬಡವನೆಂದು ಮನವರಿಕೆ ಮಾಡಿಕೊಟ್ಟಲ್ಲಿ ಅವನ ಊಟದ ಬಗ್ಗೆ ಹಣದ ಸಹಾಯವಾಗಲೀ ಊಟದ ಬೇರೆ ವ್ಯವಸ್ಥೆಯಾಗಲೀ ಮಾಡಲಾಗುವದು. ಅವರಿಗೆ ಇರಲಿಕ್ಕೆ ಜಾಗೆಯ ವ್ಯವಸ್ಥೆಯನ್ನು ಮಾಡಿಕೊಡುವದು. ವಿದ್ಯಾರ್ಥಿಗಳು ಸಂಘದ ನಿಯಮಗಳಿಗೆ ಒಳಪಟ್ಟಿರಬೇಕು.

ಕರ್ನಾಟಕದ ಸೇವೆ ಮಾಡಲಪೇಕ್ಷಿಸುವವರು ಈ ಸಂಧಿಯನ್ನು ಕಳೆದುಕೊಳ್ಳಬಾರದು.- ಈ ಸಂಘದಲ್ಲಿ ಕೆಳಗೆ ಬರೆದ ಯಾವತ್ತು ಸಾಮಾನುಗಳು ಮಾರಾಟಕ್ಕೆ ಸಿಗುತ್ತವೆ.

೧ ಹತ್ತಿಯ ಕಾಳು ಬಿಡಿಸುವ ಒಂದೆರಡು ಕೈಯಂತ್ರ.

೨ ಅರಳೆ ಹಿಂಜುವ ಬಿಲ್ಲು.

೩ ಚರಖಾ (ಬೆಸಿ ಮಾದರಿ)

೪ ಕದಿರು.

೫ ಶಾಸ್ತ್ರೀಯ ರೀತಿಯಿಂದ ಸಿದ್ಧಪಡಿಸಿದ ಹಂಜಿ (೩೦ ನಂಬರದ ನೂಲು ತೆಗೆಯಲಿಕ್ಕೆ ಬರುವಂಥವು)

೬ ಕದರು ಮತ್ತು ಥಾಳಿ.

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕೂಡ ಪತ್ರವ್ಯವಹಾರದ ಬಗ್ಗೆ ಮುಂಗಡ ಪೋಸ್ಟ ತಿಕೀಟು ಕಳಿಸಬೇಕು.

ಶ್ರೀ ರಾಘವೇಂದ್ರರಾವ ದೇಸಾಯಿ
ವ್ಯವಸ್ಥಾಪಕ
ಚರಖಾಸಂಘ ಬಾಗಲಕೋಟೆ.

ಸ್ವದೇಶೀ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈನೂಲು, ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ ಗಿರಣಿಯ ಪೇಟ, ಟವೆಲ, ಕೋಟುಗಳ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ಹಣಮಂತರಾವ
'ಸ್ವದೇಶೀ ಸ್ಟೋರ್ಸ'
ಹೊಸ ಬಜಾರ, ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೊಪ್ಪಿಗೆಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೊಪ್ಪಿಗೆಗಳು, ಜರದ ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ದಲ್ಲಾಳಿ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ
'ಕ್ಯಾಪಮೇಕರ' ಮೋಚಿಗಲ್ಲಿ
ವಿಜಾಪುರ

ಪುರಂದರೆಯವರ
ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ
ಟೇಲರ್ಸ
ಜೋಡಬಜಾರ ವಿಜಾಪುರ

ವಾಸುದೇವ
ಪುಸ್ತಕಾಲಯದಲ್ಲಿ

೧	ಸುರತ ನಗರದ ಶ್ರೇಷ್ಠಿ ನಾಟಕ.	೧-೪-೦
೨	ಇಂದಿರೆ (ಸಚಿತ್ರ ನಿಂ ಕಾದಂಬರಿ)	೨-೮-೦
೩	ಸೀಕ್ಷಕತೆಗಳು ಭಾಗ ೧.	೧-೪-೦
೪	ವಶೀಕರಣ ನಾಟಕ.	೦-೧೨-೦
೫	ಅಬ್ರಹಾಂಲಿಂಕನ್ ಚರಿತ್ರೆ.	೧-೮-೦
೬	ಮಾಧವಕರುಣಾ ವಿಲಾಸ.	೩ ೧೨-೦
೭	ಲಕ್ಷ್ಮೀಬಾಯಿ ಝಾಂಸಿ ಚರಿತ್ರೆ.	೨-೦-೦
೮	ಶೈವ ಸುಧಾರ್ಣವ (ಸಚಿತ್ರ)	೩-೮-೦

ಕಟಲಾಗಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ

ಬೆಟಗೇರಿ ಬ್ರದರ್ಸ
ವಾಚಮೇಕರ್ಸ



ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟೈಮಪೀಸ ದುರಸ್ತು ಮಾಡುವದಲ್ಲದೆ ವೆಸ್ಟ ಎಂಡ್, ಜೆನಿಥ್, ಓಮೆಗಾ ಕಂಪನಿಯ ವಾಚ, ಕ್ಲಾಕು, ಟಾಯಿಂಪೀಸ ಮತ್ತು ಸ್ಪೇರಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೇಶ್ಯಾಲಿಟಿ,

ಬೆಟಗೇರಿ ಬ್ರದರ್ಸ.
ಸ್ಟೇಶನ್ ರೋಡ ಹುಬ್ಬಳ್ಳಿ ಬಾಗಲಕೋಟೆ.

ಚಂದಾದಾರರಲ್ಲಿ ಬಿನ್ನಹ

ವ್ಹಿ ಪಿ ಗಳನ್ನು ಮೂರೇದಿನಗಳವರೆಗೆ ಇಟ್ಟುಕೊಳ್ಳಬೇಕೆಂಬ ದಾಗಿ ಅಂಚೆ ಖಾತೆಯವರು ಹೊಸನಿಯಮ ಮಾಡಿರುವದರಿಂದ "ಕನ್ನಡಿಗ"ಗಳನ್ನು ವ್ಹಿ ಪಿ ಯಿಂದ ಕಳಿಸುವದು ಸಾಧ್ಯವಿಲ್ಲ. ವ್ಹಿ ಪಿ ಗಳು ತಿರುಗಿ ಬಂದಲ್ಲಿ, "ಕನ್ನಡಿಗ"ನ ವಿನಾಕಾರಣವಾಗಿ ಹಾನಿಗೊಳಗಾಗುವನು ವ್ಹಿ ಪಿ ಯನ್ನು ಮೂರುದಿನಗಳಿಂತ ಹೆಚ್ಚಿಗೆ ಇಟ್ಟುಕೊಂಡಲ್ಲಿ ಚಂದಾದಾರರಿಗೂ ಹಾನಿಯಾಗುವದು. ಆದ್ದರಿಂದ ಚಂದಾಹಣ ಮುಗಿದವರೆಲ್ಲರೂ ಎಂಟುದಿನಗಳೊಳಗಾಗಿ ಚಂದಾಹಣವನ್ನು ಮನಿಆರ್ಡರದಿಂದ ಕಳಿಸಿಕೊಡಬೇಕು. ಈ ಚಂದಾಹಣವು ಬಾರದಿದ್ದಲ್ಲಿ, ಕನ್ನಡಿಗ, ಕಳಿಸುವದನ್ನು ನಿಲ್ಲಿಸಿ ಬಿಡುವೆವು.

ಹೊಸದಾಗಿ ಚಂದಾದಾರರಾಗಲಿಚ್ಛಿಸುವವರು ಮನಿಯಾರ್ಡರದಿಂದ ಹಣಕಳಿಸಬೇಕು

ವ್ಯವಸ್ಥಾಪಕ

ಜಾಹೀರಾತಿನ ಸಲುವಾ

ಈ ಪತ್ರಿಕೆಯು ದೇಶಪಾಂಡೆ ಶೇಷಾಚಾರ್ಯರು ಕೆರೂರ ಇವರಿಂದ ಬಾಗಲಕೋಟೆಯ ... ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ... ಪ್ರಸಿದ್ಧ ಪಡಿಸಲ್ಪಟ್ಟಿತು.

ರ ನಂ. ಬಿ. ೨೭೮೮ ನಿತ್ಯ ಸಂಚಿಕೆ ಬೆಲೆ ೧—೦—೩

[illegible] परवशं दुःखं । सर्वमात्मवशं सुखम्॥ –मनु.

ನಿತ್ಯಪತ್ರಿಕೆಯ ವರ್ಗಣೀ ದರಗಳು
ಸ್ವಸ್ಥಳದವರಿಗೆ
ವರ್ಷಕ್ಕೆ ೧೨—೦—೦
,, ೬—೦—೦
,, ೩—೦—೦
,, ೧—೦—೦
ಸ್ಥಳಾಂತರಿಗೆ
ತಿಂಗಳಿಗೆ ೬—೦—೦
,, ೩—೦—೦
,, ೧—೮—೦
,, ೦—೮—೦

KANNADIGA
BAGALKOT

ನಿತ್ಯಪತ್ರಿಕೆಯ
ಜಾಹೀರಾತಿನ ದರಗಳು
ಒಂದು ಕಾಲಮ್ ಒಂದು ಇಂಚಿಗೆ ೧—೪—೦
[illegible] ,, ,, ೧—೦—೦
ವಾರ್ಷಿಕ ಕರಾರಿನಿಂದ, ಸಲ
೦—೧೨—೦
ಹೆಚ್ಚಿನ ಸಾಲಿಗೆ ಅಕ್ಷರಗಳ
ಪ್ರಮಾಣದಿಂದ ದರ ಬೀಳುವದು.

ಸಂಪಾದಕರು:— ಮಂಗಳವೇಢೆ ಶ್ರೀ ರಾಚೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೩] ಬಾಗಲಕೋಟೆ — ಶನಿವಾರ ಮಿತಿ ಚೈತ್ರ ಶುದ್ಧ ೨ ಶಕೆ ೧೮೫೩ ತಾ॥ ೨೧—೩—೩೧ [ಸಂಚಿಕೆ ೩

ಮಹಾರಾಜರ ಆಸ್ತಿಯನ್ನು ಜಪ್ತ ಮಾಡಿದರು.

[illegible]ಂದಾಯ ರೂಪದಿಂದ ಸರಕಾರಕ್ಕೆ ಸಲ್ಲ ಹಣವನ್ನು ಪೂರ್ಣವಾಗಿ ಇನ್ನೂ ಇದ್ದ ಮೂಲಕ ಕಲಕಂಕಾರ ಮಹಾ ಜಂಗಮ ಆಸ್ತಿಯು ಜಪ್ತ ಮಾಡಲ್ಪ ಮಹಾರಾಜರು ಸರಕಾರಕ್ಕೆ ೮೮೦೦೦ [illegible] ಕೊಡತಕ್ಕದ್ದಿತ್ತು. ಲಾವಣಿದಾರರ ಂದ ಹಣ ವಸೂಲಾಗದ್ದರಿಂದ ಅವರು ೫೦೦೦೦ ರುಪಾಯಿಗಳನ್ನು ಕೊಟ್ಟು [illegible]ನ್ನು ತಡೆಹಿಡಿದರು. ೩೮೦೦೦ ರುಪಾ[illegible]ನ್ನು ಹೀಗೆ ತಡೆಹಿಡಿದಿದ್ದನ್ನು ಕಂಡು [illegible]ಗಡದ ಡೆಪ್ಯೂಟಿ ಕಮೀಶನರರು ಅವರ[illegible]ನ್ನು ಜಪ್ತಮಾಡಲು ಅಧಿಕಾರಿಗಳಿಗೆ [illegible]ಟ್ಟರು. ಈವರೆಗೆ ಎರಡು ಮೋಟಾರು [illegible]ಲಾರಿ, ಎರಡು ಆನೆ, ಕುದುರೆ ಹಾಗು [illegible]ಜಪ್ತಮಾಡಲ್ಪಟ್ಟವೆ.

[illegible] ಮಹಾರಾಜರು ರಾಜಕೀಯ ಮು[illegible] ಕಮ್ಮಲ್ಲಿಗೆ ಬಂದಾಗ, ಅವರನ್ನು [illegible]ಗೆ ಕರೆಯಿಸಿಕೊಂಡು ಅವರ ಆದರಸ[illegible]ಮಾಡುತ್ತಿರುವರು. ಮಹಾತ್ಮಾಗಾಂಧಿ ಲಖನೌಕ್ಕೆ ಭೆಟ್ಟಿಕೊಟ್ಟಾಗ ಇವರ [illegible]ಆತಿಥ್ಯವನ್ನು ಹೊಂದಿದರು. ಪಂಡಿತ [illegible]ಲಾಲ ನೆಹರೂರವರು ಲಖನೌದಲ್ಲಿ[illegible]ಯೇ ವಾಸವಾಗಿ ಅಲ್ಲಿಯೇ ನಿಧನ [illegible]ದರು.

[illegible]ಗೆ ಹೋಗುವವರಿಗೆ ಸೂಚನೆ

[illegible]ಯ ವಾರ್ತೆ. ಧಾರವಾಡ ತಾ॥ ೨೦)

[illegible]ಮುಂಬಯಿಯಿಂದ ಕರಾಚಿ ಕಾಂಗ್ರೆಸಕ್ಕೆ [illegible]ಗಳನ್ನು ಕರೆದುಕೊಂಡುಹೋಗುವ [illegible] ಉಗಿಹಡಗದಲ್ಲಿಯ ಸ್ಥಳಗಳು ಈಗಾ[illegible]ಬಲ್ಪಟ್ಟಿವೆಯೆಂದು ತಿಳಿದು ಬರುತ್ತದೆ. [illegible] ತಿಕೀಟುಗಳನ್ನು ತೆಗೆದುಕೊಂಡವರು [illegible]ನೆಯ ದಿವಸ ಮೇಲಗಾಡಿಯಿಂದ [illegible]ಗೆ ಹೋಗಿ ಅಲ್ಲಿ ತಾ॥ ೨೫ನೆಯ [illegible]ಮುಂಜಾನೆ ಉಗಿಹಡಗ ಹತ್ತಬೇಕು

[illegible]ಪ್ಯೂಟಿ ಸುಪರಿಂಟೆಂಡೆಂಟರು
[illegible]ಕರ್ತರಿಗೆ ಬೆದರಿಕೆ ಹಾಕಿದರು

[illegible]ಮಹಾತ್ಮಾ ಗಾಂಧಿಯವರ ಭಾವಚಿತ್ರಕ್ಕೆ [illegible]ರೆ ಗುಂಡು ಹೊಡೆದು ಅದನ್ನು ಸುಟ್ಟ[illegible] ತಮ್ಮ ಮೇಲೆ ಆರೋಪ ಹೊರಿಸಿ[illegible]ದಿಗಳನ್ನು ಪ್ರಕಟಿಸಿದ ಪತ್ರಿಕಾಕ[illegible] ಕೂಡಲೇ ತಮ್ಮ ಕ್ಷಮೆ ಬೇಡಿಕೊ[illegible]ದ್ದು, ಸುರತ ಜಿಲ್ಹೆಯ ಡೆಪ್ಯೂಟಿ [illegible] ಸುಪರಿಂಟೆಂಡೆಂಟರು ಪತ್ರಿಕಾ ಕರ್ತ[illegible] ನೋಟೀಸ ಮಾಡಿದ್ದಾರೆ.

ಶ್ರೀ ಭಗತಸಿಂಗ ಮೊದಲಾದವರಿಗೆ ಗಲ್ಲು

ಲಾಹೋರದ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗ ರಾಜಗುರು, ಹಾಗು ಸುಖದೇವ ಇವರ ದಯೆಯ ಅರ್ಜಿಯು ವ್ಹಾಯಿಸರಾಯರಿಂದ ನಿರಾಕರಿಸಲ್ಪಟ್ಟಿದೆ. ಇವರೆಲ್ಲರನ್ನೂ ಮುಂದಿನ ವಾರದಲ್ಲಿ ಗಲ್ಲಿಗೇರಿಸುವವರಿದ್ದಾರೆಂಗಿ ತೋರುತ್ತದೆ.

ಜೇಲ ಅಧಿಕಾರಿಗಳು ಶ್ರೀ ಭಗತಸಿಂಗರ ತಂದೆ, ರಾಜಗುರುರವರ ತಾಯಿ, ಸುಖದೇವರ ಆಪ್ತರು ಇವರಿಗೆಲ್ಲ ಮಾರ್ಚ ೨೩ನೆಯ ತಾರೀಖಿನ ದಿವಸ ಆರೋಪಿಗಳ ಕೊನೆಯ ಭೆಟ್ಟಿ ತೆಗೆದುಕೊಳ್ಳಲು ತಿಳಿಸಿದ್ದಾರೆ.

ಲಾಹೋರ ಸೆಂಟ್ರಲ್ ಜೇಲಿನ ಡೆಪ್ಯೂಟಿ ಸುಪರಿಂಟೆಂಡೆಂಟರು ಸರದಾರ ಭಗತಸಿಂಗರ ತಂದೆಯವರಿಗೆ ಪತ್ರಬರೆದು ಕೆಳಗಿನಂತೆ ತಿಳಿಸಿದ್ದಾರೆ.

ತಾ॥ ೨೩ ನೇಯ ದಿವಸ ೧೧ ಗಂಟೆಗೆ ಶ್ರೀ ಭಗತಸಿಂಗರನ್ನು ಭೆಟ್ಟಿಯಾಗಲು ನಿಮಗೆ ಅಪ್ಪಣೆ ಕೊಟ್ಟಿದೆ. ಎಲ್ಲ ಆಪ್ತರನ್ನು ಕರೆದುಕೊಂಡು ಬಂದು ಅವರ ಭೆಟ್ಟಿ ತೆಗೆದುಕೊಳ್ಳಬೇಕು.

ಶ್ರೀ ರಾಜಗುರು ಹಾಗು ಶ್ರೀ. ಸುಖದೇವ ಇವರ ಆಪ್ತರಿಗಾದರೂ ಮೇಲಿನಂತೆಯೇ ತಿಳಿಸುವದರಲ್ಲಿ ಬಂದಿದೆ.

ಲಾಹೋರದ ಮಾಮಲೇದಾರರು ಮೇಲಿನವರಿಗೆ ಇದೇ ಬಗೆಯ ನೋಟೀಸು ಕೊಟ್ಟು, ತಾ॥ ೨೩ ನೆಯ ದಿವಸದ ಭೆಟ್ಟಿಯೆ ಕೊನೆಯ ಭೆಟ್ಟಿಎಂಬುದಾಗಿ ತಿಳಿಸಿದ್ದಾರೆ.

ಭಗತಸಿಂಗರ ತಂದೆಯವರು ಮಹಾತ್ಮರಿಗೆ ತಾರು ಮಾಡಿದರು.

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಸರದಾರ ಭಗತಸಿಂಗರ ತಂದೆಯವರಾದ ಸರದಾರ ಕಿಶನಸಿಂಗರವರು ಮಹಾತ್ಮಾ ಗಾಂಧಿಯವರಿಗೆ ಕೆಳಗಿನಂತೆ ತಾರು ಮಾಡಿದ್ದಾರೆ.

“ದಯೆಯ ಅರ್ಜಿಯು ನಿರಾಕರಿಸಲ್ಪಟ್ಟಿದೆಯಾಗಿ ವ್ಹಾಯಿಸರಾಯರಿಂದ ಉತ್ತರ ಬಂದಿದೆ. ತಾ॥ ೨೩ ಕ್ಕೆ ಕೊನೆಯ ಭೆಟ್ಟಿಯು ನಿಯಮಿಸಲ್ಪಟ್ಟಿದೆ”

ಕರಾಚಿ ಮ್ಯುನಿಸಿಪಾಲಿಟಿಯವರು ಕಾಂಗ್ರೆಸ್ ಸಪ್ತಾಹದ ಕಾಲಕ್ಕೆ ಶ್ರೀ ಸುಭಾಷ ಚಂದ್ರರಿಗೆ ಮಾನಪತ್ರ ಕೊಡತಕ್ಕವರಿದ್ದಾರೆ.

ಮದ್ರಾಸ ಶಾಸನ ಸಭೆಯಲ್ಲಿ ಭಾಷಾವಾರ ಪ್ರಾಂತ ಪ್ರತಿವಾದವು

(ಸ್ವಂತ ಸುದ್ದಿಗಾರರಿಂದ)

ಪೃಥಕ್ಕ ಪರಿಪಾಲನ ಕಾರ್ಯಾಧಿಕಾರಿಗಳ ಬೇಡಿಕೆಯ [illegible] ರೂಪಾಯಿಗಳನ್ನು ತಗ್ಗಿಸಬೇಕೆಂಬ [illegible] ಶ್ರೀ [illegible] ಸವರಣವನ್ನು ಶ್ರೀ [illegible] ಮದ್ರಾಸ ಇಲಾಖೆ [illegible] ಬೇರೆ ಬೇರೆ ಪ್ರಾಂತಗಳನ್ನು ಭಾಷೆಗಳ ಮೇರೆಗೆ ವಿಭಾಗ ಮಾಡಿ, ಪ್ರತ್ಯೇಕ ಪ್ರಾಂತಗಳನ್ನು [illegible]ಬೇಕೆಂತಲೂ ಹಾಗೆ ಮಾಡದೆ [illegible] ಪ್ರತಿ[illegible]. [illegible]ದಲ್ಲಿ ಸರಿಯಾದ ಭಾಗವನ್ನು ತೆಗೆದುಕೊಳ್ಳಲಿಕ್ಕೆ ಶಕ್ಯವಿಲ್ಲವೆಂತಲೂ, ನಿಜವಾದ ಪ್ರಜಾಪ್ರಭುತ್ವವು [illegible] ಸಾಧ್ಯವಾಗಲಾರದೆಂತಲೂ ಹೇಳಿದರು.

ಕೃಷ್ಣ [illegible] ನಾಯರು (ಗೋದಾವರಿ) ಇವರು ಮೇಲ್ಕಂಡ ಸವರಣವನ್ನು ಬಲಪಡಿಸುತ್ತ, ಆಂಧ್ರ ದೇಶದಲ್ಲಿ ಇಷ್ಟರಲ್ಲಿಯೇ ಭಾಷಾವಾರ ಪ್ರಾಂತಗಳಿಗೋಸ್ಕರ ಬಹಳ ಚಳವಳಿ ಜರಗುತ್ತ ಇರುತ್ತದೆ. ಭಾಷಾವಾರ ಪ್ರಾಂತಗಳು ಇಲ್ಲದೆ ಹೋದರೆ ನಿಜವಾದ ಜ[illegible] ಸ್ವಾತಂತ್ರ್ಯವು ಬರಲಾರದೆಂತಲೂ ಹೇಳಿದರು.

ಮುತ್ತಯ್ಯ ಶೆಟ್ಟಿಯವರು ಅದರಲ್ಲಿ ಮಾತಾಡುತ್ತ ಮೇಲ್ಕಂಡ ಸವರಣವನ್ನು ಬಲಪಡಿಸುತ್ತ, ಶಾಸನ ಸಭೆಯ ಕಾರ್ಯಕ್ರಮವನ್ನು ಮ[illegible] ದೇಶಭಾಷೆಗಳಲ್ಲಿ ಪ್ರಕಟಿಸಬೇಕಾಗಿ ಕೋರಿದರು.

ಶ್ರೀ ಸುಬ್ರಹ್ಮಣ್ಯ ಭಟ್ಟ (ಮಂಗಳೂರ) ಮೇಲ್ಕಂಡ ಸವರಣವನ್ನು ಪುಷ್ಟೀಕರಿಸುತ್ತ ಹರಿದು ಹಂಚಿಹೋದ ಬ್ರಿಟಿಶ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ಮಾಡದೆ ಹೋದರೆ ಕರ್ನಾಟಕದ ಏಳಿಗೆಯಾಗದೆಂದು ಹೇಳಿದರು.

ಧ. [illegible] (ಕ್ರಿಶ್ಚಿಯನ್) ಇವರು ಮೇಲ್ಕಂಡ ಸವರಣವನ್ನು ವಿರೋಧಿಸುತ್ತ, ಭಾಷಾವಾರ ಪ್ರಾಂತಗಳನ್ನು ಮಾಡುವಲ್ಲಿ ಆರ್ಥಿಕ ಪ್ರಶ್ನೆಯು ಅಡ್ಡವಾಗುತ್ತದೆಂದು ಹೇಳಿದರು.

ದಿ॥ ಬ॥ [illegible] ಮೊದಲಿಯಾರ. ([illegible]) ಮೇಲ್ಕಂಡ ಸವರಣವನ್ನು ಪುಷ್ಟೀಕರಿಸುತ್ತ, ಈ ವಿಷಯದಲ್ಲಿ ಮಾನವಿಯ ಮಾಸ ಭಿನ್ನಾಭಿಪ್ರಾಯಗಳಿಲ್ಲೆಂತಲೂ, ಸ್ವಲ್ಪ ಕಾಲದಲ್ಲಿ ಕರ್ನಾಟಕ ರಾಜ್ಯವನ್ನು ನಿರ್ಮಿಸಿ ಬಳ್ಳಾರಿ ಜಿಲ್ಹೆಯನ್ನು ಅದಕ್ಕೆ ಸೇರಿಸಬೇಕೆಂದೂ ಹೇಳಿದರು.

ರಾ। ರಾ। ಶಿವಂಪ್ಪ (ಅನಂತಪೂರ) ಮೇಲ್ಕಂಡ ಸವರಣವನ್ನು ವಿರೋಧಿಸುತ್ತ, ಭಾಷಾವಾರ ಪ್ರಾಂತರಚನೆಯಿಂದ ಲಾಭವೇನೂ ಇಲ್ಲವೆಂದು ಹೇಳಿದರು.

ಕ್ಯಾಂಬೆಲ್ಲರು ಮೇಲ್ಕಂಡ ಸವರಣವನ್ನು ವಿರೋಧಿಸುತ್ತ, ಭಾಷಾವಾರ ಪ್ರಾಂತರಚನೆಯನ್ನು ಜಾಯಿಂಟ ಪಾರ್ಲಮೆಂಟರಿ ಕಮಿಟಿಯವರು ಒಪ್ಪಿರುತ್ತಾರೆಂತಲೂ, ಈ ಇಲಾಖೆಯಲ್ಲಿ ಆಂಧ್ರ, ಕರ್ನಾಟಕ, ಉರಿಯಾ ಪ್ರಾಂತಗಳನ್ನು ಬೇರೆ ಬೇರೆ ರಚನೆ ಮಾಡಬೇಕೆಂದು ಬಹಳ ಕಾಲದಿಂದ ಚಳವಳಿ ನಡೆಯುತ್ತದೆಂತಲೂ ಬೇರೆ ಬೇರೆ ಪ್ರಾಂತಗಳ ರಚನೆಗೆ ಬಹಳ ದುಡ್ಡು ಬೇಕಾಗುತ್ತದೆಂತಲೂ, ಇದಕ್ಕೋಸ್ಕರ ದೀರ್ಘಾಲೋಚನೆ ಮಾಡಬೇಕಾಗುತ್ತದೆಂತಲೂ ಕಾರಣ ಈ ವಿಷಯವನ್ನು ಬೇರೆ ಠರಾವು ಮೂಲಕ ತರುವದು ಆವಶ್ಯಕವೆಂತಲೂ, ಈ ಪ್ರಕಾರ ಕತ್ತರಿಯ ಸೂಚನೆಯ (ಕಟ್‌ಮೋಷನ್) ದ್ವಾರಾ ತರುವದು ನ್ಯಾಯವಲ್ಲವೆಂತಲೂ ಹೇಳಿದರು ಹಾಗೆ ಪ್ರತ್ಯೇಕ ಠರಾವಿನ ಮೂಲಕ ತಂದರೆ, ಅದು ಮಂಜೂರಾದರೆ, ಅದನ್ನು ದಂಡ [illegible] ಸರ್ಕಾರಕ್ಕೆ ಕಳಿಸಿಕೊಡುತ್ತೇವೆಂದು ಹೇಳಿದರು.

ತರುವಾಯ ಮೇಲ್ಕಂಡ ಸವರಣಕ್ಕೆ ೩೭ ಮಂದಿ ಅನುಕೂಲವಾಗಿಯೂ, ೫೦ ಮಂದಿ ಪ್ರತಿಕೂಲವಾಗಿಯೂ ಮತವನ್ನು ಕೊಟ್ಟದ್ದರಿಂದ ಮೇಲ್ಕಂಡ ಸವರಣವು ಬಿದ್ದುಹೋಯಿತು,

ಕಾರಣ ಮುಂಬಯಿ, ಮದ್ರಾಸ ಶಾಸನ ಸಭೆಗಳಲ್ಲಿ ಕರ್ನಾಟಕಸ್ಥರು ಕ್ಯಾಂಬೆಲ್ಲರ ಸೂಚನೆಯಂತೆ ಕರ್ನಾಟಕ ಪ್ರತ್ಯೇಕ ಪ್ರಾಂತದ ಠರಾವನ್ನು ತರಬೇಕಾಗಿ ಪ್ರಾರ್ಥನೆ.

ಕಾಮನ್ಸ ಸಭೆಯಲ್ಲಿ ಬ್ರಿಟಿಶ ಬಟ್ಟೆಯ ಬಹಿಷ್ಕಾರ

ಕಾಮನ್ಸ ಸಭೆಯಲ್ಲಿ ಮಿ ಹ್ಯಾರಿಸರು ಬ್ರಿಟಿಶ ಬಟ್ಟೆಯನ್ನು ಹಿಂದುಸ್ಥಾನದಿಂದ ಹೊರಗೆ ಹಾಕಲು ಮಹಾತ್ಮರು ಸಿದ್ಧಪಡಿಸಿದ ಯೋಜನೆಯ ಕಡೆಗೆ ಭಾರತ ಮಂತ್ರಿಗಳ ಲಕ್ಷ್ಯ ಎಳೆದು, ಈ ಗಾಂಧಿ—ಇರ್ವಿನರ ಒಪ್ಪಂದಕ್ಕೆ ವಿರುದ್ಧವಾಗಿರುತ್ತದೆಯೋ ಎಂಬುದನ್ನು ಸ್ಪಷ್ಟೀಕರಿಸಲು ಕೇಳಿಕೊಂಡರು.

ಮಿ. ಬೆನ್ನರು, ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು ಗೊತ್ತಿದೆಯೆಂತಲೂ ಸರಕಾರದವರಿಂದ ಈ ವಿಷಯವಾಗಿ ಏನೂ ಬಂದಿಲ್ಲವೆಂದೂ, ವಿಚಾರ ಮಾಡಲಾಗುವದೆಂದೂ ಉತ್ತರ ಕೊಟ್ಟರು

ಕನ್ನಡಿಗ.

[illegible]

ಕನ್ನಡ ಜನಸಿನ [illegible]
ಶಿನ್ನ ಬೆಳಸನ [illegible]
[illegible] ಬನ್ನ [illegible]

ಒಂದು ಹೆಜ್ಜೆ (ಲೇಖ) [illegible]

ಇದೇ ತಿಂಗಳ [illegible] ತಾರೀಖಿನ ದಿನ ರಾಷ್ಟ್ರಪತಿಯಾದ ಜವಾಹಿರಲಾಲರು ಮುಂಬಯಿಯಲ್ಲಿ ಭಾಷಣಮಾಡಿದರು. ಅವರ ಭಾಷಣದಲ್ಲಿ ಭಾರತೀಯರ ಸುಖಶಾಂತಿಗಳಿಗೆ ಅವಶ್ಯವಾದ ರಾಜ್ಯಘಟನೆಯು ಚಿತ್ರಿಸಲ್ಪಟ್ಟಿದೆ. ಅವರು ಅಂತರರಾಷ್ಟ್ರೀಯ ರಾಜಕಾರಣ ಪಟುಗಳು. ಜಗತ್ತಿನ ಎಲ್ಲ ದೇಶ-ಕೋಶಗಳನ್ನು ಕಣ್ಣುಕಟ್ಟಿ ನೋಡಿ, ನಿಜವಾದ ರಾಜ್ಯಸೂತ್ರ ತತ್ವಗಳನ್ನು ಕಂಡುಹಿಡಿದವರು. ಅಂದ ಮೇಲೆ ಭಾರತೀಯರ ಭಾವೀ ರಾಜ್ಯಘಟನೆಯಲ್ಲಿ ಅವರೇ ಮುಂದಾಳು [illegible] ಕಾಂಗ್ರೆಸ್ಸಿನಲ್ಲಿ ದುಂಡುಮೇಜಿನ ಪರಿಷತ್ತಿಗೆ ಹೋಗಬೇಕೆಂದು ನಿಣ [illegible] ದುಂಡುಮೇಜಿನ ಪರಿಷತ್ತಿನಲ್ಲಿ ಭಾರತೀಯ ಕರುಣ ಮುಖಟವನ್ನು [illegible] ನೋಡಿ, ಆಂಗ್ಲ ಪ್ರತಿನಿಧಿಗಳ ಕಣ್ಣುಗಳು ಕುಕ್ಕಿದಳವು. [illegible] ಆಂಗ್ಲ ಪ್ರತಿನಿಧಿಗಳು [illegible] ಕೂಡುವರಾಗಿ [illegible]. ಈಗಾಗಲೇ ಅವರಲ್ಲಿ 'ನೀನು ಸತ್ತ ಹಾಗೆ ಮಾಡು; ನಾನು ಅತ್ತ ಹಾಗೆ ಮಾಡುತ್ತೇನೆ.' ಎಂಬಂತ ಕಪಟ ಸಾಹೇಬರು [illegible] ಮಾತುಗಳನ್ನೂ, [illegible] ಗಳನ್ನೂ ಆಡುತ್ತಲಿರುವರು. [illegible] ವ್ಹಾಯಿಸರಾಯರ ಸಂಗಡ [illegible] ಡಿಕೊಂಡು, ದುಂಡುಮೇಜಿನ ಪರಿಷತ್ತಿಗೆ ಹೋಗಲು ಒಪ್ಪಿದುದು [illegible] ವಾದ ದೂರದರ್ಶಿತ್ವವನ್ನು [illegible]. ಆವರ ಈ ದೂರದರ್ಶಿತ್ವ [illegible] ನೆತ್ತರದ [illegible] ವರು. ಈ ಸಂಧಾನದಿಂದ ತಮಗೆ ಮುಂದೆ ಏನು ಲಾಭವಿದೆಯೋ ಇಲ್ಲವೋ ಎಂಬುದನ್ನು ಅವರು ಈಗಾಗಲೇ ಸ್ಪಷ್ಟಮಾಡಿಬಿಟ್ಟಿರುವರು. ಜವಾಹಿರಲಾಲರು [illegible] ಜನತೆಯಲ್ಲ ಉತ್ಸಾಹವನ್ನು ಸ್ಥಿರಪಡಿಸುತ್ತಿರುವರು. [illegible] ಭಾರತೀಯರಿಗೆ ಬೇಕಾದ ನಾಲ್ಕು ತತ್ವಗಳನ್ನು ದುಂಡುಮೇಜಿನ ಪರಿಷತ್ತಿನಲ್ಲಿ ತಮ್ಮ ಚತುರ ಮಾತುಗಳಿಂದ [illegible] ಹೇಳುವರು. "ಬಂಟೀ ಹಿಡಿತ"ದಂತ ಈ ನಾಲ್ಕು ತತ್ವಗಳನ್ನೇ ಅಲ್ಲಿಯ ಸಾಹೇಬರ ಮನಸ್ಸಿನಲ್ಲಿ ಮನೆ ಮಾಡುವಂತೆ ಮಹಾತ್ಮನ [illegible] ಬಿತ್ತುವರು. ಇದರಿಂದ [illegible] ಸಾಧ್ಯವಾಗುವಂತೆ ಸಾಹೇಬರು ಮೆತ್ತಗಾದರೆ ಮಾತ್ರ ಭಾರತೀಯರ ತಳಮಳವು ತಣ್ಣಗಾಗುವದು. ಸಾಹೇಬರು ಇನ್ನೂ ಸೇಫಗಾರ್ಡ್ಸ ರಿಜರ್ವೇಶನ್ಸ ಎಂದು ಕೂಗುತ್ತಿರುವರು. 'ನಾವೂ ನೀವೂ ನೆಂಟರು; ನಮ್ಮ ಕಂಟಬಿಗೆ ಮಾತ್ರ ಕೈಹಚ್ಚಬೇಡ!' ಎಂಬಂತೆ ಈ ಸಾಹೇಬರ ಸೇಫಗಾರ್ಡ್ಸ ಮತ್ತು ರಿಜರ್ವೇಶನದ ಮಾತುಗಳು. ಆದರೆ ಜವಾಹರರು **ಮಾತ್ರ ನಿಮ್ಮ ನೆಂಟತನವು ಬೇಡ; ಕಂಟ**ಲಿಯನ್ನು ಮಾತ್ರ ಬಿಟ್ಟುಕೊಡಲೆಂದು ಸಾರಿ ಹೇಳುತ್ತಿರುವರು. ಅವರ ನಾಲ್ಕು ತತ್ವಗಳೇ ಈ ಕಂಟಲಿಯು. ಅವು ಯಾವೆಂದರೆ — (೧) ಸೈನ್ಯದ ಮೇಲಿನ ಸ್ವಾಮಿತ್ವ. (೨) ಆರ್ಥಿಕ ಸ್ವಾತಂತ್ರ್ಯ (೩) ರಾಷ್ಟ್ರೀಯ ಸಾಲದ ನಿರ್ಣಯ (೪) ಮಧ್ಯವರ್ತಿ ರಾಜ್ಯಕಾರಭಾರದಲ್ಲಿ ಪೂರ್ಣ ಹೊಣೆಗಾರಿಕೆಯು. ಈ ನಾಲ್ಕು ತತ್ವಗಳನ್ನು ಸಾಹೇಬರು ಭಾರತೀಯರಿಗೆ ಒಪ್ಪಿಸಲು ಸಮ್ಮತಿಸಿದರೆ ಮಾತ್ರ ದುಂಡುಮೇಜಿನ ಪರಿಷತ್ತಿನ ಕಾರ್ಯವು ಯಶಸ್ವಿಯಾಗುವದು. ಇಲ್ಲವಾದರೆ ರಾಷ್ಟ್ರವು ಸಮಾಧಾನ ಹೊಂದದು ಮಹಾತ್ಮನು ಅಸ್ತ್ರಗಳನ್ನು ಹೊರಗೆ ತೆಗೆಯುವದು ಅವಶ್ಯಬೀಳುವದು. ಜವಾಹರನಂತಹ ರಾಜಕಾರಣಜ್ಞರಾದ ಜಟ್ಟಿಗಳು ಪುನಃ ಸಮರಸನ್ನದ್ಧರಾಗುವರು! ಆ ದಿನ ದಿವಸಗಳು ಹೋದವು. ಸಾಹೇಬರ ಸಕ್ಕರೆಯ, ಜೇಲದಂಥ ಸವಿ ಮಾತುಗಳಿಗೆ ಜವಾಹರನಂಥ ಒಂದೇ ಮುತ್ಸದ್ದಿಗಳು ಮರುಳಾಗರು. ಹಿಂದುಸ್ಥಾನಕ್ಕೂ ಇಂಗ್ಲಂಡಕ್ಕೂ ನಿಜವಾದ ಸ್ನೇಹಭಾವವುಳಿಯಬೇಕಾದರೆ, ಜವಾಹರಲಾಲರ ಈ ನಾಲ್ಕು ತತ್ವಗಳಿಗೆ ಒಪ್ಪಿಕೊಳ್ಳುವ ಹೊರತು ಬೇರೆ ದಾರಿಯೇ ಇಲ್ಲ.

ಮಾತಿನ ಮಲ್ಲರು

ಮುಂಬಯಿಯ [illegible] ದ [illegible] ಕ್ಲ ಪೋಲೀಸ ಹಾಗೂ ಜೇಲ ಖಾತೆಗಳ ಮೇಲೆ [illegible] ಲೋಕಲ [illegible] ಪ್ರತಿನಿಧಿಗಳು ತಂದಿದ್ದರು. ಆದರೆ [illegible] ಪ್ರತಿನಿಧಿಗಳು ಬಾಯಿ ಚಪ್ಪರಿಸಿದ ಕೂಡಲೆ ಆ [illegible] ಗಳನ್ನು ಲೋಕಲ ಪ್ರತಿನಿಧಿಗಳು ತಿರುಗಿ ತಕ್ಕೊಂಡರು.! ಈ [illegible] ಬಹು ಮೆಚ್ಚದಿಂದ [illegible] [illegible] ಬೇರೆ ಯಾರೇ [illegible] ಪ್ರತಿನಿಧಿ [illegible] ಎಂಬುದು [illegible] ಲೋಕನಿಯ [illegible] ಯೋಗ್ಯತೆಯು [illegible] ಮುಂದಲದಲ್ಲಿ [illegible] ಬಹುಮತದಿಂದ ನಿರ್ಣಯ [illegible] ಮುಂಬಯಿ [illegible] ಪ್ರತಿನಿಧಿಗಳು [illegible] ಹೇಳಿ ಹಂಗಾ [illegible] ಜೇಲಿನ ವ್ಯವಸ್ಥೆಯ ಬಗ್ಗೆ [illegible] ಕಣ್ಣು ಕಂಡು ಬಂದಿ [illegible] ಇನ್ನು ಮುಂದೆ ವೃತ್ತಪತ್ರಗಳ ಇಂಥ ಸುದ್ದಿಯನ್ನು ನಂಬಕೂಡದು" ಎಂದು [illegible] ಪ್ರತಿನಿಧಿ [illegible] ಉಪದೇಶ ಮಾಡಿದರು. ಇವರ ಉಪದೇಶಕ್ಕೆ ಪ್ರತಿನಿಧಿ [illegible] ಆಥವಾ [illegible] ಸಾಹೇಬ, ಶರ್ಕಾರ್ [illegible] ನಲ್ಲಿದ್ದರೆ ಬೇರೆ ಎಲ್ಲ ಕೈದಿಗಳ ಗೋಳಾಟವು [illegible] ತನ್ನ ಕಣ್ಣು [illegible] ಜಗತ್ತಿನಲ್ಲಿ [illegible] ಕೇಳಲ್ಲವೆಂದು ಕೂಗುವ [illegible] ಒಂದು ವೃತ್ತಪತ್ರವು [illegible] ಬೇರೆ ವೃತ್ತಪತ್ರಗಳ ಬೇಕಿನಲ್ಲಿ [illegible] ಪ್ರತಿನಿಧಿಗಳು ಕಣ್ಣು ತೆರೆದು ನೋಡಲಿ.

[illegible] ಶಾಸನ ಸಭೆಯೂ

ತುಂಗಭದ್ರಾ ಆಣೆಕಟ್ಟೂ

(ಸ್ವಂತ [illegible])

[illegible] ಶಾಸನ ಸಭೆಯ [illegible] ಗಳನ್ನು [illegible] ಆಣೆಕಟ್ಟ [illegible] ತುಂಗಭದ್ರಾ [illegible] ಪ್ರಶ್ನೆ [illegible] ಆಣೆಕಟ್ಟುಗಳಿಂದ [illegible] ಈ ಆಣೆಕಟ್ಟನ್ನು [illegible] ಹೇಳಿದರು.

[illegible] ಗೋಕಾಕ [illegible] ಈ ಪ್ರೊಜೆಕ್ಟುಗಳನ್ನು [illegible] ಯೋಗ್ಯತೆಯಲ್ಲಿ [illegible] ಜನರ [illegible] ಮಾಡಿದರೆ [illegible] ಈ ಪ್ರೊಜೆಕ್ಟಿಗೆ ಬೇಕಾಗುವ ೧೫ ಕೋಟಿ ರೂಪಾಯಿಗಳನ್ನು ಈ [illegible] ಹೇಳಿದರು. [illegible] ತುಂಗಭದ್ರಾ ಪ್ರೊಜೆಕ್ಟ [illegible] ಈ [illegible] ಈ ಪ್ರೊಜೆಕ್ಟ (ಆಣೆಕಟ್ಟು) [illegible] ಹೇಳಿದರು.

ಕಾಳಾರಾಮ ದೇವಾಲಯ ಸತ್ಯಾಗ್ರಹ

[illegible] ಪ್ರವೇಶ [illegible] ನಾಸಿಕದಲ್ಲಿಯ ಅಸ್ಪೃಶ್ಯಜನರು ಸತ್ಯಾಗ್ರಹ ಪ್ರಾರಂಭಿಸಿದ್ದರಷ್ಟೇ. [illegible] ಆ ಸತ್ಯಾಗ್ರಹವು [illegible] ದೇವಾಲಯದ ದ್ವಾರಗಳನ್ನು [illegible] ಪೋಲೀಸರು [illegible] ಮಾಡುತ್ತಿದ್ದರು. ಅಸ್ಪೃಶ್ಯಜನರ [illegible] ಡಾ. ಅಂಬೇಡಕರ [illegible] ಗಾಂಧಿಯವರನ್ನು ಮುಂಬಯಿಯಲ್ಲಿ ಕಂಡರು. ಈ ಸಂಬಂಧವಾಗಿ [illegible] ಚರ್ಚೆ ಮಾಡಿದರು.

ಚರ್ಚಿಲ್ಲರು ಚಡಪಡಿಸಿದರು.

ಲಂಡನ ಆ [illegible] ಇಂಡಿಯಾ [illegible] ಸೊಸಾಯ [illegible] ಸಭೆ [illegible] ಈ [illegible] ಭಾಷಣ ಮಾಡಿ [illegible] ಹಿಂದುಸ್ಥಾನದ ಪ್ರಭುತ್ವ [illegible] ದರು.

[illegible] (ಕಾನ್ಸ್ಟಿ [illegible]) [illegible] ಹಿಂದುಸ್ಥಾನದ [illegible] ಪ್ರತಿನಿಧಿ [illegible] ಬ್ರಿಟಿಶ [illegible] ಅವರ [illegible] ಪ್ರತಿಭಟ [illegible] ಬ್ರಿಟಿಶರ ಪ್ರಭುತ್ವ [illegible] ಸಂಘ [illegible]

ಅವರ ಭಾಷಣ [illegible] ಹಿಂದುಸ್ಥಾನಕ್ಕೆ [illegible] ಜನತಾಜನಾರ್ದನನ [illegible] ಸಂರಕ್ಷಣೆ, ಬ್ರಿಟಿಶರ [illegible] ಈ ಸಂಬಂಧ [illegible] ಭಾಷಣ ಮಾಡ [illegible] ಅವರು ಗಾಂಧಿ [illegible] ಚರ್ಚಿಲ್ಲರ [illegible] ಅಧಿಕಾರಿಗಳು ಅವರಿಗೆ ಅಪ್ಪ [illegible] ಲ್ಲ.

ಹಿಂದೀ ದುಂಡುಮೇಜಿನ ಪರಿಷತ್ತು

[illegible] ಹಿಂದುಸ್ಥಾನದಲ್ಲಿ [illegible] ಕೂಡಲೆ, ಹಿಂದೀ ದುಂಡುಮೇಜಿನ [illegible] ಅಧಿವೇಶನವು [illegible] ಈ ಪರಿಷತ್ತು [illegible] ಕಾಂಗ್ರೆಸ್ [illegible] ಹಿಂದೀ ಪ್ರತಿನಿಧಿಗಳೂ [illegible] ಕಾಂಗ್ರೆಸದಿಂದ [illegible] ಜನ ಪ್ರತಿನಿಧಿಗಳು [illegible] ಹಿಂದೀ ವ್ಯಾಪಾರಿ [illegible] ಶ್ರೀ ಬಿರ್ಲಾ, [illegible] ದಾಸ [illegible] ಹೋಗುವರು.

ಇಜಿಪ್ತದಲ್ಲಿ

ಸ್ವದೇಶೀ ಚಳವಳಿ

ಸ್ವದೇಶಿ [illegible] ಜನ [illegible] ಇಜಿಪ್ತ [illegible] ಸ್ವದೇಶಿ [illegible] ಕೈಕೊಂಡಿದ್ದಾರೆ [illegible] ಯುರೋಪಿಯನ್ [illegible] ಬಹಿಷ್ಕಾರ [illegible]

ದಿಲ್ಲಿಯಲ್ಲಿ

ಹಿಂದೂ — ಮುಸಲ್ಮಾನರಲ್ಲಿ ಚರ್ಚೆ

ಮುಸಲ್ಮಾನ ಮುಖಂಡರಲ್ಲಿ ಮತಭೇದ

(ತಂತಿಯ ವಾರ್ತೆ, ತಾ॥ ೨೧)

ಮಹಾತ್ಮಾ ಗಾಂಧಿಯವರು ನಿನ್ನಿನ ದಿವಸ ಸೀಖರಾಗು ಹಿಂದೂ ಶಿಷ್ಟ ಮಂಡಳದವರಿಗೆ ಭೆಟ್ಟಿಕೊಟ್ಟು, ಜಾತೀಯ ಪ್ರಶ್ನೆಗಳ ಸಂಬಂಧವಾಗಿ ಅವರೊಡನೆ ವಿಚಾರ ವಿನಿಮಯ ಮಾಡಿದರು. ಮುಸಲ್ಮಾನ ಮುಖಂಡರಾದ ಮಹಮ್ಮದ ಇಕಬಲ್, ಡಾ. ಅನಸಾರಿ, ಮೌಲಾನಾ ಶೌಕತ ಅಲ್ಲಿ ಇವರು ಜಾತಿಯ ಪ್ರಶ್ನೆಯ ಸಂಬಂಧವಾಗಿ ಬೇರೆ ಬೇರೆ ಅಭಿಪ್ರಾಯವುಳ್ಳವರಾಗಿದ್ದರಿಂದ ಅವರಲ್ಲಿಯೇ ಮತಭೇದವಾಗಿದೆ. ಮಾಡರ್ನ ರಿವ್ಯೂ ಪತ್ರಿಕೆಯ ಸಂಪಾದಕರಾದ ಶ್ರೀ ರಮಾನಂದ ಚಟರ್ಜಿಯವರೇ ಹಿಂದೂ ಶಿಷ್ಟಮಂಡಳದ ಮುಖಂಡತ್ವವನ್ನು ವಹಿಸಿಕೊಂಡಿದ್ದರು.

ಕಲಕತ್ತೆಯಲ್ಲಿ

ಕೆಂಪು ಪತ್ರಿಕೆಗಳ ಸುರಿದಾಟ

ಮಹಾತ್ಮರ ಮಾತು ಕೇಳಬೇಡಿರಿ

ತಾ॥ ೧೭ನೆಯ ದಿವಸ ಕಲಕತ್ತೆಯಲ್ಲಿ ಕೆಲವು ಕೆಂಪು ಹಸ್ತಪತ್ರಿಕೆಗಳು ಅಲ್ಲಲ್ಲಿ ಅಂಟಿಸಲ್ಪಟ್ಟಿದ್ದವು. ಅಧಿಕಾರಿಗಳ ಕೊಲೆ ಮಾಡಲು ಪ್ರಯತ್ನಿಸಿ ನಿಷ್ಫಲ ಹೊಂದಿ ಆತ್ಮಹತ್ಯ ಮಾಡಿಕೊಂಡ ಶ್ರೀ ವಿನಯ ಬೋಸರ ಭಾವಚಿತ್ರವು ಹಸ್ತ ಪತ್ರಿಕೆಗಳ ಮೇಲೆ ಮುದ್ರಿಸಲ್ಪಟ್ಟಿತ್ತು. ಬಂಗಾಲದ ಕರುಣಾಜನಕ ಚಿತಗಾಂಗ ದಾಳಿ, ಡಾಕಾ ಅತ್ಯಾಚಾರ ಮೊದಲಾದವುಗಳನ್ನು ಮರೆಯತಕ್ಕದ್ದಲ್ಲವೆಂದೂ, ಪ್ರತಿಪಕ್ಷದವರ ಮೋಹಕ ಮಾತಿಗೆ ಮರುಳಾಗಿ ಅವರ ಬಲೆಯಲ್ಲಿ ಸಿಕ್ಕಿರುವ ಮಹಾತ್ಮಾ ಗಾಂಧಿಯವರಂತಹ ದೇಶಘಾತಕರ ಮಾತು ಕೇಳತಕ್ಕದ್ದಲ್ಲವೆಂದೂ, ಹಸ್ತ ಪತ್ರಿಕೆಗಳಲ್ಲಿ ಉಲ್ಲೇಖಿಸಲ್ಪಟ್ಟಿತ್ತು.

ಜಬಲಪೂರ ಜೇಲಿನಲ್ಲಿ

ಹುಲಿಯ ಸಂಗಡ ಕುಸ್ತಿ.

ಜಬಲಪೂರ ಜೇಲದ ಮುಖ್ಯ ವಾರ್ಡರನು ತಾ॥ ೧೭ ನೆಯ ದಿವಸ ಮಧ್ಯಾಹ್ನದಲ್ಲಿ ೩ ಗಂಟೆಯ ಸುಮಾರಕ್ಕೆ ತನ್ನ ನಾಯಿಯನ್ನು ಹುಡುಕುತ್ತ ಹುಡುಕುತ್ತ ಅಲ್ಲಿ ಬಳಿಯಲ್ಲಿರುವ ತೋಟದಲ್ಲಿ ಹೊಕ್ಕನು. ಅಲ್ಲಿ ಅವನ ನಾಯಿಯು ಸತ್ತು ಬಿದ್ದಿತ್ತು. ತನ್ನ ನಾಯಿಯು ಸತ್ತುಹೋದಬಗ್ಗೆ ದುಃಖಪಡುತ್ತ ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತುಕೊಂಡನು. ಅಷ್ಟರಲ್ಲಿ ಒಂದು ಹುಲಿಯು ಗುಡುಗು ಹಾಕಿದ್ದು ಅವನಿಗೆ ಕೇಳಬಂತು. ಸುತ್ತಲೆಲ್ಲ ನೋಡಿದನು. ಒಂದು ಪೊದೆಯಲ್ಲಿ ಹುಲಿಯು ಹಣಿಕಿ ಹಾಕುತ್ತಿದ್ದದ್ದು ಅವನಿಗೆ ಕಂಡುಬಂತು. ಅವನು ಆ ಪೊದೆಯ ಹತ್ತರ ಹೋಗಿ, ಅದಕ್ಕೆ ತನ್ನ ಕೈಯಲ್ಲಿಯ ಬಡಿಗೆಯಿಂದ ಒಂದು ಪೆಟ್ಟು ಕೊಟ್ಟನು. ಹುಲಿಯು ಅವನ ಮೇಲೆ ಹಾರಿ ಅವನನ್ನು ಗಾಯಪಡಿಸಿ ಕೆಳಕ್ಕೆ ಕೆಡವಿತು. ವಾರ್ಡರನು ಹುಲಿಯ ಸಂಗಡ ಗುದ್ದ್ಯಾಡಹತ್ತಿದನು. ಆದರೂ ಹುಲಿಯ ಕೈಯಿಂದ ಪಾರಾಗಿ ಬರುವದು ಅವನಿಗೆ ದುಸ್ತರವಾಯಿತು. ಜಗ್ಗೆ ಚೀರಿದನು ಧನಿಯನ್ನು ಕೇಳಿ ಬಳಿಯಲ್ಲಿದ್ದ ಕೈದಿಗಳು ಜಗ್ಗೆ ಸಪ್ಪಳ ಮಾಡಿ ಹುಲಿಯನ್ನು ಓಡಿಸಿದರು. ಹುಲಿಯು ಬಳಿಯಲ್ಲಿರುವ ಎಂಜಿನ್ ಹಾಯಸ್ಕೂಲಿನ ಕಂಪೌಂಡಿನಲ್ಲಿ ಓಡಿಹೋಯಿತು. ವಿದ್ಯಾರ್ಥಿಗಳು ಹುಲಿಯನ್ನು ನೋಡಿ ಗಾಬರಿಗೊಂಡರು. ಅದು ಹೊಸ್ತಿಲದ ಕಿಡಕಿಯೊಳಗಿಂದ ಪಾರಾಗಿ ಹೋಗುತ್ತಿರುವಾಗ ಮಿಸಾಮಿದಾರನವರು ಅದಕ್ಕೆ ಗುರಿಯಿಟ್ಟು ಗುಂಡು **ಹೊಡೆದು, ಅದನ್ನು ಕೊಂದೊಗೆದರು.**

ಕರಾಚಿ ಕಾಂಗ್ರೆಸದ

ಪೂರ್ವ ಸಿದ್ಧತೆ.

ಕರಾಚಿ ಕಾಂಗ್ರೆಸದ ಸಿದ್ಧತೆಯು ಜೋರಿನಿಂದ ನಡಿದಿದೆ. ಕಾಂಗ್ರೆಸದ ಮಹಾದ್ವಾರಗಳು ಹಾಗೂ ವಿಷಯನಿಯಾಮಕ ಮಂಡಳದ ಮಂಟಪವು ಸಂಪೂರ್ಣವಾಗಿ ಸಿದ್ಧವಾಗಿದೆ. ಖಾದಿ ಪ್ರದರ್ಶನವು ತಾ॥ ೨೦ಕ್ಕೆ ತೆರೆಯಲ್ಪಡತಕ್ಕದ್ದಿದೆ.

ಸ್ಥಳಿಕ ಮುನಿಸಿಪಾಲಟಿಯವರು ಕಾಂಗ್ರೆಸ್ ಅಧಿಕಾರಿಗಳಿಗೆ ಅವಶ್ಯವಿದ್ದ ಸಹಾಯ ಮಾಡುತ್ತಿದ್ದಾರೆ. ಮಂಟಪದಲ್ಲಿ ಧ್ವನಿವಾಹಕ ಯಂತ್ರಗಳು ಇಡಲ್ಪಟ್ಟಿವೆ. ರಾಷ್ಟ್ರಧ್ವಜವಂದನೆಯ ಸಮಾರಂಭಕ್ಕಾಗಿ ಮಂಟಪದ ಮಧ್ಯದಲ್ಲಿ ಒಂದು ದೊಡ್ಡ ಸ್ತಂಭವು ನಿಲ್ಲಿಸಲ್ಪಟ್ಟಿದೆ. ಈ ಮಂಟಪದಲ್ಲಿ ಸಾಧಾರಣವಾಗಿ ೧ ಲಕ್ಷ ಜನರು ಹಿಡಿಯಬಹುದು.

ಅಖಿಲ ಭಾರತ ರಾಜಕೈದಿಗಳ ಪರಿಷತ್ತು ಮಾರ್ಚ ೩೧ ಹಾಗೂ ಏಪ್ರಿಲ ೧ ಈ ತಾರೀಖುಗಳಲ್ಲಿ ಶ್ರೀ ಸುಭಾಷಚಂದ್ರರ ಅಧ್ಯಕ್ಷತೆಯಲ್ಲಿ ಸೇರುವದು. ಈ ವರ್ಷ ಸುಮಾರು ೫೦,೦೦೦ ಜನರು ಪ್ರೇಕ್ಷಕರಾಗಿ ಬರುವರೆಂದು ತರ್ಕ ಮಾಡಲ್ಪಟ್ಟಿದೆ. ಕರಾಚಿ ಕಾಂಗ್ರೆಸಕ್ಕೆ ಬರುವ ತಮ್ಮ ಜಾತಿಯ ಪ್ರತಿನಿಧಿ ಹಾಗೂ ಪ್ರೇಕ್ಷಕರಿಗೆ ಲೋಹಾಣಾ ಸಮಾಜದವರು ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಮಾಡಿದ್ದಾರೆ.

[illegible]

ನೀರಾವರಿ ಖರ್ಚು.

ಬೆಳಗಾವಿ ಜಿಲ್ಹೆಯ ಪ್ರತಿನಿಧಿಗಳಾದ ರಾ. ಬ. ಎಸ್. ಎನ್. ಅಂಗಡಿಯವರು ಕಾಯಿದೇಮಂಡಳದಲ್ಲಿ ಪ್ರಶ್ನೋತ್ತರ ನಡೆದಾಗ ಸಿಂಧ, ಗುಜರಾಥ, ಡೆಕ್ಕನ್ ಮತ್ತು ಕರ್ನಾಟಕ ಈ ಭಾಗಗಳಲ್ಲಿ ನೀರಾವರಿಗೋಸ್ಕರ ಎಷ್ಟೆಷ್ಟು ಹಣ ವೆಚ್ಚವಾಗಿದೆಯೆಂಬದಾಗಿ ಪ್ರಶ್ನೆ ಕೇಳಿದರು.

ಸರ್ ಗುಲಾಮ ಹುಸೇನ ಹಿದಾಯತುಲ್ಲಾರವರು ಹೀಗೆ ಉತ್ತರಕೊಟ್ಟರು. ೧೯೨೯-೩೦ ಈ ವರ್ಷದಲ್ಲಿ ನೀರಾವರಿಗೋಸ್ಕರ ಕೆಳಗಿನಂತೆ ಹಣ ವೆಚ್ಚ ಮಾಡಲಾಗಿದೆ.

ಲಾಯಿಡ್ ಬ್ಯಾರೇಜ	೧೭,೫೦,೫೯೯೫೫
ಇತರ ಕೆಲಸಕ್ಕಾಗಿ	೪,೪೯,೦೯೮೪೯
	೧೭,೯೯,೬೯೮೪೪
ಗುಜರಾಥ	೨೪,೪೮,೩೫೯
ಡೆಕ್ಕನ್	೯,೭೬,೦೫೩೧೦
ಕರ್ನಾಟಕ	೨೨,೫೫೫೯೨

[illegible]

ಸ್ವಯಂಸೇವಕರ ಸತ್ಯಾಗ್ರಹ.

ಕಾಂಗ್ರೆಸ ಸ್ವಾಗತ ಕಮೀಟಿಯವರು ತಮ್ಮನ್ನು ಕಾಂಗ್ರೆಸಕ್ಕೆ ಪುಕ್ಕಟೆ ಬಿಡಲು ನಿರಾಕರಿಸಿದ್ದಕ್ಕಾಗಿ ಕೆಲವು ಸ್ವಯಂಸೇವಕರು ಅವರ ಮೇಲೆ ಸಿಟ್ಟಿಗೆದ್ದು, ತಾ॥ ೧೭ ನೆಯ ದಿವಸ ಸ್ವಾಗತ ಸಭೆಯ ಅಧ್ಯಕ್ಷರಾದ ಡಾ. ಗಿದವಾನಿಯವರ ಕಚೇರಿಯ ಮುಂದೆ ಪಿಕೆಟಿಂಗ ಮಾಡಿದರು. ಅವರು ಡಾಕ್ಟರರನ್ನು ಮುತ್ತಿ ಅವರ ಕೈಗಳನ್ನು ಕಾಲುಗಳನ್ನು ಗಟ್ಟಿಯಾಗಿ ಹಿಡಿದು ಅವರನ್ನು ಎಷ್ಟೋ ಗಂಟೆಗಳ ವರೆಗೆ ನಿಂತಲ್ಲಿಯೇ ನಿಲ್ಲಿಸಿದರು. ಈ ಸುದ್ದಿಯು ಊರೆಲ್ಲೆಲ್ಲ ಹಬ್ಬಿದ್ದರಿಂದ ಜನರು ಗುಂಪುಗುಂಪಾಗಿ ಅಲ್ಲಿಗೆ ಬಂದು, ಸ್ವಯಂಸೇವಕರನ್ನು ಬೆನ್ನಟ್ಟಿಸಿದರು

ಉಪ್ಪಿನ ಸ್ವಾತಂತ್ರ್ಯಕ್ಕೆ ಗುಜರಾಥದಲ್ಲಿ ಗದೆ

(ತಂತಿ ವಾರ್ತೆ, ತಾ॥ ೨೧)

ಗುಜರಾಥ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ ಪುಢಾರಿ ದರಬಾರ ಗೋಪಾಲದಾಸರು [illegible] ಮಹಾತ್ಮಾ ಗಾಂಧಿಯವರ ಕರಾರಿನಂತೆ, ಉಪ್ಪಿನ ಕ್ಷೇತ್ರದಿಂದ ಒಂದು ಮೈಲು ಅಂತರದಲ್ಲಿರುವ ಹಳ್ಳಿಗಳವರಿಗೇ ಉಪ್ಪಿನ ಸ್ವಾತಂತ್ರ್ಯ [illegible] ಸರಕಾರದವರು [illegible] ಅದಕ್ಕೆ ಒಪ್ಪಿದಲ್ಲಿ [illegible] ಉಪ್ಪಿನ ಸ್ವಾತಂತ್ರ್ಯ [illegible] ಹೀಗೆ ಉಪ್ಪಿನ ಸ್ವಾತಂತ್ರ್ಯ [illegible] ದಂತಕಥಾ, ತೀರದಾರೆ.

ಮದ್ರಾಸ ಇಲಾಖೆಯಲ್ಲಿ ಖೋಂಡ ಜನರ ಬಂಡು

(ತಂತಿಯ ವಾರ್ತೆ ತಾ॥ ೨೧)

ಮದ್ರಾಸ ಇಲಾಖೆಗೆ ವಿಜಗಪಟ್ಟಣ ಜಿಲ್ಹೆಯಲ್ಲಿಯ ಖೋಂಡ ಜನರು, [illegible] ಗುಡ್ಡಗಾಡು ಪ್ರದೇಶದಲ್ಲಿ ವಸಿಸುತ್ತಿದ್ದಾರೆ. ಅಧಿಕಾರಿಗಳ ಮೇಲೆ ಒಂದು ಬಂಡಿನಲ್ಲಿ ಅವರು [illegible] ಬಿಲ್ಲು, ಬಾಣ, [illegible] ಮಾಡಿಕೊಂಡಿದ್ದಾರೆ. [illegible] ಜನರಲ್ಲಿ [illegible] ಪೊಲೀಸರೊಂದಿಗೆ ಅಲ್ಲಿಗೆ ಹೊರಟಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿ

ಹಿಂದೂ—ಮುಸಲ್ಮಾನರಲ್ಲಿ ದಂಗೆ

೧೨ ಜನ ಗತ[illegible] ಇಬ್ಬರಿಗೆ ಗಾಯ

ಮಿರ್ಜಾಪುರದಿಂದ ೮೦ ಮೈಲು ದೂರದಲ್ಲಿರುವ [illegible] ಪಲ್ಲಿ, ತಾ॥ ೧೯ [illegible] ಈ ದಿವಸ ಹಿಂದೂ ಮುಸಲ್ಮಾನರಲ್ಲಿ ಜಗಳವಾಗಿ, ೧೨ ಜನರು [illegible] ಗಾಯ ಹೊಂದಿದ್ದಾರೆ. [illegible] ಹಿಂದೂ ಗೃಹಸ್ಥರಿಗೆ [illegible] ಕಾಣಿಕೆಯಾಗಿ ಕಳಿಸಿದ್ದೇ ಈ ದಂಗೆಗೆ ಕಾರಣ ಎಂದು ಹೇಳಲಾಗಿದೆ. [illegible] ಹಿಂದೂ ಜನರು [illegible] ಬರ್ಚಿ, ಲಾಠಿ ಮೊದಲಾದವುಗಳಿಂದ ಸಜ್ಜಾಗಿ [illegible] ಹಾಗು ಕೆಲವು [illegible] ಮನೆಗಳ ಮೇಲೆ [illegible] ಕೊಂದು [illegible] ಬೆಂಕಿ ಹಚ್ಚಿದರು.

[illegible] ಸಶಸ್ತ್ರ ಪೊಲೀಸರು ಕಳಿಸಲ್ಪಟ್ಟಿದ್ದು, ಸದ್ಯಕ್ಕೆ [illegible] ಶಾಂತವಾಗಿದೆ.

ಬೆಳಗಾವಿಯಲ್ಲಿ ಭೂತಚೇಷ್ಟೆ

ಬೆಳಗಾವಿಯ ರಾ [illegible] ದಿನಗಳಿಂದ ಪ್ರತಿದಿವಸವೂ [illegible] ಕಲ್ಲುಗಳು [illegible] ತಿಳಿಯದಾಗಿದೆ. [illegible] ಬಂದೋಬಸ್ತು [illegible] ಅಪರಾಧಿಗಳನ್ನು ಹಿಡಿಯಲು ಪ್ರಯತ್ನಮಾಡಿದ್ದು. ಆದರೆ ಬಂದೋಬಸ್ತಿನ ಕಲ್ಲುಗಳ ವಾದ ಕೂಡಲೆ ಮೊದಲಿನಕಿಂತಲೂ ದೊಡ್ಡ ದೊಡ್ಡ ಕಲ್ಲುಗಳು ಬೀಳಹತ್ತಿದವು. ಅಂದಿನಿಂದ ಅಪರಾಧಿಗಳನ್ನು ಕಂಡು ಹಿಡಿಯಲು ಪೊಲೀಸರು ಪ್ರಯತ್ನ ಮಾಡಹತ್ತಿದ್ದಾರೆ. ತಾ॥ ೧೫ ನೆಯ ದಿವಸ ಹೋಮ ಇನಸ್ಪೆಕ್ಟರ [illegible] ಪೊಲೀಸರೊಂದಿಗೆ ಅಲ್ಲಿಗೆ ಹೋಗಿ [illegible] ಆದರೆ ಕಲ್ಲುಗಳು ಬೀಳಲಿಲ್ಲ. ಇದು ಭೂತಗಳ ಚೇಷ್ಟೆಯಾಗಿದೆಯೆಂದು ಕೆಲವರು ತಿಳಿಕೊಳ್ಳುತ್ತಿದ್ದಾರೆ.

ಹಿಂದೂ—ಮುಸಲ್ಮಾನರ [illegible]

ಹಿಂದೂ—ಮುಸಲ್ಮಾನರ [illegible] ದಿಲ್ಲಿಯಲ್ಲಿ [illegible] ಮಹಾತ್ಮಾ ಗಾಂಧಿಯವರೊಡನೆ ಜಾತಿ ಜಾತಿಗಳ [illegible] ಅಖಿಲ ಭಾರತ [illegible], ಅಖಿಲ ಭಾರತ ಖಿಲಾಫತ ಸಭೆ, ರಾಷ್ಟ್ರೀಯ ಮುಸಲ್ಮಾನರ ಸಂಘ, [illegible] ಸಿಖರ ಪಕ್ಷ, [illegible] ಮೌಲಾನಾ [illegible], ಸರ್ ಮಹಮ್ಮದ ಇಕಬಲ್, ಮೌಲಾನಾ ಶೌಕತ ಅಲ್ಲಿ, ಬೇಗಮ್ ಶಹಾ ನವಾಜ, ಸರ್ ಶಂಕರನ್ ನಾಯರ್, ಸರ್ ಹರಿಸಿಂಗ ಗೌರ, ಭಾಯಿ ಪರಮಾನಂದ, ಮಹಮ್ಮದ ಅಲಿ, ಮಾಸ್ಟರ ತಾರಾಸಿಂಗ, ಡಾ. ಕಿಚಲೂ, ಡಾ. ಸತ್ಯಪಾಲ ಮೊದಲಾದ ಮುಖಂಡರು ಈ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವರಿದ್ದಾರೆ.

[illegible] ನಿನ್ನಿನ ದಿವಸವೇ ಇಲ್ಲಿಗೆ ಬಂದಿದ್ದು ಹಿಂದೂ—ಮುಸಲ್ಮಾನರಲ್ಲಿ ಹೇಗೆ ಒಡಂಬಡಿಕೆ [illegible] ಮಾಡಬೇಕೆಂಬ ವಿಷಯವಾಗಿ ಸ್ಥಳಿಕ ಮುಸಲ್ಮಾನ ಮುಖಂಡರೊಡನೆ ಅವರು ಚರ್ಚೆ ನಡಿಸಿದ್ದಾರೆ. [illegible] ಸಾಂಘಿಕ [illegible] ತಮ್ಮ [illegible] ಮೇಲೆ [illegible], ಜನರ ತಿಂಗಳದ ಮೊದಲನೆಯ ವಾರದಲ್ಲಾಗಲಿ ಪ್ರಾರಂಭಿಸುವವರಿದ್ದಾರಾಗಿ ತಿಳಿದು ಬರುತ್ತದೆ.

ಮಿ. ಜಿನ್ನಾರವರು ಒಂದು ಪ್ರಕಟನೆಯನ್ನು ಹೊರಡಿಸಿ, ತಮ್ಮ [illegible] ಎಲ್ಲ ದೇಶಿಗಳಿಗೂ ಪರಿಷತ್ತಿನಲ್ಲಿ ಒಪ್ಪಿಗೆ ಸಿಕ್ಕದಿಯೆಂದೂ, ಮತಭೇದವಿದ್ದಲ್ಲಿ ಮಧ್ಯಸ್ಥಿಕೆ [illegible] ಮಂಡಳದಲ್ಲಿ ಮುಸಲ್ಮಾನ [illegible] ಸಂಘ [illegible] ಮತಭೇದವಿದೆ [illegible] ಅಲ್ಪಸಂಖ್ಯಾತ [illegible] ದೇಶಿಕರಿಗೆ ಹಿಂದೂ [illegible] ಒಡಂಬಡಿಕೆಯಾಗುವ ಸಂಭವವಿದೆ [illegible] ಪ್ರ [illegible] ಮಹಾತ್ಮಾ ಗಾಂಧಿಯವರಿಗೆ ಕಳಿಸಿದ್ದಾರೆ.

ಸೇವಾದಲ ವ್ಯಾಯಾಮ ವಿದ್ಯಾಪೀಠದ ಪ್ರವೇಶ ಸಮಾರಂಭವು ನಿನ್ನಿನ ದಿವಸ ೬ ಗಂಟೆಗೆ ಯಥಾ ವಿಜೃಂಭಣೆಯಿಂದ ನೆರವೇರಿತು. ಸಂಜೆಯ ೪ ಗಂಟೆಗೆ ಲಾಲಾಜಿ ಚೌಕಿನಿಂದ ರಾಷ್ಟ್ರಧ್ವಜ ಮೆರವಣಿಗೆಯು ವಾದ್ಯವೈಭವದೊಂದಿಗೆ ಹೊರಟು, ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು, ಸೇವಾದಲಕ್ಕೆ ತಲುಪಿತು. ಅಲ್ಲಿ ಸಮಾರಂಭವಾಗಿ ರಾಷ್ಟ್ರಧ್ವಜಾರೋಹಣವಾಯಿತು. ಶ್ರೀ. [illegible] ಗುರುರಾಯರ ಸಮಯೋಚಿತವಾದ ಭಾಷಣವಾಯಿತು

ಜಾಹೀರಾತುದಾರರಿಗೆ

ಒಳ್ಳೆ ಸುಸಮಯ

ಕಾಲನ ಯುಗಾದಿಯಿಂದ "ಕನ್ನಡಿಗ" ನ ನಿತ್ಯಸಂಚಿಕೆಯು ಆಕಾರವನ್ನು ಈಗಿನ ಕಿಂತ ದೊಡ್ಡದಾಗಿ ಮಾಡುವೆವು ಅದರ ಪ್ರಚಾರವು ಮೊದಲಿನಕಿಂತಲೂ ಹೆಚ್ಚಾಗಿದೆ. ಆಯಾಂ ಜಾಹೀರಾತ ದಾರರು ದೊರೆ ಯುವವರಿಗೆ ಕೆಲವು ದಿನಗಳವರೆಗೆ ಅತಿ ಸೋವಿ ದರದಿಂದ ಜಾಹೀರಾತು ಮುದ್ರಿಸುವೆವು. ಇಷ್ಟವುಳ್ಳವರು ತ್ವರೆಮಾಡಬೇಕು. ದರ ಮೊದಲಾದವುಗಳ ಬಗ್ಗೆ ಸವಿಸ್ತರ ಅಥವಾ ಪತ್ರ ದ್ವಾರದಿಂದ ಕೇಳಿರಿ ಕೊಳ್ಳಬೇಕು.

ವ್ಯವಸ್ಥಾಪಕ

"ಕನ್ನಡಿಗ", ಬಾಗಲಕೋಟೆ.

ಸ್ಯಾಂಪಲ್ಸ್ ಮಣಿ ಚೀಟಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳ ಮಣಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಗಳಿಗೆ ೨—೦—೦

೧ ಸಾವಿರ ಚೀಟಗಳಿಗೆ, ೩-೮-೦

೫ ಸಾವಿರಕ್ಕ, ೧೬-೦-೦ ರೇಲ್ವೆ ಫ

೫ ತೊಲಾ ಬಾಟಲಿಗಳಿಗೆ ೧-೦-೦

ಟೈಪರ ಸ್ಟ್ಯಾಂಪ ಮಶಿ ೬ ಔಂಸಿನ ೧-೦-೦
೧ ಡಜನ ಬಾಟ್ಲಿಗೆ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಕಾಲಾನುಕ್ರಮ ಪದ್ಧತಿ	೧-೦-೦

("ಟೆಸ್ಟ್ ಬುಕ್" ಮಂಜೂರಾಗಿದ್ದು)

ಇದಲ್ಲದೆ ಅನ್ಯತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ವಿಜಾಪುರದಿಂದ ಪಂಢರಪೂರ ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೬॥ ಗಂಟೆಗೆ ಹೊರಟು, ಜಡಚಣ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರ ಕೆಳಗಿನ ವಿಳಾಸದ ಮೇಲೆ ಕೇಳುಗಿ ಸಮಕ್ಷಮ ಬಂದು ಕೇಳಕೊಳ್ಳ ಬೇಕು. ಮ್ಯಾನೇಜರ.

ಅಟೆಲ ಮಹಾಲಕ್ಷ್ಮಿ ಮೋಟರ ಸರ್ವಿಸ ವಿಜಾಪುರ.

ದಾನಿ – ದಾಬಡೆ ಟೇಲರ್ಸ

ನಮ್ಮಲ್ಲಿ ವೇಳಿಗೆ ಸರಿಯಾಗಿ ಉತ್ತಮ ರೀತಿಯಿಂದ ಎಲ್ಲನಮೂನೆಯ ಅರಿವೆಗಳನ್ನು ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ಪರೀಕ್ಷಿಸಿರಿ.

ದಾನಿ—ದಾಬಡೆ

ಟೇಲರ್ಸ

ಬಾಗಲಕೋಟ—ಗ.ಕೇದಗುಡ್ಡ

ಚರಖಾ ಕ್ಲಾಸ.

ಬಾಗಲಕೋಟೆಯಲ್ಲಿ ಚರಖಾ ಕ್ಲಾಸ ಮತ್ತು ಸಣ್ಣ ಪ್ರಮಾಣದ ನೇಯ್ಗೆ ಒಂದು ಔದ್ಯೋಗಿಕ ಶಾಲೆಯನ್ನೇ ನಡಿಸಲ್ಪಡುತ್ತದೆ. ಈ ಶಾಲೆಯಲ್ಲಿ ಬಡಿಗತನವನ್ನು ಹೋಕಬಡಿಸಿ ಹತ್ತಿ ಯ ಕೆಲಸ ಕಲಿಸುವದು, (ಅರಿವೆಯದ) ಅರಳೀ ಹಿಂಜಿ ಸಿಂಜಿ ಮಾಡುವದು, ನೂಲುವದು, ನೂಲಿಗೆ ಬಣ್ಣ ಮಾಡುವದು, ನೇಯುವದ , ಮತ್ತು ಖಾದೀ ಪ್ರಸಾರ ಮಾಡುವದು, ಮುಂತಾದ ವಿಷಯಗಳನ್ನ ಕಲಿಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಊಟಉಡಿಗೆಯ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕು. ಯಾವನಾದರೂ ತಾನು ತೀರ ಬಡವನೆಂದು ಮನವರಿಕೆ ಮಾಡಿಕೊಟ್ಟಲ್ಲಿ ಅವನ ಊಟದ ಬಗ್ಗೆ ಹಣದ ಸಹಾಯವಾಗಲೀ ಊಟದ ಬೇರೆ ವ್ಯವಸ್ಥೆಯಾಗಲೀ ಮಾಡ ಪದರಲ್ಲಿ ಬರುವದು. ಅವರಿಗೆ ಇರಲಿಕ್ಕೆ ಜಾಗೆಯ ವ್ಯವಸ್ಥೆಯನ್ನು ಮಾಡಿಕೊಡಲಾಗುವದು, ವಿದ್ಯಾರ್ಥಿಗಳು ಸಂಘದ ನಿಯಮಗಳಿಗೆ ಒಪ್ಪಬೇಕು.

ಕರ್ನಾಟಕದ ಸೇವೆ ಮಾಡಬೇಕೆನ್ನುವ ಇಚ್ಛೆಯವರು ಈ ಸುಸಂಧಿಯನ್ನು ಕಳೆದು ಕೊಳ್ಳಬಾರದು. ಈ ಸಂಘದಲ್ಲಿ ಕೆಳಗೆ ಬರೆದ ಯಾವತ್ತು ಸಾಮಾನುಗಳು ಮಾರಾಟಕ್ಕೆ ಸಿಗುತ್ತವೆ

೧ ಹತ್ತಿ ಕಾಳು ಬಿಡಿಸುವ ಬಡಿಗೆ (ಲಿ ಟ್ಟರಾಟಿ.

೨ ಅರಳೀ ಹಿಂಜುವ ದೆ.

೩ ಕಾತ (ಬೆಸಿಸುವ ದಾರ)

೪ ಕೈಮಗ್ಗ.

೫ ಶಾಸ್ತ್ರೋಕ್ತ ರೀತಿಯಿಂದ ಸಿದ್ಧಪಡಿಸಿದ ಹಂಜಿ (೬೦ ನಂಬರದ ನೂಲು ತಗಿಯಲಿಕ್ಕೆ ಬರುವಂಥವು

೬ ಕದರು ಮತ್ತು ಖಾದಿ.

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕೂಡ ಪತ್ರವ್ಯವಹಾರದ ಬಗ್ಗೆ ಮುಂಗಡ ಪೋಸ್ಟ ತಿಕೀಟು ಕಳಿಸಬೇಕು.

ಶಾ. ಶಾ ಎಸ ರಾಘವೇಂದ್ರರಾವ ದೇಶಪಾಂಡೆ

ವ್ಯವಸ್ಥಾಪಕ

ಚ ಖಾ ಸಂಘ ಬಾಗಲಕೋಟೆ.

ಸ್ವದೇಶೀ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈನೂಲು, ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ ರೀತಿಯ ಪೇಟ , ಟೋಪಿ, ಕೊಂಬಿನ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಶಾಯಿ ಹಣಮಂತರಾವ

'ಸ್ವದೇಶೀ ಸ್ಟೋರ್ಸ'

ಹೊಸ ಬಜಾರ, ವಿಜಾಪುರ.

ಶುದ್ಧ ಖಾದಿ ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಶಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೋಪ್ಪಿಗಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಖಾದಿಯ ಟೋಪ್ಪಿಗೆಗಳು, ಜರದ ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ದಲ್ಲಾಳ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ

'ಕ್ಯಾಪ ಮೇಕರ' ಮೇನರೋಡ

ವಿಜಾಪುರ

ಪುರಂದರೆಯವರ

ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಅರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು ಟೇಲರಿಂಗದ ಬಗ್ಗೆ ಶಿಕ್ಷಣ ನ್ಯಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ

ಹೊಸಬಜಾರ ವಿಜಾಪುರ

ವಾಸುದೇವ ಪುಸ್ತಕಾಲಯದಲ್ಲಿ

೧ ಸುರತ ನಗರದ ಶ್ರೇಷ್ಠಿ ನಾಟಕ.	೧-೪-೦
೨ ಇಂದಿರೆ (ಸಚಿತ್ರ ಸಾ ಕಾದಂಬರಿ)	೨-೮-೦
೩ ನೀಳ್ಗತೆಗಳು ಭಾಗ ೧.	೧-೪-೦
೪ ಪತಿವಶೀಕರಣ ನಾಟಕ.	೦-೧೨-೦
೫ ಅಬ್ರಹಾಂಲಿಂಕನ್ ಚರಿತ್ರೆ.	೧-೮-೦
೬ ಮಾಧವಕರುಣಾ ವಿಲಾಸ.	೩ ೧೨-೦
೭ ಲಕ್ಷ್ಮೀಬಾಯಿ ಝಾಂಸಿ ಚರಿತ್ರೆ	೨-೦-೦
೮ ಶೈವ ಸುಧಾರ್ಣವ (ಸಚಿತ್ರ)	೩-೮-೦

ಕೆಟಲಾಗಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ

ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟ ಯಂಪೀಸ ದುರುಸ್ತ ಮಾಡುವದಲ್ಲದೆ ವೆಸ್ಟ ಎಂಡ್, ಜೆನಿಥ್, ಓವೆ ಗಾ ಕಂಪನಿಯ ವಾಚ , ಕ್ಲಾಕು, ಟಾಯಂಪೀಸ ಮತ್ತು ಸ್ಪೇರಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೇಶ್ಯಾಲಿಟಿ,

ಬೆಟಗೇರಿ ಬ್ರದರ್ಸ

ಸ್ಟೇಶನ್ ರೋಡ ಹಚ್ಚಳ್ಳಿ ಬಾಗಲಕೋಟೆ.

ಚಂದಾದಾರರಲ್ಲಿ ಬಿನ್ನಹ

ವ್ಹಿ ಪಿ ಗಳನ್ನು ಮೂರೇದಿನಗಳವರೆಗೆ ಇಟ್ಟುಕೊಳ್ಳಬೇಕು. ದಾನಿ ಅಂಚೆ ಖಾತೆಯವರು ಹೊಸನಿಯಮ ಮಾಡಿಕೊಂಡದ್ದರಿಂದ "ಕನ್ನಡಿಗ"ಗಳನ್ನು ವ್ಹಿ ಪಿ ಯಿಂದ ಕಳಿಸುವದು ಸಾಧ್ಯವಿಲ್ಲ. ವ್ಹಿ ಪಿ ಗಳು ತಿರುಗಿ ಬಂದಲ್ಲಿ, "ಕನ್ನಡಿಗ"ನು ವಿನಾಕಾರಣವಾಗಿ ಹಾನಿಗೊಳಗಾಗುವನು ವ್ಹಿ. ಪಿ ಯನ್ನು ಮೂರುದಿನಗಳಿಗಿಂತ ಹೆಚ್ಚಿಗೆ ಇಟ್ಟಕೊಂಡಲ್ಲಿ ಚಂದಾದಾರರಿಗೂ ಹಾನಿಯಾಗುವದು. ಆದ್ದರಿಂದ ಚಂದಾಹಣ ಮುಗಿದವರೆಲ್ಲರೂ ಎಂಜಾಲನಗೆ ಕೊಳಗಾಗಿ ಚಂದಾಹಣವನ್ನು ಮನಿಆರ್ಡರದಿಂದ ಕಳಿಸಿಕೊಡಬೇಕು. ಈ ಚಂದಾ ಹಣವು ಬಾರದಿದ್ದಲ್ಲಿ, ಕನ್ನಡಿಗ, ಕಳಿಸುವವನ್ನು ನಿಲ್ಲಿಸಿ ಬಿಡುವೆವು.

ಹೊಸದಾಗಿ ಚಂದಾದಾರರಾಗಲಿಚ್ಛಿಸುವವರೂ ಮನಿಆರ್ಡರದಿಂದ ಹಣಕಳಿಸಬೇಕು.

ವ್ಯವಸ್ಥಾಪಕ

ಜಾಹೀರಾತಿನ ಸೆಲುವಾ

ಪ್ರಕಾಶಕರು ವೆಂಕಟೇಶ ಶ್ರೀನಿವಾಸಮೂರ್ತಿ ಕೆರೂರ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಪ್ರಕಟಿಸಲ್ಪಟ್ಟಿತು.

೧ ನಂ. ಬ. ೨೭೭೭ ... ...

...ತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥—ಮನು.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ
೧೨ ತಿಂಗಳಿಗೆ ೧೨—೦—೦
೬ ,, ೬—೦—೦
೩ ,, ೩—೦—೦
೧ ,, ೧—೦—೦
ಸ್ಥಳಿಕರಿಗೆ
೧೨ ತಿಂಗಳಿಗೆ ೬—೦—೦
೬ ,, —೦—೦
೩ ,, ೧—೮—೦
೧ ,, ೦—೮—೦

ಕನ್ನಡಿಗ
KANNADIGA
BAGALKOT.
BI-WEEKLY
ಅರೆವಾರ ಪತ್ರಿಕೆ.

ನಿತ್ಯಪತ್ರಿಕೆಯ
ಜಾಹೀರಾತಿನ ದರಗಳು
ಗನ್ನೇಸಲ ೧ ಇಂಚಿಗೆ ೧-೪-೦
... ,, ,, ೧-೦-೦
ಮುಂತೆ ಪ್ರತಿಯೊಂದು ಸಲ
೦-೧೨-೦
ಹೆಚ್ಚಿನವರಿಗೆ ಅಕ್ಷರಗಳ ಪ್ರಮಾಣದಿಂದ ದರಬೀಳುವದು

ಸಂಪಾದಕರು:— ಮಂಗಳವೆಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಮಂಗಳವಾರ ಮಿತಿ ಚೈತ್ರ ಶುದ್ಧ ೫ ಶಕೆ ೧೮೫೩ ತಾ॥ ೨೪—೩—೩೧ [ಸಂಚಿಕೆ ೪

ರಾಯರ ಹರಟೆ

ಮಹಾತ್ಮರ ಹಾಗೂ ವ್ಹಾಯಿಸರಾಯರ ಒಪ್ಪಂದವಾಯಿತು ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ರಾಯರಿಗೆ ಅವರ ಮಿತ್ರರು ಕೇಳಿದರು. ಏನು ಹೇಳೋದು. ಅದೊಂದು ಪಗಡಿಯ ಆಟವಿದ್ದಂತೆ ಪಗಡಿಯಾಟದಲ್ಲಿ ನೋಡಿದರೆ "ನಮಗೇನ ಸೋಲು" ಕಾಯಿಗಳು ಸೋಲುವವು "ಕಾಯಿಗಳು ಗೆಲ್ಲವವು" ಎಂದು ಅನ್ನುವರು. ಮಹಾತ್ಮರ ಹಾಗೂ ವ್ಹಾಯಿಸರಾಯರ ಈ ಆಟದಲ್ಲಿ ಕಾಯಿಗೆ ಬದಲಾಗಿ ಕಾಯಿದೆಗಳು ಸೋತವು ಕಾಯಿದೆಗಳು ಗೆದ್ದವು. ವ್ಹಾಯಿಸರಾಯರ ಉಪ್ಪಿನ ಹಾಗೂ ದಬ್ಬಾಳಿಕೆಯ ಕಾಯಿದೆಗಳು ಸೋತವು. ಮಹಾತ್ಮರ ಶಾಂತಿಮಯ ಸತ್ಯಾಗ್ರಹ ಹಾಗೂ ಬಹಿಷ್ಕಾರದ ಕಾಯಿದೆಗಳು ಗೆದ್ದವು. ಹೀಗೆ ಹೇಳಿ ರಾಯರು ತಮ್ಮ ಹೊಟ್ಟೆಯಲ್ಲಿ ಉಕ್ಕಿ ಬರುತ್ತಿರುವ ಉಬ್ಬಿನಿಂದ ನಕ್ಕರು.

ರಾಯರು ಮಾತಾಡುವದರಲ್ಲಿ ಸ್ವಲ್ಪ ಚತುರರೆಂದು ಅವರ ಮಿತ್ರರು ಅವರಿಗೆ ಮೇಲಿಂದ ಮೇಲೆ ಅನ್ನುವರು. ರಾಯರಿಗೂ ಸ್ವಲ್ಪ ಈ ವಿಷಯದಲ್ಲಿ ಅಭಿಮಾನ. ಮೊನ್ನಿನ ಮಾಘಮಾಸದಲ್ಲಿ ಅವರು ಯಲಗುರೇಶನ ಜಾತ್ರೆಗೆ ಹೋಗಿದ್ದರು. ಅಲ್ಲಿ ಎಲ್ಲರೂ ಎಲೆಗಳನ್ನು ತಯಾರ ಮಾಡಿಕೊಂಡು ಊಟಕ್ಕೆ ಕೂತರು. ಊಟಕ್ಕೆ ಬಡಿಸುವವರೇ ಇಲ್ಲವೆಂದು ಜನರು ಗಲಾಟೆ ಮಾಡುತ್ತಿದ್ದರು ರಾಯರು ಹೀಗೇಕೆ ಆಗಿದೆ ಎಂದು ಕೇಳಲು ಒಬ್ಬ ಆಚಾರ್ಯರು ಮುಂದೆ ಬಂದು ಪಂಕ್ತಿಯಲ್ಲಿ ಕೂಡಬಿದ್ದು ಬಂದ ಜನರು ಬಡಿಸಲಿಕ್ಕೆ ಬಂದ್ದಾರೆ. ಅವರು ಪ್ರಾಯಶ್ಚಿತ್ತ ತೆಗೆದುಕೊಂಡಿಲ್ಲವಾಗಿ ಸಾವು ತಕರಾರು ಮಾಡಿದವು. ಅದಕ್ಕಾಗಿ ಬಿಟ್ಟು ಕೂತಿರುವರು. ಏಳಿರಿ ಆಚಾರ್ಯರೇ ಹಾಗಾದರೆ ನೀವೇ ಬಡಿಸಿರಿ ಎಂದು ರಾಯರು ಅಂದರು. ಆಚಾರ್ಯರು ನಿರ್ವಾಹವಿಲ್ಲದೆ ಎಲ್ಲಿಯೋ ಹೊರಟುಹೋದರು. ಆ ವೇಳೆ ರಾಯರು ಗದ್ದರಿಸಿ 'ಏನು ಸತ್ಯಾಗ್ರಹ ಚಳವಳಿಯಲ್ಲಿ ಜೇಲಿಗೆ ಹೋಗಿ ಬರುವದೆಂದರೆ ಯಾವ ಪಾಪವು. ಅದಕ್ಕೇಕೆ ಪ್ರಾಯಶ್ಚಿತ್ತ! ಸತ್ಯಾಗ್ರಹ ಚಳವಳಿಯೆಂದರೆ ಜನತಾ ಜನಾರ್ದನ ಸೇವೆ. ಇಂಥ ಪುಣ್ಯಕರ್ತರು ಬಂದ ಜನರನ್ನು 'ಹೋಳಿಗೆ ತುಪ್ಪ ಹೊಡಿಯಪ್ಪ' ಎನ್ನುವ ಆಚಾರ್ಯರನ್ನು ದೇವರು ಕೈಹಿಡಿಯಲ್ಲಿ ಕೂಳ ಮಾಡಿದರೆ ಸತ್ಯಾಗ್ರಹಿಗಳೇ ಆಚಾರ್ಯರಿಗಿಂತ ಗುಂಡಿ... ಮೇಲಾಗುವರು. ಊಟಕ್ಕೆ ಕೂಡುವ ... ನಲ್ಲಿ ಏನು ಉಪದ್ವ್ಯಾಪ' ಎಂದು ಒಂದು ಸಣ್ಣ ಭಾಷಣವನ್ನೇ ಮಾಡಿದ್ದರು. ಆ ಮೇಲೆ ಎಲ್ಲರೂ ಊಟ ಮಾಡಿದರು ...

ಕರ್ನಾಟಕದಲ್ಲಿ ರೈತರ ದೈನ್ಯಾವಸ್ಥೆ.

ಶಿರಸಿ, ಸಿದ್ದಾಪುರ, ಹಿರೇಕೆರೂರ ತಾಲೂಕಗಳಲ್ಲಿಯ ರೈತರ ಆರ್ಥಿಕ ಸ್ಥಿತಿಯನ್ನು ಕುರಿತು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಒಂದು ಪತ್ರಿಕೆಯನ್ನು ಪ್ರಕಟಿಸಿದ್ದು, ಅದರಲ್ಲಿ ಕೆಳಗಿನಂತೆ ಉಲ್ಲೇಖಿಸಿದ್ದಾರೆ.

ಶಿರಸಿ, ಸಿದ್ದಾಪುರ, ಹಿರೇಕೆರೂರ ತಾಲೂಕಗಳಲ್ಲಿಯ ರೈತರ ಆರ್ಥಿಕ ಸ್ಥಿತಿಯ ಸಂಬಂಧವಾಗಿ ವಿಚಾರಣೆ ಮಾಡಲು ಒಂದು ಮಂಡಳವು ನಿಯಮಿಸಲ್ಪಟ್ಟಿತ್ತು. ಆ ಮಂಡಳದವರು ಈಗ ತಮ್ಮ ವರದಿ ಒಪ್ಪಿಸಿದ್ದು, ಅಲ್ಲಿಯ ರೈತರು ಭೂಕಂದಾಯವನ್ನು ಕೊಡಲು ನಿಜವಾಗಿಯೂ ಅಸಮರ್ಥರಿರುವರೆಂದು, ಅವರ ವರದಿಯಿಂದ ಕಂಡುಬರುತ್ತದೆ. ರೈತರ ಕಷ್ಟನಷ್ಟಗಳನ್ನು ಹೋಗಲಾಡಿಸಬೇಕಾದಲ್ಲಿ ಸರಕಾರದವರು ಜುಲಮೆಯ ರಾಜ್ಯವನ್ನು ನಿಲ್ಲಿಸಿ, ಅವರ ಸ್ಥಿತಿಗತಿಯ ಬಗ್ಗೆ ಬಹಿರಂಗ ವಿಚಾರಣೆ ನಡಿಸುವದು ಈಗ ಅವಶ್ಯವಾಗಿದೆ. ಇಂತಹ ಸ್ಥಿತಿಯಲ್ಲಿ ಸರಕಾರದವರು ಕೆಲವು ಸವಲತ್ತುಗಳನ್ನು ತೋರಿಸುವದು ಅಗತ್ಯವಿದೆಯೆಂದು ಕಾಂಗ್ರೆಸದವರ ಪ್ರಾತಿನಿಧಿಕ ಮತವಾಗಿರುವದರಿಂದ ಕಾಂಗ್ರೆಸದವರು ರೈತರಿಗೆ ಬೆಂಬಲರಾಗಿ ನಿಂತುಕೊಂಡಿದ್ದಾರೆ ೧೯೨೫-೨೬ರ ಸೆಟಲ್‌ಮೆಂಟ ರಿಪೋರ್ಟದಲ್ಲಿ ಶಿರಸಿ, ಸಿದ್ದಾಪುರ ತಾಲೂಕಗಳಲ್ಲಿ ರೈತರ ಸ್ಥಿತಿಯು ತೀರ ಕೆಟ್ಟಿದೆಯೆಂದೂ, ಎಷ್ಟೋ ಭೂಮಿಗಳು ಪಡ ಬಿದ್ದಿವೆಯೆಂದೂ, ಜನಸಂಖ್ಯೆಯು ಕಡಿಮೆಯಾಗಿದೆಯೆಂದೂ ಸರಕಾರದವರೇ ಒಪ್ಪಿಕೊಂಡಿದ್ದಾರೆ. ಈ ವರ್ಷ ಬತ್ತಗಳ ಬೆಲೆ ಹೋದ ವರ್ಷದಷ್ಟೇ ಬಂದಿದ್ದರೂ ಸಹ, ತೋಟದ ಬೆಳೆಯು ೧೦೦ಕ್ಕೆ ೫೦ರಷ್ಟು ಕಡಿಮೆ ಬೆಲೆಗೆ ಮಾರಲ್ಪಡುತ್ತಿವೆ. ಬತ್ತಗಳಿಗೆ ವೆಚ್ಚ ಮಾಡಿದ ಹಣವಾದರೂ ರೈತರಿಗೆ ಸಿಗದಂತಾಗಿದೆ.

ಹಿರೇಕೆರೂರ ತಾಲೂಕದಲ್ಲಿ ಭತ್ತವೇ ಪ್ರಮುಖ ಬೆಳೆಯಾಗಿದ್ದು, ಅಲ್ಲಿ ಕೇವಲ ಎರಡೇ ಇಂಚು ಮಳೆಯಾಗಿದೆ. ಮಳೆಗಾಲದಲ್ಲಿ ೭ ಇಂಚುಗಳ ವರೆಗೆ ಮಳೆಯಾಗಿತ್ತು. ನೀರಾವರಿಯಿಂದ ಏನೂ ಉಪಯೋಗವಾಗಿಲ್ಲ ರೈತರು ತೀರ ಬಡವರಾಗಿಯೂ, ಧೈರ್ಯಗುಂದಿದವರಾಗಿಯೂ, ಸಾಲದಲ್ಲಿ ಹೊರಳಾಡುತ್ತಿರುವರಾಗಿಯೂ ಸಹಾಯವನ್ನು ಅಪೇಕ್ಷಿಸಹತ್ತಿದ್ದಾರೆ.

ಈ ತಾಲೂಕಗಳಲ್ಲಿಯ ರೈತರು ತ್ರಿಜೇಗ ಕನ್ನ ಮಾಡಿಯೂ, ತಿಮ್ಮ ಮಂಡಳಗಳನ್ನು ಕಟ್ಟಿ ಸಿ ಎಂ, ಪರಿಷತ್ತುಗಳನ್ನು ಜರುಗಿಸಿಯೂ, ತಮ್ಮ ಅಡಚಣಿಗಳ ಕಡೆಗೆ ಸರಕಾರದವರ ಲಕ್ಷ್ಯ ಎಳೆಯಕೊಳ್ಳಲು ಪ್ರಯತ್ನಿಸಿದರು. ಇದಕ್ಕೆಲ್ಲ ಕಾಂಗ್ರೆಸದವರೇ ಕಾರಣರಾಗಿರುವರೆಂಬುದಾಗಿ ಸರಕಾರದವರು ಸಂಶಯ ತೆಗೆದು ಕೊಂಡರು

ಒಪ್ಪಂದದಿಂದ ಈಗ ವಾತಾವರಣವೇ ಬದಲಾಗಿ ಹೋಗಿದೆ. ಆದ್ದರಿಂದ, ಸರಕಾರದವರು ತಮ್ಮ ಸಂಶಯ ವೃತ್ತಿಯನ್ನು ಬಿಟ್ಟು ಕೊಟ್ಟು, ರೈತರಿಗೆ ಇನ್ನಾದರೂ ಸಾಕಷ್ಟು ಸಹಾಯ ಮಾಡಬೇಕು ರೈತರ ದೈನ್ಯಾವಸ್ಥೆಯನ್ನು ಹೋಗಲಾಡಿಸಲು ಇದೇ ಯೋಗ್ಯವಾದ ಮಾರ್ಗವಾಗಿದೆ.

ಸ್ವಯಂಸೇವಕರಲ್ಲಿ ವಿನಂತಿ

ಬಂಧು ಭಗಿನಿಯರೇ,

ನೀವು ಕಾರಾಗೃಹವಾಸವನ್ನು ಸೇರುವಾಗ ತಮ್ಮಂಥ ತರುಣರ ಮೇಲೆ ಭರವಸ ಇಟ್ಟ ಕಾರ್ಯವು ಮುಂದೆ ಸಾಗಿಸದೆಂದು ತಿಳಿಸಿದ ಪ್ರಕಾರ, ತಾವೆಲ್ಲ ಈ ಉತ್ಕಟ ದೇಶಾಭಿಮಾನದಿಂದ ಪ್ರೇರಿತರಾಗಿ ಮುಂದೆ ಬಂದು ಅನೇಕ ಯಾತನೆಗಳನ್ನು ಸಹಿಸಿ, ರಾಷ್ಟ್ರಕಾರ್ಯಭಾರವನ್ನು ಹೊತ್ತದ್ದಕ್ಕಾಗಿ ನಾನು ನಿಮ್ಮೆಲ್ಲರ ತುಂಬ ಅಭಿನಂದಿಸುತ್ತೇನೆ.

ನಮಗೆ ಈಗ ಪೂರ್ಣ ಜಯವು ಪ್ರಾಪ್ತವಾಗಿರುತ್ತದೆಂತಲೂ, ಇನ್ನು ಮುಂದೆ ಮಾಡತಕ್ಕ ಕಾರ್ಯ ಉಳಿದಿಲ್ಲವೆಂದೂ ಯಾರೂ ತಿಳಕೊಳ್ಳಬಾರದು.

ಅತ್ಯಂತ ಮಹತ್ವವಾದ ವಿಧಾಯಕ ಕಾರ್ಯಕ್ರಮವು ಗುಡ್ಡದಂತೆ ನಮ್ಮೆದುರಿಗಿದೆ. ಆ ಕಾರ್ಯವನ್ನು ಮಾಡದ ಹೊರತು ಪೂರ್ಣ ಸ್ವರಾಜ್ಯವು ನಮ್ಮ ಕೈಸೇರಲಾರದು. ಇದು ವರೆಗೆ ಮಾಡಿದ ಕಾರ್ಯಕ್ಕಿಂತ ಹೆಚ್ಚಿನ ಕಾರ್ಯವನ್ನು ಮುಂದೆ ಮಾಡಬೇಕಾಗಿದೆ ಎಂಬುದನ್ನು ನೀವೆಲ್ಲರೂ ಲಕ್ಷ್ಯದಲ್ಲಿಡಬೇಕಾಗಿದೆ ಮನೆಮಾರಗಳನ್ನು, ಮಾತಾಪಿತೃಗಳನ್ನು ಅಗಲಿ ಅನೇಕ ಕಷ್ಟಗಳನ್ನು ಸಹಿಸಿ, ಇದುವರೆಗೆ ಮಾಡಿದ ಕಾರ್ಯವು ಮುಂದಿನ ವಿಧಾಯಕ ಕಾರ್ಯಕ್ರಮವನ್ನು ಮಾಡದಿದ್ದರೆ ವ್ಯರ್ಥವಾಗುವದು. ಆದ್ದರಿಂದ ರಾಷ್ಟ್ರಕಾರ್ಯವನ್ನು ಅಖಂಡವಾಗಿ ಸಾಗಿಸುವದು ಅವಶ್ಯವಿದೆ.

ಜಿಲ್ಹೆಯ ಕೆಲವು ಭಾಗಗಳಲ್ಲಿ ಶಿಬಿರಗಳನ್ನು ಸ್ಥಾಪಿಸಿ ಗ್ರಾಮಸಂಘಟನೆ, ಖಾದಿ ಮತ್ತು ಸ್ವದೇಶಿ ಪ್ರಚಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ, ಅಸ್ಪೃಶ್ಯತಾ ನಿವಾರಣ, ಕಾಂಗ್ರೆಸ್ಸಿನ ಸಭಾಸದರನ್ನು ಕೂಡಿಸುವದು, ಇವೇ ಮೊದಲಾದ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಜಿಲ್ಹಾ ಕಾಂಗ್ರೆಸ ಕಮೀಟಿಯವರು ನಿಶ್ಚಯಿಸಿದ್ದಾರೆ. ಈ ಕಾರ್ಯಕ್ಕೆ ಅತ್ಯವಶ್ಯಕವಾದ ಶಿಸ್ತಿನಿಂದ ಕೆಲಸ ಮಾಡಲು, ಸಿದ್ಧರಾಗಬೇಕೆಂದು, ನಾನು ನಿಮಗೆ ಬಿನ್ನವಿಸುತ್ತೇನೆ. ಈಗ ಒಂದೆರಡು ವಾರಗಳ ವರೆಗೆ ವಿಶ್ರಾಂತಿ ಹೊಂದಿ ಪುನಃ ಕೆಲಸ ಪ್ರಾರಂಭ ಮಾಡಬೇಕು ಕೆಲಸವು ಮುಗಿದು ಹೋಯಿತು ಅಥವಾ ಕೆಲಸ ಪ್ರಾರಂಭ ಮಾಡಬೇಕೆಂದರೂ ಕೆಲಸ ಮಾಡಿಸಿಕೊಳ್ಳುವರಿಲ್ಲೆಂದು ಯಾರೂ ತಿಳಕೊಳ್ಳಬಾರದು. ಕಾರ್ಯಕ್ರಮವನ್ನು ಸಿದ್ಧಪಡಿಸಿದ ಕೂಡಲೆ ನಿಮ್ಮೆಲ್ಲರಿಗೆ ಆಮಂತ್ರಣ ಕಳಿಸುತ್ತೇನೆ ನಿರಂತರವಾಗಿ ದೇಶಕಾರ್ಯವನ್ನು ಮಾಡಬಿಚ್ಛಿಸುವವರು ನನ್ನ ಕಡೆಗೆ ಆದಷ್ಟು ತೀವ್ರ ಬಂದು ತಮ್ಮ ಉದ್ದೇಶಗಳನ್ನು ತಿಳಿಸಬೇಕಾಗಿ ವಿನಂತಿ.

ಹಣಮಂತರಾವ ಮೋಹರೆ.

---

೭೩ ಜನರನ್ನು ಗಲ್ಲಿಗೇರಿಸಿದರು

ಚೀನ ದೇಶದ ಸ್ವಾಟೊ ಎಂಬಲ್ಲಿ ಇತ್ತಲ್ಲಿಟ್ಟಿರುವ ಸೈನ್ಯದ ರಾಣೆಯಲ್ಲಿ ಬಂಡೆಬ್ಬಿಸಲು ಪ್ರಯತ್ನಿಸಿದಕ್ಕಾಗಿ ೭೩ ಜನರು ಗಲ್ಲಿಗೇರಿಸಲ್ಪಟ್ಟಿದ್ದಾರೆ

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮತ್ತು ಸ್ವದೇಶೀ ಇಳಕಲ್‌ ನಮೂನೆಯ ಶೀರೆ ಟಕ್ಕೇಕಾವಾಡಿಯ ಭಾರಿ ಮತ್ತು ಖಣ ವಗೈರೆ ದೊರೆಯುತ್ತವೆ,

ಶಂಕ್ರಪ್ಪ ಬಣರಗಿ
ಜನಿವಾರ ಪೇಟ್ಠ ಬಾಗಲಕೋಟೆ.

ಬೆಟಗೇರಿ ಬ್ರದರ್ಸ ವಾಚಮೇಕರ್ಸ



ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಮ್‌ಪೀಸ ರಿಪೇರಿ ಮಾಡುವದಲ್ಲದೆ ವೆಸ್ಟ ಎಂಡ, ಜೆನಿಥ, ಓಮೆಗಾ ಕಂಪನಿಯ ವಾಚ, ಕ್ಲಾಕ, ಟಾಯಮ್‌ಪೀಸ ಮತ್ತು ಸ್ಪೇರಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣಿಗೆ ಸಿಗುತ್ತವೆ ಒತ್ತೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೇಶ್ಯಾಲಿಟಿ,

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ ಹುಬ್ಬಳ್ಳಿ ಬಾಗಲಕೋಟೆ.

ಕನ್ನಡಿಗ.

ಕನ್ನಡಿಗ ಪ್ರತಿ ಶುಕ್ರವಾರ ಪ್ರಕಟವಾಗುವುದು

ಹೆತ್ತ ಜನನಿಯ ಮೇಲಿರುವ ಭಕ್ತಿ ಮತ್ತು ಪ್ರೇಮಗಳು
ಹುಟ್ಟಿದ ದೇಶದ ಮೇಲೆಯೂ ಇರಬೇಕು
ಹೆತ್ತವರಿಗೆ ಹೆಗ್ಗಣ ಮುದ್ದು ಎಂಬಂತೆ
ಕನ್ನಡಿಗರಿಗೆ ಕನ್ನಡವೇ ಪ್ರಿಯವು.

ಬರಡು ಹೈನ.

ಇಂದಿನ ದಿವಸ ಸರದಾರ ಭಗತಸಿಂಗ, ರಾಜಗುರು, ಹಾಗೂ ಸುಖದೇವ ಇವರ ಆಪ್ತೇಷ್ಟರಿಗೆ ಅವರ ಭೆಟ್ಟಿ ತೆಗೆದುಕೊಳ್ಳಲು ಸರಕಾರದವರು ಕೇಳಿಕೊಂಡಿರುವರು. ಈ ಹೊತ್ತು ಹನ್ನೊಂದು ಗಂಟೆಗೆ ಈ ಮೂವರೂ ವೀರರ ಹಾಗೂ ಅವರ ಬಂಧುಬಳಗದವರ ಭೆಟ್ಟಿಯಾಗುವದು. ಇದು ಕಡೆಯ ಭೆಟ್ಟಿಯೆಂದೇ ಅನ್ನಬಹುದು. ಸರದಾರ ಭಗತಸಿಂಗರ ತಂದೆಯವರಾದ ಕಿಶನಸಿಂಗ ಎಂಬವರು ತಮ್ಮ ಮಗನಿಗೆ ದಯದೋರಿಸುವ ಬಗ್ಗೆ ನ್ಯಾಯಸರಾಯರಲ್ಲಿ ಬೇಡಿಕೊಂಡರು. ಆದರೆ ಅವರ ಈ ಬೇಡಿಕೆಯನ್ನು ನ್ಯಾಯಸರಾಯರು ತಾವು ಮಾನ್ಯಮಾಡುವದಿಲ್ಲವಾಗಿ ಮಾರುತ್ತರವನ್ನು ಕಳಿಸಿದರು. ಈ ಮೂವರು ವೀರರ ಅಪರಾಧ ನಿರ್ಣಯಕ್ಕಾಗಿ ಸಾಮಾನ್ಯವಾದ ನ್ಯಾಯಸಭೆಗಳಿದ್ದರೂ ಸಹ ಒಂದು ವಿಶಿಷ್ಟ ನ್ಯಾಯ ಸಭೆಯನ್ನು ನ್ಯಾಯಸರಾಯರು ನೇಮಿಸಿದರು. ಈ ನ್ಯಾಯ ಸಭೆಯವರು ಈ ಮೂವರಿಗೆ ದೇಹಾಂತ ಶಿಕ್ಷೆಯನ್ನು ವಿಧಿಸಿದರು. ಅಪರಾಧಿಗಳ ದೇಹಾಂತದ ಪೂರ್ವದಲ್ಲಿಯೇ ಆ ನ್ಯಾಯ ಸಭೆಯ ದೇಹಾಂತವಾದ್ದರಿಂದ ಅಂಥ ಸಭೆಯು ಕೊಟ್ಟ ಶಿಕ್ಷೆಯು ಕಾಯಿದೆಗೆ ವಿರುದ್ಧವಾಗಿರುವದೆಂದು ಲಾಹೋರ ಹಾಯಕೋರ್ಟಿನಲ್ಲಿ ಕೆಲಸ ನಡೆಯಿತು. ಅದರಲ್ಲಿ ನ್ಯಾಯಮೂರ್ತಿ ಭಿಡೆ ಎಂಬವರು ಅಪರಾಧಿಗಳ ಗಲ್ಲಿನ ಶಿಕ್ಷೆಯನ್ನು ಕಡಿಮೆಮಾಡಿ, ಅವರಿಗೆ ಕರಿನೀರಿನ ಶಿಕ್ಷೆ ಕೊಡಬಹುದೆಂದು ಶಿಫಾರಸುಮಾಡಿದರು. ಆಮೇಲೆ ಏಳು ಸಮುದ್ರ ದಾಟಿ, ಲಂಡನದಲ್ಲಿಯ ವರಿಷ್ಠ ನ್ಯಾಯಸ್ಥಾನದಲ್ಲಿ ಕೆಲಸ ನಡಿಸಿದರೂ 'ಅಲ್ಲಿಯೂ ಬೋರ್ಗಲ್ಲ ಮೇಲೆ ಮಳೆಗರೆದಂತೆ ಸರ್ವಜ್ಞ!' ಎಂಬಂತೆ ಇದರ ವಿಚಾರಣೆಯನ್ನೇ ಕಿತ್ತುಹಾಕಿದರು. ಕಟ್ಟಕಡೆಗೆ ನ್ಯಾಯಿಸರಾಯರಾಯರಿಗೆ ಸರಿಗೂಷ್ಟಿ ಬೇಡಿಕೊಂಬುವವರಲ್ಲಿ ಬಂದಿತು. ಅವರು ಮನ್ನಿನ ಒಪ್ಪಂದದಲ್ಲಿ ಆಡಿದ ಮಾತುಕತೆಗಳ ಮೇಲಿಂದ ಅವರ ಕರಳು ಕರಗಿ ಈ ಮೂವರಿಗೆ ಜೀವದಾನ ದೊರೆಯಬಹುದಾಗಿ ಬಹುಜನರು ಆಶಿಸಿದ್ದರು. ಅವರ ಆಶೆಯು ಕಡೆಗೆ ನಿರಾಶೆಯಾಯಿತು. ನ್ಯಾಯಿಸರಾಯರ ಮನಸೂ ಕರಗಲಿಲ್ಲ. ಅವರು ಆಡಳಿತೆಯ ಧೋರಣವನ್ನು ಬದಲು ಮಾಡಿರುವರೆಂದು ಎಷ್ಟೋ ಜನರು ತಿಳಿದಿದ್ದರು. ಆದರೆ ಈ ತಿಳುವಳಿಕೆಯು ಎಷ್ಟರಮಟ್ಟಿಗೆ ಸರಿಯಾಗಿದೆಯೆಂದೇ ದೇವನೇ ಬಲ್ಲ. ಮಹಾತ್ಮರ ಹಾಗೂ ನ್ಯಾಯಿಸರಾಯರ ಒಪ್ಪಂದವ ತಂಗುಳಿಯು ಈ ವೀರರಿಗೆ ತಗಲಿಲ್ಲ. ಮೃತ್ಯುದೇವತೆಯ ಬಿಸಿಯುಸಿರು ಮಾತ್ರ ಇವರಿಗೆ ಜೋರಿನಿಂದ ಸೋಂಕಹತ್ತಿದೆ. ಬ್ರಿಟೀಶ ನ್ಯಾಯದೇವತೆಯನ್ನು ಮೂಲೆಗೊತ್ತಿ ಮೃತ್ಯು ದೇವತೆಯು ಅವರನ್ನು ನುಂಗಲು ಆ ಎಂದು ತನ್ನ ಬಾಯಿ ತೆರೆದಿರುವದು. ಈ ತರುಣ ವೀರರು ಈ ಮೃತ್ಯು ದೇವತೆಗೆ ಎಳ್ಳಷ್ಟಾದರೂ ಸೊಪ್ಪು ಹಾಕದೆ ಅವಳ ಹೊಟ್ಟೆಯಲ್ಲಿ ಸೇರಲು ಆತುರರಾಗಿರುವರು. ಅವರು ಈ ಮೃತ್ಯು ದೇವತೆಯನ್ನು ತಮ್ಮ ಕೈಯಲ್ಲಿಯ ದಾಸಿಯನ್ನಾಗಿ ಮಾಡಿಕೊಂಡಿರುವರು. ಈ ವೀರರು ಸೂರ್ಯಮಂಡಲವನ್ನು ಭೇದಿಸಿ ವೀರ ಸ್ವರ್ಗವನ್ನು ಹೊಂದುವರೆಂದು ತಿಳಿದುಕೊಂಡೇ ಈ ದಾಸಿಯು ಅವರ ಸೇವೆಗಾಗಿ ಅವರ ಕಾಲುಗಳ ಸಮೀಪದಲ್ಲಿ ಕೈ ಮುಗಿದುಕೊಂಡು ಕುಳಿತಿರುವಳು. ಸಾಮಾನ್ಯ ನರ ಪ್ರಾಣಿಗಳಂತೆ ಸಾಯುವೆನೆಂಬ ಚಿಂತೆಯಿಂದ ಕಿಂಚಿತ್ತಾದರೂ ಕೊರಗದೆ ಈ ದಾಸಿಯ ಸೇವೆಯಿಂದ ಅವರು ಉಲ್ಲಾಸಗೊಂಡು ಉಬ್ಬಿರುವರು. ಆದರೆ ಈ ವೀರರ ಜೀವದಾನಕ್ಕಾಗಿ ಯತ್ನ ಮಾಡಿದ ಭಾರತೀಯರ ಹಾಗೂ ನ್ಯಾಯಿಸರಾಯರು ಆಡಳಿತದ ಧೋರಣವನ್ನು ಬದಲುಮಾಡಿದರೆಂದು ಆಶೆಹಿಡಿದ ಜನರ ಆಕಾಂಕ್ಷೆಗಳು ಮಾತ್ರ ಬರಡುಹೈನದಂತೆ ನಿಷ್ಫಲವಾದವು.

"ಬಲೀಯಸೀ ಕೇವಲಮೀಶ್ವರೇಚ್ಛಾ"

ಅಸೆಂಬ್ಲಿಯಲ್ಲಿ ರಾವಣನು

ಮಿದನಾಪೂರದಲ್ಲಿ ಆದ ಅತ್ಯಾಚಾರಗಳ ಬಗ್ಗೆ ಮಾತಾಡಲು ಸಿದ್ಧರಾಗಿ ಎದ್ದು ನಿಂತು ಶ್ರೀ ಅಮರನಾಥ ದತ್ತ ಎಂಬವರು ಕಾಯಿಯಿಂದ ತಡೆಹಾಕಲ್ಪಟ್ಟ ಒಂದು ವಿಚಾರಣಾ ಮಂಡಲದವರದಿಯನ್ನು ಓದಿ ತೋರಿಸಿದರು. ಇಂಥ ವರದಿಯನ್ನು ಅಸೆಂಬ್ಲಿಯಲ್ಲಿ ಓದುವದು ಕಾಯಿದೆಗೆ ವಿರುದ್ಧವಾಗಿದೆ ಎಂದು ಕೆಲವು ಸದಸ್ಯರು ಗುಣುಗುಟ್ಟಿದರು. ಅಮರನಾಥರು ವರದಿಯನ್ನು ಕೈಯೆತ್ತಿ ಎಲ್ಲರಿಗೂ ತೋರಿಸಿದರು. ಕಡೆಗೆ ಕಾಯಿದೆ ಸಂಪಿತರಾದ ಸರ, ಮಿತ್ರ ಎಂಬವರು ಈ ವರದಿಯನ್ನು ಓದುವದು ಕಾಯಿದೆಗೆ ವಿರುದ್ಧವಾಗುವದಿಲ್ಲವೆಂದು ಮತಕೊಟ್ಟರು. ಕೂಡಲೆ ಅಮರನಾಥರು ಅದನ್ನು ಓದಿ ತೋರಿಸಿದರು. ಅವರು ಓದಿದ ವರದಿಯಲ್ಲಿ ಕೆಳಗಿನ ವಾಕ್ಯವಿದ್ದಿತು. "ರಾವಣನು ಸೀತೆಯ ಮೇಲೆ ಬಲಾತ್ಕಾರ ಮಾಡದಿಂದಲೇ ಲಂಕೆಗೆ ಲಗ್ಗೆ ಹತ್ತಿತು ನೀವಾದರೂ ನಮ್ಮ ಸ್ತ್ರೀಯರ ಮೇಲೆ ಅತ್ಯಾಚಾರಗಳು ನಡೆಯುವಂತೆ ಸಡಿಲು ಬಿಟ್ಟದ್ದರಿಂದ ನಿಮ್ಮ ಆಳಿಕೆಗೂ ಅಳಿಗಾಲ ಬಂದಿರುವದು." ರಾವಣ ಲೀಲೆಯು ಅಗಾಧವಾಗಿದ್ದೆ ಅಸೆಂಬ್ಲಿಯಲ್ಲಿಯೂ ಅದಕ್ಕೆ ಛೀ, ಥೂ, ಆಗುವದಕ್ಕೆ ಅಸ್ಪದವು ದೊರೆಯಿತು. ಆಡಳಿತಗಾರರಿಗೆ ಇದರಿಂದ ಬುದ್ಧಿಗಲಿಸಬೇಕೆಂದು ಅಮರನಾಥರ ಅಂತರಂಗದಲ್ಲಿರಬಹುದು.

ಇಹವೃತ್ತ

ಇಲ್ಲಿ ಸುಮಾರು ಒಂದು ವರ್ಷದಿಂದ ಆಣಿ ರಾಮಾಚಾರ್ಯ ಕೆರೂರ ವೆಂಕಪ್ಪಾಚಾರ್ಯ ಉತ್ತೂರಿಯ ವರು ತಮ್ಮ ಮನೆಗಳನ್ನು ಕೆಡಿಸಿ ಹೊಸದಾಗಿ ಕಟ್ಟಿಸಹತ್ತಿದ್ದರಿಂದ, ಅವರ ಮನೆಗಳ ಮುಂದೆ ಕಲ್ಲು ಹಾಗೂ ಮಣ್ಣಿನ ಕುಪ್ಪೆ ಬಿದ್ದಿದೆ. ಮೊದಲೇ ಇಕ್ಕಟ್ಟಿನ ಬೀದಿ; ಮ್ಯುನಿಸಿಪಾಲಿಟಿಯವರು ರಾತ್ರಿಯಲ್ಲಿ ಕಂದೀಲು ಹಚ್ಚುವದಿಲ್ಲ. ಅದರಲ್ಲಿ ಈ ಕಲ್ಲು ಮಣ್ಣಿನ ಕುಪ್ಪೆಯೊಂದು ಬಿದ್ದಿದೆ. ಕೇಳುವದೇನು? ಹಾಯ್ದು ಹೋಗುವವರು ಎಡವುತ್ತ ಬೀಳುತ್ತ ಪಡುತ್ತಿರುವ ಪರಿಪಾಟಲಕ್ಕೆ ಎಣೆಯೇ ಇಲ್ಲದಾಗಿದೆ! ಮ್ಯುನಿಸಿಪಾಲಿಟಿಯಧಿಕಾರಿಗಳು ಇತ್ತಕಡೆ ಸ್ವಲ್ಪ ತಮ್ಮ ಕಣ್ಣನ್ನು ಹೊರಳಿಸುವರೋ!

ಶ್ರೀ ಸುಭಾಶಚಂದ್ರರ ಪ್ರಕಟನೆ.

ಯಾವತ್ತು ರಾಜಕೀಯ ಕೈದಿಗಳನ್ನು ಬಿಡಿರಿ.

ಓರ್ವ ವರ್ತಮಾನ ಪತ್ರ ಪ್ರತಿನಿಧಿಯು ಶ್ರೀ ಸುಭಾಶಚಂದ್ರರನ್ನು ಕಂಡುಕೊಂಡಾಗ ಅವರು ಅವನಿಗೆ ಕೆಳಗಿನಂತೆ ತಿಳಿಸಿದರು.

ಒಪ್ಪಂದದ ಕರಾರುಗಳು ಏನೇ ಇದ್ದರೂ, ಸರಕಾರದವರು ಕೂಲಿಕಾರರನ್ನೊಳಗೊಂಡು ಯಾವತ್ತೂ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು. ಅಂದರೇನೆ ಬಂಡೀಗಾಲಿಯ ಪರಿಷತ್ತು ಕೂಡುವದರೊಳಗಾಗಿ ಇಲ್ಲಿ ನಿರ್ಮಿಯಾದ ವಾತಾವರಣವು ಪ್ರಸ್ತಾಪಿತವಾಗುವದು. ಬಂಗಾಲ ಪ್ರಾಂತವೊಂದೇ ಈ ಕಷ್ಟಕ್ಕೆ ಗುರಿಯಾಗಿರುವದೆಂತಲ್ಲ. ಪಂಜಾಬ ಹಾಗು ಸಂಯುಕ್ತ ಪ್ರಾಂತದಲ್ಲಿಯಾದರೂ ಎಷ್ಟೋ ಕೈದಿಗಳು ಬಿಡುಗಡೆಮಾಡಲ್ಪಟ್ಟಿಲ್ಲ. ಎಷ್ಟೋ ಪ್ರಾಂತಗಳಲ್ಲಿಯ ಅಧಿಕಾರಿಗಳು ಒಪ್ಪಂದದ ಕರಾರುಗಳಂತೆ ನಡೆದುಕೊಳ್ಳುತ್ತಿರುವದಿಲ್ಲ. ಅದ್ದರಿಂದ ಜನರಲ್ಲಿ ಅವರ ವಿಷಯಕ್ಕೆ ಈಗ ತಿರಸ್ಕಾರ ಹುಟ್ಟಿದೆ. ಕಾಯಿದೆ ಭಂಗ ಚಳವಳಿಯಲ್ಲಿ ಶಿಕ್ಷೆಗೆ ಗುರಿಯಾದವರೂ, ರಾಜದ್ರೋಹಕ್ಕಾಗಿ ಶಿಕ್ಷಿಸಲ್ಪಟ್ಟವರೂ ಇನ್ನೂ ಜೇಲಿನಲ್ಲಿ ಕೊಳೆಯುತ್ತಿರುವರು. ಒಪ್ಪಂದವಾದ ಮೇಲೆಯೂ ಸಹ ಬಂಗಾಲ ಆರ್ಡಿನನ್ಸದನ್ವಯ ಕೆಲವರು ಸೆರೆಹಿಡಿಯಲ್ಪಟ್ಟಿದ್ದಾರೆ. ಬಂಗಾಲ ಪ್ರಾಂತದ ಮುಖಂಡರಾದ ಸತೀನ ಸೇನ, ಬಿಪಿನ ಗಂಗೊಳ್ಳಿ, ಸತೀಶ ಚಕ್ರವರ್ತಿಯವರಿಗೆ ಇನ್ನೂ ಬಿಡುಗಡೆಯಾಗಿಲ್ಲ. ಮಧ್ಯಪ್ರಾಂತದಲ್ಲಿ ಶ್ರೀ ಅವರಿಯವರೂ, ಬೆತೂಲ ಹಾಗು ಮಂಡಲಾ ಜಿಲ್ಹೆಯೊಳಗಿನ ಜಂಗಲ ಸತ್ಯಾಗ್ರಹದ ಕೈದಿಗಳೂ ಬಿಡುಗಡೆ ಮಾಡಲ್ಪಟ್ಟಿಲ್ಲ. ಮುಂಬಯಿ ಇಲಾಖೆಯಲ್ಲಿ ಶ್ರೀ ರಾಜಾರವರು ಹಾಗು ಸೊಲ್ಲಾಪುರ ಮತ್ತು ಚಿರನೇರ ಕೈದಿಗಳು ಇನ್ನೂ ಜೇಲಿನಲ್ಲಿಯೇ ಕೊಳೆಯುತ್ತ ಬಿದ್ದಿರುವರು. ಪಂಜಾಬದಲ್ಲಿ ಇನ್ನೂ ಎಷ್ಟು ಜನರು ಸೆರೆಮನೆಯಲ್ಲಿರುವರೆಂದು ಹೇಳಲು ಬರುವಂತಿಲ್ಲ. ಸಂಯುಕ್ತ ಪ್ರಾಂತದಲ್ಲಿಯ ಕಾಕೋರಿ ಕೈದಿಗಳನ್ನು ನಾವು ಮರೆಯುವಂತಿಲ್ಲ. ಬಂಗಾಲ ಪ್ರಾಂತದಲ್ಲಿ ಇನ್ನೂ ೮೦೦ ಜನ ರಾಜಕೀಯ ಕೈದಿಗಳು ಸೆರೆಮನೆಯಿಂದ ಹೊರಬಿದ್ದು ಬಂದಿಲ್ಲ. ೪೦೦ ಜನರು ವಿಚಾರಣೆಯಿಲ್ಲದೆ ಹಾಗೆಯೇ ಜೇಲಿನಲ್ಲಿ ಕಾಲಕಳೆಯುತ್ತಿರುವರು. ಚಿತಗಾಂಗ ಶಸ್ತ್ರಾಗಾರ ದಾಳಿಯ ಖಟ್ಲೆ, ಮಿಂತ ಒಳಸಂಚಿನ ಖಟ್ಲೆ, ಮೈಮನಸಿಂಗ ಒಳಸಂಚಿನ ಖಟ್ಲೆ, ಮುನ್ಸಿಗಂಜ ಪೋಸ್ಟ-ಆಫೀಸ ದರೋಡೆಯ ಖಟ್ಲೆ, ರಾಜಬಾಯಿ ಮೇಲದ ಗಾಡಿಯ ಖಟ್ಲೆ, ಬಾರಿಸಾಲ ದರೋಡೆಯ ಖಟ್ಲೆ ಈ ಮೊದಲಾದ ಖಟ್ಲೆಗಳ ಮೂಲಕವಾಗಿ ಸುಮಾರು ೧೦೦ ಜನರು ವಿಚಾರಣೆಗೆ ಗುರಿಮಾಡಲ್ಪಟ್ಟರುವರು. ಕ್ರಾಂತಿಕಾರ ಚಳವಳಿಗಾಗಿ ಶಿಕ್ಷೆಗೆ ಗುರಿಯಾದವರು ೧೧೨ ಜನರಿರುತ್ತಾರೆ. ಕಲಕತ್ತೆಯ ಕಾರ್ಪೋರೇಶನದ ಕಮೀಶನರರಾದ ನಾರಾಯಣರಾಯರು ಇವರಲ್ಲಿ ಒಬ್ಬರಾಗಿದ್ದಾರೆ. ಲಿಲೋವಾ ರಾಂಕುರಾ ಮೊದಲಾದ ಸಂಪುಗಳ ಸಂಬಂಧವಾಗಿ ೩೫ ಜನರು ಕಾರಾಗೃಹದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವರು. ಕಲಕತ್ತೆಯ ಕಾರ್ಪೋರೇಶನದ ಸಭಾಸದರಾದ ಮದನಮೋಹನ ಬರ್ಮನರು ಇವರಲ್ಲಿ ಒಬ್ಬರಾಗಿದ್ದಾರೆ.

ಕರಾಚಿ ಕಾಂಗ್ರೆಸದ ಕಾರ್ಯಕ್ರಮ

ಕರಾಚಿ ಕಾಂಗ್ರೆಸದ ಕಾರ್ಯಕ್ರಮವು ಕೆಳಗಿನಂತೆ ಇದೆ

ಮಾರ್ಚ ೨೭ ಮತ್ತು ೨೮—ವಿಷಯ ನಿಯಾಮಕ ಮಂಡಲ ಸಭೆ

ಮಾರ್ಚ ೨೯ :—ಕಾಂಗ್ರೆಸ್ ಸಭೆಯ ಅಧಿವೇಶನ.

ಮಾರ್ಚ ೩೦ :— ವಿಷಯ ನಿಯಾಮಕ ಮಂಡಳದ ಸಭೆ

ಮಾರ್ಚ ೩೧ :— ಕಾಂಗ್ರೆಸ್ ಸಭೆಯ ಅಧಿವೇಶನ ಸಂಜೆಯ ೬ ಘಂಟೆಯಿಂದ.

ವಿಷಯ ನಿಯಾಮಕ ಮಂಡಳ ಸಭೆಯ ಪ್ರೇಕ್ಷಕರ ತಿಕೀಟುಗಳು ಹಂಚುವದು ... ದಲ್ಲಿ ತಾ|| ೨೬ ಹಾಗು ... ನೆಯ ದಿವಸ ಮಾರಾಟಕ್ಕೆ ಸಿಗುವವು.

ಪ್ರತಿನಿಧಿ ಶಿಬಿರವು ತಾ || ೨೫ ನೆಯ ದಿವಸ ತೆರೆಯಲ್ಪಡುವದು. ಪ್ರತಿನಿಧಿಗಳಿಗಾಗಿ ಬರತಕ್ಕಿರುವವರು ಇದಕ್ಕೂ ಮೊದಲು ಕರತಕ್ಕದ್ದಾಗಿ ... ಸೈಶಲ್ ಟ್ರೇನ್ ಹಾಗು ಚಾರ್ಟರ್ಡ್ ಬೋಗಿಗಳಿಂದ ಬರುವ ಪ್ರತಿನಿಧಿಗಳು ಸ್ವಾಗತ ಸಭೆಯವರಿಗೆ ಮುಂಚಿತವಾಗಿ ಸೂಚನೆ ಕೊಡಬೇಕು.

ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಸರದಾರ ವಲ್ಲಭಭಾಯಿಯವರು ಮಹಾತ್ಮಾ ಗಾಂಧಿಯವರೊಂದಿಗೆ ತಾ || ... ನೆಯ ದಿವಸ ಬರತಕ್ಕವರಿದ್ದಾರೆ. ಸ್ಟೇಶನದಲ್ಲಿ ಅವರಿಗೆ ಯೋಗ್ಯ ರೀತಿಯ ಸತ್ಕಾರ ಮಾಡಿ ... ಅವರನ್ನು ಕಾಂಗ್ರೆಸ ನಗರಕ್ಕೆ ಕರೆದೊಯ್ಯಲಾಗುವದು. ಮಹಾತ್ಮಾ ಗಾಂಧಿ ಹಾಗು ಸರದಾರ ವಲ್ಲಭಭಾಯಿಯವರ ಸಲುವಾಗಿ ... ನಿಯಾಮಕ ಮಂಡಳ ಮಂಟಪದ ಬಳಿಯಲ್ಲಿ ಪ್ರತ್ಯೇಕವಾದ ಶಿಬಿರಗಳು ರಚಿಸಲ್ಪಟ್ಟಿವೆ. ಅವರು ಅಲ್ಲಿಯೇ ವಾಸಮಾಡುವರು. ಮುಖಂಡರ ಸಲುವಾಗಿಯಾದ ವಿಷಯನಿಯಾಮಕ ಮಂಡಳದ ಬಳಿಯಲ್ಲಿಯೇ ಶಿಬಿರಗಳು ರಚಿಸಲ್ಪಟ್ಟಿವೆ.

ಕಾಂಗ್ರೆಸ್ ಮುಖಂಡರ ಹೊರತಾಗಿ ಸರ ತೇಜಬಹದ್ದೂರ ಸಪ್ರೂ, ಶ್ರೀ ಜಯಕರ, ನಾ. ಶ್ರೀನಿವಾಸ ಶಾಸ್ತ್ರಿ, ಸರ ಚಿಮನಲಾಲ ಸೆಟಲವಾಡ, ಸರ ಎ. ಪಿ. ಪಾತ್ರೋ ಮೊದಲಾದ ಉದಾರ ಮತವಾದಿ ಮುಖಂಡರು ಕಾಂಗ್ರೆಸ್ಸಿಗೆ ಬಂದು, ಕಾಂಗ್ರೆಸ್ ಮಹಾಸಭೆಗೆ ಅವರ ಕಾರ್ಯದಲ್ಲಿ ಸಹಾಯಮಾಡುವರಿದ್ದಾರೆಂದು ತಿಳಿಯುತ್ತದೆ.

ಕಾಂಗ್ರೆಸ್ ಸಪ್ತಾಹದಲ್ಲಿ ನವಜವಾನ ಭಾರತ ಸಭೆ ಹಾಗೂ ... ಕಿಸಾನ ಅಧಿವೇಶನಗಳಾಗಲಿವೆ. ನವಜವಾನ ಭಾರತ ಸಭೆಯ ಅಧಿವೇಶನಕ್ಕೆ ಶ್ರೀ ಸುಭಾಸಚಂದ್ರರು ಅಧ್ಯಕ್ಷರು ... ಖುಲ್ ಉಲೇಮಾ ಪರಿಷತ್ತಿಗೆ ಮೌಲಾನಾ ಅಬ್ದುಲ್ ಕಲಮ ಅಜಾದ ... ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ.

ಈ ಊರಲ್ಲಿರುವ ಶ್ರೀ ಸತ್ಯಬೋಧಸ್ವಾಮಿಗಳ ಮಠದಲ್ಲಿ ಶ್ರೀಮತಿ ವೆಂಕೂಬಾಯಿ ಕಾಟಾಪುರ ಇವರು ಸಂಸ್ಕೃತ ಪಾಠಶಾಲೆಯನ್ನು ಕಟ್ಟಿಸುವ ಕೆಲಸವನ್ನು ನಡೆಸಿದ್ದು, ಎಲ್ಲರಿಗೂ ಗೊತ್ತಿದ್ದ ಮಾತೇ. ಈ ಕೆಲಸಕ್ಕೆ ... ಧರ್ಮಾಭಿಮಾನಿಗಳೂ ಸ್ವಹಸ್ತ ಪರಹಸ್ತದಿಂದ ಸಹಾಯಮಾಡಿದರೆ ಅವರು ಆ ಕಟ್ಟಡವನ್ನು ಬೇಗನೇ ಮುಗಿಸಿ, ವಿದ್ಯಾರ್ಥಿಗಳಿಗೆ ಸಹಾಯಮಾಡಿದ ಪುಣ್ಯಕ್ಕೆ ಪಾತ್ರರಾಗುವರು.

ಅಬ್ದುಲ್ ಗಣಿಯವರಿಗೆ ಗಲ್ಲಿನ ಶಿಕ್ಷೆ

ಲಾಹೋರ ದಸರಾ ಬಾಂಬಿನ ಖಟ್ಲೆಯಲ್ಲಿ ವಿಚಾರಣೆಗೆ ಗುರಿ ಮಾಡಲ್ಪಟ್ಟ ಅಬ್ದುಲ್ ಗಣಿಯವರಿಗೆ ಸ್ಪೇಶಲ್ ಸೆಶನ್ಸ ಜಡ್ಜರಾದ ಖಾನಸಾಹೇಬ ಅಬ್ದುಲ್ ಅಜೀಜರು ಗಲ್ಲಿನ ಶಿಕ್ಷೆ ವಿಧಿಸಿದ್ದಾರೆ.

೧೯೨೮ ನೆಯ ಇಸ್ವಿಯ ದಸರಾ ದಿವಸ ಲಾಹೋರ ಪೋಲೀಸಿನ ಗೇಟಿನ ಹತ್ತ ಬಾಂಬಿನ ಸ್ಫೋಟವಾಗಿ ೧೦ ಜನರು ಮರಣ ಹೊಂದಿದ್ದರು. ೫೮ ಜನರು ಗಾಯ ಪಟ್ಟಿದ್ದರು. ಈ ಅತ್ಯಾಚಾರವು ಸಂಭವಿಸಿದ ಒಂದು ವರ್ಷದ ನಂತರ ಅಬ್ದುಲ್ ಗನಿಯವರು ತಾವೇ ಸ್ವತಃ ಪೋಲೀಸರಿಗೆ ತಮ್ಮ ಅಪರಾಧವನ್ನು ತಿಳಿಸಿ ಬಂಧನಕ್ಕೊಳಗಾದರು. ಮುಂದೆ ಅವರ ವಿಚಾರಣೆ ನಡೆದು ಅವರಿಗೆ ಮೇಲಿನಂತೆ ಶಿಕ್ಷೆ ವಿಧಿಸಲ್ಪಟ್ಟಿತು.

ಭಗತಸಿಂಗರ ಬಗ್ಗೆ ಮಹಾತ್ಮರಿಗೆ ತಾರು

ಅಖಿಲ ಭಾರತ ನವಜವಾನ ಸಭೆಯ ಕಾರ್ಯದರ್ಶಿಗಳು ಕರಾಚಿಯಿಂದ ಮಹಾತ್ಮಾ ಗಾಂಧಿ, ಶ್ರೀ ಸುಭಾಸಚಂದ್ರ ಬೋಸ, ಪಂಡಿತ ಜವಾಹಿರಲಾಲ ನೆಹರು ಇವರಿಗೆ ತಾರು ಮಾಡಿ ಶ್ರೀ ಭಗತಸಿಂಗ ಮೊದಲಾದವರ ಗಲ್ಲಿನ ಶಿಕ್ಷೆಯನ್ನು ರದ್ದು ಪಡಿಸುವಂತೆ ಸರಕಾರಕ್ಕೆ ಒತ್ತಾಯ ಮಾಡಬೇಕೆಂದು ಅವರಿಗೆ ಕೇಳಿಕೊಂಡಿದ್ದಾರೆ.

ಮಹಾತ್ಮರ ತಕಲಿಗೆ ೫೦೦೦ ರೂಪಾಯಿ ಬೆಲೆ ಬಂತು,

ಮಹಾತ್ಮಾ ಗಾಂಧಿಯವರಿಗೆ ವಿಲೆಪಾರ್ಲೆಯ ನಿವಾಸಿಗಳು ತಾ|| ೧೭ ನೆಯ ದಿವಸ ೧೫೫೬೫ ರುಪಾಯಿ ನಿಧಿ ಹಾಗು ಮಾನಪತ್ರವನ್ನರ್ಪಿಸಿದರು. ಸಭೆಯಲ್ಲಿ ಓರ್ವ ಸ್ತ್ರೀಯು ಅವರಿಗೆ ಭಂಗಾರದ ತಕಲಿಯನ್ನು ಅರ್ಪಿಸಿದಳು. ಸಭೆಯಲ್ಲಿ ಅದನ್ನು ಲಿಲಾವು ಮಾಡುವವರಲ್ಲಿ [illegible]ದಿತು. ಶ್ರೀ. ರಾಮನಾರಾಯಣ [illegible] ಎಂಬ ವ್ಯಾಪಾರಸ್ಥರು ಅದನ್ನು ೫೦೦೦ ರೂ ಗಳಿಗೆ ಲಿಲಾವಿನಲ್ಲಿ ಕೊಂಡುಕೊಂಡರು.

ಕಡ್ಡೀ ಪೆಟ್ಟಿಗೆಗೆ ಗಳಲನೆಯ ಕಲಮು!

ಪುರುಲಿಯಾ ಎಂಬಲ್ಲಿಯ ಬಾಬು ಗುಹ ಎಂಬ ಅಂಗಡಿಕಾರನು ರಾಷ್ಟ್ರಧ್ವಜದ ಚಿತ್ರವನ್ನುಳ್ಳ ಗೊಂಡು ಸ್ವಾಧೀನತಾ ಎಂಬ ಅಕ್ಷರವುಳ್ಳ ಕಡ್ಡಿಯ ಪೆಟ್ಟಿಗೆಗಳನ್ನು ಮಾರುತ್ತಿದ್ದನು. ಅಧಿಕಾರಿಗಳು ಅವನಮೇಲೆ ೧೪೪ ಯ ಕಲಮನ್ನವಯ ಬಾಣ ಪ್ರಯೋಗ ಮಾಡಿ ಆ ಕಡ್ಡಿ ಪೆಟ್ಟಿಗೆಗಳನ್ನು ಮಾರಕೂಡದಾಗಿ ಅವನಿಗೆ ಅಪ್ಪಣೆ ವಿಧಿಸಿದರು.

ಸೊಲ್ಲಾಪುರ ದಂಡ ವಿಧಾಯಕ ಪೋಲೀಸರ ವೆಚ್ಚ

ಸೊಲ್ಲಾಪುರದಲ್ಲಾದ ದಂಗೆಯ ನಿಮಿತ್ತವಾಗಿ ಅಲ್ಲಿ ಇಡಲ್ಪಟ್ಟ ದಂಡವಿಧಾಯಕ ಪೋಲೀಸರ ವೆಚ್ಚವನ್ನು ಸರಕಾರದವರೇ ಕೊಡುವರಾಗಿ ಮುಂಬಯಿ ಕಾಯಿದೇ ಮಂಡಲದಲ್ಲಿ ಹೇಳಲ್ಪಟ್ಟಿತು.

ಮುಂದಿನ ಕಾಂಗ್ರೆಸಕ್ಕೆ ಸೊಲ್ಲಾಪುರದಿಂದ ಆಮಂತ್ರಣ

(ಕಂತಿಯ ವಾರ್ತೆ ತಾ|| ೨೩)

ಮುಂದಿನ ಸಲದ ರಾಷ್ಟ್ರೀಯ ಸಭೆಯನ್ನು ಸೊಲ್ಲಾಪುರದಲ್ಲಿ ಕೂಡಿಸಲು ಕೇಳಿಕೊಳ್ಳಬೇಕೆಂದು ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ತಮ್ಮ ಸಭೆಯಲ್ಲಿ ಠರಾವು ಮಾಡಿಕೊಂಡಿದ್ದಾರೆ

ವ್ಹಾಯಿಸರಾಯರೊಡನೆ ಮುಖಂಡರ ಮಾತುಕತೆ.

(ಕಂತಿಯ ವಾರ್ತೆ ತಾ|| ೨೩)

ಶನಿವಾರ ದಿವಸ ಕಮ್ಯುನಲ್ ಮುಖಂಡರು ವ್ಹಾಯಿಸರಾಯರನ್ನು ಮಹಾತ್ಮಾ ಗಾಂಧಿ, ಪಂಡಿತ ಮದನಮೋಹನ ಮಾಲವೀಯಾ, ಮೊದಲಾದ ಮುಖಂಡರಿಗೆ ಹೇಳಿಕಳುಹಿದ್ದರಿಂದ, ಮಹಾತ್ಮಾ ಗಾಂಧಿ, ಪಂಡಿತ ಮಾಲವೀಯಾ ಹಾಗು ಇಂಡೀ ಗಾಲಿ ಸು ಪರಿಷತ್ತಿನ ೩೩ ಪ್ರತಿನಿಧಿಗಳು ಬಂದು ಅವರನ್ನು ಕಂಡುಕೊಂಡ, ಇಂಡೀ ಗಾಲಿಯ ಪರಿಷತ್ತಿನ ವಿಷಯವಾಗಿ ಅವರೊಡನೆ ಚರ್ಚೆ ಮಾಡಿದರು. ಚರ್ಚೆಯು ಖಾಸಗಿ ಸ್ವರೂಪದ್ದಾಗಿತ್ತು. ಇಂಡೀ ಗಾಲಿಯ ಪರಿಷತ್ತಿನ ಮುಂದಿನ ವಿಧಾನದ ಸಂಬಂಧವಾಗಿಯೇ ಚರ್ಚೆ ನಡೆಯಿತು. ಜವಾಬುದಾರ ಬ್ರಿಟಿಶ ಶಿಷ್ಟಮಂಡಳವನ್ನು ಹಿಂದುಸ್ಥಾನಕ್ಕೆ ಕಳುಹಿ ಕಳಿಸಿಕೊಡಬೇಕಾಗಿ ಮಹಾತ್ಮಾ ಗಾಂಧಿಯವರು ಕೇಳಿಕೊಂಡರಾಗಿಯೂ, ಇಂಡೀ ಗಾಲಿಯ ಪರಿಷತ್ತಿನ ಪ್ರತಿನಿಧಿಗಳು ಇದಕ್ಕೆ ಬೆಂಬಲಕೊಟ್ಟರಾಗಿಯೂ ತಿಳಿದು ಬರುತ್ತದೆ.

ಮಹಾತ್ಮರಿಗೆ ವ್ಹಾಯಿಸರಾಯರ ಆಶ್ವಾಸನ

(ಕಂತಿಯ ವಾರ್ತೆ ತಾ||೨೩)

ಇಂಡೀಗಾಲಿಯ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟ ಭದ್ರಸ್ಥಾನಗಳ ಸಂಬಂಧವಾಗಿ ಇನ್ನು ಮುಂದೆ ಕೂಡತಕ್ಕದ್ದಾಗಿರುವ ಪರಿಷತ್ತಿನಲ್ಲಿ ನಿಂತು ಪುನಃ ಚರ್ಚೆ ಮಾಡಬಹುದೆಂದೂ, ಅದಕ್ಕೆ ಅಡ್ಡಿ ಮಾಡಲ್ಪಡುವದಿಲ್ಲವೆಂದೂ, ವ್ಹಾಯಿಸರಾಯರು ಮಹಾತ್ಮಾ ಗಾಂಧಿಯವರಿಗೆ ಆಶ್ವಾಸನ ಕೊಟ್ಟಿರುವರಾಗಿ "ಕ್ರಾನಿಕಲ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಭದ್ರಸ್ಥಾನಗಳ ಬಗ್ಗೆ ಮಹಾತ್ಮರ ಅಭಿಪ್ರಾಯ

(ಕಂತಿಯ ವಾರ್ತೆ ತಾ|| ೨೩)

ಕಾಮನ್ಸ ಸಭೆಯಲ್ಲಿ ಹಿಂದುಸ್ಥಾನದ ಸಂಬಂಧವಾಗಿ ಚರ್ಚೆ ನಡೆಯಿತು. ಲಾರ್ಡ ಸ್ಯಾಂಕಿ ಹಾಗು ಮಿ. ಬೆನ್ ಭದ್ರಸ್ಥಾನಗಳ ಸಂಬಂಧವಾಗಿ ಪುನಃ ಚರ್ಚೆ ಮಾಡುವದಿಲ್ಲ ಬಲವಾರದೆಂಬುದಾಗಿ ಭಾಷಣ ಮಾಡಿದ್ದರೆ ಈ ಕುರಿತು ಓರ್ವ ಪತ್ರಿಕಾ ಪ್ರತಿನಿಧಿಯು ಮಹಾತ್ಮಾಗಾಂಧಿಯವರ ಅಭಿಪ್ರಾಯವನ್ನು ಕೇಳಿಕೊಳ್ಳಲಾಗಿ ಅವರು ಕೆಳಗಿನಂತೆ ತಿಳಿಸಿದರು.

ಭದ್ರಸ್ಥಾನಗಳ ಸಂಬಂಧವಾಗಿ ಇಂಡೀ ಗಾಲಿಯ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟ ತೀರ್ಮಾನಗಳ ಪುನಃ ಚರ್ಚೆಗೆ ಬರದಿದ್ದರೆ ಕಾಂಗ್ರೆಸ್ ಪಕ್ಷದವರು ಲಂಡನಕ್ಕೆ ಹೋಗುವದರಲ್ಲಿ ಏನೂ ಉಪಯೋಗವಿಲ್ಲ. ಹೀಗಾದಲ್ಲಿ ಪರಿಷತ್ತಿನ ಕಾರ್ಯವು ನಿಷ್ಫಲವಾಗುವದು.

ಪರದೇಶಿ ಉಪ್ಪಿಗೆ ಕರ ಕೂಡಿಸಿದರು

(ಕಂತಿಯ ವಾರ್ತೆ ತಾ|| ೨೩)

ಪರದೇಶಗಳಿಂದ ಈ ದೇಶಕ್ಕೆ ಬರುವ ಉಪ್ಪಿನಮೇಲೆ ಕರವನ್ನು ಕೂಡಿಸಬೇಕಾಗಿ ವರಿಷ್ಠ ಕಾಯಿದೆ ಮಂಡಳದಲ್ಲಿ ತರಲ್ಪಟ್ಟಿಗೆ [illegible] ಬಹು ಮತದಿಂದ ಸ್ವೀಕೃತವಾಯಿತು.

ಗಾಂಧಿ—ಜವಾಹಿರರ ಉಪ್ಪಿನಾಗರಗಳು

ಶಿರೋಡೆಯ [illegible] ಜನ ನಾಗರಿಕರು ತಾ|| ೨೧ ನೆಯ ದಿನದ ಅಲ್ಲಿಯ ಎರಡು ಉಪ್ಪಿನಾಗರಗಳಿಗೆ ಮೆರವಣಿಗೆಯಿಂದ ಸಾಗಿ ಹೋಗಿ, ಅವುಗಳ ಅನಾವರಣ ಸಮಾರಂಭ ಜರುಗಿಸಿ, ಅವುಗಳಿಗೆ ಗಾಂಧಿ—ಜವಾಹಿರ ಉಪ್ಪಿನಾಗರಗಳೆಂದು ನಾಮಕರಣ ಮಾಡಿದರು.

ಕೈದಿಗಳು ಜೇಲಿಗೆ ಬೆಂಕಿ ಹಚ್ಚಿದರು

ಇಂಗ್ಲಂಡದ ಸ್ಕಾಟ್ಲಂಡಿನ ಸೆರೆಮನೆಯ ೧೪೦೦ ಕೈದಿಗಳು ಒಮ್ಮೆಲೆ ಬಂಡೆದ್ದು, ಅಡಗಿಯುವ ಮನೆ, ಕಾರಖಾನೆ ಮೊದಲಾದವುಗಳಿಗೆ ಬೆಂಕಿ ಹಚ್ಚಿದರು. ರೋಮನ್ ಕ್ಯಾಥೊಲಿಕ್ ಪಂಗಡದ ಧರ್ಮಗುರುಗಳು ಕೈದಿಗಳನ್ನು ಶಾಂತ ಪಡಿಸಲು ಬಹಳೇ ಪ್ರಯತ್ನ ಪಟ್ಟರು. ಆದರೆ ಅವರ ಕಾರ್ಯವು ಕೈಗೂಡಲಿಲ್ಲ. ಕಾವಲುಗಾರರು ಕೊನೆಗೆ ಬಾಂಬು ಮೊದಲಾದವುಗಳನ್ನು ಉಪಯೋಗಿಸಿ ಕೈದಿಗಳನ್ನು ಅವರವರ ಕೋಣೆಗೆ ಹಿಂದಕ್ಕಟ್ಟಿದರು. ಈ ಸಮಯದಲ್ಲಿ ೪ ಜನ ಕೈದಿಗಳಿಗೆ ಭಯಂಕರ ಅಪಾಯ ಸಂಭವಿಸಿತು.

ಮದ್ರಾಸ ಇಲಾಖೆಯಲ್ಲಿ ಮಂದಿರ ಪ್ರವೇಶದ ಹಾವಳಿ

ತಾ|| ೧೬ ನೆಯ ದಿವಸ ಪ್ರತಿಕ್ಷೇತ್ರದ ಸಮಯದಲ್ಲಿ ಮದ್ರಾಸ ಕಾನೂನು ಸಭೆಯ ಗೃಹಮಂತ್ರಿಗಳು, ಕಾಯಿದೆ ಭಂಗ ಚಳವಳಿಯಲ್ಲಿ ಮದ್ರಾಸ ಇಲಾಖೆಯಲ್ಲಿ [illegible] ಸಾಯಿ ಹೋಗಿ [illegible], [illegible] ಹಾಗು [illegible] ಕೂಡಿ [illegible] ನಿರ್ಬಂಧಿಸಿದವೆಂದೂ, [illegible].

ಒಪ್ಪಂದದ ವಿರುದ್ಧವಾಗಿ ಕರೇ ಗಿಡ ನೆಯ ಮೆರವಣಿಗೆ

ವಿರತ ಒಪ್ಪಂದದ ಹಾಗು ಇತರ ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿ ಒಪ್ಪಂದದ ಕರಾರುಗಳಲ್ಲಿ ಇಟ್ಟಿರುವ ಒಪ್ಪಂದವನ್ನು ಮಾಡಿಕೊಂಡಿದ್ದರ ವಿರೋಧಾರ್ಥವಾಗಿ ಅಮೃತಸರದ ಯುವಕ ಸಂಘದವರು ತಾ|| ೨೦ ನೆಯ ದಿವಸ ಕರೇ ಹಾಗು ಕೆಂಪು ನಿಶಾನೆಯ ಪ್ರಚಂಡ ಮೆರವಣಿಗೆ ಹೊರಡಿಸಿ ಈ ಬಗ್ಗೆ ತಮ್ಮ ನಿಷೇಧವನ್ನು ವ್ಯಕ್ತ ಪಡಿಸಿದರು.

ದಿ. ಬ. ಲಠ್ಠೆಯವರು ದಿವಾನ ಪದಕ್ಕೆ ರಾಜೀನಾಮೆ ಕೊಟ್ಟರು

ಕೊಲ್ಹಾಪುರ ಸಂಸ್ಥಾನದ ದಿವಾನರಾಗಿದ್ದ ದಿ ಬ ಎ ಬಿ ಲಠ್ಠೆಯವರು ತಮ್ಮ ದಿವಾನ ಪದಕ್ಕೆ ರಾಜೀನಾಮೆ ಕೊಟ್ಟು ಬೇಗನೆ ಹೊರಟು ಬಂದಿದ್ದಾರೆ ರಾಜೀನಾಮೆ ಕೊಟ್ಟ ಕಾರಣವು ತಿಳಿದು ಬಂದಿಲ್ಲ. ಇವರ ಸ್ಥಳದಲ್ಲಿ ಶ್ರೀ ಸಬನೀಸರವರು ದಿವಾನರಾಗುವರಾಗಿ ಸುದ್ದಿಯಿದೆ.

ಫಿಲಿಫಾಯಿನ್ಸದಲ್ಲಿ ಭಯಂಕರ ಭೂಕಂಪ

ಅಮೇರಿಕದ ಫಿಲಿಫಾಯಿನ್ಸ ಪ್ರದೇಶದಲ್ಲಿ ಭಯಂಕರ ಭೂಕಂಪವಾಗಿ ಇಬ್ಬರು ಶಿಕ್ಷಕರು ಹಾಗು ಕೆಲವು ವಿದ್ಯಾರ್ಥಿಗಳಿಗೆ ಅಪಾಯ ಸಂಭವಿಸಿದೆ. ಎಷ್ಟೋ ಕಟ್ಟಡಗಳು ಹಾಳು [illegible] ಬಿದ್ದಿವೆ.

ಭರತಖಂಡದಲ್ಲೆಲ್ಲ ಭಗತಸಿಂಗರ ದಿನ

(ಕಂತಿಯ ವಾರ್ತೆ, ತಾ| ೨೩)

ಇವತ್ತಿನ ದಿವಸ ಭರತಖಂಡದಲ್ಲೆಲ್ಲ ಭಗತಸಿಂಗರ ದಿನವು ಆಚರಿಸಲ್ಪಡುವದಾಗಿ ತಿಳಿದು ಬರುತ್ತದೆ.

ಗುಜರಾಥದಲ್ಲಿ ಒತ್ತಾಯದ ಕರ

ಭೂಕಂದಾಯವನ್ನು ಕೊಡದೆ ಇದ್ದ ರೈತರ ಭೂಮಿಗಳನ್ನು ಸರಕಾರದವರು ತಮ್ಮ ವಶಕ್ಕೆ ಪಡೆದುಕೊಂಡು, ಅವುಗಳ ವಿಕ್ರಣೆಗಾಗಿ ಕರಾರನ್ನು ನಿಯಮಿಸಿದ್ದರಷ್ಟೆ. ಕರಾರಿಗೆ ತಗಲುವ ವೆಚ್ಚವನ್ನು ಪೋಲೀಸ ಅಧಿಕಾರಿಗಳು ಹಳ್ಳಿಯಲ್ಲಿ ಜುಲುಮಿಯಿಂದ ವಸೂಲ ಮಾಡುತ್ತಿರುವರಾಗಿ ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಅಧಿಕಾರಿಗಳ ಕಡೆಗೆ ಎಷ್ಟೋ ದೂರುಗಳ ಬಂದಿದ್ದು, ಇಂತಹ ಕರವನ್ನು ಎತ್ತಕೂಡದಾಗಿ ಅವರು ಸರಕಾರಕ್ಕೆ ಬರೆದುಕೊಂಡಿದ್ದಾರೆ.

ಮಹಾತ್ಮರಿಗೆ ಬಾಬೂ ರಾಜೇಂದ್ರರ ತಾರು.

ಬಿಹಾರ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಬಾಬೂ ರಾಜೇಂದ್ರ ಪ್ರಸಾದರು ಮಹಾತ್ಮಾ ಗಾಂಧಿಯವರಿಗೆ ಕೆಳಗಿನಂತೆ ತಾರು ಮಾಡಿದ್ದಾರೆ.

ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಸರಕಾರದವರು ವಿಳಂಬ ಮಾಡುತ್ತಿರುವರು. ಸುಮಾರು ೮೦೦ ಜನರು ಇನ್ನೂ ಜೇಲಿನಲ್ಲಿಯೇ ಕೊಳೆಯುತ್ತಿರುವರು. ಎಷ್ಟೋ ಜನ ವಿಚಾರಣೆಯಿಲ್ಲದೆ ಜೇಲಿನಲ್ಲಿ ಹಾಗೆಯೇ ಬಿದ್ದಿರುವರು [illegible] ಕಾಂಗ್ರೆಸ್ಸಿನ ರಾಜ [illegible] ಅರಿಸಿ [illegible] [illegible] ಮಾನವರ [illegible] ಬಿಡುಗಡೆ ಮಾಡದ [illegible] ಕಾಂಗ್ರೆಸ್ಸಿನ ಪ್ರತಿನಿಧಿ [illegible] [illegible] ಬಂಧ [illegible] ನಿರ್ಧರಿಸಿಕೊಂಡಿದ್ದಾರೆ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಇನ್ನು ವಿಳಂಬವಾದಲ್ಲಿ ಕಾಂಗ್ರೆಸಕ್ಕೆ ಒರಲು ಅವರಿಗೆ ಅನುಕೂಲವಾಗುವದಿಲ್ಲ

ಲಾರ್ಡ [illegible] ಕರುಣಾ ಅರ್ಜಿಯನ್ನು ಧಿಕ್ಕರಿಸಿದರು.

[illegible] ಸಂಬಂಧದ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗ, ರಾಜಗುರು, ಸುಖದೇವ ಇವರ ದಯೆಯ ಅರ್ಜಿಯನ್ನು ವ್ಹಾಯಿಸರಾಯರು ನಿರಾಕರಿಸಿದ್ದರಿಂದ, ಲಾಹೋರದಲ್ಲಿ ವಿಶೇಷ ಕ್ಷೋಭೆಯುಂಟಾಗಿದೆ. ನವಜವಾನ ಭಾರತ ಸಭೆಯವರು ಜಾಹೀರ ಪತ್ರಿಕೆಯ ಮೂಲಕ ಒಪ್ಪಂದವನ್ನು ಧಿಕ್ಕರಿಸಿ, ಮಾರ್ಚ ೨೩ ನೆಯ ತಾರೀಖು ಸಭೆ, ಮೆರವಣಿಗೆ ಮೊದಲಾದವುಗಳನ್ನು ಜರುಗಿಸಬೇಕೆಂದು ತರುಣರಿಗೆ ಕೇಳಿಕೊಂಡಿದ್ದಾರೆ.

ಗುಜರಾಥ ರೈತರು ಹಳ್ಳಿಗಳಿಗೆ ತಿರುಗಿ ಬಂದರು

ಕರನಿರಾಕರಣ ಚಳವಳಿಯ ಸಂಬಂಧವಾಗಿ ತಮ್ಮ ತಮ್ಮ ಹಳ್ಳಿಗಳನ್ನು ಬಿಟ್ಟು ಹೋದ ಗುಜರಾಥ ರೈತರು ಮಹಾತ್ಮಾ ಗಾಂಧಿಯವರು ಅಪ್ಪಣೆಯಿತ್ತಿದ್ದರಿಂದ ತಮ್ಮ ಹಳ್ಳಿಗಳಿಗೆ ತಿರುಗಿ ಬಂದಿದ್ದಾರೆ.

ಜಾಹೀರಾತು [illegible]

[illegible]

[illegible] ಕನ್ನಡಿಗ[illegible] [illegible] [illegible] ಇನ್ನು[illegible] [illegible] ಪ್ರಚಾರವು [illegible] ಗಿದೆ [illegible] ಯುವಕರಿಗೆ [illegible] ದರದಿಂದ [illegible] ಇಷ್ಟವ್ಯವಹಾರ [illegible] ಆದವುಗಳ ಬಗ್ಗೆ [illegible] ಪತ್ರ ದ್ವಾರದಿಂದ ತಿಳಿದು [illegible]

[illegible]

ಸ್ಯಾಂಪಲ್, [illegible]

[illegible]

[illegible] ೧-೦-೦

[illegible] ೧-೦-೦

ಗಂಡಸರ ಬಳ್ಳಿಗೆ

ಹೆಚ್ಚಿನ ಮಾಹಿತಿ ಬಗ್ಗೆ [illegible] ಬರ ಮಾಡಿರಿ

ಕರ್ನಾಟಕ [illegible] ಕಂಪನಿ ಬಾಗಲಕೋಟೆ

ಮುಲ್ಕೀ ಪರೀಕ್ಷೆಯ [illegible]

[illegible]

[illegible]

[illegible] ೧-೦-೦

[illegible] ೧-೪-೦

[illegible]

[illegible]

ನೂತನ ಪುಸ್ತಕಾಲಯ [illegible]

ವಿಜಾಪುರದಿಂದ ಸಿಂಧನೂರ

ಮೋಟರ ಸರ್ವೀಸ

ಮೋಟ ಪ್ರತಿದಿನ ವಿಜಾಪುರದಿಂದ [illegible] ಗಂಟೆಗೆ ಹೊರಟು, [illegible] ಮಾರ್ಗವಾಗಿ [illegible] ಮುಟ್ಟುವದು. [illegible] ಸಂಜೆಯ [illegible] ಗಂಟೆಗೆ ವಿಜಾಪುರಕ್ಕೆ [illegible] [illegible] ಬೇಕು. ಮ್ಯಾನೇಜರ.

ಅಟೆಲ [illegible]

ದಾನಿ — ದಾಬಡೆ ಟೇಲರ್ಸ

ನಮ್ಮಲ್ಲಿ [illegible] ಉತ್ತಮ [illegible] [illegible] ಪರೀಕ್ಷಿಸಿರಿ.

ದಾನಿ—ದಾಬಡೆ

ಟೇಲರ್ಸ

ಬಾಗಲಕೋಟ—[illegible]

ಚರಖಾಸಂಘ.

ಬಾಗಲಕೋಟೆಯಲ್ಲಿ ಚರಖಾಸಂಘವು ಸಣ್ಣ ಪ್ರಮಾಣ [illegible] ವಿದ್ಯಾ[illegible] ನಡಿಸಿರುತ್ತದೆ. ಈ ಶಾಲೆಯಲ್ಲಿ [illegible] (ಅರಿಯುವದು) [illegible] ಮಾಡುವದು, ನೂಲು [illegible] ಮಾಡುವದು, ನೇಯುವದ, [illegible] ಮಾಡುವದು, [illegible] ಕಲಿಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಊಟವಸತಿಗಳ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕು [illegible] ಬಡವನೆಂದು [illegible] ಅವನ ಊಟದ ಬಗ್ಗೆ [illegible] ಊಟದ ವ್ಯವಸ್ಥೆ [illegible] ಮಾಡುವದರಲ್ಲಿ ಬರುವದು. [illegible] ಜಾಗೆಯ ವ್ಯವಸ್ಥೆಯನ್ನು ಮಾಡಿರು[illegible], ವಿದ್ಯಾರ್ಥಿಗಳು [illegible] ಬೇಕು.

ಕರ್ನಾಟಕದ ಸೇವೆ ಮಾಡಲಪೇಕ್ಷೆಯುಳ್ಳವರು ಈ ಸಂಧಿಯನ್ನು ಕಳೆದು ಕೊಳ್ಳಬಾರದು. ಈ ಸಂಘದಲ್ಲಿ ಕೆಳಗೆ ಬರೆದ ಯಾವ [illegible] ಸಿಗುತ್ತವೆ.

೧ ಹತ್ತಿ[illegible] ಬಿಡಿಸುವ [illegible]

೨ [illegible]

೩ [illegible] (ಬಿಸಿ[illegible])

೪ [illegible]

೫ [illegible] ಸಿದ್ಧಪಡಿಸಿದ [illegible] ನೂಲು [illegible]

೬ ಚರಖಾ [illegible]

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕೂಡ ಪತ್ರವ್ಯವಹಾರದ ಬಗ್ಗೆ [illegible] ಪೋಸ್ಟ ತಿಕಿಟ [illegible] ಬೇಕು.

ನಾರಾಯಣ ರಾಘವೇಂದ್ರರಾವ ದೇಸಾಯಿ

ವ್ಯವಸ್ಥಾಪಕರ

ಚರಖಾಸಂಘ ಬಾಗಲಕೋಟೆ.

ಸ್ವದೇಶಿ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈನೂಲು, ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ [illegible] ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ಹಣಮಂತರಾವ

'ಸ್ವದೇಶೀ ಸ್ಟೋರ್ಸ'

ಹೊಸ ಬಜಾರ, ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.

ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೊಪ್ಪಿಗೆಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೊಪ್ಪಿಗೆಗಳು, [illegible] ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ದಲ್ಲಾಲಿ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ

'[illegible]' ಮೋಹರೋಣ

ವಿಜಾಪುರ

'ಕನ್ನಡಿಗ'ನ ನಿತ್ಯಸಂಚಿಕೆ.

ದೈನಿಕ "ಕನ್ನಡಿಗ"ನು ಕನ್ನಡಿಗರ ಸೇವೆ ಮಾಡಹತ್ತಿ ಈಗ ಒಂದು ವರ್ಷ ಕಳೆದು ಹೋಯಿತು. ಅವನು ಈಗ ತನ್ನಲ್ಲಿ ಕೆಲಕೆಲವು ಹೊಸ ಸುಧಾರಣೆಗಳನ್ನು ಮಾಡಿಕೊಂಡು ಎರಡನೆಯ ವರ್ಷದಲ್ಲಿ ಕಾಲಿಟ್ಟಿರುವನು. ಮೊದಲಿನಕಿಂತಲೂ ಇನ್ಮುಡಿ ಆಕಾರದಲ್ಲಿ ಹೊರಡುತ್ತಿರುವನು. ಹಿಂದುಸ್ಥಾನದ ಭಾವೀರಾಜ್ಯಘಟನೆಯ ಸಂಬಂಧವಾಗಿ ಕರಾಚಿ ಕಾಂಗ್ರೆಸ್ಸು ಹಾಗು ದುಂಡ ಮೇಜಿನ ಪರಿಷತ್ತುಗಳಲ್ಲಿ ನಡೆಯತಕ್ಕದ್ದಾಗಿರುವ ಚರ್ಚೆಯ ಸುದ್ದಿಗಳನ್ನು ಆದಷ್ಟು ಬೇಗನೆ ತಿಳಿದುಕೊಳ್ಳಲು ಜನಸಾಮಾನ್ಯರೂ ಸಹ ಈಗ ಬಹು ಆತುರರಾಗಿರುವದರಿಂದ, ಅವರ ಈ ಆತುರತೆಯನ್ನು ತೃಪ್ತಪಡಿಸುವದಕ್ಕಾಗಿ ಕನ್ನಡಿಗನು ಈಗ ಅಸೋಸಿಯೇಟೆಡ್ ಪ್ರೆಸ್ಸದವರಿಂದ ತಂತಿ ವರ್ತಮಾನಗಳನ್ನು ತರಿಸಿಕೊಳ್ಳುತ್ತಿರುವನು. ಇದಲ್ಲದೆ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿಯ ಸ್ವಂತ ಪ್ರತಿನಿಧಿಗಳಿಂದ ಮಹತ್ವದ ಸುದ್ದಿಸಂಗತಿಗಳ ಬಗ್ಗೆ ಪತ್ರಗಳನ್ನು ತಂತಿಗಳನ್ನು ತರಿಸಿಕೊಂಡು ಅಲ್ಲಿಯ ಸ್ಥಿತಿಗತಿಗಳನ್ನು ಕನ್ನಡಿಗರ ಕಣ್ಮುಂದೆ ಇಡುತ್ತಿರುವನು. ಮುಂಬಯಿಯ ಪೇಟೆಯ ಧಾರಣೆಯನ್ನು ದಿನದಿನಕ್ಕೂ ತಂತಿಯಿಂದ ತರಿಸಿ ವ್ಯಾಪಾರಸ್ಥರ ಅಡಚಣಿಯನ್ನು ದೂರ ಮಾಡುತ್ತಿರುವನು. ಇಂಥ ಸಾಹಸಕ್ಕೆ ಕೈಹಾಕಿದ ಪತ್ರಿಕೆಯೆಂದರೆ ಕರ್ನಾಟಕದಲ್ಲಿ ಇದೇ ಮೊದಲನೆಯದಾಗಿದೆ. ಕನ್ನಡಿಗನ ಈ ಉದ್ದೇಶವು ಸಫಲವಾಗಬೇಕಾದರೆ ಏನಿಲ್ಲೆಂದರೂ ೪.೦೦ ಜನ ಚಂದಾದಾರರು ಕನ್ನಡಿಗನನ್ನು ತರಿಸಿಕೊಳ್ಳಬೇಕಾಗುವದು. ಇಷ್ಟು ಜನ ಚಂದಾದಾರರು ದೊರೆಯುವರೆಂಬ ನಂಬಿಗೆಯಿಂದಲೆ ಅವನು ಈ ಸಾಹಸಕ್ಕೆ ಕೈಹಾಕಿರುವನು. ಕನ್ನಡಿಗನನ್ನು ತರಿಸಿಕೊಳ್ಳುವದು ಜನಸಾಮಾನ್ಯರಿಗೆ ಭಾರವಾಗಬಾರದೆಂಬ ಉದ್ದೇಶದಿಂದ, ಆಕಾರವು ಮೊದಲಿನಕಿಂತ ಇನ್ಮುಡಿಯಾಗಿದ್ದರೂ ಸಹ, ಬೆಲೆಯನ್ನು ಮೊದಲಿನಷ್ಟೇ ಅಂದರೆ ಮೂರು ಪೈ ಇಟ್ಟಿದೆ.

ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರು ಕೊಪ್ಪಳ ಮುಂತಾದ ಸ್ಥಳಗಳಿಗೆ ಪಾರ್ಸಲುಗಳನ್ನು ಕಳಿಸಿ, ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ನಮಗೆ ಪತ್ರ ಬರೆದುಕೊಳ್ಳಬೇಕು. ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ತಿಕೀಟ ಏಜಂಟರು ತಾವೇ ಮಾಡಿಕೊಳ್ಳತಕ್ಕದು.

ಏಜಂಟರಾಗಲಿಚ್ಛಿಸುವವರು ಕೂಡಲೆ ಬರೆದುಕೊಳ್ಳಬೇಕು ಸಣ್ಣ ಊರವರು ಕನಿಷ್ಠ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ್ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ ಕಳಿಸಬೇಕು. ೧೦೦ ಕ್ಕೆ ೫ ಕಿಂತ ಹೆಚ್ಚಿಗೆ ಉಳಿದ ಪ್ರತಿಗಳನ್ನು ತಿರುಗಿ ತೆಗೆದುಕೊಳ್ಳುವದಿಲ್ಲ. ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ನು ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦—೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳ ೩-೪ ರೂಪಾಯಿ ಲಾಭವು ದೊರೆಯುವವು. ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ದೊರೆಯುವದು. ಮೋಟಾರಿಗೆ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಕಾರಣ ಏಜಂಟರು ಕೊಂಚ ಪ್ರಯತ್ನ ಮಾಡಿ ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖ್ಯ ಜನರ [illegible] ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖ್ಯ ಜನರ ಹೆಸರುಗಳನ್ನು ನೊಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರಸಿದ್ಧಿಯಾಗಿ ಅವರ ಹೆಸರು [illegible] ಗಳು ಹೆಚ್ಚಾಗಿ ಖರ್ಚಾಗುವವು. ಆದುದರಿಂದ ಅವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ — ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ. ಹಂಗಾಮಿ ಜಾಹೀರಾತುಗಳಿಗೆ ಐದು ಆಣೆ.

ಬಾಗಲಕೋಟ
೨೦—೩—೧೯೩೧

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ.

ಡಾಕ್ಟರ ಕೃಷ್ಣರಾವ ಪರ್ವತೀಕರ

ಇವರ

ಮೆಡಿಕಲ್ ಸ್ಟೋರ್ಸ

ನಮ್ಮಲ್ಲಿ ದೇಶಿ ಹಾಗು ಪೇಟಂಟ ಔಷಧಗಳು ಮತ್ತು ದವಾಖಾನೆಗೆ ಉಪಯೋಗ ಬೀಳುವ ಎಲ್ಲತರದ ಸಾಮಾನುಗಳು ಯೋಗ್ಯ ಬೆಲೆಗೆ ಮಾರಲಿಕ್ಕೆ ದೊರೆಯುತ್ತವೆ.

ಕೃಷ್ಣರಾವ ಪರ್ವತೀಕರ

ದವಾಖಾನೆ ಮತ್ತು ಮೆಡಿಕಲ್ ಸ್ಟೋರ್ಸ

ಬಾಗಲಕೋಟೆ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು ಕೇಲರಿಂಗ ಕೆಲಸವು ಉತ್ತಮ [illegible] ಯಲ್ಲಿ ಮಾಡಲ್ಪಡುವದು. ಕೇಲರಿಂಗದ [illegible] ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಅಂಡ ಕೇಲರ್ಸ

ಹೊಸಬಜಾರ ವಿಜಾಪುರ

ಈ ಪತ್ರಿಕೆಯು [illegible] ಕರೂರ [illegible] ಬಾಗಲಕೋಟೆ [illegible] ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥—ಮನು.

ಕನ್ನಡಿಗ

KANNADIGA BAGALKOT. BI-WEEKLY ಅರೆವಾರ ಪತ್ರಿಕೆ

ಸಂಪಾದಕರು:– ಮಂಗಳವೇಡೆ ಶ್ರೀ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ರವಿವಾರದ ಹೊರತಾಗಿ ಪ್ರತಿ ನಿತ್ಯವೂ ಪ್ರಕಟಿಸಲ್ಪಡುವದು

ನಿತ್ಯಪತ್ರಿಕೆಯ ವರ್ಗಣೀ ದರಗಳು

ಪರಸ್ಥಳದವರಿಗೆ	
೧೨ ತಿಂಗಳಿಗೆ	೧೨—೦—೦
೬ ,,	೬—೦—೦
೩ ,,	೩—೦—೦
೧ ,,	೧—೦—೦
ಸ್ಥಳೀಕರಿಗೆ	
೧೨ ತಿಂಗಳಿಗೆ	೬—೦—೦
೬ ,,	೪—೦—೦
೩ ,,	೧—೮—೦
೧ ,,	೦—೮—೦

ನಿತ್ಯಪತ್ರಿಕೆಯ ಜಾಹೀರಾತಿನ ದರಗಳು

೧ನೇ ಸಲ ೧ ಇಂಚಿಗೆ ೧—೦—೦
೨ ,, ,, ೧—೦—೦
ಮುಂದೆ ಪ್ರತಿಯೊಂದು ಸಲ ೦—೨—೦
ಹೆಚ್ಚಿಂಗದವರಿಗೆ ಅಕ್ಷರಗಳ ಪ್ರಮಾಣದಿಂದ ದರ ಬೀಳುವದು

ವರ್ಷ ೨] ಬಾಗಲಕೋಟೆ— ಬುಧವಾರ ಮಿತಿ ಚೈತ್ರ ಶುದ್ಧ ೬ ಶಕೆ ೧೮೫೩ ತಾ|| ೨೫—೩—೩೧ [ಸಂಚಿಕೆ ೫

ಶ್ರೀ ಹರಿಕಿಶನರನ್ನು ಗಲ್ಲಿಗೇರಿಸುವರು.

ಪಂಜಾಬ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದ ಸಮಯದಲ್ಲಿ ಗವ್ಹರ್ನರ ಮೇಲೆ ಗುಂಡು ಹಾರಿಸಿದ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಗುರಿಯಾಗಿರುವ ಶ್ರೀ ಹರಿಕಿಶನರನ್ನು, ಲಾಹೋರ ಸೆರೆಮನೆಯಿಂದ ಮಿಯಾನವಾಲಿ ಸೆರೆಮನೆಗೆ ಕರೆದೊಯ್ದದ್ದರಿಂದ, ಅವರ ತಂದೆಯವರಿಗೆ ಅವರ ಭೆಟ್ಟಿಯಾಗಲಿಲ್ಲ. ಅವರು ಗವ್ಹರ್ನರ ಹಾಗು ಗೃಹಮಂತ್ರಿಗಳಿಗೆ ತಾರು ಮಾಡಿ, ಹರಿಕಿಶನರನ್ನು ಲಾಹೋರ ಸೆರೆಗೆ ತಂದು ಅವರನ್ನು ಗಲ್ಲಿಗೇರಿಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ

ಕರಾಚಿ ಕಾಂಗ್ರೆಸದವರಿಗೆ ಮಹಾತ್ಮರ ತಾರು.

ಭಗತಸಿಂಗರನ್ನು ಗಲ್ಲಿಗೆ ಹಾಕುವರ ಕಾರಣ ಮೆರವಣಿಗೆ ಹೊರಡಿಸಬೇಡಿ.

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗ ಮೊದಲಾದವರನ್ನು ಸರಕಾರದವರು ಈ ನಡುವೆ ಗಲ್ಲಿಗೆ ಹಾಕಿದ್ದಾರೆಂಬುದಾಗಿ ತಿಳಿದು ಬಂದಿದ್ದರಿಂದ, ಮಹಾತ್ಮಾ ಗಾಂಧಿಯವರು ಕರಾಚಿ ಕಾಂಗ್ರೆಸ್ ಅಧಿಕಾರಿಗಳಿಗೆ ತಾರು ಮಾಡಿ, ಕಾಂಗ್ರೆಸ್ ಸಪ್ತಾಹದಲ್ಲಿ ಮೆರವಣಿಗೆ ಮೊದಲಾದವುಗಳನ್ನು ಜರುಗಿಸಕೂಡದಾಗಿ ಬಿನ್ನವಿಸಿಕೊಂಡಿದ್ದಾರೆ.

ಮಹಾತ್ಮಾ ಗಾಂಧಿಯವರಿಂದ ತಾರು ಬಂದ ಕೂಡಲೆ, ಸ್ವಾಗತ ಸಭೆಯವರು ಸಭೆಯಲ್ಲಿ ಸೇರಿ, ಅಧ್ಯಕ್ಷರ ಸನ್ಮಾನಾರ್ಥವಾಗಿ ತಾ|| ೨೮ ಕ್ಕೆ ಜರಗಲಿಕ್ಕಿದ್ದ ಮೆರವಣಿಗೆಯನ್ನು ಜರುಗಿಸಕೂಡದಾಗಿ ನಿರ್ಧರಿಸಿಕೊಂಡರು.

ಶ್ರೀ ಸುಭಾಷರು ಮಹಾತ್ಮರನ್ನು ವಿರೋಧಿಸುವರಂತೆ!

ಬಂಗಾಲ ಪ್ರಾಂತಿಕ ಸಮಿತಿಯ ಕಾಂಗ್ರೆಸ್ ಮುಖಂಡರಾದ ಶ್ರೀ ಸುಭಾಷಚಂದ್ರ ಬೋಸರು ವ ದ್ರಾವಿಡದ ಮುಖಂಡರಾದ ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರರೊಡನೆ ಈಗ ಕರಾಚಿಗೆ ಪ್ರಯಾಣ ಬೆಳೆಸಿದ್ದು, ಇಬ್ಬರೂ ಕೂಡಿ ಕರಾಚಿ ಕಾಂಗ್ರೆಸದಲ್ಲಿ ಒಪ್ಪಂದದ ಕರಾರಿನ ಮೇಲೆ ಮಹಾತ್ಮಾ ಗಾಂಧಿ ಹಾಗು ಕಾಂಗ್ರೆಸ ಕಮೀಟಿಯನ್ನು ವಿರೋಧಿಸುವವರಿದ್ದಾರೆಂದು ತಿಳಿದು ಬಂದಿದೆ.

ಸೇನಾಪತಿ ಆವರಿಯವರಿಗೆ ಬಿಡುಗಡೆಯಿಲ್ಲ

ನಾಗಪುರದ ಕೆಲವು ಪ್ರಮುಖ ಜನರು ತಾ| ೧೮ ನೆಯ ದಿವಸ ಗೃಹಮಂತ್ರಿಗಳಾದ ಶ್ರೀ ಈ. ರಾಘವೇಂದ್ರರಾಯರನ್ನು ಕಂಡು ಕೊಂಡ, ಸೇನಾಪತಿ ಆವರಿಯವರ ಬಿಡುಗಡೆಯ ಸಂಬಂಧವಾಗಿ ಅವರೊಡನೆ ಚರ್ಚೆ ಮಾಡಿದರು. ಸೇನಾಪತಿ ಆವರಿಯವರು ಶಾಂತಿಭಂಗ ಚಳವಳಿ ವಿನಹ ಸಂಬಂಧಿಸಿದ್ದವರಾದ್ದರಿಂದ ಶಿಕ್ಷೆಯ ಅವಧಿಯ ಮೊದಲು ಅವರನ್ನು ಬಿಡುಗಡೆ ಮಾಡುವದಿಲ್ಲವಾಗಿ ಗೃಹಮಂತ್ರಿಗಳ ಉತ್ತರ ಕೊಟ್ಟರು.

ನಗರ ವನದ ಅಧಿಕಾರಿಯನ್ನು ಗುಂಡು ಹೊಡೆದ ಕೊಂದರು

ಟಿಪ್ಪೆರಿ ನಗರ ವನದ ಮುಖ್ಯಕಾರಿಯಾದ ಮಿ. ಸ್ಟೀವನ್ಸನ್ನು ಕ್ರಾಂತಿಕಾರಿ ಕೆಲವರು ತಾ|| ೨೧ ನೆಯ ದಿವಸ ಮುಂಜಾನೆ ಗುಂಡ ಹೊಡೆದು ಕೊಂದರು.

ಜಬಲಪುರದಲ್ಲಿ ೧೫ ಜನರಿಗೆ ಶಿಕ್ಷೆ

ಜಬಲಪುರ ದಲ್ಲಿ ಈ ನಡುವೆ ನಡೆದ ಮೆರವಣಿಗೆಯೊಂದರ ಹಾಗು ಸಂಬಂಧವಾಗಿ ವಿಚಾರಣೆಗೆ ಗುರಿಯಾಗಿದ್ದ ೧೫ ಜನ ಕಾಂಗ್ರೆಸ್ ಕಾರ್ಯಕರ್ತರಿಗೆ ೬ ತಿಂಗಳಿಂದ ಒಂದು ವರ್ಷದ ವರೆಗೆ ಬೇರೆ ಬೇರೆ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

ಅಖಿಲಭಾರತ ಕಾಂಗ್ರೆಸ್ ಕಮೀಟಿಯ ಸಭೆ

ಅಖಿಲ ಭಾರತ ಕಾಂಗ್ರೆಸ್ ಕಮೀಟಿಯ ಸಭೆಯು ತಾ|| ೨೫ ನೆಯ ದಿವಸ ಸೇರತಕ್ಕದ್ದಿದೆ.

ರಾಟಿಗಳ ಸ್ಪರ್ಧೆ.

ಉತ್ತಮ ಮಾದರಿಯ ರಾಟಿ ಸಿದ್ಧಪಡಿಸಿದವರಿಗೆ ೧ ಲಕ್ಷ ರೂಪಾಯಿ ಪ್ರತಿಫಲ ಕೊಡುವದರ ಬಗ್ಗೆ ಬಹಳ ದಿವಸ ಮಹಾತ್ಮಾ ಗಾಂಧಿಯವರು ಪ್ರಕಟಿಸಿದ್ದರಷ್ಟೆ. ಈ ಸಂಬಂಧವಾಗಿ ಕೆಲವು ಜನರು ಬೇರೆ ಬೇರೆ ಮಾದರಿಯ ೫೦ ರಾಟಿಗಳನ್ನು ಸಿದ್ಧಪಡಿಸಿ, ಗುಜರಾಥ ವಿದ್ಯಾಪೀಠಕ್ಕೆ ಕೊಟ್ಟು ಕಳಿಸಿದ್ದಾರೆ. ಪರೀಕ್ಷಕರು ಅವುಗಳನ್ನು ಪರೀಕ್ಷಿಸಹತ್ತಿದ್ದಾರೆ. ಈ ರಾಟಿಗಳಲ್ಲಿ ಯಾವ ರಾಟಿಯೂ ಮಹಾತ್ಮಾ ಗಾಂಧಿಯವರನ್ನು ತೃಪ್ತಿಪಡಿಸುವಂತಿಲ್ಲವೆಂದು ತಿಳಿದು ಬರುತ್ತದೆ. ರಾಟಿಗಳಲ್ಲಿ ಆ ಪ್ರಕಾರ ಸುಧಾರಣೆ ಮಾಡಲು ಅವರಿಗೆ ಅವಧಿಯು ಕೊಡಲ್ಪಡುವದಾಗಿ ತಿಳಿದು ಬರುತ್ತದೆ.

ಕಾರವಾರ ಕಲೇಕ್ಟರರ ಮೊಂಡ ಉತ್ತರ

ಸಿದ್ಧಾಪುರ ತಾಲೂಕಿನ ಕೈಸರ ಕರದಿಂದ ಹೋದ ಶಿಷ್ಟಮಂಡಳದವರು ತಾ|| ೧೯ನೇ ಮಧ್ಯಾಹ್ನ ೧೨ ಗಂಟೆಗೆ ಕಾರವಾರದಲ್ಲಿ ಉತ್ತರ ಕನ್ನಡ ಜಿಲ್ಹೆಯ ಕಲೆಕ್ಟರರಿಗೆ ಭೆಟ್ಟಿಯಾದರು. ಶಿಷ್ಟಮಂಡಳದವರ ಹೇಳಿಕೆಗಳನ್ನೆಲ್ಲ ಕಲೆಕ್ಟರರು ಕೇಳಿಕೊಂಡರು. ಆದರೆ ಕೊನೆಗೆ ಕಲೆಕ್ಟರರು “ಇದು ಕಾಂಗ್ರೆಸ್ಸಿನ ಪ್ರೋತ್ಸಾಹದಿಂದ ಹುಟ್ಟಿದ ಚಳವಳಿ. ಆರ್ಥಿಕ ದೈನ್ಯಾವಸ್ಥೆಯ ಮೂಲಕ ಹುಟ್ಟಿದ್ದಲ್ಲ. ಆದ್ದರಿಂದ ಕರಿಗೆ ಮಾಫಿ ಮಾಡಲು ಬರಲಾರದು. (ಸಾಲವನ್ನು ತಂದ ಕೊಡ ಬೇಕಾದರೂ ಮುಂದ್ದಕ್ಕೆ ಕೊಡಿ ಎಂದು ಕೇಳಿದಾಗಿ) ಮುದ್ದತ್ತು ಕೊಡಲಾರದು. ಈ ಕಪ್ಪದ ಕರಿಗೆ ಕೊಟ್ಟ ಪಕ್ಷಕ್ಕೆ ಮುಂದಿನ ಕಪ್ಪದ ಬಗ್ಗೆ ಮುಂದ್ದತ್ತು ಕೊಡುವ ಬಗ್ಗೆ ವಿಚಾರ ಮಾಡಲಿಕ್ಕೆ ರೈತರ ಪರಿಸ್ಥಿತಿಯ ಕುರಿತು ವಿಚಾರಣೆ ನಡಿಸಲು ಸಾಧ್ಯವಿಲ್ಲ. ಈಗ ಕರಿಗೆ ಕೊಡದಿದ್ದರೆ ಜಪ್ತಿ ಮುಂತಾದ ಕ್ರಮಗಳು ರೀತಿಯಂತೆ ಅವಲಂಬಿಸಲ್ಪಡುವವು” ಎಂದು ಉತ್ತರ ಕೊಟ್ಟರು. ರೈತರ ಕೈಯ್ಯಲ್ಲಿ ಹಣವಿಲ್ಲ ಎಂದು ಹೇಳಿದಾಗ “ಹಣವಿಲ್ಲದಿದ್ದರೆ ಕಾಂಗ್ರೆಸ್ಸಿನವರು ಕೊಟ್ಟಾರು” ಎಂದೂ ಹೇಳಿದರು.

ಕ. ವೃ.

ಇಗೋ! ನೋಡಿರಿ! ಇದು ಒಪ್ಪಂದವಂತೆ!

ಕಾರವಾರ ಜಿಲ್ಹೆಯ ಸಿರಸಿ ಸಿದ್ಧಾಪುರ ತಾಲೂಕಗಳಲ್ಲಿ ಕಂದಾಯ ಅಧಿಕಾರಿಗಳು ಜಪ್ತಿ ಸತ್ರವನ್ನು ಭರದಿಂದ ಸಾಗಿಸಿದ್ದಾರೆ. ಮಾಗೋಗಾರ ಮತ್ತು ಮತ್ತಿಗಾರ ಈ ಹಳ್ಳಿಗಳಲ್ಲಿ ಜಪ್ತ ಮಾಡಲ್ಪಟ್ಟ ಜಂಗಮ ಆಸ್ತಿಗಳನ್ನು ಅಧಿಕಾರಿಗಳು ತಾ|| ೧೮ ನೆಯ ದಿವಸ ಲಿಲಾವು ಮಾಡಿದರು. ಆದರೆ ಅವುಗಳನ್ನು ಲಿಲಾವಿನಲ್ಲಿ ಯಾರೂ ಬೇಡಿದ್ದರಿಂದ, ಅವರ ಪ್ರಯತ್ನವು ನಿಷ್ಫಲವಾಯಿತು. ಅಂಕೋಲಾ ತಾಲೂಕಿನ ರೈತರು ಮಹತ್ವದ ಅಹ್ವಿಂಸಾತ್ಮಕ ಕರನಿರಾಕರಣ ಚಳವಳಿಯನ್ನು ನಡೆಸಿದಾಗ್ಯೂ ಕೂಡ, ಅಧಿಕಾರಿಗಳು ಗೋಕರ್ಣದಲ್ಲಿ ಇಬ್ಬರು ರೈತರಿಂದ ೧|೪ ದಂಡವನ್ನು ವಸೂಲ ಮಾಡಿಕೊಂಡರು. ಹಿರೇಕೆರೂರ ತಾಲೂಕಿನೊಳಗಿನ ೫೦ ಜನ ಶಾನಭೋಗರಿಗೆ ಬಾಕಿಯಿದ್ದ ಹಣದ ಬಗ್ಗೆ ನೋಟೀಸುಗಳು ಕೊಡಲ್ಪಟ್ಟಿವೆ. ಬೀರಪ್ಪ ಎಂಬುವನ ಅಂಗಡಿಯೊಳಗಿಂದ ಜಪ್ತ ಮಾಡಿದ. ಸರಕುಗಳ ಮಾರಾಟವು ತಾ|| ೨೩ ನೆಯ ದಿವಸ ನಡೆಯ ಬೇಕಾಗಿತ್ತು.

ರಾಯಚೂರ ಪತ್ರ

(ಸ್ವಂತ ಸುದ್ದಿಗಾರರಿಂದ)

ಈಗ ೩—೪ ವರ್ಷಗಳಿಂದ ಮುಗಿದ ಇಲ್ಲಿ ಯ ಮ್ಯೆಸೂರರಾಯರ (ಮಾರ ಶ್ರಿ) ತೇರು ಈ ವರ್ಷ ಎಳೆಯಲಾಯಿತು ಇಷ್ಟು ವರ್ಷಗಳವರೆಗೆ ಮುಗ್ಗಿದುದರ ಕಾರಣವೇನೋ ತಿಳಿಯದು. ಆದರೆ ಪ್ರತಿ ವರ್ಷವು ಜಾತ್ರೆಯಂದು ಕೆಲವರಲ್ಲಿ ಜಟ್ಟಿ ಪಣಗಳ ಮಾಡುತ್ತಿದ್ದರೆಂದು ಗಾಳಿಯ ಸುದ್ದಿ. ಇದು ನಿಜವಿದ್ದರೆ ಆ ಹಣವನ್ನೇನು ಮಾಡುತ್ತಿದ್ದರೋ ತಿಳಿಯದು. ಜಾತ್ರೆಯು ಮಾತ್ರ ಮುಗ್ಗಿದ್ದಿತು.

ಇಲ್ಲಿಗೆ ದತ್ತಾತ್ರೇಯ ನಾಟಕ ಮಂಡಳಿಯವರೂ, ವಾಣೀವಿಲಾಸ ನಾಟಕ ಮಂಡಳಿಯವರೂ ಬಂದಿದ್ದು ತಮ್ಮ ಹೊಸ ಹೊಸ ನಾಟಕಗಳನ್ನು ಪ್ರದರ್ಶಿಸುತ್ತಿರುವರು.

ಕರ್ನಾಟಕ ತರುಣ ಸಂಘದ ವಾರ್ಷಿಕೋತ್ಸವವು ಇದೇ ತಿಂಗಳ ೨೯ ನೇ ತಾರೀಖಿನ ದಿವಸ ಜರುಗುವದಿದ್ದು, ಶ್ರೀ ಮುದವೀಡು ಕೃಷ್ಣರಾಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಒಪ್ಪಿರುವರಾಗಿ ತಿಳಿಯುತ್ತದೆ.

ಆಗ್ರಾದಲ್ಲಿ ಹಿಂದೂ—ಮುಸಲ್ಮಾನರ ದಂಗೆ

೩೦ ಜನರಿಗೆ ಗಾಯ, ಒಬ್ಬನಿಗೆ ಮರಣ

ಹಿಂದೂ ಜನರ ಹೋಳಿ ಮೆರವಣಿಗೆಯು ಮಾರ್ಕೆಟ್ಟಿನ ರಸ್ತೆಯಿಂದಿಗೆ ಮಸೀದಿಯ ಮುಂದೆ ಹಾಯ್ದು ಹೋಗುತ್ತಿರುವಾಗ ಮುಸಲ್ಮಾನರು ಮೆರವಣಿಗೆಯ ಮೇಲೆ ಹಲ್ಲೆ ಮಾಡಿ ಎಷ್ಟೋ ಜನರನ್ನು ಗಾಯಪಡಿಸಿದರು. ಈ ಸುದ್ದಿಯು ತಮಗೆ ತಿಳಿದು ಬಂದ ಕೂಡಲೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹಾಗು ಪೋಲೀಸ ಅಧಿಕಾರಿಗಳು ಆ ಸ್ಥಳಕ್ಕೆ ಹೋಗಿ ದಂಗೆಯನ್ನು ಶಾಂತಮಾಡಿದರು. ದಂಗೆಯಲ್ಲಿ ಒಟ್ಟಿಗೆ ೩೦ ಜನರು ಗಾಯಹೊಂದಿದ್ದು, ಒಬ್ಬನು ಮರಣ ಹೊಂದಿದ್ದಾನೆ.

ಶ್ರೀ ಸೇನಗುಪ್ತರು ಗವ್ಹರ್ನರರಿಗೆ ಭೆಟ್ಟಿಯಾದರು

ಶ್ರೀ ಜೇ. ಎಂ ಸೆನಗುಪ್ತರು ತಾ|| ೧೯ ನೆಯ ದಿವಸ ಬಂಗಾಲ ಇಲಾಖೆಯ ಗವ್ಹರ್ನರರಿಗೆ ಭೆಟ್ಟಿಯಾಗಿ ರಾಜಕೀಯ ಹಾಗು ಡಿಟೆನ್ಯೂ ಕೈದಿಗಳ ಬಿಡುಗಡೆಯ ವಿಷಯವಾಗಿ ಅವರೊಡನೆ ಚರ್ಚೆ ಮಾಡಿದರು.

ಅಮೃತಸರದಲ್ಲಿ ಕಾಡತೂಸುಗಳು ಸಿಕ್ಕವು

ಅಮೃತಸರದಲ್ಲಿ ಒಬ್ಬ ವ್ಯಾಪಾರಿಗೆ ಗುಂಡು ಹೊಡೆದ ಸಂಶಯದಿಂದ ಸೆರೆಹಿಡಿಯಲ್ಪಟ್ಟ ಶ್ರೀ ನಂದಲಾಲರ ಮನೆಯನ್ನು ಪೋಲೀಸ ಅಧಿಕಾರಿಗಳು ಝಡತಿ ಮಾಡಿದರು. ಝಡತಿಯಲ್ಲಿ ಅವರಿಗೆ ಒಂದು ಪಿಸ್ತೂಲು ಹಾಗು ಏಳು ಕಾಡತೂಸುಗಳು ಸಿಕ್ಕವು.

ಕನ್ನಡಿಗ ... ಕಸ್ತ್ರ ಗ

ಕನ್ನಡಿಗ ಪತ್ರಿಕೆ ... ಬಗ್ಗೆ

ಕನ್ನ ಮನಸಿನ ಮೇಲೆ ... ನಾಟ್ಟವನಾಗು
ಕನ್ನ ಬಣಗಳ ... ದಲ್ಲಿ ಮಕ್ಕಳೆಡೊನ್ನು
ಕನ್ನಡದಲ್ಲಿ ಬನ್ನ ಮೇಲೆ ಮಕ್ಕಳು ನೂಂಬು
ಬನ್ನ ... ಕೊಂಡಿರಕ್ಕೆ

ತೆರಿಗೆಯ ತಾಂಡವ

ಕಾರವಾರ ಜಿಲ್ಲೆಯ ಶಿರಸಿ, ಸಿದ್ದಾಪೂರ, ಹಿರೇಕೆರೂರ, ಎಂಬ ತಾಲೂಕುಗಳಲ್ಲಿ ಈ ಸಾರೆ ಬೆಳೆಯು ಬಾರದ ಹೋದದರಿಂದ ರೈತರು ಅತಿ ಕಂಗಾಲ ಸ್ಥಿತಿಯಲ್ಲಿರುವರು. ಈ ತಮ್ಮ ಕಂಗಾಲ ಸ್ಥಿತಿಯನ್ನು ಅಲ್ಲಿಯ ಕಲೆಕ್ಟರ ಸಾಹೇಬರಿಗೆ ಗೊತ್ತು ಮಾಡಿಕೊಡಲು ಸಿದ್ದಾಪೂರ ತಾಲೂಕಿನ ಎಲ್ಲಾ ಕಳವಳದ ಪ್ರಮುಖರ ಒಂದು ನಿಷ್ಟಮಂಡಳವನ್ನು ಅಲ್ಲಿಯ ರೈತರು ಕಳಿಸಿದ್ದರು. ... ಕೇಳಿದರು. ಅಷ್ಟೇಕೆ ... ನೋಡಿದ್ದೂ ನೋಡಿರಬಹುದು. ... ವಳಿಯ ಮೇಲೆ ಲಕ್ಷ್ಯ ಮಾಡದ ಮಾತಾಡಿದರು. ಅವರು ಕೊಟ್ಟ ... ಬರುತ್ತೇಂದು ಕಡಿಗೆ ಪ್ರಸಿದ್ಧ ... ನೋಡ ಲಾಗಿ ಕಲೆಕ್ಟರ ... "ವಸ್ತ್ರ... ರಾಣ" ಎಂಬಂತ ... ಬರುವದು. ಮತ್ತು ಸಣ್ಣಾಗಿ ಬಂದ ತಂತೀ ಸುದ್ದಿಯನ್ನು ನೋಡಿದರೆ ಅಲ್ಲಿ ಅಧಿಕಾರಿಗಳು ತೆರಿಗೆಯ ವಸೂಲಿಗಾಗಿ ತಾಂಡವ ನೃತ್ಯವನ್ನೇ ಸುರುವುಮಾಡಿರುವದಾಗಿ ತಿಳಿಯುತ್ತದೆ. ... ಒಕ್ಕಲಿಗನು ... ಕ್ಕ ಮಾನ ಒಂದು ... ಲ್ಲಿಯ ... ಗುವವು. ಅವನ ಒಸ್ಪತ್ತಿನ ... ಗ್ರಿಯೂ ಸರಕಾರದ ಕಣ್ಣಿನಲ್ಲಿ ಒಪ್ಪುತ್ತಿದೆ. ಅವನ ಜೀವನದ ಪ್ರಧಾನ ಸಾಧನಗಳಿಂದ ದನಕರಗಳು ಸಹ ಬಯಲಿಗೆ ಬಂದು ತೆರಿಗೆಯ ಕಾಟಕ್ಕೆ ತುತ್ತಾದವು. ಈ ಪ್ರಕಾರವಾಗಿ ಈಗಾಗಲೇ ಕಾರವಾರ ಜಿಲ್ಲೆಯ ಹತ್ತಿಪ್ಪತ್ತು ಹಳ್ಳಿಗಳ ಹಾಡಾಗಿರುವದು. ಅಲ್ಲಿಯ ಅಧಿಕಾರಿಗಳು ಇಷ್ಟರಿಂದಲೇ ತೃಪ್ತರಾಗದೆ ಪೋಲೀಸ ಬಾಂಧವ ಬಾಧೆಯನ್ನು ರೈತರ ಬೆನ್ನುಹತ್ತುವಂತೆ ಮಾಡಬಹುದು. ರೈತನ ಈ ಕಾಟವನ್ನು ನೀಗಿಸುವರಾರು? ದೇವರೂ ಅವನ ಮೇಲೆ ಕಣ್ಣು ಮುಚ್ಚಿರುವನೋ ಎಂಬಂತೆ ಸರಿಯಾಗಿ ಮಳೆಯಾಗದ ... ಇತ್ತ ಸರಕಾರವಂತೂ ಕಣ್ಣು ತೆರೆದೂ ಸಹ ಕಾಣದವನಹಾಗೆ ಕಾಡುತ್ತಿರುವದು. ಹೀಗಾಗಿ ರೈತನು 'ಇತ್ತ ಕೆರೆ ಇತ್ತ ಬಾವಿ' ಎಂಬಂತ ಬಹಳ ಶೋಚನೀಯವಾದ ಗತಿಗೆ ಗುರಿಯಾಗಿರುವನು.

ಶಿರಸೀ ತಾಲೂಕಿನಲ್ಲಿ ನಿನ್ನಿನಿಂದ ಈ ತಾಂಡವವು ಸುರುವು ಮಾಡಲ್ಪಡುವದಂತೆ. ಆದರೂ ಸಹ ಒಕ್ಕಲಿಗರ ಹಿತಕರ್ತರೆಂದು ಒಪ್ಪಿಟ್ಟುಕೊಳ್ಳುತ್ತಿರುವ ಕರ್ನಾಟಕದ ಬ್ರಾಹ್ಮಣೇತರ ಮುಂದಾಳುಗಳು ಇತ್ತ ಹಣಿಕಿ ಹಾಕುವದಿಲ್ಲವೋ? ಒಕ್ಕಲಿಗನನ್ನು ಹುರುಪುಗೊಳಿಸಿ ಅತನ ಮತದ ಬಲದಿಂದ ಮಾತಿನ ಮನೆಯನ್ನು ಸೇರಿದ ಈ ಮುಂದಾಳುಗಳು ಇನ್ನು ಮುಂದಾದರೂ ವಿಚಾರ ಮಾಡಬೇಕೆಂದು ಅವರಿಗೆ ನಾವು ವಿನಯವಾಗಿ ಬಿನ್ನವಿಸುವೆವು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀಮಾನ್ ದಿವಾಕರ ರಂಗರಾಯರು ಮಾತ್ರ ಇತ್ತಕಡೆಗೆ ಒತ್ತರದಿಂದ ಲಕ್ಷ್ಯಕೊಟ್ಟು ಇದನ್ನು ನೋಡಿ ಪ್ರತಿಯೊಬ್ಬ ರೈತನೂ ಅವರನ್ನು ಅಭಿನಂದಿಸದಿರನು. ಒಕ್ಕಲಿಗನ ಮನೆಯಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದು ಅವನ ಉಪ್ಪನ್ನೇ ಉಂಡು ದೊಡ್ಡವರಾದ ಮುಂದಾಳುಗಳು ಮಾತ್ರ ಈ ಕಾರ್ಯದಲ್ಲಿ ಹಿಂದು ಬೀಳಬೇಕೆಂದರೆ ಇದಕ್ಕೇನನ್ನಬೇಕು. ಶ್ರೀ ರಂಗರಾಯರು ಈ ಗೋಳು ಕೇಳದೇ ಸಿರಸಿ, ಸಿದ್ದಾಪೂರ ತಾಲೂಕಗಳಲ್ಲಿ ಹೋಗಿ ರೈತನನ್ನು ಈ ಗೋಳಿನಿಂದ ಉಳಿಸಿ ಕೊಳ್ಳಲು ಇದ್ದಿರುವರು. ಕರ್ನಾಟಕದ ವತಿಯಿಂದ ಮಾತಿನ ಮನೆಗೆ ಆರಿಸಿಹೋದ ಸದಸ್ಯರು ಕಮೀಶನರ ಸಾಹೇಬರ ಬಂಗಡ ಬೆಟ್ಟಿಯಾಗಿದ್ದೇನಾಯಿತು? ಆದರ ಗಟ್ಟಿ ಮನಸುಮಾಡಿ ಸಾಹೇಬರ ಮುಂದೆ ಎಲ್ಲವನ್ನು ಯಥಾ ಸ್ಥಿತವಾಗಿ ಹೇಳಿ ಅವರಲ್ಲಿಯಾದರೂ ರೈತರ ವಿಷಯಕ್ಕೆ ಕನಿಕರ ಹುಟ್ಟುವಂತೆ ಮಾಡುವರೊ? ಇಂಥ ಕಾಲದಲ್ಲಿ ರೈತರಿಗೆ ಬೆಂಬಲವಾಗಿ ನಿಂತು ಅವರ ಬೆನ್ನುಹತ್ತಿದ ಈ ಕಂಟಕವನ್ನು ತಪ್ಪಿಸಿದರೆ ಈ ಮುಂದಾಳುಗಳ ಪದರಿನಲ್ಲಿ ಬಡವನ ನೂರೆ ಕೇಳಿದ ಪುಣ್ಯವು ನಿಶ್ಚಯವಾಗಿ ಬೀಳುವದು. ಇಲ್ಲವಾದರೆ ಈ ತೆರಿಗೆಯ ತಾಂಡವವು ಹೀಗೆ ತಾಳಮೇಳಗಟ್ಟಿ ಸಾಗಿ ಕಡೆಗೆ ಸಿರಸಿ ಸಿದ್ದಾಪೂರ ಹಿರೇಕೆರೂರ ತಾಲೂಕಗಳನ್ನು ರುದ್ರಭೂಮಿಯಂತೆ ಭೀಕರ ಸ್ವರೂಪಕ್ಕೆ ತರುವದು ಮಹೇಶ್ವರನ ತಾಂಡವವನ್ನು ನು ಈ ತೆರಿಗೆಯ ತಾಂಡವವು ಮೀರುವಂತೆ ಮಾಡುವದು.

ಧ್ವನಸ್ತಿ

ಸರದಾರ ಭಗತಸಿಂಗ, ರಾಜಗುರು, ಸುಖದೇವ ಎಂಬವರು ಇಂದು ವೀರಸ್ವರ್ಗ ಹೊಂದಿದರು. ಸರಕಾರವು ಮಾತ್ರ ಎಂದೂ ಅಳಿಸಿಹೋಗದ ಮಸಿಯನ್ನು ತನ್ನ ಮೋರಿಗೆ ಹಚ್ಚಿಕೊಂಡಿತು. ಇವರನ್ನು ... ಗಲ್ಲಿಗೇರಿಸುವದರಲ್ಲಿ ... ಅಂತರಂಗದಲ್ಲಿ ಒಂದು ಗುಟ್ಟು ಇರುವದು. ತರುಣರು ತಳಮಳಿಸಿ ಅವರು ... ಕಾಂಗ್ರೆಸದಲ್ಲಿ ಒಂದು ಒಡಕು ಹುಟ್ಟಿಸಬೇಕೆಂದು ಸರಕಾರದ ಘೋರ ... ನಮ್ಮ ... ಈಗ ಈ ಒಗಟು ... ಹುಟ್ಟಿಸಿ ಆದರಿಂದ ... ಕಡಕನ್ನು ... ಸರಕಾರದ ಒಳಿತು ಇರುವದೊ? ಒಪ್ಪಂದದಿಂದ ಬಂಗಾಲ ಹಾಗೂ ಪಂಜಾಬದ ತರುಣರು ಸಮಾಧಾನ ಹೊಂದದಿರುವದನ್ನು ನೋಡಿ ಅವರನ್ನೇ ಈಗ ಮುಂದೆಮಾಡಿ ಈ ತಮ್ಮ ಮನೋಬಯಕೆಯನ್ನು ಪೂರ್ತಿಗೊಳಿಸಲು ಸರಕಾರವು ಹವಣಿಸುತ್ತಿರುವದೊ? ಏನೇಆಗಲಿ ಭೇದನೀತಿಯಂತೂ ಸರಕಾರದ ಮುಖ್ಯ ಮಂತ್ರವು. ಈ ಮಂತ್ರದ ಜೋರಿನಿಂದಲೇ ಆದು ತನ್ನ ಆಟವನ್ನು ಸಾಗಿಸಿರುವದು. ಕರಾಚಿಯ ಕಾಂಗ್ರೆಸದಲ್ಲಿ ಈ ಮಂತ್ರವು ಕಾಲು ಚಾಚುವಂತೆ ಸರಕಾರವು ಹೊಂಚುಹಾಕುತ್ತಿರುವದು. ಹಿಂದೂ ಮುಸಲ್ಮಾನರ ಒಕ್ಕಟ್ಟೇ ಸ್ವರಾಜ್ಯದ ಮೂಲಮಂತ್ರವೆಂದು ಇತ್ತ ಮಹಾತ್ಮನು ಅವರನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿರುವನು. ಮಹಾತ್ಮನ ಈ ಮಂತ್ರದ ಮುಂದೆ ಸರಕಾರದ ಭೇದನೀತಿಯ ಮಂತ್ರವು ಎಷ್ಟರಮಟ್ಟಿಗೆ ಕಾಲೂರಿ ನಿಲ್ಲುವದೋ ನೋಡಬೇಕಾಗಿದೆ. ಭಾರತೀಯ ತರುಣರಾದರೂ ಮಹಾತ್ಮನ ಮಹಾ ಮಂತ್ರವನ್ನು ಮನನ ಮಾಡಿಕೊಂಡಿರುವರು. ಈ ಮಂತ್ರದ ಶಕ್ತಿಯನ್ನು ಮನಗಂಡಿರುವರು. ಅಂದಮೇಲೆ ಮಹಾತ್ಮರ ಮಾತು ಮೀರುವ ಶಕ್ತಿಯು ಅವರಲ್ಲಿಯೂ ಇಲ್ಲವಾಗಿದೆ. ತರುಣರ ತಳಮಳವನ್ನು ಶಾಂತಗೊಳಿಸಿ ಅವರನ್ನು ತಕ್ಕ ಕಾರ್ಯಕ್ಕೆ ಹಚ್ಚುವ ಶಕ್ತಿಯು ಮಹಾತ್ಮನಲ್ಲಿ ಇದ್ದೇ ಇರುವದು. ಈ ತನ್ನ ಅಭೇದ್ಯವಾದ ಶಕ್ತಿಯಿಂದ ತರುಣರನ್ನೂ ಅಭೇದ್ಯರನ್ನಾಗಿ ಮಾಡಬಲ್ಲನು. ನಾಳಿನ ಕರಾಚಿಯ ಕಾಂಗ್ರೆಸದಲ್ಲಿ ಆತನು ಈ ತನ್ನ ಶಕ್ತಿಯನ್ನು ತರುಣರ ಮೇಲೆ ಹೇಗೆ ಪ್ರಯೋಗಿಸುವನೆಂಬುವದು ಜಗತ್ತಿನಲ್ಲಿಯೇ ಜಾಹೀರವಾಗಿಬಿಡುವದು. ಕಾಂಗ್ರೆಸದಲ್ಲಿ ಒಡಕು ಹುಟ್ಟದಂತೆಯೂ ಅದರ ಕೆಡಕನ್ನು ಬಯಸುವ ಕಿಡಿಗೇಡಿಗಳ ದುರಾಶೆಯು ಬಯಲಾಗುವಂತೆಯೂ ಕರಾಚಿಯಲ್ಲಿ ನೆರವೇರಲಿಕ್ಕಿರುವ ರಾಷ್ಟ್ರಸಭೆಯನ್ನು ಗೌರವದಿಂದ ವಿರಾಜಿಸುವಂತೆ ಮಾಡಲೆಂದು ಪರಮಾತ್ಮನನ್ನು ಪ್ರಾರ್ಥಿಸುವೆವು. ಹುತಾತ್ಮರಾದ ವೀರಾತ್ಮರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ ಪ್ರಾರ್ಥಿಸುವೆವು.

ಹರಿಕಿಶನರು

ಅಪೀಲು ಮಾಡಲು ನಿರಾಕರಿಸಿದರು

ಪಂಜಾಬ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಯದಲ್ಲಿ ಪಂಜಾಬ ಗವ್ಹರ್ನರರ ಮೇಲೆ ಗುಂಡು ಹಾರಿಸಿದ ಸಂಬಂಧವಾಗಿ ಗಲ್ಲಿನ ಶಿಕ್ಷೆಗೆ ಗುರಿಮಾಡಲ್ಪಟ್ಟ ಶ್ರೀ ಹರಿಕಿಶನರ ತಂದೆಯವರು, ತಾ॥ ೨೨ ನೇಯ ದಿವಸ ಲಾಹೋರ ಜೇಲಿನಲ್ಲಿ ಅವರನ್ನು ಕಂಡುಕೊಂಡು ಶಿಕ್ಷೆಯ ವಿರುದ್ಧವಾಗಿ ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡಲು ಕೇಳಿಕೊಂಡಿದ್ದಾರೆ. ಶ್ರೀ ಹರಿಕಿಶನರು ಅದನ್ನು ತಿರಸ್ಕರಿಸಿದರಾಗಿ ತಿಳಿದುಬರುತ್ತದೆ.

ಫೌಜದಾರರನ್ನು ಸಸ್ಪೆಂಡ ಮಾಡಿದರು.

ದೇವಲಾಪುರದ ಫೌಜದಾರರಾದ ಶ್ರೀ ಮಾಣಿಕಲಾಲರಮೇಲೆ ಸಿರಸಿಯ ರಾಮಧನ ಮಾರವಾಡಿಯವರು ತನ್ನ ಹೆಂಡತಿಯಾದ ಶ್ರೀಮತಿ ಜೇಥಾಬಾಯಿಯವರನ್ನು ಓಡಿಸಿಕೊಂಡು ಹೋದ ಆರೋಪ ಹೊರಿಸಿ, ಅವರಮೇಲೆ ಕಟ್ಲೆಹಾಕಿದ್ದಾರೆ. ಈ ಖಟ್ಲೆಯ ವಿಚಾರಣೆಯು ಮುಗಿಯುವವರೆಗೆ ವರಿಷ್ಠಾಧಿಕಾರಿಗಳು ಅವರನ್ನು ಸಸ್ಪೆಂಡುಮಾಡಿದ್ದಾರೆ.

ಕಿತ್ತಳೆಹಣ್ಣಿನ ಕಳವಿಗಾಗಿ ಮೂರು ತಿಂಗಳ ಕಠಿಣ ಶಿಕ್ಷೆ

ಕಿತ್ತಳೆ ಹಣ್ಣು ಮಾರುತ್ತ ಅಡ್ಡಾಡುತ್ತಿರುವವನ ಬುಟ್ಟಿಯೊಳಗಿಂದ ಒಂದು ಕೊಳೆತ ಹಣ್ಣನ್ನು ತುಡುಗು ಮಾಡಿದ್ದಕ್ಕಾಗಿ ಮುಂಬಯಿಯಲ್ಲಿ ಉಜಬಾಲಿ ಯೆಂಬ ಓರ್ವ ಮುಸಲ್ಮಾನನು ವಿಚಾರಣೆ ಗುರಿಮಾಡಲ್ಪಟ್ಟನು. ಕಳವಿಗಾಗಿ ಇವನಿಗೆ ಈ ಮೊದಲು ಆರಾರೆ ಶಿಕ್ಷೆಯಾಗಿತ್ತು. ಮೂರನೆಯ ವರ್ಗದ ಮ್ಯಾಜಿಸ್ಟ್ರೇಟರು ಅದನ್ನು ಲಕ್ಷ್ಯದಲ್ಲಿ ತಂದು ಅವನನ್ನು ದೋಷಿಯಾಗಿ ನಿರ್ಣಯಿಸಿ ಮೂರು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ಜಿನ್ನಾರವರು

ಹಿಂದುಸ್ಥಾನಕ್ಕೆ ಬರುವರು

ಬಂಡೀಗಾಲಿಯ ಪರಿಷತ್ತಿಗೆ ಮುಸಲ್ಮಾನ ಪ್ರತಿನಿಧಿಗಳಾಗಿ ಹೋಗಿದ್ದ ಮಿ. ಜಿನ್ನಾರವರು, ಲಂಡನ್ನದಲ್ಲಿಯೆ ವಾಸ ಮಾಡುವದಾಗಿ ನಿರ್ಧರಿಸಿಕೊಂಡು ಈಗ ಅಲ್ಲಿಯೇ ನೆಲೆಸಿರುವರಷ್ಟೆ. ಆದರೆ ಅವರು ಈಗ ಆ ವಿಚಾರವನ್ನು ಬಿಟ್ಟುಕೊಟ್ಟಿದ್ದು ಆಗಸ್ಟ ತಿಂಗಳಲ್ಲಿ ಮರಳಿ ಹಿಂದುಸ್ಥಾನಕ್ಕೆ ಬರುವವರಿದ್ದಾರೆಂದು ತಿಳಿದು ಬರುತ್ತದೆ.

ಸಿದ್ದಾಪುರದಲ್ಲಿ ರೈತರ ಮೇಲೆ ಸಂಕಟ

ಸಿರಸಿ, ... ಮಾರ್ಚ ... ತಾ॥ ೨೪

ಆರ್ಥಿಕ ದೈನ್ಯಾವಸ್ಥೆಯ ಮೂಲವಾಗಿ ರೈತರು ಧಾರಾಕಂದಾಯವನ್ನು ಕೊಡದ್ದರಿಂದ, ಸಿದ್ದಾಪುರ ಅಧಿಕಾರಿಗಳು ಆ ತಾಲೂಕಿನಲ್ಲಿ ಜಪ್ತಿಯ ಸತ್ರವನ್ನು ಧಾರಿಂದ ನಡೆಸಿದ್ದಾರೆ. ಪ್ರತಿದಿನ ಉಪಯೋಗಕ್ಕೆ ಬೇಕಾದ ಭಾಂಡಿ, ಪಾತ್ರೆ, ದನ ಕರು ಎತ್ತು ಮೊದಲಾದವುಗಳನ್ನು ಅವರು ಜಪ್ತಿ ಮಾಡಿಕೊಂಡು ಹೋಗುತ್ತಿದ್ದಾರೆ ... ಹಳ್ಳಿಗಳಲ್ಲಿ ಜಪ್ತ ಮಾಡಿಕೊಂಡು ಬಂದ ಸಾಮಾನುಗಳು ಲಿಲಾವ ... ಹಾಕಲ್ಪಟ್ಟವು. ಅವು ಕಡಿಮೆ ಬೆಲೆಗೆ ಮಾರಾಟವಾದವು. ಕೆಲವು ಸರಕಾರಿ ಅಧಿಕಾರಿಗಳು ಹಾಗು ಇತರ ಜನರು ಅವುಗಳನ್ನು ಕೊಂಡುಕೊಂಡರು. ರೈತರು ಈ ಬಗ್ಗೆ ಸರ್ಕಲ್ ... ಸ್ಪೆಕ್ಟರರೆಡೆಗೆ ಬಂದು ತಮ್ಮ ಮೊರೆಯನ್ನು ... ಗಾಗಿದ್ದರು. ಆದರೆ ಸರ್ಕಲ್ ಇನಸ್ಪೆಕ್ಟರರು ಅವರ ಭೆಟ್ಟಿ ತೆಗೆದುಕೊಳ್ಳಲು ನಿರಾಕರಿಸಿದರು.

ಸಿರಸಿ ತಾಲೂಕದಲ್ಲಿ ಈಗ ಜಪ್ತಿ ... ದುಗಳು ಕೂಡಹತ್ತಿದ್ದು, ಜಪ್ತಿಯ ಸತ್ರವು ... ಕ್ಕೆ ಪ್ರಾರಂಭವಾಗಲಿಕ್ಕಿದ್ದದೆ. ರೈತರು ... ಕಪ್ಪುರೇಷಾ ... ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ದಿವಾಕರ ರಂಗರಾಯರ ... ವಿಷಯ ... ಕಡೆಗೆ ಹೋಗಲಿಕ್ಕವರಿದ್ದಾರೆ.

ಮುಂಬಯಿ ... ದ ಮಾಜಿ ಕರ್ನಾಟಕದ ... ಕಂದಾಯ ... ಯ ಮಂತ್ರಿ ಹಾಗೂ ಕಮೀಶನರನ್ನು ... ಕೊಂಡು, ಅವರೊಡನೆ ಚರ್ಚೆ ಮಾಡಿದರು.

ಮಾಲವಣದಲ್ಲಿ

ಸೋಲ್ಲಾಪುರ ಮರವಣಿಗೆಗೆ ಪ್ರತಿಬಂಧ

ತಾ॥ ೨೨ನೆಯ ದಿನ ಮಹಾರಾಷ್ಟ್ರ ... ಲ್ಲೆಲ್ಲ ಸೊಲ್ಲಾಪುರ ಹಾಗೂ ಚಿರನೇರ ... ವನ್ನು ಆಚರಿಸಬೇಕಾಗಿ ಮಹಾರಾಷ್ಟ್ರ ಮು... ಡರು ಅಪ್ಪಣೆಕೊಟ್ಟಿದ್ದರಿಂದ, ಮಾಲವಣದ ನಾಗರಿಕರು ಆ ದಿನ ಮೆರವಣಿಗೆ ಹೊರ... ದಾಗಿ ಪ್ರಕಟಮಾಡಿದ್ದರು. ಆದರೆ ಡಿಸ್ಟ್ರಿಕ್ಟ ಸುಪರಿಂಟೆಂಡೆಂಟರು ಗಳನೆಯ ಕಲಮಿನ್ನ ನೋಟೀಸು ಹೊರಡಿಸಿ, ಸಭೆ ಮೆರವಣಿಗೆ ... ಲಾದವುಗಳನ್ನು ಜರಗಿಸಕೂಡದಾಗಿ ಅಪ್ಪಣೆ ಕೊಟ್ಟಿದ್ದಾರೆ.

ಮುಸಲ್ಮಾನ ಮುಖಂಡರಲ್ಲಿ ...

ಸರ್ವಪಕ್ಷೀಯ ಮುಸಲ್ಮಾನರಿಂದ ಆರಿಸಲ್ಪಟ್ಟ ಉಳವಂತಾದವರು ... ಸಾರ ಸಭೆ ಸೇರಿಸಿಕೊಂಡ, ಬೇರೆ ಬೇರೆ ದೆ ಮಂಡಳಿಗಳಲ್ಲಿ ಮುಸಲ್ಮಾನ ಪ್ರತಿನಿಧಿ ... ಹೀಗೂ ಹಿಂದುಸ್ಥಾನದ ಭಾವೀ ರಾಜ್ಯಘಟನೆಗೆ ಸಂಬಂಧಿಸಿದ ಕೆಲವು ವಿಷಯಗಳ ಚರ್ಚೆ ಮಾಡಿದರು.

ಎಷ್ಟೋ ವಿಷಯಗಳ ಸಂಬಂಧವಾಗಿ ಅವರಲ್ಲಿ ಮತೈಕ್ಯವುಂಟಾಗದೆ ... ಇದಕ್ಕಾಗಿ ... ಮಾಡಿದಲ್ಲಿ ಐಕ್ಯವಾಗುವ ಸಂಭವವಿದೆ ... ಮಂಡಳಿದವರ ಅಭಿಪ್ರಾಯವಾಗಿದ್ದರಿಂದ, ... ಸಲ್ಮಾನ ಮುಖಂಡರೊಡನೆ ಸಭೆ ... ಕೂಡಿಸಲು ಅವರು ನಿರ್ಧರಿಸಿ ... ಮಾಡಿದರು. ಬೇರೆ ಬೇರೆ ಜಾತಿಯ ... ಪ್ರಮಾಣವನ್ನು ... ಕೊಳ್ಳಲು ... ಸಲ್ಮಾನ ಮುಖಂಡರು ಜನ ... ಸಿ ಹಾದಿ ನೋಡುತ್ತಿದ್ದಾರೆ.

ಭಗತಸಿಂಗ, ರಾಜಗುರು, ಸುಖದೇವರನ್ನು ಲಾಹೋರದಲ್ಲಿ ಗಲ್ಲಿಗೇರಿಸಿದರು

(ಲಾಹೋರ ಮಾರ್ಚ ತಾ|| ೨೪)

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಮರಣ ದಂಡನೆಗೆ ಗುರಿಯಾದ ಶ್ರೀ ಭಗತಸಿಂಗ, ರಾಜಗುರು, ಸುಖದೇವ ಇವರನ್ನು ಸೋಮವಾರ ದಿವಸ ಸಂಜೆಯ ೭ ಗಂಟೆ ಲಾಹೋರ ಸೆಂಟ್ರಲ್ ಜೇಲಿನಲ್ಲಿ ಗಲ್ಲಿಗೇರಿಸಿದರು. ಸಿಖ ಹಾಗು ಹಿಂದೂ ಧರ್ಮದ ಪ್ರಕಾರ ಸಟ್ಲೆಜ ನದಿಯ ತೀರದ ಮೇಲೆ ಅವರವರ ಶವದೇಹಗಳಿಗೆ ಸಂಸ್ಕಾರ ಮಾಡಲ್ಪಟ್ಟಿತೆಂದೂ, ಮತ್ತು ಅವರ ಅಸ್ಥಿಗಳು ಅದೇ ನದಿಯಲ್ಲಿ ಒಗೆಯಲ್ಪಟ್ಟವೆಂದೂ ಸರಕಾರಿ ಪ್ರಕಟನೆ ಹೊರಟಿದೆ.

ಈ ಹತಾತ್ಮರ ಸ್ಮರಣಾರ್ಥವಾಗಿ ನಾಡಿನಲ್ಲಿ ಹರತಾಳವು ನಡೆಯಲ್ಪಟ್ಟಿದ್ದು, ಸಂಜೆಯಲ್ಲಿ ಸಭೆಯು ಸೇರಲ್ಪಟ್ಟಿದೆ.

ವ್ಹಾಯಿಸರಾಯರೊಡನೆ ಮುಖಂಡರ ಮಾತುಕತೆ

(ದಿಲ್ಲಿ ತಾ|| ೨೧)

ವ್ಹಾಯಿಸರಾಯರು ಇವತ್ತಿನ ದಿವಸ ತಮ್ಮ ಭವನದಲ್ಲಿ, ಬಂಡೀಗಾಲಿಯ ಪರಿಷತ್ತಿನ ೩ ಪ್ರತಿನಿಧಿಗಳೊಂದಿಗೆ ಮುಂದಿನ ಕಾರ್ಯಕ್ರಮದ ಸಂಬಂಧವಾಗಿ ಚರ್ಚೆಮಾಡಿದರು. ವ್ಹಾಯಿಸರಾಯರು ಕರೆಕಳುಹಿದ್ದರಿಂದ ಮಹಾತ್ಮಾ ಗಾಂಧಿ, ಪಂಡಿತ ಮಾಲವೀಯರು ಸರ್ ತೇಜ ಇವರೆಲ್ಲರೂ ಸಭೆಗೆ ಆಗಮಿಸಿದ್ದರು. ಸಭೆಯು ಖಾಸಗಿ ಸ್ವರೂಪದ್ದಾಗಿತ್ತು. ಬಂಡೀಗಾಲಿಯ ಪರಿಷತ್ತಿನ ಮುಂದಿನ ವಿಧಾನದ ವಿಷಯವಾಗಿ ಚರ್ಚೆ ನಡೆಯಿತು. ಜವಾಬುದಾರ ಬ್ರಿಟಿಶ ಶಿಷ್ಟಮಂಡಳವನ್ನು ಹಿಂದುಸ್ಥಾನಕ್ಕೆ ಬೇಗನೆ ಕಳಿಸಬೇಕಾಗಿ ಮಹಾತ್ಮರು ಅಭಿಪ್ರಾಯ ಪಟ್ಟರು. ಬಂಡೀಗಾಲಿಯ ಪರಿಷತ್ತಿನ ಪ್ರತಿನಿಧಿಗಳು ಅವರ ಈ ಸೂಚನೆಗೆ ಪುಷ್ಟಿ ಕೊಟ್ಟರು.

ಸ್ಟ್ಯಾಂಡಿಂಗ ಕಮೀಟಿ, ಸಂಘಟನೆಯ ನಿರ್ಣಯಮಂಡಳ, ಸ್ಥಾನಿಕ ವಿಚಾರಮಂಡಳ, ಈ ಮೂರು ಮಂಡಳಗಳನ್ನು ಬೇಗನೆ ನಿಯಮಿಸಬೇಕಾಗಿ ಕೆಲವರು ಸೂಚಿಸಿದರು. ಸಭೆಯಲ್ಲಿ ಸೂಚನೆಗಳು ಸ್ವೀಕೃತವಾದವು.

ಫೆಡರಲ್ ರಿಲೇಶನ ಕಮಿಟಿ ಎಂಬ ಇನ್ನೊಂದು ಮಂಡಳ ಸ್ಥಾಪನೆಯ ಸೂಚನೆಯನ್ನು ಲಂಡನದಲ್ಲಿ ತಮ್ಮ ಸರ್ಕಾರ ಪ್ರಾರಂಭಿಸಿ ಬೇಕೆಂದೂ, ಈ ಮಂಡಳದಲ್ಲಿ ಭಾಗವಹಿಸಲು ಕೆಲವು ಬ್ರಿಟಿಶ ಪ್ರತಿನಿಧಿಗಳೊಂದಿಗೆ ಹಿಂದುಸ್ಥಾನವನ್ನು ಒಂದು ಇಷ್ಟು ಸಂಚಾರ ಮಾಡಿ, ಮುಖಂಡರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕಾಗಿ ಕೆಲವರು ವ್ಯಕ್ತಪಡಿಸಿದರು.

ಸಭೆಗೆ ಆಗಮಿಸಿದ ಸಂಸ್ಥಾನಿಕರು ಹಾಗು ಸಂಸ್ಥಾನದ ಪ್ರತಿನಿಧಿಗಳು ಜುಲೈ ತಿಂಗಳದ ಕೊನೆ ಮೊದಲು ತಮಗೆ ಲಂಡನಕ್ಕೆ ಬರುವದಾಗುವದಿಲ್ಲವೆಂದು ಹೇಳಿದರು. ಬ್ರಿಟಿಶ ಪ್ರತಿನಿಧಿ ಮಂಡಳವು ಬೇಗನೆ ಹಿಂದುಸ್ಥಾನಕ್ಕೆ ಬರಲಿಕ್ಕಿದೆಯೆಂದು ಹೇಳಲ್ಪಟ್ಟಿದ್ದರಿಂದಲೆ ವ್ಹಾಯಿಸರಾಯರೊಡನೆ ಒಪ್ಪಂದ ಮಾಡಿಕೊಳ್ಳುವದರಲ್ಲಿ ಬಂದಿದೆಯೆಂದೂ ಆದ್ದರಿಂದ ಆಗುವದೆಲ್ಲ ಬೇಗನೆ ಆಗಬೇಕೆಂದೂ ಮಹಾತ್ಮಾಗಾಂಧಿಯವರು ಹೇಳಿದರು.

ಕೇಸರಿಯ ಮಗನನ್ನು ಭಯಂಕರವಾಗಿ ಹೊಡೆದರು

ಕೇಸರಿಯ ಸಂಪಾದಕರಾದ ಶ್ರೀ ವಿಠಲರಾವ ಡಾ. ಗೋಖಲೆಯವರಿಂದ ಅರ್ಲಿನದಿಂದ ಕೊಟ್ಟಿನ್ನಗಲ ಕ್ಕೆ ಹೋಗಿದ್ದರು. ಅಲ್ಲಿ ಅವರು ನಾಜೀ ಜನರನ್ನು ಪ್ರತಿಕರಿಸಿ ಭಾಷಣ ಮಾಡತಕ್ಕವರಿದ್ದರು. ಆ ಸಭೆಯು ಕಾಯುದೆಗೆ ವಿರುದ್ಧವಾದ್ದರಿಂದ ಬರ್ಲಿನ ಪೋಲೀಸ ಅಧಿಕಾರಿಗಳು ಬರ್ಲಿನ್ ಸ್ಟೇಶನದಲ್ಲಿಯೇ ಅವರಿಗೆ ಪ್ರತಿಬಂಧ ಮಾಡಿದರು. ಅವರನ್ನು ಕಳಿಸಲು ಸ್ಟೇಶನಕ್ಕೆ ಬಂದ ನೂರಾರು ಜನ ನಾಜಿಗಳನ್ನು ಪೋಲೀಸರಿಂದ ಚದುರಿಸಿದರು, ಮತ್ತು ಅವರಿಗೆ ಒಳ್ಳೆಗಾಗಿ ಥಳಿಸಿದರು. ಈ ಗೊಂದಲದಲ್ಲಿ ಪಾಂಡುರಂಗ ಪೋಲೀಸರಿಗೆ ಅಪಘಾತ ಸಂಭವಿಸಿತು.

'ಭಗತಸಿಂಗನನ್ನು ಗಲ್ಲಿಗೇರಿಸಿದರೆ, ತರುಣರು ಸಿಟ್ಟಿಗೇಳುವರು'

ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರ ಭೆಟಿಗೆ ಹೋಗುವದಕ್ಕಿಂತ ಮುಂಚೆ ತಮಗೆ ಓರ್ವ ಪತ್ರಿಕಾಪ್ರತಿನಿಧಿಯು ಅವರನ್ನು ಕಂಡು ಕೊಂಡು, ಬಂಡೀ ಗಾಲಿಯ ಪರಿಷತ್ತಿನ ಸಂಬಂಧವಾಗಿ ಅವರ ಅಭಿಪ್ರಾಯ ಕೇಳಿದನು. ಅವರು ಹೇಳಿದ್ದೇನಂದರೆ—

ಭದ್ರತೆಯ ನಗಳ ಸಂಬಂಧವಾಗಿ ಹಿಂದಿನ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟಿದ್ದನ್ನೇ ಲಾರ್ಡ ಸ್ಯಾಂಕಿ ಹಾಗು ಮಿ. ಬೆನ್ನರು. ಕೊನೆಯ ದಿಂದು ನಿರ್ಣಯಿಸಿದ್ದು, ನಾವು ಲಂಡನಕ್ಕೆ ಹೋಗುವದರಿಂದ ಏನೂ ಉಪಯೋಗವಾಗುವದಿಲ್ಲ. ಪರಿಷತ್ತಿನ ಪ್ರತಿನಿಧಿಗಳಾಗಲಿ, ದು

ಭದ್ರತೆಯ ನಗಳ ಸಂಬಂಧವಾಗಿ ಪುನಃ ವಿಚಾರ ಮಾಡಲು ನನಗೆ ಸ್ವಾತಂತ್ರ್ಯವಿದೆಯೆಂದೂ ಹಿಂದುಸ್ಥಾನದ ಹಿತ ಸಂರಕ್ಷಣೆಯ ದೃಷ್ಟಿಯಿಂದ ಅವುಗಳನ್ನು ವಿಚಾರ ಮಾಡಬಹುದೆಂದೂ ಒಪ್ಪಂದದ ಕರಾರಿನಲ್ಲಿ ನಮೂದಿಸಲ್ಪಟ್ಟಿದೆ. ಇಂಗ್ಲಂಡ ಹಾಗು ಹಿಂದುಸ್ಥಾನ ಇವುಗಳ ಹಿತ ಸಂರಕ್ಷಣೆಯ ದೃಷ್ಟಿಯಿಂದ ಭದ್ರತೆಗಳನ್ನು ವಿಚಾರ ಮಾಡುವೆವೆಂದು ಲಾರ್ಡ ಸ್ಯಾಂಕಿ ಹಾಗು ಮಿ. ಬೆನ್ನರು ಪಾರ್ಲಿಮೆಂಟಿನಲ್ಲಿ ಹೇಳಿದ್ದು, ಒಪ್ಪಂದದ ಕರಾರನ್ನು ಬಿಟ್ಟು ಇರುತ್ತದೆ.

ಎರಡನೇ ಬಂಡೀ ಗಾಲಿಯ ಪರಿಷತ್ತನ್ನು ಜಿನೀವಾದಲ್ಲಿ ಕೂಡಿಸುವದಕ್ಕೆ ಒಪ್ಪಿಕೊಳ್ಳುವಿರಾ? ಎಂಬುದಾಗಿ ಪ್ರತಿನಿಧಿಯು ಪ್ರಶ್ನೆ ಕೇಳಲಾಗಿ ಮಹಾತ್ಮರು ಹೇಳಿದ್ದೇನಂದರೆ:—

ಹಿಂದುಸ್ಥಾನದ ಭಾವೀ ರಾಜ್ಯಘಟನೆಯ ವಿಷಯವಾಗಿ ನಿಷ್ಪಕ್ಷಪಾತದಿಂದ ವಿಚಾರ ಮಾಡಲು ಬ್ರಿಟಿಶರು ಒಪ್ಪಿಕೊಂಡಲ್ಲಿ, ಜಿನೀವಾದಲ್ಲಿ ಪರಿಷತ್ತನ್ನು ಕೂಡಿಸಬಹುದು. ಆದರೆ ವಸ್ತುಸ್ಥಿತಿಯು ಮಾತ್ರ ಹೀಗಿರುವದಿಲ್ಲ. ಬ್ರಿಟಿಶರು ನಮ್ಮ ಎದುರಾಳಿಗಳಿರುತ್ತಾರೆ. ಚರ್ಚೆಗೆ ಕೂಡುವದಕ್ಕಿಂತ ಮೊದಲು ಸೈನ್ಯ, ಪರರಾಷ್ಟ್ರ ಮೊದಲಾದವುಗಳನ್ನು ವಿಚಾರ ಮಾಡಬೇಕಾಗುವದು. ಜಿನೀವಾದಲ್ಲಿ ಪರಿಷತ್ತು ಕೂಡಿಸಲು ಇಂಗ್ಲಂಡದವರು ಒಪ್ಪಿಕೊಳ್ಳುವದಿಲ್ಲವಾಗಿ ನನಗೆ ನಿಶ್ಚಿತವಾಗಿ ತೋರುತ್ತದೆ. ನನ್ನನ್ನು ಕೇಳಿದರೆ ಅದನ್ನು ಹಿಂದುಸ್ಥಾನದಲ್ಲಿಯೂ, ಮತ್ತೊಂದನ್ನು ಇಂಗ್ಲಂಡದಲ್ಲಿಯೂ ಹೀಗೆ ಎರಡು ಗಣತಂತ್ರಗಳನ್ನು ಕೂಡಿಸಬೇಕೆಂಬುದಾಗಿ ಹೇಳುತ್ತೇನೆ. ಪರಿಷತ್ತು ಎಲ್ಲಿಯಾದರೂ ಸೇರಲಿ, ಅದು ಬೇಗನೆ ಸೇರಬೇಕು.

ವ್ಹಾಯಿಸರಾಯರೊಡನೆ ಮಾಡಿಕೊಂಡ ಒಪ್ಪಂದಕ್ಕೆ ಕರಾಚಿ ಕಾಂಗ್ರೆಸದಲ್ಲಿ ಒಪ್ಪಿಗೆ ದೊರೆಯದ್ದಾಗುವದೋ ಎಂದು ಕೇಳಲ್ಪಟ್ಟ ಪ್ರಶ್ನೆಗೆ ಪ್ರತಿನಿಧಿಯು ಪ್ರಶ್ನೆ ಕೇಳಿದನು, ಮಹಾತ್ಮರು ಕೆಳಗಿನಂತೆ ಉತ್ತರ ಕೊಟ್ಟರು.

ಒಪ್ಪಂದಕ್ಕೆ ಸಮ್ಮತಿ ದೊರೆಯಬಹುದು. ಲಾಹೋರ ಖಟ್ಲೆಯ ಕೈದಿಗಳಾದ ಭಗತಸಿಂಗನನ್ನು ಗಲ್ಲಿಗೇರಿಸಿದ್ದರಲ್ಲಿ ವಾತಾವರಣವು ಕೆಟ್ಟು ಹೋಗುತ್ತದೆ. ತರುಣರು ಸಿಟ್ಟಿಗೇಳುವರು. ಕಾಂಗ್ರೆಸದಲ್ಲಿ ಒಡಕು ಹುಟ್ಟಿಸಲು ಅವರು ಪ್ರಯತ್ನ ಮಾಡುವರು.

ಭಗತಸಿಂಗರ ಜೀವವುಳಿಸುವದು ಶಕ್ಯವಿದೆಯೆಂದು ನಿಮಗೆ ಅನಿಸುತ್ತದೆಯೋ ಹೇಗೆ ಎಂದು ಪ್ರತಿನಿಧಿಯು ಕೇಳಿದ ಪ್ರಶ್ನೆಗೆ ಮಹಾತ್ಮರು, 'ಶಕ್ಯವಿದೆ; ಅದರೆ ಆಶಾಜನಕವಿಲ್ಲ,' ವೆಂಬುದಾಗಿ ಉತ್ತರ ಕೊಟ್ಟರು.

ಭಗತಸಿಂಗನನ್ನು ಗಲ್ಲಿಗೇರಿಸಿದರೆ ಹಿಂದುಸ್ಥಾನದಲ್ಲೆಲ್ಲ ಕ್ಷೋಭೆ ಯೇಳುವದು

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗರನ್ನು ಗಲ್ಲಿಗೇರಿಸಿದ್ದಾದರೆ ಹಿಂದುಸ್ಥಾನದಲ್ಲೆಲ್ಲ ಕ್ಷೋಭೆಯೇಳುವದೆಂದೂ ಕರಾಚಿ ಕಾಂಗ್ರೆಸ್ಸಿನಲ್ಲಿ ಕರಾರು ದೇಶವಾಸಿಗಳ ಅಪ್ರೀತಿಗೆ ಕಾರಣವಾದೀತೆಂದೂ, ಕಾಂಗ್ರೆಸ್ ಮುಖಂಡರ ಅಭಿಪ್ರಾಯ ವಿದೆ.

"ಭಗತಸಿಂಗ ಮೊದಲಾದವರ ಜೀವವುಳಿಸಿರಿ"

ತಮಿಳು ನಾಡು ಪ್ರಾಂತಿಕ ಕಾಂಗ್ರೆಸ್ ಕಮೀಟಿಯವರು ತಾ|| ೨೧ ನೆಯ ದಿವಸ ಸಭೆ ಯನ್ನು ಸೇರಿ, ಶ್ರೀ ಭಗತಸಿಂಗ ಮೊದಲಾದವರ ಸಂಬಂಧವಾಗಿ ಕೆಳಗಿನ ಗೊತ್ತನ್ನು ನಿರ್ಧರಿಸಿಕೊಂಡರು.

ಗಾಂಧಿ—ಅರ್ವಿನರಲ್ಲಿ ಆದ ಒಡಂಬಡಿಕೆಯು ಹಿಂದುಸ್ಥಾನದಲ್ಲೆಲ್ಲ ಪೂರ್ಣರೂಪವಾಗಿ ಪರಿಣಮಿಸಬೇಕೆಂದು ಸರಕಾರದವರ ಇಚ್ಛೆಯಿದ್ದಲ್ಲಿ, ಅವರು ಶ್ರೀ ಭಗತಸಿಂಗ, ರಾಜಗುರು, ಶ್ರೀ ಸುಖದೇವ ಇವರನ್ನು ಈಗ ಗಲ್ಲಿಗೇರಿಸುವದನ್ನು ಬಿಟ್ಟುಕೊಡಬೇಕು, ಮತ್ತು ಅವರ ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಿ, ಶಾಂತ ವಾತಾವರಣವನ್ನು ನಿರ್ಮಾಣ ಮಾಡಬೇಕು.

ಕಾಲೇಜದಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನ!

ಕೊಲಂಬೋ. ಝುಮಪೋರಿನ್ ಕಾಲೇಜದ ಒಂದು ವರ್ಗದ ವಿದ್ಯಾರ್ಥಿಗಳು ಸ್ವತಂತ್ರ ದಿನದ ಲೆಕ್ಚರರು ಕಲಿಸು ಕೊಳ್ಳುವ ಸ್ಥಳದ ಮೇಲೆ ರಾಷ್ಟ್ರಧ್ವಜವನ್ನು ನಿಲ್ಲಿಸಿದ್ದರು. ಇಂಗ್ಲೀಷ ಲೆಕ್ಚರರು ವರ್ಗದಲ್ಲಿ ಕಾಲಿಟ್ಟಕೂಡಲೆ ಅದನ್ನು ನೋಡಿ ಸಿಟ್ಟಿಗೆದ್ದವರಾಗಿ, ಅದನ್ನು ಕಾಲಿನಿಂದ ತುಳಿದು ಹೊರಗೆ ಒಗೆದರು. ವಿದ್ಯಾರ್ಥಿಗಳು ಲೆಕ್ಚರರ ಈ ಉದ್ಧಟತನವನ್ನು ಕಂಡು ವರ್ಗದಿಂದ ಹೊರಬಿದ್ದು, ಮಹಾಂದ್ವಾರದ ಬಳಿಯಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ಅದಕ್ಕೆ ವಂದನೆಗಳನ್ನು ಸಲ್ಲಿಸಿದರು.

೫೦೦೦ ರೂಪಾಯಿಗಳನ್ನು ಜಪ್ತ ಮಾಡಿದರು

ಲಾಹೋರದಲ್ಲಿಯ ರಾಷ್ಟ್ರೀಯ ಪಕ್ಷದ ಪ್ರಮುಖ ದೈನಿಕ ಪತ್ರಿಕೆಯಾದ 'ಪ್ರತಾಪ' ಪತ್ರಿಕೆಗೆ ಸರಕಾರದವರು ಮುದ್ರಣ ಜಾಮೀನು ಕೇಳಿಯ ಕಾಯದೆ ಪ್ರಕಾರ ೫೦೦೦ ರೂಪಾಯಿ ಹೊಣೆ ಕೇಳಿದ್ದರಿಂದ, ಅವರು ಆ ಹಣವನ್ನು ಕೊಟ್ಟಿದ್ದರು. ಕೆಲವು ದಿನಗಳ ಮೇಲೆ ಅಧಿಕಾರಿಗಳು ಪತ್ರಿಕೆಯಲ್ಲಿ ಆಕ್ಷೇಪಾರ್ಹ ಲೇಖಗಳು ಪ್ರಕಟವಾಗಿದೆಯೆಂಬ ಆರೋಪ ಹೊರಿಸಿ, ಆ ಹಣವನ್ನು ಜಪ್ತ ಮಾಡಿ ಅವರಿಗೆ ಮತ್ತೆ ಹೊಸದಾಗಿ ಕೇಳಿಕೊಂಡರು. ಪ್ರತಾಪ ಪತ್ರಿಕೆಯವರು ಈ ಸಂಬಂಧವಾಗಿ ಹಾಯಕೋರ್ಟಿಗೆ ಅಪೀಲ ಮಾಡಿದರು. ಅಪೀಲು ನಿರಾಕರಿಸಲ್ಪಟ್ಟಿತು

ಮಹಾರಾಷ್ಟ್ರ ಮುಖಂಡರೊಡನೆ ಮಹಾತ್ಮರ ಮಾತುಕತೆ.

ತಾ|| ೧೮ ನೆಯ ದಿವಸ ಮಹಾತ್ಮಾ ಗಾಂಧಿಯವರು; ಸರದಾರ ವಲ್ಲಭಭಾಯಿ ಜಮನಾಲಾಲಜಿ ಬಜಾಜರು ಇವರೊಂದಿಗೆ ಬ್ಲಿಲಿಂಗ್ಟನ ಸ್ಕ್ವೇರ್ ಕ್ಕೆ ಭೆಟ್ಟಿ ಕೊಟ್ಟು, ಮಹಾರಾಷ್ಟ್ರದ ಮುಖಂಡರೊಡನೆ ಕರ್ನಾಟಕ ಸ್ಥಿತಿಯ ಸಂಬಂಧವಾಗಿ ಚರ್ಚೆ ಮಾಡಿದರು. ಶ್ರೀ ಶಂಕರರಾವ ದೇವ ಇವರು ತಮಗೆ ಉಪದೇಶ ಮಾಡಿದ ಮಹಾತ್ಮಾ ಗಾಂಧಿಯವರಿಗೆ ಬಿನ್ನವಿಸಿಕೊಂಡ ಕೂಡಲೆ ಅವರು, ಮಹಾರಾಷ್ಟ್ರದವರ ತಮ್ಮ ಪ್ರಯತ್ನದಲ್ಲಿ ಸರ್ವಶಕ್ತ ನಾಗಿ ಸಂದೇಶ ಕೊಟ್ಟರು.

ಆಗ್ರಾದಲ್ಲಿ ೭೧ ಜನರಿಗೆ ಕೈದು.

ಆಗ್ರಾದಲ್ಲಾದ ದಂಗೆಯ ನಿಮಿತ್ತವಾಗಿ ಈ ವರೆಗೆ ೭೧ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ. ಪರಿಸ್ಥಿತಿಯು ಈಗ ಶಾಂತವಾಗಿದೆ.

ಬೆಲೆಗೇರಿ ಬ್ರದರ್ಸ ಸಾಯಿಕಲ್ ಡಿಪೋ



ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಸಾಯಿಕಲ್, ಟೈರ್, ಟ್ಯೂಬ್ ಮೊದಲಾದವುಗಳು ಮಾಡುವದಲ್ಲದೆ ಪೆಟ್ರೋಮ್ಯಾಕ್ಸ್, ಬೊಂಬು, ಓವನ ಗ್ಯಾಸಲಾಯಿಟ ವಾಚ, ಕ್ಲಾಕ, ಟೈಪರೈಟರ ಮತ್ತು ಗ್ರಾಮಾಫೋನ್ ಮುಂತಾದವುಗಳ ರಿಪೇರಿ ಯೋಗ್ಯ ದರದಲ್ಲಿ ಮಾಡಿಕೊಡಲಾಗುವದು.

ಬೆಲೆಗೇರಿ ಬ್ರದರ್ಸ
ಸ್ಟೇಶನ್ ರೋಡ ಕಟ್ಟೆ, ಬಾಗಲಕೋಟೆ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ನೈಸಾದ ಕೈನೂಲಿನ ಕೈಮಗ್ಗದ ಶರ್ಟಿಂಗ್, ಸೀರೆ, ಧೋತರ ಮತ್ತು ಸ್ವದೇಶೀ ಕಾರಖಾನೆಯ ಸೀರೆ, ಟೊಪ್ಪಿಗೆ ಮುಂತಾದವು ಮತ್ತು ಖಾದಿ ವಗೈರೆ ದೊರೆಯುತ್ತವೆ.

ಶಂಕ್ರಪ್ಪ ಬಣಗಾರ
ಖಾದಿ ಭಂಡಾರ, ಬಾಗಲಕೋಟೆ

ದಾನಿ – ದಾಬಡೆ ಟೇಲರ್ಸ

ನಮ್ಮಲ್ಲಿ ವೇಳೆಗೆ ಸರಿಯಾಗಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಅರಿವೆಗಳನ್ನು ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ಪರೀಕ್ಷಿಸಿ.

ದಾನಿ—ದಾಬಡೆ
ಟೇಲರ್ಸ
ಬಾಗಲಕೋಟ— ಕೀರಗಲ್ಲ

ಜಾಹೀರಾತುದಾರರಿಗೆ

ಒಳ್ಳೆ ಸುಸಮಯ

ಯುಗಾದಿಯಿಂದ "ಕನ್ನಡಿಗ"ನ ನಿತ್ಯಸಂಚಿಕೆಯು ಆರಂಭವನ್ನು ಹೊಂದಲಿರುವದರಿಂದ ಇಮ್ಮಡಿ ಪ್ರಚಾರವೂ ಇದರ ಪ್ರಚಾರವು ಮೊದಲಿಗಿಂತಲೂ ಹೆಚ್ಚಾಗಿದೆ. ಕಾರಣ ಜಾಹೀರಾತು ದಾರರು ಮೊದಲಿನವರಿಗೆ ಕೆಲವು ದಿನಗಳವರೆಗೆ ಅತಿ ಸೋವಿ ದರದಿಂದ ಜಾಹೀರಾತು ಹಾಕ್ರುವೆವು. ಇಷ್ಟವುಳ್ಳವರು ಪ್ರತ್ಯಕ್ಷ ಭೆಟ್ಟಿಯಾದರೆ ಅಥವಾ ಪತ್ರದ್ವಾರದಿಂದ ತಿಳಿದು ಕೊಳ್ಳಬೇಕು.

ವ್ಯವಸ್ಥಾಪಕ
"ಕನ್ನಡಿಗ" ಬಾಗಲಕೋಟ.

ಸ್ಯಾಂಪಲ್ ಮಣಿ ಚೀಟುಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಬಣ್ಣಗಳ ಮಣಿ ಚೀಟುಗಳು ದೊರೆಯುತ್ತವೆ.

೫೦೦ ಚೀಟುಗಳಿಗೆ	೨—೦—೦
೧ ಸಾವಿರ ಚೀಟುಗಳಿಗೆ,	೩-೮-೦
೫ ಸಾವಿರಕ್ಕೆ,	೧೭-೦-೦ ರೇಲ್ವೆ ಫ
೫ ಕೋಲಂ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪು ಮಸಿ ಸ್ಟಿಂಗಿಸ ಗಿರಣಿ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ
ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂವಿವರ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಇತಿಹಾಸ	೦-೬-೦
ಗೋಲದ ಕೃತಿ ಭೂಗೋಲ ಟಿಪ್ಪಣಿಗಳು	೦-೧೨-೦
ಹಿಂದೂದೇಶದ ಕೋಷ್ಟಕ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಡಳಿಯಿಂದ ಒಪ್ಪಿದ್ದು)
ಇವಲ್ಲದೆ ಇನ್ನು ಎಲ್ಲ ತರದ ಶಾಲೋಪಯೋಗಿ ಪುಸ್ತಕ ಮತ್ತು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ



ವಿಜಾಪುರದಿಂದ ಪಂಢರಪೂರ ಮೋಟರ ಸರ್ವಿಸ

ಮೋಟರು ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಜತ್ತ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತು ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೬ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕರೆದ ಕೂಡಲೆ ಪ್ರವಾಸದ ಹೊತ್ತಿಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು.

ಮ್ಯಾನೇಜರ,
ಆಡಿಲ ಮಹಾಲಕ್ಷ್ಮೀ ಮೋಟಾರ ಸರ್ವಿಸ
ವಿಜಾಪುರ.

ಚರಮಾಂಕ.

ಬಾಗಲಕೋಟಿಯಲ್ಲಿ ಚರಮಾಂಕವು ಕಣ್ಣು ಪ್ರಮಾಣದ ವೇಳೆ ಒಂದು ವಿಶೇಷ ರೀತಿ ಕಾರ್ಯವನ್ನೇ ನಡಿಸುತ್ತದೆ. ಈ ಶಾಲೆಯಲ್ಲಿ ಹುಡಿಗರನ್ನು ಹೊರಗೆ ಕಳಿಸಿ ಚಿಕ್ಕ ಯು ಕ್ಲಾಸು ಕಟ್ಟುವದು, (ಕರಿಯುವದ) ಅಕ್ಕೀ ಹುಣಚಿ ಕಂಬೀ ಮಾಡುವದು, ನವಣೆ ಹಣ್ಣು ಮಾಡುವದು, ಸೇವಿಸುವದು, ಮತ್ತು ಖಾದೀ ಪ್ರಚಾರ ಮಾಡುವದು ಮುಂತಾದ ವಿಷಯ ಕಲಿಸುತ್ತಾರೆ.

ವಿದ್ಯಾರ್ಥಿಗಳ ತಮ್ಮ ಊಟ ಉಣಿಗೆಯ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕು. ರಾಜವನಾದರೂ ತಾನು ತೀರ ಬಡವನೆಂದು ಮನಃಪೂರ್ತಿ ಮಾಡಿಕೊಟ್ಟಲ್ಲಿ ಅವನ ಊಟದ ಬಗ್ಗೆ ಹಣದ ಸಹಾಯವಾಗಲೀ ಊಟದ ಬೇರೆ ವ್ಯವಸ್ಥೆಯಾಗಲೀ ಮಾಡುವದಿಲ್ಲ ಒಂದು ಅವರಿಗೆ ಇರಲಿಕ್ಕೆ ಜಾಗೆಯ ವ್ಯವಸ್ಥೆಯನ್ನು ಮಾಡಿಕೊಡುವದು, ವಿದ್ಯಾರ್ಥಿಗಳು ಸಂಘದ ನಿಯಮಗಳಿಗೆ ಒಪ್ಪಬೇಕು.

ಕರ್ನಾಟಕದ ಸೇವೆ ಮಾಡಲಪೇಕ್ಷಿಸುವವರು ಈ ಸಂಧಿಯನ್ನು ಕಳೆದು ಕೊಳ್ಳಬಾರದು. ಈ ಸಂಘದಲ್ಲಿ ಕಲಿತ ಯಾವ ತಜ್ಞ ಸಹಾಯವುಗಳು ಮಾರಾಟಕ್ಕೆ ಸಿಗುತ್ತವೆ,

೧ ಹತ್ತೀ ಕಾಳು. ಬಿತ್ತುವ ಬಾಡಿಗೆ ಲಿಕ್ವಿಡ್.

೨ ಅಕ್ಕೀ ಹುಣಚಿ ವ ಬೀಜ.

೩ ಕಾಳ (ಬಿಸಿಮಾಡದ)

೪ ಕೊಡತಿ.

೫ ಶಾಸ್ತ್ರೀಯ ರೀತಿಯಿಂದ ಸಿದ್ಧಪಡಿಸಿದ ಹಂಜಿ (೩೦ ನಂಬರದ ನೂಲು ತೆಗೆಯಲಿಕ್ಕೆ ಬರುವಂಥವು)

೬ ಕದರು ಮತ್ತು ಘಿ.ಕಿ.

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕೂಡ ಪತ್ರವ್ಯವಹಾರದ ಬಗ್ಗೆ ಮುಂಗಡ ಪೋಸ್ಟ ತಿಕೀಟು ಕಳಿಸಬೇಕು.

ನಾರಾಯಣ ರಾಘವೇಂದ್ರರಾವ ದೇಶಪಾಂಡೆ
ವ್ಯವಸ್ಥಾಪಕ
ಚರಮಾಂಕ ಬಾಗಲಕೋಟೆ.

ಸ್ವದೇಶೀ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈಮಗ್ಗದ, ಗಿರಣಿಗಳ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ ರೀತಿಯ ಪೇಟ, ಟೋಪಿ, ಖಾದಿಯ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ಗುರುಮೂರ್ತಿರಾವ
'ಸ್ವದೇಶೀ ಸ್ಟೋರ್ಸ'
ಹೊಸ ಬಜಾರ, ವಿಜಾಪುರ.

ಶುಷ್ಕ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೋಪ್ಪಿಗೆ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೋಪ್ಪಿಗೆಗಳು, ಜರದ ಟೋಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ದಲ್ಲಾಳಿ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ
'ವ್ಯಾಪಾರ ಮೋಹರ' ಮೋಹರೋದ
ವಿಜಾಪುರ

ಡಾಕ್ಟರ ಕೃಷ್ಣರಾವ ಪರ್ವತಿಕರ ಇವರ ಮೆಡಿಕಲ್ ಸ್ಟೋರ್ಸ

ನಮ್ಮಲ್ಲಿ ದೇಶಿ ಹಾಗು ಪೇಟಂಟ ಔಷಧಗಳು ಮತ್ತು ದವಾಖಾನೆಗೆ ಉಪಯೋಗ ಬೀಳುವ ಎಲ್ಲ ತರದ ಸಾಮಾನುಗಳು ಯೋಗ್ಯ ಬೆಲೆಗೆ ಮಾರಲಿಕ್ಕೆ ದೊರೆಯುತ್ತವೆ.

ಕೃಷ್ಣರಾವ ಪರ್ವತಿಕರ
ದವಾಖಾನೆ ಮತ್ತು ಮೆಡಿಕಲ್ ಸ್ಟೋರ್ಸ
ಬಾಗಲಕೋಟ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಸಿಕ್ಕು ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯ ದಿವಸ ತಯಾರಿಸಿ ಕೊಡುವೆವು. ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ನಡೆಯುತ್ತದೆ. ಟೇಲರಿಂಗ ಕಿಟ್ಟ ನ್ಯಾಯದರದಿಂದ ಕೊಡುವೆವು. ಒಮ್ಮೆ ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ
ಟೇಲರ್ಸ
ಕೋರ್ಟ ಬಜಾರ ವಿಜಾಪುರ

'ಕನ್ನಡಿಗ'ನ ನಿತ್ಯಸಂಚಿಕೆ

ದೈನಿಕ "ಕನ್ನಡಿಗ"ನು ಕನ್ನಡಿಗರ ಸೇವೆ ಮಾಡಹತ್ತಿ ಈಗ ಒಂದು ವರ್ಷ ಹೋಯಿತು. ಅವನು ಈಗ ತನ್ನಲ್ಲಿ ಕೆಲಕೆಲವು ಹೊಸ ಸುಧಾರಣೆಗಳನ್ನು ಮಾಡಿ ಎರಡನೆಯ ವರ್ಷದಲ್ಲಿ ಕಾಲಿಟ್ಟಿರುವನು. ಮೊದಲಿನಕಿಂತಲೂ ಇಮ್ಮಡಿ ಆಕಾರದಲ್ಲಿ ಹೊರಡುತ್ತಿರುವನು. ಹಿಂದುಸ್ಥಾನದ ಭಾವೀರಾಜ್ಯಘಟನೆಯ ಸಂಬಂಧವಾಗಿ ಕರಾಚಿ ಕಾಂಗ್ರೆಸ ಹಾಗು ದುಂಡ ಮೇಜಿನ ಪರಿಷತ್ತುಗಳಲ್ಲಿ ನಡೆಯತಕ್ಕದ್ದಾಗಿರುವ ಚರ್ಚೆಯ ಸುದ್ದಿಗಳನ್ನು ಆದಷ್ಟು ಬೇಗನೆ ತಿಳಿದುಕೊಳ್ಳಲು ಜನಸಾಮಾನ್ಯರೂ ಸಹ ಈಗ ಆತುರರಾಗಿರುವದರಿಂದ, ಅವರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ ಕನ್ನಡಿಗನು ಅಸೋಸಿಯೇಟೆಡ್ ಪ್ರೆಸದವರಿಂದ ತಂತಿ ವರ್ತಮಾನಗಳನ್ನು ತರಿಸಿಕೊಳ್ಳುವನು. ಇದಲ್ಲದೆ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು, ಬಳ್ಳಾರಿ, ಮೊದಲಾದ ಸ್ಥಳಗಳಲ್ಲಿಯ ಸ್ವಂತ ಪ್ರತಿನಿಧಿಗಳಿಂದ ಮಹತ್ವದ ಸುದ್ದಿಗಳ ಬಗ್ಗೆ ಪತ್ರಗಳನ್ನು ತಂತಿಗಳನ್ನು ತರಿಸಿಕೊಂಡು ಅಲ್ಲಿಯ ಸ್ಥಿತಿಗತಿಗಳನ್ನು ವಾಚಕರಿಗೆ ತಿಳಿಸುತ್ತಿರುವನು. ಮುಂಬಯಿಯ ಪೇಟೆಯ ಧಾರಣೆಯನ್ನು ದಿನದಿನವೂ ತರಿಸಿ ವ್ಯಾಪಾರಸ್ಥರ ಅಡಚಣೆಯನ್ನು ದೂರ ಮಾಡುತ್ತಿರುವನು. ಸಾಹಸಕ್ಕೆ ಕೈಹಾಕಿದ ಪತ್ರಿಕೆಯೆಂದರೆ ಕರ್ನಾಟಕದಲ್ಲಿ ಇದೇ ಮೊದಲನೆಯದು. ಕನ್ನಡಿಗನ ಈ ಉಪಕ್ರಮವು ಸಫಲವಾಗಬೇಕೆಂದರೆ ಕನಿಷ್ಠ ೪.೦೦ ಜನ ದಾರರು ಕನ್ನಡಿಗನನ್ನು ತರಿಸಿಕೊಳ್ಳಬೇಕಾಗುವದು. ಅಷ್ಟು ಜನ ಚಂದಾದಾರರು ಯಾವಾಗ ದೊರೆಯುವರೆಂಬ ವಿಚಾರದಿಂದ ಅವನು ಈ ಸಾಹಸಕ್ಕೆ ಕೈಹಾಕಿರುವನು. ಕನ್ನಡಿಗನನ್ನು ತರಿಸಿಕೊಳ್ಳುವದು. ಜನಸಾಮಾನ್ಯರಿಗೆ ಭಾರವಾಗಬಾರದೆಂಬ ಉದ್ದೇಶದಿಂದ ಮೊದಲಿನಷ್ಟೇ ಇಮ್ಮಡಿಯಾದರೂ ಸಹ, ಬೆಲೆಯನ್ನು ಮೊದಲಿನಷ್ಟೇ ಇಟ್ಟಿದೆ.

ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ಮೊದಲಾದ ಸ್ಥಳಗಳಿಗೆ ಪಾರ್ಸಲುಗಳನ್ನು ಕಳಿಸಿ, ವಿಜಾಪುರ ಮುಂತಾದ ಕಡೆ ಮಾಡಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಿ ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನು ಕೊಟ್ಟಿದೆ. ಕೊಟ್ಟಿಲ್ಲವೋ, ಅಲ್ಲಿಯವರು ಆ ಭಾಗಕ್ಕೆ ಪತ್ರ ಬರೆದು ಕೇಳಿಕೊಳ್ಳಬೇಕು. ತಮ್ಮ ತಮ್ಮ ಊರುಗಳಿಂದ ಪಾರ್ಸಲುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟರು ಕಿಟೀಟ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು.

ಏಜಂಟರಾಗಲಿಚ್ಛಿಸುವವರು ಕೂಡಲೆ ಬರೆದುಕೊಳ್ಳಬೇಕು ಸಣ್ಣ ಊರವರು ಮೂರು ರೂಪಾಯಿಗಳನ್ನು ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನು ಕೊಡಬೇಕು. ಸ್ಥಾನಿಕ ಕಾಂಗ್ರೆಸ ಕಮಿಟಿಯ, ಅಥವಾ ಮುಖ್ಯ ವರ್ತಕರ ಒಂದು ಶಿಫಾರಸು ಪತ್ರವನ್ನಾದರೂ ಪ್ರಾಮಾಣಿಕತನದ ಬಗ್ಗೆ ಅವರು ಸಂಗಡ ಕಳಿಸತಕ್ಕದ್ದು. ದಕ್ಷಿಣ ಒಮ್ಮೆವನಲ್ಲ ಹಣವನ್ನು ಕಳಿಸಬೇಕು. ೧೦೦ ಕ್ಕಿಂತ ಹೆಚ್ಚಿಗೆ ಉಳಿದ ತಿರುಗಿ ತೆಗೆದುಕೊಳ್ಳುವದಿಲ್ಲ ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ ದೊರೆಯುವದು. ಪ್ರತಿ ಊರಿನ ಕಿರಕೋಳ ಏಜಂಟರುಗಳು ಸಣ್ಣ ಊರುಗಳಲ್ಲಿ ೧೦—೧೫ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳ ೨-೩ ರೂಪಾಯಿ ಆದಾಯ ದೊರೆಯುವದು. ಇನ್ನು ಪಟ್ಟಣಗಳಲ್ಲಿ ನೂರಾರು ಪ್ರತಿಗಳನ್ನು ಮಾರುವವರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು. ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಕಾರಣ ಏಜಂಟರು ಕೊಂಚ ಶ್ರಮ ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖ್ಯ ಪೇಟೆಯಲ್ಲಿ ಅವರ ಹೆಸರನ್ನು ನೋಂದಾಯಿಸಿಕೊಂಡಾಗಲಿ, ಪ್ರಯತ್ನಪಟ್ಟರೆ ಪತ್ರಿಕೆಗಳು ಹೆಚ್ಚಾಗಿ ಖರ್ಚಾಗುವವು. ಅವಶ್ಯಕವಾದ ಇತರ ಸಂಗತಿಗಳನ್ನು ಪತ್ರ ಬರೆದು ಕೇಳಿಕೊಳ್ಳತಕ್ಕದ್ದು.

ಜಾಹೀರಾತಿನ ದರ ೩— ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ. ಹೊಗರಾಯೀ ಜಾಹೀರಾತುಗಳಿಗೆ ...

ಬಾಗಲಕೋಟ
೨೮—೩—೧೯೩೧

ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ ಕಾರ್ಯಾಲಯ ಬಾಗಲಕೋಟ"

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕಠಾರೆ ಇವರಿಂದ ಬಾಗಲಕೋಟೆ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಪ್ರಕಟಿಸಲ್ಪಟ್ಟಿತು.

ರ ನಂ. ಬಿ. ೨೭೭೮ ನಿತ್ಯ ಪತ್ರಿಕೆ. ಬೆಲೆ ೦-೦-೩.

...परवशं दुःखं । सर्वमात्मवशं सुखम् ॥-मनु.

ಕನ್ನಡಿಗ

KANNADIGA
BAGALKOT.

ನಿತ್ಯಪತ್ರಿಕೆಯು
ವರ್ಗಣೀ ದರ ೩
ಪರಸ್ಥಳದವರಿಗೆ
೧೨ ತಿಂಗಳಿಗೆ ೧೨—೦—೦
೬ ,, ೬—೦—೦
೩ ,, ೩—೦—೦
೧ ,, ೧—೦—೦
ಸ್ಥಳಕರಿಗೆ
೧೨ ತಿಂಗಳಿಗೆ ೬—೦—೦
೬ ,, ೪—೦—೦
೩ ,, ೧—೮—೦
೧ ,, ೦—೮—೦

ನಿತ್ಯಪತ್ರಿಕೆಯು
ಜಾಹೀರ ಸಾ.. ದರವು
೧ನೇ ೭ ೧ ಇಂಚಿ ೧-೭
೨ ,, ,, ೧-೦
ಮುಂದೆ ಪ್ರತಿಯೊಂದು ಸಲ
೦-೧
ಹೆಚ್ಚಿನದಸ್ಸಲಿಗೆ ಅಕ್ಷ
ಪ್ರಮಾಣದಿಂದ ದರವೇಳುವ

ಸಂಪಾದಕರು:- ಮಂಗಳವೆ ಢೇ ರಾಜೇರಾಯರ ಮಗ ಆದ ಶ್ರೀನಿವಾಸರಾಯರು.
ರವಿವಾರದ ಹೊರತಾಗಿ ಪ್ರತಿನಿತ್ಯವೂ ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೩] ಬಾಗಲಕೋಟೆ— ಬುಧವಾರ ಮಿತಿ ಚೈತ್ರ ಶುದ್ಧ ೬ ಶಕೆ ೧೮೫೨ ತಾ॥ ೨೫—೩—೩೦ [ಸಂಚಿಕೆ ೬

ಶ್ರೀ ಸೇನಗುಪ್ತರು

ಸರಕಾರಕ್ಕೆ ಎಚ್ಚರಿಕೆ ಕೊಟ್ಟರು!

ಬಂಗಾಲದ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಜೆ. ಎಂ. ಸೇನಗುಪ್ತ, ಶ್ರೀಮತಿ ಸೇನಗುಪ್ತ, ಹಾಗು ಶ್ರೀ ಪ್ರತಾಪ ಎಹರಾಯರು ತಾ॥ ೨೧ ನೆಯ ದಿವಸ ಕಲ್ಕತ್ತೆಯಿಂದ ಪ್ರಯಾಣ ಬೆಳಸಿದರು. ಅವರನ್ನು ಕಳಿಸಲು ಸಹಸ್ರಾರು ಜನರು ಸ್ಟೇಶನಕ್ಕೆ ಬಂದಿದ್ದರು. ಫ್ರೀಪ್ರೆಸ್ ಪತ್ರದ ಪ್ರತಿನಿಧಿಯು ಅವರನ್ನು ಭೆಟ್ಟಿಯಾಗಿ ಸಂದೇಶ ಕೊಡಲು ಕೇಳಿಕೊಂಡಾಗ, ಅವರು ಕೆಳಗಿನಂತೆ ಅಭಿಪ್ರಾಯ ಕೊಟ್ಟರು.

ಲಂಡನದಲ್ಲಿ ನಿರ್ಣಯಿಸಲ್ಪಟ್ಟ ಸಾಮ್ರಾಜ್ಯದ ರಾಜನೀತಿಯು ಕಾಂಗ್ರೆಸವನ್ನು ಧ್ವಂಸ ಮಾಡಿಕೊಳ್ಳುತ್ತಿದೆ. ಈ ದಂಡನೆಗಿಂತ ಭಯಾನಕವನ್ನು ಗಣ್ಯಮಾಡಿಸಿ, ಸಂಧಿನಿಂದ ಬಿಟ್ಟದ ಕಾಂಗ್ರೆಸ ಆ... ಕಾರ್ಯವನ್ನು ಸರಕಾರದವರು ಭಂಗ ಮಾಡುವದಿಲ್ಲವೆಂದು ನನಗೆ ಅನಿಸುತ್ತದೆ.

ರಾಷ್ಟ್ರೀಯ ಪಕ್ಷದ ಮುಸಲ್ಮಾನರು

ಮಹಾತ್ಮರೊಡನೆ ಚರ್ಚೆ ಮಾಡಿದರು

ರಾಷ್ಟ್ರೀಯ ಪಕ್ಷದ ಮುಸಲ್ಮಾನ ಮುಖಂಡರಾದ ಮೌಲಾನಾ ಅಬ್ದುಲ್ ಕಲಾಮ ಅಜಾದ್, ಡಾ. ಅನಸಾರಿ, ಶೇರವಾಣಿ, ಖಲಿಲ್ ಖುಜಮಾನ್, ಬ್ರೇಲ್ವಿ. ಫ. ಕಿದವಾಯಿ, ಡಾ. ಅಲಮ್ ಮೊದಲಾದವರು ತಾ॥ ೨೨ ನೆಯ ದಿವಸ ಮಹಾತ್ಮಾ ಗಾಂಧಿಯವರ ಭೆಟ್ಟಿ ತೆಗೆದುಕೊಂಡು, ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ಅವರೊಡನೆ ಚರ್ಚೆ ನಡಿಸಿದರು. ಈ ತಿಂಗಳ ಕೊನೆಗೆ ಸಹಾರಣಪುರದಲ್ಲಿ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಸಭೆ ಕೂಡಬೇಕಾಗಿ ಚರ್ಚೆಯಲ್ಲಿ ನಿರ್ಣಯಿಸಲ್ಪಟ್ಟಿತು.

ಅಮೇರಿಕನ್ನರೂ

ಗಾಂಧಿ ಟೊಪ್ಪಿಗೆ ಧರಿಸಿದರು

ಹಿಂದುಸ್ಥಾನದಲ್ಲಿ ಪ್ರವಾಸ ಮಾಡಲು ಬಂದ ಸತ್ತರಾರು ಜನ ಅಮೇರಿಕನ್ನರು ಮಹಾತ್ಮಾ ಗಾಂಧಿಯವರನ್ನು ಭೆಟ್ಟಿಯಾಗಲು ೨೧ ನೆಯ ದಿವಸ ಡಾ. ಅನಸಾರಿಯವರ ಮನೆಗೆ ಹೋಗಿದ್ದರು. ಅವರಲ್ಲಿ ಎಲ್ಲರೂ ತಮ್ಮ ತಲೆಯ ಮೇಲೆ ಗಾಂಧಿ ಟೊಪ್ಪಿಗೆ ಹಾಕಿಕೊಂಡಿದ್ದಲ್ಲದೆ, ಅಧಿಕವಾಗಿ ಖಾದಿಧಾರಿಗಳಾಗಿ ಅವರು ಹೋಗಿದ್ದರು. ಮಹಾತ್ಮಾ ಗಾಂಧಿಯವರು ಆ ವೇಳೆಯಲ್ಲಿ ಕೆಲಸದಲ್ಲಿದ್ದದ್ದರಿಂದ ಅವರು ನಿರಾಶೆಹೊಂದಿ ತಿರುಗಿ ಹೋದರು.

ಗೊಂಬೆಗಳೂ

ಮನುಷ್ಯರಂತೆ ಮಾತಾಡಹತ್ತಿದವು.

ಜರ್ಮನಿಯಲ್ಲಿ ಮನುಷ್ಯರಂತೆ ಕೆಲಸ ಮಾಡುವ ಗೊಂಬೆಗಳನ್ನು ರಾತ್ರಿಯಲ್ಲಿ ಬಾಗಿಲ ಕಾಯಲು ನಿಲ್ಲಿಸುವರು. ಮನೆಯವನ್ನು ಕಾಯುವದು, ಒಳಗೆ ಬರುವವನ್ನು ಬಾಗಿಲು ತೆಗೆದು ಒಳಗೆ ಬಿಟ್ಟು ಹೊರಗೆ ಹೋಗುವವನನ್ನು ಬಾಗಿಲು ತೆಗೆದು ಹೊರಗೆ ಕಳಿಸುವದು, ಯಜಮಾನರಿಗೆ ಬೇಕಾದ ತಿಂಡಿ ಪದಾರ್ಥಗಳನ್ನು ಅವರಿಗೆ ಒದಗಿಸಿ ಕೊಡುವದು, ಇಷ್ಟೆಲ್ಲ ಕೆಲಸಗಳನ್ನು ಅವುಗಳು ಮಾಡುತ್ತಿರುವವು. ಈಗ ಅವುಗಳಿಗೆ ಮಾತನಾಡಲಿಕ್ಕೂ ಕಲಿಸಿದ್ದಾರೆ. ಯಾವುದೋ ಒಂದು ತರದ ಯಂತ್ರದಿಂದ ಅದಕ್ಕೆ ಮನುಷ್ಯನ ಸ್ವರದಂತೆ ಸ್ವರ ಕೊಟ್ಟಿರುವರು. ಈ ಓಡುವ ಜಗತ್ತಿನಲ್ಲಿ ಇನ್ನೂ ಏನೇನಾಗುವದೋ ಏನೋ!

ಇದೆಂಥ ಒಪ್ಪಂದ!!

ಬಿಡುಗಡೆ ಮಾಡಿ ಪುನಃ ಹಿಡಿದರು

ಗಾಂಧಿ— ಆಯರ್ವಿನ ಸಂಧಾನದ ಕರಾರುಗಳನ್ನನುಸರಿಸಿ ಬಿಡುಗಡೆ ಮಾಡಲ್ಪಟ್ಟ ಕಲಕತ್ತೆಯ ಶ್ರೀ ಹಗೇಂದ್ರ ಚಟರ್ಜಿಯವರ ಬಂಗಾಲ ಆರ್ಡಿನನ್ಸದನ್ವಯ ಪುನಃ ಹಿಡಿಯಲ್ಪಟ್ಟಿದ್ದಾರೆ.

ಕಾನಪುರದಲ್ಲಿ

ಮುದ್ರಣಾಲಯದ ಝಡತಿ

ಕಾನಪುರದ ಗುಪ್ತ ಪೊಲೀಸರು ತಾ॥ ೧೮ ನೆಯ ದಿವಸ ಅಲ್ಲಿಯ "ಪ್ರತಾಪ" ಮುದ್ರಣಾಲಯಕ್ಕೆ ಮುತ್ತಿಗೆ ಹಾಕಿ ಅದನ್ನು ಝಡತಿ ಮಾಡಿದರು. ಆಕ್ಷೇಪಾರ್ಹ ಕಾಗದಪತ್ರಗಳೇನೂ ಝಡತಿಯಲ್ಲಿ ಸಿಗಲಿಲ್ಲವಾದ್ದರಿಂದ ಕೆಂಪು ಮಸಿಯ ಡಬ್ಬಿ, ಅಚ್ಚಿನ ಮೊಳೆ, ಬೋರ್ಡು ಮೊದಲಾದವುಗಳನ್ನು ಜಪ್ತ ಮಾಡಿಕೊಂಡು ಹೋದರು. ಪೋಲೀಸ ಅಧಿಕಾರಿಗಳು ಈ ಮುದ್ರಣಾಲಯವನ್ನು ಝಡತಿ ಮಾಡಿದ್ದು ಇದು ೩ನೆಯ ಸಲ!

ಕಾಯದೆಭಂಗವನ್ನು

ಪುನಃ ಪ್ರಾರಂಭಿಸಿದರು.

ಮೀರತ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ತಾ॥ ೨೦ ನೆಯ ದಿವಸ ಸಭೆ ಸೇರಿಸಿಕೊಂಡು, ಕಳೆದ ನಿರ್ಣಯವನ್ನು ಗೊತ್ತುಪಡಿಸಿ, ಅದನ್ನು ಮರಿನಂಗ ಕಮಿಟಿಗೆ ಕೊಟ್ಟು ಕಳಿಸಿದ್ದಾರೆ.

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೆ ಏರಿಸಿದ ವರ್ತಮಾನವು ಪತ್ರಿಕೆಯಲ್ಲಿ ಪ್ರಕಟವಾದ ಮಾರ್ನೆಯಿಂದ ಈ ಸಭೆಯು ಬೆರಗಾಗಿ, ಆ ರಾಷ್ಟ್ರೀಯ ಅನಿಷ್ಟಕರ ಕಾರ್ಯವನ್ನು ಮಾಡದೆಂದು ಬ್ರಿಟಿಶ ಪ್ರಭುತ್ವಕ್ಕೆ ಎಚ್ಚರಿಕೆ ಕೊಡುತ್ತದೆ. ಪ್ರಭುತ್ವದವರು ಈ ಎಚ್ಚರಿಕೆಯನ್ನು ಲಕ್ಷಿಸದಿದ್ದರೆ, ಆ ರೀತಿ ಗಲ್ಲಿಗೇರಿಸಿದರೆ, ಪುನಃ ಕಾಯದೆಭಂಗ ಚಳವಳಿಯನ್ನು ಪ್ರಾರಂಭಿಸಲು ಅಪ್ಪಣೆ ಕೊಡಬೇಕೆಂದು ರಾಷ್ಟ್ರೀಯ ಸಭೆಯ ಈ ಬೈಠಕವು ಬೇಡಿಕೊಳ್ಳುತ್ತದೆ.

ಮಹಾತ್ಮರೊಡನೆ

ಸಂಭಾಷಣೆ

ಅಸ್ಪೃಶ್ಯ ವರ್ಗದ ಶಿಷ್ಟಮಂಡಳದವರು ಮಹಾತ್ಮಾ ಗಾಂಧಿಯವರನ್ನು ಭೆಟ್ಟಿಯಾಗಿ ಭಾವೀ ರಾಜ್ಯಘಟನೆಯ ಸಂಬಂಧವಾಗಿ ಅವರೊಡನೆ ಚರ್ಚೆ ಮಾಡಿದರು.

ಸರಹದ್ದ ಪ್ರಾಂತದ ಮುಖಂಡರಾದ ಅಬ್ದುಲ್ ಗಫಾರ ಖಾನರು ಸಮ್ಮುಖದಲ್ಲಿ ಮಹಮ್ಮದ ಖಾನ, ತಾ॥ ೨೦ ನೆಯ ದಿವಸ ಮಹಾತ್ಮಾ ಗಾಂಧಿಯವರ ಭೆಟ್ಟಿ ತೆಗೆದುಕೊಂಡು, ತಮ್ಮ ಪ್ರಾಂತದಲ್ಲಿಯ ಅತ್ಯಾಚಾರದ ಸಂಗತಿಗಳನ್ನು ಮಹಾತ್ಮರಿಗೆ ತಿಳಿಸಿಕೊಟ್ಟರು.

ವೀರ ವಾಮನರಾಯರು

ಬಿಡುಗಡೆಹೊಂದಿದರು.

ಮಧ್ಯಪ್ರಾಂತದ ಪ್ರಸಿದ್ಧ ಸ್ವಾತಂತ್ರ್ಯವೀರರಾದ ವೀರ ವಾಮನರಾವ ಜೋಶಿಯವರು ತಾ॥ ೧೯ ನೆಯ ದಿವಸ ಸಿಯೋನಿ ಜೇಲಿನಿಂದ ಒಪ್ಪಂದದ ಕರಾರಿಗನುಸರಿಸಿ ಬಿಡುಗಡೆ ಮಾಡಲ್ಪಟ್ಟರು.

ರಾಷ್ಟ್ರೀಯ ಪಕ್ಷದ

ಮುಸಲ್ಮಾನರ ಸಭೆ

ಕಾಂಗ್ರೆಸ್ ಅಧಿವೇಶನದ ತರುವಾಯದಲ್ಲಿ ತಾ॥ ೨೯ ನೆಯ ದಿವಸ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಸಭೆಯು ಡಾ. ಅನಸಾರಿಯವರ ಬಿಡಾರದಲ್ಲಿ ಸೇರತಕ್ಕದ್ದಿದೆ.

ಕರ್ನಾಟಕದಲ್ಲಿ

ಚಲನಚಿತ್ರದ ಉದ್ಯೋಗ

ಮುಂಬಯಿ ಜೆ... ಶ್ರೀ ಕೊಟ ಶಿವರಾಮ ಕಾರಂತರೇ ಮೊದಲಾದ ಕೆಲವು ಕನ್ನಡಿಗರು ಚಲನ ಚಿತ್ರವನ್ನು ತಯಾರಿಸುತ್ತಿರುವರಂತೆ. ಅವರ "...ಕೊಂಡ" ಎಂಬ ಪ್ರಥಮ ಚಿತ್ರವು ಎಪ್ರಿಲ್ ತಿಂಗಳದಲ್ಲಿ ಹೊರಬೀಳುವದೆಂದು ತಿಳಿದು ಬರುತ್ತದೆ.

ಬೆಳಗಾವಿಯ ಸುಪ್ರಸಿದ್ಧ ಫೋಟೋಗ್ರಾಫರರಾದ ಎಸ್. ಮಹಾದೇವ ಕಂಪನಿಯವರ ಚಿತ್ರವು ಕನ್ನಡದೊಳಗೆ ಫಿಲ್ಮ ತೆಗೆದು ಹೊರಡಿಸುವವರಾಗಿ ತಿಳಿಯುತ್ತದೆ.

ಒಪ್ಪಂದವಾದರೂ

ಪೋಲೀಸರ ಕಾಟ ತಪ್ಪಲೊಲ್ಲದು

ಇಲ್ಲಿಯ ಶ್ರೀ ನಿಂಗಾಪೂರ ಎಂಬ ಒಬ್ಬ ಸ್ವಯಂಸೇವಕನು ಇವತ್ತಿನ ದಿವಸ ಮೋಟಾರಿನಲ್ಲಿ ಕುಳಿತಾಗ, ಮೋಟಾರ ನಿಲ್ಲುವ ಸ್ಥಳದಲ್ಲಿ ನಿಂತುಕೊಂಡಿದ್ದ ಹಣಮಂತಪ್ಪ ಎಂಬ ಒಬ್ಬ ಸಾದಾ ವೇಷದ ಪೋಲೀಸ ನಿಂಗಾಪೂರರ ಹೆಸರು ತನಗೆ ಗೊತ್ತಿದ್ದರೂ, ಬುದ್ಧಿಪೂರ್ವಕವಾಗಿ ಅವರಿಗೆ ಅವರ ಹೆಸರು ಕೇಳಿದನು. ಶ್ರೀ ನಿಂಗಾಪೂರ ಹೆಸರು ಹೇಳಲು ನಿರಾಕರಿಸಿದರು. ಪೋಲೀಸನು ಮೋಟಾರ ಚಾಲಕನಲ್ಲಿಗೆ ಹೋಗಿ, ಅದನ್ನು ಕೇಳಿಕೊಳ್ಳಲು ಶುರುಮಾಡಿದನು. ಮೋಟಾರು ಚಾಲಕನು ಅವರನ್ನು ಕೇಳಿ ಶ್ರೀ ನಿಂಗಾಪೂರರ ಹೆಸರನ್ನು ಪೋಲೀಸರಿಗೆ ತಿಳಿಸಿದನು. ಮುಂದೆ ಎಲ್ಲವೂ ಸುರಳೀತವಾಯಿತು. ಗಾಂಧಿ—ಆಯರ್ವಿನರಲ್ಲಿ ಒಪ್ಪಂದವಾಗಿ ಸತ್ಯಾಗ್ರಹ ಯುದ್ಧವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿದ್ದರೂ ಪೋಲೀಸ ಮಹಾಶಯರ ಕಾಟವು ಮಾತ್ರ ಇನ್ನೂ ತಪ್ಪಲೊಲ್ಲದಾಗಿದೆ! ಸತ್ಯಾಗ್ರಹಿಗಳನ್ನು ಕಾಡುವರು ಇವರ ಕಟ್ಟಳೆಯ ಒಪ್ಪಂದ ಮೇಲೆ ಮುರಿಯುವದೋ!

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ತರದ ಪಾಕೇಟ ವಾಚ, ಕ್ಲಾಕ, ಟೈಮ್‌ಪೀಸ್ ದುರಸ್ತಿ ಮಾಡುವದಲ್ಲದೆ ವೆಸ್ಟ ಎಂಡ, ಹೆಚ್.ಎಂ.ಟಿ. ಮುಂತಾದ ಕಂಪನಿಯ ವಾಚ, ಕ್ಲಾಕ, ಟೈಂಪೀಸ ಮತ್ತು ಸ್ಪೇರಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಕ್ಕುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ. ಬೇರೆಡೆ ಹೋಗಬೇಡಿರಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ ಹತ್ತಿರ, ಬಾಗಲಕೋಟೆ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ತಯಾರಿ ಕಾಟನ್, ಧೋತರ ಮತ್ತು ಸ್ವದೇಶೀ ಖಾದಿ ನಮೂನೆಯ ಶರಟಿನ ಅರಿವೆಯ ಥಾನು ಮತ್ತು ಖಾದಿ ವಗೈರೆ ದೊರೆಯುತ್ತವೆ,

ಶಂಕ್ರಪ್ಪ ಬಣಗಾರ
ಜವಳಿವ್ಯಾಪಾರಸ್ಥರು ಬಾಗಲಕೋಟೆ.

ವ್ಹಾಯಿಸರಾಯರ ವಿರುದ್ಧ

ಪ್ರಾಂತಿಕ ಅಧಿಕಾರಿಗಳ ಬಂಡು

ಯಾವತ್ತೂ ರಾಜಕೀಯ ಕೈದಿಗಳು ಬಿಡೆ ಹೊಂದಿ ಹೊರಗೆ ಬರದ ಹೊರತು ಪ್ರಾಂತದಿಂದ ಕರಾಚಿ ಕಾಂಗ್ರೆಸ್ಸಿಗೆ ಪ್ರತಿನಿಧಿಗಳನ್ನು ಕಳಿಸಲಿಕ್ಕಾಗದೆಂದು, ಬಿಹಾರ ಪ್ರಾಂತದ ಕೆಲವು ಮುಖಂಡರ ಪ್ರಾಂತಿಕ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಸಂಬಂಧವಾಗಿ, ಫ್ರೀ ಪ್ರೆಸ್ ಪತ್ರಿಕೆಯ ಪ್ರತಿನಿಧಿಯು ಬಿಹಾರ ಪ್ರಾಂತದ ಮುಖಂಡ ಬಾಬು ರಾಜೇಂದ್ರ ಪ್ರಸಾದರನ್ನು ಕಂಡು ಅವರಿಗೆ ಕೆಳಗಿನಂತೆ ಪ್ರಶ್ನೆ ಕೇಳಿದನು.

ಪ್ರ— ಗಾಂಧಿ—ಆರ್ಯುವಿನರ ಒಪ್ಪಂದದ ಕರಾರುಗಳಂತೆ ಬಿಹಾರ ಪ್ರಾಂತದ ಅಧಿಕಾರಿಗಳು ನಡೆದುಕೊಂಡಿರುವರೋ ಹೇಗೆ? ಯಾವತ್ತೂ ರಾಜಕೀಯ ಕೈದಿಗಳನ್ನು ಅವರು ಬಿಡುಗಡೆ ಮಾಡಿರುವರೇ? ಬಿಡುಗಡೆ ಮಾಡಿರದಿದ್ದರೆ ಅವರನ್ನು ಬಿಡುಗಡೆ ಮಾಡಿಸುವದಕ್ಕೆ ನೀವು ಯಾವ ಉಪಾಯಗಳನ್ನು ಕೈಕೊಂಡಿರಿ? ಯಾವತ್ತೂ ರಾಜಕೀಯ ಕೈದಿಗಳು ಬಿಡುಗಡೆ ಹೊಂದದ ಹೊರತು ಬಿಹಾರದಿಂದ ಕಾಂಗ್ರೆಸ್ಸಿಗೆ ಪ್ರತಿನಿಧಿಗಳನ್ನು ಕಳಿಸಬಾರದೆಂದು ಕೆಲವರ ಅಭಿಪ್ರಾಯವಿದೆಯಾಗಿ ಕೇಳಬರುತ್ತದೆ. ಈ ಸಂಬಂಧವಾಗಿ ನಿಮ್ಮ ವಿಚಾರವೇನು?

ಉತ್ತರ— ೫೦೦ ಕ್ಕಿಂತ ಹೆಚ್ಚು ಜನರು ಇನ್ನೂ ಸೆರೆಮನೆಯಲ್ಲಿಯೇ ಇರುವರು. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ವಿಷಯದಲ್ಲಿ ಅಧಿಕಾರಿಗಳು ತೋರಿಸುತ್ತಿರುವ ನಿಷ್ಕಾಳಜಿಯನ್ನು ಕಂಡು ನಾನು ಸಂಪೂರ್ಣವಾಗಿ ಬೇಸರಗೊಂಡಿದ್ದೇನೆ. ಒಪ್ಪಂದವಾಗಿ ೧೫ ದಿವಸಗಳಾಗಿದ್ದರೂ ಇನ್ನೂ ಯಾವತ್ತೂ ಕೈದಿಗಳನ್ನು ಬಿಡುಗಡೆ ಮಾಡಲ್ಪಟ್ಟಿಲ್ಲ. ಇದೇಕೆಂಬದು ತಿಳಿಯಲಿಕ್ಕೆ ಅಸಾಧ್ಯವಾಗಿರುವದಿಲ್ಲ. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವಲ್ಲಿ ಅಧಿಕಾರಿಗಳು ಯಾವ ಪದ್ಧತಿಯನ್ನು ಅವಲಂಬಿಸುವರೋ ತಿಳಿಯಲಾಗಿದೆ. ಶ್ರೀ ಲಾ. ಗವರ್ನಮೆಂಟ ಕಾಯ್ದೆಯ ಅನ್ವಯ ಶಿಕ್ಷೆ ಹೊಂದಿದವರು ಬಿಡುಗಡೆ ಹೊಂದಿಲ್ಲವಾಗಿ ನನಗೆ ತಿಳಿದಿದೆ. ಉಪ್ಪಿನ ಕಾಯಿದೆ ಹಾಗು ಪೀನಲ್ ಕೋಡಿನನ್ವಯ ಶಿಕ್ಷಿಸಲ್ಪಟ್ಟ ಕೆಲವರು ಇನ್ನೂ ಸೆರೆಯೊಳಗೆ ಕೊಳೆಯುತ್ತಿರುವರು. ಪೋಲೀಸರ ಸಂಬಂಧವಾಗಿ ಅಸಂತೋಷವನ್ನು ಹುಟ್ಟಿಸಿದ ಸಂಬಂಧವಾಗಿ ಶಿಕ್ಷೆಗೆ ಗುರಿಯಾದವರೂ ಸಹ ಬಿಡುಗಡೆ ಮಾಡಲ್ಪಟ್ಟಿಲ್ಲ. ಈ ಜನರು ಅತ್ಯಾಚಾರ ಮಾಡಿಲ್ಲ. ಇಲ್ಲವೆ ಅತ್ಯಾಚಾರಕ್ಕೆ ಉತ್ತೇಜನ ಕೊಟ್ಟಿರುವದಿಲ್ಲ. ಇವರ ಕಾಗದಪತ್ರಗಳನ್ನು ವಿಚಾರ ಮಾಡಲಾಗುವದೇ ಇಲ್ಲ.

ಯಾವತ್ತೂ ರಾಜಕೀಯ ಕೈದಿಗಳು ಬಿಡುಗಡೆ ಹೊಂದಿ ಹೊರಗೆ ಬರದ ಹೊರತು ಪ್ರಾಂತದಿಂದ ಕರಾಚಿ ಕಾಂಗ್ರೆಸ್ಸಿಗೆ ಪ್ರತಿನಿಧಿಗಳನ್ನು ಕಳಿಸಕೂಡದಾಗಿ ಕೆಲವು ಜನರು ಪ್ರಾಂತಿಕ ಸಭೆಯಲ್ಲಿ ಠರಾವನ್ನು ತಂದರು. ಆದರೆ ಆ ಠರಾವು ತೆಗೆದುಕೊಳ್ಳಲು ಮುಖಂಡರು ಅವಕಾಶ ಕೊಡದಿದ್ದರಿಂದ ಅವರು ಅದನ್ನು ಬಿಟ್ಟುಕೊಟ್ಟರು.

ಜಪ್ತಿಮಾಡಿದ ಆಸ್ತಿಯನ್ನು ಇನ್ನೂ ಜನರಿಗೆ ತಿರುಗಿಕೊಟ್ಟಿಲ್ಲ. ಅಷ್ಟೇ ಅಲ್ಲ, ಇನ್ನೂ ಕೋರ್ಟಿನ ವಶದಲ್ಲಿಯೇ ಇರುವ ಆಸ್ತಿಗಳು ಕೆಲವು ಜನರಿಗೆ ತಿರುಗಿ ಕೊಡಲ್ಪಟ್ಟಿಲ್ಲ.

ಬಿಹಾರ ಹಾಗು ಬೇಗುಸರಾಯಿ ಭಾಗಗಳಲ್ಲಿಯ ಒತ್ತಾಯ ಹಾಗು ಸ್ವಯಂಸೇವಕರನ್ನು ಪೋಲೀಸರು ಪೀಡಿಸುತ್ತಿರುವರಾಗಿ ತಿಳಿದು ಬಂದಿದೆ. ಗೋಪ ಗಂಜದ ಮಹಂತರ ಕೈ ದಾಸರ ದನಕರುಗಳು ೫ ನೇಯ ದಿವಸ ಜಪ್ತಿ ಮಾಡಲ್ಪಟ್ಟವು. ಮಹಂತ ದಾಸರಿಗೆ ಜಪ್ತಿಯ ಹುಕುಮದಲ್ಲಿ ಕಾರಾಗೃಹವಾಸ ಹಾಗು ದಂಡದ ಶಿಕ್ಷೆಯು ವಿಧಿಸಲ್ಪಟ್ಟಿತ್ತು. ಅವರು ದಂಡವನ್ನು ಕೊಟ್ಟಿದ್ದಿಲ್ಲ.

ಪ್ರಾಂತಿಕ ಸರಕಾರದವರು ಕೆಳಗಿನ ಅಧಿಕಾರಿಗಳಿಗೆ ಆಜ್ಞೆ ಕೊಡುವಲ್ಲಿ ವಿಲಂಬ ಮಾಡುತ್ತಿರುವರೋ ಇಲ್ಲವೆ ಕೆಳಗಿನ ಅಧಿಕಾರಿಗಳೇ ಅವರ ಆಜ್ಞೆಗಳನ್ನು ಪಾಲಿಸಲು ಹಿಂದ ಮುಂದೆ ನೋಡುತ್ತಿರುವರೋ ತಿಳಿಯದಾಗಿದೆ!

ಹರಿಕಿಶನನನ್ನು ಗಲ್ಲಿಗೇರಿಸುವದು
ಸಧ್ಯಕ್ಕೆ ನಿಂತಿತು.

ಪಂಜಾಬ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಗವ್ಹರ್ನರ ಮೇಲೆ ಗುಂಡು ಹಾರಿಸಿದ್ದಕ್ಕಾಗಿ ಮರಣದಂಡನೆಗೆ ಗುರಿಯಾದ ಶ್ರೀ ಹರಿಕಿಶನನ್ನು ಪ್ರೀವಿ ಕೌನ್ಸಿಲ್ಲಿಗೆ ಅಪೀಲು ಮಾಡುವವರಿದ್ದದರಿಂದ ಅವನನ್ನು ಗಲ್ಲಿಗೇರಿಸುವದು ಸಧ್ಯಕ್ಕೆ ನಿಲ್ಲಿಸಲ್ಪಟ್ಟಿದೆ.

ಅಹಮ್ಮದಾಬಾದದಲ್ಲಿ
ಶ್ರಾದ್ಧದೂಟಕ್ಕೆ ಪಿಕೆಟಿಂಗ.

ಅಹಮ್ಮದಾಬಾದದ ಓರ್ವ ವ್ಯಾಪಾರಸ್ಥನು ತನ್ನ ಮನೆಯಲ್ಲಿಯ ಓರ್ವ ಮುದುಕನ ವರ್ಷಶ್ರಾದ್ಧದ ದಿವಸ ತನ್ನ ಜಾತಿಯವರಿಗೆ ಊಟಕ್ಕೆ ಹೇಳಿದ್ದನು. ಅಲ್ಲಿಯ ಮಹಿಳೆಯರು ಈ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸುವದಕ್ಕಾಗಿ ಅವನ ಮನೆಗೆ ಹೋಗಿ ಅಲ್ಲಿ ಪಿಕೆಟಿಂಗ ಮಾಡಿದರು. ನಿಮ್ಮನ್ನು ಜಾತಿಯಿಂದ ಹೊರಗೆ ಹಾಕುವದರಲ್ಲಿ ಬರವದೆಂಬದಾಗಿ ವ್ಯಾಪಾರಸ್ಥನು ಬೆದರಿಸಿದರೂ ಅವರು ಕೇಳಲಿಲ್ಲ ಹಾಗೆಯೆ ಮನೆಯ ಮುಂದೆ ಅರ್ಧಮಲಗಿ ಪಿಕೆಟಿಂಗ ನಡಿಸಿದರು. ಎಷ್ಟೋ ಜನರು ಅವರನ್ನು ತುಳಿದು ಒಳಗೆ ಹೋದರು. ಆ ಸಮಯದಲ್ಲಿ ವಾನರಸೇನೆಯ ಬಾಲಕರೂ ಅವರಲ್ಲಿಯೂ ಕೆಲಕೆಲ ಪ್ರಾರಂಭವಾಗಿ ಅದು ಹೊಡದಾಟದ ಸ್ವರೂಪ ತಾಳಿತು. ಪೋಲೀಸರು ಅಲ್ಲಿಗೆ ಬಂದು ಶಾಂತತೆಯನ್ನುಂಟು ಮಾಡಿದರು. ಇದೆಲ್ಲ ಗಲಭೆಯನ್ನು ನೋಡಿ ಆಮಂತ್ರಿತರಾದವರು ಎಷ್ಟೋ ಜನರು ಹಾಗೆಯೆ ತಿರುಗಿ ಹೋದರು.

ಮಹಾತ್ಮರು
ಬಂಡಿಯ ಹೆಸತ್ತಿಗೆ ಹೋಗಕೂಡದು

ತಾ|| ೨೧ ನೇಯ ದಿವಸ ಮುಂಬಯಿಯಲ್ಲಿ ಶ್ರೀ ಭಾಷ್ಯಮರವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನೆರೆಯಿತ್ತು. ಆ ಸಭೆಯಲ್ಲಿ ಭಾಷಣ ಮಾಡುವಾಗ ಶ್ರೀ ಭಾಷ್ಯಮರು, “ಮಹಾತ್ಮಾ ಗಾಂಧಿಯವರು ಬಂಡಿಗಾಡಿಯ ಹೆಸತ್ತಿಗೆ ಹೋಗಬಾರದೆಂದೂ, ಅವರನ್ನು ಹೆಚ್ಚುವರಿಯಾಗಕ್ಕಾಗಿ ಕಾದಿರುವದು ಅವಶ್ಯವಾಗಿದೆಯೆಂದೂ, ಉಳಿದ ಮುಖಂಡರು ಹರಿಹತ್ತಿಗೆ ಹೋಗಿ ಭಾಗ ತೆಗೆದು ಕೊಳ್ಳಬೇಕೆಂದು” ಸೂಚಿಸಿದರು.

ಮುಂಬಯಿ ಸರಕಾರದ
ಖರ್ಚು ಕಡಿಮೆ ಮಾಡುವ ಮಂಡಳ.

ಮುಂಬಯಿ ಕಾಯದೆ ಮಂಡಳದಲ್ಲಿ ಸ್ವೀಕರಿಸಿದ ಸೂಚನೆಗೆ ಮುಂಬಯಿ ಸರಕಾರದವರು ಪ್ರಾಂತಿಕ ಸರಕಾರ ವೆಚ್ಚವನ್ನು ಕಡಿಮೆ ಮಾಡಲು ಬರುವಂತಿದೆಯೋ ಇಲ್ಲವೊ ಎಂಬ ಬಗ್ಗೆ ವಿಚಾರ ಮಾಡುವದಕ್ಕಾಗಿ ಕೆಳಗಿನ ಸದಸ್ಯರನ್ನೊಳಗೊಂಡ ಮಂಡಳವನ್ನು ನಿಯಮಿಸಿದ್ದಾರೆ.

೧ ಸರದಾರ ಸರ್ ರುಸ್ತುಮ್‌ ವಕೀಲ (ಅಧ್ಯಕ್ಷರು) ೨ ಮಿ. ಜಿ. ವಾಯಿಲ್ಸ, ೩ ಮಿ. ಜೆ. ಹಂಫ್ರೇ, ೪ ಖಾನಬಹದ್ದೂರ ಅಲ್ಲಾಬಕ್ಷ ಹಾಜಿ ಮಹಮ್ಮದ ಉಮರ, ೫ ಹ ನ್ಯಾ. ಅಲ್ಲಿ ಎಂ. ಎಹಿಮತುಲ್ಲಾ, ೬ ರಾ. ಬ. ಡಿ. ಆರ್. ಪಾಟೀಲ, ೭ ಶ್ರೀ. ಪಿ. ಆರ್. ಚಿಕ್ಕೋಡಿ, ೮ ಶ್ರೀ ಬಿ. ಎಸ್. ಕಾಮತ,

ಫಾಯನಾನ್ಸ ಡಿಪಾರ್ಟಮೆಂಟದ ಅಸಿಸ್ಟಂಟ ಸೆಕ್ರೆಟರಿಗಳಾದ ಮಿ. ಜೆ. ಬಿ. ಭಡಕೆಯವರು ಈ ಮಂಡಳದ ಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಮದ್ರಾಸದ ಮುಖಂಡರು
ಕರಾಚಿಗೆ ಹೊರಟರು

ಮದ್ರಾಸ ಇಲಾಖೆಯ ಕಾಂಗ್ರೆಸ್ ಮುಖಂಡರಾದ ಶ್ರೀ ಬಾಲಸುಬ್ರಹ್ಮಣ್ಯ ಅಯ್ಯರ, ಟಿ ಪ್ರಕಾಶಂ, ಕೆ ಭಾಷ್ಯಂ, ಕಂ ಸ್ವಾಮಿ ಅಯ್ಯಂಗಾರ, ಡಾ. ಯು. ರಾಮರಾವ ಮೊದಲಾದವರು ತಾ|| ೨೧ ನೇಯ ದಿವಸ ಮದ್ರಾಸದಿಂದ ಕರಾಚಿಗೆ ಪ್ರಯಾಣ ಬೆಳಸಿದರು.

ಬಂಗಾಲದಲ್ಲಿ
ಸುಪ್ರೀಟ್ಯುರ ಅಜ್ಞೆ

ಬಂಗಾಲ ಇಲಾಖೆಯ ಪ್ರಮುಖನಾಯಕರಾದ ಶ್ರೀ ಧೀರೇಂದ್ರನಾಥ ಘೋಷರು ಬಂಗಾಲ ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ಅನ್ವಯ ಕೈದು ಮಾಡಲ್ಪಟ್ಟಿದ್ದಾರೆ.

ಕರಾಚಿ ಕಾಂಗ್ರೆಸ್ಸಕ್ಕೆ
ಮುಂಬಯಿಯಿಂದ ಸ್ವಯಂಸೇವಕರು

ಕರಾಚಿ ಕಾಂಗ್ರೆಸ್ಸಿಗೆ ಮುಂಬಯಿಯಿಂದ ೩೦೦ ಜನ ಸ್ವಯಂಸೇವಕರು ಕಳಿಸಲ್ಪಟ್ಟಿದ್ದು ಇನ್ನೂ ಎಷ್ಟೋ ಜನರು ಇವರೊಡನೆ ಕಳಿಸಲ್ಪಡತಕ್ಕವರಿದ್ದಾರೆ.

ಮ್ಹೈಸೂರು ಸರಕಾರದ
ಪ್ರಜಾಹಿತ—ತತ್ಪರತೆ

ಮ್ಹೈಸೂರು ಹಾಗು ಬೆಂಗಳೂರು ಈ ನಗರಗಳ ಉಪಕಂಠಪ್ರದೇಶದಲ್ಲಿ ಕೆಲವು ಕಾಲ ಮಹಾ ತಪಾಗಿ ಯಾವದಾದ ಸಾಂಸರ್ಗಿಕ ರೋಗವಿಲ್ಲಿ, ತತ್ಸಂಬಂಧ ನೀತೀಯಾಗಿ ಸಾಗುದೆಯೆಂಬ ವಾತೆ ಆರೋಗ್ಯ ಖಾತೆಯ ಅಧಿಕಾರಿಗಳಿಂದ ಸ್ಟೇಟಮೆಂಟು ಹಾಗು ಚಾಗಳ ಮೈಸೂರು ಸರಕಾರದವರು ನಿಷೇಧವನ್ನು ಮಾಡಿದ್ದಾರೆ.

ಮ್ಯುನಿಸಿಪಾಲಿಟಿಯನ್ನು
ರದ್ದುಪಡಿಸಿದರು.

ಉದ್ಯಾಮಲಪೇಟೆ ಮ್ಯುನಿಸಿಪಾಲಿಟಿಯ ಸಭಾಸದರು ತಮ್ಮ ತಮ್ಮೊಳಗೆ ಜಗಳಾಡುತ್ತ, ನಾಗರಿಕರ ಹಿತದ ಕಡೆಗೆ ಲಕ್ಷ ಕೊಡದಿರುವದನ್ನು ನೋಡಿ, ಮದ್ರಾಸ ಸರಕಾರದವರು ಆ ಮ್ಯುನಿಸಿಪಾಲಿಟಿಯನ್ನು ಎರಡು ವರ್ಷಗಳ ವರೆಗೆ ರದ್ದುಪಡಿಸಿದ್ದಾರೆ.

ಮಹಾತ್ಮರೊಡನೆ ಸಂಭಾಷಣೆ

ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯ ಭವನಕ್ಕೆ ಹೋಗುವದಕ್ಕಿಂತ ಮುಂಚಿತವಾಗಿ ಓರ್ವ ಪತ್ರಿಕಾ ಪ್ರತಿನಿಧಿಯು ಅವರ ಭೆಟ್ಟಿ ತೆಗೆದುಕೊಂಡನು. ಅವರಲ್ಲಿ ಕೆಳಗಿನಂತೆ ಪ್ರಶ್ನೋತ್ತರಗಳು ನಡೆದವು.

ಪ್ರಶ್ನೆ— ಯುದ್ಧವನ್ನು ಅಳಿಸಿಬಿಡುವ ಮಹಾ ರಾಷ್ಟ್ರಸಂಘದವರಿಗೆ ಶಕ್ಯವಿದೆಯೆಂದು ನಿಮಗೆ ತೋರುತ್ತದೆಯೋ ಹೇಗೆ?

ಉತ್ತರ— ಜನರು ಹಾಗು ರಾಷ್ಟ್ರಗಳಲ್ಲಿ ಬಂಧುತ್ವವು ಸ್ಥಿರವಾಗುವ ವರೆಗೂ ಹಾಗೂ ಪರಸ್ಪರರು ದ್ವೇಷ, ಪಾಶವೀಶಕ್ತಿ ಇವುಗಳನ್ನು ಬಿಡುವ ವರೆಗೂ ಯುದ್ಧವು ಅಳಿಸಿಹೋಗುವ ಸಂಭವವಿಲ್ಲ.

ಪ್ರಶ್ನೆ— ಶಸ್ತ್ರಾಸ್ತ್ರಗಳಿಂದಾಗುವ ಅನರ್ಥವನ್ನು ಹೇಗೆ ತಪ್ಪಿಸುವಿರಿ?

ಉತ್ತರ— ಅಹಿಂಸೆಯಿಂದ. ಇನ್ನು ಕೆಲವು ವರ್ಷಗಳಲ್ಲಿ ಅಹಿಂಸೆಯೇ ಯಾವತ್ತೂ ರಾಷ್ಟ್ರಗಳ ಶಸ್ತ್ರವಾಗುವದು. ಕ್ರೈಸ್ತರು “ದಿ ಸರಮನ್ ಆನ್ ದಿ ಮೌಂಟ” ಎಂಬುದನ್ನು ಉಪದೇಶ ಮಾಡಿ ಈಗ ೨೦೦೦ ವರ್ಷಗಳು ಕಳೆದುಹೋದವು. ಜಗತ್ತು ಈ ವರೆಗೂ ಆ ಉಪದೇಶವನ್ನು ಪಾಲಿಸಿಲ್ಲ. ಕ್ರೈಸ್ತರ ಉಪದೇಶವನ್ನು ನಾವು ಹೃತ್ಪೂರ್ವಕವಾಗಿ ಪಾಲಿಸುವ ವರೆಗೂ ಯುದ್ಧ, ದ್ವೇಷ, ಅತ್ಯಾಚಾರ ಇವೆಲ್ಲವುಗಳು ಜಗತ್ತಿನಲ್ಲಿ ನಡೆಯತಕ್ಕವೇ.

ಪ್ರಶ್ನೆ— ಅಹಮ್ಮದಾಬಾದ ಮ್ಯುನಿಸಿಪಾಲಿಟಿಯವರು ನಿಮ್ಮ ಸನ್ಮಾನಾರ್ಥವಾಗಿ ಸ್ಮಾರಕವನ್ನೇರ್ಪಡಿಸುವವರಿದ್ದರು. ಹಾಗೆ ಮಾಡಲು ಅವರಿಗೆ ನೀವು ನಿಮ್ಮ ಸಮ್ಮತಿಯನ್ನೇಕೆ ಕೊಡಲಿಲ್ಲ?

ಉತ್ತರ— ಒಂದು ಕಲ್ಲಿನ ಪ್ರತಿಮೆಯನ್ನು ನಿಲ್ಲಿಸಿದರೆ ಮನುಷ್ಯನ ಸ್ಮಾರಕ ಮಾಡಿದಂತಾಗಲಿಲ್ಲ. ಅವನಂತೆ ಕೃತಿ ಮಾಡಿ ತೋರಿಸಿದರೇನೇ ನಿಜವಾದ ಸ್ಮಾರಕ ಮಾಡಿದಂತಾಗುತ್ತದೆ. ಇಂತಹ ನಿಧಿಯನ್ನು ಬಡಜನರ ಉದ್ಧಾರಾರ್ಥವಾಗಿ ಉಪಯೋಗಿಸಬೇಕು. ತನ್ನ ಬಂಧುಗಳ ಸೇವೆ ಮಾಡಿದ ಮನುಷ್ಯನ ಕಲ್ಲಿನ ಪ್ರತಿಮೆಯನ್ನು ಮಾಡುವದರಲ್ಲಿ ವೆಚ್ಚ ಮಾಡಬಾರದು.

ನಿರ್ದಯ ಅಧಿಕಾರಿಗಳು

ಸಿರಸಿ, ಸಿದ್ದಾಪುರ ತಾಲೂಕು ರೈತರ ಶಿಷ್ಟ ಮಂಡಲದವರು ಕಲೆಕ್ಟರರಿಗೆ ಭೆಟ್ಟಿಯಾಗಿ, ರೈತರು ಭೂಕಂದಾಯವನ್ನು ಕೊಡಲು ಅಸಮರ್ಥರಾಗಿರುವರೆಂದು ಹೇಳಿ, ವಿಚಾರಣೆಯ ಮಂಡಲವನ್ನು ನಿಯಮಿಸಲು ಅವರಿಗೆ ಕೇಳಿಕೊಂಡರೆಂದೂ, ಕಲೆಕ್ಟರರು ಅವರ ವಿನಂತಿಯನ್ನು ಧಿಕ್ಕರಿಸಿದರೆಂದೂ ತಿಳಿದುಬರುತ್ತದೆ.

ಕಂದಾಯ ಖಾತೆಯ ಅಧಿಕಾರಿಗಳು ಜಪ್ತಿಯನ್ನು ಎತ್ತಲು ಪ್ರಾರಂಭಿಸಿದ್ದಾರೆ. ಎಪ್ಪತ್ತು ಜನ ಸರ್ಕಲ್ ಇನಸ್ಪೆಕ್ಟರರು ಪೋಲೀಸರೊಂದಿಗೆ ಕೂಡಿಕೊಂಡು ಹಳ್ಳಿಹಳ್ಳಿಗಳಲ್ಲಿ ತಿರುಗಾಡಹತ್ತಿದ್ದಾರೆ.

ಭೂಕಂದಾಯವನ್ನು ಕೊಡದ ರೈತರ ಆಸ್ತಿಯನ್ನು ಜಪ್ತಮಾಡಿ, ಅಧಿಕಾರಿಗಳು ಅವುಗಳನ್ನು ಲಿಲಾವು ಮಾಡಹತ್ತಿದ್ದಾರೆ.

ದಾನಿ — ದಾಬಡೆ ಟೇಲರ್ಸ

ನಮ್ಮಲ್ಲಿ ವೇಳೆಗೆ ಸರಿಯಾಗಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಅಂಗಿ ಕಸ್ಟ ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ಪರೀಕ್ಷಿಸಿರಿ.

ದಾನಿ—ದಾಬಡೆ
ಟೇಲರ್ಸ
ಬಾಗಲಕೋಟ [illegible]

ಜಾಹೀರಾತುದಾರರಿಗೆ
ಒಳ್ಳೆ ಸುಸಮಯ

ಯುಗಾದಿಯಿಂದ "ಕನ್ನಡಿಗ"ನ ನಿತ್ಯಸಂಚಿಕೆಯ ಪ್ರಕಾಶನವನ್ನು ಮೊದಲಿನ ಅಷ್ಟು ಮಾಡಿರುವೆವು. ಆದರ ಪ್ರಚಾರವು ಮೊದಲಿನಕ್ಕಿಂತಲೂ ಹೆಚ್ಚಾಗಿದೆ. ಈ ಸಮಯ ಜಾಹೀರಾತದಾರರು ದೊರೆಯುವವರೆಗೆ ಕೆಲವು ದಿನಗಳವರೆಗೆ ಅತಿ ಸೋವಿ ದರದಿಂದ ಜಾಹೀರಾತು ಪ್ರಸಿದ್ಧಿಸುವೆವು. ಇಷ್ಟವುಳ್ಳವರು ತ್ವರೆಮಾಡಬೇಕು. ದರ ಮೊದಲಾದವುಗಳ ಬಗ್ಗೆ ಸವಕ್ಷಮ ಅಥವಾ ಪತ್ರದ್ವಾರದಿಂದ ತಿಳಿದು ಕೊಳ್ಳಬೇಕು.

ವ್ಯವಸ್ಥಾಪಕ
"ಕನ್ನಡಿಗ" ಬಾಗಲಕೋಟ.

ಸ್ಯಾಂಡಲ್) ಮಣಿ ಚೀಟಗಳು (ಪುಕ್ಕಟ

ನೀಲಿ ಕಪ್ಪು ಕೆಂಪು, ಜಾಂಬಳ ಮಣಿ ಚೀಟಗಳು ದೊರೆಯುತ್ತವೆ.

೫೦೦ ಚೀಟಗಳಿಗೆ	೨—೦—೦	
೧ ಸಾವಿರ ಚೀಟಗಳಿಗೆ,	೩-೮-೦	
೫ ಸಾವಿರಕ್ಕೆ,	೧೬-೦-೦	ರೇಲ್ವೆ ಫ್ರೀ
೫ ತೊಲಿ ಪಾಕೀಟಗಳಿಗೆ		೧-೦-೦
ಬಿಳಿ ಸ್ಪಾಂಜ ಮಣಿ ½ ಔನ್ಸಿನ ೧೦ ಜನ ಬಾಟ್ಲಿಗೆ		೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ
ಕರ್ನಾಟಕ ಇಂಕ ಕಂಪನಿ ಬಾಗಲಕೋಟ

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಇತಿಹಾಸ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ವಿಜಾಪುರದಿಂದ ಪಂಢರಪೂರ
ಮೋಟರ ಸರ್ವಿಸ

ಮೋಟು: ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಜತ್ತ, ಮಂಗಳವೇಢೆ ಮಾರ್ಗವಾಗಿ, ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಸ್ಪೆಶಲ್ ಬೇಕಾದರೆ ಕೆಳಗಿನ ವಿಳಾಸದ ಮೇರೆಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು.

ಮನ್ಯನೇಜರ,
ಅಟಲ ಮಹಾಲಕ್ಷ್ಮಿ ಮೋಟಾರ ಸರ್ವಿಸ
ವಿಜಾಪುರ.

ಚಹಾ [illegible]

[illegible] ಉತ್ತಮ ಪ್ರಮಾಣದಿಂದ ಔದಾರ್ಯಗಳ ಶಾಲೆ [illegible] ಈ ಶಾಲೆಯಲ್ಲಿ [illegible] (ಬಿಸಿಯಾದ) [illegible] ತಂಪಾದ [illegible], ಸಕ್ಕರೆ ಹಣ್ಣು ಮಾಡಿದ, ಸೇಯಾದ, ಮತ್ತು ಖಾದೀ ಪ್ರಕಾರ ಮಾಡಿದ, ಮುಂತಾದ ವಿಷಯಗಳನ್ನು ಕಲಿಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಊಟದ ವ್ಯವಸ್ಥೆ ತಾವೇ ನೋಡಿಕೊಳ್ಳಬೇಕು [illegible] ತಾನು ಕೇರ ಬಡವನೆಂದು ಮನವರಿಕೆ ಮಾಡಿಕೊಟ್ಟಲ್ಲಿ ಅವನ ಊಟದ ಬಗ್ಗೆ ಹಣದ ಸಹಾಯವಾಗಲೀ ಊಟದ ಬೇರೆ ವ್ಯವಸ್ಥೆಯಾಗಲೀ ಮಾಡುವದಲ್ಲಿ ಬರುವದು. ಅವರಿಗೆ ಇಂಥ ಜಾಗೆಯ ವ್ಯವಸ್ಥೆಯನ್ನು ಮಾಡಿಕೊಡುವದು, ವಿದ್ಯಾರ್ಥಿಗಳು ಸಂಘದ ನಿಯಮಗಳಿಗೆ ಒಪ್ಪಬೇಕು.

ಕರ್ನಾಟಕದ ಸೇವೆ ಮಾಡಲಪೇಕ್ಷಿಸುವವರು ಈ ಸಂಧಿಯನ್ನು ಕಳೆದುಕೊಳ್ಳಬಾರದು. ಈ ಸಂಘದಲ್ಲಿ ಕೆಳಗೆ ಬರೆದ ಯಾವ ಕಸ್ತು ಸಾಧನಗಳು ಮಾರಾಟಕ್ಕೆ ಸಿಗುತ್ತವೆ,

೧ ಹತ್ತೀ ಕಾಳು ಬಿಡಿಸುವ ಜಿನ್ನಿಂಗ್ [illegible]

೨ [illegible]

೩ ಕಾಪು (ಬೆಸಿಗೆದಾರ)

೪ ಕುಡಕ.

೫ ಶಾಸ್ತ್ರೋಕ್ತ ರೀತಿಯಿಂದ ಸಿದ್ಧಪಡಿಸಿದ ಹಂಜಿ (೩೦ ನಂಬರದ ನೂಲು ತಗೆಯಲಿಕ್ಕೆ ಅನುಕೂಲವು)

೬ ಕದರು ಮತ್ತು [illegible]

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕೂಡ ಪತ್ರವ್ಯವಹಾರದ ಬಗ್ಗೆ ಮುಂಗಡ ಪೋಸ್ಟ ತಿಕೀಟ ಕಳಿಸಬೇಕು.

ನಾ. ನಾರಾಯಣ ರಾಘವೇಂದ್ರರಾವ ದೇಶಪಾಂಡೆ
ವ್ಯವಸ್ಥಾಪಕ
[illegible] ಬಾಗಲಕೋಟ.

ಸ್ವದೇಶೀ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶೀ ರೇಶಿಮೆಯ ಪೇಟ, ಟೊಪ್ಪಿಗೆ, ಚೌಕಗಳು ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ರಾಜಾರಾಮರಾವ
'ಸ್ವದೇಶೀ ಸ್ಟೋರ್ಸ'
ಹೊಸ ಬಜಾರ, ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಖಾದರ್ಸ ಸ್ಟೋರ್ಸ ಬಾಗಲಕೋಟ

ಟೊಪ್ಪಿಗೆಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೊಪ್ಪಿಗೆಗಳು, ಜರದ ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ಕಮಿಶನ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ
'ಕ್ಯಾಪ ಮೇಕರ' ಮೋಟರೋಡ
ವಿಜಾಪುರ

ಡಾಕ್ಟರ ಕೃಷ್ಣರಾವ ಪರ್ವತಿಕರ
ಇವರ
ಮೆಡಿಕಲ್ ಸ್ಟೋರ್ಸ

ನಮ್ಮಲ್ಲಿ ದೇಶಿ ಹಾಗು ಪೇಟಂಟ ಔಷಧಗಳು ಮತ್ತು ದವಾಖಾನೆಗೆ ಉಪಯೋಗ ಬೀಳುವ ಎಲ್ಲ ಸಾಮಾನುಗಳು ಯೋಗ್ಯ ಬೆಲೆಗೆ ಮಾರಲ್ಪಡುತ್ತವೆ.

ಕೃಷ್ಣರಾವ ಪರ್ವತಿಕರ
ದವಾಖಾನೆ ಮತ್ತು ಮೆಡಿಕಲ್ ಸ್ಟೋರ್ಸ
ಬಾಗಲಕೋಟ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲ ತರದ ಟೊಪ್ಪಿಗೆಗಳು ಸಿಗುತ್ತವೆ. ಆರ್ಡರ ಕೊಟ್ಟಲ್ಲಿ [illegible] ದಿಂದ [illegible] ವೆವು [illegible] ಯಲ್ಲಿ ತಯಾರಿಸಲ್ಪಡುವವು [illegible] ದವೂ ಕೊಡುವೆವು. [illegible] ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕ[illegible]
ಟೇಲ[illegible]
ಹೊರಬಾಜಾರ ವಿಜಾ[illegible]

'ಕನ್ನಡಿಗ'ನ ನಿತ್ಯಸಂಚಿ[illegible]

ದೈನಿಕ "ಕನ್ನಡಿಗ"ನು ಕನ್ನಡಿಗರ ಸೇವೆ ಮಾಡಹತ್ತಿ ಈಗ ಒಂದು ವರ್ಷ ಹೋಯಿತು. ಅವನು ಈಗ ಕನ್ನಡ [illegible] ಕೆಲಕೆಲವು ಹೊಸ ಸುಧಾರಣೆಗಳನ್ನು ಮಾಡಿ ಎರಡನೆಯ ವರ್ಷದಲ್ಲಿ ಕಾಲಿಟ್ಟಿರುವನು. ಮೊದಲಿನಕ್ಕಿಂತಲೂ ಇಮ್ಮಡಿ ಆಕಾರ [illegible] ಯುತ್ತಿರುವನು. ಹಿಂದುಸ್ಥಾನದ ಭಾವೀರಾಜಘಟನೆಯು ಸಂಬಂಧವಾಗಿ ಕರಾಚಿ [illegible] ಹಾಗು ದುಂಡ ಮೇಜಿನ ಪರಿಷತ್ತುಗಳಲ್ಲಿ ನಡೆ [illegible] ಚರ್ಚೆ [illegible] ಗಳನ್ನು ಆದಷ್ಟು ಬೇಗನೆ ತಿಳಿದುಕೊಳ್ಳಲು ಜನಸಾಮಾನ್ಯರೂ ಸಹ ಈಗ [illegible] ರಾಗಿರುವದರಿಂದ, ಅವರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ ಕನ್ನ[illegible] ಈಗ ಅಸೋಸಿಯೇಟೆಡ್ ಪ್ರೆಸದವರಿಂದ ತಂತಿ ವರ್ತಮಾನಗಳನ್ನು ತರಿಸಿಕೊ[illegible] ವನು. ಇದಲ್ಲದೆ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು, ಬಳ್ಳಾರಿ [illegible] ಮೊದಲಾದ ಸ್ಥಳಗಳಲ್ಲಿಯ ಸ್ವಂತ ಪ್ರತಿನಿಧಿಗಳಿಂದ ಮಹತ್ವದ ಸುದ್ದಿ[illegible] ಬಗ್ಗೆ ಪತ್ರಗಳನ್ನು ತಂತಿಗಳನ್ನು ತರಿಸಿ [illegible] ಇಲ್ಲಿಯ ಸ್ಥಿತಿಗತಿ [illegible] ತಿಳಿಸುತ್ತಿರುವನು. [illegible] ಯಿಂದ ತರಿಸಿದ ವ್ಯಾಪಾರಸ್ಥರ [illegible] ಸಾಹಸಕ್ಕೆ ಕೈಹಾಕಿದ ಪತ್ರಿಕೆಯಂದರೆ ಕರ್ನಾಟಕದಲ್ಲಿ ಇದೇ [illegible] ಕನ್ನಡಿಗನ ಈ ಉದ್ದೇಶವು ಸಫಲವಾಗಬೇಕಾದರೆ ಎಲ್ಲ [illegible] ದಾರರು ಕನ್ನಡಿಗನನ್ನು ತರಿಸಿಕೊಳ್ಳದೇ ಇರುವದು [illegible] ಯಾವರೀತಿ ನಷ್ಟಿಗೆಯಿಂದಲೇ ಅವನು ಈ ಸಾಹಸಕ್ಕೆ ಕೈಹಾಕಿ[illegible] ಕನ್ನಡ[illegible] ತರಿಸಿಕೊಳ್ಳುವುದು ಜನಸಾಮಾನ್ಯರಿಗೆ ಭಾರವಾಗಬಾರದೆಂಬ ಉದ್ದೇಶದಿಂದ, [illegible] ಮೊದಲಿನಕ್ಕಿಂತ ಇಮ್ಮಡಿಯಾದ ಪ್ರವೂ ಸಹ, ಬೆಲೆಯನ್ನು ಮೊದಲಿನಷ್ಟೇ ಅಂದರೆ [illegible] ಇಟ್ಟಿದೆ.

ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ವಿಜಾಪುರ, ಬಳ್ಳಾರಿ ರಾಯ[illegible] ಕೊಪ್ಪಳ ಮುಂತಾದ ಸ್ಥಳಗಳಿಗೆ [illegible] ಏಜಂಟ[illegible] ಗಳು ಮಾರಲ್ಪಡುವವು. ಈ ಮೋಟಾರುಗಳು ಎಲ್ಲಿಡೆ [illegible] ಅಲ್ಲಿ [illegible] ವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯು ಏಜನ್ಸಿಯನ್ನೂ ಕೊಟ್ಟಿದೆ. [illegible] ಕೊಟ್ಟಿಲ್ಲವೋ, ಅಲ್ಲಿಯ [illegible] ಪತ್ರ ಬರೆದು ಕೊಳ್ಳಬೇಕು. ತಮ್ಮ ತಮ್ಮ [illegible] ಗಳಿಂದ ಮಾಸಿಕ [illegible] ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರು [illegible] ಟಿಕೀಟ ಏಜಂಟರು ತಾವೇ ಮಾಡಿಕೊಳ್ಳತಕ್ಕದು.

ಏಜಂಟರಾಗಲಿಚ್ಛಿಸುವವರು ಕೂಡಲೆ ಬರೆದುಕೊಳ್ಳಬೇಕು. ಸಣ್ಣ ಊರವರ [illegible] ಮೂರು ರೂಪಾಯಿ [illegible] ಕನಿಷ್ಟ ಹತ್ತು ರೂಪಾಯಿ [illegible] ಸಬೇಕು. ಸ್ಥಾನಿಕ ಕಾಂಗ್ರೆಸ್ ಕಮೀಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು [illegible] ಶಿಫಾರಸ್ ಪತ್ರ [illegible] ಬಗ್ಗೆ [illegible] ದಷ್ಟ ಲೆಕ್ಕವನ್ನು [illegible] ಕಳಿಸಬೇಕು ೧೨ ಕ್ಕಿಂತ ಹೆಚ್ಚಿಗೆ [illegible] ತಿರುಗಿ ತೆಗೆದುಕೊಳ್ಳುವದಿಲ್ಲ [illegible] ದೊರೆಯುವದು. [illegible] ಏಜಂಟರುಗಳು [illegible] ೧೦—೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳ [illegible] ದೊರೆಯುವವು. ಇನ್ನು ಪಟ್ಟಣಗಳಲ್ಲಿ [illegible] ಪ್ರತಿಗಳನ್ನು [illegible] ರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ [illegible] ಕೆಲವು ದೊಡ್ಡ ಪಟ್ಟಣಗಳಿಗೆ [illegible] ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು [illegible] ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಕಾರಣ ಏಜಂಟರು [illegible] ಸುದ್ದಿಗಳನ್ನು [illegible] ಸ್ಥಾನಿಕ ಮುಖ್ಯ ಮುಖ್ಯ [illegible] ಅವರ [illegible] ಪ್ರಯತ್ನಿಸಿದರೆ [illegible] ಗಳು ಹೆಚ್ಚಾಗಿ ಖರ್ಚಾಗ [illegible] ಆದ ದರಿಂದ ಆವಶ್ಯಕರು [illegible] ಏಜಂಟ[illegible] ರಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ—[illegible] ಜಾಹೀರಾತುಗಳಿಗೆ ಒಂದು [illegible] ಒಂದು ಪ್ರತಿಯೆಂದು [illegible] ಹೊರಗಾದ [illegible]

ಬಾಗಲಕೋಟ
೨೦—೬—೧೯೩೧

ನಿಮ್ಮ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ, ಬಾಗಲಕೋಟ.

[illegible] ಬಾಗಲಕೋಟೆ [illegible] ಮುದ್ರಿಸಲ್ಪಟ್ಟು [illegible] ಪ್ರಸಿದ್ಧಪಡಿಸಲ್ಪಟ್ಟಿತು

ರ ನಂ. ಬಿ. ೨೭೮೮ ನಿತ್ಯ ಪತ್ರಿಕೆ. ಬೆಲೆ ೦—೦—೩.

...परवशं दुःखं । यदात्मवशं सुखम् ॥—मनु.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ
೧೨ ತಿಂಗಳಿಗೆ ೧೨—೦—೦
೬ ,, ೬—೦—೦
೩ ,, ೩—೧—೦
೧ ,, ೧—೦—೦
ಸ್ಥಳಿಕರಿಗೆ
೧೨ ತಿಂಗಳಿಗೆ ೬—೦—೦
೬ ,, ೪—೦—೦
೩ ,, ೧—೮—೦
೧ ,, ೦—೮—೦

ಕನ್ನಡಿಗ

KANNADIGA BAGALKOT — BI-WEEKLY

ನಿತ್ಯಪತ್ರಿಕೆಯ
ಜಾಹೀರಾತಿನ ದರಗಳು
೧ನೇ ಸಲ ೧ ಇಂಚಿಗೆ ೧—೮—೦
೨ ,, ,, ೧—೦—೦
ಮುಂದೆ ಪ್ರತಿಯೊಂದು ಸಲ
೦—೧೨—೦
ಹೆಚ್ಚಿಂಗೆ ದಸಲಿಗೆ ಅಕ್ಷರಗಳ
ಪ್ರಮಾಣದಿಂದ ದರಬೀಳುವದು

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ರವಿವಾರದ ಹೊರತಾಗಿ ಪ್ರತಿನಿತ್ಯವೂ ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಶುಕ್ರವಾರ ಮಿತಿ ಚೈತ್ರ ಶುದ್ಧ ೮ ಶಕೆ ೧೮೫೩ ತಾ॥ ೨೭—೩—೩೧ [ಸಂಚಿಕೆ ೭

ಪಾಶವೀ ಶಕ್ತಿಯ ಪ್ರದರ್ಶನ

ಮಹಾತ್ಮಾ ಗಾಂಧಿಯವರು ತಾವು ...ಚಿಗೆ ಪ್ರಯಾಣ ಬೆಳೆಸುವದಕ್ಕಿಂತ ಮುಂ...ವಾ', ಸರಕಾರದವರು ಭಗತಸಿಂಗ ಮೊದ...ದ ರನ್ನು ಗಲ್ಲಿಗೇರಿಸಿದ್ದರ ಸಂಬಂಧವಾಗಿ ...ನಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

ಇಂದು ಗಲ್ಲಿಗೇರಿಸಲ್ಪಟ್ಟ ಶ್ರೀ ಭಗತ...ಗ ಮೊದಲಾದವರು ಹುತಾತ್ಮರಲ್ಲಿ ಅಗ್ರೇ...ರಾಗಿ ಎಣಿಸಲ್ಪಡುವರು. ಅವರ ಮರಣವು ...ರು ಸಾವಿರಾರು ಜನರನ್ನು ದುಃಖಕ್ಕೀಡು ...ದೆ. ದೇಶಕಾರ್ಯದಲ್ಲಿ ತಮ್ಮ ದೇಹಗ...ರ್ಪಿಸಿದ ಈ ತರುಣ ವೀರರಿಗೆ ಧನ್ಯವಾ...ನರ್ಪಿಸುವ ವಿಷಯದಲ್ಲಿ ಯಾವತ್ತೂ ...ರೊಡನೆ ಸಹಕರಿಸಿ, ಅವರ ಕೃತಿಗಳನ್ನು ...ರಿಸಬೇಕೆಂದು ತರುಣರಲ್ಲಿ ನಾನು ...ರಿಕೊಳ್ಳುತ್ತೇನೆ. ಅವರ ಸ್ವಾರ್ಥತ್ಯಾಗ, ...ರ ಕರ್ತವ್ಯತತ್ಪರತೆ, ಅವರ ನಿಸ್ಸೀಮ ...ರ್ಯ ಇವುಗಳನ್ನು ನಾವು ಅನುಸರಿಸಬೇಕು. ದೇಶವನ್ನು ಪರದಾಸ್ಯದಿಂದ ಬಂಧಮುಕ್ತ...ಡಲೋಸುಗ ನಾವು ಅತ್ಯಾಚಾರವನ್ನು ...ಬಂದಿಸಕೊಳ್ಳಕೂಡದು.

ಕ್ರಾಂತಿಕಾರಕ ಜನರನ್ನು ತಮ್ಮ ಪಕ್ಷ...ಒಲಿಸಿಕೊಳ್ಳಲು ಸರಕಾರಕ್ಕೆ ಇದೀಗ ...ಮ ಸಂಧಿಯು ದೊರಕಿತ್ತು. ಅವರು ಈ ...ಯನ್ನು ಜರುಗಿಸಿ ಆ ಸುಸಂಧಿಯನ್ನು ...ಕೊಂಡರು. ಒಪ್ಪಂದದ ಕಡೆಗಾದರೂ ...ಎಟ್ಟು, ಗಲ್ಲಿಗೇರಿಸುವದನ್ನು ಅವರು ...ಮಿತಕಾಲ ಮುಂದರಿಸ ಬೇಕಾಗಿತ್ತು. ...ಈ ಕೃತಿಯನ್ನು ಜರುಗಿಸಿ ಒಡಂಬಡಿ...ವಿಘ್ನವನ್ನುಂಟು ಮಾಡಿದ್ದಾರೆ. ಲೋಕ...ವನ್ನು ಧಿಕ್ಕರಿಸಿದ್ದಾರೆ. ತಮ್ಮ ಪಾಶವೀ ...ಯನ್ನು ಪ್ರದರ್ಶಿಸಿದ್ದಾರೆ.

ಸರಕಾರದವರು ಹೀಗೆ ತಮ್ಮ ಹಟವನ್ನು ...ಬಿಟ್ಟಿದ್ದನ್ನು ನೋಡಿದರೆ ಅವರು ಶಮ...ವನ್ನು ಸಡಿಲಿಸಲು ಇಚ್ಛೆಯುಳ್ಳವರಾಗಿಲ್ಲ...ದು ಸ್ಪಷ್ಟವಾಗಿಯು ವ್ಯಕ್ತವಾಗುತ್ತದೆ. ...ಗ್ರೆಸದವರು ತಮ್ಮ ಮಾರ್ಗವನ್ನು ಬಿಟ್ಟು ...ಕೊಳ್ಳದ್ದಲ್ಲ. ಕಾಂಗ್ರೆಸದವರು ಒಪ್ಪಂ...ದೃಢವಾಗಿ ಅಂಟಿಕೊಂಡು ಅದರಿಂದ ...ಸ್ವಾರ್ಥಕ್ಕೆ ಕೈಗೂಡುವದೋ ಇಲ್ಲವೊ ...ಬೇಕು. ಈ ಸಮಯದಲ್ಲಿ ಸಿಟ್ಟಿಗೆದ್ದು ...ತಪ್ಪು ಮಾರ್ಗವನ್ನು ಹಿಡಿಯತಕ್ಕದ್ದಲ್ಲ. ...ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸಬೇಕೆಂ...ಗಿ ಒಪ್ಪಂದದ ಕರಾರಿನಲ್ಲಿ ಷರತ್ತಿರ...ಲ್ಲ. ಸರಕಾರದ ಮೇಲೆ ಹುರುಪಿನಿಂದ ...ಹೊರಿಸಬಾರದು. ಆದರೆ ಒಪ್ಪಂದ ...ಸಂಧಿಯು ಕತಿಕರೆಯು ಆಶೋದ ಹೊ... ಸಲು ಬರುವಂತಿಲ್ಲ ಸರಕಾರದವರು ಈ ಮಹಾ ಅಪರಾಧವನ್ನು ಮಾಡಿ ಭಗತಸಿಂಗ ಮೊದಲಾದವರು ಯಾತರ ಸಲುವಾಗಿ ದೇಹವಿಟ್ಟರೊ ಅದರ ಸಲುವಾಗಿ ದುಡಿಯುವ ಜನರಾದ ನಮಗೆ ಮತ್ತಿಷ್ಟೂ ಶಕ್ತಿಯನ್ನು ಗೊಡಿಕೆಸಿಕೊಟ್ಟಿದ್ದಾರೆ.

ಅಸೆಂಬ್ಲಿಯ ಸಭಾಸದರು ಸಭೆ ಬಿಟ್ಟು ಎದ್ದು ಹೋದರು

ಶ್ರೀ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ನಮಗೆ ತಿಳಿದುಬಂದ ಕೂಡಲೆ, ಮಧ್ಯ ಕಾಯದೆ ಮಂಡಳದ ರಾಷ್ಟ್ರೀಯ ಪಂಗಡದ ಸಭಾಸದರೆಲ್ಲರೂ ಸಭೆಯನ್ನು ಬಿಟ್ಟು ಎದ್ದು ಹೋಗಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಸಮಯವು ಮುಗಿದ ಕೂಡಲೆ ಶ್ರೀ ರಂಗಾಚಾರಿಯರ್‌ರು ಕೆಳಗಿನಂತೆ ಭಾಷಣ ಮಾಡಿದರು.

ಶ್ರೀ ಭಗತಸಿಂಗ ಹಾಗು ಉಳಿದವರನ್ನು ಸರಕಾರದವರು ಗಲ್ಲಿಗೇರಿಸಿದ್ದು ನನಗೆ ಅತ್ಯಂತ ದುಃಖಕ್ಕೂ, ಉದ್ವೇಗಕ್ಕೂ ಕಾರಣವಾಗಿದೆ

ಈ ಖಟ್ಲೆಗೆ ಸಂಬಂಧಿಸಿದ ಯಾವತ್ತೂ ಸಂಗತಿಗಳು ಎಲ್ಲರಿಗೂ ಗೊತ್ತಿವೆ. ವ್ಹಾಯಿಸರಾಯರು ಒಂದು ಆರ್ಡಿನನ್ಸ ಹೊರಡಿಸಿ, ಸ್ಪೇಶಲ್ ಟ್ರಿಬ್ಯುನಲದಿಂದ ಇವರ ಖಟ್ಲೆಯನ್ನು ಸಾಗಿಸಿದರು. ಆರೋಪಿಗಳು ಖಟ್ಲೆಯ ವಿಚಾರಣೆಯಲ್ಲಿ ಪ್ರತ್ಯಕ್ಷವಾಗಿ ಭಾಗತೆಗೆದುಕೊಂಡಿಲ್ಲ. ಯಾವ ಅಪರಾಧಕ್ಕಾಗಿ ಭಗತಸಿಂಗನು ಮರಣ ದಂಡನೆಗೆ ಗುರಿಯಾಗಿ, ಗಲ್ಲಿಗೇರಿಸಲ್ಪಟ್ಟನೋ ಆ ಅಪರಾಧದಲ್ಲಿ ಅವನದೇನೂ ಅಂಗವಿದ್ದಿದ್ದಿಲ್ಲವೆಂದು ಬಹು ಸಂಖ್ಯಾಕರು ಅಭಿಪ್ರಾಯಪಟ್ಟಿರುವರು. ಮರಣದಂಡನೆಯನ್ನು ವಿಧಿಸಕೂಡದೆಂದು ಬೇರೆ ಬೇರೆ ವಿಧಗಳಿಂದ ಬೇಡಿಕೊಳ್ಳುವದಾಯಿತು ಸರಕಾರದವರು ಲೋಕಮತವನ್ನು ಧಿಕ್ಕರಿಸಲಿಕ್ಕಿಲ್ಲವೆಂದು ಜನರು ತಿಳಿದುಕೊಂಡಿದ್ದರು. ಆದರೆ ಸರಕಾರದವರು ಲೋಕಮತವನ್ನು ಧಿಕ್ಕರಿಸಿ ಅವರನ್ನು ಗಲ್ಲಿಗೇರಿಸಿಯೇ ಬಿಟ್ಟರು. ಇದು ಅನಿಷ್ಟ ಪರಿಣಾಮವನ್ನುಂಟು ಮಾಡದೆ ಇರಲಾರದು. ಲೋಕಮತವನ್ನು ಲೆಕ್ಕಿಸದೆ ಸರಕಾರದವರು ಈ ಕೃತಿಯನ್ನು ಜರುಗಿಸಿ, ತಮ್ಮ ಮೇಲೆ ಸಂಕಟವನ್ನು ತಂದುಕೊಂಡಿದ್ದಲ್ಲದೆ, ರಾಷ್ಟ್ರವನ್ನೂ ಸಂಕಟಕ್ಕೆ ಗುರಿಮಾಡಿದ್ದಾರೆ. ನ್ಯಾಯದೊಂದಿಗೆ ಸ್ವಲ್ಪ ದಯೆ ತೋರಿಸಿದ್ದರೆ ಸರಕಾರಕ್ಕೆ ಅದು ಭೂಷಣಾಸ್ಪದವಾಗುತ್ತಿತ್ತು. ಆದರೆ ಸರಕಾರದವರಲ್ಲಿ ಮುತ್ಸದ್ದಿತನವೆಂಬುದು ಎಳ್ಳಷ್ಟೂ ಇಲ್ಲವೇ ಇಲ್ಲ. ಕಾರಣ ಸರಕಾರದ ಈ ಕೃತಿಯನ್ನು ನಾವು ಬಲವಾಗಿ ನಿಷೇಧಿಸಿ, ಸಭೆ ಬಿಟ್ಟು ಎದ್ದು ಹೋಗುತ್ತೇವೆ

ಶ್ರೀ ರಂಗಾಚಾರಿಯವರ ಭಾಷಣ ಮುಗಿದ ಕೂಡಲೆ ಸರ್. ಜೇಮ್ಸ ಕ್ರೇರಾರರು ಎದ್ದುನಿಂತು ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದರಿಂದ ದುಃಖವುಂಟಾಗಿದ್ದದು ನಿಜವಿದ್ದರೂ ಸಹ, ಹಿಂದುಸ್ಥಾನದ ಹಿತಕ್ಕಾಗಿ ನ್ಯಾಯಕ್ಕನುಸರಿಸಿ ಕೃತಿಗಳನ್ನು ಜರುಗಿಸಲೇ ಬೇಕಾಗುವದೆಂಬುದಾಗಿ ಭಾಷಣ ಮಾಡಿದರು.

ಸರ್. ಜೋರ್ಜ ರೇನಿಯವರು, ತಮ್ಮ ಕರ್ತವ್ಯದಿಂದ ಚ್ಯುತರಾಗದಿರಲು ಸಭಾಸದರಲ್ಲಿ ಕೇಳಿಕೊಂಡರು.

ಇವನ್ನಾದ ಬಳಿಕ ರಾಷ್ಟ್ರೀಯ ಪಂಗಡದ ಸಭಾಸದರು ಸಭೆಬಿಟ್ಟು ಎದ್ದು ಹೋದರು. ಸರ್. ಹರಿಸಿಂಗ ಗೌರರೊಬ್ಬರೇ ಸಭೆಬಿಟ್ಟು ಎದ್ದು ಹೋಗಲು ಮೊದಲು ಹಿಂದು ಮುಂದೆ ನೋಡಿ, ಹಿಂದುಗಡೆಯಲ್ಲಿ ಹೊರಟು ಹೋದರು.

ಸ್ವತಂತ್ರ ಪಂಗಡದ ಸಭಾಸದರಾದ ಶ್ರೀ ಎಸ್. ಸಿ. ಮಿತ್ರ, ಲಾಹಿರಿ, ಸಾದಿಕ ಹಸನ ಇವರಾದರೂ ಸಭೆಯಿಂದ ಹೊರಬಿದ್ದರು.

ಸರ್ ಅಬ್ದುಲ್ ರಹೀಮರು ಸಭೆಬಿಟ್ಟು ಎದ್ದು ಹೋಗುವ ಸಂಬಂಧವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸಿಯೂ ವಿರುದ್ಧ ಪಂಗಡದವರು ಎದ್ದು ಹೋಗಿರುವಾಗ ಕಾರ್ಯಸಾಗಿಸುವದು ಸರಿಯಾಗಿರುವದಿಲ್ಲವೆಂಬುದಾಗಿ ಹೇಳಿಯೂ, ಸಭೆಯನ್ನು ಮುಂದರಿಸಲು ಕೇಳಿಕೊಂಡರು.

ಸರ್ ರೇನಿಯವರು ಅಬ್ದುಲ್ ರಹೀಮರ ಸೂಚನೆಯನ್ನು ವಿರೋಧಿಸಿದರು. ಸರ್ ಕೌಸಜಿ ಜಹಾಂಗೀರ ಹಾಗು ಶ್ರೀ ಮುದಲಿಯಾರರು ಭಾಷಣ ಮಾಡಿದ ಬಳಿಕ ಸಭೆಯು ಅರ್ಧಗಂಟೆಯ ವರೆಗೆ ಮುಂದರಿಸಲ್ಪಡದೇ ಕಾಗಿ ಗೊತ್ತಾಗಿ, ಸಭೆಯು ಮುಂದರಿಸಲ್ಪಟ್ಟಿತು.

'ವೀರಾತ್ಮರುಗಳನ್ನು ಮರೆಯಬೇಡಿ'

ಭಗತಸಿಂಗ ಮೊದಲಾದವರನ್ನು ಸರಕಾರದವರು ಗಲ್ಲಿಗೇರಿಸಿದ್ದರ ಸಂಬಂಧವಾಗಿ ಪಂಡಿತ ಜವಾಹಿರಲಾಲರು ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗಲ್ಲಿನ ಶಿಕ್ಷೆಯನ್ನು ರದ್ದುಪಡಿಸುವಲ್ಲಿ ನನ್ನ ಶಬ್ದಗಳಿಂದೇನಾದರೂ ವಿಘ್ನವುಂಟಾದೀತೆಂಬ ಆಶಂಕೆಯಿಂದ ಈವರೆಗೆ ನಾನು ಒಂದು 'ಚ'ಕಾರ ಶಬ್ದವನ್ನಾದರೂ ಉಚ್ಚರಿಸಿಲ್ಲ. ನನ್ನ ಹೃದಯದಲ್ಲಿ ತಳಮಳವುಂಟಾಗಿದ್ದರೂ ನಾನು ಬೇಕಂತಲೆ ಸುಮ್ಮನೆ ಕುಳಿತಿದ್ದೆ. ಆದರೆ ಈಗ ಎಲ್ಲವೂ ಮುಗಿದುಹೋಗಿದೆ. ಅವರ ಧೈರ್ಯವೂ ಅವರ ಸ್ವಾರ್ಥತ್ಯಾಗವೂ ತರುಣರಿಗೆ ಉತ್ಸಾಹದಾಯಕವಿದೆ. ಅವರು ನಮ್ಮೆಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಇಂಥವರನ್ನು ಉಳಿಸುವದು ನಮ್ಮಿಂದಾಗಲಿಲ್ಲ. ಹಿಂದುಸ್ಥಾನವು ಈ ಹೋ... ಪ್ರೀತಿಪಾತ್ರರಾದವರನ್ನು ಮರಣದಂಡನೆಯಿಂದ ಉಳಿಸಿಕೊಳ್ಳಲು ಸಮರ್ಥವಿಲ್ಲ

ಎಲ್ಲೆಲ್ಲಿಯೂ ದುಃಖಪ್ರದರ್ಶಕ ಸಭೆ ಮೆರವಣಿಗೆ, ಹರತಾಳ ಮೊದಲಾದವುಗಳು ಜರುಗುವವು. ಎಲ್ಲೆಲ್ಲಿಯೂ ಹುತಾತ್ಮರ ಬಗ್ಗೆ ಅಭಿಮಾನವು ತೋರಬರುವದು, ಇಂಗ್ಲಂಡವು ಶಮ್ಮೊಡನೆ ಒಡಂಬಡಿಕೆಯ ಸಂಬಂಧವಾಗಿ ಮಾತುಕತೆಯನ್ನಾಡುವ ಕೂಡಲೆ, ಹುತಾತ್ಮರಾದ ಶ್ರೀ ಭಗತಸಿಂಗರ ಜಡದೇಹವು ನಮ್ಮ ನಡುವೆ ಬಂದು ನಿಲ್ಲುವದು.

ಕಾಂಗ್ರೆಸ್ ಮುಖಂಡರು ಕರಾಚಿಗೆ ಹೊರಟರು

ಮಹಾತ್ಮಾ ಗಾಂಧಿ, ಸರದಾರ ವಲ್ಲಭಭಾಯಿ, ಪಂಡಿತ ಜವಾಹಿರಲಾಲ, ಸಿ. ರಾಜಗೋಪಾಲಾಚಾರಿ, ಪಂಡಿತ ಮಾಲವಿಯಾ ಮೊದಲಾದ ಮುಖಂಡರು ತಾ॥ ೨೩ ನೆಯ ದಿವಸ ದಿಲ್ಲಿಯಿಂದ ಕರಾಚಿಗೆ ಪ್ರಯಾಣ ಬೆಳೆಸಿದರು.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ಶರ್ಟಿಂಗ' ಕೋಟಿಂಗ, ಧೋತರ ಮತ್ತು ಸ್ವದೇಶೀ ಇಳಕಲ್‌ನವೂನೆ ಶೀರೆ ಟಿಕೇಕರವಾಡಿಯ ಘಾಂಚು ಮತ್ತು ಖಣ ವಗೈರೆ ದೊರೆಯುತ್ತವೆ,

ಬೆಟಗೇರಿ ಬ್ರದರ್ಸ ವಾಚಮೇಕರ್ಸ

ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟಾಯಂಪೀಸ ದುರಸ್ತು ಮಾಡುವದಲ್ಲದೆ ವೆಸ್ಟ ಎಂಡ್, ಜೆನಿಫ್, ಓಮೆಗಾ ಕಂಪನಿಯ ವಾಚು, ಕ್ಲಾಕು, ಟಾಯಂಪೀಸ ಮತ್ತು ಸ್ಪೇರಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ಎಂದು ವಿನಂತಿ.

ಬೆಟಗೇರಿ ಬ್ರದರ್ಸ
ಸ್ಟೇಶನ್ ರೋಡ ಹುಬ್ಬಳ್ಳಿ ಬಾಗಲಕೋಟೆ.

ಕನ್ನಡಿಗ.

ಕನ್ನಡಿಗ ಚೈತ್ರ ಶುದ್ಧ ೮ ಶಕೆ ೧೮೫೩

ನಿನ್ನ ಬಾವುಟದ ಮೇಲೆ ಹಾರಾಡಿ ಕಟ್ಟುವೆನಾನು
ನಿನ್ನ ಬೆಸನವ ಮಾಡಿ ಬಂಥ ಮುಕ್ತಿಯನ್ನು
ಪಡೆವೆವು ನಿನ್ನ ಮೇಲಣ ಭಕ್ತಿಯ ನೆರವಿಂದ
ಚಿನ್ಮಯಾಕಾಶದಲ್ಲಿ!

ಕರಾಚಿಯ ಕಾಂಗ್ರೆಸು

ಹೋದ ನಾಲ್ವತ್ತುನಾಲ್ಕು ವರ್ಷಗಳಿಂದಲೂ ಭಾರತೀಯರು ಪ್ರತಿವರ್ಷ ರಾಷ್ಟ್ರೀಯ ಸಭೆಯನ್ನು ಮಾಡುತ್ತ ಬಂದಿರುವರು. ಈ ಸಾರೆಯ ೪೫ ನೇ ವರ್ಷದ ರಾಷ್ಟ್ರಸಭೆಯು ಕರಾಚಿಯಲ್ಲಿ ಕೂಡಲಿಕ್ಕಿರುವದು. ಹಿಂದಿನ ಎಲ್ಲ ಕಾಂಗ್ರೆಸ್‌ಗಳಿಗಿಂತಲೂ ಈ ಸಾರೆಯ ಕಾಂಗ್ರೆಸಕ್ಕೆ ವಿಶೇಷ ಮಹತ್ವವಿದೆ. ಸತ್ಯಾಗ್ರಹದ ಸಮರಾಂಗಣದಲ್ಲಿ ಅಹಿಂಸಾಮಯವಾಗಿಯೂ, ಅನತ್ಯಾಚಾರಮಯವಾಗಿಯೂ, ಹೋರಾಡಿ ಗೆದ್ದುಬಂದ ಬಂಟರು ಈ ಸಾರೆಯ ಕಾಂಗ್ರೆಸದಲ್ಲಿ ವಿರಾಜಿಸುವರು. ವೈರಿಗಳು ತನಗೆ ಪರಿಪರಿಯಾಗಿ ಪೀಡೆಕೊಟ್ಟರೂ ತಾನು ಮಾತ್ರ ಅವರ ಕೂದಲು ಸಹ ಕೊಂಕದಂತೆ ಶಾಂತಸ್ವಭಾವದಿಂದ ಎಲ್ಲ ದುಃಖಗಳನ್ನು ನುಂಗಿಕೊಂಡು ಸತ್ಯಾಗ್ರಹದ ತತ್ವಗಳನ್ನು ತತ್ಪರತೆಯಿಂದ ಆಚರಿಸಿದ ತರುಣ ಸ್ವಯಂಸೇವಕನು ಈ ಕಾಂಗ್ರೆಸಕ್ಕೆ ಕೈಕೋಲಿನಂತೆ ಆಧಾರವಾಗಿರುವನು. ಭಾರತೀಯರ ಭಾವೀ ಇತಿಹಾಸದಲ್ಲಿ ಈ ಸಂಗತಿಯನ್ನು ಸುವರ್ಣಾಕ್ಷರಗಳಿಂದ ಬರೆದಿಡುವರು. ತನ್ನ ಶತ್ರುವು ಹಿಂಸಕನಾದರೂ ತಾನು ಅಹಿಂಸಾವೀರನೆಂಬುವ ಮಾತನ್ನು ಭಾರತೀಯ ಆಬಾಲವೃದ್ಧರು ಇಡೀ ಭೂಮಂಡಲದಲ್ಲಿಯೇ ಭೇರೀ ಹೊಡಿಸಿ ಬಿಟ್ಟಿರುವರು. "ಈ ಮಾರ್ಗದಿಂದಲೇ ಸ್ವರಾಜ್ಯವು" ಎಂಬ ಮಹಾತ್ಮನ ಆಕಾಶವಾಣಿಯೂ ಎಲ್ಲರಿಗೂ ಕರಾಚಿಯ ಕಾಂಗ್ರೆಸದಲ್ಲಿ ಕೇಳಬರುವದು.

ಆರೋಗ್ಯಧಾಮ

ಸಾಹೇಬರು ಹಿಂದುಸ್ಥಾನದಲ್ಲಿ ಕಾಲೂರಿದಂತನಂತರ ಅವರು ಹಿಂದೀಯರನ್ನು ಒಂದು ಬಗೆಯ ಮಬ್ಬಿನಲ್ಲಿಯೇ ಕೆಡವಿಬಿಟ್ಟರು. ಈ ಮಬ್ಬಿನಲ್ಲಿಯೇ ಅವರ ಆಚಾರವಿಚಾರಗಳ ಅನುಕರಣ ಮಾಡಿ ತಾವೂ ಸಾಹೇಬರಂತೆಯೇ ಕುಣಿದಾಡಹತ್ತಿದರು. ಇಂಗ್ಲಂಡದಲ್ಲಿ ತಯಾರಾದ ಒಡವೆಗಳೇ ಇವರಿಗೆ ಬಹು ಅಂದವಾಗಿ ಕಾಣಹತ್ತಿದವು. ಇಂಗ್ಲಂಡದಲ್ಲಿ ತಯಾರಾದ ಔಷಧಗಳನ್ನೇ ಉಪಯೋಗಿಸಿ ತಮ್ಮಲ್ಲಿಯ ಹಣವನ್ನೆಲ್ಲ ಸಾಹೇಬರ ಜೇಬುಗಳಲ್ಲಿ ಜೋರಿನಿಂದ ಸುರುವಿಬಿಟ್ಟರು. ಆದರೆ ಈಗ ಮಾತ್ರ ಮಹಾತ್ಮನ ಮಂತ್ರದಿಂದ ರಾಷ್ಟ್ರವೆಲ್ಲವೂ ಎಚ್ಚರಗೊಂಡು ಎದ್ದು ಕುಳಿತಿದೆ. ಸಾಹೇಬರ ವಸ್ತು ಒಡವೆಗಳಿಗೆ ಬಹಿಷ್ಕಾರ ಹಾಕಿದ ಕಾಲವಿದು. ಸಾಹೇಬರ ಔಷಧಗಳಿಗೂ ಬಹಿಷ್ಕಾರ ಹಾಕಿರುವದು ತಮ್ಮೆಲ್ಲರಿಗೂ ಗೊತ್ತುಂಟು. ಅನಾಚಾರಕ್ಕೆ ಬಲಿಬಿದ್ದು ಅನಾರೋಗ್ಯದಿಂದಲೂ ಅಶಕ್ತತೆಯಿಂದಲೂ ಬಳಲುತ್ತಿರುವ ಬಡಜನರಿಗೂ ಸಹ ಉಪಯೋಗಬೀಳುವಂತೆ ಸುಲಭ ಕ್ರಯಕ್ಕೆ ದೊರಕುವಂತೆ ಇಲ್ಲಿಯ ಆಯುರ್ವೇದ ತಜ್ಞರಾದ ವೈದ್ಯ ಬುರ್ಲಿ ಎಂಬವರು ಒಂದು "ಜೀವನಸುಧಾ" ಎಂಬ ಔಷಧವನ್ನು ಸಿದ್ಧಮಾಡಿರುವರು. ಇದರ ಸೇವನೆಯಿಂದ ಎಷ್ಟೋ ರೋಗಿಗಳು ಗುಣಹೊಂದಿರುವರು. ಡಾಕ್ಟರ ಮಹಾಶಯರೂ ಇದರಬಗ್ಗೆ ಉತ್ತಮ ಅಭಿಪ್ರಾಯ ಕೊಟ್ಟಿರುವರು. ವೈದ್ಯ ಬುರ್ಲಿಯವರು ಈ ಊರಲ್ಲಿ "ಆರೋಗ್ಯಧಾಮ"ವನ್ನು ಸ್ಥಾಪಿಸಿರುವರು. ಕೇವಲ ಪರೋಪಕಾರ ಬುದ್ಧಿಯಿಂದ ಇವರು ಕೆಲಸ ಮಾಡುತ್ತಿರುವದನ್ನು ಇವರಿಂದ ನೆಟ್ಟಗಾದ ಕ್ಷಯರೋಗಿಗಳನ್ನು ಕೇಳಿದರೆ ಚನ್ನಾಗಿ ತಿಳಿದು ಬರುವದು. ಈ ಪರಿಯಿಂದ ಹಗಲಿರುಳು ಜನತೆಯ ಕಲ್ಯಾಣಕ್ಕಾಗಿ ಯತ್ನಪಡುತ್ತಿರುವ ವೈದ್ಯ ಬುರ್ಲಿಯವರನ್ನು ನಾವು ಅವರ "ಧಾಮ"ದ ತೃತೀಯ ವಾರ್ಷಿಕ ಸಮಾರಂಭೋತ್ಸವದ ನಿಮಿತ್ತವಾಗಿ ಅಭಿನಂದಿಸುವೆವು. ಎಲ್ಲ ಕನ್ನಡಿಗರೂ ಈ ಕನ್ನಡತಾಯಿಯ ಮಗನಾದ ವೈದ್ಯ ಬುರ್ಲಿಯವರ ಯತ್ನಗಳು ಸಫಲವಾಗುವಂತೆ ಅವರ ಈ ಆಯುರ್ವೇದಿಕ ಸೇವೆಯನ್ನು ಸ್ವೀಕರಿಸಬೇಕಾಗಿ ನಮ್ಮ ವಿನಂತಿಯು. ಸತತವಾಗಿ ಈ ಪ್ರಯತ್ನವನ್ನು ಸಾಗಿಸುತ್ತಿರುವ ವೈದ್ಯ ಬುರ್ಲಿಯವರ ಪರೋಪಕಾರ ಬುದ್ಧಿಗಾಗಿ ನಾವು ಮತ್ತೊಮ್ಮೆ ಅವರನ್ನು ಅಭಿನಂದಿಸುವೆವು.

ಕರ್ನಾಟಕ ಏಕೀಕರಣವೂ ಕನ್ನಡಿಗರ ಕರ್ತವ್ಯವೂ

ರ.ಹನಿಯರೇ,

ಕರ್ನಾಟಕದ ಏಕೀಕರಣವು ಕರ್ನಾಟಕದ ಸರ್ವಾಂಗೀಣವಾದ ಉನ್ನತಿಗೆ ಎಷ್ಟು ಅವಶ್ಯಕವಾದುದೆಂಬದನ್ನು ವಿವರಿಸುವದು ಬೇಡ. ವ್ಯಾಪಾರದ ಬೆಳವಣಿಗೆಯ ಗುಟ್ಟು; ಕಲೋದ್ಯೋಗಿಗಳ ಮೇಲ್ಮೆಯ [illegible]; ವಾಙ್ಮಯದ ಹೆಚ್ಚಳದ ದಾರಿಯು; ಸಂಸ್ಕೃತಿಯ ಅಭಿವೃದ್ಧಿಯ ಜೀವಾಳ; ಹೆಚ್ಚೇನು? ಶಾಂತಿ ಪುಷ್ಟಿಗಳ ಸಾಧನಸರ್ವಸ್ವವೇ ಅದೆಂದು ನಾವು ಅರಿತೇ ಇರುವೆವು.

ಎಂದ ಬಳಿಕ ಎಲ್ಲರೂ ಕರ್ನಾಟಕದ ಏಕೀಕರಣಕ್ಕಾಗಿ ಹೆಣಗಾಡಲೇ ಬೇಕು. ಈ ಸಂದರ್ಭವು [illegible] ಕಾಲ, ಭಾರತದೊಡನೆ ಕರ್ನಾಟಕದ ಉದ್ಧಾರವೂ ಆಗಲೇಬೇಕು. ಈಗಲೇ ಕರ್ನಾಟಕದ ಏಕೀಕರಣದ ಬೀಜವನ್ನು ಬಿತ್ತುವ ಕಾಲ. ೧೦ ಚಿಕ್ಕ ಸೇರುವ ಅಖಿಲ ಭಾರತ ರಾಷ್ಟ್ರಸಭೆಯ ಸಮ್ಮೇಲನದಲ್ಲಿ [illegible] ಆಗಬೇಕು. ಮೇಲಿನ ಕರ್ತವ್ಯವನ್ನು ಕನ್ನಡಿಗರೆಲ್ಲರೂ [illegible] ಏಕೀಕರಣಕ್ಕಾಗಿ [illegible]. ಅಲ್ಲಿ ಕರ್ನಾಟಕ ಪ್ರಾಂತದ ಕರ್ನಾಟಕದ ಏಕೀಕರಣದ ಗೊತ್ತನ್ನು [illegible] ಮಾಡಬೇಕು. ಅವರಿಗೆ ಬೆಂಬಲವಾಗಿ ಕರ್ನಾಟಕದ ಎಲ್ಲ ಹಳ್ಳಿಗಳೂ ಇರಬೇಕು.

ಇದಕ್ಕಾಗಿ ನಾವು ತಮ್ಮಲ್ಲಿ [illegible] ನೆಯ ತಾರೀಖಿನ ದಿನ ಸಾಧ್ಯವಾದರೆ ಸಾರ್ವಜನಿಕ ಸಭೆ ಸೇರಿಸಿ, ಕರ್ನಾಟಕದ ಏಕೀಕರಣದ ಗೊತ್ತು ಮಾಡಿ ಅಥವಾ [illegible] ನಾವು ಕರಾಚಿ ಕಾಂಗ್ರೆಸ್ಸಿನ ಅಧ್ಯಕ್ಷರಿಗೆ [illegible] ಕಳಿಸಬೇಕು.

ತಮ್ಮಲ್ಲಿಯ ಎಲ್ಲ ಸಂಸ್ಥೆಗಳಿಂದಲೂ ಈ ರೀತಿ ಹೋಗುವ ವ್ಯವಸ್ಥೆ ಮಾಡಬೇಕು.

ಧಾರವಾಡ, ತಾ॥ ೨೫-೩-೩೧ | ಕಾರ್ಯದರ್ಶಿಗಳು, ಕರ್ನಾಟಕ ಏಕೀಕರಣ ಸಂಘ

ಭಗತಸಿಂಗರ ವೀರವಾಣಿ.

ಲಾಹೋರ ಸೆಂಟ್ರಲ್ ಜೇಲಿನಲ್ಲಿ ಸೋಮವಾರ ದಿವಸ ಸಂಜೆಯಲ್ಲಿ ಗಲ್ಲಿಗೇರಿಸಲ್ಪಟ್ಟ ಶ್ರೀ. ಭಗತಸಿಂಗ, ರಾಜಗುರು, ಸುಖದೇವ ಇವರಿಗೆ ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಮರಣದಂಡನೆಯ ಶಿಕ್ಷೆಯು ವಿಧಿಸಲ್ಪಟ್ಟಿತ್ತು. ೧೯೨೯ ನೆಯ ಎಪ್ರಿಲ್ ೮ ನೆಯ ತಾರೀಖಿನ ದಿವಸ ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ. ವಿಠ್ಠಲಭಾಯಿಯವರು ಸೇಫ್ಟಿ ಬಿಲ್ಲಿನ ಸಂಬಂಧವಾಗಿ ತಮ್ಮ ನಿರ್ಣಯವನ್ನು ಕೊಡಲು ಹೊರಟಾಗ ಅಸೆಂಬ್ಲಿಯಲ್ಲಿ ಎರಡು ಬಾಂಬುಗಳು ಸ್ಫೋಟವಾದವು. ಸರ್ ವಲಾಲ ಹಾಗು ಸರ್ ಜೋರ್ಜ ಇವರಿಗೆ ಸ್ವಲ್ಪ ಅಪಾಯ ಸಂಭವಿಸಿತು. ಬಾಂಬುಗಳು ಸ್ಫೋಟವಾಗುವದೊಂದೇ ತಡ, ಅಲ್ಲಿ ಕೆಲವು ಹಸ್ತಪತ್ರಿಕೆಗಳು ಮೇಲಿನಿಂದ ತೂರಲ್ಪಟ್ಟವು. ಆ ಹಸ್ತಪತ್ರಿಕೆಯಲ್ಲಿ ಕೆಳಗಿನಂತೆ ಉಲ್ಲೇಖವಿತ್ತು.

ಈ ಹತ್ತು ವರ್ಷಗಳಲ್ಲಿ ಈ ಸುಧಾರಣೆಗಳಿಂದ ನಮಗೆ ಏನೂ ಉಪಯೋಗವಾಗಲಿಲ್ಲ. ಈ ಸಭೆಯಲ್ಲಿ ನಮ್ಮ ರಾಷ್ಟ್ರನಾಯಕನು ಪರಿಪರಿ ಅಪಮಾನಕ್ಕೀಡಾಗಬೇಕಾಯಿತು. ಸಾಯಮನ್ ಸಪ್ತಕರಿಂದ ತಮಗೆ ಹೆಚ್ಚಿನ ಸುಧಾರಣೆಗಳೇನಾದರೂ ದೊರಕುವವೆಂಬದಾಗಿ ಜನರು ಅತ್ತ ಆಶೆಪಡುತ್ತಿರುವಾಗ, ಇತ್ತ ಸರಕಾರದವರು ಸೇಫ್ಟಿ ಬಿಲ್, ಟ್ರೇಡ್ ಡಿಸ್ಪ್ಯೂಟ ಬಿಲ್ ಮೊದಲಾದ ಕಾಯಿದೆಗಳನ್ನು ಪಾಸು ಮಾಡಿಕೊಳ್ಳಲು ಪ್ರಯತ್ನಿಸಹತ್ತಿದ್ದಾರೆ.

ಕೂಲಿಕಾರ ಮುಖಂಡರನ್ನು ಸೆರೆಹಿಡಿದದ್ದನ್ನು ನೋಡಿದಲ್ಲಿ ಗಾಳಿಯು ಎತ್ತ ಬೀಸುತ್ತಿರುವದೆಂಬುದು ತಿಳಿದು ಬರುವವು. ಈ ಪರಿಸ್ಥಿತಿಯನ್ನು "ಹಿಂದುಸ್ಥಾನ ಸೋಸಿಯಾಲಿಸ್ಟ ರಿಪಬ್ಲಿಕ್ ಅಸೋಸಿಯೇಶನ್"ದವರು ಚನ್ನಾಗಿ ಮನನ ಮಾಡಿಕೊಂಡು, ತಮ್ಮ ಜವಾಬುದಾರಿಯನ್ನು ತಿಳಿದುಕೊಂಡು, ಈ ಕೃತಿಯನ್ನು ಜರುಗಿಸಲು ನಮಗೆ ಆಜ್ಞೆ ಕೊಟ್ಟಿದ್ದಾರೆ.

ಜನರ ಪ್ರತಿನಿಧಿಗಳು ತಮ್ಮ ತಮ್ಮ ಸ್ಥಳಗಳಿಗೆ ತಿರುಗಿ ಹೋಗಿ ಭಾವೀ ರಾಜ್ಯಕ್ರಾಂತಿಗಾಗಿ ಜನರನ್ನು ಸಿದ್ಧಪಡಿಸಲಿ. ಸೇಫ್ಟಿ ಬಿಲ್ಲು, ಟ್ರೇಡ ಡಿಸ್ಪ್ಯೂಟ ಬಿಲ್ಲು ಹಾಗು ಲಾಲಾ ಲಜಪತರಾಯರ ಘೋರ ಕೊಲೆ ಈ ಬಗ್ಗೆ ನಾವು ನಿಷೇಧವನ್ನು ವ್ಯಕ್ತಪಡಿಸಿ, ವ್ಯಕ್ತಿಗಳನ್ನು ಕೊಲ್ಲಬಹುದು. ಆದರೆ ವಿಚಾರಗಳನ್ನು ಕೊಲ್ಲಲಾರಿರಿ ಎಂಬ ಐತಿಹಾಸಿಕ ತತ್ವವನ್ನು ನಾವು ಒತ್ತಿ ಒತ್ತಿ ಹೇಳಬೇಕಾಗಿದೆ. ಎಷ್ಟೋ ಸಾಮ್ರಾಜ್ಯಗಳು ನೆಲಕ್ಕುರುಳಿದರೂ, ವಿಚಾರಗಳು ಮಾತ್ರ ಇನ್ನೂ ಉಳಿದಿವೆ. ಕ್ರಾಂತಿಕಾರಕ ಜನರು ಬರ್ಬನರನ್ನು ಝಾರರನ್ನು ರಸಾತಳಕ್ಕೆ ಮೆಟ್ಟಿ, ವಿಜಯವನ್ನು ಸಂಪಾದಿಸಿದರು.

ಮನುಷ್ಯ ದೇಹವು ಅತೀವ ಪವಿತ್ರವಾಗಿರುವದೆಂಬುದಾಗಿ ತಿಳಿದುಕೊಂಡಿರುವವರಾದ ನಮಗೆ, ನರರಕ್ತವನ್ನು ಭೂಮಿಯ ಮೇಲೆ ಹರಿಸುವ ಪ್ರಸಂಗವು ಒದಗಿ ಬಂದದನ್ನು ನೋಡಿ, ಅತೀವ ವಿಷಾದವಾಗುತ್ತದೆ. ರಾಜ್ಯಕ್ರಾಂತಿಯ ಯಜ್ಞಭೂಮಿಯಲ್ಲಿ ಕೆಲವು ವ್ಯಕ್ತಿಗಳು ತಮ್ಮ ಪ್ರಾಣಗಳನ್ನರ್ಪಿಸುವದರಿಂದಲೇ ಯಾವತ್ತು ಜನರಿಗೆ ಸ್ವಾತಂತ್ರ್ಯ ಸಿಗುವದು. ರಾಜ್ಯಕ್ರಾಂತಿಯು ಚಿರಾಯುವಾಗಿರಲಿ.

ಮುಂಬಯಿ ಸರಕಾರದ ಉದ್ಯೋಗ ಖಾತೆಯ ಅಧಿಕಾರಿಗಳು ಬೆಳಗಾವಿ ಜಿಲ್ಹೆಯಲ್ಲಿ ಹೊಸ ಉದ್ಯೋಗ ಧಂದೆಗಳನ್ನು ಪ್ರಾರಂಭಿಸುವ ಸಂಬಂಧವಾಗಿ ತಾ॥ ೨೩ ನೆಯ ದಿವಸ ಬೆಳಗಾವಿಯ ಮುಖಂಡರೊಡನೆ ಚರ್ಚೆ ಮಾಡಿದರು.

ಶ್ರೀ ಸೇನಗುಪ್ತರ ಎಚ್ಚರಿಕೆ

"ಶತ್ರುಗಳ ಬಲೆಯಲ್ಲಿ ಬೀಳಬೇಡಿರಿ"

ಬಂಗಾಲದ ಸುಪ್ರಸಿದ್ಧ ಕಾಂಗ್ರೆಸ ಮುಖಂಡರಾದ ಶ್ರೀ. ಜೆ. ಎಂ. ಸೇನಗುಪ್ತರು ಕರಾಚಿಗೆ ತಲುಪಿದ ಕೂಡಲೇ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದು ಅವರಿಗೆ ತಿಳಿದುಬಂದಿತು. ಅವರು ಪತ್ರಿಕಾ ಪ್ರತಿನಿಧಿಯ ಮುಂದೆ ತಮ್ಮ ದುಃಖವನ್ನು ವ್ಯಕ್ತಪಡಿಸಿ ಕೆಳಗಿನಂತೆ ಎಚ್ಚರಿಕೆ ಕೊಟ್ಟರು.

ಅವರ ಆತ್ಮಕ್ಕೆ ಶಾಂತಿದೊರೆಯಲಿ. ಶಾಂತ ಮಾರ್ಗಗಳಿಂದ ಹಿಂದುಸ್ಥಾನವು ಸ್ವರಾಜ್ಯವನ್ನು ಸಂಪಾದಿಸಲಿ. ಅಖಿಲ ಭರತಖಂಡದ ಪ್ರಾರ್ಥನೆಯ ಕಡೆಗೆ ಲಕ್ಷ್ಯಕೊಡದೆ ಅಧಿಕಾರಿ ವರ್ಗವು ತನ್ನ ಹಟವನ್ನೇ ಸಾಧಿಸಿತು. ಶತ್ರುಗಳ ಬಲೆಯಲ್ಲಿ ಬೀಳದಂತೆ ಜಾಗರೂಕರಾಗಿರೋಣ. ನಮ್ಮ ನಮ್ಮ ಅನೈಕ್ಯವನ್ನುಂಟುಮಾಡಲು ಅಧಿಕಾರಿಗಳು ಬೇಕಂತಲೆ ಈ ಬಲೆಯನ್ನೊಡ್ಡಿದ್ದಾರೆ. ಅವರ ಆಶೆಯು ಸಫಲವಾಗದಂತೆ ನೋಡಿಕೊಳ್ಳೋಣ.

ನಿಷ್ಠುರ ನ್ಯಾಯ

"ಸಾಕ್ಷೀದಾರನು ಹೇಳುವ ಯಾವ ಸಂಗತಿಗಳನ್ನು ಪ್ರತಿಪಕ್ಷದವರು ನಿಷ್ಕರ್ಷಕ್ಕೆ ಹಚ್ಚಿರುವದಿಲ್ಲವೋ ಅಂಥ ಸಂಗತಿಗಳ ಆಧಾರದ ಮೇಲಿಂದ ಯಾರನ್ನೂ ಶಿಕ್ಷೆಗೆ ಗುರಿಮಾಡಲಾಗದು ಎಂದು ಆಂಗ್ಲ ನ್ಯಾಯವು ಜನ್ಮಕೊಟ್ಟಿತ್ತು. ಆದರೂ ಸಹ ಅತಿಶಯ ಕಾಲವಿಲಂಬವಾದ ನಂತರ ಹಾಗೂ ಪ್ರತಿಪಕ್ಷದವರ ನಿಷ್ಕರ್ಷಕ್ಕೆ ಹತ್ತದೆ ಇದ್ದ ಸಾಕ್ಷಿಯ ಮೇಲಿಂದ ಒಬ್ಬ ಮಾನವನನ್ನು ಗಲ್ಲಿಗೆಹಾಕಿ ಕೊಲೆಮಾಡಿರುವರು. ಇವನನ್ನು ಅವನ ಉರುಟುತನಕ್ಕಾಗಿ ಅಥವಾ ಒರಟತನಕ್ಕಾಗಿ ಬೇರೆ ಶಿಕ್ಷೆಗೆ ಗುರಿಮಾಡಬಹುದಾಗಿತ್ತು. ಮರಣದಂಡನೆಯನ್ನು ನಿಶ್ಚಯವಾಗಿ ತಪ್ಪಿಸಬಹುದಾಗಿತ್ತು. ನ್ಯಾಯವಿಚಾರಣಾ ಮಂಡಳದವರು ಪಂಚರನ್ನು ನೇಮಿಸಬಹುದಾಗಿತ್ತು. ಈ ರೀತಿಯಲ್ಲಿ ಯಾವದನ್ನೂ ಮಾಡದೆ ಕೇವಲ ಅವನನ್ನು ಗಲ್ಲಿಗೆ ಹಾಕಿ ಮಾತ್ರ ಬಿಡುವದಾಯಿತು" ಎಂದು ಸರದಾರ ವಲ್ಲಭಭಾಯಿಯವರು ಅಂದರು.

ಮಹಾತ್ಮರಿಗೆ ವಾಯಿಸರಾಯರ ಪತ್ರ

ತಾ। ೨೪ ನೆಯ ದಿವಸ ವ್ಹಾಯಿಸರಾಯರು ಮಹಾತ್ಮಾ ಗಾಂಧಿಯವರಿಗೆ ಒಂದು ಪತ್ರ ಕೊಟ್ಟು ಕಳಿಸಿದರೆಂದೂ, ಮಹಾತ್ಮಾ ಗಾಂಧಿಯವರು ಅಂದು ಮುಂಜಾನೆ ವ್ಹಾಯಿಸರಾಯರಿಗೆ ಬರೆದುಕೊಂಡ ಪತ್ರಕ್ಕೆ ಅದು ಉತ್ತರವಾಗಿತ್ತೆಂದೂ ತಿಳಿದು ಬರುತ್ತದೆ.

ಕಾಮನ್ಸ ಸಭೆಯಲ್ಲಿ

ಪರದೇಶಿ ಬಟ್ಟೆಯ ಬಹಿಷ್ಕಾರ.

ಬ್ರಿಟಿಶ ಬಟ್ಟೆಯ ಬಹಿಷ್ಕಾರದ ಸಂಬಂಧವಾಗಿ ಕೇಳಲ್ಪಟ್ಟ ಪ್ರಶ್ನೆಗಳಿಗೆ ಕಾಮನ್ಸ ಸಭೆಯಲ್ಲಿ ಉತ್ತರ ಕೊಡುವಾಗ, ಮಿ. ಬೆನ್ನರು ಪರದೇಶಿ ಬಟ್ಟೆಯನ್ನು ಹೊರಗೆ ಹಾಕಲು ಮಹಾತ್ಮರು ಮುಂಬಯಿಯ ಗಿರಣಿಗಳವರ ಜೊತೆಯಕೂಡನೆ ವಿಚಾರ ಮಾಡಿ ಸಿದ್ಧಪಡಿಸಿಕೊಂಡ ಯೋಜನೆಯನ್ನು ತಿಳಿಸಿ ಹೇಳಿ, ಅಲ್ಲಿಯ ಪರಿಸ್ಥಿತಿಯನ್ನು ಸಾಧ್ಯಂತವಾಗಿ ತಮಗೆ ತಿಳಿಸಲು ಹಿಂದುಸ್ಥಾನ ಸರಕಾರಕ್ಕೆ ಕೇಳಿಕೊಳ್ಳುವದರಲ್ಲಿ ಬಂದಿದೆಯೆಂದೂ, ಅದು ಬಂದಕೂಡಲೆ ತಿಳಿಸುವದರಲ್ಲಿ ಬರುವದೆಂದೂ ಉತ್ತರ ಕೊಟ್ಟರು.

ಮಾಮಲೇದಾರರಿಗೆ ಹಿಂಬಡತಿಯಾಯಿತು.

ಆನಂದ ತಾಲೂಕದ ಮಾಮಲೇದಾರ ರಾದ ಶ್ರೀ ಮೋಹನಲಾಲ ಶಹಾಂವರು ತಮ್ಮ ಸರಕಾರಿ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಿದ್ದರು. ಇವರನ್ನು ಅವ್ವಲ ಕಾರಕೂನ ಸ್ಥಳಕ್ಕೆ ಹಿಂಬಡತಿ ಮಾಡಿದ್ದರಿಂದಲೂ, ಅದು ಅವರಿಗೆ ಸೇರಲಿಲ್ಲವಾದ ಕಾರಣ ಅವರು ರಾಜೀನಾಮೆ ಕೊಟ್ಟರೆಂದೂ ತಿಳಿದು ಬರುತ್ತದೆ. ಸಾಯದೆಭಂಗ ಚಳವಳಿಯ ಸಮಯದಲ್ಲಿ ಇವರು ಬಾರ್ಡೋಲಿ ಮತ್ತು ಬೋರಸಾದಗಳಲ್ಲಿ ಒಳ್ಳೇ ಪ್ರಖ್ಯಾತಿ ಪಡೆದಿದ್ದರು. ಆ ಮೇಲೆ ಇವರಿಗೆ ಭೊಂಟ ಕಮೀಶನರರಿಂದು ಸಂಶಯ ಬಿದ್ದಿತ್ತು.

ಕರಾಚಿ ಕಾಂಗ್ರೆಸದಲ್ಲಿ ಒಪ್ಪಂದಕ್ಕೆ ಪ್ರಚಂಡ ವಿರೋಧ.

ವ್ಹಾಯಿಸರಾಯರೊಡನೆ ಮಾಡಿಕೊಂಡ ಒಪ್ಪಂದಕ್ಕೆ ಕರಾಚಿ ಕಾಂಗ್ರೆಸದ ಸಮ್ಮತಿ ಯನ್ನು ದೊರಕಿಸಿಕೊಳ್ಳಲು ಮಹಾತ್ಮಾ ಗಾಂಧಿಯವರು ಕಾಂಗ್ರೆಸದಲ್ಲಿ ಒಂದು ಠರಾವನ್ನು ತರತಕ್ಕವರಿದ್ದು, ಆ ಠರಾವನ್ನು ತರು ಣ ಬಲವಾಗಿ ವಿರೋಧಿಸುವವರಿದ್ದುದರಿಂದ, ಮಹಾತ್ಮಾ ಗಾಂಧಿಯವರಿಗೆ ಬೆಂಬಲವಾಗಿ ರಲು ನಿಮ್ಮ ಪ್ರಾಂತದಿಂದ ಸಾಕಷ್ಟು ಪ್ರತಿನಿಧಿಗಳು ಇಲ್ಲಿಗೆ ಬರುವಂತೆ ಮಾಡಿರಿ ಎಂಬು ದಾಗಿ ಕಾಂಗ್ರೆಸದವರು ಅಹಮ್ಮದಾಬಾದದ ಕಾಂಗ್ರೆಸ್ ಅಧಿಕಾರಿಗಳಿಗೆ ಬಿನ್ನಹ ಮಾಡಿ ಕೊಂಡಿರುವರಾಗಿ ತಿಳಿದು ಬರುತ್ತದೆ.

ಮುಂಬಯಿ ಸರಕಾರದ ಕ್ಷುದ್ರತನ.

ಮುಂಬಯಿಯ "ಶೀಪಲ್ಸ ಬ್ಯಾಟಲಿಯ"ದ ಸಂಪಾದಕರಾದ ಶ್ರೀ ಎಚ್. ಡಿ. ರಾಜಾ ಅವರು, ಒಪ್ಪಂದದ ಕರಾರಿನನ್ವಯ ಬಿಡುಗಡೆ ಮಾಡಲ್ಪಡದೆ, ಇನ್ನೂ ಜೇಲಿನಲ್ಲಿಯೇ ಕೊಳೆ ಯುತ್ತ ಬಿದ್ದಿರುವರು. ಈ ಬಗ್ಗೆ ಅವರ ಬಂಧುಗಳು ಅಧಿಕಾರಿಗಳಿಗೆ ಪತ್ರ ಬರೆದು, ಅವರನ್ನು ಬಿಡುಗಡೆ ಮಾಡದಿದ್ದದ್ದಕ್ಕೆ ಕಾರಣ ಕೇಳಿ ದರು. ಹೋಮ ಡಿಪಾರ್ಟಮೆಂಟಿನವರು ಅವರ ಪತ್ರಕ್ಕೆ ಉತ್ತರ ಕೊಟ್ಟಿದ್ದು, ಅದರಲ್ಲಿ, ಅಕ್ಷೇಪಾರ್ಹ ಭಾಷಣವನ್ನು ಮಾಡಿದ್ದಕ್ಕಾಗಿ ಅವ ರಿಗೆ ಶಿಕ್ಷೆಯಾಗಿದೆಯಾಗಿದ್ದರಿಂದ ಅವರನ್ನು ಬಿಡುಗಡೆ ಮಾಡಲಿಕ್ಕೆ ಬರುವಂತಿಲ್ಲವೆಂಬು ದಾಗಿ ಉಲ್ಲೇಖಿಸಿದ್ದಾರೆ.

೨೦೦೦ ಜನರು ಇನ್ನೂ ಜೇಲಿನಲ್ಲಿರುವರು

ಮಾರ್ಚ ತಿಂಗಳ ೫ ನೆಯ ತಾರೀಖಿನ ವರೆಗೆ ಎಲ್ಲ ಸೆರೆಮನೆಗಳಲ್ಲಿ ಕೂಡಿ ಒಟ್ಟಿಗೆ ೨೦೦೦ ಜನರು ಕಾರಾಗೃಹದಲ್ಲಿ ಕೊಳೆಯುತ್ತಿದ್ದರೆಂದೂ, ಒಪ್ಪಂದದ ಕರಾರಿನಂತೆ ಈ ವರೆಗೆ ಒಟ್ಟಿಗೆ ೧೬೫೦೦ ಜನರು ಬಿಡುಗಡೆ ಮಾಡಲ್ಪಟ್ಟಿರುವರೆಂದೂ ತಿಳಿದುಬರು ತ್ತದೆ.

ಕರ್ನಾಟಕದ ಮುಖಂಡರು ಕರಾಚಿಗೆ ಹೊರಟರು.

ದೇ. ಭ. ಗಂಗಾಧರರಾವ ದೇಶಪಾಂಡೆ, ಡಾ. ಹರ್ಡೀಕರ, ಆರ್. ಎಸ್. ಹುಕ್ಕೇರೀಕರ ಹಣಮಂತರಾವ ಕೌಜಲಗಿ, ಸದಾಶಿವರಾವ ಕಾರ್ನಾಡ ಮೊದಲಾದ ಕರ್ನಾಟಕದ ಮುಖಂಡರು ತಾ|| ೨೩ ನೆಯ ದಿವಸ ಬೆಳಗಾವಿ ಪುಣೆಯಿಂದ ಕರಾಚಿಗಾಗಿ ಪ್ರಯಾಣ ಬೆಳೆಸಿ...

ಕೈದಿಯು ಗಚ್ಚ ಹೊಡೆದನು

ಜೇಲ ಸುಪರಿಂಟೆಂಡೆಂಟರ ಮನೆಯಲ್ಲಿ ಕಳವು

ವಿಜಾಪುರದ ಜೇಲಿನಲ್ಲಿ ತನ್ನ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶೇಖ ಅಲ್ಲಿ ಎಂಬ ಒಬ್ಬ ಕೈದಿಯು, ತಾ|| ೨೨ ನೆಯ ದಿವಸ ಅಧಿಕಾರಿಗಳ ಕಣ್ಣಿಗೆ ಮಣ್ಣು ಹಾಕಿ ಜೇಲ ಸುಪರಿಂಟೆಂಡೆಂಟರ ಮನೆಯೊಳಗಿನ ಬೆಲೆಯುಳ್ಳ ಆಭರಣ ಮತ್ತು ವಸ್ತ್ರಗಳನ್ನು ಕಳವು ಮಾಡಿಕೊಂಡು ಗಚ್ಚ ಹೊಡೆದಿದ್ದಾನೆ. ಪೋಲೀಸರು ಆತನನ್ನು ಪತ್ತೆ ಹಚ್ಚುವದರಲ್ಲಿ ತೊಡಗಿದ್ದಾರೆ.

ಜಪ್ತ ಮಾಡಿದ ಆಸ್ತಿಯನ್ನು ತಿರುಗಿ ಕೊಟ್ಟರು

ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯಿದೆಯ ಅನ್ವಯ ಜಪ್ತ ಮಾಡಿದ ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಟ್ಟಡ ಹಾಗು ಅದಕ್ಕೆ ಸಂಬಂಧಿಸಿದ ಜಂಗಮ ಆಸ್ತಿ ಇವುಗಳನ್ನು ತಾ|| ೨೩ ನೆಯ ದಿವಸ ಒಪ್ಪಂದದ ಕರಾರಿಗನುಸರಿಸಿ ಸರಕಾರದವರು ಕಾಂಗ್ರೆಸ್ ಅಧಿಕಾರಿಗಳಿಗೆ ತಿರುಗಿ ಒಪ್ಪಿಸಿದರು. ಕಾಂಗ್ರೆಸ್ ಅಧಿಕಾರಿಗಳು ಅಂದು ಸಂಜೆಯಲ್ಲಿ ರಾಷ್ಟ್ರಧ್ವಜದ ಪ್ರಚಂಡ ಮೆರವಣಿಗೆ ಹೊರಡಿಸಿ, ಕಟ್ಟಡಕ್ಕೆ ಸಾಗಿ ಹೋಗಿ, ಅನಾವರಣ ಸಮಾರಂಭವನ್ನು ನೆರವೇರಿಸಿದರು.

ಸಂಯುಕ್ತ ಪ್ರಾಂತದಲ್ಲಿ

ಲಾಠೀಠಾಜ್ಯ

ಮುಂಜಾನಪುರದ ಜಮೀನದಾರರಾದ ಅಬ್ದುಲ್ ಕಾದರರ ಅನುಯಾಯಿಗಳು ಹಾಗು ದಾಡೂಲಿಯೆಂಬ ಹಳ್ಳಿಯ ರೈತರು ಇವರಲ್ಲಿ ಜಗಳವೆದ್ದು, ಆ ಜಗಳದಲ್ಲಿ ಅಬ್ದುಲ್ ಕಾದರರ ಅನುಯಾಯಿಗಳಲ್ಲಿ ಒಬ್ಬನು ಕೊಲ್ಲಲ್ಪಟ್ಟಿದ್ದು, ಇಬ್ಬರು ಗಾಯಹೊಂದಿದ್ದಾರೆ. ಕೆಲವು ರೈತರು ಸಿತಾಲ ಪ್ರಸಾದರ ಆಳುಗಳ ಮನೆಗೆ ಮುತ್ತಿಗೆ ಹಾಕಿ ಜಮೀನದಾರರ ಮನೆಗೆ ಹೋಗಲು ಅವರಿಗೆ ಪ್ರತಿಬಂಧ ಮಾಡಿದರೆಂದೂ ಪೋಲೀಸರು ಲಾಠಿಗಳಿಂದ ಅವರನ್ನು ಚದುರಿಸಿದರೆಂದೂ ತಿಳಿದು ಬರುತ್ತದೆ.

ಲಾಹೋರದಲ್ಲಿ

ಶ್ರೀ ಭಗತಸಿಂಗರ ಸ್ಮಾರಕ

ಶ್ರೀ ಭಗತಸಿಂಗ, ರಾಜಗುರು, ಸುಖದೇವ ಇವರನ್ನು ಗಲ್ಲಿಗೇರಿಸಿದ್ದರ ನಿಷೇಧಾರ್ಥವಾಗಿ ಲಾಹೋರದಲ್ಲಿ ತಾ|| ೨೩ ನೆಯ ದಿವಸ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಜನರೆಲ್ಲರೂ ಬೊಕ್ಕನೆತ್ತಿಯಿಂದಲೆ ಬೀದಿ ಬೀದಿಗಳಲ್ಲಿ ತಿರುಗುತ್ತಿದ್ದರು. ಕಠಿಣ ಪ್ರಸಂಗವು ಬಂದಲ್ಲಿ ಉಪಯೋಗಬೇಕಾದೀತೆಂಬ ಉದ್ದೇಶದಿಂದ ಅಲ್ಲಲ್ಲಿ ಸೈನಿಕರು ಸಜ್ಜಾಗಿ ಇಡಲ್ಪಟ್ಟಿದ್ದರು. ವಿಮಾನಗಳು ಪಟ್ಟಣದಮೇಲೆ ಸಂಚರಿಸುತ್ತಿದ್ದವು. ಪ್ರತಿಯೊಂದು ಬೀದಿಯಲ್ಲಿ ಸಶಸ್ತ್ರ ಪೋಲೀಸರು ಸಜ್ಜಾಗಿ ನಿಂತು ಕೊಂಡಿದ್ದರು.

ನವಜವಾನ ಭಾರತ ಸಭೆಯವರು ದುಃಖ ಪ್ರದರ್ಶಕ ಸಭೆ ಸೇರಿಸಿಕೊಂಡು, ದುಃಖ ಪ್ರದರ್ಶನ ಮಾಡಿ, ಹುತಾತ್ಮರ ಸ್ಮಾರಕವನ್ನೇರ್ಪಡಿಸುವದಾಗಿ ಠರಾವು ಮಾಡಿ ಕೊಂಡರು.

ತಾ|| ೨೪ ನೆಯ ದಿವಸ ಶ್ರೀ ಭಗತಸಿಂಗರ ಮೆರವಣಿಗೆಗಳು ಹೊರಟಿದ್ದವು. ಆ ದಿವಸ ಸಂಜೆಯಲ್ಲಿ ಮತ್ತೊಂದು ಪ್ರಚಂಡ ಸಭೆಯು ಜರುಗತಕ್ಕದ್ದಿದೆ. ಪ್ರೈಕರ ಜನ ದೇಹಗಳನ್ನು ಅವರವರ ಆಪ್ತರಿಗೆ ಒಪ್ಪಿಸದ್ದಕ್ಕಾಗಿ ಪಟ್ಟಣದಲ್ಲೆಲ್ಲ ವಿಶೇಷ ಕ್ಷೋಭೆ ಯುಂಟಾಗಿದೆ.

ಗು ಜ ರಾ ಥ ದ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಗಂಗಾಧರರಾವ ದೇಶಿ, ನಿಜಲಿಂಗಪ್ಪ ನಿಡಗುಂದಿ ಇವರು ತಾ|| ೨೨ ನೆಯ ದಿವಸ ಸುಳೇಭಾವಿಯಿಂದ ಕರಾಚಿಗೆ ಪ್ರಯಾಣ ಬೆಳೆಸಿದರು.

ಬೆಳಗಾವಿಯಲ್ಲಿ ಅಭೂತಪೂರ್ವ ಹರತಾಳ

(ಕಂಠಿಯ ವಾರ್ತೆ, ತಾ|| ೨೬)

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದರ ನಿಷೇಧಾರ್ಥವಾಗಿ ನಿನ್ನಿನ ದಿನಸ ಬೆಳಗಾವಿ ಹಾಗು ಶಹಾಪೂರಗಳಲ್ಲಿ ಅಭೂತಪೂರ್ವವಾದ ಹರತಾಳವು ಆಚರಿಸಲ್ಪಟ್ಟಿತು. ಬೊಕ್ಕನೆತ್ತಿಯ ಪ್ರಚಂಡ ಮೆರವಣಿಗೆಯು ಹೊರಟು, ಅದು ಊರಲ್ಲೆಲ್ಲ ಸುತ್ತಿ ಬಂದಿತು. ಸಂಜೆಯಲ್ಲಿ ಸಾರ್ವಜನಿಕ ಸಭೆ ನೆರೆದು, ಸ್ವಾತಂತ್ರ್ಯ ವೀರರನ್ನು ಗಲ್ಲಿಗೇರಿಸಿದ ಸರಕಾರದ ಕೃತಿಯನ್ನು ನಿಷೇಧಿಸುವದರಲ್ಲಿ ಬಂದು, ಮಹಾತ್ಮರಲ್ಲಿ ಸಂಪೂರ್ಣ ವಿಶ್ವಾಸವಿದೆಯೆಂಬುದನ್ನು ವ್ಯಕ್ತಪಡಿಸಲಾಯಿತು.

ದೇ. ಭ. ಗಂಗಾಧರರಾವ ದೇಶಪಾಂಡೆ, ಹಣಮಂತರಾವ ಕೌಜಲಗಿ, ಬಳವಂತರಾವ ದಾತಾರ ಮೊದಲಾದ ೨೧ ಜನ ಪ್ರತಿನಿಧಿಗಳು ಇಲ್ಲಿಂದ ಕರಾಚಿ ಕಾಂಗ್ರೆಸಕ್ಕೆ ಪ್ರಯಾಣ ಬೆಳೆಸಿದರು.

ಧಾರವಾಡದಲ್ಲಿ ಪ್ರಚಂಡ ಹರತಾಳ.

(ಕಂಠಿಯ ವಾರ್ತೆ ತಾ ೨೬)

ಶ್ರೀ ಭಗತಸಿಂಗ, ರಾಜಗುರು, ಸುಖದೇವ ಇವರನು ಗಲ್ಲಿಗೇರಿಸಿದ ದುಃಖದಾಯಕ ಸುದ್ದಿಯು ತಾರೀಖು ೨೪ ನೆಯ ದಿವಸ ಸಂಜೆಗೆ ಇಲ್ಲಿಗೆ ತಿಳಿದು ಬಂದೀತು ನಿನ್ನಿನ ದಿವಸ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಹಾಯಸ್ಕೂಲ ವಿದ್ಯಾರ್ಥಿಗಳು, ಶಾಲೆಗಳಿಗೆ ಹೋಗದೇ ಹರತಾಳ ಪಾಲಿಸಿದರು ಮಧ್ಯಾನ್ಹದಲ್ಲಿ ತರುಣರು ಬೊಕ್ಕನೆತ್ತಿಯ ಪ್ರಚಂಡ ಮೆರವಣಿಗೆ ಹೊರಡಿಸಿ, ಭಗತಸಿಂಗ ಜಿಂದಾ ಬಾದ ಎಂಬುದಾಗಿ ಗಟ್ಟಿಯಾಗಿ ಕೂಗುತ್ತ ಊರಲ್ಲೆಲ್ಲ ಸಂಚರಿಸಿದರು. ಸಂಜೆಯ ೬-೩೦ ಗಂಟೆಗೆ ಶ್ರೀ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ದುಃಖಪ್ರದರ್ಶಕ ಸಭೆಸೇರಿ, ಶ್ರೀ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ಬಗ್ಗೆ ದುಃಖ ವ್ಯಕ್ತಪಡಿಸುವದರಲ್ಲಿ ಬಂದು, ಕಾಂಗ್ರೆಸದವರು ಹಾಕಿಕೊಟ್ಟ ಕಾರ್ಯಕ್ರಮಗಳನ್ನು ಪಾಲಿಸಿ ಸ್ವರಾಜ್ಯವನು ಸಂಪಾದಿಸಬೇಕಾಗಿ ಸಭಿಕರಿಗೆ ಕೇಳಿಕೊಳ್ಳಲಾಯಿತು. ಶ್ರೀ ಕಬ್ಬೂರ ವಕೀಲರು, ಶ್ರೀ ಭಗತಸಿಂಗ ಮೊದಲಾದವರ ಖಟ್ಲೆಯಲ್ಲಿ ಕಂಡು ಬಂದ ಅನ್ಯಾಯವನ್ನು ಸಭಿಕರಿಗೆ ವಿವರಿಸಿ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬ್ರಿಟಿಶ ಬಟ್ಟೆ ಹಾಗು ಔಷಧಗಳಿಗೆ ಬಹಿಷ್ಕಾರ ಹಾಕಲು ಜನರಿಗೆ ಬೇಡಿಕೊಂಡರು.

ಕರ್ನಾಟಕದಲ್ಲಿ ಜಪ್ತಿಯ ಹಾವಳಿ.

ಸಿದ್ದಾಪುರ ತಾಲೂಕದ ರೈತರು ಆರ್ಥಿಕ ಹೀನ ಸ್ಥಿತಿಯ ಮೂಲಕವಾಗಿ ಭೂಕಂದಾಯವನ್ನು ಕೊಡಲು ಅಸಮರ್ಥರಾಗಿರುವರು ಅಧಿಕಾರಿಗಳು ಇತ್ತ ಲಕ್ಷಕೊಡದೆ ಅವರ ಮೇಲೆ ಜುಲುಮೆಯನ್ನುಪಯೋಗಿಸಿ ಅವರ ಆಸ್ತಿಪಾಸ್ತಿಗಳನ್ನು ಜಪ್ತಮಾಡಹತ್ತಿದ್ದಾರೆ ಈಗಾಗಲೆ, ೧ ಕಡೆಗೆ ಆಸ್ತಿಗಳು ಜಪ್ತಮಾಡಲ್ಪಟ್ಟಿದ್ದು, ಅವುಗಳ ಲಿಲಾವಾದರೂ ನಡೆದಿದೆ. ೧೮ ನೆಯ ತಾರೀಖಿಗೆ ಲಿಲಾವು ನಡೆದ ವೇಳೆಯಲ್ಲಿ ಸ್ವಯಂಸೇವಕರು ಪಿಕೆಟಿಂಗ ಮಾಡಿದರು. ಸರಕಾರಿ ಅಧಿಕಾರಿಗಳು ಕೆಲವನ್ನು ಲಿಲಾವಿನಲ್ಲಿ ಕೊಂಡುಕೊಂಡಿರುವರು. ಐದು ಜನ ಸರ್ಕಲ್ ಇನಸ್ಪೆಕ್ಟರರೂ, ೨೦ ಜನ ಸಶಸ್ತ್ರ ಪೋಲೀಸರೂ ಅಲ್ಲಿ ತಳವೂರಿದ್ದಾರೆ.

ಅಬ್ದುಲ್ ಗಫೂರರನ್ನು

ತೋಫಿನ ಬಾಯಿಗೆ ಕೊಟ್ಟರು.

ಬಚ್ಚಾಸಾಕೂ ಪಕ್ಷದ ಸೇನಾಪತಿಗಳಾದ ಅಬ್ದುಲ್ ಗಫೂರರವರು ನಾದಿರಶಹಾರವರ ಆಜ್ಞೆಗನುಸರಿಸಿ ಕಾಬೂಲದಲ್ಲಿ ತೋಫಿನ ಬಾಯಿಗೆ ಕೊಡಲ್ಪಟ್ಟರು. ಬಚ್ಚಾಸಾಕೂರವರ ಆಳಿಕೆಯಲ್ಲಿ ಇವರು ಜನರನ್ನು ಪರಿಪರಿಯಾಗಿ ಪೀಡಿಸಿದ್ದರು

ಮುಸಲ್ಮಾನ ಮುಖಂಡರಿಗೆ ಕಾಂಗ್ರೆಸದ ಆಮಂತ್ರಣ

ಕರಾಚಿ ಕಾಂಗ್ರೆಸದ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ಸರ್ ಅಬ್ದುರ್ ರಹೀಮ, ಸರ್ ಅಬ್ದುಲ್‌ಕೈಯೂಮ ಮೊದಲಾದ ಮುಸಲ್ಮಾನ ಮುಖಂಡರಿಗೆ ಕಾಂಗ್ರೆಸಕ್ಕೆ ಬಂದು ಅದರಲ್ಲಿ ಭಾಗತೆಗೆದುಕೊಳ್ಳಲು ಆಮಂತ್ರಣ ಕೊಟ್ಟಿದ್ದಾರೆ.

"ಸೇನಾಖಾತೆಯು ಎಂದೂ ತಪ್ಪು ಮಾಡುವದಿಲ್ಲ!"

ಮಹಾ ಯುದ್ಧದಲ್ಲಿ ಫ್ರಾನ್ಸದ ಓರ್ವ ಸೈನಿಕನು ಎಲ್ಲಿ ಹೋದನೆಂಬ ಪತ್ತೆ ಅನೇಕ ದಿನಗಳವರೆಗೆ ಆಗಲಿಲ್ಲ. ಆದ್ದರಿಂದ ಅವನು ಸತ್ತನೆಂದು ಲಷ್ಕರೀ ಖಾತೆಯವರು ಪ್ರಸಿದ್ಧ ಮಾಡಿದರು. ಅವನ ಹಳ್ಳಿಯಲ್ಲಿ ಎಲ್ಲರೂ ಮರೆತರು. ಅವನ ಅಲ್ಪ ಸ್ವಲ್ಪ ಆಸ್ತಿಗೆ ಅವನ ಅಣ್ಣನ ಮಗನು ಬಾಧ್ಯಸ್ಥನಾಗಿದ್ದರಿಂದ ಖಬರದಾರನಾದನು. ಯುದ್ಧವು ನಿಂತಿತು. ರಣಕ್ಷೇತ್ರದಿಂದ ಸೈನಿಕನು ತನ್ನೂರಿಗೆ ಬಂದ. ಆದರೆ "ನೀನು ಸತ್ತಿರುವಿ! ಈಗೆಲ್ಲಿಂದ ಬಂದೆ? ನಡೆ" ಎಂದು ಎಲ್ಲರೂ ಹೊರಗೆ ಅಟ್ಟಿದರು. ಸೇನಾಖಾತೆಯವರಿಗೆ ಅಪೀಲು ಮಾಡಿದನು. "ಸೇನಾಖಾತೆಯವರು ಎಂದೂ ತಪ್ಪು ಮಾಡುವದಿಲ್ಲ" ಎಂಬ ಉತ್ತರ ಬಂದಿತು! ಪಾಪ ಬಡವನು ಕೂಲಿ ಮಾಡಿ ಹೊಟ್ಟೆತುಂಬಿಕೊಳ್ಳಲು ಪರವೂರಿಗೆ ಹೋದನು!!

ಇಹವೃತ್ತ.

ಸರದಾರ ಭಗತಸಿಂಗ, ರಾಜಗುರು, ಸುಖದೇವ ಇವರನ್ನು ಸರಕಾರದವರು ಗಲ್ಲಿಗೇರಿಸಿದ್ದರ ನಿಷೇಧಾರ್ಥವಾಗಿ ನಿನ್ನಿನ ದಿವಸ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಜವಳಿ, ಸ್ಟೇಶನರಿ ಮೊದಲಾದ ಅಂಗಡಿಯವರು ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಸಂಜೆಯ ೭ ಗಂಟೆಗೆ ಲಾಲಾ ಚೌಕಿನಲ್ಲಿ ಶ್ರೀ ಗುರುರಾವ ಮುದಗಲ್ಲ ಇವರ ಅಧ್ಯಕ್ಷತೆಯ ಕೆಳಗೆ ದುಃಖಪ್ರದರ್ಶಕ ಸಭೆಸೇರಿ ಶ್ರೀ ಸ ಗ. ನೇಂದ್ರ, ಸ್ವಾಮಿ ಆನಂದ ಮೊದಲಾದವರ ಭಾಷಣಗಳಾದವು. ಕೊನೆಯಲ್ಲಿ ಶ್ರೀ ಭಗತಸಿಂಗ, ರಾಜಗುರು, ಸುಖದೇವ ಇವರನ್ನು ಸರಕಾರದವರು ಅನ್ಯಾಯದಿಂದ ಗಲ್ಲಿಗೇರಿಸಿದ್ದಕ್ಕಾಗಿ ಈ ಸಭೆಯು ತನ್ನ ದುಃಖವನ್ನು ವ್ಯಕ್ತಪಡಿಸಿ, ಅವರ ಪುಣ್ಯಕೃತ ಆತ್ಮ ಸ್ವರಾಜ್ಯಸ್ಥಾಪನೆಗೆ ಕಾರಣವಾಗಲೆಂದು ಈ ಸಭೆಯು ಈಶ್ವರನನ್ನು ಪ್ರಾರ್ಥಿಸುತ್ತದೆ ಎಂಬ ಗೊತ್ತು ಸ್ವೀಕೃತವಾಯಿತು

ಶ್ರೀಮತಿ ಯಮುನಾಬಾಯಿ ಕಣಬೂರರವರು ನಿಧನಹೊಂದಿದ ಬಗ್ಗೆ ಇಲ್ಲಿಯ ಭಗಿನಿ ಸಮಾಜದವರು ಶ್ರೀ. ಪದಕಿಯವರ ಮನೆಯಲ್ಲಿ ಶ್ರೀಮತಿ ತಾಯಿಬಾಯಿ ಪಾತಾರದವರ ಅಧ್ಯಕ್ಷತೆಯಲ್ಲಿ ದುಃಖಪ್ರದರ್ಶಕ ಸಭೆ ಸೇರಿಸಿಕೊಂಡು ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಶ್ರೀಮತಿ ಸೋಮಕೂಬಾಯಿ ಪರ್ವತಿ, ಶ್ರೀಮತಿ ಲಕ್ಷ್ಮೀಬಾಯಿ ಪದಕಿ ಮೊದಲಾದವರ ಭಾಷಣಗಳಾದವು

ಕನ್ನಡಿಗ.

ಕನ್ನಡಿಗ ಚೈತ್ರ ಶುದ್ಧ ೯ ಶಕೆ ೧೮೫೩

[illegible]

ಮುದುಕಿಯ ಪುರಾಣ

ಮುಂಬಯಿ ಟಾಯಿಮ್ಸ್ ಪತ್ರವು ೨೫ ನೇಯ ತಾರೀಖಿನ ದಿವಸ ಭಗತಸಿಂಗ ಮೊದಲಾದವರ ವಿಷಯಕ್ಕೆ ಒಂದು ಅಗ್ರಲೇಖವನ್ನು ಬರೆದಿರುವರು. ಇವರನ್ನು ಗಲ್ಲಿಗೆ ಹಾಕಿದ ಸಂಗತಿಯು ನ್ಯಾಯಯುಕ್ತವೆಂತಲೂ, ಯಥಾಯೋಗ್ಯವೆಂತಲೂ ಅದರಲ್ಲಿ ಅಂದಿರುವದು. ಭಾರತೀಯರೆಲ್ಲರೂ ಏಕಕಂಠದಿಂದ "ಇವರನ್ನು ಗಲ್ಲಿಗೆ ಹಾಕಿದುದು ಉಚ್ಚ ನ್ಯಾಯತತ್ವಗಳಿಗೆ ವಿರುದ್ಧವಾಗಿರುವದೆಂತಲೂ ಇವರನ್ನು ಗಲ್ಲಿಗೆ ಹಾಕದೆ ಕರಿನೀರಿಗೆ ಕಳುಹಿದರೆ ನ್ಯಾಯವಾಗುತ್ತಿತ್ತೆಂತಲೂ" ಕೂಗುತ್ತಿರುವಾಗ ಈ ಮುಂಬಯಿಯ ಮುದುಕಿಯು (ಟಾಯಿಮ್ಸ್ ಪತ್ರವು) ಬೋರಿಬಂದರದಲ್ಲಿ ಕೂತು ಗುಣುಗಟ್ಟುತ್ತಿರುವಳು. 'ನಗಾರಿಯ ಸಪ್ಪಳದ ಮುಂದೆ ಪುದಲಿಯ ಸಪ್ಪಳವನ್ನು ಕೇಳುವವರಾರು' ಎಂಬಂತೆ ಭಾರತೀಯರ ಉಚ್ಚ ಸ್ವರದ ಕೂಗಿನ ಮುಂದೆ ಮುದುಕಿಯ ಈ ಗುಣುಗುಣು ಶಬ್ದವನ್ನು ಯಾರು ಕೇಳುವರು? ಮುದುಕಿಯು ಆಂಗ್ಲ ನ್ಯಾಯದ ಪುರಾಣವನ್ನೇ ಹೇಳುವಳು. ಇವಳ ಪುರಾಣಕ್ಕೆ ಪಾಪ ಒಬ್ಬರಾದರೂ ಒಂದು ಮುಷ್ಟಿ ಅಕ್ಕಿಯನ್ನು ಸಹ ನೀಡರು. ಹಿಂದೀಯರಿಗೆ ಗಂಟಲಗಾಣವಾಗುವಂಥ ಇಂಥ ಕಾಯದೆಯ ಪುರಾಣವನ್ನು ಹೇಳುವವರು ಬಹಳ ಮಂದಿ. ಆದರೆ ಸಾಹೇಬರು ಮಾತ್ರ ಕಾಯದೆಯ ಕೈಯಲ್ಲಿ ಸಿಕ್ಕು ಗಲ್ಲು ಅಥವಾ ಕರಿನೀರಿನ ಶಿಕ್ಷೆಗೆ ಗುರಿಯಾದಾಗ ಮಾತ್ರ ಹಿಂದೀಯರಿಗೆ ಹೇಳುವ ಈ ಪುರಾಣವನ್ನು ಕಟ್ಟಿಟ್ಟು ಸಾಹೇಬರಿಗೆ ಅನುಕೂಲವಾಗುವಂತೆ ಒಂದು ಹೊಸ 'ಅನುಕೂಲ ಸಿಂಧು' ವನ್ನೇ ರಚಿಸಿ ಸಾಹೇಬರನ್ನು ಉಳಿಸಿಕೊಳ್ಳುವರು. 'ಆಚಾರ ಹೇಳುವದು ಬದನೀಕಾಯಿ ತಿನ್ನುವದು' ಎಂಬಂತೆ ಸಾಹೇಬರ ಸ್ವಭಾವವೇ ಆಗಿಬಿಟ್ಟಿದೆ. ಭಗತಸಿಂಗರು ದೋಷಿಗಳೆಂದು ದೂರುವಾಗ ಮಾತ್ರ ನ್ಯಾಯತತ್ವಗಳ ಪುರಾಣವನ್ನು ಹೇಳುವ ಈ ಮುದುಕಿಯ ಪುರಾಣಕ್ಕೆ ಮರುಳಾಗುವಷ್ಟು ಭಾರತೀಯ ಮುತ್ಸದ್ದಿಗಳು ಮೂಢರಿಲ್ಲ 'ಹಾರುವ ಹಕ್ಕಿಯ ಪುಚ್ಚಗಳನ್ನು' ಸಹ ಎಣಿಸಬಲ್ಲಷ್ಟು ಭಾರತೀಯ ಮುಂದಾಳುಗಳು ಧೂರ್ತರೂ ದೂರದರ್ಶಿಗಳೂ ಆಗಿರುವರು. ಜಗತ್ತಿನಲ್ಲಿಯ ಎಲ್ಲ ನ್ಯಾಯತತ್ವಗಳನ್ನು ಚನ್ನಾಗಿ ಮನದಟ್ಟು ಮಾಡಿಕೊಂಡಂಥ ಎಷ್ಟೋ ನ್ಯಾಯ ಶಿರೋಮಣಿಗಳು (ಬ್ಯಾರಿಸ್ಟರ) ಸಹ ಭಗತಸಿಂಗರ ಗಲ್ಲಿನ ವಿಷಯದಲ್ಲಿ ಸಾಹೇಬರ ವಿರುದ್ಧ ಅಭಿಪ್ರಾಯವನ್ನು ಕೊಟ್ಟಿರುವರು. ಪಾಪ! ಮುದುಕಿಗೇನು ಗೊತ್ತು! ತನ್ನ ಪುರಾಣವನ್ನು ಮಾತ್ರ ತಾನು ಹೇಳಬಿಟ್ಟಿತು.

"ಸ್ವರಾಜ್ಯವು ಸಮೀಪಿಸಿದೆ"

ಇನ್ನು ತುಸು ದಿವಸಗಳಲ್ಲಿಯೇ ಕಾಂಗ್ರೆಸು ಕೂಡುವದು. ಅನಿತರಲ್ಲಿ ಒಡೆದು ಹೋದ ಸಂಸ್ಥೆಗಳು ಸಂಘಟಿತವಾಗುವದು ಕ್ವಚಿತ್ಸಂಭವನೀಯ. ಬಿಡುಗಡೆ ಹೊಂದಿದ ಸೆರೆಯಾಳುಗಳೇ ಬಹುಸಂಖ್ಯಾಕರಾಗಿರುವ ಪ್ರತಿನಿಧಿಗಳಿಗೆ ತಮ್ಮ ಗಂಟು ಮೂಟೆಗಳನ್ನೆಲ್ಲ ಕಟ್ಟಿಕೊಳ್ಳಲು ಸವಡು ಸಿಗದು. ಹೀಗಿದ್ದರೂ ಅಪೂರ್ವವಾದ ದರ್ಪದಿಂದ ತೇಜಸ್ಸಿನಿಂದ ಈ ಸಲದ ಕಾಂಗ್ರೆಸ್ಸು ಕೂಡುವದು. ಲಕ್ಷಗಟ್ಟಲೆ ಸ್ತ್ರೀ ಪುರುಷರ, ಅಬಾಲವೃದ್ಧರ, ಹಿರಿಕಿರಿಯರ ಯಾತನಾ ಜನ್ಯವಾದ ಸಾಮರ್ಥ್ಯದ ಪ್ರಜ್ಞೆಯಿಂದೊಡಗೂಡಿದ ಇತಿಹಾಸ ಪ್ರಸಿದ್ಧವಾಗುವ ಅಧಿವೇಶನವಿದು. ಯಾತನೆಗಳನ್ನನುಭವಿಸಿದವರು ಯಾವದೇ ತರದ ಪ್ರತಿಕಾರ ಬುದ್ಧಿಗೆ ಎಡಗೊಡದೆ ಕಷ್ಟಗಳನ್ನು ಸಹಿಸಿದರೆಂಬ ಒಂದೇ ಒಂದು ಮಾತಿನಿಂದ ನಮ್ಮೀ ಯಾತನೆಯು ಇತಿಹಾಸದಲ್ಲಿ ಅಭೂತ ಪೂರ್ವವಾದುದು.

ಆದರೆ ನಾವು ಸಹಿಸಿದ ಯಾತನೆಗಳನ್ನು ಧ್ಯಾನಿಸುತ್ತಾ, ಗೂಡ ಕಟ್ಟಿಕೊಂಡು ಕೂಡ್ರುವದಾಗಲೀ ಅವುಗಳನ್ನು ಅತಿಶಯೋಕ್ತಿ ಮಾಡುವದಾಗಲೀ, ಗರ್ವದಿಂದ ಬಿನ್ನನೆ ಬಿಗಿಯುವದಾಗಲೀ ಅನುಚಿತವಾದುದು. ನಾವು ಸಹಿಸುವ ಯಾತನೆಗಳ ಪ್ರಜ್ಞೆಯಿರದೆ ಸಹಿಸಿದ ಯಾತನೆಯೇ ನಿಜವಾದ ಯಾತನೆಯು. ನಿಜವಾದ ಯಾತನೆಯೇ ಎಂದೂ ಎಣಿಕೆ ಹಾಕುವದಿಲ್ಲ. ಯಾತನೆಯಿದೊಂದು ವಿಧದ ಆನಂದವು ಉದ್ಭವಿಸುತ್ತದೆ. ಈ ಆನಂದವು ಎಲ್ಲ ಆನಂದಗಳಿಗೂ ಮಿಗಿಲಾದುದು ಆದ್ದರಿಂದ ಕಳೆದ ಹನ್ನೆರಡು ತಿಂಗಳುಗಳಲ್ಲಿ ಕಳೆದುಕೊಂಡ ಮೂಲಧನದಿಂದಲೇ ಉಪಜೀವಿಸ ಹತ್ತಿದರೆ ನಮ್ಮ ಆತ್ಮಘಾತವೇ ಆಗುವದು ಅನವಶ್ಯಕವಾದ ಯಾತನಾ ಪ್ರಸಂಗಗಳನ್ನು ತಪ್ಪಿಸಲು ಹೋಗುತ್ತಿರುವಾಗ ಪ್ರಸಂಗ ಬಂದರೆ ಕಷ್ಟಗಳನ್ನು ಸಹಿಸಲು ಸಿದ್ಧರೂ ಆಗಬೇಕು ಏನೇ ಇನು ಸರಿಯಾದ ದಾರಿಯಿಂದ ಸಾಗಿ ಹೋಗುವವರಿಗೆ ಯಾತನೆಗಳನ್ನು ಅನುಭವಿಸುವ ಪಣೆಬರಹವು ತಪ್ಪುವದಿಲ್ಲ ಸ್ವದೇಶಾಭಿಮಾನಿಯ, ಸುಧಾರಕನ, ಸತ್ಯಾಗ್ರಹಿಯ ಜನ್ಮಸಿದ್ಧವಾದ ಹಕ್ಕೇ ಅದು.

ಈಶಪ್ರಸಾದವೇ ಈ ಸಂಧಿ ಸವು

ಸದ್ಯದ ಸಮರವಿರಾಮವು ತಾತ್ಪೂರ್ತಿಕವಾಗಿದ್ದರೂ ಈಶಪ್ರಸಾದವೇ ಆಗಿದೆ. ಸಂಧಾನದ ಸಮಯದಲ್ಲಿ ಸಂಧಾನವು ಮುರಿದು ಹೋಗುವ ಲಕ್ಷಣಗಳು ಬಹಳವಾಗಿದ್ದವು. ಗೌರವವಾದ ಸಂಧಿಯು ಅಸಾಧ್ಯವಾಗಿದ್ದರೆ ರಾಷ್ಟ್ರಕ್ಕೆ ದಬ್ಬಾಳಿಕೆಗೆ ತಲೆಗೊಡಲು ಹೇಳುವ ಪ್ರಸಂಗವು ನನಗೆ ಬರುತ್ತಿತ್ತು. ಆದರೆ ಇವಕ್ಕಿಂತಲು ಕಠಿಣ, ವಿಶಾಲವಾದ, ಕಟುತರವಾದ ಕಷ್ಟಗಳನ್ನು ಸಹಿಸಿದ ಕುರಿತು ನಮ್ಮ ಗುರಿಯು ದೊರೆತಿಲ್ಲೆಂದು ಆಶ್ವಾಸನ ಪೂರ್ವಕ ಹೇಳುವ ಧೈರ್ಯವು ನನಗಿಲ್ಲ. ನಾನು ದೊರಕಿಸಬೇಕಾದ ಪಾರಿತೋಷಕದ ದೃಷ್ಟಿಯಿಂದ ನಮ್ಮೀ ಆತ್ಮ ಪೂರ್ತಿಯು ಕಡಿಮೆಯೇ. ಪ್ರಜ್ಞಾಪೂರ್ವಕವೂ ರಾಷ್ಟ್ರೀಯತ್ವ ದೃಷ್ಟಿಯಿಂದಲೂ ನಾವು ನಮ್ಮಲ್ಲಿರುವ ಅಸ್ಪೃಶ್ಯತಯ ಕೊಳೆಯನ್ನು ತೊಡೆದು ಹಾಕಿಲ್ಲ. ಪರಸ್ಪರ ಅವಿಶ್ವಾಸವನ್ನು ಅನ್ಯೋನ್ಯ ಭೀತಿಯನ್ನೂ ನಾವು ತ್ಯಜಿಸಿಲ್ಲ. ಬಲ್ಲದರಲ್ಲಿಯೂ ಪ್ರಚಂಡ ಜಾಗೃತಿಯಾಗಿದ್ದರೂ ಬಡವರ ಕೈಯಲ್ಲಿ ಕೈ ಹಾಕಿ ನಡೆಯಲು ಇನ್ನೂ ಕಲಿತಿಲ್ಲ ಅವರ ಜೀವನಕ್ಕೂ ಬಡತನ ಜೀವನಕ್ಕೂ ಯಾವ ಹೋಲಿಕೆಯೂ ಉಳಿದಿಲ್ಲ ಕುಡಿತದ ಅನರ್ಥದ ವಿಷಯವಾಗಿ ಪ್ರಗತಿಯಾಗಿದ್ದರೂ ಇನ್ನೂ ಮಾಡತಕ್ಕ ಕಾರ್ಯವು ಬಹಳವಿದೆ ಕುರು

ಮಹಾತ್ಮರಿಗೆ "ಕೆಂಪು ಅಂಗಿ" ಯವರು ತಿರುಗಿ ಹೋಗಲು ಹೇಳಿದರು

(ಕರಾಚಿ ತಾ॥ ೨೫)

ಮಹಾತ್ಮಾ ಗಾಂಧಿ, ಪಂಡಿತ ಜವಾಹಿರಲಾಲ ನೆಹರೂ, ಸರದಾರ ವಲ್ಲಭಭಾಯಿ ಇವರು ಇವತ್ತಿನ ದಿವಸ ಮುಂಜಾನೆ ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ಮಿಸ್ ಸ್ಲೇಡ, ಪಂಡಿತ ಮಾಲವೀಯಾ, ಮೌಲಾನಾ ಅಬ್ದುಲ್ ಕಲಮ್ ಆಜಾದ್, ಡಾ॥ ಅನ್ಸಾರಿ, ಡಾ॥ ಸಯ್ಯದ ಅಹಮ್ಮದ, ಶ್ರೀ ಜಮನಾಲಾಲ ಬಜಾಜ, ಶ್ರೀ ರಾಜಗೋಪಾಲಾಚಾರ, ಪಟ್ಟಾಭಿ ಸೀತಾರಾಮಯ್ಯ, ಮಹದೇವಭಾಯಿ ದೇಸಾಯಿ, ಪಂಡಿತ [illegible] ಮಾಲವೀಯಾ, ದೇವಿದಾಸ ಗಾಂಧಿ [illegible] ಇವರೊಂದಿಗೆ ಕರಾಚಿ [illegible]. ಇಲ್ಲಿಗೆ ಬಂದರು, [illegible] ಪ್ರತಿಯೊಂದು ಸ್ಟೇಶನದಲ್ಲಿ ನೂರು ಜನರು ಅವರ [illegible] ಅವರ ದರ್ಶನ [illegible]. [illegible] ಸ್ಟೇಶನದಲ್ಲಿ ಒಬ್ಬನು ಗಾಡಿಯಿಂದ ಕೆಳಗೆ ಬಿದ್ದ, ತನ್ನ ಕಾಲನ್ನು ಮುರಿದುಕೊಂಡನು. ಅವನ ಕಾಲಿಗೆ [illegible] ಅನಕಾರಿಯವರಿಂದ [illegible]. [illegible] ಇನ್ನೂ ಹತ್ತು [illegible] ರುವಾಗಲೇ ಮಹಾತ್ಮಾಗಾಂಧಿ [illegible] ಸ್ವಾಗತ ಸಭೆಯವರು ಗಾಡಿಯಿಂದ [illegible] ಸ್ವಾಗತವಾಗಿ [illegible].

"ಕೆಂಪು ಅಂಗಿ" ಯ ಕೆಲವು ಸ್ವಯಂ ಸೇವಕರು ಭಗತಸಿಂಗ [illegible] ಮಹಾತ್ಮಾಗಾಂಧಿಯವರಿಗೆ ಕಪ್ಪು ಹೂಗಳನ್ನು ಕೊಟ್ಟು, ತಿರುಗಿ ಹೋಗಲು ಹೇಳಿಕೊಂಡರು. ಮಹಾತ್ಮಾ ಗಾಂಧಿಯವರು ಮುಗುಳು ನಗೆ ನಕ್ಕು, ತಮ್ಮ [illegible] ಕಾಂಗ್ರೆಸ [illegible] ಪ್ರಯಾಣ ಬೆಳಸಿದರು.

ಕನು ಲೋಕಮತಕ್ಕಂಜಿರುವನೇ ಹೊರತು ಮನಃಪೂರ್ವಕ ಅದನ್ನು ಬಿಟ್ಟಿರುವದಿಲ್ಲ ವಿದೇಶಿ ಬಟ್ಟೆಗಳ ಮತ್ತು ಮೋಹಕ ಪದಾರ್ಥಗಳ ಮೋಹವನ್ನು ನಾವು ಬಿಟ್ಟಿಲ್ಲ ಮತ್ತು ವ್ಯಾಪಾರಸ್ಥರಾದರೂ ರಾಷ್ಟ್ರಕ್ಕೆ ತಮ್ಮ ವ್ಯಾಪಾರದಿಂದಾಗುವ ಅಹಿತವನ್ನು ಅಳೆದು ನೋಡಿಲ್ಲ ಅವರಲ್ಲನೇಕರು ವ್ಯಕ್ತಿ ಸ್ವಾತಂತ್ರ್ಯದ ಅಟ್ಟಹಾಸ ಮಾಡುವದು ಆತ್ಮಪೂರ್ತಿಯ ವಿಷಯದಲ್ಲಿ ನಾವು ಮಾಡಬೇಕಾದುದೆಷ್ಟಿದೆಯೆಂಬುವಕ್ಕೆ ಇವುಗಳೇ ಸಾಕ್ಷಿ ಆದ್ದರಿಂದ ಪೂರ್ಣಸ್ವರಾಜ್ಯದ ವಾತಾವರಣವು ನಮ್ಮನ್ನು ಆವರಿಸದಿರುವದೇನು ಸೋಜಿಗವಲ್ಲ ಪರಿಷತ್ತಿನಿಂದ ಫಲವು ಸಿಕ್ಕೀತೆಂದು ಎದೆತಟ್ಟಿ ಹೇಳಲಾರೆ ನಮ್ಮ ಸಾಮರ್ಥ್ಯವನ್ನು ಬೆಳೆಯಿಸಿದಷ್ಟು ಬ್ರಿಟಿಶರಿಗೆ ನಮ್ಮ ಬೇಡಿಕೆಯ ಮನವರಿಕೆಯಾಗುವದು. ನಮ್ಮ ರಾಷ್ಟ್ರವು ಆತ್ಮಪೂರ್ತಿಯ ಮಾರ್ಗದಿಂದಲೇ ಧ್ಯೇಯವನ್ನು ಸಾಧಿಸಬೇಕೆಂದು ನಿರ್ಣಯಿಸಿದ್ದರಿಂದ ಮೇಲಿನ ಅನರ್ಥಗಳನ್ನು ನಿರ್ಮೂಲ ಮಾಡಬೇಕೆಂಬ ಜಾಣತನವನ್ನು ನಾವು ಈ ಹನ್ನೆರಡು ತಿಂಗಳುಗಳಲ್ಲಿ ಕಲಿಯದಿದ್ದರೆ ಹಿಂದಿನಕಿಂತ ಇನ್ನು ಮುಂದೆ ಹೆಚ್ಚಿನ ಘೋರತರ ಯಾತನಾಗ್ನಿಯಲ್ಲಿ ಬೆಂದು ಬೆಂಡಾಗಬೇಕಾಗುವದು ಸ್ವರಾಜ್ಯವು ನಮ್ಮ ಅಂತರಂಗದಿಂದಲೇ ಬರಬಲ್ಲುದಲ್ಲದೆ ಬಾಹ್ಯದ ನವಲ್ಲ.

ಯಂಗ ಇಂಡಿಯಾ

ಕರಾಚಿಯಲ್ಲಿ

ಭಗತಸಿಂಗರ ಭಾವಚಿತ್ರದ ಮೆರವಣಿಗೆ

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೆ ಏರಿಸಿದ ಸುದ್ದಿಯು ತಾ॥ ೨೪ ನೇ ದಿವಸ ನಸುಕಿನಲ್ಲಿ ಕಾಂಗ್ರೆಸ್ ನಗರಕ್ಕೆ ಬಂದು ಮುಟ್ಟಿತು. ಕೂಡಲೆ ರಾಷ್ಟ್ರಧ್ವಜವು ಅರ್ಧಕ್ಕೆ ಇಳಿಸಲ್ಪಟ್ಟಿತು. ಸ್ವಯಂಸೇವಕರು [illegible] ನೆತ್ತಿಯ ಮೆರವಣಿಗೆ ಹೊರಡಿಸಿ, ಭಗತಸಿಂಗ ಜಿಂದಾಬಾದ ಎಂಬುದಾಗಿ ಕೂಗುತ್ತ [illegible] ನಗರದಲ್ಲೆಲ್ಲ ಸಂಚರಿಸಿದರು

ಕಾಂಗ್ರೆಸ ಬಜಾರ ಕ್ಷಯ ಎಲ್ಲ ಅಂಗಡಿಗಳೂ ಹಾಗು ಖಾದಿ ಪ್ರದರ್ಶನವೂ ಮುಚ್ಚಲ್ಪಟ್ಟಿದ್ದವು ಪಟ್ಟಣದಲ್ಲಿಯವರೂ ಸಂಪೂರ್ಣ ಹರತಾಳವನ್ನು ಆಚರಿಸಿದರು. ಸಂಜೆಯ ಕಾಂಗ್ರೆಸ್ ಕಮೀಟಿ ಹಾಗೆ ನವಜೀವನ ಭಾರತ ಸಭೆಯವರು ಜತೆಯಾಗಿ ಬೆಳ್ಳನೆತ್ತಿ ಪ್ರಚಂಡ ಮೆರವಣಿಗೆಯು ಶ್ರೀ ಭಗತಸಿಂಗರ ಭಾವಚಿತ್ರದೊಂದಿಗೆ ಹೊರಟಿತ್ತು. ಎಷ್ಟೋ ಜನ ಸ್ತ್ರೀ ಪುರುಷರೂ ಮೆರವಣಿಗೆಯಲ್ಲಿ ಭಾಗವಹಿಸಿಕೊಂಡಿದ್ದರು ಶ್ರೀ ಪಾರಸಾನಂದ, [illegible], ಸ್ವಾಮಿ ಕೃಷ್ಣಾನಂದ ಇವರು ಮೆರವಣಿಗೆಯಲ್ಲಿ ನೇತೃತ್ವ ವಹಿಸಿದ್ದರು ಸರದಾರರ [illegible] ತೆಗೆದುಕೊಂಡು ಅಲ್ಲಲ್ಲಿ ಪೂಜೆ [illegible] ಆರತಿ ಬೆಳಗಿದ್ದರು.

ಮುಂಬಯಿ ಶಾಸನ ಮಂಡಳದಲ್ಲಿ ಕಾಯದೆಭಂಗ.

ತಾ॥ ೨೫ ನೇಯ ದಿವಸ ಮುಂಬಯಿ ಕಾಯದೆ ಮಂಡಳದಲ್ಲಿ ಮಿ॥ [illegible] ಯವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಕೇಳಿಕೊಂಡರು,

೧ ಕಳೆದ ಎಂಟು ತಿಂಗಳಲ್ಲಿ ಮುಂಬಯಿ ಹಾಗು ಮುಂಬಯಿ ಇಲಾಖೆಯಲ್ಲಿ ಕಾಯದೆಭಂಗ ಚಳವಳಿಗಾಗಿ ಒಟ್ಟಿಗೆ ಎಷ್ಟು ಜನರು ಸೆರೆಹಿಡಿಯಲ್ಪಟ್ಟರು? ಎಷ್ಟು ಜನರ ಮೇಲೆ ಖಟ್ಲೆ ಹಾಕಲ್ಪಟ್ಟಿತು? ಎಷ್ಟು ಜನರು ಶಿಕ್ಷಿಸಲ್ಪಟ್ಟರು. ೨ ಬೇರೆ ಬೇರೆ ಜೈಲುಗಳಲ್ಲಿ ಇನ್ನೂ ಎಷ್ಟು ಜನರು ಶಿಕ್ಷೆಯನ್ನು ಅನುಭವಿಸುತ್ತಿರುವರು? [illegible] ವರ್ಗಗಳಲ್ಲಿ ಎಷ್ಟೆಷ್ಟು ಜನರಿಡಲ್ಪಟ್ಟಿರುವರು,

ಸರ್ ಹೊಟಸನ್ ಸಾಹೇಬರು ಕೆಳಗಿನಂತೆ ಉತ್ತರ ಕೊಟ್ಟರು.

೧ ೧೯೩೦ ನೆಯ ಜಾನೇವಾರಿ ತಿಂಗಳದ ಕೊನೆಯವರೆಗೆ ಕಾಯದೆಭಂಗಕ್ಕಾಗಿ ಒಟ್ಟಿಗೆ ೧೮೩೩೪ ಜನರು ಶಿಕ್ಷಿಸಲ್ಪಟ್ಟಿದ್ದರು. ೨ ಎಷ್ಟು ಜನರ ಮೇಲೆ ಖಟ್ಲೆ ಹಾಕಲ್ಪಟ್ಟಿತು ಮೊದಲಾದವುಗಳನ್ನು ತಿಳಿದುಕೊಳ್ಳಲು ಬಹಳ ವೇಳೆಯು ಹತ್ತುವದು. ೩ ಫೆಬ್ರವರಿ ೨೭ ನೇ ಜಾನೇವಾರಿ ದಿವಸ ಬೇರೆ ಬೇರೆ ಸೆರೆಮನೆಗಳಲ್ಲಿ ಕಾಯದೆ ಒಟ್ಟಿಗೆ ೩೦೦೪ ಜನರು ಶಿಕ್ಷೆಯನ್ನನುಭವಿಸುತ್ತಿದ್ದು, ಅವರ ವರ್ಗೀಕರಣವು ಕೆಳಗಿನಂತೆ ಇದೆ. ೩ 'ಅ' ವರ್ಗದಲ್ಲಿ ೨೪, 'ಬ' ವರ್ಗದಲ್ಲಿ ೩೨೫, 'ಕ' ವರ್ಗದಲ್ಲಿ ೨೯೩೧.

ಹೆಂಗಸರೂ

ಅರಸನ ವಿರುದ್ಧ ಯುದ್ಧ ಹೂಡಿದ್ದು.

ಅರಸನ ವಿರುದ್ಧ ಯುದ್ಧ ಹೂಡಲು ಒಳಸಂಚು ನಡೆಸಿದ್ದಕ್ಕಾಗಿ ಲಾಹೋರ ಪ್ರಾಂತದಲ್ಲಿ ೧೬ ಜನರು ಸೆರೆಹಿಡಿಯಲ್ಪಟ್ಟಿದ್ದು, ಅವರ ಖಟ್ಲೆಯು ಫೆಬ್ರವರಿ ತಾ॥ ೨೩ ನೆಯ ದಿವಸ ಸ್ಪೇಶಲ್ ಟ್ರಿಬ್ಯುನಲದ ಮುಂದೆ ಪ್ರಾರಂಭವಾಯಿತು. ಈ ೧೬ ಜನರಲ್ಲಿ ಒಬ್ಬ ಸ್ತ್ರೀಯು [illegible] ಸಹ ಶಾಮೀಲಿದ್ದಾಳೆ.

ಕಾನಪುರದಲ್ಲಿ ಭಯಂಕರ ದಂಗೆ

ನಿನ್ನಿನ ದಿವಸ ರಾತ್ರಿ ದಂಗೆಯು ಭಯಂಕರ ಸ್ವರೂಪ ತಾಳಿತ. ಗಾಯಹೊಂದಿದವರ ಸಂಖ್ಯೆಯು ಹೆಚ್ಚಾಗಹತ್ತಿದೆ, ೧೦೦ ಜನರು ಕೊಲ್ಲಲ್ಪಟ್ಟಿದ್ದು, ೩೦೦ ಜನರಿಗೆ ಗಾಯಗಳಾಗಿವೆ. ಗಾಯಹೊಂದಿದವರೆಲ್ಲರೂ ಔಷಧಾಲಯದಲ್ಲಿ ಉಪಚಾರ ಹೊಂದುತ್ತಿರುವರು. ಪಟ್ಟಣದವರೆಲ್ಲರೂ ಭಯಚಕಿತರಾಗಿದ್ದು ಪಟ್ಟಣವು ಹಾಳು ಸುರಿಯುತ್ತಿದೆ. ಪೋಲೀಸರು ಹಾಗು ಸೈನಿಕರು ಪಟ್ಟಣದಲ್ಲೆಲ್ಲ ಸಂಚಾರ ಮಾಡುತ್ತಿದ್ದಾರೆ. ಕಲೆಕ್ಟರರು ಇಲ್ಲಿಗೆ ಬಂದಿದ್ದು, ಶಾಂತತೆಯನ್ನು ಪ್ರಸ್ಥಾಪಿಸಲು ಪ್ರಯತ್ನ ಮಾಡಹತ್ತಿದ್ದಾರೆ.

ಈ ಸಂಬಂಧವಾಗಿ ಒಂದು ಸರಕಾರಿ ಪ್ರಕಟನೆಯು ಹೊರಬಿದ್ದು ಅದರಲ್ಲಿ ಹೀಗೆ ಹೇಳಲ್ಪಟ್ಟಿದೆ: ದಂಗೆ, ಧೊಂಬಿ, ಲೂಟಿ ಮೊದಲಾದವುಗಳು ಹಾಗೆಯೇ ನಡೆದಿವೆ. ಪೋಲೀಸರ ಮತ್ತು ಬೇರೆ ಕಡೆಯಿಂದ ಕುಮಕುಗಳು ಬಂದಿದ್ದು, ಇನ್ನೂ ಬಾಕಿಯುಳಿದಿದೆ. ಈ ವರೆಗೆ ೩೦ ಜನರು ಕೊಲ್ಲಲ್ಪಟ್ಟಿದ್ದಾರೆ. ಅವರಲ್ಲಿ ೧೭ ಜನರು ಮುಸಲ್ಮಾನರು ಹಾಗು ೧೩ ಜನರು ಹಿಂದುಗಳಿದ್ದಾರೆ. ಶಾಂತತೆಯು ಬೇಗನೆ ಪ್ರಸ್ಥಾಪಿತವಾಗುವ ಲಕ್ಷಣ ತೋರುತ್ತದೆ.

(ಅ. ಪ್ರೆ.)

ವೀರಭಾರತ ಕಚೇರಿಯನ್ನು ಝಡತಿ ಮಾಡಿದರು

ಪೋಲೀಸರು “ವೀರಭಾರತ” ಪತ್ರಿಕೆಯ ಕಚೇರಿಯನ್ನು ಝಡತಿ ಮಾಡಿ, ಆ ಪತ್ರಿಕೆಯ ಕೆಲವು ಸಂಚಿಕೆಗಳನ್ನು ಜಪ್ತ ಮಾಡಿಕೊಂಡು ಹೋದರು. (ಅ. ಪ್ರೆ.)

ಚೌಧರಿ ಜಾಫರುಲ್ಲಾರವರು ಪಬ್ಲಿಕ್ ಪ್ರಾಸಿಕ್ಯೂಟರರಾದರು

(ದಿಲ್ಲಿ ತಾ॥ ೨೬)

ಬಂಡೀಗಾಲಿಯ ಸರಿಹದ್ದಿಗೆ ಪ್ರವಾಸಿಯಾಗಿ ಹೋಗಿದ್ದ ಪಂಜಾಬ ಪ್ರಾಂತದ ಪ್ರಸಿದ್ಧ ಬ್ಯಾರಿಸ್ಟರರಾದ ಚೌಧರಿ ಜಾಫರುಲ್ಲಾರವರು ದಿಲ್ಲಿ ಒಳಸಂಚಿನ ಖಟ್ಲೆಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರರಾಗಿ ನಿಯಮಿಸಲ್ಪಟ್ಟಿರುವರಾಗಿ ತಿಳಿಯುತ್ತದೆ. (ಅ. ಪ್ರೆ.)

ಕರಾಚಿಯಲ್ಲಿ ಕೆಂಪು ಅಂಗಿಯವರ ಚಳವಳಿ

(ಕರಾಚಿ ತಾ॥ ೨೬)

ಕೆಂಪು ಅಂಗಿಯ” ತರುಣರು ತಮ್ಮ ಧ್ವಜದೊಂದಿಗೆ ಮೆರವಣಿಗೆಯಿಂದ ಕಾಂಗ್ರೆಸದಲ್ಲಿ ಇವರು ಗೊಂದಲ ಹಾಕಿದರು. ಕಾಂಗ್ರೆಸ್ ಮುಖಂಡರಿಗೆ ಅನೇಕ ಮಹಾತ್ಮಾಗಾಂಧಿ ಹಾಗು ಇತರರು ನಿನ್ನಿನ ದಿವಸ ಸಾರ್ವಜನಿಕರ ಅವರನ್ನು ಸ್ವಾಗತಿಸಿಕೊಂಡರು.

(ಅ. ಪ್ರೆ.)

ಪೈ ದೆಹ್ಲಿಯಲ್ಲಿ ಗೋಲಿಬಾರು

೨ ಜನರು ಮರಣ ೩ ಜನರಿಗೆ ಗಾಯ

(ಮದ್ರಾಸ, ತಾ॥ ೨೬)

ರಾತ್ರಿ ಕಲಾಪದ ಸಮಯದಲ್ಲಿ ಮೆರವಣಿಗೆಯ ಸಮಯದಲ್ಲಿ ಕಾರ್ಮಿಕವರ್ಗದ ಜನರಲ್ಲಿ ಜಗಳವು ಗಂಭೀರ ಸ್ವರೂಪ ತಾಳಿತೆಂದೂ, ಪೋಲೀಸರು ಗೋಲೀಬಾರು ಮಾಡಿರುವರೆಂದೂ, ದೆಹಲಿ ಗೋಲೀಬಾರಿನ ಪರಿಣಾಮ ಜನರು ಸತ್ತಿದ್ದು, ಮೂರು ಜನರಿಗೆ ಗಾಯವಾಗಿವೆ. (ಅ. ಪ್ರೆ.)

ಪಟೇಲರ ಕೊನೆಯ ಭಾಷಣ

(ದಿಲ್ಲಿ ತಾ॥ ೨೬)

ವರಿಷ್ಠ ಕಾಯದೆ ಮಂಡಳ ಹಾಗು ಕೌನ್ಸಿಲ್ ಆಫ್ ಸ್ಟೇಟದ ಸಭಾಸದರನ್ನುದ್ದೇಶಿಸಿ ಪಟೇಲರವರು ಶನಿವಾರ ದಿವಸ ತಮ್ಮ ಕೊನೆಯ ಭಾಷಣ ಮಾಡಬೇಕಾಗಿದ್ದಾರೆ. (ಅ. ಪ್ರೆ.)

ಬರ್ಮಾ ಪ್ರಾಂತವನ್ನು ಹಿಂದುಸ್ಥಾನದಿಂದ ಬೇರೆ ಮಾಡದಿರಲು

(ಕರಾಚಿ ತಾ॥ ೨೬)

ಬರ್ಮಾ ಪ್ರಾಂತವನ್ನು ಹಿಂದುಸ್ಥಾನದಿಂದ ಬೇರೆ ಮಾಡಕೂಡದೆಂಬುದಾಗಿ ಕರಾಚಿ ಕಾಂಗ್ರೆಸ ಸಭೆಯ ಅಧಿವೇಶನದಲ್ಲಿ ಒಂದು ಠರಾವು ಬರಲಿಕ್ಕಿದೆಯೆಂದೂ, ಇದಕ್ಕೆ ಬಂದ ಬರ್ಮಾ ಪ್ರಾಂತದ ಮುಖಂಡರೆಲ್ಲರೂ ತಮ್ಮ ಒಪ್ಪಿಗೆಯನ್ನು ಕೊಡುವರೆಂದೂ ತಿಳಿಯುತ್ತದೆ.

ಅ. ಪ್ರೆ.

ವ್ಯಾಪಾರಸ್ಥರಿಗೆ

ಮಹಾತ್ಮರ ಬೆಂಬಲ

ಕರಾಚಿ ತಾ ೨೬—೩—೩೧

ಹಿಂದೀ ಹಾಗೂ ಯುರೋಪಿಯನ್ ವ್ಯಾಪಾರಿಗಳನ್ನು ಸಮಪಾತಳಿಯಲ್ಲಿ ನಡೆಸಿಕೊಳ್ಳುವದಲ್ಲಿ ಬರುವದೆಂಬುದಾಗಿ ಬಂಡೀಗಾಲಿಯ ಪಾಸಕ್ಕೆ ಸರ್ಕಾರ ಒಪ್ಪಿದ್ದನ್ನು, ರದ್ದುಪಡಿಸುವ ಪ್ರಯತ್ನ ನಡೆದಿರುವದಾಗಿ, ಮಹಾತ್ಮಾ ಗಾಂಧಿಯವರು ವರ್ಕಿಂಗ ಕಮೀಟಿಯ ಪರವಾಗಿ ವ್ಯಾಪಾರಸ್ಥರಿಗೆ ಆಶ್ವಾಸನ ಕೊಟ್ಟಿದ್ದಾರೆ. (ಅ. ಪ್ರೆ.)

ಶ್ರೀ ಸುಖದೇವರ ಬಗ್ಗೆ

ಸರಕಾರಿ ಪ್ರಕಟನೆ

(ಲಾಹೋರ ತಾ॥ ೨೬)

ಶ್ರೀ ಸುಖದೇವರನ್ನು ಆಕ್ಟೋಬರ ೧೩ ನೆಯ ತಾರೀಖಿನ ದಿವಸ ಲಾಹೋರ ಸೆಂಟ್ರಲ್ ಜೇಲಿಗೆ ಕರೆದೊಯ್ಯುವಾಗ, ಓರ್ವ ಅಧಿಕಾರಿಯ ಕೈಯಲ್ಲಿ ಸಿಕ್ಕ ಒಂದು ಅಪೂರ್ಣವಾದ ಪತ್ರದಲ್ಲಿಯ ಕೆಲವು ಸಂಗತಿಗಳನ್ನು ಪಂಜಾಬ ಸರಕಾರದವರು ಪತ್ರಿಕೆಗಳಿಗಾಗಿ ಪ್ರಕಟಿಸಿದ್ದಾರೆ. ಅವರು ಸಾರ್ವಜನಿಕರ ಕೋಲಿವಾಡಿಸಿದ್ದು ಹಾಗು ಸರಕಾರವನ್ನು ಬದಲಿಸಲು ಬೇರೆ ಬೇರೆ ವಿಧದಿಂದ ನಿರ್ಧಾರವಾಗಿ ಪ್ರಯತ್ನ ಮಾಡಿದ್ದೂ ಆ ಪತ್ರದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಅ. ಪ್ರೆ.

ಇಂದೂರದಲ್ಲಿ ಮೆರವಣಿಗೆಗೆ ಅಡ್ಡಿ.

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ಬಗ್ಗೆ ತಮ್ಮ ನಿಷೇಧವನ್ನು ವ್ಯಕ್ತಪಡಿಸುವದಕ್ಕಾಗಿ ಇಂದೂರಿನಲ್ಲಿ ಕಲವು ತರುಣರು ತಾ॥ ೨೪ ನೆಯ ದಿವಸ ಅಧಿಕಾರಿಗಳ ಅಪ್ಪಣೆಯನ್ನು ತೆಗೆದುಕೊಳ್ಳದೆ ಬೆಳ್ಳಂಬೆಳಿಗ್ಗೆ ರಾತ್ರಿಯು ಮೆರವಣಿಗೆ ಹೊರಡಿಸಿದ್ದರಿಂದ, ಪೋಲೀಸರು ಮಾರ್ಗದಲ್ಲಿ ಮೆರವಣಿಗೆಗೆ ಅಡ್ಡಿ ಮಾಡಿದರು. ಮೆರವಣಿಗೆಯಲ್ಲಿ ಸೇರಿದವರು ಅಲ್ಲಿಯೇ ನೆಲದ ಮೇಲೆ ಕುಳಿತುಕೊಂಡರು. ಸತ್ಯಾಗ್ರಹ ಮಾಡಿದರು. ಪೋಲೀಸರು ಅವರನ್ನು ಬಲಾತ್ಕಾರದಿಂದ ಹೊರಡಿಸಿದರು.

ಕರಾಚಿ ಸಭೆಯಲ್ಲಿ ಮತ್ತೆ ಯುದ್ಧದ ಕೂಗು.

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದರ ನಿಷೇಧಾರ್ಥವಾಗಿ ತಾ॥ ೨೪ ನೆಯ ದಿವಸ ಕರಾಚಿಯಲ್ಲಿ ಒಂದು ಪ್ರಚಂಡವಾದ ಸಭೆ ನೆರೆಯಿತು. ಸಭೆಯಲ್ಲಿ ನಡುನಡುವೆ “ಭಗತಸಿಂಗರನ್ನು ಗಲ್ಲಿಗೆ ಹಾಕಿದ್ದರ ಸೇಡು ತೀರಿಸಿಕೊಳ್ಳಿರಿ” “ಗಾಂಧಿಯವರನ್ನು ಧಿಕ್ಕರಿಸಿರಿ” ಎಂಬ ಕೂಗುಗಳೇ ಎಲ್ಲೆಲ್ಲಿಯೂ ಕೇಳಬರುತ್ತಿದ್ದವು.

ಶ್ರೀ ಸೇನಗುಪ್ತರು ಭಾಷಣ ಮಾಡುವಾಗ ತಾಳ್ಮೆಯಿಂದಿರಲು ಸಭಿಕರಿಗೆ ವಿನಂತಿ ಮಾಡಿಕೊಂಡರು. ನವಜವಾನ ಭಾರತ ಸಭೆಯವರು ಪುನಃ ಯುದ್ಧವನ್ನು ಸುರುವು ಮಾಡಿರೆಂದು, ಗಟ್ಟಿ ಗಟ್ಟಿಯಾಗಿ ಕೂಗಿ ಅವರ ಭಾಷಣಕ್ಕೆ ಆಗಾಗ್ಗೆ ಪ್ರತಿಬಂಧ ಮಾಡಿದರು.

ಸಂಜೆಯಲ್ಲಿ ೧೫೦೦೦ ಜನರು ಬೋಕ್ಕನೆತ್ತಿಯಿಂದ ಶ್ರೀ ತಾರಾಚಂದ ನಾರಾಯಣದಾಸ ಹಾಗು ಶ್ರೀ ಸ್ವಾಮಿ ಗೋವಿಂದಾನಂದರ ನೇತೃತ್ವದಲ್ಲಿ ಮೆರವಣಿಗೆಯಿಂದ ರಾಮಬಾಗಕ್ಕೆ ಸಾಗಿಹೋಗಿ ಅಲ್ಲಿ ಸಭೆ ಜರುಗಿಸಿದರು. ನವಜವಾನ ಭಾರತ ಸಭೆಯ “ಕೆಂಪು ಅಂಗಿ”ಯವರು ಭಗತಸಿಂಗ ಮೊದಲಾದವರ ಭಾವಚಿತ್ರಗಳನ್ನೊಳಗೊಂಡ ಪಲ್ಲಕ್ಕಿಯನ್ನು ಹೊತ್ತುಕೊಂಡು ನಡೆದಿದ್ದರು. ಎಷ್ಟೋ ಜನ ಸ್ತ್ರೀಯರಾದರೂ ಮೆರವಣಿಗೆಯಲ್ಲಿ ಭಾಗತೆಗೆದುಕೊಂಡಿದ್ದರು. ಮೆರವಣಿಗೆಯು ಸಭಾಸ್ಥಾನಕ್ಕೆ ತಲುಪಿದ ಬಳಿಕ ಅಲ್ಲಿ ಸಭೆ ನೆರೆಯಿತು.

ಶ್ರೀ ನಾರಾಯಣದಾಸರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ, ಲೋಕಮತವನ್ನು ಲೆಕ್ಕಿಸದೆ ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದಕ್ಕೆ ಸರಕಾರವನ್ನು ತೀಕ್ಷ್ಣವಾಗಿ ನಿಷೇಧಿಸಿದರು.

“ಇವರನ್ನು ಗಲ್ಲಿಗೆ ಹಾಕಿದ್ದರ ಸೇಡು ಹೇಗೆ ತೀರಿಸಿಕೊಳ್ಳುವಿರಿ? ಶ್ರೀಭಗತಸಿಂಗರಂತೆ ಪ್ರಾಣವರ್ಪಿಸಲು ನೀವಾದರೂ ಸಿದ್ಧರಿರುವಿರಾ? ಎಂಬುದಾಗಿ ಸ್ವಾಮಿ ಗೋವಿಂದಾನಂದರು ಪ್ರಶ್ನೆ ಮಾಡಿದರು.

“ತಯ್ಯಾರಿದ್ದೇವೆ”ಬುದಾಗಿ ಸಭಿಕರು ಉಚ್ಚಸ್ವರದಿಂದ ಕೂಗಿ ಹೇಳಿದರು.

ಪಂಜಾಬ ನವಜವಾನ ಭಾರತ ಸಭೆಯ ಅಧ್ಯಕ್ಷರಾದ ಅಹಮ್ಮದೀನರು ತಮ್ಮ ಭಾಷಣದಲ್ಲಿ “ತಾವು ಯಾರನ್ನೂ ವಿಚಾರಿಸುವದಿಲ್ಲ ಏನನ್ನೂ ವಿಚಾರ ಮಾಡುವದಿಲ್ಲ; ಯಾರಾವನೆಯೂ ಒಪ್ಪಂದ ಮಾಡಿಕೊಳ್ಳುವದಿಲ್ಲ” ವೆಂಬುದಾಗಿ ಸಾರಿ ಹೇಳಿದರು.

ಡಾ ಸತ್ಯಪಾಲರು ಖಟ್ಲೆಯ ಸಾದ್ಯಂತ ವೃತ್ತಾಂತವನ್ನು ಸಭಿಕರಿಗೆ ತಿಳಿಸಿ ಹೇಳಿದ ಬಳಿಕ ಶ್ರೀ ಸೇನಗುಪ್ತರು, ಸರಕಾರದವರೊಡ್ಡಿದ ಬಲೆಯಲ್ಲಿ ಬೀಳದಂತೆ ಜಾಗರೂಕರಾಗಿರಲು ಸಭಿಕರಿಗೆ ಕೇಳಿಕೊಂಡು, ಅಧಿಕಾರಿವರ್ಗವು ತಮ್ಮ ಹಿತವನ್ನೇ ಸಾಧಿಸಿದ್ದು, ತಮ್ಮನ್ನಾಳುವವರೂ ತಮ್ಮ ತನ್ನ ಮಾರ್ಗವನ್ನು ಹಿಡಿಯುವರು. ಎಂಬುದಾಗಿ ಸರಕಾರಕ್ಕೆ ಎಚ್ಚರಿಕೆ ಕೊಟ್ಟರು.

ಗಾಂಧಿ—ಇರ್ವಿನರ ಒಪ್ಪಂದದ ಸಂಬಂಧವಾಗಿ ಕರಾಚಿ ಕಾಂಗ್ರೆಸದಲ್ಲಿ ಬರಲಿಕ್ಕಿರುವ ಠರಾವನ್ನು ಮುಂದೆಯೇ ತಿಳಿದವರಂತೆ ಸರದಾರ ಭಗತಸಿಂಗರು ವಿರೋಧಿಸುವ ಹವಣಿನಲ್ಲಿರುವರಾಗಿ ತಿಳಿದು ಬರುತ್ತದೆ.

ಲಾಹೋರದಲ್ಲಿ

ಅಭೂತಪೂರ್ವ ಹರತಾಳ.

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದಕ್ಕಾಗಿ ತಾ॥ ೨೪ ನೆಯ ದಿವಸ ಪುನಃ ಹರತಾಳವನ್ನಾಚರಿಸಲಾಯಿತು. ಡಿ. ಎ. ವ್ಹಿ. ಕಾಲೇಜ, ದಯಾಳಸಿಂಗ ಕಾಲೇಜ, ಎಫ್. ಸಿ. ಕಾಲೇಜ ಮೊದಲಾದ ಕಾಲೇಜಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಹುತಾತ್ಮರ ಆತ್ಮಕ್ಕೆ ಶಾಂತಿಯನ್ನೀಯಲು ಪರಮಾತ್ಮನಲ್ಲಿ ಪ್ರಾರ್ಥಿಸಲು ಮಿಂಟೋ ಪಾರ್ಕಿನಲ್ಲಿ ೧೫೦೦೦ ಜನರು ಸಭೆಯಲ್ಲಿ ಕೂಡಿದ್ದರು. ಸರದಾರ ಭಗತಸಿಂಗರ ತಂದೆಯು ನಿಟ್ಟುಸಿರು ಬಿಡುತ್ತ ಸಭೆಯಲ್ಲಿ ಕಾಲಿಟ್ಟಕೂಡಲೆ, ಯಾವತ್ತೂ ಜನರು ಕಣ್ಣೀರುಗಳನ್ನು ಸುರಿಸಿ ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಮೌಲಾನಾ ಜಾಫರ ಅಲ್ಲಿಯವರು ಸಭೆಯಲ್ಲಿ ಭಾಷಣ ಮಾಡಿ, ಹಿಂದುಸ್ಥಾನವನ್ನು ಇಷ್ಟು ಅಸಹಾಯ ಸ್ಥಿತಿಯಲ್ಲಿ ನೂಕುವ ಯಾವ ಸಂಗತಿಯೂ ಹಿಂದುಸ್ಥಾನದ ಇತಿಹಾಸದಲ್ಲಿ ಈವರೆಗೆ ಘಟಿಸಿಲ್ಲವೆಂಬುದಾಗಿ ಹೇಳಿದರು.

ಸೊಲ್ಲಾಪೂರದ ಕೈದಿಗಳನ್ನು ಬಂಧಮುಕ್ತ ಮಾಡಿ.

ಮಹಾರಾಷ್ಟ್ರ ಕಾಂಗ್ರೆಸ್ ಮುಖಂಡರು ಅಜ್ಞೆಕೊಟ್ಟ ಮೇರೆಗೆ ಅಲಿಬಾಗದ ನಾಗರಿಕರು ತಾ॥ ೨೨ ನೆಯ ದಿವಸ ಸಾರ್ವಜನಿಕ ಸಭೆ ನೇರಿಸಿಕೊಂಡು, ಸೊಲ್ಲಾಪೂರ ಹಾಗು ಚಿರನೇರ ಕೈದಿಗಳನ್ನು ಬೇಗನೆ ಬಿಡುಗಡೆ ಮಾಡಬೇಕೆಂಬುದಾಗಿ ಠರಾವು ಪಾಸು ಮಾಡಿಕೊಂಡರು.

ಹುತಾತ್ಮರ ಬಗ್ಗೆ

ವಿಸಾಪುರ ಕೈದಿಗಳ ಸಹಾನುಭೂತಿ.

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ತಮಗೆ ತಿಳಿದು ಬಂದ ಕೂಡಲೇ ವಿಸಾಪುರ ಜೇಲಿನಲ್ಲಿನ ಯಾವತ್ತೂ ಕೈದಿಗಳು ತಾ॥ ೨೪ ನೆಯ ದಿವಸ ಒಟ್ಟಿಗೆ ಸೇರಿ ತಮ್ಮ ದುಃಖವನ್ನು ವ್ಯಕ್ತಪಡಿಸಿ ಅದರಂತೆ ಸರದಾರ ಸಿಂಗರಿಗೆ ತಂತಿ ಕೊಟ್ಟು ಕಳಿಸಿದರು.

ಕಾಂಗ್ರೆಸ್ ಉಗಿಹಡಗದಲ್ಲಿ

ರಾಷ್ಟ್ರಧ್ವಜ ವಂದನೆ.

ಮುಂಬಯಿಯಿಂದ ಕಾಂಗ್ರೆಸ್ ಪ್ರತಿನಿಧಿಗಳನ್ನು ತೆಗೆದುಕೊಂಡು ಬಂದ ಉಗಿಹಡಗವು ತಾ॥ ೨೬ ನೆಯ ದಿವಸ ಕರಾಚಿಗೆ ಸುಖರೂಪವಾಗಿ ಮುಟ್ಟಿತು. ಶ್ರೀ ಕೊಂಡಾ ವೆಂಕಟಪ್ಪಯ್ಯ, ಕಾಳೇಶ್ವರರಾವ, ಪೇಠವರು, ಶ್ರೀಮತಿ ಪಂಡಿತ ಮೊದಲಾದವರು ಇದೇ ಉಗಿಹಡಗದಿಂದ ಬಂದರು. ನಿನ್ನಿನ ದಿವಸ ಉಗಿಹಡಗ ಮೇಲೆಯೇ ರಾಷ್ಟ್ರಧ್ವಜವಂದನೆಯ ಸಮಾರಂಭವು ನಡೆಯಿತು. ಉಗಿಹಡಗದಲ್ಲಿದ್ದ ಯಾವತ್ತೂ ಜನರು ಈ ಸಮಾರಂಭದಲ್ಲಿ ಭಾಗತೆಗೆದುಕೊಂಡಿದ್ದರು. ಸಮಾರಂಭವು ಮುಗಿದ ಕೂಡಲೆ, ಶ್ರೀಕೊಂಡಾ ವೆಂಕಟಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಶ್ರೀ ಜಮನಾದಾಸ, ಖಂಡಾಲಕರ, ಮೇಹರಅಲ್ಲಿ ಮೊದಲಾದವರ ಭಾಷಣಗಳಾದವು.

ದಾನಿ – ದಾಬಡೆ ಟೇಲರ್ಸ

ನಮ್ಮಲ್ಲಿ ವೇಳೆಗೆ ಸರಿಯಾಗಿ ಉತ್ತಮ ರೀತಿಯ ಎಲ್ಲ ನಮೂನೆಯ ಅರಿವೆಗಳನ್ನು ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ಪರೀಕ್ಷಿಸಿರಿ.

ದಾನಿ – ದಾಬಡೆ
ಟೇಲರ್ಸ
ಬಾಗಲಕೋಟೆ—ಗಣೇಶಗುಡಿ

ಜಾಹೀರಾತುದಾರರಿಗೆ

ಒಳ್ಳೆ ಸುಸಮಯ

[illegible] "ಕನ್ನಡಿಗ"ನ ನಿತ್ಯಸಂಚಿಕೆಯ ಆಕಾರವನ್ನು ದೊಡ್ಡದಿನ ಇಮ್ಮಡಿ ಮಾಡಿರುವೆವು. ಅದರ ಪ್ರಚಾರವು ಮೊದಲಿನಕಿಂತಲೂ ಹೆಚ್ಚಾಗಿ [illegible] ಜಾಹೀರಾತ ದಾರರು ದೊರೆ [illegible] ಕೆಲವು ದಿವಸಗಳವರೆಗೆ ಅತಿ ಸೋವಿ ದರದಿಂದ ಜಾಹೀರಾತು ಪ್ರಕಟಿಸುವೆವು. ಇಷ್ಟವುಳ್ಳವರು ತ್ವರೆಮಾಡಬೇಕು ದರ ಮೊದಲಾದವುಗಳ ಬಗ್ಗೆ ಸವಕ್ಷಮ ಅಥವಾ ಪತ್ರ ದ್ವಾರದಿಂದ ತಿಳಿದು ಕೊಳ್ಳಬೇಕು.

ವ್ಯವಸ್ಥಾಪಕ
"ಕನ್ನಡಿಗ" ಬಾಗಲಕೋಟೆ.

ಸ್ಯಾಂಪಲ್) ಮತಿ ಚೀಟಿಗಳು (ಪುಕ್ಕಟೆ

ಸೀಲಿಕಪ್ಪು ಕೆಂಪು ಜಾಂಬಳಿ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೮—೦
೧ ಸಾವಿರ ಚೀಟಿಗಳಿಗೆ,	೩–೮–೦
೫ ಸಾವಿರಕ್ಕೆ,	೧೬–೦–೦ ಬೇಲ್ಸ್ ಫ್ರಿ
೫ ತೊಲೆ ಪಂಚಿಟಿ ಗಳಿಗೆ	೧–೦–೦
ಬ್ಲೂ ಸ್ಟಾಂಪ ಮತಿಸ್ಟ್ಯಾಂಪಿನ ೧ ಔನ್ಸ ಬಾಟ್ಲಿಗೆ	೧–೨–೦

ಪಟ್ಟಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ
ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦–೮–೦
ಪ್ರಶ್ನೋತ್ತರ ಭಾಷೆ	೦–೬–೦
ಪ್ರಶ್ನೋತ್ತರ ಭೂಗೋಲ	೦–೬–೬
ಪ್ರಶ್ನೋತ್ತರ ಇತಿಹಾಸ	೦–೬–೦
ಗುರುಶಿಷ್ಯ ಭೂಗೋಲ ಟಿಪ್ಪಣಿಗಳು	೦–೧೦–೦
ಹಿಂದೂದೇಶದ ಶಾಸನ ಪದ್ಧತಿ	೧–೦–೦

(ಟೆಕ್ಸ್ಟ್ ಬುಕ್ ಮಂಜೂರಿಯಾಗಿದ್ದು)
ಇವಲ್ಲದೆ ಇನ್ನಿತರ ಕಾದಂಬರಿಯೊಳಗಿನ ಪುಸ್ತಕಗಳೂ ಸ್ಟೇಶನರಿ ಸಾಮಾನುಗಳಾದರೂ ಮಿತವಾದ ದರದಲ್ಲಿ ದೊರೆಯುತ್ತವೆ.
ನೂತನ ಪುಸ್ತಕಾಲಯ ವಿಜಾಪುರ

ಚಹಖಾನೆ

ಬಾಗಲಕೋಟೆಯಲ್ಲಿ ಚಹಖಾನೆ ಒಂದು ಸಣ್ಣ ಪ್ರಮಾಣದ ಮೇಲೆ ಒಂದು ಬಿದ್ರೋಣಿಗೆ ಶಾಲೆಯಿನ್ನೇ ನಡೆಸಿದ್ದೇವೆ ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಗಡನ್ನು ಹೊರಹಾಕಿಸಿ ಹತ್ತಿ [illegible] (ಚಿರಯಾವದು) [illegible] ಮಾಡುವದು, [illegible] ನೀಡುವದು, ಸೂಳಿಗೆ ಬಣ್ಣ ಹಾಕುವದು, ನೇಯುವದ, [illegible] ಮಾಡುವದು ಮುಂತಾದ ವಿಷಯಗಳನ್ನು ಕಲಿಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಊಟದ ಸಲುವಾಗಿ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕು ಆದಾಗ್ಯೂ ಆಡಿ [illegible] ಒಡವನೆಂದು ಮುಕ್ತಾಯ ಮಾಡಿಕೊಟ್ಟಲ್ಲಿ ಅವನ ಊಟದ ಬಗ್ಗೆ ಹಣದ [illegible] ಊಟದ ಬೇರೆ ವ್ಯವಸ್ಥೆ [illegible] ಮಾಡುವದಲ್ಲ ಬರುವದು, ಅವರಿಗೆ ಇಂಥ ಜಾಗೆಯ ವ್ಯವಸ್ಥೆಯನ್ನು ಮಾಡಿಕೊಡುವದು, ವಿದ್ಯಾರ್ಥಿಗಳು ಸಂಘದ ನಿಯಮಗಳನ್ನು ಪಾಲಿಸಬೇಕು.

ಕರ್ನಾಟಕದ ಸೇವೆ ಮಾಡಲಪೇಕ್ಷಿಸುವವರು ಈ ಸಂಧಿಯನ್ನು ಬಿಡಬಾರದು. ಈ ಸಂಘದಲ್ಲಿ ಕಲಿಸಿದ ಯಾವ ತ್ತು ಸಾಧನಗಳು ಕರ್ನಾಟಕಕ್ಕೆ ಸಿಗುತ್ತವೆ,

೧ ಹತ್ತಿಯಿಂದ ಬಿಡಿಸುವ ಬಾಡಿಂಗ [illegible]
೨ ಅರಳೀ ಹಿಂಜುವ ಬಿಲ್ಲು
೩ ಕಾತ (ಬೆಸಿಯುವದು)
೪ ಕೊಡತಿ
೫ ಕಂಸ್ಟ್ರಕ್ಟ ರೀತಿಯಿಂದ ಸಿದ್ಧ ಪಡಿಸಿದ ಹಂಜಿ (೬೦ ನಂಬರದ ನೂಲು ತೆಗೆಯಲಿಕ್ಕೆ ಬರುವಂಥದು)
೬ ಕದರು ಮತ್ತು ಫಣಿ.

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕೂಡ ಪತ್ರವ್ಯವಹಾರ ಬಗ್ಗೆ ಮುಂಗಡ ಪೋಸ್ಟಿನ ತಿಕೀಟು ಕಳಿಸಬೇಕು
ಶ್ರೀ ಎನ್ ರಾಘವೇಂದ್ರರಾವ ದೇಶಾಯಿ
ವ್ಯವಸ್ಥಾಪಕ
ಚಹಖಾನೆ ಬಾಗಲಕೋಟೆ.

ಸ್ವದೇಶೀ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈನೂಲಿನ, ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ ರೀತಿಯ ಪೇಟ, ಟವೆಲ್, ಕೋಂಟುಗಳ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ಕೃಷ್ಣರಾವ
'ಸ್ವದೇಶೀ ಸ್ಟೋರ್ಸ'
ಹೊಸ ಬಜಾರ, ವಿಜಾಪುರ.

ಶುದ್ಧ ಖಾದಿ ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ
ಶ್ರೀನಿವಾಸ ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೊಪ್ಪಿಗೆಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೊಪ್ಪಿಗೆಗಳು, ಜರದ ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ದಲ್ಲಾಳಿ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ
'ಜ್ಯಾಕ ವೆಲ್ಲರ' ಮೋಘರೋಡ
ವಿಜಾಪುರ

ವಿಜಾಪುರದಿಂದ ಪಂಢರಪೂರ ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಜತ್ತ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು ಮತ್ತೆ ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕಳಗಿನ ವಿಳಾಸದವರ ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು. ಮ್ಯಾನೇಜರ.
ಅಟಲ ಮಹಾಲಕ್ಷ್ಮೀ ಮೋಟಾರ ಸರ್ವಿಸ
ವಿಜಾಪುರ.

ಡಾಕ್ಟರ ಕೃಷ್ಣರಾವ ಪರ್ವತಿಕರ ಇವರ ಮೆಡಿಕಲ್ ಸ್ಟೋರ್ಸ

ನಮ್ಮಲ್ಲಿ ದೇಶಿ ಹಾಗು ಪೆಟೆಂಟ ಔಷಧಗಳು ಮತ್ತು ದವಾಖಾನೆಗೆ ಉಪಯೋಗ ಬೀಳುವ ಎಲ್ಲ ತರದ ಸಾಮಾನುಗಳು ಯೋಗ್ಯ ಬೆಲೆಗೆ ಮಾರಲಿಕ್ಕೆ ದೊರೆಯುತ್ತವೆ

ಕೃಷ್ಣರಾವ ಪರ್ವತಿಕರ
ದವಾಖಾನೆ ಮತ್ತು ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲ ತರದ ಟೊಪ್ಪಿಗೆಗಳು ಮಾರಲಿಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯ ದರದಿಂದ ತಯಾರಿಸಿ ಕೊಡುವೆವು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ತಯಾರು ಮಾಡುವ [illegible] ಟೇಲರಿಂಗದಲ್ಲಿ [illegible] ಮಾಡಿಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಅಂಡ ಟೇಲರ್ಸ
ಕೋರ್ಟಬಾಜಾರ ವಿಜಾಪುರ

'ಕನ್ನಡಿಗ'ನ ನಿತ್ಯಸಂಚಿಕೆ.

ದೈನಿಕ "ಕನ್ನಡಿಗ"ನ ಕನ್ನಡಿಗರ ಸೇವೆ ಮಾಡಹತ್ತಿ ಈಗ ಒಂದು ವರ್ಷ ಕಳೆದು ಹೋಯಿತು, ಅವನು ಈಗ ತನ್ನಲ್ಲಿ ಕೆಲಕೆಲವು ಹೊಸ ಸುಧಾರಣೆಗಳನ್ನು ಮಾಡಿಕೊಂಡು ಎರಡನೆಯ ವರ್ಷದಲ್ಲಿ ಕಾಲಿಟ್ಟಿರುವನು, ಮೊದಲಿನಕಿಂತಲೂ ಇಮ್ಮಡಿ ಆಕಾರದಲ್ಲಿ ಹೊರಡುತ್ತಿರುವನು. ಹಿಂದುಸ್ಥಾನದ ಭಾವೀರಾಜ್ಯಘಟನೆಯ ಸಂಬಂಧವಾಗಿ ಕರಾಚಿ ಕಾಂಗ್ರೆಸ್ ಹಾಗು ದುಂಡು ಮೇಜಿನ ಪರಿಷತ್ತುಗಳಲ್ಲಿ ನಡೆಯತಕ್ಕದ್ದಾಗಿರುವ ಚರ್ಚೆಯ ಸುದ್ದಿಸಂಗತಿಗಳನ್ನು ಆದಷ್ಟು ಬೇಗನೆ ತಿಳಿದುಕೊಳ್ಳಲು ಜನಸಾಮಾನ್ಯರೂ ಸಹ ಈಗ ಬಹು ಆತುರರಾಗಿರುವದರಿಂದ, ಅವರ ಈ ಆತುರತೆಯನ್ನು ತೃಪ್ತಿಪಡಿಸುವದಕ್ಕಾಗಿ ಕನ್ನಡಿಗನು ಈಗ ಅಸೋಸಿಯೇಟೆಡ್ ಪ್ರೆಸ್ಸಿನಿಂದ ತಂತಿ ವರ್ತಮಾನಗಳನ್ನು ತರಿಸಿಕೊಳ್ಳುತ್ತಿರುವನು. ಇದಲ್ಲದೆ ಬೆಳಗಾವಿ, ಧಾರವಾಡ ಹುಬ್ಬಳ್ಳಿ ಬೆಂಗಳೂರು, ಬಳ್ಳಾರಿ ಮುಂತಾದ ಮೊದಲಾದ ಸ್ಥಳಗಳಲ್ಲಿಯ ಸ್ವಂತ ಪ್ರತಿನಿಧಿಗಳಿಂದ ಮಹತ್ವದ ಸುದ್ದಿಸಂಗತಿಗಳ ಬಗ್ಗೆ ಪತ್ರಗಳನ್ನು ತಂತಿಗಳನ್ನು ತರಿಸಿಕೊಂಡು ಅಲ್ಲಿಯ ಸ್ಥಿತಿಗತಿಗಳನ್ನು ಕನ್ನಡಿಗರ ಕಣ್ಮುಂದೆ ಇಡುತ್ತಿರುವನು. ಈ ರೀತಿಯಾಗಿ ಪೇಪರು ಧಾರಣೆಯನ್ನು ದಿನದಿನಕ್ಕೂ ತಂತಿಯಿಂದ ತರಿಸಿಕೊಂಡು ವ್ಯಾಪಾರಸ್ಥರ ಅಡಚಣೆಯನ್ನು ದೂರ ಮಾಡುತ್ತಿರುವನು, ಇಂಥ ಸಾಹಸಕ್ಕೆ ಕೈಹಾಕಿದ ಪತ್ರಿಕೆಯೆಂದರೆ ಕರ್ನಾಟಕದಲ್ಲಿ ಇದೇ ಮೊದಲನೆಯದಾಗಿದೆ. ಕನ್ನಡಿಗನ ಈ ಉದ್ದೇಶವು ಸಫಲವಾಗಬೇಕಾದರೆ ವರ್ಷದೊಳಗಾಗಿ ೪,೦೦ ಜನ ಚಂದಾದಾರರು ಕನ್ನಡಿಗನನ್ನು ತರಿಸಿಕೊಳ್ಳಬೇಕಾಗುವದು. ಇಷ್ಟು ಜನ ಚಂದಾದಾರರು ದೊರೆಯುವರೆಂಬ ನಂಬಿಗೆಯಿಂದಲೇ ಅವನು ಈ ಸಾಹಸಕ್ಕೆ ಕೈಹಾಕಿರುವನು. ಕನ್ನಡಿಗನನ್ನು ತರಿಸಿಕೊಳ್ಳುವದು ಜನಸಾಮಾನ್ಯರಿಗೆ ಭಾರವಾಗಬಾರದೆಂಬ ಉದ್ದೇಶದಿಂದ, ಆಕಾರವು ಮೊದಲಿನಕಿಂತ ಇಮ್ಮಡಿಯಾಗಿದ್ದರೂ ಸಹ, ಬೆಲೆಯನ್ನು ಮೊದಲಿನಷ್ಟೇ ಅಂದರೆ ಮೂರೇ ಪೈ ಇಟ್ಟಿದೆ.

ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಕೊಪ್ಪಳ ಮುಂತಾದ ಸ್ಥಳಗಳಿಗೆ ಪಾರ್ಸಲ್ಲನ್ನು ಕಳಿಸಿ, ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು ಈಗ ಮೋಟಾರುಗಳು ಎಲ್ಲೆಡೆಗೂ ತಿರುಗುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲೆಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ನಮಗೆ ಪತ್ರ ಬರೆದು ಕೇಳಬೇಕು ತಮ್ಮ ತಮ್ಮ ಮೋಟಾರುಗಳಿಂದ ಪಾರ್ಸಲಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ತಿಕೀಟ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು.

ಏಜಂಟರಾಗಲಿಚ್ಛಿಸುವವರು ಕೂಡಲೆ ಬರೆದುಕೊಳ್ಳಬೇಕು ಸಣ್ಣ ಊರವರು ಕನಿಷ್ಠ ಮೂರು ರೂಪಾಯಿಗಳನ್ನು, ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನು ಠೇವು ಕಳಿಸಬೇಕು ಸ್ಥಾನಿಕ ಕಾಂಗ್ರೆಸ್ ಕಮೀಟಿಯ ಅಥವಾ ಮುಖ್ಯ ವರ್ತಕರ ಒಂದು ಸರ್ಟಿಫಿಕೆಟನ್ನಾದರೂ ಪ್ರಾಮಾಣಿಕತನದ ಬಗ್ಗೆ ತರಿಸಿ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ ಕಳಿಸಬೇಕು ೧೦೦ ಕ್ಕೆ [illegible] ಕಮೀಶನ ಪ್ರತಿಗಳು ತಿರುಗಿ ತೆಗೆದುಕೊಳ್ಳುವದಿಲ್ಲ ನೂರಕ್ಕೆ [illegible] ರೂಪಾಯಿ ಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು ಮೋಟಾರ ಗಳ ತಿಕೀಟ ಏಜಂಟರಿಗೆ, ಸಣ್ಣ ಊರುಗಳಲ್ಲಿ ದಿನಾಲು ೧೦—೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳ [illegible] ರೂಪಾಯಿ ಕೂಲಿಯೇ ದೊರೆಯುವವು ಇನ್ನು ಪಟ್ಟಣಗಳಲ್ಲಿ ಶಾಲೆಗಳ ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು ಆದ್ದರಿಂದ ಏಜಂಟರು ಕೆಲವು ಪ್ರಮುಖವಾದ ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖ್ಯ ಜನರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೊಂದಾಯಿಸಿಕೊಂಡಾಗಲಿ, ಪ್ರತಿ ಕೃಷಿ [illegible] ಪ್ರತಿಗಳು ಹೆಚ್ಚಾಗಿ ಖರ್ಚು ಆಗುತ್ತವೆ. [illegible] ಏಜಂಟರು ಬರೆದುಕೊಳ್ಳತಕ್ಕದ್ದು.

ಜಾಹಿರಾತಿನ ದರ.— [illegible] ಜಾಹಿರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಲಕ್ಕೆ ನಾಲ್ಕು ಆಣೆ [illegible]

ಬಾಗಲಕೋಟೆ
೨೦—೩—೧೯೩೧ { ನಿತ್ಯ ಪತ್ರಿಕೆಯ ವ್ಯವಸ್ಥಾಪಕರು
"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ಈ ಪತ್ರಿಕೆಯನ್ನು ವೆಂಕಟೇಶ [illegible] ಬಾಗಲಕೋಟೆ [illegible] ಮುದ್ರಿಸಿ [illegible] ಪ್ರಕಟಿಸಿದರು

ರ ನಂ. ಬಿ. ೨೭೮೮ ನಿತ್ಯ ಪತ್ರಿಕೆ. ಬೆಲೆ ೦--೦--೩.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ
ವರ್ಷಕ್ಕೆ ೧೨—೦—೦
" ೬—೦—೦
" ೩—೦—೦
" ೧—೦—೦
ಸ್ಥಳೀಯರಿಗೆ
ವರ್ಷಕ್ಕೆ ೭—೦—೦
" ೪—೦—೦
" ೧—೮—೦
" ೦—೮—೦

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥—ಮನು.

ನಿತ್ಯಪತ್ರಿಕೆಯ
ಜಾಹೀರಾತಿನ ದರಗಳು
೧ನೇ ಸಲ ೧ ಇಂಚಿಗೆ ೧—೮—೦
೨ ,, ,, ೧—೦—೦
ಮುಂದಿನ ಪ್ರತಿಯೊಂದು ಸಲ
೦—೧೨—೦
ಜಾಹೀರದಾತರು ಅಕ್ಷರಗಳ ಪ್ರಮಾಣದಿಂದ ದರ ಕೊಡುವರು

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ರವಿವಾರ ಮಿತಿ ಚೈತ್ರ ಶುದ್ಧ ೧೦ ಶಕೆ ೧೮೫೩ ತಾ|| ೨೯—೩—೩೧ [ಸಂಚಿಕೆ ೯

ವ್ಹಾಯಿಸರಾಯರ ಭಾಷಣ

ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದು ಯೋಗ್ಯವಾಯಿತು.

ದಿಲ್ಲಿ ತಾ|| ೨೬

ನಮ್ಮ ದೇಶಕ್ಕೆ ಮರಳಿ ಹೋಗುವದಕ್ಕಾಗಿ ಲೇಡಿ ಅರ್ವಿನರಿಂದ ಚೇಂಬರ್ ಕ್ಲಬ್ಬಿನಲ್ಲಿ ಏರ್ಪಡಿಸಲ್ಪಟ್ಟ ಸಮಾರಂಭದಲ್ಲಿ ಭಾಷಣ ಮಾಡುತ್ತ ಲಾರ್ಡ ಅರ್ವಿನರು, "ರಾಜಕೀಯ ಶಕ್ತಿಯನ್ನು ಬಿಡಿಸುವದನ್ನು ಕಂಡು ಹಿಡಿಯುವದಕ್ಕೆ ಗ್ರೇಟ ಬ್ರಿಟನವು ಹೆಚ್ಚು ಯತ್ನಿಸುವದು. ಮತ್ತು ಬ್ರಿಟಿಶ ವ್ಯಾಪಾರದ ಹಿತಕ್ಕಾಗಿ ಅದು ಹೆಚ್ಚು ಹೆಚ್ಚು ಪ್ರಯತ್ನಿಸುವದು" ಎಂಬುದಾಗಿ ಹೇಳಿದರು. ಅವರು ತಮ್ಮ ಭಾಷಣದಲ್ಲಿ ಭದ್ರಸ್ಥಾನ ಜಾತಿಗಳಲ್ಲಿಯ ತಂಟೆಗಳು ಮೊದಲಾದ ಮಹತ್ವದ ಪ್ರಶ್ನೆಗಳನ್ನು ಯಥಾರ್ಥ ವಿವೇಚಿಸಿ, ರಾಜಕೀಯ ಪರಿಸ್ಥಿತಿಯನ್ನು ಹೇಳಿದ್ದೇನಂದರೆ ಬ್ರಿಟಿಶ ಹಾಗು ಹಿಂದುಗಳು ಒಂದಕ್ಕೊಂದು ವಿರುದ್ಧ ದಿಶೆಯಲ್ಲಿ ಮುಂದಕ್ಕೆ ಸಾಗದೆ ಒಂದೇ ದಿಶೆಯಲ್ಲಿ ಹೋಗುವಂತೆ ನೋಡಿಕೊಳ್ಳುವದು ಸರಕಾರದ ಕರ್ತವ್ಯವಾಗಿದೆ. ಒಬ್ಬರಿಗೊಬ್ಬರು ಸಹಕರಿಸುವ ಸಂಧಿಯು ಕಳೆದ ವರ್ಷಗಳಲ್ಲಿ ಮೇಲಿಂದ ಮೇಲೆ ದೊರೆತಿದ್ದು, ಇಂಗ್ಲಂಡದವರು ಇಲ್ಲವೆ ಹಿಂದಿಯವರು ಆ ಸಂಧಿಯನ್ನು ವ್ಯರ್ಥವಾಗಿ ಕಳೆದುಕೊಟ್ಟರು. ಮೂರು ವರ್ಷಗಳ ಹಿಂದೆ ನೇಮಿಸಲ್ಪಟ್ಟ ಸಾಯಮನ್ ಕಮಿಶನದ ಸಂಬಂಧವಾಗಿ ಬಹಳೇ ತಪ್ಪು ತಿಳುವಳಿಕೆಯುಂಟಾದದರಿಂದ ಬ್ರಿಟಿಶ-ಹಿಂದುಸ್ಥಾನದ ಬಾಂಧವ್ಯಕ್ಕೆ ಆದರಿಂದ ಬಹಳೇ ಧಕ್ಕೆ ತಗಲಿತು. ನವ್ಹೆಂಬರ ತಿಂಗಳಲ್ಲಿ ವಸಾಹತಿಕ ಸ್ವರಾಜ್ಯದ ಸಂಬಂಧವಾಗಿ ಬ್ರಿಟಿಶ ಧೋರಣವನ್ನು ನಾನು ವಿವೇಚಿಸಿದ ಕೂಡಲೆ ಒಬ್ಬರನ್ನೊಬ್ಬರು ದೂರ ಸರಿದು ನಿಂತೆವು. ಕಾಯದೆ ಭಂಗದ ಚಳವಳಿ ಸುರುವಾಯಿತು. ಅದರಿಂದ ವಿಶೇಷ ಗಲಭೆಯುಂಟಾಯಿತು. ತಪ್ಪು ತಿಳುವಳಿಕೆ ಹೆಚ್ಚುತ್ತ ಹೋಯಿತು. ಅವರು ಈ ವಿಷಯವನ್ನು ಸರಿಯಾಗಿ ವಿಚಾರ ಮಾಡಿ ನೋಡದೆ ಇದ್ದುದರಿಂದ ಚಳವಳಿ ಹುಟ್ಟಿತು.

ಸಂಸ್ಕಾರ ಬೇಡುವವರನ್ನು ಸರಕಾರವು ಬಲವಾಗಿ ಟೀಕಿಸಿ ಹೇಳಿದ್ದೇನಂದರೆ—ಅವರು ಹಿಂದುಸ್ಥಾನದ ನಿಜ ಪರಿಸ್ಥಿತಿಯನ್ನು ಚನ್ನಾಗಿ ತಿಳಿದುಕೊಂಡು ಹಿಂದೀಯರು ಈಗ ಎರಡು ವಿಷಯ ಎಚ್ಚರಾಗಿದ್ದಾರೆ. ಅವುಗಳೆಂದರೆ ಹಿಂದ್ಯ ಸ್ವಾತಂತ್ರವನ್ನು ಹಿಂದೀಯರೇ ಸಾಗಿಸುವದಾಗಿ ಅವರು ಬೇಡುತ್ತಿದ್ದಾರೆ. ಹಿಂದುಸ್ಥಾನದ ಹಿತಕ್ಕಾಗಿಯೇ ಹಿಂದುಸ್ಥಾನದ ಸಂಪತ್ತನ್ನುಪಯೋಗಿಸಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡಿದ್ದರೆ ಎರಡನೆ ಪಕ್ಷದ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲುಪಯೋಗಿಸುವ ಮಾರ್ಗದಲ್ಲಿ ಯಾವ ಇಂಗ್ಲೀಷ ಮನುಷ್ಯನೂ ಅಡ್ಡ ಬರಲಾರನು. ತಮ್ಮ ದೇಶ ಮಾಗ ಕೇವಲ ಬ್ರಿಟಿಶ ವಸ್ತುಗಳನ್ನೇ ಕೊಂಡುಕೊಳ್ಳಲು ಉತ್ತೇಜನ ಕೊಟ್ಟು, ಹಿಂದುಸ್ಥಾನದಲ್ಲಿ ಸ್ವದೇಶಿ ಚಳವಳಿಯು ಬಹುತರವಾಗಿ ಅರಾಜಕೀಯವಾಗಿದೆಂದು ಭಾವಿಸಿ ಅದನ್ನು ಕಂಡು ಬೆದರುವ ಜನರ ಧೋರಣವನ್ನು ತಿಳಿದುಕೊಳ್ಳಲು ನಾನು ಸಮರ್ಥನಾಗಿಲ್ಲ. ವ್ಯಾಪಾರವು ಊರ್ಜಿತಸ್ಥಿತಿಯನ್ನು ಹೊಂದಬೇಕಾದರೆ ಅದು ಪರಸ್ಪರರಿಗೆ ಸಮಾಧಾನಕರ ಹಾಗೆ ಹಿತಕರವಾಗಿ ಬೆಳೆಯುವಂತೆ ಆಗಬೇಕು.. ಈ ವಿಷಯವಾಗಿ ನನ್ನ ವಿಚಾರ ಈ ಎರಡನೆಯದಕಿಂತ ಬೇರೆಯಾಗಿರುವದರಿಂದ, ಈ ಬಗ್ಗೆ ಬೇರೊಂದು ಚಿಕಿತ್ಸೆಯನ್ನೇ ನಾನು ವಿಚಾರ ಮಾಡುವವನಿದ್ದೇನೆ. ಸದ್ಯದ ಈ ರಾಷ್ಟ್ರೀಯತ್ವದ ಪ್ರವಾಹವು ಬಲವಾದ ವಿರೋಧದಿಂದ ತಗ್ಗಲಾರದು. ಇದಕ್ಕೆ ಬಾಂಧವ್ಯದ ಪರಿಷತ್ತಿನಿಂದಲೇ ಶಕ್ಯ ಉಪಾಯವಾಗಿದೆ.

ಒಪ್ಪಂದದ ವಿಷಯವಾಗಿ ಅವರು ಸರಕಾರದವರು ಒಪ್ಪಂದದ ಕರಾರುಗಳಂತೆ ನಡೆಸುಕೊಳ್ಳುವರೆಂದೂ ಮಹಾತ್ಮಾ ಗಾಂಧಿಯವರಾದರೂ ಅದರಂತೆ ನಡೆದುಕೊಳ್ಳುವರಾಗಿ ತಮಗೆ ಗೊತ್ತಿದೆಯೆಂದೂ, ಸರಿಯಾದ ವಾತಾವರಣವನ್ನುಂಟು ಮಾಡಲು ಎಲ್ಲರೂ ಪ್ರಯತ್ನಿಸಬೇಕೆಂದೂ ಹೇಳಿದರು.

ಬಳಿಕ ವ್ಹಾಯಿಸರಾಯರು ಭದ್ರಸ್ಥಾನಗಳ ಸಂಬಂಧವಾಗಿ ವಿವೇಚನೆಮಾಡಿ, ಹೇಳಿದ್ದೇನಂದರೆ—ಹಿಂದಿ ಹಾಗು ಬ್ರಿಟಿಶ ಹಿತಗಳಲ್ಲಿ ಕಾಂಚವ್ಯವನ್ನು ಕಂಡು ಹಿಡಿಯಲು ನಾನು ಇನ್ನೂ ಸಮರ್ಥನಾಗಿಲ್ಲ. ಉಭಯ ಪಕ್ಷದವರೂ ಸಮಾಧಾನವಾಗಿ ಸಂರಕ್ಷಣೆಯ ವಿಷಯವನ್ನೇ ತೆಗೆದುಕೊಳ್ಳಿರಿ. ಇದರಲ್ಲಿ ಹಿಂದುಸ್ಥಾನದ ಹಿತವೇ ಪ್ರಮುಖ್ಯವಾಗಿದ್ದರೂ ಸಹ, ಇದರಲ್ಲಿ ಬ್ರಿಟಿಶ ಸಾಗರ ಸಾಮ್ರಾಜ್ಯದ ಹಿತವಾದರೂ ಸೇರಿಕೊಂಡಿದೆ.

ಜಾತಿ ಜಾತಿಗಳಲ್ಲಿಯ ಪ್ರಶ್ನೆಯ ಸಂಬಂಧವಾಗಿ ಅವರು ನುಡಿದದ್ದೇನಂದರೆ:- ರಾಜ್ಯ ಸೂತ್ರವನ್ನು ಹಿಂದೀಯರ ಕೈಯಲ್ಲಿ ಒಪ್ಪಿಸುವದಕ್ಕಿಂತ ಪೂರ್ವದಲ್ಲಿ, ಹೊಸ ವಿಭಜನೆಯಲ್ಲಿ ಅಲ್ಪಸಂಖ್ಯಾಕ ಪಕ್ಷಗಳ ಬಾಧ್ಯತೆಗಳಿಗೆ ಬಾಧೆ ಬರುವಂತಿಲ್ಲವೆಂಬ ಬಗ್ಗೆ ಬ್ರಿಟಿಶರು ಸಮಾಧಾನಮಾಡಲ್ಪಡಬೇಕು. ಹಿಂದೂ-ಮುಸಲ್ಮಾನರು ತಮ್ಮ ತಮ್ಮಲ್ಲಿಯ ತೊಡಕನ್ನು ಬಿಡಿಸಿಕೊಂಡು ಪರಸ್ಪರರು ಸಹನಶೀಲತೆ ಹಾಗು ತಾಳ್ಮೆಯಿಂದ ವರ್ತಿಸಬೇಕು.

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ವಿಷಯವಾಗಿ ವ್ಹಾಯಿಸರಾಯರು ನುಡಿದದ್ದೇನಂದರೆ— ಸರಕಾರವು ಹೀಗೆ ಮಾಡಿದ್ದರ ಪರಿಣಾಮ ಏನಾಗುವದೆಂಬುದು ನನ್ನ ಮನಸ್ಸಿನಲ್ಲಿ ಇತ್ತು. ಮಹಾತ್ಮಾ ಗಾಂಧಿಯವರು ಗಲ್ಲಿನ ಶಿಕ್ಷೆಯನ್ನು ಕಡಿಮೆ ಮಾಡಲು ನನ್ನೊಡನೆ ಬಹು ಜಾಣತನದಿಂದ ವಾದಿಸಿದರು. ಇಂಥ ವಿಷಯಗಳ ಸಂಬಂಧವಾಗಿ ಮೊದಲು ಮಾಡಿಕೊಂಡ ನಿರ್ಧಾರವನ್ನು ರಾಜಕೀಯ ಕಾರಣಕ್ಕಾಗಿ ಸಡಲಿಸುವದು ಸಂಪೂರ್ಣವಾಗಿ ತಪ್ಪಾಗಿದೆಯೆಂದು ನನಗೆ ಅನಿಸಿತು. ಕಾಯದೆಯ ಸರಿಯ ವಿಚಾರ ಮಾಡಿದಲ್ಲಿ, ಶಿಕ್ಷೆಯು ಕಡಿಮೆ ಮಾಡಲ್ಪಡಬೇಕಾಗಿತ್ತು; ಇದಕ್ಕಿಂತ ಯೋಗ್ಯವಾದ ಬೇರೊಂದ ಪಟ್ಟಿ ನನಗೆ ಕಾಣಿಸುವದಿಲ್ಲ. ಕರಾಚಿ ಕಾಂಗ್ರೆಸ್ ಅಧಿವೇಶನವು ಸುರಳಿತವಾಗಿ ಸಾಗುವಂತೆ ಮಾಡಲಿಕ್ಕಾದರೂ, ಗಲ್ಲಿಗೇರಿಸುವದನ್ನು ಸದ್ಯಕ್ಕೆ ನಿಲ್ಲಿಸಬೇಕಾಗಿತ್ತೆಂಬುದಾಗಿ ಕೆಲವು ಪತ್ರಿಕೆಗಳು ಟೀಕಿಸಿವೆ. ಹೀಗೆ ಮಾಡಲು ಬರುತ್ತಿತ್ತು; ಆದರೆ ಆಗಾದರೂ ಸಂಶಯದವರು ನಾಳೆ ನಡೆಯುವದಿಲ್ಲವೆಂದೆ ಕಾಂಗ್ರೆಸದವರು ಸರಕಾರದ ಮೇಲೆ ದೋಷ ಹೊರಿಸದೆ ಬಿಡುತ್ತಿದ್ದಿಲ್ಲ. (ಅ ಪ್ರ)

ಕಾನಪೂರಕ್ಕೆ

ಪಂಡಿತ ನೆಹರೂರ ಪ್ರಯಾಣ

(ಅಲಹಾಬಾದ ತಾ|| ೨೭)

ಪಂಡಿತ ಜವಾಹಿರಲಾಲ ನೆಹರೂರವರು ಕರಾಚಿಯಿಂದ ತಾವು ಹೊರಟುವೇ ಕರೆಗೆ, ಶ್ರೀ ಎಸ್. ಆರ್ ಪಂಡಿತ ಹಾಗೆ ಮುಂತಾದವರು ಕಾನಪೂರದಲ್ಲಿ ಶಾಂತತೆಯನ್ನುಂಟು ಮಾಡಿ ಅಲ್ಲಿಯ ಜನರನ್ನು ಸಮಾಧಾನಗೊಳಿಸಲು ಅಲ್ಲಿಗೆ ಹೋಗಕಕ್ಕವರಿದ್ದಾರೆ. (ಅ. ಪ್ರ)

ಸಿಡೆನ್‌ಹ್ಯಾಮ ಬೀದಿಗೆ

ಮಹಮ್ಮದಲ್ಲಿಯವರ ನಾಮಕರಣ

(ಮುಂಬಯಿ, ತಾ|| ೨೭)

ಮುಂಬಯಿ ಕಾರ್ಪೊರೇಶನದವರು ನಿನ್ನೆ ದಿವಸ ಸಭೆ ಸೇರಿಕೊಂಡು "ಸಿಡೆನ್‌ಹ್ಯಾಮ ಬೀದಿಗೆ" ಮಹಮ್ಮದಲ್ಲಿಯವರ ನಾಮಕರಣ ಮಾಡಬೇಕೆಂಬುದಾಗಿ ಸಭೆಯ ಮುಂದೆ ಬಂದ ಸೂಚನೆಯನ್ನು ಸರ್ವಾನುಮತದಿಂದ ಸ್ವೀಕರಿಸಿದರು (ಅ ಪ್ರ)

ಚಿರನೇರ ಆರೋಪಿಗಳ ವಿಚಾರಣೆ

ಇನಸ್ಪೆಕ್ಟರರ ಸಾಕ್ಷಿ

"ಕಾಂಗ್ರೆಸದವರೇ ನನ್ನನ್ನು ಉಳಿಸಿದರು"

ರ ಡೆಪ್ಯುಟಿಯವರ ಸೆಶನ್ಸ ಜಜ್ಜರಾದ ಮಿ. ಶಂಕರರಾವರ ಕೋರ್ಟಿನಲ್ಲಿ ಚಿರನೇರ ಅರಣ್ಯ ಸತ್ಯಾಗ್ರಹ ಕೈದಿಗಳ ಖಟ್ಲೆಯ ವಿಚಾರಣೆಯು ಪುನಃ ಪ್ರಾರಂಭವಾಗಿ, ಸತ್ಯಾಗ್ರಹ ನಡೆದ ದಿವಸ ಅಲ್ಲಿ ಕೆಲಸದ ಮೇಲಿದ್ದ ಇನಸ್ಪೆಕ್ಟರ ಪಾಟೀಲರವರ ಸಾಕ್ಷಿಯು ತೆಗೆದುಕೊಳ್ಳಲ್ಪಟ್ಟಿತು. ಅವರು ತಮ್ಮ ಸಾಕ್ಷಿಯಲ್ಲಿ ಕಾಂಗ್ರೆಸದ ಸ್ವಯಂಸೇವಕರು ಹಾಗು ಖಟ್ಲೆಯಲ್ಲಿಯ ಒಬ್ಬ ಆರೋಪಿಗಳಾದ ಶ್ರೀ ಗುಪ್ತೆಯವರು ತಮ್ಮನ್ನು ಉಳಿಸಿದರೆಂದು ಒಪ್ಪಿಕೊಂಡರು. ಶ್ರೀ ಪಾಟೀಲರವರ ಸಾಕ್ಷಿಯು ಮುಗಿಯುವದಕ್ಕಿಂತ ಮೊದಲೇ ಕೋರ್ಟ ಎದ್ದಿತು. ಶ್ರೀ ಪಾಟೀಲರ ಸಾಕ್ಷಿಯ ಮುಂದಿನ ದಿವಸ ಮುಂದುವರಿಯತಕ್ಕದ್ದಿತ್ತು. (ಅ. ಪ್ರ)

ಬೆಟಗೇರಿ ಬ್ರದರ್ಸ

ಮಾರ್ಚಂಟ್ಸ್

ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಮಾಲ, ಶಾಲು, ಬನಿಯನ್ ಮೊದಲಾದ ಹೊಸೈರಿ ಮಾಲುಗಳು, ಮತ್ತು ಸ್ಟೇಶನರಿ, ಟಾಯಲೆಟ್ ಸಾಮಾನುಗಳು ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ. ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ಎಂದು ವಿನಂತಿ,

ಬೆಟಗೇರಿ ಬ್ರದರ್ಸ

ಕಿರಾಣಾ ಬಜಾರ ಹುಬ್ಬಳ್ಳಿ, ಬಾಗಲಕೋಟೆ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ಶರ್ಟಿಂಗ, ಕೋಟಿಂಗ, ಧೋತರ ಮತ್ತು ಸ್ವದೇಶೀ ಇಳಕಲ ಸೀರೆ ಟೊಪ್ಪಿಗೆ ಮೊದಲಾದ ಖಾದಿ ಮಾಲು, ಖಣ ಮತ್ತು ಹೊದಿಕೆ. ತಯಾರಾದ ಅರಿವೆಗಳು ಸಹ ವಗ್ಗಿರೆ ದೊರೆಯುತ್ತವೆ,

ಶಂಕ್ರಪ್ಪ ಬನಾಕಾರ

ಇವಳಿ ವ್ಯಾಪಾರಸ್ಥರು ಬಾಗಲಕೋಟೆ.

ಕನ್ನಡಿಗ.

ಕನ್ನಡಿಗ ಚೈತ್ರ ಶುದ್ಧ ೯ ಶಕ ೧೮೫೩

ತನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು
ತನ್ನ ಬೆಸನವ ಮಾಡಿದಂಥ ಮಕ್ಕಳಿದೊಮ್ಮೆ
ಚಿಕ್ಕಹಾದರು ಚನ್ನ ಮೋಹಬಸ್ತಿಯನೊಂದು
ಚಿನ್ನಯಾತಾಶದನ್ನೆ ।

ಕನ್ನಡಿಗರ ಒಕ್ಕಟ್ಟು

“ಕರ್ನಾಟಕ ಸಾಮ್ರಾಜ್ಯ ಸ್ಥಾಪನಾಚಾರ್ಯ” ರೆಂಬ ಬಿರುದು ಧರಿಸಿದ ವಿದ್ಯಾರಣ್ಯ ಮುನಿಗಳ ತಪಸ್ಸಿನ ತಳಹದಿಯ ಮೇಲೆ ಕಟ್ಟಲ್ಪಟ್ಟ ಆಗಿನ ಸಾಮ್ರಾಜ್ಯ ವೈಭವವನ್ನು ಈಗಿನ ಕರ್ನಾಟಕದ ಕಂಗಾಲ ಸ್ಥಿತಿಯನ್ನು ಹೋಲಿಸಿ ನೋಡಿದರೆ ಕಾಲನ ಲೀಲೆಯು ಅಗಾಧವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗುವದು. ಮಹಮ್ಮದೀಯರ ಹೊಡತಕ್ಕೆ ಸಿಕ್ಕು ಜಿಬ್ಬಾಗಲಿಕ್ಕಿರುವ ಕನ್ನಡಿಗರನ್ನು ನೋಡಿ ಕನಿಕರಗೊಂಡು ವಿದ್ಯಾರಣ್ಯ ಮುನಿಗಳು ಅವರೆಲ್ಲರನ್ನೂ ಒಟ್ಟುಗೂಡಿಸಿ ಅವರ ಈ ಒಕ್ಕಟ್ಟಿನ ಶಕ್ತಿಗೆ ತಮ್ಮ ತಪೋಬಲದ ಬೆಂಬಲವನ್ನು ಕೊಟ್ಟದ್ದರಿಂದಲೇ “ಕರ್ನಾಟಕ ಸಾಮ್ರಾಜ್ಯವು” ಸ್ಥಾಪಿತವಾಗಿ ತಳವೂರಿ ನಿಂತಿತ್ತು. ಶತ್ರುಗಳನ್ನು ಮೂಲೆಯಲ್ಲಿ ಒತ್ತಿ ಹಾಕಿ ತನ್ನ ವೈಭವವನ್ನು ಕಾಯ್ದುಕೊಂಡಿತ್ತು. ಆದರೆ ಕಾಲಚಕ್ರದಲ್ಲಿ ಸಿಕ್ಕುಬಿದ್ದು ವೈಭವಶಿಖರದಿಂದ ಕೆಳಗೆ ಬಿದ್ದುಹೋಯಿತು. ಅಂದಿನಿಂದ ಅತಿ ಕಂಗಾಲ ಸ್ಥಿತಿಯು ಅದಕ್ಕೆ ಗಂಟುಬಿದ್ದಿತು. ಆದರೆ ಪುನಃ ಕನ್ನಡಿಗರ ಭಾಗ್ಯಸೂರ್ಯನು ಈಗ ಉದಯವಾಗಹತ್ತಿರುವನು. ಕನ್ನಡಿಗರೆಲ್ಲರೂ ಪರದಾಸ್ಯ ಪರಭಾಷೆಗಳ ಮಬ್ಬನ್ನು ಮರೆತು ಎಚ್ಚರಾಗಹತ್ತಿರುವರು. 'ಏಕೀಕರಣ'ವೇ ಕರ್ನಾಟಕದ ಏಳಿಗೆಯ ಮೂಲಮಂತ್ರವೆಂಬುದು ಅವರೆಲ್ಲರಿಗೂ ಈಗ ನಿಚ್ಚಳವಾಗಿ ಕೇಳಬಂದಿರುವದು. ಕರ್ನಾಟಕ ಮಾತೆಯ ಪುತ್ರರು ಭಿನ್ನಭಿನ್ನವಾದ ತಮ್ಮ ತಾಯಿನಾಡನ್ನು ಪುನಃ ಸಜ್ಜುಗೊಳಿಸುವ ಉಜ್ಜುಗಕ್ಕೆ ಹತ್ತಿರುವರು. ಕರ್ನಾಟಕವು ಒಂದು ಸ್ವತಂತ್ರ ಪ್ರಾಂತವಾಗಲೇ ಬೇಕೆಂಬ ನಿರ್ಣಯವನ್ನು ಕಾಂಗ್ರೆಸಿನ ರಾಷ್ಟ್ರೀಯ ಸಭೆಯಲ್ಲಿ ತರಬೇಕಾಗಿ ಸತತ ಪ್ರಯತ್ನ ನಡಿಸಿರುವರು. ಕರ್ನಾಟಕವು ಒಂದು ಸ್ವತಂತ್ರ ಪ್ರಾಂತವೆಂದು ಕಾಂಗ್ರೆಸ್ ಕಾರ್ಯಕಾರಿಗಳು ಎಣಿಸುತ್ತ ಬಂದಿರುವರು. ನೆಹರೂ ವರದಿಯಲ್ಲಿಯೂ ಕರ್ನಾಟಕವನ್ನು ಒಂದು ಸ್ವತಂತ್ರ ಪ್ರಾಂತವನ್ನಾಗಿ ರಚನೆ ಮಾಡಬೇಕೆಂಬ ಮಾತಿಗೆ ಸಂಪೂರ್ಣ ಮಾನ್ಯತೆಯು ಸಿಕ್ಕಿರುವದು. ಆದರೂ ಸರಕಾರವು ಮಾತ್ರ ಇನ್ನೂ ಈ ವಿಷಯವನ್ನು ಗಣನೆಗೆ ತಂದಿಲ್ಲ. ಅದಕ್ಕಾಗಿ ಕನ್ನಡಿಗರೆಲ್ಲರೂ ಈಗ ಯತ್ನಪಡಬೇಕಾಗಿದೆ. ಕರ್ನಾಟಕದ ಪತಿಯಿಂದ ಈ ಸಾರೆ ಕರಾಚಿಯ ಕಾಂಗ್ರೆಸಕ್ಕೆ ಹೋದ ಎಲ್ಲ ಪ್ರತಿನಿಧಿಗಳು ಕರ್ನಾಟಕವನ್ನು ಸ್ವತಂತ್ರ ಪ್ರಾಂತವನ್ನಾಗಿ ಮಾಡಬೇಕೆಂಬ ನಿರ್ಣಯವನ್ನು ತರುವರು. ಕರ್ನಾಟಕ ಏಕೀಕರಣ ಸಂಘದವರು ಈ ವಿಷಯದಲ್ಲಿ ಬಹಳೇ ಪ್ರಯತ್ನಬಟ್ಟು ಆ ಪ್ರತಿನಿಧಿಗಳಿಗೆ ಬೆಂಬಲವನ್ನು ಕೊಟ್ಟಿರುವರು. ಪ್ರತಿಯೊಂದು ಊರಲ್ಲಿಯೂ ಕರ್ನಾಟಕ ಏಕೀಕರಣವು ಅತ್ಯವಶ್ಯವೆಂತಲೂ ಅದನ್ನು ಕಾಂಗ್ರೆಸಿನವರು ಮಾನ್ಯ ಮಾಡಲೇಬೇಕೆಂತಲೂ ಸಭೆಯಲ್ಲಿ ಈ ನಿರ್ಣಯವನ್ನು ಮಾಡಿ ಅದನ್ನು ಏಕೀಕರಣ ಸಂಘದ ಕಾರ್ಯದರ್ಶಿಗಳಿಗೆ ಕಳಿಸತಕ್ಕದ್ದು. ಈ ಎಲ್ಲ ನಿರ್ಣಯಗಳನ್ನೂ ಅವರು ಕರಾಚಿಗೆ ಹೋದ ಪ್ರತಿನಿಧಿಗಳ ಕೈಯಲ್ಲಿ ಕೊಡುವರು. ಪ್ರತಿನಿಧಿಗಳು ಆ ನಿರ್ಣಯವನ್ನು ಕಾಂಗ್ರೆಸಿನಲ್ಲಿ ತಂದು ಕಾಂಗ್ರೆಸಿನವರು ಅದನ್ನು ಪಾಸು ಮಾಡುವಂತೆ ಪ್ರಯತ್ನಮಾಡುವರು. ಕಾಂಗ್ರೆಸಿನಲ್ಲಿ ಈ ನಿರ್ಣಯವು ಒಮ್ಮೆ ಗೊತ್ತಾದ ಮೇಲೆ ಪುನಃ ಅದೇ ನಿರ್ಣಯವನ್ನು ಮುಂದೆ ಕೂಡಲಿಕ್ಕಿರುವ ದುಂಡುಮೇಜಿನ ಪರಿಷತ್ತಿನಲ್ಲಿ ಚರ್ಚಿಸಿ ಅಲ್ಲಿಯಾದರೂ ಅದನ್ನು ಪಾಸು ಮಾಡಿಕೊಳ್ಳುವದಕ್ಕೆ ಸಹಾಯವಾಗುವದು. ಸಿಂಧ ಪ್ರಾಂತದವರು ತಮ್ಮ ಪ್ರಾಂತವನ್ನು ಸ್ವತಂತ್ರವನ್ನಾಗಿ ಮಾಡಬೇಕೆಂಬ ಯೋಜನೆಯನ್ನು ದುಂಡುಮೇಜಿನ ಪರಿಷತ್ತಿನ ಎದುರಿಗೆ ಇಟ್ಟಿರುವರು. ಓರಿಸಾ ಪ್ರಾಂತದವರೂ ಇದೇ ಬಗೆಯ ಯತ್ನವನ್ನು ಮಾಡುತ್ತಿರುವರು. ಇದೇ ಸಮಯದಲ್ಲಿ ಕರ್ನಾಟಕದ ಮುಂದಾಳುಗಳಾದರೂ ಮುಂಜಾಗ್ರತೆಯಿಂದ ನಡೆದು ತಮ್ಮ ಪ್ರಾಂತವನ್ನು ಸ್ವತಂತ್ರವನ್ನಾಗಿ ಮಾಡಿಕೊಳ್ಳುವಂತೆ ಎಡಬಿಡದೆ ಯತ್ನಮಾಡಬೇಕಾಗಿ ನಾವು ಅವರಿಗೆ ಬಿನ್ನವಿಸುವೆವು. ಭಾಷಾವಾರ ಪ್ರಾಂತರಚನೆಯನ್ನು ಮಾಡುವ ತತ್ವವು ಸಾಹೇಬರಿಗೂ ಮಾನ್ಯವೇ ಆವೆ. ಆವರಾವರೂ ಈ ವಿಷಯದಲ್ಲಿ ನಮ್ಮ ವಿರುದ್ಧ ಹೋಗಲಾರರು. ಅಂದಮೇಲೆ ಇಂಥ ಸುಯೋಗವು ಬಂದೊದಗಿದ ಕಾಲದಲ್ಲಿ ಎಲ್ಲ ಕನ್ನಡಿಗರೂ ಈ ವಿಷಯವಾಗಿ ಜಾಗರೂಕತೆಯಿಂದಲೂ, ದೀರ್ಘ ಶ್ರಮದಿಂದಲೂ ಪ್ರಯತ್ನ ಮಾಡಿ ಬಹು ದಿವಸದಿಂದ ಹಂಬಲಿಸುತ್ತ ಬಂದಿರುವ ಈ ತಮ್ಮ ಬಯಕೆಯನ್ನು ಕೈಗೂಡಿಸಿಕೊಳ್ಳುವರಾಗಿ ನಮ್ಮ ಆಶೆ. ಪರಮಾತ್ಮನು ನಮ್ಮ ಈ ಮನೋಬಯಕೆಯನ್ನು ಸಫಲಗೊಳಿಸಲೆಂದು ಅವನನ್ನು ಪ್ರಾರ್ಥಿಸುವೆವು.

ಶಾಲೆಯನ್ನು ಬಿಟ್ಟ ವಿದ್ಯಾರ್ಥಿಗಳು ಈಗ ಏನು ಮಾಡಬೇಕು ?

“ಪ್ರಶ್ನೋತ್ತರಗಳು” ಎಂಬ ತಲೆಬರಹದ ಕೆಳಗೆ ಮಹಾತ್ಮಾ ಗಾಂಧಿಯವರು ‘ಯಂಗ ಇಂಡಿಯಾ’ ಪತ್ರಿಕೆಯಲ್ಲಿ ಬರೆಯುವದೇನಂದರೆ—

ಮುಂಬಯಿಯ ಕೂಲಿಕಾರರ ಸಭೆಯಲ್ಲಿ, ಸತ್ಯಾಗ್ರಹ ಚಳವಳಿಯಲ್ಲಿ ಶಾಲೆಯನ್ನು ಬಿಟ್ಟ ವಿದ್ಯಾರ್ಥಿಗಳು ಈಗ ಏನು ಮಾಡಬೇಕು ? ಎಂಬುದಾಗಿ ಓರ್ವರು ನನಗೆ ಪ್ರಶ್ನೆಮಾಡಿದರು. ಅದಕ್ಕೆ ಉತ್ತರ ಕೊಡಲು ಆಗ ನನಗೆ ವೇಳೆಯಿದ್ದಿದ್ದಿಲ್ಲವಾದ್ದರಿಂದ ಆಗ್ಗೆ ಉತ್ತರ ಕೊಡಲಿಲ್ಲ. ಅದಕ್ಕೆ ಈಗ ನನ್ನ ಉತ್ತರವೆಂದರೆ—

(೧) ಯುದ್ಧವು ಇನ್ನೂ ಮುಗಿದಿಲ್ಲ. ಅದು ಈಗ ಬೇರೆ ಸ್ವರೂಪ ಅಂದರೆ ವಿಧಾಯಕ ಸ್ವರೂಪದಲ್ಲಿ ಪರಿಣಮಿಸಿದೆ.

(೨) ವಿದ್ಯಾರ್ಥಿಗಳು, ಕುಡುಕರು, ಅಫು ತಿನ್ನುವವರು, ಪರದೇಶಿ ಬಟ್ಟೆ ಧರಿಸುವವರು ಇವರ ಬಳಿಗೆ ಹೋಗಿ, ಅವರನ್ನು ಆದರಿಂದ ಪರಾವೃತ್ತಗೊಳಿಸಬೇಕು.

(೩) ಶಾಂತವಾದ ಪಿಕೆಟಿಂಗ ಕಾರ್ಯದಲ್ಲಿ ತೊಡಗಿದ ಅಕ್ಕತಂಗೆಂದಿರಿಗೆ ವಿದ್ಯಾರ್ಥಿಗಳು ಸಹಾಯಮಾಡಬೇಕು.

(೪) ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ತಳವೂರಿ, ಖಾದಿ ಕಾರ್ಯವನ್ನು ಸುಸಂಘಟಿತವಾಗಿ ಸಾಗಿಸಬೇಕು.

(೫) ವಿದ್ಯಾರ್ಥಿಗಳು ಪಟ್ಟಣಗಳಲ್ಲಿ ಖಾದಿ ಹೊತ್ತುಕೊಂಡು ಹೋಗಿ ಮಾರಬೇಕು.

(೬) ಯಾವತ್ತೂ ವಿದ್ಯಾರ್ಥಿಗಳು ಪ್ರತಿದಿವಸ ಅರ್ಧ ತಾಸಾದರೂ ರಾಟೆಯ ಮೇಲಾಗಲಿ ಇಲ್ಲವೆ ಟಕಲಿಯ ಮೇಲೆ ನೂಲು ತೆಗೆಯಬೇಕು.

(೭) ಇದಕ್ಕೂ ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬೇಕಾಗಿದ್ದಲ್ಲಿ ಅವರು ರಾಷ್ಟ್ರೀಯ ವಿದ್ಯಾಲಯದ ರಜಿಸ್ಟ್ರರಿಗೆ ಬರೆದುಕೊಳ್ಳಬೇಕು

ಪರದೇಶಿ ಬಟ್ಟೆಯ ವ್ಯಾಪಾರಿಗಳು

‘ಪಿಕೆಟಿಂಗ’ ಕಾರ್ಯವು ಮಂದವಾಗಿದ್ದರಿಂದ ಪರದೇಶಿ ಬಟ್ಟೆಯ ವ್ಯಾಪಾರವು ಜೋರಿನಿಂದ ನಡೆದಿದೆ ಮತ್ತು ವ್ಯಾಪಾರಸ್ಥರು ಪರದೇಶಿ ಬಟೆಯನ್ನು ತರಿಸಹತ್ತಿದ್ದಾರೆ. ಇದನ್ನು ಪ್ರತಿಬಂಧಿಸಲು ಯಾವ ಯೋಜನೆಗಳನ್ನು ಕೈಕೊಳ್ಳುವಿರಿ’ ಎಂಬುದಾಗಿ ಮತ್ತೊಬ್ಬರು ಪ್ರಶ್ನೆಮಾಡಿದ್ದು, ಅದಕ್ಕೆ ನನ್ನ ಉತ್ತರವೆಂದರೆ—

ಇಷ್ಟು ದಿನಗಳ ವರೆಗೆ ಸಾಗಿದ ಪಿಕೆಟಿಂಗದಲ್ಲಿ ಜುಲುಮೆಯು ಸಮಾವಿಷ್ಟವಾಗಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಇದು ನಿಜವಿದ್ದಲ್ಲಿ, ತನ್ನ ಮನಸಿನ ವಿರುದ್ಧ ಆಚರಿಸಲು ಒಬ್ಬನಿಗೆ ಜುಲುಮೆ ಮಾಡುವದಕ್ಕಿಂತ ತನ್ನ ಮನಸಿಗೆ ಬಂದಂತೆ ನಡೆದುಕೊಳ್ಳಲು ಅವನಿಗೆ ಸ್ವಾತಂತ್ರ್ಯ ಕೊಡುವದೇ ನನಗೆ ಯೋಗ್ಯ ಕಾಣಿಸುತ್ತದೆ. ಕೆಲಸಗಾರರು ತಾಳ್ಮೆಯಿಂದ ಒಂದೇಸಮನೆ ತಮ್ಮ ಕಾರ್ಯ ಸಾಗಿಸಿದಲ್ಲಿ, ಕೊಳ್ಳುವವರ ಹೃದಯವೇ ಪರಿವರ್ತನ ಹೊಂದುವದೆಂದು ನಾನು ಧೃಢವಾಗಿ ನಂಬಿದ್ದೇನೆ. ನಾವು ಈ ವರೆಗೆ ವ್ಯಾಪಾರಸ್ಥರ ಮೇಲೆಯೇ ಬಹಳ ಜೋರು ಮಾಡಿದ್ದು, ಗಿರಾಕಿಗಳ ಮೇಲೆ ಏನೂ ಜೋರುಮಾಡಿಲ್ಲ ಜನತಾ ಜನಾರ್ದನನಿಗೆ ಈ ಸಂಬಂಧವಾಗಿ ಶಿಕ್ಷಣವನ್ನೀಯುವದು ಅತ್ಯವಶ್ಯವಿದೆ. ಅವರ ಹೃದಯ ಪರಿವರ್ತನೆ ಮಾಡುವದೇ ನಮ್ಮ ಧ್ಯೇಯವಿರುತ್ತದಲ್ಲದೆ, ಜುಲುಮೆ ಮಾಡುವದು ನಮ್ಮ ಧ್ಯೇಯವಿರುವದಲ್ಲ. ಜುಲುಮೆಯು ಅತ್ಯಾಚಾರದಲ್ಲಿ ಪರಿಣಮಿಸುತ್ತದೆ. ಅಹಿಂಸಾ ಹಾಗು ಪ್ರೀತಿಯಿಂದ ಹೃದಯವು ಪರಿವರ್ತನ ಹೊಂದುತ್ತದೆ.

ಕರಾಚಿ ಕಾಂಗ್ರೆಸದ ಭವಿತವ್ಯತೆ

(ಕರಾಚಿ ತಾ॥ ೨೫)

ಕರಾಚಿ ಕಾಂಗ್ರೆಸದಲ್ಲಿ ಏನಾಗುವದೆಂಬ ಬಗ್ಗೆ ಎಲ್ಲ ಪ್ರತಿನಿಧಿಗಳೂ ತರ್ಕವಿತರ್ಕ ಮಾಡಹತ್ತಿದ್ದಾರೆ ಮಹಾತ್ಮಾ ಗಾಂಧಿಯವರು ಒಪ್ಪಂದದ ಕರಾರುಗಳನ್ನು ಕಾಂಗ್ರೆಸದ ಮುಂದೆ ಮಂಡಿಸಿ, ಅವುಗಳಿಗೆ ಕಾಂಗ್ರೆಸದ ಒಪ್ಪಿಗೆ ಪಡೆದುಕೊಳ್ಳಲು ಪ್ರಯತ್ನಿಸುವರು. ರಾಜಕೀಯ ಪ್ರಶ್ನೆಗಳ ಸಂಬಂಧವಾಗಿ ಈಗ ಕೊಡಲ್ಪಟ್ಟಿರುವ ಆಶ್ವಾಸನವು ಕಾಂಗ್ರೆಸದವರಿಗೆ ಸಮಾಧಾನಕರವಾಗಿ ತೋರಿಬಂದಲ್ಲಿ ಮಾತ್ರ, ರಾಜಕೀಯ ಪ್ರಶ್ನೆಗಳ ಸಂಬಂಧವಾಗಿ ಬ್ರಿಟಿಶ ಸರಕಾರದೊಡನೆ ವಿಚಾರಮಾಡಲು ಲಂಡನ್ನಿನ ದುಂಡುಮೇಜಿನ ಪರಿಷತ್ತಿಗೆ ಕಾಂಗ್ರೆಸ ಪ್ರತಿನಿಧಿಗಳನ್ನು ಕಳಿಸಬೇಕಾಗಿ ಅವರು ಕಾಂಗ್ರೆಸಕ್ಕೆ ಕೇಳಿಕೊಳ್ಳುವರು. ಈ ಎರಡು ವಿಷಯಗಳಲ್ಲಿ ವರ್ಕಿಂಗ ಕಮೀಟಿಯವರು ಮಹಾತ್ಮರಿಗೆ ಬೆಂಬಲರಾಗಿ ನಿಂತುಕೊಂಡಿರುವರೆಂಬುವದು ಈಗ ಎಲ್ಲರಿಗೂ ಗೊತ್ತಾದ ವಿಷಯವಾಗಿದೆ.

ಪಂಡಿತ ಜವಾಹರಲಾಲರಿಗೆ ಒಪ್ಪಂದದ ಕರಾರುಗಳು ಅಸಮಾಧಾನಕರವಾಗಿದ್ದರೂ ಮಹಾತ್ಮರನ್ನೇ ಹಿಂಬಾಲಿಸಲು ಅವರು ನಿ[...]ಸಿಕೊಂಡಿದ್ದಾರೆ. ಹೀಗಾದ್ದರಿಂದ ಒಬ್ಬ ವಿ[...]ಧಕರು ಇಲ್ಲದಂತಾಗಿದೆ ಸಂಪೂರ್ಣ ಸ್ವಾ[...]ತ್ರ್ಯದ ಠರಾವಿಗೇನೇ ಧೃಢವಾಗಿ [...]ಕೊಂಡಿರುವ ಹಾಗು ಒಪ್ಪಂದದ ಕರಾರು[...] ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿ[...] ಶ್ರೀ ಸುಭಾಸಚಂದ್ರ ಬೋಸರ ಮೇಲೆ ಎಲ್ಲರೂ ತಮ್ಮ ದೃಷ್ಟಿಹೊರಳಿಸಿದ್ದಾರೆ [...] ನವಜವಾನ ಪರಿಷತ್ತು ಹಾಗು ರಾಜಕೀ[...] ಕೈದಿಗಳ ಪರಿಷತ್ತು ಇವುಗಳಿಗೆ ಅಧ್ಯಕ್ಷ[...]ಲು ಒಪ್ಪಿದ್ದಾರೆ. ವಿರೋಧಿ ಪಕ್ಷದ ಮುಖಂ[...]ತ್ವವನ್ನು ಅವರು ವಹಿಸಿಕೊಳ್ಳುವರೆಂದು [...]ತ್ಸಾಹಿ ತರುಣರು ಭಾವಿಸಿಕೊಂಡಿದ್ದಾರೆ.

ಗುಜರಾಥ, ಆಂಧ್ರ, ತಮಿಳನಾ[...] ಈ ಪ್ರಾಂತಗಳು ಮಹಾತ್ಮಾ ಗಾಂಧಿಯ[...]ಗೇನೇ ಬೆಂಬಲವಾಗಿ ನಿಂತುಕೊಳ್ಳುವವೆ[...] ತಿಳಿದುಬರುತ್ತದೆ.

ಭಗತಸಿಂಗ ಮೊದಲಾದವರನ್ನು [...]ಗೇರಿಸಿದ್ದಕ್ಕಾಗಿ ಪಂಜಾಬವು ಸಿಟ್ಟಿಗೆದ್ದಿ[...] ವಿಚಾರಣೆಯಿಲ್ಲದೆ ಸೆರೆಮನೆಗಳಲ್ಲಿ ಕೊಳೆಯು[...] ಬಿದ್ದಿರುವ ಡೆಟಿನ್ಯೂ ಕೈದಿಗಳನ್ನು ಬಿಡುಗ[...] ಮಾಡದ್ದಕ್ಕಾಗಿ ಬಂಗಾಲವು ಅಸಮಾಧಾ[...] ಹೊಂದಿದೆ. ಸಂಯುಕ್ತ ಪ್ರಾಂತದಲ್ಲಿ ಅ[...]ತೋಷವಿದೆ. ಒಪ್ಪಂದದ ಕರಾರುಗಳನ್ನು ಅ[...]ಕಾರಿ ವರ್ಗವು ಪಾಲಿಸದೆ ಇದ್ದದ್ದಕ್ಕಾಗಿ ಬಿಹಾ[...] ಪ್ರಾಂತವು ರೇಗಿಗೆದ್ದಿದೆ.

ಪಂಜಾಬ ಸರಕಾರದ ಪ್ರಕಟನೆ

ಲಾಹೋರ ಸೆಂಟ್ರಲ್ ಜೇಲಿನಲ್ಲಿ ಗ[...]ಗೇರಿಸಲ್ಪಟ್ಟ ಸರದಾರ ಭಗತಸಿಂಗ ಮೊ[...]ಲಾದವರ ಅಂತ್ಯಸಂಸ್ಕಾರದ ವಿಷಯವಾ[...] ಪಂಜಾಬ ಸರಕಾರದವರು ಕೆಳಗಿನಂತೆ ಪ್ರಕ[...]ಸಿದ್ದಾರೆ.

ಅವರ ಜಡದೇಹಗಳು ತಾ॥ ೨೩ ನೆಯ ದಿವಸ ರಾತ್ರಿ ೮-೩೦ ಗಂಟೆಗೆ ಲಾಹೋ[...] ಸೆಂಟ್ರಲ್ ಜೇಲಿನಿಂದ ಹೊರಗೆ ತರಲ್ಪಟ್ಟ[...] ಮೋಟಾರದಲ್ಲಿ ಸತಲಜ ನದೀತೀರಕ್ಕೆ ಒಯ್ಯ[...]ಲ್ಪಟ್ಟವು. ಮತ್ತೆ ನಾಲ್ಕು ಮೋಟಾರುಗಳ[...]ದರೂ ಈ ಮೋಟಾರನ್ನು ಹಿಂಬಾಲಿಸಿದ್ದವು ಎರಡು ಮೋಟಾರಗಳಲ್ಲಿ ಪೋಲೀಸರು ಇದ್ದರು ಉಳಿದ ಎರಡು ಮೋಟಾರುಗಳಲ್ಲಿ ಉರುವ[...]ವಿತ್ತು. ಗಂಡಾಸಿಂಗ ವಾಲದ ಹತ್ತರ ಆಚಾ[...]ರ್ಯ ಹಾಗು ಗ್ರಂಥಿಯವರು ಅವರನ್ನು ಕೂ[...]ಡಿದರು. ೧೧-೪೫ ಗಂಟೆಗೆ ಶವಗಳಿಗೆ ಬೆಂ[...] ಹಚ್ಚಲ್ಪಟ್ಟಿತು. ೪ ಗಂಟೆಯೊಳಗಾಗಿ ಅವ[...] ಸುಟ್ಟುಹೋಗಿ ಬೂದಿಯಾಯಿತು.

ಆಚಾರ್ಯರೊಡನೆ ವಿಚಾರಮಾಡಿ [...]ಗಂಟೆಯ ಮೇಲೆ ಬೂದಿಯನ್ನು ತೆಗೆದುಕೊಳ್ಳ[...]ಲಾಯಿತು. ಬೂದಿಯನ್ನು ಫಿರೋಜಪೂ[...]ರಿನ ಹತ್ತರ ಒಯ್ದು ೫-೩೫ ಗಂಟೆಗೆ ಸತ[...]ಲಜ ನದೀ ತೀರದಲ್ಲಿ ಚೆಲ್ಲಲಾಯಿತು. ಆಚಾ[...]ರ್ಯರು ಹಾಗು ಗ್ರಂಥಿಯವರು ಉತ್ತರಕ್ರಿಯೆಗಳನ್ನು ನೆರವೇರಿಸಿದರು. ಸುಡುವದಕ್ಕಿಂತ ಮುಂಚೆ ದೇಹದ ಭಾಗಗಳು ಬೇರೆ ಬೇರೆ ಮಾಡಲ್ಪಟ್ಟವು.” ಎಂಬುದಾಗಿ ಹಬ್ಬಿದ ಸುದ್ದಿಯು ಸುಳ್ಳು ಇರುತ್ತದೆ. ಬ್ರಿಟಿಶ ಇ[...]ಲ್ಲವೆ ಹಿಂದೀ ಸೈನಿಕರು ಶವಗಳನ್ನು ಹಿಂಬಾ[...]ಲಿಸಿದ್ದರೆಂಬುವದು ನಿಜವಿರುವದಿಲ್ಲ.

ಕರಾಚಿ ಕಾಂಗ್ರೆಸಕ್ಕೆ ಪಂಜಾಬಿನ ೬೦೦ ಪ್ರತಿನಿಧಿಗಳು

ಪಂಜಾಬ ಪ್ರಾಂತದ ೬೦೧ ಜನ ಪ್ರತಿನಿಧಿಗಳು ತಾ॥ ೨೫ ನೆಯ ದಿವಸ ಕಾಂಗ್ರೆಸ್ ಸ್ಪೇಶಲ್ ಗಾಡಿಯಿಂದ ಕರಾಚಿಗೆ ಪ್ರಯಾಣ ಬೆಳೆಸಿದರು.

ಕರಾಚಿಯ ಸ್ಪೇಶಲ್ ತಾರುಗಳು

ಕರಾಚಿ ತಾ ೨೭

ಕಾಂಗ್ರೆಸದಲ್ಲಿ ಈಗ ಎಲ್ಲಿ ನೋಡಿದಲ್ಲಿಯೂ ಜನಗಳೇ ಕಾಣಿಸುತ್ತಿದ್ದಾರೆ. ನಿನ್ನೆಯಿಂದ ಜನರು ತಂಡತಂಡವಾಗಿ ಬರುತ್ತಿದ್ದಾರೆ. ಸುವ್ಯವಸ್ಥೆಯನ್ನು ಕಾಯುವದಕ್ಕಾಗಿ ೨೦೦೦ ಸ್ವಯಂಸೇವಕರು ಅಲ್ಲಲ್ಲಿ ನಿಯಮಿಸಲ್ಪಟ್ಟಿದ್ದು, ಅವರು ಬಹಳೇ ವಿನಯಪೂರ್ವಕವಾಗಿಯೂ ವಿಶ್ವಾಸಪೂರ್ವಕವಾಗಿಯೂ ವರ್ತಿಸುತ್ತಿರುವರು. ಕಾಂಗ್ರೆಸ ಮಂಟಪದಲ್ಲಿ ಧ್ವನಿವಾಹಕ ಯಂತ್ರಗಳು ಇಡಲ್ಪಟ್ಟಿವೆ. ಮಹಾತ್ಮಾಗಾಂಧಿಯವರು, ನಿನ್ನಿನ ದಿವಸ ಸರದಾರ ಭಗತಸಿಂಗ ಮೊದಲಾದವರಿಗೆ ಗಲ್ಲುಕೊಟ್ಟಿದ್ದರ ಹಾಗು ಅಹಿಂಸಾ ಈ ವಿಷಯದ ಬಗ್ಗೆ ಭಾಷಣ ಮಾಡಿದರು. ನವಜವಾನ ಭಾರತ ಸಭೆಯವರು ಶ್ರೀ ಸುಭಾಸಚಂದ್ರ ಬೋಸರ ಅಧ್ಯಕ್ಷತೆಯ ಕೆಳಗೆ ಮುಂಜಾನೆ ಸಭೆ ಕೂಡಿಸಿದ್ದರು.

ಅ. ಭಾ. ಕಾ. ಕಮಿಟಿಯು ೩ ಕ್ಕೆ ಕೂಡಿತು. ಕಾಂಗ್ರೆಸದವರು ರಾಜಕೀಯ ಅತ್ಯಾಚಾರದೊಡನೆ ಸಹಕರಿಸುವದಿಲ್ಲ ಹಾಗು ಅವರು ಈ ಬಗ್ಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಾರೆಂಬುವದೂ, ಭಗತಸಿಂಗರ ಶೌರ್ಯ, ಸ್ವಾರ್ಥತ್ಯಾಗ ಮೊದಲಾದವುಗಳನ್ನು ಈ ಸಭೆಯು ಪ್ರಶಂಸಿಸುತ್ತದೆಂಬದಾಗಿಯೂ, ಲೋಕಮತವನ್ನು ಲೆಕ್ಕಿಸದೆ ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿ ಸರಕಾರವು ಬುದ್ಧ್ಯಾಪೂರ್ವಕವಾಗಿ ಸೇಡು ತೀರಿಸಿಕೊಳ್ಳುತ್ತಿರುವದಲ್ಲದೆ, ಎರಡೂ ರಾಷ್ಟ್ರಗಳಲ್ಲಿ ಸುಸಮಾಧಾನವು ನೆಲೆಗೊಳ್ಳಲು ಯೋಗ್ಯ ಸಮಯವು ಸಿಕ್ಕಿರುವಾಗ, ಸರಕಾರದವರು ಸುಸಂಧಿಯನ್ನು ಕಳೆದುಕೊಳ್ಳುತ್ತಿರುವರೆಂದೂ ಇವೇ ಮೊದಲಾದ ಠರಾವುಗಳು ಸಭೆಯ ಮುಂದೆ ಬಂದವು. "ಅತ್ಯಾಚಾರದೊಡನೆ ಸಹಕರಿಸುವದಿಲ್ಲ ಹಾಗು ಅಸಮ್ಮತಿಯನ್ನು ವ್ಯಕ್ತಪಡಿಸುತ್ತದೆ." ಈ ಶಬ್ದಗಳನ್ನು ತೆಗೆದು ಹಾಕಲು ಕೆಲವರು ಸೂಚನೆ ತಂದರು. ಸೂಚನೆಗಳು ಸ್ವೀಕೃತವಾಗಲಿಲ್ಲ. ಮೂಲ ಠರಾವಿನ ಮೇಲೆ ಬಹಳೇ ವಾದವಿವಾದವಾಗಿ ಅದು ಬಹುಮತದಿಂದ ಸ್ವೀಕೃತವಾಯಿತು.

ಯಾವತ್ತೂ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು; ಸೈನ್ಯ, ಪರರಾಷ್ಟ್ರೀಯ ಸಂಬಂಧ, ಬೊಕ್ಕಸ, ಆರ್ಥಿಕಸ್ವಾಯತ್ತತೆ, ಸಾಲದ ಹೊಣೆಯ ಸಂಬಂಧವಾಗಿ ವಿಚಾರಣೆ ನಡೆಸುವದು, ಬ್ರಿಟಿಶ ಸಾಮ್ರಾಜ್ಯದಿಂದ ಹೊರಬಿದ್ದು ಹೋಗುವ ಹಕ್ಕು, ಇವೇ ಮೊದಲಾದವುಗಳ ಸಂಬಂಧವಾಗಿ ಹಿಂದೀಯರಿಗೆ ಅಧಿಕಾರ ಕೊಡಬೇಕೆಂಬುದಾಗಿ ಮಹಾತ್ಮಾಗಾಂಧಿಯವರು ವರ್ಕಿಂಗ ಕಮೀಟಿಯ ಉಳಿದ ಪ್ರತಿನಿಧಿಗಳೊಂದಿಗೆ ಬಂಡೀಗಾಲಿಯ ಪರಿಷತ್ತಿನಲ್ಲಿ ಹೇಳಿಕೊಳ್ಳಬೇಕು, ಈ ಸಂಬಂಧವಾಗಿ ಠರಾವುಗಳು ವರ್ಕಿಂಗ ಕಮೀಟಿಯ ಅಧಿಕಾರದ ಮುಂದೆ ತರಲ್ಪಟ್ಟವು. ಈ ಠರಾವಿನ ಮೇಲಿನ ವಿಚಾರವು ಮುಂದರಿಸಲ್ಪಟ್ಟಿತು. ನಾಳಿನ ದಿವಸ ಕಮೀಟಿಯು ಮಧ್ಯಾನ್ಹದಲ್ಲಿ ಮತ್ತೆ ಸೇರತಕ್ಕದ್ದಿದೆ. ಇವತ್ತಿನ ಸಭೆಯು ಮುಗಿಯ ಹೊಂದುವದಕ್ಕಿಂತ ಪೂರ್ವದಲ್ಲಿ ಮಹಾತ್ಮಾ ಗಾಂಧಿಯವರು ಕಾನಪುರದಲ್ಲಿ ನಡೆದ ದಂಗೆಯನ್ನು ನಿಷೇಧಿಸಿ ಸ್ವಲ್ಪದರಲ್ಲಿ ಭಾಷಣ ಮಾಡಿದರು.

ಸುಮಾರು ೩೦೦೦ ಪ್ರತಿನಿಧಿಗಳು ಬಂದಿದ್ದು, ಕರ್ನಾಟಕದಿಂದ ಬಹುತರ ಎಲ್ಲ ಪ್ರತಿನಿಧಿಗಳು ಬಂದಿರುವರಾಗಿ ತಿಳಿಯುತ್ತದೆ.

ಸೇವಾದಲ ಪರಿಷತ್ತು.

[ಸಂತಿಯ ವಾರ್ತೆ, ಕರಾಚಿ ತಾ। ೨೮]

ಹಿಂದುಸ್ಥಾನೀ ಸೇವಾದಲದ ಪರಿಷತ್ತು ತಾ. ೩೧ ನೇ ದಿವಸ ಸಂಜೆ ೬ ಗಂಟೆಗೆ ಶ್ರೀ ಸಾಂಬಮೂರ್ತಿಯವರ ಅಧ್ಯಕ್ಷತೆಯಲ್ಲಿ ಸೇರತಕ್ಕದ್ದಿದೆ.

(ಶಾಂತಿಯ ವಾರ್ತೆ, ಕರಾಚಿ ತಾ. ೨೮)

ಒಪ್ಪಂದದ ಕರಾರುಗಳಿಗೆ ಅನ್ವಯಿಸಿ ಬಿಡ್ದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುವದಕ್ಕೆ ಸಂಬಂಧಿಸಿದ ಠರಾವು ಇವತ್ತಿನ ದಿವಸ ವಿಷಯ ನಿಯಾಮಕ ಮಂಡಳದಲ್ಲಿ ಚರ್ಚೆಗೆ ಬರತಕ್ಕದ್ದಿದೆ. ಈ ಠರಾವಿಗೆ [illegible] ಕ್ರಾಂತವಾದಿ ಬೆಂಬಲ ದೊರಕಿಸಿ ಕೊಳ್ಳುವ ಬಗ್ಗೆ ಬಹಳ ನಡೆಸಿದೆ. ಮಹಾರಾಷ್ಟ್ರದ ಪ್ರತಿನಿಧಿಗಳು, ಈ ಠರಾವಿನಲ್ಲಿ ಸೊಲ್ಲಾಪುರ ದಂಡನ ಕೈದಿಯ, ಕೈದಿಗಳು ಹಾಗು ಚಿರನೇರ ಖಟ್ಲೆಯ ಆರೋಪಿಗಳು ಇವರ ಬಿಡುಗಡೆಯ ವಿಷಯವನ್ನು ದಯಾ ಸೇರಿಸಬೇಕೆಂದು ಪ್ರಯತ್ನ ನಡಿಸಿದ್ದಾರೆ.

ತಾತ್ಪೂರ್ತಿಕ ಒಪ್ಪಂದದ ಬಗ್ಗೆ ನಾಮಯಾ ಅಸ್ಪಷ್ಟವಾಗಿರುವದೆಂಬುದನ್ನು ವ್ಯಕ್ತಪಡಿಸಿ ಒಪ್ಪಂದದ ಕರಾರುಗಳಿಗೆ ತಮ್ಮ ಅಸಮ್ಮತಿಯನ್ನು ತೋರಿಸುತ್ತಿರುವ ಅಲ್ಪಸಂಖ್ಯಾತರ ವಿಶೇಷ [illegible] ವರ್ಗದ [illegible] ಮಹಾತ್ಮರೊಡನೆ ಕೆಲವರು ಚರ್ಚೆ ನಡಿಸಿದ್ದಾರೆ. ಆದು ಅಸ್ಪಷ್ಟವೇ ಇದೆಯೆಂದು ಮಹಾತ್ಮರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಂದು ತಿಳಿಯುತ್ತದೆ.

(ಕರಾಚಿ ತಾ॥ ೨೭)

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಇವತ್ತಿನ ದಿವಸ ಸಭೆ ಕೂಡಿ ವರ್ಕಿಂಗ ಕಮಿಟಿಯವರಿಂದ ಸಿದ್ಧಪಡಿಸಲ್ಪಟ್ಟ ಠರಾವುಗಳ ವಿಷಯವಾಗಿ ಚರ್ಚೆ ಮಾಡಿದರು. ಕರಾಚಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಸರದಾರ ವಲ್ಲಭಭಾಯಿಯವರೇ ಅಧ್ಯಕ್ಷರಾಗಿದ್ದರು. ಅವರು ದಿಲ್ಲಿಯಲ್ಲಿ ನಡೆದ ಒಪ್ಪಂದವು ತಾತ್ಪೂರ್ತಿಕವಾದ ಒಪ್ಪಂದವಾಗಿದೆಯೆಂತಲೂ, ದಯಾ [illegible] ತಾತ್ಪೂರ್ತಿಕವಾಗಿ ನಿಲ್ಲಿಸಲ್ಪಟ್ಟಿರುವದೇ ಹೊರ್ತು ಯುದ್ಧವು ಮುಕ್ತಾಯವಾಗಿಲ್ಲವೆಂತಲೂ, ಹೇಳಿದರು. ಯಾವ ವಿಧದ ರಾಜಕೀಯ ಅತ್ಯಾಚಾರವನ್ನೂ ಸಹಕರಿಸದೆ ಭಗತಸಿಂಗರ ಶೌರ್ಯ, ಸ್ವಾರ್ಥತ್ಯಾಗಗಳನ್ನು ಈ ಸಭೆಯು ಪ್ರಶಂಸಿಸುತ್ತದೆ ಎಂಬ ಠರಾವು ಪಾಸುಮಾಡಲ್ಪಟ್ಟಿತು.

ಗಲ್ಲಿನ ಶಿಕ್ಷೆಯನ್ನು ರದ್ದ ಪಡಿಸಲು ರಾಷ್ಟ್ರವೇ ಸರ್ವಾನುಮತದಿಂದ ಬೇಡಿಕೊಂಡಿದ್ದರೂ ಸಹ ಅದನ್ನು ಲೆಕ್ಕಿಸದೆ ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ್ದು ಸೇಡು ತೀರಿಸಿಕೊಳ್ಳುವ ಕೃತಿಯಾಗಿರುತ್ತದೆಂತಲೂ, ನಿರಾಶೆ ಹೊಂದಿದ ಅತ್ಯಾಚಾರ ಮಾರ್ಗ ಸ್ವೀಕರಿಸಿದವರನ್ನು ಶಾಂತ ಮಾರ್ಗಕ್ಕೆ ಎಳೆದುಕೊಳ್ಳುವ ದೊರೆತ ಸುಸಂಧಿಯನ್ನು ಸರಕಾರವು ಈ ಕೃತಿಯಿಂದ ಕಳೆದುಕೊಂಡಿತೆಂದೂ, ಎರಡೂ ರಾಷ್ಟ್ರಗಳಲ್ಲಿ ಸುಸಮಾಧಾನವನ್ನು ನೆಲೆಗೊಳಿಸುವದು ಈಗ ಅತ್ಯವಶ್ಯವಿದ್ದರೂ, ಸರಕಾರದವರು ಈ ಕೃತಿಯನ್ನು ಜರುಗಿಸಿ ಆ ಸುಸಂಧಿಯನ್ನು ವ್ಯರ್ಥವಾಗಿ ಹೋಗಗೊಟ್ಟರೆಂದೂ ಈ ಸಭೆಯು ಅಭಿಪ್ರಾಯ ಪಡುತ್ತದೆ.

ಸಭೆಯು ಈ ಕೆಳಗಿನ ಠರಾವನ್ನು ಚರ್ಚೆ ಮಾಡಿ, ಏನೊಂದು ನಿರ್ಣಯ ಮಾಡದೆ, ಚರ್ಚೆಯನ್ನು ಪುನಃ ಮರುದಿನಕ್ಕೆ ಮುಂದೂಡಿತು.

ಈ ಸಭೆಯು ಗಾಂಧಿ—ಆಯರ್ವಿನರ ತಾತ್ಪೂರ್ತಿಕ ಒಪ್ಪಂದವನ್ನು ವಿಚಾರಮಾಡಿ ಅದನ್ನು ದೃಢ ಪಡಿಸುತ್ತದೆ. ಮತ್ತು ಕಾಂಗ್ರೆಸದ ಧ್ಯೇಯವು ಪೂರ್ಣ ಸ್ವರಾಜ್ಯವೇ ಇದೆಯೆಂದು ಸ್ಪಷ್ಟಪಡಿಸಬಿಚ್ಛಿಸುತ್ತದೆ. ರಾಜ್ಯಘಟನೆಯ ಸಂಬಂಧವಾಗಿ ಬ್ರಿಟಿಶ ಸರಕಾರದ ಪ್ರತಿನಿಧಿಗಳೊಡನೆ ಪರಿಷತ್ತಿನಲ್ಲಿ ಕೂಡಿಕೊಂಡು ವಿಚಾರಮಾಡಲು ಕಾಂಗ್ರೆಸ್ಸಿಗೆ ಅಧಿಕಾರವಿದೆ. ಕಾಂಗ್ರೆಸ್ ಶಿಷ್ಟಮಂಡಳದವರು ಈ ಧ್ಯೇಯದ ಸಲುವಾಗಿಯೂ ವಿಶೇಷತಃ ಸೈನ್ಯದ, ಪರರಾಷ್ಟ್ರೀಯ ಸಂಬಂಧ, ಬೊಕ್ಕಸ ಇವುಗಳ ಮೇಲಿನ ಅಧಿಕಾರ ಆರ್ಥಿಕ ಸ್ವಾಯತ್ತತೆ, ಹಿಂದುಸ್ಥಾನದ ಸಲುವಾಗಿ ಬ್ರಿಟಿಶರು ಎತ್ತಿದ ಸಾಲದ ಬಗ್ಗೆ ನಿಷ್ಪಕ್ಷಪಾತ ಮಂಡಳದವರಿಂದ ವಿಚಾರಣೆ ನಡಿಸುವದು, ಬ್ರಿಟಿಶ ಸಾಮ್ರಾಜ್ಯದಿಂದ ಹೊರಬಿದ್ದು ಹೋಗಲು ಹಕ್ಕು ಪ್ರಸ್ಥಾಪಿಸಿಕೊಳ್ಳುವದು, ಇವೇ ಮೊದಲಾದ ವಿಷಯಗಳ ಬಗ್ಗೆ ಕಾರ್ಯನಿರತರಾಗುವರು.

ವರ್ಕಿಂಗ ಕಮೀಟಿಯವರಿಂದ ನಿಯಮಿಸಲ್ಪಡಬಹುದಾದ ಪ್ರತಿನಿಧಿಗಳೊಂದಿಗೆ ಕೂಡಿಕೊಂಡು ಈ ವಿಷಯಗಳನ್ನು ಪರಿಷತ್ತಿನ ಮುಂದೆ ಮಂಡಿಸಲು ಈ ಸಭೆಯು ಮಹಾತ್ಮಾ ಗಾಂಧಿಯವರಿಗೆ ಅಧಿಕಾರ ಕೊಡುತ್ತದೆ. ಮತ್ತು ಈ ಮಂಡಳಕ್ಕೆ ಮಹಾತ್ಮಾಗಾಂಧಿಯವರನ್ನೇ ಈ ಸಭೆಯು ನಾಯಕನನ್ನಾಗಿ ನಿಯಮಿಸುತ್ತದೆ. ಸಭೆಯು ಮಂಡರಿಸಲ್ಪಡುವದಕ್ಕಿಂತ ಪೂರ್ವದಲ್ಲಿ ಮಹಾತ್ಮಾ ಗಾಂಧಿಯವರು ಕಾನಪುರ ಹಾಗು ಮುಂಬಯಿ ದಲ್ಲಿಯ ಕೋಮುವಾರು ಸಂಗತಿಗಳ ವಿಷಯವಾಗಿ ಸಭಾಸದರನ್ನುದ್ದೇಶಿಸಿ ಭಾಷಣಮಾಡಿ ಅನಿಷ್ಟದ ಕಾಲವನ್ನೇ ತಪ್ಪಿಸಿ [illegible] ಯೋಗ್ಯ ಉಪಾಯಗಳನ್ನು ಕೈಕೊಳ್ಳಬೇಕಾಗಿ ಕೇಳಿಕೊಂಡರು.

[ಅ. ಪ್ರೆ]

ಅಖಿಲಭಾರತ

ಕಾಂಗ್ರೆಸ್ ಕಮೀಟಿಯ ಸಭೆ.

(ಸ್ಪೇಶಲ್ ತಂತಿ, ಕರಾಚಿ ತಾ॥ ೨೬)

ಅಖಿಲಭಾರತ ಕಾಂಗ್ರೆಸ್ ಕಮೀಟಿಯ ಸಭೆಯು ಮಧ್ಯಾನ್ಹದಲ್ಲಿ ೩ ಗಂಟೆಗೆ ಸೇರಿತು, ೨೦೦ ಜನ ಸಭಾಸದರು ಸಭೆಯಲ್ಲಿ ಭಾಗ ತೆಗೆದುಕೊಂಡಿದ್ದರು, ಸರದಾರ ಭಗತಸಿಂಗರ ತಂದೆಯವರಾದ ಸರದಾರ ಕಿಶನಸಿಂಗರೂ, ದಿವಂಗತ ಮೋತಿಲಾಲರ ಪತ್ನಿಯವರಾದ ಸ್ವರೂಪರಾಣಿ ನೆಹರೂರವರೂ ೨೦೦೦ ಜನ ಪ್ರೇಕ್ಷಕರೂ ಸಭೆಗೆ ಆಗಮಿಸಿದ್ದರು. ವರದಿಯು ಒಪ್ಪಿಸಲ್ಪಟ್ಟ ನಂತರದಲ್ಲಿ ಸರದಾರ ಭಗತಸಿಂಗ ಮೊದಲಾದವರ ಸ್ಮರಣಾರ್ಥವಾಗಿ ಸಭೆಯು ೧೫ ಮಿನಿಟಗಳ ವರೆಗೆ, ಮುಂದರಿಸಲ್ಪಟ್ಟಿತು. ಬಳಿಕ ವಿಷಯನಿಯಾಮಕ ಮಂಡಳದ ಸಭೆ ಸೇರಿ. ಪಂಡಿತ ಮೋತಿಲಾಲ ನೆಹರೂ ಮೊದಲಾದವರು ನಿಧನಹೊಂದಿದ ಬಗ್ಗೆ ದುಃಖಪ್ರದರ್ಶಕ ಠರಾವುಗಳು ಪಾಸು ಮಾಡಲ್ಪಟ್ಟವು.

ವರ್ಕಿಂಗ ಕಮೀಟಿಯ ಸಭೆ

(ಕರಾಚಿ ತಾ॥ ೨೫)

ಕಾಂಗ್ರೆಸ್ ವರ್ಕಿಂಗ ಕಮೀಟಿಯವರು ತಾ॥ ೨೫ ನೆಯ ದಿವಸ ಮಧ್ಯಾನ್ಹದಲ್ಲಿ ಮಹಾತ್ಮರ ಬಿಡಾರದಲ್ಲಿ ತಮ್ಮ ಸಭೆ ಸೇರಿಸಿಕೊಂಡಿದ್ದರು, ೧೪ ಜನ ಸಭಾಸದರು ಸಭೆಗೆ ಆಗಮಿಸಿದ್ದರು. ಕಮೀಟಿಯವರು ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ನಾಲ್ಕು ತಾಸುಗಳವರೆಗೆ ಚರ್ಚೆ ಮಾಡಿದರು. ಆದರೆ ಕೊನೆಯಲ್ಲಿ ಯಾವದೂ ನಿರ್ಣಯವಾಗಲಿಲ್ಲ.

ಕಮೀಟಿಯವರು ಮೊಟ್ಟಮೊದಲು ಬಂಡೀಗಾಲಿಯ ಪರಿಷತ್ತಿನಲ್ಲಿ ಕಾಂಗ್ರೆಸದವರ ಸೇರುವಿಕೆ, ಹಾಗು ಭದ್ರಸ್ಥಾನಗಳ ಸಂಬಂಧವಾಗಿ ಮಿ. ಬೆನ್ನ ಮತ್ತು ಲಾರ್ಡ ಸ್ಯಾಂಕಿಯವರು ವ್ಯಕ್ತಪಡಿಸಿದ ಅಭಿಪ್ರಾಯ ಇವುಗಳ ಬಗ್ಗೆ ಚರ್ಚೆ ನಡಿಸಿದರು.

ಹಿಂದೀ ಸಂಸ್ಥಾನಗಳಲ್ಲಿಯ ಪ್ರಜೆಗಳ ಹಕ್ಕು ಬಾಧ್ಯತೆಗಳ ವಿಷಯವಾಗಿಯೂ ಕಮೀಟಿಯಲ್ಲಿ ಚರ್ಚೆಯಾಯಿತು. ಸಂಸ್ಥಾನ ಪ್ರಜೆಗಳ ಬೇಡಿಕೆಗೆ ಕಾಂಗ್ರೆಸದವರು ಬೆಂಬಲಕೊಡಬೇಕಾಗಿ ಎಲ್ಲರೂ ಅಭಿಪ್ರಾಯಪಟ್ಟರು.

ಕೊನೆಯಲ್ಲಿ ಬರ್ಮಾಪ್ರಾಂತದ ಪ್ರಶ್ನೆಯು ವಿಚಾರ ಮಾಡಲ್ಪಟ್ಟಿತು. ಈ ಸಂಬಂಧವಾಗಿ ವರ್ಕಿಂಗ ಕಮೀಟಿಯ ವರೊಡನೆ ವಿಚಾರ ಮಾಡಲು ೭ ಜನ ಬರ್ಮಾ ಮುಖಂಡರು ಇಲ್ಲಿಗೆ ಬಂದಿದ್ದಾರೆ. ಬರ್ಮಾ ಪ್ರಾಂತವು ಹಿಂದುಸ್ಥಾನದ ಸಂಯುಕ್ತ ಘಟನೆಯಲ್ಲಿ ಸೇರಿಕೊಳ್ಳುವದರ ಸಂಬಂಧವಾಗಿ ಅವರು ವರ್ಕಿಂಗ ಕಮೀಟಿಯವರೊಡನೆ ಮಾತುಕತೆ ನಡಿಸಿದರು.

ಅಸೆಂಬ್ಲಿಯಲ್ಲಿ

ಪ್ರಾಪ್ತಿಯ ಕರಕ್ಕೆ ವಿರೋಧ

(ಶಾಂತಿಯ ವಾರ್ತೆ. ತಾ। ೨೭)

ಫಾಯನಾನ್ಸ ಬಿಲ್ಲಿನ ಭಾಗವಾದ ಪ್ರಾಪ್ತಿಯ ಕರದ ಸಂಬಂಧವಾಗಿ ವ್ಹಾಯಿಸರಾಯರಿಂದ ಬರೆದುಬಂದ ಶಿಫಾರಸನ್ನು ಅಸೆಂಬ್ಲಿಯು ೫೬ ವಿರುದ್ಧ ೬೦ ಮತಗಳಿಂದ ನಿರಾಕರಿಸಿತು. ವ್ಹಾಯಿಸರಾಯರ ಶಿಫಾರಸನ್ನು ಅಸೆಂಬ್ಲಿಯು ನಿರಾಕರಿಸಿದೆಯೆಂದು ಅಧ್ಯಕ್ಷರು ಸರ್ಟಿಫಿಕೇಟು ಕೊಡಬೇಕೆಂಬ ಉದ್ದೇಶದಿಂದ ಸರ್ ಜೋರ್ಜ ಶಿಸ್ಟೂರರು ಆ ಮಸೂದೆಯನ್ನು ಮೂರನೇ ಸಲ ಸಭೆಯ ಮುಂದೆ ತರಲಿಲ್ಲ. ಕಾಯದೆಗಳಿಗನುಸರಿಸಿ ನಡೆಯುವದರಲ್ಲಿ ಬರುವದಾಗಿ ಅಧ್ಯಕ್ಷರು ಆಶ್ವಾಸನ ಕೊಟ್ಟರು. (ಅ. ಪ್ರೆ)

ಅಫಗಾನ ಬಂಡುಗಾರನನ್ನು ತೋಫಿನ ಬಾಯಿಗೆ ಕೊಟ್ಟರು

ಪೇಶಾವರ ಪ್ರಾಂತದ ದಸಾಲನಾನ ಎಂಬ [illegible] ಎಂಬ ಮತ್ತೊಬ್ಬ ಬಂಡುಗಾರನೊಂದಿಗೆ ಕೂಡಿ ಆ ಪ್ರದೇಶದಲ್ಲಿ ಲೂಟಿ ಪ್ರಾರಂಭಿಸಿದ್ದನು. ಅಫಗಾನ ಸೈನಿಕರು ಅವನನ್ನು ಎದುರಿಸಿ, ಅವನಿಗೆ ಗುಂಡು ಹೊಡೆದ [illegible] ಬಾವ [illegible] ಎಂಬಲ್ಲಿಗೆ ತೆಗೆದುಕೊಂಡು ಬಂದರು. ಅಲ್ಲಿ ಅವನನ್ನು ಪಟ್ಟಣದಲ್ಲೆಲ್ಲ ತಿರುಗಾಡಿಸಿ ಕೊನೆಯಲ್ಲಿ ಅವನನ್ನು ತೋಫಿನ ಬಾಯಿಗೆ ಕೊಟ್ಟರು.

ಕರ್ನಾಟಕ ಪ್ರಾಂತ ನಿರ್ಮಾಣ

ಕಾಂಗ್ರೆಸ ಅಧ್ಯಕ್ಷರಿಗೆ ಬಾಗಲಕೋಟೆಯಿಂದ ತಾರು.

ಇಲ್ಲಿಯ ಕರ್ನಾಟಕ ವ್ಯಾಪಾರ ಸಂಘ ಹಾಗು ಕರ್ನಾಟಕ ಏಕೀಕರಣ ಸಂಘದವರು, ಬ್ರಿಟಿಶ ಕರ್ನಾಟಕವನ್ನು ಬೇಗನೆ ಒಂದು ಪ್ರಾಂತವನ್ನಾಗಿ ಏರ್ಪಡಿಸಬೇಕೆಂದು ಕರಾಚಿ ಕಾಂಗ್ರೆಸದ ಅಧ್ಯಕ್ಷರಿಗೆ ಇವತ್ತಿನ ದಿವಸ ತಾರು ಕಳಿಸಿದ್ದಾರೆ.

ದಾನಿ—ದಾಬಡೆ ಟೇಲರ್ಸ

ನಮ್ಮಲ್ಲಿ ವೇಳೆಗೆ ಸರಿಯಾಗಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಅರಿವೆಗಳನ್ನು ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ಪರೀಕ್ಷಿಸಿರಿ.

ದಾನಿ—ದಾಬಡೆ
ಟೇಲರ್ಸ
ಬಾಗಲಕೋಟೆ—ಗ ಕೇದಗುಡ್ಡ

ಜಾಹೀರಾತುದಾರರಿಗೆ

ಒಳ್ಳೆ ಸುಸಮಯ

ಯುಗಾದಿಯಿಂದ "ಕನ್ನಡಿಗ"ನ ನಿತ್ಯಸಂಚಿಕೆಯು ಆಕಾರವನ್ನು ಮೊದಲಿನ ಇಮ್ಮಡಿ ಮಾಡಿರುವೆವು. ಅದರ ಪ್ರಚಾರವು ಮೊದಲಿನಕಿಂತಲೂ ಹೆಚ್ಚಿಗಿದೆ. ಕಾಯಂ ಜಾಹೀರಾತುದಾರರು ದೊರೆಯುವವರೆಗೆ ಕೆಲವು ದಿನಗಳವರೆಗೆ ಅತಿ ಸೋವಿ ದರದಿಂದ ಜಾಹೀರಾತು ಮುದ್ರಿಸುವೆವು. ಇಚ್ಛೆಯುಳ್ಳವರು ತ್ವರೆಮಾಡಬೇಕು. ದರ ಮೊದಲಾದವುಗಳ ಬಗ್ಗೆ ಸವಕ್ಷಮ ಅಥವಾ ಪತ್ರದ್ವಾರದಿಂದ ತಿಳಿದು ಕೊಳ್ಳಬೇಕು.

ವ್ಯವಸ್ಥಾಪಕ
"ಕನ್ನಡಿಗ", ಬಾಗಲಕೋಟೆ.

ಸ್ಯಾಂಪಲ್) ಮಣಿ ಚೀಟಿಗಳು (ಪ್ರುಕ್ಕಟೆ

ನೀಲಿ ಕಪ್ಪು, ಕೆಂಪು, ಹಾಂಬಳೆ ಮಣಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ	೨—೨—೦
೧ ಸಾವಿರ ಚೀಟಿಗಳಿಗೆ,	೩-೮-೦
೫ ಸಾವಿರಕ್ಕೆ,	೧೬-೦-೦ ರೇಲ್ವೆ ಫ್ರೀ
೫ ತೊಲಾ ಪಾಕೀಟುಗಳಿಗೆ	೧-೮-೦
ರಬ್ಬರ ಸ್ಟ್ಯಾಂಪ ಮಣಿ ಸ್ಟಿಂಪಿನ ೧ ಡಬ್ಬಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭಾಷಾ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಇತಿಹಾಸ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದೂದೇಶದ ಶಾಸನ ಪದ್ಧತಿ	೧-೦-೦

("ಟೆಕ್ಸ್ಟ ಬುಕ್" ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಪಾಠೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ವಿಜಾಪುರದಿಂದ ಪಂಢರಪೂರ ಮೋಟರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಜಡಚಣ, ಮಂಗಳವೇಢೆ ದಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕೆಳಗಿನ ವಿಳಾಸದವರ ಕಡೆಗೆ ಸಮಕ್ಷಮ ಬಂದು ಕೇಳಿಕೊಳ್ಳಬೇಕು.

ಮ್ಯಾನೇಜರ.

ಅಂಬಿಕ ಮಹಾಲಕ್ಷ್ಮಿ ಮೋಟಾರ ಸರ್ವಿಸ
ವಿಜಾಪುರ.

ಚರಖಾಸಂಘ.

ಬಾಗಲಕೋಟೆಯಲ್ಲಿ ಚರಖಾಸಂಘವು ಸಣ್ಣ ಪ್ರಮಾಣದ ಮೇಲೆ ಒಂದು ಔದ್ಯೋಗಿಕ ಶಾಲೆಯನ್ನೇ ನಡಿಸಿರುತ್ತದೆ. ಈ ಶಾಲೆಯಲ್ಲಿ ಬಡಿಗತನವನ್ನು ಹೊರತುಪಡಿಸಿ ಹತ್ತಿಯ ಕಾಳು ತೆಗೆಯುವದು, (ಅರಿಯುವದು) ಅರಳೀ ಹಿಂಜಿ ಹಂಜೀ ಮಾಡುವದು, ನೂಲು ವದು, ನೂಲಿಗೆ ಬಣ್ಣ ಮಾಡುವದು, ನೇಯುವದು, ಮತ್ತು ಖಾದೀ ಪ್ರಕಾರ ಮಾಡುವದು ಮುಂತಾದ ವಿಷಯಗಳನ್ನು ಕಲಿಸುತ್ತಾರೆ.

ವಿದ್ಯಾರ್ಥಿಗಳು ತಮ್ಮ ಊಟಉಡಿಗೆಯ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕು. ಯಾವನಾದರೂ ತೀರ ಬಡವನೆಂದು ಮನವರಿಕೆ ಮಾಡಿಕೊಟ್ಟಲ್ಲಿ ಅವನ ಊಟದ ಬಗ್ಗೆ ಹಣದ ಸಹಾಯವಾಗಲೀ ಊಟದ ಬೇರೆ ವ್ಯವಸ್ಥೆಯಾಗಲೀ ಮಾಡುವದಲ್ಲಿ ಬರುವದು. ಅವರಿಗೆ ಇರಲಿಕ್ಕೆ ಜಾಗೆಯ ವ್ಯವಸ್ಥೆಯನ್ನು ಮಾಡಿಕೊಡುವದು, ವಿದ್ಯಾರ್ಥಿಗಳು ಸಂಘದ ನಿಯಮಗಳಿಗೆ ಒಳಪಟ್ಟಿರಬೇಕು.

ಕರ್ನಾಟಕದ ಸೇವೆ ಮಾಡಲಪೇಕ್ಷಿಯುಳ್ಳವರು ಈ ಸುಸಂಧಿಯನ್ನು ಕಳೆದು ಕೊಳ್ಳಬಾರದು. ಈ ಸಂಘದಲ್ಲಿ ಕೆಳಗೆ ಬರೆದ ಯಾವತ್ತು ಸಾಮಾನುಗಳು ಮಾರಾಟಕ್ಕೆ ಸಿಗುತ್ತವೆ,

೧ ಹತ್ತೀಕಾಳು ಬಿಡಿಸುವ ಚಾಡರ್ಖ(ಲಿ ಕ್ಕರಾಟೆ.

೨ ಅರಳೀ ಹಿಂಜುವ ಬಿಕ.

೩ ಕಾತ (ಚೆಸಿಯುದಾರ)

೪ ಕೆಂಡಕಿ.

೫ ಶಾಸ್ತ್ರೀಯ ರೀತಿಯಿಂದ ಸಿದ್ಧಪಡಿಸಿದ ಹಂಜಿ (೬೦ ನಂಬರದ ನೂಲು ತೆಗೆಯಲಿಕ್ಕೆ ಬರುವಂಥವು.

೬ ಕದರು ಮತ್ತು ಘೀಕೆ.

ಹೆಚ್ಚಿನ ಮಾಹಿತಿ ಬಗ್ಗೆ ವ್ಯವಸ್ಥಾಪಕರ ಕಡೆ ಪತ್ರವ್ಯವಹಾರದ ಬಗ್ಗೆ ಮುಂಗಡ ಪೋಸ್ಟ ತಿಕೀಟು ಕಳಿಸಬೇಕು.

ಶ್ರೀ ಸುತ ರಾಘವೇಂದ್ರರಾವ ದೇಸಾಯಿ
ವ್ಯವಸ್ಥಾಪಕ
ಚರಖಾಸಂಘ ಬಾಗಲಕೋಟೆ.

ಸ್ವದೇಶೀ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈನೂಲು, ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ ರೀತಿಯ ಪೇಟಾ, ಖಣ, ಕೊಂಟಾಗಳ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ಹಣಮಂತರಾವ
'ಸ್ವದೇಶೀ ಸ್ಟೋರ್ಸ'
ಹೊಸ ಬಾಜಾರ, ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೊಪ್ಪಿಗೆಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೊಪ್ಪಿಗೆಗಳು, ಜರದ ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು. ವ್ಯಾಪಾರಸ್ಥರಿಗೆ ದಲ್ಲಾಳಿ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ
'ಶ್ಯಾಮಸುಂದರ' ಮೋಹರೋದ
ವಿಜಾಪುರ

ಡಾಕ್ಟರ ಕೃಷ್ಣರಾವ ಪರ್ವತಿಕರ

ಇವರ

ಮೆಡಿಕಲ್ ಸ್ಟೋರ್ಸ

ನಮ್ಮಲ್ಲಿ ದೇಶಿ ಹಾಗು ಪೆಟಂಟ ಔಷಧಗಳು ಮತ್ತು ದವಾಖಾನೆಗೆ ಉಪಯೋಗಬೀಳುವ ಎಲ್ಲತರದ ಸಾಮಾನುಗಳು ಯೋಗ್ಯ ಬೆಲೆಗೆ ಮಾರಾಟಕ್ಕೆ ದೊರೆಯುತ್ತವೆ.

ಕೃಷ್ಣರಾವ ಪರ್ವತಿಕರ
ದವಾಖಾನೆ ಮತ್ತು ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಾಟಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ ಆ್ಯಂಡ ಟೇಲರ್ಸ
ಕೋರಬಾಜಾರ ವಿಜಾಪುರ

'ಕನ್ನಡಿಗ'ನ ನಿತ್ಯಸಂಚಿಕೆ.

ದೈನಿಕ "ಕನ್ನಡಿಗ"ನು ಕನ್ನಡಿಗರ ಸೇವೆ ಮಾಡಹತ್ತಿ ಈಗ ಒಂದು ವರ್ಷ ಕಳೆದ ಹೋಯಿತು. ಅವನು ಈಗ ತನ್ನಲ್ಲಿ ಕೆಲಕೆಲವು ಹೊಸ ಸುಧಾರಣೆಗಳನ್ನು ಮಾಡಿಕೊಂಡು ಎರಡನೆಯ ವರ್ಷದಲ್ಲಿ ಕಾಲಿಟ್ಟಿರುವನು. ಮೊದಲಿನಕಿಂತಲೂ ಇಮ್ಮಡಿ ಆಕಾರದಲ್ಲಿ ಹೊರಡುತ್ತಿರುವನು. ಹಿಂದುಸ್ಥಾನದ ಭಾವೀರಾಜ್ಯಘಟನೆಯ ಸಂಬಂಧವಾಗಿ ಕರಾಚಿ ಕಾಂಗ್ರೆಸ್ ಹಾಗು ಲಂಡನ ಮೇಜಿನ ಪರಿಷತ್ತುಗಳಲ್ಲಿ ನಡೆಸುತಕ್ಕದ್ದಾಗಿರುವ ಚರ್ಚೆಗಳ ಸುದ್ದಿಸಂಗತಿಗಳನ್ನು ಆದಷ್ಟು ಬೇಗನೆ ತಿಳಿದುಕೊಳ್ಳಲು ಜನಸಾಮಾನ್ಯರೂ ಸಹ ಈಗ ಬಹು ಆತುರರಾಗಿರುವದರಿಂದ, ಅವರ ಈ ಆತುರತೆಯನ್ನು ತೃಪ್ತಪಡಿಸುವದಕ್ಕಾಗಿ ಕನ್ನಡಿಗನು ಈಗ ಅಸೋಸಿಯೇಟೆಡ್ ಪ್ರೆಸದವರಿಂದ ತಂತಿ ವರ್ತಮಾನಗಳನ್ನು ತರಿಸಿಕೊಳ್ಳುತ್ತಿರುವನು. ಇದಲ್ಲದೆ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬೆಂಗಳೂರ, ಬಳ್ಳಾರಿ ಮುಂತಾದ ಮೊದಲಾದ ಸ್ಥಳಗಳಲ್ಲಿಯ ಸ್ವಂತ ಪ್ರತಿನಿಧಿಗಳಿಂದ ಮಹತ್ವದ ಸುದ್ದಿಸಂಗತಿಗಳ ಬಗ್ಗೆ ಪತ್ರಗಳನ್ನು ತಂತಿಗಳನ್ನು ತರಿಸಿಕೊಂಡು ಅಲ್ಲಿಯ ಸ್ಥಿತಿಗತಿಗಳನ್ನು ಕನ್ನಡಿಗರ ಕಣ್ಮುಂದೆ ಇಡುತ್ತಿರುವನು. ಮುಂಬಯಿಯ ಪೇಟೆಯ ಧಾರಣೆಯನ್ನು ದಿನನಿತ್ಯ ತಂತಿಯಿಂದ ತರಿಸಿಕೊಂಡು ವ್ಯಾಪಾರಸ್ಥರ ಅಡಚಣಿಯನ್ನು ದೂರ ಮಾಡುತ್ತಿರುವನು, ಇಂಥ ಸಾಹಸಕ್ಕೆ ಕೈಹಾಕಿದ ಪತ್ರಿಕೆಯೆಂದರೆ ಕರ್ನಾಟಕದಲ್ಲಿ ಇದೇ ಮೊದಲನೆಯದಾಗಿದೆ. ಕನ್ನಡಿಗನ ಈ ಉದ್ದೇಶವು ಸಫಲವಾಗಬೇಕಾದರೆ ಏನಿಲ್ಲೆಂದರೂ ೪೦೦೦ ಜನ ಚಂದಾದಾರರು ಕನ್ನಡಿಗನನ್ನು ತರಿಸಿಕೊಳ್ಳಬೇಕಾಗುತದೆ. ಇಷ್ಟು ಜನ ಚಂದಾದಾರರು ದೊರೆಯುವರೆಂಬ ನಂಬಿಗೆಯಿಂದಲೇ ಅವನು ಈ ಸಾಹಸಕ್ಕೆ ಕೈಹಾಕಿರುವನು. ಕನ್ನಡಿಗನನ್ನು ತರಿಸಿಕೊಳ್ಳುವದು ಜನಸಾಮಾನ್ಯರಿಗೆ ಭಾರವಾಗಬಾರದೆಂಬ ಉದ್ದೇಶದಿಂದ, ಆಕಾರವು ಮೊದಲಿನಕಿಂತ ಇಮ್ಮಡಿಯಾಗಿದ್ದರೂ ಸಹ, ಬೆಲೆಯನ್ನು ಮೊದಲಿನಷ್ಟೇ ಅಂದರೆ ಮೂರೇ ಪೈ ಇಟ್ಟಿದೆ.

ಗದಗು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪುರ, ಬಳ್ಳಾರಿ ರಾಯಚೂರ ಕೊಪ್ಪಳ ಮುಂತಾದ ಸ್ಥಳಗಳಿಗೆ ಪಾರ್ಸಲುಗಳನ್ನು ಕಳಿಸಿ, ಏಜಂಟರ ಮುಖಾಂತರ ಸಂಚಿಕೆಗಳು ಮಾರಲ್ಪಡುವವು. ಈಗ ಮೋಟಾರುಗಳು ಎಲ್ಲೆಡೆಗೂ ಇರುವದರಿಂದ ಅಲ್ಲಲ್ಲಿಯ ಕೆಲವು ಮೋಟಾರುಗಳ ಏಜಂಟರಿಗೆ ನಮ್ಮ ಪತ್ರಿಕೆಯ ಏಜನ್ಸಿಯನ್ನೂ ಕೊಟ್ಟಿದೆ. ಎಲ್ಲೆಲ್ಲಿ ಕೊಟ್ಟಿಲ್ಲವೋ, ಅಲ್ಲಿಯವರು ನಮಗೆ ಪತ್ರ ಬರೆದು ಕೇಳಿಕೊಳ್ಳಬೇಕು. ತಮ್ಮತಮ್ಮ ಮೋಟಾರುಗಳಿಂದ ಪಾರ್ಸಲುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಅಲ್ಲಲ್ಲಿಯ ಮೋಟಾರುಗಳ ಟಿಕೀಟ ಏಜಂಟರು ತಾವೇ ಮಾಡಿಕೊಳ್ಳತಕ್ಕದ್ದು.

ಏಜಂಟರಾಗಲಿಚ್ಛಿಸುವವರು ಕೂಡಲೆ ಬರೆದುಕೊಳ್ಳಬೇಕು ಸಣ್ಣ ಊರವರು ಕನಿಷ್ಠ ಮೂರು ರೂಪಾಯಿಗಳನ್ನೂ, ಪಟ್ಟಣದವರು ಕನಿಷ್ಠ ಹತ್ತು ರೂಪಾಯಿಗಳನ್ನೂ ಠೇವು ಕಳಿಸಬೇಕು. ಸ್ಥಾನಿಕ ಕಾಂಗ್ರೆಸ್ ಕಮಿಟಿಯ, ಅಥವಾ ಮುಖ್ಯ ಸದ್ಗೃಹಸ್ಥರ ಒಂದು ಸರ್ಟಿಫಿಕೇಟನ್ನಾದರೂ ಪ್ರಾಮಾಣಿಕತನದ ಬಗ್ಗೆ ಅರ್ಜಿಯ ಸಂಗಡ ಕಳಿಸತಕ್ಕದ್ದು. ಪ್ರತಿವಾರದಲ್ಲಿ ಲೆಕ್ಕವನ್ನೂ ಹಣವನ್ನೂ ಕಳಿಸಬೇಕು. ೧೦ಕ್ಕೆ ೫ ಕಿಂತ ಹೆಚ್ಚಿಗೆ ಉಳಿದ ಪ್ರತಿಗಳು ತಿರುಗಿ ತೆಗೆದುಕೊಳ್ಳುವದಿಲ್ಲ ನೂರಕ್ಕೆ ೨೫ ರೂಪಾಯಿಗಳಂತೆ ಏಜಂಟರಿಗೆ ಕಮೀಶನ್ ದೊರೆಯುವದು. ಮೋಟಾರುಗಳ ತಿಕೀಟ ಏಜಂಟರುಗಳು ಸಣ್ಣ ಊರುಗಳಲ್ಲಿ ದಿನಾಲು ೧೦—೧೨ ಪ್ರತಿಗಳನ್ನು ತರಿಸಿಕೊಂಡರೂ ಅವರಿಗೆ ಪ್ರತಿ ತಿಂಗಳ ೨-೩ ರೂಪಾಯಿ ಕೂತಲ್ಲಿಯೇ ದೊರೆಯುವವು ಇನ್ನು ಪಟ್ಟಣಗಳಲ್ಲಿ ನೂರಿನ್ನೂರು ಪ್ರತಿಗಳನ್ನು ಮಾರುವ ಏಜಂಟರಿಗೆ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ೨೦ ರ ವರೆಗೆ ಪಗಾರ ಬೀಳುವದು ಮೇಲಿನ ಕೆಲವು ದೊಡ್ಡ ಪಟ್ಟಣಗಳಿಗೆ ಸಹ ಇಂಗ್ಲೀಷ ಪತ್ರಿಕೆಗಳಿಗಿಂತಲೂ, ಮೊದಲು ಮಹತ್ವದ ಸುದ್ದಿಗಳು ನಮ್ಮ ಪತ್ರಿಕೆಯಿಂದ ತಿಳಿಯುವವು. ಅದರ ಏಜಂಟರು ಕೊಂಚ ಶ್ರಮಪಟ್ಟು ಸುದ್ದಿಗಳನ್ನು ಬೀದಿಯಲ್ಲಿ ಒದರುತ್ತ ತಿರುಗಿಯಾಗಲಿ, ಸ್ಥಾನಿಕ ಮುಖ್ಯ ಮುಖ್ಯ ಜನರನ್ನು ಭೆಟ್ಟಿಯಾಗಿ ಅವರ ಹೆಸರನ್ನು ನೊಂದಾಯಿಸಿಕೊಂಡಾಗಲಿ, ಪ್ರಯತ್ನಿಸಿದರೆ ಜನರಲ್ಲಿ ಪ್ರತಿಗಳು ಹೆಚ್ಚಾಗಿ ಖರ್ಚ ಆಗೇ ಆಗುವವು. ಆದಕಾರಣ ಅವಶ್ಯಕರು ಕೂಡಲೇ ಏಜಂಟರಾಗಲು ಬರೆದುಕೊಳ್ಳತಕ್ಕದ್ದು.

ಜಾಹೀರಾತಿನ ದರ—ಕಾಯಂ ಜಾಹೀರಾತುಗಳಿಗೆ ಒಂದು ಕಾಲಮ್ಮಿನ ಒಂದು ಇಂಚಿನ ಪ್ರತಿಯೊಂದು ಸಂಚಿಕೆಗೆ ನಾಲ್ಕು ಆಣೆ ಹಾಗು ಮೊದಲನೇ ಸಾರೆ [illegible]

ಬಾಗಲಕೋಟೆ
"ನಮ್ಮ [illegible] ಬಿಟ್ಟು [illegible] ಯನ್ನು [illegible] ನಾವು ಎಂದೂ ಸಹಿಸಿಲ್ಲ. [illegible] ನಮ್ಮ ಸಮ್ಮತಿಯಲ್ಲಿ [illegible] ಬೇಕೆಂದು ನಾವು [illegible] ಸ್ವಾತಂತ್ರ್ಯದ ಧ್ಯೇಯ [illegible]

ಉತ್ಸವಕರ್ತರ [illegible] ಮುಂದಿನ ರಾಮನವಮಿ ಉತ್ಸವಕ್ಕೆ ಕಡೆ ಹಾಕಬೇಕೆಂದು ಈ ಆಟ ಹೂಡಿರುವನೆಂದು ಜನರಲ್ಲಿ ಆಡಿಕೊಂಡರಂತೆ, ಆದೇಕೆ ಪ್ರತ್ಯಕ್ಷ ಹೇಳಿದಂತೆ ಇದನ್ನರಿತು ನನ್ನ ಮನಸ್ಸಿಗೆ ವ್ಯಥೆಯೆನಿಸಿ, ನಾನು ಇದೇ ಪ್ರಮಾಣ ಪೂರ್ವಕವಾಗಿ ನಡೆಯುವೆನೆಂದು ಶ್ರೀಗಳವರಿಗೆ ಹೇಳಿ, ಉತ್ಸವವನ್ನು ಸಾಂಗಗೊಳಿಸಲು ಅಲ್ಪಸ್ವಲ್ಪ ನಾನೇ ಸಹಾಯ ಮಾಡುವೆನೆಂದು ಹೇಳಿ ಬಂದೆನು. ಇದಾದ ವೇಳೆ ಕೆಲವರು ಶ್ರೀ ಮಾಮಲೇದಾರರವರಿಗೆ 'ಇಲ್ಲದ್ದನ್ನು ಕಲ್ಪಿಸಿ ನಾನೇ ಉತ್ಸವವನ್ನು ತಡೆಯಲು ಪ್ರಯತ್ನಪಟ್ಟೆನೆಂದು ತಿಳಿಸಿದರು. ನಾನು ಸಾರಿಹೇಳುವದೇನೆಂದರೆ—ಇದರಲ್ಲಿ ಎಳ್ಳಷ್ಟು ಸತ್ಯಾಂಶವಿಲ್ಲ. ಪ್ರತಿವರ್ಷ ನಡೆಯುತ್ತಿರುವ ರಾಮನವಮೀ ಉತ್ಸವದಲ್ಲಿ ನನ್ನದು ಯಾವ ತರದ್ದೂ ಸಂಬಂಧವಿಲ್ಲ. [illegible] ಈ ವರ್ಷದ ಉತ್ಸವದಲ್ಲಿಯೂ ನಾನು ಯಾವ ತರದ್ದೂ ಭಂಗ ತೆಗೆಯಲಿಲ್ಲ. ಶ್ರೀಗಳವರ ಆಜ್ಞೆಯಂತೆ ನಾನು ಅವರ ಸೇವೆಯನ್ನು ಮಾತ್ರ ಮಾಡಿಕೊಂಡು [illegible] ನನ್ನ [illegible] ಉತ್ಸವ [illegible] ತಪ್ಪು ತಿಳುವಳಿಕೆ [illegible] ನಾನು ನನ್ನ [illegible] ಶ್ರೀ [illegible] [illegible] ಭಾವನೆಯು ಎಲ್ಲರಿಗೂ ತಿಳಿಯಬೇಕೆಂದು ಸಾರ್ವಜನಿಕವಾಗಿ ಇದನ್ನು ಪ್ರಸಿದ್ಧಿಸುತ್ತೇನೆ.

ಬಾಗಲಕೋಟೆ } [illegible] ಜಿ. ಪರ್ವತೀಕರ
೫—೪—೩೧ }

ಹಿಂದಕ್ಕೆ ಸರಿದಿಲ್ಲ. ಬ್ರಿಟಿಶ ಸತ್ತೆಯಾಗಲಿ, ಇಲ್ಲವೆ ಉಳಿದ ಸತ್ತೆಯವರಾಗಲಿ ಸಹಕರಿಸಲು [illegible] ದಾಗಿ ಇದರಿಂದ ಅರ್ಥವಾಗುವದಿಲ್ಲ.'

ಬಳಿಕ ಅವರು ಸಂಯುಕ್ತರಾಜ್ಯ, ಬರ್ಮಾ ಪ್ರಾಂತವನ್ನು ಹಿಂದ [illegible] ಬೇರೆ ಪಡಿಸುವದು, ಹಿಂದೂ—ಮುಸಲ [illegible] ಐಕ್ಯ, ಪರದೇಶಿ ಬಟ್ಟೆಯ ಬಹಿಷ್ಕಾರ ಆದವುಗಳ ಬಗ್ಗೆ ವಿವೇಚನೆ ಮಾಡಿ, [illegible] ಪಿಕೆಟಿಂಗ್ ರಾಜಕೀಯ ಧ್ಯೇಯ ಸಾಧಿಸಿಕೊಳ್ಳುವದಕ್ಕಾಗಿ ಸುರುವು ಮಾಡಿಟ್ಟದೆ, ಆರ್ಥಿಕ ಹಾಗು ಸಾಮಾಜಿಕ [illegible] ಪ್ರಾರಂಭಿಕ [illegible] ಯಾಗಿ ಹೇಳಿದರು, ಮಾದಕ ಪದಾರ್ಥ [illegible] ನಿಷೇಧಿಸಲಿಕ್ಕೂ ಹಾಗೂ ಅಸ್ಪೃಶ್ಯತೆ ಹೋಗಲಾಡಿಸಲಿಕ್ಕೆ ಆದರು ವಿನಂತಿಕೊಂಡು, ಮುಂದಿನ ಕಾರ್ಯಕ್ಕೆ ಸಭೆಯ [illegible] ಕೋರಿ, ತಮ್ಮ ಭಾಷಣ ಮುಗಿಸಿ [illegible]

ಅಧ್ಯಕ್ಷರ ಭಾಷಣವು ಮುಗಿದ ಕಾರ್ಯದರ್ಶಿಗಳಾದ ಶ್ರೀ ಪ್ರಕಾ [illegible] ಫೆನರ್ ಬ್ರೊಕವೇ. ವಿಠ್ಠಲಭಾಯಿ [illegible] ಪುರುಷೋತ್ತಮ ಠಾಕೂರದಾಸ, ಸ [illegible] ಬಹದ್ದೂರ ಸಪ್ರೂ, ಮೊದಲಾದ [illegible] ರು ಹಾಗು ಲಂಡನದ ಗಾಂಧಿಸಂಘ [illegible] ಕೊಟ್ಟ ಕಳುಹಿದ ಯಶಚ್ಚಿಂತನಪರ [illegible] ಗಳನ್ನೋದಿ ಹೇಳಿದರು. ನಂತರದಲ್ಲಿ [illegible] ತ ಮೋತಿಲಾಲ ನೆಹರೂ ಮೊದಲಾ [illegible] ನಿಧನ ಹೊಂದಿದ ಬಗ್ಗೆ ಎಲ್ಲರೂ ಎದ್ದು [illegible] ತಮ್ಮ ದುಃಖಪ್ರದರ್ಶನವನ್ನು ವ್ಯಕ್ತ [illegible] ದರು. ಒಪ್ಪಂದದ ಕರಾರಿಗನ್ನುಯಿ [illegible] ಯಾವತ್ತೂ ರಾಜಕೀಯ ಕೈದಿಗಳನ್ನು ಮುಕ್ತ ಮಾಡಬೇಕೆಂದು ಅಧ್ಯಕ್ಷರು [illegible] ತಂದರು. ಅದು ಪಾಸ ಮಾಡಲ್ಪಟ್ಟಿತು. [illegible] ಪೂರದಲ್ಲಾದ ದಂಗೆಯ ಬಗ್ಗೆ ವಿಷಾದ ವ್ಯಕ್ತಪಡಿಸುವ ಹಾಗು ದಂಗೆಯಲ್ಲಿ ಕಾ [illegible] ರವಾದ ಶ್ರೀ ವಿದ್ಯಾರ್ಥಿಯವರ ಬಗ್ಗೆ [illegible] ಪ್ರದರ್ಶನ ಮಾಡುವ ಮೂರನೆಯ ಗೆ [illegible] ಅಧ್ಯಕ್ಷರಿಂದ ಸಭೆಯ ಮುಂದೆ ತರಲ್ಪ [illegible] ಸ್ವೀಕೃತವಾಯಿತು. ಸರದಾರ ಭಗತ [illegible] ಹಾಗು ಅವರ ಸಹಕಾರಿಗಳನ್ನು ಗಲ್ಲಿಗೇ [illegible] ಕ್ಕೆ ಸಂಬಂಧಿಸಿದ ನಾಲ್ಕನೆಯ ಠರಾ [illegible] ಪಂಡಿತ ಜವಾಹಿರಲಾಲರು ಸಭೆಯ ಮ [illegible] ಇಟ್ಟು, ಅತ್ಯಾಚಾರದ ಕೃತಿಗಳನ್ನು ಜರ [illegible] ದ್ದೇಶಕ್ಕಾಗಿ ಅವರನ್ನು ನಾವು ಪ್ರಶಂಸಿಸು [illegible] ಅವರು ತೋರಿಸಿದ ಸ್ವಾರ್ಥತ್ಯಾಗದ ಬಗ್ಗೆ [illegible] ರನ್ನು ಪ್ರಶಂಸಿಸುತ್ತಿದ್ದೇವೆ. ಎಂಬುದಾಗಿ [illegible] ಣ ಮಾಡಿದರು. ಪಂಡಿತ ಮಾಲವೀ [illegible] ಠರಾವಿಗೆ ಅನುಮೋದನ ಕೊಟ್ಟು, ಈ [illegible] ರ ಪ್ರಾಣ ಉಳಿಸುವದು ತಮ್ಮಿಂದ [illegible] ರಿಗೂ ಶಕ್ಯವಾಗದಿದ್ದದ್ದು ನಾಚಿಕೆಯ [illegible] ಗಿದೆ" ಎಂದು ನುಡಿದರು. ಶ್ರೋತೃವೃಂದ ವಿನಂತಿ ಮಾಡಿಕೊಂಡ ಮೇರೆಗೆ ಸರದಾರ [illegible] ತಸಿಂಗರ ತಂದೆಯವರಾದ ಸರದಾರ ಕಿಶ [illegible] ಗರು ಹಾಗು ರಾಜಗುರುರವರ ತಾಯಿಯ [illegible] ವ್ಯಾಸಪೀಠದ ಮೇಲೆ ಕರೆದೊಯ್ಯಲ್ಪಟ್ಟ [illegible] ಸರದಾರ ಕಿಸನಸಿಂಗರು ಭಗತಸಿಂಗರ ಜೀ [illegible] ಚರಿತ್ರೆಯನ್ನು ಸ್ವಲ್ಪದರಲ್ಲಿಯೇ ತಿಳಿಸಿ [illegible] ತನ್ನ ಮಗನಿಗೆ ಧನ್ಯವಾದಗಳನ್ನರ್ಪಿಸಿದ್ದ [illegible] ಎಲ್ಲರ ಉಪಕಾರವನ್ನು ಸ್ಮರಿಸಿದರು. ಆಂ [illegible] ವ್ಹಿ. ಎಸ್. ಶಾಸ್ತ್ರಿಯವರು, "ಅವರ [illegible] ಚಾರವು ಈ ಸಭೆಗೆ ಸಮ್ಮತವಿಲ್ಲ. [illegible] ಅದರೊಡನೆ ಈ ಸಭೆಯು ಸಹಕರಿಸುವ [illegible] ಎಂಬ ಶಬ್ದಗಳನ್ನು ತೆಗೆದು ಹಾಕಬೇ [illegible] ಉಪಸೂಚನೆ ತಂದರು. ಮತಗಳ [illegible] ಕೊಳ್ಳಲಾಗಿ ಉಪಸೂಚನೆಯು [illegible] ಮೂಲಠರಾವು ಸ್ವೀಕೃತವಾಯಿತು. ಕಾಂ [illegible] ಸಭೆಯು ಮರುದಿನ ಸಂಜೆಯ ೬ ಗ [illegible] ಮುಂದರಿಸಲ್ಪಟ್ಟಿತು.

ಸೀಖ-ಮುಸಲ್ಮಾನರಲ್ಲಿ ದಂಗೆ

ಇಬ್ಬರ ಕೊಲೆ, ೧೫ ಜನರಿಗೆ ಗಾಯ

ಅಮೃತಸರ ತಾ। ೩೦

ಕೋಟಧರ್ಮಚಂದಕಲಾನ ಎಂಬ ಹಳ್ಳಿಯಲ್ಲಿ ದಂಗೆ ಹಾಗು ಕೊಲೆಯ ಆರೋಪದಿಂದ ೨೫ ಜನ ಸೀಖರು ಸೆರೆಹಿಡಿಯಲ್ಪಟ್ಟಿದ್ದಾರೆ; ಹೊಲಗಳಲ್ಲಿ ದುಡಿಯುತ್ತಿರುವ ಕೆಲವು ಮುಸಲ್ಮಾನರು ಕೆಲವು ದಿನಗಳ ಹಿಂದೆ ಒಂದು ಭಾವಿಯನ್ನು ಕಟ್ಟಿಸಿ, ಆ ಸ್ಥಳದಲ್ಲಿ ಒಂದು ಮಸೀದೆಯನ್ನು ಕಟ್ಟಿಸುವ ಯೋಚನೆಮಾಡಿ ಇಟ್ಟಂಗಿ ಮೊದಲಾದವುಗಳನ್ನು ಕೂಡಿಹಾಕಿ ಗೋಡೆಯನ್ನು ಕಟ್ಟಿಸಿದರೆಂದೂ, ಮರುದಿವಸ ಮುಂಜಾನೆ ೩೦ ಜನ ಸೀಖರು ಮುಸಲ್ಮಾನರ ಮೇಲೆ ಹಲ್ಲೆಮಾಡಿ, ಇಬ್ಬರನ್ನು ಕೊಂದು ೧೫ ಜನರನ್ನು ಗಾಯಪಡಿಸಿದರೆಂದೂ ತಿಳಿದು ಬರುತ್ತಿದೆ ಮೂವರು ಆಸ್ಪತ್ರೆಯಲ್ಲಿ ಉಪ[illegible] ಹೊಂದುತ್ತಿದ್ದು ಅವರ ಸ್ಥಿತಿಯು ಚಿಂತಾಜನಕವಾಗಿದೆ (ಅ ಪ್ರ)

ಮದ್ರಾಸ ಇಲಾಖೆಯಲ್ಲಿ

೬೯ ಕೈದಿಗಳ ಬಿಡುಗಡೆಯಾಗಿಲ್ಲ

ಮದ್ರಾಸ ತಾ। ೩೦

ಒಪ್ಪಂದದ ಕರಾರಿಗನುಸರಿಸಿ ಈವರೆಗೆ ಮದ್ರಾಸ ಇಲಾಖೆಯಲ್ಲಿ ಒಟ್ಟಿಗೆ ೧೫೬೪ ಜನ ರಾಜಕೀಯ ಕೈದಿಗಳು ಬಿಡುಗಡೆ ಹೊಂದಿರುತ್ತಾರೆ, ಇನ್ನೂ ೬೯ ಜನರು ಜೇಲಿನಲ್ಲಿಯೇ ಕೊಳೆಯುತ್ತಿರುವರು; ಅತ್ಯಾಚಾರದ ಆರೋಪದ ಬಗ್ಗೆ ಅವರು ಶಿಕ್ಷಿಸಲ್ಪಟ್ಟಿರುವದರಿಂದ ಅವರು ಬಿಡುಗಡೆ ಮಾಡಲ್ಪಡುವದಿಲ್ಲವೆಂದು ತಿಳಿದುಬರುತ್ತಿದೆ. (ಅ. ಪ್ರ.)

ಕ್ರಾನಿಕಲ್ ಪತ್ರದ ಅಸಂತೋಷ

ಕರಾಚಿಯ ಕಾಂಗ್ರೆಸದ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರವರ ಭಾಷಣದ ಬಗ್ಗೆ ಮುಂಬಯಿ ಕ್ರಾನಿಕಲ್ಲ ಪತ್ರವು ಹೀಗೆನ್ನುವದು. "ಸರದಾರರ ಭಾಷಣವು ಹಿಂದೀ ರಾಷ್ಟ್ರಕ್ಕೆಲ್ಲ ಮಾರ್ಗದರ್ಶಕವಾಗಿರುವದು" ಒಪ್ಪಂದಕ್ಕಾಗಿ ಮಾಡಿದ ಪ್ರಯತ್ನಗಳೂ ಮತ್ತು ಜನತೆಯು ಇದುವರೆಗೆ ಮಾಡಿತೋರಿಸಿದ ಕಾರ್ಯವೂ ಇವುಗಳ ವಿಷಯದಲ್ಲಿಯಾದರೂ ಅವರ ಭಾಷಣವು ಯಥಾಯೋಗ್ಯವಾಗಿರುವದು ಮುಂದೆ ಅದೇ ಪತ್ರವು ಅವರನ್ನು ಭಾಷಣದ ಬಗ್ಗೆ ಹೀಗೆ ಟೀಕೆ ಮಾಡುವದು. "ಈ ಒಪ್ಪಂದದ ಕಾಲಾವಧಿಯಲ್ಲಿಯೂ ಸಹ ಜನರಿಗೆ ಕೈಕೊಳ್ಳಲಿಕ್ಕೆ ಬರುವಂಥ ವಿಧಾಯಕ ಕಾರ್ಯಕ್ರಮಕ್ಕೆ ತಡೆಹಾಕಿರುವದು ಮಾತ್ರ ಅನವಶ್ಯಕವಾಗಿರುವದು ಈ ವಿಧಾಯಕ ಕಾರ್ಯಕ್ರಮವನ್ನು ಹಾಗೆಯೇ ನಡಿಸಿದ್ದರೆ ರಾಷ್ಟ್ರವು ಪುನಃ ಸತ್ಯಾಗ್ರಹವನ್ನು ಸುರುವು ಮಾಡುವ ಪ್ರಸಂಗ ಬಂದಲ್ಲಿ ಬಹಳೇ ಅನುಕೂಲವಾಗುತ್ತಿತ್ತು" ಮುಂದೆ ಅದೇ ಪತ್ರವು "ಒಪ್ಪಂದದ ಕರಾರುಗಳ ಗೊಂದಲವೇ ಇದಕ್ಕೆಲ್ಲ ಕಾರಣವಿರಬಹುದು" ಎಂದು ಅನ್ನುವದು. "ಅಧ್ಯಕ್ಷರು ರೈತರ ಸಂಘಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಬೇಕಾಗಿತ್ತು ಆದರೆ ಪ್ರಸಂಗ ಬಂದಾಗೆಲ್ಲ ಅವರು ಒಕ್ಕಟ್ಟಿನಿಂದ ಕಾರ್ಯ ಮಾಡಲಿಕ್ಕೆ ಹೆಚ್ಚುಬಲವುಳ್ಳವರಾಗುತ್ತಿದ್ದರು" ಕಟ್ಟಕಡೆಗೆ ಟೀಕೆ ಮಾಡಿರುವದು.

(ಅ. ಪ್ರ. ಸಂಕ್ಷಿಪ್ತವಾರ್ತೆ.)

ಇವರ ಮೇಲಿನ ನಮ್ಮ ಅಭಿಪ್ರಾಯವನ್ನು ನಾವು ನಾಳಿನ ಸಂಚಿಕೆಯಲ್ಲಿ ಕೊಡುವೆವು.

ಸಂಪಾದಕ

ಮುಂಬಯಿಯ ಒಳಸಂಚಿನ ಖಟ್ಲೆ

ಮುಂಬಯಿ ಹಾಯ.ಕೋರ್ಟದಲ್ಲಿ ನ್ಯಾಯಮೂರ್ತಿ ಬ್ಲ್ಯಾಕೆಲ ಎಂಬವರ ಮುಂದೆ "ಲ್ಯಾಮಿಂಗಟನ ರೋಡ ಕೇಸ" ಅಥವಾ ಮುಂಬಯಿಯ ಒಳಸಂಚಿನ ಖಟ್ಲೆ ಎಂದು ಈಗ ಕರೆಯಲ್ಪಡುವ ಖಟ್ಲೆಯು ಸುರುವು ಆಗಿರುವದು. ಸರಕಾರದ ಪರವಾಗಿಯಿಂದ ಕೆಲಸ ನಡಿಸಿದ ಮೇ॥ ಕಿಂಕೆಡ ಎಂಬ ವಕೀಲರು ಖಟ್ಲೆಯ ಪ್ರಾರಂಭದಲ್ಲಿ ಹೀಗೆ ಅಂದರು. "ಹೋದ ವರ್ಷದ ಆಕ್ಟೋಬರ ತಿಂಗಳ ಒಂಬತ್ತನೇ ತಾರೀಖಿನ ದಿವಸ ಮುಂಜಾನೆ ನಸುಕಿನಲ್ಲಿ ಇನ್ಸ್ಪೆಕ್ಟರ [illegible] ಅವರು ಶಾಂತವಾಗಿ ನಿದ್ರೆಮಾಡುವ ಕಾಲದಲ್ಲಿ ಈ ಖಟ್ಲೆಯಲ್ಲಿಯ ಆರು ಜನ ಅಪರಾಧಿಗಳು ಮತ್ತು ಅವರ ಜೊತೆಗಾರರು ಇವರಿಂದ ಈ ಅಪರಾಧವು ಮಾಡಲ್ಪಟ್ಟಿತು. [illegible] ದಾದ ಪೋಲೀಸ ಕಾನಸ್ಟೆಬಲ ಮತ್ತು ಅವರ ಅಧಿಕಾರಿಗಳಿಗೆ ಏನೂ ಅಪಘಾತವಾಗಲಿಲ್ಲ. ನಾನು ತೆರೆಯುವ ಸಾಕ್ಷಿಯ ಮೇಲಿಂದ ಈ ಅಪರಾಧಿಗಳಿಗೂ ಮತ್ತು ಟೇಲರ ಎಂಬವನಿಗೂ ಏನೂ ದ್ವೇಷವಿಲ್ಲವಿದ್ದುದಾಗಿ ಕಂಡು ಬರುವದು. ಆದ್ದರಿಂದ ಇದೊಂದು ಕೇವಲ ರಾಜಕೀಯ ಸಂಬಂಧದ ಅಪರಾಧವೆಂದು ನಾನು ತಿಳಿಸುತ್ತೇನೆ. ಉತ್ತರ ಹಿಂದ ಸ್ಥಾನದಲ್ಲಿಯ ಹಿಂಸಾತ್ಮಕ ಕ್ರಾಂತಿಕಾರರು ಮುಂಬಯಿಗೆ ಬಂದು ಇಲ್ಲಿ ಅವರು ಈ ಕಾರ್ಯಗಳನ್ನು ನಡಿಸಿರುವದು ಸ್ಪಷ್ಟವಿದೆ. ಈ ಖಟ್ಲೆಯಲ್ಲಿಯ ಕೆಳಗಿನ ಆರು ಜನ ಅಪರಾಧಿಗಳು ವೈಶಂಪಾಯನ, ಬಾಪಟ, ದೇವಧರ, ಉಪಾಧ್ಯ, ಧಾಮಣಕರ ಮತ್ತು ಶಿಂದೆ ಎಂಬವರು ಹೋದ ವರ್ಷದ ಮಾರ್ಚ ಮತ್ತು ಆಕ್ಟೋಬರ ತಿಂಗಳುಗಳ ಮಧ್ಯಕಾಲದಲ್ಲಿ ಒಳಸಂಚು ಮಾಡಿರುವರೆಂದು ಅವರ ಮೇಲೆ ಅಪರಾಧವಿದೆ. ಈ ಒಳಸಂಚಿನಲ್ಲಿ ಭಾಗಿಗಳಾದಂಥ ಇನ್ನು ಐದು ಜನ ಅಪರಾಧಿಗಳು ತಪ್ಪಿಸಿಕೊಂಡು ಹೋಗಿರುವರು. ಇವರು ಕ್ರಾಂತಿಕಾರಕ ಲೇಖಗಳನ್ನು ಪ್ರಸಿದ್ಧಿಸುವದಕ್ಕಾಗಿ ಅವರನ್ನು ಹಿಂಸಾತ್ಮಕ ಕಾರ್ಯಗಳಿಗೆ ಹುರಿದುಂಬಿಸುವದಕ್ಕಾಗಿ ಮದ್ದುಗುಂಡುಗಳನ್ನು ಕೂಡಿಹಾಕುವದಕ್ಕಾಗಿ ಮತ್ತು ಪೋಲೀಸ ಅಧಿಕಾರಿಗಳನ್ನು ಕೊಲೆಮಾಡುವದಕ್ಕಾಗಿ ಒಳಸಂಚು ಮಾಡಿರುವರೆಂಬ ಅಪರಾಧವು ಇವರ ಮೇಲೆ ಹೊರಿಸಲ್ಪಟ್ಟಿದೆ. ಟೇಲರ ಎಂಬವರನ್ನು ಕೊಲ್ಲುವದಕ್ಕಾಗಿ ಯೋಜಿಸಿದರೆಂದು ಒಂದು [illegible] ಅಪರಾಧವು ಬಾಪಟ ಎಂಬವರ ಮೇಲೆ ಅದೆ. ಈ ಖಟ್ಲೆಯು ಪ್ರೆ. ಮ್ಯಾಜಿಸ್ಟ್ರೇಟರ ಮುಂದೆ ನಡೆದು ಅಲ್ಲಿ ಬರ್ವೆ ಎಂಬವರನ್ನು ದೋಷಮುಕ್ತರಾಗಿ ಮಾಡಿರುವರು. ಅದರ ನಂತರ ಈ ಖಟ್ಲೆಯು ಇಲ್ಲಿಗೆ ಬಂದಿದೆ.

ನಾಲ್ಕು ಜನರು ಹಿಂದೂ, ಮೂವರು ಪಾರಸಿ, ಒಬ್ಬರು ಮುಸಲ್ಮಾನರು, ಒಬ್ಬರು ಕ್ರಿಶ್ಚಿಯನರು ಹೀಗೆ ಈ ಖಟ್ಲೆಯ ವಿಚಾರಣೆಗೆ ಸಹಾಯಕ ಪಂಚರು ನೇಮಿಸಲ್ಪಟ್ಟಿರುವರು. (ಅ. ಪ್ರ.)

ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಅಜಮೀರ ಪ್ರಾಂತದಲ್ಲಿ ಕೂಡಿಸುವದಕ್ಕೆ ಪ್ರತಿನಿಧಿಗಳ ಬೆಂಬಲ ದೊರೆಯಿಸಿಕೊಳ್ಳುವ ಸಂಬಂಧವಾಗಿ ಅಜಮೀರದವರು ಪ್ರಯತ್ನ ನಡಿಸಿದ್ದಾರೆ.

ಕಾಠೇವಾಡ ಪ್ರಾಂತದಲ್ಲಿ

ಸತ್ಯಾಗ್ರಹವು ಸುರುವಾಗುವದಂತೆ!

(ಅಹಮ್ಮದಾಬಾದ, ತಾ॥ ೩೦)

ಕಾಠೇವಾಡ ಪ್ರಾಂತದ ಮಸೋದ ತಾಲೂಕದ ತಾಲೂಕದಾರರು ಮೀಠಚಂದ ಭೀಕಾಭಾಯಿ ಎಂಬ ಸತ್ಯಾಗ್ರಹಿಯ ಮೇಲೆ ನೋಟೀಸ ಹೊರಡಿಸಿ, ತನ್ನ ತಾಲೂಕಿನ ಹದ್ದಿಯಲ್ಲಿ ಕಾಲಿಡಕೂಡದೆಂತಲೂ, ವಿರುದ್ಧವಾಗಿ ವರ್ತಿಸಿದಲ್ಲಿ ೬ ತಿಂಗಳ ಕಾರಾಗೃಹವಾಸ ಹಾಗು ೫೦೦ ರೂಪಾಯಿ ದಂಡದ ಶಿಕ್ಷೆಗೆ ಪಾತ್ರರಾಗಬೇಕಾಗಿಯೂ ಅವರಿಗೆ ಆಜ್ಞೆ ವಿಧಿಸಿದ್ದಾರೆ ಕಾಯದೆಭಂಗ ಚಳವಳಿಯಲ್ಲಿ ಪಾಲ್ಗೊಂಡದ್ದಕ್ಕಾಗಿ ಬ್ರಿಟಿಶ ಹಿಂದುಸ್ಥಾನದಲ್ಲಿ ಈಗ ಇವರಿಗೊಮ್ಮೆ ಶಿಕ್ಷೆಯಾಗಿತ್ತು. ೧೫ ದಿನಗಳೊಳಗಾಗಿ ತಾಲೂಕದ ಹದ್ದನ್ನು ಬಿಟ್ಟುಕೊಟ್ಟು ಹೋಗಲು ಅವರ ಕುಟುಂಬದವರಿಗಾದರೂ ಆಜ್ಞೆಯನ್ನು ವಿಧಿಸುವದರಲ್ಲಿ ಬಂದಿದೆ. ಸ್ವಯಂಸೇವಕರನ್ನು ಮಸೋದಕ್ಕೆ ಕಳಿಸಿ ಅಲ್ಲಿ ಸತ್ಯಾಗ್ರಹ ಹೂಡುವ ಬಗ್ಗೆ ಕಾಠೇವಾಡ ಪ್ರಾಂತದಲ್ಲಿ ಚಳವಳಿ ನಡೆದಿದೆ

ಮಹಾತ್ಮಾ ಗಾಂಧಿಯವರು ಎಪ್ರಿಲ್ ೧೫ ನೆಯ ತಾ॥ದಿಂದ ಖೇಡಾ ಜಿಲ್ಲೆಯಲ್ಲಿ ಪ್ರವಾಸ ಮಾಡತಕ್ಕವರಿರುವದರಿಂದ ಅವರಿಗೆ ಯೋಗ್ಯ ಆದರಸತ್ಕಾರಗಳನ್ನು ಮಾಡುವ ವಿಷಯವಾಗಿ ಖೇಡಾ ಜಿಲ್ಲೆಯಲ್ಲಿ ಈಗಿನಿಂದಲೇ ಸಿದ್ಧತೆ ನಡೆದಿದೆ (ಅ ಪ್ರ)

ಸಿದ್ದಾಪುರ ತಾಲೂಕಿನ ಜಪ್ತಿಯ ಇತಿಹಾಸ

ಮನೆಗಳನ್ನು ಅಗೆಯಲಾರಂಭಿಸಿದರು.

ತಾ. ೨೫—೩—೩೧ ನೇ ದಿವಸ ಕ್ಯಾದಗೀ ಗ್ರಾಮದ ಸ. ಬ್ರಾಹ್ಮಣ ಗಣಪಭಟ್ಟ ಮತ್ತು ರಾಮಚಂದ್ರ ಕೃಷ್ಣಭಟ್ಟ ಇವರಲ್ಲಿ ಬಾಕೀ ಸಾರಾ ತೀರ್ವೆಯ ಬಗ್ಗೆ ಜಪ್ತಿ ಕ್ರಮ ನಡಿಸಿದರು. ಜಪ್ತೀ ಮಾಡಲು ಸೋಪಿನಕೊಪ್ಪ ಮತ್ತು ಕ್ಯಾದಗೀ ಹೀಗೆ ಗ್ರಾಮಗಳ ಶಾನಭೋಗರು, ಸರ್ಕಲ್ಲ ಇನಸ್ಪೆಕ್ಟರು ೪ ಜನ ಉಗ್ರಾಣಿಗಳು ೨ ಜನ ಸಶಸ್ತ್ರ ಪೋಲೀಸರು ಮತ್ತು ಪಟೇಲ ಹೀಗೆ ೧೦ ಜನರು ಹೋಗಿದ್ದರು. ತಿನ್ನುವ ಬೆಲ್ಲ ಅಡಿಕೆ, ತಾಮ್ರದ ಕೊಡಪಾನ, ತಾಮ್ರದ [illegible], ಕಂಚಿನ [illegible], ಹಿತ್ತಾಳೆ ಲೋಟ, ತಾಂಬ್ರದ ಹಳೇ [illegible], ಹಂಡೆ, ಒಂದು ಹಳೇ ಪೆಟ್ಟಿಗೆಯಲ್ಲಿ ಇದ್ದ ರೊಕ್ಕ, ಕಿವಿಗೆ ಹಾಕುವ ಕೆಂಪು ಹರಳಿನ ಭಂಗಾರದಿಂದ ದಪ್ಪದ [illegible] ಜೋಡಿ, ಒಂದು ಸಣ್ಣ ನೀಲದ ಹರಳು ಹಲಸಿನ ಹಲಿಗೆಯ ಪೆಟ್ಟಿಗೆಯೊಳಗೆ ಸಿಕ್ಕ ನಗದು ಹಣ ಹೀಗೆ ಒಟ್ಟು ಸುಮಾರು ೩೫ ರೂಪಾಯಿಯ ಮಾಲನ್ನು ಜಪ್ತ ಮಾಡಿದ್ದರು. ಇವೆಲ್ಲವುಗಳ ಸಂಗಡ ಜಪ್ತ ಮಾಡಿದ ೧ ಎಮ್ಮೆ ಮತ್ತು ೨ ಕರುಗಳನ್ನು ಹಿಂದು ತಿರುಗಿ ಅವುಗಳನ್ನು ಬಿಟ್ಟುಕೊಟ್ಟರು. ಸಂಜೆವರೆಗೆ ಯಾರೂ ಬರಲಿಲ್ಲ.

ಮೊನ್ನೆ ತಾರೀಖು ೨೫।೩।೩೧ ನೇ ದಿವಸ ಕವಲಕೊಪ್ಪ ಶ್ರೀ ಸುಬ್ರಾಯ ಹೆಗಡೇಯವರ ಮನೆಯಲ್ಲಿ ಜಪ್ತಿ ಕ್ರಮವು ನಡೆಯಿತು.. ಜಪ್ತೀ ಮಾಡಿದಾಗ ಬರೇ ಭತ್ತ ಏನು ಇಷ್ಟೇ ಸಾಮಾನು ಸಿಗಲಿಲ್ಲ.

ಕಾನಪೂರ ದಂಗೆಯ ಸಂಗತಿಗಳು

೧೪೧ ಜನರ ಕೊಲೆ, ೩೮೬ ಜನರಿಗೆ ಗಾಯ.

(ಲಖನೌ ತಾ॥ ೩೦)

ಸಂಯುಕ್ತ ಪ್ರಾಂತದ ಕಾಯದೆ ಮಂಡಳದಲ್ಲಿ "[illegible]" ಸಭಾಸದರು, ಕಾನಪೂರದಲ್ಲಿ ಇವತ್ತಿನ ದಿವಸ ಮುಂಜಾನೆ ೯—೧೦ ಗಂಟೆಯ ವರೆಗೆ ಸಂಭವಿಸಿದ [illegible] ಸಂಗತಿಗಳ ಬಗ್ಗೆ ಕೆಳಗಿನಂತೆ ಹೇಳಿದರು.

ಕಾನಪೂರದಲ್ಲಿ ಈಗ ಎಲ್ಲವೂ ಸರಿಯಾಗಿದೆ ಮುಚ್ಚಲ್ಪಟ್ಟ ಕೆಲವು ಗಿರಣಿಗಳು ಪುನಃ ಕಾರ್ಯ ಪ್ರಾರಂಭಿಸಿವೆ. ಈ ವರೆಗೆ ೩೪೯ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ. ೧೪೧ ಜನರು (೪೨ ಹಿಂದೂ, ೯೯ ಮುಸಲ್ಮಾನ) ಮರಣಹೊಂದಿದ್ದು, ೩೮೬ ಜನರು (೨೧೮ ಹಿಂದೂ, ೧೬೭ ಮುಸಲ್ಮಾನರು) ಗಾಯಪಟ್ಟಿದ್ದಾರೆಂದು ಸರಕಾರ ಪ್ರಕಟನೆಯಿಂದ ತಿಳಿದು ಬರುತ್ತದೆ

ಓರ್ವ ಸಭಾಸದರ ಪ್ರಶ್ನೆಗೆ ಉತ್ತರಕೊಡುವಾಗ ಅವರು, ಬೀದಿ [illegible] ಜನರ ಹತ್ತಿರ ಎಷ್ಟೋ ಶಸ್ತ್ರಾಸ್ತ್ರ ಹಾಗು ತುಪಾಕಿಗಳು ಸಿಕ್ಕಿವೆಯೆಂದೂ, ಅವುಗಳಲ್ಲಿ ಅನಧಿಕೃತವಾದವುಗಳು ಎಷ್ಟುವೆಯೆಂಬುದು ಗೊತ್ತಿಲ್ಲವೆಂದೂ ಉತ್ತರಕೊಟ್ಟರು.

ಗೃಹಮಂತ್ರಿಗಳಾದ ನವಾಬ ಛತ್ರಿಯವರು, ಕಾನಪೂರ ದಂಗೆಯಲ್ಲಿ ಪ್ರಾಣಕ್ಕೆರವಾದ ಶ್ರೀ ಗಣೇಶ ಶಂಕರ ವಿದ್ಯಾರ್ಥಿಯವರ ಸಂಬಂಧವಾಗಿ ಭಾಷಣಮಾಡಿ, [illegible] ದಿಂದ ಮರಣಹೊಂದಿದ ಬಗ್ಗೆ ಅವರಿಗೆ ಧನ್ಯವಾದಗಳನ್ನರ್ಪಿಸಿದರು ಶ್ರೀ ವಿದ್ಯಾರ್ಥಿಯವರು ಪ್ರಾಣತ್ಯಾಗ ಮಾಡಿದ್ದನ್ನು [illegible] ಯಾದರೂ ಧರ್ಮದ ಹುಚ್ಚಿನಿಂದ ಅಂಧರಾಗಿ [illegible] ಗಳವರು, ತಮ್ಮ ಕಣ್ಣು ತೆರೆಯಬೇಕೆಂದು ಹೇಳಿದರು.

ಕಾನಪೂರದ ಉತ್ತರ ಭಾಗದಲ್ಲಿ ಒಂದು ಮೈಲಿನ ಅಂತರದಲ್ಲಿರುವ ಉನಾವ ಎಂಬ ಹಳ್ಳಿಯಲ್ಲಿ ದಂಗೆಯಾಗಿ, ಮೂವರು ಮುಸಲ್ಮಾನರು ಮರಣಹೊಂದಿದ್ದಾರೆಂಬ [illegible] ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯು ಕೇವಲ ನಿರಾಧಾರವಾದದ್ದಾಗಿದೆ. ಸರಕಾರದವರು ಈ ಸುದ್ದಿಯಲ್ಲಿ ಏನೂ ಅರ್ಥವಿಲ್ಲವೆಂದು ಪ್ರಕಟಿಸಿದ್ದಾರೆ. ಆ ಹಳ್ಳಿಯಲ್ಲಿ ಕೆಲವರ [illegible] ವರೆಗೆ [illegible] ಕೊಂಡದರಿಂದ, ಅವರಲ್ಲಿಯ [illegible] ಅದಕ್ಕೆ ಕಾರಣವಾದದ್ದೆಂತಲೂ [illegible] ಪತ್ರಿಕಾ ಪ್ರತಿನಿಧಿ [illegible] ತಿಳಿದು ಬಂದಿದೆ ಅ. ಪ್ರ.

ಪಂಡಿತ ಜವಾಹಿರಲಾಲರು

ಬಾಂಡೀ ಪರಿಷತ್ತಿಗೆ ಹೋಗುವದಿಲ್ಲ

ಪಂಡಿತ ಜವಾಹಿರಲಾಲ ನೆಹರೂಅವರು ಬಾಂಡೀ ಗಾರಿಯ ಪರಿಷತ್ತಿಗೆ ಹೋಗುವದಿಲ್ಲವಾಗಿ ಅಲಹಾಬಾದ "ಲೀಡರ" ಪತ್ರಿಕೆಯಲ್ಲಿ ಅಚ್ಚಾಗಿರುವದು, ಪ್ರಕೃತಿಯನ್ನು ಸುಧಾರಿಸಿಕೊಳ್ಳುವದಕ್ಕಾಗಿ ೨—೩ ತಿಂಗಳವರೆಗೆ ಸಿಲೋನಕ್ಕೆ ಹೋಗುವರು.

ದಾನಿ—ದಾಬಡೆ ಟೇಲರ್ಸ

ನಮ್ಮಲ್ಲಿ ವೇಳೆಗೆ ಸರಿಯಾಗಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ಅರಿವೆಗಳನ್ನು ಹೊಲಿದು ಕೊಡುವೆವು. ಒಮ್ಮೆ ಹೊಲಿಸಿ ಪರೀಕ್ಷಿಸಿರಿ.

ದಾನಿ—ದಾಬಡೆ
ಟೇಲರ್ಸ
ಬಾಗಲಕೋಟೆ—ಗ ಕೇದಗೆ ಕ್ಲ

ಜಾಹೀರಾತುದಾರರಿಗೆ

ಒಳ್ಳೆ ಸುಸಮಯ

ಯುಗಾದಿಯಿಂದ "ಕನ್ನಡಿಗ"ನ ಪ್ರತಿಸಂಚಿಕೆಯು ಆಕಾರವನ್ನು ಮೊದಲಿನ ಇಮ್ಮಡಿ ಮಾಡಿರುವೆವು ಆದರ ಪ್ರಚಾರವು ಮೊದಲಿನಕಿಂತಲೂ ಹೆಚ್ಚಾಗಿದೆ. ಆದಾಗ್ಯೂ ಜಾಹೀರಾತುದಾರರು ಬೇರೆ ಯವರೆಗೆ ಕೆಲವು ದಿನಗಳವರೆಗೆ ಅತಿ ಸೋವಿ ದರದಿಂದ ಜಾಹೀರಾತು ಮುದ್ರಿಸುವೆವು. ಇಷ್ಟವುಳ್ಳವರು ತ್ವರೆಮಾಡಬೇಕು ದರ ಮೊದಲಾದವುಗಳ ಬಗ್ಗೆ ಸವಿಸ್ತರ ಅಧಿಕಾರ ಪತ್ರ ದ್ವಾರದಿಂದ ತಿಳಿದು ಕೊಳ್ಳಬೇಕು.

ವ್ಯವಸ್ಥಾಪಕ
"ಕನ್ನಡಿಗ" ಬಾಗಲಕೋಟೆ.

(ಸ್ಯಾಂಪಲ್) ಮತಿ ಚೀಟಿಗಳು (ಪುಕ್ಕಟೆ

ನೀಲಿ ಕಪ್ಪು, ಕೆಂಪು, ಜಾಂಬಳಿ ಮತಿ ಚೀಟಿಗಳು ದೊರೆಯುತ್ತವೆ.

೫೦೦ ಚೀಟಿಗಳಿಗೆ ೨—೦—೦
೧ ಸಾವಿರ ಚೀಟಿಗಳಿಗೆ, ೩ ೮-೦
೫ ಸಾವಿರಕ್ಕೆ, ೧೬—೦ ರೀತ್ಯ ಫ

೫ ತೊಲಾ ಪಾಕೀಟುಗಳಿಗೆ	೧-೦-೦
ರಬ್ಬರ ಸ್ಟ್ಯಾಂಪ ಮಸಿ ಸ್ಟೆಂಪಿಂಗ ಗಡಜಿನ ಬಾಟ್ಲಿಗೆ	೧-೦-೦

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ
ಕರ್ನಾಟಕ ಇಂಕ ಕಂಪನಿ ಬಾಗಲಕೋಟೆ

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಪುಸ್ತಕಗಳು

ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲು ಯೋಗ್ಯವಾದ ಕೆಳಗಿನ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ

ಪ್ರಶ್ನೋತ್ತರ ಗಣಿತ	೦-೮-೦
ಪ್ರಶ್ನೋತ್ತರ ಭೂಮಿತಿ	೦-೬-೦
ಪ್ರಶ್ನೋತ್ತರ ಭೂಗೋಲ	೦-೬-೬
ಪ್ರಶ್ನೋತ್ತರ ಜಮಾಖರ್ಚ	೦-೬-೦
ಗೋಖಲೆ ಕೃತ ಭೂಗೋಲ ಟಿಪ್ಪಣಿಗಳು	೦-೧೦-೦
ಹಿಂದುದೇಶದ ಶಾಸನ ಪದ್ಧತಿ	೧-೦-೦

(ಟೆಕ್ಸ್ಟ್ ಬುಕ್ ಮಂಜೂರಾಗಿದ್ದು)

ಇವಲ್ಲದೆ ಇನ್ನಿತರ ಶಾಲೋಪಯೋಗಿ ಪುಸ್ತಕ ಹಾಗು ಸ್ಟೇಶನರಿ ಸಾಮಾನುಗಳಾದರೂ ನಮ್ಮಲ್ಲಿ ದೊರೆಯುತ್ತವೆ.

ನೂತನ ಪುಸ್ತಕಾಲಯ ವಿಜಾಪುರ

ವಿಜಾಪುರದಿಂದ ಪಂಢರಪೂರ ಮೋಟಾರ ಸರ್ವಿಸ

ಮೋಟರ ಪ್ರತಿದಿನ ವಿಜಾಪುರದಿಂದ ಮುಂಜಾನೆ ೭॥ ಗಂಟೆಗೆ ಹೊರಟು, ಜತ್ತ, ಮಂಗಳವೇಢೆ ಮಾರ್ಗವಾಗಿ ಪಂಢರಪೂರಕ್ಕೆ ೧೨ ಗಂಟೆಗೆ ಮುಟ್ಟುವದು. ಮತ್ತೆ ತಿರುಗಿ ಅದೇ ಮೋಟಾರು ಪಂಢರಪೂರದಿಂದ ೩ ಗಂಟೆಗೆ ಹೊರಟು ಸಂಜೆಯ ೭ ಗಂಟೆಗೆ ವಿಜಾಪುರಕ್ಕೆ ಬರುವದು. ಗಾಡಿ ಸ್ಪೆಶಲ್ ಬೇಕಾದರೆ ಕೆಳಗಿನ ವಿಳಾಸದವರ ಕಡೆಗೆ ಕಮಕ್ಷಮ ಬಂದು ಕೇಳಿಕೊಳ್ಳಬೇಕು

ಮ್ಯಾನೇಜರ,
ಅಟೆಲ ಮಹಾಲಕ್ಷ್ಮೀ ಮೋಟಾರ ಸರ್ವಿಸ
ವಿಜಾಪುರ.

ಸ್ವದೇಶಿ ಸ್ಟೋರ್ಸ ವಿಜಾಪುರ

ನಮ್ಮಲ್ಲಿ ಎಲ್ಲ ತರದ ಕೈನೂಲು, ಕೈಮಗ್ಗದ ಬಟ್ಟೆಗಳು ಹಾಗೂ ಶುದ್ಧ ಸ್ವದೇಶಿ ರೀತಿಯ ಪೇಟ, ಟೊಪಿಗೆ, ಕೋಟುಗಳ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

ದೇಸಾಯಿ ಹಣಮಂತರಾವ
'ಸ್ವದೇಶೀ ಸ್ಟೋರ್ಸ'
ಹೊಸ ಬಜಾರ, ವಿಜಾಪುರ.

ಶುದ್ಧ ಖಾದಿ! ಶುದ್ಧ ಖಾದಿ!!

ನಮ್ಮಲ್ಲಿ ಎಲ್ಲ ತರದ ಕೈನೂಲಿನ ಕೈಮಗ್ಗದ ಬಟ್ಟೆಗಳು ಯೋಗ್ಯ ಬೆಲೆಗೆ ದೊರೆಯುತ್ತವೆ

ಕೃಷ್ಣಾಜಿ. ಹಣಮಂತರಾವ. ದೇಸಾಯಿ.
ಸುದರ್ಶನ ಸ್ಟೋರ್ಸ ಬಾಗಲಕೋಟೆ

ಟೊಪ್ಪಿಗೆಗಳ ಕಾರಖಾನೆ

ನಮ್ಮಲ್ಲಿ ಶುದ್ಧ ಸ್ವದೇಶೀ ಉಣ್ಣೆಯ ಟೊಪ್ಪಿಗೆಗಳು, ಜರದ ಟೊಪ್ಪಿಗೆಗಳು ಯೋಗ್ಯ ಬೆಲೆಗೆ ಸಿಗುವವು ವ್ಯಾಪಾರಸ್ಥರಿಗೆ ದಲ್ಲಾಳಿ ಕೊಡಲಾಗುವದು.

ನರಸಿಂಹ ನಾರಾಯಣ ದೇಶಪಾಂಡೆ
'ಶ್ಯಾಮಸುಂದರ' ಮೋನರೋಡ
ವಿಜಾಪುರ

ಪುರಂದರೆಯವರ ಟೊಪ್ಪಿಗೆಯ ಕಾರಖಾನೆ

ನಮ್ಮಲ್ಲಿ ಎಲ್ಲತರದ ಟೊಪ್ಪಿಗೆಗಳು ಮಾರಿ ಕ್ಕೆ ಸಿಗುತ್ತವೆ. ಆರ್ಡರ ಕೊಟ್ಟಲ್ಲಿ ಟೊಪ್ಪಿಗೆಗಳನ್ನು ಯೋಗ್ಯದರದಿಂದ ತಯಾರಿಸಿ ಕೊಡುವೆವು ಟೇಲರಿಂಗ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುವದು. ಟೇಲರಿಂಗದ ಬಗ್ಗೆ ಶಿಕ್ಷಣವನ್ನಾದರೂ ಕೊಡುವೆವು. ಒಮ್ಮೆ ಬಂದು ಪರೀಕ್ಷಿಸಿರಿ.

ಪುರಂದರೆ ಕ್ಯಾಪ ಮೇಕರ್ಸ್ ಆ್ಯಂಡ ಟೇಲರ್ಸ
ಹೊಸಬಜಾರ ವಿಜಾಪುರ

ಡಾಕ್ಟರ ಕೃಷ್ಣರಾವ ಪರ್ವತಿಕರ ಇವರ

ಮೆಡಿಕಲ್ ಸ್ಟೋರ್ಸ

ನಮ್ಮಲ್ಲಿ ದೇಶಿ ಹಾಗು ಪೇಟಂಟ ಔಷಧಗಳು ಮತ್ತು ದವಾಖಾನೆಗೆ ಉಪಯೋಗಿಸುವ ಎಲ್ಲತರದ ಸಾಮಾನುಗಳು ಯೋಗ್ಯ ಬೆಲೆಗೆ ಮಾರಲಿಕ್ಕೆ ದೊರೆಯುತ್ತವೆ.

ಕೃಷ್ಣರಾವ ಪರ್ವತಿಕರ
ದವಾಖಾನೆ ಮತ್ತು ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ

ಬೆಟಗೇರಿ ಬ್ರದರ್ಸ

ವಾಚಮೇಕರ್ಸ



ನಮ್ಮಲ್ಲಿ ಉತ್ತಮ ರೀತಿಯಿಂದ ಎಲ್ಲ ನಮೂನೆಯ ವಾಚ, ಕ್ಲಾಕ, ಟೈಮಪೀಸ ದುರಸ್ತು ಮಾಡುವದಲ್ಲದೆ ವೆಸ್ಟ ಎಂಡ್, ಡೆಂಥ್, ಒಮೆಗಾ ಕಂಪನಿಯ ವಾಚ, ಕ್ಲಾಕು, ಟಾಯಿಂಪೀಸ ಮತ್ತು ಸ್ಪೇರಪಾರ್ಟ್ಸ ನಮ್ಮಲ್ಲಿ ಯೋಗ್ಯ ಧಾರಣೆಗೆ ಸಿಗುತ್ತವೆ ಒಮ್ಮೆ ಖಾತ್ರಿ ಮಾಡಿಕೊಳ್ಳಿರಿ ರಿಪೇರಿಂಗ ಸ್ಪೇಶ್ಯಾಲಿಟಿ.

ಬೆಟಗೇರಿ ಬ್ರದರ್ಸ
ಕೇಶವ ರೋಡ ಕಟ್ಟಿಕೆ ಬಾಗಲಕೋಟೆ.

ಶುದ್ಧ ಖಾದಿ! ಶುದ್ಧ ಖಾದಿ!

ನಮ್ಮಲ್ಲಿ ಎಲ್ಲ ತರದ ಕೈನೂಲು ಕೈಮಗ್ಗದ ಶರ್ಟಿಂಗ ಕೋಟಿಂಗ, ಧೋತರ ಮತ್ತು ಸ್ವದೇಶೀ ಇಳಕಲ್ ನಮೂನೆಯ ಶೀರಿ ಟಿಕೇಕಂಬಾಡಿಯ ಖಣ, ಖಣ ಮತ್ತು ಹೊಲದ ತಯಾರಾದ ಅಂಗಿಗಳು ವಗೈರೆ ದೊರೆಯುತ್ತವೆ,

ಶಂಕ್ರಪ್ಪ ಬಣಗಾರ
ಜವಳಿ ವ್ಯಾಪಾರಸ್ಥರು ಬಾಗಲಕೋಟೆ

ವಾಸುದೇವ ಪುಸ್ತಕಾಲಯದಲ್ಲಿ.

೧ ಸುರತ ನಗರದ ಶ್ರೇಷ್ಠಿ ನಾಟಕ	೧ ೪-೦
೨ ಇಂದಿರೆ (ಸಚಿತ್ರ ಸಾ ಕಾದಂಬರಿ)	೨-೮-೦
೩ ಸೀಕ್ಷತೆಗಳು ಭಾಗ ೧.	೧-೪-೦
೪ ಪತಿವಶೀಕರಣ ನಾಟಕ.	೦-೧೨-೦
೫ ಅಬ್ರಹಾಂಲಿಂಕನ್ ಚರಿತ್ರೆ.	೧-೮-೦
೬ ಮಾಧವಕರುಣಾ ವಿಲಾಸ.	೩ ೧೨-೦
೭ ಲಕ್ಷ್ಮೀಬಾಯಿ ಝಾಂಸಿ ಚರಿತ್ರೆ	೨-೦-೦
೮ ಶೈವ ಸುಧಾರ್ಣವ (ಸಚಿತ್ರ)	೩-೮-೦

ಕೆಟಲಾಗಿಗೆ ಬರೆಯಿರಿ

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ಮನೆಯು ಮಾರತಕ್ಕದ್ದಿದೆ.

ಕೆಳಗೆ ಸಹಿಮಾಡುವವರು ಯಾವತ್ತು ಜನರಿಗೆ ತಿಳಿಸುವದೇನಂದರೆ:—

ಹೊಸಪೇಟೆಯಲ್ಲಿ ನಿ ಬೇಗಿಯವರ ಓಣಿಯಲ್ಲಿರುವ ಸೀಟಿಸರ್ವೆನಂಬರ ೨೦೩ ವಾರ್ಡ ನಂಬರ ೮ ಈ ಮನೆಯು ಮಾರತಕ್ಕದ್ದಿದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಸಾಕ್ಷಾತ ಬಂದು ಭೆಟ್ಟಿಯಾಗಬೇಕು

ತಾ॥ ೩೦—೩—೧೯೩೧
ಪೋಸ ಹಣಮಂತ ರಘುವೀರಸ್ವಾಮಿ
ಪೋ. ನೀಲ ಪೇಠ ಬಾಗಲಕೋಟೆ

ಜಾಹೀರಾತಿನ ಸಲುವಾಗಿ

ಔಷಧಿಗಳ ಬಲವನ್ನು ಔಷಧಿಗಳು ಪ್ರಕಟಿಸುವವು!

ನಿರಾಶ್ರಿತರಾದವರು ನರಳಬೇಕಾಗಿಲ್ಲ!!



ಲಕ್ಷರ್ (ರಿಜಿಸ್ಟರ್) ಶಕ್ತಿವರ್ಧಕ ಇದರ ಸೇವನೆಯಿಂದ, ವಾತ, ಪಿತ್ತ, ಗರ್ಭಾಶಯದ ಚರ್ಮರೋಗ, ಕೈಕಾಲುಗಳ ಘಾತವಾಗಿ ವೀರ್ಯವು ಗಟ್ಟಿಯಾಗುವದು. ಕ್ಷಯ, ಕೆಮ್ಮು, ಜ್ವರ, ರಕ್ತಶುದ್ಧಿಗೆ ಅತ್ಯುತ್ತಮ. ವ್ಯಾಧಿಗ್ರಸ್ತರು ಚಿನ್ನಕ್ಕೆ ಪುಟವಿಟ್ಟಂತೆ ಕಾಂತಿಯುಳ್ಳವರಾಗುವರು.

ಮೋಹಧ್ವಂಸಿನಿ—ರಿಜಿಸ್ಟರ್ ಮಾನವನು ವ್ಯಾಮೋಹದ ಅಸಿಯನ್ನು ಕಳೆದುಕೊಂಡು ಕೃಥಾರ್ಥನಾಗುವನು. ಇದರ ಸೇವನೆಯಿಂದ ೩೦ ವಿಧವಾದ ಪ್ರಮೇಹ ಹಸರು, ಕೆಂಪ, ಮೋಹವಾಯು, ಮೇಹಜ್ವರ, ಮೇಹಗಡ್ಡೆ, ಚರ್ಮರೋಗ, ಮತ್ತು ಮೂತ್ರ, ವಾಯುವ್ಯಾಧಿ ಸ್ತ್ರೀಯರ ಗರ್ಭರೋಗ ನಾಶವಾಗಿ ಶರೀರಕ್ಕೆ ಕಾಂತಿ ಬರುವದ.

(ವೆಪ್ಪಿರ ರಿಜಿಸ್ಟರ್ಡ್)ಬಹಿರ್ಲೇಪ-ಶಸ್ತ್ರರಹಿತ ಚಿಕಿತ್ಸೆ ಬೇಕಾಗಿಲ್ಲ ಕಜ್ಜಿ, ಗಾಯವ್ರಣ, ಬೆಂಕಿ, ಹುಣ್ಣು, ಕೊಡವಾಳ, ಇಸಬು, ಕಳವಳಗಳಿಗೆ ಅತ್ಯಂತ ಪ್ರಸಿದ್ಧ ಜನರಿಂದ ರಕ್ತವನ್ನು ನಿಷ್ಫಲವನ್ನು ಅದ್ವಿತೀಯವಾದದ್ದು. ಔಷಧವನ್ನು ವರದಲ್ಲಿ ಅಪ್ರಕಟಿತ ವಾದ್ದು.

ಬಹಳ ವರ್ಷಗಳ ಕಾಯಿಲೆಗಳು ಧ್ವಂಸವಾಗುವವು.

ಲಕ್ಷರ್ ೨೪ ತೊಲಿ ಸೀಸೆ	೫—೮—೦	ವೆಪ್ಪಿರ	೧॥ ಔನ್ಸ ಬಾಟ್ಲಿ	೦-೪-೦
,, ೧೨	೩—೦—೦		೧॥ ಔನ್ಸ ಬಾಟ್ಲಿ	೦-೮-೦
,, ೬	೧—೮—೦			
ಮೋಹಧ್ವಂಸಿನಿ ೨೪ ತೊಲಿ ಸೀಸೆ	೬—೦—೦			
,, ೧೨	೩—೪—೦			
,, ೬	೧—೧೦—೦			

ಎಲ್ಲಾಕಡೆಯಲ್ಲೂ ಏಜಂಟರು ಬೇಕಾಗಿವೆ, ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಿ.

ಸಿಗುವಸ್ಥಳ— ತಟ್ಟಿ ಫಾರಮಸಿ { ಗದಗ-ಹುಬ್ಬಳ್ಳಿ
ಗದಗ ಜನರಲ್ ಸ್ಟೋರ { ಗದಗ.
ಗ್ರಾಜುಯೇಟ್ಸ ಟ್ರೇಡಿಂಗ ಅಸೋಸಿಯೇಶನ್ ಬಳ್ಳಾರಿ

ಲಷ್ಕರ್ ಮ್ಯಾನುಫ್ಯಾಕ್ಚರಿಂಗ ಕಂಪನಿ,

ಬ್ರಾಂಚ ಬಳೆಪೇಟೆ, ಬೆಂಗಳೂರ ಸಿಟಿ.
ಹೆಡ್ ಆಫೀಸು—ಚಿಕ್ಕಮಗಳೂರು.

ಈ ಪತ್ರಿಕೆಯನ್ನು ವೆಂಕಟೇಶ ಶ್ರೀನಿವಾಸಾಚಾರ್ಯ ಕರೂರ ಇವರಿಂದ ಬಾಗಲಕೋಟೆ ವಿದ್ಯಾಪ್ರಸಾದ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರೆ ನಂ. ಬಿ. ೨೭೭೮ ನಿತ್ಯ ಪತ್ರ. (ಸಂಜೆಯ ಸಂಚಿಕೆ) ಬೆಲೆ ೦-೦-೩.

सर्वं परवशं दुःखं । सर्वमात्मवशं सुखम् ॥—मनु.

ನಿತ್ಯಪತ್ರಿಕೆಯ ವರ್ಗಣೀ ದರಗಳು
ಪರಸ್ಥಳದವರಿಗೆ
[illegible]
ಸ್ಥಳಿಕರಿಗೆ
[illegible]

ಕನ್ನಡಿಗ

KANNADIGA BAGALKOT BI-WEEKLY ಅರೆವಾರ ಪತ್ರಿಕೆ

ನಿತ್ಯಪತ್ರಿಕೆಯು
[illegible]

ಸಂಪಾದಕರು:- ಮಂಗಳವೆಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ—ಗುರುವಾರ ಮಿತಿ ಚೈತ್ರ ಶುದ್ಧ ೧೫ ಶಕೆ ೧೮೫೩ ತಾ॥ ೨-೪-೩೧ [ಸಂಚಿಕೆ ೧೩

ಸರದಾರ ವಲ್ಲಭಭಾಯಿಯವರ ಸಮಾರೋಪ ಭಾಷಣ

"ಮಾತಿನಿಂದ ಸ್ವರಾಜ್ಯ ಸಿಗುವದಿಲ್ಲ ಕೃತಿ ಮಾಡಿ ತೋರಿಸಿರಿ,,

ಕರಾಚಿ, ತಾ॥ ೩೧.

ಕರಾಚಿ ಕಾಂಗ್ರೆಸ್ ಅಧಿವೇಶನವನ್ನು ಮುಕ್ತಾಯ ಮಾಡುವಾಗ ಸರದಾರ ವಲ್ಲಭಭಾಯಿಯವರು ಕೆಳಗಿನಂತೆ ಭಾಷಣ ಮಾಡಿದರು.

ಕಾಂಗ್ರೆಸ್ ಅಧಿವೇಶನದಲ್ಲಿ ಪಾಸು ಮಾಡಲ್ಪಟ್ಟ ಠರಾವುಗಳಲ್ಲಿ ದಿಲ್ಲಿಯ ಒಪ್ಪಂದದ ಠರಾವು ಹಾಗು ಮೂಲಭೂತವಾದ ಹಕ್ಕುಗಳಿಗೆ ಸಂಬಂಧಿಸಿದ ಠರಾವು ಇವೆರಡು ಹಿಂದುಸ್ಥಾನದ ಇತಿಹಾಸದಲ್ಲಿ ಚಿರಕಾಲ ಉಳಿಯತಕ್ಕಂಥವುಗಳಾಗಿವೆ. ಮಹಾತ್ಮಾ ಗಾಂಧಿಯವರು ಇಲ್ಲಿಗೆ ಬಂದಿಳಿದ ಕೂಡಲೆ ಅವರಿಗೆ ವಿರೋಧಭಾವ್ಯವಾಗಿ ಕೆಲವು ಸ್ಪಕರಣಗಳು ಇಲ್ಲಿ ಘಟಿಸಿದವು, ಅವು ದೂಷಣೀಯಗಳಾಗಿವೆ ಕೇವಲ ಮಾತುಗಳಿಂದ ಸ್ವರಾಜ್ಯವು ಸಿಗುವದಿಲ್ಲ. ಪ್ರಯೋಜನಕರವಾದ ಕೃತಿಯೇ ಈಗ ಬೇಕಾಗಿದೆ

ಮಹಾತ್ಮರು ಜಯಶಾಲಿಗಳಾದರು

'ಮ್ಯಾಂಚೆಸ್ಟರ ಗಾರ್ಡಿಯನ'ದ ಅಭಿಪ್ರಾಯ

ಗಾಂಧಿ-ಇರ್ವಿನರ ಒಪ್ಪಂದವು ಕಾಂಗ್ರೆಸ್ ಅಧಿವೇಶನದಲ್ಲಿ ಒಪ್ಪಿಗೆ ದೊರೆತದ್ದನ್ನು ಕಂಡು ಲಂಡನ್ನಿನ "ಮ್ಯಾಂಚೆಸ್ಟರ ಗಾರ್ಡಿಯನ್" ಪತ್ರಿಕೆಯು, "ಕರಾಚಿಯಲ್ಲಿ ಮಹಾತ್ಮಾ ಗಾಂಧಿಯವರಿಗೆ ಅಭೂತಪೂರ್ವ ಜಯ ಸಿಕ್ಕಿದ್ದು, ದುಂಡಿಮೇಜಿನ ಪರಿಷತ್ತಿಗೆ ಅವರು ಯಾವ ಸಂಕೋಚವೂ ಇಲ್ಲದೆ [illegible] ಬಹುದು." ಎಂಬುದಾಗಿ ಉಲ್ಲೇಖಿಸಿ, ಮ. ಗಾಂಧಿಯವರು ತಮ್ಮ ವರ್ಕಿಂಗ್ ಕಮಿಟಿಯ ಬಲದಿಂದಲೇ ಒಪ್ಪಂದಕ್ಕೆ ಕಾಂಗ್ರೆಸದ ಸಮ್ಮತಿ ದೊರಕಿಸಿಕೊಂಡಿರುವರೆಂದು ಅಭಿಪ್ರಾಯ ಪಟ್ಟಿದೆ.

ಬನಾರಸದಲ್ಲಿ

ಮತ್ತೆ ದಂಗೆಯೇಳುವದೇ?

(ಬನಾರಸ, ತಾ॥ ೧)

ಹಿಂದು ಜನರು ಗೆಸಂದಲ ತಾಳಲು [illegible] ಸಿದ್ಧತೆಯನ್ನು ನಡೆಸಿರುವರೆಂದ. ಊರ [illegible] ಹಬ್ಬಿಕೊಂಡದ್ದರಿಂದ ಬನಾರಸದ [illegible] ಜನರು ಭಯಗ್ರಸ್ತರಾಗಿದ್ದಾರೆ. ಹೀಗೆ [illegible] ಹಬ್ಬಿಕೊಂಡದ್ದರಿಂದ [illegible] ಈ ವಾರದಲ್ಲಿ [illegible] ಅಂಗಡಿಗಳನ್ನು ಮುಚ್ಚಿಬಿಟ್ಟಿದ್ದಾರೆ. ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನ [illegible] ಹೊರಡಿಸಿ, [illegible] ಇಲ್ಲಿ [illegible] ಮೊದಲಾದ [illegible]ಗಳನ್ನು ಹಿಡಿಯಕೂಡದು [illegible]ಕೂಡದೆಂದು [illegible] ವಿಧಿಸಿದ್ದಾರೆ.

(ಅ. ಪ್ರ.)

ವರ್ಕಿಂಗ ಕಮಿಟಿಯ ಸಭಾಸದರು,

ಕರಾಚಿ, ತಾ॥ ೧.

ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ಈ ಕೆಳಗಿನ ೧೫ ಜನ ಮುಖಂಡರನ್ನು ವರ್ಕಿಂಗ ಕಮಿಟಿಗೆ ಸಭಾಸದರನ್ನಾಗಿ ಆರಿಸಿದರು. ೧ ವಲ್ಲಭಭಾಯಿ ಪಟೇಲ (ಅಧ್ಯಕ್ಷ) ೨ ಜವಾಹಿರಲಾಲ ನೆಹರೂ, ೩ ಡಾ. ಸಯ್ಯದ ಮಹಮ್ಮದ, ೪ ಜಯರಾಮದಾಸ ದೌಲತರಾಮ ೫ ಜಮನಾಲಾಲ ಬಜಾಜ, ೬ ಮಹಾತ್ಮಾ ಗಾಂಧಿ, ೭ ಎಂ. ಎಸ್. ಅಣೆ ೮ ಶ್ರೀಮತಿ ಸರೋಜಿನಿದೇವಿ ನಾಯಡು, ೯ ಡಾ. ಆಲಮ್, ೧೦ ಬಾಬೂ ರಾಜೇಂದ್ರಪ್ರಸಾದ, ೧೧ ಶಾರ್ದೂಲಸಿಂಗ, ೧೨ ಡಾ. ಅನಸಾರಿ, ೧೩ ಅಬ್ದುಲ್ ಕಲಮ್ ಅಜಾದ್, ೧೪ ಜೆ. ಎಂ. ಸೆನಗುಪ್ತ, ೧೫ ಕೆ. ಎಫ್. ನರಿಮನ್,

ದುಂಡಿಮೇಜಿನ ಪರಿಷತ್ತಿಗೆ ಕಾಂಗ್ರೆಸ್ ವತಿಯಿಂದ ಕಳಿಸಲ್ಪಡುವ ಶಿಷ್ಟಮಂಡಳದಲ್ಲಿ ಇದರಲ್ಲಿಯ ಬಹುತೇಕ ಸಭಾಸದರು ಸೇರಬೇಕಾಗುವದರಿಂದ, ಈ ವರ್ಷ ವರ್ಕಿಂಗ ಕಮಿಟಿಗೆ ವಿಶೇಷ ಮಹತ್ವ ಬಂದಿದೆ.

ಅ. ಪ್ರ.

ವರ್ಕಿಂಗ ಕಮಿಟಿಯ ಬಗ್ಗೆ

ಮಹಾತ್ಮರ ಸ್ಪಷ್ಟೀಕರಣ

(ಸ್ಪೆಶಲ್ ಟೆಲಿ, ಕರಾಚಿ, ತಾ॥ ೧)

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಇವತ್ತಿನ ದಿವಸ ಮುಂಜಾನೆ ೧೦ ಘಂಟೆಗೆ ಸಭೆಯಲ್ಲಿ ಸೇರಿ, ೧ ಮಹಾತ್ಮಾ ಗಾಂಧಿ ೨ ಡಾ. ಅನಸಾರಿ, ೩. ಆಲಮ್, ೪. ನರಿಮನ್, ೫. ಶ್ರೀಮತಿ ಸರೋಜಿನಿದೇವಿ, ೬, ಶಾರ್ದೂಲಸಿಂಗ, ೭. ಅಬ್ದುಲ್ ಕಲಮ್ ಅಜಾದ್ ೮. ರಾಜೇಂದ್ರ ಪ್ರಸಾದ. ೯. ಸೇನಗುಪ್ತ, ೧೦ ಅಣೆ. ಮೊದಲಾದವರನ್ನು ವರ್ಕಿಂಗ ಕಮಿಟಿಗೆ ಸಭಾಸದರನ್ನಾರಿಸಿ, ೧೨ ಘಂಟೆಗೆ ಸಭೆಯ ಕಾರ್ಯವನ್ನು ಮುಗಿಸಿದರು. ದಕ್ಷಿಣ ಹಿಂದುಸ್ಥಾನದಲ್ಲಿಯ ಪ್ರಾಂತಗಳಿಂದ ಯಾವ ಪ್ರತಿನಿಧಿಯೂ ವರ್ಕಿಂಗ ಕಮಿಟಿಗೆ ಆರಿಸಲ್ಪಟ್ಟಿಲ್ಲವೆಂದು ಕೆಲವು ಜನರು ಆಕ್ಷೇಪ ತೆಗೆದುಕೊಂಡರು. ಮಹಾತ್ಮಾ ಗಾಂಧಿಯವರು ಈ ಸಂಬಂಧವಾಗಿ ಸ್ಪಷ್ಟೀಕರಣ ಮಾಡಿ, ದುಂಡಿಮೇಜಿನ ಪರಿಷತ್ತಿಗೆ ಕಾಂಗ್ರೆಸ್ ವತಿಯಿಂದ ಕಳಿಸಲ್ಪಡುವ ಶಿಷ್ಟಮಂಡಳವು ವರ್ಕಿಂಗ ಕಮಿಟಿಯಿಂದ ಭಿನ್ನವಾಗಿರುವದೆಂದು [illegible]

ಕರನಿರಾಕರಣವು ಪ್ರಾರಂಭವಾಯಿತು.

(ಅಹಮ್ಮದಾಬಾದ, ತಾ॥ ೧)

ಬಡೋದಾ ಬಳಿಯಲ್ಲಿನ ಮಂಡಾವಾ ಸಂಸ್ಥಾನದ ರೈತರು ಕರನಿರಾಕರಣ ಚಳವಳಿಯನ್ನು ಪ್ರಾರಂಭಿಸಿ; ತಮ್ಮ ತಮ್ಮ ಹಳ್ಳಿಗಳನ್ನು ಬಿಟ್ಟುಕೊಟ್ಟು, ಬಡೋದಾ ಸಂಸ್ಥಾನದ ಹದ್ದಿಯಲ್ಲಿ ಹೋಗಿ ಇರಹತ್ತಿದ್ದಾರೆ. ತೆರಿಗೆಯನ್ನು ಪಟ್ಟುಬಿಡಲು ಕೇಳಿದರೂ ವರ್ಷಗಳಲ್ಲಿ ವಿನಂತಿ ಮಾಡಿಕೊಂಡಿದ್ದರೂ ಸಹ, ಅಧಿಕಾರಿಗಳು ಅತ್ತ ಲಕ್ಷ್ಯಗೊಡದೆ ಇದ್ದದ್ದೇ ಈ ಚಳವಳಿಗೆ ಕಾರಣವಾಗಿದೆ. (ಅ ಪ್ರ.)

ವಿ. ಚರ್ಚಿಲ್ಲರು

ಮಹಾತ್ಮರಿಗೆ ತಾರು ಕಳಿಸಿದವರೋ?

ದುಂಡಿಮೇಜಿನ ಪರಿಷತ್ತು ಹಾಗು [illegible]ರ ಒಪ್ಪಂದಕ್ಕೆ ಸಂಬಂಧಿಸಿದ ಭದ್ರಸ್ಥಾನದ [illegible] ವಿಷಯವಾಗಿ ವಿ. ಚರ್ಚಿಲ್ಲರು ಮಹಾತ್ಮಾ ಗಾಂಧಿಯವರಿಗೆ ಏನೆಂದು ತಾರು ಕಳಿಸಿರುವರಾಗಿ [illegible] ಲೋಕಸಭೆಯಲ್ಲಿ [illegible] ಪ್ರಶ್ನೆ ಕೇಳಿದರು. ವಿ. ಚರ್ಚಿಲರು ಯಾವ ತಾರನ್ನೂ ಕಳಿಸಿಲ್ಲವೆಂಬುದಾಗಿ ಹಾ. [illegible] ಪ್ರಮುಖ ಸೆಕ್ರೆಟರಿ ಅವರಿಗೆ ಉತ್ತರ ಕೊಟ್ಟರು

ರಾ ಬ ಸುರ್ವೆಯವರು ಕೊಲ್ಹಾಪುರದ ದಿವಾಣರಾದರು

ಕೊಲ್ಹಾಪುರ ಸಂಸ್ಥಾನದ ದಿವಾಣರಾಗಿದ್ದ ದಿ. ಬ. ಲಠ್ಠೆಯವರು ರಾಜೀನಾಮೆ ಕೊಟ್ಟದ್ದರಿಂದ ಅವರ ಸ್ಥಳದಲ್ಲಿ ರಾ. ಬ. ವಿ. ಎ. ಸುರ್ವೆಯವರು ದಿವಾಣರಾಗಿ ನಿಯಮಿಸಲ್ಪಟ್ಟಿದ್ದಾರೆ

ದಿ... [illegible] ಮಾಡಿದ ಠರಾವುಗಳನ್ನು ತಿದ್ದಿ ತೆಗೆದುಕೊಂಡ ನಂತರ ಮಹಾತ್ಮಾ ಗಾಂಧಿಯವರು ಸೂಚಿಸಿದ ಠರಾವುಗಳು ಸರ್ವಾನುಮತದಿಂದ ಸ್ವೀಕೃತವಾದವು.

ಕಾಂಗ್ರೆಸ್ ಅಧಿವೇಶನವು ಮುಕ್ತಾಯ ಹೊಂದಿದ್ದು ಪ್ರತಿನಿಧಿಗಳು ತಮ್ಮ ತಮ್ಮ ಸ್ಥಳಗಳಿಗೆ ತಿರುಗಿ ಹೋಗ ಹತ್ತಿದ್ದಾರೆ. ತಿರುಗಿ ಹೋಗುವವರ ಸಲುವಾಗಿ ಸ್ಪೆಶಲ್ ಉಗಿಬಂಡಿ ಮೊದಲಾದವುಗಳ ವ್ಯವಸ್ಥೆಯು ಮಾಡಲ್ಪಟ್ಟಿದೆ.

ಅಖಿಲ ಭಾರತ ರಾಜಕೀಯ ಕೈದಿಗಳ ಪರಿಷತ್ತು [illegible] ಸೇರಲ್ಪಟ್ಟಿದೆ.

ಆರೋಪಿಯು ಪಲಾಯನ ಹೇಳಿದನು

ದರೋಡೆ ಮೊದಲಾದ ಆರೋಪಗಳಿಗಾಗಿ ಸೆರೆಹಿಡಿಯಲ್ಪಟ್ಟ ಜಳಗಾವದ ಶ್ರೀ ಕಾನಡೆಯವರು ತಾ॥ ೨೭ ನೆಯ ದಿವಸ ಪೋಲಿಸರ ಕಣ್ಣಿಗೆ ಇಂಗು ಹಚ್ಚಿ ಪಲಾಯನ ಹೇಳಿದ್ದಾರೆ. ತಾ॥ ೨೭ ನೆಯ ದಿವಸ ದರೋಡೆಯ ಆರೋಪದ ಸಂಬಂಧವಾಗಿ ವಿಚಾರಣೆ ನಡೆದು ಅವರು ನಿರ್ದೋಷಿಗಳಾಗಿ ಬಿಡಲ್ಪಟ್ಟರು. ನ್ಯಾಯಾಧೀಶರು ತೀರ್ಪು ಹೇಳಿದ ಕೂಡಲೇ ಶ್ರೀ ಕಾನಡೆಯವರು ಅಧಿಕಾರಿಗಳ ಕಣ್ಣುತಪ್ಪಿಸಿ ಅಲ್ಲಿಂದ ಹೊರಬಿದ್ದು ಹೋದರು. ಶಸ್ತ್ರಾಸ್ತ್ರ ಕಾಯದೆಯ ಅನ್ವಯ ಅವರ ಮೇಲೆ ಮತ್ತೊಂದು ಆರೋಪವು ಇದೆಯೆಂಬುದು ಹಿಂದುಗಡೆಯಲ್ಲಿ ಅಧಿಕಾರಿಗಳಿಗೆ ತಿಳಿದು ಬಂದಿತು. ಕೂಡಲೆ ಅವರು ಶ್ರೀ ಕಾನಡೆಯವರ ಬಗ್ಗೆ ಶೋಧ ನಡೆಸಿದರು. ಅವರ ಪತ್ತೆಯಾಗಲಿಲ್ಲ.

ಕಾಂಗ್ರೆಸ್ ಮುಖಂಡರ ! [illegible] ಪ್ರಕಟನೆ

ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭಾಸದರು ಹಾಗು ಪಂಡಿತ ಮಾಲವೀಯ, ಡಾ. ಅನಸಾರಿ, ಶ್ರೀಮತಿ ನಾಯಡು, ಶಿರವಾಣಿ, ಶಫೀಯುಲ್ಲಾ, ಸರದಾರ ಮಂಗಳಸಿಂಗ, ಅಬ್ದುಲ್ ಬಾರಿ, ಶ್ರೀ ಶಿವಪ್ರಸಾದ ಮೊದಲಾದವರು ಕಾನಪೂರದಲ್ಲಿಯ ಕೋಮುವಾರು ಗಲಭೆಗಳ ಬಗ್ಗೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿ, ಯಾವತ್ತು ಜನರು ಸ್ನೇಹ ಭಾವದಿಂದ ವರ್ತಿಸಬೇಕೆಂಬುದಾಗಿ ಜಾಹೀರ ಪ್ರಕಟನೆಯ ಮೂಲಕವಾಗಿ ಎಲ್ಲರಿಗೂ ವಿನಂತಿಸಿಕೊಂಡಿದ್ದಾರೆ.

[illegible]ದಲ್ಲಿ ಇಪ್ಪತ್ತರನ್ನು ಸೆರೆ ಹಿಡಿದರು

ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ಬಗ್ಗೆ ಅಸಂತೋಷವನ್ನು ವ್ಯಕ್ತಪಡಿಸುವದಕ್ಕಾಗಿ [illegible] ಭಾಷಣ ಮಾಡಿದರೆಂಬ ಆರೋಪದಿಂದ ಶ್ರೀ [illegible]ಲಾಲ ಹಾಗು [illegible] ಕಾಂಗ್ರೆಸ್ [illegible] ಇಪ್ಪತ್ತು [illegible] ಸೆರೆ ಹಿಡಿಯಲ್ಪಟ್ಟಿದ್ದಾರೆ.

[illegible] ಸಭೆಯ [illegible] ಹಾಗು [illegible] ಸಭಾಸದರು [illegible] ಸಂಘದ [illegible] ಅನುಸರಿಸಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ, [illegible] (ಅ. ಪ್ರ.)

ಕನ್ನಡಿಗ.

ಕನ್ನಡದ ನಾಡಿನ ಮೇಲಾದುದು ಕಟ್ಟುವೆನಾನು
ಕನ್ನಡ ದೇಶದ ಮಾಡಿದಂಥ ಮಕ್ಕಳೊಡೆಮ್ಮ
ಚಿಕ್ಕವಾದರು ಚಿನ್ನ ದೇಶಭಕ್ತಿಯನೊಂದು
ಚಿನ್ನಯಾಕಾರವಕ್ಕೆ।

ನಮ್ಮ ಅನುಭವ

ನಿತ್ಯ 'ಕನ್ನಡಿಗ'ನ ಎರಡು ಸಂಚಿಕೆಗಳು

ಯುಗಾದಿ ಪ್ರತಿಪದೆಯಿಂದ 'ಕನ್ನಡಿಗ'ನ ಆಕಾರವು ದೊಡ್ಡದಾಯಿತು, ತಂತಿಗಳ ಸಮಾಚಾರವೂ ಈಗ ಪ್ರಕಟವಾಗುತ್ತಲಿವೆ. ನಿತ್ಯ ಪತ್ರಿಕೆಯನ್ನು ಹೊರಡಿಸಿ, ಅದರಲ್ಲಿ "ಅಸೋಸಿಯೇಟೆಡ್" 'ಫ್ರಿಪ್ರೆಸ್' ತಂತಿಗಳನ್ನೂ ನಮ್ಮ ಸ್ವಂತ ಸುದ್ದಿಗಾರರ ತಂತಿಗಳನ್ನೂ ಪ್ರಕಟಿಸುವ ಹವ್ಯಾಸಮಾಡಿದವನು ಕರ್ನಾಟಕದಲ್ಲಿ 'ಕನ್ನಡಿಗ'ನೇ ಮೊದಲನೇಯವನು. ಆದ್ದರಿಂದ ಈ ಬಗೆಯ ಅನುಭವದಿಂದ ಕರ್ನಾಟಕದ ಜನತೆಗೆ ಅಲ್ಪ ಬೆಲೆಯಲ್ಲಿ ಬಹು ಉಪಯೋಗವಾಗುವಂತೆ ನಾವು ವ್ಯತ್ಯಾಸಗಳನ್ನು ಮಾಡಬೇಕಾಗುವದು ಸ್ವಾಭಾವಿಕ ನಮ್ಮ ನಾಡಿನವರಲ್ಲಿ ವಾಚನಾಭಿರುಚಿ ಕಡಿಮೆ. ರೇಲ್ವೆ ಪೋಸ್ಟುಗಳ ಸೌಕರ್ಯಗಳೂ ನಮಗಿಲ್ಲ. ಮೇಲಾಗಿ ನಿಷ್ಣಾತರಾದ ಏಜಂಟರೂ ಎಲ್ಲ ಕಡೆಗೆ ದೊರೆಯುವದಿಲ್ಲ. ಕೆಲವು ಕಡೆಗಂತೂ ನಿಷ್ಣಾತರಾಗದಿದ್ದರೂ ಸರ್ವಸಾಧಾರಣ ಏಜಂಟರು ಸಹ ದೊರೆಯುವದಿಲ್ಲ. ಹೀಗಾಗಿ ಕರ್ನಾಟಕದ ಪ್ರತಿ ತಾಲೂಕು, ಪಟ್ಟಣಗಳಿಗೆ 'ಕನ್ನಡಿಗ' ನನ್ನು ಕಳುಹಿಸುವದು ಸಧ್ಯಕ್ಕೆ ಅಸಾಧ್ಯವಾಗಿದೆ.

ಆದ್ದರಿಂದ ಯಾವ ಯಾವ ನಗರಗಳಿಗೆ 'ಕನ್ನಡಿಗ'ನನ್ನು ರೇಲ್ವೆ ಪಾರ್ಸಲದ ಮೂಲಕ ಕಳಿಸಿ, ಅಗ್ಗವಾಗಿ ಮಾರುವದು ಶಕ್ಯವಿದೆಯೋ ಆ ಎಲ್ಲ ಪಟ್ಟಣಗಳ ಜನರಿಗೆ ಸುದ್ದಿಗಳನ್ನು ಇನ್ನೂ ತ್ವರೆಯಿಂದ ತಲ್ಪಿಸುವದು ಅವಶ್ಯವೆಂಬುದು ನಮ್ಮ ಅನುಭವದಿಂದ ಕಂಡುಬಂದಿದೆ. ಮುಂಜಾನೆಯಿಂದ ರಾತ್ರಿ ವರೆಗ ಒಂದೇ ಸವನೆ ತಂತಿಗಳು ಬಂದೇ ಬರುತ್ತಲಿವೆ. ಗದಗಿನ ಕಡೆಗೆ ಹೋಗಿ ಅಲ್ಲಿಂದ ಧಾರವಾಡ, ಬೆಳಗಾವಿ, ಹಾವೇರಿ, ದಾವಣಗೇರಿ, ಬಳ್ಳಾರಿ, ರಾಯಚೂರುಗಳಿಗೆ ಕನ್ನಡಿಗರ ಸೇವೆಗಾಗಿ ಧಾವಿಸುತ್ತಿರುವ ಸಂಚಿಕೆಗಳನ್ನು ಈಗ ಸಾಯಂಕಾಲದಲ್ಲಿ ಮುದ್ರಿಸಬೇಕಾಗುತ್ತದೆ. ಇದರಿಂದ ಸಾಯಂಕಾಲದಲ್ಲಿ ಬಂದ ತಂತಿಗಳು— ಸಾಯಂಕಾಲದಲ್ಲಿ ಹೆಚ್ಚಾಗಿ ತಂತಿಗಳು ಬರುತ್ತವೆ— ಮರುದಿನ ಸಾಯಂಕಾಲದ ವರೆಗೆ ಅಂದರೆ ೨೪ ತಾಸುಗಳ ವರೆಗೆ ನಮ್ಮ ಕಾರ್ಯಾಲಯದಲ್ಲಿಯೇ ಕೊಳೆಯುತ್ತ ಕೂಡುತ್ತವೆ, ಈ ಸುದ್ದಿಗಳನ್ನು ಸಮ ಸಕಾಲದಲ್ಲಿ ಕನ್ನಡಿಗರ ಕೈಸೇರಿಸಲು ನಾವು ಇಂದಿನಿಂದ ಪ್ರತಿದಿನ ಎರಡು ಸಂಚಿಕೆಗಳನ್ನು ಹೊರಡಿಸುವ ಏರ್ಪಾಡು ಮಾಡಿರುವೆವು. ಪ್ರಾತಃಕಾಲದಲ್ಲಿ ಒಂದು ಸಾಯಂಕಾಲದಲ್ಲಿ ಒಂದು ಹೀಗೆ ಎರಡೂ ಹೊತ್ತು ಹೊರಡುವವು. ಎರಡೂ ಹೊತ್ತು ಹೊರಡಿಸುವದರಿಂದ, ರೇಲ್ವೆಪಾರ್ಸಲ ಪ್ರಿಂಟಿಂಗ್, ಏಜನ್ಸಿ, ಕಮಿಶನ್‌ಗಳ ವೆಚ್ಚವು ಹೆಚ್ಚಾಗುವದು ಸರಿಯೇ ಸಂಚಿಕೆಯೊಂದಕ್ಕೆ ಮೂರೇ ಪೈಯಂತೆ ಕನ್ನಡಿಗರಿಗೆ 'ಕನ್ನಡಿಗ'ನು ದಿನಾಲು ಎರಡೂ ಹೊತ್ತು ದರ್ಶನಕೊಡುವನು.

ಇನ್ನು ಆಕಾರದ ಬಗ್ಗೆ:- ನಾಲ್ಕು ಪುಟಗಳನ್ನು ಎರಡೂ ಹೊತ್ತು ಹೊರಡಿಸುವಷ್ಟು ಟಾಯಿಪು, ಯಂತ್ರ ಮೊದಲಾದ ಸಾಧನಗಳು ಸಧ್ಯದಲ್ಲಿ ನಮ್ಮಲ್ಲಿಲ್ಲ; ಆದ್ದರಿಂದ ಈ ಎರಡೂ ಹೊತ್ತಿನ-ಎಂದರೆ ಪ್ರತಿ ಹನ್ನೆರಡು ಗಂಟೆಯ ಸೇವೆಯು ಕನ್ನಡಿಗರಿಗೆ ರುಚಿಸಿದರೆ, ನಾಲ್ಕು ಪುಟಗಳನ್ನಾದರೂ ಒಂದೇ ಬೆಲೆಯಲ್ಲಿ ಅರ್ಪಿಸಬೇಕೆಂಬ ಉಮೇದಿಯು ನಮಗಿದೆ, ಜಾಹೀರಾತುಗಳು ಸಾಕಷ್ಟು ಬಂದಮೇಲಾಗಲಿ, ಚಂದಾದಾರರ ಸಂಖ್ಯೆಯು ಸಮಾಧಾನಕರವಾಗಿ ಬೆಳೆದ ಮೇಲಾಗಲಿ, ನಾಲ್ಕು ಪುಟಗಳನ್ನು ಪುನಃ ಪ್ರಾರಂಭಿಸಬೇಕೆಂದು ನಮ್ಮ ಇಚ್ಛೆಯಿದೆ; ಈ ಇಚ್ಛೆಯನ್ನು ಸಫಲಗೊಳಿಸುವ ಭಾರವು ಕನ್ನಡಿಗರನ್ನೇ ಕೂಡಿದೆ!

ಸರಕಾರದವರು

ಇಲ್ಲಿಂದ ಗುಡಚೆಪೆ ಕಟ್ಟಬೇಕು.

ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ತಾ॥ ೩೦ ನೆಯು ದಿವಸ ಮಾಸ್ವದ ಆಸವ್ಮದು, ಕಾನಪೂರದಲ್ಲಿಯ ಶೋಚನೀಯ ಸಂಗತಿಗಳ ಬಗ್ಗೆ ಚರ್ಚೆ ಮಾಡಲು ಸಭೆಯನ್ನು ಮುಂದೂಸಬೇಕಾಗಿ ಸೂಚನೆ ತಂದು ಕೆಳಗಿನಂತೆ ಭಾಷಣ ಮಾಡಿದರು

ಜಾತಿ ಜಾತಿಗಳಲ್ಲಿ ಕಲಹವನ್ನು ಹುಟ್ಟಿಸುವದಕ್ಕಾಗಿ ಈ ಸೂಚನೆಯನ್ನು ತಂದಿರುವದಿಲ್ಲ. ಈ ದಂಗೆಯಲ್ಲಿ ಪ್ರಾಣ ಸ್ವಿರವಾದವರ ಹೆಸರುಗಳು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುವವು. ದಂಗೆಯಲ್ಲಿ ಕೊಲ್ಲಲ್ಪಟ್ಟವರಲ್ಲಿ ಬಹುಸಂಖ್ಯಾಕರು ಮುಸಲ್ಮಾನರೇ ಇದ್ದು, ಸ್ತ್ರೀಯರು ಹಾಗು ಚಿಕ್ಕಮಕ್ಕಳಾದರೂ ಪ್ರಾಣಕ್ಕೆರವಾಗಿದ್ದಾರೆ. ಗಾಯಹೊಂದಿದವರಲ್ಲಿಯಾದರೂ ಮುಸಲ್ಮಾನರೇ ಬಹುಸಂಖ್ಯಾಕರಿದ್ದಾರೆ. ಶಾಂತತೆಯನ್ನು ಪ್ರಸ್ಥಾಪಿಸುವದು ಅವಶ್ಯವಿದ್ದಾಗ ಪೋಲೀಸರು ಹಾಗು ಸೈನಿಕರು ಶಾಂತತೆಯನ್ನು ಪ್ರಸ್ಥಾಪಿಸಲು ಪ್ರಯತ್ನಿಸದಿದ್ದರೆ ಇಷ್ಟು ದೊಡ್ಡ ಸೈನ್ಯವನ್ನಿಟ್ಟದ್ದರ ಉಪಯೋಗವೇನು? ಬನಾರಸ ಮತ್ತು ಆಗ್ರಾ ಪಟ್ಟಣಗಳಲ್ಲಿ ಏನೇನು ಸಂಗತಿಗಳು ಸಂಭವಿಸಿದವೆಂಬುದನ್ನು ಅರಿತವರಾದ ಅಧಿಕಾರಿಗಳು ಈಗ ಮುಂಜಾಗ್ರತೆಯ ಉಪಾಯಗಳನ್ನೇಕೆ ಕೈಕೊಳ್ಳಲಿಲ್ಲ? ಜನರನ್ನು ಸಂರಕ್ಷಿಸುವದು ಸರಕಾರದವರಿಗೆ ಅಶಕ್ಯವಾಗಿದ್ದರೆ ಸರಕಾರದವರು ಇಲ್ಲಿಂದ ಗುಡಚೆಪೆ ಕಟ್ಟಲಿ.

ಶ್ರೀ ಬಾಗಲಾಲರವರು, ಗಣೇಶ ಶಂಕರ ವಿದ್ಯಾರ್ಥಿಯವರು ದಂಗೆಯಲ್ಲಿ ಪ್ರಾಣಕ್ಕೆರವಾದದ್ದು ಶೋಚನೀಯವಾಗಿದೆಯೆಂದು ಹೇಳಿ, ಅವರ ಕೊಲೆ ಮಾಡಿದವನ್ನು ಸರಕಾರದವರು ಗೊತ್ತುಹಚ್ಚಬೇಕಾಗಿ ಕೇಳಿಕೊಂಡರು.

ಶ್ರೀ ಹರಿರಾಜಸ್ವರೂಪರು, ಕಾನಪೂರದಲ್ಲಿ ಸುವ್ಯವಸ್ಥೆ ಹಾಗು ಶಾಂತತೆಯನ್ನು ನೆಲೆಗೊಳಿಸದಿರಲು ಸರಕಾರದವರೇ ಜವಾಬುದಾರರಿರುವರೆಂದೂ, ದಂಗೆಯನ್ನು ಪ್ರತಿಬಂಧಿಸಲು ಸರಕಾರದವರು ಯಾವ ಉಪಾಯಗಳನ್ನು ಕೈಕೊಳ್ಳಲಿಲ್ಲವೆಂದೂ, ದಂಗೆಯ ಮೊದಲಿನ ಎರಡು ದಿವಸಗಳಲ್ಲಿ ಒಬ್ಬನಾದರೂ ಪೋಲೀಸನು ಕಾನಪೂರದಲ್ಲಿ ಕಾಣಿಸಲಿಲ್ಲವೆಂದೂ ಭಾಷಣ ಮಾಡಿದರು

ಮಿ. ಎಮರ್ಸನ್ನರು, "ಪರಿಸ್ಥಿತಿಯು ಸುಧಾರಿಸಹತ್ತಿದ್ದು, ಈವರೆಗೆ ೩೪೦ ಜನರು ಕೈದುಮಾಡಲ್ಪಟ್ಟವರು ೧೪೨ ಜನರು ಪ್ರಾಣಕ್ಕೆರವಾಗಿರುವ ೩೮೭ ಜನರು ಗಾಯ ಹೊಂದಿರುವರು" ಎಂಬುದಾಗಿ ಸಂಯುಕ್ತಪ್ರಾಂತ ಸರಕಾರದವರಿಂದ ಬಂದ ವರದಿಯನ್ನು ಓದಿ ಹೇಳಿ ದಂಗೆಯನ್ನು ಶಾಂತ ಮಾಡಲು ಅಧಿಕಾರಿಗಳು ತಮ್ಮ ಶಕ್ತಿಮೀರಿ ಪ್ರಯತ್ನಿಸಿದ್ದಾರೆಂಬುದಾಗಿ ಭಾಷಣ ಮಾಡಿದರು

ಶ್ರೀ ಸಿ. ಎಸ್ ರಂಗ ಅಯ್ಯರರು ಮಿ. ಎಮರ್ಸನ್ನರನ್ನು ವಿರೋಧಿಸಿ ಹೇಳಿದ್ದೇನಂದ : ಹಿಂದೂ ಹಾಗು ಮುಸಲ್ಮಾನರಲ್ಲಿ ಎಷ್ಟೆಷ್ಟು ಜನರು ಪ್ರಾಣಕ್ಕೆರವಾಗಿರುವರೆಂಬುವದು ಬೇಕಾಗಿದ್ದಿಲ್ಲ. ಒಟ್ಟಿಗೆ ಭಾರತೀಯರೆಷ್ಟು ಜನ ಮರಣ ಪಟ್ಟಿರುವರು ಹಾಗು ಗಾಯಹೊಂದಿರುವರೆಂಬುವದೇ ಬೇಕಾಗಿತ್ತು ಮರಣ ಹೊಂದಿದವರ ಸಂಖ್ಯೆಯನ್ನು ನೋಡಿದಲ್ಲಿ, ಸುವ್ಯವಸ್ಥೆ ಹಾಗು ಶಾಂತತೆ ಕಾಯಲು ಸರಕಾರದವರು ಅಸಮರ್ಥರಾಗಿರುವರೆಂದು ತಾನಾಗಿಯೇ ತಿಳಿದುಬರುವದು. ದಂಗೆಯಲ್ಲಿ ಯಾವನಾದರೂ ಯುರೋಪಿಯನ್ನನು ಮರಣ ಹೊಂದಿದ್ದರೆ ಮಾತ್ರ, ದಂಡಿನ ಕಾಯದೆಯನ್ನು ಬಳಕೆಯಲ್ಲಿ ತರಲು ಅಧಿಕಾರಿಗಳು ಮರೆಯುತ್ತಿದ್ದಿಲ್ಲ. ತಮ್ಮ ವರ್ಚಸ್ಸಿಗೆ ಧಕ್ಕೆ ಬರುವದೆಂದು ಅನಿಸಿದಾಗ ಮಾತ್ರ ತಮ್ಮ ಶಕ್ತಿ ಪ್ರದರ್ಶನ ಮಾಡುವರು. ಬಾಂತರೀತಿಯಿಂದ ವರ್ತಿಸಿದ ಸ್ತ್ರೀಯರು ಹಾಗು ಚಿಕ್ಕ ಮಕ್ಕಳ ಮೇಲೆ ಲಾಠಿಗಳು ಹೇಗೆ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ಮುಂಬಯಿ ಕಾಂಗ್ರೆಸ್ ಆಸ್ಪತ್ರೆಯೇ ನಿದರ್ಶನಕ್ಕೆ ತಂದು ಕೊಡುತ್ತದೆ ಪುಂಡ ಜನರು ನಮ್ಮ ಸ್ತ್ರೀಯರನ್ನೂ, ಚಿಕ್ಕ ಮಕ್ಕಳನ್ನೂ, ಪುರುಷರನ್ನೂ ಬೀದಿಗಳಲ್ಲಿ ಕಟುಕರಂತೆ ಕೊಲ್ಲುತ್ತಿರುವಾಗ ಈ ಪುಂಡ ಸರಕಾರವು ಎಲ್ಲಿ ಕುಳಿತಿರುವದೋ ಏನೋ! ಶೋಚನೀಯ ಸಂಗತಿಗಳು ಘಟಿಸಿದ ಸ್ಥಳಗಳಲ್ಲಿ ಒಬ್ಬನಾದರೂ ಪೋಲೀಸನು ಕಾಣಿಸಲಿಲ್ಲವೆಂದು "ಲೀಡರ" ಪತ್ರಿಕೆಯಲ್ಲಿ ಉಲ್ಲೇಖ ಬಂದಿದೆ.

ಸರ್ ಜೇಮ್ಸಕ್ರೇರಾರರು ಭಾಷಣ ಮಾಡಿದಬಳಿಕ ಚರ್ಚೆಯು ಕೊನೆಗೊಂಡಿತು.

ಮಹಾತ್ಮರ ಬಾವ ಚಿತ್ರಕ್ಕೆ ಪ್ರತಿಬಂಧ

ಇಬ್ಬರ ಕೊಲೆ, ಡೆಪ್ಯೂಟಿ ಪೋಲೀಸ ಸುಪರಿಂಟೆಂಡೆಂಟರಿಗೆ ಗಾಯ

ರಾಜಮಹೇಂದ್ರಿ, ಒಳಿಯೆಲ್ಲಿ ಸಂಭವಿಸಿದ ದಂಗೆಯ ಸಂಬಂಧವಾಗಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಕೊಟ್ಟು ಕಳಿಸಿದ ತಂತಿಯಿಂದ ತಿಳಿದುಬರುವದೇನಂದರೆ:- ರಥೋತ್ಸವ ಸಮಯದಲ್ಲಿ ಮಹಾತ್ಮರ ಭಾವಚಿತ್ರವನ್ನು ರಥದಲ್ಲಿ ಇಟ್ಟು ಅದನ್ನು ಎಳೆಯುಕೊಂಡು ಹೋಗಲು ಕಾಂಗ್ರೆಸ್ ಕಾರ್ಯಕರ್ತರು ಪ್ರಯತ್ನಪಟ್ಟರು. ಸಾರ್ವಜನಿಕರು ಅದಕ್ಕೆ ಪ್ರತಿಬಂಧ ಮಾಡಿದರು. ಎರಡೂ ಪಕ್ಷದವರಲ್ಲಿ ಜಗಳಕ್ಕಾರಂಭವಾಗಿ ಅದು ವಿಕೋಪಕ್ಕೆ ಹೋಯಿತು. ಪೋಲೀಸರು ಜಗಳವನ್ನು ಶಾಂತಪಡಿಸಲು ಪ್ರಯತ್ನಮಾಡಿದರು. ಆದರೆ ಪುಂಡ ಜನರು ಅವರ ಮೇಲೆ ಏರಿಹೋದರು. ಪೋಲೀಸರು ಸ್ವಸಂರಕ್ಷಣೆಗಾಗಿ ಗೋಳೀಬಾರು ಮಾಡಿದರು. ಇಬ್ಬರು ಗುಂಡಿನೇಟಿಗೆ ತುತ್ತಾಗಿ ಪ್ರಾಣಬಿಟ್ಟದ್ದು ಕೆಲವರು ಗಾಯಹೊಂದಿದ್ದಾರೆ ಪೋಲೀಸರ ಕಡೆಗಾದರೂ ಡೆಪ್ಯೂಟಿ ಪೋಲೀಸ ಸುಪರಿಂಟೆಂಡೆಂಟ ಹಾಗು ಕೆಲವು ಪೋಲೀಸರಿಗೆ ಗಾಯಗಳಾಗಿವೆ. ಒಬ್ಬ ಪೋಲೀಸನ ಪತ್ತೆಯಿಲ್ಲ. ಅವನ ಪತ್ತೆಯಾಗಬಹುದಾಗಿ ತೋರುತ್ತದೆ. ಹೆಡ್ಡ ಇನಸ್ಪೆಕ್ಟರನಿಗೆ ಕೇವಲ ಅಪಾಯ ಸಂಭವಿಸಿದೆ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರ ಪತ್ತೆಯಿಲ್ಲವೆಂಬುದಾಗಿ ಹಬ್ಬಿಕೊಂಡ ಸುದ್ದಿಯು ನಿರಾಧಾರವಿದೆ.

(ಅ. ಪ್ರೆ)

ದೇವರು ವರಕೊಟ್ಟರೂ ಪೂಜಾರಿ ವರ ಕೊಡಲಿಲ್ಲ

ಗುಜರಾಥ ಪ್ರಾಂತದ ಮಾತಾರ ತಾಲೂಕಿನ ನಾಲ್ಕು ಹಳ್ಳಿಗಳ ರೈತರು ಭೂಕಂದಾಯ ಕೊಡಲಿಕ್ಕೆ ನಿರಾಕರಿಸಿ ತಮ್ಮ ಹಳ್ಳಿಗಳನ್ನು ಬಿಟ್ಟು ಹೊರಟು ಹೋದ್ದರಿಂದ, ಸರಕಾರದವರು ಅವರ ಹೊಲದೊಳಗಿನ ಬೆಳೆಯನ್ನು ತಮ್ಮ ಸ್ವಾಧೀನ ಪಡಿಸಿಕೊಂಡು ಒಬ್ಬ ಮನುಷ್ಯನನ್ನು ಕಾವಲಿಟ್ಟು ಅವನ ವೆಚ್ಚವನ್ನು ರೈತರ ಮೇಲೆ ಹೇರಿದರು ಕೆಲವು ದಿನಗಳ ಮೇಲೆ ಗಾಂಧಿ-ಆಯರ್ವಿನರ ನಡುವೆ ಒಪ್ಪಂದವಾಗಿ ಸರಕಾರದವರು ತಾವೆ ಸ್ವಾಧೀನಪಡಿಸಿಕೊಂಡ ಎಲ್ಲ ಆಸ್ತಿಯನ್ನು ತಿರುಗಿ ಕೊಡಬೇಕೆಂಬುದಾಗಿ ಒಪ್ಪಂದದಲ್ಲಿ ಗೊತ್ತಾಯಿತು. ರೈತರು ಮಾಮಲೇದಾರರಿಗೆ ತಿರುಗಿ ಕೊಡಲು ಕೇಳಿಕೊಂಡರು. ಭೂಕಂದಾಯ ಹಾಗು ಕಾವಲಿನ ಮನುಷ್ಯನ ವೆಚ್ಚ ಇವುಗಳನು ಕೊಡುವರೆಂದು ಆಶ್ವಾಸನ ಕೊಡುವ ವರೆಗೂ ಆಸ್ತಿಯನ್ನು ತಿರುಗಿ ಕೊಡುವದಿಲ್ಲವಾಗಿ ಮಾಮಲೇದಾರರು ಅವರಿಗೆ ತಿಳಿಸಿದರು. ಈ ಸಂಬಂಧವಾಗಿ ರೈತರನು ಪೀಡಿಸಬಾರದೆಂದು ಕಲೆಕ್ಟರರು ಮಾಮಲೇದಾರರಿಗೆ ಅಪ್ಪಣೆ ಕೊಟ್ಟರೂ ಸಹ, "ದೇವರು ವರಕೊಟ್ಟರೂ ಪೂಜಾರಿ ವರಕೊಡಲಿಲ್ಲ" ವೆಂಬ ನಾಣ್ಣುಡಿಯಂತೆ ಮಾಮಲೇದಾರರು ತಮ್ಮ ಹಟವನ್ನು ಸಾಧಿಸಹತ್ತಿದ್ದಾರೆ.

ಹಿಂದುಸ್ಥಾನದ ಉಪ್ಪಿನಮೇಲೆ ಹೆಚ್ಚಿಗೆ ಕರ ಕೂಡಿಸಿದರು,

ದಿಲ್ಲಿ ತಾ. ೧

ಅಸೆಂಬ್ಲಿಯಲ್ಲಿ ಇಪತ್ತಿನ ದಿವಸ, ಪರದೇಶದಿಂದ ಹಿಂದುಸ್ಥಾನಕ್ಕೆ ಬರುತ್ತಿರುವ ಉಪ್ಪಿನ ಮೇಲೆ ಹೆಚ್ಚಿನ ಕರ ಕೂಡಿಸುವ, ಟಪಾಲ ರೇಲಿಯವರಿಗೆ ಹೆಚ್ಚಿನ ಹಣ ಕೊಡುವ ಹಾಗು ಖರ್ಚು ಕಡಿಮೆ ಮಾಡುವ ಮಂಡಳದವರು ಮೇ ತಿಂಗಳದಲ್ಲಿ ಸಭೆಯಲ್ಲಿ ಸೇರಿ ತಮಗೆ ವಿಚಾರಣೆಯಲ್ಲಿ ತಿಳಿದು ಬಂದು ಸಂಗತಿಗಳ ವಿಷಯವಾಗಿ ವಿವೇಚಿಸಬೇಕು ಇವೇ ಮೊದಲಾದ ಸೂಚನೆಗಳು ಸ್ವೀಕೃತವಾದವು. ಬಿ. ಎನ್ ರೇಲ್ವೆ ಹಾಗು ರೋಹಿಲಖಂಡ ರೇಲ್ವೆ ಇವುಗಳನ್ನು ೧೯೩೨ ರ ಕೊನೆಯಲ್ಲಿ ಕೊಂಡುಕೊಳ್ಳುವ ವಿಷಯವಾಗಿ ವಿಚಾರ ಮಾಡಲು ಒಂದು ಮಂಡಳವನ್ನು ನಿಯಮಿಸಬೇಕಾಗಿ ಸರ್ ರೇನಿಯವರು ತಂದ ಸೂಚನೆಯಾದರೂ ಸ್ವೀಕೃತವಾಯಿತು. (ಅ. ಪ್ರೆ)

ಬಾರ್ಡೋಲಿ ತಾಲೂಕದಲ್ಲಿ ಳಳ ಜನರನ್ನು ಸೆರೆಹಿಡಿದರು

ಬಾರ್ಡೋಲಿ ತಾಲೂಕದ ಬಾಜೀಪುರ ಎಂಬ ಹಳ್ಳಿಯಲ್ಲಿ ಮೊನ್ನಿನ ಶನಿವಾರ ದಿವಸ ೪೪ ಜನರು ಸೆರೆಹಿಡಿಯಲ್ಪಟ್ಟಿದ್ದು ಅವರಲ್ಲಿ ಎಷ್ಟೋ ಜನರು ಸ್ತ್ರೀಯರಿರುತ್ತಾರೆ. ಹೊಲಗಳಲ್ಲಿ ಕೆಲಸ ಮಾಡುತ್ತಿರುವಾಗ ಅವರು ಕೈದು ಮಾಡಲ್ಪಟ್ಟಿರುವರಾಗಿ ತಿಳಿದು ಬರುತ್ತದೆ. ಆ ಹೊಲವು ಶ್ರೀ ಗೋವಿಂದಭಾಯಿ ಎಂಬುವರಿಗೆ ಸಂಬಂಧಿಸಿದ್ದು, ಕರನಿರಾಕರಣ [illegible] ವಳಿಯಲ್ಲಿ ಅವರು ಭೂಕಂದಾಯ ಕೊಡದ್ದರಿಂದ, ಸರಕಾರದವರು ಅದನ್ನು ಜಪ್ತಮಾಡಿ ಶ್ರೀ ಗಂಡಾವ ಎಂಬವರಿಗೆ ಅದನ್ನು ಮಾರಿದ್ದರು. ಜಪ್ತಮಾದ ಹೊಲವನ್ನು ಕೊಂಡುಕೊಂಡಿದ್ದರಿಂದ ಊರವರು ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿದರು. ಬಹಿಷ್ಕಾರವ ಸೇಡುತೀರಿಸಿಕೊಳ್ಳಬೇಕೆಂದು ಗಂಡಾವಾಲರು ೪೪ ಜನರ ವಿರುದ್ಧವಾಗಿ ಕೋರ್ಟಿನಲ್ಲಿ ಖಟ್ಲೆ ಮಾಡಿದ್ದೇ ಅವರ ಕಾರಣವಾಗಿದೆ.

ರ ನಂ. ಬಿ. ೨೭೮೮

ನಿತ್ಯ ಪತ್ರ. (ಮುಂಜಾನೆ ಸಂಚಿಕೆ)

ಬೆಲೆ ೦—೦—೩.

सर्वं परवशं दुःखं । सर्वमात्मवशं सुखम् ॥—मनु.

ಕನ್ನಡಿಗ

KANNADIGA

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಮುಂಗಡ ಕೊಡುವದಾದರೆ
೧೨ ತಿಂಗಳಿಗೆ ೧೫—೦—೦
೬ „ ೭—೮—೦
೩ „ ೩—೧೨—೦
೧ „ ೧—೪—೦
ಹಿಂದಿನಿಂದ
೧೨ ತಿಂಗಳಿಗೆ ೨೦—೦—೦
೬ „ ೧೦—೦—೦
೩ „ ೫—೦—೦
೧ „ ೧—೮—೦

ನಿತ್ಯಪತ್ರಿಕೆಯು
ಸರಕಾರಿ ಹಾಗು ಜಾಹಿರಾತಿನ ದರಗಳು
ಒಂದು ಕಾಲಂ ೧ ಇಂಚಿಗೆ ೧—೮—೦
... „ „ ೧—೦—೦
ವಾರ್ಷಿಕ ...
೦—೧೨—೦
ಜಿಡಿಗೆ ... ವ್ಯವಸ್ಥಾಪಕರ
ಪತ್ರವ್ಯವಹಾರದಿಂದ ತಿಳಿಯುವದು

ಸಂಪಾದಕರು:— ಮಂಗಳವೆಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ—ಶುಕ್ರವಾರ ಮಿತಿ ಚೈತ್ರ ಬಹುಳ ೧ ಶಕೆ ೧೮೫೩ ತಾ॥ ೩—೪—೩೧ [ಸಂಚಿಕೆ ೧೪

ಭಗತಸಿಂಗಾದಿ ಜಡದೇಹಗಳ ಅತ್ಯಾಚಾರ ವಿಚಾರಣಾ ಮಂಡಳ

ಕರಾಚಿ, ತಾ॥೨,

ವರ್ಕಿಂಗ ಕಮಿಟಿಯವರು ಇವತ್ತಿನ ದಿವಸ ಸಭೆ ಕೂಡಿ, ಭಗತಸಿಂಗ ರಾಜಗುರು, ಸುಖದೇವ ಇವರ ಜಡದೇಹಗಳ ಅಂತ್ಯಸಂಸ್ಕಾರದ ಸಂಬಂಧವಾಗಿ ಪತ್ರಿಕೆಗಳಲ್ಲಿ ಪ್ರಕಟವಾದ ಅತ್ಯಾಚಾರಗಳ ಬಗ್ಗೆ ವಿಚಾರಣೆ ನಡೆಸಲು, ೧. ಪಂಡಿತ ಸಂತಾನಮ, ೨. ಅಬ್ದುಲ್ ಕಾದಿರ ಕಸೂರ, ೩ ಡಾ. ಸತ್ಯಪಾಲ ೪. ಮಲಿಕ ಬರಕಲ್ಲಿ ೫. ಜೀವನಲಾಲ ಕಪೂರ, ೬ ದೇಶದಾಸ ಕೆಂಸಲ ಇವರದೊಂದು ಮಂಡಳವನ್ನು ನಿಯಮಿಸಿದರು. (ಅ. ಪ್ರೆ.)

ಪೋಲೀಸ ಸಾಹೇಬರ ಗುಂಡಾಟಿಕೆಯ ವಿಚಾರಣೆ.

ಲಾಹೋರ, ತಾ॥ ೧.

ಲಾಹೋರ ದಯಾನಂದ ಎ. ವ್ಹಿ. ಕಾಲೇಜದ ಪ್ರೊಫೆಸರರಾದ ಸಂತಾರಾಮರು, ಅಲ್ಲಿಯ ಪೋಲೀಸ ಸುಪರಿಂಟೆಂಡೆಂಟ ಹಾಗು ಓರ್ವ ಪೋಲೀಸ ಇವರ ಮೇಲೆ ಮಾನಹಾನಿ ದಾವೆ ಮಾಡಿದ್ದು, ಅದರ ವಿಚಾರಣೆಯು ಇವತ್ತಿನ ದಿವಸ ಸೀನಿಯರ್ ಸಬ್‌ಜಡ್ಜ ಕೋರ್ಟಿನಲ್ಲಿ ಪ್ರಾರಂಭವಾಯಿತು. ಪ್ರೊಫೆಸರ ಸಂತಾರಾಮರು ತಮ್ಮ ವಾಙ್ಮೂಲದಲ್ಲಿ (ಸ್ಟೇಟಮೆಂಟು) ಹೇಳಿದ್ದೇನಂದರೆ—ತಾ॥ ೮—೧೦—೩೦ನೆಯ ದಿವಸ ಐದು ಜನ ಪೋಲೀಸ ಅಧಿಕಾರಿಗಳು ಕೆಲವು ಜನ ಪೋಲೀಸರೊಂದಿಗೆ ಒಮ್ಮೆಲೆ ಕಾಲೇಜದ ಅಂಗಳದಲ್ಲಿ ಹೊಕ್ಕು ವಿದ್ಯಾರ್ಥಿಗಳನ್ನು ಥಳಿಸಹತ್ತಿದರು. ವಿದ್ಯಾರ್ಥಿಗಳನ್ನು ಹೀಗೆ ಥಳಿಸಬಾರದೆಂದು ನಾನು ಅವರಿಗೆ ವಿರೋಧ ಮಾಡಿದೆನು, ಅವರು ನನ್ನ ಕ್ಲಾಸಿನಲ್ಲಿಯೇ ಒಳಹೊಕ್ಕು ನನ್ನನ್ನು ಥಳಿಸಿದರು. ಇಷ್ಟರ ನಂತರ ಪ್ರತಿವಾದಿ ವಕೀಲರ ವಾಙ್ಮೂಲವಾಯಿತು. ಅವರು, ಆರೋಪಿಗಳು ಆ ವೇಳೆಯಲ್ಲಿ ಅಲ್ಲಿ ಇದ್ದಿದ್ದಿಲ್ಲವೆಂದೂ, ಈ ಸಂಗತಿ ಘಟಿಸಿದ್ದು ಅವರು ನೋಡಲಿಲ್ಲವೆಂದೂ ಹೇಳಿದರು. ಅ. ಪ್ರೆ.

ಕಲಕತ್ತೆಯಲ್ಲಿ ಚಕಮಕಿಯವರ ಹತ್ಯೆ

ಕಲಕತ್ತೆ, ತಾ॥೩೧

ಹೋದ ವರ್ಷ ಎಪ್ರಿಲ್ ೧೮ನೆಯ ತಾ॥ ದಿವಸ ಚಿತ್ತಗಾಂವದ ಸಂಪಿನ ಸಮಯದಲ್ಲಿ ಪ್ರಾಣತ್ಯಾಗಮಾಡಿದವರ ಸಂಸ್ಮರಣಾರ್ಥವಾಗಿ ಕಲಕತ್ತೆಯು ಒಕ್ಕೂಡಿಯುವದು ತಾ॥ ೧೮ನೆಯ ದಿವಸ ಹರತಾಳ ಪಾಲಿಸಿದರು. (ಅ.ಪ್ರೆ.)

ವರ್ಕಿಂಗ ಕಮಿಟಿಯವರ ರಾಷ್ಟ್ರಧ್ವಜ ಮಂಡಳ

ಕರಾಚಿ ತಾ। ೨

ಹೊಸ ವರ್ಕಿಂಗ ಕಮಿಟಿಯವರು ಇವತ್ತಿನ ದಿವಸ ಸಭೆಸೇರಿಸಿಕೊಂಡು ರಾಷ್ಟ್ರಧ್ವಜದ ಪ್ರಶ್ನೆಯನ್ನು ಬಗೆಹರಿಸಲು ಅತ್ಯವಶ್ಯವಿರುವ ಯೋಜನೆಗಳನ್ನು ಕೈಕೊಳ್ಳಲು ಕೆಳಗಿನದೊಂದು ಮಂಡಳವನ್ನು ನಿಯಮಿಸಿದರು.

೧ ಸರದಾರ ವಲ್ಲಭಭಾಯಿ ಪಟೇಲ, ೨ ಜವಾಹಿರಲಾಲ ನೆಹರೂ, ೩ ಪಟ್ಟಾಭಿ ಸೀತಾರಾಮಯ್ಯ, ೪ ಡಾ। ಎನ್. ಎಸ್. ಹರ್ಡೀಕರ, ೫ ಡಿ. ಬಿ. ಕಾಲೇಲಕರ, ೬ ಮಾಸ್ತರ ತಾರಾಸಿಂಗ, ೭ ಅಬ್ದುಲ್ ಕಲಮ್ ಆಜದ್, (ಅ, ಪ್ರೆ,)

ಮಹಾತ್ಮರಿಗೆ ಮದ್ರಾಸ ಸ್ತ್ರೀಯರ ತಾರು

ಮದ್ರಾಸ, ತಾ॥ ೧.

ಕಾಂಗ್ರೆಸದಲ್ಲಿ ಸ್ತ್ರೀ ಕೆಲಸಗಾರರ ಸಂರಕ್ಷಣೆಯ ಸಂಬಂಧವಾಗಿ ತೀರ್ಮಾನಿಸಲ್ಪಟ್ಟ ಠರಾವನ್ನು ನಿಷೇಧಿಸಿ, ಮದ್ರಾಸ ಭಾರತೀಯ ಸ್ತ್ರೀ ಸಂಘದವರು ಸ್ತ್ರೀಯರು ಹಾಗು ಪುರುಷರಿಗೆ ಸಮಾನವಾದ ಹಕ್ಕುಗಳನ್ನೇ ದಯಪಾಲಿಸಬೇಕೆಂದು ಮ.ಹಾತ್ಮಾ ಗಾಂಧಿಯವರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದಾರೆ. (ಅ. ಪ್ರೆ.)

ಝೀರಾ ಬಾಂಬ ಖಟ್ಲೆಯ ವಿಚಾರಣೆ ಇಬ್ಬರಿಗೆ ೨॥ ವರ್ಷ ಕಠಿಣ ಶಿಕ್ಷೆ

ಲಾಹೋರ ತಾ। ,

ಝೀರಾ ಬಾಂಬ ಖಟ್ಲೆಯ ಆರೋಪಿಗಳಾದ ಶ್ರೀ ದುರ್ಗದಾಸ, ಪ್ರೇಮಸಿಂಗ ಮೊದಲಾದ ಮಹಾಶಯರ ಖಟ್ಲೆಯ ವಿಚಾರಣೆಯು ಸ್ಪೇಶಲ್ ಟ್ರಿಬ್ಯುನಲದ ಮುಂದೆ ನಡೆದು, ಇವತ್ತಿನ ದಿವಸ ತೀರ್ಪು ಕೊಡಲ್ಪಟ್ಟಿತು. ಶ್ರೀ ದುರ್ಗದಾಸ, ಶ್ರೀ ಪ್ರೇಮಸಿಂಗ ಇವರಿಬ್ಬರಿಗೆ ಪ್ರತ್ಯೇಕವಾಗಿ ೨॥ ವರ್ಷ ... ಸಂಗ್ರಹವಾಸದ ಶಿಕ್ಷೆಯು ದೊರೆತಿದ್ದು ಮೂರನೆಯವನು ನಿರ್ದೋಷಿ ಅಂತ ಬಿಡಲ್ಪಟ್ಟಿದ್ದಾನೆ. ಹೋದ ವರ್ಷದ ಡಿಸೆಂಬರದಲ್ಲಿ ಆರೋಪಿಗಳು ಪೋಲೀಸರ ಠಾಣೆಯ ಮೇಲೆ ಬಾಂಬು ಒಗೆದಿದ್ದರು (ಅ ಪ್ರೆ)

ಮಹಾತ್ಮರು ಜಾನಪತಿಗಳಲ್ಲಿ ಯದಕ್ಕೆ ಹೋಗುವದಿಲ್ಲ

ಕರಾಚಿ ತಾ ೨,

ಮ.ಹಾತ್ಮಾ ಗಾಂಧಿಯವರು ಓರ್ವ ಪತ್ರಿಕಾ ಪ್ರತಿನಿಧಿಯ ಮುಂದೆ ಹಿಂದು ಜನಸಂಘಗಳಲ್ಲಿ ಒಂದನ್ನೂ ... ಒದಗಿ ಬಿದ್ದಿದ ಸ್ಥಿತಿಯು ನಿರಾಧಾರವಾದದ್ದಿದೆಯೆಂದೂ, ಕಾಂಗ್ರೆಸ್ ಪರ ಬಂಡಿಗಾಲಿಯ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಬೇಕೆಂದು ನಿರ್ಧರಿಸಿಕೊಂಡಿದ್ದರೂ ಸಹ ಕಾರಣಾಂತರಗಳಿಂದ ಇಲ್ಲವೆ ಶಿಷ್ಟಮಂಡಳವಾಗಲಿ ಲಂಡನಕ್ಕೆ ಈಗಲೆ ಹೋಗುವದೆಂದು ಇನ್ನೂ ನಿರ್ಣಯವಾಗಿಲ್ಲವೆಂದೂ ಹೇಳಿದರು. ಅ ಪ್ರೆ.

ಹಿಂದುಸ್ಥಾನೀ ಸೇವಾದಲದ ಪರಿಷತ್ತು

ಹಿಂದುಸ್ಥಾನೀ ಸೇವಾದಲದ ಪರಿಷತ್ತಿನಲ್ಲಿ ಒಟ್ಟಿಗೆ ಮೋತೀಲಾಲ, ಮಹಮ್ಮದ ಅಲ್ಲಿ, ಗಣೇಶ ಶಂಕರ ವಿದ್ಯಾರ್ಥಿಯವರ ನಿಧನದ ಬಗ್ಗೆ ದುಃಖಪ್ರದರ್ಶನ, ಸರದಾರ ಭಗತಸಿಂಗ ಹಾಗು ಅವರ ಸಹಕಾರಿಗಳ ಅಭಿನಂದನ, ಸತ್ಯಾಗ್ರಹ ಚಳುವಳಿಯಲ್ಲಿ ಸೇರಿ ಹೋರಾಡಿದ ಸ್ತ್ರೀ ಪುರುಷರ ಪ್ರಶಂಸೆ, ಸ್ವಯಂಸೇವಕ ಸಂಘಗಳ ಸ್ಥಾಪನೆ, ಸ್ತ್ರೀ ಸ್ವಯಂಸೇವಕರ ಸಂಘಟನೆ ಇವೇ ಮೊದಲಾದ ೧೩ ಠರಾವುಗಳು ಸ್ವೀಕೃತವಾಗಿವೆ.

ಅಖಿಲ ಭಾರತ ರಾಷ್ಟ್ರೀಯ ಸಪ್ತಾಹವು

ಪ್ರಿಯ ನಾಗರಿಕರೇ,

ಇದೇ ತಿಂಗಳ ೬ನೆ ತಾರೀಖಿನಿಂದ ... ಭಾರತ ಖಿಲದಲ್ಲೆಲ್ಲ ... ಆಚರಿಸಲ್ಪಡು ... ೧೩ನೆ ... ಕೋಟೆಯಲ್ಲಿಯೂ ಆ ... ಯಶಸ್ವಿಯಾಗಿ ಮಾಡಬೇಕು ... ಮನ ಧನಗಳಿಂದ ಸಹಾಯ ... ವಿನಂತಿ.

ಕಾರ್ಯದರ್ಶಿ
ತಾ ... ಕಮಿಟಿ
ಬಾಗಲಕೋಟೆ

ಅಖಿಲ ಭಾರತ ಹಿಂದೂ ಸಮ್ಮೇಲನ ಪಂಡಿತ ಮಾಲವೀಯರ ಭಾಷಣ

ಅಖಿಲ ಭಾರತ ಹಿಂದೂ ಸಮ್ಮೇಲನವು ತಾ। ೨೯ನೆಯ ದಿವಸ 'ಮಾಡರ್ನ ರಿವ್ಹ್ಯೂ' ಪತ್ರಿಕೆಯ ಸಂಪಾದಕರಾದ ಶ್ರೀ ರಮಾನಂದ ಚಟರ್ಜಿಯವರ ಅಧ್ಯಕ್ಷತೆಯ ಕೆಳಗೆ ಕರಾಚಿಯಲ್ಲಿ ಪ್ರಾರಂಭವಾಯಿತು. ಕಳೆದ ಬಂಡಿಗಾಲಿಯ ಪರಿಷತ್ತಿನಲ್ಲಿ ಸಿಂಧ ದೇಶದ ಹಿಂದುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವು ದೊರೆಯದ್ದಕ್ಕಾಗಿಯೂ, ಸಿಂಧ ಪ್ರಾಂತವನ್ನು ಮುಂಬಯಿ ಇಲಾಖೆಯಿಂದ ವಿಭಾಗಿಸಬೇಕೆಂದು ಬಂಡಿ ಪರಿಷತ್ತಿನವರು ಠರಾವು ಮಾಡಿದ್ದಕ್ಕಾಗಿಯೂ ನಿಷೇಧವು ವ್ಯಕ್ತಮಾಡಲ್ಪಟ್ಟಿತು.

ಸಮ್ಮೇಲನದ ಕೊನೆಯಲ್ಲಿ ಪಂ. ಮಾಲವೀಯರು ಭಾಷಣ ಮಾಡಿ ಹೇಳಿದ್ದೇನಂದರೆ:- ಈಗ ನಮಗೆ ಸ್ವರಾಜ್ಯವು ಅತ್ಯವಶ್ಯವಿದೆ. ಹಿಂದುಗಳು ನ್ಯಾಯವನ್ನೂ ಸತ್ಯವನ್ನೂ ಪರಿತ್ಯಜಿಸತಕ್ಕದ್ದಲ್ಲ; ಜಾತಿಜಾತಿಗಳಲ್ಲಿ ಐಕ್ಯವಿಲ್ಲದೆ ಸ್ವರಾಜ್ಯವು ಸಾಧಿಸುವದಿಲ್ಲ; ಹಿಂದುಗಳೂ ಮುಸಲ್ಮಾನರೂ ತಮ್ಮ ಭೇದಭಾವವನ್ನು ಬಿಟ್ಟುಬಿಡಬೇಕು. ಸಿಂಧಪ್ರಾಂತವನ್ನು ಮುಂಬಯಿ ಇಲಾಖೆಯಿಂದ ಬೇರೆ ಮಾಡುವ ವಿಷಯವಾಗಿ ಎರಡೂ ಪಂಗಡದವರು ಒಟ್ಟಿಗೆ ಕಲೆತು ವಿಚಾರಮಾಡಬೇಕು. ಜಾತಿಜಾತಿಗಳಲ್ಲಿಯ ಕಲಹಗಳಿಂದ ದೇಶವು ಬಹಳೇ ಹಾನಿಗೀಡಾಗುತ್ತದೆ. ಇದನ್ನು ತಪ್ಪಿಸಲು ಎಲ್ಲರೂ ಪ್ರಯತ್ನಿಸಬೇಕು.

ಕೊಲ್ಹಾಪುರದಲ್ಲಿ ಸಿನೇಮಾ ಥಿಯೇಟರಿಗೆ ಬೆಂಕಿಹತ್ತಿತು

ಕೊಲ್ಹಾಪುರದಲ್ಲಿಯ ಶನಿವಾರ ಪೇಟೆಯೊಳಗಿನ ಆರ್ಯಕ ಸಿನೇಮಾ ಥಿಯೇಟರಿಗೆ ತಾ। ೨೭ನೆಯ ದಿವಸ ಒಮ್ಮೆಲೆ ಬೆಂಕಿಹತ್ತಿತು. ಮೊದಲು ಹಿಂದಿನ ಭಾಗಕ್ಕೆ ಬೆಂಕಿಹತ್ತಿ, ಸ್ವಲ್ಪ ಹೊತ್ತಿನಲ್ಲಿಯೇ ಬೆಂಕಿಯು ಎಲ್ಲ ಕಡೆಗೂ ಪಸರಿಸಿಕೊಂಬುದಾಗಿ ತಿಳಿಯಬರುತ್ತಿದೆ; ನೆರೆಹೊರೆಯ ಜನರು ಆ ಸ್ಥಳಕ್ಕೆ ಹೋಗಿ ಬೆಂಕಿಯನ್ನು ಆರಿಸಹತ್ತಿದರು, ಆದರೆ ಬೆಂಕಿಯು ಆರಲಿಲ್ಲ, ಯಾವತ್ತು ಉಪಕರಣಗಳು ವಿದ್ಯುತ್ ಯಂತ್ರಗಳು, ಕನ್ನಡಿಯ ಕಾಮಗಳು ಮೊದಲಾದವುಗಳೆಲ್ಲ ಭಸ್ಮವಾದವು, ಒಟ್ಟಿನಲ್ಲಿ ... ರೂಪಾಯಿಗಳ ನಾಶವಾಗಿದೆಯೆಂದು ತಿಳಿದು ಬಂದಿದೆ.

ಸಿದ್ದಾಪೂರ ತಾಲೂಕಿನ
ಜಪ್ತಿಯ ಇತಿಹಾಸವು
ಪೋಲೀಸರು ಹೆಣ್ಣುಮಕ್ಕಳ ಮೇಲೆ ಕೈ ಎತ್ತಿದ್ದರು

ಇಲ್ಲಿಯ ವರೆಗೆ ೪೭ ಜಪ್ತಿಗಳಾದವು. ಇವುಗಳಲ್ಲಿ ಬೇಕಾಯದೆಶೀರ ಆದ ಜಪ್ತಿಗಳೇ ಹೆಚ್ಚು. ಶುಕ್ರವಾರ ದಿವಸ ಅನೇಕ ಸ್ಥಳಗಳಲ್ಲಿ ಜಪ್ತಿಗಳಾಗಿವೆ. ಹೀರೆ, ಖುರ್ಚಿ, ಸಾಯಿಕಲ್ಲು, ಗಡಿಯಾರು ಮುಂತಾದ ಅನೇಕ ನಿತ್ಯದ ಉಪಯೋಗದ ಸಾಮಾನುಗಳು ಜಪ್ತ ಮಾಡಲ್ಪಟ್ಟಿವೆ. ಕೆಲವು ಕಡೆಗಳಲ್ಲಿ ಜಪ್ತೀ ಅಧಿಕಾರಿಗಳು ಬೆಳಿಗ್ಗೆ ೪ ಗಂಟೆಯಿಂದಲೇ ಜಪ್ತಿಗೆ ಪ್ರಾರಂಭಿಸುತ್ತಾರೆ. ಜಪ್ತಿಯ ವಾರಂಟು ತೋರಿಸದೇ ಜಪ್ತೀ ಮಾಡುತ್ತಿದ್ದಾರೆ. ಒಬ್ಬರ ಶಿವೇಗಾಗಿ ಇನ್ನೊಬ್ಬರ ಮಾಲನ್ನು ಜಪ್ತ ಮಾಡುವ ಕಾರ್ಯವು ಬಾರ್ಡೋಲಿಯಂತೆ ಈ ತಾಲೂಕಿನಲ್ಲಿ ನಡೆದಿದೆ. ಮನೆಗಳನ್ನು ಆಗಿಯುವದು ಮಾಮೂಲೀ ಕಾರ್ಯ. ಬಾಗಿಲು ಮುರಿಯುವದು ಕೆರೆಯುವದು ಸರ್ವಜಾತಿಯ ಜನರು ಮನೇ ಒಳಗೆ ಹೋಗುವದು ಪ್ರತಿದಿನ ಆಗುತ್ತಿದೆ.

ತಾರೀಖು ೨೮ ೩ ೩೧ ನೇ ದಿವಸ ಹೆಬ್ಬಳಯಲ್ಲಿ ಸುಬ್ಬಯ್ಯ ಗಣ್ಣಯ್ಯ ಇವರ ಮನೆಗೆ ಛೀಳಗ, ಸೋವಿನಕೊಪ್ಪ ಕ್ಯಾದಗೀ ಗ್ರಾಮಗಳ ಶ್ಯಾನುಭೋಗರು, ಬೀಳಗೀ ಪಟೇಲ, ಒಬ್ಬ ಸರ್ಕಲ್ ಇನಸ್ಪೆಕ್ಟರ, ೬ ಜನ ಉಗ್ರಾಣಿಗಳೂ, ಇಬ್ಬರು ಸಶಸ್ತ್ರ ಪೋಲೀಸರೂ ಇಷ್ಟು ಮಂದಿ ಜಪ್ತಿಗೆ ಹೋಗಿದ್ದರು. ಒಬ್ಬ ಪೋಲೀಸ ಇಬ್ಬರು ಉಗ್ರಾಣಿಗಳೂ ಹಿತ್ತಲಲ್ಲಿ ಕುಂತರು. ಉಳಿದವರು ಮನೆಹೊಕ್ಕು ಪಡಸಾಲೆಯಲ್ಲಿ ಕುಳಿತು ತೀರ್ವೆ ಕೊಡಿರೆಂದು ಯಜಮಾನರನ್ನು ಕೇಳಿದರು. ಆಗ ಅವರು ತಮ್ಮ ದೈನ್ಯಾವಸ್ಥೆಯನ್ನು ಹೇಳಿದರು. ಆಗ ಅಧಿಕಾರಿಗಳು ಜಪ್ತಿಗೆ ಪ್ರಾರಂಭಿಸಿದರು. ಆಗ ಅವರ ಮಗಳು ೧೩ ನೇ ನಂಬರು ಅಕ್ಕಿ ತನ್ನದು ಎಂದು ಅಂಗಲಾಚಿ ಬೇಡಿಕೊಂಡರೆ ಕೇಳಲಿಲ್ಲ. ಆಗ ಒಬ್ಬ ಸಶಸ್ತ್ರ ಪೋಲೀಸನು ಆ ಹೆಣ್ಣುಮಗಳನ್ನು ಗಚ್ಚಿಸಿ ನೂಕಿಬಿಟ್ಟನು. ಇದಲ್ಲದೆ ಒಂದು ಖಾಲೀ ಚೀಲವನ್ನು ಗೊತ್ತಿಲ್ಲದೆ ತೆಗೆದುಕೊಂಡು ಹೋಗಿರುತ್ತಾರೆ. ತಾಮ್ರ, ಕಂಚು ಹಿತ್ತಾಳೆಯ ಸಾಮಾನುಗಳನ್ನು ಅಳೆದು ಒಂದು ಅತಿ [illegible] ತೆಂಗಿನಂಥ ಮಾಗ್ಗಿಯಲ್ಲಿ [ಗುಪ್ತ] ಇಷ್ಟು ಸಾಮಾನುಗಳನ್ನು ಜಪ್ತ ಮಾಡಿದರು.

ತಾರೀಖು ೨೯-೩-೩೧ ಆದಿತ್ಯವಾರ ದಿವಸ [illegible] ಹೆಗಡೆ ಕೇವಲ್ಯಾಸದಲ್ಲಿರುವ ಸುಬ್ರಾಯ ಹೆಗಡೆಯವರ ಮನೆಗೆ ಇಬ್ಬರು ಸಶಸ್ತ್ರ ಪೋಲೀಸರು, [illegible] ಪಟೇಲರು ಇಬ್ಬರು ಶ್ಯಾನುಭೋಗರು, ೬ ಜನ ಉಗ್ರಾಣಿಗಳು ಹೀಗೆ ಜನರು ಬಂದು ಜಪ್ತಿ ಮಾಡಿದರು. ಇವರು ತಮ್ಮ ಶಕ್ತಿ ಇದ್ದಷ್ಟು ತೀರ್ವೆ ೧೧೦ ರೂಪಾಯ ಕೊಟ್ಟಿದ್ದರು. ಆದರೂ ಇವರ ಮನೆ ಜಪ್ತಿ ಮಾಡಿದರು. ಇವರು ಆಗ ತೋರಿಸಿದ ಉತ್ಸಾಹ ಹೇಳಲು ಬರುವಂತಿಲ್ಲ. ವಿಶೇಷತಃ ತಾಮ್ರದ ಹಂಡೆ, ಜರಿಗೆ ಮುಂತಾದ ಸಾಮಾನುಗಳನ್ನು ಜಪ್ತಿ ಮಾಡಿಕೊಂಡು ಹೋದರು. ಪಂಚನಾಮೆಗೆ ಯಾರೂ ಸಹಿ ಹಾಕಲಿಲ್ಲ.

ತಾರೀಖು ೨೯-೩-೩೧ ಆದಿತ್ಯವಾರ ದಿವಸ ಹೇಮಗಾರದಲ್ಲಿರುವ ಗಣೇಶ ಕೃಷ್ಣ ಹೆಗಡೆಯವರ ಮನೆಗೆ ಇಬ್ಬರು ಶಾನುಭೋಗರೂ, ಇಬ್ಬರು ಪಟೇಲರೂ, ೮ ಜನ ಉಗ್ರಾಣಿಗಳೂ, ಜಪ್ತಿಗಾಗಿ ಹೋಗಿದ್ದರು. ಭತ್ತ ತಾಮ್ರದ ಪಾತ್ರೆಗಳೂ, ೧ ಆಕಳು, ೧ ದೊಡ್ಡಕರ, ೧ ಹೋರಿ ಇಷ್ಟು ಜಪ್ತ ಮಾಡಿದರು. ಪಂಚನಾಮೆಗೆ ಯಾರೂ ಸಹಿ ಹಾಕಲಿಲ್ಲ. ಈ ದನಕರುಗಳು ಅದೇ ಊರ ಹುಕ್ಕಲು ತಿಮ್ಮಾ ಗಣ್ಣಾ ಇವರ ಮನೆಯಲ್ಲಿದ್ದವು, ಅವು ಹೆಗಡೆಯವರವೇ ಎಂದು ತಿಳಿದುಕೊಂಡು ಜಪ್ತ ಮಾಡಿದರು. ತಿಮ್ಮನಿಗೆ ಸಾವಕಾಶ ಸಹ ಕೊಡಲಿಲ್ಲ. ಆದರೆ ಆ ಮೇಲೆ ತಿಮ್ಮಾ ಗಣ್ಣಾ ಇವನ ಕಡೆಯಿಂದ "ಜಪ್ತಾದ ಸಾಮಾನುಗಳನ್ನು ಜಪ್ತಾದ ಸ್ಥಳದಲ್ಲಿಯೇ ಕೇಳಿದಾಗ್ಗೆ ಬಿಟ್ಟು ಕೊಡತಕ್ಕೇನು" ಈ ಪ್ರಕಾರ ಬರೆಸಿಕೊಂಡು ದನಕರುಗಳನ್ನು ಪಾಲಕನ ವಶಕ್ಕೆ ಬಿಟ್ಟುಕೊಟ್ಟರು. ಈ ಜಪ್ತಿಯ ಅಧಿಕಾರಿಗಳಿಗೆ ಸಾಯಂಕಾಲದ ವರೆಗೆ ಏನೂ ತಿನ್ನಲಿಕ್ಕೆ ಆಸರಿಗೂ ಸಿಗಲಿಲ್ಲ. ಜಪ್ತಿ ಮಾಡಿದ ನಂತರ ಗಣೇಶ ಹೆಗಡೆಯವರು ಸುಬ್ರಾಯ ಹೆಗಡೆಯವರಿಗೆ ಈ ಸುದ್ದಿ ತಿಳಿಸಲು ಹೊರಟರು. ಆಗ ಅವರಿಗೆ ಕೈಕೊಡ್ಡು ಬೆಟ್ಟಿ ಎಲ್ಲಿಗೆ ಹೋಗುತ್ತೀರಿ ಇಲ್ಲಿಯೇ ಕೂಡಿರಿ ಎಂದು ಬೇದರಿಸಿದರು. ಹಾರ್ಸೆ ಕಟ್ಟೆ ಪಟೇಲರ ಹೇಳಿಕೆಯ ಪ್ರಕಾರ ಬಿಟ್ಟುಕೊಟ್ಟರು.

೩೧ ನೇ ತಾರೀಖಿನ ದಿವಸ ಕೆಳಗಿನಮನೆ ಭಟ್ಟ ಸುಬ್ರಾಯ ಭಟ್ಟ ಇವರ ಮನೆಗೆ ಶಾನಭೋಗ ಪಟೇಲ, ಉಗ್ರಾಣಿ ಇವರು ಹೋಗಿ ತೀರ್ವೆ ಕೇಳಿದರು. ಆಗ ಅವರು ಹಣವಿಲ್ಲೆಂದು ಹೇಳಿ ಆನಂದದಿಂದ ಜಪ್ತಿಗೆ ತಯಾರಾದರು. ಆದರೆ ಊರಲ್ಲಿ ಯಾರೂ ಪಂಚನಾಮೆಗೆ ಸಿಗದ್ದರಿಂದ ಹಾಗೆಯೇ ಜಪ್ತೀ ಮಾಡದೇ ತಿರುಗಿ ಹೋದರು.

ಕರ್ನಾಟಕ ಏಕೀಕರಣ
ಶ್ರೀ. ಬುಲೆಯವರ ಭಾಷಣ

ತಾರೀಖು ೨೯-೩-೩೧ ನೇ ದಿವಸ ನಾಗೇಶ ಹೆಗಡೆಯವರ ಅಧ್ಯಕ್ಷತೆಯ ಕೆಳಗೆ ಸಿದ್ದಾಪುರದಲ್ಲಿ ಸಭೆ ಜರುಗಿತು. ಶ್ರೀ ಶಾಂತಾಚಾರ್ಯ ಹಾಗೂ ಶ್ರೀ ಗುರುನಾಥ ದೇಶಾಯಿಯವರು "ನನ್ನದು ಈ ಕನ್ನಡನಾಡು" ಹಾಡನ್ನೆಂದ ಬಳಿಕ ಶ್ರೀ ಬಿಂದು ಮಾಧವ ಬುಲೆಯವರು ಕರ್ನಾಟಕ ಏಕೀಕರಣದ ವಿಷಯವಾಗಿ ಪರಿಣಾಮಕಾರಕವಾದ ಭಾಷಣವನ್ನು ಮಾಡಿ ಈ ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು. ಕರಾಚಿ ಪರಿಷತ್ತಿನಲ್ಲಿ ನಿರ್ಣಯಿಸಲ್ಪಡುವ ಭಾರತೀಯ ಸ್ವರಾಜ್ಯ ಘಟನೆಯಲ್ಲಿ ಕರ್ನಾಟಕವು ಒಂದು ಸ್ವತಂತ್ರವಾದ ಆಡಳಿತೆಯ ಪ್ರಾಂತವಾಗುವಂತೆ ಏರ್ಪಾಡು ಮಾಡಬೇಕೆಂದು ಈ ಕಾಂಗ್ರೆಸ್ಸು ನಿರ್ಣಯಿಸುತ್ತದೆ ಎಂಬ ಠರಾವನ್ನು ಕಾಂಗ್ರೆಸ್ಸಿನಲ್ಲಿ ಪಾಸು ಮಾಡಲು ಕರಾಚಿ ಕಾಂಗ್ರೆಸಿನ ಅಧ್ಯಕ್ಷರಿಗೆ ಬಿನ್ನವಿಸಿಕೊಳ್ಳುತ್ತದೆ" ಇದನ್ನು ಶಿರಳಗಿ ಸುಬ್ರಾಯಭಟ್ಟರು ಅನುಮೋದಿಸಿದರು, ಠರಾವು ಸರ್ವಾನುಮತದಿಂದ ಪಾಸಾಯಿತು.

ಕಾಂಗ್ರೆಸ್ಸಿಗೆ ದಾನ

ಶ್ರೀ ದಿವಾಕರರು ತಾಲೂಕಿನಲ್ಲಿ ಸಂಚಾರ ಮಾಡಲಿಕ್ಕೆ ಹೋದಾಗ ಕಾಂಗ್ರೆಸಿಗೆ ಹೆಣ್ಣುಮಕ್ಕಳು ತಮ್ಮ ಪ್ರೀತಿಯ ಆಭರಣಗಳನ್ನು, ಗಂಡಸರು ಧನವನ್ನೂ ದಾನ ಮಾಡಿದರು.

ಮುಂದಿನ ಕಾಂಗ್ರೆಸ್ ಅಧಿವೇಶನವು ಉತ್ಕಲದಲ್ಲಿ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ತಮ್ಮ ಸಭೆ ಸೇರಿಸಿಕೊಂಡು, ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಉತ್ಕಲ ಪ್ರಾಂತದಲ್ಲಿ ಸೇರಿಸಬೇಕೆಂಬುದಾಗಿ ಬಹುಮತದಿಂದ ನಿರ್ಧರಿಸಿಕೊಂಡರು. ಪಂಡಿತ ಜವಾಹಿರಲಾಲ ನೆಹರು, ಡಾ. ಸಯ್ಯದ ಮಹಮ್ಮದ, ಶ್ರೀ ಜಯರಾಮದಾಸ ದೌಲತರಾಮ, ಇವರು ವರ್ಕಿಂಗ ಕಮಿಟಿಯ ಸಾಮಾನ್ಯ ಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ. ಕಚೇರಿಯನ್ನು ಅಲಹಾಬಾದದಿಂದ ಅಹಮ್ಮದಾಬಾದಕ್ಕೆ ಒಯ್ಯಬೇಕಾಗಿದ್ದರೂ ನಿರ್ಧರಿಸಲ್ಪಟ್ಟಿದ್ದು, ಶ್ರೀ ರಾಜೇಂದ್ರ ಇವರು ಉಪಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಸಾಬೋನುಗಳು

ಈಗ ಕೆಲವು ವರ್ಷಗಳಿಂದ ಹಿಂದುಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ನಾನಾ ಬಗೆಯ ಸಾಬೂನುಗಳು ತಯಾರಾಗುತ್ತಿವೆ. ವೈಗಾಂವ ಹರಳು, ದನ್ನು, ಇಟಲ, ಹಣ್ಣು ಮುಂತಾದ [illegible] ಯೋಗ್ಯವಾದ ಮಾರ್ಗೋಸಾ ಸೋಪ (೧೯೨೦) ಇಟ್ಟಿಗಳಿಸೂ [illegible] ದೇಶಗುವ ಸಾಮಾನುಗಳಿಂದ [illegible] ಅನೇಕ ಸ್ಥಳ [illegible]. ನಮ್ಮ ದೈವಪುರ ಸೋಪು [illegible] ಪ್ರಸಿದ್ಧವಾಗಿದೆ. ಸ್ತ್ರೀಯರ [illegible] ಸಾಮಾನುಗಳು ಕೂಡ ನಮ್ಮ [illegible]. ಆದರೆ ಈ ವರ್ಣನ ಸಾಬೂನಿನ ಬಗ್ಗೆ [illegible] ನಿರ್ಗತ ಅಂಕಿಗಳನ್ನು ನೋಡಿದರೆ ಎದೆಯೊಡೆಯುವದು. ದೇಶದಲ್ಲಿ [illegible] ಉತ್ಸಾಹದಿಂದ ಕೆಲಸ ನಡೆದರೂ ಇನ್ನೂ ವಿದೇಶಿ ಸಾಬೋನುಗಳು ನೂರಕ್ಕೆ ೫೦ ರಷ್ಟು ಬರುತ್ತಿರುವವು. ಯಾಕೆ ಹೀಗಾಗಬೇಕು? ಇದಕ್ಕೆ ಮುಖ್ಯ ಕಾರಣಗಳು [illegible]. ಕರ್ನಾಟಕ ಬಂಗಾಲಗಳ ಹೊರತು ಇತರ ಪ್ರಾಂತದವರು ಈ ವಿಷಯವಾಗಿ ಹೆಚ್ಚು ಗಮನ ಕೊಡದಿದ್ದುದು ಒಂದು ತಪ್ಪು. ನಮಗೆ ಶೋಭಿಸುವ [illegible] ಮುಖ್ಯ [illegible]. ಸರಕಾರದ ದಂಡಿನ [illegible] ಹಡಗು ಪಡೆಯು ಖಾತೆಯವರು ಇನ್ನೂ [illegible] ಸಾಬೂನುಗಳನ್ನು ಧಾರಾಳವಾಗಿ [illegible]. ಸರಕಾರವು ಭಾರತದ [illegible] ಗಳಿಗೆ ಸಂರಕ್ಷಣೆ [illegible] ರೀತಿಯಿಂದ ವ್ಯವಹರಿಸ ಬೇಕಾದರೆ ಹೀಗೆಯೇ! ದೇಶದ ಸೇವೆಗೋಸ್ಕರ ಸೊಂಟ ಕಟ್ಟಿಕೊಂಡು ನಿಂತಿರುವ ಆ ಮಹಾ ಕೌನ್ಸಿಲರುಗಳಾಗಲಿ, ಐರಿಷ್ವಿನ್ಯಾಯ ಮಂಡಳದ ಸಭಿಕರಾಗಲಿ ಇತ್ತ ಕಡೆ ಲಕ್ಷ್ಯ ಪೂರೈಸುವರೇನು? ಇನ್ನು ಮುಂದೆ ಆ ಖಾತೆಯು ಗುತ್ತಿಗೆಗಾರರು (ಕಾಂಟ್ರ್ಯಾಕ್ಟರ) ಕೇವಲ ಸ್ವದೇಶಿ ಸಾಬೂನುಗಳನ್ನೇ ಶಕ್ಯವಾದ ಮಟ್ಟಿಗೆ ತರುವಂತೆ ಏರ್ಪಾಡು ಮಾಡುವರೋ!

ಸಿದ್ದಾಪುರದಲ್ಲಿ ೬ ಜನರನ್ನು ಸೆರೆಹಿಡಿದರು.

ಅಧಿಕಾರಿಗಳು ಸಿರ್ಸಿ ಹಾಗು ಸಿದ್ದಾಪುರ ತಾಲೂಕಗಳಲ್ಲಿ ಜಪ್ತಿಯ ಸತ್ರವನ್ನು ಒಳ್ಳೇ ಜೋರಿನಿಂದ ಪ್ರಾರಂಭ ಮಾಡಿದ್ದರಿಂದ ರೈತರು ಸಂಕಟದಲ್ಲಿ ಬಿದ್ದಿದ್ದಾರೆ.

ಸಿದ್ದಾಪುರದಲ್ಲಿ ಜಪ್ತಿಯ ಸಾಮಾನುಗಳ ಲಿಲಾವು ನಡೆದಾಗ ಪಿಕೆಟಿಂಗ ಮಾಡಿದ್ದಕ್ಕಾಗಿ ಶ್ರೀ ದಾತಾಚಾರ ಮೊದಲಾದ ೬ ಜನ ಸ್ವಯಂಸೇವಕರು ಸೆರೆಹಿಡಿಯಲ್ಪಟ್ಟಿದ್ದಾರೆ.

ಕರ್ನಾಟಕದ ಮುಖಂಡರು ಮಹಾತ್ಮರಿಗೆ ಭೆಟ್ಟಿಯಾದರು

ಕರ್ನಾಟಕ ಪ್ರಾಂತದ ಸುಪ್ರಸಿದ್ಧ ಕಾಂಗ್ರೆಸ ಮುಖಂಡರಾದ ಗಂಗಾಧರರಾವ ದೇಶಪಾಂಡೆ, ಡಿ ಪಿ ಕರಮರಕರ, ಮತ್ತು ಶ್ರೀ ಹಣಮಂತರಾವ ಕೌಜಲಗಿಯವರು ತಾ। ೩೦ ನೆಯ ದಿವಸ ಮಹಾತ್ಮಾ ಗಾಂಧಿಯವರನ್ನು ಕಂಡುಕೊಂಡು, ಸಿರ್ಸಿ, ಸಿದ್ದಾಪುರ ಹಾಗು ಹಿರೇಕೆರೂರ ತಾಲೂಕಗಳಲ್ಲಿಯ ರೈತರ ದೈನ್ಯಾವಸ್ಥೆಯನ್ನು ಅವರ ಮುಂದೆ ಮಂಡಿಸಿದರು.

ಮೌಲಾನಾ ಶೌಕತ ಅಲ್ಲಿಯವರ ಪ್ರಕಟನೆ.

ಮೌಲಾನಾ ಶೌಕತ ಅಲ್ಲಿಯವರು ಕೆಳಗಿನಂತೆ ಒಂದು ಜಾಹೀರ ಪ್ರಕಟನೆಯನ್ನು ಹೊರಡಿಸಿದ್ದಾರೆ.

ಎಪ್ರಿಲ್ ೩, ೪, ೫, ಈ ತಾರೀಖುಗಳಲ್ಲಿ ದಿಲ್ಲಿಯಲ್ಲಿ ಕರೆದಲಿಕ್ಕಾದ ಭಾರತೀಯ ಮುಸಲ್ಮಾನ ಪರಿಷತ್ತಿಗೆ ನಾನು ಅಧ್ಯಕ್ಷನಾಗಿ ಆರಿಸಲ್ಪಟ್ಟಿದ್ದೇನೆ, ಆ ಪರಿಷತ್ತಿಗೆ ಬರಲು ಎಲ್ಲರಿಗೂ ನಾನು ಆಮಂತ್ರಿಸುತ್ತೇನೆ. ಬನಾರಸ, ವಿಜಾಪುರ, ಆಗ್ರಾ, ಅಲಹಾಬಾದ, ಕಾನಪೂರ ಮೊದಲಾದ ಸ್ಥಳಗಳಲ್ಲಿಯ ಕೋಮು ದಂಗೆಯ ಸಂಗತಿಗಳಿಂದ ಮುಸಲ್ಮಾನರು ರೇಗಿಗೇಳತಕ್ಕದ್ದಿಲ್ಲ. ಹಾಗು ಭಯಗ್ರಸ್ತರಾಗತಕ್ಕದ್ದಿಲ್ಲ. ನಾವೆಲ್ಲರೂ ಕೂಡಿ ಈ ಬಗ್ಗೆ ವಿಚಾರ ಮಾಡಿ ಈ ಸಂಗತಿಗಳು ಇನ್ನು ಮುಂದೆ ಘಟಿಸದಂತೆ ಯೋಗ್ಯ ಏರ್ಪಾಡು ಮಾಡಿಕೊಳ್ಳಬೇಕು.

ಕರಾಚಿಯ ಕಾಂಗ್ರೆಸ್ ಅಧ್ಯಕ್ಷರು ಕಾಂಗ್ರೆಸ್ಸಿಗೆ ಬರಲು ನನಗೆ ಆಮಂತ್ರಣ ಕೊಟ್ಟಿದ್ದರು. ಈ ಬಗ್ಗೆ ಅಧ್ಯಕ್ಷರನ್ನು ನಾನು ಅಭಿನಂದನ ಮಾಡಿ, ನನ್ನ ಆಗಮನದಿಂದ ಪ್ರಯೋಜನವಾಗುವಹಾಗಿದ್ದರೆ, ಕಾಂಗ್ರೆಸ್ಸಿನವರು ಅಖಿಲಭಾರತ ಮುಸಲ್ಮಾನ ಸಂಘದವರನ್ನು ಕಂಡುಕೊಳ್ಳಲು ಒಂದು ಮಂಡಳವನ್ನು ನಿಯಮಿಸಿದಲ್ಲಿ ಒಳಿತಾಗುವದೆಂದೂ ನಾನು ಅವರಿಗೆ ತಾರಿನಿಂದ ತಿಳಿಸಿದೆನು. ಸರದಾರ ವಲ್ಲಭಭಾಯಿಯವರು ನನ್ನ ಸೂಚನೆಯನ್ನ, ಸ್ವೀಕರಿಸಿ ಮಂಡಳವು ನಿಯಮಿಸಲ್ಪಡುವದೆಂಬುದಾಗಿ ತಾರು ಕೊಟ್ಟಿದ್ದಾರೆ. ಅಲ್ಲಲ್ಲಿಯ ಮುಸಲ್ಮಾನರು ತಮ್ಮ ತಮ್ಮ ಪ್ರತಿನಿಧಿಗಳನ್ನು ಈ ಪರಿಷತ್ತಿಗೆ ಕಳಿಸಿ ಪರಿಷತ್ತನ್ನು ಯಶಸ್ವಿಮಾಡಬೇಕು.

ಭಾವೀ ವ್ಹಾಯಿಸರಾಯರು ಹಿಂದುಸ್ಥಾನಕ್ಕೆ ಹೊರಟರು

ಹಿಂದುಸ್ಥಾನದ ಭಾವೀ ವ್ಹಾಯಿಸರಾಯರಾದ ಲಾರ್ಡ ವೆಲಿಂಗಡನ್ನರು ತಾ। ೨ ನೆಯ ದಿವಸ ಹಿಂದುಸ್ಥಾನಕ್ಕೆ ಪ್ರಯಾಣ ಬೆಳಸಿದ್ದು, ತಾ। ೧೭ ನೆಯ ದಿವಸ ಮುಂಬಯಿಗೆ ಬಂದಿಳಿಯುವರು.

ಜಾರ್ಜ ರಾಜಕುಮಾರನ ರತ್ನಗಳನ್ನು ಕಳವು ಮಾಡಿದರು

ಪ್ರಿನ್ಸಆಫ್ ವೇಲ್ಸ ಹಾಗು ಪ್ರಿನ್ಸ ಆಫ ಜಾರ್ಜರು ತಾ। ೧೪ ನೆಯ ದಿವಸ ಬ್ಯೂಯೆನ್ಸ ಏರ್ಸ ಎಂಬಲ್ಲಿ ಆದರಾತಿಥ್ಯವನ್ನು ಸ್ವೀಕರಿಸುತ್ತಿರುವಾಗ, ಓರ್ವ ತರುಣ ಅರ್ಗಂಟೀಯನನು ಜಾರ್ಜರ ಬೆಲೆಯುಳ್ಳ ರತ್ನಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾನೆ;

ಜಾಹೀರಾತದಾರರಿಗೆ
ಅಲಭ್ಯಲಾಭ

'ಕನ್ನಡಿಗ'ನು ದಿನಾಲು ಎರಡುಸಲ ಹೊರಡ ಹತ್ತಿರುವನು. ಇದರಿಂದ ಪ್ರತಿದಿನ ಸಾವಿರಗಟ್ಲೆ ಜನರ ಕೈಸೇರುತ್ತಿರುವನೆಂಬುದು ಸ್ಪಷ್ಟವಿದೆ. ಆದ್ದರಿಂದ ಜಾಹೀರಾತುಗಳನ್ನು ಕೊಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅಥವಾ ಸ್ವತಃ ಭೆಟ್ಟಿಯಾಗಬೇಕು.

'ಕನ್ನಡಿಗ'ನ ಕಾರ್ಯಾಲಯ,
ಬಾಗಲಕೋಟೆ.

ಉಪಸಂಪಾದಕ ವೆಂಕಟೇಶ ಶೇಷರಾವ ಕುಲಕರ್ಣಿ ಇವರಿಂದ ಬಾಗಲಕೋಟೆ ವಿದ್ಯಾಶ್ರಮ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರ ನಂ. ಬಿ. ೨೭೮೮

ನಿತ್ಯ ಪತ್ರ. (ಸಂಜೆಯ ಸಂಚಿಕೆ)

ಬೆಲೆ ೦—೦—೩.

...ತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥—ಮನು.

ಕನ್ನಡಿಗ

KANNADIGA

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ
೧೨ ತಿಂಗಳಿಗೆ ೧೫—೦—೦
೬ „ ೭—೮—೦
೩ „ ೩—೧೨—೦
೧ „ ೧—೧೪—೦
ಸ್ಥಳಿಕರಿಗೆ
೧೨ ತಿಂಗಳಿಗೆ ೧೨—೦—೦
೬ „ ೬—೦—೦
೩ „ ೩—೮—೦
೧ „ ೧—೦—೦

ನಿತ್ಯಪತ್ರಿಕೆಯ
ಸರಕಾರ ಹಾಗು ಜಾಹಿರಾತಿ
ಜಾಹೀರಾತಿನ ದರಗಳು
೧ನೇ ಸಲ ೧ ಇಂಚಿಗೆ ೧—೦—೦
... „ ೦—೦—೦
ವ ... ಪ್ರತಿಯೊಂದು ಸಲ
೦—೨—೦
ಪತ್ರವ್ಯವಹಾರದಿಂದ ಪ್ರ... ಅಧ್ಯಕ್ಷ
ಪ್ರಸಂಗಾನುಸಾರದಿಂದ ದರಗಳು ...

ಸಂಪಾದಕರು:— ಮಂಗಳವೆ ಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಶುಕ್ರವಾರ ಮಿತಿ ಚೈತ್ರ ಬಹುಳ ೧ ಶಕೆ ೧೮೫೨ ತಾ॥ ೩—೪—೩೦ [ಸಂಚಿಕೆ ೧೫

ಒಪ್ಪಂದದ ಬಗ್ಗೆ ಸುಖದೇವರ ಪತ್ರ

ಸುಖದೇವನ ಸಂದೇಶ

ಮಹಾತ್ಮರಿಗೆ ಬರೆದ ಒಂದು ಪತ್ರದಲ್ಲಿ (ಫಾಶಿ ಗಲ್ಲಿಗೆ ಹೋಗುವ ಮೊದಲು) ಸುಖದೇವ ಹಾಗೂ ಭಗತಸಿಂಗರು ಹೀಗೆ ಅಂದಿರುವರು. ಒಪ್ಪಂದವಾದ ನಂತರ ಚಳವಳಿಯನ್ನು ನಿಲ್ಲಿಸಲು ಯುಕ್ತಿಸುತ್ತಿರುವಿರೆಂತಲೂ, ಮತ್ತು ನಿಮ್ಮ ಈ ಅಹಿಂಸಾ ಪ್ರಯೋಗಕ್ಕೆ ಅಸ್ಪದ ಕೊಡುವದಕ್ಕಾಗಿ ಎಲ್ಲ ಕ್ರಾಂತಿಕಾರರಿಗೂ ಅವರ ಅಹಿಂಸಾತ್ಮಕ ಪ್ರಯೋಗವನ್ನು ಪೂರ್ಣವಾಗಿ ಒತ್ತಿಕ್ಕಿಬಿಡಿರೆಂತಲೂ ಹೇಳುತ್ತಿರುವಿರಿ. ಚಳವಳಿಯನ್ನು ತಡೆದು ಹಾಕುವದು, ಪರಿಸ್ಥಿತಿ ಹಾಗೂ ಮುಂದಾಳುಗಳ ರಾಜಕೀಯ ಚಟುವಟಿಕೆಗಳ ಮೇಲೆ ಅವಲಂಬಿಸಿರುವದು ಅದು ಭಾವನೋದ್ರೇಕ ಅಥವಾ ಆದರ್ಶಾತ್ಮಕವಾಗಿಲ್ಲ. ಈ ಒಪ್ಪಂದವೆಂದರೆ ತಮ್ಮ ಇತಿಶ್ರೀ ಅಲ್ಲವೆಂದು ತಾವು ಸ್ಪಷ್ಟವಾಗಿ ಹೇಳಿರುವಿರಿ. ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಲಾಹೋರಿನಲ್ಲಿ ಮಂಜೂರು ಮಾಡಲಾಗಿತ್ತು. ಈ ಒಪ್ಪಂದದಿಂದ ಅದಕ್ಕೆ ಧಕ್ಕೆ ಏನೂ ಮುಟ್ಟಿದಂತಾಗಿಲ್ಲ. ಇನ್ನು ಹೆಚ್ಚಿನ ಹಕ್ಕುಗಳನ್ನು ದೊರಕಿಸುವದಕ್ಕಾಗಿ ಇದು ಅಲ್ಪವಿರಾಮ ಕಾಲವು. ಈ ರೀತಿಯಿಂದಲೇ ಈ ಒಪ್ಪಂದದ ಇಂಗಿತವನ್ನು ತಿಳಿದುಕೊಳ್ಳಬೇಕು. ಸಮಾಜಸತ್ತಾವಾದಿಗಳಾದ ಕ್ರಾಂತಿಕಾರರು ಹಸಿಬಿಸಿಯವರಾಗಿಲ್ಲ. ತಮ್ಮ ಧ್ಯೇಯವು ಕೈಗೂಡುವ ವರೆಗೆ ಅವರು ತಮ್ಮ ಚಳವಳಿಯನ್ನು ನಡಿಸತಕ್ಕವರೇ. ಅವರು ತಮ್ಮ ಚಳವಳಿಯಲ್ಲಿ ಯಶದ ಕಾಲ ಪ್ರಾಪ್ತನಾಗಲಿ ಹೆಚ್ಚು ಕಡಿಮೆಗಳನ್ನು ಮಾಡಿಕೊಳ್ಳುವರು. ಅವರ ಚಳವಳಿಯು ಬೇರೆ ಬೇರೆ ಕಾಲ ಪರಿಸ್ಥಿತಿಗನುಸರಿಸಿ ಬೇರೆ ಬೇರೆ ಸ್ವರೂಪವನ್ನು ತಾಳುವದು. ಕೆಲವು ವೇಳೆ ಅದು ಗುಪ್ತರೀತಿಯಾಗಿ ಸಾಗುವದು. ಕೆಲವು ವೇಳೆ ಸ್ಪಷ್ಟವಾಗಿ ಹೊರಹೊಮ್ಮಿ ಹರಿಯುವದು. ಕೆಲವು ವೇಳೆ ಬಿರುಗಾಳಿಯ ಹೊಡೆತದಿಂದ ಅಲ್ಲೋಲಕಲ್ಲೋಲವಾಗಿ ತಿರುಗುವದು. ಕೆಲವು ವೇಳೆ ಒಂದೇ ಸಮನೇ ಸಾಗುವದು. ... ಅವರು ಚಳವಳಿಯನ್ನು ನಿಲ್ಲಿಸುವದಕ್ಕಾಗಿ ಕೆಲವು ವಿಶಿಷ್ಟ ಸುಧಾರಣೆಗಳನ್ನು ಕೈಕೊಂಡರೂ ಇಂಥ ಆಲ್ಪಾಯುಗಳನ್ನು ತೀರಿಸು ... ದೊರಕುವದಿಲ್ಲ. ಈ ಕ್ರಾಂತಿಕಾರಕರ ಮೇಲೆ ಶಿಕ್ಷೆ ಕೇವಲ ಭೀತಿ ... ತಮಗೆ ಪಕ್ಷವಾಗಿ ಏನೂ ಸಹ ... ದಿಂದ. ಬಾಹಿರ ... ಇವರು ಪ್ರಸಿದ್ಧಿಗೆ ... ಜನರ ... ಅವರ ... ಸದ್ಯವೇ ನಿರ ಇವರೆಂದರೆ ಕ್ರಾಂತಿಕಾರರ ಪಕ್ಷದ ಸರ್ವಸ್ವವಲ್ಲ ಇವರನ್ನು ಗಲ್ಲಿಗೆ ಕಳಿಸುವದಕ್ಕಿಂತ ಕರಿನೀರಿಗಟ್ಟಿದರೆ ಬಹು ಕಲ್ಯಾಣವಾಗಬಹುದು.

ಭಗತಸಿಂಗರ ಸಂದೇಶ

ಚಳವಳಿಯು ಪ್ರಚಾರವಾದ ಹಾಗೆ ನಡನಡುವೆ ಇಂಥ ಒಪ್ಪಂದವನ್ನು ಉಪಯೋಗಿಸಬೇಕಾಗುತ್ತದೆ. ಆದರೆ ನಾವು ಚಳವಳಿಯ ಮುಖ್ಯ ಧ್ಯೇಯವನ್ನು ಮಾತ್ರ ಮುಂದಿಟ್ಟುಕೊಂಡೇ ಇರಬೇಕು ಮಹಾತ್ಮರ ಅಲ್ಪ ಧ್ಯೇಯವನ್ನು ನೋಡಿದರೆ ನಮಗೆ ತಿರಸ್ಕಾರ ಹುಟ್ಟುವದು ನಾನೊಬ್ಬ "ಉಗ್ರಪುರುಷ" ನಂತೆ ಆಚರಣೆ ಮಾಡಿದ್ದೇನು ನಿಜ ಆದರೆ ನಾನು ಉಗ್ರಪುರುಷನಲ್ಲ ಸ್ಪಷ್ಟವಾಗಿ ಮಾರ್ಗ ಹಾಕಿಟ್ಟುಕೊಂಡು ಯುದ್ಧ ಮಾಡುವ ಕ್ರಾಂತಿಕಾರನು ನಾನು ಸೆರೆಮನೆಯಲ್ಲಿ ಬಿದ್ದು ನಾನು ಮೆತ್ತಗಾಗಿರುವೆನೆಂದು ಮಾತ್ರ ತಿಳಿಯಕೂಡದು ಈ ಬಗೆಯ ನಮ್ಮ ಯುದ್ಧಕ್ರಮದಿಂದ ನಮಗೇನೂ ಲಾಭವಿಲ್ಲವೆಂದು ನನಗೆ ಮಂದಟ್ಟಾಗಿದೆ ಕೆಲವು ಬಾಂಬುಗಳನ್ನು ಹಾರಿಸುವದು ನಿರರ್ಥಕವಲ್ಲದೆ ಕೆಲವು ವೇಳೆ ಅಹಿತವನ್ನೂ ಮಾಡುವದು

ಕಲೆಕ್ಟರರು
ಮಹಾತ್ಮರಗುಡಿಸಲಿಗೆಭೆಟ್ಟಿಕೊಟ್ಟರು

ಸುರತ ಜಿಲ್ಲೆಯ ಕಲೆಕ್ಟರರಾದ ಮಿ. ಕೋರವಾಲಾರವರು ಕರಾಡಿಗೆ ಹೋಗಿ, ದಂಡಿಯಾತ್ರೆಯ ವೇಳೆಯಲ್ಲಿ ಮಹಾತ್ಮರು ಬಿಡಾರ ಮಾಡಿದ ಸ್ಥಳವನ್ನೂ ಹಾಗು ಮಹಾತ್ಮರ ಗುಡಿಸಲವನ್ನೂ ನೋಡಿಕೊಂಡು ಬಂದರು.

ಕರಾಡಿಯ ಜನರು ದಿಲ್ಲಿಯ ಒಪ್ಪಂದಕ್ಕನುಸರಿಸಿ ಉಪ್ಪನ್ನು ಸಂಗ್ರಹಿಸುತ್ತಿದ್ದಾರೆ.

ವ್ಯಾಯಿಸರಾಯರಿಗಾದರೂ
೫೦೦ ಕ್ಕಿಂತ ಹೆಚ್ಚಿಗೆ ಪಗಾರವಿರಕೂಡದು

ತಾ॥ ೨೧ನೆಯ ದಿವಸ ಕಾಂಗ್ರೆಸ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ಹಾಗು ಮೂಲಭೂತವಾದ ಹಕ್ಕುಗಳ ಠರಾವನ್ನು ಸಭೆಯ ಮುಂದೆ ಮಂಡಿಸುವಾಗ ಮಹಾತ್ಮಾ ಗಾಂಧಿಯವರು 'ಸ್ವರಾಜ್ಯದಲ್ಲಿ ವ್ಹಾಯಿಸರಾಯರಿಗಾದರೂ ಪ್ರತಿ ತಿಂಗಳ ೫೦೦ ಕ್ಕಿಂತ ಹೆಚ್ಚಿಗೆ ಪಗಾರ ಸಿಗಬಾರದಾಗಿ ಭಾಷಣ ಮಾಡಿದರು.

ನಾಯಕ ಪತ್ರಿಕೆಯ
ಸಂಪಾದಕರಿಗೆ ಬಿಡುಗಡೆ

ರಾಜದ್ರೋಹದ ಆರೋಪಕ್ಕಾಗಿ ಕಲಕತ್ತೆಯಲ್ಲಿ ಶಿಕ್ಷೆಗೆ ಗುರಿಯಾದ ಶ್ರೀ ಎಸ್, ಎಸ್, ಸಿಂಗ ಹಾಗು ಪಿರೋಜಲಾಲ ದತ್ತ ಇವರು ಹಾಯಕೋರ್ಟಿನವರಿಂದ ನಿರ್ದೋಷಿಗಳಾಗಿ ನಿರ್ಣಯಿಸಲ್ಪಟ್ಟಿದ್ದಾರೆ, ಇವರು 'ನಾಯಕ' ಪತ್ರಿಕೆಯ ಸಂಪಾದಕ ಹಾಗು ಪ್ರಕಾಶಕರಿದ್ದರು,

ಭೂಕಂಪದಿಂದ
ಸಾವಿರಾರು ಜನರು ಸತ್ತರು

ನ್ಯೂಯಾರ್ಕದ ಬಳಿಯಲ್ಲಿರುವ ಮಾನಗುವಾ ಎಂಬ ಪ್ರದೇಶದಲ್ಲಿ ತಾ॥ ೧೧ನೆಯ ದಿವಸ ಮುಂಜಾನೆ ಭೂಕಂಪವಾಗಿ ಎಷ್ಟೋ ಮನೆಗಳು ಕಡಕೊಂಡು ಬಿದ್ದಿವೆ; ಸಾವಿರಾರು ಜನರು ಪ್ರಾಣಬಿಟ್ಟಿದ್ದಾರೆ, ಸರಕಾರಿ ಕಚೇರಿಗಳು, ಬ್ಯಾಂಕುಗಳು, ಅಂಗಡಿಗಳು ಸುಟ್ಟು ಹೋಗಿವೆ.

ಗುಜರಾಥದಲ್ಲಿ ಪಟೇಲರ ಫಜೀತಿ

ಕಾಯದೆಭಂಗ ಚಳವಳಿಯಲ್ಲಿ ಸರಕಾರದ ಪಕ್ಷ ವಹಿಸಿದ ಪಾಟೀಲರು ಹತ್ತುತ್ತಿರುವ ಗೋಳಿಗೆ ಎಣೆಯಿಲ್ಲದಾಗಿದೆ. ಜನರು ಅವರನ್ನು ಕಂಡರಾಯಿತು, ದೂರ ಸರಿದು ನಿಲ್ಲುವರೆಂದ ಮೇಲೆ ಮಾತಾಡುವವರಂತೂ ದೂರವೇ ಉಳಿಯಿತು. ಕಾಯದೆಭಂಗ ಚಳವಳಿಯಲ್ಲಿ ಸೇರದೆ ಇದ್ದದ್ದಕ್ಕಾಗಿ ಕ್ಷಮೆಯನ್ನು ಬೇಡಿಕೊಳ್ಳಲು ಇಲ್ಲವೆ ೧೦೦ ರೂ. ದಂಡವನ್ನು ಕೊಡಲು ಜನರು ಅವರನ್ನು ಒತ್ತಾಯಪಡಿಸುತ್ತಿರುವರು. ಪೋಲೀಸ ಪಟೇಲರಿಗೆ ರಾಜೀನಾಮೆ ಕೊಡಿರಿ ಇಲ್ಲವೆ ನಿಮ್ಮ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಲಾಗುವದು ಎಂದು ಜನರು ಅವರನ್ನು ಬೆದರಿಸುತ್ತಿರುವರು. ಈ ಸಾಮಾಜಿಕ ಬಹಿಷ್ಕಾರದ ಮೂಲಕವಾಗಿ ಕೆಲಕೆಲವು ಪಟೇಲರು ಒಳ್ಳೇ ಪೇಚಾಟದಲ್ಲಿ ಬಿದ್ದಿದ್ದಾರೆ ಅವರೊಡನೆ ಯಾರೂ ವ್ಯವಹಾರ ಮಾಡುವದಿಲ್ಲ

ಗೋಧಾಹಳ್ಳಿಯ ಪೋಲೀಸ ಪಟೇಲನಾದ ಶ್ರೀ ಭಗವತದಾಸ ಗುಲಾಬಭಾಯಿದಾಸ ಎಂಬವನಿಗೆ ರಾಜೀನಾಮೆ ಕೊಟ್ಟು, ಕ್ಷಮೆ ಬೇಡಿಕೊಳ್ಳಲು ಜನರು ಕೇಳಿಕೊಂಡರು. ಕಾಯದೆಭಂಗ ಚಳವಳಿಯ ಮೂಲಕವಾಗಿ ರಾಜೀನಾಮೆ ಕೊಟ್ಟ ಪೋಲೀಸ ಪಾಟೀಲನ ಸ್ಥಳದಲ್ಲಿ ಇವನು ನಿಯಮಿಸಲ್ಪಟ್ಟಿದ್ದನು. ರಾಜೀನಾಮೆ ಕೊಡಲು ಇವನು ಒಪ್ಪಿಕೊಳ್ಳಲಿಲ್ಲ. ಹಳ್ಳಿಯ ಜನರು ಸಾಮಾಜಿಕ ಬಹಿಷ್ಕಾರ ಹಾಕಿದರು. ಪಾಟೀಲನು ಸುಭಿಮಾ ಆಶ್ರಮದ ವ್ಯವಸ್ಥಾಪಕರಾದ ಭೀಮಭಾಯಿ ಭಕೂಭಾಯಿ ಮೊದಲಾದ ೬ ಜನರ ಮೇಲೆ ವಡೋಡ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದಿ ಹೂಡಿದ್ದಾನೆ.

ಬೆಳಗಾವಿಯಲ್ಲಿ
... ಬ. ಕಂಬಳಿಯವರಿಗೆ ಮಾನಪತ್ರ

... ಮು. ಸರಕಾರದ ಮಂತ್ರಿಗಳಾದ ದಿ. ಬ. ಕಂಬಳಿಯವರು ಇತ್ತಿಗೆ ಒಂದು ೪—೫ ದಿನ ... ಇಲ್ಲಿ ಇರುವವರಿದ್ದಾರೆ. ಬೋರ್ಡ ... ಪರವಾಗಿ ಮಾನಪತ್ರವು ಕೊಡಲ್ಪಡುತ್ತಿದೆ.

ದಿವಾಣ ... ಮಾನಪತ್ರ ಕೊಡ ಬಗ್ಗೆ ... ನಿರಾಕರಿಸಿದ್ದಾರೆ.

ಹುಬ್ಬಳ್ಳಿಯಲ್ಲಿ
ಸ್ವಯಂಸೇವಕರಮೇಲೆ ಕಳವಿನ ಆರೋಪ

(ಸ್ವಂತ ವರದಿಗಾರರಿಂದ)

ಇಲ್ಲಿಯ ಗೋಕುಳ ಬಜಾರಿನ ಎಜಂಟರಾದ ... ದಿವಸ ನ್ನಿರ ಅಂಗಡಿಯ ಮುಂದೆ ಪಿಕೆಟಿಂಗ ಪ್ರಾರಂಭವಾದದ್ದು ಸ್ವಯಂಸೇವಕರನ್ನು ನಿಗಿಸಿ ... ಪ್ರಸಿದ್ಧವಾಗಿರುವದು, ಆದರೆ ನಿನ್ನೆ ಪೇಟೆಯಲ್ಲಿಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಲು ನಿಂತ ಸ್ವಯಂಸೇವಕರ ಮೇಲೆ ಅವರ ಶಸ್ತ್ರ ದ... ಮಾಡಿದ್ದು ... ಸ್ವಯಂಸೇವಕರನ್ನು ... ಮಾಡಿಸುತ್ತಿರುವರು ... ಸ್ವಯಂಸೇವಕರು ... ದಿವಸದಿಂದ ... ಪ್ರತಿದಿವಸ ... ಮಾಡಿದರು ...

ಮಧ್ಯಪ್ರಾಂತದಲ್ಲಿ
ಅಪರಿಯವರಿಗಾಗಿ ಸತ್ಯಾಗ್ರಹ

ನಾಗಪುರದ ಜವಾರಿದಾಸ ಸತ್ಯಾಗ್ರಹಿಗಳು ಶ್ರೀ ಮಹಾಜನರವರ ನೇತೃತ್ವದಲ್ಲಿ ಅಲ್ಲಿಯ ಗೃಹಮಂತ್ರಿಗಳಾದ ಮಿ. ಈ. ರಾಘವೇಂದ್ರರಾಯರ ಮನೆಯ ಮುಂದೆ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಜಬ್ಬಲ ಆಸ್ಪತ್ರೆಯಲ್ಲಿ ಇಡಲ್ಪಟ್ಟಿರುವ ಸೇನಾಪತಿ ಅವರಿಯವರನ್ನು ಸೆಂಟ್ರಲ್ ಜೇಲಿಗೆ ಕಳುಹಿಸಬೇಕೆಂದು ಅವರಿಗೆ ಒತ್ತಾಯ ಮಾಡುವದಕ್ಕಾಗಿಯೇ ಹೀಗೆ ಸತ್ಯಾಗ್ರಹವು ಪ್ರಾರಂಭಿಸಲ್ಪಟ್ಟಿದ್ದಾಗಿದೆ.

ರಾಯರ ಹರಟೆ

ರಾಯರು ಒಮ್ಮೆ ಒಂದು ಹಳ್ಳಿಗೆ ಹೋಗಿದ್ದರು. ಅಲ್ಲಿ ಒಂದುಮನೆಯಲ್ಲಿ ಗಂಡಹೆಂಡಿರು ಬಡಿದಾಡುತ್ತಿದ್ದರು. ಗಂಡನು ಹೆಂಡತಿಗೆ- 'ಹಸುವು ಆಗೇತಿ ರೊಟ್ಟೀ ನೀಡು' ಎಂದನು; ಹೆಂಡತಿಯು ಅದಕ್ಕೆ- 'ಅಡಿಗಿಮನ್ಯಾಗ ನಾಯಿ ಹೊಕ್ಕು ಎಲ್ಲಾ ರೊಟ್ಟೀ ತಿಂದೈತಿ' ಎಂದಳು. ಅದಕ್ಕೆ ಗಂಡನು- 'ಅಡಿಗಿಮನ್ಯಾಗ ನಾಯಿ ಹೊಕ್ಕು ರೊಟ್ಟೀ ತಿಂದು ಬಿಡೂತನಕಾ ನೀ ಏನ ಚಾಣಕರಾಮನ ಕತಿಹೇಳತಿದ್ದೀಯ; ಕಡಾ ಯಾಕ ಮುಂಚೆ ಮಾಡಲಿಲ್ಲ' ಎಂದವನೇ ಆಕೆಗೆ ನಾಕು ಏಟು ಬಿಟ್ಟನು. ಕಾನಪೂರದಲ್ಲಿ ಯಾದ ಕೊಲೆಯ ಸುದ್ದಿಯನ್ನು ಕೇಳಿ ರಾಯರಿಗೆ ಈ ಮಾತು ನೆನಪಾಯಿತು. ಮತ್ತೂ ದೇವರೆಂಬ ಗಂಡನು ಸರಕಾರವೆಂಬ ಹೆಂಡತಿಗೆ 'ಊರಲ್ಲೆಲ್ಲ ಕೊಲೆಗಡುಕರು ಹಾವಳಿ ಮಾಡುವಾಗ ನೀನು ಏನು ಮಾಡುತಿದ್ದಿ; ನಿನ್ನ ಪೋಲೀಸ ಖಾತೆ, ಸೈನ್ಯ ಏನು ಮಾಡುತ್ತಿದ್ದವು' ಎಂದು ಕೇಳಲಿಲ್ಲವೋ? ಮತ್ತು ಆದರ ಈ ಅಪರಾಧಕ್ಕಾಗಿ ಅವನ್ನು ದಂಡಿಸಲಿಕ್ಕಿಲ್ಲವೋ? ಎಂದು ರಾಯರು ತಮ್ಮೊಳಗೆ ತಾವೇ ಅಂದುಕೊಂಡರು. ‡ ‡

ರಾಯರಿಗೆ ಅಲ್ಲಾಸಾಹೇಬರೆಂಬ ಹೆಸರಿನ ಒಬ್ಬ ಮುಸಲ್ಮಾನ ಗೆಳೆಯರು ಮಿತ್ರರಿರುವರು. ಕಾನಪೂರದ ಸುದ್ದಿ ಕೇಳಿ ಅವರು 'ನಮ್ಮ ಜನರು ಏನು ಮೂರ್ಖರು; ನಮ್ಮ ಜನರದೇ ಜೀವ ಉಳಿಸುತ್ತ ನಮ್ಮ ಜೀವದ ಹಂಗು ದೊರೆದು ದೊಂಬಿಯನ್ನು ಶಾಂತಪಡಿಸಲು ಯತ್ನಿಸುತ್ತಿರುವಾಗ ಗಣೇಶ ಶಂಕರ ವಿದ್ಯಾರ್ಥಿ ಎಂಬವರನ್ನು ನಮ್ಮ ಮುಸಲ್ಮಾನ ಡೊಣಗರೇ ಹೊಡೆದು ಕೊಂದುಬಿಡುವದೆಂದರೆ, ಎಂಥ ಮೂರ್ಖತನ ನೋಡ್ರಿ ರಾಯರೇ' ಎಂದು ಅಂದರು. ಅದಕ್ಕೆ ರಾಯರು 'ನೋಡ್ರಿ ಅಲ್ಲಾ ಸಾಹೇಬರೇ, ನೀವೇ ನೋಡ್ರಿ; ನಮ್ಮ ಮಂದಿಗೂ ನಿಮ್ಮ ಮಂದಿಗೂ ಸ್ವಭಾವದಲ್ಲಿ ಎಷ್ಟು ಅಂತರವಿರುವದು; ಗಣೇಶ ಶಂಕರ ವಿದ್ಯಾರ್ಥಿಯವರ ಆತ್ಮತ್ಯಾಗದ ಬೆಲೆಯು ಆ ಡೊಣಗ ದೊಂಬೆಗಾರರಿಗೆ ಹೇಗೆ ತಿಳಿಯಬೇಕು.' ಕತ್ತೆಗೇನು ಬಲ್ಲದೆ ಕತ್ತುರಿಯ ಪರಿಮಳವ?

....

ಕಾನಪುರದಲ್ಲಿ ಹಿಂದೂ ಮುಸಲ್ಮಾನರು ಬಡಿದಾಟವಾಡಿದ ಸುದ್ದಿಯನ್ನು ಕೇಳಿ ಲಂಡನದಲ್ಲಿ ಕೆಲವು ಸಾಹೇಬರು ಹಿಂದುಸ್ಥಾನದ ಜನರ ಈ ದೋಷವನ್ನೇ ಒಂದು ದೊಡ್ಡ ವಿಷಯ ಮಾಡಿ ಇವರನ್ನು ಹೀಯಾಳಿಸಿದರಂತ ಎಂಬ ವರ್ತಮಾನವನ್ನು ರಾಯರು ಒಂದು ಇಂಗ್ರೇಜಿ ಪತ್ರದಲ್ಲಿ ಓದಿದರು. ಸಾಹೇಬರಿಗೆ ಹಿಂದೀ ಜನರ ಗುಣಗಳು ಕಂಡು ಬರುವದಿಲ್ಲ. ಆದರ ಅವರ ಒಂದೆರಡು ಅವಗುಣಗಳನ್ನು ಮಾತ್ರ ಮುಂದೆ ಮಾಡಿ ಮನಬಂದಂತೆ ಅವರನ್ನು ಆಡಿಕೊಳ್ಳುವರು.'' ''ತಮ್ಮ ಎಲೆಯಲ್ಲಿ ಕತ್ತೆ ಸತ್ತುಬಿದ್ದಿರುವಾಗ ಮಂದೀ ಎಲೆಯಲ್ಲಿ ನೊಣ ಬಾಡಿಸುವದಕ್ಕೆ ಸಾಹೇಬರು ಬಹು ಜಾಣರು'' ಎಂದು ರಾಯರು ಉದ್ಗಾರ ತೆಗೆದರು!

§ ‡ § † §

ರಾಯರಿಗೆ ಒಬ್ಬ ಸ್ವಾಮಿಯ ಗುರುತು ಇದೆ. ಒಂದು ದಿನಸ ರಾಯರು ಅವರ ಮಠಕ್ಕೆ ಹೋಗಿದ್ದರು. ಅಲ್ಲಿ ಸ್ವಾಮಿಗೆ ಅವರ ಶಿಷ್ಯನು ''ವಕೀಲರೆಂದರ ಯಾರು'' ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಸ್ವಾಮಿಯು—

ವ ಅಂದರೆ ಪಡಲಾಡುವವರು

ಕೀ ಅಂದರೆ ಕಿಚ್ಚಿಗೆ

ಲ ಅಂದರ ಲಕ್ಷ್ಮೀ ಅಥವಾ ರೊಕ್ಕ

ರೊಕ್ಕದ ಕಿಚ್ಚಿಗೆ ಪಡಲಾಡುವವರು ವಕೀಲರು ಎಂದು ಸ್ವಾಮಿಯು ಹೇಳಿದನು. ರಾಯರು 'ಹೀ ಹೀ' ಎಂದು ನಕ್ಕರು.

ಕನ್ನಡಿಗ.

ಕನ್ನಡ ಮಾನಸಿಕ ಮೋಹವಾಗಿ ಕಟ್ಟುವೆನಾನು
ಕನ್ನಡ ಜೀವನದ ನಾನಾ ರಂಗದ ಮಕ್ಕಳಿಗೊಮ್ಮೆ
ಕನ್ನಡಿಗರು ಚನ್ನ ಮೋಹಬಟ್ಟೆಯ ನೊಂದು
ಚನ್ನ ಯಾವಾಗಲೂ!

ತೋಳವೂ ಕುರಿಯೂ

ಒಂದು ಕುರಿಯ ಹಿಂಡಿನಲ್ಲಿ ಒಮ್ಮೆ ಒಂದು ತೋಳವು ಹೊಕ್ಕಿತು. ಮತ್ತು ಆ ಕುರಿಗಳಿಗೆ ನಾನು ನಿಮ್ಮನ್ನು ಜೋಕೆಮಾಡುತ್ತೇನೆ. ಪರಕೀಯರು ನಿಮಗೆ ಪೀಡೆ ಕೊಡದಂತೆ ಮಾಡುತ್ತೇನೆ; ನಿಮ್ಮ ವ್ಯಾಪಾರ ಉದ್ದಿಮೆಗಳನ್ನು ತಿದ್ದುಪಡಿಯಾಗುವಂತೆ ಮಾಡುತ್ತೇನೆ ನಾನು ನಿಮ್ಮ ಸಂಗಡವೇ ಇರುತ್ತೇನೆ ಎಂದು ಹೇಳಿ ಆ ಕುರಿಗಳಸಂಗಡ ಕೆಲವುಕಾಲ ಇರಹತ್ತಿತು. ಕುರುಬನಿಗೆ ಈ ಮಾತು ಗೊತ್ತೇ ಆಗಲಿಲ್ಲ. ತೋಳವು ದಿನಾಲು ಎರಡು ಮೂರು ಕುರಿಗಳನ್ನು ಉಳಿದ ಅವುಗಳ ಬಾಂಧವರಿಗೆ ಗೊತ್ತಾಗದಂತೆ ದೂರ ಒಯ್ದು ಮುರಿದ್ಯ ತಿನ್ನಹತ್ತಿತು ಕುರಿಯ ಹಿಂಡು ದಿನದಿನಕ್ಕೆ ಕೊರಗುತ್ತ ನಡೆಯಿತು. ಕುರುಬನು ತನ್ನ ಭಾಂಡವಲೇ ಆದ ಹಿಂಡು ಕರಗುತ್ತ ನಡೆದುದನ್ನು ನೋಡಿ ಕಣ್ಣು ತೆರೆದನು. ಆ ಮೇಲೆ ಜಾಣನಾಗಿ ತನ್ನ ಹಿಂಡಿನಲ್ಲಿ ತೋಳವು ಹೋಗಿ ಹಾವಳಿ ಮಾಡದಂತೆ ತನ್ನ ಹಿಂಡಿಗೆ ಬೇಲಿ ಗಾವಲು (ಸೇಫಗಾರ್ಡ್ಸ್) ಹಾಕಿ ಉಳಿದ ಹಿಂಡನ್ನು ಜೋಪಾನ ಮಾಡುತ್ತಿದ್ದನು. ಎಂದು ಒಂದು ನೀತಿಯ ಕಥೆಯುಂಟು. ತೋಳಕ್ಕೂ ಕುರಿಗೂ ಜನ್ಮಸಿದ್ಧವಾದ ವೈಷಮ್ಯವು. ತೋಳನಿಗೆ ಕುರಿಯು ಕೂಳು ಆಗಿರುವದು ಈ ತನ್ನ ಕೂಳಿನ ಸಂಗಡ ಅದು ಗೆಳೆತನಮಾಡುವದು ತನ್ನ ಹೊಟ್ಟೆ ಹೊರಕೊಳ್ಳುವದಕ್ಕಾಗಿ ಅಲ್ಲದೆ ಕುರಿಯ ಹಿತವೇನೂ ಇಲ್ಲ ಅದರಂತೆಯೇ ಹಿಂದುಸ್ಥಾನದಲ್ಲಿಯ ಹಿಂದೀ ಹಾಗೂ ಆಂಗ್ಲ ವ್ಯಾಪಾರಿಗಳ ಸಂಬಂಧವಾಗಿರುವದು. ಹಿಂದಿಯರ ನೂಲಿನ ಉದ್ಯೋಗವನ್ನು ನುಂಗಿ ಮ್ಯಾಂಚೆಸ್ಟರ, ಲ್ಯಾಂಕ್ಯಾಶಾಯರ ಎಂಬಲ್ಲಿಯ ತೋಳಗಳು ಹೊಟ್ಟೆತುಂಬ ಮೆರೆಯುತ್ತಿರುವವು. ಈ ತೋಳಗಳ ಗಳತನದಿಂದ ಹಿಂದೀ ವ್ಯಾಪಾರಿಗಳು ಧನಹೀನರಾಗಿ ತಮ್ಮ ಮನೆಮಾರುಗಳನ್ನು ಸಹ ಈ ತೋಳಗಳ ಹೊಟ್ಟೆಗಾಗಿ ತೂರಿಕೊಳ್ಳಬೇಕಾಗಿರುವದು. ಅದಕ್ಕಾಗಿಯೇ ಈ ಹಿಂಡಿನಲ್ಲಿ ಪರಕೀಯ ತೋಳಗಳು ಒಳಹೊಕ್ಕು ಹಾಳು ಮಾಡದಂತೆ ಅಂದರೆ ಹಿಂದೀ ವ್ಯಾಪಾರಿಗಳಿಗೆ ಔದ್ಯೋಗಿಕ ಹಾಗೂ ಆರ್ಥಿಕ ಸ್ವರಾಜ್ಯವನ್ನು ಸ್ಥಾಪಿಸಬೇಕಾಗಿ ಈಗ ಮೂವತ್ತು ವರ್ಷಗಳಿಂದಲೂ ಯತ್ನ ನಡಿಸಿರುವರು ದಿವಂಗತ ದಾದಾಭಾಯಿ ನವರೋಜಿಯವರು ಮೊದಲು ಈ ತತ್ವವನ್ನು ಕಂಡು ಹಿಡಿದರು. ಇದೆ ತತ್ವವನ್ನೆ ಎಲ್ಲ ಮುಂದಾಳುಗಳು ಒಂದಾಗಿ ಹೆಚ್ಚು ಗಟ್ಟಿಮುಟ್ಟಿಯಾಗುವಂತೆ ಪ್ರಯತ್ನಿಸಿದರು. ಇದಕ್ಕಾಗಿಯೇ ಎಲ್ಲ ಹಿಂದೀ ವ್ಯಾಪಾರಿಗಳು ಈಗ ಮಹಾತ್ಮನ ಬೆನ್ನು ಹತ್ತಿರುವರು. ಮಹಾತ್ಮನಾದರೂ ಇದೇ ತತ್ವವನ್ನೇ ತಳಹದಿಯಾಗಿ ಮಾಡಿ ನಾಳಿನ ದುಂಡುಮೇಜಿನ ಪರಿಷತ್ತಿನಲ್ಲಿ ತೋಳಗಳನ್ನು ಹಿಂಡಿನಲ್ಲಿ ಹೋಗಗೊಡದಂತೆ ಈ ಹಿಂಡಿನ ಸುತ್ತಲೂ ಬೇಲಿಗಾವಲು (ಸೇಫಗಾರ್ಡ್ಸ್) ಹಚ್ಚಬೇಕೆಂದು ಮಾಡಿರುವನು. ಈಗಾಲೇ ವಿಲಾಯತಿಯಲ್ಲಿಯ ತೋಳಗಳು ಗೋಳಾಡ ಹತ್ತಿವೆ. ಇಷ್ಟು ದಿವಸಗಳವರೆಗೆ ಮನ ಬಂದಂತೆ ತಿಂದು ತೇಗಿ ಹಿಂದಿಯರ ವ್ಯಾಪಾರ ಉದ್ದಿಮೆಗಳನ್ನು ನುಂಗಿ ನೀರುಕುಡಿದ ಈ ತೋಳಗಳು ಚಡಪಡಿಸುವದು ಸ್ವಾಭಾವಿಕವಾಗಿದೆ ಆದರೆ ಮಹಾತ್ಮನು ಮಾತ್ರ ಈ ತೋಳಗಳನ್ನು ಸಮಾಧಾನಪಡಿಸಲು ಯತ್ನಿಸುತ್ತಿರುವನು. ಹೊಟ್ಟೆಬಕ್ಕ ತೋಳಗಳು ಅರಹೊಟ್ಟೆಯಿಂದ ಮರುಗುತ್ತಲಿರುವ ಹಿಂದೀಯರ ದುಃಖವನ್ನೇನು ಬಲ್ಲವು? ಈ ದುಃಖವನ್ನು ತಳಸೋಸಿ ಕಂಡು ಹಿಡಿದವನೆಂದರೆ ಮಹಾತ್ಮನೇ ಒಬ್ಬನು. ಈ ದುಃಖವನ್ನು ಹೋಗಲಾಡಿಸುವದಕ್ಕಾಗಿಯೇ ಅವನು ಈ ತೋಳಗಳ ಸಂಗಡ ಹೋರಾಡುತ್ತಿರುವನು ಈ ತೋಳಗಳ ಬಾಯಿತಿಂಡಿಯನು ತಡೆದು ಹಾಕಿ ಹಿಂದೀ ವ್ಯಾಪಾರಿಗಳು ಒಂದು ಬಾಳಿ ಬದುಕುವಂತೆ ಅವರನ್ನು ಭದ್ರಸ್ಥಾನದಲ್ಲಿರಿಸಬೇಕೆನ್ನುವನು. ಮಹಾತ್ಮನ ಸ್ವರಾಜ್ಯದ ತಳಹದಿಯೇ ಇದು. ಇದೇ ಬೀಜವನ್ನು ಅವನು ದುಂಡುಮೇಜಿನ ಪರಿಷತಿನಲ್ಲಿ ಬಿತ್ತಿ ಬಿಡಬೇಕೆಂದು ಮಾಡಿರುವನು. ಈ ಬೀಜವು ಅಂಕುರಿಸಿತೆಂದರೆ ಅದು ಮುಂದೆ ಒಂದು ದೊಡ್ಡ ಗಿಡವೇ ಆಗುವದು. ಈ ಗಿಡದ ಹಣ್ಣುಗಳನ್ನು ತಿನ್ನುವವರು ಭಾರತೀಯರು. ಇದು ಎಷ್ಟರ ಮಟ್ಟಿಗೆ ಸಾಧ್ಯವಾಗುವದೆಂಬುವ ಮಾತು ಮಹಾತ್ಮನೊಬ್ಬನಿಗೆ ಗೊತ್ತು. ಅವನು ಕೈಕೊಂಡ ಈ ಕಾರ್ಯದಲ್ಲಿ ಯಶವು ಸಿಗುವದೆಂದು ನಮಗೂ ಭರವಸೆ ಇರುವದು

ಸಿದ್ದಾಪೂರ ತಾಲೂಕಿನ

ಜಪ್ತಿಯ ಇತಿಹಾಸವು

ಸಿದ್ದಾಪುರದಲ್ಲಿ ಬರೆದುದು

ತಾ. ೩೦-೬-೩೧ ನೇ ದಿವಸ ಸಿದ್ದಾಪುರದಲ್ಲಿ ತಾಲೂಕ ಕಚೇರಿಯಲ್ಲಿ ಶ್ರೀ ರಾಮಚಂದ್ರ ಹೆಗಡೆ ಶೀಗೇಹಳ್ಳಿ ಮತ್ತು ಶ್ರೀ ತಿಮ್ಮಣ್ಣಭಟ್ಟ ಸುಬ್ಬಾಭಟ್ಟ ಕೋಳಗಿ ಇವರ ಜಪ್ತಿಯ ಮಾಲಿನ ಲಿಲಾವು ಇತ್ತು. ಎಂದಿನಂತೆ ಸ್ತ್ರೀಯರು, ಬಾಲಬಾಲಿಕೆಯರು ಮತ್ತು ಸ್ವಯಂಸೇವಕರು ಸರ್ಕಲ್ ಇನಸ್ಪೇಕ್ಟರರು ಹೇಳಿದ ಸ್ಥಾನದಲ್ಲಿನಿಂತು ಶಾಂತ ರೀತಿಯಿಂದ ಶ್ರೀ. ಶಂಕರಾಚಾರ್ಯರ ನೇತೃತ್ವದಲ್ಲಿ ಪಿಕೆಟಿಂಗ ಮಾಡುತ್ತಿದ್ದರು. ಆದರೆ ಅಪರಾಹ್ನಕಾಲ ೫ ಘಂಟೆಯ ಸುಮಾರಕ್ಕೆ ಶ್ರೀ ಶಂಕರಾಚಾರ್ಯ ಮತ್ತು ಈ ಐವರು ಸ್ವಯಂಸೇವಕರನ್ನು ಶ್ರೀ ನಾಗೇಶಮರಿ, ಕೃಷ್ಣರಾವ ಕುಲಕರ್ಣಿ, ನಾರಾಯಣ ಹೆಗಡೆ. ತಿಮ್ಮಪ್ಪ ಇವರು ಇಂ. ಪಿ ಕೋಡ ಕಲಂ ೧೮೮ ರ ಪ್ರಕಾರ ಹಿಡಿದರು. ಆದರೆ ಇಂದಿನ ಲಿಲಾವಿನಲ್ಲಿ ಸವಾಲು ಮಾಡಲು ಜನತೆಯೇ ಇಲ್ಲ ಸರಕಾರಿ ನೌಕರರೇ ವಿಶೇಷವಾಗಿ ಕೊಂಡಿರುವರು

ತಾ. ೩೦—೬—೩೧ ನೇ ದಿವಸ ಬಿತ್ರಕಾನ ಕೇಂದ್ರ ಬಿಂದ್ರಿಕಾನದಲ್ಲಿರುವ ಮಂಜ ಭಟ್ಟ ಗೋಳಗೋಡ ಇವರಲ್ಲಿ ಈ ಕೆಳಗಿನ ಪ್ರಕಾರ ಜಪ್ತಿ ಮಾಡಲ್ಪಟ್ಟಿವೆ.

ಈ ಹೊತ್ತು ಬೆಳಗ್ಗೆ ಸುಮಾರು ೮ ಗಂಟೆ ಸಮಯಕ್ಕೆ ೨ ಜನ ಪೋಲೀಸರು, ೨ ಜನ ಸಶಸ್ತ್ರ ಪೋಲೀಸರು, ೨ ಜನ ಉಗ್ರಾಣಿಯವರು, ೧ ಪಟೇಲರು, ಹಿಷ್ಟು ಜನ ಕೆಲವೇ ಪಹಾರಿಯು ಒಳ್ಗೆ ಹೊಕ್ಕು ನಿಮ್ಮ ಹಣ ಕೊಡಿರಿ ಎಂದು ಕೇಳಿದರು. ಆಗ ಅವರು ಈ ವರ್ಷದ ಪರಿಸ್ಥಿತಿಯಲ್ಲಿ ಕೊಡಲು ಅದಿರಲಿ ಊಟಕ್ಕೂ ಗತಿ ಇಲ್ಲ ಎಂದು ಹೇಳಿದರು. ಆಗ ಬಣಕದ ಬಾಗಿಲ ತೆಗೆದ ಕೊಡಿ ರೆಂದು ಕೇಳಲಾಗಿ ನಿದ್ರೆ ನಡೆಯು ತೆಗೆದು ಕೊಟ್ಟರು. ಆ ಅವರೊಳಗಿನ ಭತ್ತ ತೆಗೆಯಲು ಪ್ರಾರಂಭ ಮಾಡಲಾಗಿ ನಿದ್ರೇ ಭತ್ತರು ಆ ಭತ್ತ ನನ್ನದಲ್ಲ ಅದು ಸರೋಜನ್ನದ ಅವರಿಗೆ ಮಾಡಿಕೊಟ್ಟದ್ದು ಎಂದು ಹೇಳಲಾಗಿ ತಾಲೂಕ ಭೋಜರು, ನನಗೆ ಎಲ್ಲ ಗೊತ್ತಿದೆ ಈ ಬುದ್ಧಿವಂತಿಕೆ ನನಗೆ ಕಲಿಸಬೇಡಿರೆಂದು ಜವಾಬು ಕೊಟ್ಟು ಜಪ್ತಿ ಮಾಡಿದರು. ಒಟ್ಟಿಗೆ ೮ ಖಂಡಿಗಳ ಅಗಿನ್ನು ಭತ್ತ ಜಪ್ತಿ ಮಾಡಿ ಪಟೇಲರ ತಲೆಗೆ ಕಟ್ಟಿದರು ಇದಲ್ಲದೇ ತಿರುಗಿ ಹೋಗುವಾಗ ಹೊಲಗದ್ದೆಯೊಳಗೆ ಇದ್ದ ಎತ್ತುಗಳನ್ನು ಪರರ ಭಟ್ಟರದೆಂದು ಹೊಡೆದುಕೊಂಡು ಹೋದರು.

ತಾ|| ೩೦—೬—೩೧ ನೇ ದಿವಸ ಬಿತ್ರಕಾನ ಕೇಂದ್ರಕ್ಕೆ ಸೇರಿದ ಗೋಳಿಕೈ ಗ್ರಾಮದ ಗಣೇಶ ವೆಂಕಟ್ರಮಣ ಹೆಗಡೆಯವರ ಮನೆಗೆ ಬೀಗ್ಗೆ ೮ ಗಂಟೆಗೆ ಅವರು ಮನೆಯಲ್ಲಿಲ್ಲದ ವೇಳೆಯಲ್ಲಿ ಜಪ್ತಿಗಾಗಿ ಅಧಿಕಾರಿಗಳು ಹೋದರು. ಈ ಮನೆಯ ಹೆಂಡತಿಯು ಯಜಮಾನರು ಬಂದ ನಂತರ ಜಪ್ತಿ ಮಾಡಬಹುದೆಂದು ಹೇಳಿದರೂ ಕೇಳದೆ, ಕಂಚು, ತಾಮ್ರ, ಹಿತ್ತಾಳೆ, ಭತ್ತ, ಎಮ್ಮೆ ಮುಂತಾದ ಸಾಮಾನುಗಳನ್ನು ಜಪ್ತ ಮಾಡಿದರು. ಜಪ್ತಿಗೆ ಬೇಕಿದ್ದ, ಅಕ್ಕಂಡೆ, ಕಾನ ಭೋಗನು ಒಬ್ಬರು ಸರ್ಕಲ್ ಇನಸ್ಪೇಕ್ಟರರು ಇಬ್ಬರು ಸಶಸ್ತ್ರ ಪೋಲೀಸರು ೩ ಉಗ್ರಾಣಿಗಳು, ಹೋಗಿದ್ದರು

ತಾ|| ೩—೬—೩೧ ನೇ ದಿವಸ ಹೇರೂರು ಕೇಂದ್ರಕ್ಕೆ ಸೇರಿದ ಕರ್ಜಗಿ ಗ್ರಾಮದ ಪೈಕಿ ಕರಿಗದ್ದೇ ಹಳ್ಳಿಯಲ್ಲಿ ವೆಂಕಪ್ಪ ಗಣಪತ್ಯ ಹೆಗಡೇ ಇವರ ಮನೆಗೆ ಬೆಳಿಗ್ಗೆ ಕಾನಭೋಗರು, ಉಗ್ರಾಣಿಗಳು, ಪೋಲೀಸರು ಸರ್ಕಲ್ಲ ಇನಸ್ಪೇಕ್ಟರರು ಹೋಗಿ ತೀರ್ವೆಯನ್ನ ಕೇಳಿದರು ಆಗ ವೆಂಕಪ್ಪ ಹೆಗಡೇರು ನಮ್ಮಲ್ಲಿ ಹಣವಿಲ್ಲೆಂದು ಹೇಳಿದರು. ಜಪ್ತಿಗೆ ಸುರುಮಾಡಿದರು, ಒಂದು ಹಳ್ಳೀ ಮಾತ್ರ ಸಿಕ್ಕಿತು. ಅದನ್ನು ಬಿಟ್ಟುಕೊಟ್ಟರು. ಆ ಮೇಲೆ ಒಂದು ಪೆಟ್ಟಿಗೆಯ ಕೀಲೀ ಮುರಿದು ನೋಡಲಾಗಿ ೩—೮—೦ ಮಾತ್ರ ದೊರೆತವು. ಇಷ್ಟು ಸಾಮಾನು ಜಪ್ತ ಮಾಡಿಕೊಂಡು, ಪಂಚನಾಮೆ ಮಾಡಿ ಹೊರಟುಹೋದರು.

ವರ್ಕಿಂಗ ಕಮಿಟಿಯ ಸಭೆ.

ಕಾರವಾರ, ತಾ|| ೨

ವರ್ಕಿಂಗ ಕಮಿಟಿಯವರು ಇವತ್ತಿನ ದಿವಸ ಸಭೆಯಲ್ಲಿ ಸೇರಿ, ಶಾಂತ್ರೀಕರದಲ್ಲಿ ತೀರ್ಮಾನಿಸಲ್ಪಟ್ಟ ಗಾಂಧಿಯವರ ಗೊತ್ತುವಳಿ ನೆಹರೂ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಹಾಗೂ ಇತರ ಸಂಘಗಳಿಂದ ಆ ಗೊತ್ತುವಳಿಯ ಸಂಬಂಧವಾಗಿ ಅಭಿಪ್ರಾಯ, ಸೂಚನೆ ಮೊದಲಾದವುಗಳನ್ನು ತೆಗೆದುಕೊಂಡು ಅವನ್ನು ವಿದ್ವಕಚೇರಿ ಕಮಿಟಿ ಮಾಡಲು ಕಳಿಸುವದೆಂದು ಮಂಡಲವನ್ನು ನಿಯಮಿಸಿದರು.

೧ ಸಿ. ರಾಜಗೋಪಾಲಾಚಾರ್ಯ, ೨ ಪಟ್ಟಾಭಿ ಸೀತಾರಾಮಯ್ಯ ೩ ಸತ್ಯಮೂರ್ತಿ. ೪ ಪ್ರಮಥನಾಥ ಬ್ಯಾನರ್ಜಿ, ೫ ಶ್ರೀ ಪ್ರಕಾಶ, ೬ ರ ಮದನಲಾಲ ಸಿನ್ಹಾ, ೭ ಪ್ರೊಫೆಸರ ಪ್ರಜನಾರಾಯಣ. (ತ ಪ್ರೆ)

ಜಾಹೀರಾತುದಾರರಿಗೆ ಅಲಭ್ಯ ಲಾಭ!

'ಕನ್ನಡಿಗ'ನು ದಿನಾಲು ಎರಡುಸಲ ಹೊರಡ ಹತ್ತಿರುವನು. ಇದರಿಂದ ಪ್ರತಿದಿನ ಸಾವಿರಗಟ್ಟಲೆ ಜನರ ಕೈಸೇರುತ್ತಿರುವನೆಂಬದು ಸ್ಪಷ್ಟವಿದೆ. ಆದ್ದರಿಂದ ಜಾಹೀರಾತುಗಳನ್ನು ಕೊಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅಥವಾ ಸ್ವತಃ ಭೆಟ್ಟಿಯಾಗಬೇಕು.

'ಕನ್ನಡಿಗ'ನ ಕಾರ್ಯಾಲಯ,

ಬಾಗಲಕೋಟೆ.

ಈ ಪತ್ರಿಕೆಯನ್ನು ವೆಂಕಟೇಶ ಶೀನಿವಾಸಾಚಾರ್ಯ ಕಲ್ಲೂರ ಇವರು ಬಾಗಲಕೋಟೆ ವಿದ್ಯಾರ್ಥಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಪಡಿಸಲ್ಪಟ್ಟಿತು

ರ ನಂ. ಬಿ. ೨೭೮೮

ನಿತ್ಯ ಪತ್ರ. (ಸಂಜೆಯ ಸಂಚಿಕೆ)

ಬೆಲೆ ೦—೦—೩.

[illegible]ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್॥—ಮನು.

ನಿತ್ಯಪತ್ರಿಕೆಯು

ವರ್ಗಣೀ ದರ [illegible]

[illegible]

೧೨ ತಿಂಗಳಿಗೆ	[illegible]—೦—೦
೬ „	೭—೮—೦
೩ „	[illegible]—೦
೧ „	೧—೧೪—೦

ಸ್ಥಳ ದರ

೧೨ ತಿಂಗಳಿಗೆ	೧೨—೦—೦
೬ „	೬—೦—೦
೩ „	೩—೮—೦
೧ „	೧—೦—೦

ನಿತ್ಯಪತ್ರಿಕೆಯು

ಸರಕಾರಿ ಹಾಗು ಜಾಗಾಗಿ

[illegible] ದರಗಳು

೧ನೇ ಸಲ ೧ ಇಂಚಿಗೆ	೧—೦—೦
೨ „ „	[illegible]—೦—೦
ವ [illegible] ದ [illegible]	—೨—೦

[illegible]

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಸಲ್ಪಡುವದು

ವರ್ಷ ೨] ಡಾಕ ಬಾಗಲಕೋಟೆ— ಶನಿವಾರ ಮಿತಿ ಚೈತ್ರ ಬಹುಳ ೨ ಶಕೆ ೧೮೫೩ ತಾ॥ ೪—೪—೩೧ [ಸಂಚಿಕೆ ೧೩

೯೭ ಪೌಂಡಿನ ರಹಸ್ಯಮಯ ಬಾಂಬು

ಮಹಾತ್ಮರ ಬಗ್ಗೆ ಅಮೇರಿಕೆಯವರ ಅಭಿಪ್ರಾಯ

ಅಮೇರಿಕೆಯಲ್ಲಿಯ ಸುಪ್ರಸಿದ್ಧ ಸಾಪ್ತಾಹಿಕ "ಲಿಟರರಿ ಡಾಯಜೆಸ್ಟ" ಎಂಬ ಪತ್ರಿಕೆಯು ಮಹಾತ್ಮಾ ಗಾಂಧಿ ಹಾಗು ಗಾಂಧಿ-ಇರ್ವಿನರ ಒಪ್ಪಂದ' ಈ ವಿಷಯದ ಮೇಲೆ ಒಂದು ಲೇಖವನ್ನು ಪ್ರಸಿದ್ಧಮಾಡಿದ್ದು, ಆ ಲೇಖದಲ್ಲಿ ಗಾಂಧಿಯವರ ವ್ಯಂಗಚಿತ್ರವು ಕೊಡಲ್ಪಟ್ಟಿದ್ದು, ಅದರ ಕೆಳಗೆ "ಸರ್ವ ಹಿಂದುಸ್ಥಾನದವರನ್ನು ಅಲ್ಲೋಲ ಕಲ್ಲೋಲ ಮಾಡುವ ೯೭ ಪೌಂಡಿನ ರಹಸ್ಯಮಯ ಬಾಂಬು" ಈ ಶಬ್ದಗಳಿಂದ ಮಹಾತ್ಮರ ಮಹಿಮೆಯನ್ನು ಕೊಂಡಾಡಲಾಗಿದೆ. ಮಹಾತ್ಮಾ ಗಾಂಧಿಯವರ ಸಂಬಂಧವಾಗಿ ಲೇಖಕರು ಬರೆಯುವದೇನೆಂದರೆ:— ಈ ಪ್ರಾಣಿಯು ದಂತಹೀನನಾದ [illegible] ಅರ್ಧನಗ್ನ [illegible] ಅವನ [illegible] ಉಪ್ಪಿನ [illegible] ಜನರ [illegible] ಸಮಾಪ್ತವಾಗಿದೆ. ಅವರು ಯಾವತ್ತು ಜಗತ್ತಿನ [illegible] ತನ್ನ ಕಡೆಗೆ ಸೆಳೆದುಕೊಂಡಿದ್ದಾನೆ. ಮಹಾತ್ಮಾ ಗಾಂಧಿಯವರು ಈಗ [illegible] ಜೊತೆ ಬಂದಿದ್ದು, ಅವರ ಬಡಕಲು ದೇಹವು ಒಂದು ದೊಡ್ಡ ಶಕ್ತಿಯನ್ನೇ ಉಪಸ್ಥಿತ ಮಾಡಿದೆ. ಈ ಪ್ರಶ್ನೆಯ ಉತ್ತರದ ಹಾದಿಯನ್ನೇ ಯಾವತ್ತು ಜನರು ನಿರೀಕ್ಷಿಸಹತ್ತಿದ್ದಾರೆ. ಮಹಾತ್ಮರ ಬೇಡಿಕೆಗಳು ಏನೇ ಇದ್ದರೂ ಸಹ, ಆ ಬೇಡಿಕೆಗಳನ್ನು ಸಾಧ್ಯಮಾಡಿಕೊಳ್ಳುವದಕ್ಕಾಗಿ ಅವರು ಉಪಯೋಗಿಸಿದ ಶಸ್ತ್ರವು ಈಗ ಜಗತ್ತಿನಲ್ಲಿ ಎಲ್ಲದಕ್ಕಿಂತಲೂ ಶ್ರೇಷ್ಠ ಹಾಗು ಪರಿಣಾಮಕಾರಿ ಆಗಿ ಪರಿಣಮಿಸಿದೆ. ಅಸತ್ಯಾಚಾರ ಹಾಗು ಅಸಹಕಾರಿತಾ ಈ ಶಬ್ದಗಳು ಅವರ [illegible] ಮೇಲೆ ಶೋಭಿಸುತ್ತವೆ. ಎಲ್ಲಿ [illegible] ಶಕ್ತಿಯು ಕುಂಠಿತವಾಗುತ್ತದೆಯೋ ಅಲ್ಲಿ ಮಹಾತ್ಮರ ಸತ್ಯಾಗ್ರಹ ಶಕ್ತಿಯು [illegible] ತೋರಿಸುತ್ತದೆ. ನಮ್ರತೆಯಲ್ಲಿ ಎಂತಹ [illegible] ಶಕ್ತಿಯಿದೆಯೆಂಬುದನ್ನು ತೋರಿಸಿ [illegible] ಮಹಾತ್ಮಾ ಗಾಂಧಿಯವರೇ ಪ್ರತ್ಯಕ್ಷ [illegible]ದ್ದಾರೆ.

ಮಹಾತ್ಮಾ ಗಾಂಧಿಯವರನ್ನು ೯೭ ಪೌಂ[illegible] ಚಮತ್ಕಾರಿಕ ಬಾಂಬಿಗೆ ಹೋಲಿಸ[illegible] ಈ ಬಾಂಬು ಮೊದಲು ದಿಲ್ಲಿಯಲ್ಲಿ [illegible]ಟವಾಯಿತು. ಅದರೊಳಗಿಂದ ಗಾಂಧಿ—[illegible]ರ ಒಪ್ಪಂದವು ಹೊರಬಿತ್ತು. [illegible] ಬಾಂಬು ಸ್ಫೋಟವಾದಲ್ಲಿ [illegible] [illegible] ಹೊಂದುವದು. ಆ ದರೆ ಈ ಬಾಂಬಿನ ಸ್ಫೋಟದಿಂದ ನಾಶವು ಉತ್ಪತ್ತಿ [illegible] [illegible] ಕೈದಿಗಳು [illegible] ತಪ್ಪಿತು. ಬ್ರಿಟಿಶ ಸಾಮ್ರಾಜ್ಯ [illegible] ಬಂಡೆಗಳನ್ನು [illegible] ಸಮುದ್ರದಲ್ಲಿ [illegible] ಒಂದು ಶಕ್ತಿಯು ಸಾಮ್ರಾಜ್ಯ [illegible] ನೋಡಿದ ಕೂಡಲೆ ಮನಸ್ಸು [illegible] ನಡುಗುತ್ತಾನೆ. ಈ ಮಾನವೀ ಬಾಂಬಿನ ಸ್ಫೋಟದಿಂದ ಅವರಿಗೆ ಶಾಂತಿಸಮಾಧಾನಗಳು ಲಭಿಸುತ್ತವೆ. ಒಂದು ಬಾಂಬು ಕ್ರೋಧ, ದ್ವೇಷ ಮತ್ತು ಶತ್ರುತ್ವವನ್ನು ಹಬ್ಬಿಸುತ್ತದೆ. ಮಹಾತ್ಮರು ಬಾಂಬಿನಿಂದ ಪ್ರೇಮ ಹಾಗು ವಿಶ್ವಾಸಗಳು ವೃದ್ಧಿಂಗತವಾಗುತ್ತವೆ.

ರಾಷ್ಟ್ರಧ್ವಜವು ಬದಲಾಗುವದೇ?

ಈಗಿನ ಹಿಂದೀಯರ ರಾಷ್ಟ್ರಧ್ವಜವು ಮೂರು ಬಣ್ಣದ್ದಿದೆಯಷ್ಟೇ? ಈ ಚಿನ್ಹಗಳು ಜಾತಿಗಳನ್ನು ಸೂಚಿಸುತ್ತಲಿವೆಯಾದ್ದರಿಂದ, ಜಾತಿಗಳ [illegible] ರಾಷ್ಟ್ರಧ್ವಜದಲ್ಲಿರಕೂಡದೆಂದು ಅನೇಕ ಬಗೆಯ ಟೀಕೆಗಳಾಗಿವೆ. ಆದ್ದರಿಂದ ಈ ಬಗ್ಗೆ ವಿಚಾರಮಾಡಿ ಜುಲೈ ೩೧ ರೊಳಗಾಗಿ ತಮ್ಮ ರಿಪೋರ್ಟನ್ನು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಗೆ ಒಪ್ಪಿಸಬೇಕೆಂದು ಕೆಳಗಿನವರದೊಂದು ಕಮಿಟಿ ನಿಯಮಿಸಲ್ಪಟ್ಟಿದೆ. ೧) ಸರದಾರ ವಲ್ಲಭಭಾಯಿ ೨) ಮೌ. [illegible], ೩) ಪಟ್ಟಾಭಿ ಸೀತಾರಾಮಯ್ಯ, ೪) ಡಾ. ಹರ್ಡೀಕರ, ೫) [illegible], ೬) ತಾರಾಸಿಂಗ, ೭) ಮೌಲಾನಾ ಆಬ್ದುಲ್ [illegible] ಆಝಾದ, ಇವರ ಕಮಿಟಿಯು [illegible].

ಭಗತಸಿಂಗರ ಮೃತದೇಹಕ್ಕೆ ಅಪಮಾನವೇ?

ಭಗತಸಿಂಗ, ಸುಖದೇವ ಹಾಗು ರಾಜಗುರು ಇವರ ಮೃತದೇಹಗಳನ್ನು ತುಂಡರಿಸಿ [illegible], ಹಾಗು ಇನ್ನಿತರ [illegible] ಅವರ ಪ್ರೇತಗಳಿಗೆ ಅವಮಾನ ಮಾಡಲ್ಪಟ್ಟಿತೆಂಬ ಸುದ್ದಿಯಿದೆ. ಇದನ್ನು ವಿಚಾರಿಸಿ, ಏಪ್ರೈಲ್ ೩೦ ನೆಯ ತಾರೀಖಿನೊಳಗಾಗಿ ತಮಗೆ ರಿಪೋರ್ಟನ್ನು ಕಳಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯವರು ಒಂದು ಕಮಿಟಿ ನಿಯಮಿಸಿದ್ದಾರೆ.

ಭಗತಸಿಂಗನ ಬೂದಿಯು

ಮುಂಬಯಿಗೆ ಒಪ್ಪಿಸಲ್ಪಡುವದು.

[illegible] ಭಗತಸಿಂಗರ ತಂದೆಯವರಾದ ಕಿಶನಸಿಂಗರು [illegible] ವಿದ್ಯಾರ್ಥಿಗಳ [illegible] ಬ್ಯಾಂಡಿನೊಂದಿಗೆ ಸ್ವಯಂಸೇವಕರನ್ನು [illegible], ಅವರಿಂದ [illegible] ಭಗತಸಿಂಗನ [illegible] ರಿಸಿದರು. ಈ ಬೂದಿಯನ್ನು ಮುಂಬಯಿಗೆ [illegible] ತರು.

ಬಾಂಬು ಒಗೆದ ದಿನವೂ ಶ್ರಾದ್ಧ ತಿಥಿಯೂ ಒಂದೇ ಆದವು!

ಭಗತಸಿಂಗರ ಶ್ರಾದ್ಧವು ನಾಳಿನ ೮ ನೆಯ ತಾರೀಖಿನ ದಿನ ಮುಂಬಯಿಯಲ್ಲಿ ಜರುಗಲಿದೆ. ಈ ೮ನೆಯ ತಾರೀಖೆಂದರೆ ಅಸೆಂಬ್ಲಿಯಲ್ಲಿ ಭಗತಸಿಂಗರು ಕಳೆದಾಚೆ ವರ್ಷ ಬಾಂಬು ಒಗೆದ ದಿವಸವೇ! ಅಂದೇ ಈಗ ಶ್ರಾದ್ಧತಿಥಿ ಬಂದಿದೆ! ಈ ಯೋಗಾಯೋಗವು ವಿಚಿತ್ರವಲ್ಲವೇ?

ತಮ್ಮ ತಾಯಿಯವರಿಗೆ ಭಗತಸಿಂಗರು ಏನು ಹೇಳಿದರು

[illegible] ಭಗತಸಿಂಗರು ಲಾಹೋರ [illegible] ಕಡೆಯ ಸಲ [illegible] ತಾಯಿಯವರು ಅಳಲಾರಂಭಿಸಿದರು, [illegible] ಧೈರ್ಯ [illegible] ಅವರಿಗೆ ಕೊಟ್ಟು, "ತಾಯಿಯವರೇ [illegible] ನನ್ನ ಶವವನ್ನು ತೆಗೆದುಕೊಂಡು [illegible] ಎಂಬುದಾಗಿ ನುಡಿದರು. ಅದಕ್ಕೆ ಭಗತಸಿಂಗರು ಮುಗುಳು ನಗೆ ನಕ್ಕು [illegible] ನಾನು ಸತ್ತರೂ ನನ್ನ [illegible] ದೇಶ [illegible] ಪುನಃ ಜನ್ಮ ಹೊಂದಿ [illegible] ಬರುವೆನು. ಎಂಬುದಾಗಿ ಉತ್ತರ ಕೊಟ್ಟರು.

ಶಹಾಪೂರ ಸಂಸ್ಥಾನದಲ್ಲಿ ಲೂಟೀ ರಾಜ್ಯ

[illegible] ಶಹಾಪೂರ ಜಹಗೀರದಾರರು ತಮ್ಮ ಪ್ರಜೆಗಳ ಮೇಲೆ [illegible] ಹೇರಿದ್ದಾರೆ. ಇದನ್ನು [illegible]

ಉತ್ಕಳ ಪ್ರಾಂತ ನಿರ್ಮಾಣ. ಭಾಷಾನ್ವಯ ಪ್ರಾಂತ ರಚನೆಯೂ ಸರದಾರ ವಲ್ಲಭಭಾಯಿಯವರೂ

ಉತ್ಕಲಕ್ಕೆ [illegible] ಬೇಕೆಂಬ [illegible] ಈ ವಿಷಯವನ್ನು [illegible] ಕಾಂಗ್ರೆಸ್ ಶಿಷ್ಟ ಮಂಡಳ [illegible] ಜನ ಸಭೆ [illegible] ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ [illegible]. ಈ ಪ್ರಶ್ನೆಯನ್ನು ಈ ಮುಂದೆ ಕೂಡುವ ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿಯಲ್ಲಿ ಎಲ್ಲಕ್ಕೂ ಮೊದಲು ವಿಚಾರಿಸಲಾಗುವದು" ಎಂದು ಸರದಾರ ವಲ್ಲಭಭಾಯಿಯವರು ಹೇಳಿದರು.

"ಹಾಗಾದರೆ ಈ ಮುಂದೆ ಈ ಕಮಿಟಿಯು ಬೇಗನೇ ಕೂಡುವದೋ?" ಎಂದು ಓರ್ವ ಸಭಾಸದರು ಕೇಳಿದರು.

"ಸಾತ ಜೇಲಿಗೆ ಹೋಗದಿದ್ದರೆ ಹಾಗೂ, ಈ ಸಭೆಯನ್ನು ಕರೆಯಲೇ ಬೇಕೆಂದು [illegible] ನಿರ್ಣಯಿಸಿದರೆ, ಅದು ಕೂಡಿಸಲು ಅಡ್ಡಿಯೇನಿದೆ!" ಎಂದು ಸರದಾರರು ಹೇಳಿದರು.

"ನಾವು ಆಂಧ್ರರು ಪ್ರತ್ಯೇಕ ಪ್ರಾಂತದಲ್ಲಿಯೇ ಇಚ್ಛಿಸುತ್ತೇವೆ. ಆದ್ದರಿಂದ ತಮ್ಮ ಈ ವಿಷಯವನ್ನು ದಯಮಾಡಿ [illegible] ನಲ್ಲಿ [illegible] ಶಿಷ್ಟಮಂಡಳದವರು ಮಂಡಿಸಬೇಕು." ಎಂದ [illegible] ನುಡಿದರು,

[illegible] ಪ್ರತ್ಯೇಕ ಪ್ರಾಂತವು ದೊರೆಯುವ ಒತ್ತಾಯ [illegible].

"ಭಾಷಾನ್ವಯ ಪ್ರಾಂತ ರಚನೆಗೆ ಕಾಂಗ್ರೆಸ್ಸು ತನ್ನ ಸಮ್ಮತಿಯನ್ನು ಎಂದೋ ಕೊಟ್ಟಿರುವದು; ಮತ್ತು ಈ [illegible] ವಾಗುವದರಲ್ಲಿ ಸಂಶಯವು ಇಲ್ಲ." ಎಂಬುದಾಗಿ ಅಧ್ಯಕ್ಷರು [illegible] ಸಮಾಧಾನಪಡಿಸಿದರು.

[illegible] ಸಭೆ [illegible] ಸಭೆ [illegible] ಮೇಲೆ [illegible] ಸಭೆಯನ್ನು [illegible] ರಾಜನೀತಿ [illegible] ಹೊರಡಿಸಲಾಯಿತು [illegible] ಹೋದರು.

ಕನ್ನಡಿಗ.

[illegible] ಕನ್ನಡಿಗರ [illegible] ಮಹತ್ವದ [illegible] ಕನ್ನಡಿಗ [illegible]

ಕರಾಚಿಯಲ್ಲಿ ಕನ್ನಡಿಗರು ಏಕೀಕರಣದ ಬಗ್ಗೆ ಮಾಡಿದ್ದೇನು ?

"ಕರಾಚಿಯಲ್ಲಿ ಕನ್ನಡಿಗರು ಏಕೀಕರಣದ ಬಗ್ಗೆ ಮಾಡಿದ್ದೇನು ?" ಎಂಬದಾಗಿ ಹಲವರು ಕೇಳುತ್ತಲಿದ್ದಾರೆ. ಯಾಕಂದರೆ ಕರ್ನಾಟಕದ ಪಕ್ಷದಿಂದ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯಲ್ಲಿರುವ ಪ್ರತಿನಿಧಿಗಳು ಏಕೀಕರಣದ ವಿಷಯವನ್ನು ಕರಾಚಿಯಲ್ಲಿ ಎತ್ತಬೇಕೆಂದು ಧಾರವಾಡದಲ್ಲಿ ಕೂಡಿದ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿ ಎಲ್ಲ ಗೊತ್ತುಮಾಡಿ ಆಗಿತ್ತಲ್ಲವೆ ? ಈ ಠರಾವಿನನ್ವಯ ನಮ್ಮ ಪ್ರತಿನಿಧಿಗಳು ಅಲ್ಲಿ ಏನೇನು ಮಾಡಿದರೆಂಬದನ್ನು ಅರಿತುಕೊಳ್ಳಲು ಕನ್ನಡ ನಾಡು ಆತುರವಿದೆ. ಈ ವರೆಗಂತೂ ಈ ವಿಷಯವಾಗಿ ಏನೂ ಪ್ರಕಟವಾಗಿಲ್ಲವೆಂದು ಕರಾಚಿಯಲ್ಲಿ ನಮ್ಮ ಪ್ರತಿನಿಧಿಗಳು ಈ ಬಗ್ಗೆ ಏನೂ ಮಾಡಿಲ್ಲವೆಂದು ಊಹಿಸಿ ಜನರು, ನಾವು ಮೇಲೆ ಬರೆದಂತೆ ಕೇಳುತ್ತಲಿರುವರು.

ಏಕೀಕರಣದ ಬಗ್ಗೆ ಕನ್ನಡ ನಾಡು ಅತ್ಯಂತ ಆತುರವಾಗಿದ್ದುದರಿಂದ ಹೀಗೆ ಪ್ರಶ್ನೆ ಮಾಡುವದೇನೋ ಸ್ವಾಭಾವಿಕವೇ. ಆದರೆ ನಮ್ಮ ಮುಂದಾಳುಗಳು ಕರಾಚಿಯಲ್ಲಿ ಈ ಬಗ್ಗೆ ಏನನ್ನೂ ಮಾಡಿಲ್ಲವೆಂದು ನಂಬಲು ನಾವು ಸಿದ್ಧರಿಲ್ಲ. ಯಾಕಂದರೆ ಶ್ರೀಯುತರುಗಳಾದ ಗಂಗಾಧರರಾವ ದೇಶಪಾಂಡೆ, ಕೌಜಲಗಿ ಹಣಮಂತರಾಯರು, ಕರಮರಕರ ದತ್ತಾತ್ರಯರಾಯರು ಮೊದಲಾದವರು ಮಹಾತ್ಮರನ್ನು ಪ್ರತ್ಯೇಕವಾಗಿ ಕಂಡುಕೊಂಡರೆಂದು ಪ್ರಕಟವಾಗಿದೆ. ಹೀಗೆ ಕರ್ನಾಟಕದ ಮುಂದಾಳುಗಳು ಕರ್ನಾಟಕದ ವಿಶಿಷ್ಟ ವಿಷಯಗಳನ್ನು ಕುರಿತು ವಿಚಾರಿಸಲು ಮಹಾತ್ಮರ ಭೆಟ್ಟಿಗೆ ಹೋದಾಗ್ಗೆ, ಈ ವಿಷಯವನ್ನು ಕೇಳಿರಲಿಕ್ಕೆ ಸಾಕು. ಆದುದರಿಂದ ಅಲ್ಲಿ ಏನೇನು ನಡೆಯಿತೆಂಬದನ್ನು ಈ ಮಹನೀಯರು ಪ್ರಕಟಿಸಿ ಕನ್ನಡಿಗರನ್ನು ದೂರಮಾಡುವರಾಗಿ ನಂಬುತ್ತೇವೆ.

ಭಾಷಾನ್ವಯ ಪ್ರಾಂತ ರಚನೆಯೂ ಸರದಾರ ವಲ್ಲಭಭಾಯಿಯವರೂ.

ಈ ವಿಷಯವಾಗಿ ಬೇರೆ ಕಡೆಗೆ ಇಂದಿನ ಸಂಚಿಕೆಯಲ್ಲಿ ಕೆಲ ಸಂಗತಿಗಳು ಪ್ರಕಟವಾಗಿವೆ. ಇದನ್ನು ಕನ್ನಡಿಗರು ಅವಶ್ಯವಾಗಿ ಓದಬೇಕು. ಭಾಷಾನ್ವಯ ಪ್ರಾಂತರಚನೆಯ ಪ್ರಶ್ನೆಯನ್ನು ವಲ್ಲಭಭಾಯಿಯವರು ಚನ್ನಾಗಿ ಲಕ್ಷದಲ್ಲಿಟ್ಟುಕೊಂಡಿರುವರೆಂಬದು ಅದರಿಂದ ಸ್ಪಷ್ಟವಿದೆ. ಕಾಂಗ್ರೆಸ್ಸಿಗೆ ಸಮ್ಮತವಾದ ಈ ವಿಷಯವನ್ನು ಮುಂದುಮೇಜಿನ ಪರಿಷತ್ತಿನಲ್ಲಿ ಎತ್ತುವವರಲ್ಲಿ ಬರುವದಾಗಿ ಅವರ ಮಾತಿನಿಂದ ಒಡೆದು ಕಂಡದ್ದೊಂದು ಸಂತೋಷದ ಮಾತು ಆದರೆ ಉತ್ಕಲ ಆಂಧ್ರರೂ, ಕೇರಳದವರೂ ತಮ್ಮ ತಮ್ಮ ಪ್ರಾಂತಗಳ ವಿಭಾಗಣಿಯ ಸಲುವಾಗಿ ಕರಾಚಿಯ ಕಾಂಗ್ರೆಸ ಕಮಿಟಿಯ ಸಭೆಯಲ್ಲಿ ಪ್ರಶ್ನೆಯೆತ್ತಿದಾಗ್ಯೆ ನಮ್ಮ ಕರ್ನಾಟಕದ ಪ್ರತಿನಿಧಿಗಳಲ್ಲಿ [illegible] ಸಹ ಪ್ರಕಟವಾಗಿ ಈ ವಿಷಯವನ್ನ ಎತ್ತಿದ್ದು ಪ್ರಕಟವಾಗಿಲ್ಲ. ಆದುದರಿಂದ ಕನ್ನಡಿಗರು ಅಲ್ಲಿ ಯಾರು ಏಕೀಕರಣದ ಒಗ್ಗೆ ಬಹಿರಂಗವಾಗಿ ಚರ್ಚಿಸಿಲ್ಲವೆಂದು [illegible] ಆಸ್ಪದವಿದೆ. ಈ ಪ್ರತಿನಿಧಿಗಳಿಗೆ ಏಕೀಕರಣವು ಅಷ್ಟೊಂದು ತಲೆಬೇಸರ ವಿಷಯವಾಗಿದ್ದಿತೋ ಅಥವಾ ಈ ವಿಷಯವನ್ನು ಎತ್ತದಿರಲು ಅನ್ಯಕಾರಣಗಳೇನಾದರೂ ಇದ್ದವೋ ತಿಳಿಯದು. ಇದನ್ನಿಷ್ಟು ನಮ್ಮ ಪ್ರತಿನಿಧಿಗಳು ಪ್ರಕಟಿಸಿದರೆ ಒಳಿತಾಗುವದು. ಈ ಮುಂದೆ ಕೂಡುವ ಅಖಿಲಭಾರತ ಕಾಂಗ್ರೆಸ ಕಮೀಟಿಯಲ್ಲಿ ಈ ವಿಷಯವನ್ನು ಮೊದಲು ಎತ್ತಬೇಕೆಂದು ಅಧ್ಯಕ್ಷರಾದ ಪಟೇಲರು ಅಪ್ಪಣೆಕೊಡಿಸಿದ್ದಾರೆ. ಆಗಲಾದರೂ ನಮ್ಮ ಪ್ರತಿನಿಧಿಗಳು ನಮ್ಮ ಪ್ರಾಂತ ನಿರ್ಮಾಣದ ಪ್ರಶ್ನೆಯನ್ನು ಹೊರಹಾಕಲು ಮರೆಯದಂತೆ ಎಚ್ಚರ ಇರುವರಾಗಿ ವಿಶ್ವಾಸವಿದೆ.

ಕರಾಚಿ ಕಾಂಗ್ರೆಸ್ಸಿಗೆ ಮೊದಲು ಮಹಾತ್ಮರು ದಿಲ್ಲಿಗೆ ಹೋದಾಗ್ಗೆ ವ್ಹಾಯಿಸರಾಯರನ್ನು ಪುನಃ ಕಂಡಿದ್ದರಷ್ಟೆ? ಆಗ ಕೆಲವು ಕಮೀಟಿಗಳನ್ನು ಕೂಡಲೇ ನಿರ್ಮಾಣಮಾಡಬೇಕಾಗಿ ಗೊತ್ತಾಯಿತೆಂದು ಪ್ರಕಟವಾಗಿದ್ದಿತು. ಈ ಮೂರು ನಾಲ್ಕು ಕಮೀಟಿಗಳಲ್ಲಿ "ಬಾವುಂಡ್ರಿ ಕಮೀಶನ್" ಎಂದರೆ "ಗಡಿನಾಡುಗಳ ವಿಚಾರಣಾ ಮಂಡಳ್ಯವನ್ನೆ ನಿರ್ಮಿಸಬೇಕಾಗಿ ಗೊತ್ತಾಗಿತ್ತು. ಹೀಗೆ ಈ ಕಮೀಟಿಯು ನಿರ್ಮಾಣವಾದ ಕೂಡಲೇ, ಕನ್ನಡಿಗರು ಏಕೀಕರಣದ ತಮ್ಮ ಹಕ್ಕನ್ನೂ, ಅದರ ಆವಶ್ಯಕತೆಯನ್ನೂ ಈ ಮಂಡಲದವರಿಗೆ ಅಚ್ಚುಕಟ್ಟಾದ ರೀತಿಯಲ್ಲಿ ತಿಳಿಸಿಕೊಡಬೇಕಾಗುವದು. ಆದುದರಿಂದ ಏಕೀಕರಣದ ಬಗ್ಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯಲ್ಲಿ ಮೊನ್ನೆ ನಿರ್ಮಿಸಲ್ಪಟ್ಟ ಉಪಮಂಡಲದವರು ತಮ್ಮ ಕಾರ್ಯವನ್ನು ಒತ್ತರದಿಂದಲೂ ದಕ್ಷತೆಯಿಂದಲೂ ಸಾಗಿಸಬೇಕಾಗ ನಮ್ಮ ಸೂಚನೆಯಿದೆ.

....

ಕರ್ನಾಟಕದಲ್ಲಿಯ ಮರಾಠಿಗರಿಗೆ

ಶ್ರೀ [illegible] ಕನ್ನಡ [illegible] ದಿನದ ಡಾ. ಗೋಖಲೆ [illegible] ವಾಡದ ವಿದ್ಯಾರ್ಥಿ ಸಂಘದಲ್ಲಿ—ಕನ್ನಡ ಭಾಷೆ ಏಕೀಕರಣದ ಒಗ್ಗೆ ಮಾಡಿದ ಭಾಷಣದ ಸಾರಾಂಶ—ಶಾಂತ [illegible] ವಿಭಕ್ತಿಗಳ [illegible] ಭಗವದ್ಗೀತೆಯಲ್ಲಿ ಹೇಳಿದಂತೆ ಕನ್ನಡ ಭಾಷೆಯ ಉದ್ಧಾರಾರ್ಥವಾಗಿ ಅವರು ಅವತರಿಸಿದವರು. ಅವರು ಮಾಡಿದ ಸೇವೆಯು ನಮ್ಮೆಲ್ಲರಲ್ಲಿ ನವಚೈತನ್ಯವನ್ನು ಹುಟ್ಟಿಸಿ [illegible] ಆದರೆ ನಮ್ಮ ಕರ್ನಾಟಕದಲ್ಲಿ ತಮ್ಮ ಪ್ರಾಂತದ ಉದ್ಧಾರ ಮಾಡಬೇಕೆಂಬ ಅಭಿಮಾನವು ಎಲ್ಲಿಲ್ಲಿಯೂ ಇನ್ನೂ ಹುಟ್ಟಲೊಲ್ಲದು. ಇದು ಶೋಚನೀಯ ವಾರ್ತೆ. [illegible] ಉತ್ಸಾಹ [illegible] ಎಲ್ಲರೂ ಸೇರಲು ಬರುವದಿಲ್ಲ ಈ ವಿಷಯದಲ್ಲಿ ನಾನೊಂದು ಮಾತು ಹೇಳಬೇಕು. ಕರ್ನಾಟಕದಲ್ಲಿ ಹುಟ್ಟಿ, ಕನ್ನಡ ನಾಡಿನ ಅನ್ನವನ್ನುಂಡು ಕರ್ನಾಟಕದ ಸಂಸ್ಕೃತಿಯಿಂದ ತಾದಾತ್ಮ್ಯವನ್ನು ಹೊಂದುವುದು ಭೂಷಣ [illegible]. [illegible] ಕ್ಕಾಗಿಯೇ ಇಲ್ಲವೇ ಬೇರೆ ಯಾವದೇ ಕಾರ್ಯಕ್ಕಾಗಲೀ ಬಂದು ಪ್ರಾಂತಕ್ಕೆ ಬಂದು ತಳವೂರಿ ಆ ಪ್ರಾಂತದ ಸಂಸ್ಕೃತಿ, ಭಾಷೆ ಮುಂತಾದ್ದರಲ್ಲಿ ತಾದಾತ್ಮ್ಯ ಹೊಂದದೆ ತಮ್ಮ ಭಾಷೆ ಸಂಸ್ಕೃತಿಗಳ ಪ್ರಸ್ತಾವನ್ನೇ ಬೆಳೆಸ [illegible] ಯೋಗ್ಯವಲ್ಲ. [illegible] ಮರಾಠಾ [illegible] ಗುಜರಾಥಕ್ಕೆ ಹೋಗಿ ನೆಲೆಸಿದವರೆಲ್ಲ [illegible] ಗುಜರಾಥಿ [illegible] ಗುಜರಾಥದಲ್ಲಿ ಮರಾಠಿ [illegible] ಗುಜರಾಥಿ [illegible] ಸಂಸ್ಕೃತಿಯನ್ನ ಸ್ವೀಕರಿಸಿದ್ದರಿಂದ [illegible] ವಂದ್ಯರಾದರು; [illegible] ಮಹಾರಾಷ್ಟ್ರದಲ್ಲಿ ಹೋಗಿ [illegible] ನೆಲೆಸಿದ್ದರಿಂದ ಮರಾಠಿ ಭಾಷೆಯ ಉದ್ಧಾರ [illegible] ಅವರಿಗೆ ಭೂಷಣಾಸ್ಪದವು. ಇಂಥ [illegible] ಕನ್ನಡ ಭಾಷೆಯ ಉದ್ಧಾರಕ್ಕಾಗಿ [illegible]. ಹೀಗೆ ಮಾಡಿದರೇನೇ [illegible] ಸಾರ್ಥಕವಾಗುವದು.

ಮಹಾತ್ಮರೂ ನಮ್ಮ ಮುಂದಿನ ಕಾರ್ಯವೂ

ಮಹಾತ್ಮಾಗಾಂಧಿಯವರು "ಯಂಗ ಇಂಡಿಯಾ"ದಲ್ಲಿ ಬರೆದ ಸಂದೇಶ—

ದುಂಡು ಮೇಜಿನ ಪರಿಷತ್ತಿಗೆ ಕಾಂಗ್ರೆಸ್ಸಿನವರು ಹೋಗುವ ಪೂರ್ವದಲ್ಲಿ, ಇನ್ನು ಅನೇಕ ಬಗೆಯ ವಿಷಯಗಳ ನಿರ್ಣಯ ಮಾಡಬೇಕಾಗಿದೆ. ಇತ್ತ, ಕಾಂಗ್ರೆಸ್ ಭಿತ್ತರ ಕಾರ್ಯವು ಸ್ಪಷ್ಟವಿದೆ. ತಗ್ಗಿ ಗೊತ್ತಾದ ತಾತ್ಪೂರ್ತಿಕ ಸಂಧಾನದ ಕರಾರುಗಳನ್ನು ನಾವೆಲ್ಲರೂ ರುಜ್ಜಿಸಲೇಬೇಕು. [illegible] ವಾತಾವರಣದಲ್ಲಿ ಎಲ್ಲಿಯೂ ಇದರಂತೆ [illegible] ಮಾಡಬಿಡಲೇಕು. ಇದಕ್ಕಾಗಿ ನಮ್ಮ ಆತ್ಮನಿರೀಕ್ಷಣದಿಂದ ನಾವು ಶುದ್ಧರಾಗಬೇಕು. ಪರದೇಶೀ ಬಟ್ಟೆಯ ಬಹಿಷ್ಕಾರವು ಸಂಪೂರ್ಣವಾಗಿ ಯಶಸ್ವಿಯಾಗಬೇಕು. ಹಾಗೆ, ರಾಟಿಯ ಸಂದೇಶವು ಪ್ರತಿಯೊಂದು ಹಳ್ಳಿಯಲ್ಲಿಯೂ ಪಸರಿಸುವಂತೆ ಏರ್ಪಡಿಸಬೇಕು. [illegible] ತಿಳಿಯಲು ತ್ರಿಣಾವ ಸಾವಿರಗಟ್ಟಲೆ ಬಡ ಜನರ ವಿಷಯದಲ್ಲಿ ನಾವು [illegible] ಪ್ರೇಮವನ್ನು [illegible] ಈ ಕಾರ್ಯವು [illegible]. ಯಾವ ಬಗೆಯ ಬಲಾತ್ಕಾರವನ್ನು ಉಪಯೋಗಿಸದೇ, [illegible] ತಮ್ಮ ಚಟಗಳನ್ನು ಬಿಡುವಂತೆ ಅವರ ಮನ ಒಲಿಸಬೇಕು. ಇದಕ್ಕಾಗಿ ನಾವು ನಮ್ಮ ಕಲಹ [illegible] ಹಿತತವನ್ನು [illegible] ಬೇಕು; ಹಾಗೆ ನಮ್ಮ ನಮ್ಮಲ್ಲಿಯ ಸಹಕಾರವಾದರೂ ಬೆಳೆಸಲೇಬೇಕು. [illegible] ನಾವು ರಾಷ್ಟ್ರೀಯ ಧೋರಣವೆಂದು ಸ್ವೀಕರಿಸಿದ್ದರೂ ಕೂಡ [illegible] ಹಾಗು ಮಾನಸಿಕ ಶಕ್ತಿಯು ಏಕೀಭಾವದಿಂದ ಕಾರ್ಯವನ್ನು ಮಾಡಲೇಬೇಕಾಗುತ್ತದೆ.

ಈ ತಾತ್ಪೂರ್ತಿಕ ಸಂಧಾನಕ್ಕೆ ನಮ್ಮ ಸಮ್ಮತಿಯಿರುವವರಿಗೆ ನಾವು ಬ್ರಿಟೀಶ ವಸ್ತುಗಳೆಂಬೊಂದೇ ಕಾರಣದಿಂದ ಅವನ್ನು ಬಹಿಷ್ಕರಿಸಕೂಡದು. ಇನ್ನು, [illegible] ಮಾತು. ಇದು ಅತ್ಯಂತ ಮಹತ್ವದ್ದು. ಹಿಂದೂ—ಮುಸಲ್ಮಾನರ ಐಕ್ಯವು ಒಡನೆ ಬರುವಂತೆ ಪ್ರತಿಯೊಬ್ಬನೂ ಪ್ರಯತ್ನಿಸತಕ್ಕದ್ದು. ಅವಷ್ಟು ಹೇಗೆ ಪ್ರಯತ್ನಿಸತಕ್ಕದ್ದೆಂಬುದನ್ನು ನಾನು ಬಲ್ಲೆ. ಹಿಂದೂ ಜನರು ಮುಸಲ್ಮಾನರಲ್ಲಿ ವಿಶ್ವಾಸವನ್ನಿಡುವದಕ್ಕೆ ಮುಂದೆ ಬರಬೇಕು. [illegible] ಇಷ್ಟವಿದ್ದದ್ದನ್ನ ಮುಸಲ್ಮಾನರೂ [illegible] ಸಂಪೂರ್ಣವಾಗಿ ತೆಗೆದುಕೊಳ್ಳಲಿ. ಹಿಂದೂ ಜನರು ಅವರಿಗೆ ಅದನ್ನ ಕೊಡಲೇ ಬೇಕು. ಹೀಗೆ ಮಾಡುವದರಿಂದ ಜಾತಿ ವಿಷಯಕ ಜಗಳ [illegible] ತಲೆದೋರುವದು, ಅದೇ [illegible] ಮುಂದೆ ನಮ್ಮ ಕಾರ್ಯದ ಹಾದಿ.

ಮಹಾತ್ಮರು ಬಂಡೀ ಪರಿಷತ್ತಿಗೆ ಹೋಗುವದಿಲ್ಲ

"ಹಿಲ್ಲಾ ಜಾತಕ" ಕರ್ತರಾದ [illegible] ರಾವ ಚಿತ್ರೆ ಎಂಬುವವರು ಕೆಳಗಿನಂತೆ ಭವಿಷ್ಯವನ್ನು ವರ್ತಿಸಿದ್ದಾರೆ.

"ಬಂಡೀಗಾಲಿಯ ಪರಿಷತ್ತು ಇಂಗ್ಲಂಡದಲ್ಲಿ ಕೂಡುವದೋ ಇಲ್ಲವೆ ಹಿಂದುಸ್ಥಾನದಲ್ಲಿ ಕೂಡುವದೋ ಈ ವಿಷಯವಾಗಿ ಇನ್ನೂ ನಿರ್ಣಯವಾಗಿಲ್ಲದಿದ್ದರೂ, ಮಹಾತ್ಮಾ ಗಾಂಧಿಯವರ ಈ ವರ್ಷ ಇಂಗ್ಲಂಡಕ್ಕೆ ಪ್ರಯಾಣ ಬೆಳೆಸುವರೆಂಬುವದು ಅವರ ಕುಂಡಲಿಯಿಂದ ಕಂಡು ಬರುವದಿಲ್ಲ. ಮೇ ತಿಂಗಳ ೨೨ ನೆಯ ತಾರೀಖಿನ ನಂತರದಲ್ಲಿ ಮಹಾತ್ಮಾ ಗಾಂಧಿಯವರಿಗೆ ಜನರ ಬೆಂಬಲವು ಕುಗ್ಗುವಷ್ಟು ಸಿಗಲಾರದು. ಜೂನ, ಜುಲೈ, ಅಗಸ್ಟ, ಸಪ್ಟಂಬರ ವರೆಗೆ ಹೀಗೆ ಸಾಗುವದು. ಸಪ್ಟಂಬರ ೨೬ ನೆಯ ತಾರೀಖಿನ ಜನರು ಪುನಃ ಮಹಾತ್ಮರ ತತ್ವಗಳನ್ನು ಸ್ವೀಕರಿಸುವರು. [illegible] ಈ ಕಮೂರಕ್ಕೆ ಮಹಾತ್ಮಾಜಿಯವರ ಪ್ರಯತ್ನಕ್ಕೆ ಸ್ವಲ್ಪ ಪ್ರತಿಫಲ ಸಿಗುವದು.

ಕಟಕದಲ್ಲಿ ಪಿಕೆಟಿಂಗ

ಸ್ತ್ರೀಯರು ಅದ್ಭುತಕಾರ್ಯ ಮಾಡಿರುವರು

ನೆರೆ ಹಾಗೂ ಅಫೀಮಿನ ಅಂಗಡಿಗಳ ಮುಂದೆ ಶ್ರೀಮತಿ [illegible] ದೇವಿ ಮೊದಲಾದವರು ಕಟಕದಲ್ಲಿ ಪಿಕೆಟಿಂಗ ಮಾಡುತ್ತಲಿರುವರು. ಜನರ ಮೇಲೆ ಇದರ ಪರಿಣಾಮವು ಬಹು ಅದ್ಭುತವಾಗಿದೆ. [illegible] ಹಾಗೂ [illegible] ಸಂಖ್ಯೆ ಅತಿಶಯ ಕಡಿಮೆಯಾಗಿದೆ. ಇಲ್ಲಿಯ [illegible] ಪಿಕೇಟಿಂಗ ಬೋರರು [illegible] ತಮ್ಮ ಚಟವನ್ನು ಕ್ರಮವಾಗಿ ಬಿಡುವಂತೆ ಅವರಿಗೆ ಔಷಧ ಕೊಡುತ್ತಲಿದ್ದಾರೆ

ಕರಾಚಿಯಲ್ಲಿಯ ಖಾದೀ ಪ್ರದರ್ಶನ

ಚೊಕ್ಕಾದ ಉಣ್ಣೆ ಅರಿವೆಗಳು

ನಾಕಷ್ಟು ಅರಿವೆ ತಾರದಿದ್ದರೂ ಕೂಡ ಅಖಿಲ ಭಾರತೀಯ ಖಾದೀ ಪ್ರದರ್ಶನವು ಈ ಸಲ ಬಹು ಯಶಸ್ವಿಯಾಗಿ ಏರ್ಪಡಿಸಲ್ಪಟ್ಟಿತ್ತು. ಅರಿವೆಗಳ ಸ್ಟಾಲುಗಳಲ್ಲಿ ವಿಧವಿಧದ ಖಾದೀ ಬಟ್ಟೆಗಳು ಬೇರೆ ಬೇರೆ ಪ್ರಾಂತಗಳಿಂದ ಬಂದು ಮಾರಾಟವಾಗಿದ್ದವು. [illegible] ಗಳಾಗಲಿ ಬಹು ನಯವಾದ ಅರಿವೆಗಳಾಗಲಿ ಬಂದಿದ್ದವು ಇವುಗಳಲ್ಲಿ ಎಲ್ಲ ತರದ ಜನರ ರುಚಿಗೆ ತಕ್ಕುವಂಥ [illegible] ವಸ್ತ್ರಗಳಿದ್ದವು. [illegible] ಉಣ್ಣೆಯ [illegible] ಗಳನ್ನಂತೂ ಜನರು [illegible] ತ್ತಿದ್ದರು. ಸಾವಿರಗಟ್ಟಲೆ ಜನರು ದಿನಾಲು ಈ ಪ್ರದರ್ಶನವನ್ನು ನೋಡುತ್ತಲಿದ್ದರು.

ಮುದ್ರಕರು: ವೆಂಕಟೇಶ ಶ್ರೀನಿವಾಸ [illegible] ಬಾಗಲಕೋಟೆ ವಿದ್ಯಾರ್ಥಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರ ನಂ. ಬಿ. ೨೭೮೮

ನಿತ್ಯ ಪತ್ರ.

ಬೆಲೆ ೦—೦—೩.

परपत्र परवशं दुःखं । यदात्मवशं सुखम् ॥—मनु.

ಕನ್ನಡಿಗ

KANNADIGA
BAGALKOT

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ

೧೨ ತಿಂಗಳಿಗೆ	೧೫—೦—೦
೬ „	೭—೮—೦
೩ „	೩—೧೨—೦
೧ „	೧ ೧೪—೦

ಸ್ಥಳೀಯರಿಗೆ

೧೨ ತಿಂಗಳಿಗೆ	೧೨—೦—೦
೬ „	೬—೦—೦
೩ „	೩—೮—೦
೧ „	೧—೦—೦

ನಿತ್ಯಪತ್ರಿಕೆಯ
ಸರಕಾರಿ ಹಾಗು ಜಂಗಾವಿ
ಜಾಹೀರಾತಿನ ದರಗಳು
೧ನೇ ಸಲ ೧ ಇಂಚಿಗೆ ೧—೮—೦
೨ „ „ ೧—೦—೦
ವ. ೧ಕ್ಕೆ ಪ್ರತಿಯೊಂದ ಸಲ —೨
ಹೆಚ್ಚಿಂದ ಜಾಹಿರಾತಿಗೆ ಅಕ್ಷರದ ಪ್ರಮಾಣದಿಂದ ದರಬೀಳುವದು

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಡಾಕ | ಬಾಗಲಕೋಟೆ— ರವಿವಾರ ಮಿತಿ ಚೈತ್ರ ಬಹುಳ ೩ ಶಕ ೧೮೫೩ ತಾ॥ ೫—೪—೩೧ | [ಸಂಚಿಕೆ ೧೬

ದುಂಡು ಮೇಜಿನ ಪರಿಷತ್ತು

ಮಹಾತ್ಮರ ಹೊಸ ಯೋಜನೆ

ಹೊಸ ದಿಲ್ಲಿ ತಾ॥ ೪

ಮಹಾತ್ಮರು ಇಲ್ಲಿ ಬಂದಂದಿನಿಂದ ಹಿಂದೂ ಮುಸಲ್ಮಾನ ಐಕ್ಯದ ಬಗ್ಗೆ ಜನರು ಹೊಸ ಹೊಸ ಕಲ್ಪನೆ ಹಾಕುತ್ತಲಿದ್ದಾರೆ. ಈ ಐಕ್ಯದ ಹೊರತು ಮಹಾತ್ಮರು ದುಂಡು ಮೇಜಿನ ಪರಿಷತ್ತಿಗೆ ಹೋಗುವದಿಲ್ಲವೆಂದು ಖಂಡತುಂಡವಾಗಿ ಹೇಳಿದ್ದಾರೆ. ಆದ್ದರಿಂದ ಯಾವ ರೀತಿಯಿಂದ ಮಹಾತ್ಮರು ಈ ಬಿಕ್ಕಟ್ಟಾದ ಪ್ರಶ್ನೆಯನ್ನು ಬಿಡಿಸುವರೋ ಎಂಬದನ್ನು ಕುತೂಹಲದಿಂದ ಜನರು ನಿರೀಕ್ಷಿಸುತ್ತಲಿದ್ದಾರೆ. ಕಾಂಗ್ರೆಸ್ಸದ ವತಿಯಿಂದ ಮಹಾತ್ಮರೊಬ್ಬರೇ ಪ್ರತಿನಿಧಿಯಾಗಿ ಹೋಗಬೇಕೆಂದು ಕಾರ್ಯಕಾರಿ ಮಂಡಲದವರು ಗೊತ್ತು ಮಾಡಿದ ಸಮಾಚಾರವಾದರೂ ಅನೇಕರನ್ನು ಆಶ್ಚರ್ಯಗೊಳಿಸಿದೆ

ದುಂಡು ಮೇಜಿನ ಬಗ್ಗೆ ಮಹಾತ್ಮರ ಯೋಜನೆಯು ನಾವೀನ್ಯವಾಗಿದೆ. ಹಿಂದಕ್ಕೆ ಲಂಡನ್ನಿನಲ್ಲಿ ನಡೆದ ಪದ್ಧತಿಯಲ್ಲಿ ನಡೆದು ಉಪಯೋಗವಿಲ್ಲವೆಂದೂ, ಮೊದಲು ಮಹಾತ್ಮರು ಮುಖ್ಯ ಪ್ರಧಾನರನ್ನು ಕಂಡು ಮೂಲ ತತ್ವಗಳ ಬಗ್ಗೆ ಅವರು ಒಪ್ಪುವರೋ ಹೇಗೆಂಬದನ್ನು ನೋಡಿಕೊಳ್ಳುವರಂತೆ! ಇದಕ್ಕೆಲ್ಲ ಪ್ರಧಾನರು ಒಪ್ಪಿದರೆ ಮಾತ್ರ ಮುಂದೆ ತಪಶೀಲುಗಳ ಕೆಲಸವನ್ನು ವಿವಿಧ ಕಮಿಟಿಗಳಿಗೆ ಬಿಡಬಹುದೆಂದೂ, ಇಲ್ಲವಾದರೆ ತಾವು ವಿಲಾಯತಿಗೆ ಹೋಗುವದೇನೂ ಉಪಯೋಗವಾಗದೆಂದೂ ಅಂದಿರುವರಂತೆ. ಬ್ರಿಟಿಶ್ ಶಿಷ್ಟ ಮಂಡಲದವರು ಮೊದಲು ಹಿಂದುಸ್ಥಾನಕ್ಕೆ ಬರಬೇಕೆಂದೂ, ಆಮೇಲೆ ಲಂಡನ್ನಕ್ಕೆ ಇಲ್ಲಿಯವರು ಹೋಗಬೇಕೆಂದೂ ಮಹಾತ್ಮರ ಮತವಿದೆಯಂತೆ.

ಶ್ರೀ ಸೇನಗುಪ್ತರು ತಮ್ಮ ಪತ್ನಿಯವರೊಂದಿಗೆ ರವಿವಾರ ಇಲ್ಲಿಗೆ ಬರತಕ್ಕವರಿದ್ದಾರೆ.

(ಅ. ಪ್ರೆ.)

ಬಾರ್ಡೋಲಿಯಲ್ಲಿ ಬಹಿಷ್ಕಾರ

ಅಹಮ್ಮದಾಬಾದ ತಾ. ೪

ಬಾರ್ಡೋಲಿಯ ತಾಲೂಕಿನಲ್ಲಿ ಎಲ್ಲಕಡೆಗೂ ಪರದೇಶಿ ಬಟ್ಟೆಗಳ ಬಹಿಷ್ಕಾರವನ್ನು ಕೃತಿಯಲ್ಲಿ ತರಲು ಬಹಳೇ ಉತ್ಸಾಹದಿಂದ ಕೆಲಸನಡೆದಿದೆ. ಸರಕಾರದವರ ಕಡೆಯಿಂದ ಸ್ವಯಂಸೇವಕರು [illegible] ಪತ್ರಿಕೆಗಳನ್ನು ತೆಗೆದುಕೊಳ್ಳುತ್ತಿರುವರು.

[ಅ. ಪ್ರೆ.]

ಗಾಂಧಿಮುವರಿಗೆ ಸರ್ವಾಧಿಕಾರ

ಹೊಸ ದಿಲ್ಲಿ, ತಾ॥ ೩

ದುಂಡುಮೇಜಿನ ಪರಿಷತ್ತಿಗೆ ಮಹಾತ್ಮರೊಬ್ಬರೇ ಕಾಂಗ್ರೆಸ್ಸದ ವತಿಯಿಂದ ಹೋಗಬೇಕೆಂದು, ಅವರಿಗೆ ಈ ವಿಷಯದಲ್ಲಿ ಸರ್ವಾಧಿಕಾರ ಇರಬೇಕೆಂದೂ, ಕಾರ್ಯಕಾರಿ ಮಂಡಲದಲ್ಲಿ ಗೊತ್ತಾಗಿದೆಯಂತೆ. ದಿಲ್ಲಿಯಲ್ಲಿ ಗಾಂಧಿ-ಇರ್ವಿನ್ನರ ಸಂಭಾಷಣೆಯ ಸಮಯದಲ್ಲಿ ಮಹಾತ್ಮರು ಪ್ರಮುಖ ಮುಂದಾಳುಗಳನ್ನು ಕರೆಸಿಕೊಂಡು ಅವರ ಸಂಗಡ ಆಲೋಚನೆ ನಡೆಸಿದಂತೆಯೇ, ಈಗಲಾದರೂ ಪ್ರಮುಖ ಮುಂದಾಳುಗಳನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು, ಮೊದಲು ತಮ್ಮ ವಿಚಾರಗಳನ್ನೆಲ್ಲ ಅವರಿಗೆ ತಿಳಿಸಿ, ಅವರ ಆಲೋಚನೆಯ ಸಹಾಯದಿಂದ ದುಂಡು ಮೇಜಿನ ಕೆಲಸ ಸಾಗಿಸುವರಾಗಿ ತಿಳಿಯುತ್ತದೆ. ಈ ಯೋಜನೆಯೇ ಕಾಂಗ್ರೆಸ್ಸದ ಮುಂದಾಳುಗಳಿಗೆಲ್ಲ ಸರಿದೋರಿದೆಯಂತೆ. ಇದರಿಂದ ಹಿಂದುಸ್ಥಾನದಲ್ಲಿಯ ಬೇರೆ ಬೇರೆ ಪಕ್ಷಗಳ ಜನರನ್ನು ಸಂತೋಷಗೊಳಿಸಲು ಸಾಧ್ಯವಾಗುವದು. ಯಾಕಂದರೆ ಮಹತ್ವದ ವಿಷಯವು ಚರ್ಚೆಗೆ ಬಂದಾಗ ಎಲ್ಲ ಪಂಗಡಗಳ ಮುಖಂಡರ ಸಂಗಡಲೂ ಮನಬಿಚ್ಚಿ ಮಾತನಾಡಲು ಮಹಾತ್ಮರಿಗೆ ಅವಕಾಶವಾಗುವದು.

ಮಹಮ್ಮದೀಯರ ಅಖಿಲ ಪಂಗಡಗಳ ಕಾರ್ಯಕಾರಿ ಮಂಡಲವು ಇಂದು ಮಧ್ಯಾಹ್ನ ಸಭೆಸೇರಿ, ತಮ್ಮ ಪರಿಷತ್ತನ್ನು ಶನಿವಾರ ೫ ನೆಯ ತಾ॥ ದಿನ ಜರುಗಿಸಬೇಕಾಗಿ ನಿರ್ಣಯಿಸಿದರು. ೪ ನೆಯ ತಾ॥ ದಿನ ಇವರೆಲ್ಲ ಮಹಾತ್ಮರ ಸಂಗಡ ಮಾತುಕಥೆ ಆಡುವರು.

ಲಾರ್ಡ ಇರ್ವಿನ್ನರು ತಮ್ಮ ಪತ್ನಿಯರೊಂದಿಗೆ ೧೪ ನೆಯ ತಾ॥ ದಿನ ಖಾಸಗೀರೀತಿಯಿಂದ ದಿಲ್ಲಿಯಿಂದ ಹೊರಟು ಮುಂಬಯಿಗೆ ಹೋಗಿ ಅಲ್ಲಿಂದ ವಿಲಾಯತಿಗೆ ತೆರಳುವರು.

(ಅ. ಪ್ರೆ.)

'ಮಹಾರಾಷ್ಟ್ರ'ದ ಸಂಪಾದಕರಿಗೆ

ಒಂದು ವರ್ಷದ ಕಠಿಣ ಶಿಕ್ಷೆ

ನಾಗಪುರದ 'ಮಹಾರಾಷ್ಟ್ರ' ಪತ್ರಿಕೆಯಲ್ಲಿ ಸೊಲ್ಲಾಪುರದ ಅತ್ಯಾಚಾರದ ಬಗ್ಗೆ ಬಂದ ಲೇಖನಗಳಿಗಾಗಿ ಅದರ ಸಂಪಾದಕರಾದ ಶ್ರೀ. ಓಗಳೆಯವರಿಗೆ ಒಂದು ವರ್ಷದ ಕಠಿಣಶಿಕ್ಷೆಯು ೧೨೪ (ಅ) ಕಲಮಿನನ್ವಯ ವಿಧಿಸಲ್ಪಟ್ಟಿದೆ.

ಮಹಾತ್ಮರ ದೇಹಸ್ಥಿತಿ ಚನ್ನಾಗಿಲ್ಲ

ಹೊಸ ದಿಲ್ಲಿ ತಾ॥ ೪

ಮಹಾತ್ಮರು ಇಲ್ಲಿಗೆ ಬಂದಿದ್ದಾಗ ಡಾ॥ ಅನಸಾರಿಯವರು ಮಹಾತ್ಮರ ಪ್ರಕೃತಿಯನ್ನು ಪರೀಕ್ಷಿಸಿ, ಅವರಿಗೆ ಈಗ ವಿಶ್ರಾಂತಿಯು ಬಹು ಅವಶ್ಯವಾಗಿ ಬೇಕಾಗಿದೆಯೆಂದು ಹೇಳಿದ್ದಾರೆ. ಯಾಕಂದರೆ ಈಗೆರಡು ತಿಂಗಳಿಂದ ಅವರು ಒಂದೇ ಸವನೆ ಮಾಡುತ್ತಲಿದ್ದ ಕಾರ್ಯವು ವಿಶೇಷತಃ ಕರಾಚಿ ಕಾಂಗ್ರೆಸ್ಸದಲ್ಲಿ ಅವರ ಮೈಮೇಲಿದ್ದ ಜವಾಬದಾರಿಯು ಅವರ ದೇಹಸ್ಥಿತಿಯ ಮೇಲೆ ಅನಿಷ್ಟಪರಿಣಾಮವನ್ನುಂಟುಮಾಡಿದೆ. ಆದ್ದರಿಂದ ಅವರಿಗೆ ವಿಶ್ರಾಂತಿಯು ಅತ್ಯಾವಶ್ಯಕ. ಈ ಕಾರಣಕ್ಕಾಗಿ ಅವರು ಅಮೃತಸರಕ್ಕೆ ಬರುವದು ಸಾಧ್ಯವಿಲ್ಲವೆಂದು ಶೀಖ ಪರಿಷತ್ತಿಗೆ ಅನಸಾರಿಯವರು ತಿಳಿಸಿದ್ದಾರೆ. ಕರಾಚಿಯಲ್ಲಿ ತಮ್ಮ ಮೈಮೇಲಿದ್ದ ಮಹತ್ವದ ಭಾರವನ್ನು ಅವರು ಹಗುರಾಗಿ ನೀಗಿಸಿದ್ದೆಂದರೆ ಅದೊಂದು ಅದ್ಭುತ ಕಾರ್ಯವೆಂದೇ ಅನಸಾರಿಯವರ ಮತ. ಈಗ ಮಹಾತ್ಮರಿಗೆ ವಿಶ್ರಾಂತಿ ದೊರೆಯದಿದ್ದರೆ, ಅವರು ರೋಗಗ್ರಸ್ತರಾಗುವದು ಖಂಡಿತ.

(ಅ. ಪ್ರೆ)

ಗಾಂಧಿಮುವರು

ಹೊಸ ವ್ಹಾಯಿಸರಾಯರನ್ನು ಕಾಣುವರು

ಜವಾಹಿರಲಾಲ, ಸರದಾರ ವಲ್ಲಭಭಾಯಿ ಡಾ॥ ಅನಸಾರಿ ಮೊದಲಾದವರ ಸಂಗಡ ಮಹಾತ್ಮರು ೩ ನೆಯ ತಾ॥ ದಿನ ಕರಾಚಿಯಿಂದ ದಿಲ್ಲಿಗಾಗಿ ಪ್ರಯಾಣ ಬೆಳಿಸಿದರು. ಅಲ್ಲಿ ಮುಸಲ್ಮಾನರ ಮುಂದಾಳುಗಳ ಸಂಗಡ ಸಂಭಾಷಣೆ ಮಾಡಿದರು. ಶೀಖ ಜನರ ಪರಿಷತ್ತಿಗಾಗಿ ೭ ನೆಯ ತಾರೀಖಿಗೆ ಅಮೃತಸರಕ್ಕೆ ಮಹಾತ್ಮರು ಹೋಗಿ, ಅಹಮ್ಮದಾಬಾದವನ್ನು ೧೭ ನೆಯ ತಾ॥ ದಿನ ತಲ್ಪಿ, ಲಾರ್ಡ ಅಯರ್ವಿನ್ನರು ವಿಲಾಯತಿಗೆ ತೆರಳುವ ದಿನ, ಅವರನ್ನು ಕಾಣುವದಕ್ಕಾಗಿ ಮುಂಬೈಗೆ ಬರುವರು.

ಹೊಸ ವ್ಹಾಯಿಸರಾಯರಾದ ಲಾರ್ಡ ವಿಲಿಂಗ್ಡನ್ನರವರನ್ನು ಮಹಾತ್ಮರು ಕಂಡನಂತರ, ದುಂಡು ಮೇಜಿನ ಪರಿಷತ್ತಿಗಾಗಿ ಕಾಂಗ್ರೆಸ್ಸದಿಂದ ಹೋಗುವ ಜನರ ಹೆಸರುಗಳು ಪ್ರಕಟಿಸಲ್ಪಡುವವಂತೆ!

(ಅ. ಪ್ರೆ.)

ಸರಹದ್ದಿನಗಾಂಧಿಗೆ ಸನ್ಮಾನ

ಮುಂಬಯಿ ತಾ ೪

ಸರಹದ್ದಿನ ಗಾಂಧಿಯೆಂದಾದ ಅಬ್ದುಲ್ ಗಫಾರರು ಇಲ್ಲಿಗೆ ಇಂದು ಮುಂಜಾನೆ ಕರಾಚಿಯಿಂದ ಬಂದರು. ಹಿಂದೂ ಮುಸಲ್ಮಾನರೆಲ್ಲ ಅವರನ್ನು ವಿಧವಾಗಿ ಸತ್ಕರಿಸಿದರು. ಅವರ ಸಂಗಡ ೨೫ ಜನ ಕೆಂಪು ಅಂಗಿಯವರೂ ಬಂದಿದ್ದಾರೆ. ಕಾಂಗ್ರೆಸ ಕಚೇರಿಯ ವರೆಗೆ ಮೆರವಣಿಗೆಯಿಂದ ಅವರು ಒಯ್ಯಲ್ಪಟ್ಟರು. ಜುಮ್ಮಾಮಸೀದೆಯ ಹತ್ತಿರ ಛತ್ರಿಗಿಯ ವರ್ತಕರು ಅವರಿಗೆ ಮಾನಪತ್ರವನ್ನು ಕೊಟ್ಟರು. ಸಾವಿರಾರು ಜನರು ಈ ಎಲ್ಲ ಸಮಾರಂಭಗಳಲ್ಲಿ ಭಾಗತೆಗೆದುಕೊಂಡಿದ್ದರು

(ಅ. ಪ್ರೆ)

ಮಹಮ್ಮದೀಯರು ಯಾರನ್ನು ಕೆಣಕ ಕೂಡದು.

ಹೊಸ ದಿಲ್ಲಿ ತಾ॥ ೩

ಮಹಮ್ಮದೀಯರ ಸರ್ವಪಕ್ಷೀಯ ಪರಿಷತ್ತಿನ ಕಾರ್ಯಕಾರಿ ಮಂಡಲವು ಇಂದು ಕೂಡಿತ್ತು. ನೂರು ಜನರು ಈ ಸಭೆಗಾಗಿ ಬಂದಿದ್ದಾರೆ. ಆಗ್ರಾ, ಮಿರ್ಜಾಪುರ, ಕಾನಪುರಗಳಲ್ಲಿಯ ದಂಗೆಯ ಕಾರಣಗಳು ಸಂಶೋಧಿಸಲ್ಪಡುವಾಗ ಎಲ್ಲರೂ ಶಾಂತತನದಿಂದ ವಿಚಾರ ಮಾಡುತ್ತಲಿದ್ದರು. ಸ್ವತಃ ಮುಸಲ್ಮಾನರು ತಮ್ಮ ಸ್ಥಾನಗಳಲ್ಲಿ ಕದಲದೇ ನಿಲ್ಲಬೇಕೆಂದೂ ಪ್ರತಿನಿಧಿಗಳು ತಮ್ಮ ಬಾಂಧವರಿಗೆ ಒತ್ತಾಯಪಡಿಸಿದರು.

(ಅ. ಪ್ರೆ)

ಕಲಹದ ಸೋಗಡು

ಕಾನಪುರ ತಾ॥ ೩

ಹಿಂದೂ — ಮುಸಲ್ಮಾನರ ದಂಗೆಯ ಬಗ್ಗೆ ಸರಕಾರಿ ಪ್ರಕಟನೆ ಹೊರಟಿದೆ. ಬಿಟೂರ ಠಾಣೆಯಲ್ಲಿ ಈ ದಂಗೆಯುದ್ಭವಿಸಿದೆ. ಚಂಬಾಪುರ, ಶೇಜಾರಪುರ ಹಾಗೂ ಬಿಲ್ಹಾಪುರಗಳಲ್ಲಿಯೂ ಕಲಹದ ಸೋಗಡು ಹಬ್ಬಿದೆ. ಇಲ್ಲೆಲ್ಲಿ ಪರಸ್ಪರದಲ್ಲಿ ಜಾತಿವಿಷಯಕ ವಿಷವು ಬಹಳೇ ಆಗಿದೆ. ಸಿಟಿ ಮ್ಯಾಜಿಸ್ಟ್ರೇಟರು, ಸರ್ಕಲ್ ಇನಸ್ಪೆಕ್ಟರರು, ಹಾಗೂ ಶಸ್ತ್ರಧಾರಿ ಮೋಟಾರುಗಳು ಈ ಸ್ಥಳಗಳಿಗೆ ಬಂದೋಬಸ್ತಿಗಾಗಿ ಕಳಿಸಲ್ಪಟ್ಟಿವೆ.

(ಅ. ಪ್ರೆ.)

ಕರ್ನಾಟಕದಲ್ಲಿ ರಣರಂಗವು ಸಿದ್ಧವಾಯಿತು

ಸಿರ್ಸಿ ಸಿದ್ದಾಪುರ, ಹಿರೇಕೆರೂರಗಳಲ್ಲಿ ಸರಕಾರದ ಅನ್ಯಾಯ

ಕನ್ನಡಿಗ.

ಕರ್ನಾಟಕದ ರಣರಂಗವು

ಈಗ ೧೦-೧೨ ತಿಂಗಳಲ್ಲಿ ಕರ್ನಾಟಕವು ಸತ್ಯಾಗ್ರಹ ಚಳವಳದಲ್ಲಿ ವಿಶೇಷ ಹುರುಪಿನಿಂದಲೂ, ಆಸ್ಥೆಯಿಂದಲೂ ಭಾಗ ತೆಗೆದುಕೊಂಡದ್ದಾಯಿತು. ಸ್ವಾತಂತ್ರ್ಯದ ಈ ಸತ್ಯಾಗ್ರಹ ಮುಗಿ ಮುಗಿಯುವದರೊಳಗಾಗಿಯೇ ಮತ್ತೊಂದು ರಣರಂಗವು ಸಿದ್ಧವಾಗುತ್ತಲಿದೆ. ಪ್ರಜೆಗಳ ಸುಖದುಃಖಗಳನ್ನು ಸರಕಾರದವರು ಎಲ್ಲಕ್ಕೂ ಮೊದಲು ನೋಡಲೇಬೇಕು. ಅದನ್ನು ಈಗಿನ ಸರಕಾರವು ಮಾಡುವದಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದರೂ ಕೂಡ, ತಮ್ಮ ಹಕ್ಕು ಬಾಧ್ಯತೆಗಳನ್ನು ಪ್ರಸ್ಥಾಪಿಸಿಕೊಳ್ಳಲಿಕ್ಕೂ, ಸರಕಾರದ ಕಿವಿ ಹಿಂಡಲಿಕ್ಕೂ ಸಿದ್ಧರಾಗುವ ಜನರು ತೀರ ಕಡಿಮೆ. ಬೆಳೆಗಳು ಬಾರದಿದ್ದರೂ ಸರಕಾರದವರು ಬಡರೈತರನ್ನು ಪೀಡಿಸಿ ಕಂದಾಯವನ್ನು ವಸೂಲ ಮಾಡುವರು. ಆಣೇವಾರಿ ಹೆಚ್ಚಾಗಿ ಮಾಡುವರು. ರೈತರ ಆರ್ಥಿಕ ಹೀನತೆಯನ್ನಂತೂ ಸರಕಾರವು ಲಕ್ಷಿಸುವದಿಲ್ಲ. ಇಂಥ ಪ್ರಸಂಗದಲ್ಲಿ ರೈತರೇನು ಮಾಡಬೇಕೆಂಬದನ್ನು, ಸಿರ್ಸಿ, ಸಿದ್ದಾಪುರ, ಹಿರೇಕೆರೂರ ತಾಲೂಕುಗಳಲ್ಲಿಯ ಧೀರರಾದ ರೈತರು ಬಾರ್ಡೋಲಿಯವರನ್ನು ಎಷ್ಟೊಂದು ಧೈರ್ಯದಿಂದ ಹಿಂಬಾಲಿಸುತ್ತಲಿದ್ದಾರೆಂಬದನ್ನು ಚನ್ನಾಗಿ ನಿರೀಕ್ಷಿಸಿಕೊಳ್ಳಬೇಕು.

ಈ ಮೂರೂ ತಾಲೂಕುಗಳಲ್ಲಿಯ ರೈತರು ಬಹು ಹೀನ ಸ್ಥಿತಿಯಲ್ಲಿದ್ದಾರೆ. ಅವರ ಆರ್ಥಿಕ ಸ್ಥಿತಿಯು ಬಹಳೇ ಕೆಟ್ಟಿದೆ. ಆದ್ದರಿಂದ ಅವರಿಂದ ಈ ಸಲ ಹಪ್ತೇ ಕೊಡುವದು ಸಾಧ್ಯವಿಲ್ಲದಾಗಿದೆ. ಈ ಆರ್ಥಿಕ ಪರಿಸ್ಥಿತಿಯ ಮೂಲಕ ನಮ್ಮಿಂದ ಈ ಸಲ ಹಪ್ತೆ ವಸೂಲ ಮಾಡಬೇಡಿರೆಂದು ಸರಕಾರದವರಿಗೆ ರೈತರು ಹೇಳಿದರು. ಅದನ್ನು ಸರಕಾರವು ಲಕ್ಷಿಸಲಿಲ್ಲ. ಆದುದರಿಂದ ಈಗ ಅಲ್ಲಿ ಸರಕಾರಕ್ಕೂ ರೈತರಿಗೂ ತಿಕ್ಕಾಟ ನಡೆದಿದೆಂಬದನ್ನು ಕನ್ನಡಿಗರು ಬಲ್ಲರು.

ಈ ತಿಕ್ಕಾಟದಲ್ಲಿ ರೈತರು ಎಷ್ಟೇ ಶಾಂತರಾಗಿಯೂ ನ್ಯಾಯಬದ್ಧರಾಗಿಯೂ ಇದ್ದರೂ ಕೂಡ ಸರಕಾರದವರು ಮಾತ್ರ ಅಲ್ಲಿ ಎಷ್ಟೊಂದು ಅನ್ಯಾಯವನ್ನು ಮಾಡುತ್ತಿರುವರೆಂಬದನ್ನೂ, ಅಕ್ರಮಗಳಂತೂ ನಿರ್ಭೀತವಾಗಿ ನಡೆದಿವೆಯೆಂಬದನ್ನೂ, ಇಂದಿನ ತಂತಿಗಳನ್ನೋದುವವರಿಗೆ ತಿಳಿಯದೇ ಇರದು. ಈ ರಣರಂಗವು ಹೀಗೆಯೇ ಸಾಗಿದ್ದಾದರೆ, ಕರ್ನಾಟಕವೆಲ್ಲ ಈ ವೀರ ರೈತರ ಸಹಾಯಕ್ಕಾಗಿ ಧಾವಿಸಬೇಕಾಗುವದೆಂಬದು ಸ್ಪಷ್ಟವಿದೆ. ಸಹಜವಾಗಿ ಸರಕಾರವು ಬಗ್ಗುವದಿಲ್ಲ. ಆದುದರಿಂದ ಕನ್ನಡಿಗರ ಸ್ವಾರ್ಥತ್ಯಾಗವೂ ರಾಷ್ಟ್ರೀಯತ್ವದ ಭಾವನೆಯೂ ಈಗ ರಣರಂಗಕ್ಕೆ ಮುಮುಪಾಗಿ ಹೋಗಲು ಸಿದ್ಧವಾಗಿರಲಿ!

(ಕಂಠೀರವಾತ್ರೆ ಧಾರವಾಡ [illegible])

ಸಿರ್ಸಿ ಸಿದ್ದಾಪುರಗಳಲ್ಲಿ ಕರ್ನಾಟಕದ ರಣ[illegible]ದೆ. ಜಪ್ತಿಗಳು ಅವ್ಯಾಹತವಾಗಿ ನಡೆದಿವೆ. ಸಿರ್ಸಿಯಲ್ಲಿ ೪೦ ಸಿದ್ದಾಪುರದಲ್ಲಿ [illegible] ಜಪ್ತಿಗಳು ಆಗಿರುವವು [illegible]! ಜಪ್ತಿಯ ಕಾಲದಲ್ಲಿ ಅನ್ಯಾಯವೂ ಅಕ್ರಮವೂ ಹೇರಳವಾಗಿ ಸರಕಾರದವರಿಂದ ಜರುಗುತ್ತವೆ. ಬೇರೆ [illegible] ಗಂಟೆಗಳಲ್ಲಿ ಕೂಡ ಜಪ್ತಿಗಳಾಗುತ್ತವೆ. ಅಡಿಗೆಯ ಸಾಮಾನುಗಳೂ ಆಕಳುಗಳೂ ಕೂಡ ಜಪ್ತವಾಗಿರುತ್ತವೆ. ಸಂಬಂಧವಿಲ್ಲದ ಜನರ ಜಪ್ತಿಗಳ ಸಹ [illegible] ಯದ ಹಣವನ್ನು ಕೊಟ್ಟಿದ್ದರೂ ಸಹ ಪಾವತಿಯನ್ನು ಸರಕಾರದವರು ಸಲ್ಲಿಸಲಿಲ್ಲ; ಹಾಗು ಈ ಬಗ್ಗೆ "ಕಂದಾಯವನ್ನು ಕೊಟ್ಟಿಲ್ಲೇಕೆ" ಎಂಬ ನೋಟೀಸನ್ನು ಕೊಟ್ಟಿರುವರು. ಸಿರ್ಸಿ ಮಾಮಲೇದಾರರು [illegible] ಕಡೆಗೆ ಹೋಗಿದ್ದಾರೆ. ಜಪ್ತದ ಮಾಲನ್ನು ಹಳ್ಳಿಗಳಲ್ಲಿಯೇ ಇಡಲು ಅಪ್ಪಣೆ ಕೊಟ್ಟು ಹೋಗಿದ್ದಾರೆ.

ಜಪ್ತಿಯ ಕಾಲದಲ್ಲಿ ಅಕ್ರಮವೇನೂ ಆಗಿಲ್ಲವೆಂದು ಸಿರ್ಸಿಯ ಮಾಮಲೇದಾರರು ಸಾರಿದ್ದಾರೆ. ಮನೆಗಳನ್ನು [illegible], ಸ್ತ್ರೀಧನವನ್ನು ಸಹ ಜಪ್ತಮಾಡುವದು, ಪಂಚನಾಮೆ ಮಾಡದಿರುವದು, ಪಾವತಿಗಳನ್ನು ಕೊಡದಿರುವದೂ ಅನ್ಯಾಯದ ಕೃತಿಗಳೇ ಸರಿ. ಸಿದ್ದಾಪುರದಲ್ಲಿ ಜಪ್ತಿಯ ಸಾಮಾನುಗಳ ಲಿಲಾವುಗಳಾದವು. ಆರು ಜನ ಪಿಕೆಟರರು ಬಂಧಿಸಲ್ಪಟ್ಟಿದ್ದಾರೆ. ಪಿನಲ್ ಕೋಡಿನ ೧೪೩ ಪ್ರಕರಣ [illegible] ಹಾಕಲ್ಪಟ್ಟಿದೆ. ಸರಕಾರಿ ನೌಕರರು ಮಾತ್ರ ಜಪ್ತವಾದ ಮಾಲನ್ನು ಲಿಲಾವಿನಲ್ಲಿ ಕೊಳ್ಳುತ್ತಿದ್ದಾರೆ.

ಜೋಗ ವಿಶ್ವನಾಥರಾಯರು ಎಮ್. ಎಲ್. ಸಿ. ಇವರು ಈ ದಿನ ಧಾರವಾಡದಿಂದ ಹಿರೇಕೆರೂರ, ಸಿರ್ಸಿ, ಸಿದ್ದಾಪುರಗಳ ಕಡೆಗೆ ಹೋದರು. ಅಲ್ಲಿ ಅವರು ಪ್ರತ್ಯಕ್ಷವಾಗಿ ವಸ್ತುಸ್ಥಿತಿಯನ್ನು ನಿರೀಕ್ಷಿಸಲು ಹೋಗಿದ್ದಾರೆ. ಕೆಲ ಕರ್ಣಿಯವರು ಚಳವಳದಲ್ಲಿ ಭಾಗ ತೆಗೆದುಕೊಂಡದ್ದರಿಂದ "ನಿಮ್ಮ ವತನ ಯಾಕೆ ಜಪ್ತ ಮಾಡಬಾರದು? ನೌಕರಿಯಿಂದ ನಿಮ್ಮನ್ನು ಕಿತ್ತಿಂದ ಯಾಕೆ ಮಾಡಬಾರದು?" ಎಂದು ನೋಟೀಸುಗಳು ಹೋಗಿವೆ.

ಸಂಸ್ಥಾನೀ ಪ್ರಜೆಗಳ ಸತ್ಯಾಗ್ರಹ

ಅಹಮ್ಮದಾಬಾದ ತಾ. ೮

ಸೇಟಪೀರಚಂದ ಭೀಖಾಭಾಯಿಇವರು ಸತ್ಯಾಗ್ರಹದಲ್ಲಿ ಭಾಗತೆಗೆದುಕೊಂಡಿದ್ದಕ್ಕಾಗಿ ಪಪದ ತಾಲೂಕದ ಪದ್ದನ್ನು ೧೫ ದಿನಗಳಲ್ಲಿ ಬಿಟ್ಟು ಹೋಗಬೇಕೆಂದು ಅವರಿಗೂ ಅವರ ಕುಟುಂಬದವರಿಗೂ ಮಾಮಲೇದಾರರ ಕಡೆಯಿಂದ ಅಪ್ಪಣೆ ಕೊಡಲ್ಪಟ್ಟಿತ್ತು. ಈಗ ವೀರಚಂದರು ಪೋಲೀಟಿಕಲ್ ಏಜಂಟರಿಗೆ ಪತ್ರ ಬರೆದಿದ್ದು ಗಾಂಧಿ-ಇರ್ವಿನ್ನರ ಒಪ್ಪಂದದ ಪ್ರಕಾರ ಈ ಹುಕುಮನ್ನು ರದ್ದು ಪಡಿಸಲೇಕೆಂದೂ, ಹಾಗೆ ಮಾಡದಿದ್ದರೆ, ತಾವು ತಾಲೂಕದಾರರ ಅಪ್ಪಣೆಯನ್ನು ಮುರಿದು ಸತ್ಯಾಗ್ರಹ ಮಾಡುವೆವೆಂದೂ, ಈ ತಮ್ಮ ಸಂಸ್ಥಾನೀ ಪ್ರಜೆಗಳ ಹಕ್ಕುಗಳಿಗಾಗಿ ಇಡೀ ಹಿಂದುಸ್ಥಾನದಿಂದ ಸ್ವಯಂಸೇವಕರ ತಂಡಗಳೂ ಬರುವವೆಂದೂ ತಿಳಿಸಿದ್ದಾರೆ. (ಅ. ಪ್ರೆ.)

ಅಖಿಲ ಭಾರತ ಸ್ವದೇಶೀ ಸಂಘ

ಬೇರೆ ಬೇರೆ ಪ್ರಾಂತಗಳಲ್ಲಿಯ ಸ್ವದೇಶೀ ಪ್ರಸಾರಕ ಸಂಸ್ಥೆಗಳನ್ನು ಸುಸಂಘಟಿತವಾಗಿ ಮಾಡಲು 'ಅಖಿಲ ಭಾರತ ಸ್ವದೇಶಿ ಸಂಘ' ವನ್ನೊಂದು ಸ್ಥಾಪಿಸುವ ಬಗ್ಗೆ ಕರಾಚಿಯಲ್ಲಿ ಮಾತುಕಥೆಗಳು ನಡೆದವು. ಇದರಲ್ಲಿ ಕರ್ನಾಟಕದ ಶ್ರೀ ಹುಕ್ಕೇರಿ ರಾಮರಾಯರೂ, ಮಳಿಯೆ ಗೋವರ್ಧನರಾಯರೂ ಭಾಗ ತೆಗೆದುಕೊಂಡಿದ್ದರು. ಜುಲೈ ತಿಂಗಳಲ್ಲಿ ಮುಂಬೈಯೊಳಗೆ ಈ ಬಗ್ಗೆ ಸಭೆ ಸೇರುವದು.

ಸತ್ತದ್ದಕ್ಕಾಗಿ ದುಃಖ ಬೇಡ!

ಕಾನಪುರದ 'ಪ್ರತಾಪ' ಪತ್ರಕ್ಕೆ ಮಹಾತ್ಮಾ ಗಾಂಧಿಯವರು ಹೀಗೆ ತಂತಿ ಕೊಟ್ಟಿದ್ದಾರೆ:—

'ನನ್ನ ಅಂತಃಕರಣವು ತಳಮಳಗೊಂಡಿದ್ದರೂ ಕೂಡ, ಗಣೇಶ ಶಂಕರ ವಿದ್ಯಾರ್ಥಿಗಳಂಥವರ ವೀರ ಮರಣಕ್ಕಾಗಿ ದುಃಖೋದ್ರೇಕ ತೆಗೆಯಲು ನನ್ನ ಮನಸ್ಸು ಒಲ್ಲೆನ್ನುತ್ತದೆ. ಇಂದಿಲ್ಲದಿದ್ದರೂ ಒಂದು ದಿನ, ಅವರ ಈ ಮರಣದ ನಿರಪರಾಧಿ ರಕ್ತದಿಂದ ಹಿಂದು ಮುಸಲ್ಮಾನರ ಐಕ್ಯದ ಗಚ್ಚು ಗಟ್ಟಿಯಾಗೇ ಆಗುವದು. ಆದ್ದರಿಂದ ಅವರ ಕುಟುಂಬದವರಿಗಾಗಿ ನಾನು ದುಃಖಪ್ರದರ್ಶನ ಮಾಡದೇ ಅವರನ್ನು ಅಭಿನಂದಿಸುತ್ತೇನೆ. ಈ ವೀರನ ಉದಾತ್ತವಾದ ಮೇಲ್ಪಂಕ್ತಿಯು ಸುಂಕುರೋಗದಂತೆ ಹಬ್ಬಲಿ!

ರಾಯಚೂರಲ್ಲಿ ಸಭಾಬಂದಿ!

[ನಮ್ಮ ಸ್ವಂತ ಸುದ್ದಿಗಾರರಿಂದ]

ತಾ. ೨೯-೩-೩೧ ನೇ ದಿನ ಇಲ್ಲಿಯ ಕರ್ನಾಟಕ ತರುಣ ಸಂಘದ ವಾರ್ಷಿಕೋತ್ಸವವು ಶ್ರೀಮಾನ್ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗುವದೆಂದು ಆಮಂತ್ರಣ ಪತ್ರಿಕೆಗಳನ್ನು ಕೊಟ್ಟಿದ್ದಲ್ಲದೇ ಊರಲ್ಲಿ ಹಸ್ತಪತ್ರಿಕೆಗಳನ್ನು ಸಹ ಹಂಚಲಾಗಿತ್ತು. ಆ ದಿನ ನಿಯಮಿತ ವೇಳೆಗೆ ನಿಯಮಿತ ಸ್ಥಳಕ್ಕೆ ಹೋಗಲು "ಸರಕಾರದ ಪರವಾನಿಗೆ ಇಲ್ಲದ್ದರಿಂದ ಸಭೆಯನ್ನು ನಿಲ್ಲಿಸಿರುತ್ತದೆ" ಎಂದು ಕಾಗದವನ್ನು ಹಚ್ಚಲಾಗಿತ್ತು. ಇಲ್ಲಿ ವಾರ್ಷಿಕೋತ್ಸವಕ್ಕೂ ಪರವಾನಗಿ ಬೇಕೆಂದ ಮೇಲೆ ಇಲ್ಲಿಯ ಪ್ರಜೆಗಳು ಎಷ್ಟರಮಟ್ಟಿಗೆ ಸ್ವತಂತ್ರರಿರುವರೆಂಬದನ್ನು ಬರಿಯಬೇಕಾದುದಿಲ್ಲ. "ತಾಲೂಕದಾರರು ಬಂದಿರುವರು. ಪರವಾನಿಗೆ ದೊರಕಿರುವದು ಸಂಜೆಯ ೫-೩೦ ಕ್ಕೆ ಸಭೆಯು ಜರಗುವದೆಂದು" ಮರುದಿನವೇ ಸುಮಾರು ೩ ಗಂಟೆಗೆ ಹಸ್ತ ಪತ್ರಿಕೆಗಳನ್ನು ಹಂಚಲಾಯಿತು. ತಾಲೂಕದಾರ (Collector)ರು ಊರಲ್ಲಿರಲಿಲ್ಲವೆಂದು ಸ್ಥಾನಿಕ ಉತ್ಸವಗಳನ್ನು ನಿಲ್ಲಿಸಬೇಕಾಯಿತು. ಇದೊಳ್ಳೆಯ ನ್ಯಾಯ! ಫರ್ಮಾನಿನ ಪ್ರಕಾರ ಮುಂಚೆಯೇ ಪರವಾನಿಗೆಗಾಗಿ ಅರ್ಜಿ ಹಾಕಿದ್ದರೂ ಪರವಾನಿಗೆ ಸಿಗದಿದ್ದುದು ಆಶ್ಚರ್ಯ! ಅಂತು ಇಂದು ಉತ್ಸವವು ಜರಗಿತು. ಸರಕಾರದವರು ಸಭೆಯನ್ನು ನಿಲ್ಲಿಸಿದ್ದು ಇದೇ ಮೊದಲನೆಯದಾದುದರಿಂದ ಈ ಸಭೆಗೆ ಇಂದು (೩೧-೩-೩೧) ಜನರು ಹೆಚ್ಚು ಉತ್ಸುಕತೆಯಿಂದ ಬಂದಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಈ ಸಭೆಯಲ್ಲಿ ಮೊದಲು ರಾ. ಗು. ಜೋಶಿಯವರು ಶ್ರೀ ಕೃಷ್ಣರಾಯರ ಪರಿಚಯವನ್ನು ಸ್ವಲ್ಪದರಲ್ಲಿಯೇ ಮಾಡಿ ಅವರನ್ನು ಅಧ್ಯಕ್ಷಸ್ಥಾನಕ್ಕೆ ಬರಲು ಬಿನ್ನಯಿಸಿಕೊಂಡರು. ನಂತರ ಇಬ್ಬರು ಬಾಲಕರು ಪ್ರಾರ್ಥನಾ ಪದಗಳನ್ನು ಹಾಡಿದರು. ನಂತರ ಕಾರ್ಯಕ್ರಮದಲ್ಲಿ ಸೂಚಿಸಿದಂತೆ ಸಂಘದ ವರದಿಯನ್ನು ಓದಲಾಯಿತು. ಆ ಮೇಲೆ ಶ್ರೀ ಗರೂಡರು ಸ್ವಲ್ಪದರಲ್ಲಿಯೇ ಭಾಷಣವನ್ನು ಮಾಡಿದರು. ಅಲ್ಲಿಂದ ಅಧ್ಯಕ್ಷರು ಅತ್ಯಂತ ಗಂಭೀರ ವಾಣಿಯಿಂದ ಇಲ್ಲಿಯ ಜನರಿಗೆ ಕರ್ನಾಟಕದ ಇತಿಹಾಸದ ಪರಿಚಯ ಮಾಡಿಕೊಟ್ಟರಲ್ಲದೆ ಕನ್ನಡದ ಬಗ್ಗೆ ಜನರಲ್ಲಿ ಅಭಿಮಾನ ಹುಟ್ಟುವ ಹಾಗೆ ತಮ್ಮ ಸಿಂಹ ಗರ್ಜನೆಯಿಂದ ಗುಡುಗಿದರು. ತರುಣರನ್ನು ಹುರಿದುಂಬಿಸಿದರು. ಇಂಥ ಕರ್ನಾಟಕದ ಶಾರ್ದೂಲರೇ ಉತ್ಸವದ ಅಧ್ಯಕ್ಷರಾಗಿರಲು ಇದರ ಸೊಬಗನ್ನು ಹೇಳುವದೇನು! ಆದರೆ ಮುಂಚಿಯ ದಿನ ಸಭೆಯು ನಿಂತದಕ್ಕೆ ಸ್ವಲ್ಪ ವಿಷಾದದ ಕಳೆಯು ಕಂಡುಬರುತ್ತಿದ್ದಿತು. ಈ ಸಭೆಯಲ್ಲಿ ಒಬ್ಬಿಬ್ಬ ಕನ್ನಡ ಬಲ್ಲ ಪೋಲೀಸರು ಒಳಗೆ ಕುಳಿತು ಭಾಷಣವನ್ನು ಬರಿದುಕೊಂಡರೆಂಬ ದಟ್ಟ ವಾರ್ತೆ.

ತಾ. ೩೦-೩-೩೧ ನೇ ದಿನ (ಇಲ್ಲಿಗೆ ಹೊಸದಾಗಿ ಬರಬೇಕಾದ) ತಾಲೂಕದಾರರು, (Collector) ಮುಂಜಾವಿನ ೯ ರ ಗಾಡಿಗೆ ಆಗಮಿಸಿದರು. ಸ್ವಾಗತಕ್ಕಾಗಿ ಊರಲ್ಲಿಯ ಎಲ್ಲ ಅಧಿಕಾರಿಗಳು, ಒಬ್ಬಿಬ್ಬ ವಕೀಲರು ಅನೇಕ ಕಾರಕೂನರು ಬಂದಿದ್ದರು. ಹೂವಿನ ಮಾಲೆಗಳು ಮುಗಿದವು. ನಂತರ ಕಾಳೆ ಕೊಂಬು ಬೀನಬಾಜಾ ಮುಂತಾದ ವಾದ್ಯಗಳೊಂದಿಗೆ ಮೆರವಣಿಗೆಯಿಂದ ಇವರಿಗಾಗಿ ನಿಯಮಿಸಿದ ಭುವನಕ್ಕೆ ಕರೆದೊಯ್ದರು.

ಗಲಗಲಿ

ತಾ॥ ೧-೪-೩೧ ನೇ ದಿನ ಹುತಾತ್ಮರಾದ ಭಗತಸಿಂಗ, ರಾಜಗುರು, ಸುಖದೇವ ಇವರ ಪತ್ತನೆ ದಿವಸದ ನಿಮಿತ್ತ ಗಲಗಲಿಯಲ್ಲಿ ಸಭೆ ಸೇರಿತ್ತು. ಆಗ್ಗೆ ಸಭೆಯಲ್ಲಿ ೧ ಹುತಾತ್ಮರ ಅಂಭಿನಂದನ ೨ ಅವರು ಅನುಸರಿಸಿದ ಅತ್ಯಾಚಾರಕ್ಕಾಗಿ ಅಸಮ್ಮತಿ ಹಾಗು ೩ ಇಂಥ ನರರತ್ನಗಳ ಹಾನಿಯಿಂದಾದ ದುಃಖಪ್ರದರ್ಶನ ಇವೇ ಮುಂತಾದ ಗೊತ್ತುವಳಿಗಳು ಪಾಸಾದವು.

ಹುಡುಗಾಟಿಗೆಯಿಂದ ಸಾವು

[illegible] ಭಗತ [illegible] ಆಟವನ್ನು ಹುಡುಗರು ಪ್ರಾರಂಭಿಸಿದರು. ಒರ್ವ ಭಗತಸಿಂಗನಾದ. ಕೆಲವು ವೇಷಧಾರಿಗಳಾದ ಹುಡುಗರು [illegible] ಗಲ್ಲಿಗೇರಿಸಲು [illegible] ಅವನನ್ನು ನಿಲ್ಲಿಸಿ, [illegible] ಗೆ ಒಂದು ಹಗ್ಗ ಕಟ್ಟಿ ಆ ಮೇಲೆ ಸಪ್ಪಲನ್ನು ತೆಗೆದರು, ಕೂಡಲೇ ೧೨ ವರ್ಷದ ಆ ಬಾಲಕನ ಸಂಕಟಬಡುತ್ತ ಒದ್ದಾಡಹತ್ತಿದನು. ಅದು [illegible] ಆಟಕ್ಕಾಗಿ ಹಾಗೆ ಒದರಾಡುವನೆಂದು ಕೆಲವರೆಂದರು. ಕೆಲವರು ನಿಜವಾಗಿಯೂ ಗಾಬರಿಯಾಗಿ ಓಡಿ ಹೋದರು. ಕಡೆಗೆ ಆ ಅರ್ಭಕನು ಸತ್ತನು.

ಜಾಹೀರಾತುದಾರರಿಗೆ ಅಲಭ್ಯ ಲಾಭ!

'ಕನ್ನಡಿಗ'ನು ದಿನಾಲು ಎರಡುಸಲ ಹೊರಡಹತ್ತಿರುವನು. ಇದರಿಂದ ಪ್ರತಿದಿನ ಸಾವಿರಗಟ್ಟಲೆ ಜನರ ಕೈಸೇರುತ್ತಿರುವನೆಂಬದು ಸ್ಪಷ್ಟವಿದೆ. ಆದ್ದರಿಂದ ಜಾಹೀರಾತುಗಳನ್ನು ಕೊಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

'ಕನ್ನಡಿಗ'ನ ಕಾರ್ಯಾಲಯ
ಬಾಗಲಕೋಟೆ

ಈ ಪತ್ರಿಕೆಯು ವೆಂಕಟೇಶ [illegible] ಕರೂರ ಇವರಿಂದ ಬಾಗಲಕೋಟೆ ವಿದ್ಯಾರ್ಥಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು

ರೆ ನಂ. ಬಿ. ೨೭೮೮

ನಿತ್ಯ ಪತ್ರ.

ಬೆಲೆ ೦-೧-೩.

...परवशं दुःखं । सर्वमात्मवशं सुखम् ॥—मनु.

ಕನ್ನಡಿಗ

KANNADIGA BI-WEEKLY

ನಿತ್ಯಪತ್ರಿಕೆಯ ವರ್ಗಣೀ ದರಗಳು

ಪೇಸ್ಟ್ಖರ್ಚದವರಿಗೆ

೧೨ ತಿಂಗಳಿಗೆ ೯—೦—೦
೬ ,, ೫—೦—೦
೩ ,, ೩—೦—೦
೧ ,, ೧—೮—೦

ಸ್ಥಳಿಕರಿಗೆ

೧೨ ತಿಂಗಳಿಗೆ ೭—೦—೦
೬ ,, ೪—೦—೦
೩ ,, ೨—೮—೦
೧ ,, ೧—೦—೦

ನಿತ್ಯಪತ್ರಿಕೆಯ ಸರಕಾರಿ ಹಾಗು ಜಾಹಿರಾತು ಪ್ರಕಟಣೆಗಳ ದರಗಳು

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟ— ಮಂಗಳವಾರ ಮಿತಿ ಚೈತ್ರ ಬಹುಳ ೫ ಶಕೆ ೧೮೫೨ ತಾ॥ ೬—೪—೩೦ [ಸಂಚಿಕೆ ೮೯

ವರ್ಕಿಂಗ ಕಮೀಟಿಯವರು

ಮಹಾತ್ಮರಿಗೆ ಸರ್ವಾಧಿಕಾರ ಕೊಟ್ಟರು

ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸದ ಪಕ್ಷದಿಂದ ಮಾತಾಡಲು ಮಹಾತ್ಮಾ ಗಾಂಧಿಯವರಿಗೇನೇ ಸಂಪೂರ್ಣ ಅಧಿಕಾರ ಕೊಟ್ಟಿದೆ ಎಂಬುದಾಗಿ ವರ್ಕಿಂಗ ಕಮಿಟಿಯವರು ಒಂದು ಠರಾವನ್ನು ಪಾಸುಮಾಡಿಕೊಂಡಿದ್ದಾರೆ. (ಅ, ಪ್ರ,)

ಅಖಿಲ ಭಾರತ ಮುಸಲ್ಮಾನ ಪರಿಷತ್ತು

ದಿಲ್ಲಿ ತಾ। ೫

ಮೌಲಾನಾ ಶೌಕತಅಲ್ಲಿಯವರ ಭಾಷಣ ಮುಗಿದ ನಂತರದಲ್ಲಿ, ಮೌಲಾನಾ ಮಹಮ್ಮದ ಅಲ್ಲಿ, ಪಂಡಿತ ಮೋತೀಲಾಲ ನೆಹರೂ ಇವರ ನಿಧನದ ಬಗ್ಗೆ ದುಃಖಪ್ರದರ್ಶಕ ಠರಾವುಗಳು ಪಾಸುಮಾಡಲ್ಪಟ್ಟವು. ಪರಿಷತ್ತು ಇನ್ನೂ ನಡೆದಿದೆ. (ಅ, ಪ್ರ.)

ಸತ್ಯಾಗ್ರಹಿಗಳ

ಅಹಿಂಸಾವಾದಿಗಳಲ್ಲವಂತೆ !

(ಸ್ಪೇಶಲ್ ತಂತಿ ಮುಂಬಯಿ, ತಾ। ೬)

ತಾ। ೫ ನೆಯ ದಿವಸ ಮಧ್ಯಾನ್ಹ, ದಿಲ್ಲಿಯಲ್ಲಿ ಕೂಡಿದ ಅಖಿಲ ಭಾರತ ಮುಸ್ಲಿಮ್ ಪರಿಷತ್ತಿನಲ್ಲಿ ಮೌಲಾನಾ ಶೌಕತಅಲ್ಲಿಯವರು ಭಾಷಣಮಾಡಿ, ಮುಸಲ್ಮಾನರ ಬೇಡಿಕೆಗಳು ಪೂರ್ಣವಾಗದ ವಿನಾ ಅವರು ಊರ್ಜಿತಸ್ಥಿತಿಯನ್ನು ಹೊಂದಲಾರರು ಎಂಬುದಾಗಿ ಹೇಳಿದರು.

ಪರಿಷತ್ತಿನಲ್ಲಿ ಎಷ್ಟೋ ಠೀವರ್ಮಾನುಗಳು ಗೊತ್ತುಮಾಡಲ್ಪಟ್ಟಿದ್ದು, ಒಂದರಲ್ಲಿ 'ಸತ್ಯಾಗ್ರಹಿಗಳು ಅಹಿಂಸಾ ವ್ರತವನ್ನು ಪಾಲಿಸುತ್ತಿರುವರೆಂಬುದು ಕೇವಲ ತೋರಿಕೆಯದಾಗಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವದರಲ್ಲಿ ಬಂದಿದೆ.

ವಲ್ಲಭಭಾಯಿಯವರು

ಕಾನಪುರಕ್ಕೆ ಹೊರಟರು.

(ಸ್ಪೇಶಲ್ ತಂತಿ, ಮುಂಬಯಿ ತಾ॥ ೬)

ಕಾಂಗ್ರೆಸ್ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರು ಶ್ರೀ. ಜವಹರಲಾಲ ಬಜಾಜರೊಡನೆಗೂಡಿ ನಿನ್ನಿನ ದಿನ ದಿಲ್ಲಿಯಿಂದ ಕಾನಪುರಕ್ಕೆ ಹೊರಟುಹೋದರು.

ದಿಲ್ಲಿ, ತಾ॥ ೫.

ಸರದಾರ ವಲ್ಲಭಭಾಯಿ ಪಟೇಲ, ಸೇಟ ಜಮನಾಲಾಲ ಬಜಾಜ, ಮೌಲಾನಾ ಅಬ್ದುಲ್ ಕಲಮ್ ಆಜಾದ್, ದೇವಿದಾಸಗಾಂಧಿ ಇವರೆಲ್ಲರೂ ಇವತ್ತಿನ ದಿವಸ ಕಾನಪುರಕ್ಕೆ ಪ್ರಯಾಣ ಬೆಳಿಸಿದರು. (ಅ, ಪ್ರ.)

ಮುಸಲ್ಮಾನ ಮುಖಂಡರೊಡನೆ

ವ್ಹಾಯಿಸರಾಯರ ಚರ್ಚೆ.

ದಿಲ್ಲಿ ತಾ॥ ೫

ಇಲ್ಲಿ ಸೇರಿದ ಮುಸಲ್ಮಾನ ಪರಿಷತ್ತಿನಲ್ಲಿ ಭಾಗವಹಿಸಲು ಬಂದಿರುವ ಸರ್ ಮಹಮ್ಮದ ಶಾಫಿ, ಸರ್ ಮಹಮ್ಮದ ಇಕ್ಬಾಲ್, ಮಿಯಾ ಸರ್ ಶಹಾ ನವಾಜ, ಮಲಿಕ ಫಿರೋಜ ಖಾನ, ಸರ್ ಎಸ್. ಎನ್. ಭೂತೋ ಇವರನ್ನು ವ್ಹಾಯಿಸರಾಯರು ಈಹೊತ್ತಿನ ದಿನ ಮಧ್ಯಾನ್ಹದಲ್ಲಿ ತಮ್ಮಲ್ಲಿಗೆ ಕರೆಯಿಸಿಕೊಂಡು ೧॥ ಗಂಟೆಯ ವರೆಗೆ ಅವರೊಡನೆ ವಿಚಾರವಿನಿಮಯ ಮಾಡಿದರು. ಯಾವ ವಿಷಯವನ್ನು ಕುರಿತು ಚರ್ಚೆನಡೆಯಿತೆಂಬದು ತಿಳಿದುಬಂದಿಲ್ಲ (ಅ. ಪ್ರ.)

(ಸ್ಪೆಶಲ್ ತಂತಿ, ಮುಂಬಯಿ ತಾ॥ ೬)

ತಾ॥ ೫ನೆಯ ದಿವಸ ಮಧ್ಯಾನ್ಹದಲ್ಲಿ ವ್ಹಾಯಿಸರಾಯರು ಮುಸಲ್ಮಾನ ಮುಖಂಡರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು ಅವರೊಡನೆ ಚರ್ಚೆಮಾಡಿದರು ಚರ್ಚೆಯ ಸಂಗತಿಗಳು ತಿಳಿದ ಬಂದಿಲ್ಲ. ಆದರೂ ಇಷ್ಟು ಹೀಗೆ ಹೇಳಲು ಬರುವಂತಿದೆ ಏನೆಂದರೆ— ಜಾತಿ ಜಾತಿಗಳಲ್ಲಿಯ ತೊಡಕನ್ನು ಈ ಬಿಡಿಸದಿದ್ದರೆ ಅದರಿಂದ ದೇಶದ ಪ್ರಗತಿಯು ಕುಂಠಿತವಾಗುವದೆಂಬದನ್ನು ಜಾತಿಜಾತಿಗಳಲ್ಲಿ ಒಪ್ಪಂದವಾಗಿ ತೀರಬೇಕಾಗುವದು. ಇಲ್ಲಿ ಸಂಘ ಮಾಡಿದ್ದಲ್ಲಿ ಇಂಗ್ಲಂಡದಲ್ಲಿ ನಡೆಯುವ ಈ ಬಗ್ಗೆ ಪ್ರಮುಖವಾಗಿ ಒಪ್ಪಂದಮಾಡಿಕೊಳ್ಳಬೇಕೆಂಬದನ್ನು ತಿಳಿಸಲಿಕ್ಕೇನೇ ಅವರನ್ನು ವ್ಹಾಯಿಸರಾಯರು ಕರೆಕಳುಹಿದ್ದರು.

ವನೋಡ ತಾಲೂಕದಾರರಿಗೆ

ಬಹಿಷ್ಕಾರದ ಬಿತ್ತು.

ಕರ್ನಾಟಕ ಪ್ರಾಂತದ ವನೋಡ ತಾಲೂಕದ ತಾಲೂಕದಾರರು ಬೆಳಗಾವಿ ಕಾಂಗ್ರೆಸ್ ಕಮೀಟಿಯ ಸಾಖರಸಾದ ಮಂಗನಲಾಲ ಶಾಸ್ತ್ರಿ ಎಂಬ ಮುಖಂಡ ಮಂಗನಲಾಲ ಇವರ ಮೇಲೆ ನೋಟೀಸು ಹೊರಡಿಸಿ, ತಮ್ಮ ಹದ್ದಿನಲ್ಲಿ ಸಂಚರಿಸಕೂಡದಾಗಿ ಅವರಿಗೆ ಅಪ್ಪಣೆ ವಿಧಿಸಿದ್ದಾರೆ.

ತಾಲೂಕ ಕಾಂಗ್ರೆಸ್ ಕಮೀಟಿಯವರು ತಾಲೂಕದಾರರ ಮೇಲೆ ಸಾರ್ವಜನಿಕ ಬಹಿಷ್ಕಾರ ಸಾರಿದ್ದು, ಅವರ ಬರಲಿಕ್ಕೆ ಗಿರಣಿಯವರಿಂದ ಅಕ್ಕಿಯನ್ನು ಕೊಳ್ಳಬಾರದಾಗಿ ವ್ಯಾಪಾರಸ್ಥರಿಗೆ ಬಿನ್ನವಿಸಿಕೊಂಡಿದ್ದಾರೆ.

ಸಾವಿರಾರು ಕುರುಬರು

ಅನ್ನನೀರಿಲ್ಲದೆ ಪ್ರಾಣಬಿಟ್ಟರು

(ಸ್ಪೇಶಲ್ ತಂತಿ, ಮುಂಬಯಿ, ತಾ॥ ೬)

ಇರಾಕ ಪ್ರಾಂತದ ದಕ್ಷಿಣ ಭಾಗದಲ್ಲಿ ಸಾವಿರಾರು ಜನ ಕುರುಬರು, ಹೊಟ್ಟೆಗೆ ಹಿಡಿ ಹಿಟ್ಟಿಲ್ಲದೆ ಹಾಗು ಕುಡಿಯಲಿಕ್ಕೆ ಕಾಳು ನೀರಿಲ್ಲದೆ ಪ್ರಾಣ ಬಿಡುತ್ತಿರುವರಾಗಿ 'ಟಾಯಿಮ್ಸ' ಪತ್ರಿಕೆಯ ಬಗದಾದದ ಸುದ್ದಿಗಾರನು ಆ ಪತ್ರಿಕೆಗೆ ತಿಳಿಸಿದ್ದಾನೆ.

ಮಹಾತ್ಮರ

ದೇಹಸ್ಥಿತಿ ಚನ್ನಾಗಿಲ್ಲ.

ದಿಲ್ಲಿ, ತಾ॥ ೫.

ಮಹಾತ್ಮರ ಪ್ರಕೃತಿಯು ಇನ್ನೂ ಸುಧಾರಿಸಿಲ್ಲ. ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳಲು ಡಾಕ್ಟರರು ಅವರಿಗೆ ಆಜ್ಞಾಪಿಸಿದ್ದರಿಂದ, ಅವರು ಇವತ್ತಿನ ದಿವಸ ದಿರ್ಘಕಾರ್ಯಕ್ಕಾಗಿ ತಮ್ಮ ದಿಡೀರಮವನ್ನು ಬದಲಿಸಿದರು. (ಅ. ಪ್ರ.)

ಮುಖ್ಯಪ್ರಧಾನರಿಗೆ

ಬರ್ಮಾಪ್ರತಿನಿಧಿಗಳ ತಾರು

ದುಂಡ ಮೇಜಿನ ಪರಿಷತ್ತಿನ ಬರ್ಮಾ ಪ್ರಾಂತದ ನಾಲ್ಕು ಜನ ಪ್ರತಿನಿಧಿಗಳು, ಮುಖ್ಯಪ್ರಧಾನರ, ಮಿ. ಬೆನ್, ಲಾರ್ಡ ರಿಡಿಂಗ್, ಪ್ಯಾಂಟ ಪೀಲ, ಮತ್ತು ವಿ. ವಿಜ್ಞೂಫರ್ಟ ಇವರಿಗೆ ತಾರು ಮಾಡಿ, ವಿಭಕ್ತ ಬರ್ಮಾಪ್ರಾಂತಕ್ಕೆ ಕೊಡತಕ್ಕದ್ದಾಗಿರುವ ರಾಜ್ಯಪದ್ಧತಿಯು. ಹಿಂದ ಸ್ಥಾನಕ್ಕೆ ಕೊಡಲ್ಪಡುವ ರಾಜ್ಯಪದ್ಧತಿಗಿಂತ ಕಡಿಮೆ ತಪ್ಪಿರಕೂಡದಾಗಿ ತಿಳಿಸಿದ್ದಾರೆ.

ಲಾಹೋರದಲ್ಲಿ

ಪಂ ಮಾಲವೀಯರ ಭಾಷಣ.

ತಾ॥ ೪ ನೆ ದಿವಸ ಸಂಜೆ ವದನ ಮೋಹನ ಮಾಲವೀಯರು ಲಾಹೋರದ ಮೋರಿಗೇಟಿನ ಸಾರ್ವಜನಿಕವಾಗಿ ಭಾಷಣ ಮಾಡುವಾಗ ಸರದಾರ ಭಗತಸಿಂಗ ಮೊದಲಾದವರನ್ನು ಗಲ್ಲಿಗೇರಿಸಿದ ಬಗ್ಗೆ ಮೊದಲು ದುಃಖವನ್ನು ವ್ಯಕ್ತಪಡಿಸಿ, ಜಾತಿಜಾತಿಗಳಲ್ಲಿ ಐಕ್ಯವನ್ನು ಪ್ರಸ್ಥಾಪಿಸಲ ಹಾಗು ಪರದೇಶಿ ಬಟ್ಟೆಯನ್ನ ಸಂಪೂರ್ಣವಾಗಿ ಬಹಿಷ್ಕರಿಸಲು ಕೇಳಿಕೊಂಡರು.

ಪಂಡಿತ ಮಾಲವೀಯರಿಗೆ

ದುಂಡು ಮೇಜಿನ ಕರೆ ಬಂದಿಲ್ಲ

ಪಂಡಿತ ಮದನ ಮೋಹನ ಮಾಲವೀಯರಿಗೆ ವ್ಹಾಯಿಸರಾಯರಿಂದ ದುಂಡು ಮೇಜಿನ ಕರೆ ಬಂದಿದೆಯೆಂಬುದಾಗಿ ಪ್ರಕಟವಾದ ವಾರ್ತೆಯು ನಿಜವಾದದ್ದಿಲ್ಲವಾಗಿ ಪಂಡಿತ ಗೋವಿಂದ ಮಾಲವೀಯರು ಓರ್ವ ಪತ್ರಿಕಾ ಪ್ರತಿನಿಧಿಗೆ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ

ಬಾಂಬು ಹಾರಿತು?

ತಾ ೩ ನೆಯ ದಿವಸ ಬಾಪಟಗಲ್ಲಿಯಲ್ಲಿಯ ಓರ್ವ ಉಪ್ಪಾರನ ಮನೆಯಲ್ಲಿ ಒಮ್ಮಿಂದೊಮ್ಮೆ ಒಂದು ಪದಾರ್ಥವು ಸ್ಫೋಟವಾಯಿತು. ಆ ಸಮಯದಲ್ಲಿ ಉಪ್ಪಾರನ ೬ ವರ್ಷದ ಮಗಳೂ ಹಾಗೂ ೪ ವಸದ ಮತ್ತು ೧೧ ವರ್ಷದ ಇಬ್ಬರು ಹುಡುಗರು ಅಲ್ಲಿ ಆಡುತ್ತಿದ್ದರು. ೧೧ ವರ್ಷದ ಹುಡುಗನಿಗೆ ಭಯಂಕರ ಪೆಟ್ಟು ತಗುಲಿದ್ದರಿಂದ ಆ ಹುಡುಗನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು ಮರುದಿನ ಆ ಹುಡುಗನು ಅಲ್ಲಿ ಪ್ರಾಣ ಬಿಟ್ಟನು. ಉಳಿದವರಿಗೆ ಅಷ್ಟೇನು ಅಪಾಯ ಸಂಭವಿಸಿರುವದಿಲ್ಲ.

ಸ್ಫೋಟವು ಸಂಭವಿಸಿದ ಸ್ಥಳವನ್ನು ಪರೀಕ್ಷೆ ಮಾಡಿ ನೋಡಲಾಗಿ ಅಲ್ಲಿ ಕೆಲವು ಲೋಹದ ತುಣುಕುಗಳು ಸಿಕ್ಕಿದ್ದರಿಂದ ಅದು ಬಾಂಬು ಇರಬಹುದೆಂದು ತರ್ಕವಾಡುವದರಲ್ಲಿ ಬಂದಿದೆ ಆದರೆ ಅಲ್ಲಿ ಬಾಂಬು ಹೇಗೆ ಒಗೆಯಲ್ಪಟ್ಟಿತೆಂಬುದು ಮಾತ್ರ ತಿಳಿಯದಂತಾಗಿದೆ ಪೋಲೀಸರು ಈ ಬಗ್ಗೆ ಶೋಧ ನಡಿಸಿದ್ದಾರೆ.

ಇತಿವೃತ್ತ.

ರಾಷ್ಟ್ರೀಯ ಸಪ್ತಾಹದ ಪ್ರಥಮ ದಿನದ ನಿಮಿತ್ತವಾಗಿ ನಿನ್ನಿನ ದಿವಸ ಇಲ್ಲಿ ನಗರಸಂಕೀರ್ತನ, ರಾಷ್ಟ್ರಧ್ವಜವಂದನೆ, ಖಾದಿ ಮಾರಾಟ, ಸಭೆ ಮೊದಲಾದ ಕಾರ್ಯಕ್ರಮಗಳು ಜರುಗಿದವು

ಇವತ್ತಿನ ದಿವಸ ಮುಂಜಾನೆ ೮ ಗಂಟೆಗೆ ಮುನಿಸಿಪಾಲಿಟಿ ಹತ್ತರ ರಾಷ್ಟ್ರಧ್ವಜವಂದನೆಯೂ ಮತ್ತು ಸಂಜೆಯ ೭ ಘಂಟೆಗೆ ಧನಕಟ್ಟಿ ಚೌಕದಲ್ಲಿ ಸಾರ್ವಜನಿಕ ಸಭೆಯೂ ಜರಗತಕ್ಕವೆ.

ಕನ್ನಡಿಗ

[illegible]

ಶ್ರೀ ವಿದ್ಯಾರ್ಥಿಯವರ ವೀರ ಮರಣ

ಸಂಯುಕ್ತ ಪ್ರಾಂತದ ಪ್ರಸಿದ್ಧ ರಾಷ್ಟ್ರ[illegible] 'ಮುಖಂಡರಾದ' ಶ್ರೀ ಗಣೇಶಶಂಕರ ವಿದ್ಯಾರ್ಥಿಯವರು ಕಾನಪುರ ದಂಗೆಯಲ್ಲಿ ಮುಸಲ್ಮಾನರಿಂದ ಕೊಲ್ಲಲ್ಪಟ್ಟಿರುವರು. ಆ ಸಂಬಂಧವಾಗಿ ಈಗ ತಿಳಿದುಬರುವದೇನಂದರೆ:—

ಶ್ರೀ ವಿದ್ಯಾರ್ಥಿಯವರು ಮಹಾತ್ಮಾ ಗಾಂಧಿಯವರ ಕಟ್ಟರ ಅನುಯಾಯಿಗಳಿದ್ದುದರಿಂದ ದಂಗೆಯುದ್ಭವಿಸಿದ ವಾರ್ತೆಯು ತಮಗೆ ತಿಳಿದ ಕೂಡಲೆ ಅವರು [illegible] ಮುಂಜಾನೆ [illegible] ಘಂಟೆಗೆ ದಂಗೆಯ ಮುಖ್ಯ ಕ್ಷೇತ್ರವಾದ ಬಂಗಾಲಿ ಮೊಹೊಲಾ ಎಂಬಲ್ಲಿಗೆ ಒಬ್ಬರೇ ಹೋದರು. ಆ ಸ್ಥಳದಲ್ಲಿ ಅವರು [illegible] ಜನ ಮುಸಲ್ಮಾನ ಸ್ತ್ರೀಯರನ್ನೂ ಹಾಗು [illegible] ಹುಡುಗರನ್ನೂ ಸುಡುತ್ತಿರುವ ಮನೆಗಳೊಳಗಿಂದ ಹೊರಗೆ ತೆಗೆದು ಅವರ ಜೀವವುಳಿಸಿದರು. ಹಾದಿಯಲ್ಲಿ ಗಾಯ [illegible] ಬಿದ್ದವರನ್ನು ಸ್ವತಃ ಉಪಚರಿಸಿಯವರು, ಅವರನ್ನು ಆಸ್ಪತ್ರೆಗೆ ಮುಟ್ಟಿಸಿಯೂ ಅವರ ಸೇವೆ ಮಾಡಿದರು. ಈ ಭರದಲ್ಲಿ ಅವರ [illegible] ಹರಿದು ಹೋದವು. ಅವರ ಕಾಲಿಗೆ ಒಂದುಕಡೆಗೆ ಭಯಂಕರ ಗಾಯವಾಯಿತು. ಆದರೂ ಅವರು ಅತ್ತ ಲಕ್ಷ್ಯ [illegible] ಅನ್ನ ನೀರುಗಳ [illegible] [illegible] ಘಂಟೆಯ ತನಕ ಆ ಸ್ಥಳದಲ್ಲಿ ಆಡ್ಡಾಡುತ್ತ [illegible], [illegible], ನಾಯಿಸರಾಕ [illegible], [illegible] ಮುತ್ತು ನಾಯಿಸರಾಕ. ಈ ಸ್ಥಳಗಳ [illegible] ಜನರಿಗೆ ಸಹಾಯ ಮಾಡಲು ಅತ್ತ [illegible] ಹೋಗಿ ಎಷ್ಟೋ ಜನರ ಪ್ರಾಣ [illegible]. ನಾಯಿಸರಾಕದಲ್ಲಿ ಒಂದು ಕಡೆಗೆ ಕೆಲವು ಮುಸಲ್ಮಾನರು ಅವರ ಮೇಲೆ ಏರಿ [illegible]. ಶ್ರೀ ವಿದ್ಯಾರ್ಥಿಯವರ ಜೊತೆಯಲ್ಲಿದ್ದ [illegible] ಮುಸಲ್ಮಾನ ಸ್ವಯಂಸೇವಕರು ವಿದ್ಯಾರ್ಥಿಯವರ ಮೇಲೆ ಕೈಯೆತ್ತಬೇಡಿರೆಂದು ಅವರಿಗೆ ಪರಿಪರಿ ಬೇಡಿಕೊಂಡು, ವಿದ್ಯಾರ್ಥಿಯವರು ಎಷ್ಟು ಜನರ ಪ್ರಾಣವುಳಿಸಿರುವರೆಂಬುದನ್ನು ಅವರಿಗೆ ತಿಳಿಸಿಕೊಟ್ಟರು. ಆದರೆ ಮುಸಲ್ಮಾನರಿಗೆ ಎಳ್ಳಷ್ಟೂ ದಯ ಹುಟ್ಟಲಿಲ್ಲ. ಅವರು ಶ್ರೀ ವಿದ್ಯಾರ್ಥಿಯವರ ಹೊಟ್ಟೆಯಲ್ಲಿ ಕಠಾರಿ ಚುಚ್ಚಿ ಅವರನ್ನು ಕೊಂದು ಒಗೆದರು [illegible] ಮೇಲೆ ಅವರ ಜಡದೇಹವು ಒಂದು [illegible] ಗುಣಿಯಲ್ಲಿ ಸಿಕ್ಕಿತು. ಆ ಮೇಲೆ ಅಗ್ನಿ ಸಂಸ್ಕಾರ ಮೊದಲಾದವುಗಳು ನೆರವೇರಿಸಲ್ಪಟ್ಟವು.

[illegible] ಶ್ರೀರಾಮ ಪ್ರಾಂತಿಕ

[illegible] ಪರಿಷತ್ತು.

[illegible]

[illegible] ಮೇಲೆ

ಮುಸಲ್ಮಾನರ ಆರೋಪ

[illegible]

ಹಿಂದುಸ್ಥಾನದ

ಸಾಲವನ್ನು ವಿಚಾರಿಸುವ ಒಗ್ಗೆ

ವರ್ಕಿಂಗ ಕಮಿಟಿಯವರ ಮಂಡಳ

[illegible]

(೧) [illegible] (೨) [illegible] (೩) [illegible]

ಸಾನಿಟರಿ ಇನ್ಸ್ಪೆಕ್ಟರನ್ನು

ಗುಂಡು ಹಾಕಿ ಕೊಂದರು

[illegible]

[illegible] ಜವಾಬು

"[illegible]"

[illegible]

[illegible] ಸರ್ ಪತ್ರ ಸಂಗ್ರಹಿಸಿದ್ದು, ಅದರಲ್ಲಿ ಕೆಳಗಿನಂತೆ ಉಲ್ಲೇಖಿಸಿದೆ:—

"[illegible]"

ಬಳ್ಳಾರಿಯ ಪತ್ರ

[illegible]

[illegible] ತಾಲೂಕಗಳಲ್ಲಿರುವ ಕೆಲವು ಹಳ್ಳಿಗಳಲ್ಲಿ ಬರಬಿದ್ದುದರಿಂದ ಆಯಾ ಹಳ್ಳಿಗಳ ರೈತರ ಮನವಿಯನ್ನು ಮನ್ನಿಸಿ, ಸರಕಾರದವರು ಈ ವರ್ಷದ ಕಂದಾಯವನ್ನು ಮತ್ತು ತಕಾವಿ ಸಾಲದ ಕಂತುಗಳ ವಸೂಲನ್ನು ಸಹ ನಿಲಿಸಿರುತ್ತಾರೆ.

ಮದ್ರಾಸ ಇಲಾಖೆಯಲ್ಲಿ ಕನ್ನಡಿಗರ ದರ್ಜೆಯನ್ನು ಹೇಗಿರುವದು ಮತ್ತು ಮದ್ರಾಸು ಸರ್ಕಾರವು ಕನ್ನಡಿಗರ ಮೇಲೆ ಯಾವ ದೃಷ್ಟಿಯಿಡುವದೆಂಬುದನ್ನು ಜನರ ಮುಂದೆ ಇಡಲಿಕ್ಕೆ ಮಾ। ರಾ। ಟಿ. ಹೆಚ್, ಎಂ ಚಂದ್ರಶೇಖರಶಾಸ್ತ್ರಿ [illegible] ಸಂಘದ ಕಾರ್ಯದರ್ಶಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಮದ್ರಾಸ ವಿಧಾಯಕ ಸಭೆಯಲ್ಲಿ ಕರ್ನಾಟಕಾಭಿಮಾನಿಗಳಾದ ಸಭ್ಯರು ಕೇಳುವದರದೆಶಯಿಂದ ಮದ್ರಾಸು ವರ್ತಮಾನ ಪತ್ರಿಕೆಗಳಿಗೆ ಕಳಿಸಿಕೊಟ್ಟಿದ್ದರು. ಅವಗಳನ್ನು "ಮದ್ರಾಸು ಮೇಲು" ವಿನಹ ಇತರ ಪತ್ರಿಕೆಗಳು ಯಾವೂ ಪ್ರಕಟಿಸಿರುವದಿಲ್ಲ ಮತ್ತು ಇದುವರೆಗೂ ಯಾವ ಎಂ ಎಲ್. ಸಿ ಯವರು ಸದರಿ ಪ್ರಶ್ನೆಗಳನ್ನು ಕೌನ್ಸಿಲದಲ್ಲಿ ಕೇಳುವ ಪಾಪಕ್ಕೆ ಹೋಗಿರುವದಿಲ್ಲ.

(೧) ಮದ್ರಾಸ ಇಲಾಖೆಯಲ್ಲಿ ಒಟ್ಟು ಕನ್ನಡಿಗರ ಜನಸಂಖ್ಯೆ ಎಷ್ಟು?

(೨) ಮದ್ರಾಸು ಇಲಾಖೆಯಲ್ಲಿ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಕನ್ನಡಿಗ ಅಧಿಕಾರಸ್ಥರ ಸಂಖ್ಯೆ ಎಷ್ಟು?

(೩) ಮೈಸೂರು ಸಂಸ್ಥಾನದ ಸುತ್ತುಮುತ್ತು ಇರುವ ಮದ್ರಾಸು ಇಲಾಖೆಯ ಜಿಲ್ಲೆಗಳಾದ ಬಳ್ಳಾರಿ ಅನಂತಪುರ, ಚಿತ್ತೂರು, ಸೇಲಂ ಕೊಯಿಮತ್ತೂರು ನೀಲಗಿರಿ, ಮತ್ತು ಮಂಗಳೂರು ಈ ಒಂದೊಂದು ಜಿಲ್ಲೆಗಳಲ್ಲಿ ಕನ್ನಡಿಗರ ಜನ ಸಂಖ್ಯೆಯೆಷ್ಟು? ಮತ್ತು ಆಯಾ ಜಿಲ್ಲೆಗಳಲ್ಲಿ ಗೆಜೆಟೆಡ ನಾನ್ ಗಜೆಟೆಡ್ ಕರ್ನಾಟಕ ಆಫೀಸರರೆಷ್ಟು? ಮತ್ತು [illegible] ರೂಪಾಯಿ ಮೇಲ್ಪಟ್ಟ ಪಗಾರ ತೆಗೆದುಕೊಳ್ಳುವ ಇತರ ಕಾರಕೂನರ ಸಂಖ್ಯೆ ಎಷ್ಟು?

ಶ್ರೀಯುತ ದೇಶಪಾಂಡೆಯವರು ದಿಲ್ಲಿ ಸಂಧಾನದ ಬಗ್ಗೆ ಭಾಷಣ ಮಾಡಲಿಕ್ಕೆ ಇಲ್ಲಿಗೆ ಬಂದಾಗ್ಗೆ, ಅವರ ಕರ್ನಾಟಕಾಭಿಮಾನದ ಸಂಶಯ ಸೂಚಕ ಪ್ರಶ್ನೆಗಳನ್ನು ಅವರಿಗೆ ಜವಾಬಗೋಸ್ಕರ ಕಳಿಸಲ್ಪಟ್ಟಿದ್ದರು. ಅವಕ್ಕೆ [illegible] ವಾ [illegible] ಕೊಡದೆ ಇದ್ದುದನ್ನು ಮತ್ತು [illegible] ಜರುಗಿದ ಕರಾಚಿ ಕಾಂಗ್ರೆಸ್ಸದಲ್ಲಿ ಆಂಧ್ರ, ಉತ್ಕಳ ಮತ್ತು ಕೇರಳ ಪ್ರತಿನಿಧಿಗಳು ತಮ್ಮ ತಮ್ಮ ಪ್ರತ್ಯೇಕ ಪ್ರಾಂತಗಳ ಬಗ್ಗೆ ಸೂಚನೆ ಮಂಡಿಸಿದ ಹಾಗೆ, ಶ್ರೀಯುತ ದೇಶಪಾಂಡೆಯವರು ಕರ್ನಾಟಕ ಏಕೀಕರಣದ ಬಗ್ಗೆ ಏನಾದರೂ ಸೂಚನೆಗಳನ್ನು ಇಟ್ಟ ಹಾಗೆ ಪ್ರಕಟವಾಗದೆ ಇದ್ದದ್ದನ್ನು ನೋಡಿ ಸದರಿ ಶ್ರೀಯುತರು ನಿಜವಾದ ಕರ್ನಾಟಕಸ್ಥರೊ ಅಥವಾ ಅಲ್ಲವೋ ಎಂದು ಇಲ್ಲಿಯ ಜನರು ಸಂಶಯ ಪಡುತ್ತಿರುವರು.

೧೯೩೧ರ ಜನಗಣತಿ

ಬ್ರಿಟಿಶ ಪ್ರಾಂತ

ಪ್ರಾಂತ	ಜನಸಂಖ್ಯೆ
ಅಜಮೀರ ಮಾರವಾಡ	[illegible]
ಅಂದಮಾನ-ನಿಕೋಬಾರ	[illegible]
ಆಸಾಮ	[illegible]
ಬಲುಚಿಸ್ತಾನ	[illegible]
ಬಂಗಾಲ	[illegible]
ಬಿಹಾರ	[illegible]
ಓರಿಸಾ	[illegible]
ಛೋಟಾ ನಾಗಪೂರ	[illegible]
ಮುಂಬಯಿ (ಸಿಂಧ ಬಿಟ್ಟು)	[illegible]
ಸಿಂಧ	[illegible]
ಏಡನ್	[illegible]
ಬ್ರಹ್ಮದೇಶ	[illegible]
ಮಧ್ಯಪ್ರಾಂತ	[illegible]
ವರ್‍ಹಾಡ	[illegible]
ಕೊಡಗು	[illegible]
ದಿಲ್ಲಿ	[illegible]
ಮದ್ರಾಸ	[illegible]
ವಾಯುವ್ಯ ಸರಹದ್ದ	[illegible]
ಪಂಜಾಬ	[illegible]
ಆಗ್ರಾ	[illegible]
ಆಯೋಧ್ಯಾ	[illegible]
ಒಟ್ಟು	([illegible])

ಸಂಸ್ಥಾನ

ಆಸಾಮದಲ್ಲಿಯ ಸಂಸ್ಥಾನ	[illegible]
ಬಲುಚಿಸ್ಥಾನದಲ್ಲಿಯ ಸಂಸ್ಥಾನ	[illegible]
ಬಡೋದಾ	[illegible]
ಬಂಗಾಲದಲ್ಲಿಯ ಸಂಸ್ಥಾನ	[illegible]
ಬಿಹಾರ-ಓರಿಸಾದ ಸಂಸ್ಥಾನ	[illegible]
ಮುಂಬಯಿಯ ಸಂಸ್ಥಾನ	[illegible]
ಮಧ್ಯಹಿಂದುಸ್ಥಾನದ ಸಂಸ್ಥಾನ	[illegible]
ಮಧ್ಯಪ್ರಾಂತದ ಸಂಸ್ಥಾನ	[illegible]
ಗ್ವಾಲ್ಹೇರ	[illegible]
ಹೈದ್ರಾಬಾದ	[illegible]
ಕಾಶ್ಮೀರ ಸಂಸ್ಥಾನ	[illegible]
ಕೋಚೀನ	[illegible]
ತ್ರಾವಣಕೋರ	[illegible]
ಮೈಸೂರ	[illegible]
ಸರಹದ್ದಿ ಮೇಲಿನ ಸಂಸ್ಥಾನ	[illegible]
ಪಂಜಾಬದಲ್ಲಿಯ ಸಂಸ್ಥಾನ	[illegible]
ರಾಜಪುತಾನಾ	[illegible]
ಸಂಯುಕ್ತ ಪ್ರಾಂತದ ಸಂಸ್ಥಾನ	[illegible]
ಪಶ್ಚಿಮಹಿಂದುಸ್ಥಾನ ಸಂಸ್ಥಾನ	[illegible]
ಒಟ್ಟು	([illegible])
ಒಟ್ಟು ಹಿಂದುಸ್ಥಾನದ ಜನಸಂಖ್ಯೆ	([illegible])

ರೆ ನೆಂ. ಬಿ. ೨೭೮೮

ನಿತ್ಯ ಪತ್ರ.

ಬೆಲೆ ೦—೦—೩.

...ಯಥಾ ಧ್ರುವ । ಯಥಾಲಯ ಸುಖನ್ ॥—ಮನು.

ನಿತ್ಯಪತ್ರಿಕೆಯು
ವರ್ಗಣೀ ದರಗಳು
ಪರಸ್ಥಳದವರಿಗೆ
೧೨ ತಿಂಗಳಿಗೆ ೧೨—೮—೦
೬ ,, ೬—೮—೦
೩ ,, ೩—೧೨—೦
,, ೧—೧೪—೦
ಸ್ಥಳಿಕರಿಗೆ
೧೨ ತಿಂಗಳಿಗೆ ೧೨—೦—
೬ ,, ೬—೦—೦
೩ ,, ೩—೮—೦
೧ ,, ೧—೦—೦

ನಿತ್ಯಪತ್ರಿಕೆಯು
ಸರಕಾರಿ ಹಾಗು ಹಂಗಾಮಿ
ಜಾಹೀರಾತಿನ ದರಗಳು
ಗಸೀಸಲ ೧ ಇಂಚಿಗೆ ೧—೮—೦
೨ ,, ,, ೧—೦—೦
ಮುಂದೆ ಪ್ರತಿಯೊಂದು ಸಲ
೦—೨—೦
ಪೆರಿಂಗಾಸಾಲಿಗೆ ಅಕ್ಷರಗಳ
ಪ್ರಮಾಣದಿಂದ ದರಬೀಳುವದು

ಸಂಪಾದಕರು:— ಮಂಗಳವೆ ಧೀ ರಾಜೇರಾಯರ ಮಕ ಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಾತಃಕಾಲ ಹಾಗು ಸಾಯಂಕಾಲ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಬುಧವಾರ ಮಿತಿ ಚೈತ್ರ ಬಹುಳ ೬ ಶಕೆ ೧೮೫೩ ತಾ॥ ೮—೪—೩೧ [ಸಂಖ್ಯೆ ೨೦

ಗಾಂಧಿ-ವ್ಹಾಯಿಸರಾಯರಲ್ಲಿ ಪುನಃ ಚರ್ಚೆ

(ಸ್ಪೇಶಲ್ ತಂತಿ, ಮುಂಬಯಿ, ತಾ| ೭)

ಮಹಾತ್ಮಾ ಗಾಂಧಿಯವರು ನಿನ್ನಿನ ದಿನ ಸಂಜೆಯಲ್ಲಿ ೭-೩೦ ಗಂಟೆಗೆ ವ್ಹಾಯಿಸರಾಯರನ್ನು ಕಂಡುಕೊಂಡು ಅವರೊಡನೆ ೪ ಗಂಟೆಗಳ ವರೆಗೆ ಒಂದೇ ಸಮನೇ ಚರ್ಚೆಮಾಡಿದರು. ದುಂಡ ಮೇಜಿನ ಪರಿಷತ್ತಿನ ವಿಧ ನ ಜಾತಿಯ ಪ್ರಶ್ನೆ ಹಾಗೂ ದಿಲ್ಲಿ ಒಪ್ಪಂದದ ಪಾಲನೆ ಈ ಸಂಬಂಧವಾಗಿಯೇ ಅವರಲ್ಲಿ ಚರ್ಚೆ ನಡೆಯಿತಾಗಿ ತಿಳಿದುಬರುತ್ತಿದೆ.

ಮುಂಬಯಿಯಲ್ಲಿ ರಾಷ್ಟ್ರೀಯ ಸಪ್ತಾಹ

ಮುಂಬಯಿ, ತಾ| ೭

ನಿನ್ನೆನಿಂದ ಇಲ್ಲಿ ರಾಷ್ಟ್ರೀಯ ಸಪ್ತಾಹವು ಪ್ರಾರಂಭವಾಗಿದ್ದು, ಖಾದಿಯನ್ನು ಹೊತ್ತುಕೊಂಡು ಹೋಗಿ ಮಾರುವದು ಹಾಗು ಕಾಂಗ್ರೆಸ್ ಮೆಂಬರರನ್ನು ಮಾಡಿಕೊಳ್ಳುವದು ಈ ಕಾರ್ಯಕ್ರಮಗಳು ಜೋರಿನಿಂದ ಸಾಗಿಸಲ್ಪಟ್ಟಿವೆ. ಸಪ್ತಾಹದಲ್ಲಿ ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿ ಸಭೆಗಳು ಜರುಗತಕ್ಕವಿದ್ದು, ಕರಾಚಿ ಕಾಂಗ್ರೆಸದ ಸಂದೇಶವನ್ನು ಕುರಿತು ಮುಖಂಡರು ಭಾಷಣ ಮಾಡತಕ್ಕವರಿದ್ದಾರೆ.

(ಅ, ಪ್ರೆ,)

ಮತ್ತೊಂದು ಆರ್ಡಿನನ್ಸ ಹೊರಬಿತ್ತು.

ನೂತನ ದಿಲ್ಲಿ, ತಾ| ೬

ವ್ಹಾಯಿಸರಾಯರು "ಪರರಾಷ್ಟ್ರೀಯ ಸಂಬಂಧದ ಆರ್ಡಿನನ್ಸ"ನ್ನು ಹೊರಡಿಸಿದ್ದಾರೆ. ಸರ್ ಡೆನಿಸ್ ಬ್ರೇಯವರು ಎರಡು ವರ್ಷಗಳ ಹಿಂದೆ ಈ ಆರ್ಡಿನನ್ಸ ಆಶಯದ ಒಂದು ಬಿಲ್ಲನ್ನು ಅಸೆಂಬ್ಲಿಯಲ್ಲಿ ತಂದಿದ್ದರು. ಆದರೆ ಆಗ ಅದಕ್ಕೆ ಬಹಳೇ ವಿರೋಧವಾಗಿ ಅದು ಬಿದ್ದುಹೋಗಿತ್ತು. ಸರಹದ್ದ ಪ್ರಾಂತದ ಪಂಜಾಬ ಪತ್ರಿಕೆಗಳು ಅಮಾನುಲ್ಲಾರವರು ಇಟಲಿಯಿಂದ ಬರೆದ ಪತ್ರವನ್ನು ಪ್ರಸಿದ್ಧಪಡಿಸಿದ್ದೂ ಹಾಗು ಅದಕ್ಕೆ ನಾದಿರಶಹಾರವರ ಪಕ್ಷದ ಪತ್ರಿಕೆಯಾದ ಇಸ್ಲಾಹ ಕಾಬೂಲ ಪತ್ರಿಕೆಯು ಒಳ್ಳೇ ಯೋಗ್ಯ ಉತ್ತರ ಕೊಟ್ಟಿದ್ದೂ, ಇವೇ ಆರ್ಡಿನನ್ಸ ಹೊರಡಲು ಕಾರಣಗಳಾಗಿವೆ. ಅಫಗಾಣಿಸ್ಥಾನದ ಅರಸರಾದ ನಾದಿರಶಹಾರವರೊಡನೆ ಸ್ನೇಹಸಂವರ್ಧನ ಬೆಳಿಸುವ ಉದ್ದೇಶದಿಂದಲೇ ಈ ಆರ್ಡಿನನ್ಸ ಹೊರಟಿದ್ದಾಗಿದೆ.

(ಅ, ಪ್ರೆ,)

ಸರ್ ಹೋಟ್ಸನ್ನರು ನಿವೃತ್ತಿ ಹೊಂದುವರು

ಮುಂಬಯಿ ತಾ|| ೭

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಸರ್ ಹೋಟ್ಸನ್ ಸಾಹೇಬರು ತಾ| ೧೦ ನೆಯ ದಿವಸ ನಿವೃತ್ತಿ ಹೊಂದುವರು, ಮತ್ತು ಘೋಮಾಸರವರು ಅಂದೇ ಅವರ ಕಾರ್ಯವನ್ನು ವಹಿಸಿಕೊಳ್ಳುವರು ಸರ್ ಹೋಟ್ಸನ್‌ರ ಪ್ರೀತ್ಯರ್ಥವಾಗಿ ತಾರೀಖು ೯ ನೆಯ ದಿವಸ ಸರಕಾರೀ ಭವನದಲ್ಲಿ ಭೋಜನ ಸಮಾರಂಭವು ಏರ್ಪಡಿಸಲ್ಪಟ್ಟಿದೆ.

(ಅ ಪ್ರೆ)

ವರ್ಕಿಂಗ ಕಮಿಟಿಯೂ ಬಿಡುಗಡೆಯಾಗದಿರುವ ರಾಜಕೀಯ ಕೈದಿಗಳೂ

ಸ್ಪೇಶಲ್ ತಂತಿ, ಮುಂಬಯಿ, ತಾ| ೭

ಇನ್ನೂ ಬಿಡುಗಡೆ ಹೊಂದದೆ ಜೇಲಿನಲ್ಲಿಯೇ ಕಾಲಕಳೆಯುತ್ತಿರುವ ರಾಜಕೀಯ ಕೈದಿಗಳ ಸಂಬಂಧವಾಗಿ ಸವಿಸ್ತರ ಸಂಗತಿಗಳನ್ನು ಸಂಗ್ರಹಿಸಲು ವರ್ಕಿಂಗ ಕಮಿಟಿಯವರು ಶ್ರೀ. ಕೆ. ಎಫ್. ನರಿಮನ್ನರಿಗೆ ಅಧಿಕಾರ ಕೊಟ್ಟಿದ್ದಾರೆ.

ಹಿಂದೂ ಮುಸಲ್ಮಾನ ಪ್ರಶ್ನೆಯ ಸಂಬಂಧವಾಗಿ ಮಹಾತ್ಮರ ಜಾಹೀರ ಪ್ರಕಟಣೆ

ಸ್ಪೇಶಲ್ ತಂತಿ, ಮುಂಬಯಿ, ತಾ| ೭

ಡಾಕ್ಟರರು ವಿಶ್ರಾಂತಿಯನ್ನು ತೆಗೆದುಕೊಳ್ಳಲು ಆಜ್ಞಾಪಿಸಿದ್ದರೂ ಸಹ ಮಹಾತ್ಮಾ ಗಾಂಧಿಯವರು ಅತ್ತ ಲಕ್ಷ್ಯಕೊಡದೆ ಸೀಖ ಮಧ್ಯವರ್ತಿ ಮಂಡಳದ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಲು ಅಮೃತಸರಕ್ಕೆ ಹೋಗತಕ್ಕವರಿದ್ದಾರೆ. ಮಹಾತ್ಮಾ ಗಾಂಧಿಯವರು ಒಂದು ಪ್ರಕಟನೆಯನ್ನು ಹೊರಡಿಸಿ, ಹಿಂದೂ ಮುಸಲ್ಮಾನ ಪ್ರಶ್ನೆಯ ಸಂಬಂಧವಾಗಿ ತಮ್ಮ ಧೋರಣವನ್ನು ವ್ಯಕ್ತಪಡಿಸಿ, ತಮ್ಮ ವಿಷಯದಲ್ಲುಂಟಾದ ತಪ್ಪು ತಿಳುವಳಿಕೆಯನ್ನು ಹೊಗಲಾಡಿಸಿದ್ದಾರೆ. ಅವರು ಅನ್ನುವದೇನಂದರೆ— ಮುಸಲ್ಮಾನರು ಮತ್ತು ಸೀಖರು ಒಮ್ಮತದಿಂದ ಏನೇನು ಬೇಡುತ್ತಾರೋ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಯಾವದಾದರೊಂದು ಪ್ರಶ್ನೆಯು ಜಾತೀಯತ್ವದ ಮೇಲೆ ಅವಲಂಬಿಸಿದ್ದರೆ ಹಾಗು ಅದಕ್ಕೆ ಆ ಆ ಜಾತಿಯ ಯಾವತ್ತೂ ಜನರ ಸಂಪೂರ್ಣ ಸಮ್ಮತಿಯಿರದಿದ್ದರೆ ಆ ಪ್ರಶ್ನೆಯೊಡನೆ ನಾನು ತಾದಾತ್ಮ್ಯ ಹೊಂದಲಿಚ್ಛಿಸುವದಿಲ್ಲ

ಸಿರ್ಸಿ ಸಿದ್ಧಾಪೂರ ತಾಲೂಕುಗಳಲ್ಲಿ ಶ್ರೀ ಜೋಗರ ಸಂಚಾರ

ತಂತಿಯ ವಾರ್ತೆ, ಧಾರವಾಡ, ತಾ| ೬

ಸಿರಸಿ, ಸಿದ್ದಾಪೂರ, ಹಿರೇಕೇರೂರ ತಾಲೂಕಗಳಲ್ಲಿಯ ರೈತರ ದೈನ್ಯಾವಸ್ಥೆಯನ್ನು ಕಣ್ಣಾರೆ ನಿರೀಕ್ಷಿಸುವ ಉದ್ದೇಶದಿಂದ ಮುಂಬೈ ಕಾಯದೆ ಮಂಡಳದ ಸಭಾಸದರಾದ ಶ್ರೀ. ಜೋಗ ವಿಶ್ವನಾಥರಾಯರು ಆ ಆ ತಾಲೂಕಗಳಲ್ಲಿ ಸಂಚರಿಸಿ ಬಂದರು. ಅವರು ಆಯಾ ತಾಲೂಕಗಳಲ್ಲಿಯ ಪ್ರಮುಖ ರೈತರನ್ನು ಕಂಡುಕೊಂಡು ಅಲ್ಲಿಯ ಪರಿಸ್ಥಿತಿಯ ಸಂಬಂಧವಾಗಿ ಅವರೊಡನೆ ಚರ್ಚೆ ಮಾಡಿದರು. ರತ್ತಿಹಳ್ಳಿಯಲ್ಲಿ ಬಿಡಾರ ಒಗೆದಿದ್ದ ಧಾರವಾಡ ಕಲೆಕ್ಟರರನ್ನು ಹಾಗು ಸಿದ್ದಾಪುರದ ಮಾಮಲೇದಾರರನ್ನು ಅವರು ಭೆಟ್ಟಿಯಾದರು.

ಸ್ಥಳಿಕ ಅಧಿಕಾರಿಗಳು ಜುಲುಮೆಯನ್ನು ಪಯೋಗಿಸಿ ರೈತರನ್ನು ಪೀಡಿಸುತ್ತಿರುವದರಿಂದ ಅವರು ನಿರಾಶ್ರಿತರಾಗಿದ್ದಾರೆ. ಮೇಲಧಿಕಾರಿಗಳ ಮುಂದೆ ತಮ್ಮ ಅಡಚಣೆಗಳನ್ನಿಡಲು ಅವರು ಶ್ರೀ ಜೋಗರವರಿಗೆ ವಿನಂತಿಮಾಡಿಕೊಂಡರು. ರೈತರು ನಿಜವಾಗಿಯೂ ಸಂಕಟದಲ್ಲಿ ಬಿದ್ದಿರುವರೆಂದು ಶ್ರೀ ಜೋಗರವರಿಗೆ ಮನವರಿಕೆಯಾಗಿರುವದರಿಂದ ಅವರು ಮೇಲಧಿಕಾರಿಗಳ ಸನ್ನಿಧಿಗೆ ಒಂದು ಶಿಷ್ಟ ಮಂಡಳವನ್ನು ಒಯ್ಯುವ ಏರ್ಪಾಡು ನಡೆಸಿದ್ದಾರೆ.

ಮಹಾತ್ಮರು ಲಂಡನಕ್ಕೆ ಹೋಗುವರು

ಸ್ಪೇಶಲ್ ತಂತಿ, ಮುಂಬಯಿ ತಾ| ೭

ಜಾತಿ ಜಾತಿಗಳಲ್ಲಿ ಒಡಂಬಡಿಕೆಯುಂಟಾಗದಿದ್ದರೂ ಸಹ ಮಹಾತ್ಮಾ ಗಾಂಧಿಯವರು ಲಂಡನಕ್ಕೆ ಹೋಗುವರಾಗಿ ತಿಳಿದುಬರುತ್ತದೆ

ಮಹಾತ್ಮರ ಕಾಂಗ್ರೆಸ ಕಾರ್ಯವನ್ನು ಮತ್ತೆ ಸೇರಿಸಿದವರು

[illegible]

ಮುಂಬಯಿ [illegible] ಸರ್ವಾಧಿಕಾರಿಗಳಾದ ಶ್ರೀ [illegible] ದಿವಸ ರಾತ್ರಿ ಹಳ್ಳಿ [illegible] ಲ್ಪಟ್ಟಿದ್ದಾರೆ. ಅವರ ಅಣ್ಣಂದಿರಾದ ೯. ಪಿ. [illegible] ವಸತಿಸ್ಥಳವು ಪೋಲೀಸರಿಂದ ಶೋಧಿಸಲ್ಪಟ್ಟಿತು., ಆದರೆ ಆಕ್ಷೇಪಾರ್ಹ ಕಾಗದಪತ್ರಗಳೇನೂ ಅಲ್ಲಿ ಸಿಗಲಿಲ್ಲ

ಅ. ಪ್ರೆ.

ಡಾ॥ ಮುಂಜೆಯವರು ತಿರುಗಿ ಬಂದರು.

ಮುಂಬಯಿ ತಾ| ೩೦-

ದುಂಡುಮೇಜಿನ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿದ್ದ ನಾಗಪುರದ ಹಿಂದೂ ಸಭೆಯ ಮುಖಂಡರಾದ ಡಾ. ಬಿ ಎಸ್. ಮುಂಜೆಯವರು ಪರಿಷತ್ತಿನ ಕಾರ್ಯವನ್ನು ಮುಗಿಸಿಕೊಂಡು, ಪರದೇಶಗಳಲ್ಲಿಯ ವಿ [illegible] ಗಳನ್ನು ನಿರೀಕ್ಷಿಸಿ, ಅಲ್ಲಿಯ ಶಿಕ್ಷಣ ಪದ್ಧತಿಯನ್ನು ಅಭ್ಯಾಸಿಸಲು ಪ್ರವಾಸಕ್ಕೆ ಹೊರಟಿದ್ದರು. ಅವರು ಇಟಲಿಯಲ್ಲಿಯ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಎಸ್. ಎಸ್. [illegible] ಹಡಗದಿಂದ ಇವತ್ತಿನ ದಿವಸ ಮುಂಬೈಗೆ ಇಲ್ಲಿಗೆ ಬಂದರು

(ಅ, ಪ್ರೆ)

ಹಿಂದಿ ವ್ಯಾಪಾರಿ ಮಹಾಮಂಡಳದ ಪ್ರತಿನಿಧಿಗಳು

ದಿಲ್ಲಿ ತಾ|| ೭

ಹಿಂದೀ ವ್ಯಾಪಾರೀ ಮಹಾ ಮಂಡಳದ [illegible] ಶ್ರೀ ಜಿ. ಡಿ. ಬಿರ್ಲಾರವರನ್ನು ದುಂಡ ಮೇಜಿನ ಪರಿಷತ್ತಿಗೆ ತಮ್ಮ ಪರವಾಗಿ ಪ್ರತಿನಿಧಿಗಳನ್ನಾಗಿ ಆರಿಸಿದ್ದಾರೆ.

(ಅ, ಪ್ರೆ.)

ಮೂವರು ವಾನರರನ್ನು ಜಾತಿಯಿಂದ ಹೊರಗೆ ಹಾಕಿದರು.

ಅಹಮ್ಮದಾಬಾದ, ತಾ| ೭.

ಸ್ವಲ್ಪ ದಿನಗಳ ಹಿಂದೆ ಅಹಮ್ಮದಾಬಾದದಲ್ಲಿ ಕೆಲವು ವಾನರರು ಅಲ್ಲಿಯ [illegible] ಶ್ರೀ [illegible] ಸ್ವಲ್ಪ ದಿನ [illegible] ಜಾತಿಯಿಂದ ಹೊರಗೆ ಹಾಕಬೇಕೆಂದು [illegible] ಪತ್ರ ಬರೆದ, [illegible] ಭಾಗ ತೆಗೆದುಕೊಂಡಿದ್ದೇವೆಂಬ ದಾಗಿಯೂ, ಜಾತಿಯಿಂದ ಹೊರಗೆ ಹಾಕಿದವರೊಡನೆ [illegible]

ಅ. ಪ್ರೆ.

ಕನ್ನಡಿಗ.

ಕನ್ನಡ ನಾಡಿನ ಮೇಲ್ಗರವಾಗಿ ಕಟ್ಟುವೆನಾವು
ಕನ್ನಡಿಗನ ಜಾಡಿನ ... ನಾಡಿದರ ...
... ಚಿನ್ನ ... ಯಾಕಾಶದಕ್ಕೆ

ಹೊಟ್‌ಸನ್ ಸಾಹೇಬರಿಗೆ ಮಂಗಳಾರತಿ.

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಸರ್. ಹೊಟ್‌ಸನ್ ಸಾಹೇಬರು ಸ್ವಲ್ಪ ದಿನಗಳಲ್ಲಿಯೇ ನಿವೃತ್ತಿ ಹೊಂದಿ ತಮ್ಮ ದೇಶಕ್ಕೆ ತೆರಳುವವರಿದ್ದುದರಿಂದ, ತಾ|| ೨೨ ನೆಯ ದಿವಸ ಮುಂಬಯಿ ಕಾಂಗ್ರೆಸ್ ಮಂಡಳದಲ್ಲಿ ಅವರ ಗುಣಗಾನ ಮಾಡುವ ಠರಾವು ಪಾಸು ಮಾಡಲಾಯಿತು. ಈ ಠರಾವನ್ನು ಸೂಚಿಸುವಾಗ ಶಾಸ್ತ್ರಿ ಸಾಹೇಬರು ಹೊಟ್‌ಸನ್ನರ ಹೃದಯವೆಂದರೆ ಬಹಳೇ ದಯಾರ್ದ್ರ ಹೃದಯ. ಹಿಂದೀ ಜನರ ಆಕಾಂಕ್ಷೆಗಳಿಗಾಗಿ ಅವರು ಬಹಳೇ ಸಹಾನುಭೂತಿ ತೋರಿಸಿದರು. ಗಾಂಧಿ—ಆರ್ಯವಿನ್‌ನಲ್ಲಿ ಒಪ್ಪಂದವು ಸಾಧ್ಯವಾಗಬೇಕಾದರೆ ಹೊಟ್‌ಸನ್ನರು ಬಹಳೇ ಪ್ರಯತ್ನ ಮಾಡಿದರು ಎಂಬುದಾಗಿ ಅವರ ಮುಖಸ್ತುತಿ ಮಾಡಿದರು. ಸೊಲ್ಲಾಪುರದ ಪ್ರತಿನಿಧಿಗಳಾದ ಡಾ. ವೈಶಂಪಾಯನರ ಕೂಡ ಈಗ ಉಳಿದ ಸಭಾಸದರೆಲ್ಲರೂ ತಮ ತಮಗೆ ತಿಳಿದಂತೆ ಅವರ ಗುಣಗಾನವ ಮಾಡಿ ಅವರನ್ನು ಹಾಡಿಹರಿಸಿದರು. ಆದರೆ ಡಾ. ವೈಶಂಪಾಯನರಿಗೆ ಮಾತ್ರ ಅದು ಸರಿಬರಲಿಲ್ಲ. ಗುಣಗಾನದಲ್ಲಿ ನಾನು ಸಹಕರಿಸಲಿಚ್ಛಿಸುವದಿಲ್ಲವಾಗಿ ಅವರು ಸ್ಪಷ್ಟವಾಗಿ ಹೇಳಿಬಿಟ್ಟರು.

ಶಾಸ್ತ್ರಿ ಸಾಹೇಬರಿಗೆ ಹೊಟ್‌ಸನ್ ಸಾಹೇಬರು ಬಹಳೇ ದಯಾರ್ದ್ರ ಹೃದಯರಾಗಿ ಹೇಗೆ ಕಾಣಿಸಿದರೋ ಏನೋ! ಅವರು ದಯಾರ್ದ್ರ ಹೃದಯರಲ್ಲವೆಂಬದಕ್ಕೆ ಅವರ ಹೆಸರಿನಿಂದಲೇ ಗೊತ್ತಾಗುತ್ತದೆ. ಯಾಕಂದರೆ ಅವರ ಹೆಸರೇ 'ಕಪ್ಪುಕಠಿಣ'ವೆಂಬುದಾಗಿದೆ. ಅವರ ಕಾಲಕರ್ದಿಯಲ್ಲಿ ಮುಂಬಯಿ ಇಲಾಖೆಯಲ್ಲಿ ಸಂಭವಿಸಿದ ಅನಿಷ್ಟ ಕೃತಿಗಳನ್ನು ಜನರು ಎಂದೂ ಮರೆಯಲಾರರು. ಹೊಟ್‌ಸನ್ ಸಾಹೇಬರ ಹೆಸರ ತೆಗೆದುಕೊಂಡ ಕೂಡಲೆ ಮುಂಬಯಿಯಲ್ಲಿ ಮೇಲಿಂದ ಮೇಲೆ ಬಡಿಗೆಯೇಟಿನ ಪ್ರಯೋಗದಿಂದ ಸಾವಿರಾರು ಜನರ ತಲೆ, ಮೂಳೆ, ಕೈಕಾಲು ಮೊದಲಾದವುಗಳನ್ನು ಮುರಿದದ್ದು, ಸೊಲ್ಲಾಪುರದಲ್ಲಿ ದಂಡನೀತಿಯನ್ನು ಪ್ರಾರಂಭಿಸಿ ಜನರನ್ನು ಪರಿಪರಿ ಪೀಡಿಸಿದ್ದು, ಗಲ್ಲಿಗೇರಿಸ ಕೂಡದಾಗಿ ಜನರು ಬೇಡಿಕೊಂಡಾಗ್ಯೂ ಸಹ ಅತ್ತ ಲಕ್ಷ್ಯಕೊಡದೆ ಶ್ರೀ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ್ದು, ಪೇಶಾವರ ಶ್ರೀಹರಿ ... ಮೇಲೆ ಅತ್ಯಾಚಾರ ಎಸಗಿದ್ದು ಇವೆಲ್ಲ ಸಂಗತಿಗಳು ಪ್ರತಿಯೊಬ್ಬರಿಗೂ ನೆನಪಿಗೆ ಬರದೆ ಇರಲಾರವು. ಗಾಂಧಿ—ಆರ್ಯವಿನ್‌ರ ಒಪ್ಪಂದದ ಕರಾರುಗಳನ್ನಾದರೂ ಹೊಟ್‌ಸನ್ ಸಾಹೇಬರು ಹೇಗೆ ಪಾಲಿಸುವರೆಂಬುದು ಜನರ ಕಣ್ಮುಂದೆಯೇ ಇದೆ. ಇಂಥವರ ಗುಣಗಾನವನ್ನು ಮಾಡಿ ಮುಂಬಯಿ ಕಾಂಗ್ರೆಸ್ ಮಂಡಳದ ಸಭಾಸದರು ತಮ್ಮ ಗುಲಾಮವೃತ್ತಿಯನ್ನು ಪ್ರದರ್ಶಿಸಿ, ಜನರ ಅಪಹಾಸ್ಯಕ್ಕೆ ಗುರಿಯಾದರು.

ವೆಂಕಟಪೇಟೆಯ ಪರ ಗೋಳಾಟ

(ಬರೆದ ಬಂದದ್ದು)

ವೆಂಕಟಪೇಟೆಯು ಎಲ್ಲ ಪೇಟೆಗಳಿಗಿಂತಲೂ ಹೆಚ್ಚು ಮಲಿನವಾಗಿರುವದೆಂದು ಹೇಳಿದ್ದು ಸ್ವಲ್ಪವೂ ಅಸತ್ಯವಲ್ಲ. ಆದರೆ ಅಲ್ಲಿಯ ಸ್ಥಿತಿಗತಿಗಳನ್ನು ಬರೆದು ವೆಂಕಟಪೇಟೆಯಲ್ಲಿ ವಾಸಮಾಡುವವರನ್ನು ಕೇಳಬೇಕು. ಈ ... ವೆಂಕಟಪೇಟೆಯಲ್ಲಿ ವಾಸಮಾಡುವವರು ... ಬಂದ ಬಗೆ ತಿಳಿದ ಬರುವದು. ಮುನಿಸಿಪಾಲಿಟಿಯಿಂದ ಅನಾರೋಗ್ಯ ... ಈ ಗಟಾರವು ಎಷ್ಟೋ ದಿನಗಳಿಗೆ ತವರವನೆ ಆಗಿದೆ. ಈ ಗಟಾರವು ... ಎಲ್ಲ ಗಟಾರವು ಮೇಲ್ಬದಿಯಲ್ಲಿ ಮುಚ್ಚಲ್ಪಟ್ಟಿರುವದರಿಂದ ಎಷ್ಟೋ ಜನರು ಅದನ್ನು ಮಲವಿಸರ್ಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವರು. ಅಸಂಖ್ಯಾತ ಜನರು ರಾತ್ರಿ ಸಮಯದಲ್ಲಿಯೂ ಹಾಗೂ ಹಗಲಿನಲ್ಲಿಯೂ ಯಾವ ಸಂಕೋಚವೂ ಇಲ್ಲದೆ ಅಲ್ಲಿ ಶೌಚ ಮಾಡುತ್ತಾರೆ. ಈ ಗಟಾರದ ಸ್ಥಿತಿಯು ಹೀಗೆ ಇದ್ದುದರಿಂದ ಅದು ನೊಳ್ಳೆ, ಗುಂಗಾಡು ಮೊದಲಾದ ರೋಗಜನಕ ಹುಳುಗಳಿಗೆ ವಿಶ್ರಾಂತಿ ಸ್ಥಾನವಾಗಿದೆ. ವೆಂಕಟಪೇಟೆಯ ನಿವಾಸಿಗಳಿಗೆ ಈ ಹುಳಗಳಿಂದ ಎಷ್ಟು ತೊಂದರೆಯಾಗುತ್ತಿರುವದೆಂಬುದು ಉಳಿದ ಪೇಟೆಯಲ್ಲಿಯ ಜನರಿಗೆ ಗೊತ್ತಾಗಲಿಕ್ಕಿಲ್ಲ.

ಈ ಗುಂಗಾಡುಗಳ ಕಡಿತವು ಎಷ್ಟು ತೀವ್ರವಾಗಿರುತ್ತದೆಂದರೆ, ಕೋಳಿಗೂಡಿನಂದ ವೆಂಕಟಪೇಟೆಯಲ್ಲಿ ನೆಲಸುವವರಿಗೆ ರಾತ್ರಿಯಲ್ಲಿ ನಿದ್ದೆಯೆಂಬುದು ಇಲ್ಲವೇ ಇಲ್ಲ. ಹೀಗಾಗಿ ವೆಂಕಟಪೇಟೆಯವರು ಮಲೇರಿಯಾ, ಕಾಲರಾ, ಅತಿಸಾರ ಇವೇ ಮೊದಲಾದ ಒಂದಿಲ್ಲೊಂದು ರೋಗದಿಂದ ಬಳಲುತ್ತಿರುವರು.

ಈ ಸಂಬಂಧವಾಗಿ ಮ್ಯುನಿಸಿಪಾಲಿಟಿಯವರಿಗೆ ವೃತ್ತಪತ್ರ ಹಾಗೂ ಅರ್ಜಿಗಳ ಮೂಲಕವಾಗಿ ಎಷ್ಟೋ ಸಾರಿ ವಿನಂತಿ ಮಾಡಿಕೊಂಡಾಗ್ಯೂ ಸಹ, ಮ್ಯುನಿಸಿಪಾಲಿಟಿಯವರು ಇತ್ತ ಕಡೆಗೆ ಲಕ್ಷ್ಯವನ್ನೇ ಕೊಟ್ಟಿಲ್ಲ. ಮ್ಯುನಿಸಿಪಾಲಿಟಿಯವರು ಈ ವಿಷಯವನ್ನು ವಿಚಾರಿಸಿ ಮೇಲಿಂದ ... ವೆಂಕಟಪೇಟೆಯ ಸ್ಥಿತಿಗತಿಯನ್ನು ಸ್ವಲ್ಪ ದಿನಗಳಲ್ಲಿಯೇ ಸುಧಾರಿಸಬಹುದು. ... ಕೆಳಗಿನ ಈ ಯೋಜನೆಗಳನ್ನು ಕೈಕೊಳ್ಳಬೇಕಾಗಿ ನಾವು ಸೂಚಿಸುತ್ತೇವೆ.

೧. ದೊಡ್ಡ ಗಟಾರಕ್ಕೆ ಕೂಡಿರುವ ಸಣ್ಣ ಸಣ್ಣ ಗಟಾರಗಳನ್ನು ಆತ ... ಬ್ರಿಟಿಷ್ ಪಟ್ಟಣದ ಪೂರ್ವ ಭಾಗದ ಕಡೆಗೆ ಅವುಗಳನ್ನು ಒಯ್ದು ಬಿಡಬೇಕು.

೨. ಪೋಸ್ಟ ಆಫೀಸಿನಿಂದ ಅಡವಿಸ್ವಾಮಿ ಮಠದ ಕಡೆಗೆ ಹರಿಯುವ ಗಟಾರದ ಮೇಲ್ಭಾಗವನ್ನು ಸಪಾಟ ಕಲ್ಲಿನಿಂದ ಮುಚ್ಚಬೇಕು. ಹೀಗೆ ಮಾಡಿದಲ್ಲಿ ಗುಂಗಾಡು, ನೊಳ್ಳೆ ಮೊದಲಾದವುಗಳು ಅಲ್ಲಿ ಮನೆಮಾಡಿಕೊಂಡಿರುವದು ಕಡಿಮೆಯಾಗುವದು. ಇದಲ್ಲದೆ ಜನರು ಶೌಚ ಮಾಡುತ್ತಿರುವದನ್ನೂ ಪ್ರತಿಬಂಧಿಸಿದಂತಾಗುವದು.

೩. ಪೋಸ್ಟ ಆಫೀಸಿನಿಂದ ಜೋರಾಪುರ ಗಿರಣಿಯ ವರೆಗಿರುವ ಬೈಲಿನಲ್ಲಿ ರಾತ್ರಿ ಸಮಯದಲ್ಲಿ ಯಾರೂ ಶೌಚ ಮಾಡದಂತೆ ನೋಡಿಕೊಳ್ಳಲು ಆ ಸ್ಥಳದಲ್ಲಿ ಓರ್ವ ಕಾವಲುಗಾರನನ್ನು ನಿಯಮಿಸಬೇಕು.

ಇ. ಮ್ಯುನಿಸಿಪಾಲಿಟಿಯವರು ಈಗಿನ ಗಟಾರನ್ನು ದೊಡ್ಡದನ್ನಾಗಿ ಮಾಡುವವರಿದ್ದಾರೆಂದು ತಿಳಿದು ಬರುತ್ತದೆ. ಹೀಗೆ ಗಟಾರನ್ನು ದೊಡ್ಡದನ್ನಾಗಿ ಮಾಡಿದರೆ ವೆಂಕಟಪೇಟೆಯ ಸ್ಥಿತಿ ತಿಳಿಯಾಗಿ ಸುಧಾರಿಸುವಂತಿಲ್ಲ. ಮಲಮೂತ್ರ ವಿಸರ್ಜನ ಮಾಡುವವರಿಗೆ ಮತ್ತಷ್ಟೂ ಅನುಕೂಲತೆ ಮಾಡಿಕೊಟ್ಟಂತಾಗುವದು.

ಮ್ಯುನಿಸಿಪಾಲಿಟಿಯವರು ಇತ್ತ ಲಕ್ಷ್ಯಕೊಟ್ಟು ವೆಂಕಟಪೇಟೆಯ ಸ್ಥಿತಿಗತಿಯನ್ನು ಇನ್ನಾದರೂ ಸುಧಾರಿಸುವರೇ?

ಸೊಲ್ಲಾಪುರ
ದಂಡಿನ ಕಾಯದೆಯ ನಿಷೇಧ

ಸೊಲ್ಲಾಪುರ ತಾಲೂಕ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಗಳು ಹಾಗೂ ಸ್ವದೇಶಿ ಪ್ರಚಾರಕ ಸಂಘದವರು ಒಂದು ಪ್ರಕಟನೆಯನ್ನು ಹೊರಡಿಸಿ, ರಾಷ್ಟ್ರೀಯ ಸಪ್ತಾಹದಲ್ಲಿ ಅಖಿಲ ಹಿಂದುಸ್ಥಾನದೊಳಗೆ ಎಲ್ಲ ಕಡೆಗಳಲ್ಲಿಯೂ ಸೊಲ್ಲಾಪುರದಲ್ಲಿ ದಂಡಿನವರಿಂದ ಘಟಿಸಿದ ದುಷ್ಕೃತ್ಯ ಹಾಗೂ ಗೋಳೀಬಾರು ಈ ಸಂಬಂಧವಾಗಿ ನಿಷೇಧಸಭೆ ಠರಾವು ಪಾಸು ಮಾಡಿಕೊಳ್ಳಬೇಕಾಗಿ ವಿನಂತಿ ಮಾಡಿಕೊಂಡಿದ್ದಾರೆ

ಮುಂಬಯಿ
ಲಿಂಗಾಯತ ಸಮಾಜ

ಮುಂಬಯಿಯ ಲಿಂಗಾಯತರು ತಾ|| ೨೨ನೆಯ ದಿನ ೬ ಕ್ಕೆ ಯ ಅಡ್ವೋಕೇಟರಾದ ಶ್ರೀ ಅಣ್ಣಾಸಾಹೇಬ ಜಿ. ಪಿ. ಮೊರಾತಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಹಾಗೂ "ಮುಂಬಯಿ ಲಿಂಗಾಯತ ಸಮಾಜ"ವೆಂಬ ಸಂಘವನ್ನು ಸ್ಥಾಪಿಸಿಕೊಂಡರು. ಈ ಸಂಘಕ್ಕೆ ಶ್ರೀ ಅಣ್ಣಾಸಾಹೇಬ ಜಿ. ಪಿ. ಮೊರಾತಿಯವರು ಅಧ್ಯಕ್ಷರಾಗಿಯೂ, ಭಾಟಿಯಾ ಪಕ್ಷದ ... ಮತ್ತು ಉಳ್ಳೇಗಡ್ಡಿ ಧನಪ್ಪನವರು ಉಪಾಧ್ಯಕ್ಷರಾಗಿಯೂ, ಜೇರಿಗೆ ಶಿವಶಂಕರಪ್ಪ, ದೇಶಪಾಂಡೆ ಮತ್ತು ಎಸ್ ಎಸ್ ... ಯವರು ಕಾರ್ಯದರ್ಶಿಗಳಾಗಿಯೂ ನಿಯಮಿಸಲ್ಪಟ್ಟಿದ್ದಾರೆ

ಮಂಗಳೂರಿನ ವೃತ್ತಾಂತ

ರಾಷ್ಟ್ರೀಯ ಸಪ್ತಾಹದ ಪ್ರಥಮ ದಿನದ ನಿಮಿತ್ತವಾಗಿ ತಾ|| ೬ನೆಯ ದಿನ ಮುಂಜಾನೆಯ ೮ ಗಂಟೆಗೆ ರಾಷ್ಟ್ರಧ್ವಜ ವಂದನೆಯು ಸಮಾರಂಭವು ನಡೆಯಿತು.

ಸ್ವದೇಶೀ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭವಾಗಿದ್ದು ದಿನದಿನವೂ ಪಿಕೆಟಿಂಗ ಮಾಡುತ್ತಿರುವರು.

ಎಪ್ರಿಲ ತಿಂಗಳ ಕೊನೆಯಲ್ಲಿ ಈ ಜಿಲ್ಲೆಯ ಯುವಕ ಪರಿಷತ್ತು ಹಾಗೂ ಸ್ತ್ರೀಯರ ಪರಿಷತ್ತು ಇವುಗಳು ಇದ್ದು ನೆರವೇರಿದ್ದು, ಅವುಗಳ ಸ್ಥಿತಿಯು ಉತ್ಸಾಹದಿಂದಲೇ ನಡೆದಿದೆ.

ಸೊಲ್ಲಾಪುರದಲ್ಲಿ
ಔದ್ಯೋಗಿಕ ಶಾಲೆ

ಸೊಲ್ಲಾಪುರ ನಗರಸಭೆಯವರು ತಾ|| ೩ನೆಯ ದಿನ ಸಭೆಕೂಡಿಸಿ, ೨೦ ವಿರುದ್ಧ ೭ ಮತಗಳಿಂದ, ಸೊಲ್ಲಾಪುರದಲ್ಲಿ ಒಂದು ಔದ್ಯೋಗಿಕ ಶಾಲೆಯನ್ನು ತೆರೆಯಬೇಕೆಂದು ಠರಾವು ಪಾಸುಮಾಡಿಕೊಂಡರು.

ಡಿಸ್ಟ್ರಿಕ್ಟ ಲೋಕಲ್ ಬೋರ್ಡ
ಮೆಂಬರರ ಕೊಲೆ

ಮಂಗಳೂರು ಜಿಲ್ಲೆಯ ಲೋಕಲ್ ಬೋರ್ಡಿನ ಮೆಂಬರರಾಗಿದ್ದ ಶ್ರೀ ಶಿವಪ್ಪ ಹೆಗಡೆಯವರನ್ನು ಮಿಜಾರದ ಹತ್ತಿರ ಕೊಂದು, ಅವರ ದೇಹವನ್ನು ತುಂಡು ತುಂಡಾಗಿ ಮಾಡಿದ್ದಾರೆ. ಪೋಲೀಸರ ಶೋಧವು ನಡೆದಿದೆ

ಕಾನಪೂರ ದಂಗೆಗೆ
ಸರಕಾರಿ ಅಧಿಕಾರಿಗಳೇ ಹೊಣೆಗಾರರು

ಕಾನಪೂರದಲ್ಲಿಯ ಹಿಂದೂ ವ್ಯಾಪಾರಿಗಳು ತಾ|| ೪ನೆಯ ದಿವಸ ಸಭೆಸೇರಿಸಿಕೊಂಡು, ಹಿಂದು-ಮುಸಲ್ಮಾನರಲ್ಲಿ ಹೀಗೆ ಭಯಂಕರ ದಂಗೆಯಾಗಲಿಕ್ಕೆ ಸರಕಾರಿ ಅಧಿಕಾರಿಗಳೇ ಜವಾಬದಾರರಿರುವರೆಂದೂ, ಸರಕಾರಿ ಅಧಿಕಾರಿಗಳು ಪಕ್ಷಪಾತವನ್ನು ತೋರಿಸಿದ್ದರಿಂದಲೆ ದಂಗೆಯು ಇಷ್ಟು ವಿಕೋಪಕ್ಕೆ ಹೋಯಿತೆಂದೂ ಠರಾವು ಮಾಡಿಕೊಂಡಿದ್ದಾರೆ. ಈಗಿನ ಸರಕಾರಿ ಅಧಿಕಾರಿಗಳಲ್ಲಿ ತಮ್ಮದು ಎಳ್ಳಷ್ಟೂ ವಿಶ್ವಾಸವಿಲ್ಲವೆಂದೂ ಮತ್ತು ತಮ್ಮ ಜೀವಿತ ವಿತ್ತ, ಮಾನಮರ್ಯಾದೆ ಇವುಗಳ ಸಂರಕ್ಷಣೆಯ ಬಗ್ಗೆ ಯೋಗ್ಯ ಕಾಳಜಿ ತೆಗೆದುಕೊಳ್ಳುವದರಲ್ಲಿ ಬರುವದೆಂದು ಎಲ್ಲಿಯವರೆಗೆ ತಮಗೆ ಆಶ್ವಾಸನ ಸಿಗುವದಿಲ್ಲವೋ ಅಲ್ಲಿಯವರೆಗೆ ತಾವು ತಮ್ಮ ಅಂಗಡಿಗಳನ್ನು ತೆರೆಯುವದಿಲ್ಲವೆಂಬುದಾಗಿ ಅವರು ಸರಕಾರಕ್ಕೆ ಎಚ್ಚರಿಕೆ ಕೊಟ್ಟಿರುವರಾಗಿ ತಿಳಿಯುತ್ತದೆ.

ಅಖಿಲ ಭಾರತ ಸ್ವಯಂಸೇವಕ ಮಂಡಳದ ಸಭಾಸದರು.

ಕರಾಚಿಯಲ್ಲಿ ಕೂಡಿದ ಅಖಿಲ ಭಾರತ ಸ್ವಯಂಸೇವಕರ ಪರಿಷತ್ತಿನಲ್ಲಿ ಈ ಕೆಳಗಿನ ಸದ್ಗೃಹಸ್ಥರು ಅಖಿಲಭಾರತ ಸ್ವಯಂಸೇವಕ ಮಂಡಳದ ಸಭಾಸದರಾಗಿ ಆರಿಸಲ್ಪಟ್ಟಿದ್ದಾರೆ. ೧ ಪಂಡಿತ ಜವಾಹಿರಲಾಲ ನೆಹರು ೨ ಶ್ರೀಮತಿ ಹಂಸಾ ಮೇಹತಾ ೩ ಶ್ರೀಮತಿ ಅವಂತಿಕಾಬಾಯಿ ಗೋಖಲೆ ೪ ಶ್ರೀಮತಿ ಕಮಲಾ ನೆಹರು ೫ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ ೬ ಶ್ರೀಮತಿ ದುರ್ಗಾಬಾಯಿ ಜೋಶಿ ೭ ಶ್ರೀಮತಿ ಘುಟಕ ೮ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ೯ ಶ್ರೀಮತಿ ಸತ್ಯವತಿ ೧೦ ಶ್ರೀಮತಿ ಕಾಮೇಶ್ವರಿ ೧೧ ಶ್ರೀಮತಿ ಶಾಂತಿದಾಸ ೧೨ ಮೆಹರ ಅಲ್ಲಿ ೧೩ ಅಬ್ದುಲ್ ಗಫೂರಖಾನ ೧೪ ಎನ್ ಪಿ. ಗಾಡಗೀಳ ೧೫ ಪಿ ಪಿ ಸುಭೇದಾರ ೧೬ ಡಾ. ಕಿಚಲೂ ೧೭ ಸರದಾರ ಮಂಗಳಸಿಂಗ ೧೮ ಭಾಷ್ಯಂ ಅಯ್ಯಂಗಾರ ೧೯ ವಿಷ್ಣು ಶರ್ಮಾ ೨೦ ಪ್ರೊ. ಜಾನಶಹಾ ೨೧ ಪ್ರಫುಲ್ಲ ಚಂದ್ರಗಂಗೂಲಿ ೨೨ ಹರಿಸರ್ವೋತ್ತಮರಾವ

ಡಾ ಹರ್ಡೀಕರರು ಕಾರ್ಯದರ್ಶಿಗಳಾಗಿಯೂ, ಪಿ. ಆರ್ ನಾಯಕರವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ.

ಕಾಠೇವಾಡ ಪ್ರಾಂತದಲ್ಲಿ
ದಬ್ಬಾಳಿಕೆಯು ಹೆಚ್ಚಾಯಿತು

ರಾಜಕೋಟದ ಕೆಲವು ವಿದ್ಯಾರ್ಥಿಗಳು ಸ್ವದೇಶೀ ಪ್ರಸಾರಾರ್ಥವಾಗಿ ಕಾಠೇವಾಡ ಪ್ರಾಂತದ ಹಳ್ಳಿಗಳಲ್ಲಿ ಸಂಚರಿಸುತ್ತಿದ್ದು, ಅವರು ಮೊನ್ನಿನ ದಿವಸ ಜಾಮನಗರ ಸಂಸ್ಥಾನದಲ್ಲಿಯ ಆಟಕೋಟ ಎಂಬ ಹಳ್ಳಿಗೆ ಹೋದು ಅಲ್ಲಿ ಒಂದು ಸಭೆ ಜರುಗಿಸಿದರು. ಪೋಲೀಸರಿಗೆ ಈ ಸುದ್ದಿ ಹತ್ತಿದ ಕೂಡಲೆ ಅವರು ಸಭಾಸ್ಥಾನಕ್ಕೆ ಹೋದು ಸಭೆಯನ್ನು ಮುರಿದು ಅವರನ್ನು ಕೈದು ಮಾಡಿ, ಸಂಸ್ಥಾನದ ಹದ್ದಿಯಲ್ಲಿ ಬರಕೂಡದಾಗಿ ಅವರಿಗೆ ಅಪ್ಪಣೆ ವಿಧಿಸಿದರು

ಒಬ್ಬ ಸ್ವಯಂಸೇವಕನು ಪರದೇಶೀ ಬಟ್ಟೆಗಳ ಮಾರಾಟವನ್ನು ಪ್ರತಿಬಂಧ ಮಾಡುವದಕ್ಕಾಗಿ ಮೋರವಿಗೆ ಹೋಗಿದ್ದನು. ಅಲ್ಲಿಯ ಅಧಿಕಾರಿಗಳು ಸಂಸ್ಥಾನದ ಹದ್ದನ್ನು ಬಿಟ್ಟು ಹೋಗಲು ಅವನಿಗೆ ಅಪ್ಪಣೆ ಕೊಟ್ಟರು. ಸ್ವಯಂಸೇವಕನು ಅಧಿಕಾರಿಗಳ ಅಪ್ಪಣೆಯನ್ನು ಧಿಕ್ಕರಿಸಿ ತನ್ನ ಕಾರ್ಯವನ್ನು ಹಾಗೆಯೇ ಸಾಗಿಸಿದನು ಅಧಿಕಾರಿಗಳು ಅವನನ್ನು ಮೋಟಾರದಲ್ಲಿ ಕೂಡಿಸಿಕೊಂಡು ತಮ್ಮ ಸಂಸ್ಥಾನದ ಹದ್ದಿಯ ಹೊರಗಿರುವ ಒಂದು ಅರಣ್ಯದಲ್ಲಿ ಅವನನ್ನು ಬಿಟ್ಟುಬಿಟ್ಟರು.

ರೆ ನಂ. ಬಿ. ೨೭೮೮

ನಿತ್ಯ ಪತ್ರ.

सर्वं परवशं दुःखं । सर्वमात्मवशं सुखम् ॥ –मनु.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ
೧೨ ತಿಂಗಳಿಗೆ ೧೫—೦—೦
೬ ,, ೭—೮—೦
೩ ,, ೩—೧೨—೦
,, ೧—೧೪—೦
ಸ್ಥಳೀಯರಿಗೆ
೧೨ ತಿಂಗಳಿಗೆ ೧೨—೦—
೬ ,, ೬—೦—೦
೩ ,, ೩—೮—೦
೧ ,, ೧—೦—೦

ಕನ್ನಡಿಗ

KANNADIGA
BAGALKOT.

BI-WEEKLY
ಅರವಾರ ಪತ್ರಿಕೆ.

ಬೆಲೆ ೦—೦—೩

ನಿತ್ಯಪತ್ರಿಕೆಯ
ಜಾಹೀರಾತು ಹಾಗು ಪಂಗಾಮಿ
ಜಾಹೀರಾತಿನ ದರಗಳು
೧ನೇ ಕಲ ೧ ಇಂಚಿಗೆ ೧—೮—೦
೨ ,, ,, ೧—೪—೦
ಮುಂದೆ ಪ್ರತಿಯೊಂದು ಸಲ
೦—೧೨—೦
ಹೆಚ್ಚಿನ ಗಡವಿಗೆ ಅಕ್ಷರಗಳ
ಪ್ರಮಾಣದಿಂದ ದರಬೀಳುವದು

ಸಂಪಾದಕರು:– ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೩] ಬಾಗಲಕೋಟೆ— ಗುರುವಾರ ಮಿತಿ ಚೈತ್ರ ಬಹುಳ ೭ ಶಕೆ ೧೮೫೩ ತಾ॥ ೯—೪—೩೧ [ಸಂಚಿಕೆ ೩೦

ಮಿದನಾಪೂರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಗುಂಡು ಹೊಡೆದರು!

ಸ್ಪೇಶಲ್ ತಂತಿ, ಮುಂಬಯಿ ತಾ॥ ೮

ಮಿದನಾಪೂರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ತಾ॥ ೭ ನೆಯ ದಿವಸ ಸಂಜೆಯಲ್ಲಿ ಅಲ್ಲಿಯ ಶಾಲೆಯನ್ನು ಸಂದರ್ಶಿಸುತ್ತಿರುವ ಸಮಯದಲ್ಲಿ ಯಾವನೋ ಒಬ್ಬನು ಅವರಿಗೆ ಗುರಿಯಿಟ್ಟು ಒಂದೇಸಮನೆ ಐದು ಸಾರೆ ಗುಂಡು ಹೊಡೆದನು. ಮೂರು ಗುಂಡುಗಳು ಬೆನ್ನಿಗೂ ಎರಡು ಗುಂಡುಗಳು ಭುಜಗಳಿಗೂ ತಗುಲಿದವು. ಒಂದು ಗುಂಡು ಹೊಟ್ಟೆಯೊಳಗೆ ನಟ್ಟಿತು. ಕೂಡಲೇ ಅವರನ್ನು ಆಸ್ಪತ್ರೆಗೆ ಒಯ್ಯಲಾಯಿತು. ಆರೋಪಿಯ ಪತ್ತೆಯಾಗಿಲ್ಲ.

ವ್ಯಾಪಾರಿ ಮಹಾಮಂಡಳದ ವಾರ್ಷಿಕ ಪರಿಷತ್ತು

(ಸ್ಪೇಶಲ್ ತಂತಿ ಮುಂಬಯಿ, ತಾ॥ ೮)

ಮಹಾತ್ಮಾ ಗಾಂಧಿಯವರು ನಿನ್ನಿನ ದಿವಸ ದಿಲ್ಲಿಯಲ್ಲಿ ವ್ಯಾಪಾರಿ ಮಹಾಮಂಡಳದ ವಾರ್ಷಿಕ ಪರಿಷತ್ತನ್ನು ತೆರೆದು ಅದರ ಕಾರ್ಯವನ್ನು ಪ್ರಾರಂಭಿಸಿದರು. ಈ ಪರಿಷತ್ತು ಇಷ್ಟುದಿನಗಳ ವರೆಗೆ ನ್ಯಾಯಸರಾಯರಿಂದಲೇ ತೆರೆಯಲ್ಪಡುತ್ತಿತ್ತು. ಮಹಾಮಂಡಳದ ಅಧ್ಯಕ್ಷರಾದ ಲಾಲಾ ಶ್ರೀರಾಮ ಇವರು ತಮ್ಮ ಭಾಷಣದಲ್ಲಿ, ಪೂರಾ ಸ್ವರಾಜ್ಯವೇ ಹಿಂದೂ ವ್ಯಾಪಾರಸ್ಥರ ಬೇಡಿಕೆಯಾಗಿದೆಯೆಂದೂ, ಪೂರಾ ಸ್ವರಾಜ್ಯ ಸಿಗದ ಹೊರತು ಹಿಂದೂ ವ್ಯಾಪಾರಸ್ಥರಿಗೆ ಸಮಾಧಾನವಿಲ್ಲವೆಂದೂ ಹೇಳಿದರು.

ಮಹಾತ್ಮಾ ಗಾಂಧಿಯವರು ಹಿಂದಿಯಲ್ಲಿ ಭಾಷಣಮಾಡಿ, ಸ್ವರಾಜ್ಯವೆಂದರೆ ನ್ಯಾಯಬದ್ಧವಾದ ರಾಜ್ಯವೆಂದೂ, ಇಂಗ್ಲೀಷರ ಹಕ್ಕು-ಬಾಧ್ಯತೆಗಳಿಗೆ ಸ್ವರಾಜ್ಯದಲ್ಲಿ ಬಾಧೆ ಬರಲಾರದೆಂದೂ ಹೇಳಿ, ವ್ಯಾಪಾರಸ್ಥರಿಗೆ ಕಾಂಗ್ರೆಸದಲ್ಲಿ ಸೇರಿಕೊಳ್ಳಲೂ ಹಾಗು ಸ್ವಾರ್ಥತ್ಯಾಗ ಮಾಡಲೂ ವಿನಂತಿ ಮಾಡಿಕೊಂಡರು. ಇಂಗ್ಲೀಷ ವ್ಯಾಪಾರಿಗಳಾದರೂ ಅವರು ಇದೇ ಬಗೆಯ ಉದ್ದೇಶವಿಟ್ಟು, ತಮ್ಮ ರಾಷ್ಟ್ರೀಯತ್ವವನ್ನು ಸಮೂಲ ನಾಶಪಡಿಸುವಂತಹದಿರುವದಿಲ್ಲವೆಂದೂ ಪರರು ಯಾರನ್ನಾದರೂ ಸಮೂಲ ನಾಶಪಡಿಸಬಿಟ್ಟರೆ, ಅವರಿಗೆ ಹಾಗೆ ಮಾಡಗೊಡುವದಿಲ್ಲವೆಂದೂ ಹೇಳಿದರು.

ಮುಂಬಯಿಯ ಮುಸಲ್ಮಾನರ ಸಭೆಯಲ್ಲಿ ಹೊಡೆದಾಟ

ಒಬ್ಬನಿಗೆ ಮರಣ ೯ ಜನರಿಗೆ ಗಾಯ.

ಮುಂಬಯಿ, ತಾ॥ ೮

ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಮುಂಬಯಿಯ ಡೊಂಗರಿ ಭಾಗದಲ್ಲಿ ನಿನ್ನಿನ ದಿವಸ ಮುಸಲ್ಮಾನರು ಒಂದು ಸಾರ್ವಜನಿಕ ಸಭೆ ಕೂಡಿಸಿದ್ದರು. ಸಭೆಯಲ್ಲಿ ವಿಲಾಫತ ಪಂಗಡದವರಿಗೂ ರಾಷ್ಟ್ರೀಯ ಪಕ್ಷದವರಿಗೂ ಹೊಡೆದಾಟವಾಗಿ, ಒಬ್ಬ ಮುಸಲ್ಮಾನನು ಕಠಾರಿಯಿಂದ ಇರಿಯಲ್ಪಟ್ಟನು. ಅವನನ್ನು ಕಾಂಗ್ರೆಸ ಆಸ್ಪತ್ರೆಗೆ ಒಯ್ಯುವದರಲ್ಲಿ ಬಂತು. ಅಲ್ಲಿ ಅವನು ಮರಣ ಹೊಂದಿದನು. ಹೊಡೆದಾಟದಲ್ಲಿ ಇನ್ನೂ ೯ ಜನರಿಗೆ ಭಯಂಕರ ಗಾಯಗಳಾಗಿವೆ. ಮುಸಲ್ಮಾನರ ಬೀದಿಗಳಲ್ಲಿ ಪೋಲೀಸರ ಕಾವಲಿಡಲಾಗಿದೆ.

ಸ್ಪೇಶಲ್ ತಂತಿ, ಮುಂಬಯಿ, ತಾ॥ ೮

ರಾಷ್ಟ್ರೀಯಪಕ್ಷದ ಮುಸಲ್ಮಾನರ ಮುಂದಾಳುಗಳಾದ ಆಶುಲ್ಲಾ ಶಹಾ ಬುಖಾರಿಯವರು ನಿನ್ನಿನ ದಿವಸ ಡೊಂಗರಿಯಲ್ಲಿ ಮುಸಲ್ಮಾನರನ್ನುದ್ದೇಶಿಸಿ ಭಾಷಣ ಮಾಡತಕ್ಕವರಿದ್ದರು. ಆಗ ಕೆಲವು ಕಿಡಿಗೇಡಿ ಜನರು ಸಭೆಯಲ್ಲಿ ಕಲ್ಲು ಮೊದಲಾದವುಗಳನ್ನು ಒಗೆದು ಗೊಂದಲ ಹಾಕಿದರು. ಸಭೆಯಲ್ಲಿ ಹೊಡೆದಾಟವಾಗಿ ಒಬ್ಬ ಮುಸಲ್ಮಾನನು ಕಠಾರಿಯಿಂದ ಇರಿಯಲ್ಪಟ್ಟು ಮರಣೋನ್ಮುಖನಾಗಿ ಬಿದ್ದದ್ದಲ್ಲದೆ, ೯ ಜನರು ಭಯಂಕರ ಗಾಯಹೊಂದಿದರು.

(ಮುಂಬಯಿ ತಾ. ೮)

ಇಲ್ಲಿಯ ರಾಷ್ಟ್ರೀಯ ಪಕ್ಷದ ಮುಸಲ್ಮಾನರು ನಿನ್ನಿನ ದಿವಸ ಒಂದು ಸಾರ್ವಜನಿಕ ಸಭೆ ಕರೆದಿದ್ದರು. ಪಂಜಾಬ ಮುಸಲ್ಮಾನರ ಮುಂದಾಳುಗಳಾದ ಮೌಲಾನಾ ಆತುಲ್ಲಾ ಬುಖಾರಿಯವರು ಸಭೆಯಲ್ಲಿ ಭಾಷಣ ಮಾಡಿದರು. ಮೌಲಾನಾರವರು ಭಾಷಣ ಮಾಡಲು ಎದ್ದ ಕೂಡಲೆ ಕಾಂಗ್ರೆಸ ವಿರೋಧಿ ಮುಸಲ್ಮಾನರು ಗೊಂದಲ ಹಾಕಹತ್ತಿ, ಅವರ ಭಾಷಣಕ್ಕೆ ಅಡ್ಡಿ ಮಾಡಿದರು. ಶಾಂತರೀತಿಯಿಂದ ವರ್ತಿಸಿದರೆ ನಿಮ್ಮ ಪ್ರತಿಯೊಂದು ಪ್ರಶ್ನೆಗೆ ಉತ್ತರ ಕೊಡುವದರಲ್ಲಿ ಬರುವದಾಗಿ ಮೌಲಾನಾರವರು ಅವರಿಗೆ ತಿಳಿಸಿದರು. ಕಾಂಗ್ರೆಸ ವಿರೋಧಿ ಪಕ್ಷದವರು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ವ್ಯಾಸಪೀಠದ ಕಡೆಗೆ ನುಗ್ಗಿ ಹೋದರು. ಹೀಗೆ ಸಭೆಯಲ್ಲಿ ಒಮ್ಮಿಂದೊಮ್ಮೆ ಗದ್ದಲವೆದ್ದದ್ದರಿಂದ ಜನರು ಭಯಭೀತರಾಗಿ ಓಡಿಹೋಗಹತ್ತಿದರು. ಇಷ್ಟರಲ್ಲಿ ಲಾಠಿ, ಚಾಕು, ಕಲ್ಲು ಮೊದಲಾದವುಗಳ ಹೊಡೆದಾಟಕ್ಕೆ ಪ್ರಾರಂಭವಾಯಿತು. ಸುಮಾರು ೧೨ ಜನರು ಗಾಯ ಹೊಂದಿದ್ದು, ಒಬ್ಬ ಮುಸ್ಲಿಮ ಕಾಂಗ್ರೆಸ ಸ್ವಯಸೇವಕನು ಕಠಾರಿಯಿಂದ ಇರಿಯಲ್ಪಟ್ಟವನಾಗಿ ಮರಣ ಹೊಂದಿದ್ದಾನೆ- (ಅ. ಪ್ರ)

ಬಂಡುಗಾರರು ಫೌಜದಾರನನ್ನು ಸಾಯಹೊಡೆದರು.

ಸ್ಪೇಶಲ್ ತಂತಿ, ಮುಂಬಯಿ, ತಾ॥ ೮)

೭ ವರ್ಮಾ ಪ್ರಾಂತದ ಥರವಾಡಿ ಮತ್ತು ಇನಸೇನ ಜಿಲ್ಲೆಯ ಹದ್ದಿಯಲ್ಲಿ ಬಂಡುಗಾರರಿಗೂ ಹಾಗು ನಾಲ್ಕು ಜನ ಪೋಲೀಸ ಅಧಿಕಾರಿಗಳಿಗೂ ಕೈಗೆ ಕೈಹತ್ತಿ, ಪೋಲೀಸ ಸಬ್ ಇನಸ್ಪೇಕ್ಟರನು ಕೊಲ್ಲಲ್ಪಟ್ಟಿದ್ದಾನೆ ಮತ್ತೊರ್ವ ಪೋಲೀಸ ಅಧಿಕಾರಿಯ ಪತ್ತೆಯಿಲ್ಲವಾಗಿದೆ.

ವಾಮನ ಕಬಾಡಿಯವರ ವಿಚಾರಣೆ

(ಸ್ಪೇಶಲ್ ತಂತಿ, ಮುಂಭಯಿ ತಾ॥ ೮)

ಕ್ರಿ. ಪ್ರೊ. ಕೋಡಿನ ೫೫ ನೆಯ ಕಲಮಿನ ಪ್ರಕಾರ ನಿನ್ನಿನ ದಿವಸ ಲಾಹೋರದಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀ ವಾಮನ ಕಬಾಡಿಯವರು, ೧೦ ನೆಯ ತಾರೀಖಿಗೆ ಕೋರ್ಟಿನ ಮುಂದೆ ಬಂದು ನಿಲ್ಲಲು ಆಜ್ಞಾಪಿಸಲ್ಪಟ್ಟು ನಿನ್ನಿನ ದಿವಸವೇ ಬಿಡುಗಡೆ ಮಾಡಲ್ಪಟ್ಟಿದ್ದಾರೆ

ಶ್ರೀ ಸೇನಗುಪ್ತರು ಗವ್ಹರ್ನರರ ಭೆಟ್ಟಿಗೆ ಹೋದರು.

ಕಲಕತ್ತಾ, ತಾ. ೭

ಬಂಗಾಲದ ಸೆರೆಮನೆಗಳಲ್ಲಿ ವಿಚಾರಣೆಯಿಲ್ಲದೆ ಬಿದ್ದುಕೊಂಡಿರುವ "ಡೆಟೆನ್ಯೂ" ಜನರು ಹಾಗು ಇತರ ರಾಜಕೀಯ ಕೈದಿಗಳು, ಇವರ ಬಿಡುಗಡೆಯ ಸಂಬಂಧವಾಗಿ ಗವ್ಹರ್ನರರನ್ನು ವಿಚಾರಿಸಲು ಶ್ರೀ ಜೆ. ಎಂ. ಸೇನಗುಪ್ತರು ಇವತ್ತಿನ ದಿವಸ ದಾರ್ಜಿಲಿಂಗಕ್ಕೆ ಪ್ರಯಾಣ ಬೆಳಸಿದರು. (ಅ. ಪ್ರ)

ಸಿದ್ದಾಪುರದಲ್ಲಿ ಸ್ವಯಂಸೇವಕರ ಮೇಲೆ ನೋಟೀಸು

(ಸ್ಪೇಶಲ್ ತಂತಿ, ಸಿದ್ದಾಪುರ, ತಾ॥ ೮)

ಸಿದ್ದಾಪುರ ಅಧಿಕಾರಿಗಳು ಶ್ರೀ ಬೇವೂರ, ಗುರುನಾಥ ಜೋಶಿ, ವೀರಭದ್ರಪ್ಪ, ಸೀತಾರಾಮ ಈ ನಾಲ್ಕು ಜನರ ಮೇಲೆ ಡಿಸ್ಟ್ರಿಕ್ಟ ಪೋಲೀಸ ಕಾಯದೆಯ ೪೬ ನೆಯ ಕಲಮಿನನ್ವಯ ನೋಟೀಸು ಹೊರಡಿಸಿ, ತಮ್ಮ ಹದ್ದಿಯನ್ನು ಬಿಟ್ಟು ಹೋಗಲು ಅವರಿಗೆ ಅಪ್ಪಣೆ ವಿಧಿಸಿದ್ದಾರೆ. ಇನ್ನೂ ಕೆಲವರ ಮೇಲೆ ನೋಟೀಸುಗಳು ಹೊರಡತಕ್ಕವಿವೆ.

ಅಮೃತಸರದಲ್ಲಿ ಕಾಂಗ್ರೆಸ ಮುಖಂಡರಿಗೆ ಸನ್ಮಾನ

ಅಮೃತಸರ, ತಾ॥ ೮

ಇಲ್ಲಿ ಸೇರಲಿಕ್ಕಿರುವ ಶೀಖ ಪರಿಷತ್ತಿನಲ್ಲಿ ಭಾಗತೆಗೆದುಕೊಳ್ಳುವ ಉದ್ದೇಶದಿಂದ ಮಹಾತ್ಮಾ ಗಾಂಧಿ, ಪಂಡಿತ ಮಾಲವೀಯಾ, ಸುಭಾಷ ಭೋಸ, ಸೇಟ ಜಮನಾಲಾಲ ಬಜಾಜ ಮೊದಲಾದವರು ಇವತ್ತಿನ ದಿವಸ ದಿಲ್ಲಿಯಿಂದ ಇಲ್ಲಿಗೆ ಬಂದರು. ಸ್ತ್ರೀಪುರುಷರ ಪ್ರಚಂಡ ಜನಸಮುದಾಯವು ಸ್ಟೇಶನದಲ್ಲಿ ಅವರಿಗೆ ಯೋಗ್ಯ ಆದರ ಸತ್ಕಾರಗಳನ್ನು ಮಾಡಿ ಅವರನ್ನು ಊರಲ್ಲಿ ಕರೆದುಕೊಂಡು ಬಂದರು.

ಇಲ್ಲಿಯ ಮುನಿಸಿಪಾಲಟಿಯವರು ಮಹಾತ್ಮಾ ಗಾಂಧಿಯವರಿಗೆ ಮಾನಪತ್ರ ಅರ್ಪಿಸುವದಾಗಿ ಠರಾವು ಪಾಸುಮಾಡಿಕೊಂಡಿದ್ದಾರೆ. ಮುನಿಸಿಪಲ್ ಕಮೀಶನರರು ಗಾಂಧಿಯವರೊಡನೆ ಈ ಬಗ್ಗೆ ಮಾತಾಡಿ ತಾರೀಖು ವೇಳೆ ಮೊದಲಾದವುಗಳನ್ನು ಗೊತ್ತುಪಡಿಸಿಕೊಳ್ಳುವವರಿದ್ದಾರೆ. (ಅ. ಪ್ರ.)

ಕಾನಪುರದಲ್ಲಿ ಕಾಂಗ್ರೆಸ ಮುಖಂಡರು

ಸರದಾರ ವಲ್ಲಭಭಾಯಿ ಪಟೇಲ, ಮೌಲಾನಾ ಅಬ್ದುಲ್ ಕಲಮ ಆಜಾದ್, ಶೇಟ ಜಮನಾಲಾಲ ಬಜಾಜ, ದೇವಿದಾಸ ಗಾಂಧಿ, ಸ್ವಾಮಿ ಆನಂದಾನಂದ, ಪಂಡಿತ ಸುಂದರಲಾಲ, ಬಾಬು ಪುರುಷೋತ್ತಮದಾಸ ಟಂಡನ್ ಇವರೆಲ್ಲರೂ ತಾ॥ ೬ ನೆಯ ದಿವಸ ದಂಗೆಯ ಸ್ಥಳಗಳಲ್ಲಿ ಅಡ್ಡಾಡಿ, ಅಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರೆ ನೋಡಿ ಬಂದು, ಅಲ್ಲಿಯ ವ್ಯಾಪಾರಸ್ಥರಿಗೆ ಭೆಟ್ಟಿಯಾಗಿ ಅಂಗಡಿಗಳನ್ನು ತೆರೆಯುವ ಸಂಬಂಧವಾಗಿ ಅವರೊಡನೆ ವಿಚಾರ ವಿನಿಮಯ ಮಾಡಿದರು

ಕ್ಯಾಪ್ಟನ್ ಬಾರ್ನಸ್‌ರು ಜೀವದಿಂದ ಪಾರಾದರು.

ಪೇಶಾವರ, ತಾ॥ ೭.

ಅದಕ್ಕಾವಾರ ದಿವಸ ರಾತ್ರಿ ಯಾವನೋ ಒಬ್ಬನು ಕ್ಯಾಪ್ಟನ್ ಬಾರ್ನಸ್‌ರ ಮನೆಗೆ ಕನ್ನ ಕೊರೆಯುವ ಪ್ರಯತ್ನ ಮಾಡಿದನು. ಆ ಸಮಯದಲ್ಲಿ ಕೆಲವರು ಎಚ್ಚರಿದ್ದದರಿಂದ ಅವನ ಕಾರ್ಯವು ಸಫಲವಾಗಲಿಲ್ಲ. ಅವನು ಹಾಗೆಯೇ ಹಿಂತಿರುಗಿ ಪಾರಾಗಿ ಹೋದನು. ಕ್ಯಾಪ್ಟನ್ ಬಾರ್ನಸ್‌ರನ್ನು ಕೊಲೆಗೈಯುವದೇ ಅವನ ಉದ್ದೇಶವಾಗಿತ್ತೆಂದು ತಿಳಿಯಬರುತ್ತದೆ. ಅ. ಪ್ರೆ.

ಕೋಟಚೀನದಲ್ಲಿ ದಂಗೆ

ಕೋಟಚೀನ, ತಾ॥ ೭

ಕೋಟಚೀನದಲ್ಲಿ ಎಚ್. ಪಿ. ಜಾತಿಯ ಜನರ ಅರ್ಜದ ಮುಂದೆ ವ್ಯಕ್ತಿಶಃವಾಗಿ ಮೆರವಣಿಗೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ, ಅವರಿಗೂ ಹಾಗು ಕ್ರಿಶ್ಚಿಯನ್ನರಿಗೂ ಜಗಳವಾಗಿ, ಅದು ದಂಗೆಯ ಸ್ವರೂಪ ತಾಳಿತೆಂದೂ, ಈಗ ಅಲ್ಲಿ ಪುನಃ ಶಾಂತತೆಯು ಪ್ರಸ್ಥಾಪಿಸಲ್ಪಟ್ಟದೆಯೆಂದೂ ಸುದ್ದಿ ಬಂದಿದೆ. ದಂಗೆಯಲ್ಲಿ ಎರಡೂ ಪಕ್ಷದ ಕೆಲವು ಜನರು ಗಾಯಹೊಂದಿದ್ದಾರೆ (ಅ. ಪ್ರೆ.)

ಜಪ್ತಮಾಡಿದ ಭೂಮಿಗಳ ಸಂಬಂಧವಾಗಿ

ಸೂರತ ಜಿಲ್ಲೆಯ ಕಲೆಕ್ಟರರ ಪ್ರಕಟನೆ.

ಅಹಮ್ಮದಾಬಾದ, ತಾ। ೮

ಕರನಿರಾಕರಣೆಯ ಚಳವಳಿಯಲ್ಲಿ ಅಧಿಕಾರಿಗಳಿಂದ ಜಪ್ತಮಾಡಲ್ಪಟ್ಟ ಭೂಮಿಗಳ ಸಂಬಂಧವಾಗಿ ಸೂರತ ಜಿಲ್ಲೆಯ ಕಲೆಕ್ಟರರು ಒಂದು ಪ್ರಕಟನೆಯನ್ನು ಹೊರಡಿಸಿದ್ದು, ಅದರಲ್ಲಿ ಅವರು ಅನ್ನುವದೇನಂದರೆ —

ರೈತರು ಹೊಲಗಳಲ್ಲಿ ಬೆಳೆಯನ್ನು ಬೆಳೆಕೊಳ್ಳಬಹುದು. ಆದರೆ ಅವುಗಳನ್ನು ಕಾಲ್ವಿಕವಾಗಿ ತಮ್ಮ ಕಡೆಗೆ ತೆಗೆದುಕೊಳ್ಳಬೇಕೆಂದು ಅವರು ಬಯಸಿದರೆ, ಅವರು ಕಲೆಕ್ಟರರಿಗೆ ಅರ್ಜಿ ಮಾಡಿಕೊಳ್ಳಬೇಕು. ಅದನ್ನು ಮಾಡಿಕೊಂಡರೆ ಅವರಿಗೆ ಕೊಡುವದರಲ್ಲಿ ಬರುವದು. ಅವರು ಹೊಲಗಳನ್ನು ತಿರುಗಿ ಕೊಡಲು ಬಯಸುವದಾದರೆ ಗಾಂಧಿ-ಆಯರ್ವಿನ ಒಪ್ಪಂದದ ಪ್ರಕಾರ ಒಪ್ಪಿಸಿಬಿಟ್ಟು ಅವು ತಮ್ಮ ಕಡೆಗೆ ಕೊಡಲಾಗುತ್ತದೆ ಎಂಬದಾಗಿ ನೈಜವಾಗಿ ತಿಳಿಸಿ, ಅರ್ಜಿಗಳ ಮೇಲೆ ತಮ್ಮ ಸಹಿಗಳನ್ನು ಬರೆಯತಕ್ಕದ್ದು.

ಸೂರತ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರೆಂದರೂ ಹೀಗೆ ಅರ್ಜಿ ಮಾಡಿಕೊಳ್ಳಲು ರೈತರಿಗೆ ಉಪದೇಶ ಮಾಡುತ್ತಿರುವರು. ಭೂಕಂದಾಯವನ್ನು ಕೊಡಲು ಈಗ ಅಸಮರ್ಥರಿದ್ದವರು ಸರಕಾರಕ್ಕೆ ಅರ್ಜಿ ಮಾಡಿ ಆ ಬಗ್ಗೆ ಹೆಚ್ಚಿನ ಅವಧಿಯನ್ನು ಬೇಡಿಕೊಳ್ಳಬೇಕೆಂದು ಅವರು ಹೇಳುತ್ತಿರುವರು. ಮಹಾತ್ಮಾ ಗಾಂಧಿ ಹಾಗು ಸರದಾರ ವಲ್ಲಭಭಾಯಿಯವರು ಇತ್ತ ಪ್ರವಾಸ ಮಾಡಿ ಭೂಕಂದಾಯವನ್ನು ಕೊಡಲು ರೈತರಿಗೆ ಬೋಧಿಸಿ ಹೋಗಿದ್ದರಿಂದ ರೈತರು ಭೂಕಂದಾಯವನ್ನು ಕೊಡತೊಡಗಿದ್ದಾರೆ (ಅ ಪ್ರೆ.)

೨೫ ಹುಡುಗರನ್ನು ಶಾಲೆಯಿಂದ ಹೊರಗೆ ಹಾಕಿದರು.

ಮುಂಬಯಿಯ ಎಲ್‌ಫಿನ್‌ಸ್ಟನ್ ಹಾಯ ಸ್ಕೂಲದೊಳಗಿನ ೨೫ ವಿದ್ಯಾರ್ಥಿಗಳು, ಭಗತಸಿಂಗ ಮೊದಲಾದವರ ಸ್ಮಾರಕಾರ್ಥವಾಗಿ ಹರತಾಳ ಪಾಲಿಸಿ ಶಾಲೆಗೆ ಗೈರುಹಾಜರಾಗಿದ್ದರಿಂದ, ಶಾಲೆಯ ಮುಖ್ಯಾಧ್ಯಾಪಕರು ಅವರ ಹೆಸರು ತೆಗೆದು ಅವರನ್ನು ಶಾಲೆಯಿಂದ ಹೊರಗ ಹಾಕಿದ್ದಾರೆ.

ಡಾ॥ ಖರೆಯವರ ಸ್ಪಷ್ಟೋಕ್ತಿಗಳು [?]

ವಿವಿಧ ವಿಷಯಗಳ ವಿವೇಚನೆ [?]

ಮುಂಬಯಿ, ತಾ॥ ೮.

ಪ್ರಸಿದ್ಧ ಪತ್ರಿಕೆಗಳ ಪ್ರತಿನಿಧಿಗಳ ಮುಂದೆ ಡಾ॥ ಖರೆಯವರು ಇತ್ತೀಚಿನ ಪರಿಸ್ಥಿತಿಯನ್ನು ಕುರಿತು ಆಡಿದ ಮಾತುಗಳು. ... ದಿವಸ ಇಂಗ್ಲಂಡಕ್ಕೆ ಪ್ರಯಾಣ ಬೆಳಸಿದರು. ಆ ಸಮಯದಲ್ಲಿ ಅವರು, ಹಿಂದುಸ್ತಾನದಲ್ಲಿಯ ರಾಜಕೀಯ ಪರಿಸ್ಥಿತಿಯು ನನಗೆ ಏನೂ ಸಂಬಂಧಿಸಿರುವದಿಲ್ಲ. ಹಿಂದುಸ್ತಾನದಲ್ಲಿ ಈ ವರೆಗೆ ಇಂಗ್ಲಿಷರು ಬಹಳೇ ಉತ್ತಮ ರೀತಿಯಿಂದ ವರ್ತಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಪ್ರಶಂಸಿಸದೆ ಇರಲಾರೆ. ಐರ್ವಿನರೊಡನೆ ನನಗೆ ದಿಲ್ಲಿಯಲ್ಲಿ ಬಹಳ ಹೊತ್ತಿನವರೆಗೆ ಮಾತುಕತೆಯಾಯಿತು. ಅವರು ಬಹಳೇ ಸಹಾನುಭೂತಿಯುಳ್ಳವರಿದ್ದಾರೆ.

ಇಷ್ಟರ ಹೊರತು ಅವರು ತಮ್ಮ ಪ್ರೀತಿಯ ವಿಷಯದಿಂದ ಬೇಟೆಯ ವಿಷಯವನ್ನೆತ್ತಿ, ತಾವು ಬಂಗಾಲದಲ್ಲಿ ೬ ಹುಲಿಗಳನ್ನು ಭದ್ರಪಡಿಸಿದ್ದನ್ನು ಹಾಗು ಹುಲಿಗೆ ಗುಂಡು ಹೊಡೆದದ್ದನ್ನು ವರ್ಣಿಸಿದರು.

"ಹಿಂದುಸ್ತಾನದಲ್ಲಿ ನೀವು ಕಂಡು ಬಂದ ಪತ್ರಿಕೆಗಳನ್ನು ಓದುತ್ತೀರಾ?" ಎಂಬ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆ ಕೇಳಿದ್ದಕ್ಕೆ, "ಪತ್ರಿಕೆಗಳ ಸಂಬಂಧವಾಗಿ ಏನೂ ಹೇಳುವದಿಲ್ಲವೆಂದು, ಇಷ್ಟು ಸೃಷ್ಟಿಸೌಂದರ್ಯ ಮೊದಲಾದವುಗಳು ಈ ದೇಶದಲ್ಲಿ ಇದ್ದಾಗ್ಯೂ ಸಹ ನನ್ನ ಸಂತೋಷ ಸಲುವಾಗಿ ಇಲ್ಲದ್ದರಿಂದ ಯಾವ ವೃತ್ತಪತ್ರ ಓದುವದರಲ್ಲಿ ತೊಡಗಿಕೊಳ್ಳಲಿಲ್ಲವೆಂದು. ಇನ್ನು ಕೆಲವು ತಿಂಗಳುಗಳಲ್ಲಿಯೇ ಹೆಂಡತಿಯೊಂದಿಗೆ ಪುನಃ ಈ ದೇಶಕ್ಕೆ ಬರುವೆನೆಂದೂ" ಅವರು ಉತ್ತರ ಕೊಟ್ಟರು. (ಅ. ಪ್ರೆ.

ಕಾಲರಾದಿಂದ

೨ ದಿನಗಳಲ್ಲಿ ೫೭ ಜನರು ಸತ್ತರು!

(ರಾಜಶಾಹಿ, ತಾ॥ ೭)

ಪೂರ್ವ ಬಂಗಾಲದ ಉಗಿಹಡಗದ ಸ್ಟೇಶನ್ ಸ್ಥಳವಾಗಿರುವ ಗೋಲಂದೋಘಾಟ ಎಂಬಲ್ಲಿ ಎರಡು ದಿನಗಳಲ್ಲಿ ಕಾಲರಾದಿಂದ ೫೭ ಜನರು ಮಡಿದರೆಂದು ತಿಳಿದುಬರುತ್ತದೆ (ಅ.ಪ್ರೆ)

ಹರಪನಹಳ್ಳಿ ತಾಲೂಕಿನಲ್ಲಿ ಕಾಂಗ್ರೆಸ್ ಪ್ರಚಾರ

(ಸ್ವಂತ ಸುದ್ದಿಗಾರರಿಂದ)

ಕುರಂಗದಿಂದ ಬಿಡುಗಡೆ ಹೊಂದಿದ ಮೇಲೆ ಶ್ರೀ ಮತ್ತಿಹಳ್ಳಿ ರಾಘವೇಂದ್ರರಾಯರು ಬಿ. ಎ. ಬಿ. ಎಲ್. ವಕೀಲ ಹೊಸಪೇಟೆ ಇವರು ಹರಪನಹಳ್ಳಿಯ ತಾಲೂಕಿನಲ್ಲಿ ಕಾಂಗ್ರೆಸ್ ಸಂದೇಶವನ್ನು ಪ್ರಚಾರ ಮಾಡುವ ಸಲುವಾಗಿ ಅಲದಹಳ್ಳಿ, ಮತ್ತಿಹಳ್ಳಿ, ನೀಲಗುಂದ, ಚಿಗಟೇರಿ [?] ಬೆಣ್ಣಿಹಳ್ಳಿ, ಮುಂತಾದ ಹಳ್ಳಿಗಳಲ್ಲಿ ಪ್ರವಾಸ ಮಾಡುತ್ತಾ ಇದ್ದಾರೆ. ಹಳ್ಳಿಗರು ಹುರುಪಿನಿಂದ ಇವರಿಗೆ ಸ್ವಾಗತವನ್ನು ಕೊಟ್ಟರು. ಬಹಿರಂಗ ಸಭೆಯಲ್ಲಿ ಶ್ರೀ ರಾಯರು ಸ್ಫೂರ್ತಿಯಿಂದ ಭಾಷಣ ಮಾಡಿದರು. ಹಲಕೆಲವು ಶೆರೆ ಸಿಂದಿ ಕುಡುಕರು ಇನ್ನು ಮೇಲೆ ಕುಡಿಯುವದಿಲ್ಲವೆಂದ ಪ್ರತಿಜ್ಞೆ ಮಾಡಿದರು.

ಗಾಂಧಿ - ವ್ಹಾಯಿಸರಾಯರಲ್ಲಿ ಚರ್ಚೆಯಾಗಲಿಲ್ಲ

(ಸ್ಪೇಶಲ್ ತಂತಿ, ಮುಂಬಯಿ ತಾ॥ ೮.)

ಮಹಾತ್ಮಾ ಗಾಂಧಿಯವರು ಸೋಮವಾರ ದಿವಸ ವ್ಹಾಯಿಸರಾಯರ ಭೆಟ್ಟಿ ತೆಗೆದುಕೊಂಡು ಅವರೊಡನೆ ಚರ್ಚೆ ಮಾಡಿದರೆಂಬದಾಗಿ ಹಬ್ಬಿದ ಸುದ್ದಿಯು ನಿಜವಿರುವದಿಲ್ಲ.

ಸ್ವಾತಂತ್ರ್ಯವಾದಿ ಕ್ರಾಂತಿಕಾರ ಪಂಗಡದ ಸಭೆ

ಹಿಂದುಸ್ಥಾನಕ್ಕೆ ಸ್ವತಂತ್ರ ರಾಜ್ಯ ಬೇಕು.

(ಸ್ಪೇಶಲ್ ತಂತಿ, ಮುಂಬಯಿ, ತಾ॥ ೮)

ಇಂಗ್ಲಂಡದಲ್ಲಿಯ ಸ್ವಾತಂತ್ರ್ಯವಾದಿ ಕ್ರಾಂತಿಕಾರ ಪಂಗಡದವರು ಸಭೆಯಲ್ಲಿ ನೆರೆದು, ಹಿಂದುಸ್ಥಾನದ ಜನರ ಹಕ್ಕು ರಾಜಕೀಯ ಸ್ಥಿತಿಗೆ ತಕ್ಕಷ್ಟು ಮುಕ್ತವಾದ ಬಗೆಯಾಗಿ ಹಿಂದೀಯರಿಗೆ ಸ್ವತಂತ್ರ ಅಧಿಕಾರ ಕೊಡಬೇಕು ಎಂಬ ಆಶಯದ ಠರಾವುಗಳನ್ನು ಪಾಸು ಮಾಡಿಕೊಂಡಿದ್ದಾರೆ.

ಬಂಗಾಲಿ ತರುಣನಿಗೆ ಮೂರು ವರ್ಷ ಕಠಿಣ ಶಿಕ್ಷೆ

ರಂಗೂನ ತಾ॥ ೭

ಸರಕಾರಿ ಅಧಿಕಾರಿಗಳ ಕೊಲೆ ಮಾಡಿ, ಸರಕಾರವನ್ನು ಹೊಡೆದೋಡಿಸಲು, ಹಸ್ತಪತ್ರಿಕೆಗಳ ದ್ವಾರಾ ಜನರಿಗೆ ಉತ್ತೇಜನ ಕೊಟ್ಟ ಪ್ರಕರಣ ರಂಗೂನದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು, ಒಬ್ಬ ಬಂಗಾಲಿ ತರುಣನಿಗೆ ಮೂರು ವರ್ಷದ ಕಠಿಣ ಶಿಕ್ಷೆ ವಿಧಿಸಿದ್ದಾರೆ. ತೀರ್ಪು ಹೇಳುವ ದಿನ ಪೂರ್ವದಲ್ಲಿ ಕೋರ್ಟಿನ ಅಧಿಕಾರಿಗಳು ಆ ಬಂಗಾಲಿ ತರುಣನನ್ನು ಝಡತಿ ಮಾಡಿದರು. ಝಡತಿಯಲ್ಲಿ ಒಂದು ಗುಂಡು ಸಿಕ್ಕಿದ್ದರಿಂದ ಅವನು ಅಲ್ಲಿಂದಲೇ ಸೆರೆಹಿಡಿಯಲ್ಪಟ್ಟನು. (ಅ. ಪ್ರೆ)

ಪಂಜಾಬ ಸರಕಾರದ ಪ್ರಜಾಹಿತತತ್ಪರತೆ

ಲಾಹೋರ ತಾ॥ ೮.

ತಮ್ಮ ಅಡಳಿತದ ಕ್ಷೇತ್ರಗಳಲ್ಲಿಯ ಬಡಜನರಿಗೆ ವೈದ್ಯಕೀಯ ಸಹಾಯವನ್ನು ಸಲ್ಲಿಸುವ ಹಕೀಮರನ್ನು ವೈದ್ಯರನ್ನು ನಿಯಮಿಸಿ ದೇಶೀಯ ಔಷಧಗಳಿಗೆ ಉತ್ತೇಜನ ಕೊಡಲು ಪಂಜಾಬ ಸರಕಾರದವರು ತಮ್ಮ ಪ್ರಾಂತದೊಳಗಿನ ಎಲ್ಲ ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳಿಗೆ ಅಧಿಕಾರ ಕೊಟ್ಟಿದ್ದಾರೆ.

ಅ ಪ್ರೆ

ಕಾನಪೂರ ದಂಗೆಯ ಬಗ್ಗೆ ಕಾಂಗ್ರೆಸ ಮುಖಂಡರ ಪ್ರಕಟನೆ

ದಿಲ್ಲಿ ತಾ. ೭

ಸರದಾರ ವಲ್ಲಭಭಾಯಿ ಪಟೇಲ, ಅಬ್ದುಲ್ ಕಲಾಮ ಆಜಾದ್, ಶೇಟ ಜಮನಾಲಾಲ ಬಜಾಜ ಮೊದಲಾದ ಕಾಂಗ್ರೆಸ ಮುಖಂಡರು ಕಾನಪೂರದಲ್ಲಿಯ ಸ್ಥಿತಿಗತಿಗಳನ್ನು ನಿರೀಕ್ಷಿಸಿಕೊಂಡು ಇಲ್ಲಿಗೆ ತಿರುಗಿ ಬಂದಿರುವರು. ಅಲ್ಲಿ ಸಂಭವಿಸಿದ ದಂಗೆಯ ಸಂಬಂಧವಾಗಿ ಅವರು ಒಂದು ಪ್ರಕಟನೆ ಹೊರಡಿಸಿದ್ದು, ಅದರಲ್ಲಿ ಅವರು ಅನ್ನುವದೇನಂದರೆ:—

ದಂಗೆಯ ಸಮಯದಲ್ಲಿ ಎರಡೂ ಪಂಗಡದವರಿಗಾದ ಕೊಲೆಯ ವೃತ್ತಾಂತವನ್ನು ಆವುಗಳನ್ನು ಕಣ್ಣಾರೆ ನಿರೀಕ್ಷಿಸಿದವರಿಂದ ಕೇಳಿ ನಾವು ಬಹು ಗಾಬರಿಗೊಂಡೆವು. ಈಗ ಎರಡೂ ಪಂಗಡದವರಲ್ಲಿ ಪರಸ್ಪರರಲ್ಲಿ ಸೌಹಾರ್ದ್ರ ಉಂಟಾಗಿದ್ದು, ಪರಿಸ್ಥಿತಿಯು ಮೊದಲಿನಂತೆ ಶಾಂತವಾಗಿದೆ. ಶಾಂತತೆಯನ್ನು ಸ್ಥಾಪಿಸಲು ಐಕ್ಯಮಂಡಳದವರು ಬಹಳೇ ಪ್ರಯತ್ನ ಮಾಡಿದ್ದರಿಂದ ಅವರನ್ನು ನಾವು ಅಭಿನಂದಿಸದೆ ಇರಲಾರೆವು. (ಅ ಪ್ರೆ)

ಹಿರೇಕೇರೂರ ತಾಲೂಕದಲ್ಲಿಯ ಜಪ್ತಿಯ ಇತಿಹಾಸ

ಇಲ್ಲಿ ಈಗಾಗಲೇ ೫೦ ರ ಮೇಲ್ಪಟ್ಟು ಹೊಲಗಳು ಫಾರಫೀತ [ಸರಕಾರಕ್ಕೆ ದಾಖಲು] ಆಗಿವೆ. ೧೩ ಮನೆಗಳಲ್ಲಿ ಜಿಂದಗಿ ಜಪ್ತಿಯಾಯಿತು. ಸುಮಾರು ೩೫ ಮನೆಗಳಲ್ಲಿ ಇನ್ನು ೮ ದಿನಗಳಲ್ಲಿ ಹಪ್ತೆ ಬೇಬಾಕ ಮಾಡದಿದ್ದರೆ ಮನೆ ಜಪ್ತಿ ಮಾಡುವದಾಗಿ ನೋಟೀಸ ಹಚ್ಚಿರುವರು. ಇಷ್ಟೆಲ್ಲ ಬಡದಾಡಿದರೂ ಸರಕಾರದ ದರ್ಬಾರಕ್ಕೆ ಬೆದರಿಕೊಂಡು ಒಬ್ಬರೆ ಕನಿಷ್ಠ ಒಂದು ಕಾಸನ್ನು ಸಹ ಕೊಟ್ಟಿಲ್ಲವೆಂಬುದು ಸಂತೋಷದ ಸುದ್ದಿ

ಒಕ್ಕಟ್ಟೀ ಬಲವು

ಚಿಕ್ಕೇರೂರಿನಲ್ಲಿ ಎಂಣೆ ಈರಪ್ಪನ ಅಂಗಡಿ ಜಪ್ತಿಯಾಯಿತು. ಎಂಣೆ ಡಬ್ಬಿ ಒಟ್ಟಿನ ಬೀಲ ಚಾವಡಿಗೆ ಬಂದವು. ಲಿಲಾವು ನಡೆಯಿತು. ಸಾಹೇಬ ಬಾಹದ್ದೂರರು ಏನು ಕಿಟ್ಟಿ ಕಿಟ್ಟಿ ಬಡೆದುಕೊಂಡರೂ ಒಬ್ಬನೂ ಸವಾಲು ಮಾಡಲಿಲ್ಲ. ಕಡೆಗೆ ಹುಬ್ಬೇರಾರರೇ ಗುಪ್ತವಾಗಿ ತನ್ನ ಸಾಮಾನುಗಳನ್ನು ತಿರುಗಿ ಒಯ್ಯಲು ಈರಪ್ಪಗೆ ಹೇಳಿದರು. ಅವನೇನು ಒಯ್ಯಲಿಲ್ಲ. ಎಲ್ಲ ಸಾಮಾನುಗಳೂ ಇನ್ನೂ ಚಾವಡಿಯಲ್ಲೇ ಕೊಳೆಯುತ್ತ ಬಿದ್ದಿವೆ. ಪಾಪ! ಹಳ್ಳಿಯ ಓಲೆಯಕಾರರಿಗೊಂದು ಹೆಚ್ಚಿನ ಕೆಲಸ.

ಬರಗಾಲದಲ್ಲಿ ಅಧಿಕ ಮಳೆ

ನಿನ್ನೆ ಇಲ್ಲಿಗೆ ಜೋಗ ವಿಶ್ವನಾಥರು ಬರಗಾಲದಲ್ಲಿಯ ಅಧಿಕ ಮಳೆಯ ಹಾಗೆ ಬಂದು ಅಧಿಕಾರ ಮದದಿಂದ ಬಗಿದುಕೊಂಡ ಆಳರಸರ ದಬ್ಬಾಳಿಕೆಗೆ ಬಳಲಿದ್ದ ರೈತ ಬಾಂಧವರನ್ನು ಸಮಾಧಾನಪಡಿಸಿ 'ನೀವು ಎದೆಗೆಡಬೇಡಿರಿ ಸತ್ಯಕ್ಕೆ ಜಯವು ದೊರೆಯಲೇ ಬೇಕು.' ಎಂದು ಮೊದಲಾಗಿ ಹೇಳಿ ಅವರನ್ನು ಹುರಿದುಂಬಿಸಿದರು. ನಂತರ ಇವರು ಹಿರೇಕೇರೂರಿನಲ್ಲಿರುವ ಕಲೆಕ್ಟರರಿಗೂ, ಹಾನಗಲ್ಲಿನಲ್ಲಿರುವ ಇಲಾಖೆ ಸಾಹೇಬರಿಗೂ ಭೆಟ್ಟಿಯಾದರು. ಸರಕಾರವು ಎಂಥಾ ದರೂ ತನ್ನ ಗುಟ್ಟನ್ನು ಹೊರಗೆಡಹುವದೇ? ಆದರೂ ಜೋಗರು ಅಲ್ಲಿ ನಡೆದ ಸಂಭಾಷಣೆಯ ಮೂಲಕ ಹಳ್ಳಿಯವರು ನೀವು ಸಂಪೂರ್ಣ ಕೊಡಲೇ ಬೇಕು. ಗಡ್ಡೆಯ ಮಟ್ಟಿಗೆ ಆ ವರ್ಷ ಕರುಣೆ ಮಾಡಬಹುದಾಗಿ ಹೇಳಿದರು. ಓದಿಹೋಗಿ ಗೋಡೆ ಮುಟ್ಟಿದಂದರಂತೆ ಎಲ್ಲ ರೈತರೂ ಇಲ್ಲಿಯ ವರೆಗೆ ಪೇಚಾಡಿ ಇದಿಷ್ಟನ್ನು ಪಡೆದರೆ ಅದೇನು ಮಹಾ ಕೆಲಸವಾದಂತಾಗಾಯಿತೋ ದೇವರೇ ಬಲ್ಲ! ಇದಕ್ಕೆ ರೈತರಾದರೂ ಒಪ್ಪುವರೇ?

ಸರಕಾರಕ್ಕೆ ಆಧಾರ

ಇಲ್ಲಿಯ ವಡ್ಡರು, ಕೊರಚರು, ಕೊರಗರು ಮೊದಲಾದ ಹಿಂದುಳಿದ ಜಾತಿಯವರು ಸರಕಾರದ ಪಡಪಡಿಕೆಗಾಗಿ ಈ ಮೊದಲೇ ಅರ್ಜಿ ಮಾಡಿದ್ದರಂತೆ! ಸರಕಾರಕ್ಕೆ ಇಲ್ಲಿಯ ವರೆಗೆ ಫಾರಫೀತಾದ ಜಮೀನು ಏನು ಮಾಡಬೇಕೋ ತಿಳಿದಿರಲಿಲ್ಲ. ಇಂದು ಆ ಬಯಿ ದೊರೆಗಳು ಅವರೆಲ್ಲರನ್ನು ಕರೆದು ಆ ಜಮೀನುಗಳನ್ನು ಅವರಿಗೆ ಮುಫತ್ತಾಗಿ ಕೊಡುವದಾಗಿ ಹೇಳಿದರು. ಮೇಲೆ ಎಂಥ ಕಷ್ಟಗಳು ಒದಗಿದರೂ ಸಂಪೂರ್ಣ ಸಹಾಯ ಮಾಡುವದಾಗಿ ಅಭಯವನ್ನು ಕೊಟ್ಟರು. ಆ ಬಡ ಮುಂದೇಮಕ್ಕಳು ಇವರೆದುರಿಗೆ ಏನನ್ನೂ ಹೇಳುವದಕ್ಕೆ ಬೆದರಿಕೊಂಡು ಸುಮ್ಮನೆ ಬಂದರು. ಅವರು ಆ ಮೌನವನ್ನೇ ಸಮ್ಮತಿ ಲಕ್ಷಣವೆಂದು ತಿಳಿದುಕೊಂಡು ಹೊಲ ಮಾಡುವವರು ಸಿಕ್ಕರು ಎಂಬ ಧೈರ್ಯದಿಂದಲೋ ಏನೋ ಇಂದು ಊರಲ್ಲಿ ಡಂಗುರ 'ಇನ್ನು ೮ ದಿನಗಳಲ್ಲಿ ಹಪ್ತೆ ಬೇಬಾಕ ಮಾಡದೇ ಇದ್ದರೆ ಎಲ್ಲರ ಹೊಲಮನೆಗಳೂ ಸರಕಾರದ ಪಾಲಾಗುವವೆಂದು'

ಹೀಗೆ ಪೊಳ್ಳು ಗುಡುಗು ಹಾಕಿ, ಬೆದರಿಕೊಳ್ಳಲಿಕ್ಕೆ ರೈತರು ಎಂದರೆ ಕುಂಬಳ ಕಾಯಿ ಬಳ್ಳಿ ಎಂದು ತಿಳಿದಿರುವರೇನೋ ಸರಕಾರದವರು!

ರೆ ನಂ. ಬಿ. ೨೭೮೮

ನಿತ್ಯ ಪತ್ರ.

सर्वं परवशं दुःखं । सर्वमात्मवशं सुखम् ॥—मनु.

BI-WEEKLY

ನಿತ್ಯಪತ್ರಿಕೆಯ ವರ್ಗಣೀ ದರಗಳು

ಪರಸ್ಥಳದವರಿಗೆ

೧೨ ತಿಂಗಳಿಗೆ ೧೫—೦—೦
೬ ,, ೮—೮—೦
೩ ,, ೩—೧೨—೦
,, ೧—೧೪—೦

ಸ್ಥಳಿಕರಿಗೆ

೧೨ ತಿಂಗಳಿಗೆ ೧೨—೦—
೬ ,, ೬—೦—೦
೩ ,, ೩—೮—೦
೧ ,, ೧—೦—೦

ನಿತ್ಯಪತ್ರಿಕೆಯ ಸರಕಾರಿ ಹಾಗು ಜಂಗಾಹಿ ಜಾಹೀರಾತಿನ ದರಗಳು

೧ನೇ ಸಲ ೧ ಇಂಚಿಗೆ ೧—೮—೦
೨ ,, ,, ೧—೦—೦
ಮುಂದೆ ಪ್ರತಿಯೊಂದು ಸಲ ೦—೧೨—೦
ಬೆಲೆ ೦—೧—೩.

ಒಪ್ಪಂದ ಮಾಡಲಿಗೆ ಅಕ್ಷರ ಪ್ರಮಾಣದಿಂದ ದರಬೀಳುವದು

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಶುಕ್ರವಾರ ಮಿತಿ ಚೈತ್ರ ಬಹುಳ ೮ ಶಕೆ ೧೮೫೩ ತಾ।। —೮—೩೧ [ಸಂಚಿಕೆ ೨೨

ಸಜ್ಜನಸಿಂಗರನ್ನು ಗಲ್ಲಿಗೇರಿಸಿದರು

ಲಾಹೋರ ತಾ. ೯.

ಲಾಹೋರ ಕ್ಯಾಂಟೋನಮೆಂಟದ ಕ್ಯಾಪ್ಟನ್ ಕರ್ಟಿಸರವರ ಹೆಂಡತಿಯನ್ನು ಗುಂಡಿಯಿಂದ ಇದೆ ಕೊಲೆ ಮಾಡಿದ್ದಕ್ಕಾಗಿ ಗಲ್ಲಿನ ಶಿಕ್ಷೆ ವಿಧಿಸಲ್ಪಟ್ಟ ಶ್ರೀ ಸಜ್ಜನಸಿಂಗರು ಗಲ್ಲಿಗೇರಿಸಲ್ಪಟ್ಟಿದ್ದಾರೆ ಅ ಪ್ರೆ.

ಮಧ್ಯವರ್ತಿ ಸೀಖ ಸಂಘದ ಅಧಿವೇಶನ

ಅಮೃತಸರ, ತಾ ।। ೮.

ಮಧ್ಯವರ್ತಿ ಸೀಖ ಸಂಘದ ಅಧಿವೇಶನವು ಇವತ್ತಿನ ದಿವಸ ಪ್ರಾರಂಭವಾಯಿತು. ಪರಿಷತ್ತಿಗೆ ಮಹಾತ್ಮಾ ಗಾಂಧಿಯವರು ಆಗಮಿಸಿದ್ದರು. ಸ್ವಾಗತ ಕಮೀಟಿಯ ಅಧ್ಯಕ್ಷರಾದ ಶ್ರೀ ಸಂತಸಿಂಗ ಹಾಗು ಪರಿಷತ್ತಿನ ಅಧ್ಯಕ್ಷರಾದ ಶ್ರೀ ತಾರಾಸಿಂಗ ಇವರು ಭಾಷಣ ಮಾಡಿ, ತಮ್ಮ ಅಭಿಪ್ರಾಯಗಳನ್ನು ಕೆಳಗಿನಂತೆ ವ್ಯಕ್ತಪಡಿಸಿದರು.

ಭಾವೀರಾಜ ಘಟನೆಯಲ್ಲಿ ಜಾತೀಯ ಪ್ರಾತಿನಿಧ್ಯವಿರಕೂಡದು. ಜಾತೀಯ ತತ್ವವು ಅಂಗೀಕೃತವಾದಲ್ಲಿ ಪಂಜಾಬ ಕಾಯದೆ ಮಂಡಳದಲ್ಲಿಯೂ ಹಾಗು ಮಧ್ಯವರ್ತಿ ಭಾರದಲ್ಲಿಯೂ ಸೀಖರಿಗೆ ೧೦೦ಕ್ಕೆ ೩೦ ರಂತೆ ಪ್ರಾತಿನಿಧ್ಯವಿರಬೇಕು. ಜಾತಿ ಜಾತಿಗಳಲ್ಲಿ ಒಡಂಬಡಿಕೆಯಾಗದಿದ್ದಲ್ಲಿ ಇಲ್ಲವೆ ಮುಸಲ್ಮಾನ ಜನಸಂಖ್ಯೆಯು ಪ್ರಮಾಣಕ್ಕನುಸರಿಸಿ ಪಂಜಾಬದ ಸೀಮೆಯು ಬದಲಿಸಲ್ಪಟ್ಟಲ್ಲಿ, ಸಂಹದ್ದ ಪ್ರಾಂತದೊಂದಿಗೆ ಪಂಜಾಬ ಪ್ರಾಂತದ ಆಡಳಿತೆಯು ಮಧ್ಯವರ್ತಿ ಸರಕಾರದಿಂದ ಸಾಗಿಸಲ್ಪಡಬೇಕು. ಮಧ್ಯವರ್ತಿ ಸರಕಾರದಲ್ಲಿ ಒಬ್ಬ ಸೀಖ ಪ್ರತಿನಿಧಿಯು ಇರಬೇಕು. ಸೈನ್ಯದಲ್ಲಿ ಸೀಖರ ಪ್ರಮಾಣವು ಮಹಾಯುದ್ಧದ ಪೂರ್ವದಲ್ಲಿದ್ದಷ್ಟೇ ಇರಬೇಕು. ಉಳಿದ ವಿಷಯಗಳಲ್ಲಿ ಮಧ್ಯವರ್ತಿ ಸರಕಾರವು ತನ್ನ ಅಧಿಕಾರ ನಡಿಸಬೇಕು. ಮಧ್ಯವರ್ತಿ ಕಾಯದೆ ಮಂಡಳದಲ್ಲಿ ಸೀಖರಿಗೆ ೧೦೦ಕ್ಕೆ ೫ ರಂತೆ ಪ್ರಾತಿನಿಧ್ಯಬೇಕು. ಎಲ್ಲ ಸರಕಾರಿ ಉದ್ಯೋಗಗಳಲ್ಲಿ ಸೀಖರನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಉಳಿದ ಪ್ರಾಂತಗಳಲ್ಲಿರುವ ಸೀಖರನ್ನು ಅಲ್ಲಲ್ಲಿಯ ಅಲ್ಪಸಂಖ್ಯಾಕರನ್ನು ನಡಿಸಿಕೊಳ್ಳುವಂತೆಯೆ ನಡಿಸಿಕೊಳ್ಳಬೇಕು. ಅ. ಪ್ರೆ.

ಮಿದನಾಪುರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಾಣಬಿಟ್ಟರು

ಮಿದನಾಪೂರ, ತಾ।। ೮

ಕಲಕತ್ತೆಯ ಪ್ರೆಸಿಡೆನ್ಸಿ ಹಾಸ್ಪಿಟಲದ ಮೇಜರ ಮರಿಯವರು ಮಿದನಾಪೂರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಜೇಮ್ಸ್ ಪಿಡ್ಡಿಯವರಿಗೆ ಶಸ್ತ್ರಕ್ರಿಯೆ ಮಾಡಿ, ಹೊಟ್ಟೆಯೊಳಗಿನ ಗುಂಡನ್ನು ಹೊರಗೆ ತೆಗೆದರು. ೧೨ ಗಂಟೆಯ ಸಮಾರಕ್ಕೆ ಕ್ಲೋರೋಫೋರ್ಮ ಕೊಟ್ಟು ಪುನಃ ಶಸ್ತ್ರಕ್ರಿಯೆ ಮಾಡಿ ಕರುಳುಗಳನ್ನು ಹೊಲಿದರು. ಜೇಮ್ಸ್ ಪಿಡ್ಡಿಯವರ ಸ್ಥಿತಿಯು ಈಗ ಭಯಂಕರವಾಗಿದೆ. ಅವರ ಹೊಟ್ಟೆಯಲ್ಲಿ ಒಟ್ಟಿಗೆ ಮೂರು ಗುಂಡುಗಳು ಸೇರಿಕೊಂಡಿವೆಯೆಂದು ತಿಳಿದು ಬರುತ್ತದೆ. ಈಗ ಅವರ ಸ್ಥಿತಿಯು ಸುಧಾರಿಸಿದ್ದು, ತಮ್ಮನ್ನು ... ಒಂದುವರೆ ತಾಸ ಅವರು ಮಾತಾಡಿದರು. ಅ ಪ್ರೆ

ಮಿದನಾಪೂರ ತಾ।। ೮

ನಿನ್ನಿನ ದಿವಸ ಗುಂಡಿನೇಟಿಗೆ ಆಹುತಿಯಾದ ಮಿದನಾಪೂರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಜೇಮ್ಸ್ ಪಿಡ್ಡಿಯವರು ಇವತ್ತಿನ ದಿವಸ ಸಂಜೆ ಮುಕ್ಕಾಲು ೧೨ ಗಂಟೆಗೆ ಮರಣ ಹೊಂದಿದರು. ಮೇಜರ ಮರಿ ಮತ್ತು ಸಿವ್ಹಿಲ್ ಸರ್ಜನರು ಅವರಿಗೆ ಔಷಧೋಪಚಾರ ನಡಿಸಿದ್ದರು. ಅ. ಪ್ರೆ.

ಚಿತಗಾಂಗದಲ್ಲಿ ಭಯಂಕರ ಬಿರುಗಾಳಿ

ಚಿ ಗಾಂಗ, ತಾ।। ೮.

ಇಲ್ಲಿ ನಿನ್ನಿನ ದಿವಸ ಭಯಂಕರ ಬಿರುಗಾಳಿ ಬೀಸಿ, ಅನೇಕಕಡೆಗಳಲ್ಲಿ ವಿದ್ಯುತ್ ತಂತಿ ಛಗೆ ಒಡಕೀ ಥಕ್ಕ ... ಹೀಗಾಗಿ ಪಟ್ಟಣದಲ್ಲಿ ... ಪ್ರತ್ಯೇಕ ... ವ್ಯಾಪಿಸಿಕೊಂಡಿತ್ತು ... ಗುಡಿಸಲುಗಳಿಗೆ ... ಅವು ಅಲ್ಲಿಂದಲೇ ... ಅವುಗಳ ಜೀವಕ್ಕೆ ... ಪ್ರಸ್ತುತ ... ಮನುಷ್ಯನು ... ಮರಣ ಹೊಂದಿದನು ... ಗಾಡಿ ... ಅ. ಪ್ರೆ.

ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಪರಿಷತ್ತು

ಲಖನೌ ತಾ।। ೯

ಅಖಿಲ ಭಾರತ ರಾಷ್ಟ್ರೀಯ ಪಕ್ಷದ ಮುಸಲ್ಮಾನ ಸಂಗಡದ ಕಾರ್ಯದರ್ಶಿಗಳಾದ ರಫಿ ಅಹಮ್ಮದ ಕಿದವಾಯಿಯವರು ಕೆಳಗಿನಂತೆ ಪ್ರಕಟನೆ ಹೊರಡಿಸಿದ್ದಾರೆ:—

ಕರಾಚಿ ಕಾಂಗ್ರೆಸದಲ್ಲಿ ಗೊತ್ತುಪಡಿಸಿದ ಪ್ರಕಾರ ಅಖಿಲ ಭಾರತ ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಪರಿಷತ್ತು ತಾ।। ೧೮ ಹಾಗು ೧೯ ಈ ದಿನಗಳಲ್ಲಿ ಲಖನೌದಲ್ಲಿ ಸೇರತಕ್ಕದ್ದಿದೆ. ಮಹತ್ವದ ಪ್ರಶ್ನೆಗಳ ಸಂಬಂಧವಾಗಿ ವಿಚಾರಮಾಡತಕ್ಕದ್ದಿರುವದರಿಂದ ಎಲ್ಲ ಪ್ರಾಂತದ ಪ್ರತಿನಿಧಿಗಳು ತಂಡತಂಡವಾಗಿ ಬಂದು ಪರಿಷತ್ತಿನಲ್ಲಿ ಭಾಗತೆಗೆದುಕೊಳ್ಳಬೇಕು. ಈ ಸಂಬಂಧವಾಗಿ ಯಾರಿಗಾದರೂ ಪತ್ರವ್ಯವಹಾರ ಮಾಡುವದಿದ್ದರೆ, ಅವರು ಕಾರ್ಯದರ್ಶಿ ಅಖಿಲ ಭಾರತ ರಾಷ್ಟ್ರೀಯ ಪಕ್ಷದ ಮುಸಲ್ಮಾನ ಸಂಗಡ, ಖಿಲಾಗಂಜ, ಲಖನೌ, ಈ ಪತ್ತೇಕ್ಕೆ, ಪತ್ರವ್ಯವಹಾರ ಮಾಡಬೇಕು.

ಡಾ. ಭಗವಾನದಾಸರು ಕಾನಪುರಕ್ಕೆ ಹೊರಟರು

ಬನಾರಸ, ತಾ।। ೯.

ಕಾನಪೂರ ದಂಗೆಯ ಸಂಬಂಧವಾಗಿ ವಿಚಾರಣೆ ಮಾಡಲು ಕರಾಚಿ ಕಾಂಗ್ರೆಸದವರಿಂದ ನಿಯಮಿಸಲ್ಪಟ್ಟ ವಿಚಾರಣಾ ಮಂಡಳದ ಅಧ್ಯಕ್ಷರಾದ ಡಾ॥ ಭಗವಾನದಾಸರು ಇವತ್ತಿನ ದಿವಸ ಕಾನಪೂರಕ್ಕೆ ಪ್ರಯಾಣ ಬೆಳಸಿದರು. ವಿಚಾರಣೆಯ ಕಾರ್ಯವು ಬೇಗನೆ ಪ್ರಾರಂಭವಾಗತಕ್ಕದ್ದಿದೆ. ಅ ಪ್ರೆ

ಪಠಾಣ ಸ್ವಯಂಸೇವಕನ ಅಂತ್ಯವಿಧಿ

(ಸ್ಪೆಶಲ್ ತಂತಿ, ಮುಂಬಯಿ ತಾ।।೯)

ಡೋಂಗರಿಯಲ್ಲಿ ನಡೆದ ಮುಸಲ್ಮಾನರ ಸಾರ್ವಜನಿಕ ಸಭೆಯಲ್ಲಿ ಕಠಾರಿಯಿಂದ ಇರಿಯಲ್ಪಟ್ಟು ಮರಣ ಹೊಂದಿದ ಪಠಾಣ ಸ್ವಯಂಸೇವಕನ ಶವದೇಹವು ನಿನ್ನಿನ ದಿವಸ ಮೆರವಣಿಗೆಯಿಂದ ಸ್ಮಶಾನಭೂಮಿಗೆ ಒಯ್ಯಲ್ಪಟ್ಟಿತು.

ಮುಂಬಯಿಯಲ್ಲಿ ಭಗತಸಿಂಗರ ಶ್ರಾದ್ಧದಿನ

(ಸ್ಪೇಶಲ್ ತಂತಿ, ಮುಂಬಯಿ. ತಾ।।೯)

ನಿನ್ನಿನ ದಿವಸ ಮುಂಬಯಿಯಲ್ಲಿ ಭಗತಸಿಂಗ ಮೊದಲಾದವರ ಶ್ರಾದ್ಧದಿನವು ಆಚರಿಸಲ್ಪಟ್ಟಿತು. ಸಂಜೆ ಮುಕ್ಕಾಲು ... ಸಭೆ ನೆರೆದಿತ್ತು ಶ್ರೀ ಭಗತಸಿಂಗರ ಬಂಧು, ಶ್ರೀ ... ಭಗತಸಿಂಗರ ಭಾಷಣ, ... ಹಾಗೆ ... ಇವರೆಲ್ಲರೂ ... ಸ್ವಾತಂತ್ರ್ಯ ... ಮಾಡಿದರು.

ಟಪಾಲ ಚೀಲವನ್ನು ಅಪಹರಿಸಿದರು

ಮಿರ್ಜಾಪುರ ತಾ।। ೮

ನಿನ್ನಿನ ದಿವಸ ೮ ಘಂಟೆಯ ಸುಮಾರಕ್ಕೆ ಉಗಿಹಡಗದ ಸ್ಟೇಶನಾಗಿರುವ ಪಲಾಂಗ ಎಂಬಲ್ಲಿ ಯಾರೋ ಕೆಲವರು ಟಪಾಲ ಮನುಷ್ಯನನ್ನು ಹೊಡೆದು, ಟಪಾಲ ಚೀಲವನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಟಪಾಲ ಮನುಷ್ಯನು ಉಳಿದ ಪ್ರವಾಸಿಕರೊಂದಿಗೆ ಅಲ್ಲಿ ಸ್ಟೇಶನದ ಮೇಲೆ ಉಗಿಹಡಗದ ಮಾರ್ಗ ಪ್ರತೀಕ್ಷೆ ಮಾಡುತ್ತ ನಿಂತುಕೊಂಡಿದ್ದನು. ಆಗ ಪಿಸ್ತೂಲು, ಬಂದೂಕು, ಕಠಾರಿ ಮೊದಲಾದ ಶಸ್ತ್ರಾಸ್ತ್ರಗಳಿಂದ ಸಹಿತರಾದ ಸುಮಾರು ೧೨ ಜನ ದರೋಡೆಗಾರರು ಅವನ ಮೇಲೆ ಹಲ್ಲೆ ಮಾಡಿ, ಪಿಸ್ತೂಲು ಹಿಡಿದು ಅವನನ್ನು ಬೆದರಿಸಿ, ಪೆಟ್ಟಿಗೆಯನ್ನು ಒಡೆದು, ಟಪಾಲ ಚೀಲಗಳನ್ನು ಅಪಹರಿಸಿಕೊಂಡು ಹೋದರು. ದರೋಡೆಗಾರರು ತಾವು ಓಡಿಹೋಗುವ ಮುಂದೆ ಆ ಸ್ಥಳದಲ್ಲಿ ಒಂದು ಕಠಾರಿಯನ್ನು ಮರೆತು ಹೋಗಿದ್ದರೆಂದೂ, ಅದನ್ನು ಪೋಲೀಸರು ಈಗ ತಮ್ಮ ಕೈವಶಪಡಿಸಿಕೊಂಡಿರುವರೆಂದೂ ತಿಳಿದು ಬರುತ್ತದೆ. (ಅ. ಪ್ರೆ.)

ಅಲಹಾಬಾದದಲ್ಲಿ ಪಂಡಿತ ಜವಾಹಿರಲಾಲರು

ಅಲಹಾಬಾದ ತಾ. ೯

ಪಂಡಿತ ಜವಾಹಿರಲಾಲ ನೆಹರೂರವರು ಇವತ್ತಿನ ದಿವಸ ಇಲ್ಲಿಗೆ ಬಂದರು. ಮತ್ತು ಕೂಡಲೆ ಸಾರ್ವಜನಿಕವಾಗಿ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ, ಕಿಡಿಗೇಡಿ ಜನರು ಹರಡುತ್ತಿರುವ ಸುಳ್ಳುಸುದ್ದಿಗಳನ್ನು ಅಲ್ಲಿಂದಲ್ಲೇ ತಡೆಯಲು ಹೇಳಿಕೊಂಡರು. ಈ ಕಿಡಿಗೇಡಿ ಜನರು ಹಬ್ಬುತ್ತಿರುವ ಸುಳ್ಳು ಸುದ್ದಿಗಳ ಮೇಲೆ ಜನರು ವಿಶ್ವಾಸವಿಡದಂತೆ ನೋಡಿಕೊಳ್ಳಲು ಸ್ವಯಂಸೇವಕರ ಸಂಘಗಳು ಸ್ಥಾಪಿಸಲ್ಪಡತಕ್ಕವೆ. (ಅ, ಪ್ರೆ.)

ರಾಜಕೀಯ ಕೈದಿಗಳ ಬಿಡುಗಡೆ

ಅತ್ಯಾಚಾರಕ್ಕಾಗಿ ಶಿಕ್ಷಿಸಲ್ಪಟ್ಟ ರಾಜಕೀಯ ಕೈದಿಗಳನ್ನು ದರೂ ಬಿಡುಗಡೆ ಮಾಡಬೇಕೆಂಬುದಾಗಿ ಒಪ್ಪಂದದ ಕರಾರುಗಳಲ್ಲಿ ಕಾಣಿಸಲು ಬರತಕ್ಕದ್ದಿಲ್ಲವೇ? ಎಂಬ ಬಗ್ಗೆ ಜಲ್ಲಕ್ಕೆ ಮಾಡವುದಸ್ಥಿತವಾಗಿದ್ದರ ವಿಷಯವಾಗಿ ಮಹಾತ್ಮರ "ಯಂಗ ಇಂಡಿಯಾ" ದಲ್ಲಿ ಕೆಳಗಿನಂತೆ ಉತ್ತರ ಕೊಟ್ಟಿದ್ದಾರೆ. "ಹೀಗೆ ಕೇಳಿಕೊಳ್ಳುವದ ಅಸಂಭವನೀಯವಾಗಿತ್ತು. ಯಾ ... ಇದು ನ್ಯಾಯಕ್ಕನುಸರಿಸಿರುವದಿಲ್ಲ. ಈ ಬಿಡುಗಡೆ ಭಾಗದ ಜನರಯನ್ನು ಹಿಡಿಸುವ ಕರಾರುಗಳಲ್ಲಿ ಇದನ್ನು ಹಾಕಲು, ಬರುವಂತಿದ್ದಿಲ್ಲ. ಶಾಶ್ವತವಾದ ಒಡಂಬಡಿಕೆಯಲ್ಲಿ ಮಾತ್ರ ಈ ಕರಾರನ್ನು ಹಾಕಬಹುದು. ಯಾವತ್ತು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದಾಗಿಯೇ ನನ್ನ ಇಚ್ಛೆ ಇದೆ. ಸರಕಾರದವರು ಅವರನ್ನು ಬಿಡುಗಡೆ ಮಾಡುವ ಕಾರ್ಯಕ್ಕೆ ಹತ್ತಬೇಕು. (ಅ. ಪ್ರೆ)

ಹಿರೇಕೆರೂರ ತಾಲೂಕದಲ್ಲಿ ಭಯಂಕರ ದಬ್ಬಾಳಿಕೆ.

ಗೌಡ ಕುಲಕರ್ಣಿಯವರಿಗೆ ಸಸ್ಪೆಂಡ; ವತನದಾರರಿಗೆ ಜಪ್ತಿಯ ನೋಟೀಸು.

(ಸ್ಪೆಶಲ್ ತಂತಿ, ಧಾರವಾಡ, ತಾ। ೯)

ಭೂಕಂದಾಯವನ್ನು ವಸೂಲ ಮಾಡುವ ಕುರಿತು ಸರಕಾರಿ ಅಧಿಕಾರಿಗಳು ದಬ್ಬಾಳಿಕೆಯನ್ನಾಶ್ರಯಿಸಿದ್ದರಿಂದ ಹಿರೇಕೆರೂರತಾಲೂಕದಲ್ಲಿ ವಿಶೇಷ ಕ್ಷೋಭೆಯುಂಟಾಗಿದೆ. ೭ಜನ ಕುಲಕರ್ಣಿಯರು ಮತ್ತು ಒಬ್ಬ ಗೌಡನು ಸಸ್ಪೆಂಡು ಮಾಡಲ್ಪಟ್ಟಿದ್ದಾರೆ. ೪೫ ಜನ ವತನದಾರರ ಮೇಲೆ ಜಪ್ತಿಯ ನೋಟೀಸುಗಳು ಹೊರಟಿದ್ದು, ಅವುಗಳನ್ನು ಅವರವರ ಮೇಲೆ ಜಾರಿ ಮಾಡಲಾಗಿದೆ. ಲಿಂಗಾಯತ ಸಮಾಜದ ಮುಂದಾಳುಗಳಾದ ಶ್ರೀ ವೀರನಗೌಡ ಪಾಟೀಲರು ಅವರಲ್ಲೊಬ್ಬರಾಗಿದ್ದಾರೆ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರರು ತಾಲೂಕದಲ್ಲಿ ಪ್ರವಾಸ ಮಾಡುತ್ತಿದ್ದಾರೆ ಆರ್ಥಿಕ ದೈನ್ಯಾವಸ್ಥೆಯ ಮೂಲಕವಾಗಿ ಭೂಕಂದಾಯ ಕೊಡುವದು ಶಕ್ಯವಿಲ್ಲವೆಂಬುದಾಗಿ ಜನರು ಅವರ ನಿದರ್ಶನಕ್ಕೆ ತಂದುಕೊಡುತ್ತಿದ್ದಾರೆ

ಹಿರೇಕೆರೂರ, ಸಿರ್ಸಿ, ಸಿದ್ದಾಪುರ ತಾಲೂಕಗಳಲ್ಲಿ ಹಪ್ತೆ ಸೂಟ ಬಿಡುವ ವಿಷಯವಾಗಿ ದಕ್ಷಿಣಭಾಗದ ಕಮಿಶನರರೊಡನೆ ಮಾತುಕತೆ ನಡೆದಿವೆ. ಶಿಷ್ಟಮಂಡಳವೇನೂ ಆಗತ್ಯವಿಲ್ಲವೆಂಬುದಾಗಿ ಕಮೀಶನರರು ಹೇಳಿದರು.

ಹಂಸಭಾವಿಯಲ್ಲಿ

ನೇಸವಿ ಮಾಸ್ತರರನ್ನು ಸೆರೆಹಿಡಿದರು.

(ತಂತಿಯ ವಾರ್ತೆ, ಧಾರವಾಡ, ತಾ. ೮)

ಆರ್ಥಿಕ ದೈನಾವಸ್ಥೆಯ ಮೂಲಕವಾಗಿ ಹಿರೇಕೆರೂರ, ಸಿರ್ಸಿ, ಸಿದ್ದಾಪುರ ತಾಲೂಕಗಳಲ್ಲಿ ಕರನಿರಾಕರಣ ಚಳವಳಿಯು ಭರದಿಂದ ಸಾಗಿಸಲ್ಪಟ್ಟಿದ್ದರಿಂದ, ಅಧಿಕಾರಿಗಳು ರೈತರನ್ನು ಹಣ್ಣಿಗೆ ತರಲು ಪರಿಪರಿಯಾಗಿ ಪ್ರಯತ್ನಿಸಹತ್ತಿದ್ದಾರೆ. ಸೆರೆಹಿಡಿಯುವ ಕಾರ್ಯವು ಭರದಿಂದ ಪ್ರಾರಂಭವಾಗಿದೆ. ಹಿರೇಕೆರೂರ ತಾಲೂಕದಲ್ಲಿಯ ಪ್ರಮುಖ ಕಾರ್ಯಕರ್ತರೂ, ಹಂಸಭಾವಿಯ ಇಂಗ್ಲಿಷ ಶಾಲೆಯ ಅಧ್ಯಾಪಕರೂ ಆಗಿರುವ ಶ್ರೀ ನೇಸವಿ ಎಂಬವರನ್ನು ಜಪ್ತಿಯ ಕಾರ್ಯಕ್ಕೆ ವಿಘ್ನಮಾಡಿದರೆಂಬ ಆರೋಪದಿಂದ ೫೦೬ನೆಯ ಕಲಮಿನನ್ವಯ ಕೈದು ಮಾಡಿದ್ದಾರೆ.

ಕಾರವಾರ ಜಿಲ್ಲೆಯ ಸಿದ್ದಾಪೂರ ತಾಲೂಕದಲ್ಲಿ ಸಂಘಟನೆಯನ್ನು ಮಾಡುತ್ತಿದ್ದ ಶ್ರೀ. ಬೇವೂರ, ಗುರುನಾಥ, ವೀರಭದ್ರಪ್ಪ, ಸೀತಾರಾಮ ಈ ನಾಲ್ವರ ಮೇಲೆ ಅಧಿಕಾರಿಗಳು ಪೋಲೀಸ ಕಾಯದೆಯ ೪೬ನೆಯ ಕಲಮಿನನ್ವಯ ನೋಟೀಸು ಹೊರಡಿಸಿ, ಕಾರವಾರ ಜಿಲ್ಲೆಯ ಹದ್ದನ್ನು ಬಿಟ್ಟು ಹೋಗಲು ಅವರಿಗೆ ಅಪ್ಪಣೆ ವಿಧಿಸಿದ್ದಾರೆ. ಇನ್ನೂ ಎಷ್ಟೋ ಜನರ ಮೇಲೆ ನೋಟೀಸುಗಳು ಹೊರಟಿವೆಯಾಗಿ ತಿಳಿದು ಬರುತ್ತದೆ.

ಮಿದನಾಪೂರ ಬಾಂಬ ಅತ್ಯಾಚಾರವೂ ವ್ಹಾಯಿಸರಾಯರ ಭಾಷಣವೂ

(ಸ್ಪೇಶಲ್ ತಂತಿ, ಮುಂಬಯಿ ತಾ॥ ೯)

ಮಿದನಾಪುರದಲ್ಲಿ ಗುಂಡಿನೇಟಿಗೆ ಆಹುತಿಯಾದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಜೇಮ್ಸ ಪೆಡ್ಡಿಯವರು ನಿನ್ನೆ ನದಿನಸ ಸಂಜೆಯಲ್ಲಿ ಮರಣ ಹೊಂದಿದರು. ಈ ಬಾಂಬ ಅತ್ಯಾಚಾರದ ಸಂಬಂಧವಾಗಿ ಎಷ್ಟೋ ಮನೆಗಳು ಝಡತಿ ಮಾಡಲ್ಪಟ್ಟಿದ್ದು ಅನೇಕರು ಸೆರೆಹಿಡಿಯಲ್ಪಟ್ಟಿದ್ದಾರೆ

ತಮ್ಮ ಪ್ರೀತ್ಯರ್ಥವಾಗಿ ದಿಲ್ಲಿಯಲ್ಲಿ ಏರ್ಪಡಿಸಲ್ಪಟ್ಟ ಒಂದು ಸಮಾರಂಭದಲ್ಲಿ ಭಾಷಣ ಮಾಡುವಾಗ ವ್ಹಾಯಿಸರಾಯರು ಅತ್ಯಾಚಾರವನ್ನು ಕುರಿತು ಹೇಳಿದ್ದೇನಂದರೆ—ಇಂತಹ ಅತ್ಯಾಚಾರಗಳಿಗೆ ಉತ್ತೇಜನಕೊಡುವವರೊಡನೆ ಹೋರಾಡುವದು ಸರಕಾರದವರ ಆದ್ಯ ಕರ್ತವ್ಯವಾಗಿದೆ ಪ್ರತಿಯೊಬ್ಬ ನಾಗರಿಕನೂ ಸಹ ಇಂತಹ ಅತ್ಯಾಚಾರಗಳನ್ನು ನಿಷೇಧಿಸಿ, ಅವುಗಳು ಇನ್ನು ಮುಂದೆ ಸಂಭವಿಸದಂತೆ ತನ್ನ ಶಕ್ತಿಸರ್ವಸ್ವವನ್ನೆಲ್ಲ ವೆಚ್ಚಮಾಡಬೇಕು.

ಬರ್ಮಾದಲ್ಲಿ

ಬಂಡುಗಾರರಿಗೂ ಪೋಲೀಸರಿಗೂ ಕಾದಾಟ.

ಫೌಜದಾರ ಹಾಗು ಜಮಾದಾರರಿಗೆ ಘಾಯ

ರಂಗೂನ ತಾ. ೮

ಬಂಡುಗಾರರು ಹಾಗು ಪೋಲೀಸರ ನಡುವೆ ನಡೆದ ಕಾದಾಟದ ವಿಷಯವಾಗಿ ಸರಕಾರಿ ಪ್ರಕಟನೆ ಹೊರಟಿದ್ದು ಅದರಲ್ಲಿ ಕೆಳಗಿನಂತೆ ಕಾಣಿಸಲ್ಪಟ್ಟಿದೆ.

ಓರ್ವ ಪೋಲೀಸ ಸಬ್ ಇನಸ್ಪೆಕ್ಟರರು ಹಾಗು ೧೦ ಜನ ಮಿಲಿಟರಿ ಪೋಲೀಸರು ಬಂಡುಗಾರರನ್ನು ಮುಂಜಾವಿನಲ್ಲಿ ಎದುರಿಸಿದರು. ಈ ಕಾದಾಟದಲ್ಲಿ ಓರ್ವ ಸಬ್ ಇನಸ್ಪೆಕ್ಟರರು ಗಾಯಹೊಂದಿದ್ದಲ್ಲದೆ ಒಬ್ಬ ಪೋಲೀಸನು ಕೊಲ್ಲಲ್ಪಟ್ಟಿದ್ದಾನೆ. ಬಂಡುಗಾರರಲ್ಲಿ ಎಷ್ಟು ಜನರಿಗೆ ಗಾಯಗಳಾಗಿವೆಯೆಂಬುದು ತಿಳಿದು ಬಂದಿಲ್ಲ ಸಂಜೆಯಲ್ಲಿ ಹೆಚ್ಚಿಗೆ ಕೆಲವು ಪೋಲೀಸರು ಅಲ್ಲಿಗೆ ಹೋಗಿ ಬಂಡುಗಾರರನ್ನು ಎದುರಿಸಿದರು ಈ ಹೋರಾಟದಲ್ಲಿ ಒಬ್ಬ ಜಮಾದಾರ, ಒಬ್ಬ ಪೋಲಿಸ ಹೀಗೆ ಇಬ್ಬರಿಗೆ ಗಾಯಗಳಾಗಿದ್ದು ಬಂಡುಗಾರರ ಕಡೆಗೆ ಒಬ್ಬನು ಕೊಲ್ಲಲ್ಪಟ್ಟಿದ್ದಾನೆ. ಬಂಡುಗಾರರ ಕೆಲವು ಕಾಗದ ಪತ್ರಗಳಾದರೂ ಅಧಿಕಾರಿಗಳ ಕೈವಶವಾಗಿವೆ (ಅ ಪ್ರೆ)

ಅಮೃತಸರ ಮ್ಯುನಸಿಪಾಲಿಟಿಯವರು

ಮಹಾತ್ಮರಿಗೆ

ಮಾನಪತ್ರ ಕೊಟ್ಟರು.

(ಅಮೃತಸರ ತಾ॥ ೯)

ಮಹಾತ್ಮಾ ಗಾಂಧಿಯವರು ಸ್ವಲ್ಪ ಅಸ್ವಸ್ಥರಾಗಿದ್ದುದರಿಂದ ಅವರು ಇದ್ದ ತಮ್ಮ ಬಿಡಾರವನ್ನು ಬಿಟ್ಟು ಕದಲಲಿಲ್ಲ. ನಗರಸಭೆಯವರು ಹಾಗೂ ಕಾಂಗ್ರೆಸದವರು ಅವರಿಗೆ ತಮ್ಮ ತಮ್ಮ ಮಾನಪತ್ರಗಳನ್ನು ಅವರ ಬಿಡಾರದಲ್ಲಿಯೇ ಅರ್ಪಿಸಿದರು. ಮಹಾತ್ಮಾ ಗಾಂಧಿಯವರು ಅವುಗಳಿಗೆ ಸ್ವಲ್ಪದರಲ್ಲಿಯೇ ಉತ್ತರ ಕೊಟ್ಟರು. (ಅ. ಪ್ರೆ)

ಬಾದಶಹರ ಪ್ರಕೃತಿ

(ಸ್ಪೇಶಲ್ ತಂತಿ, ಮುಂಬಯಿ ತಾ॥ ೯)

ಬಾದಶಹರ ಪ್ರಕೃತಿಯು ಈಗೀಗ ಸ್ವಲ್ಪ ಸುಧಾರಿಸಹತ್ತಿದೆಯೆಂದು ತಿಳಿದುಬರುತ್ತಿದೆ

ಸರ್ವಾಧಿಕಾರಿ.

ಮಹಾತ್ಮಾ ಗಾಂಧಿಯವರು ನಿನ್ನಿನ 'ಯಂಗ ಇಂಡಿಯಾ' ಸಂಚಿಕೆಯಲ್ಲಿ "ಸರ್ವಾಧಿಕಾರಿ" ಎಂಬ ತಲೆಬರಹದ ಕೆಳಗೆ ಒಂದು ಲೇಖನವನ್ನು ಬರೆದು, ವರ್ಕಿಂಗ ಕಮಿಟಿಯವರು ತಮ್ಮನ್ನು ದುಂಡುಮೇಜಿನ ಪರಿಷತ್ತಿಗೆ ಸರ್ವಾಧಿಕಾರಿಯನ್ನಾಗಿ ಏಕೆ ನಿಯಮಿಸಿದರೆಂಬ ಬಗ್ಗೆ ಕಾರಣಗಳನ್ನು ಕೊಟ್ಟಿದ್ದಾರೆ. ಅವರು ಆ ಲೇಖದಲ್ಲಿ ಅನ್ನುವದೇನೆಂದರೆ—

ವರ್ಕಿಂಗಕಮಿಟಿಯವರು ಎರಡು ಗಂಟೆಗಳ ವರೆಗೆ ಚನ್ನಾಗಿ ಚರ್ಚಿಸಿ ನನ್ನನ್ನು ಸರ್ವಾಧಿಕಾರಿಯನ್ನಾಗಿ ನಿಯಮಿಸಿದರು. ಪರಿಷತ್ತಿನಲ್ಲಿ ಬೇರೆ ಬೇರೆ ಅಭಿಪ್ರಾಯಗಳು ಮಂಡಿಸಲ್ಪಡದೆ ಕೇವಲ ಕಾಂಗ್ರೆಸದ ಒಂದೇ ಅಭಿಪ್ರಾಯವು ಮಂಡಿಸಲ್ಪಡಬೇಕು, ಈ ದೃಷ್ಟಿಯಿಂದಲೇ ಹೀಗೆ ಮಾಡುವದರಲ್ಲಿ ಒಂದಿದ್ದ. ಕಾಂಗ್ರೆಸದವರ ಅಭಿಪ್ರಾಯವಂತೂ ಅಧಿಕಾರ ಪತ್ರದಲ್ಲಿ ಕಾಣಿಸಲ್ಪಟ್ಟದ ಅಧಿಕಾರ ಪತ್ರದಲ್ಲಿ ಕಾಣಿಸಲ್ಪಡದ ಇಷ್ಟುದಿನ್ನು ಒಂದು ಪತ್ರದಿಂದ ತಿಳಿಸುತ್ತಿದ್ದ ಒಂದು ಮಂಡಲವನ್ನು ಕಳಿಸಬೇಕೂ, ಇಲ್ಲವೇ ಅನುಪವಾಗಿ ಒಬ್ಬರೇ ಹೋಗಬೇಕೋ ಈ ಪ್ರಶ್ನೆಯು ಉದ್ಭವಿಸಿತು ಇಲ್ಲ ದೃಷ್ಟಿಯಿಂದಲೂ ಮಂಡಲವಾಗಿ, ಸರ್ವಾಧಿಕಾರಿಯಾಗಿ ಹೋಗುವದು ಒಳ್ಳೇದಾಗಿ ತೋರಿತು, ಹೀಗೆ ಮಾಡುವದರಿಂದ ಹಣದ ಉಳಿತಾಯವಾಗುವದಲ್ಲದ ಉಳಿದವರೂ ತಮ್ಮ ಉತ್ಸಾಹವನ್ನು ವೆಚ್ಚಮಾಡಬೇಕಾಗುವದಿಲ್ಲ. ಇದಲ್ಲದೆ ಕಾಂಗ್ರೆಸದ ಮುಂದಾಳುಗಳು ಸಾಕಷ್ಟು ಕಾರಣವಿದ್ದದೆ ಪರದೇಶದಲ್ಲಿ ದೀರ್ಘ ಕಾಲದ ವರೆಗೆ ನೆಲಿಸುವದು ಸರಿಯಾಗಿರುವದಿಲ್ಲ. ಬೇರೆಯಾಗಿ ಪರಿಷತ್ತಿನಲ್ಲಿ ನಡೆಯುವ ಕಾರ್ಯಕಲಾಪಗಳ ದೆಸೆಯಿಂದಾಗಿ ಸ್ವರಾಜ್ಯವು ದೊರೆಯುವದಿಲ್ಲವೆಂಬದೂ, ಒಂದು ದೇಶವನ್ನು ಕಾವು ಮಾಡಿಕೊಳ್ಳುವ ಕಾರ್ಯದಿಂದಲೇ ಸ್ವರಾಜ್ಯವು ಲಭಿಸುವದೆಂದೂ ಕಾಂಗ್ರೆಸದವರಿಗೆ ಮನವರಿಕೆಯಾಗಿದೆ ಪರಿಷತ್ತಿನ ಪರಿಣಾಮವು ಶಿಷ್ಟಮಂಡಲದ ಶಕ್ತಿಸರ್ವಸ್ವವನ್ನವಲಂಬಿಸಿರದೆ, ಅವರ ಅಧಿಕಾರದಮೇಲೆ ಅವಲಂಬಿಸಿರುತ್ತದೆ. ಒಡಂಬಡಿಕೆಯಾಗುವದೋ ಇಲ್ಲವೇ ಪುನಃ ಯುದ್ಧವು ಪ್ರಾರಂಭವಾಗುವದೋ ಈಗ ಹೇಳಲು ಬರುವಂತಿಲ್ಲವಾದ್ದರಿಂದ, ಪ್ರತಿಯೊಬ್ಬನೂ ಈಗ ರಾಷ್ಟ್ರಕಾರ್ಯತಿಯ ಕಾರ್ಯವನ್ನು ಕೈಕೊಳ್ಳುವದು ಅವಶ್ಯವಿರುತ್ತದೆ. ಸ್ತ್ರೀಯರೇ, ಪುರುಷರೇ ಹಾಗೂ ಪ್ರತಿಯೊಬ್ಬರಿಗೂ ಯುದ್ಧವು ಬೇಡವಾಗಿದೆ ಶಾಂತತೆಯನ್ನು ಪ್ರಸ್ಥಾಪಿಸುವ ಯೋಗ್ಯವಾದ ಮಾರ್ಗವೆಂದರೆ ಪ್ರತಿಯೊಬ್ಬರೂ ವಿಧಾಯಕ ಕಾರ್ಯಕ್ರಮಗಳನ್ನು ಸಾಗಿಸಬೇಕು; ಮತ್ತು ಒಪ್ಪಂದದ ಕರಾರುಗಳಂತೆ ನಡೆದುಕೊಳ್ಳಬೇಕು.

ಸರಕಾರಿ ಅಧಿಕಾರಿಗಳು ಒಪ್ಪಂದದ ಕರಾರುಗಳನ್ನು ಯೋಗ್ಯ ರೀತಿಯಿಂದ ಪಾಲಿಸುತ್ತಿರುವದಿಲ್ಲ. ಒಪ್ಪಂದಕ್ಕೆ ಪ್ರತ್ಯಕ್ಷವಾಗಿ ಸಂಬಂಧವಿದ್ದವರು, ಅಧಿಕಾರಿಗಳ ವರ್ತನವನ್ನು ಕಂಡು ಅಸಂತುಷ್ಟರಾಗಿರುವರು. ಆದ್ದರಿಂದ ಅಧಿಕಾರಿಗಳ ವರ್ತನದಮೇಲೆ ಹಾಗೆ ಕಣ್ಣಿಡುವದು ಈಗ ಅವಶ್ಯವಿದೆ. ವೆಚ್ಚ ಸಂಗತಿಗಳನ್ನು ವಿಚಾರಮಾಡಿನೋಡಲಾಗಿ ಸರ್ವಾಧಿಕಾರಿಯನ್ನು ನಿಯಮಿಸುವದೇ ಯೋಗ್ಯವಾಗಿದೆಯೆಂದು ತೋರದಿರಲಾರದು. ನನ್ನನ್ನು ಸರ್ವಾಧಿಕಾರಿಯನ್ನಾಗಿ ನಿಯಮಿಸಿದ್ದರಿಂದ ನನ್ನ ಹೊಣೆಗಾರಿಕೆಯು ಸಹಜವಾಗಿ ಹೆಚ್ಚಿದ್ದರೂ ಸಹ, ನಾನು ನನ್ನ ಸತ್ಯಾಗ್ರಹಕ್ಕೆ ನಡೆದುಕೊಳ್ಳಬೇಕಾಗಿದ್ದರಿಂದ ನನ್ನ ಕಾರ್ಯವು ಕಠಿಣವಾಗದೆ ಉಳಿದ ವಿಷಯಗಳಲ್ಲಿ ಪರಮಾತ್ಮನ ಸಹಾಯ ಕೋರಿಕೊಳ್ಳುವೆನು. [ಅ. ಪ್ರೆ]

ಬಾಗಲಕೋಟೆಯ ನಾಗರಿಕರಲ್ಲಿ ಬಿನ್ನಹ

ಮಹನೀಯರೇ,

ಕೇವಲ ಬಾಲ್ಯರಿಂದ ನಡೆಯಿಸಲ್ಪಡುವ "ಎಲಿಫೆಂಟ" ವಾಚನಾಲಯವು ಈಗ ೨-೩ ತಿಂಗಳಿಂದ ತೆರೆಯಲ್ಪಟ್ಟಿಲ್ಲವೆಂಬುದು ನಿಮಗೆ ಗೊತ್ತಿರಲಿಕ್ಕೆ ಸಾಕು. ಇದಕ್ಕೆ ಕಾರಣವೇನಂದರೆ ವಾಚನಾಲಯಕ್ಕೆ ಸ್ವತಂತ್ರ ಕಟ್ಟಡವಿಲ್ಲ ಕಟ್ಟಡವನ್ನು ಬಾಡಿಗೆಯಿಂದ ಹಿಡಿಯಬೇಕೆಂದರೆ ವಾಚನಾಲಯದಲ್ಲಿ ಅಷ್ಟು ಸಾಮರ್ಥ್ಯವಿಲ್ಲ. ಬಾಡಿಗೆಯ ಹಣದ ಬಗ್ಗೆ ಶ್ರೀಮಂತರ ಸಹಾಯ ಕೋರಿದರೆ ಅವರಿಂದ ಸಾಕಷ್ಟು ಸಹಾಯ ಸಿಗಲೊಲ್ಲದು. ಹೀಗಾಗಿ ವಾಚನಾಲಯವು ನೆಲಕಚ್ಚಿ ಬಿದ್ದುಕೊಂಡಿದೆ.

ಹೊಸ ಚೈತನ್ಯದ ಬಿರುಗಾಳಿ ಬೀಸುತ್ತಲಿದೆ. ಎಲ್ಲೆಡೆಯಲ್ಲಿಯೂ ಹೊಸ ಬಾಳ ಬೆಳಗುಗೊಳಿಸುತ್ತಲಿವೆ ಈ ಕಾಲದಲ್ಲಿ ವಾಚನಾಲಯದ ಮಹತ್ವವೆಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ವಾಚನಾಲಯವು ಒಂದು ಹೊಸ ಹುರುಪಿನ ಯುವಕರ ದ್ಯೋತಕ, ಇಲ್ಲಿ ಕೆಲಸಮಾಡುವವರೆಲ್ಲರೂ ಹೊಸ ಹುರುಪಿನವರು. ಕೆಲಸ ಮಾಡಲು ಮುಂದೆಬಂದವರಾದ ನಮ್ಮಿಂದ ಕೆಲಸವನ್ನು ತೆಗೆದುಕೊಳ್ಳುವದು ನಿಮ್ಮನ್ನೇ ಕುರಿತದೆ. ಒಂದು ವಾಚನಾಲಯವನ್ನು ಸಾಗಿಸಿಕೊಂಡು ಹೋಗುವದೇನೂ ಬಾಗಲಕೋಟೆಯವರಿಗೆ ಭಾರವಾಗಲಿಕ್ಕಿಲ್ಲ. ನಮಗೆ ಒಂದು ಸ್ವತಂತ್ರ ಕಟ್ಟಡವನ್ನು ದೊರಕಿಸಿಕೊಟ್ಟಾಗಲಿ ಇಲ್ಲವೆ ಧನಸಹಾಯದಿಂದ ಸಹಾಯ ಮಾಡಿಯಾಗಲಿ ನಮ್ಮ ಬೇಡಿಕೆಗಳನ್ನು ಪೂರೈಸಬೇಕೆಂದು ಬಾಗಲಕೋಟೆಯ ನಾಗರಿಕರಲ್ಲಿ ನಾವು ಕೋರಿಕೊಳ್ಳುತ್ತೇವೆ

ಬಾಗಲಕೋಟೆ } ಕೃಷ್ಣ ಮರ್ತಿ ಪುರಾಣಿಕ
ತಾ॥ ೯-೪-೩೧ } ಭೀಮಾಚಾರ್ಯ ಆಂದೇಲಕರ
ಗೌರವ-ಕಾರ್ಯದರ್ಶಿಗಳು.

ಇಹವೃತ್ತ

"ನರಗುಂದ ಮುತ್ತಿಗೆ" ಎಂಬ ನಾಟಕವನ್ನು ಇಲ್ಲಿಯ ರಂಗಭೂಮಿಯ ಮೇಲೆ ಪ್ರಯೋಗಿಸಲು ಶಿವಾನಂದ ನಾಟಕ ಮಂಡಳಿಯವರಿಗೆ ಅಪ್ಪಣೆದೊರೆತಿದ್ದು, ನಾಳಿನ ಶನಿವಾರ ದಿವಸ ಆ ನಾಟಕವು ಇಲ್ಲಿ ಶಿವಾನಂದ ನಾಟಕ ಗೃಹದಲ್ಲಿ ಪ್ರಯೋಗಿಸಲ್ಪಡುವದು.

ಈ ಪತ್ರಿಕೆಯು ವೆಂಕಟೇಶ ... ಕಳವಳ ಬಾಗಲಕೋಟೆ ಎಜ್ಯುಕೇಶನ್ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು

ರೆ ನಂ. ಬಿ. ೨೭೮೮

ನಿತ್ಯ ಪತ್ರ.

[illegible] परवशं दुःखं । सर्वमात्मवशं सुखम् ॥–मनु.

ಬೆಲೆ ೦-೦-೩

ನಿತ್ಯಪತ್ರಿಕೆಯ ವರ್ಗಣೀ ದರಗಳು

[illegible]

೧೨ ತಿಂಗಳಿಗೆ ೧೫-೦-೦
೬ ,, ೭-೮-೦
೩ ,, ೩-[illegible]-೦
,, ೧-೧೪-೦

[illegible]

೧೨ ತಿಂಗಳಿಗೆ [illegible]
೬ ,, ೬-೦-೦
೩ ,, ೩-೮-೦
೧ ,, ೧-೦-೦



ನಿತ್ಯಪತ್ರಿಕೆಯ ಸರಕಾರಿ ಹಾಗು ಖಾಸಗಿ ಜಾಹೀರಾತಿನ ದರಗಳು

೧ನೇ ಓಲು ೧ ಇಂಚಿಗೆ ೧-೮-೦
[illegible] ,, ,, ೧-೦-೦
[illegible]
[illegible]

ಸಂಪಾದಕರು:- ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಕಟಸಲ್ಪಡುವದು

ವರ್ಷ ೨] ಬಾಗಲಕೋಟೆ— ಶನಿವಾರ ಮಿತಿ ಚೈತ್ರ ಬಹುಳ ೮ ಶಕೆ ೧೮೫೩ ತಾ|| ೧೧—೪—೩೧ [ಸಂಚಿಕೆ ೨೩

ಕರ್ನಾಟಕ ರೈತರಿಗೆ ಅಭೂತಪೂರ್ವ ಜಯ

ಸರಕಾರವು ರೈತರ ಬೇಡಿಕೆಗೆ ತಲೆಬಾಗಿಸಿತು

ಸ್ಪೇಶಲ್ ತಂತಿ, ಧಾರವಾಡ, ತಾ|| ೧೦

ಮುಂಬಯಿ ಕಾಯದೆ ಮಂಡಳದ ಪ್ರತಿನಿಧಿಗಳಾದ ಬೆಳಗಾವಿಯ ಶ್ರೀ ಪಿ. ಆರ್. ಚಿಕ್ಕೋಡಿಯವರ ಪ್ರಯತ್ನದ ಮೂಲಕವಾಗಿ ಶಿರಸಿ, ಸಿದ್ದಾಪೂರ, ಹಿರೇಕೆರೂರ ತಾಲೂಕುಗಳೊಳಗಿನ ಕರನಿರಾಕರಣ ಚಳವಳಿಯ ವಿಷಯವು ಯಶಸ್ವಿಯಾಗಿ ಬಗೆಹರಿಸಲ್ಪಟ್ಟಿದೆ.

ಮುಂಬಯಿ ಕಾಯದೆ ಮಂಡಳದ ಧಾರವಾಡದ ಪ್ರತಿನಿಧಿಗಳಾದ ಶ್ರೀ ಜೋಗರು, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ಶ್ರೀ ದಿವಾಕರ ರಂಗರಾಯರನ್ನು ಕೂಡಿಕೊಂಡು ಇತ್ತೀಚೆಗೆ ಆ ತಾಲೂಕುಗಳಲ್ಲಿ ಸಂಚರಿಸಿ ಕಮೀಶನರರ ಕಡೆಗೆ ಶಿಷ್ಟಮಂಡಲ ಒಯ್ಯುವ ಏರ್ಪಾಡು ಮಾಡಿದ್ದರು. ಆದರೆ ಕಮೀಶನರರು ಶಿಷ್ಟಮಂಡಲವು ಅನವಶ್ಯಕವಾಗಿದೆಯಾಗಿ ಹೇಳಿದರು. ಇತ್ತೀಚೆಗೆ ಆ ತಾಲೂಕುಗಳಲ್ಲಿ ಒಕ್ಕಲಿಗರ ರಾಜ್ಯವು ಭರದಿಂದ ಸಾಗಿತ್ತು. ಕರನಿರಾಕರಣ ಚಳವಳಿಯನ್ನು ಪ್ರಾರಂಭಿಸಲು ಕಾಂಗ್ರೆಸ್ಸಿನವರೇ ರೈತರನ್ನು ಹುರಿದುಂಬಿಸಿದ್ದಾರೆಂದು ಸರಕಾರವು ಈ ವರೆಗೆ ತಿಳಿದುಕೊಂಡಿತ್ತು. ಆದರೆ ಭೂಕಂದಾಯವನ್ನು ಕೊಡಲು ರೈತರು ನಿಜವಾಗಿಯೂ ಅಸಮರ್ಥರಾಗಿರುವದೇ ಅವರು ಹೀಗೆ ತೀರ್ವೆ ಬಿಡದಿರಲು ಕಾರಣವಾಗಿದೆಯೆಂದು ಅವರಿಗೆ ಕಟ್ಟಕಡೆಗೆ ಹೊಳೆಯಿತು. ಕಮೀಶನರರು ತಾವು ಕೊಟ್ಟು ಕಳಿಸಿದ ಆಜ್ಞಾಪತ್ರದಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ. ಸಿಂಟಿಕ್ಕೋಳಗಾದ ರೈತರ ಪ್ರತಿನಿಧಿಯೆಂದ ಶ್ರೀ ದಿವಾಕರರ ಹೆಸರನ್ನು ಕಮೀಶನರರ ಪತ್ರದಲ್ಲಿ ಕಾಣಿಸುವದರಲ್ಲಿ ಬಂದಿದೆ. ಕಮೀಶನರರು ತಮ್ಮ ಆಜ್ಞಾಪತ್ರದಲ್ಲಿ ನಮೂದಿಸಿರುವದೇನಂದರೆ:- ತೋಟದಲ್ಲಿ ಬೆಳೆಯುವ ಅಡಿಕೆ ಮೊದಲಾದವುಗಳ ಧಾರಣೆಯು ಬಹಳೇ ಇಳಿದಿರುವ ಕಾರಣಕ್ಕಾಗಿ ಎಂಟಾಣೆ ಇಲ ಎತ್ತಲ್ಪಡುವ ತೀರ್ವೆಯನ್ನು ತಹಕೂಬ ಇಡಬೇಕೆಂಬುದಾಗಿ ಕೇಳಿಕೊಳ್ಳುವ ತೋಟದ ಸಾಗುವಳಿಗಾರರನ್ನು ಕಲೆಕ್ಟರರು ಕರೆಸಿಕೊಂಡು ಅವರ ಅಂಬೋಣವನ್ನು ಕೇಳಿಕೊಂಡಲ್ಲಿ, ಶ್ರೀ ದಿವಾಕರರು ಸಿರಸಿ ಸಿದ್ದಾಪೂರ ತಾಲೂಕುಗಳಲ್ಲಿಯ ಕರನಿರಾಕರಣ ಚಳವಳಿಯನ್ನು ನಿಲ್ಲಿಸುವರು. ತೋಟದವರು ನಿಜವಾಗಿಯೂ ತೀರ್ವೆ ಕೊಡಲು ಅಸಮರ್ಥರಾಗಿರುವರೆಂದೂ ಹಾಗು ಎಂಟಾಣೆಯ ಸಲದ ತೀರ್ವೆ ತಹಕೂಬ ಇಡುವದು ಯೋಗ್ಯವಾಗಿದೆಯೆಂದೂ ಕಲೆಕ್ಟರಿಗೆ ವಿಚಾರಣೆಯಲ್ಲಿ ಕಂಡು ಬಂದಲ್ಲಿ, ಈ ಸವಲತ್ತಿನ ಬಗ್ಗೆ ಸರಕಾರದ ಸವಲತ್ತು ದೊರಕಿಸಿಕೊಳ್ಳಲು ಅವರು ಕಮೀಶನರರಿಗೆ ಅರ್ಜಿ ಕಳಿಸಬೇಕು. ಶ್ರೀ ದಿವಾಕರರು ಕರನಿರಾಕರಣ ಚಳವಳಿಯನ್ನು ನಿಲ್ಲಿಸಿದ ಕೂಡಲೆ ಜುಲುಮೆಯ ರಾಜ್ಯವು ನಿಲ್ಲಿಸಲ್ಪಡಬೇಕು.

ಲ್ಯಾಂಡ ರೆವ್ಹಿನ್ಯೂ ಕೋಡದ ೧೪೮ ನೇ ಕಲಮಿನನ್ವಯ ಜಪ್ತಿ ಮಾಡಿದ ವಾಗ ಯಾವದೂ ಯೋಜನೆಗಳು ಕೈಕೊಳ್ಳಲ್ಪಟ್ಟಿದ್ದರೆ ಅವುಗಳನ್ನು ಹಿಂತೆಗೆದುಕೊಳ್ಳಬೇಕು. ತೀರ್ವೆ ಕೊಡದ್ದಕ್ಕಾಗಿ ವಿಧಿಸಲ್ಪಟ್ಟ ದಂಡ ಈ ವರೆಗೆ ವಸೂಲಾಗದಿದ್ದರೆ, ಅದನ್ನು ಬಿಟ್ಟು ಕೊಡಬೇಕು.

ತಹಕೂಬ ಹಾಗು ಸೂಟಿ ಇವುಗಳ ಕಾನೂನು ಕಮೀಶನರರು ಹಿರೇಕೆರೂರ ತಾಲೂಕದೊಳಗಿನ ಸಾಗುವಳಿ ಭೂಮಿಯ ತೀರ್ವೆಯನ್ನು ಅವುಗಳ ಧಾರಣೆಗನುಸರಿಸಿ ತಹಕೂಬ ಇಡಬೇಕು. ಇದಕ್ಕನುಸಾರವಾಗಿ ಶ್ರೀ ದಿವಾಕರರು ಕರನಿರಾಕರಣ ಚಳವಳಿಯನ್ನು ನಿಲ್ಲಿಸುವವರಿದ್ದರೆ ಅವರು ಕರನಿರಾಕರಣ ಚಳವಳಿಯನ್ನು ನಿಲ್ಲಿಸಿದ ಕೂಡಲೆ, ರೈತರ ವಿರುದ್ಧವಾಗಿ ಯೋಜಿಸಿದ ಜುಲುಮೆಯ ಯೋಜನೆ ದಂಡ ಮೊದಲಾದವುಗಳನ್ನು ಹಿಂದೆ ಪಡೆಯಬೇಕು.

ಹಿರೇಕೆರೂರ ತಾಲೂಕದೊಳಗಿನ ೪೦೦ ಜನ ರೈತರಿಗೆ ಈ ಆಜ್ಞೆಯಿಂದ ಲಾಭವಾಗುವದಿದೆ. ತೀರ್ವೆಯನ್ನು ಸಂಪೂರ್ಣವಾಗಿ ಸೂಟ ಮಾಡುವಂತೆ ಪ್ರಯತ್ನಗಳು ನಡೆದಿವೆ.

ಈ ಹೊಸ ಪತ್ರಿಯೊಡನೆ ಕರ್ನಾಟಕದ ರೈತರು ಹೂಡಿದ ಸಂಗ್ರಾಮದೊಳಗಿನ ಒಂದು ಧ್ವಜವು ಕೊನೆಯಲ್ಲಿ ಈ ರೀತಿಯಾಗಿ ಕೊನೆಗೊಂಡಿತು.

ವನೋಡ ತಾಲೂಕದಾರರು

ದಬ್ಬಾಳಿಕೆಯ ಕಾಯದೆ ಹಿಂತೆಗೆದುಕೊಂಡರು

ಅಹಮ್ಮದಾಬಾದ ತಾ|| ೧೦

ವನೋಡ ತಾಲೂಕದಾರರು ಶ್ರೀ ಸೇಟ ವೀರಚಂದ ಹಾಗು ಇವರ ಕುಟುಂಬದವರಿಗೆ ತಮ್ಮ ಹದ್ದಿನ್ನು ಬಿಟ್ಟು ಹೋಗಲು ಆಜ್ಞೆ ವಿಧಿಸಿದ್ದರಷ್ಟೆ. ತಾಲೂಕದಾರರು ಈ ಆಜ್ಞೆಯನ್ನು ಹಿಂತೆಗೆದುಕೊಂಡಿರುವರು. ತಾಲೂಕದಾರರ ಮೇಲಿನ ಸಾಮಾಜಿಕ ಬಹಿಷ್ಕಾರವನ್ನು ಹಿಂತೆಗೆದ ಕೊಳ್ಳುವದರಲ್ಲಿ ಬಂದಿದೆ.

ಅ. ಪ್ರೆ.

ಜೇಮ್ಸ ಪಿಡ್ಡಿಯವರಿಗೆ

ಸಹಾನುಭೂತಿ

ಕಲಕತ್ತಾ, ತಾ|| ೯.

ಗುಂಡಿನೇಟಿಗೆ ಗುರಿಯಾಗಿ ನಿಧನಹೊಂದಿದ ಮಿದನಾಪೂರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಜೇಮ್ಸ ಪಿಡ್ಡಿಯವರು ೧೯೨೩—೨೪ರಲ್ಲಿ ಬಂಗಾಲ ಸರಕಾರದ ಉಪಕಾರ್ಯದರ್ಶಿಗಳಿದ್ದುದರಿಂದ, ಅವರ ನಿಧನದ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುವ ಕುರಿತು ಇವತ್ತಿನ ದಿವಸ ಚೀಫ ಸೆಕ್ರೆಟರಿಯವರ ಕಚೇರಿ, ನ್ಯಾಯ ಖಾತೆಯ ಕಚೇರಿ, ಹಾಯಕೋರ್ಟ ಇವುಗಳು ಮುಚ್ಚಲ್ಪಟ್ಟಿದ್ದವು.

ಮುರ್ಶಿದಾಬಾದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಜೆ. ಸಿ. ಫ್ರೆಂಚರವರು ಪಿಡ್ಡಿಯವರ ಸ್ಥಳದಲ್ಲಿ ಮಿದನಾಪುರದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾಗಿ ನೇಮಿಸಲಾಗಿ ತಿಳಿದು ಬರುತ್ತದೆ. (ಅ.ಪ್ರೆ)

ಬಂಗಾಲ ಗವ್ಹರ್ನರರಿಗೆ

ವ್ಹಾಯಿಸರಾಯರ ಸಂದೇಶ

ದಿಲ್ಲಿ. ತಾ. ೯.

ಮಿದನಾಪೂರ ಅತ್ಯಾಚಾರದ ಸಂಗತಿಯು ತಮಗೆ ತಿಳಿದು ಬಂದ ಕೂಡಲೆ ವ್ಹಾಯಿಸರಾಯರು ಬಂಗಾಲ ಗವ್ಹರ್ನರರಿಗೆ ಒಂದು ಸಂದೇಶವನ್ನು ಕಳಿಸಿ ಅದರಲ್ಲಿ ಅತ್ಯಾಚಾರದ ಸಂಬಂಧವಾಗಿ ದುಃಖವನ್ನೂ ಹಾಗು ಜೇಮ್ಸ ಪಿಡ್ಡಿಯವರ ಕುಟುಂಬದವರಿಗೆ ತಮ್ಮ ಸಹಾನುಭೂತಿಯನ್ನೂ ವ್ಯಕ್ತಪಡಿಸಿದರೆ [illegible]

ವ್ಯಾಪಾರಿ ಮಹಾಮಂಡಳದವರ ನಿರ್ಧಾರ

ದಿಲ್ಲಿ, ತಾ|| ೯.

ಅಖಿಲಭಾರತ ವ್ಯಾಪಾರಿ ಮಹಾಮಂಡಳದ ತಾತ್ಕಾಲಿಕ ಸಭೆಯಲ್ಲಿ ಕೆಳಗಿನಂತೆ ನಿರ್ಧರಿಸಿರುವರು.

ದುಂಡ ಮೇಜಿನ ಪರಿಷತ್ತಿನಲ್ಲಿ ರಾಜ್ಯಘಟನೆಯ ಪ್ರಶ್ನೆಯ ವಿಷಯದಲ್ಲಿ ವ್ಯಾಪಾರಿ ಮಹಾಮಂಡಳದ ಪ್ರತಿನಿಧಿಗಳು ಮಹಾತ್ಮಾ ಗಾಂಧಿಯವರನ್ನು ಅನುಸರಿಸಬೇಕು. [illegible] ಸಭೆಯಲ್ಲಿ [illegible] ಸಭೆಯಿಂದ ಎದ್ದು [illegible] ಪ್ರತಿನಿಧಿಗಳು ಹಾಗೆಯೇ ಮಾಡಬೇಕು. ಆದರೆ ಗಾಂಧಿಯವರು [illegible] ಭಾಗವಹಿಸದಿದ್ದರೆ [illegible] ಎಂದು [illegible] ಪ್ರತಿನಿಧಿಗಳು ಯಾವ ಧೋರಣವನ್ನು ಸ್ವೀಕರಿಸಬೇಕು ಎಂಬ ಬಗ್ಗೆ ಮಹಾಮಂಡಳದವರು ಬೇರೆ ಸಲಹೆ ಕೊಡುವರು.

ಅ. ಪ್ರೆ.

ಕಾನಪೂರದ ದಂಗೆಯಲ್ಲಿ

ಅಧಿಕಾರಿಗಳ ವರ್ತನೆ!

(ಕಾನಪೂರ, ತಾ|| ೧೦)

ಕಾನಪೂರದಲ್ಲಾದ ದಂಗೆಯ ಸಂಬಂಧವಾಗಿ ವಿಚಾರಣೆ ನಡಿಸಲು ಅಖಿಲಭಾರತ ಮುಸ್ಲಿಮ್ ಪರಿಷತ್ತಿನವರಿಂದ ನಿಯಮಿಸಲ್ಪಟ್ಟ ವಿಚಾರಕ ಮಂಡಳದವರಾದ ನವಾಬ ಇಸ್ಮಾಯಿಲ್ ಖಾನ, ಸೈಯ್ಯದ ಅಬ್ದುಲ್ ಹಸನ, ಮೌಲಾನಾ ಶಾಫಿ ದಾವೂದಿ, ರಾಜೆಸಾಹೇಬ ಸಲೆಮಪೂರ, ಜಾತಿಯಲ್ಲಿ ಇವರು ಇವತ್ತಿನ ದಿವಸ ಇಲ್ಲಿಗೆ ಬಂದ, [illegible] ಹಾಗು ಬಾಬು ರಾಜೇಂದ್ರಪ್ರಸಾದರೊಡನೆ ದಂಗೆಯ ಸ್ಥಳದಲ್ಲೆಲ್ಲ ಸಂಚರಿಸಿದರು. ಅಲ್ಲಿಯ ಸ್ಥಿತಿಗತಿಯ ಸಂಬಂಧವಾಗಿ ಅವರು ಒಂದು ಪ್ರಕಟನೆ ಹೊರಡಿಸಿದ್ದು ಅದರಲ್ಲಿ ಅವರು ಅನ್ನುವದೇನಂದರೆ:— ನಾವು ನೋಡಿದ ನೋಟಗಳು ಬಹಳೇ ಕರುಣಾಜನಕವಾಗಿದ್ದವು. ಎರಡೂ ಪಂಗಡದವರು ಸಿಕ್ಕ ಸಿಕ್ಕಹಾಗೆ ಗೊಂದಲ ಹಾಕಿ ಎಷ್ಟೋ ಜನರ ಪ್ರಾಣ ತೆಗೆದುಕೊಂಡಿದ್ದಾರೆ. ಎಷ್ಟೋ ಜನರ ಆಸ್ತಿಗಳು ಸಮೂಲ ನಾಶಹೊಂದಿವೆ. ಮಸೀದೆ, ದೇವಾಲಯಗಳು ಕೆಡಿಸಲ್ಪಟ್ಟಿವೆ. ಈಗ ಪತ್ರಿಕೆಗಳಲ್ಲಿ ಕಾಣಿಸಲ್ಪಟ್ಟ ಜನರಿಗಿಂತಲೂ ಎರಡೂ ಪಂಗಡಗಳಲ್ಲಿ ಹೆಚ್ಚಿಗೆ ಜನರು ಗಾಯ ಹೊಂದಿದ್ದಾರೆ. ವಿಚಾರಣೆಯು ಸಂಪೂರ್ಣವಾಗುವವರೆಗೆ ನಾವು ನಮ್ಮ ಅಭಿಪ್ರಾಯವನ್ನು ಹೇಳಲಿಚ್ಛಿಸುವದಿಲ್ಲ.

ದಂಗೆಯ ಸಮಯದಲ್ಲಿ ಅಧಿಕಾರಿಗಳು ಯೋಗ್ಯರೀತಿಯಿಂದ ನಡೆದುಕೊಳ್ಳಲಿಲ್ಲವೆಂಬುದನ್ನು ತಿಳಿಸಲು ವಿಷಾದವಾಗುತ್ತದೆ. ದಂಗೆಗಾರರ ಕೈಯಲ್ಲಿ ಸಿಕ್ಕುವವರ ಜೀವರಕ್ಷಣೆಗಾಗಿ ಅಧಿಕಾರಿಗಳು ಯಾವ ಮುಂಜಾಗ್ರತೆಯನ್ನು ತೆಗೆದುಕೊಳ್ಳಲಿಲ್ಲವೆಂದು ಕೆಲವರು ನಮ್ಮ ಮುಂದೆ ಹೇಳಿದ್ದಾರೆ. ಕೊತವಾಲರು ಹಾಗು ಇತರ ಜನರ ವರ್ತನದ ವಿಷಯವಾಗಿ ನಮ್ಮ ಕಡೆಗೆ ಅನೇಕ ದೂರುಗಳು ಬಂದಿವೆ. ಇವೆಲ್ಲ ಸಂಗತಿಗಳ ವಿಚಾರ ಮಾಡಿ ಸರಕಾರದವರು ಕೂಡಲೆ ವಿಚಾರಣೆಯನ್ನು ನಡಿಸಬೇಕಾಗಿ ನಮಗೆ ಅನಿಸುತ್ತದೆ.

(ಅ. ಪ್ರೆ)

ಮಹಾತ್ಮರ ಪ್ರವಾಸ

ಮಹಾತ್ಮಾ ಗಾಂಧಿಯವರು ನಿನ್ನೆ ದಿವಸ ರಾತ್ರಿ [illegible] ಒಂದು ಸ್ಟೇಶನದಲ್ಲಿ ಫ್ರಂಟಿಯರ್ ಮೇಲ ಹತ್ತಿ ಪ್ರಯಾಣ ಮಾಡಿದರು. ಮಹಾತ್ಮರ ಸಂಗಾಡ [illegible] ಆ ಸ್ಟೇಶನದಲ್ಲಿ [illegible]

(ಅ. ಪ್ರೆ.)

ಶಿರ್ಸಿ ಸಿದ್ದಾಪುರಗಳಲ್ಲಿ ದಬ್ಬಾಳಿಕೆ ಹೊಲಗಳನ್ನು ಕಸಿದುಕೊಳ್ಳುವರಂತೆ!

ಕಲೆಕ್ಟರರು ತಮ್ಮ ಕೆಳಗಿನ ಕೆಲಸಗಾರರನ್ನು ಕರೆದು ಅವರಿಗೆ ಜಪ್ತೀಪತ್ರವನ್ನು ಈಗಿನಂತೆಯೇ ಭರದಿಂದ ಸಾಗಿಸುವಂತೆ ಹೇಳಿದರು. ರೈತರ ಚಳವಳಿಯಿಂದ ನಮ್ಮ ಕಾರ್ಯದಲ್ಲಿ ಸಡಿಲು ಹುಟ್ಟಕೂಡದು; ಸರಕಾರದ ಘೋರ ನಾವು ಕೊಂಚವಾದರೂ ಬದಲಾಗಿಲ್ಲವೆಂದು ಹೇಳಿದರಂತೆ! ರೈತರ ವಿರುದ್ಧವಾಗಿ ಅಂತಿಮ ಉಪಾಯಗಳನ್ನು ಯೋಜಿಸುವ ಬಗ್ಗೆಯೂ ಹೇಳಿದರು. ಕೆಲವು ಸತ್ಯಾಗ್ರಹಿಗಳ ಮೇಲೆ ಹೊಲಗಳನ್ನು ಕಸಿದುಕೊಳ್ಳಲಾಗುವದೆಂಬ ಬಗ್ಗೆ (ಘಾರಫೀಟ) ನೋಟೀಸು ತೆಗೆಯುವವರಿದ್ದಾರೆ. ಈ ಸತ್ಯಾಗ್ರಹಿಗಳು ಹೇಗೆ ವರ್ತಿಸುವರೆಂಬದನ್ನು ನೋಡಿದ ಬಳಿಕ ಎಲ್ಲರ ಮೇಲೆಯೂ ಈ ಅಸ್ತ್ರವನ್ನು ಬಿಡುವರಂತೆ!

ಜಿಲ್ಹೆಯನ್ನು ಬಿಟ್ಟು ಹೋಗಿರಿ!

ಸಿದ್ದಾಪುರದಲ್ಲಿ ಕೆಲಸಮಾಡುತ್ತಿರುವ ಶ್ರೀ ಎಚ್. ಅನಂತರಾವ, ಶ್ರೀ ಗುರುನಾಥರಾವ ಜೋಶಿ, ಶ್ರೀ ಬುರ್ಲಿ, ಶ್ರೀ ಬೇವೂರ ಮೊದಲಾದವರಿಗೆ ಜಿಲ್ಹೆಯನ್ನು ಬಿಟ್ಟು ಹೋಗುವ ಬಗ್ಗೆ ಪೋಲೀಸ ಸ್ವಕ್ಷನ ಪ್ರಕಾರ ನೋಟೀಸು ತೆಗೆದಿದ್ದಾರೆ. ಕೆಲವರ ಮೇಲೆ ನೋಟೀಸು ಇಷ್ಟರಲ್ಲಿಯೇ ಜಾರಿಯಾಗಿವೆ. ಅಂತೂ ಸಿದ್ದಾಪುರದಲ್ಲಿ ಮತ್ತೆ ಲಗ್ನೆ ಹತ್ತುವದೆಂಬಂತಾಯಿತು.

ಮಾಮಲೇದಾರರಿಗೆ ದಂಡವೇ?

ಶಿರ್ಸಿಯ ಮಾಮಲೇದಾರರಾದ ಶ್ರೀ. ಶಿರಾಳಿಯವರಿಗೆ ರೋಹಾ ಎಂಬಲ್ಲಿಗೆ ವರ್ಗವಾಗಿದೆ. ಈ ವರ್ಗದ ಬಗ್ಗೆ ಶಿರ್ಸಿಯಲ್ಲಿ ಅನೇಕ ತರ್ಕವಿತರ್ಕಗಳು ನಡೆದಿವೆ. ಮಾಮಲೇದಾರರು ಕರಕೊಡದಿರುವವರೊಡನೆ ಸೌಮ್ಯತನದಿಂದ ವರ್ತಿಸುವರೆಂದು ಕಮಿಶನರರು ಅವರ ಮೇಲೆ ಆರೋಪ ಹೊರಿಸಿರುವರೆಂದೂ ಕೆಲವರು ಆಡಿಕೊಳ್ಳುತ್ತಿರುವರು. ಆದರೆ ಈ ಮಾಮಲೇದಾರರು ಬೇರೆ ಯಾವದೇ ಮಾಮಲೇದಾರರಷ್ಟೇ ಕಠೋರರಾಗಿದ್ದುದರಿಂದ ಈ ಸುದ್ದಿಯು ಸುಳ್ಳೆಂದೂ ಕೆಲವರು ತರ್ಕಮಾಡುತ್ತಿರುವರು, ಆದರೂ ನಿವೃತ್ತರಾಗಲಿಕ್ಕೆ ಬಂದ ಮುದುಕ ಮಾಮಲೇದಾರರನ್ನು ಒಮ್ಮೆಲೇ ರೋಹಾದಂಥ ದೂರದ ಸ್ಥಳಕ್ಕೆ ಎತ್ತಿಹಾಕಿದ್ದರ ಗುಟ್ಟು ಮಾತ್ರ ಯಾರಿಗೂ ಹೊಳೆಯದಾಗಿದೆ!

ಹಿರೇಕೇರೂರು ತಾಲೂಕಿನ ಸುದ್ದಿ

(ನಮ್ಮ ಸ್ವಂತ ಸುದ್ದಿಗಾರರಿಂದ)

ಶ್ರೀ ನೆಸ್ವಿಯವರನ್ನು ಹಿಡಿದು ಜಾಮೀನಿನ ಮೇಲೆ ಬಿಟ್ಟರು

ಹಂಸಭಾವಿಯ ಪ್ರಮುಖರಲ್ಲೊಬ್ಬರಾದ ಶ್ರೀ ಟಿ. ಆರ್. ನೆಸ್ವಿ ಬಿ. ಎಜಿ. ಇವರನ್ನು ಈ ದಿನ ಮಧ್ಯಾಹ್ನ ೧೨ ಘಂಟೆಗೆ ಗೌಡ ಶಾನಭೋಗರಿಗೆ ಭಯೋತ್ಪಾದನೆಯನ್ನುಂಟುಮಾಡಿದರೆಂಬ ಆರೋಪದ ಮೇಲೆ ೫೦೬ ಕಲಮಿನ ಪ್ರಕಾರ ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟರು. ಅವರ ಖಟ್ಲೆ ನಾಳೆ ಇಲ್ಲಿ ಮುಕ್ಕಾಮ ಮಾಡಿರುವ ಇಲಾಖಾ ಸಾಹೇಬರವರಲ್ಲಿ ನಡೆಯುವದಿದೆ. ಇದೇ ರೀತಿಯಲ್ಲಿ ಇನ್ನಿತರರ ಮೇಲೆ ಖಟ್ಲೆ ನಡೆಸುವವರಿದ್ದಾರೆಂದು ಸುದ್ದಿ ಇದೆ. ಪಾಪ! ಜಪ್ತಿ, ಘಾರಫೀಟ ನೋಟೀಸುಗಳಿಗೆ ಜನರು ಹೆದರುವದಿಲ್ಲವೆಂದು ಈ ಮಾರ್ಗವನ್ನು ಸ್ವೀಕರಿಸುವರೆಂಬುದಾಗಿ ಕಂಡುಬರುತ್ತಿದೆ. ಇದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗುವದೋ ನೋಡೋಣ!

ಕರ ಕೊಡುವವರಿಂದಾಗಲಿ ಅಥವಾ ಕರ ಕೊಡಿಸುವವಕ್ಕೆ ಸಹಾಯ ಮಾಡಿದುದಕ್ಕಾಗಲಿ ಜನರಿಂದ ಬಹಿಷ್ಕಾರ ಹಾಕಲ್ಪಟ್ಟವರು ಇಲಾಖಾ ಸಾಹೇಬರನ್ನು ಕಂಡು ಬಹಿಷ್ಕಾರವನ್ನು ಹಾಕಿದವರು ಯಾರು ಯಾರೆಂಬದನ್ನು ತಿಳಿಸಬೇಕಾಗಿ ಈ ದಿನ ಈ ಊರಲ್ಲೆಲ್ಲ ಡಂಗುರ ಹೊಡಿಸಿದರು.

ಚಿಕ್ಕೇರೂರಿನಲ್ಲಿ ನಿನ್ನೆ ಕೆರೆಯ್ಯಾ ಇನ್ಸಪೆಕ್ಟರರು, ಕುಲಕರ್ಣಿ, ಪಟೇಲರು ಮತ್ತು ತಮ್ಮ ಸ್ವಂತ ಪಂಚರೊಡನೆ ಶ್ರೀ ಹನಮಂತಪ್ಪ ಬಂದಕ್ಕಳವರ ಎಂಬ ರೈತನ ಗೃಹಪ್ರವೇಶಮಾಡಿ ಅವನಿಂದ ಸಲ್ಲಬೇಕಾದ ರೂ ೩೦-೦-೬ ಇನ್ನೂ ಸಂದಿಲ್ಲವೆಂದು ರೂಪಾಯಿ ೧೫೦ ಬೆಲೆಬಾಳುವ ಕಬ್ಬಿಣ ಗಾಣವನ್ನು ೪೦ ರೂಪಾಯಿ ಕಿಮ್ಮತ್ತು ಪಂಚರಿಂದ ಕಟ್ಟಿಸಿ ಜಪ್ತಿ ಮಾಡಿರುವರು ಆದರೂ ಶ್ರೀ ಹನಮಂತಪ್ಪನವರು ಯಾವ ತಕರಾರೂ ಮಾಡಿಲ್ಲ. ೩೦ ರೂ ಗೆ ೪೦ ರೂ. ಗಳ ಮಾಲನ್ನು ತೆಗೆದುಕೊಂಡು ತೃಪ್ತರಾದದ್ದು ಹೆಚ್ಚೇ!

ಶ್ರೀ. ನೇಸ್ವಿಯವರ ವಿಚಾರಣೆಯು ಮುಂದೆ ಹಾಕಲ್ಪಟ್ಟಿತು!

ನಿನ್ನೆ ೫೦೬ ನೆಯ ಕಲಮಿನ ಪ್ರಕಾರ ಕೈದು ಮಾಡಲ್ಪಟ್ಟ ಶ್ರೀ ಟಿ, ಆರ್, ನೇಸ್ವಿ ಇವರ ವಿಚಾರಣೆಯು ಇಲಾಖಾ ಸಾಹೇಬರ ಮುಕ್ಕಾಮಿನಲ್ಲಿ ಈ ದಿನ ಮಧ್ಯಾಹ್ನ ಆಗುವದಿತ್ತು, ಜನರು ದೊಡ್ಡ ಮೆರವಣಿಗೆಯಿಂದ ಅವರನ್ನು ಕೋರ್ಟಿಗೆ ಕರೆದೊಯ್ದರು. ಆದರೆ ಅವರ ದರ್ಶನಕ್ಕಾಗಿ ನಾನಾಕಡೆಯಿಂದ ಜನರು ಹಿಂಡುಹಿಂಡಾಗಿ ನುಗ್ಗಿ ಬರುತ್ತಿದ್ದರು. ಎಲ್ಲೆಲ್ಲಿಯೂ ಅವರಿಗೆ ಫಲಪುಷ್ಪಗಳನ್ನು ಅರ್ಪಿಸಿ ಅವರನ್ನು ಹೂಮಾಲೆಗಳಲ್ಲಿ ಮುಳುಗಿಸಿಬಿಟ್ಟರು ಅಕ್ಕ ಪಕ್ಕ ಹಳ್ಳಿಗಳಿಂದ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳಲು ನೂರಾರು ಜನರು ಬಂದಿದ್ದರು. ಪೋಲೀಸರು ತಮ್ಮ ಕುಟಿಲನೀತಿಯಿಂದ ಮೆರವಣಿಗೆಗೆ ಅಡ್ಡಬರಲು ನಿಷ್ಫಲವಾಗಿ ಪ್ರಯತ್ನಿಸಿದರು. ಮೆರವಣಿಗೆಯು ಹೊರಡಲು ಸ್ವಲ್ಪ ತಡವಾಗುವದೆಂದು ಅನೇಕ ಹಳ್ಳಿಜನರು ವೇಳೆಗೆ ಸರಿಯಾಗಿ ಬರಲಾಗಲಿಲ್ಲ. ಕೋರ್ಟಿನ ಬಳಿಗೆ ಹೋಗುವ ವೇಳೆಗೆ ಹಳ್ಳಿಯ ಜನರು ಶ್ರೀ ನೆಸ್ವಿಯವರನ್ನು ಸಂದರ್ಶಿಸಲು ತಂಡತಂಡವಾಗಿ ಓಡಿಬರುತ್ತಿದ್ದರು ಪೋಲೀಸ ವಕೀಲರು ಈ ದಿನ ಹಾಜರಿಲ್ಲದಿದ್ದ ಕಾರಣ ವಿಚಾರಣೆಯನ್ನು ೧೬ ನೇ ತಾರೀಖಿಗೆ ತಮ್ಮ ಹಿರೇಕೇರೂರು ಮುಕ್ಕಾಮಿನಲ್ಲಿ ನಡೆಸುವದಾಗಿ ತಿಳಿಸಿದರು.

ಹಂಸಭಾವಿಯಲ್ಲಿ ಈ ದಿನದ ಜಪ್ತಿಗಳು

ಸರ್ಕಲ್ ಇನಸ್ಪೆಕ್ಟರರು ಪಂಚರೊಡನೆ ಏಳು ಮನೆಗಳನ್ನು ಹೊಕ್ಕು ಕರಕೊಡದಿದ್ದುದಕ್ಕಾಗಿ ಚರಾಸ್ತಿಗಳನ್ನು ಜಪ್ತಮಾಡಿದರು. ಕರಕ್ಕಿಂತಲೂ ಎಷ್ಟೋ ಪಟ್ಟು ಹೆಚ್ಚು ಕಿಮ್ಮತ್ತಿನ ಸಾಮಾನುಗಳನ್ನು ಜಪ್ತ ಮಾಡಿದರು. ೧೫೦ ರೂಪಾಯಿ ಬೆಲೆಬಾಳುವ ಒಂದು ಕಬ್ಬಿಣ ತಿಜೋರಿಯನ್ನು ಪಂಚರಿಂದ ೪೦ ರೂಪಾಯಿ ಕಿಮ್ಮತ್ತು ಕಟ್ಟಿಸಿ ೩೭ ರೂಪಾಯಿಯ ಸಲುವಾಗಿ ಎಗಿದುಕೊಂಡು ಹೋದರು. ಇತರ ಸಾಮಾನುಗಳನ್ನು ಪೇಟೆಯ ಅರ್ಧ ಧಾರಣೆಗೆ ಕಿಮ್ಮತ್ತು ಕಟ್ಟಿ ಸಾಮಾನದ ಪ್ರಮಾಣವನ್ನು ಅಜಮಾಸ ನೋಡಿ ಒಯ್ದರು. ೮ ಮಣ ತೂಕವಿದ್ದಲ್ಲಿ ೬ ಮಣ ಅಜಮಾಸನ್ನು ಕಟ್ಟಿದ್ದಾರೆ. ಇವರ ಅಜಮಾಸ ಪಂಚರಿಗೆ ಗೊತ್ತು ಇರಿಯೇ ಇಲ್ಲ, ಇನ್ನೊಂದು ಮನೆಯನ್ನು ಗಂಡಸರಾರೂ ಇಲ್ಲದ ವೇಳೆಯಲ್ಲಿ ಹೊಕ್ಕು ಹೆಂಗಸರ ಮಾತಿಗೆ ಕಿವಿಗೊಡದೆ ಜಪ್ತಮಾಡಿಕೊಂಡು ಹೋದರು.

ಮಾಮಲೇದಾರರ ಬೆದರಿಕೆ!

ಮಾಮಲೇದಾರರು ಹಳ್ಳಿಹಳ್ಳಿಗೆ ಹೋಗಿ ತಕ್ಷಣವೇ ಕರ ಕೊಡದಿದ್ದಲ್ಲಿ ಕೈದು ಮಾಡುವದೆಂದು ಬಡ ರೈತರನ್ನು ಬೆದರಿಸುತ್ತಿದ್ದಾರೆ. ಸರಕಾರದ ಯಾವ ಕೃತಿಗೂ ಮರು ಮಾತಾಡದೆ ರೈತರು ಉದಾಸೀನರಾಗಿರುವರು.

ಡಾ. ಮುಂಜೆಯವರ ಭಾಷಣ.

ಮುಂಬಯಿ ತಾ. ೯

ಇಟಲಿ, ಜರ್ಮನಿ, ಫ್ರಾನ್ಸ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿಯ ಸೈನಿಕ ಶಿಕ್ಷಣ ಪದ್ಧತಿಯನ್ನು ನೋಡಿಕೊಂಡು ಮೊನ್ನೆ ಮೊನ್ನೆ ಮರಳಿ ಬಂದವರಾದ ಡಾ। ಮುಂಜೆಯವರು ಇವತ್ತಿನ ದಿವಸ ಬೊವಡಸ್ಕಿ ಭವನದಲ್ಲಿ ಶ್ರೀ. ಜಮನಾದಾಸ ಎಂ. ಮೆಹತಾರವರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕವಾಗಿ ಭಾಷಣ ಮಾಡಿದರು ಅವರು ತಮ್ಮ ಭಾಷಣದಲ್ಲಿ ಹೇಳಿದ್ದೇನಂದರೆ—

ದೇಶದೊಳಗಿನ ಸಂಪತ್ತು, ಬುದ್ಧಿ ಮತ್ತು ಶೌರ್ಯೋತ್ಸಾಹಗಳನ್ನು ದೇಶದ ಉನ್ನತಿಗಾಗಿ ಯೋಗ್ಯ ಪ್ರಮಾಣದಿಂದ ಉಪಯೋಗಿಸಿದಲ್ಲಿ, ಹಿಂದುಸ್ಥಾನವು ೧೦ ವರ್ಷಗಳ ಅವಧಿಯಲ್ಲಿಯೇ ಪರಚಕ್ರವನ್ನು ತಡೆಯುವಷ್ಟು ಶಕ್ತಿಯನ್ನು ಸಂಪಾದಿಸಿ ತನ್ನ ಸಂರಕ್ಷಣೆಯನ್ನು ತಾನೇ ಮಾಡಿಕೊಳ್ಳುವದು ನಾನು ಇನ್ನು ಮುಂದೆ ನನ್ನ ಶಕ್ತಿ ಸರ್ವಸ್ವವನ್ನೆಲ್ಲ ಈ ಕಾರ್ಯಕ್ಕಾಗಿಯೇ ಉಪಯೋಗಿಸಿ, ಹಿಂದುಸ್ಥಾನವು ತನ್ನನ್ನು ತಾನೇ ಸಂರಕ್ಷಿಸಿಕೊಳ್ಳಲು ಸಮರ್ಥವಿದೆಯೆಂದು ಜಗತ್ತಿನ ನಿದರ್ಶನಕ್ಕೆ ತಂದುಕೊಡುತ್ತೇನೆ ಸೈನ್ಯದ ಹಿಂದೀಕರಣ ಮಾಡಲು ೩೦-೪೦ ವರ್ಷಗಳು ಬೇಕಾಗುವವೆಂದು ತಜ್ಞರು ಹೇಳುತ್ತಿರುವರು ಇಷ್ಟು ಅವಧಿಯು ಬೇಕಾಗುವದೆಂದು ನನಗೆ ಅನಿಸುವದಿಲ್ಲ ನನ್ನ ಪ್ರವಾಸದಲ್ಲಿ ನಾನು ಎಷ್ಟೋ ಜನ ತಜ್ಞರನ್ನು ಭೆಟ್ಟಿಯಾಗಿ ಸೈನಿಕ ಶಿಕ್ಷಣದ ವಿಷಯವಾಗಿ ಅವರೊಡನೆ ಚರ್ಚೆಮಾಡಿದೆ ಆ ತಜ್ಞರು ಕಳೆದ ಮಹಾಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದವರಾಗಿದ್ದರು. ಅವರು ಹಿಂದೀ ಸೈನಿಕರನ್ನು ವಿಶೇಷವಾಗಿ ಪ್ರಶಂಸಿಸಿದ್ದಲ್ಲದೆ ಹಿಂದೀಸೈನಿಕರು ಹೋದ ಮಹಾಯುದ್ಧದಲ್ಲಿ ಬಹು ಪರಾಕ್ರಮದಿಂದ ಕಾದಾಡಿದರಾಗಿ ಅವರು ನಮ್ಮ ಸೈನಿಕರನ್ನು ಕೊಂಡಾಡಿದರು. ಹಿಂದುಸ್ಥಾನದ ಸಂಪತ್ತು, ಬುದ್ಧಿ ಶೌರ್ಯೋತ್ಸಾಹಗಳನ್ನು ಹಿಂದುಸ್ಥಾನದ ಉಪಯೋಗಕ್ಕಾಗಿ ಬಳಿಸಿದಲ್ಲಿ ಹಿಂದುಸ್ಥಾನವು ಪರಚಕ್ರವನ್ನು ತಡೆಯಲು ಸಮರ್ಥವಾಗುವದೆಂದು ಅವರು ಹೇಳಿದರು.

ಇಷ್ಟಾದ ಬಳಿಕ ಡಾಕ್ಟರರು ಜರ್ಮನಿ, ಇಟಲಿ ಮೊದಲಾದ ದೇಶಗಳಲ್ಲಿಯ ಯುವಕರ ಚಳವಳಿಯ ವಿಷಯವನ್ನೆತ್ತಿ, ತಮ್ಮ ತಮ್ಮ ದೇಶಗಳನ್ನು ಸಂರಕ್ಷಿಸಲು ಯುವಕರು ಶಕ್ತರಾಗುವಂತೆ ಅವರಿಗೆ ತಕ್ಕ ಸೈನಿಕ ಶಿಕ್ಷಣವು ಕೊಡಲ್ಪಡುತ್ತಿದೆಯಾಗಿ ಹೇಳಿದರು. ಬಳಿಕ ಅವರು ತಾವು ಹೇಳಿದ್ದನ್ನು ಸಂಪೂರ್ಣವಾಗಿ ವಿಚಾರಮಾಡಬೇಕೆಂದೂ, ಹಿಂದುಸ್ಥಾನವು ತನ್ನ ರಾಷ್ಟ್ರೀಯ ಸೈನ್ಯವನ್ನು ಸಿದ್ಧಪಡಿಸಿಕೊಂಡು ತನ್ನನ್ನು ತಾನು ಸಂರಕ್ಷಿಸಿಕೊಳ್ಳುವದೆಂದು ಜಗತ್ತಿಗೆ ತೋರಿಸಬೇಕೆಂದೂ ಆಶೆಯನ್ನು ವ್ಯಕ್ತಪಡಿಸಿ ಭಾಷಣ ಮುಗಿಸಿದರು.

(ಅ. ಪ್ರೆ)

ಜೇಮ್ಸ ಪಿಡ್ಡಿಯವರ ಅಂತ್ಯವಿಧಿ.

ಮಿದನಾಪುರ, ತಾ। ೯.

೧೯-೧೦-೨೯ ರ ಟಿಗಾಸಪುರಿಂದಾ ನಿಧನರಾದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಜೇಮ್ಸ ಪಿಡ್ಡಿಯವರ ಅಂತ್ಯವಿಧಿಯು "ಮಿಲಿಟರಿ" ವಿಧಾನದಂತೆ ನೆರವೇರಿಸಲ್ಪಟ್ಟಿತು. ಅ. ಪ್ರೆ.

ಮುಂಬಯಿ ಗವ್ಹರ್ನರರು ರಜೆಯ ಮೇಲೆ ಹೋಗುವರು

ಸರ್ ಹೊಟ್‌ಸನ್ನರು ಗವ್ಹರ್ನರರಾಗುವರು

ಮುಂಬಯಿ ತಾ. ೧೦

ಬ್ರಿಟಿಶ್ ಅಫೀಸಿಯಲ್ ವಾಯರಲೆಸ್ಸದಿಂದ ಕೆಳಗಿನಂತೆ ತಿಳಿದು ಬರುತ್ತದೆ.

ಮುಂಬಯಿಯ ಈಗಿನ ಗವ್ಹರ್ನರರಾಗಿರುವ ಸರ್ ಫ್ರೆಡರಿಕ್ ಸಾಯಿಕ್ಸರು ವೈದ್ಯಕೀಯ ಸಲಹೆಯನ್ನನುಸರಿಸಿ ತಾ. ೨೫ಕ್ಕೆ ಇಂಗ್ಲಂಡಕ್ಕೆ ರಜೆಯ ಮೇಲೆ ಹೋಗುವರು ಮುಂಬಯಿ ಇಲಾಖೆಯ ಗೃಹಮಂತ್ರಿಗಳಾದ ಸರ್ ಅರ್ನೆಸ್ಟಹೊಟ್‌ಸನ್ನರು ಅವರ ಸ್ಥಳದಲ್ಲಿ ಗವ್ಹರ್ನರರಾಗಿ ನಿಯಮಿಸಲ್ಪಟ್ಟದ್ದು, ಇದಕ್ಕೆ ಬಾದಶಹರು ತಮ್ಮ ಸಮ್ಮತಿ ಕೊಟ್ಟಿದ್ದಾರೆ.

ಮುಂಬಯಿ ಇಲಾಖೆಯ ಸುದ್ದಿ ಖಾತೆಯ ಅಧಿಕಾರಿಗಳು ಈ ಸಂಬಂಧವಾಗಿ ಕೆಳಗಿನಂತೆ ಪ್ರಕಟನೆ ಹೊರಡಿಸಿದ್ದಾರೆ.

ತಾವು ದೇಹಾಸ್ವಸ್ಥತೆಯ ಮೂಲಕವಾಗಿ ಮೂರು ನಾಲ್ಕು ತಿಂಗಳುಗಳ ವರೆಗೆ ಇಂಗ್ಲಂಡಕ್ಕೆ ರಜೆಯ ಮೇಲೆ ಹೋಗುವವರಿದ್ದೇವೆಂಬುದನ್ನು ಪ್ರಕಟಿಸಲು ಸರ್ ಫೆಡರಿಕ್ ಸಾಯಿಕ್ಸರು ಕೇಳಿಕೊಂಡಿದ್ದಾರೆ. ಈ ಸ್ವಲ್ಪ ಅವಧಿಯವರೆಗಾದರೂ ರಜೆಯ ಮೇಲೆ ಹೋಗಬೇಕು ಗವ್ಹರ್ನರರ ಇಚ್ಛೆಯಿದ್ದಿಲ್ಲ ಆದರೆ ಇಂಗ್ಲಂಡದ ಡಾಕ್ಟರರು ರಜೆ ತೆಗೆದುಕೊಳ್ಳಲು ಅವರಿಗೆ ಒತ್ತಾಯ ಪಡಿಸಿದ್ದರಿಂದ ಅವರು ಹೀಗೆ ಮಾಡಬೇಕಾಯಿತು ಅಲ್ಲಿಯ ಉಪಚಾರದಿಂದ ಅವರು ಬೇಗನೆ ಗುಣಹೊಂದುವರೆಂದೂ, ಇಂಗ್ಲಂಡದ ಪ್ರವಾಸವು ಪುನಃ ಕಾರ್ಯ ಪ್ರಾರಂಭಿಸಲು ಅವರಿಗೆ ಸಾಕಷ್ಟು ಶಕ್ತಿಸಾಮರ್ಥ್ಯ ದಯಪಾಲಿಸುವದೆಂದೂ ನಂಬಲಾಗಿದೆ. ಕಾರ್ಯಕಾರಿ ಮಂಡಳದ ಮುಖ್ಯ ಸಭಾಸದರಾಗಿರುವ ಸರ್ ಅರ್ನೆಸ್ಟಹೊಟ್‌ಸನ್ನರು ಅವರ ಸ್ಥಳದಲ್ಲಿ ಗವ್ಹರ್ನರರಾಗಿ ಆರಿಸಲ್ಪಟ್ಟಿದ್ದಾರೆ.

ಸರ್ ಅರ್ನೆಸ್ಟ ಹೊಟ್‌ಸನ್ನರು ಇವತ್ತಿನ ದಿವಸ ಸಂಜೆಯಲ್ಲಿ ಗೃಹಮಂತ್ರಿ ಕೆಲಸದಿಂದ ನಿವೃತ್ತಿ ಹೊಂದುವರು ಮಿ ಜ. ಎ ಥೋಮಾಸರವರು ಅವರ ಸ್ಥಳದಲ್ಲಿ ಗೃಹಮಂತ್ರಿಗಳಾಗುವರು. ಮತ್ತು ಸರಕಾರಿ ಭವನದಲ್ಲಿ ನಾಳಿನ ದಿವಸ ೧೧ ಘಂಟೆಗೆ ಪಥ ತೆಗೆದುಕೊಳ್ಳುವರು. (ಅ ಪ್ರೆ)

ಕಾನಪೂರದಲ್ಲಿಯ ಕಿಡಿಗೇಡಿತನ.

ಕಾನಪುರ ತಾ॥ ೯

ಕಾನಪುರ ದಂಗೆಗೆ ಕಾಂಗ್ರೆಸ ಜನರೇ ಕಾರಣರಾಗಿರುವರೆಂದು ಕೆಲವು ಜನರು ಕಾಂಗ್ರೆಸದ ಮೇಲೆ ಆರೋಪ ಹೊರಿಸುತ್ತಿರುವದನ್ನು ಕಂಡು, ಕಾನಪುರ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ಒಂದು ಬಿನ್ನಹವನ್ನು ಹೊರಡಿಸಿದ್ದಾರೆ ಅದರಲ್ಲಿ ಕಾಂಗ್ರೆಸ ಜನರು ಭಾಗತೆಗೆದುಕೊಂಡಿರುವರೆಂಬುದಾಗಿ ಯಾರಿಗಾದರೂ ಗೊತ್ತಿದ್ದರೆ ಅಂಥವರು ಕಾಂಗ್ರೆಸ ವಿಚಾರಣಾ ಮಂಡಳದ ಮುಂದೆ ಬಂದು ನಿಂತುಕೊಂಡು ಕಾಂಗ್ರೆಸದವರು ಏನೇನು ಗೊಂದಲ ಹಾಕಿದರೆಂಬುದನ್ನು ಅವರ ಮುಂದೆ ಹೇಳಬೇಕು ಅವರು ಗೊಂದಲ ಹಾಕಿದ್ದು ನಿಜವಿದೆಯೆಂಬುದು ವಿಚಾರಣಾ ಮಂಡಳದವರಿಗೆ ತೋರಿದಲ್ಲಿ ಅವರಿಗೆ ತಕ್ಕ ಪ್ರಾಯಶ್ಚಿತ್ತವು ವಿಧಿಸಲ್ಪಡುವದು. ಕಾಂಗ್ರೆಸದವರು ಗೊಂದಲ ಹಾಕಿದರೆಂಬುವದರಲ್ಲಿ ನನ್ನ ವಿಶ್ವಾಸವಿಲ್ಲ.

(ಅ. ಪ್ರೆ.)

ರೆ ನಂ. ಬಿ. ೨೭೮೮

ನಿತ್ಯ ಪತ್ರ.

ಬೆಲೆ ೦—೦—೩

...ಪರವಶ ದುಃಖಂ । ಆತ್ಮವಶಂ ಸುಖಮ್ ॥—ಮನು.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ
೧೨ ತಿಂಗಳಿಗೆ ೧೫—೦—೦
೬ ,, ೭—೮—೦
೩ ,, ೩—೧೨—೦
೧ ,, ೧ ೧೪—೦
ಸ್ಥಳೀಯರಿಗೆ
೧೨ ತಿಂಗಳಿಗೆ ೧೨—೦—೦
೬ ,, ೬—೦—೦
೩ ,, ೩—೮—೦
೧ ,, ೧—೦—೦

ಕನ್ನಡಿಗ
KANNADIGA
BAGALKOT
BI-WEEKLY

ನಿತ್ಯಪತ್ರಿಕೆಯ
ಸರಕಾರಿ ಹಾಗು ಜಂಗಾಮಿ
ಜಾಹೀರಾತಿನ ದರಗಳು
೧ನೇ ಸಲ ೧ ಇಂಚಿಗೆ ೧—೮—೦
೨ ,, ,, ೧—೦—೦
ನ. ೦೨ ಪ್ರತಿಯೊಂದು ಸಲ
೦—೧೨—೦
ಹೆಚ್ಚಿನ ವಿವರಕ್ಕೆ ಪ್ರಮಾಣದಿಂದ ...

ಸಂಪಾದಕರು:— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಸೋಮವಾರ ಮಿತಿ ಚೈತ್ರ ಬಹುಳ ೧೧ ಶಕೆ ೧೮೫೩ ತಾ॥ ...—೪—೩೧ [ಸಂಚಿಕೆ ೩೪

ವಿದ್ಯಾರ್ಥಿಗಳಿಗೆ ಮಹಾತ್ಮರ ಸಂದೇಶ,

ಒಪ್ಪಂದಕ್ಕಾಗಿ ಪ್ರಯತ್ನಿಸುವೆ. ಆದರೆ ದೈವವು ಪ್ರತಿಕೂಲವಾಗಿದೆ.

ಒಪ್ಪಂದವಾಗದಿದ್ದರೆ ಭಯಂಕರ ಯುದ್ಧವು ಸುರುವಾಗುವದು. ಪ್ರತಿಯೊಬ್ಬರು ಸಾಯಲು ಸಿದ್ಧರಾಗಬೇಕು.

ಗುಜರಾಥ ವಿದ್ಯಾಪೀಠದ ಪದವಿದಾನ ಸಮಾರಂಭದ ಸಮಯದಲ್ಲಿ ಭಾಷಣ ಮಾಡುವಾಗ ಮಹಾತ್ಮಾ ಗಾಂಧಿಯವರು ಹೇಳಿದ್ದೇನಂದರೆ:—

ಶಾಶ್ವತವಾದ ಸಂಧಾನವುಂಟಾಗುವದೆಂದು ನಾವೆಲ್ಲರೂ ಆಶೆ ಮಾಡುವಾ ಶಾಶ್ವತವಾದ ಸಂಧಾನವನ್ನು ಮಾಡಿಕೊಳ್ಳುವ ಬಗ್ಗೆ ನಾನು ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ. ಆದರೆ ದೈವವು ನಮಗೆ ಪ್ರತಿಕೂಲವಾಗಿದೆಯೆಂದು ನನಗೆ ತೋರುತ್ತದೆ. ದೈವವನ್ನು ವಿರೋಧಿಸುವದು ಯಾರಿಗೂ ಶಕ್ಯವಿಲ್ಲ. ಒಪ್ಪಂದವು ಸಾಧ್ಯವಾಗದಿದ್ದರೆ ಭಾವೀ ಯುದ್ಧವು ಮೊದಲಿನದಕ್ಕಿಂತಲೂ ಬಹು ಭಯಂಕರವಾಗುವದು ಈ ಯುದ್ಧವು ಸುರುವಾದಲ್ಲಿ ದೇಶದ ಸಲುವಾಗಿ ಪ್ರತಿಯೊಬ್ಬರೂ ಹೆಚ್ಚು ಹೆಚ್ಚು ಸ್ವಾರ್ಥತ್ಯಾಗ ಮಾಡಬೇಕಾಗುವದು ನಮಗೆ ಕೇವಲ ಹೆಸರಿಗೆ ಸ್ವರಾಜ್ಯ ಬೇಕಾಗಿಲ್ಲ ೩೦ ಕೋಟಿ ಜನರಿಗಾಗಿ ಸ್ವರಾಜ್ಯ ಬೇಕಾಗಿದೆ. ಅನೇಕ ವರ್ಷಗಳ ವರೆಗೆ ಪರದಾಸ್ಯದಲ್ಲಿ ನರಳುತ್ತ ಬಿದ್ದಿರುವವರಾದ ನಾವು ಈಗ ಬೇಗನೆ ಎಚ್ಚರಾಗಬೇಕು. ಈ ಸ್ವಾರ್ಥವನ್ನು ಸಾಧ್ಯ ಮಾಡಿಕೊಳ್ಳುವದಕ್ಕಾಗಿ ಪ್ರತಿಯೊಬ್ಬನೂ ತನ್ನ ಪ್ರಾಣವನ್ನು ಬಲಿಯಾಗಿ ಅರ್ಪಿಸಲು ಸಿದ್ಧನಾಗಬೇಕು ಒಂದು ಕಾಸಿನ ಸಹಾಯವಿಲ್ಲದೆಯೂ ಭಾವೀ ಯುದ್ಧವನ್ನು ಸಾಗಿಸುವ ಪ್ರಸಂಗವು ನಮ್ಮ ಮೇಲೆ ಬರಬಹುದು. ಈ ಪ್ರಸಂಗವು ಒದಗಿ ಬಂದಲ್ಲಿ ಹೇಗೆ ಯುದ್ಧ ಮಾಡಬೇಕೆಂಬುದನ್ನು ಈಗಿಯೆ ನಾವು ಗೊತ್ತು ಮಾಡಿಕೊಳ್ಳಬೇಕು.

ಸರದಾರ ವಲ್ಲಭಭಾಯಿಯವರ ಪ್ರವಾಸ.

ಮಹಾತ್ಮಾ ಗಾಂಧಿಯವರ ಬದಲು ಸರದಾರ ವಲ್ಲಭಭಾಯಿಯವರು ಭಡೋಚ ಜಿಲ್ಲೆಯಲ್ಲಿ ಸಂಚಾರ ಮಾಡುವವರಿದ್ದಾರಾಗಿ ತಿಳಿಯುತ್ತದೆ.

ಶೌಕತಅಲ್ಲಿಯವರು ವ್ಹಾಯಿಸರನ್ನು ಭೆಟ್ಟಿಯಾದರು.

ಮೌಲಾನಾ ಶೌಕತ ಅಲ್ಲಿಯವರು ತಾ॥ ೯ ನೆಯ ದಿವಸ ವ್ಹಾಯಿಸರಾಯರನ್ನು ಕಂಡು ಕೆಲವೊಂದು ವಿಷಯಗಳ ಸಂಬಂಧವಾಗಿ ಅವರೊಡನೆ ಚರ್ಚೆ ಮಾಡಿದರೆಂದು ತಿಳಿದು ಬರುತ್ತದೆ.

ಭಗತಸಿಂಗರ ಚಿತ್ರಗಳನ್ನು ಜಪ್ತ ಮಾಡಿದರು

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ ೯ ನೆಯ ದಿವಸ ಅಲ್ಲಿಯ 'ಶಿವಾಜಿ ಮುದ್ರಣಾಲಯ'' ಕ್ಕೆ ಮುತ್ತಿಗೆ ಹಾಕಿ ಲಾಹೋರ ಹುತಾತ್ಮರಾದ ಸರದಾರ ಭಗತಸಿಂಗ, ರಾಜಗುರು, ಸುಖದೇವ ಇವರ ಚಿತ್ರಗಳನ್ನು ಜಪ್ತ ಮಾಡಿಕೊಂಡು ಹೋದರು.

ಸಾಂಗಲಿ ಸಂಸ್ಥಾನ ಪ್ರಜಾ ಪರಿಷತ್ತು

ಸಾಂಗಲಿ ಸಂಸ್ಥಾನ ಪ್ರಜಾಪರಿಷತ್ತಿನ ೯ ನೆಯ ಅಧಿವೇಶನವು ತಾ. ೧೮ ಹಾಗೂ ೧೯ ಈ ದಿನಗಳಲ್ಲಿ ಶ್ರೀ. ಡಿ ವ್ಹಿ ಗೋಖಲೆಯವರ ಅಧ್ಯಕ್ಷತೆಯ ಕೆಳಗೆ ಮಿರಜ ಪ್ರಾಂತದ ಉಗರ ಎಂಬಲ್ಲಿ ನೆರೆತಕ್ಕದ್ದಿದೆ.

ಪ. ಮಾಲವೀಯವರು ವ್ಹಾಯಿಸರಾಯರನ್ನು ಕಂಡು ಕೊಂಡರು

ಪಂಡಿತ ಮದನ ಮೋಹನ ಮಾಲವೀಯವರು ತಾ ೯ ನೆಯ ದಿವಸ ವ್ಹಾಯಿಸರಾಯರನ್ನು ಕಂಡ ಕೊಂಡು, ಜಾತೀಯ ಪ್ರಶ್ನೆ ಹಾಗು ದುಂಡುಮೇಜಿನ ಕಾರ್ಯಕಲಾಪ ಇವುಗಳ ಸಂಬಂಧವಾಗಿ ಅವರೊಡನೆ ೧ ಗಂಟೆಯ ವರೆಗೆ ಚರ್ಚೆ ಮಾಡಿದರು

ಡಾ. ಆಂತ್ರೋಳಿಕರರಿಗೆ ಬಿಡುಗಡೆಯಾಯಿತು.

ಪೋಲೀಸ ಚೌಕಿ ಮೊದಲಾದವುಗಳನ್ನು ಸುಟ್ಟ ಆರೋಪದಿಂದ ಸೊಲ್ಲಾಪುರದಲ್ಲಿ ಶಿಕ್ಷೆಗೆ ಗುರಿಯಾದ ಡಾ. ಅಂತ್ರೋಳೀಕರ, ವಕೀಲ ಮೊದಲಾದ ೧೫ ಜನರು ತಮಗಾದ ಶಿಕ್ಷೆಯ ವಿರುದ್ಧವಾಗಿ ಹಾಯಕೋರ್ಟಿಗೆ ಅಪೀಲು ಮಾಡಿದ್ದರು ಜಸ್ಟೀಸ ವಿ... ಹಾಗು ಜಸ್ಟಿಸ್ ಬೇಕರರು ೯ ದಿನಗಳ ವರೆಗೆ ವಿಚಾರಣೆ ಮಾಡಿ ಮೊನ್ನಿನ ... ತೀರ್ಪ ಹೇಳಿದರು. ಡಾ ಅಂತ್ರೋಳಿಕರ, ... ವಕೀಲ ಹಾಗು ಗೋವಿಂದರಾವ ... ದೇಶಿ ಈ ಮೂವರು ನಿರಪರಾಧಿಗಳಾಗಿ ಬಿಡುಗಡೆ ಹೊಂದಲ್ಪಟ್ಟರು. ಉಳಿದವರ ಶಿಕ್ಷೆಯು ಗಟ್ಟಿ ಮಾಡಲ್ಪಟ್ಟಿತು.

ಮಿದನಾಪೂರ ಅತ್ಯಾಚಾರವೂ ಮಹಾತ್ಮರ ಬಿನ್ನವೂ

ಮಹಾತ್ಮಾ ಗಾಂಧಿಯವರು ದಿಲ್ಲಿಯ ಮೇಲೆ ಹಾಯ್ದು ಹೋಗುತ್ತಿರುವಾಗ ಓರ್ವ ಪತ್ರಿಕಾ ಪ್ರತಿನಿಧಿಯು, ದಿಲ್ಲಿ ಸ್ಟೇಶನದಲ್ಲಿ ಅವರನ್ನು ಕಂಡುಕೊಂಡು ಮಿದನಾಪೂರ ಅತ್ಯಾಚಾರದ ಕಡೆಗೆ ಅವರ ದೃಷ್ಟಿ ಹೊರಳಿಸಿದನು. ಆಗ ಮಹಾತ್ಮರು ಕೆಳಗಿನ ತೆ ಅಭಿಪ್ರಾಯ ವ್ಯಕ್ತ ಪಡಿಸಿದರು;

"ನನಗೆ ತುಂಬಾ ವಿಷಾದವಾಗಿದೆ ಹೀಗೆ ಕೊಲೆ ಮಾಡುವದರಿಂದ ದೊರಕುವ ಕರುಣೆಯಿಂದ ದೇಶಕ್ಕೆ ಯಾವ ಹಿತವೂ ಇಲ್ಲ. ಹೋದ ಚಳವಳಿಯಿಂದ ಅಪರಿಮಿತ ಪ್ರಗತಿಯುಂಟಾಗಿದೆಯೆಂಬುದನ್ನು ಅವರು ಮರೆಯ ಕೂಡದು ಅತ್ಯಾಚಾರ ಕೃತಿಗಳ ಘಟಿಸದಿದ್ದರೆ ಚಳವಳಿಯು ಇನ್ನೂ ಹೆಚ್ಚು ಪ್ರಗತಿ ಹೊಂದಬಹುದಾಗಿತ್ತು. ಕಾಂಗ್ರೆಸದವರು ಅಹಿಂಸಾ ತತ್ವಕ್ಕಂಟಿಕೊಂಡು ತಮ್ಮ ಚಳವಳಿಯನ್ನು ಸಾಗಿಸುವವರೆಗಾದರೂ ರಾಜಕೀಯ ಅತ್ಯಾಚಾರಗಳನ್ನು ನಿಲ್ಲಿಸಿರೆಂದು ಕ್ರಾಂತಿಕಾರರಿಗೆ ನಾನು ಕೇಳಿಕೊಳ್ಳುತ್ತೇನೆ. ಬಹಳೇ ಅತುರರಾಗಿದ್ದರೆ ತಮ್ಮ ಕಾರ್ಯಕ್ಕಾಗಿ ಅವರು ಕೆಲವೊಂದು ಅವಧಿಯನ್ನು ಗೊತ್ತುಪಡಿಸಿಕೊಳ್ಳಲಿ ಹೀಗೆ ಗೊತ್ತುಪಡಿಸಿಕೊಂಡ ಬಳಿಕ ಅವರು ಇದರಂತೆ ... ದೇಶವನ್ನು ಚಳವಳಿಸಾಗಿಸಬೇಕು."

ಮಹಾತ್ಮರು ಇಂಗ್ಲಂಡದಲ್ಲಿ ಉಪಶ್ಯ ಮಾಡುವರೇ?

ಲಂಡನದ "ನ್ಯೂಸ್ ಡೇಲಿ ನ್ಯೂಜ" ಪತ್ರಿಕೆಯಲ್ಲಿ ಕೆಳಗಿನಂತೆ ಪ್ರಕಟವಾಗಿದೆ

ಮಹಾತ್ಮಾಗಾಂಧಿಯವರು ಈ ವರ್ಷ ಇಂಗ್ಲಂಡಕ್ಕೆ ... ಬರತಕ್ಕವರಿದ್ದಾರೆಂದು ... [illegible] ... ಇದಕ್ಕೆ ... [illegible] ... ಹಿಂದುಸ್ಥಾನದ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ ... [illegible] ... ಕ್ಕೆ ಬಂದಲ್ಲಿ ... ಆದರ ಸತ್ಕಾರ ಮಾಡುವೆವು.

ವಲ್ಲಭಭಾಯಿಯವರಿಗೆ ಮಿ ಬ್ರೇಕನೇಯವರ ಸಂದೇಶ

ಲಂಡನದ "ಗಾಂಧಿ ಸೊಸಾಯಿಟಿಯ ಅಧ್ಯಕ್ಷರಾದ ಮಿ. ಎ ಫೆನರ ಬ್ರೋಕವೇಯವರು ಸರದಾರ ವಲ್ಲಭಭಾಯಿಯವರಿಗೆ ಕರಾಚಿಯಲ್ಲಿ ನಿರ್ಣಯಿಸಲ್ಪಟ್ಟ ಗೊತ್ತುವಳಿಗಳಿಗೆ ತಮ್ಮ ಬೆಂಬಲವಿದೆಯೆಂದೂ, ಮಿರತ, ಗಢವಾಲಿ, ಲಾಹೋರ ಮೊದಲಾದ ಒಳಸಂಚಿನ ರಾಜಕೀಯ ಕೈದಿಗಳನ್ನು ಸರಕಾರದವರು ಬೇಗನೆ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡದ್ದಕ್ಕೆ ತಮ್ಮ ಸಮ್ಮತಿಯಿದೆಯೆಂದೂ ಸಂದೇಶ ಕಳಿಸಿದ್ದಾರೆ.

ಹಿಂದೀ ದುಂಡು ಮೇಜಿನ ಪರಿಷತ್ತು

" ಹಿಂದುಸ್ಥಾನ ಟಾಯಿಮ್ಸ " ಪತ್ರಿಕೆಯ ದಿಲ್ಲಿಯ ಸುದ್ದಿಗಾರನು ಆ ಪತ್ರಿಕೆಗೆ ಕೆಳಗಿನಂತೆ ತಿಳಿಸಿದ್ದಾನೆ.

ವ್ಹಾಯಿಸರಾಯರಾದ ಲಾರ್ಡ ವೆಲಿಂಗ್ಡನ್ನರು ಹಿಂದುಸ್ಥಾನಕ್ಕೆ ಬಂದ ಬಳಿಕ ಸ್ವಲ್ಪ ದಿವಸಗಳಲ್ಲಿಯೇ ಸಿಮ್ಲಾದಲ್ಲಿ ಹಿಂದೀ ದುಂಡು ಮೇಜಿನ ಪರಿಷತ್ತು ಕೂಡುವದು. ಪರಿಷತ್ತಿನಲ್ಲಿ ಕೆಲವು ಮಂಡಳಿಗಳು ನಿಯಮಿಸಲ್ಪಟ್ಟು ಅವು ಕೂಡಲೆ ತಮ್ಮ ಕಾರ್ಯ ಪ್ರಾರಂಭಿಸುವವು. ಅವುಗಳ ಕಾರ್ಯವು ಮುಗಿದ ಕೂಡಲೆ ಸಂಯುಕ್ತ ರಾಜ್ಯಘಟನೆಯ ಮಂಡಳದವರು ಲಂಡನದಲ್ಲಿ ತಮ್ಮ ಕಾರ್ಯ ಪ್ರಾರಂಭಿಸುವರು.

ಹಿಂದೀ ವ್ಯಾಪಾರಿ ... ಮಂಡಳದ ಪ್ರತಿನಿಧಿಗಳೆಂದ ... ಮದ್ರಾಸ, ಬಿರ್ಲಾ ... ಮಹಮ್ಮದ ಇವರು ಹೋಗಬೇಕೆಂದು ... ಪರಿಷತ್ತಿಗೆ ... ತಿಳಿಯುತ್ತದೆ. ಪಂಡಿತ ಮದನಮೋಹನ ಮಾಲವೀಯರು ... ಪರಿಷತ್ತಿಗೆ ... ಅವರು ... [illegible] ... ಶ್ರೀ ಚೆಟ್ಟಿ, ರಂಗಸ್ವಾಮಿ ಅಯ್ಯಂಗಾರ ... ಇವರಿಗೆ ... ದೊರೆಯುವ ಸಂಭವವಿದೆ. ದಿವಾನ ... ಪ್ರತಿನಿಧಿಗಳಾಗಿ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಬಹುದು. ಮೌಲಾನಾ ಶೌಕತ ಅಲ್ಲಿಯವರಿಗೂ ಪರಿಷತ್ತಿಗೆ ಕರೆಕಳುಹಲ್ಪಡುವದಾಗಿ ತಿಳಿಯುತ್ತದೆ.

ಕೇರಳ ವಿರುದ್ಧ ಕರ್ನಾಟಕ

(ಲೇಖಕ—ಬಳ್ಳಾರಿಯ ಏಕೀಕರಣ ಭಕ್ತರು)

ಭಾಷಾವಾರ ಪ್ರಾಂತಗಳ ಬಗ್ಗೆ [illegible] ನೇ, ಮದ್ರಾಸಿನ "ಸ್ವರಾಜ್ಯ' ಪತ್ರಿಕೆಯಲ್ಲಿ ಮಲಬಾರಿನವರೊಬ್ಬರು "ಪ್ರೋಬೋನೋ ಪಬ್ಲಿಕೊ" ಎಂಬುವ [illegible] ಕೆಳಗೆ ಒಂದು ವಿಚಿತ್ರವಾದ ಲೇಖವನ್ನು ಪ್ರಕಟಿಸಿದ್ದಾರೆ. ಅವರು ಅನ್ನುವದೇನೆಂದರೆ— ಭಾಷಾವಾರ ಪ್ರಾಂತಗಳಾದ ಮೇಲೆ ಮದ್ರಾಸು ಇಲಾಖೆಯಲ್ಲಿ ತಮಿಳು, ಆಂಧ್ರ, ಕರ್ನಾಟಕ ಮತ್ತು ಕೇರಳ ಎಂಬುವ ನಾಲ್ಕು ಪ್ರಾಂತಗಳಾಗಬೇಕೆಂದೂ, ಘಟ್ಟಗಳ ಕೆಳಗಿರುವ ಪಶ್ಚಿಮ ತೀರವು ಗೋಕರ್ಣದಿಂದ ಕನ್ಯಾಕುಮಾರಿಯವರೆಗೂ, ಪರಶುರಾಮನಿಂದ ಸೃಷ್ಟಿಸಲ್ಪಟ್ಟದರಿಂದಲೂ, ರೀತಿ, ನೀತಿ, ನ್ಯಾಯ ಮತ್ತು ಭೂರಚನೆ ಒಂದೇ ಇರುವದರಿಂದ ಈ ಪ್ರದೇಶವೆಲ್ಲವೂ ಕೇರಳ ಪ್ರಾಂತದ ಕೆಳಗೆ ಬರಬೇಕೆಂದೂ, 'ದಕ್ಷಿಣ ಕನ್ನಡ' ಎಂಬುವ ಹೆಸರು ಆ ಜಿಲ್ಲೆಗೆ ತಪ್ಪಾಗಿ ಕೊಡಲ್ಪಟ್ಟಿದೆಯೆಂತಲೂ, ಆ ಜಿಲ್ಲೆಯಲ್ಲಿ ಬಹು ಸಂಖ್ಯಾಕ ಜನರು ತುಳು ಭಾಷೆಯನ್ನು ಮಾತಾಡುವದರಿಂದ ಆ ಜಿಲ್ಲೆಗೆ 'ತುಳುನಾಡು' ಅಂದರೆ ಸಲ್ಲುವದೆಂತಲೂ, ತುಳು ಭಾಷೆಯು ಮಳೆಯಾಳ ಭಾಷೆಯನ್ನು ಬಹಳ ಮಟ್ಟಿಗೆ ಹೋಲುವದರಿಂದಲೂ ಮತ್ತು ಈ "ತುಳುನಾಡ"ದಲ್ಲಿರುವ "ಅಳಿಯಸಂತಾನ" ಕಾಯಿದೆಯು ಮಲಬಾರಿನ 'ಮರುಮಕ್ಕತಾಯ' ಎಂಬುವ [illegible] ಕಾಯಿದೆಯನ್ನು ಹೋಲುವದರಿಂದಲೂ, ಸದರಿ ಜಿಲ್ಲೆಯಲ್ಲಿ ಕನ್ನಡ ಭಾಷೆಯು ಕೇವಲ ರಾಜಕೀಯ ಭಾಷೆಯೇ ಹೊರತು ಅಂದರೆ ಕೋರ್ಟು ಕಛೇರಿಗಳಲ್ಲಾಡುವ ಭಾಷೆಯೇ ಹೊರತು ಜನರ ಭಾಷೆಯಲ್ಲವೆಂತಲೂ, ಎಂದು [illegible] ಸದರಿ 'ಪ್ರೋಬೋನೋ ಪಬ್ಲಿಕೊ' ಎಂಬುವರು ದಕ್ಷಿಣ ಕನ್ನಡ ಜಿಲ್ಲೆಯನ್ನು ಮತ್ತು ಮಲಬಾರ ಜಿಲ್ಲೆಯನ್ನು ಸೇರಿಸಿ ಕೇರಳ ಪ್ರಾಂತವನ್ನಾಗಿ ಮಾಡಬೇಕೆಂತಲೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಪೂರ್ಣವಾಗಿ ಸೇರಿಸದೆ ಹೋದರೆ ಕಾಸರಗೋಡು ಮುಂತಾದ ನಾಲ್ಕು ತಾಲೂಕುಗಳನ್ನು ಕೇರಳಕ್ಕೆ ಸೇರಿಸಬೇಕೆಂತಲೂ, ಇದಕ್ಕೋಸ್ಕರ ಪ್ರತಿ ಒಬ್ಬ ಕೇರಳನೂ ಈ ವಿಷಯವಾಗಿ ಪ್ರಯತ್ನಿಸಬೇಕೆಂದು ಬರೆದುಕೊಂಡಿರುತ್ತಾರೆ. ಇಷ್ಟರಲ್ಲಿಯೇ ಕೇರಳ ಪ್ರಾಂತದಲ್ಲಿ [illegible] ಅಧ್ಯಕ್ಷತೆಯ ಕೆಳಗೆ ಜರುಗುವ ಕೇರಳ ಪ್ರಾಂತದ ರಾಜಕೀಯ ಪರಿಷತ್ತಿನಲ್ಲಿ ಈ ವಿಷಯವಾಗಿ ಚರ್ಚೆಯಾಗಬಹುದೆಂದು ತೋರುತ್ತದೆ.

ಬೆಳಗಾವ ಮತ್ತು ಸೊಲ್ಲಾಪುರ ಜಿಲ್ಲೆಗಳ ಬಗ್ಗೆ ಮಹಾರಾಷ್ಟ್ರದೊಡನೆ, ಮತ್ತು ಬಳ್ಳಾರಿ ಅನಂತಪುರಗಳ ಬಗ್ಗೆ ಆಂಧ್ರದೊಡನೆ ಕರ್ನಾಟಕವು ಹೋರಾಡಿ ಕೆಲವು ಮಟ್ಟಿಗಾದರೂ ಜಯವನ್ನು ಹೊಂದಿತು. ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಯುನಿವರ್ಸಿಟಿಯಿಂದ ಬಿಡುಗಡೆ ಮಾಡಿಸಿತು. ಈಗ ಕರ್ನಾಟಕವು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮಲಬಾರಿನವರ ಸಂಗಡಲೂ ಮತ್ತು ಮುಂದೆ ನೀಲಗಿರಿ ಸೇಲಂ ಕೋಯಿಮುತ್ತೂರು ಜಿಲ್ಲೆಯಲ್ಲಿರುವ ಆ ಕರ್ನಾಟಕ ತಾಲೂಕುಗಳಿಗೋಸ್ಕರ ತಮಿಳನಾಡ ಸಂಗಡ ಹೋರಾಡಬೇಕಾಗುವದು.

ಈ "ಪ್ರೋಬೋನೋ ಪಬ್ಲಿಕೊ" ಯವರು ಬರೆದಿರುವ ಲೇಖನದಲ್ಲಿ 'ಕರ್ನಾಟಕ' ಎಂಬುವ ಶಬ್ದವೇ ಮಾಯವಾಗಿರುವದು. ಮದ್ರಾಸು ಇಲಾಖೆಯಲ್ಲಿ ತಮಿಳು, ಆಂಧ್ರ, ತಮಿಳುನಾಡು ಕೇರಳದ ಹೆಸರನ್ನು ತೆಗೆದುಕೊಂಡಿರುವರೇ ಹೊರತು ಮದ್ರಾಸ ಇಲಾಖೆಯಲ್ಲಿ ಜನಸಂಖ್ಯೆಯಲ್ಲಿ ಮತ್ತು ವಿಸ್ತೀರ್ಣದಲ್ಲಿ ಮಲಬಾರಿಗಿಂತ ಎಂಟರಷ್ಟು ಇರುವ ಕರ್ನಾಟಕ ಪ್ರಾಂತದ ಹೆಸರನ್ನೆ ಎತ್ತಿರುವದಿಲ್ಲ. ಇವರ ಇಷ್ಟದಂತೆ ಆದರೆ, ಮದ್ರಾಸು ಕರ್ನಾಟಕ ಪ್ರಾಂತವು ಈ ನಾಲ್ಕು ಪ್ರಾಂತಗಳಿಗೆ ಹಂಚಿಕೊಡಬೇಕಾಗುವದು.

ಮತ್ತು ಇವರು "ತುಳುನಾಡು" ಎಂದು ದಕ್ಷಿಣ ಕನ್ನಡಕ್ಕೆ ನಾಮಕರಣ ಮಾಡಿ ಅದನ್ನು ಮತ್ತು ನೀಲಗಿರಿಯನ್ನು ಕೇರಳಕ್ಕೆ ಸೆಳೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿರುವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಲ್ಪ ಜನರು ತುಳುಭಾಷೆಯನ್ನು ಮಾತಾಡುವದು ನಿಜ ಆದರೆ ತುಳುಜನರ ಸಂಸ್ಕೃತಿಯು, ಕರ್ನಾಟಕ ಸಂಸ್ಕೃತಿಯನ್ನು ಹೋಲುತ್ತದೆ. ತುಳು ಜನರೆಲ್ಲರು ಕನ್ನಡವನ್ನು ಮಾತಾಡುವರು ಆದರ ಆ ಜಿಲ್ಲೆಯಲ್ಲಿ ಪ್ರತಿ ಒಂದು ಶಾಲೆಯಲ್ಲಿಯೂ ಕನ್ನಡ ಪಾಠವನ್ನು ಕಲಿಸುತ್ತಿರುವರು ತುಳು ಚರಿತ್ರವೆಲ್ಲವು ಕರ್ನಾಟಕ ಚರಿತ್ರೆಗೆ ಸಂಬಂಧಿಸಿರುತ್ತದೆ ಮರೆಯದೆ ಇರತಕ್ಕಂಥ ಕರ್ನಾಟಕದ ವಿಜಯನಗರ ಸಾಮ್ರಾಜ್ಯದಲ್ಲಿ ಮುಮ್ಮಡಿ ಚಕ್ರವರ್ತಿಗಳೆಲ್ಲ ತುಳುವರೇ. ಹೀಗಿದ್ದು "ಪ್ರೊಬೊನೋ ಪಬ್ಲಿಕೊ"ಯವರು "ತುಳುನಾಡನ್ನು ಕೇರಳಕ್ಕೆ ಸೇರಿಸಬೇಕೆಂದು ಕೇಳಿಕೊಂಡಿರುವದು ಶುದ್ಧ ಅನ್ಯಾಯವೇ ಸರಿ.

ಈ ವಿಷಯವಾಗಿ ದಕ್ಷಿಣ ಕನ್ನಡ ಜಿಲ್ಲೆಯವರು ಮುಂದೆ ಕೂಡುವ ಕೇರಳ ಪ್ರಾಂತದ ರಾಜಕೀಯ ಪರಿಷತ್ತಿನಲ್ಲಿ ಜರುಗುವ ಚರ್ಚೆಗಳನ್ನೆಲ್ಲಾ ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗಿರುವ ಮತ್ತು, "ತುಳುನಾಡನ್ನು" ಮಲಬಾರಿಗೆ ಸೇರಿಸದಂತೆ ನೋಡಿಕೊಳ್ಳಬೇಕಾಗಿ ವಿನಂತಿ

ಜಮೀಯತ್ ಉಲ್ ಉಲೇಮಾ ಪರಿಷತ್ತಿನ ಗೊತ್ತುವಳಿಗಳು.

ಕಾಂಗ್ರೆಸ್ [illegible] ಕರಾಚಿ [illegible] ಜಮೀಯತ್ ಉಲ್ ಉಲೇಮಾ ಪರಿಷತ್ತಿನಲ್ಲಿ [illegible] ಸ್ವೀಕೃತವಾದವು. [illegible] ಇವರ ಬಗ್ಗೆ ದುಃಖಪ್ರದರ್ಶನ, [illegible] ಬಗ್ಗೆ ನಿಷೇಧ. [illegible] ಗಾಂಧಿ— [illegible] ಒಪ್ಪಂದವನ್ನು [illegible] ಕಾಂಗ್ರೆಸದವರೊಡನೆ [illegible] ಶಾಂತ ರೀತಿಯಿಂದ [illegible] ಭಗತಸಿಂಗ ಮೊದಲಾದವರನ್ನು [illegible] ಬಗ್ಗೆ ಅಸಂತೋಷ ವ್ಯಕ್ತಪಡಿಸಿದ್ದು, [illegible] ನಿಷೇಧಿಸಿದ್ದು. [illegible] ಪಂಜಾಬ ದಂಡಿನ ಕಾಯಿದೆಯ ಕೈದಿಗಳು ಮೀರತ ಕೈದಿಗಳು ಬಂಗಾಲ ಡೆಟಿನ್ಯೂ ಕೈದಿಗಳು ಮೊದಲಾದ ಎಲ್ಲ ರಾಜಕೀಯ ಸೆರೆಯಾಳುಗಳ ಬಿಡುಗಡೆ [illegible] ಪ್ರತಿಕಾರ ಧೋರಣೆ [illegible] ಕಾಂಗ್ರೆಸ್ [illegible] ಅಧಿಕಾರ [illegible].

ಚಟ್ಟೋಪಾಧ್ಯಾಯರು ಗುಂಡಿಗೆ ಎದೆಗೊಟ್ಟರು!

[illegible] ಎಂಬುವವರೊಬ್ಬರು [illegible] ತಾಲೂಕಿನ [illegible] ಹಳ್ಳಿಯ [illegible] ಹೊಲಗಳನ್ನು [illegible] ಅಲ್ಲಿಯ [illegible] ಇದನ್ನು ಕಂಡು [illegible] ಜಿಲ್ಲೆಯೊಳಗಿನ [illegible] ಜನ ಕೂಲಿಕಾರರನ್ನು ಕರೆದುಕೊಂಡು ಬಂದರು. [illegible] ಶ್ರೀ [illegible] ಅವರ [illegible] ಹೊಲದಲ್ಲಿ [illegible] ಪೋಲೀಸರ [illegible] ಈ ಸುದ್ದಿಯು ಊರ ಜನರಿಗೆ ತಿಳಿಯಿತು. [illegible] ಕೆಲವು ಜನ [illegible] ಜನರನ್ನು [illegible] ಪೋಲೀಸರು [illegible] ಪ್ರೊಫೆಸರ ಚಟ್ಟೋಪಾಧ್ಯಾಯ [illegible] 'ಇಲ್ಲಿಂದ ಹೊರಡಿರಿ, ಇಲ್ಲದಿದ್ದರೆ [illegible] ಗುಂಡು ಹೊಡೆಯುವೆನು' [illegible] ಎದೆಯನ್ನು [illegible] ಈ ಪೋಲೀಸನ [illegible] ಇದನ್ನು ಕಂಡು [illegible] ಅಲ್ಲಿಗೆ ಬಂದು ಆ ಪೋಲೀಸನನ್ನು ಅ[illegible]ದ ಕರೆದುಕೊಂಡು ಹೋದನು.

ಸೇನಾಪತಿ [illegible]

[illegible] ದಿನಗಳ ಅನ್ನತ್ಯಾಗ.

[illegible] ಸೇನಾಪತಿ [illegible] ಸೆಂಟ್ರಲ್ ಜೆಲಿನ [illegible] ಹಿಂದೆ [illegible] ಈ ವರೆಗೆ [illegible] ನಡೆದಿದ್ದಾರೆ.

ವಿಜಾಪೂರ ಅತ್ಯಾಚಾರ

ಇಬ್ಬರಿಗೆ ಕೈದು

ವಿಜಾಪೂರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಜೇಮ್ಸ್ [illegible] ಮೇಲೆ ಗುಂಡು ಹಾರಿಸಿ [illegible] ಕೊಲೆ ಮಾಡಿದ ಸಂಬಂಧವಾಗಿ ಅಲ್ಲಿಯ ಕಾಲೇಜಿನಲ್ಲಿಯ ವಿದ್ಯಾರ್ಥಿಗಳಾದ [illegible] ಹಾಗು ವಿವೇಕಾನಂದ [illegible] ಇವರಿಬ್ಬರು ಕೈದು ಮಾಡಲ್ಪಟ್ಟಿದ್ದಾರೆ.

ಗದುಗಿನಲ್ಲಿ

ಮುಖಂಡರ ಭಾಷಣ

[illegible]

[illegible] ಕಾಂಗ್ರೆಸ್ಸಿನ [illegible] ಪ್ರತಿನಿಧಿಗಳಾಗಿ [illegible] ಡಾ. [illegible] ಇಲ್ಲಿಗೆ [illegible] ಶ್ರೀ [illegible] ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರೆದು [illegible] ಡಾ. [illegible] ಕಾಂಗ್ರೆಸದ ಗೊತ್ತುವಳಿಗಳ ಮೇಲೆ ಭಾಷಣ ಮಾಡಿ, ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹನ ಕೊಡಲು ಸಭಿಕರಿಗೆ ಕೇಳಿಕೊಂಡರು.

[illegible] ಶ್ರೀಮತಿ [illegible] ಬಾಯಿ [illegible] ದಿವಸ ಇಲ್ಲಿಗೆ ಬಂದಿದ್ದರು ಅವರು [illegible] ಸಾರ್ವಜನಿಕವಾಗಿ ಭಾಷಣ ಮಾಡಿದರು.

ಕರ್ನಾಟಕ ಲಿಂಗಾಯತ

ಶಿಕ್ಷಣ ಸಂಸ್ಥೆಗೆ ಧನ ಸಹಾಯ

[illegible] ತಾಲೂಕಿನ [illegible] ಪ್ರಸಿದ್ಧ [illegible] ಶ್ರೀ [illegible] ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಗೆ ಈಗ [illegible] (ಕಾಲೇಜ) [illegible] ೨೦೦೦ ರೂ. [illegible] ಕೊಡುವದಾಗಿ [illegible] ಸಂಸ್ಥೆಯ ಕಾರ್ಯಕರ್ತರಿಗೆ ತಿಳಿಸುತ್ತಾರೆ.

ಶಿವಾನಂದ ಸಂಗೀತ ನಾಟಕ ಮಂಡಳಿಯವರು ಈ ಊರಲ್ಲಿಯ ಶಿವಾನಂದ ನಾಟಕಗೃಹದಲ್ಲಿ [illegible] ದಿನ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ "ಬೆಳವಡಿ ಮಲ್ಲಮ್ಮ" ಎಂಬ ನಾಟಕವನ್ನು ಪ್ರಯೋಗಿಸ[illegible]. ಕರ್ನಾಟಕಾಭಿಮಾನಿಗಳು ಪ್ರೋತ್ಸಾಹಿಸಬೇಕು.

ಈ ಪತ್ರಿಕೆಯು [illegible] ಇವರಿಂದ ಬಾಗಲಕೋಟಿ [illegible] ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು [illegible] ಪ್ರಕಟಿಸಲ್ಪಟ್ಟಿತು.

ರೆ ನಂ. ಬಿ. ೨೭೮೮

ನಿತ್ಯ ಪತ್ರ.

ಬೆಲೆ ೦-೦-೩.

...परवशं दुःखं । यदात्मवशं सुखम् ॥ -मनु.

ನಿತ್ಯಪತ್ರಿಕೆಯು
ವರ್ಗಣೀ ದರಗಳು
ಪಟ್ಟಣದವರಿಗೆ
೧೨ ತಿಂಗಳಿಗೆ ೧೫-೦-೦
೬ ,, ೭-೮-೦
೩ ,, ೩-೧೨-೦
, ೧ ೧೪-೦
ಸ್ಥಳಿಕರಿಗೆ
೧೨ ತಿಂಗಳಿಗೆ ೧೨-೦-೦
೬ ,, ೬-೦-೦
೩ ,, ೩-೮-೦
೧ ,, ೧-೦-೦

ಕನ್ನಡಿಗ
KANNADIGA
BAGALKOT.
BI-WEEKLY
ಅರೆವಾರ ಪತ್ರಿಕೆ.

ನಿತ್ಯಪತ್ರಿಕೆಯು
ಸರಕಾರಿ ಹಾಗು ಹಂಗಾಮಿ
ಜಾಹೀರಾತಿನ ದರಗಳು
೧ನೇಸಲ ೧ ಇಂಚಿಗೆ ೧-೮-೦
೨ ,, ,, ೧-೦-೦
ವ ಂದಿ ಪ್ರತಿಯೊಂದು ಸಲ
೦-೧೨-೦
ಹೆಚ್ಚಿಂಗದಸಾಲಿಗೆ ಅಕ್ಷರಗಳ
ಪ್ರಮಾಣದಿಂದ ದರಬೀಳುವದು

ಸಂಪಾದಕರು:- ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಬುಧವಾರ ಮಿತಿ ಚೈತ್ರ ಬಹುಳ ೧೩ ಶಕೆ ೧೮೫೩ ತಾ॥ ೧೫—೪—೩೧ [ಸಂಚಿಕೆ ೬೫

ಕ್ಯಾಪ್ಟನ್ ಹೀನಿಯುವರನ್ನು ಗುಂಡಿನಿಂದ ಹೊಡೆದನು

ಅಲ್ಲೀ ಮಹಮ್ಮದ ಎಂಬ ಓರ್ವ ಮುಸಲ್ಮಾನನು, ಬರ್ಮಾ ಪ್ರಾಂತದ ಟಾಂಗಾ ಬಿನ್ ಪಟ್ಟಣದ ಕ್ಯಾಪ್ಟನ್ ಜಿ. ಎಫ್ ಹೀನಿಯವರನ್ನು ಕೊಲೆ ಮಾಡುವ ಉದ್ದಿಶ್ಯವಾಗಿ ಅವರ ಮೇಲೆ ಮೂರು ಸಾರೆ ಗುಂಡು ಹಾರಿಸಿದನು. ಅದರಲ್ಲಿ ಒಂದು ಗುಂಡು ಕ್ಯಾಪ್ಟನ್ನರಿಗೆ ತಗುಲಿತು. ಅವರಿಗೆ ಅಷ್ಟೇನೂ ಭಯಂಕರ ಗಾಯವಾಗಿಲ್ಲ. ಅಪರಾಧಿಯು ಪಾರಾಗಿ ಹೋಗಿದ್ದಾನೆ.

ತಂಗೇಲದಲ್ಲಿ
ಝಡತಿಗಳ ಹಾವಳಿ.

ತಂಗೇಲದ ಪೋಲೀಸ ಅಧಿಕಾರಿಗಳು ತಾ. ೧೦ ನೆಯ ದಿವಸ ಅಲ್ಲಿಯ ಎಷ್ಟೋ ಮನೆಗಳನ್ನು ಝಡತಿ ಮಾಡಿ ಶಸ್ತ್ರಾಸ್ತ್ರಗಳ ಸಂಬಂಧವಾಗಿ ಶೋಧನಡಿಸಿದರು ಝಡತಿ ಮಾಡಲ್ಪಟ್ಟ ಮನೆಗಳಲ್ಲಿ ಬಹುತರವಾಗಿ ವಕೀಲರ ಮನೆಗಳೇ ಇದ್ದವುಗಳಿವೆ. ಯಾರೂ ಸೆರೆಹಿಡಿಯಲ್ಪಟ್ಟಿಲ್ಲ

ಕರಾಚಿಯಲ್ಲಿ
ಪರದೇಶಿ ಬಟ್ಟೆಯ ಪಿಕೆಟಿಂಗ

ಕರಾಚಿಯಲ್ಲಿಯ ಸ್ವಯಂಸೇವಿಕೆಯರು ತಾ ೧೦ ರಿಂದ ಅಲ್ಲಿಯ ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ನಾರಾಯಣದಾಸ ಬೇಚರ ಶ್ರೀ ಜೇಷ್ಠಾರಾಮ ಹಾಗು ಲಖಮೀಚಂದ ಇವರ ನೇತೃತ್ವದಲ್ಲಿ ಪಿಕೆಟಿಂಗ ಪ್ರಾರಂಭಿಸಿದ್ದಾರೆ. ಗುಜರಾಥಿ ಸ್ತ್ರೀಯರಾದರೂ ಈ ಕಾರ್ಯದಲ್ಲಿ ವಿಶೇಷ ಉತ್ಸಾಹದಿಂದ ಭಾಗತೆಗೆದುಕೊಳ್ಳುತ್ತಿರುವರು. ಕೆಲವು ಸ್ವಯಂಸೇವಿಕೆಯರು ವ್ಯಾಪಾರಿಗಳ ಮನವೊಲಿಸುವದಕ್ಕಾಗಿ ಉಪವಾಸ ವ್ರತವನ್ನು ಕೈಕೊಳ್ಳುವವರಿದ್ದಾರಾಗಿ ತಿಳಿಯುತ್ತದೆ.

ಮಾಫಿ ಸಾಕ್ಷೀದಾರರ ಮೇಲೆ ಖಟ್ಲೆ

ಸರದಾರ ಭಗತಸಿಂಗ ಮೊದಲಾದವರಿಗೆ ಸಂಬಂಧಿಸಿದ ಲಾಹೋರ ಒಳಸಂಚಿನ ಖಟ್ಲೆಯಲ್ಲಿಯ ಮಾಫೀ ಸಾಕ್ಷೀದಾರರಾದ ಶ್ರೀ ರಾಮಶರಣದಾಸ ಹಾಗು ಬ್ರಹ್ಮದತ್ತ ಇವರನ್ನು ಹೈ ಕೋರ್ಟಿನ ೧೫ನೆಯ ಕಲಮಿನ್ವಯ ವಿಚಾರಣೆಗೆ ಗುರಿ ಮಾಡಲು ಜಸ್ಟಿಸ್ ದಲೀಪಸಿಂಗ ಹಾಗು ಜಸ್ಟಿಸ್ ಹ್ಯಾರಿಸನ್ನರು ಅಪ್ಪಣೆ ಕೊಟ್ಟಿದ್ದಾರೆ ಶ್ರೀ ರಾಮಶರಣ ಹಾಗು ಬ್ರಹ್ಮದತ್ತರು ತಾವು ಪೂರ್ವದಲ್ಲಿ ತಿನ್ನನ್ನು ಸ್ಪೆಶಲ್ ಟ್ರಬ್ಯೂನಲ್ಲದವರ ಮುಂದೆ ಅಲ್ಲಗಳೆದದ್ದೇ ಇದಕ್ಕೆ ಕಾರಣವಾಗಿದೆ.

ಉಗಿಬಂಡಿಯಲ್ಲಿ
ಬಯಂಕರ ಕೊಲೆ

ಕಟಿಂಗಾಡಿಯ ಶ್ರೀ ಭಾಗಾಜ್ಯೆಲ ಚಂದ್ರಕರ್ ರಾಯ್, ವಿಮಲಚಂದ್ರ ಶರ್ಕರ ರಾಯ್ ಹಾಗು ಲಾಲಚಂದ್ರ ಶರ್ಕರ ರಾಯ್ ಈ ಮೂವರು ವ್ಯಾಪಾರಸ್ಥರು ತಾ॥ ೧೦ ನೆಯ. ದಿವಸ ಭೈರಾಜ ಬಜಾರ ಹಾಗು ವೈಮನಸಿಂಗದ ನಡುವೆ ಉಗಿಬಂಡಿಯಲ್ಲಿ ಪ್ರವಾಸ ಮಾಡುತ್ತಿರುವಾಗ, ಮೂವರು ತರುಣರು ಅವರ ಮೇಲೆ ಹಲ್ಲೆ ಮಾಡಿದರು. ಆ ವ್ಯಾಪಾರಿಗಳಲ್ಲಿ ೧೧೦೦೦ ರೂಪಾಯಿ ರೋಖ ಹಣವಿತ್ತು. ತರುಣರು ರೂಪಾಯಿಗಳನ್ನು ತಮಗೆ ಒಪ್ಪಿಸಲು ಕೇಳಿಕೊಂಡರು ವ್ಯಾಪಾರಸ್ಥರು ನಿರಾಕರಿಸಿದರು. ತರುಣರು ಅವರ ಮೇಲೆ ಪಿಸ್ತೂಲು ಹಾರಿಸಿದರು ವಿಮಲಚಂದ್ರರಾಯರ. ಸ್ಥಳದಲ್ಲಿಯೇ ಸತ್ತು ಬಿದ್ದರು. ಲಾಲಚಂದ್ರ ಹಾಗು ಭಾಗಾಜ್ಯೆಲರು ಭಯಂಕರ ಗಾಯ ಹೊಂದಿದರು. ಅವರನ್ನು ಆಸ್ಪತ್ರೆಗೆ ಒಯ್ಯಲಾಯಿತು ಲಾಲಚಂದ್ರರು ಆಸ್ಪತ್ರೆಯಲ್ಲಿ ಮರಣ ಹೊಂದಿದರು. ತರುಣರು ಹಣವನ್ನು ತೆಗೆದುಕೊಂಡು ಗಾಡಿಯಿಂದ ಜಿಗಿದು ಪಾರಾಗಿ ಹೋದರು ಅವರು ಹೋದ ಬಳಿಕ ಪ್ರವಾಸಿಕರು ಗಾಡಿಯನ್ನು ನಿಲ್ಲಿಸಲು ಸರಪಳಿ ಜಗ್ಗಿದರು. ಗಾಡಿಯು ನಿಲ್ಲಲಿಲ್ಲ ಎಷ್ಟೋ ಜನರು ಅಂಜಿಕೆಯಿಂದ ಗಾಡಿಯಿಂದ ಕೆಳಗೆ ಹಾರಿಕೊಂಡರು. ಉಗಿಬಂಡಿಯು ವೈಮನಸಿಂಗಕ್ಕೆ ಮುಟ್ಟುವದರೊಳಗಾಗಿ ೫ ಜನ ಪ್ರವಾಸಿಕರು, ಇಬ್ಬರು ಗಾಯ ಹೊಂದಿದ ವ್ಯಾಪಾರಸ್ಥರು ಹಾಗು ವಿಮಲಚಂದ್ರ ರವರ ಶವ ಇಷ್ಟೇ ಜನರು ಗಾಡಿಯಲ್ಲಿ ಉಳಿದಿದ್ದರು.

ಸಾಬರಮತಿ ಆಶ್ರಮಕ್ಕೆ ಮಹಾತ್ಮರ ಭೆಟ್ಟಿ

ಮಹಾತ್ಮಾಗಾಂಧಿಯವರು ತಾ॥ ೧೩ ನೆಯ ದಿವಸ ಮುಂಜಾನೆ ತಮ್ಮ ಸಾಬರಮತಿ ಸತ್ಯಾಗ್ರಹ ಆಶ್ರಮಕ್ಕೆ ಭೆಟ್ಟಿ ಕೊಟ್ಟು, ಆಶ್ರಮದ ಸಂಬಂಧವಾಗಿ ಆಶ್ರಮ ವಾಸಿಗಳೊಂದಿಗೆ ಅರ್ಧ ಗಂಟೆಯ ವರೆಗೆ ಮಾತುಕತೆಯಾಡಿದರು ಆಫ್ರಿಕೆಯಲ್ಲಿ ಸತ್ಯಾಗ್ರಹ ಹೂಡಿದಾಗಿನಿಂದ ಈ ವರೆಗೆ ತಮ್ಮ ಸಹಕಾರಿಗಳಾಗಿ ಕಾರ್ಯ ಮಾಡಿದ ಇಮಾಮಸಾಹೇಬರು ಕೆಲವು ದಿವಸಗಳಿಂದ ಆಶ್ರಮದಲ್ಲಿ ಅಸ್ವಸ್ಥರಾಗಿ ಬಿದ್ದುಕೊಂಡಿದ್ದರಿಂದ ಅವರನ್ನು ಭೆಟ್ಟಿಯಾಗುವ ಉದ್ದೇಶದಿಂದಾಗಿಯೇ ಮಹಾತ್ಮರು ಆಶ್ರಮಕ್ಕೆ ಭೆಟ್ಟಿ ಕೊಟ್ಟರೆಂದಾಗಿ ತಿಳಿಯುತ್ತದೆ

ಕ್ರಾಂತಿಕಾರರಿಗೆ
ಸೆನ್‌ಗುಪ್ತರ ಸಂದೇಶ

"ಫ್ರೀಪ್ರೆಸ್" ಪತ್ರಿಕೆಯ ಪ್ರತಿನಿಧಿಯು ತಾ॥ ೧೦ ನೆಯ ದಿವಸ ಶ್ರೀ ಜೆ. ಎಂ. ಸೇನಗುಪ್ತರನ್ನು ಕಂಡುಕೊಂಡು, ಮಿದನಾಪೂರ ಅತ್ಯಾಚಾರದ ಸಂಬಂಧವಾಗಿ ಅವರ ಅಭಿಪ್ರಾಯ ವಿಚಾರಿಸಿದಾಗ ಅವರು ಹೇಳಿದ್ದೇನಂದರೆ—

ನಾನು ಕಾಂಗ್ರೆಸದ ಅನುಯಾಯಿಯಾಗಿರುವದರಿಂದ ಅತ್ಯಾಚಾರವನ್ನು ನಾನು ಸಂಪೂರ್ಣವಾಗಿ ನಿಷೇಧಿಸುತ್ತೇನೆ. ಸದ್ಯದ ಪರಿಸ್ಥಿತಿಯಲ್ಲಿ ಈ ಅತ್ಯಾಚಾರವು ಘಟಿಸಿದ್ದು ದೇಶದ ಹಿತಕ್ಕೆ ಘಾತುಕವಾಗಿದೆಯೆಂದು ನನ್ನ ಮತ. ದೇಶದಲ್ಲಿ ಸಂಭವಿಸಿದ ಸಂಗತಿಗಳಿಂದ ಕೆಲವರ ತಲೆ ತಿರುಗಿದ್ದೇನೋ ನಿಜ ಆದರೆ ಅವರು ಸ್ವಲ್ಪ ತಾಳಬೇಕು. ತಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡುವ ಕಾರ್ಯದಲ್ಲಿ ಸ್ವಲ್ಪಾದರೂ ಸಹಾಯವಾಗಬೇಕೆಂದಿದ್ದರೆ ಹಾಗು ಮಹಾತ್ಮರ ಬಲವನ್ನು ಹೆಚ್ಚಿಸಬೇಕೆಂದಿದ್ದರೆ ಅವರು ಅತ್ಯಾಚಾರದ ಕೃತಿ ಹಾಗು ವಿಚಾರ ಇವುಗಳಿಂದ ದೂರವಿರಬೇಕು ಇಡೀ ಜಗತ್ತೇ ಈಗ ನಮ್ಮ ಕಡೆಗೆ ದೃಷ್ಟಿಯನ್ನು ಹರಿಸುತ್ತದೆ ಇದೀಗ ನಮ್ಮ ಪರೀಕ್ಷೆಯ ಕಾಲ. ಮಹಾತ್ಮರ ಮುಂದಾಳ್ತನದಲ್ಲಿ ನಡೆದು ಹೋಗುವ ಹಾಗು ತಮ್ಮ ವಚನದಂತೆ ನಡೆದುಕೊಳ್ಳುವ ಈ ಎರಡು ಪರೀಕ್ಷೆಗಳಲ್ಲಿ ನಾವು ಈಗ ಉತ್ತೀರ್ಣರಾಗಬೇಕಾಗಿದೆ.

ವಿಠ್ಠಲಭಾಯಿಯವರ ಪ್ರಕೃತಿ

ತಮ್ಮ ಪ್ರಕೃತಿಯನ್ನು ಸುಧಾರಿಸಿಕೊಳ್ಳುವದಕ್ಕಾಗಿ ವ್ಹಿಯೆನ್ನಕ್ಕೆ ಪ್ರಯಾಣ ಬೆಳೆಸಿದ ಶ್ರೀ ವಿಠ್ಠಲಭಾಯಿ ಪಟೇಲರು ಮಾರ್ಚ ತಿಂಗಳ ೧೫ನೆ ತಾ॥ ದಿವಸ ಅಲ್ಲಿಗೆ ಮುಟ್ಟಿ ಅಲ್ಲಿಯ "ನರ್ಸಿಂಗಹೋಮ" ದಲ್ಲಿ ಸೇರಿದರು. ತಜ್ಞರು ಅವರ ಪ್ರಕೃತಿಯನ್ನು ಪರೀಕ್ಷಿಸಿದರು. ಅವರು ೩-೪ ವಾರದ ವರೆಗೆ ಅಲ್ಲಿ ಔಷಧೋಪಚಾರ ಪಡೆದ ನಂತರದಲ್ಲಿ ಒಂದು ಶೀತಲ ಪ್ರದೇಶಕ್ಕೆ ಪ್ರಯಾಣ ಮಾಡುವರು.

ಮಹಾತ್ಮರ ಪ್ರಕೃತಿ

ಅಹಮ್ಮದಾಬಾದದ ಡಾ॥ ಕಾನೂಗಾ ರವರು ತಾ॥ ೧೨ನೆಯ ದಿವಸ ಮಹಾತ್ಮಾಗಾಂಧಿಯವರ ಪ್ರಕೃತಿಯನ್ನು ಪರೀಕ್ಷಿಸಿದರು. ಅವರಿಗೆ ಕಾಯಿಲೆ ಏನಿಲ್ಲ ಅವರು ಈಗ ಅಶಕ್ತರಾಗಿದ್ದು, ಅವರು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳುವದು ಅವಶ್ಯವಾಗಿದೆ.

ಕಲಕತ್ತೆಯಲ್ಲಿ
ಮೂವರು ತರುಣರನ್ನು ಸೆರೆಹಿಡಿದರು

ಮಿದನಾಪೂರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಜೇಮ್ಸ ಪೆಡ್ಡಿಯವರನ್ನು ಗುಂಡು ಹೊಡೆದು ಕೊಲೆ ಮಾಡಿದ ಆರೋಪದಿಂದ ಕಲಕತ್ತೆಯಲ್ಲಿ ಮೂವರು ತರುಣರು ಸೆರೆಹಿಡಿಯಲ್ಪಟ್ಟಿದ್ದಾರೆ. ಅವರಲ್ಲಿ ಇಬ್ಬರು ಸರಕಾರಿ ಅಧಿಕಾರಿಗಳ ಮಕ್ಕಳಿರುತ್ತಾರೆ.

ಗುಂಡು ಹಾರಿಸಿದ ಕೂಡಲೆ ಇಬ್ಬರು ಬಂಗಾಲಿ ತರುಣರು ಸಾಯಕಲ್ ಹತ್ತಿ ಪಾರಾಗಿ ಹೋಗಿದ್ದರಷ್ಟೇ. ಆ ಸಾಯಕಲ್ಲು ಸಲಬಾನಿ ಸ್ಟೇಶನದ ಬಳಿಯಲ್ಲಿ ಸಿಕ್ಕಿರುತ್ತದೆ. ಅದೇ ದಿವಸ ರಾತ್ರಿ ಇಬ್ಬರು ಸಲಬಾನಿಯಿಂದ ಹೌರಾಕ್ಕೆ ತಿಕೀಟು ತೆಗೆದುಕೊಂಡು ಹೋದರಾಗಿ ತಿಳಿದು ಬರುತ್ತದೆ

ಕರಾಚಿ ಕಾಂಗ್ರೆಸದ
ಆಯವ್ಯಯ.

ಆಯವ್ಯಯ ದೃಷ್ಟಿಯಿಂದ ಕರಾಚಿಯ ಕಾಂಗ್ರೆಸು ಬಹು ವ್ಯವಸ್ಥಿತವಾಗಿ ನಡೆಯಿತೆನ್ನಲು ಅಡ್ಡಿಯಿಲ್ಲ. ಈ ಕಾಂಗ್ರೆಸ್ಸಿನ ಎಲ್ಲ ಖರ್ಚು ಕಳೆದು ಸುಮಾರು ೫೦ ರಿಂದ ೬೦ ಸಾವಿರದವರೆಗೆ ಹಣ ಉಳಿಯುವದೆಂದು ಅಂದಾಜಿದೆ. ಸ್ವಾಗತ ಮಂಡಲದ ನಿಯಮದಂತೆ ಆಲ್ ಇಂಡಿಯಾ ಕಾಂಗ್ರೆಸ ಕಮೀಟಿಗೆ ಕೊಡಬೇಕಾದ ಸ್ವಾಗತ ಮಂಡಲದ ಸಭಾಸದರ ಫೀಯಲ್ಲಿ ಒಬ್ಬ ಸಭಾಸದನಿಗೆ ೧೦ ರೂ. ಪ್ರತಿನಿಧಿಗಳ ಫೀಯಲ್ಲಿ ಒಬ್ಬ ಸಭಾಸದನಿಗೆ ೫ ರೂಪಾಯಂತೆ ಆಗುವ ೧೫೦೦೦ ರೂಪಾಯಿಗಳನ್ನು ಈ ಮೊಬಲಗೆ ಕೊಡುವವರಲ್ಲಿ ಬಾಕಿದೆ. ಇನ್ನು ಉಳಿದ ಹಣದಲ್ಲಿ ಅರ್ಧ ಹಣವು ಸಿಂಧ ಪ್ರಾಂತಿಕ ಕಾಂಗ್ರೆಸಕಮೀಟಿಯ ಪಾಲಿಗೆಬರುತ್ತಿದ್ದು, ಅದರಲ್ಲಿ ಕೆಲವು ಭಾಗವನ್ನು ಖಾದೀ ಪ್ರಸಾರ ಕಾರ್ಯಕ್ಕೆ ಕೊಡಬೇಕೆಂದು ಮಹಾತ್ಮರು ಇಚ್ಛೆಯನ್ನು ತೋರಿಸಿದ್ದಾರೆ. ಆದರೆ ಹಾಗೆ ಮಾಡದೆ ಕರಾಚಿಯಲ್ಲಿ ಒಂದು ಕಾಂಗ್ರೆಸ್ ಕಚೇರಿಯನ್ನು ಕಟ್ಟಿಸಬೇಕೆಂದು ಕಾಂಗ್ರೆಸ ಮುಖಂಡರ ವಿಚಾರವಿದೆ.

ಸರ್ ಸಪ್ರೂ ರವರು
ವ್ಹಾಯ್ಸರಾಯರಿಗೆ ಭೆಟ್ಟಿಯಾದರು

"ಸರ್ ತೇಜಬಹಾದೂರ ಸಪ್ರೂರವರು ೧೧ನೆಯ ದಿವಸ ವ್ಹಾಯಸರಾಯರನ್ನು ಕಂಡು ಕೊಂಡು, ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ಅವರೊಡನೆ ಚರ್ಚೆ ಮಾಡಿದರಾಗಿ ತಿಳಿದು ಬರುತ್ತದೆ.

ರಾಷ್ಟ್ರಧ್ವಜದಿನವು

೨೬ ನೆಯ ಏಪ್ರಿಲ್ ೧೯೩೧ ದಿನ ಆಚರಿಸತಕ್ಕದ್ದು

(ಏಪ್ರೀಲ ತಿಂಗಳ ಕೊನೆಯ ರವಿವಾರ)

ಕರಾಚಿಯಲ್ಲಿ ೧-೪-೧೯೩೧ ನೆಯ ಇಸ್ವಿ ದಿವಸ ಕೂಡಿದ 'ಹಿಂದುಸ್ಥಾನೀ ಸೇವಾದಲ'ದ ಅಖಿಲ ಭಾರತೀಯ ಮಂಡಳದವರು ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ—

'ಸೇವಾದಲದ ಪರಿಷತ್ತಿನ ಗೊತ್ತುವಳಿಗನುಸರಿಸಿ, ೧೯೩೧ ಇಸ್ವಿ ಏಪ್ರಿಲ್ ೨೬ ನೆಯ ತಾರೀಖಿನ ದಿನವನ್ನು, ಅಖಿಲ ಭರತ ಖಂಡದಲ್ಲಿ 'ರಾಷ್ಟ್ರಧ್ವಜದಿನ' ವೆಂದು ಆಚರಿಸಲ್ಪಡಬೇಕೆಂದೂ ಮತ್ತು ಕೆಳಗೆ ವಿವರಿಸಿದ ಕಾರ್ಯಕ್ರಮವು ನಡಯಿಸಲ್ಪಡಬೇಕೆಂಗೂ ಈ ಮಂಡಳವು ನಿರ್ಣಯಿಸುತ್ತದೆ.

ಕಾರ್ಯಕ್ರಮದ ವಿವರ

(ಅ) ಬೆಳಗಿನ ೬ ಗಂಟೆಗೆ:—ಆಯಾ ಸ್ಥಳದಲ್ಲಿಯ ಸ್ವಯಂಸೇವಕ ಮತ್ತು ಸಹಾಯಕರ ಕೂಟ ಕವಾಯತ ದಂಡಯಾತ್ರೆ

(ಬ) ಬೆಳಗಿನ ೮ ಗಂಟೆಗೆ— ರಾಷ್ಟ್ರಧ್ವಜವಂದನೆ (ಈ ಸಮಾರಂಭವು ಸೇವಾದಲದ ಪದ್ಧತಿಯಂತೆ ನಡೆಯತಕ್ಕದ್ದು)

(ಕ) ಸಾಯಂಕಾಲ ೫ಗಂಟೆಗೆ:—ರಾಷ್ಟ್ರಧ್ವಜದ ಮೆರವಣಿಗೆ. ಮೆರವಣಿಗೆಯ ಕೊನೆಗೆ ಸಭೆ ಸೇರಿಸಬೇಕು. ಈ ಸಭೆಯಲ್ಲಿ ರಾಷ್ಟ್ರಧ್ವಜದ ಮಹತ್ವವನ್ನೂ ಅವರ ವಿಷಯಕವಾದ ಜವಾಬ್ದಾರಿಯನ್ನೂ ಮತ್ತು ರಾಷ್ಟ್ರೀಯ ಮಹಾಸಭೆಯ ಕಾರ್ಯವನ್ನು ಶಿಸ್ತಿನಿಂದ ಸಾಗಿಸಲು ಬೇಕಾಗುವ ಸ್ವಯಂಸೇವಕರನ್ನು ಒದಗಿಸಿಕೊಡುವ ಸ್ವಯಂಸೇವಕಸಂಸ್ಥೆಗಳನ್ನು ಸ್ಥಾಪಿಸುವ ಅವಶ್ಯಕತೆ ನೆರೆದ ಜನರಿಗೆ ತಿಳಿಸಿ ಹೇಳಬೇಕು.

ಸೂಚನೆಗಳು.

೧. ಆ ದಿವಸ ಪ್ರಾತಃಕಾಲದಿಂದ ಸಾಯಂಕಾಲದ ವರೆಗೆ ಪ್ರಾಂತಿಕ ಸ್ವಯಂಸೇವಕ ಮಂಡಳಕ್ಕಾಗಿ ಅಧಿಕೃತ ಜನರಿಂದ ನಿಧಿಯು ಕೂಡಿಸಲ್ಪಡಬೇಕು.

೨. ಮೂರು ಬಣ್ಣದ ರಾಷ್ಟ್ರಧ್ವಜ, ಬ್ಯಾಡ್ಜಸ್, ಲಾಕೆಟ್ಸ, ಮತ್ತು ಧ್ವಜವಿಷಯಕವಾದ ವಾಙ್ಮಯವನ್ನು ಮಾರಬೇಕು.

೩. ರಾಷ್ಟ್ರಧ್ವಜದಿನದ ಸಮಾರಂಭದ ವರದಿಯನ್ನು ಕೂಡಲೇ ಹುಬ್ಬಳ್ಳಿಯಲ್ಲಿಯ ಸೇವಾದಲದ ಮುಖ್ಯ ಕಚೇರಿಗೆ ಕಳಿಸಬೇಕು

ಮೇಲೆ ಕೊಟ್ಟ ಸೇವಾದಲದ ನಿರ್ಣಯದ ಮೇರೆಗೆ ಕರ್ನಾಟಕದಲ್ಲಿ ಯಾವತ್ತೂ ಕಾಂಗ್ರೆಸ ಕಮೀಟಿಯವರೂ ಸೇವಾದಲದ ಸಭಾಸದರೂ, ಚರಖಾ ಸಂಘದವರೂ, ಭಗಿನಿಮಂಡಳ ಮತ್ತು ಯುವಕಸಂಘಗಳ ಸಭಾಸದರೂ ಈ 'ರಾಷ್ಟ್ರಧ್ವಜದಿನ' ವನ್ನು ಯೋಗ್ಯರೀತಿಯಿಂದ ಆಚರಿಸಿ ಆವತ್ತಿನ ಕಾರ್ಯಕ್ರಮವನ್ನು ಯಶಸ್ವಿಯಾಗುವಂತೆ ಮಾಡಬೇಕಾಗಿ ವಿನಂತಿಯಿದೆ.

('ರಾಷ್ಟ್ರಧ್ವಜ' ಎಂಬ ಚಿಕ್ಕ ಪುಸ್ತಕದ ಕನ್ನಡ, ಹಿಂದೀ, ಮರಾಠೀ, ಗುಜರಾಥೀ, ಇಂಗ್ಲೀಷ ಪತ್ರಿಕೆಗಳು ಸೇವಾದಲದ ಹುಬ್ಬಳ್ಳಿ ಕಚೇರಿಯಲ್ಲಿ ಎರಡಾಣೆಗೊಂದರಂತೆ ಮಾರಲಿಕ್ಕೆ ದೊರೆಯುತ್ತವೆ)

ಮುಂಬಯಿ ೭-೪-೧೯೩೧ | ಎನ್. ಎ. ಹರ್ಡಿಕರ ಕಾರ್ಯದರ್ಶಿ ಕರ್ನಾಟಕ ಸೇವಾದಲ

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಕರ್ನಾಟಕದೊಳಗಿನ ಎಲ್ಲ ಸಾರ್ವಜನಿಕ ಸಂಸ್ಥೆಯವರು ಈ ರಾಷ್ಟ್ರಧ್ವಜದಿನದ ಕಾರ್ಯಕ್ರಮವನ್ನು ಸಾಗಿಸಲು ಹಿಂದುಸ್ತಾನೀ ಸೇವಾದಲದ ಕರ್ನಾಟಕ ಶಾಖೆಯೊಡನೆ ಸಂಪೂರ್ಣ ಸಹಕಾರ ಮಾಡುವರೆಂದು ನಾವು ಅಂತಃಕರಣಪೂರ್ವಕ ನಂಬಿದ್ದೇವೆ.

ಕರ್ನಾಟಕ	ಎಚ್.ಎಸ್.ಕೌಜಲಗಿ
ಪ್ರಾಂತಿಕ	ಆರ್ ಎಸ್.ಹುಕ್ಕೇರಿಕರ
ಕಾಂಗ್ರೆಸ ಕಮಿಟಿ	ಎನ್.ಎಸ್.ಹರ್ಡಿಕರ

ಶಿರಸಿ ಸಿದ್ದಾಪುರಗಳ ಸುದ್ದಿ-ಸಂಗತಿಗಳು

ಕೆಡಿಗೇಡಿ ಅಧಿಕಾರಿಗಳು

ತಾ| ೨೯ ೩-೧೯೩೧ ನೇ ದಿನ ಜಪ್ತಿ ಬಹದ್ದರರು ಶ್ರೀ ಚೆನ್ನಳ್ಳಿ ಮುಕುಂದಭಟ್ಟರ ಮನೆಗೆ ಹೋಗಿ ೮೫ ರೂಪಾಯಿಗಳ ಬಗ್ಗೆ ಕಂಚು ತಾಮ್ರ ಮತ್ತು ಹಿತ್ತಾಳೆಯ ಪಾತ್ರೆಗಳನ್ನೂ, ನಾಲು ರೇಶಿಮೆಗಳ ಕಂಠದ ವಸ್ತ್ರಗಳನ್ನು ಜಪ್ತಮಾಡಿಕೊಂಡ ಬಂದರು. ಈ ಮನೆಯಲ್ಲಿ ಅಧಿಕಾರಿಗಳು ಮನಬಂದಲ್ಲಿ ಅಗದು ಬಹಳ ಹಾನಿಯನ್ನುಂಟುಮಾಡಿದ್ದಾರೆ ಛಪ್ಪರವನ್ನು, ಬೇಲಿಯನ್ನು ಕೊಡಹಿಬಿಟ್ಟಿದ್ದಾರೆ [illegible] ಪಟೇಲರು, [illegible] ಮತ್ತು [illegible] ತಮ್ಮಡಿಕು ಕೂಡಿ ಈ ಮನೆಯವರಿಗೆ ೧೦೦ ಬಾಳೇಹಣ್ಣುಗಳನ್ನು ನುಂಗಿಬಿಟ್ಟರು ಇದೇ ಭಕ್ತಿಭಾವ ಕಾಯಿದೇಶೀರ ಜಪ್ತಿಯ ಒಂದು ಭಾಗವೋ ?

ಅದೇ ದಿನ ಚನ್ನಳ್ಳಿಯ ಶ್ರೀ ಗಣಪತಿಭಟ್ಟರ ಮನೆಯಲ್ಲಿಯೂ ಜಪ್ತಿ ಸೈನಿಕರು ಹಲವು ಕಡೆಗಳಲ್ಲಿ ಅಗಿದರು. ಅಗಿಯುವಾಗ ಸಿಕ್ಕ ಒಂದು ತಂಬಿಗೆಯಲ್ಲಿ ೬ ಆಣೆಯ ತಾಮ್ರದ ನಾಣ್ಯಗಳೂ ೪-೫ ಸೇರು ತೂಕದ ಬಳೇ ಕಲ್ಲುಗಳೂ ಸಿಕ್ಕವು ತಂಬಿಗೆಯನ್ನು ಬಿಟ್ಟು ಬಿಕ್ಕವನ್ನು ಜಪ್ತಿ ಮಾಡಿದರು. ರಾಪತಿಯನ್ನು ಮಾತ್ರ ಕೊಡಲಿಲ್ಲ.

೨೫-೩-೩೧ ನೇ ದಿವಸ ಗೋಳಿಕೈ ಶ್ರೀ ಶಿವರಾಮ ಹೆಗಡೆ ಎವರ ಮನೆಯಲ್ಲಿ ಜಪ್ತೀ ಯತ್ನಕ್ಕೆ ನೆಲವನ್ನು ಅಗಿದಲ್ಲದೆ, ಒಂದು ಪೆಟ್ಟಿಗೆಯ ಬೀಗವನ್ನು ಮುರಿದು ತಾಮ್ರ ಹಿತ್ತಾಳೆಯ ಒಡವೆಗಳನ್ನೂ, ಸೀರೆಗಳನ್ನೂ, ನಗದೀ ರೂಪಾಯಿಗಳನ್ನು ಒಯ್ದಿದ್ದಾರೆ, ಇವುಗಳ ಪಂಚನಾಮೆಯೂ ಮಾಡಿ ಕೊಡಲಿಲ್ಲ [illegible] ದುರ್ಗೀ ಮುಖದ ಬಂಗಾರದ ನಾಣ್ಯ ಇವೆರಡಂ ಕದ್ದಿಲು ಇಲ್ಲ ಇದರ ಬಗ್ಗೆ ಕೇಳಲು ಒಬ್ಬರಿಕತಿಗಿಂತ ಬೈದು ಬೆದರು ಹೆದರಿಸುತ್ತ ಹಾರಿಸಿಬಿಡುತ್ತಿರುವರು. ಇದೂ ಕ್ರಮಬದ್ಧವಾದ ಜಪ್ತಿಯೋ ?

೨೮-೪ ೩೧ ನೇ ದಿನ ಕರ್ಕನವಲದ ಶ್ರೀ ಗಣಪತಿ ಪರಮಯ್ಯ ಹೆಗಡೆಯವರ ಮನೆಗೆ ಜಪ್ತೀ ಸರಂಜಾಮವು ಹೋಯಿತು. ಶ್ರೀ ಹೆಗಡೆಯವರು, ಈ ವರ್ಷದ ಪರಿಸ್ಥಿತಿಯ ಮೂಲಕ ಕೀರ್ವೆ ಕೊಡುವದು ಸಾಧ್ಯವಿಲ್ಲೆಂದೂ, ಎಳೆ ಜಪ್ತಿಯ ಬದಲು ದೀವಜಟ್ಟಿ ಕೊಳ್ಳದು ಮನೆಯ ಸಂಧಿಗೊಂದಿಗಳನ್ನು ಶೋಧಿಸಿ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಬಂಗಾರದ ಒಡವೆಗಳನ್ನೂ, ಸ್ತ್ರೀಧನವನ್ನೂ ಜಪ್ತಮಾಡಿದರು. ಶ್ರೀ ಹೆಗಡೆಯವರಿಂದ ಸರ್ಕಾರಕ್ಕೆ ಬರತಕ್ಕ ಕೀರ್ವೆ ೧೧೦೦ ರೂಪಾಯಿ ಮೊದಲಾದ ಕೆಂಪದ ಬಗ್ಗೆಯೇ ಈ ಜಪ್ತಿಯಾಯಿತಂತೆ! ಜಪ್ತಮಾಡಿದ ಆಭರಣಗಳಿಗೆ ಅಧಿಕಾರಿಗಳು ೭೦೦ ರೂಪಾಯಿ ಬೆಲೆ ಕಟ್ಟಿದ್ದಾರೆ. ಉದಾರರೇ ಅವರು!

ಶಿರ್ಸಿ ತಾಲೂಕಿನ ಸುರಾಜ್ಯದ ಮಾದರಿ

ಹುಂಗೋಡ ಕೇಂದ್ರದಲ್ಲಿ ಅಡಿಗಳ ಹಾವಳಿಯು ಹೆಚ್ಚಾಗಿ ಕೋಡಿಗಾರರಿಗೆ ಹಾನಿಯುಂಟಾಗುತ್ತಲಿದೆ.

ಸತ್ತ ಮಗಳು ಸತ್ತು ಬದುಕಿದ್ದು

ಏಷ್ಯಾಪುರದ ಅಯೋಧ್ಯ ಎಂಬಲ್ಲಿಯ ಬಾಬು ಕಳಿಬ ದ ಬ್ಯಾನರ್ಜಿ ಯೆಂಬವನ ೨೦ ವರ್ಷದ ಹೆಂಡತಿ ಶ್ರೀಮತಿ [illegible] ಯೆಂಬವಳು ಅಕಸ್ಮಾತ ರೋಗಪೀಡಿತಳಾಗಿ ಗಂಟೆ ಮೂರುವರೆಯ ನಂತರ [illegible] ಸತ್ತುಹೋಯಿತು. [illegible] ಆಸ್ಪತ್ರೆಯಲ್ಲಿ ಚಿಕಿತ್ಸೆಯಿದೆಯೂ, [illegible] ಬಂದ. [illegible] ಅವಳ ಸಂಬಂಧಿಗಳು ಶವವನ್ನು [illegible] ದ ವೇಳೆಯ ಚಿತ್ತಿದಾಗ ಉಸಿರಾಡುವ [illegible] ಕಂಡು ಬಂತು. ಜನರು ಶವವನ್ನು ನೆಲದ ಮೇಲಿಟ್ಟು ಪರೀಕ್ಷಿಸಿದ ೨ ಸ್ವಲ್ಪ ಸಮಯದ ಮೇಲೆ [illegible] ಬಾಯಿಗೆ ನೀರು ಹಾಕಿದಾಗ ಸರಿಯಾಗಿ ನೀರು ಕುಡಿದಳು. ಸ್ವಲ್ಪ ಹೊತ್ತಿನ ಮೇಲೆ ಮೈಗೆ ಮಾತಾಡಿ ಬಿಸಿಲನ್ನು ತರೆಯ ವದಾಗುವದಿಲ್ಲವೆಂದು ಹೇಳಿದಳು. ನಂತರ ಅವಳನ್ನು ಮನೆಗೆ ಒಯ್ದಿರು [illegible] ಮರಣವುಂಟಾದಾಗ ತನಗೆ ತೋರಿದ ದೃಶ್ಯವನ್ನು ಅವಳು ಕೆಳಗಿನಂತೆ ವರ್ಣಿಸಿದ್ದಾಳೆ,

"[illegible] ೭ ಏರ್ಪಗಳ ಮೊದಲು ಸತ್ತ ನನ್ನ ತಾಯಿ ಬಂದು ನನ್ನ ಬಳಿಗೆ ಬಾರು [illegible] ಹೋದಳು. ಹಿರಿ [illegible] ಬಂದು [illegible] ಹೊಳೆ [illegible] ಗಟ್ಟಿಯಾಗಿ ಕೂಗಿದೆ! [illegible] ಅನಿ ದಾರಿಯ ಕಪ್ಪು ರೂಪಗಳು ಬಂದು "ಇವಳೇಕೆ ಇಲ್ಲಿ [illegible] ಬೇರೆ [illegible] ಇವಳಲ್ಲ" ಎಂದವು. ಕೂಡಲೆ ನಾನು ನನ್ನ [illegible] ತಿರುಗಿ ಕರೆದು [illegible]".

ಬೆಳಗಾವ ಜಿಲ್ಲಾ ಸಾಹಿತ್ಯ ಪರಿಷತ್ತು

ತಾ ೮ ನೆಯ ದಿವಸ ಕನ್ನಡ ೧ ನೆಯ ನಂಬರ ಶಾಲೆಯಲ್ಲಿ ಶ್ರೀ. ರಾಮಚಂದ್ರನ್ ಬಿ. ಎ. ಬಿ. ಟಿ. ಅ್ಯಡ್‌ಮಿನಿಸ್ಟ್ರೇಟಿವ್ಹ ಆಫೀಸರ, ಬೆಳಗಾವ ಸ್ಕೂಲಬೋರ್ಡ, ಇವರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿ, ಬೆಳಗಾವ ಜಿಲ್ಲಾ ಸಾಹಿತ್ಯ ಪರಿಷತ್ತನ್ನು ಮೇ ತಿಂಗಳಲ್ಲಿ ಕೂಡಿಸಬೇಕೆಂದು ಗೊತ್ತು ಮಾಡಲಾಯಿತು ಈ ಸಂಬಂಧವಾಗಿ ಒಂದು ಕಾರ್ಯಕಾರಿ ಮಂಡಳವು ಸಭೆಯಲ್ಲಿ ನಿಯಮಿಸಲ್ಪಟ್ಟಿತು ಸಭೆಯಲ್ಲಿಯೇ ೫೦ ರೂ. ವರೆಗೆ ವರ್ಗಣಿ ಕೂಡಿತು.

ಜಪ್ತೀ ಸತ್ರದಲ್ಲಿ ತೊಡಗಿರುವ ಸರಕಾರಕ್ಕೆ ಪ್ರಜೆಗಳ ಗೋಳಿನ ಪರಿಯೇ ಇಲ್ಲದಂತಾಗಿದೆ. ತಾಲೂಕಿನ ಅಧಿಕಾರಿಗಳಿಗೆ ಅರ್ಜಿ ಮಾಡಿಕೊಂಡರೂ ಅದಕ್ಕೆ ಉತ್ತರವಿಲ್ಲ. ಕಳೆದ ೧೫ ದಿನಗಳಲ್ಲಿ ಆನೆಗಳು ೪೦ ಗುಂಟೆ ಕ್ಷೇತ್ರದೊಳಗಿನ ೩೦೫ ಬಾಳೆಗಿಡಗಳನ್ನೂ ೧೩೫ ಅಡಿಕೆ ಮರಗಳನ್ನೂ ನಾಶಮಾಡಿಯುತ್ತವೆ. ಆನೆಗಳು ಹೆಚ್ಚಾಗಿ ಎಳೇ ಅಡಿಕೆಯ ಗಿಡಗಳನ್ನೇ ತಿನ್ನುತ್ತವೆ. ಬಾಳೆಗಿಡಗಳನ್ನು ನೆಟ್ಟಿರುವ ಮೂಲಕ ಅವು ಮತ್ತೆ ಚಿಗಿಯುವಂತಿಲ್ಲ, ಅಡಿಕೇ ಮರಗಳು ಬೆಳೆಬೇಕಾದರೆ ೧೦-೧೫ ವರ್ಷದ ಶ್ರಮ ಬೇಕಾಗುತ್ತದೆ, ಆನೆಗಳು ಒಂದೇ ದಿನದಲ್ಲಿ ವರ್ಷಾನುವರ್ಷದ ಶ್ರಮವನ್ನು ಹಾಳುಮಾಡುತ್ತವೆ.

ರಾಷ್ಟ್ರೀಯ ಸಪ್ತಾಹ

ಪ್ರತಿವರ್ಷದಂತೆ ರಾಷ್ಟ್ರೀಯ ಸಪ್ತಾಹದ ಕಾರ್ಯಕ್ರಮವು ಶಿರ್ಸಿ ಸಿದ್ದಾಪುರಗಳಲ್ಲಿ ಪ್ರಾರಂಭವಾಗಿದ್ದ, ಸಿದ್ದಾಪುರದಲ್ಲಿ ಗುರುನಾಥ ಜೋಶಿಯವರು ಪರದೇಶಿ ವಸ್ತುಗಳ ಬಹಿಷ್ಕಾರದ ವಿಷಯವಾಗಿ ಉಪನ್ಯಾಸವನ್ನು ಮಾಡಿದರು.

ಗದಗಿನಲ್ಲಿ ಮುಖಂಡರ ಭಾಷಣ.

(ಕಂತಿಯ ಸುದ್ದಿ, ತಾ|| ೧೪.)

ರಾಷ್ಟ್ರೀಯ ಸಪ್ತಾಹದ ಕೊನೆಯ ದಿವಸದ ನಿಮಿತ್ತವಾಗಿ ನಿನ್ನಿನ ದಿನ ಗಾಂಧಿ ಚೌಕಿನಲ್ಲಿ ಡಾ ಉಳ್ಳಾಗಡ್ಡಿ ವರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಸಭೆಸೇರಿತ್ತು. ಶ್ರೀ ಕಳ್ಳಿ ತಿಪ್ಪಣ್ಣಾ, ಗೋವಿಂದರಾವ, ವೆಂಕಟರಾವ ಇವರುಗಳು ರಾಷ್ಟ್ರೀಯ ಸಪ್ತಾಹದ ಮಹತ್ವವನ್ನು ಕುರಿತು ಭಾಷಣಮಾಡಿದರು

ರಾ ಬ. ಕಂಬಳಿಯವರಿಗೆ ಮಾನಪತ್ರ.

(ಕಂತಿಯ ಸುದ್ದಿ, ತಾ|| ೧೪.)

ಮುಂಬಯಿ ಸರಕಾರದ ಒಕ್ಕಲತನದ ಖಾತೆಯ ಮಂತ್ರಿಗಳಾದ ದಿವಾಣ ಬಹದ್ದೂರ ಕಂಬಳಿಯವರು ನಿನ್ನಿನ ದಿನ ಬಂದು, ಕಾಟನ್ ಸೇಲ ಸೊಸಾಯಟಿ ಹಾಗೂ ಕರ್ನಾಟಕ ಸೆಂಟ್ರಲ್ ಬ್ಯಾಂಕದವರಿಂದ ಮಾನಪತ್ರ ಸ್ವೀಕರಿಸಿ, ಸಂಜೆಗೆ ಗದುಗಿನಿಂದ ಪ್ರಯಾಣಬೆಳಸಿದರು.

ಇಹವೃತ್ತ

ರಾಷ್ಟ್ರೀಯ ಸಪ್ತಾಹದ ಕೊನೆಯ ದಿನದ ನಿಮಿತ್ತವಾಗಿ ತಾ|| ೧೩ನೆಯ ದಿನ ಸಾಯಂಕಾಲ ದಾಜಿಬಾದೆ ಚೌಕಿನಲ್ಲಿ ಶ್ರೀ. ಮನೋಹರ ಹಣಮಂತರಾವ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿತ್ತು. ಶ್ರೀ. ಕೌಜಲಗಿ ಹಣಮಂತರಾಯರು 'ಕರಾಚಿ ಕಾಂಗ್ರೆಸದ ಸಂದೇಶ'ವನ್ನು ತಿಳಿಸಿ ಪರದೇಶೀ ಬಟ್ಟೆಯ ಬಹಿಷ್ಕಾರ, ಸೆರೆ ಹಿಂದಿ ಪಿಕೆಟಿಂಗ, ಖಾದೀ ಪ್ರಸಾರ ಮೊದಲಾದ ವಿಧಾಯಕ ಕಾರ್ಯಗಳನ್ನು ಜೋರಿನಿಂದ ಸಾಗಿಸಲು ಹೇಳಿಕೊಂಡರು. ಶ್ರೀ ಸಂಗೂರ ಜಯರಾಮರು ಅರ್ಧಿಕ ಸ್ವಾತಂತ್ರ್ಯದ ಮೂಲಕವಾಗಿ ಕರನಿರಾಕರಣ ಹಳವ ಕೈಕೊಂಡು ಸಂಕಟಕ್ಕೊಳಗಾದವರೊಡನೆ ಹೋರಾಡಿ, ಯಶಸ್ಸನ್ನು ಸಂಪಾದಿಸಿದ ಸಿರಸಿ, ಸಿದ್ದಾಪುರ, ಹಿರೇಕೆರೂರ ತಾಲೂಕುಗಳ ರೈತ ಸಮ್ಮವರಿಗೆ ಸಹಾಯಮಾಡಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರನ್ನು ಅಭಿನಂದಿಸುವ ಗೊತ್ತುವಳಿಯನ್ನು ಸಭೆಯ ಮುಂದೆ ಮಂಡಿಸಿದರು. ಅದು ಒಮ್ಮತದಿಂದ ಸ್ವೀಕೃತವಾಯಿತು. ನಂತರ ಅಧ್ಯಕ್ಷರು ಸಿರಸಿ, ಸಿದ್ದಾಪುರ, ಹಿರೇಕೆರೂರ ತಾಲೂಕುಗಳ ರೈತರ ಗಟ್ಟಿಗತನವನ್ನು ಕೊಂಡಾಡಿ, ವಿಜಾಪುರ ಜಿಲ್ಲೆಯವರೂ ಹಾಗೆ ಗಟ್ಟಿಗರಾಗಲು ಕೇಳಿಕೊಂಡರು.

ಶಿವಾನಂದ ಸಂಗೀತ ನಾಟಕ ಮಂಡಲದವರು ಕಳೆದ ಒಂದು ವಾರದಿಂದ ಇಲ್ಲಿನ ಶಿವಾನಂದ ನಾಟಕ ಗೃಹದಲ್ಲಿ ತಮ್ಮ ಲೋಕಪ್ರಿಯವಾದ ಐತಿಹಾಸಿಕ ನಾಟಕಗಳನ್ನು ಪ್ರಯೋಗಿಸುತ್ತಿದ್ದು, ಅವರಿಗೆ ಜನರ ಪ್ರೋತ್ಸಾಹವೂ ಒಳೆ ಹವಣಿಗೆ ಸಿಗುತ್ತಿದೆ ಅಕೊಳ್ಳಿನ ದಿನ "ಸ್ವಾತಂತ್ರ್ಯ ಸಂಗ್ರಾಮ" ನಾಟಕವನ್ನು ಪ್ರಯೋಗಿಸುವವರಿದ್ದು, ಇದು ಬಹು ಸ್ಫೂರ್ತಿದಾಯಕವೂ ಉದ್ಬೋಧಕವೂ ಇದೆ. ಪ್ರತಿಯೊಬ್ಬ ಕನ್ನಡಿಗನೂ ಈ ನಾಟಕವನ್ನು ನೋಡಬೇಕು.

ವಿಶ್ವಗುಣಾದರ್ಶ ನಾಟಕ ಮಂಡಲದವರೂ ಇಲ್ಲಿಯ ತಾಜ ನಾಟಕ ಗೃಹದಲ್ಲಿ ತಮ್ಮ ವಿಟ ಅಭಿಮನ್ಯು, ಲಂಕಾದಹನ ಮೊದಲಾದ ಪೌರಾಣಿಕ ನಾಟಕಗಳನ್ನು ಪ್ರಯೋಗಿಸುತ್ತಿರುವರು.

ಈ ಪತ್ರಿಕೆಯು ವೆಂಕಟೇಶ ಶ್ರೀನಿವಾಸಾಚಾರ್ಯ ಕಲ್ಲೂರ ಇವರಿಂದ ಬಾಗಲಕೋಟೆ ವಿದ್ಯಾರ್ಣವ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಪ್ರಕಾಶಿಸಲ್ಪಟ್ಟಿತು.

ರ ನಂ. ಬಿ. ೨೭೮೮

ನಿತ್ಯ ಪತ್ರ.

...परवशं दुःखं । यद्यदात्मवशं सुखम् ॥—मनु.

ಬೆಲೆ ೦—೦—೩.

ನಿತ್ಯಪತ್ರಿಕೆಯ
ವರ್ಗಣೀ ದರಗಳು
ಪರಸ್ಥಳದವರಿಗೆ

೧೨ ತಿಂಗಳಿಗೆ	೧೫—೦—೦
೬ ,,	೭—೮—೦
೩ ,,	೩—೧೨—೦
೧ ,,	೧—೪—೦

ಸ್ಥಳಿಕರಿಗೆ

೧೨ ತಿಂಗಳಿಗೆ	೧೨—೦—
೬ ,,	೬—೦—೦
೩ ,,	೩—೮—೦
೧ ,,	೧—೦—೦

KANNADIGA
BAGALKOT
BI-WEEKLY

ನಿತ್ಯಪತ್ರಿಕೆಯ
ಸರಕಾರಿ ಹಾಗು ಹಂಗಾಮಿ
ಜಾಹೀರಾತಿನ ದರಗಳು
೧ನೇಸಲ ೧ ಇಂಚಿಗೆ ೧-೮-೦
೨ ,, ,, ೧-೦-೦
ಮುಂದೆ ಪ್ರತಿಯೊಂದು ಸಲ ೦-೧೨-೦
ಹೆಡಿಂಗದಸಾಲಿಗೆ ಅಕ್ಷರಗಳ ಪ್ರಮಾಣದಿಂದ ದರಬೀಳುವದು

ಸಂಪಾದಕರು:- ಮಂಗಳವೆಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.
ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೨] ಬಾಗಲಕೋಟೆ— ಗುರುವಾರ ಮಿತಿ ಚೈತ್ರ ಬಹುಳ ೮ ಶಕೆ ೧೮೫೩ ತಾ॥ ೭—೫—೩೧ [ಸಂಚಿಕೆ ೨೬.

‘ಕನ್ನಡಿಗ’ನ ಭವಿತವ್ಯತೆ.

[ಇಂದಿನ ಅಗ್ರಲೇಖವನ್ನು ಓದಿರಿ.]

ರೈತರ ಬಗ್ಗೆ

ಮಹಾತ್ಮರ ಕಳಕಳಿ

ಕಮೀಶನರರೊಡನೆ ಚರ್ಚೆ

ಮಹಾತ್ಮಾ ಗಾಂಧಿಯವರು ತಾ॥ ೧೨ ನೆಯ ದಿನ ಉತ್ತರ ಭಾಗದ ಕಮೀಶನರರಾದ ಮಿ ಜೆ ಎಚ್ ಗ್ಯಾರೆಟ್‌ರನ್ನು ತಮ್ಮ ವಸತಿಸ್ಥಾನವಾದ ಸೇಟ ಅಂಬಾಲಾಲರ ಬಂಗಲೆಗೆ ಕರೆಯಿಸಿಕೊಂಡು, ಅವರೊಡನೆ ಎರಡು ಗಂಟೆಗಳ ವರೆಗೆ ಚರ್ಚೆ ಮಾಡಿದರು.

ಕಾಯಿದೆಭಂಗ ಚಳವಳಿಯಲ್ಲಿ ಕರಭಿರಾಕರಣೆಯ ನಿಮಿತ್ತವಾಗಿ ಜಪ್ತಿಮಾಡಲ್ಪಟ್ಟ ಆಸ್ತಿ, ಹಾಗೂ ಭೂಮಿಗಳನ್ನು ರೈತರಿಗೆ ತಿರುಗಿ ಒಪ್ಪಿಸುವ ಸಂಬಂಧವಾಗಿಯೇ ಚರ್ಚೆಯು ನಡೆದಿರಬಹುದಾಗಿ ತಿಳಿಯುತ್ತದೆ.

ಕಾನಪುರ ದಂಗೆಯ

ಸರಕಾರಿ ವಿಚಾರಣೆಯ ಮಂಡಲ

ಕಾನಪುರ ದಂಗೆಯ ಸಂಬಂಧವಾಗಿ ವಿಚಾರಣೆ ನಡೆಸಲು ಸಂಯುಕ್ತಪ್ರಾಂತ ಸರಕಾರದವರು ಕೆಳಗಿನ ಗೃಹಸ್ಥರದೊಂದು ವಿಚಾರಣೆಯ ಮಂಡಲವನ್ನು ನಿಯಮಿಸಿದ್ದಾರೆ

೧. ಎಂ ಕಿನೆ, ಐ ಸಿ. ಎಸ್. (ಅಧ್ಯಕ್ಷ) ೨ ಮೊರ್ಕಿಂಕ್, ಆಯ್. ಸಿ. ಎಸ್ ಜಜ್ಜ, ಅಲಹಾಬಾದ ಹಾಯಕೋರ್ಟ ೩. ರಾವ ಬಹದ್ದೂರ ಬಲದೇವರಾಮ ದಾವೆ ೪ ನವಾಬಜಾದಾ ಲಿಯಾಕತ್ ಅಲ್ಲೀಖಾನ

ಕೊಲ್ಹಾಪುರದಲ್ಲಿ

ಕ್ರಾಂತಿಕಾರಕ ಪತ್ರಿಕೆಯು ಸಿಕ್ಕಿದೆ

ಕೊಲ್ಹಾಪುರದ ಮಹಾದ್ವಾರದ ಮೇಲೆ ಸ್ವಲ್ಪ ದಿನಗಳಹಿಂದೆ ಒಂದು ರಾಜದ್ರೋಹಾತ್ಮಕವಾದ ಪತ್ರಿಕೆಯು ಅಂಟಿಸಲ್ಪಟ್ಟಿತ್ತೆಂದೂ, ಅದರಲ್ಲಿ ಬಾಂಬ ತಯಾರವಾಗುವ ಕಾರಖಾನೆಯ ಉಲ್ಲೇಖವಿತ್ತೆಂದೂ, ತಾ॥ ೭ನೆಯ ದಿವಸ ಅಧಿಕಾರಿಗಳು ಆ ಪತ್ರಿಕೆಯ ಶೋಧನೆ ಮಾಡಿದರೆಂದೂ ತಿಳಿದು ಬರುತ್ತದೆ.

ಶ್ರೀ ಸೇನಗುಪ್ತರು

ಗವರ್ನರರನ್ನು ಭೆಟ್ಟಿಯಾದರು

ಬಂಗಾಲದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಜೆ ಎಂ ಸೇನಗುಪ್ತರು ಡಾರ್ಜಿಲಿಂಗದಲ್ಲಿ ಬಂಗಾಲದ ಗವರ್ನರರನ್ನು ಭೆಟ್ಟಿಯಾಗಿ, ರಾಜಕೀಯ ಕೈದಿಗಳ ಬಿಡುಗಡೆ, ದಿನೇಶಗುಪ್ತ ಮತ್ತು ರಾಮಕೃಷ್ಣರ ಗಲ್ಲಿನ ಶಿಕ್ಷೆಯನ್ನು ರದ್ದು ಪಡಿಸುವದು, ಈ ಸಂಬಂಧವಾಗಿ ಅವರೊಡನೆ ಚರ್ಚೆ ಮಾಡಿದರು.

ಶಿರ್ಶಿ—ಸಿದ್ದಾಪುರಗಳ ಪತ್ರ!

ಸತ್ಯಾಗ್ರಹವು ಗೆದ್ದಿತು.

ಈ ವರ್ಷದ ಪ್ರತಿಕೂಲ ಪರಿಸ್ಥಿತಿಯಲ್ಲಿ ತಮ್ಮಿಂದ ತೀರ್ವೆ ಕೊಡುವದು ಸಾಧ್ಯವಿಲ್ಲೆಂದು ಶಿರ್ಶಿ—ಸಿದ್ದಾಪುರಗಳ ರೈತರು ಸರಕಾರಕ್ಕೆ ತಿಳಿಸಿದರೂ ಸರಕಾರವು ಒತ್ತಾಳಿಕೆಯಿಂದ ತೀರ್ವೆಯ ವಸೂಲಕ್ಕೆ ತೊಡಗಿದ ಸಂಗತಿಯು ಈಗ ಅಖಂಡ ಕರ್ನಾಟಕಕ್ಕೆ ಗೊತ್ತಾಗಿಹೋಗಿದೆಯಷ್ಟೇ! ಶಿರ್ಶಿ—ಸಿದ್ದಾಪುರಗಳ ಜನರು ಗಾಂಧಿಮಹಾತ್ಮರ ಮಾರ್ಗವನ್ನು ಅನುಸರಿಸಿ ಸತ್ಯಾಗ್ರಹವನ್ನು ಹೂಡಿ ಬಂದ ಕಷ್ಟನಷ್ಟಗಳಿಗೆ ಹೆದರದೆ ಬೆದರದೆ ಧೈರ್ಯದಿಂದ ನಿಂತಿದ್ದರಿಂದ ಕೊನೆಗೆ ಅಧಿಕಾರಿಗಳು ಮಣಿಯಬೇಕಾಯಿತು. ಯಾನ ದೇ. ಭ. ದಿವಾಕರರಾಯರಿಗೆ ಕಾರವಾರದ ಕಲೆಕ್ಟರರು ಅನಧಿಕಾರಿಗಳೆಂಬ ಉಪಮರ್ದಕವಾದ ವಿಶೇಷಣವನ್ನು ಹಚ್ಚಿದರೋ ಅದೇ ದಿವಾಕರರೊಡನೆ ಸವಿಸ್ತರ ರೀತಿ ಕಾಯಿದೆ ಒಪ್ಪಂದ ಮಾಡಿಕೊಂಡರು. ಶ್ರೀ ಪಂಡಿತಪ್ಪ ಚಿಕ್ಕೋಡಿಯವರ ಮಧ್ಯಸ್ಥರವಾಗಿ ಮಾತುಕತೆ ನಡೆಸಿ ಸರಕಾರದವರ್ ಸಂಧಾನಕ್ಕೆ ಮೊದಲು ಮಾಡಿದರು. ಈ ಗಾಢ ಸಂಧಾನದಿಂದ ಶಿರ್ಶಿ—ಸಿದ್ದಾಪುರಗಳ ತೋಟಗಾರರ ತೀರ್ವೆಯ. ಎರಡನೆ ಕಂತನ್ನು ತಕ್ಕೂಟ ಬೇಗ ವಸೂಲೆಂದು ತಿಳಿಸಲು ಅಡ್ಡಿಯೇ ಇಲ್ಲ. ಕಾಂಗ್ರೆಸಿನವರ ಸ್ವಾಭಿಮಾನಕ್ಕೆ ಕುಂದು ಬರದಂತೆ ಸಂಧಾನವನ್ನು ಮಾಡಿಕೊಂಡದ್ದಕ್ಕಾಗಿ ಇಲ್ಲಿಯ ಜನರು ದೇ. ಭ. ದಿವಾಕರರನ್ನು ಕೊಂಡಾಡುತ್ತಿರುವರು.

ಮಳೆನಿಂತರೂ ಮರದ ಹನಿ ನಿಲ್ಲಲಿಲ್ಲ

" ಕಮಿಶನರರೂ ಕಾಂಗ್ರೆಸಿನ ಅಧ್ಯಕ್ಷರೂ ಸಂಧಾನವಾದ್ದೂ ಇತ್ತೀಚಿನ ಅಧಿಕಾರಿಗಳುಮಾತ್ರ ತಮ್ಮ ಕಾರ್ಯವನ್ನು ಯಥಾಪ್ರಕಾರವಾಗಿ ಸಾಗಿಸಿದ್ದಾರೆ. ಸಂಧಾನದ ಸುದ್ದಿಯು ತಿಳಿದಕೂಡಲೆ ಅವರು ತಮ್ಮ ಉಗ್ರೋಪಾಯಗಳನ್ನು ನಿಲ್ಲಿಸುವದು ಉಚಿತವಾಗಿತ್ತು. ಆದರೆ ಮೇಲಿನಿಂದ ಹುಕುಂ ಬಂದಿಲ್ಲವೆಂಬ ನೆವದಿಂದ ಅವರು ಎಂದಿನಂತೆ ಜಪ್ತಿ, ಲಿಲಾವು ಕಾರಭಾರಿಕೆ ನೋಟೀಸ ಮುಂತಾದವುಗಳನ್ನು ಅಖಂಡವಾಗಿ ಸಾಗಿಸಿಯೇ ಇರುವರು. ಶಿರ್ಶಿ ತಾಲೂಕಿನಲ್ಲಿ ಸರಕಲ್ ಇನಸ್ಪೆಕ್ಟರರು ಸಂಚಾರಿಯ ಸಹಿತವಾಗಿ ತಿರುಗುತ್ತಲೇ ಇದ್ದಾರೆ. ಸಿದ್ದಾಪುರದಲ್ಲಿಯೂ ಜಪ್ತಿಯು ಸಶ್ರವು ಸಾಗಿದೆ. ಬೇರೆ ತರದ ದಬ್ಬಾಳಿಕೆಯೂ ನಡೆದೇ ಇದೆ.

ಕಾಂಗ್ರೆಸ್ಸಿನವರ ಕರ್ತವ್ಯನಿಷ್ಠೆ

ಸಂಧಾನದ ಸುದ್ದಿಯು ಬಂದ ಕೂಡಲೆ ಕಾಂಗ್ರೆಸ್ಸಿನವರು ಯಥೋಚಿತವಾದ ಸೌಮ್ಯ ವೃತ್ತಿಯನ್ನು ಧರಿಸಿದರು. ಮರು ದಿವಸವೇ ನಡೆಯಬೇಕಾಗಿದ್ದ ಪಿಕೆಟಿಂಗವನ್ನೂ ಪಾಲಿಸಬೇಕಾಗಿದ್ದ ಹರತಾಳವನ್ನೂ ಬಿಟ್ಟು ಬಿಟ್ಟರು. ಮೊದಲನೇ ಕಂತನ್ನು ತುಂಬಲಿಕ್ಕೆ ಸಿದ್ಧರಾಗಬೇಕೆಂದು ಊರೂರಿನ ರೈತರಿಗೆ ಹೇಳಿಕಳುಹಿಸಿದರು. ಅಧಿಕಾರಿಗಳನ್ನೂ ಭೆಟ್ಟಿಯಾಗಿ ಪರಿಸ್ಥಿತಿಯನ್ನು ತಿಳಿಸಿಹೇಳಿ ಲಿಲಾವು ಮುಂತಾದ ಪ್ರಯೋಗಗಳನ್ನು ನಿಲ್ಲಿಸುವಂತೆ ಹೇಳಿದರು. ಆದರೆ ಅದೆಲ್ಲ ಬೋರ್ಗಲ್ಲದ ಮೇಲೆ ನೀರೆರೆದಂತಾಯಿತು. ಮೇಲಿನವರ ಹುಕುಂ ಬರಬೇಕಲ್ಲವೇ?

ಪೋಲೀಸ ರಾಜ್ಯ

ಶಿರ್ಶಿ ಸಿದ್ದಾಪುರಗಳಲ್ಲಿ ಬ್ರಿಟಿಶ ಸರಕಾರವು ಪೋಲೀಸರಿಗೇ ಸರ್ವ ಅಧಿಕಾರವನ್ನು ಒಪ್ಪಿಸಿಕೊಟ್ಟಂತೆ ತೋರುತ್ತದೆ. ಸಿಕ್ಕಸಿಕ್ಕವರನ್ನು ಕಂಡಕಂಡಲ್ಲಿ ಹಿಡಿದು ಕೂಡ್ರಿಸುವದು, ಬಾಯಿಗೆ ಬಂದ ಅವಾಚ್ಯ ಶಬ್ದಗಳನ್ನಾಡುವದು ಇವೇ ಮುಂತಾದ ಲೀಲೆಗಳನ್ನು ಅವರು ಅವ್ಯಾಹತವಾಗಿ ಸಾಗಿಸಿದ್ದಾರೆ. ಮೊನ್ನೆ ಶ್ರೀ. ಎಚ್ ಅನಂತರಾವ ಬಿ. ಎ ಅವರು ತಮ್ಮ ಕೆಲಸಕ್ಕಾಗಿ ಹಳ್ಳಿಗೆ ಹೊರಟಿರಲಾಗ ಪೋಲೀಸರು ಅವರನ್ನು ಹಿಡಿದೊಯ್ದು ಸುಮ್ಮನೆ ಫೌಜದಾರರ ಎದುರಿಗೆ ನಿಲ್ಲಿಸಿ ಅವರ ಹೊತ್ತನ್ನು ಹಾಳುಮಾಡಿದರು. ಇದೇ ರೀತಿಯಲ್ಲಿ ಶ್ರೀ ಅಂಕೋಲೆಯ ಅನಂತರಾವ ಮಹಾಲೆಯವರು ಮೋಟರಿನಿಂದಿಳಿದೊಡನೆ ಅವರನ್ನು ಕಚೇರಿಯಲ್ಲಿ ಕುಳ್ಳಿರಿಸಿದರು. ಕೆಲತು ಹೊತ್ತಿನ ತರುವಾಯ ಮತ್ತೆ ಬಿಟ್ಟರು. ಶ್ರೀ ಕೃಷ್ಣರಾವ ನಾಯಕರೆಂಬವರು "ಈ ಹಿಗ್ಗ ಹುಚ್ಚುಚ್ಚರ ಮಾತಲಿಕ್ಕೆ ನಿಮ್ಮ ಪೋಲೀಸರಿಗೆ ಅಧಿಕಾರವುಂಟೇ? ಎಂದು ಫೌಜದಾರನನ್ನು ಕೇಳಲು ಅವರು "ಇದಕೆ ಏ? ನಿಮಗೆ ಗಂಡು ಹಾಕಲಿಕ್ಕೆ ಅವರು ಸಮರ್ಥರು ಎಂದೇ ಹೇಳಿದರಂತೆ! ಸಿದ್ದಾಪುರದಲ್ಲಿ ಪೋಲೀಸರ ಹಾವಳಿಯು ವಿಪರೀತವಾಗಿದೆ. ಅವರ ಗೃಹಸ್ಥರೂ ಅಲ್ಲಿ ಪ್ರವೇಶ ಮಾಡುವಂತಿಲ್ಲ. ಬೇರೆ ಬೆಪ್ಪಿಗೆ ನರಳುತ್ತ ಮನೆಗೆ ಹೋಯಿತು. ಅವನ ಊರಿಗೆ ಪ್ರವೇಶ ಮಾಡುವನು ಎಂಥ ಮಾತಿದು! ಮಿ. ಪೈ, ಅಕ್ಷನ ೪೭ನೇ ಕಲಮಿನ ಪ್ರಕಾರ ನೋಟೀಸು ಕೊಟ್ಟು ಪೋಲೀಸರು ಪರಸ್ಥರನ್ನೆಲ್ಲ ಜಿಲ್ಹೆಯ ಹೊರಗೆ ಅಟ್ಟಿ ಬಿಡುತ್ತಿರುವರು. ಶ್ರೀ. ಬಾಲಿಗ, ಶ್ರೀ ಜೇವೂರ. ಶ್ರೀ ಗುರುನಾಥ ಜೋಶಿ, ಮುಂತಾದವರನ್ನು ಈಗಾಗಲೇ ಅಟ್ಟಿ ಬಿಟ್ಟರು. ಇನ್ನು ಎಷ್ಟು ಜನರನ್ನು ದಬ್ಬಿ ಹಾಕುವರೋ ತಿಳಿಯದಾಗಿದೆ. ಶ್ರೀ ರಾಮಸ್ವಾಮಿಯವರು ನೋಟೀಸು ತಪ್ಪಿಸಿದರೆಂಬ ಆರೋಪದಿಂದ ಸೆರೆ ಹಿಡಿಯಲ್ಪಟ್ಟಿದ್ದಾರೆ. ನೋಟೀಸು ತೋರ್ಪಡಿಸಾಗ ಅವರು 'ಊರಲ್ಲಿಯೇ ಇದ್ದಿಲ್ಲವಂತೆ! ಆದರೂ ಪೋಲೀಸರು 'ಸುಳ್ಳು ಆರೋಪ ಹೊರಿಸುತ್ತಿರುವ ಸುದ್ದಿ. ಜಪ್ತಿ, ಲಿಲಾವು ಮೊದಲಾದ ಪ್ರಸಂಗದಲ್ಲಿ ಪೋಲೀಸರು ತೀರ ಕೀಳ ನಡೆ ನಡೆಯುತ್ತಿರುವರು. ರಾತ್ರಿಗೆಗೆ ಕೈ ಹಾಕಿ ಹೊಗೆಸೊಪ್ಪನ್ನು ಗಂಡಸನ್ನೂ ದಬ್ಬುವದು, ಸಿಕ್ಕದ್ದನ್ನು ತಿನ್ನುವದು, ಕಾಲುಕಡಿಯಲ್ಲಿ ಏನಾದರೂ ಕೂಡಿಸಿ ಕಡಿಸಿ ಬಿಡುವದು, ಮುಂತಾದ ಪುಂಡಾಟಿಗೆಗಳನ್ನು ಅವರು ಇನ್ನೂ ಬಿಟ್ಟಿಲ್ಲ. ಇಂಥ ದುರ್ದೈವದಲ್ಲಿ ಇಡೀ ತಾಲೂಕಿನ ರಾಜ್ಯಸೂತ್ರವನ್ನೇ ಸರಕಾರವು ಒಪ್ಪಿಸಿಬಿಟ್ಟಂತಾಗಿದೆ!!

ದೇ. ಭ. ದಿವಾಕರರು ಬರುವರು

ದಿವಾಕರ—ಸ್ಲಾಟರ ಸಂಧಾನವನ್ನು ಜನರಿಗೆ ತಿಳಿಹೇಳುವದಕ್ಕಾಗಿಯೇ ದಿವಾಕರರು ಇಂದು ನಾಳೆ ಇಷ್ಟರಲ್ಲಿಯೇ ಇಲ್ಲಿಗೆ ಬರುವವರಿದ್ದಾರೆ. ಶಿರ್ಶಿ—ಸಿದ್ದಾಪುರ ತಾಲೂಕುಗಳಲ್ಲಿ ಸಂಚರಿಸಿ ಅಲ್ಲಲ್ಲಿಯ ಜನರಿಗೆ ಅವರವರ ಕರ್ತವ್ಯವನ್ನು ತಿಳಿಸಿ ಮುಂದಿನ ಕಾರ್ಯದ ಬಗ್ಗೆ ಸೂಚನೆಗಳನ್ನು ಕೊಟ್ಟು ಹೋಗುವರು. ವಿಜಯವನ್ನು ಸಂಪಾದಿಸಿದ ಬಳಿಕ ಬರುತಿರುವ ದಿವಾಕರರ ಸ್ವಾಗತ ಮಾಡುವದಕ್ಕಾಗಿ ನಾಗರಿಕರು ಬಹಳ ಆತುರರಾಗಿದ್ದಾರೆ.

ಇತರ ಸುದ್ದಿಗಳು

ಜಿ. ಕಾಂ. ಕ. ಅಧ್ಯಕ್ಷರಾದ ಶ್ರೀ ಶಾಂತಾರಾಮ ಹೆಗಡೆ ಪುರಸರರು ಒಂದು ಶಿರ್ಶಿಯ ಮಾರ್ಕೆಟಿನಲ್ಲಿ ಉಪನ್ಯಾಸ ಮಾಡಿ ಸಿದ್ದಾಪುರಕ್ಕೆ ಹೋದರು. ಕಾಂಗ್ರೆಸ್ ಸಭೆ ಸಮಿತಿ ಮಾಡುವ ಕಾರ್ಯವು ಭರದಿಂದ ನಡೆದಿದೆ. ಶಿರ್ಶಿ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಹುಲಿ ... ದನಗಳನ್ನು ತಿಂದು ಬಹಳ ನಷ್ಟವನ್ನು ಮಾಡುತ್ತಿವೆ. ಕಾಡುಕೋಣಗಳ ಕಾಟ, ಹುಲಿಗಳ ಹಾವಳಿ, ಮತ್ತು ಸರಕಾರದ ಪೀಡೆ ಹೀಗೆ ನಮ್ಮ ರೈತರಿಗೆ ತ್ರಿವಿಧತಾಪ ಉಂಟಾಗಿದೆ.

[illegible] ಟಿ ಗ.

'ಕನ್ನಡಿಗ'ನ ಭವಿತವ್ಯತೆ.

[illegible] ಬಾಗಲಕೋಟೆಯಲ್ಲಿ ನಿಂತು [illegible] ಸೇವೆ ಮಾಡಹತ್ತಿ, ಇಂದಿಗೆ ೬ ವರ್ಷ [illegible] ಅವನು ಈ ಅವಧಿಯಲ್ಲಿ [illegible] ಉನ್ನತಿಗಾಗಿ [illegible] ಹೆಣಗಾಡಿದ್ದಾನೆ. ಕರ್ನಾಟಕದ ಜೀವನದ ಪ್ರಶ್ನೆಯಾದ 'ಕರ್ನಾಟಕ ಏಕೀಕರಣ' ವಿಷಯವನ್ನು ಕನ್ನಡಿಗರಲ್ಲಿ ಚನ್ನಾಗಿ [illegible], ಕರ್ನಾಟಕ ಏಕೀಕರಣದ [illegible] ಮುಂದಕ್ಕೆ ಸಾಗಿಸಿದ್ದಾನೆ. ಈ ಕರ್ನಾಟಕದ ಮೇಲೆ ಅಭಿಯೋಗವಾಡಬಯಸಿದವರ [illegible] ಕಲ್ಪನೆಗಳನ್ನು ಕನ್ನಡಿಗರ ಮುಂದೆ [illegible] ಸಭೆಗಳಿಂದಲೂ [illegible] ಎಲ್ಲೆಲ್ಲಿಯೂ ಜಾಗೃತಿಯನ್ನುಂಟುಮಾಡಿದ್ದಾನೆ. ಈಗ ಕರ್ನಾಟಕದಲ್ಲಿ ಎಲ್ಲೆಡೆಯಲ್ಲಿ [illegible] ಕರ್ನಾಟಕದ ಅಭಿಮಾನವೂ ಹಾಗೂ ಕೇಳಬರುವ "ಕನ್ನಡ ಕನ್ನಡ" ಎಂಬ ಕೂಗೂ ಅವನ ಸೇವೆಯ ಫಲಗಳೇ ಆಗಿವೆ.

ಕಳೆದ ವರ್ಷದಲ್ಲಿ ಲೋಕನಾಯಕರು ಸ್ವಾತಂತ್ರ್ಯ ಸಂಗ್ರಾಮದ [illegible] ಮೊಳಗಿಸಿದ ಕೂಡಲೇ "ಕನ್ನಡಿಗ"ನೂ ಅದಕ್ಕೆ [illegible] ತನ್ನ ಶಕ್ತಿಯನ್ನು [illegible] ಕನ್ನಡಿಗನನ್ನು [illegible] ಸಂದರ್ಭಗಳಲ್ಲಿಯೂ ಸ್ವಾತಂತ್ರ್ಯ ಸಂಗ್ರಾಮದ ಸುದ್ದಿ ಸಮಾಚಾರಗಳನ್ನು ಹಂಚಿ, ಕನ್ನಡಿಗರನ್ನು ಎಚ್ಚರಗೊಳಿಸಿದನು. ಕನ್ನಡಿಗನ ಕಾರ್ಯವನ್ನು ಫಲಿಸಬೇಕೆಂದು [illegible] ಅವನ [illegible] ಸರಿಯಾಗಿ [illegible] ಕನ್ನಡಿಗನು ತನ್ನ ಕಾರ್ಯವನ್ನು [illegible] ಹೊಸ ಕಾಲಕ್ಕೆ [illegible] ಸಂಬಂಧ [illegible] ಅವನ [illegible] ಹೊಂಗಿ [illegible] ಲೇಖನಗಳನ್ನು [illegible] ವೇಳೆ ಹುಟ್ಟಿ [illegible] ಮುದ್ರಣ [illegible] ಅವನಿಂದ [illegible] ಹೀಗೆ [illegible] ಕನ್ನಡಿಗನು [illegible] ಕನ್ನಡಿಗನು ನಾಲ್ಕು ತಿಂಗಳ [illegible] ವೇಳೆ ಕೂಡ ಹೊರಡಲಿಲ್ಲ. [illegible] ಕನ್ನಡಿಗ [illegible] ಇಲ್ಲ. [illegible] ಪರಿಸ್ಥಿತಿಯಿಂದ [illegible] ವರ್ಷ ತಿಂಗಳವರೆಗೆ ಹಾಗೆಯೇ ತನ್ನ [illegible] ವ್ಯಾಪಕ ದೃಷ್ಟಿಯಿಂದ ಸೇವೆ ಮಾಡಬೇಕೆಂದು ಅವನಿಗೆ ಆಗ [illegible]. ಕನ್ನಡಿಗರಲ್ಲಿ ಸಹಾಯವನ್ನು ಕೋರಿಕೊಂಡು ವ್ಯಾಪಕ ದೃಷ್ಟಿಯಿಂದ ಸೇವೆ ಮಾಡಲು ಸಜ್ಜಾಗಿದ್ದನು. [illegible] ಅಸೋಸಿಯೇಟೆಡ್ ಪ್ರೆಸ್‌ದವರಿಂದ ತಂತಿ ತರಿಸಿಕೊಂಡು ಇಂಗ್ಲೀಷ ಮೊದಲಾದ ಪತ್ರಿಕೆಗಳಿಗಿಂತಲೂ ಬೇಗನೆ ಸುದ್ದಿ ಹರಡಹತ್ತಿದನು. ೩೦೦೦ ಜನ ಚಂದಾದಾರರು ಸಿಕ್ಕಿದ್ದರೆ ಅವನ ಕಾರ್ಯವು ಸುಲಭವಾಗಿ ಸಾಗಬಹುದಾಗಿತ್ತು. ಆದರೆ ಅರ್ಧದಷ್ಟಾದರೂ ಚಂದಾದಾರರು ಅವನಿಗೆ ಸಿಗಲಿಲ್ಲ. ಅವನು ಪುನಃ ಹಾನಿಗೊಳಗಾದನು. ಹೀಗೆ ಹಾನಿಗಳೊಳಗಾಗಿ ಬಾಗಲಕೋಟೆಯಲ್ಲಿ ನಿಂತು ಸೇವೆ ಮಾಡುವದಕ್ಕಿಂತ ಕನ್ನಡಿಗರ ಗಂಡುಮೆಟ್ಟಿನ ಸ್ಥಳವೂ, ವಿದ್ಯೆಯ ತೌರಿನ ಮನೆಯೂ, ಸಕಲ ಸೌಕರ್ಯಗಳ ಬೀಡೂ ಆಗಿರುವ ಧಾರವಾಡದಲ್ಲಿ ನಿಂತು ಸೇವೆ ಮಾಡಿದರೆ ಯಶಸ್ಸು ಸಿಕ್ಕೀತೆಂದು ಭಾವಿಸಿ ಅವನು ಆ ಒಗೆಯ ಪ್ರಯತ್ನಕ್ಕೆ ತೊಡಗಿದ್ದನು. ಈ ತಿಂಗಳಲ್ಲಿ ಅವನು [illegible] ಹೊರಡಲಿಲ್ಲ. ಅವನು ಈ ಪ್ರಯತ್ನದಲ್ಲಿ ತೊಡಗಿದ್ದು ಹಾಗೂ ಇಲ್ಲಿ ಅವನು ಹಾನಿಗೊಳಗಾಗಿದ್ದು ಇವೇ ಕಾರಣಗಳಾಗಿವೆ.

ಅವನ ಈ ಹೊಸ ಪ್ರಯತ್ನವು ಫಲಿಸತೊಡಗಿದ್ದು, ಅವನು ಇನ್ನೂ ತಿಂಗಳೊಪ್ಪತ್ತಿನಲ್ಲಿಯೇ ಧಾರವಾಡದಿಂದ ಹೊರಡಲಾರಂಭಿಸಿ ಕನ್ನಡಿಗರ ಸೇವೆಯಲ್ಲಿ ಪುನಃ ತತ್ಪರನಾಗುವನು. ತಂತಿಯ ವರ್ತಮಾನಗಳನ್ನು ತರಿಸಿಕೊಂಡು ಫ್ರಿಪ್ರೆಸ್ ಆಕಾರದ [illegible] ಹೊಂದುವನು. ಈ ಹೊಸ ಯೋಜನೆಯನ್ನು ಕುರಿತು ಈಗ ಸಿಂದಲೇ ವ್ಯವಸ್ಥೆಯನ್ನು ಕೈಕೊಳ್ಳಬೇಕಾಗಿರುವದರಿಂದ ಅವನು ಸಾಕೆಂದ ಹೊರಡುವದಿಲ್ಲ. ಎಲ್ಲ ವ್ಯವಸ್ಥೆಯೂ ಸರಿಹೊಂದಿದ ಕೂಡಲೇ ಅಂದರೆ ಒಂದು ತಿಂಗಳೊಪ್ಪತ್ತಿನಲ್ಲಿಯೇ ಧಾರವಾಡದಿಂದ ಹೊರಡಹತ್ತುವನು. ಕನ್ನಡಿಗರೆಲ್ಲರೂ ತ್ರಿಕರಣಪೂರ್ವಕವಾಗಿ ಅವನಿಗೆ ಸಹಾಯ ಮಾಡಿ, ಅವನ ಇಷ್ಟಾರ್ಥವನ್ನು ಕೈಗೂಡಿಸಬೇಕು.

ಮೂರೂ ತಾಲೂಕುಗಳ ತುಂಬ [illegible] ಕೊಡಬಾರದೆಂಬ ವಾತಾವರಣ ಉತ್ಪನ್ನವಾಯಿತು. ಜಪ್ತಿಯ ಅಳ್ತೆ ಮತ್ತು ಅನ್ಯಾಯ ಪ್ರಕಾರಗಳು ಮತ್ತು [illegible] ರೈತರು ಕಂಗೆಟ್ಟರು. ಜಪ್ತಿಯ ಕಾವುದಾರರು ದಣಿದು ಹೈರಾಣಾದರು.

ಎಪ್ರಿಲ್ ೩ ರ [illegible] ತಾರೀಖ ವೆಗ್ಗತ್ತಿಗೆ ಸಿದ್ದಾಪುರದಲ್ಲಿ ೭೦ ಜಪ್ತಿಗಳಾದವು. [illegible] ಬಿಲಾವಗಳಾದವು. ಬಿಲಾವದಲ್ಲಿ ಕೊಂಡವರು [illegible] ಪೋಲೀಸ ಪಾಟೀಲರೆ. ಇದೇ ಪ್ರಕಾರ [illegible]ಯಲ್ಲಿ ೫೦ ಮತ್ತು ಹಿರೇಕೆರೂರಿನಲ್ಲಿ ಐದು ಜಪ್ತಿಗಳಾದವು. ಹಿರೇಕೆರೂರಿನಲ್ಲಿ ಜಪ್ತಿ ಕಡಿಮೆಯಾದರೆ ಫೌಜದಾರಿ [illegible] ಸೋಟೀಸುಗಳು ಹೊರಟವು. ಸಿದ್ದಾಪುರದಲ್ಲಿ ಆರು ಜನರನ್ನು ಸೆರೆ ಹಿಡಿದರು. [illegible] ಒಂದು ಖಟ್ಲೆ ಹಾಕಿದರು.

ಕೌನ್ಸಿಲ್ ಮೆಂಬರರಾದ ಶ್ರೀ ಜೋಗರಾಯರು ನಾಲ್ಕು ಮತ್ತು [illegible] ದಿವಸಗಳ ಮಧ್ಯದಲ್ಲಿ ಈ ಮೂರೂ ತಾಲೂಕುಗಳನ್ನು ಸಂದರ್ಶಿಸಿ ಬಂದರು. ಬಳಿಕ ಕರ್ನಾಟಕ ದೊಡ್ಡ ದೊಡ್ಡ ರೈತರ ಹಾಗು ಕೌನ್ಸಿಲ್ ಮೆಂಬರರ ಒಂದು ದೊಡ್ಡ ಡೆಪ್ಯುಟೇಶನವನ್ನು ಮುಂಬಯಿಯ ಕೌನ್ಸಿಲ್ ಮುಂದಳದ ಕಡೆಗೆ ಕರಕೊಂಡು ಹೋಗುವ ನಿರ್ಣಯ ಮಾಡಿದರು. [illegible]ರಲ್ಲಿ ಶ್ರೀ ಚಿಕ್ಕೋಡಿಯವರು [illegible] ಮಾಡಿದರು. ಮತ್ತು [illegible] ಸಾಹೇಬರು ರೈತರ ಬೇಡಿಕೆಗಳನ್ನು ಕೊಡಬೊಪ್ಪಿದರು. ಪಟ್ಟಿ ಕೊಡಬಾರದೆಂಬ ಚಳವಳಿಯನ್ನು ನಿಲ್ಲಿಸಲು ಪ್ರಯತ್ನಿಸುತ್ತೇನೆಂದು ನಾನು ಮಾತು ಕೊಡಲು ಸಾಹೇಬರು ದಂಡದ ಪ್ಲಾಟಿಕ [illegible] ಜಪ್ತಿಗಳ ವಿಚಾರಣೆಯನ್ನು ರದ್ದುಪಡಿಸುವರೆಂದು [illegible].

ಈ ಅಭಿವೃದ್ಧಿಯಾದದರಿಂದ ಇದರಲ್ಲಿ [illegible] ಪರಿಸ್ಥಿತಿಯನ್ನು [illegible] ಕರ್ತವ್ಯವೆಂದು ಬಾ[illegible] ಶ್ರೀ ಜೋಗರಾಯರು [illegible] ಈ ಭಾಗದ [illegible] ಯಲ್ಲಿ ಶ್ರೀ ಚಿಕ್ಕೋಡಿ [illegible] ಪರಿಸ್ಥಿತಿ ವ್ಯಾಪಾರ [illegible] ಕಲ್ಪನೆಯು [illegible] ಕಮೀಶನರ ಸಾಹೇಬರು [illegible] ಯೋಗ್ಯ ಕರ್ತವ್ಯ ಮಾಡಿದರು. ಈ ವಿಷಯದಲ್ಲಿ [illegible] ಮಾಡಲು ನೀವು ಸೇರಬೇಕೆಂದು [illegible] ಇಂಡಿಯಾ ಸೊಸಾಯಿಟಿಗೆ ಬರೆಯಲು [illegible] ಉತ್ಸಾಹವನ್ನು [illegible] ತಮ್ಮ [illegible] ಕರ್ನಾಟಕ ರೈತರ [illegible] ಇವರೆಲ್ಲರಿಗೂ ನಾನು ಕೃತಜ್ಞನಾಗಿರುತ್ತೇನೆ.

೧೦ ಜನ ಕಂಪಂಗಿಯವರನ್ನು ಕೈದು ಮಾಡಿದರು

ರಾಜದ್ರೋಹಾತ್ಮಕವಾದ ನಾಟಕವನ್ನು ಪ್ರಯೋಗಿಸಿದ ಆರೋಪದಿಂದ ಬೆಂಗಳೂರು ಎಂಬಲ್ಲಿ ತಾ|| [illegible] ದಿನ ೧೦ ಜನ ಕಂಪಂಗಿಯವರು ಕೈದುಮಾಡಲ್ಪಟ್ಟಿದ್ದಾರೆ. ಕೊಲೆಗೆ ಉತ್ತೇಜನಕೊಟ್ಟರೆಂಬ ಆರೋಪವು ಅವರ ಮೇಲೆ ಹೊರಿಸಲ್ಪಡುವದಾಗಿ ತಿಳಿದುಬರುತ್ತದೆ.

ಲಾಂಕೆಶಾಯರ ಗಿರಣಿಯವರು ಅಳಹತ್ತಿದರು.

ಲ್ಯಾಂಕೆಶಾಯರ ಆಳುವ ಗಿರಣಿಗಳಲ್ಲಿಯ ಕೂಲಿಕಾರರು ಪಾರ್ಲಿಮೆಂಟಿನ ಸಭ್ಯ ಪ್ರತಿನಿಧಿಗಳಿಗೆ ಒಂದು ಮನವಿಯನ್ನು ಸಾದರಪಡಿಸಿದ್ದು, ಅದರಲ್ಲಿ [illegible].

[illegible], ದಿಲ್ಲಿ, ಕಲ್ಕತ್ತಾ ಅಮೃತಸರ, ಮದ್ರಾಸ ಮೊದಲಾದ ಪಟ್ಟಣಗಳಲ್ಲಿ ಲ್ಯಾಂಕೆಶಾಯರ [illegible] ಗಂಟುಗಳು [illegible] ಬಿದ್ದು ಕೊಂಡಿವೆ. ಇದು ಹೊಸತಾಗಿ ಬಂಗಾಲ ಪ್ರಾಂತದಲ್ಲಿ [illegible] ಬಾಯ್ಕಾಟಿನ ಚಳವಳಿಯು [illegible] ಕಲಕತ್ತೆಯಲ್ಲಿ [illegible] ಹಾಗೂ ಪಿಕೆಟಿಂಗ ಎಂದಿನಂತೆಯೇ ಜೋರಿನಿಂದ ನಡೆದಿದೆ. [illegible] ಆರ್ಥಿಕ ಪರಿಸ್ಥಿತಿಯನ್ನು [illegible] ದೃಷ್ಟಿಯಿಂದ [illegible] ಹಾಗೂ ಪಿಕೆಟಿಂಗ [illegible] ತಂತ್ರ [illegible] ಬ್ರಿಟಿಶ ವ್ಯಾಪಾರಕ್ಕೆ [illegible] ಆಘಾತಕರವಾಗಿದೆ.

ಇಹವೃತ್ತ

[illegible] ವಿನಯದ ದಿವಸ ನಗರ [illegible] ದಿಂದ ನಿಲ್ಲಿಸಲ್ಪಟ್ಟ ರಾಷ್ಟ್ರಧ್ವಜವನ್ನು ನಗರ ಸಭೆಯವರು [illegible] ಕಿತ್ತಿ ಒಗೆದಿದ್ದಾರೆ. ಅಂದೇ ಲೋಕಲ್ ಬೋರ್ಡದ ಕಟ್ಟಡದ ಮೇಲೂ ರಾಷ್ಟ್ರಧ್ವಜವು ಸ್ಥಾಪಿಸಲ್ಪಟ್ಟಿದ್ದು, ಅದು ಇನ್ನೂ ಅಲ್ಲಿ ಹಾರಾಡುತ್ತಿದೆ. ಅವರೇನೂ ನಗರ ಸಭೆಯಂತೆ ಅಳ್ಳೆದೆಯವರಾಗಿ [illegible] ಕಿತ್ತಿ ಒಗೆದಿಲ್ಲ. ನೋಡಿರಿ ನಗರ ಸಭೆಯವರು ಲೋಕಲ ಬೋರ್ಡವರಿಗಿಂತಲೂ ಅತ್ತ್ಯಕ್ಕಾದರು! ನಗರ ಸಭೆಯವರು ರಾಷ್ಟ್ರಧ್ವಜಕ್ಕೆ ಹೀಗೆ ಅಪಮಾನ ಮಾಡಿದ್ದು ಇದೆ. ಎನ್ನುವದನ್ನು ನಾಗರಿಕರು ಎಚ್ಚರವಾಗಿಬೇಕು.

'ಕನ್ನಡಿಗ'ನ ಹೊಸ ವ್ಯವಸ್ಥೆ

ಈ ಮುಂದೆ 'ಕನ್ನಡಿಗ'ನ ಬಗ್ಗೆ ಹೊಸ ವ್ಯವಸ್ಥೆ ಆಗಿದ್ದು, ಆ ಬಗ್ಗೆ ವಿಶದವಾದ ಸಂಗತಿಗಳನ್ನು ಇಂದಿನ ಅಗ್ರಲೇಖದಲ್ಲಿ ಓದಿಕೊಳ್ಳಬೇಕು.

ವ್ಯವಸ್ಥಾಪಕ.

ಶ್ರೀ ದಿವಾಕರರ ಜಾಹೀರ ಪತ್ರಿಕೆ

ಇವರು ಸಿರ್ಸಿ, ಸಿದ್ದಾಪುರ ಮತ್ತು ಹಿರೇಕೆರೂರ ಈ ಮೂರು ತಾಲೂಕಗಳ ಸತ್ಯಾಗ್ರಹದಲ್ಲಿ ನಡೆದ ಸಂಗತಿಗಳನ್ನು ಕುರಿತು ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ. ಅದರ ಸಾರಾಂಶವು ಕೆಳಗೆ ಕೊಟ್ಟಂತಿದೆ.

ಇದು ಅಂತಾರಾಷ್ಟ್ರೀಯಂತೆ ಕಾಯದೆಭಂಗದ ದೆಸೆಯಿಂದ ಕರವ್ವ ಕೊಡಬಾರದೆಂಬ ಚಳವಳಿ ಆಗಿರಲಿಲ್ಲ. ಇದು ಆರ್ಥಿಕ ಹೀನಸ್ಥಿತಿಯ ದೆಸೆಯಿಂದಿತ್ತು, ಇದರ ಚಳವಳಿ ಎತ್ತು ರಾಜಕೀಯ ಚಳವಳಿಯು ನಿಶ್ಚಯವಾದುದಲ್ಲವೆಂದ್ದರಿಂದ ಇದೂ ರಾಜಕೀಯವೇ ಎಂದು ಸರಕಾರಕ್ಕೆ ಸಂಶಯವಾಯಿತು. ದೇಶದಲ್ಲಿ ರಾಜಕೀಯ ಚಳವಳಿಯು ನಡೆದಿದ್ದರಿಂದ ರೈತರು ಚಳವಳಿ ಮಾಡಿದ್ದರೆ – ಸರಕಾರವು ಇತ್ತ ಕಡೆಗೆ ಹಚ್ಚು ಶಿಕ್ಷೆ ಕೊಡುತ್ತಿತ್ತು.

ರೈತರು ದೇಶಭಕ್ತರಾದರೂ ವಿನಯ ಕಡಿಮೆ, ಹಿಂಸೆ ಮತ್ತು ಬೇರೆ ಅನುಕೂಲತೆಗಳು, ಇವರಿಗೆ ಕಂಡಲಾಯಿತು. ರೈತರಂತೆ ಸತ್ಯಾಗ್ರಹಿಗಳಿಗಿಲ್ಲ ಸರಕಾರಕ್ಕೆ ಅರ್ಜಿ ಕೊಡುವರು ಪದ್ಧತಿ, ಕೂಡಿಸಿ ಕರಾರು ಮಾಡಿದರು. ಅಧಿಕಾರಿಗಳ ಕಡೆಗೆ ಶಿಷ್ಟರನ್ನು ಕಳಿಸಿದ್ದರು. ಅವರೇನೂ ಆಯಿತು? ರಾಜ್ಯಕ್ರಾಂತಿ ಯುದ್ಧ ತಡೆಯಲಾರದಾಯಿತು. ಸರಕಾರದ ದಬ್ಬಾಳಿಕೆ ಹಾಗೇ ನಡೆಯಿತು. ರೈತರು ಇದಕ್ಕೆ ಮನುಷ್ಯರಾಗಿ ಅತ್ಯಲ್ಪ [illegible] ಕೈಕೊಂಡರು. ಪಟ್ಟಿ ಕೊಡಬಾರದೆಂದು, ಜಪ್ತಿಗೆ ಸಹಾಯ ಮಾಡದವರನ್ನೂ, ಜಪ್ತಿಯ ಸಾಮಾನುಗಳನ್ನು, ಬಿಲಾವದಲ್ಲಿ ತಕ್ಕೊಂಡವರನ್ನೂ ಬಹಿಷ್ಕರಿಸಿದರು. ಸರ್ಕಾರ ಮೊದಲಾಗಿ ಎಲ್ಲ ಜಪ್ತಿಗಳನ್ನು ಕೈಕೊಳ್ಳಲು ಸ್ಥಾನಿಕ ಅಧಿಕಾರಿಗಳಿಗೆ ಹುಕುಮು ಮಾಡಿದರು.

ರೈತರು ಬೇಡಿಕೊಂಡರೂ ಸೆಟ್ಲ್ಮೆಂಟ ಕಡಿಮೆ ಮಾಡುವದಕ್ಕೆ ಇಷ್ಟವಿಲ್ಲದ್ದರಿಂದ ಅವರು ಮತ್ತು ಏಕೆಂದರೆ ಕರಕೊಡುವುದು ಒಂದು ಸಾಲವಾಗಿ ಅದನ್ನು [illegible] ವರ್ಷ ಕರಗಿಸುತ್ತದೆ. ಆದರೆ ಸರಕಾರಕ್ಕೆ ಕಾಯದೆಯಿಂದ ಅಡಚಣಿಗಳುಂಟು. ಈ ವಿಷಯವಾಗಿ ಅಧಿಕಾರಿಯು ಮುಗಿಲಲ್ಲಿಯೇ ಬಿಡಲು ಮಾಡಬೇಕಾಗುತ್ತದೆ.

ನನ್ನ ಹಾಗು [illegible] ಮಹಾರಾಜ [illegible] ನಡೆದ ಅದ [illegible] ಮೇಲೆ ಹಿರೇಕೆರೂರ ತಾಲೂಕಿನಲ್ಲಿ ೬೭ ಗ್ರಾಮಗಳಲ್ಲಿ [illegible] ಸಾರಿಗೆಯ ಮಾಫಿ ದೊರೆಯಿತು. ಈ ಗ್ರಾಮಗಳಲ್ಲಿ ಒಂದು ಕ್ಷೇತ್ರವೆಂದು ತೀರದು, ಇವೆಲ್ಲಕ್ಕೂ ಕಡಿಮೆ ದೊರೆಯಿತು. ಈ ಕಡೆ ಮೂರೂ ತಾಲೂಕಿನ [illegible] ಲಾಯರ ರಾಜಾಯು ಯಾಗುತ್ತದೆ. ಸಿರ್ಸಿ ಮತ್ತು ಸಿದ್ದಾಪುರಗಳ ತೋಟಗಾರು ಸಿದ್ದವಾಗಿ ಕೆಟ್ಟಸ್ಥಿತಿಯಲ್ಲಿದ್ದಾರೆ. ಈ ಕಮೀಶನರ ಸಾಹೇಬರು ಈ ಸಂಗತಿಯನ್ನು ಒಪ್ಪಿದ್ದು, ಈ ಬಗ್ಗೆ ವಿಚಾರ ಮಾಡಲು ಸಾರಕಾರದ ಕಲೆಕ್ಟರಿಗೆ ಬರೆಯುವರು. ಕಮೀಶನರಸಾಹೇಬರಿಗೆ ಕರಕೊಡುವ ಅಧಿಕಾರವಿಲ್ಲ, ಕಲೆಕ್ಟರರಿಂದ ಬರೆದು ಬಂದ ಬಳಿಕ ಎರಡನೆಯ ಪಟ್ಟಿಯ ಕಡಕಡಿಮೆಯೆಂದ ಮೇಲಧಿಕಾರಿಗಳಿಗೆ ಬರೆಯುವರು.

ಈ ಚಳವಳಿಯು ಇಲ್ಲಿಗೆ ಬಂದು ನಿಂತಿದೆ. ಸರಕಾರದ ತೀರ್ಮಾನವು ಅವರ ಅಂತಿಮವಾಗಿಕೊಂಡ ಕರವಾಗಿಯೇ ಎರಡೂ ಪಕ್ಷಗಳು ಬರೆಯುವವೆಂದೂ ಸರಕಾರದವರು